UNIVERSAL
LIBRARY
OU_202136
UNIVERSAL
LIBRARY


SWAMY

# ಮಹಾದೇವಭಾಯಿಯವರ ದಿನಚರಿ

## ಮೊದಲನೆಯ ಭಾಗ

[ ೧೦—೩—೧೯೩೨ ರಿಂದ ೨—೯—೧೯೩೨ ರ ವರೆಗೆ
ಗಾಂಧೀಜಿಯವರೊಡನೆ ಯರವಡಾ ಜೇಲಿನಲ್ಲಿ ]


ಸಂಪಾದಕರು :

**ನರಹರಿ ದ್ವಾ. ಪರೀಖ**

ಅನುವಾದಕರು :

**ರಾಮಚಂದ್ರ ವಡವಿ**



ಗ್ರಾಮಸೇವಾ ಸಮಿತಿ, ಹುದಲಿ

ಪ್ರಕಾಶಕರು :
**ಪುಂಡಲೀಕಜಿ ಕಾತಗಡೆ**
ಗ್ರಾಮಸೇವಾ ಸಮಿತಿ, ಹುದಲಿ
ಬೆಳಗಾವಿ

ಮುದ್ರಕರು :
**ಹ. ರಾ. ಮೊಹರೆ**
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮೊದಲನೆಯ ಆವೃತ್ತಿ ೧೦೦೦ ಪ್ರತಿ

**ಎಂಟು**
**ರೂಪಾಯಿಗಳು**

೧೫ ಆಗಸ್ಟ ೧೯೫೪

# ಮುನ್ನುಡಿ

ಗಾಂಧಿ ಸಾಹಿತ್ಯ ಈ ಹೊತ್ತು ಒಂದು ಗುಡ್ಡದ ರಾಶಿಯಷ್ಟು ಇದೆ, ನಿತ್ಯ ಹೊಸದು ಹೊರಡುತ್ತಲೂ ಇದೆ. ಸ್ವತಃ ಗಾಂಧಿಯವರು ತಮ್ಮ ಬಗ್ಗೆ ಬರೆದುದನ್ನು ಬಿಟ್ಟರೆ ಮಹಾದೇವಭಾಯಿಯವರು ಬರೆದುದಕ್ಕೆ ವಿಶೇಷ ಮಹತ್ವವಿದೆ. ವಾಲ್ಮೀಕಿಯು ರಾಮಾಯಣವನ್ನು ಬರೆದು ಶ್ರೀರಾಮಚಂದ್ರನ ಚರಿತ್ರೆಯನ್ನು ಜಗತ್ತಿಗೆ ಬೀರಿದುದು ನಿಜ. ಅದೇ ರೀತಿ ವ್ಯಾಸಮುನಿಗಳು ಮಹಾಭಾರತವನ್ನು ಬರೆದು ಶ್ರೀಕೃಷ್ಣನ ಲೀಲೆಗಳನ್ನು ವರ್ಣಿಸಿದುದು ನಿಜ. ಆದರೆ ಶ್ರೀಹನುಮಂತನು ರಾಮನ ಬಗ್ಗೆ ಏನಾದರೂ ಬರೆದುದು, ಇಲ್ಲವೆ ಉದ್ಧವನು ಶ್ರೀಕೃಷ್ಣನ ಬಗ್ಗೆ ಬರೆದುದು ಉಪಲಬ್ಧವಾದರೆ ಅದು ಎಷ್ಟು ಮಹತ್ವದ್ದೆಂದು ತಿಳಿಯಲಾಗುವದು, ಎಂಬುದನ್ನು ವಾಚಕರೇ ಊಹಿಸಬೇಕು.

ಮಹಾದೇವಭಾಯಿಯವರು ಗಾಂಧೀಜಿಯವರ ಬಗ್ಗೆ ಬರೆದುದು ಅಷ್ಟೇ ಮಹತ್ವದ್ದೆಂದು ಹೇಳಲು ಅಭ್ಯಂತರವಿಲ್ಲ. ಅತ್ಯಂತ ನಿಕಟ ಆಪ್ತಕಾರ್ಯದರ್ಶಿಗಳೂ ಮಹಾ ಗಾಂಧಿಭಕ್ತರೂ ಆದ ಮಹಾದೇವಭಾಯಿಯವರು 'ಬಾಪೂ'ನ ಬಗ್ಗೆ ಬರೆಯಲು ಲೆಕ್ಕಣಿಕೆಯನ್ನೆತ್ತಿದ ಕೂಡಲೆ ಒಂದು 'ಗಾಂಧಿ ವಾತಾವರಣವನ್ನೆ' ಅವರು ನಿರ್ಮಾಣಮಾಡಿಬಿಡುವರೆಂದರೆ ಅತಿಶಯೋಕ್ತಿಯಾಗಲಾರದು.

ಮೇಲಾಗಿ ಈ ದಿನಚರಿ ಬರೆಯುವಾಗ ಅವರು ಉಪಯೋಗಿಸಿದ ಅತ್ಯಂತ ಸರಲ ಹಾಗೂ ಸಹಜವಾದ ಭಾಷಾಶೈಲಿಯು ಅವರ ಬರೆವಣಿಗೆಯನ್ನು ಮತ್ತಷ್ಟು ಆಕರ್ಷಕವನ್ನಾಗಿ ಮಾಡಿಬಿಡುವದು. ಗಾಂಧೀಜಿಯವರ ಬಗ್ಗೆ ಎಲ್ಲರಿಗೂ ಕುತೂಹಲ ಇರುವದು ಸ್ವಾಭಾವಿಕ. ಅವರು ಮಾಡಿದ ಅವತಾರಕಾರ್ಯವಂತೂ ಜಗಜ್ಜಾಹೀರವೆ ಇದೆ. ಆದರೆ ಅವರು ಯಾವ ರೀತಿ ಇರುತಿದ್ದರು, ಅವರ ಮನಸ್ಸು ಯಾವ ರೀತಿ ಹರಿಯುತಿತ್ತು, ಅವರು ಯಾವ ಕೆಲಸವನ್ನು ಯಾವ ರೀತಿ ಮಾಡುತಿದ್ದರು ಮುಂತಾದವುಗಳ ಬಗ್ಗೆ ನಮಗೆ ಮಹಾದೇವಭಾಯಿಯಲ್ಲದೆ ಇನ್ನಾರು ಬಿಚ್ಚಿ ಹೇಳಬಲ್ಲರು ?

ಈ ಬಗೆಯ ಸಾಹಿತ್ಯ ಕನ್ನಡದಲ್ಲಿ ಬಹಳ ಕಡಿಮೆ ಇದೆ ಎಂದು ಹೇಳಬಹುದು. ಈಗ ಶ್ರೀ. ವಡವಿಯವರು ಅದನ್ನು ಕನ್ನಡಿಗರಿಗೆ ಸ್ವಲ್ಪಮಟ್ಟಿಗಾದರೂ ಒದಗಿಸಿಕೊಟ್ಟದ್ದು ಬಹಳ ದೊಡ್ಡ ಕೆಲಸ ಎಂದೇ ಹೇಳಬೇಕಾಗಿದೆ. ಆ ದೃಷ್ಟಿಯಿಂದ ಈ ಪುಸ್ತಕವು ಅತ್ಯಂತ ಸ್ವಾಗತಾರ್ಹವಿರುವದೆಂದು ನಾನು ಹೇಳಬಲ್ಲೆ. ವಾಚಕರು ಇದರ ಲಾಭವನ್ನು ಅವಶ್ಯವಾಗಿ ಪಡೆಯುವರೆಂದು ಆಶಿಸಿದ್ದೇನೆ.

೭ ನೆಯ ಸ್ವಾತಂತ್ರ್ಯ ದಿನ
ರಾಂಚಿ, ೧೫—೮—೧೯೫೩

**ರಂಗನಾಥ ದಿವಾಕರ**

# ಪ್ರಕಾಶಕರ ಮಾತುಗಳು

ಶ್ರೀಮಾನ್ ಮಹಾದೇವಭಾಯಿ ಮತ್ತು ಮಹಾತ್ಮಾ ಗಾಂಧಿಯವರ ಸಂಬಂಧವು ಎಷ್ಟು ನಿಕಟವಾದದ್ದಿತ್ತೆಂಬುದು ಹಿಂದುಸ್ತಾನದ ಜನರಿಗಷ್ಟೇ ಅಲ್ಲ ಪರರಾಷ್ಟ್ರಗಳಲ್ಲಿಯ ಜನಸಾಮಾನ್ಯರಿಗೂ ಗೊತ್ತಿದೆ. ಹಿಂದುಸ್ತಾನದಲ್ಲಿ ದಿನಾಲು ನಿಯಮಿತತನದಿಂದ ದಿನಚರಿಯನ್ನು ಬರೆಯುವಂಥ ಮತ್ತು ಈ ಮೊದಲಿಗೆ ಆಗಿ ಹೋದ ಮತ್ತು ಈಗ ಇದ್ದ ಅನೇಕ ಮಹಾ ಪುರುಷರಲ್ಲಿ ಶ್ರೀ ಮಹಾದೇವಭಾಯಿಯವರ ಸ್ಥಾನವು ಬಹಳ ಉಚ್ಚವಾಗಿದೆ. ೧೯೧೭ರಲ್ಲಿ ಶ್ರೀ ಮಹಾದೇವಭಾಯಿಯವರಿಗೂ ಮಹಾತ್ಮಾ ಗಾಂಧಿಯವರಿಗೂ ಬಂದ ಸಂಬಂಧವು ೧೯೪೨ರಲ್ಲಿ ಮಹಾದೇವಭಾಯಿಯವರ ಮೃತ್ಯುವಿನವರೆಗೂ ವೃದ್ಧಿಯಾಗುತ್ತಲೇ ಹೋಯಿತು. ಮಹಾತ್ಮಾಜಿಯವರ ಬಾಹ್ಯ ಆತ್ಮವೇ ಮಹಾದೇವಭಾಯಿ ಅಂದರೆ ಅತಿಶಯೋಕ್ತಿಯೆನಿಸಲಾರದು. ೧೯೧೭ರಿಂದ ೧೯೪೨ರ ವರೆಗಿನ ದಿನಚರಿಯನ್ನು ಮಹಾದೇವಭಾಯಿಯವರು ಬರೆದಿದ್ದಾರೆ ಅದರಲ್ಲಿ ಕೇವಲ ಆರು ತಿಂಗಳ ದಿನಚರಿಯು (ತಾ. ೧೦-೩-೩೨ರಿಂದ ತಾ. ೪-೯-೩೨ರ ವರೆಗೆ) ಈ ಮೊದಲಿನ ಭಾಗದಲ್ಲಿ ಬಂದಿದೆ. ಈ ದಿನಚರಿಯಲ್ಲಿ ಮುಖ್ಯವಾಗಿ ಗಾಂಧೀಜಿ, ಸರದಾರ ವಲ್ಲಭಭಾಯಿಪಟೇಲ ಮತ್ತು ಮಹಾದೇವಭಾಯಿ ಈ ಮೂವರ ಬಗ್ಗೆಯೇ ವಿಶೇಷ ಮಾಹಿತಿ ಬಂದಿದೆ.

ಹಿಂದಿ ಅಥವಾ ಗುಜರಾತಿಯಿಂದ ಈ ಪ್ರಥಮಖಂಡದ ಕನ್ನಡ ಭಾಷಾಂತರ ಮಾಡಿಸುವದು ಅಷ್ಟೊಂದು ಸುಲಭವಿದ್ದಿಲ್ಲ. ಸ್ವತಂತ್ರ ರೀತಿಯಿಂದ ಒಂದು ಗ್ರಂಥವನ್ನು ಬರೆಯುವದಕ್ಕಿಂತ ಬೇರೊಂದು ಗ್ರಂಥದ ಭಾಷಾಂತರ ಮಾಡುವದು ಕಠಿಣವಿರುತ್ತದೆ. ಒಂದು ಭಾಷೆಯಲ್ಲಿಯ ಎಲ್ಲ ಭಾವನೆ, ಪ್ರಸನ್ನತೆ ಮತ್ತು ವಿಚಾರಗಳ ಅತಿ ಸೂಕ್ಷ್ಮವಾದ ಪರೆಗಳನ್ನು ಎರಡನೆಯ ಭಾಷೆಯಲ್ಲಿ ಇದ್ದಕ್ಕಿದ್ದಂತೆ ಮೂಡಿಸುವದು ಬಹಳ ಕಠಿಣವಾದ ಮತ್ತು ಸಾಹಸದ ಕೆಲಸವಾಗಿದೆ ನನ್ನ ಮಿತ್ರ ಶ್ರೀ ರಾಮಚಂದ್ರ ವೆಂಕಟೇಶ ನಡವಿಯವರಂಥ ಅಧಿಕಾರಿ ಕಾರ್ಯಕರ್ತರು ಈ ಕೆಲಸವನ್ನು ಪ್ರೇಮದಿಂದ ತಗೆದುಕೊಂಡದ್ದರಿಂದಲೇ ಇದು ಶಕ್ಯ ಸೃಷ್ಟಿಯಲ್ಲಿ ಬರಲು ಸಾಧ್ಯವಾಯಿತು.

ಕನ್ನಡ ಭಾಷೆಯಲ್ಲಿ ಈ ಮೊದಲನೆಯ ಭಾಗವನ್ನು ಪ್ರಕಟಿಸುವ ಸುಸಂಧಿಯು ನಮಗೆ ದೊರೆತದ್ದು ದೇವರ ಕೃಪೆಯಿಂದೇ ತಿಳಿಯುತ್ತೇವೆ. ಆದುದರಿಂದಲೇ ಈ ಹೊಣೆಯನ್ನು ಹೊರಲು ನಾವು ಉದ್ಯುಕ್ತರಾಗಿದ್ದೇವೆ. ಈ ನಮ್ಮ ಅಲ್ಪ ಸೇವೆಯನ್ನು ಕರ್ನಾಟಕದ ಸೂಜ್ಞ ಜನತೆಯು ಪ್ರೇಮಪೂರ್ವಕವಾಗಿ ಸ್ವಾಗತಿಸುವದೆಂದು ನಮಗೆ

ಸಂಪೂರ್ಣ ವಿಶ್ವಾಸವಿದೆ. ಕರ್ನಾಟಕದೊಳಗಿನ ಜನತಾ ಜನಾರ್ದನಕ್ಕೆ ನಮ್ಮ ಈ ಅಲ್ಪ ಸೇವೆಯು ಹೋಗಿ ಮುಟ್ಟಿದರೆ ಈ ಶ್ರಮದ ಫಲವು ಸಾರ್ಥಕವಾಯಿತೆಂದು ನಾವು ತಿಳಿಯುತ್ತೇವೆ.

ಶ್ರೀ ಮಹಾದೇವಭಾಯಿಯವರ ದಿನಚರಿಯ ಮೊದಲನೆಯ ಭಾಗದ ಈ ಕನ್ನಡ ಭಾಷಾಂತರಕ್ಕೆ ಕರ್ನಾಟಕ ಪ್ರಾಂತದ ಮುಂದಾಳುಗಳು, ಸ್ವಾತಂತ್ರ್ಯ ಚಳವಳಿಯ ಕರ್ನಾಟಕದ ಒಬ್ಬ ಪ್ರಮುಖ ಮುಖಂಡರು ಹಾಗು ಮಾರ್ಗದರ್ಶಕರು ಮತ್ತು ಬಿಹಾರದ ರಾಜ್ಯಪಾಲರು ಆದ ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಇವರು ತಮ್ಮ ಕಾರ್ಯಬಾಹುಲ್ಯದೊಳಗಿಂದಲೂ ಬಿಡುವು ಮಾಡಿಕೊಂಡು ಪ್ರಸ್ತಾವನೆಯ ರೂಪದಿಂದ ಆಶೀರ್ವಾದಾತ್ಮಕ ನಾಲ್ಕು ಶಬ್ದಗಳನ್ನು ಬರೆದು ಕೊಟ್ಟಿದ್ದಕ್ಕಾಗಿ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುವದು ನಾವು ನಮ್ಮ ಕರ್ತವ್ಯವೆಂದು ತಿಳಿಯುತ್ತೇವೆ. ಈ ಗ್ರಂಥದ ಪ್ರಕಾಶನಕ್ಕೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೀತಿಯಿಂದ ಸಹಾಯಮಾಡಿದ ಮತ್ತು ಪ್ರೋತ್ಸಾಹನ ಕೊಟ್ಟಂಥ ಎಲ್ಲ ವ್ಯಕ್ತಿ ಮತ್ತು ಸಂಸ್ಥೆಗಳ ಆಭಾರವನ್ನು ಇಲ್ಲಿ ಮನ್ನಿಸುತ್ತೇವೆ. 'ನವಜೀವನ ಟ್ರಸ್ಟ' ಅಹಮದಾಬಾದ ಇವರು ಈ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸಲಿಕ್ಕೆ ಪರವಾನಿಗೆ ಕೊಟ್ಟರು; 'ಸಂಯುಕ್ತ ಕರ್ನಾಟಕ ಮುದ್ರಣಾ-ಲಯ' ಹುಬ್ಬಳ್ಳಿ ಇವರು ಈ ಪುಸ್ತಕವನ್ನು ಅತ್ಯಲ್ಪವೇಳೆಯಲ್ಲಿಯೂ ಸುಂದರವಾಗಿಯೂ ಮುದ್ರಿಸಿ-ಕೊಟ್ಟರು. ಅದಕ್ಕಾಗಿ ಹೃತ್ಪೂರ್ವಕವಾಗಿ ಇವರ ಆಭಾರವನ್ನು ಮನ್ನಿಸುತ್ತೇವೆ. ಆದರಂತೆ ಕರ್ಮವೀರ ಸಂಪಾದಕರಾದ ಶ್ರೀ. ಪ. ರಾ. ಪುರೋಹಿತರೂ, ಶ್ರೀ. ಆರ್. ಬಿ. ಕುಲಕರ್ಣಿಯವರೂ ಮತ್ತು ಶ್ರೀ. ಕೃಷ್ಣಶರ್ಮ ಬೆಟಗೇರಿಯವರೂ ಈ ಪುಸ್ತಕದ ಕೊನೆಯ 'ಪ್ರೂಫನ್ನು' ತಿದ್ದುವದರಲ್ಲಿ ಸಹಾಯಮಾಡಿದ್ದಕ್ಕಾಗಿ ಅವರೆಲ್ಲರ ಆಭಾರವನ್ನು ಇಲ್ಲಿ ಮನ್ನಿಸುತ್ತೇವೆ. ಕೊನೆಯದಾಗಿ ಶ್ರೀ. ಬೋಧರಾವ ನಾಯಿಕ ಇವರು ಈ ಪುಸ್ತಕವನ್ನು ಅಚ್ಚು ಹಾಕಿಸುವದಕ್ಕೆ ಪ್ರೋತ್ಸಾಹನ ಕೊಡದಿದ್ದರೆ ಈ ಪುಸ್ತಕವು ಇಷ್ಟು ಬೇಗನೆ ವಾಚಕರ ಕೈಗೆ ಬೀಳುತ್ತಿದ್ದಿಲ್ಲ. ಅದಕ್ಕಾಗಿ ಅವರ ಆಭಾರವನ್ನು ಇಲ್ಲಿ ಮನ್ನಿಸುವದು ನಮ್ಮ ಕರ್ತವ್ಯವೆಂದು ತಿಳಿಯುತ್ತೇವೆ.

ನಿಮ್ಮ,

ಗ್ರಾಮಸೇವಾ ಸಮಿತಿ, **ಹುದಲಿ**

ಕನ್ನಡ ಸಜ್ಜನವೃಂದದ ಸೇವಕ
**ಪುಂಡಲೀಕಜಿ ಕಾತಗಡೆ**

**ಸೂಚನೆ :—** ೧೧—೩—'೩೨ ನೇ ದಿನಾಂಕ ನಾಲ್ಕನೆಯ ಪುಟದ ಕೊನೆಯ ಪ್ಯಾರಾದಿಂದಲೂ ೧೨—೩—'೩೨ ನೇ ದಿನಾಂಕ ಆರನೆಯ ಪುಟದ ಕೊನೆಯ ಪ್ಯಾರಾದಿಂದಲೂ ಪ್ರಾರಂಭವಾಗುತ್ತವೆ.

# ನಿವೇದನೆ

## ಮೂಲ ಪುಸ್ತಕದ ಮುನ್ನುಡಿ

ಮಹಾದೇವಭಾಯಿಯವರು ೧೯೧೭ನೇ ಇಸ್ವಿಯ ಕೊನೆಯ ಭಾಗದಲ್ಲಿ ಗಾಂಧೀಜಿಯವರ ಬಳಿಗೆ ಬಂದರು. ಅಂದಿನಿಂದ ೧೯೪೨ರಲ್ಲಿ ಅವರ ದೇಹಾಂತವಾಗುವವರೆಗೆ ಅವರು ತಮ್ಮ ದಿನಚರಿಯನ್ನು ಬರೆದಿದ್ದಾರೆ. ಗಾಂಧೀಜಿಯವರ ಜೊತೆಗಿದ್ದ ೨೫ ವರುಷಗಳ ಸೇವಾಕಾಲದಲ್ಲಿ ಜೇಲಿನಲ್ಲಿರುವ ಕಾರಣದಿಂದಾಗಲಿ, ಅಥವಾ ಇನ್ನಾವದಾದರೂ ಬೇರೆ ಕಾರಣದಿಂದಾಗಲಿ ಅವರು ಗಾಂಧೀಜಿಯವರ ಹತ್ತರ ಇಲ್ಲದಿರುವ ಸಮಯವು ಒಟ್ಟುಗೂಡಿ ಬಹಳ ಕಡಿಮೆ ಇದೆ. ಈ ಸಮಯವನ್ನು ಬಿಟ್ಟು ಉಳಿದೆಲ್ಲ ಸಮಯದ ಸಂಗತಿಗಳನ್ನು ಅವರು ತಮ್ಮ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ. ಗಾಂಧೀಜಿಯವರ ಪತ್ರವ್ಯವಹಾರಗಳನ್ನು, ಅವರ ಭಾಷಣಗಳನ್ನು, ವ್ಯಕ್ತಿಗಳ ಸಂಗಡ ಆದ ಭೆಟ್ಟಿ ಮತ್ತು ಮಾತುಗಳನ್ನು ಮತ್ತು ಇದರಂತೆ ವರ್ತಮಾನಘಟನೆ ಮತ್ತು ವಿವಿಧ ವಿಷಯಗಳ ಮೇಲೆ ಅವರ ವಿಚಾರಗಳನ್ನೂ ಉದ್ಗಾರಗಳನ್ನೂ ಅವರು ಟಿಪ್ಪಣೆಮಾಡಿ ಇಡುತ್ತಿದ್ದರು. ಪ್ರಸಿದ್ಧ ಇಂಗ್ಲೀಷ ವಿದ್ವಾನನೂ ವಿಚಾರಕನೂ ಆದ ಜಾನಸನ್ನರ ಜೀವನಚರಿತ್ರೆಯನ್ನು ಕೊನೆಯವರೆಗೆ ಅವರ ಹತ್ತರ ಇದ್ದ ಬಾಸವೆಲ್ಲನು ಬರೆದಿದ್ದಾನೆ. ಇಂಗ್ಲೀಷ ಸಾಹಿತ್ಯದಲ್ಲಿ ಅದು ಬಹಳ ಪ್ರಸಿದ್ಧವಿದೆ. ಜಾನಸನ್ನರ ಜೀವನದ ಸಣ್ಣ ಸಣ್ಣ ಪ್ರಸಂಗಗಳನ್ನೂ ಸಣ್ಣ ದೊಡ್ಡ ವಿವಿಧ ಪ್ರಕಾರದ ವಿಷಯಗಳ ಮೇಲೆ ಜಾನಸನ್ನರ ವಿಚಾರಗಳನ್ನೂ ಬಾಸವೆಲ್ಲನು ಈ ಜೀವನಚರಿತ್ರೆಯಲ್ಲಿ ನಮೂದಿಸಿದ್ದಾನೆ. ಗಾಂಧೀಜಿಯವರ ಜೀವನಚರಿತ್ರದ ಬಗ್ಗೆ ಮಹಾದೇವಭಾಯಿಯವರ ಇಚ್ಛೆಯು ಸವಾಯಿ ಬಾಸವೆಲ್ಲನಾಗುವದಿತ್ತು. ಅವರ ಈ ಇಚ್ಛೆಯು ಪೂರ್ತಿಯಾಗುವದು ದೇವರ ಮನಸ್ಸಿನಲ್ಲಿದ್ದಿಲ್ಲ. ಆದರೆ ಅವರು ಸಂಗ್ರಹಿಸಿದ ಸಾಮುಗ್ರಿಯ ಮೇಲಿಂದ ತಮ್ಮ ಇಚ್ಛಾ ಪೂರ್ತಿಗಾಗಿ ಅವರು ಸಿದ್ಧತೆ ಮಾಡುವದರಲ್ಲಿ ಎಷ್ಟು ಕಡಿಮೆ ಮಾಡಿದ್ದಿಲ್ಲವೆಂಬುದನ್ನು ಪಾಠಕರು ನೋಡಬಹುದು

'ನವಜೀವನ' ಮತ್ತು 'ಯಂಗ ಇಂಡಿಯಾ'ಗಳಲ್ಲಿ ಹಿಂದಿನಿಂದ 'ಹರಿಜನ' ಪತ್ರದಲ್ಲಿ ಮಹಾದೇವಭಾಯಿಯವರು ತಮ್ಮ ದಿನಚರಿಯೊಳಗಿಂದ ಪ್ರಕಟಿಸಲಿಕ್ಕೆ ಯೋಗ್ಯವಾದ ಸಂಗತಿಗಳನ್ನು ಹೊತ್ತುಹೊತ್ತಿಗೆ ಪ್ರಸಿದ್ಧಿಸುತ್ತಿದ್ದರು. ಈ ಪ್ರಕಾರ ಗಾಂಧೀಜಿಯವರ ಜೀವನಚರಿತ್ರಕ್ಕಾಗಿ ಅವರು ಸಾಕಷ್ಟು ಸಾಮುಗ್ರಿಯನ್ನು ಪ್ರಸಿದ್ಧಿಸಿ ಬಿಟ್ಟಿದ್ದಾರೆ. ಆದರೂ ಸಹ ಎಷ್ಟೊ ಅಮೂಲ್ಯ ಸಾಮುಗ್ರಿಯು ಪ್ರಕಾಶ

ವಾಗದೆ ಉಳಿದಿದೆ. ಈಗ ಗಾಂಧೀಜಿಯವರು ನಮ್ಮೊಂದಿಗೆ ಇರುವದಿಲ್ಲ. ಆದುದರಿಂದ ನವಜೀವನ ಟ್ರಸ್ಟಿನವರು ಆದಷ್ಟು ಬೇಗನೆ ಈ ಸಾಮಗ್ರಿಯನ್ನು ಜನರೆದುರಿಗೆ ಇಡುವ ನಿರ್ಣಯ ತೆಗೆದುಕೊಂಡಿದ್ದಾರೆ. ಈ ಎಲ್ಲ ಸಾಮಗ್ರಿಗಳ ಮೇಲಿಂದ ಗಾಂಧೀಜಿಯವರ ವಿಸ್ತೃತ ಮತ್ತು ಅಧಿಕೃತ ಜೀವನಚರಿತ್ರೆಯನ್ನು ತಯಾರಿಸುವ ಕೆಲಸವನ್ನು ನವಜೀವನ ಟ್ರಸ್ಟಿನವರು ಮಹಾದೇವಭಾಯಿಯವರು ಗತಿಸಿದ ಎರಡು ವರುಷಗಳ ನಂತರ ಗಾಂಧೀಜಿಯವರ ನಿಕಟ ಸಹವಾಸದಲ್ಲಿದ್ದ ಭಾಯಿ ಪ್ಯಾರೇಲಾಲರಿಗೆ ಒಪ್ಪಿಸಿದ್ದಾರೆ. ಅಧವಾ ಭಾಯಿ ಪ್ಯಾರೇಲಾಲರು ತಮ್ಮ ಅತಿ ಪ್ರಿಯವಾದ ಕರ್ತವ್ಯವೆಂದು ಅದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಿದ್ದಾರೆ.

ಮಹಾದೇವಭಾಯಿಯವರ ದಿನಚರಿಯು ಗಾಂಧೀಜಿಯವರ ಜೀವನಚರಿತ್ರಕ್ಕೆ ಕಚ್ಚಾ ಆದರೂ ಅತ್ಯಂತ ಮಹತ್ವದ ಸಾಮಗ್ರಿಯಾಗಿದೆ. ಕಚ್ಚಾ ಸಾಮಗ್ರಿಯೆಂದಲ್ಲದೆ ಮಾನವಜಾತಿಗೆ ಪ್ರೇರಣೆಯನ್ನು ಕೊಡುವ ಮತ್ತು ಮನುಷ್ಯ ಜೀವನವನ್ನು ಘಟಿಸುವಂಥ ಅತ್ಯಂತ ಉಪಯುಕ್ತವೂ ಚಿರಸ್ಥಾಯಿಯೂ ಆದ ಸಾಹಿತ್ಯವೆಂದು ಈ ದಿನಚರಿಗೆ ಸ್ವತಂತ್ರ ಮಹತ್ವವೂ ಇದೆ. ಗಾಂಧೀಜಿಯವರ ಜೀವನಕಾಲದ ಹೊರತಾಗಿ ಈ ದಿನಚರಿಗಳಲ್ಲಿ ಮಹಾದೇವಭಾಯಿಯವರ ಸ್ವಭಾವ, ಅವರ ಕರ್ತವ್ಯನಿಷ್ಠೆ, ಅವರ ಭಕ್ತಿಭಾವನೆಯಿಂದ ಕೂಡಿದ ಹೃದಯ, ಇನ್ನೂ ಎಷ್ಟೋ ವಿಷಯಗಳಲ್ಲಿ ಅವರ ಅಭಿರುಚಿ—ಇವೆಲ್ಲವೂ ಪ್ರಕಟವಾಗುತ್ತವೆ. ಸಾರಾಂಶವೆಂದರೆ ಮಹಾದೇವಭಾಯಿಯವರ ಆತ್ಮವು ಇಲ್ಲಿ ಅಕ್ಷರರೂಪಿಯಾದ ದೇಹವನ್ನು ಧಾರಣಮಾಡುತ್ತಿದೆ ಮತ್ತು ನಮಗೆ ಎಷ್ಟೋ ಪ್ರಕಾರದಿಂದ ತೀರ ಹತ್ತರದಿಂದ ನೋಡಲಿಕ್ಕೆ ಸಿಗುತ್ತದೆ. ಹಾಗೆ ನೋಡಿದರೆ ಅನನ್ಯ ಮಿತ್ರನಾದ್ದರಿಂದ ಸ್ವಾಭಾವಿಕವಾಗಿಯೆ ಮಹಾದೇವಭಾಯಿಯವರ ಪ್ರಿಯ ಮತ್ತು ಪಾವಕಸ್ಮರಣವು ನನಗೆ ಯಾವಾಗಲೂ ಇರುತ್ತದೆ. ಆದರೆ ದಿನಚರಿಯ ಸಂಪಾದನದ ಕೆಲಸಮಾಡುವಾಗ ನಾನು ಅವರ ಸಂಗಡ ಸಣ್ಣಪುಟ್ಟ ಮತ್ತು ಗಂಭೀರವಾದ ಅನೇಕ ವಿಷಯಗಳ ಮೇಲೆ ಚರ್ಚಿಸುತ್ತಿರುವಂತೆಯೂ ವಿನೋದದಲ್ಲ ಮಾತಾಡುತ್ತಿರುವಂತೆಯೂ ಮತ್ತು ಎಷ್ಟೋ ಸಾರೆ ನಾನು ಅವರ ಸಂಗಡ ಜೇಷ್ಟೆಯನ್ನು ಮಾಡುತ್ತಿರುವಂತೆಯೂ ಭಾಸವಾಗಿವೆ. ಈ ಪುಸ್ತಕವನ್ನು ಓದುವಾಗ ಉಳಿದ ಮಿತ್ರರಿಗೂ ಇದೇ ಅನುಭವವಾಗುವದೆಂದು ನಾನು ನಂಬಿದ್ದೇನೆ.

ಗುಜರಾತಿ ಭಾಷೆಯಲ್ಲಿ ಈ ಪ್ರಕಾರದ ಸಾಹಿತ್ಯವು ಇದೇ ಮೊದಲನೆಯ ಸಲ ಪ್ರಕಾಶವಾಗುತ್ತಿದೆಯೆಂದು ನನ್ನ ತಿಳಿವಳಿಕೆ. ಇಂಗ್ಲೀಷ ಭಾಷೆಯಲ್ಲಿಯೂ ಮತ್ತು ಯುರೋಪದ ಬೇರೆ ಭಾಷೆಗಳಲ್ಲಿಯೂ ಇಂಥ ದಿನಚರಿ ಸಾಹಿತ್ಯವು ಬಹಳವಿದೆ. ಜಗತ್ತಿನ ಈ ಪ್ರಕಾರದ ಎಲ್ಲ ಸಾಹಿತ್ಯಗಳಲ್ಲಿ, ವಸ್ತುವಿನ ಉದಾತ್ತತೆಯ ದೃಷ್ಟಿಯಿಂದಲೂ, ಶೈಲಿಯ ಸರಳತೆಯಿಂದಲೂ ಮತ್ತು ಮನೋಹರತೆಯ ದೃಷ್ಟಿ

ಯಿಂದಲೂ, ಮಹಾದೇವಭಾಯಿಯವರ ದಿನಚರಿಯ ಸ್ಥಾನವು ಬಹಳ ಉನ್ನತವಾಗಿ ಉಳಿಯುವದೆಂದು ಸುಜ್ಞ ಪಾಠಕರು ಒಪ್ಪುವರು.

ಮಹಾದೇವಭಾಯಿಯವರ ಇಪತ್ತೈದು ವರುಷಗಳ ದಿನಚರಿಗಳೊಳಗಿಂದ ನಾನು ೧೯೩೨ರ ದಿನಚರಿಯಿಂದಲೇ ಏಕೆ ಪ್ರಾರಂಭಿಸಿದೆನು ? ಇದರ ಒಂದು ಕಾರಣ ವೆಂದರೆ ಜೇಲಿನಲ್ಲಿ ಬರೆದಿರುವದರಿಂದ ಇದನ್ನು ಉಳಿದವುಗಳಿಗಿಂತ ಹೆಚ್ಚು ಬಿಡುವಿನಿಂದ ಬರೆಯಲಾಗಿದೆ. ಮಹಾದೇವಭಾಯಿಯವರಿಗೆ ಶೀಘ್ರ ಲಿಪಿ (ಶಾರ್ಟಹ್ಯಾಂಡ) ಬರುತ್ತಿದ್ದಿಲ್ಲ. ಗಾಂಧೀಜಿಯವರ ವ್ಯಾಖ್ಯಾನ, ಮಾತುಕತೆ ಮತ್ತು ಭೆಟ್ಟಿಗಳನ್ನು ಅವರು ಅದೇ ಕಾಲಕ್ಕೆ ದೀರ್ಘ ಲಿಪಿಯಲ್ಲಿ ಟಿಪ್ಪಣೆಮಾಡಿಕೊಳ್ಳುತ್ತಿದ್ದರು. ಆದರ ಮೇಲಿಂದಲೇ ಶಬ್ದಶಃ ವಿವರಣೆ ಕೊಡುವಷ್ಟು ಶೀಘ್ರ ಗತಿಯಿಂದ ಅವರು ಟಿಪ್ಪಣೆ ತೆಗೆದುಕೊಳ್ಳುತ್ತಿದ್ದರು. ಗಡಿಬಿಡಿಯಿಂದ ಅಥವಾ ಅವಸರದಿಂದ ತೆಗೆದುಕೊಂಡ ಟಿಪ್ಪಣೆಯು ಪೂರ್ಣರೀತಿಯಿಂದ ಸ್ಪಷ್ಟವಾಗದಿರುವ ಸಂಭವವಿದೆ. ಜೇಲಿನಲ್ಲಿ ಹೊರಗಿನಂತೆ ಯಾವದೇ ಗಡಿಬಿಡಿ ಇಲ್ಲದ್ದರಿಂದ ಈ ದಿನಚರಿಯನ್ನು ಹೆಚ್ಚು ವಿಸ್ತಾರ ಪೂರ್ವಕವಾಗಿ ಬರೆಯಲಾಗಿದೆ. ಇನ್ನೊಂದು ಕಾರಣವೆಂದರೆ ಹೊರಗಿದ್ದಾಗ ಬರೆದ ಜೇರೆ ದಿನಚರಿಯೊಳಗಿಂದ ಕೆಲಕೆಲವು ನವಜೀವನ ಮುಂತಾದ ವೃತ್ತಪತ್ರಗಳ ಮುಖಾಂತರ ಜನರಿಗೆ ದೊರೆತಿವೆ, ಆದರೆ ಇದು ಜೇಲಿನ ಕಾಲದ್ದಿರುವದರಿಂದ ಇದರೊಳಗಿಂದ ತೀರ ಸ್ವಲ್ಪ ಪ್ರಕಟವಾಗಿದೆ. ಮಹಾದೇವಭಾಯಿಯವರಿಗೆ ಇದರಲ್ಲಿ ವಿಸ್ತಾರಪೂರ್ವಕವಾಗಿ ಬರೆಯಲು ಸಾಧ್ಯವಾದಂತೆ ಗಾಂಧೀಜಿಯವರೂ ಜೇಲಿನಲ್ಲಿದ್ದುದರಿಂದ ಮಾತುಕತೆಗಳನ್ನೂ ಪತ್ರವ್ಯವಹಾರವನ್ನೂ ದೀರ್ಘವಾಗಿ ಮಾಡಿದ್ದಾರೆ. ಈ ರೀತಿಯಿಂದ ಈ ದಿನಚರಿಯು ಅನೇಕ ಪ್ರಕಾರದಿಂದ ಹೆಚ್ಚು ಮಹತ್ವದ್ದಿದ್ದ ಕಾರಣ ಮುದ್ರಣಕ್ಕೂ ಪ್ರಕಾಶಕ್ಕೂ ಇದನ್ನೇ ಮೊದಲು ಆಯ್ದುಕೊಳ್ಳಲಾಗಿದೆ.

ಈ ದಿನಚರಿಯು ೧೦—೩—೧೯೩೨ ರಿಂದ ೪—೯—೧೯೩೨ ರ ವರೆಗೆ ಇರುತ್ತದೆ. ಇದರ ನಂತರ ಮಹಾದೇವಭಾಯಿಯವರು ಯರವಡಾ ಜೇಲಿನಲ್ಲಿ ಗಾಂಧೀಜಿಯವರ ಜೊತೆಗೆ ಇದ್ದ ಕಾಲದ ದಿನಚರಿಯನ್ನು ಇನ್ನೊಂದು ಪುಸ್ತಕದಲ್ಲಿ ಕೊಟ್ಟಿದೆ. ಅಸ್ಪೃಶ್ಯರೆಂದು ತಿಳಿಯಲ್ಪಡುವ ವರ್ಗದವರಿಗೆ ಉಳಿದ ಹಿಂದುಗಳಿಂದ ಪ್ರತ್ಯೇಕ ಮತಾಧಿಕಾರ ಕೊಡುವ ಮ್ಯಾಕ್ಡೊನಲ್ಡರ ನಿರ್ಣಯದ ವಿರುದ್ಧ ಗಾಂಧೀಜಿಯವರ ಐತಿಹಾಸಿಕ ಉಪವಾಸದ ಪ್ರಕರಣವು ಎರಡನೇ ಪುಸ್ತಕದಲ್ಲಿ ಬರುವದು. ಹಾಗೆ ನೋಡಿದರೆ ಈ ಪುಸ್ತಕದಲ್ಲಿ ಅದರ ಸಂಕಲ್ಪವಂತೂ ಬಂದೇ ಬರುತ್ತದೆ. ಇದರ ನಂತರದ ಪುಸ್ತಕಗಳಲ್ಲಿ ಪ್ರಾರಂಭದಿಂದ ಮುಂದೆ ಹೋಗಬೇಕೋ ಅಥವಾ ೪೨ನೇ ಇಸ್ವಿಯಿಂದ ಪ್ರಾರಂಭಿಸಿ ಹಿಂದೆ ಹೋಗಬೇಕೊ ಎಂಬುದು ಇನ್ನೂ ನಿಶ್ಚಿತವಾಗಿಲ್ಲ.

ಬಗ್ಗೆ ಸಹುಷ್ಣುತೆ ಅಂದರೆ ಪೂರ್ಣ ರೀತಿಯಿಂದ ಅಹಿಂಸಕರಾಗಿರಬೇಕು. ಈ ಪ್ರಕಾರ ಸತ್ಯದ ಉಪಾಸನೆಗಾಗಿ ಮತ್ತು ಪೂರ್ಣ ಸತ್ಯದ ದರ್ಶನದ ಪ್ರಯತ್ನಕ್ಕಾಗಿ ಗಾಂಧೀಜಿಯವರು ಅಹಿಂಸೆಯನ್ನು ಸಾಧನೆಯನ್ನಾಗಿ ಮಾಡಿಕೊಂಡಿದ್ದರು. ಅಹಿಂಸೆಯನ್ನು ಸಾಧನವನ್ನಾಗಿ ಮೈಗೂಡಿಸಿಕೊಂಡು ಸತ್ಯದ ಉಪಾಸನೆಗಾಗಿಯೂ ಸಂಪೂರ್ಣ ಸತ್ಯದ ಪ್ರಾಪ್ತಿಗಾಗಿಯೂ ಅವರು ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು ವೈಯಕ್ತಿಕ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಲ್ಲಿ ಗಾಂಧೀಜಿಯವರು ಸತ್ಯದ ಶೋಧನೆಗಾಗಿ ಪ್ರಯತ್ನಿಸುತ್ತಿದ್ದರು. ಆದುದರಿಂದಲೇ ಈ ಎಲ್ಲ ಪ್ರಶ್ನೆಗಳನ್ನು ಕುರಿತು ಸತ್ಯ ಮತ್ತು ಅಹಿಂಸೆಯ ದೃಷ್ಟಿಯಿಂದ ಸಂಧಿ ದೊರೆತಾಗ ಅಥವಾ ಅವಶ್ಯ ಬಿದ್ದಾಗ ಗಾಂಧೀಜಿಯವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು ಅವರ ಭಾಷಣಗಳಲ್ಲಿಯೂ ಲೇಖನಗಳಲ್ಲಿಯೂ ಪ್ರಕಟವಾದ ಈ ವಿಚಾರಗಳು ಜನರೆದುರಿಗೆ ಇದ್ದೇ ಇವೆ. ಈ ದಿನಚರಿಯಲ್ಲಿ ನಮಗೆ ಈ ವಿಚಾರಗಳು ಮಾತುಕತೆ ಮತ್ತು ಪತ್ರವ್ಯವಹಾರಗಳ ಮುಖಾಂತರ ತಿಳಿದುಕೊಳ್ಳಲಿಕ್ಕೆ ಸಿಗುತ್ತವೆ. ಇದರಲ್ಲಿ ಹೃದಯ ಬಿಚ್ಚಿ ಮಾತುಕತೆ ಆಗಿರುವದರಿಂದ ಈ ವಿಚಾರಗಳೂ ಉದ್ಗಾರಗಳೂ ನಮಗೆ ಹೆಚ್ಚು ಸರಳವಾಗಿಯೂ ಘನಿಷ್ಠವಾಗಿಯೂ ದೊರೆತಿವೆ ಈಗೀಗ ಜಾತೀಯ ಪ್ರಶ್ನೆಗೂ ಅಸ್ಪೃಶ್ಯತೆಯ ಮತ್ತು ಜಾತಿ ಜಾತಿಗಳ ಭೇದದ ಪ್ರಶ್ನೆಗೂ ಮುಖ್ಯ ಸ್ಥಾನವಿದೆ. ಆದುದರಿಂದ ಇವುಗಳ ಬಗ್ಗೆ ಈ ಪುಸ್ತಕದಲ್ಲಿ ಸಿಗುವ ಗಾಂಧೀಜಿಯವರ ಉದ್ಗಾರಗಳು ವಿಶೇಷ ಧ್ಯಾನವನ್ನೆಳೆಯುತ್ತವೆ.

ಸರದಾರರನ್ನು ಚತುರನೂ ನಿಪುಣನೂ ಆದ ರಾಜನೀತಿಜ್ಞನೆಂದು ಇಡೀ ದೇಶವು ತಿಳಿಯುತ್ತದೆ. ಈಗಂತೂ ನಮ್ಮ ದೇಶಕ್ಕಲ್ಲದೆ ಹೊರಗಿನ ಜಗತ್ತಿಗೂ ಕೂಡ ಇವರ ಪರಿಚಯವಾಗತೊಡಗಿದೆ. ಯಾವದೊಂದು ತಂತ್ರ ಅಥವಾ ಸಂಘಟನೆಯನ್ನು ರಚಿಸಿ ಅದನ್ನು ಚನ್ನಾಗಿ ನಡೆಸುವ ತಮ್ಮ ಕಲೆ ಅಥವಾ ಜಾಣತನದ ಪರಿಚಯವನ್ನು ಅವರು ದೇಶಕ್ಕೆ ಮಾಡಿಕೊಟ್ಟಿದ್ದಾರೆ. ಮನುಷ್ಯನನ್ನು ಅವನ ದೃಷ್ಟಿಯ ಮೇಲಿಂದ ಅಥವಾ ನಡಿಗೆಯ ಮೇಲಿಂದ ಗುರುತಿಸುವ ಮತ್ತು ಅವನ ಯೋಗ್ಯತೆಯನ್ನು ಕಂಡು ಹಿಡಿಯುವ ಶಕ್ತಿಯು ಅವರಲ್ಲಿ ಅಸಾಧಾರಣವಾಗಿದ್ದುದರಿಂದ ಕೆಟ್ಟ ಮನುಷ್ಯನು ಅವರ ಹತ್ತರ ತಾಳುತ್ತಿದ್ದಿಲ್ಲ. ಈ ಕಾರಣದಿಂದ ಎಷ್ಟೋ ಜನರು ಅವರ ವಿರೋಧಿಗಳೂ ಆಗುತ್ತಾರೆ. ವಿರೋಧಿಯ ರಹಸ್ಯವನ್ನು ಹೊರಗೆಡುವುವದಾದರೆ ಸ್ಪಷ್ಟವಾದ ಭಾಷೆಯನ್ನು ಅವರಿಗೆ ಒಳ್ಳೇ ಉತ್ತಮ ರೀತಿಯಿಂದ ಉಪಯೋಗಿಸಲಿಕ್ಕೆ ಬರುತ್ತದೆ. ಆದುದರಿಂದ ಅವರನ್ನು ಮೇಲಿಂದಮೇಲೆ ನೋಡುವವರಿಗೆ ಒಂದು ಪ್ರಕಾರದ ಕಠೋರ ಮನುಷ್ಯರಿದ್ದಾ

ರೆಂದು ಅನಿಸುತ್ತದೆ. ಆದರೆ ಈ ಹೊರಗಿನ ನೋಟದ ಹಿಂದೆ ಸಂಗಡಿಗರ ಬಗ್ಗೆ ಎಂಥ ಪ್ರೇಮಪೂರ್ಣ ಮತ್ತು ನಿಷ್ಠಾವಂತ ಹೃದಯವು ಹುದುಗಿದೆಯೆಂಬುದು ಇಲ್ಲಿ ನೋಡಲಿಕ್ಕೆ ಸಿಗುತ್ತದೆ ಗಾಂಧೀಜಿಯವರ ಬಗ್ಗೆ ಅವರ ಭಕ್ತಿ ಮತ್ತು ನಿಷ್ಠೆಗಳು ಅದ್ಭುತವಾಗಿರುತ್ತವೆ. ಯಾವನಿಗೆ ನಿಷ್ಠಾವಂತ ಜೊತೆಗಾರನೂ ಉತ್ತಮ ಸೇವಕನೂ ಆಗಲಿಕ್ಕೆ ಬರುತ್ತದೆಯೋ ಅವನೇ ಚತುರ ಸರದಾರನಾಗಬಲ್ಲನು. ಇದರ ಪ್ರತೀತಿಯು ಕೂಡ ನಮಗೆ ಇಲ್ಲಿ ಆಗುತ್ತದೆ. ಅವರ ಕಾರ್ಯ ಕುಶಲತೆಯ ಬಗ್ಗೆ ಗಾಂಧೀಜಿಯವರ ಪ್ರಮಾಣಪತ್ರವನ್ನು ಇಲ್ಲಿ ಕೊಡುವ ಮೋಹವನ್ನು ತಡೆಯುವದಾಗುವದಿಲ್ಲ.— ‘ ವಲ್ಲಭಭಾಯಿಯವರು ಅರಬೀ ಕುದುರೆಯ ಗತಿಯಿಂದ ಓಡತೊಡಗಿದ್ದಾರೆ. ಸಂಸ್ಕೃತ ಪುಸ್ತಕವನ್ನು ಕೆಳಗಿಡುವದೇ ಇಲ್ಲ. ನನಗೆ ಅದರ ಆಶೆಯಿದ್ದಿಲ್ಲ. ಪಾಕೀಟು ಮಾಡುವದರಲ್ಲಿಯಂತೂ ಅವರನ್ನು ಯಾರೂ ಸರಿಗಟ್ಟಲಾರರು. ಪಾಕೀಟುಗಳನ್ನು ಅವರು ಅಳತೆಮಾಡದೆ ತಯಾರಿಸುತ್ತಾರೆ ಮತ್ತು ಅಂದಾಜಿನಿಂದಲೇ ಕತ್ತರಿಸುತ್ತಾರೆ ಆದರೂ ಸರಿಯಾಗಿ ಆಗುತ್ತವೆ. ಇದಕ್ಕೆ ಸಮಯ ಬಹಳ ಹತ್ತುತ್ತದೆಯೆಂದೂ ಅನಿಸುವದಿಲ್ಲ. ಅವರ ವ್ಯವಸ್ಥೆಯು ಆಶ್ಚರ್ಯಕರವಾಗಿದೆ. ಮಾಡಬೇಕಾದುದನ್ನು ನೆನಪಿಡಲಿಕ್ಕೆ ಅವಕಾಶವನ್ನೇ ಕೊಡುವದಿಲ್ಲ. ಬಂದಕೂಡಲೆ ಮಾಡಿಬಿಡುವರು. ನೂಲುವದನ್ನು ಪ್ರಾರಂಭಿಸಿದಂದಿನಿಂದ ಸರಿಯಾದ ಹೊತ್ತಿಗೆ ನೂಲುತ್ತಾರೆ. ಈ ರೀತಿ ನೂಲಿನಲ್ಲಿಯೂ ಗತಿಯಲ್ಲಿಯೂ ದಿನಾಲು ಸುಧಾರಣೆಯಾಗುತ್ತ ನಡೆದಿದೆ. ಕೈಯಲ್ಲಿ ತಗೆದುಕೊಂಡ ಕೆಲಸವನ್ನು ಮರೆಯುವದು ಅಪರೂಪ. ಇಷ್ಟು ವ್ಯವಸ್ಥೆಯಿದ್ದಲ್ಲಿ ಅವ್ಯವಸ್ಥೆಯಾಗುವದು ಎಂತು ? ’

ಇದಲ್ಲದೆ ಅವರ ನೇರವಾದ ಚುಚ್ಚು ವಿನೋದಗಳು ಗಾಂಧೀಜಿಯವರನ್ನು ಕೂಡ ಹೊಟ್ಟೆಹಿಡಿದು ನಗೆಸುತ್ತವೆ ಮತ್ತು ಮೂವರು ಸಂಗಡಿಗರ ಏಕಧಾರೆಯಾದ ಜೀವನದಲ್ಲಿ ಒಂದು ಪ್ರಕಾರದ ರಸವನ್ನು ತುಂಬುತ್ತವೆ.

ಮಹಾದೇವಭಾಯಿಯವರ ವಿಷಯವಾಗಿ ಏನು ಹೇಳಲಿ ? ಅವರು ತಮ್ಮ ಕುಶಲತೆಯಿಂದ ಕಾರ್ಯದ ವಿವಿಧ ಕ್ಷೇತ್ರಗಳನ್ನು ಬೆಳಗಿಸಿದ್ದಾರೆ. ಅವರ ವಿಪುಲ ಮತ್ತು ಶ್ರೇಷ್ಠ ತರಗತಿಯ ಲೇಖನದ ಕಾರ್ಯದಿಂದ ಬಹಳ ಜನರಿಗೆ ಅವರು ಸಾಹಿತ್ಯದ ಜೀವಾಳುವಿದ್ದರೆಂದು ಅನಿಸುತ್ತದೆ. ಅವರಲ್ಲಿ ಅವಶ್ಯವಾಗಿ ಶ್ರೇಷ್ಠ ತರಗತಿಯ ಸಾಹಿತ್ಯದ ಶಕ್ತಿಯಿತ್ತು. ಆದರೆ ಅವರ ಜೀವನದ ಮುಖ್ಯ ಧ್ಯೇಯವು ಗಾಂಧೀಜಿಯವರ ಜೀವನದಲ್ಲಿ ಮತ್ತು ಅವರ ಕಾರ್ಯದಲ್ಲಿ ವಿಲೀನವಾಗುವದಿತ್ತು. ಅವರಲ್ಲಿ ಅತ್ಯಂತ ನಮ್ರತೆಯಿತ್ತು. ಅವರ ದೋಷಗಳು ಮತ್ತು ಅವರ ನ್ಯೂನತೆಗಳು ಅವರಿಗೆ ಗುಡ್ಡದಂತೆ ಕಾಣುತ್ತಿದ್ದವು ಮತ್ತು ಎರಡನೆಯವರ ದೋಷಗಳು ಅವರಿಗೆ ಸಾಸವಿಕಾಳಿನಷ್ಟು ಸಹ ಅನಿಸುತ್ತಿದ್ದಿಲ್ಲ. ಎರಡನೆಯವರ ಗುಣಗಳನ್ನು ನೋಡುವದೇ

एकमेवाद्वितीयं तद् यद्राजन्नावबुध्यसे ।
सत्यं स्वर्गस्य सोपानं पारावारस्य नौरिव ॥

—उद्योगपर्व, महाभारत

" Would that even for a day we had behaved
ourselves well in this world ! "
" Be therefore always in readiness, and so live,
That death may never find thee unprepared. "

Tho. A. Kempis

" They are slaves who fear to speak
For the fallen and the weak ;
They are slaves who will not choose
Hatred, scoffing and abuse,
Rather than in silence shrink
From the truth they needs must think.
They are slaves who dare not be
In the right with two or three. "

" And Sin, that which separates from God, which disobeys God, which *can* not in that state correspond with God–this is Hell. Sin is simply apostasy from God, unbelief in God. "

Drummond

" The Hindus' very word for truth is full of meaning.
Truth was with them that which is. "

Max Muller, India, lec. ii. p. 82.

## हरिः ॐ सद्गुरवे नमः ।

ನನ್ನ ಭಾಗ್ಯದಲ್ಲಿ ಇಂಥ ದಿನಗಳು ಬಂದಾವೆಂದು ನಾನು ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ. ಸರಿ. ನಾನು ನಾಸಿಕ ಜೇಲಿನಲ್ಲಿದ್ದಾಗ ಯರವಡಾ ಜೇಲಿನಲ್ಲಿದ್ದಂತೆ ಒಂದು ಕನಸನ್ನು ಕಂಡಿದ್ದೆ. ಒಮ್ಮಿಂದೊಮ್ಮೆಲೇ ನನ್ನನ್ನು

೧೦-೩-೩೨ ಬಾಪೂಜಿಯವರ ಹತ್ತಿರ ಕರೆದುಕೊಂಡು ಹೋಗಲಾಯಿತು. ನಾನು ಬಾಪೂಜಿಯವರ ಚರಣಗಳ ಮೇಲೆ ಬಿದ್ದು ಅಳತೊಡಗಿದೆ. ಏನಾಯಿತೊ ತಿಳಿಯದು. ಎಷ್ಟು ಪ್ರಯತ್ನಪಟ್ಟರೂ ಕಣ್ಣೀರುಗಳನ್ನು ತಡೆಯುವದಾಗಲಿಲ್ಲ. ರೋಚನು ಬೆಳಗಿನಲ್ಲಿ ಬಂದು ಹೇಳಿದ: "ನಡೆಯಿರಿ ನಿಮ್ಮ ಬದಲಿಯಾಗಿದೆ. ಒಂದು ತಾಸಿನಲ್ಲಿ ಸಿದ್ಧರಾಗಿರಿ." ನಾನು ಕೇಳಿದೆ: "ಎಲ್ಲಿ?" ಎಂದು. ಅದಕ್ಕೆ ಅವನು ಉತ್ತರ ಕೊಟ್ಟ: "ಅದನ್ನು ನೀವು ಕೇಳಿದರೆ ಹಿಗ್ಗುವಿರಿ ಇಷ್ಟೇ ಅಲ್ಲ ನನಗೆ ಧನ್ಯವಾದಗಳನ್ನೂ ಕೊಡುವಿರಿ. ಆದರೆ ಅದನ್ನು ನಾನು ಹೇಳಲಾರೆ." ನಾನು ಡಾಕ್ಟರ ಚಂದೂಲಾಲರನ್ನು ಭೆಟ್ಟಿಯಾಗಬೇಕೆಂದು ಕೇಳಿದೆ. ಆದರೆ ಒಪ್ಪಿಗೆ ದೊರೆಯಲಿಲ್ಲ. ಒಂಬತ್ತು ಗಂಟೆಗೆ ನಾಸಿಕದಿಂದ ಹೊರಟೆವು. ನನ್ನ ಸಂಗಡವಿದ್ದ ಪೋಲೀಸರೇ ಕೆಲವು ದಿನಗಳ ಮುಂಚೆ ವಿಠ್ಠಲಭಾಯಿಯವರನ್ನು ಇಲ್ಲಿಗೆ ತಂದು ಬಿಟ್ಟಿದ್ದರು. ಇವರಲ್ಲಿ ಒಬ್ಬನು ಹಳೆಯ ಪರಿಚಯದವನಿದ್ದನು. ಬಾಪೂಜಿಯವರು ಲಾರ್ಡ ರೀಡಿಂಗರ ಭೆಟ್ಟಿಗೆ ಹೋದಾಗ— ಈ ಮನುಷ್ಯನಿಗೆ ತಾರೀಖು ಸಹ ನೆನಪಿತ್ತು: ೧೭ ನೇ ಜೂನ ೧೯೨೦—ಇವನು ಸರ್ ಚಾರ್ಲಸ್ ಇನ್ನಸ ಬಳಿ ಬಟ್ಲರನಾಗಿದ್ದನು. ಆ ಮೇಲೆ ಅವನು ಯೂಬೇಕ, ರಾ. ಸಾ. ಗುಣವಂತರಾವ್ ದೇಸಾಯಿ ಮೊದಲಾದವರ ಬಳಿಗೆ ಇದ್ದು ಪೋಲೀಸ ಖಾತೆಯಲ್ಲಿ ಭರತಿಯಾದನು. ಅವನು ನನ್ನನ್ನು ಸಿಮ್ಲಾದಲ್ಲಿ ನೋಡಿದ್ದನು. ವಿಠ್ಠಲಭಾಯಿಯವರಲ್ಲಿಯೂ ನೋಡಿದ್ದನು. ಅವನ ಸ್ಮರಣಶಕ್ತಿ ಬಹಳ ದೊಡ್ಡದಿತ್ತು.

ಸಾಬರಮತಿ ಜೇಲಿನಲ್ಲಿ ಅಕಬರಅಲ್ಲಿಯು ಭೆಟ್ಟಿಯಾದಾಗ ಅವನ ಕಣ್ಣಲ್ಲಿ ನೀರು ತುಂಬಿಬಂದವು. ಅವನು ತನ್ನನ್ನು ಕೋಣೆಯಲ್ಲಿ 'ಬಂದಿ' ಮಾಡಿದ ಮೇಲೆ ಹೇಳಿದ: "ನಿಮ್ಮನ್ನು ಗಾಂಧೀಜಿಯವರ ಹತ್ತಿರ ಇಡಬೇಕೆಂದು ನನ್ನ ಹಾರೈಕೆಯಿದೆ." ಆಗ ನನಗೆ ಅನಿಸಿತ್ತು "ನಿನ್ನದೇನೊ ಹಾರೈಕೆಯಿದ್ದಿರಬಹುದು. ಆದರೆ ಅಂಥ ದೈವ ನನ್ನದೆಲ್ಲಿಯದು?" ಅವನು ಅಂದ: "ಆದರೂ ನನ್ನ ಹಾರೈಕೆ ಹೀಗೆಯೇ ಇದೆ." ಅಕಬರಅಲ್ಲಿಯ ವಿಷಯಕ್ಕೆ ಎಷ್ಟೆಷ್ಟೊ ಕೇಳಿದ್ದೆ. ಅವನು

ಪ್ರೇಮ ತೋರಿಸುವದರಲ್ಲಿ ಸ್ವಲ್ಪೂ ಹಿಂದು ಮುಂದು ನೋಡಲಿಲ್ಲ. ಅವನ ಹಾರೈಕೆಯು ಫಲಿಸಿತು!

ಪ್ಯಾರೇಲಾಲರೂ ಮಾರ್ಟಿನ್ನರ ಸಂಗಡ ಎಲ್ಲ ವ್ಯವಸ್ಥೆಯನ್ನು ಮಾಡಿ ಬಂದಿದ್ದೇನೆಂದು ನಾಸಿಕದಲ್ಲಿ ಎಲ್ಲರಿಗೂ ಹೇಳಿಟ್ಟಿದ್ದರು. ಇದು ನನಗೆ ಗಾಳಿಯ ಮಾತೆಂದು ಅನಿಸಿತು. ಆದರೆ ಇದು ಕೂಡ ಸತ್ಯವೇ ಇತ್ತು.

ಜೇಲಿನ ಹೆಬ್ಬಾಗಿಲಲ್ಲಿ ನನಗೆ ಸ್ವಲ್ಪ ಕಹಿಯಾದ ಸ್ವಾಗತವಾದುದರಿಂದ ಬಾಪೂಜಿಯವರ ದರ್ಶನವಾಗುವದೇ ಇಲ್ಲ. ನನ್ನ ಕಾಟ ತಪ್ಪಿಸಿಕೊಳ್ಳುವದಕ್ಕಾಗಿ ನಾಸಿಕದಿಂದ ನನ್ನ ಬದಲೀಮಾಡಿರುವರೆಂದು ಅನಿಸಿತು. ಅಲ್ಲದೆ ವಾರ್ಡರನು ನಗ-ನಗುತ್ತ ಬಂದು "ನನ್ನ ಸಂಗಡ ನಡೆಯಿರಿ. ನಿಮ್ಮನ್ನು ಮಹಾತ್ಮರ ಜೊತೆಗಿಡಬೇಕೆಂದು ನಮಗೆ ಇವತ್ತೇ ನಾಲ್ಕು ಗಂಟೆಗೆ ತಿಳಿದಿದೆ" ಎಂದು ಹೇಳಿದ. ಬಾಪೂಜಿಯವರ ಚರಣಗಳ ಮೇಲೆ ಮಸ್ತಕವನ್ನಿಡಲು ಅವರಿಗೂ ಆಶ್ಚರ್ಯವಾಯಿತು. ಬೆನ್ನು, ಕುತ್ತಿಗೆ, ಗಲ್ಲಗಳ ಮೇಲೆ ಚನ್ನಾಗಿ ಚಪ್ಪರಿಸಿದರು. ಇಷ್ಟೊಂದು ಸಲುಗೆಯನ್ನು ಬಾಪೂ ಎಂದೂ ತೋರಿಸಿರಲಿಲ್ಲ. ನಾನು ಕೃತಜ್ಞತೆಯಲ್ಲಿಯೂ ನನ್ನ ಅಯೋಗ್ಯತೆಯ ಅರುವಿನಲ್ಲಿಯೂ ಮುಳುಗಿಹೋದೆ. ನನ್ನನ್ನು ಇಲ್ಲಿ ತರುವವರಲ್ಲಿ ಸರ್ ಪುರುಷೋತ್ತಮದಾಸರದೂ ಕೈಯಿದೆಯೆಂದು ನನಗೆ ಬಾಪೂ ಮತ್ತು ಸರದಾರರಿಂದ ತಿಳಿಯಿತು. . . . . ರು ಮಾಡುವದನ್ನೆಲ್ಲ ಮಾಡಿರುವರೆಂದು ಡಾಹ್ಯಾಭಾಯಿ ಹಿಂದಿನ ಸಾರೆಯೆ ಹೇಳಿ ಹೋಗಿದ್ದರು.

ಅತ್ತಿತ್ತಿನ ಮಾತುಗಳನ್ನೂ ಸುದ್ದಿಗಳನ್ನೂ ಕೇಳುವದಾದ ಮೇಲೆ ಬಾಪೂಜಿಯವರು ಅಂದರು: "ನೀನು ಒಳ್ಳೆಯ ಸಮಯಕ್ಕೆ ಬಂದಿ. ವಲ್ಲಭಭಾಯಿಯವರ ಬುದ್ಧಿ ತೀರ ಮಸಣಿಸಿದೆ. ಅವರಿಗೆ ಏನೂ ಹೊಳೆಯದಂತಾಗಿದೆ. ಅವರು ನಿನಗೆ ಹೇಳಿದರೊ, ಇಲ್ಲವೊ?" ವಲ್ಲಭಭಾಯಿಯವರು ಹೇಳಿದರು: "ಇವರ ಊಟವಾಗಲಿ, ಬಳಿಕ ಮಾತಾಡೋಣ." ವಲ್ಲಭಭಾಯಿಯವರು ನನ್ನ ಸಲುವಾಗಿ ಊಟ ತಂದರು. ಬಾಪೂ ಮತ್ತು ಅವರು ಊಟ ತೀರಿಸಿಯೇ ಕುಳಿತಿದ್ದರು. ಬ್ರೆಡ್, ಬೆಣ್ಣೆ, ಮೊಸರು, ಕುದಿಸಿದ ಗೆಣಸು ಇದ್ದವು. ಊಟ ಮುಗಿದ ಮೇಲೆ ಬಾಪೂ ಮಾತನ್ನು ಪ್ರಾರಂಭಿಸಿದರು. ಪ್ರಾರಂಭ ಮಾಡುವದರ ಬದಲು ಸ್ಯಾಮುಅಲ್ ಹೋರರಿಗೆ ಬರೆದ ಪತ್ರವನ್ನು ನನಗೆ ಓದಲಿಕ್ಕೆ ಕೊಟ್ಟರು. ನಾನು ಓದಿ ಮುಗಿಸಿದ ಮೇಲೆ ನನ್ನನ್ನು ಕೇಳಿದರು: "ಹೇಗೆ ಅನಿಸುತ್ತದೆ?" ಎಂದು. ನಾನು ಹೇಳಿದೆ: "ನನಗೆ ಎಲ್ಲವೂ ತರ್ಕಶುದ್ಧವಿದೆಯೆಂದು ಕಾಣುತ್ತದೆ. ದಬ್ಬಾಳಿಕೆಯ ಧೋರಣದ ವಿಷಯದಲ್ಲಿ ಬಾಪೂ ಅವರ ಪ್ರಕೋಪ ಇಂಥ ರೂಪ ಧಾರಣ ಮಾಡಿದರೆ ಆಶ್ಚರ್ಯವಲ್ಲವೆಂದು ನನಗೆ ಹಿಂದೆ ಕೂಡ ಎಷ್ಟೋ ಸಾರೆ ಅನಿಸಿತ್ತು. ಇದರಲ್ಲಿ ವಲ್ಲಭಭಾಯಿಯವರಿಗೆ ಏನಾದರೂ ಆಪತ್ತಿಯುಂಟೆ? ನೀವು ಇಂಥ ಹೆಜ್ಜೆ ಇಟ್ಟರೆ ಕಾಂಗ್ರೆಸ್ಸಿನ

ಅಧ್ಯಕ್ಷರಾದ ಅವರು ಹೇಗೆ ಸಮ್ಮತಿ ಕೊಡಬಲ್ಲರೆಂಬ ವಿಚಾರವು ಅವರಿಗೆ ಬಂದಿರಬಹುದು." ಬಾಪೂ ಹೇಳಿದರು: "ಇಲ್ಲ. ಈ ಪ್ರಶ್ನೆ ಇವರ ಮನಸ್ಸಿನಲ್ಲಿ ಏಳಲಿಲ್ಲ. ಜೊತೆಗಾರನೆಂದು ಹೇಗೆ ಒಪ್ಪಿಗೆಯನ್ನು ಕೊಡಬೇಕೆಂಬುದೇ ಪ್ರಶ್ನೆಯಾಗಿದೆ. ಆದರೆ ವಲ್ಲಭಭಾಯಿಯವರು ಧಾರ್ಮಿಕ ದೃಷ್ಟಿಯಿಂದ ವಿಚಾರ ಮಾಡಿರುವರೆಂದು ನಾನು ತಿಳಿದಿಲ್ಲ. ಇವರು ರಾಜಕೀಯ ದೃಷ್ಟಿಯಿಂದಲೇ ವಿಚಾರ ಮಾಡಿರುವರು ಮತ್ತು ಅದು ಯೋಗ್ಯವಾಗಿದೆ. ನನ್ನ ಮತ್ತು ವಲ್ಲಭಭಾಯಿಯವರ ಸಂಬಂಧವು ಧಾರ್ಮಿಕವಾದುದೆಂದು ಹೇಳಲಾರೆ. ಆದರೆ ನನ್ನ ನಿನ್ನ ಸಂಬಂಧವು ಧಾರ್ಮಿಕವೆಂದು ಹೇಳಬಹುದು. ವಲ್ಲಭಭಾಯಿಯವರನ್ನು ಎದುರಿಸಿದ ಆಪತ್ತಿಯು ಹೀಗಿದೆ: 'ಇದರಿಂದ ಅನರ್ಥವಾಗುವದು. ಈ ಗಾಂಧೀ ಇದೇ ಪ್ರಕಾರದ ಮನುಷ್ಯ, ಹುಚ್ಚನಾಗಿದ್ದಾನೆ, ಅವನ ಹುಚ್ಚುತನ ನಡೆಯಲಿ. ಜನತೆಗೂ ಆಘಾತ ತಪ್ಪುವದು ಮತ್ತು ಈ ಪ್ರಕಾರದ ಉಪವಾಸದ ವಿಷಯಕ್ಕೆ ತಪ್ಪು ಕಲ್ಪನೆಯಾಗುವ ಭೀತಿಯೂ ಬಹಳ ಉಂಟು.' ಆದರೆ ಹೀಗೆ ಆಗಲೊಲ್ಲದೇಕೆ ನನ್ನನ್ನು ಹುಚ್ಚನೆಂದು ಭಾವಿಸಲಿ ಮತ್ತು ನಾನು ಸತ್ತರೂ ಸರಿಯೆ. ಇದರಲ್ಲಿ ಕೆಟ್ಟದ್ದೇನಿದೆ? ನನಗೆ ತೋರಿಕೆಯ 'ಮಹಾತ್ಮಾ' ಪದವಿ ಸಿಕ್ಕಿದ್ದರೆ ಅದು ನಾಶವಾಗುವದು. ಇದು ಒಳ್ಳೆಯದೇ ಇದೆ. ಆದರೆ ನನಗೆ ಹೀಗಾಗುವದೆಂದು ಅಂಜಿಕೆಯಿಲ್ಲ. ರೋಮಾ ರೋಲಾಂಧ ಜನರಾದರೂ ನನ್ನ ಈ ಮುಂದಡಿಯ ಅರ್ಥ ಮಾಡಿಕೊಳ್ಳಬಹುದು. ಒಂದು ವೇಳೆ ಅಂಥವರೂ ಅರ್ಥ ಮಾಡಿಕೊಳ್ಳಲಿಲ್ಲವೆನ್ನಿ. ಅದರಿಂದಾಗುವದೇನು? ನನಗಂತೂ ಧರ್ಮದ ವಿಚಾರಮಾಡುವದಿದೆಯಲ್ಲವೆ?" ನಾನು ಅಂದೆ: "ದಬ್ಬಾಳಿಕೆಯನ್ನು ಕುರಿತು ಉಪವಾಸ ಕೈಕೊಂಡರೆ ಜಗತ್ತಿಗೆ ಅದರ ಅರ್ಥವಾಗಬಹುದು. ಆದರೆ ಅಸ್ಪೃಶ್ಯರಿಗೆ ಸಂಬಂಧಿಸಿದ ಈ ಉಪವಾಸವು ಅದರ ಕಲ್ಪನೆಗೆ ತಾಗಲಿಕ್ಕಿಲ್ಲ. ಎಲ್ಲ ಅಸ್ಪೃಶ್ಯರೂ ಅಥವಾ ಅಸ್ಪೃಶ್ಯರಲ್ಲಿ ಬಹು ಜನರು ಪ್ರತ್ಯೇಕ ಮತದಾರ ಸಂಘ ಬೇಕು ಎನ್ನುವವರಿದ್ದಾರೆಂದು ಬ್ರಿಟಿಶ ಸರಕಾರವು ಜಗತ್ತಿಗೆ ತಿಳಿಸಿ ಹೇಳುವ ಪ್ರಯತ್ನ ಮಾಡಬಹುದು. ಇದರಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಮತಾಧಿಕಾರ ಕೊಟ್ಟು ಜನತಾರೂಪಿ ಶರೀರದ ಮೇಲೆ ಭಯಂಕರ ಆಘಾತ ಮಾಡಲಾಗುತ್ತಿದೆಯೆಂಬುದನ್ನು ನೀವು ಹೆಚ್ಚು ಸ್ಪಷ್ಟಮಾಡಬೇಕೆಂದು ನನಗೆನಿಸುತ್ತದೆ. ಹೀಗೇ ಇದ್ದರೆ ಅನೇಕ ಜನ ಪ್ರಾಮಾಣಿಕರಾದ ಇಂಗ್ಲೀಷರಿಗೂ ಇದರ ಅರ್ಥವಾಗದು." ಬಾಪೂ ಅಂದರು: "ಇದಕ್ಕಿಂತ ಹೆಚ್ಚು ವಿವರಣೆ ಮಾಡಹೋದರೆ ಈ ಕಾರ್ಯದಲ್ಲಿ ಮುಸಲ್ಮಾನರ ಪಾಲು ಎಷ್ಟೆಂಬುದನ್ನು ಸ್ಪಷ್ಟಪಡಿಸಬೇಕಾಗುವದು. ಇದರಿಂದ ಮುಸಲ್ಮಾನರ ಸಂಗಡ ಶತ್ರುತ್ವ ಬೆಳೆಯುವದು. ೨೧ ದಿವಸದ ಉಪವಾಸದ ಕಾಲಕ್ಕೂ ಆದಂತೆಯೆ ಆಗುವದು. ಆ ಕಾಲಕ್ಕೆ ಮಹಮ್ಮದಲ್ಲಿಯವರು ಎಷ್ಟೋ ವಾಕ್ಯಗಳನ್ನು ತೆಗೆಸಿದ್ದರು." ನಾನು ಅಂದೆ: "ಹಿಂದೂ ಸಮಾಜವು ಮಾಡಿದ ಪಾಪಕ್ಕಿಂತಲೂ

ಈ ಪಾಪದ ವಿರುದ್ಧ ನೀವು ಉಪವಾಸ ಕೈಕೊಳ್ಳುವಷ್ಟು ಇದು ದೊಡ್ಡದೇ ಎಂದು ಅನೇಕರು ಕೇಳಬಹುದು." ಬಾಪೂ ಹೇಳಿದರು: "ಹಿಂದೂ ಸಮಾಜಕ್ಕೆ ತಗಲಿದ ಪಾಪವನ್ನು ಆ ಸಮಾಜದ ಕಡೆಯಿಂದ ತೊಳೆಯಲಿಕ್ಕೆ ಹಚ್ಚಿದ್ದೆವು. ಈ ಕೃತ್ಯವು ಆ ಪಾಪವನ್ನು ಗಟ್ಟಿಗೊಳಿಸುವಂತಹದಾಗಿರುತ್ತದೆ ಅಥವಾ ತೊಳೆಯುವ ಕಾರ್ಯದಲ್ಲಿ ಬಾಧೆ ತರುವಂತಹದಾಗಿರುತ್ತದೆ. ಇದರ ಪರಿಣಾಮವು ದೇಶದಲ್ಲಿ ಒಳಜಗಳ ಹೆಚ್ಚುವದಲ್ಲದೆ ಬೇರೆ ಏನೂ ಆಗಲಾರದು. ಯುದ್ಧವು ಸವರ್ಣ ಹಿಂದೂ ಮತ್ತು ಅಸ್ಪೃಶ್ಯರ ನಡುವೆ ಮತ್ತು ಹಿಂದೂ ಮುಸಲ್ಮಾನರ ನಡುವೆ ಆಗುವದು."

ವಲ್ಲಭಭಾಯಿಯವರು ಹೇಳಿದರು: "ಈಗಲೂ ಸಹ ನನ್ನ ಒಪ್ಪಿಗೆಯಿಲ್ಲ. ಆದರೆ ಇನ್ನು ನಿಮಗೆ ಸರಿಕಂಡಂತೆ ಮಾಡಿರಿ."

ಬಾಪೂ ಪತ್ರವನ್ನು ಸುಧಾರಿಸಲಿಕ್ಕೆ ಕುಳಿತರು. ಅದಾದ ಮೇಲೆ ಮಲಗಿಕೊಂಡರು.

ರಾತ್ರಿ ಹನ್ನೆರಡು ಒಂದು ಗಂಟೆಯವರೆಗೆ ನನಗೆ ನಿದ್ರೆಯೇ ಬರಲಿಲ್ಲ. ಮೂರೂ-ಮುಕ್ಕಾಲು ಗಂಟೆಗೆ ಪ್ರಾರ್ಥನೆಗಾಗಿ ಎಚ್ಚತ್ತೆನು. ಮುಖಮಾರ್ಜನೆ ಮಾಡಿ ಪ್ರಾರ್ಥನೆಗೆ ಕುಳಿತ ಮೇಲೆ ಬಾಪೂ ಪ್ರಾರ್ಥನೆಯ ಕ್ರಮವನ್ನು ಹೇಳಿದರು: "ವಲ್ಲಭ-ಭಾಯಿಯವರಿಂದ ಶ್ಲೋಕಗಳನ್ನು ಅನ್ನಿಸಲಾಗುತ್ತಿದೆ. ಇವರಿಗೆ ಸಂಸ್ಕೃತದ ಜ್ಞಾನ ಸ್ವಲ್ಪೂ ಇರದ್ದರಿಂದ ಉಚ್ಚಾರವು ಬಹಳ ಅಶುದ್ಧವಾಗುತ್ತಿತ್ತು. ಆದುದರಿಂದ ಉಚ್ಚಾರಗಳನ್ನು ತಿದ್ದುವ ರೀತಿಯು ಇದರ ಹೊರತು ಬೇರೊಂದಿಲ್ಲವೆಂದು ತಿಳಿದೆನು. ಎಷ್ಟೋ ಮಾರ್ಪಾಟಾದದ್ದನ್ನು ನೀನು ನೋಡಬಹುದು. ನಾನು ಹಾಡು ಹೇಳುತ್ತಿದ್ದೆ. ಬಾಯಿಪಾಠಂತೂ ಬರುತ್ತಿದ್ದಿಲ್ಲ. ಆದುದರಿಂದ ನಾವು ಒಂದಾದನಂತರ ಮತ್ತೊಂದು ಹಾಡನ್ನು ಓದತೊಡಗಿದೆವು. ಇವತ್ತು ಮರಾಠಿ ಹಾಡನ್ನು ಪ್ರಾರಂಭಮಾಡುವವರಿದ್ದೆವು. ಈಗ ನೀನು ರಾಮಧೂನ್ ಮತ್ತು ಹಾಡುಗಳನ್ನು ಹೇಳು." ನೀವೇ ಹೇಳಿರೆಂದು ನಾನು ಬಾಪೂ ಅವರಿಗೆ ಹೇಳಿದ್ದೆ. ಈ ಮಾತು ಕಥೆಯೆಲ್ಲ ರಾತ್ರಿಯಲ್ಲಿಯೇ ಆಗಿತ್ತು. ಈಗ ನಾನೇ ಮೊದಲನೇ ಹಾಡನ್ನು "प्रभु मोरे अवगुण चित न धरो" ಎಂಬುದನ್ನು ಹಾಡಿದೆ. ಇದರ ಹೊರತು ನಾನು ಬೇರೆ ಯಾವದನ್ನು ಹಾಡಬಹುದಾಗಿತ್ತು!

ಬೆಳಿಗ್ಗೆ ಪ್ರಾರ್ಥನೆಯಾದನಂತರ ಮಲಗುವ ಪ್ರಯತ್ನಮಾಡಿದೆ. ಆದರೆ ನಿದ್ರೆ ಹತ್ತಲಿಲ್ಲ. ಬೆಳಿಗ್ಗೆ ಚಹ ಕುಡಿಯುವದಕ್ಕೆ ನಾನು ಒಪ್ಪಿಕೊಂಡಿದ್ದೆ. ವಲ್ಲಭಭಾಯಿಯವರನ್ನು ಕೇಳಿದೆ: "ನೀವು ಚಹಾ ಕುಡಿಯುವದನ್ನು ನಿಲ್ಲಿಸಿದ್ದೀರಾ"? ಅದಕ್ಕೆ ಅವರು ಹೇಳಿದರು: "ಇಲ್ಲಿ ಬಾಪೂ ಅವರ ಬಳಿಯಲ್ಲಿದ್ದು ಚಹಾ ಕುಡಿಯುವದೆ? ನಾನು ಅವರು ಉಂಡದ್ದನ್ನೇ ಉಣ್ಣುವದನ್ನು ನಿಶ್ಚಯ ಮಾಡಿದ್ದೇನೆ. ಅನ್ನವನ್ನು ಬಿಟ್ಟಿದ್ದೇನೆ. ಎರಡು ಹೊತ್ತು ಹಾಲು, ಚಪಾತಿ, ಬೇಯಿಸಿದ ಪಲ್ಲೆ ತಿನ್ನುತ್ತಿದ್ದೇನೆ.

ಬಾಪೂ ಕೂಡ ಚಪಾತಿ ತಿನ್ನುತ್ತಾರೆ.” ಚಹಾ ಇಲ್ಲದೆ ಇರುವ ವಲ್ಲಭಭಾಯಿಯವರ ಈ ನಿಶ್ಚಯದಿಂದ ನನಗೆ ಪ್ರೋತ್ಸಾಹನೆ ದೊರೆಯಿತು. ನಾನೂ ಕೂಡ ಚಹ ಕುಡಿಯುವದನ್ನು ಬಿಟ್ಟೇ ದಿನದ ಕೆಲಸಕ್ಕೆ ತೊಡಗಿದೆ. ಬಾಪೂ ಅವರಿಗೆ ಸೋಡಾ ತಯಾರಿಸುವದು, ಖಜ್ಜೂರಿ ಸ್ವಚ್ಛ ಮಾಡುವದು, ಹಲ್ಲುಕಡ್ಡಿ ಸಿದ್ಧಗೊಳಿಸಿ ಇಡುವದು, ಈ ಎಲ್ಲ ಕೆಲಸಗಳನ್ನು ವಲ್ಲಭಭಾಯಿಯವರು ತಾವೇ ವಹಿಸಿಕೊಂಡಿದ್ದರು. ಅವರು ನಗನಗುತ್ತ ಹೇಳತೊಡಗಿದರು: “ನಮ್ಮಿಬ್ಬರನ್ನೂ ಇಲ್ಲಿ ಜೊತೆಯಲ್ಲಿಡುವರೆಂದು ನನಗೇನು ಗೊತ್ತು? ಗೊತ್ತಿದ್ದರೆ ಬಾಪೂ ಅವರ ಕೆಲಸ ಏನೇನೆಂದು ಕಾಕಾ ಅವರನ್ನು ಕೇಳಿಕೊಳ್ಳುತ್ತಿದ್ದೆ. ಬಾಪೂ ಅವರಂತೂ ಏನೂ ಹೇಳುವದಿಲ್ಲ. ಆದುದರಿಂದ ಏನೂ ಗೊತ್ತಾಗುವದಿಲ್ಲ. ಬಟ್ಟೆ ತೊಳೆಯುವ ಕೆಲಸವನ್ನಂತೂ ಬಾಪೂ ಇಟ್ಟೇ ಇಲ್ಲ. ಒಳಗಿನಿಂದ ತೊಳೆದುಕೊಂಡೇ ಹೊರಗೆ ಬರುತ್ತಾರೆ. ಅಂದಮೇಲೆ ಮಾಡುವದೇನು?” ಆಗ ಬಾಪೂ ಬಟ್ಟೆ ಒಗೆಯುವ ಕೆಲಸವನ್ನು ಎಷ್ಟು ಹಗರು ಮಾಡಲಾಗಿದೆಂಬುದನ್ನು ಹೇಳಿದರು. ಹೇಳಹೇಳುತ್ತ ಬಹಳ ನಕ್ಕರು. ಮತ್ತೆ ಮುಂದೆ ಹೇಳಿದರು: “ಒಂದು ದಿವಸ ಗೇಣುದ್ದ ವಸ್ತ್ರವನ್ನಷ್ಟೆ ಹಿಡಿದುಕೊಂಡು ಸ್ನಾನಗೃಹದೊಳಗೆ ಹೋದೆ. ಸ್ನಾನವಾದ ಮೇಲೆ ಅಂಗವಸ್ತ್ರ ಮರೆತು ಬಂದದ್ದು ಗೊತ್ತಾಯಿತು. ಆದುದರಿಂದ ಆ ವಸ್ತ್ರವನ್ನೆ ಹಿಂಡಿ ಮೈ ಒರೆಸಿಕೊಂಡೆ. ದಿನಾಲು ಬಟ್ಟೆಯನ್ನು ಬದಲು ಮಾಡುವದಿಲ್ಲ. ಈಗಂತೂ ಅಂಗವಸ್ತ್ರವಿಲ್ಲದೆಯೆ ಕೆಲಸ ಸಾಗುತ್ತಿದೆ. ಮಿರಾ ಇದ್ದಾಗ ಮೂರು ವಸ್ತ್ರಗಳನ್ನು ತೊಳೆಯಬೇಕಾಗುತ್ತಿತ್ತು. ಅದರ ಬದಲು ಈಗ ಒಂದೇ ಉಳಿದಿದೆ. ಅದನ್ನು ಸಹ ಒಂದು ದಿನಬಿಟ್ಟು ಒಂದು ದಿವಸ ತೊಳೆಯಲಾಗುತ್ತಿದೆ. ಅಂದ ಮೇಲೆ ತೊಳೆಯುವದೇನಿದೆ?” ಉಳಿದ ಜನರೂ ಪ್ರಾಮಾಣಿಕತನದಿಂದ ಕೆಲಸ ಮಾಡುವವರಿದ್ದರು. ಮಾರುತಿರಾಯ ಬಲಭೀಮನು ಮುಂಜಾನೆ ಸಂಜೆಗೆ ಚರಣಗಳಲ್ಲಿ ಮಸ್ತಕವನ್ನಿಟ್ಟು ಮಲಗಲಿಕ್ಕೆ ಹೋಗುತ್ತಿದ್ದ. ಅವನು ನನ್ನನ್ನೂ ತ್ರಿಮೂರ್ತಿಗಳಲ್ಲಿ ಎಣಿಸಿ ನನಗೂ ನಮಸ್ಕಾರ ಮಾಡಿದ. ನಾನು ಅವನಿಗೆ “ಮಹಾರಾಯಾ ನಾನೂ ನಿನ್ನಂತೆಯೆ ಇದ್ದೇನೆ.” ಎಂದು ಹೇಳಿದೆ.

ಬೆಳಿಗ್ಗೆ ಬಾಪೂ ನನ್ನಿಂದ ಪತ್ರ ಬರೆಯಿಸಿದರು. ಬರೆಯಿಸುತ್ತಾ ಹೋದಂತೆ ಅದರಲ್ಲಿ ಸುಧಾರಣೆ ಮಾಡುತ್ತ ಹೋದರು. ಹತ್ತು ಗಂಟೆಗೆ ಮೇಜರ ಬಂದರು. ಅವರ ಸಂಗಡ ಕಾಲಿನ ವಿಷಯಕ್ಕೆ ಮಾತುಗಳಾದವು. ಅವರಿಗೆ ಏನೂ ತಿಳಿಯಲಿಲ್ಲ ಎಂದೆನಿಸಿತು. ಆ್ಯಂಟಿ ಫ್ಲೋಜಿಸ್ಟಿನ್ ಹಚ್ಚಲಿಕ್ಕೆ ಹೇಳಿದರು. ಆ್ಯಂಟಿ ಫ್ಲೋಜಿಸ್ಟಿನ್‌ದ ವಿನೋದಪರ ಕಥೆಯನ್ನು ಹೇಳು ಎಂದು ಬಾಪೂ ಅಂದರು. ಮೇಜರರು ‘ನಾನಂತೂ ಇಲ್ಲಿ ಎಷ್ಟೊ ಡಬ್ಬಿಗಳನ್ನು ಕೊಂಡು ತರಿಸಿ ಇಡುತ್ತೇನೆ!’ ಎಂದು ಹೇಳಿದರು ಮತ್ತು ಅವರು ನನ್ನ ಬಟ್ಟೆಬರೆಯ ವಿಷಯದಲ್ಲಿ ಮಾತಾಡಿದರು: “ನೀವು ಬೀ ಕ್ಲಾಸಿನವರು. ಯಾಕಂದರೆ ನಿಮ್ಮ ಸಲುವಾಗಿ ನನ್ನ ಕಡೆಗೆ ಪ್ರತ್ಯೇಕ ಹುಕುಂ ಬಂದಿಲ್ಲ.”

"ನೀವು ಹೇಳಿದಂತೆ ಮಾಡುವೆನು" ಎಂದು ಉತ್ತರಕೊಟ್ಟೆನು. ಬಟ್ಟೆಗಳು ಬಂದವು. ಆದರೆ ಉಳಿದ ಎಲ್ಲ ಸಾಮಾನುಗಳು ತಪಾಸಣೆಗಾಗಿ ಹೊರಗೇ ಉಳಿದವು.

ರಾಟೆಯನ್ನು ನೂಲುತ್ತ ನೂಲುತ್ತ ಬಾಪೂ ಅದರಲ್ಲಿ ಬದಲಾವಣೆಯನ್ನು ಮಾಡಿದ್ದರ ವಿಷಯವಾಗಿ ಹೇಳಿದರು. ಈಗ ದಿನಾಲು ೨೫೦ ವಾರು ನೂಲುತ್ತೇನೆ. ಇನ್ನೂ ವರೆಗೆ ಶರೀರದ ಆಯಾಸ ಹೋಗಿಲ್ಲವೆಂದು ಅಂದರು.

ಸ್ಯಾಮ್ಯುಅಲ್ ಹೋರರಿಗೆ ಪತ್ರವನ್ನೂ ಅದಕ್ಕಾಗಿ ಸಾಇವ್ಸ ಸಾಹೇಬರಿಗೆ Covering letter (ಜೊತೆಯಪತ್ರ)ನ್ನೂ ಬರೆದು ಮಧ್ಯಾಹ್ನಕ್ಕೆ ಕೊಟ್ಟು ಕಳಿಸಿದರು. ಕೊಟ್ಟು ಕಳಿಸಿದ ಮೇಲೆ ಬಾಪೂ ಹೇಳಿದರು : "ಈಗಂತೂ collapse ( ದಣಿದು ಬೀಳು ) ಆಗುವಂತೆ ಎನಿಸುತ್ತದೆ. ದಿಲ್ಲಿಯಲ್ಲಿ ತಾತ್ಪೂರ್ತಿಕ ಸಂಧಿ ಆದ ಮೇಲೆ ಆದಂತೆಯೇ ಆಗಿದೆ. ರಾತ್ರಿಯಲ್ಲಿ—ಅರ್ಧ ರಾತ್ರಿಯಾದ ಮೇಲೆ ಎಲ್ಲವೂ ನಿಶ್ಚಿತವಾಯಿತು. ಜೇನರಿಗೆ ತಂತಿ ಕಳಿಸಲು ಆಯರ್ವಿನ್ನರು ಇಮರ್ಸನ್ನಿಗೆ ಹೇಳಿ ತಿರುಗಿ ಬಂದು ಕುಳಿತರು. ಅವರೂ ಉದಾಸೀನರು, ನಾನೂ ಉದಾಸೀನನು. ನಾನು ಮೌನವನ್ನು ಮುರಿದು ಮಾತನಾಡಿದೆ : 'ನೋಡಿರಿ ನನಗಂತೂ ತಣ್ಣೀರೆರಚಿದಂತಾಗಿದೆ. ನಿಮ್ಮದೂ ಇದೇ ಪ್ರಕಾರದ ಭಾವನೆಯಾಗುತ್ತಿರುವದು ಕಂಡುಬರುತ್ತದೆ. ಆದುದರಿಂದ ನಿಮ್ಮನ್ನು ಮತ್ತೆ ಪ್ರಾರ್ಥಿಸುತ್ತೇನೆ ನಿಮಗೆ ಮತ್ತೆ ಹೇಳುತ್ತೇನೆ : 'ನಾನಂತೂ ಯೋದ್ಧಾ ಇದ್ದೇನೆ. ನನಗೆ ಪುನಃ ಯುದ್ಧ ಮಾಡುವ ಪ್ರಸಂಗಬರಬಹುದು. ಈ ಒಪ್ಪಂದದ ಗೊಂದಲದಲ್ಲಿ ಎಲ್ಲಿ ಬಿದ್ದೆನೆಂದು ನಿಮಗೂ ಎನಿಸುತ್ತಿರಬಹುದು. ಅಧಿಕಾರಿಗಳು ಯಾರೂ ಒಪ್ಪಂದವನ್ನು ಇಚ್ಛಿಸುವದಿಲ್ಲ. ವಾತಾವರಣವು ಪ್ರತಿಕೂಲವಿದ್ದಾಗ ಒಪ್ಪಂದ ಎಂತಹದು? ಆದುದರಿಂದ ನೀವು ಈಗಲಾದರೂ ಆ ತಂತಿಯನ್ನು ಮರಳಿ ತರಿಸಿಕೊಳ್ಳಿರಿ. ಜೇನರು ನನಗೆ ಮೂರ್ಖನೆನ್ನಬಹುದು. ಇಷ್ಟೇ ಆಗಬಹುದು.' ಆಗ ಅವರು ಹೇಳಿದರು : 'ಇಲ್ಲಿ ಅಂಥ ಮಾತೇನೂ ಇಲ್ಲ. ನಿಮಗೆ ಹೋರಾಡುವದಿದ್ದರೆ ಹೋರಾಡಿರಿ. ಹೋರಾಡುವದಾದರೂ ಯೋಗ್ಯ ಪದ್ಧತಿಯಿಂದಲೆ ಅಲ್ಲವೆ? ಇಲ್ಲ, ಇಲ್ಲ. ಒಪ್ಪಂದ ಆಗಿದ್ದು ಆಗಿಹೋಯಿತು.' ಇವತ್ತು ಎಲ್ಲಿಯವರೆಗೆ ಪತ್ರವನ್ನು ಕಳಿಸಿದ್ದಿಲ್ಲವೋ ಅಲ್ಲಿಯವರೆಗೆ ಪತ್ರ ಹೋದರೆ ಒಳ್ಳೆಯದು ಎಂದು ಎನಿಸುತ್ತಿತ್ತು. ಆದರೆ ಈಗ ಪತ್ರ ಕಳಿಸಿದ ಮೇಲೆ ತಲೆಯ ಮೇಲೆ ಇದೇನು ಹೊಣೆಗಾರಿಕೆ ತೆಗೆದುಕೊಂಡೆನೆಂದು ಎನಿಸಹತ್ತಿದೆ. . . ಅಸ್ಪೃಶ್ಯರ ಸಲುವಾಗಿ ಇನ್ನು ಸ್ವತಂತ್ರ ಮತಾಧಿಕಾರ ಉಳಿಯಲಿಕ್ಕಿಲ್ಲ. ಅಥವಾ ಹೀಗೂ ಆಗಬಹುದು : 'ನನ್ನನ್ನು ಹೊರಗೆ ಬಿಟ್ಟು ಸಾಯಗೊಡಬಹುದು.' ನಾನು ಹೇಳಿದೆ : 'ಬಿಟ್ಟ ಮೇಲಂತೂ ಈ ಉಪವಾಸದಿಂದ ಈ ಜನರ ಕಲ್ಪನೆಗೆ ನಿಲುಕದಷ್ಟು ಗೊಂದಲವೇಳಬಹುದು!" ಬಾಪು 'ಹೌದು' ಎಂದರು.

ವಲ್ಲಭಭಾಯಿಯವರು ಬೆಳಿಗ್ಗೆ ಹೇಳಹತ್ತಿದರು : "ಇವತ್ತಿಗೆ ಎರಡು ವರುಷ

ಪೂರ್ವದಲ್ಲಿ ಈ ಸಮಯಕ್ಕೆ ಚಂಡೋಲಾ ಕೆರೆಯನ್ನು ದಾಟಿದ್ದೆವು. ಯುದ್ಧದ ಎರಡು ವರುಷ ಗತಿಸಿಹೋದವು. ಮಧ್ಯದಲ್ಲಿ ಒಂದು ವಿಷ್ಕಂಭಕ (ಬಿಡುವಿನ ಸಮಯ) ಬಂದಿತ್ತು.

ವಲ್ಲಭಭಾಯಿಯವರು ಬಾಪೂ ಅವರನ್ನು ನಗೆಸುವದರಲ್ಲಿ ಸ್ವಲ್ಪೂ ಹಿಂಜರಿಯುತ್ತಿದ್ದಿಲ್ಲ. ಇವತ್ತು ಕೇಳತೊಡಗಿದರು. "ಎಷ್ಟು ಖರ್ಜೂರಿ ತೊಳೆಯಲಿ?" ಬಾಪೂ: "ಹದಿನೈದು". ವಲ್ಲಭಭಾಯಿ: "೧೫ ಮತ್ತು ೨೦ರಲ್ಲಿ ಅಂತರವೇನು?" ಬಾಪೂ: "ಹಾಗಾದರೆ ಹತ್ತು. ಯಾಕಂದರೆ ೧೦ ಮತ್ತು ೧೫ ರಲ್ಲಿ ಅಂತರವೇನು?" ನನಗೆ ಬಾಪೂ ಕೇಳಿದರು: "ಯಾಕೆ ಮಹಾದೇವ? ಜೇಲು ಹೇಗಿದೆ? ಮನೆಯಲ್ಲಿ ಯಾರಾದರೂ ಹಾಸಿಗೆ ಮಾಡಿ ಮಲಗಿಸುತ್ತಿದ್ದರೆ? ನಸುಕಿನಲ್ಲಿಯೆ ಯಾರಾದರೂ ಕಮೋಡ ಸ್ವಚ್ಛಮಾಡಿ ಇಡುತ್ತಿದ್ದರೆ? ಇದೂ ಅಲ್ಲದೆ ಟೋಸ್ಟಮಾಡಿದ ಬ್ರೆಡ್, ಜೆಲ್ಲಿ, ಹಾಲು ಮತ್ತು ನಾನಾಪ್ರಕಾರದ ಪಲ್ಲೆಗಳು ಬೇರೆ?" ಇದನ್ನು ಕೇಳಿ ನಾನು ಹೇಗೆ ಹಿಗ್ಗಬಲ್ಲೆನು? ನಾಸಿಕ ಜೇಲಿನ ಚಿತ್ರವಿನ್ನೂ ನನ್ನ ಕಣ್ಣಮುಂದೆ ಕಟ್ಟಿತ್ತು. ಇಲ್ಲಿ ಇದ್ದುದಕ್ಕೆಲ್ಲ ಕಾರಣ ಬಾಪೂ ಅವರೇ ಎಂಬುದನ್ನು ಅರಕ್ಷಣ ಕೂಡ ಮರೆಯುವಂತಿದ್ದಿಲ್ಲ.

ಹಿಂದಿನ ದಿನದ ಸಂವಾದದಲ್ಲಿಯ ಒಂದು ಮಾತು ಉಳಿದಿದೆ. ಬಾಪೂ ಅಂದರು: "ನನ್ನನ್ನು ಇಲ್ಲಿ ಮಖಮಲ್ ಗಾದಿಯ ಮೇಲೆ ಮಲಗಿಸುತ್ತಿದ್ದಾರೆ. ಇಲ್ಲಿ ನಿನ್ನನ್ನು ತಂದಾರೆಂಬ ಆಶೆ ನನಗಿರಲಿಲ್ಲ. ಆದರೆ ನಿನ್ನನ್ನು ಕರೆತಂದರು. ಈ ಪ್ರಕಾರ ಎಷ್ಟೋ ಅನುಕೂಲತೆಗಳನ್ನು ಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದರಿಂದ ನಾನು ಹೇಗೆ ಮೋಹಜಾಲದಲ್ಲಿ ಬೀಳಲಿ? ಇದರಿಂದ ನಾನು ನನ್ನ ಪಾಲಿಗೆ ಬಂದ ಕರ್ತವ್ಯದಿಂದ ವಿಮುಖನಾಗಲೆ? ಇದಕ್ಕೆಲ್ಲ ನಾನು ಮರುಳಾಗುವೆನೆ? ನಿನ್ನ ಮತವನ್ನು ಕೇಳುವದಾದರೂ ಉಪವಾಸದ ವಿಷಯಕ್ಕೆ ಅಲ್ಲ. ದಿಲ್ಲಿಯಂಥ ಪರಿಸ್ಥಿತಿಯಿದ್ದರೆ ನಿಮ್ಮನ್ನು ಯಾರನ್ನೂ ವಿಚಾರಿಸುತ್ತಿರಲಿಲ್ಲ. ಸಾಮಾನ್ಯವಾಗಿ ನಾನು ನಿರ್ಣಯ ಮಾಡಿದ ಮೇಲೆಯೇ ಜಾಹೀರಪಡಿಸುತ್ತೇನೆ. ಆದರೆ ಈ ಸಾರೆ ultimatum (ಕಟ್ಟಕಡೆಯ ಮಾತನ್ನು) ಕೊಡುವದಿದೆ. ಮತ್ತು ಯಾವ ಯಾವ ಮಾತಿನ ಬಗ್ಗೆ ಸೂಚನೆ ಕೊಡುವದಿದೆಯೊ ಆ ವಿಷಯ ಕುರಿತು ಚರ್ಚಿಸುವದು ಅವಶ್ಯವಿದೆ."

ಮಧ್ಯಾಹ್ನಕ್ಕೆ ಪುಸ್ತಕಾಲಯದ ಸೂಚಿಪತ್ರ ಬಂತು. ಬಾಪೂ ತಮಗೆ ಬೇಕಾದ ಪುಸ್ತಕಗಳನ್ನು ಕೇಳತೊಡಗಿದರು: "ಇದರಲ್ಲಿ ಸ್ಕಾಟ್ ಇದೆಯೆ? ಮೆಕಾಲೆ ಇದೆಯೆ? ಕಿಂಗ್ಸ್ಲೆ Westward Ho ಇದೆಯೆ? ಜುಲ್ಸವರ್ನ ಇದೆಯೆ? Faust (ಫಾಸ್ಟ) ಇದೆಯೆ? ಹ್ಯೂಗೊ ಇದೆಯೆ? ಎಡ್ವರ್ಡ ಕಾರ್ಪೆಂಟರನ ಹೆಸರು ಕೇಳುತ್ತಲೆ Adam's Peak to Elephanta (ಆಡ್ಯಾಮ್ಸ ಪೀಕ ಟು ಎಲಿಫಂಟಾ)

ತರಿಸಿರಿ. ಮತ್ತು ನಿವೇದಿತಾ ಇವರ Cradle Tales ( ಕ್ರೇಡಲ್ ಟೇಲ್ಸ )ನ್ನೂ ತರಿಸಿರಿ " ಎಂದರು. ಜೇಲಿನ ಪುಸ್ತಕಗಳ ಬಗ್ಗೆ ಮಾತಾಡುತ್ತ ಬಾಪೂ ಹೇಳಿದರು. "ದಕ್ಷಿಣ ಆಫ್ರಿಕೆಯ ಜೇಲಿನ ಪುಸ್ತಕದಲ್ಲಿಯೆ ನಾನು ಮೊದಲನೆಯ ಸಾರೆ Dr. Jekyll and Mr. Hyde ( ಡಾ. ಜೆಕಿಲ್ ಮತ್ತು ಮಿ. ಹಾಯಿಡ ) ಓದಿದೆನು. ಇದರಲ್ಲೇನಿದೆ ಎಂಬುದು ನನಗೆ ಗೊತ್ತಿದ್ದಿಲ್ಲ." ಈ ಪುಸ್ತಕಾಲಯದಲ್ಲಿ ಕೂಡ ಸ್ಟೀವ್ಹನ್‌ಸನ್ ಅದೆಯೆಂದು ನಾನುಹೇಳಿದೆ. Verginitris Purisque ( ವರ್ಜಿನಿ-ಟ್ರಿಸ್ ಪುರಿಸ್ಕ ) ಅಂದರೆ to the Pure Vergin ಎಂದು ಬಾಪೂ ತಾವೇ ತಿಳಿಸಿ ಹೇಳಿದರು. ಮತ್ತು ಅದು ಉತ್ತಮವಾದ ನಿಬಂಧವಿರಬಹುದೆಂದು ಅಂದರು.

ಖಗೋಲದ ವಿಷಯವಾಗಿ ಮಾತಾಡುತ್ತ ಬಾಪೂ ಹೇಳಿದರು: "ನಾನೀಗ ಬಹಳ ಜಾಣನಾಗಿದ್ದೇನೆ. ನೀನು ಕಾಕಾ ( ಕಾಕಾ ಕಾಲೇಲಕರ ) ಅವರ ಸಂಗಡ ಎಂದಾದರೂ ಆಕಾಶದರ್ಶನ ಮಾಡುತ್ತಿದ್ದಿಯಾ ? ನಾನು ಇಲ್ಲಿ ಟಾಯಿಮ್ಸನದೊಳಗಿನ ನಕಾಶ ತೆಗೆದುಕೊಂಡು ಕುಳಿತು ಕೃತ್ತಿಕಾ, ರೋಹಿಣಿ, ಮೃಗಶಿರಾ ಮತ್ತು ಅನುರಾಧಾ, ಜೇಷ್ಠಾಗಳನ್ನು ದಾಟಿ ಬಹಳ ದೂರ ಹೋಗಿದ್ದೇನೆ. ಆಫ್ರಿಕಾದಲ್ಲಿ ಕೆಚನ್‌ನ ಜೊತೆಗೆ ಇದ್ದೆ. ಕೆಚನ್ನನಿಗೆ ಇದರಲ್ಲಿ ಬಹಳ ಅಭಿರುಚಿ. ಅವನು ನನ್ನನ್ನು ಒಂದು ವೇಧಶಾಲೆಗೆ ಕರೆದೊಯ್ದಿದ್ದ. ಆದರೆ ನನಗೆ ಅದರಲ್ಲಿ ಏನೂ ರುಚಿ ಬರಲಿಲ್ಲ. ಆ ದಿನಗಳಲ್ಲಿ ಅನ್ಯ ವಿಷಯಗಳಲ್ಲಿ ರುಚಿ ಬರುತ್ತಿತ್ತು. ಆದರೆ ಈಗ ಈ ವಿಷಯದಲ್ಲಿ ಬಹಳ ಆನಂದವೆನಿಸುತ್ತಿದೆ. ಇದರಿಂದ ದೃಷ್ಟಿ ಎಷ್ಟು ವಿಶಾಲವಾಗುತ್ತಿದೆ! ನಾವಿನ ಮೇಲೆ ಆ ಪುಸ್ತಕದ ಕೊನೆಯ ಪ್ರಕರಣವನ್ನು ಓದಿದ್ದೀಯಲ್ಲವೆ ? " ಪುಸ್ತಕಗಳನ್ನು ಕುರಿತು ಮಾತನಾಡುತ್ತ ನಾನು ಹೇಳಿದೆ: "ಬಾಪೂ, ನೀವು ಮಾರ್ಕ್ಸನ ಬಗ್ಗೆ ಓದಬೇಕು. ಮತ್ತು ನಮ್ಮ ತರುಣರಿಗಾಗಿ ಮಾರ್ಕ್ಸನಿಗೆ ಉತ್ತರರೂಪದಲ್ಲಿ ಸ್ವಲ್ಪಾದರೂ Permanent Contribution ( ಚಿರಸ್ಥಾಯಿ ಸಾಹಿತ್ಯ ) ಕೊಟ್ಟು ಹೋಗಬೇಕು. " ಇದಕ್ಕೆ ಬಾಪೂ ಹೇಳಿದರು: "ಸರಿ. ನನಗೂ ಹೀಗೆಯೆ ಮೇಲಿಂದ ಮೇಲೆ ಅನಿಸುತ್ತಿದೆ. ರಶಿಯಾದ ವಿಷಯಕ್ಕೆ ಹೆಚ್ಚು ತಿಳಿದುಕೊಳ್ಳುವ ಇಚ್ಛೆಯಾಗುತ್ತಿರುತ್ತದೆ." ನಾನು Mind and face of Bolshevism ( ಮಾಯಿಂಡ ಆ್ಯಂಡ್ ಫೇಸ ಅಫ್ ಬೋಲ್ಶೆವಿಝಮ್ ) ಮತ್ತು ಶೇರಉಡ್ ಏಡೀಕೀಯವರ ಪುಸ್ತಕದ ಬಗ್ಗೆ ಹೇಳಿದೆ. "ತರಿಸು, ಆದರೆ ಒಂದು ತಿಂಗಳ ವರೆಗೆ ಬೇಡ." ಎಂದು ಬಾಪೂ ಹೇಳಿದರು. ದಿನಾಲು ಈಗ ಅಭಿರುಚಿಯಿಂದ The Wet Parade ( ದಿ ವೆಟ್ ಪರೇಡ )ನ್ನು ಓದುತ್ತಿದ್ದಾರೆ. ಸಿಂಕ್ಲೇರನ ಬಗ್ಗೆ ಹೇಳಿದರು: "ಆ ಮನುಷ್ಯನು ಅದ್ಭುತ ಸೇವೆ ಮಾಡುತ್ತಿರುವಂತೆ ತೋರುತ್ತಿದೆ. ಸಮಾಜದ ಒಂದೊಂದು ಕೊಳೆ ತೆಗೆದುಕೊಂಡು ಕುಳಿತಿದ್ದಾನೆ. ಮತ್ತು ಅದನ್ನು ಜನಸಾಮಾನ್ಯರೆದುರು ಬಿಚ್ಚಿ ತೋರಿಸುತ್ತಿದ್ದಾನೆ." ನಾನು ಹೇಳಿದೆ:

" ಇಷ್ಟೇ ಅಲ್ಲ ಸ್ಪಷ್ಟವಾಗಿ ಎಡ್ಗರ ವ್ಯಾಲೇಸನಂತೆ Prolific (ಅನೇಕ ಪುಸ್ತಕಗಳ ಜನ್ಮದಾತಾ) ಎಂದೂ ಹೇಳಬಹುದು. ವ್ಯಾಲೇಸನಂಥವನು ಕೂಡ ಗುಪ್ತಚಾರರ ಕಥೆಗಳನ್ನೇ ಏಕಾಗಲೊಲ್ಲದು ಅವುಗಳ ರಾಶಿಯನ್ನು ಹೇಗೆ ಬರೆದಿರಬಹುದು ಎಂಬ ವಿಚಾರಬರುತ್ತಿದೆ. ಇವನಂತೂ ತನ್ನ ಕಾದಂಬರಿಗಳನ್ನು ಬಾಯಿಂದ ಹೇಳಿ ಬರೆಯಿಸುತ್ತಿದ್ದನು." ಈ ವಿಷಯವನ್ನು ಕುರಿತು ಬಾಪೂ ಮಾತಾಡಿದರು: "ಮಹದೇವ, ಬರೆಯಬಹುದು; ಬರೆಯಬಹುದು. ಟಾಲ್‌ಸ್ಟಾಯ ಅನ್ನುತ್ತಿದ್ದಿಲ್ಲವೆ? ಸಿಗರೇಟು ಬಾಯಲ್ಲಿರಬೇಕು, ಹೊಗೆಯ ಸುರಳಿಗಳು ಏಳುತ್ತಿರಬೇಕು, ಚನ್ನಾಗಿ ಜುರಕೆ ಹೊಡೆದು ಕುಳಿತಿರಬೇಕು ಅಂದರೆ ಈ ಪ್ರಕಾರದ ತರಂಗಗಳು ಏಳುತ್ತಿರುತ್ತವೆ ಎಂದು. ಮತ್ತು ಹರಟೆ ಹೊಡೆಯುವದಕ್ಕಾಗಿ ಯಾರಿಗಾದರೂ ಹೋಗಿ ಕೇಳುವ ಆವಶ್ಯಕತೆಯಿರುತ್ತದೆಯೆ ?"

ಇಂದು 'ಕ' ಮತ್ತು 'ಖ'ರ ಬಗ್ಗೆ ಬಹಳ ಮಾತುಗಳು ನಡೆದವು. 'ಕ'ರ ವಿಷಯವಾಗಿ ಅಂಗೀಕಾರ ಮಾಡಲು ಕೊನೆಯವರೆಗೂ ಒಪ್ಪಲಿಲ್ಲ. ಆ ಮೇಲೆ ಅವರಿಗೆ ಪತ್ರ ಬರೆಯಲಾಯಿತು. ಆದರ ಉತ್ತರ ಬಂದ ಮೇಲೆ ಅವರು ಸ್ವಲ್ಪ ಸೌಮ್ಯವಾದದ್ದು ಕಂಡು ಬಂತು. ಅವರು ಅಭಿಪ್ರಾಯ ಕೇಳಿದ್ದರು. "ಅಭಿಪ್ರಾಯವನ್ನು ಕೊಡಲು ಸಾಧ್ಯವಿಲ್ಲ. ಆದರೆ ನಿಮ್ಮ ಮೇಲೆ ನನ್ನ ವಿಶ್ವಾಸವಿದೆ, ಮತ್ತು ದೇವರು ನಿಮ್ಮ ಕಲ್ಯಾಣವನ್ನೇ ಮಾಡುವನು" ಎಂದು ಅವರಿಗೆ ಉತ್ತರ ಬರೆದು ಮತ್ತೆ ಬಾಪೂ ಹೇಳಿದರು: "ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುವರೆಂದು ನನಗೆ ಈಗ ವಿಶ್ವಾಸ ಹುಟ್ಟಿದೆ. 'ಖ'ರ ಬಗ್ಗೆಯೂ ಇದೇ ಆಶೆಯನ್ನಿಡಬಹುದು. ಅವರ ತಪ್ಪು ಅವರಿಗೆ ಗೊತ್ತಾಗಿಲ್ಲವೆಂದು ನನಗೆ ಅನಿಸುವದಿಲ್ಲ. ಅವರು ಹುರುಪಿನ ಮನುಷ್ಯರಿದ್ದಾರೆ. ಆದುದರಿಂದ ಅವರು ಅಂಜುತ್ತಾರೆಂದು ತಿಳಿಯಲಾಗದು. ಆದರೂ ಯಾರಿಗೆ ಗೊತ್ತು? ಇವತ್ತು ಅವರಿಗೆ ಯಾವದಾದರೊಂದು ಅನಿವಾರ್ಯ ಕೆಲಸವಿರಬಹುದು, ಮತ್ತು ಅದನ್ನು ಪೂರ್ತಿಮಾಡಿದ ಮೇಲೆ ಆಂದೋಲನದಲ್ಲಿ ಭಾಗವಹಿಸುವ ವಿಚಾರ ಮಾಡಿರಬಹುದು ಎಂದು ಅವರ ಕೃತ್ಯದ ಬಗ್ಗೆ ಉದಾರ ಅರ್ಥ ಮಾಡುವ ಆವಶ್ಯಕತೆಯಿರುತ್ತದೆ. ಇಂಥ ಪ್ರಸಂಗಗಳಲ್ಲಿ ಅವರ ಸಂಬಂಧಿಕರನ್ನು ಕೇಳಿದ ಹೊರತು ತಿಳಿಯುವದಿಲ್ಲ. ಆ ಹುಡುಗಿಯರನ್ನು ನೋಡು... ಬಾರ್ಡೋಲಿಗೆ ಬರುವದಿಲ್ಲವೆಂದು ಹೇಳಿದ ಮೇಲೆಯೂ ಬಂದಿರಲಿಲ್ಲವೆ?" ನನಗೆ ಗೊತ್ತಿದ್ದಿಲ್ಲವಾದುದರಿಂದ ಬಾಪೂ ಪರಿಸ್ಥಿತಿಯನ್ನು ತಿಳಿಸಿದರು. ಮತ್ತು ಹೇಳಹತ್ತಿದರು: "ಪಾಪ! ಅವರಂತೂ ತಿಳಿಗೇಡಿ ಹುಡುಗೆಯರು. ಅವರು ಸೀತಾರಾಮರಿಗೆ ಅಂಜಿ ಹೀಗೆ ಬರೆದುಕೊಡುವದು ಸಾಧ್ಯವಿದೆ. ಇಷ್ಟು ದೊಡ್ಡ ಮನುಷ್ಯನ ಸಂಗಡ ಇವರ ತುಲನೆ ಮಾಡಲಿಕ್ಕಾಗದು. ಆದರೆ ದೇವರಿಗೆ ಗೊತ್ತು. ಈ ಯುದ್ಧವು ಎಲ್ಲರ ಪರೀಕ್ಷೆಯನ್ನೂ ಮಾಡತೊಡಗಿದೆ."

ಮಲಗಲಿಕ್ಕೆ ಹೋಗುವ ಹೊತ್ತಿನಲ್ಲಿ ವಲ್ಲಭಭಾಯಿಯವರು ನಗನಗುತ್ತ ಹೇಳಿದರು : "ಮಹದೇವ, ನಮ್ಮ ಮೂರು ಧ್ರುವತಾರೆಗಳು ಎಂದೂ ಬೀಳುವದಿಲ್ಲ." ಬಾಪೂ ಅಂದರು : "ಮೊದಲಿನವರ ಬಗ್ಗೆ ನನಗೆ ಸಂಶಯವಿದೆ. ಉಳಿದಿಬ್ಬರ ಬಗ್ಗೆ ಹೇಳುವದಾದರೆ ಅವರು ಇವರಲ್ಲಿ ಬಿದ್ದ ಹೊರತು ಕೆಲಸವೇ ನಡೆಯಲಾರದು."

* * *

ನಿನ್ನೆ ಎಣಿಸಿದ ಮೂರು ತಾರೆಗಳಲ್ಲಿ ಇವತ್ತು ಒಂದು ಬೀಳುವ ಮಾತು ಹೊರಟ ಕೂಡಲೆ ಬಾಪೂ ವಲ್ಲಭಭಾಯಿಯವರಿಗೆ ಅಂದರು : "ಇನ್ನು ನೀವು ಸುಖವಾಗಿ ಊಟ ಮಾಡಿರಿ. ದಿನಾಲು ಅನ್ನುತ್ತಿದ್ದಿರಿ : 'ಜೇಲಿಗೆ

೧೩—೩—೩೨ ಹೋಗುವದಿಲ್ಲ' ಎಂದು. ಪಾಪ! ಬಡಪ್ರಾಣಿ ಹೊರಟು ಹೋದರು. ಈಗಾದರೂ ನಿಮಗೆ ಆನಂದವಾಯಿತಲ್ಲವೆ?"

ಟಾಯಿಮ್ಸ್ ನ ಇಲ್ಲಸ್ಟ್ರೇಟೆಡ್ ವೀಕ್ಲಿಯಿಂದ ತಾರಾಮಂಡಲದ ನಕಾಶವನ್ನು ಕತ್ತರಿಸಿ ಆಕಾಶದರ್ಶನ ಮಾಡುವದಕ್ಕೋಸುಗ ಅದನ್ನು ಒಂದು ರಟ್ಟಿನ ಮೇಲೆ ಅಂಟಿಸಲಿಕ್ಕೆ ವಲ್ಲಭಭಾಯಿಯವರಿಗೆ ಕೊಟ್ಟರು. ಪ್ರತಿದಿವಸ ಆಶ್ರಮದ ಟಪಾಲನ್ನು ಕಳಿಸುವದಕ್ಕಾಗಿ ಒಂದುಗೂಡಿಟ್ಟ ಬ್ರಾವುನ್ ಪೇಪರದೊಳಗಿಂದ ಒಂದು ಗಟ್ಟಿಯಾದ ಪಾಕೇಟನ್ನು ತಯಾರಿಸುವ ಕೆಲಸವನ್ನು ವಲ್ಲಭಭಾಯಿಯವರಿಗೆ ಒಪ್ಪಿಸಲಾಯಿತು. ಅದಕ್ಕೆ ಸರಿಯಾಗಿ ಅವರು ಸುಂದರವಾದ ಪಾಕೀಟನ್ನು ತಯಾರಿಸಿದರು.

ಬಾಪೂ ಹೇಳಿದರು : "'ಹಿಂದೂ' ವರ್ತಮಾನ ಪತ್ರವು 'ಲಂಡನ ಟಾಯಿಮ್ಸ್'ದ ನಕಲು ಆಗಿರುತ್ತದೆ ಮತ್ತು 'ಹಿಂದೂ'ದ ಸಾಪ್ತಾಹಿಕದ ಸಂಸ್ಕರಣವು ಇಲ್ಲಿಯ 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ನಕಲು ಆಗಿರುತ್ತದೆ." ನಾನು ಅಂದೆ: "ಇಲ್ಲಸ್ಟ್ರೇಟೆಡ್ ವೀಕ್ಲಿಯು ಮೇಲೆ ಮೇಲೆ ವಿಚಾರ ಮಾಡುವ ಜನರ ಸಲುವಾಗಿ ಇರುತ್ತದೆ. ಆದರೆ ಇದು ತೀರ ಅದರಂತೆ ಇರುವದಿಲ್ಲ." ಬಾಪೂ : "ನೀನು ತೀರ ಶಬ್ದವನ್ನು ಉಪಯೋಗಿಸಿ ಸಟ್ಟಿಗೆ ಮಾಡಿದಿ. ಯಾಕಂದರೆ ಇದರಲ್ಲಿಯೂ ಲೆಕ್ಕವಿಲ್ಲದಷ್ಟು ಕೆಲಸಕ್ಕೆ ಬಾರದ ವಿಷಯಗಳು ಬರುತ್ತವೆ."

ಮಧ್ಯಾಹ್ನದಲ್ಲಿ ಆಶ್ರಮಕ್ಕೆ ಟಪಾಲನ್ನು ಬರೆದರು. ಮಧ್ಯದಲ್ಲಿ ವಲ್ಲಭಭಾಯಿ ಹೇಳಿದರು: "ನೀವು ನಮಗೆ 'ಸತ್ಯಸಂಹಿತೆ' ಯನ್ನು ಹೇಳಬೇಕು. ಗುಜರಾತಿಯಲ್ಲಿ ಮುನಶಿಯವರು ಮುದ್ರಿಸಿದ್ದಾರೆ ಮತ್ತು ಅದನ್ನು ನಮಗೆ ಕಳಿಸಿದ್ದಾರೆ." ಅದನ್ನು ತೆಗೆದು ನಾನು ಓದಿದೆ. ಬಾಪೂ ಅಂದರು: "ಎಷ್ಟೊ ಅಸತ್ಯ ಕಥನಗಳನ್ನು ಮಾಡಲಾಗುತ್ತದೆ. ಇದೂ ಸಹ ಅಂತಹದೇ ಇದೆ. ಇದು ಮೂರು ನೂರು ವರುಷ ಹಳೆಯದಾಗಿರಲಾರದು. ಇತ್ತೀಚೆಗೆ ಬರೆದದ್ದಿರಬೇಕು." ಮತ್ತೆ ವಲ್ಲಭಭಾಯಿ ಹೇಳಿದರು : "ಇದು ತಾಡಪತ್ರಿ ಎಲೆಗಳ ಮೇಲೆ ಬರೆದಿದೆ. ೧೩೫ ಪುಸ್ತಕಗಳುಂಟು. ಇವೆಲ್ಲವನ್ನು ಬರೆಯಲಿಕ್ಕೆ ಕುಳಿತರೂ ಮನುಷ್ಯನು ಎಷ್ಟು ದಿವಸ

ಗಳಲ್ಲಿ ಬರೆಯಬಲ್ಲನು ?" ಬಾಪ್ರೂ ಅಂದರು: "ನನ್ನ ಹುಟ್ಟಿನ, ತಾಯಿತಂದೆ ಮೊದಲಾದವರ ಪೂರ್ವೇತಿಹಾಸದ ಮಾತುಗಳು ಆಶ್ಚರ್ಯಚಕಿತರನ್ನಾಗಿ ಮಾಡುತ್ತವೆ." ನಾನು ಅಲ್ಲಿಂದ ಇಲ್ಲಿಂದ ಶ್ಲೋಕಗಳನ್ನು ಅನ್ನತೊಡಗಿದೆ. ಬಾ ಅವರ ವಿಷಯಕ್ಕೆ ಶ್ಲೋಕ ಬಂದಾಗ ಬಾಪ್ರೂ ಹೇಳಿದರು: "ಇದು ಅಕ್ಷರಶಃ ನಿಜವಿರುತ್ತದೆ."

भार्यका भविता साध्वी रूपशीलगुणान्विता ।
पतिव्रता महाभागा छायेवानुगता सदा ।
जातकष्टे कष्टभाक् च जातसौख्ये सुखान्विता ।
ब्राह्मे विवाह सिद्धिश्च त्रयोदशक वत्सरे ।

ಇವರ ಸ್ವಂತದ ವಿಷಯದಲ್ಲಿ ಇದಕ್ಕೂ ಹೆಚ್ಚು ಸರಿಯೋಗುವಂಥಾದ್ದು ಇದು ಹೇಗಿದೆ!

मातृतुल्य परस्त्रीकः एकपत्नीव्रतं चरेत् ।

ವಲ್ಲಭಭಾಯಿಯವರಿಗೆ ಇದರಲ್ಲಿ ನಿಜವಾಗಿಯೂ ವಿಶ್ವಾಸವಿದ್ದ ಹಾಗೆ ಅನಿಸಿತು. ಬಾಪ್ರೂ ಅಂದರು: "ಈ ಮಾತು ನಿಜವಾಗಿಯೂ ಸತ್ಯವಿದ್ದರೆ ಆಶ್ಚರ್ಯಕಾರಕವಾಗಿದೆ."

एकषष्टौ तदा वर्षे विरोधश्च महान् भवेत् ।
द्विषष्टौ वत्सरे काले किंचित् शमनमादिशेत् ।
किंचित् स्वातंत्र्यमादेश्यमस्वास्थ्यं च भवेन्नरः ।
विदेशगमने चैव पंचषष्टिक पूर्वके ।
श्वेतःप्रभु सार्वभौमस्तस्य दर्शनमादिशेत् ।
तन्मूलात्कार्यसिद्धिर्जातकस्य भविष्यति ।
पश्चात्स्वदेशवासी च आश्रमे वासवान् भवेत् ।
ज्ञानमार्गप्रवृत्तिश्च जातकस्य भविष्यति ।
सप्तति वत्सरे पूर्वे योगसिद्धिश्च जायते ।

ವಲ್ಲಭಭಾಯಿಯವರಿಗೆ ಈ ಶ್ಲೋಕಗಳು ಭವಿಷ್ಯತ್ಕಾಲದ ಮೇಲೆ ಒಳ್ಳೆ ಪ್ರಭಾವವನ್ನು ಬೀರುವಂತಹವೆಂದು ಅನಿಸಿತು. ನಾನು ಅಂದೆ: "ಇದರಲ್ಲಿದ್ದ ಸಮ್ರಾಟನೊಂದಿಗೆ ಭೆಟ್ಟಿಯಾದಾಗಿನ ಮಾತುಗಳು ಕಳೆದ ವರುಷ ಆದ ಭೆಟ್ಟಿಯ ಮಾತುಗಳಾಗಿರದೆ ಭವಿಷ್ಯತ್ಕಾಲದ ಭೆಟ್ಟಿಯ ಮಾತುಗಳಾಗಿರತಕ್ಕದ್ದು."

ಏನೇ ಇರಲಿ, ಇದರಲ್ಲಿ ಸಾಕಷ್ಟು ಮನೋರಂಜನವಿದೆ.

* * *

ಬಾಪ್ರೂ 'ವೆಟ್ ಪರೇಡ' ಓದುತ್ತಿದ್ದರು. ಮೂರು ಗಂಟೆಗೆ ಮೌನ

ತಾಳಿದರು. ಓದುತ್ತ ಓದುತ್ತ ಕೆಳಗಿನ ವಾಕ್ಯವು ಬಂತು. ಅದನ್ನು ನನಗೆ ಓದಲು ಹೇಳಿದರು. 'Everybody had to choose between self indulgence and self-control' (ಪ್ರತಿಯೊಬ್ಬನೂ ಸ್ವಚ್ಛಂದತೆ, ಸಂಯಮ ಇವುಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಿತ್ತು) ನಾನು ಬಾಪೂ ಅವರ 'ನೀತಿನಾಶದ ಮಾರ್ಗ' ದಲ್ಲಿ (self-restraint v. self indulgence) ಎಂಬ ಪುಸ್ತಕದ ನೆನಪು ಕೊಟ್ಟೆನು. ಇದು ಇಡೀ ಪುಸ್ತಕದ ಸಾರವಿದೆಯೆಂದು ಬಾಪೂ ಹೇಳುವಂತೆ ಎನಿಸಿತು.

* * *

ಊಟವಾದ ಮೇಲೆ ವಲ್ಲಭಭಾಯಿಯವರು ನಿತ್ಯದಂತೆ ಹಲ್ಲುಕಡ್ಡಿ ಸಿದ್ಧಗೊಳಿಸಲು ಕುಳಿತರು. ಬಳಿಕ ಮಾತಾಡಿದರು: "ಹೆಸರಿಗೆ ಮಾತ್ರ ಹಲ್ಲುಗಳು ಉಳಿದಿದ್ದರೂ ಬಾಪೂ ಅವನ್ನು ಮರೆಯದೇ ಮಸೆಯುತ್ತಾರೆ. (ಪ್ರೋಕ್ಷಿದ್ದರೆ ಸರಿ, ಆದರೆ ಅವರು †ಒನಿಕೆ ಊದುವ ಪ್ರಯತ್ನ ಮಾಡುತ್ತಾರೆ.) ಕೊರಡು ಕೊನರಿಸುವ ಪ್ರಯತ್ನ ಮಾಡುತ್ತಾರೆ. ನಾನು ವಿನೋದವನ್ನು ಬದಲಿಸಿಮಾತಾಡಿದೆ: "೧೯೩೦ ನೇ ಇಸ್ವಿಯಲ್ಲಿ ಕೊರಡು ಕೂಡ ಕೊನರಿತು ಅರ್ಥಾತ್ ಅಸಂಭವವೆಂದು ತೋರುವ ಆಂದೋಲನಕ್ಕೆ ಕೂಡ ಸಾಕಷ್ಟು ಯಶ ದೊರೆತಿತ್ತು." ಬಾಪೂ ಹೌದೆನ್ನುವ ಭಾವದಿಂದ ಮುಗುಳುನಗೆ ನಕ್ಕರು. ವಲ್ಲಭಭಾಯಿ ಹೇಳಿದರು: "ಈ ಸಲವೂ ಹಾಗೆಯೆ ಇದೆ. ಆದರೆ ಮಾಡುವದೇನು? Caravan Passes' (ಕಾರಾವಾನ್—ಪ್ರವಾಸಿಕರ ತಂಡವು ದಾಟಿ ಹೋಗುತ್ತಲಿದೆ.)"

* * *

ವಲ್ಲಭಭಾಯಿಯವರ ವಿನೋದವು ದಿನದುದ್ದಕ್ಕೂ ನಡೆದಿರುತ್ತದೆ. ಬಾಪೂ ಎಲ್ಲ ವಸ್ತುಗಳಲ್ಲಿ 'ಸೋಡಾ' ಹಾಕಲಿಕ್ಕೆ ಹೇಳುತ್ತಾರೆ. ಆದುದರಿಂದ ವಲ್ಲಭಭಾಯಿಯವರಿಗೆ ಅದೊಂದು ವಿನೋದದ ವಿಷಯವಾಯಿತು. ಏನೇ ತೊಂದರೆ ಬಂದರೂ ಹೇಳಿ ಬಿಡುತ್ತಿದ್ದರು: "ಸೋಡಾ ಹಾಕಿರಿ" ಎಂದು. ಅವರ ವಿನೋದವನ್ನು ತೋರಿಸಲಿಕ್ಕೆಂದು . . . ವೈದ್ಯರ ಜಮಾಲಗೋಟಾದ ಮಾತನ್ನು ಹೇಳಿ ಬಹಳ ನಗೆಸಿದರು.

ಇವತ್ತು ಬಾಪೂ ಇಮರ್ಸನ್‌ರ ಪತ್ರಕ್ಕೆ ಉತ್ತರ ಬರೆದರು. ಇದರಲ್ಲಿ ಸಂಗಡಿಗರ ವಿಷಯಕ್ಕೆ ಕರ್ತವ್ಯನಿಷ್ಠೆ (loyalty to colleagues) ಮತ್ತು ಸತ್ಯದ ವಿಷಯಕ್ಕೆ ಕರ್ತವ್ಯನಿಷ್ಠೆ (loyalty to truth) ಈ ಎರಡೂ ಮಾತುಗಳ ಬಗ್ಗೆ ಬಾಪೂ ಮಹತ್ವಪೂರ್ಣ ಉದ್ಗಾರ ಪ್ರಕಟಮಾಡಿ ಅವರ ಕಣ್ಣು ತೆರೆಯುವ ಪ್ರಯತ್ನ ಮಾಡಿದರು.

---

†ಗುಜರಾತಿಯಲ್ಲಿ મુસુળ બજાના ಅಂದರೆ ಒನಕೆ ಊದು ಎಂಬದೊಂದು ನಾಣ್ಣುಡಿ ಇದೆ. ಅದರರ್ಥವು ಅಸಂಭವ ಕೆಲಸ ಮಾಡುವ ವ್ಯರ್ಥ ಪ್ರಯತ್ನ ಮಾಡುವದು.

ಬಾಪೂ ಭೆಟ್ಟಿಯ ವಿಷಯಕ್ಕೆ ಸರಕಾರಕ್ಕೆ ಪತ್ರ ಬರೆದಿದ್ದರು. ಅದರ ಉತ್ತರ ಇಂದು ಬಂದಿತು. ಬಾಪೂ ಪೊಲಿಟಿಕಲ್ ಶಬ್ದದ ವ್ಯಾಖ್ಯೆಯನ್ನು ಕೇಳಿದ್ದರು. ಮತ್ತು ತಾವು ಸ್ವತಃ ಯಾವ ಅರ್ಥ ಮಾಡುತ್ತೇವೆಂಬದನ್ನು ಸವಿಸ್ತರ

೧೪-೩-೩೨ ಬರೆದಿದ್ದರು. 'ಪೊಲಿಟಿಕ್ಸದಲ್ಲಿ' ಸ್ವಲ್ಪೂ ಭಾಗ ತೆಗೆದುಕೊಳ್ಳದವರು ಭೆಟ್ಟಿಯಾಗಬಹುದೆಂದಿಷ್ಟೇ ಸರಕಾರದವರು ಬರೆದಿದ್ದರು. ಬಾಪೂ ಅಂದರು: "ಜೇಲಿನೊಳಗೆ ಹೋಗುವವರ ಬಗ್ಗೆ ಅಥವಾ ಸವಿನಯ ಭಂಗ ಹೋರಾಟದಲ್ಲಿ ಭಾಗತೆಗೆದುಕೊಳ್ಳುವವರ ಬಗ್ಗೆ ಬರೆಯಲೇ ಇಲ್ಲ. ಆದುದರಿಂದ ಕೊನೆಗೆ 'ಪೊಲಿಟಿಕ್ಸ' ಇದರ ಅರ್ಥ ಮಾಡುವದನ್ನು ನನ್ನ ಮೇಲೆಯೆ ಬಿಟ್ಟಂತೆ ಕಾಣುತ್ತದೆ". ವಿಚಾರ ಮಾಡಿದಮೇಲೆ ನನಗು ಕೂಡ ಹಾಗೆಯೆ ಎನಿಸಿತು.

* * *

ಇವತ್ತು ಬಾಪೂ ಆಶ್ರಮಕ್ಕೆ ಪತ್ರ ಬರೆಯುವ ದಿನವಿತ್ತು. ವಲ್ಲಭಭಾಯಿಯವರ ಭಾಷೆಯಲ್ಲಿ ಹೇಳುವದಾದರೆ: 'ಹೋಮ ವರ್ಕ ಮೇಲ ಡೆ' ಇತ್ತು. ಆದುದರಿಂದ ಸುಮಾರು ೪೨ ಪತ್ರಗಳನ್ನು ಆಶ್ರಮಕ್ಕೂ ೬-೭ ಬೇರೆ ಕಡೆಗೂ ಬರೆದರು. ನಾರಾಯಣದಾಸರ ಪತ್ರದಲ್ಲಿ ಅವಯವಗಳ ಸದುಪಯೋಗ ಕುರಿತು ಮತ್ತು ಮುಪ್ಪು ಸಾವುಗಳನ್ನು ಕುರಿತು ಸಹಜವಾದ ಆದರೂ ಬಹಳ ಮಹತ್ವದ ಮಾತನ್ನು ಬರೆದಿದ್ದಾರೆ. ಅವು ನೋಡುವಂತಹವಾಗಿವೆ. ಪರಶುರಾಮನಿಗೆ ಪ್ರಾರಬ್ಧ ಪುರುಷಾರ್ಥದ ವಿಷಯಕ್ಕೆ ಬರೆದ ಪತ್ರ ಉಲ್ಲೇಖನೀಯವಿದೆ. ತಿಲಕನ್ನರಿಗೆ 'विषया विनिवर्तन्ते' ಎಂಬುದರ ವಿಷಯವಾಗಿ ಬರೆದದ್ದನ್ನೆಲ್ಲ ಇಲ್ಲಿ ಕೊಡುತ್ತೇನೆ :

"In working out plans of self restraint, attention must not for a moment be withdrawn from the fact that we are all sparks of the divine and therefore partake of its nature and since there can be no such thing as self-indulgence with divine, it must of necessity be foreign to human nature. If we get a heart-grasp of that elementary fact we should have no difficulty in attaining self-control and that is exactly what is implied in the Gita verses we sing every evening. You will recall that one of the verses says that the craving for self-indulgence abates only when one sees God face to face."

ಜೀವನವನ್ನು ಸಂಯಮಿಯನ್ನಾಗಿ ಮಾಡುವ ಯೋಜನೆಯನ್ನು ಸಿದ್ಧಪಡಿಸುವಾಗ, ನಾವೆಲ್ಲರೂ ಪರಮಾತ್ಮನ ಅಂಶರಿದ್ದೇವೆ. ಆದುದರಿಂದ ಅವನ ಸ್ವಭಾವವು ನಮ್ಮಲ್ಲಿ ಇದ್ದೇ ಇದೆ ಎಂಬ ಮಾತನ್ನು ಒಂದರಕ್ಷಣವಾದರೂ ಮರೆಯತಕ್ಕದ್ದಲ್ಲ. ಮತ್ತು ಪರಮಾತ್ಮನಲ್ಲಿ ಸ್ವಚ್ಛಂದತೆ ಎಂಬ ವಸ್ತುವೇ ಇರಲಾರದು. ಆದುದರಿಂದ

ಸ್ವಚ್ಛಂದತೆಯು ಮನುಷ್ಯನ ಸ್ವಭಾವಕ್ಕೆ ವಿರೋಧಿಯಾಗಿದೆ ಎಂಬ ಮಾತು ಸಿದ್ಧವಾಗುತ್ತದೆ. ಈ ಬೀಜಮಾತು ನಮ್ಮ ಹೃದಯದಲ್ಲಿ ನಾಟಿತೆಂದರೆ ಸಂಯಮವನ್ನು ಸಾಧಿಸುವದರಲ್ಲಿ ಯಾವ ತೊಂದರೆಯೂ ಬರಲಾರದು. ನಾವು ದಿನಾಲು ಗೀತಾ ಪಠಿಸುತ್ತೇವೆ. ಅದರಲ್ಲಿ ಇದೇ ಧ್ವನಿ ಇರುವದು. ಪರಮಾತ್ಮನ ದರ್ಶನವಾದಾಗಲೇ ವಿಷಯವಾಸನೆಯು ನಷ್ಟವಾಗುತ್ತದೆಂಬ ಶ್ಲೋಕವು ನಿಮ್ಮ ನೆನಪಿನಲ್ಲಿರಬಹುದು."

ಬಾಲಕರಿಗೆ ಬರೆದ ಪತ್ರದಲ್ಲಿ ಒಂದು ಮಹತ್ವದ ಮಾತನ್ನು ಬರೆದರು: "ಈಗಿನ ಸಮಯವು ಬಹಳ ಕಾಲದ ವರೆಗೆ ನಡೆದರೆ ನಮಗೆ ಆಯಾಸವೆನಿಸಬಾರದು. ಆದರೆ ಇದು ದುಃಖದ ಕಾರಣವೆಂದು ತಿಳಿದರೆ ಆಯಾಸವೆನಿಸದೆ ಇರಲಾರದು.

. . . ರಂತೆ ಇಲ್ಲಿಯೂ ಬಾಪೂ ಅವರಿಗೆ ತಮ್ಮ ಹುಡಿಗೆಯ ಶಿಕ್ಷಣದ ಬಗ್ಗೆ ಪತ್ರ ಬರೆದು ಅಭಿಪ್ರಾಯ ಕೇಳುತ್ತಾರೆ. ಅವರಿಗೆ ಬರೆದ ಒಂದು ಪತ್ರದಲ್ಲಿ ಅಂತ-ರ್ಜಾತೀಯ ವಿವಾಹದ ಸಂಬಂಧದಲ್ಲಿ ಬಾಪೂ ಅವರ ವಿಚಾರಗಳು ಇನ್ನೂ ಮುಂದೆ ಹೋಗಿವೆಯೆಂದು ಕಂಡುಬರುತ್ತದೆ. ಅವರಿಗೆ ಈ ರೀತಿ ಬರೆದರು: "ಲಗ್ನವು ಜಾತಿಗಳ ಹೊರಗೆ ಆಗಬೇಕೆಂಬುದರಲ್ಲಿ ನನ್ನ ವಿಶ್ವಾಸವಿದೆ. ಮರ್ಯಾದೆಯನ್ನು ವೈಶ್ಯರ ವರೆಗೆ ಬೆಳೆಸಿದರೂ ಅಡ್ಡಿಯಿಲ್ಲ. ಆದರೆ ವೈಶ್ಯಜಾತಿಯ ಹೊರಗೆ ಯೋಗ್ಯ ಪತಿ ದೊರೆತರೆ, ಹುಡಿಗೆಯು ಅವನನ್ನು ಒಪ್ಪಿದರೆ ಅದಕ್ಕೆ ಅಡ್ಡಿ ಮಾಡಕೂಡದು."

ಒಂದು ನವವಿವಾಹಿತ ಜೋಡಿಯು ವಿಲಕ್ಷಣ ಲಗ್ನಪತ್ರವನ್ನು ಕಳಿಸಿತು. ಅದರಲ್ಲಿ ತಮ್ಮ ಲಗ್ನದ ವಿಷಯವಾಗಿ ಬರೆದು ಬಾಪೂ ಅವರ ಆಶೀರ್ವಾದ ಕೇಳ ಲಾಗಿತ್ತು. ಅದಕ್ಕೆ ಬಾಪೂ ಒಂದು ಚೀಟಿಯನ್ನು ಬರೆದರು. "ಚಿ.... ನೀವಿಬ್ಬರೂ ಹೊಸ ಮಾರ್ಗವನ್ನು ಹಿಡಿದಿದ್ದೀರಿ. ನಿಮ್ಮಿಬ್ಬರಿಗೂ ನನ್ನ ಆಶೀರ್ವಾದಗಳು. ಅದರಲ್ಲಿ ಸರದಾರರು ಕೇಳದೆಯೇ ಭಾಗವಹಿಸಿದ್ದಾರೆ. ನೀವಿಬ್ಬರೂ ಶುದ್ಧ ಸೇವೆ ಮಾಡಬೇಕೆಂದು ಇಚ್ಛಿಸುತ್ತೇನೆ. ಆಶೀರ್ವಾದವನ್ನು ಅಚ್ಚುಹಾಕಿದ ಕಾರ್ಡಿನಿಂದ ಕೇಳಿದ್ದೀರಿ. ಇದರಿಂದ ಅದು ಕೇವಲ ಶೋಭಾರೂಪವಾಗುತ್ತದೆ. ಮತ್ತು ಅಷ್ಟರ ಮಟ್ಟಿಗೆ ಅದರ ಮಹತ್ವ ಕಡಿಮೆಯಾಗುತ್ತದೆ. ಆದರೆ ಆಶೀರ್ವಾದವು ಕೇಳುವ ಯೋಗ್ಯತೆಯಿದ್ದರೆ ಅದನ್ನು ಹಸ್ತಾಕ್ಷರದಲ್ಲಿ ಬರೆದು ಕೇಳಬೇಕು. ಮತ್ತು ಅದರಲ್ಲಿ ದಂಪತಿಗಳದೇನಾದರೂ ಶುಭಸಂಕಲ್ಪವಿರಬೇಕು."

. . . ಭಗಿನಿಯು ಸೌಂದರ್ಯದ ಪ್ರಶಂಸೆ ಮಾಡುವ ವಿಷಯವನ್ನೆತ್ತಿ ಪ್ರಶ್ನೆ ಕೇಳಿದ್ದಳು. ಅವಳು ಕಾಲೇಜದಲ್ಲಿ ಯಾವದೋ ಒಬ್ಬ ತರುಣನನ್ನು ನೋಡಿ ಅವನ ರೂಪದ ಬಗ್ಗೆ ಪ್ರಶಂಸೆ ಮಾಡಿದ್ದಳು. ಮತ್ತು ತಾನು ಜವಾಹರಲಾಲರ ರೂಪಕ್ಕೆ ಮೋಹಿತಳಾಗಿದ್ದೇನೆಂದು ಹೇಳಿದ್ದಳು. ಬಾಪೂ ಮೂರು ವಾಕ್ಯಗಳಲ್ಲಿ ಸೌಂದರ್ಯಸೂತ್ರ ಹೇಳಿಬಿಟ್ಟರು: 'ಸೌಂದರ್ಯದ ಪ್ರಶಂಸೆ ಆಗಲೇಬೇಕು. ಆದರೆ ಅದು ಮೂಕ ಇದ್ದರೆ ಒಳ್ಳೆಯದು ಮತ್ತು 'तेन त्यक्तेन भुञ्जीथा:'. ಆಕಾಶದ

ಸೌಂದರ್ಯವು ಯಾರನ್ನು ಆನಂದಗೊಳಿಸಲಾರದೋ ಅವರನ್ನು ಯಾವ ಸೌಂದ-ರ್ಯವೂ ಆನಂದಗೊಳಿಸದೆಂದು ಹೇಳಬಹುದು. ಆದರೆ ಯಾರಾದರೂ ಹರ್ಷದಿಂದ ಹುಚ್ಚರಾಗಿ ನಕ್ಷತ್ರಮಂಡಲವನ್ನು ಮುಟ್ಟುವಂಥ ನಿಚ್ಚಣಿಕೆಯನ್ನು ತಯಾರಿಸುವ ಪ್ರಯತ್ನ ಮಾಡಿದರೆ ಅವರು ಭ್ರಮಿಷ್ಟರೇ ಸರಿ."

* * *

ಯಾರೋ ಒಬ್ಬರು ನೀಲಗಿರಿಯಿಂದ ನೀಲಗಿರಿ ಎಣ್ಣೆಯ ಒಂದು ಬಾಟಲಿಯನ್ನು ಕಳಿಸಿದ್ದರು. ಅದನ್ನು ತೆರೆದು ಸರದಾರರಿಗೆ ಹೇಳಿದರು: "ನನ್ನ ಬೆರಳು ನಿನ್ನ ಮೂಗು ಇವೆರಡದರಲ್ಲಿಯೂ ನೋವಿದೆ. ಆದುದರಿಂದ ಯಾರೋ ಇದನ್ನು ಅರಿತೇ ಕಳಿಸಿದಂತೆ ಕಾಣುತ್ತದೆ." ಬೆಕ್ಕು ಕೆಡವದ ಹಾಗೆ ಬೇರೆ ಬಾಟಲಿಗಳ ಸ್ಥಳದಲ್ಲಿಡದೆ ಒಂದು ಸುರಕ್ಷಿತ ಸ್ಥಳದಲ್ಲಿಡಲು ಬಾಪೂ ಸರದಾರರಿಗೆ ಹೇಳಿದರು. ಟಿಪ್ಪಣಿಗಳನ್ನು ಬರೆಯಿಸುತ್ತ ಹೋಗುತ್ತಿದ್ದರು. ಮಧ್ಯದಲ್ಲಿಯೇ ನನಗೆ ಅಂದರು: "ನೀನು ಕಿಚನ್ನನ ಹೆಸರು ಕೇಳಿರುವೆಯಲ್ಲವೇ ? ಕಾರಣವಿಲ್ಲದೆ ನಾನು ಒಂದೂ ಕೆಲಸವನ್ನು ಮಾಡುವದಿಲ್ಲವೆಂದು ಅವನು ನನಗೆ ಅನ್ನುತ್ತಿದ್ದ." ನಾನು ಅಂದೆ: "ನಿಮ್ಮ ವಿಷಯದಲ್ಲಿ ನಾನು ಇದೇ ಮಾತನ್ನು ಎಷ್ಟೋ ಸಲ ಹೇಳಿದ್ದೇನೆ. 'ಯಾವನ ಒಂದು ಪ್ರವೃತ್ತಿಯು ಕೂಡ ವ್ಯರ್ಥವಾಗಿರುವದಿಲ್ಲವೋ ಅವನು ಕಾರಣವಿಲ್ಲದೆ ಯಾವ ಕೆಲಸವನ್ನೂ ಮಾಡುವದಿಲ್ಲ." ಮತ್ತೆ ಬಾಪೂ ಮಾತಾಡಿದರು: "ಮಾತು ಸರಿ ಇದೆ. ಯಾರಾದರೂ ನನ್ನ ಮೂಗನ್ನು ಇದೇ ರೀತಿಯಿಂದ ಇಂಥ ಸ್ಥಳದಲ್ಲಿಯೇ ಏಕೆ ಸ್ವಚ್ಛ ಮಾಡಿದಿರಿ ಎಂದು ಕೇಳಿದರೆ ನಾನು ಅದರ ಕಾರಣ ತೋರಿಸಬಲ್ಲೆ."

* * *

ಶ್ರೀಮತಿ ನಾಯುಡೂರ ಪತ್ರ ಬಂತು. ಭೆಟ್ಟಿಗೆ ಬಂದಿದ್ದರು. ಅವರಿಗೆ ಭೆಟ್ಟಿ ಕೊಡದ್ದರಿಂದ ಸುಪರಿಂಟೆಂಡೆಂಟರ ಕಡೆಗೆ ಪತ್ರ ಕೊಟ್ಟು ಹೋದರು. ದಕ್ಷಿಣ ಆಫ್ರಿಕೆಯ ಸಂಬಂಧದಲ್ಲಿ ಅವರು ಹೀಗೆ ಬರೆದಿದ್ದರು: A good deal has been achieved there. It was something like striking living water out of abdurate rock. ( ಅಲ್ಲಿಯ ಕೆಲಸ ಚೆನ್ನಾಗಿ ಆಗಿದೆ. ದುರ್ಭೇದ್ಯ ಬಂಡೆಗಳ ನಡುವೆ ನೀರನ್ನು ತೆಗೆದಂಥ ಕೆಲಸವಿತ್ತು.) ಫಜಲೀಯವರ ಕೆಲಸವನ್ನು ಬಹಳ ಹೊಗಳಿದ್ದರು. ಬಾಪೂ ಅವರಿಗೆ the most unseeable being ( ಅತಿ ದುರ್ಲಭ ದರ್ಶನ ಪ್ರಾಣಿ ) ಎಂದು ಕರೆದಿದ್ದರು.

. . . ಗೆ ನೋಟೀಸು ಬಂದ ಸುದ್ದಿ ಲೀಡರದಲ್ಲಿ ನೋಡಲಿಕ್ಕೆ ಸಿಕ್ಕಿತು. "ಭಾವಿಸಿರದ ತಾರೆ ಬಿದ್ದು ಹೋಯಿತು" ಎಂದು ನಾನು ಅಂದೆ. ಬಾಪೂ: "ಸರಕಾರವು ಅದನ್ನು ಕೆಡವಿತು" ಎಂದು ಹೇಳಿದರು.

ಇಂದು ಬೆಳಿಗ್ಗೆ ಮೂರೂಮುಕ್ಕಾಲು ಗಂಟೆಗೆ ಏಳುವ ಬದಲು ಬಾಪೂ ಮೂರು

ಗಂಟೆಗೇ ಎದ್ದರು. ಮೂರು ಹೊಡೆದ ಸಪ್ಪಳ ಕೇಳಿಸಿತೆಂದು ನಾನು ಅಂದೆ. ಗಡಿಯಾರವನ್ನು ನೋಡಿದ ಮೇಲೆ ಮೂರೇ ಹೊಡೆದಿದೆ ಎಂದು ಬಾಪೂ ಅವರಿಗೆ ತಿಳಿಯಿತು.' 'ಹೇಗೂ ಎದ್ದಿರುವೆವು ಪ್ರಾರ್ಥನೆಮಾಡಿ ಬಿಡುವದೇ ಒಳ್ಳೆಯದು' ಎಂದು ಬಾಪೂ ಹೇಳಿದರು. ಶೌಚ ಮುಖಮಾರ್ಜನ ಮತ್ತು ಪ್ರಾರ್ಥನೆಯಾದ ಮೇಲೆ ನಾಲ್ಕು ಬಡೆಯಿತು. ನಿಂಬೀ ಹಣ್ಣಿನ ನೀರು ಮತ್ತು ಜೇನುತುಪ್ಪ ಕುಡಿದರು. ದಿನಾಲು ನಾಲ್ಕು ನಾಲ್ಕೂವರೆಯಿಂದ ಐದೂವರೆ ವರೆಗೆ ಬಾಪೂ ಮತ್ತು ಸರದಾರರು ತಿರುಗಾಡುತ್ತಾರೆ. ಇವತ್ತು ಬಾಪೂ ಒಂದು ಚೀಟಿಯ ಮೇಲೆ ಬರೆದು ಸರದಾರರಿಗೆ 'ನೀವು ಉಳಿದ ನಿದ್ರೆಯನ್ನು ಪೂರ್ಣ ಮಾಡಿರಿ' ಎಂದು ಹೇಳಿದರು. 'ಇಲ್ಲ ನಾವು ನಿಮ್ಮ ಹಿಂದೆ ಹಿಂದೆ ತಿರುಗಾಡುವೆವು' ಎಂದು ಸರದಾರರು ಹೇಳಿದರು.

ಇವತ್ತು ಬಾಪೂ ಅವರು ಮೇಜರರಿಗೆ ಹರಿದಾಸರ ವಿಷಯಕ್ಕೆ ಕೇಳಿದರು. ಕೇಳಿದ್ದಕ್ಕೆ ಸಂತೋಷ ಜನಕ ಉತ್ತರ ದೊರೆಯಲಿಲ್ಲ. ಆದುದರಿಂದ ಬಾಪೂ: "ಅವರಿಗಾಗಿ ನನಗೆ ಎರಡು ಶಬ್ದ ಬರೆಯಗೊಡಿರಿ. ನನ್ನ ಅಕ್ಷರಗಳನ್ನು
೧೫-೩-೩೨ ಓದಿ ಅವರ ಜೀವದಲ್ಲಿ ಜೀವಬರುವದು" ಎಂದರು. ಮೇಜರ: "ಇದಾಗದು." ಬಾಪೂ: "ಮೇಜರ ಮಾರ್ಟಿನ್ನರು ಈ ಪ್ರಕಾರದ ಒಪ್ಪಿಗೆಯನ್ನು ಕೊಟ್ಟಿದ್ದರು." ಮೇಜರ: "ನಿಮ್ಮ ಸಂದೇಶವನ್ನು ನಾನು ಮುಟ್ಟಿಸುವದು ಹೆಚ್ಚು ಒಳ್ಳೆಯದು" ಬಾಪೂ: "ಇದರಿಂದ ಕೆಲಸ ಸಾಗುವದು. ಆದರೆ ನಾನು ಬರೆದರೆ ಹೆಚ್ಚು ಒಳ್ಳೆಯದು." ಮೇಜರ: "ಈ ಟಪಾಲಿನೊಳಗಿಂದ ನಿಮ್ಮ ಅಕ್ಷರಗಳನ್ನು ತೋರಿಸಿದರೆ!" ಬಾಪೂ ಹರಿದಾಸರನ್ನು ಕಾಣುವ ಬಗ್ಗೆ ಶುಕ್ರವಾರದೊಳಗೇ ಒಪ್ಪಿಗೆ ಕೊಡಬೇಕೆಂದು ಮಾರ್ಟಿನ್ನರಿಗೆ ಪತ್ರ ಬರೆದರು.

* * *

ಆದರೆ ಈ ಸಾರೆ ಹರಿದಾಸರೊಬ್ಬರ ಸಂಗತಿಯೇ ಸಂತಾಪಜನಕವಿತ್ತೆಂದಲ್ಲ. ಇಂಥ ಇನ್ನೂ ಎಷ್ಟೋ ಸಂಗತಿಗಳು ತಿಳಿದವು. ಕಾಕಾಸಾಹೇಬ, ನರಹರಿ ಮತ್ತು ಪ್ರಭುದಾಸರನ್ನು ಬೆಳಗಾಂವಿ ಜೇಲಿಗೆ ಒಯ್ದಿದ್ದಾರೆ. ಅಲ್ಲಿ ಕಾಕಾಅವರಿಗೆ ರಾಟಿಯ ಸಲುವಾಗಿ ಏಳು ದಿವಸ ಉಪವಾಸ ಮಾಡಬೇಕಾಯಿತು. ಪ್ರಭುದಾಸನನ್ನು ದವಾಖಾನೆಯಲ್ಲಿ, ನರಹರಿಯನ್ನು ಎರಡನೆಯವರ ಜೊತೆಗೆ ಮತ್ತು ಕಾಕಾ ಅವರನ್ನು ಬೇರೆ ಕಡೆಗೆ ಇಡಲಾಗಿದೆ. ಪ್ರಭುದಾಸನನ್ನು ಇಬ್ಬರು ರಟ್ಟೆಯಲ್ಲಿ ಕೈಹಾಕಿ ತರಬೇಕಾಯಿತು ಮತ್ತು ಕಟಾಂಜನದೊಳಗಿಂದ ಮಾತಾಡಬೇಕಾಯಿತು. ನಾನು ಒಳಗಿಂದೊಳಗೇ ಕುದಿಯತೊಡಗಿದೆ. ಇವರೆಲ್ಲರ ಯೋಗ್ಯತೆಯೆಲ್ಲಿ ನನ್ನದೆಲ್ಲಿ! ಇವರಲ್ಲಿ ಯಾರನ್ನಾದರೂ ಬಾಪೂ ಅವರ ಹತ್ತಿರ ಇರಿಸಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು!

ಯಾರಿಗೆ ಗೊತ್ತು? ಈ ಜನರಿಗೆ ಹೆಚ್ಚು ಕಷ್ಟಕೊಟ್ಟು ಅವರ ಯೋಗ್ಯತೆಯನ್ನು ಹೆಚ್ಚು ಮಾಡುವದಿರಬಹುದು. ದೇವರಿಗೆ ಇನ್ನೂ ನನ್ನ ಆತ್ಮನಿರೀಕ್ಷಣೆ ಮಾಡುವ ದಿರಬಹುದು ಮತ್ತು ಲಜ್ಜೆಗೇಡಾಗಿ ಮಾಡುವದಿರಬಹುದು! ಜೇಲಿಗೆ ಬಂದಾಗ ಬಾಪೂ ಅವರ ಹತ್ತಿರ ಹೋದರೆ ಒಳ್ಳೆಯದು ಎಂದು ಮನಸ್ಸಿನಲ್ಲಿಯೇ ಇಚ್ಛಿಸುತ್ತಿದ್ದೆ. ಯೋಗ್ಯತೆಯ ಕಲ್ಪನೆಯು ನೀನು ಹೋಗಲಾರೆ ಎಂದು ಹೇಳುತ್ತಿತ್ತು. ಈಗ ನನ್ನ ಬದಲು ಇವರಲ್ಲಿ ಹೆಚ್ಚು ಯೋಗ್ಯರಾದವರು ಯಾರಾದರೂ ಇದ್ದರೆ ಒಳ್ಳೆಯದು ಆಗುತ್ತಿತ್ತು ಎಂದು ಆತ್ಮವು ಸಾಕ್ಷಿ ನುಡಿಯುತ್ತಿದೆ. **अकल कला खेलत नर ज्ञानी ।**

* * *

ಈ ಜನರ ಸ್ಥಿತಿ ಕೇಳಿ ನನಗೆ ದುಃಖವಾಯಿತು. ಅದನ್ನು ನೋಡಿ ಬಾಪೂ ಹೇಳಿದರು: "ಆಗುವದೆಲ್ಲ ಒಳ್ಳೆಯದೇ ಆಗುತ್ತದೆ. ನಾವೇನು ಜೇಲು ಭೋಗಿಸು ತ್ತೇವೆಯೆ? ಜೇಲಿನ ನಿಜವಾದ ಅನುಭವವು ಈ ಜನರಿಗಾಗುವದು ಒಳ್ಳೆಯದೇ ಆಗಿದೆ." ನಾನು: "ಒಂದು ದೃಷ್ಟಿಯಿಂದ ಇದು ಒಳ್ಳೆಯದೇ ಆಗಿದೆ. ಇವತ್ತು ಜಮನಾಲಾಲಜಿಯವರನ್ನು ಇಸಾಪುರ ಜೇಲಿನಲ್ಲಿ ನೋಡಿ ಎಲ್ಲರ ಒಂದೊಂದು ಸೇರು ರಕ್ತ ಹೆಚ್ಚಾಗಿರಬಹುದು. ಅದರಂತೆ ಕಾಕಾ ಮತ್ತು ನರಹರಿಯ ಸಂಗಡಿಗರಿಗೆ ಅಭಿಮಾನವೆನಿಸಿರಬಹುದು." ಬಾಪೂ ಮತ್ತೆ ಹೇಳಿದರು: "ಆದ್ದರಿಂದ ಆದದ್ದೆಲ್ಲ ಒಳ್ಳೆಯದೇ ಆಗಿದೆ. ಇಲ್ಲಿ ನಾನು ಜೇಲನ್ನು ಭೋಗಿಸಿಯೇ ಇಲ್ಲವೆಂದು ಹೇಳಬಲ್ಲೆ." ನಾನು: "೧೯೨೨ರಲ್ಲಿ ಸ್ವಲ್ಪ ಸ್ವಲ್ಪ ತೊಂದರೆ ಭೋಗಿಸಿದಿರೆಂದು ತಿಳಿಯು ತ್ತದೆ." ಬಾಪೂ: "ಇಲ್ಲ, ಇಲ್ಲ. ಅಂಥ ವಿಶೇಷವೇನೂ ಇದ್ದಿಲ್ಲ." ನಾನು: "ಹಾಲನ್ನು ಸಹ ಎರಡು ಸಾರೆ ಬಿಸಿಮಾಡಲು ಕೊಡುತ್ತಿದ್ದಿಲ್ಲವಲ್ಲವೆ?" ಬಾಪೂ: "ಇದು ಸುಳ್ಳು ಸಂಗತಿ. ನೀನು ಇದನ್ನೆಲ್ಲ ಕೇಳಿದ್ದು ಅತಿಶಯೋಕ್ತಿ. ನಾನು ಬೇಡಿದ್ದೆಲ್ಲವೂ ಸಿಗುತ್ತಿತ್ತು. ಅಗ್ಗಿಷ್ಟಿಗೆ ಬೇಡಿದರೆ ಅಗ್ಗಿಷ್ಟಿಗೆ, ಬ್ರೆಡ್ ಬೇಡಿದರೆ ಬ್ರೆಡ್, ಹಾಲು ಬೇಡಿದರೆ ಹಾಲು, ತುಪ್ಪ ಬೇಡಿದರೆ ತುಪ್ಪ. ಇದು ಮಾತ್ರ ನಿಜ. ನಾನು ಯಾರಿಗೂ ಪತ್ರಗಳನ್ನೇನೂ ಬರೆಯಲಿಲ್ಲ. ಯಾರ ಭೆಟ್ಟಿಯನ್ನೂ ತೆಗೆದು ಕೊಳ್ಳಲಿಕ್ಕಾಗಲಿಲ್ಲ. ಈಗಾದರೂ ನನ್ನ ಸ್ಥಿತಿಯು ಅದೇ ಇದೆಯಲ್ಲವೆ!" ಮತ್ತೆ ಹೇಳತೊಡಗಿದರು: "ನಿಜವಾದ ಜೇಲನ್ನು ದಕ್ಷಿಣ ಆಫ್ರಿಕೆಯಲ್ಲಿ ಭೋಗಿಸಿದೆನು. ಪೈಗಳನ್ನು ತಿಂದೆ, ಹೊಡೆತಗಳನ್ನೂ ತಿಂದೆ, ಸಕ್ತಮಜೂರಿ ಅನುಭವಿಸಿದೆ." ನಾನು: "ಹೊಡೆತ ತಿಂದಿರಾ?" ಬಾಪೂ: "ಹೌದು. ಆಫೀಸರರಿಂದಲ್ಲ, ಕೈದಿಗಳಿಂದ. ನಮ್ಮನ್ನು ಜುಲೂ ಜನರ ಸಂಗಡ ಇಟ್ಟಿದ್ದರು. ಶೌಚಕೂಪದ ವ್ಯವಸ್ಥೆಯನ್ನು ಕೆಳಗೆ ಒಂದು ಡಬ್ಬಿ ಇಟ್ಟು ಮೇಲೆ ಒಂದು ಅಡ್ಡ ಕಟ್ಟಿಗೆಯನ್ನಿಟ್ಟು ಮಾಡಿದ್ದರು. ಆದರ ಮೇಲೆ ತುದಿಗಾಲಿನಿಂದ ಕೂಡ್ರಬೇಕು. ಹಿಡಿಯುವ ಸಾಧನವೂ ಇದ್ದಿಲ್ಲ.

ಏಕಾಂತವೂ ಇದ್ದಿಲ್ಲ. ನಾನು ಹೇಗೋ ಎರಡೂ ಕೈಗಳಿಂದ ಆ ಕಟ್ಟಿಗೆಯನ್ನು ಹಿಡಿದುಕೊಂಡು ಕುಳಿತಿದ್ದೆ. ಅಷ್ಟರಲ್ಲಿ ಒಬ್ಬ ಜುಲೂ ಕೈದಿಯು ಬಂದು ನನ್ನ ಕಪಾಳಿಗೆ ಹೊಡೆದು ದೂಡಿಬಿಟ್ಟನು. ನಾನು ಗೋಡೆಗೆ ಹೋಗಿ ಅಪ್ಪಳಿಸಲ್ಪಟ್ಟೆನು. ತಲೆಗೆ ಬಡೆದಿದ್ದರೆ ರಕ್ತ ಬಂಬಾಳವಾಗುತ್ತಿತ್ತು. ನಾನು ಆವನು ಕೂಡುವ ಸ್ಥಳದ ಮೇಲೆ ಕಾಲನ್ನಿಟ್ಟು ಹೊಲಸು ಮಾಡುತ್ತೇನೆಂದು ಆ ಮನುಷ್ಯನಿಗೆ ಎನಿಸಿತು. ಆ ದಿವಸ ಶೌಚವಿಸರ್ಜನೆಯ ಮಾತು ಎಲ್ಲಿಯೋ ಉಳಿದುಹೋಯಿತು! ಮರುದಿನ ಬೆಳಿಗ್ಗೆ ಸುಪರಿಂಟೆಂಡಂಟರಿಗೆ ಎಲ್ಲ ವಿಷಯವನ್ನೂ ತಿಳಿಸಿದೆ. ಮತ್ತು 'ನೀವು ಇವೇ ಪ್ರಕಾರದ ವ್ಯವಸ್ಥೆಯನ್ನಿಟ್ಟರೆ ಇಂಥ ಪ್ರಸಂಗಗಳು ಆಗುತ್ತಲೇ ಇರುವವು. ಇದರಲ್ಲಿ ನಾನು ಆ ಬಡಪಾಯಿಗೆ ದೋಷ ಕೊಡುವದಿಲ್ಲ. ಆದರೆ ಹಿಂದುಸ್ಥಾನದ ಪದ್ಧತಿಯ ಪ್ರಕಾರ ಬೇರೆ ವ್ಯವಸ್ಥೆಯಾಗಬೇಕು. ನಮಗೆ ನೀರನ್ನು ಉಪಯೋಗಿಸಬೇಕಾಗುವದು ಮತ್ತು ಒಂದು ವಿಶಿಷ್ಟ ಪದ್ಧತಿಯಿಂದ ಕೂಡ್ರಬೇಕಾಗುವದು'. ಎಂದು ಹೇಳಿದೆ. ಎರಡನೆಯ ದಿವಸದಿಂದ ಬೇರೆ ವ್ಯವಸ್ಥೆಯಾಯಿತು. ಇದು ನಾನು ಇದ್ದಮೂಲಕ ಆಯಿತು. ಇಲ್ಲದಿದ್ದರೆ ಎಷ್ಟೋ ದಿವಸ ಈ ಕಷ್ಟವನ್ನು ಸಹಿಸಬೇಕಾಗುತ್ತಿತ್ತು. ಮತ್ತು ನಮಗೆ ಊಟ ಎಂತಹದು ಸಿಗುತ್ತಿತ್ತು ಗೊತ್ತೆ? 'ಮಿಲಿಪೇಪ' ಅಂದರೆ ಗೋವಿನಜೋಳದ ಗಂಜಿ—ಇದನ್ನು ದಿನಾಲು ಮೂರು ಸಾರೆಯಂತೆ ಮೂರು ದಿನ, ಎರಡು ದಿವಸ ಅನ್ನ, ಅನ್ನವೆಂದರೆ ಕೇವಲ ಅನ್ನ ಮಾತ್ರ—ಬೇಳೆ, ಪಲ್ಯ ಯಾವುದೂ ಇಲ್ಲ—ಆದರಲ್ಲಿ ಉಪ್ಪು, ತುಪ್ಪ ಮಾತ್ರ. ಪ್ರಿಟೋರಿಯಾದಲ್ಲಿ ಆ ತುಪ್ಪವೂ ಸಹ ಸಿಗಲಿಲ್ಲ. ಎರಡು ದಿವಸ ಕೇವಲ ಕುದಿಸಿದ ತೊಪ್ಪಲ ಪಲ್ಲೆ. ಈ ವಿಷಯದಲ್ಲಿ ಜಗಳವಾಡಿದ ನಂತರ ನಮಗೆ ನಮ್ಮ ಅಡಿಗೆ ಮಾಡಿಕೊಳ್ಳಲು ಒಪ್ಪಿಗೆ ದೊರೆಯಿತು. ಒಪ್ಪಿಗೆ ದೊರೆತದ್ದೆಂದರೆ ಕೇವಲ ಅಡಿಗೆ ಮಾಡಲಿಕ್ಕೆ. ಸಾಮಾನುಗಳು ಅವೇ ಇದ್ದವು. ಥಂಬೀ ನಾಯುಡು ಅಡಿಗೆ ಮಾಡುತ್ತಿದ್ದ. ಉತ್ತಮ ಅನ್ನ ಸಿದ್ಧಪಡಿಸುತ್ತಿದ್ದ. ಅದನ್ನು ಎಲ್ಲರೂ ಕುಣಿದಾಡಿ ಊಟ ಮಾಡುತ್ತಿದ್ದರು. ನಾನಿದ್ದ ಖೋಲಿಯು ಹೆಚ್ಚಿನ ಹೆಚ್ಚೆಂದರೆ ೩-೪ ಫೂಟು ಅಗಲ ೬ ಫೂಟು ಉದ್ದ ಇರಬಹುದು. ಮತ್ತು ಅದನ್ನು ತಿಜೋರಿಯಂತೆ ಬಂದು ಮಾಡಲಾಗುತ್ತಿತ್ತು. ಇದರಲ್ಲಿ ಬೆಳಕಿನ ಹೆಸರೇ ಇರಲಿಲ್ಲ. ಹವೆಯು ಸಲುವಾಗಿ ಮೇಲ್ಬದಿಯಲ್ಲಿ ಒಂದು ಪಿಡಕಿ ಮಾತ್ರ ಇತ್ತು. ಈ ಏಕಾಂತ ಕೋಣೆಗಳಿಗೆ ಅಂಧೇರಿ (ಕತ್ತಲೆ) ಕೋಣೆಗಳೆಂದು ಕರೆಯುತ್ತಿದ್ದರು. ನನ್ನ ಸುತ್ತುಮುತ್ತಲೂ ಜಗತ್ತಿನಲ್ಲಿ ಕೆಲಸಕ್ಕೆ ಬಾರದ ಕೈದಿಗಳಿದ್ದರು. ಒಬ್ಬನು ೩೦ ಸಾರೆ ಶಿಕ್ಷೆ ಭೋಗಿಸಿದ್ದನು. ಮತ್ತೊಬ್ಬನು ಬಲಾತ್ಕಾರ ಮಾಡಿ ಬಂದ ಅಪರಾಧಿಯಾಗಿದ್ದನು. ಇವರೆಲ್ಲರೂ ಜುಲೂ ಜನರೇ. ನನಗೆ ಕೈದಿಗಳ ಅಂಗಿಯ ಕಿಸೆಗಳನ್ನು ಕತ್ತರಿಸಿ ಕೊಡಬೇಕಾಗುತ್ತಿತ್ತು. ಅವರು ಅವನ್ನು ಹೊಲಿಯುತ್ತಿದ್ದರು. ಅವರ ಕಡೆಗೆ ಕತ್ತರಿಗಳನ್ನು

ಕೊಡುತ್ತಿದ್ದಿಲ್ಲವಾದ ಕಾರಣ ಈ ಕೆಲಸವನ್ನು ನನಗೆ ಒಪ್ಪಿಸಲಾಗಿತ್ತು. ಬಳಿಕ ಕಂಬಳಿಗಳನ್ನು ಹೊಲಿಯುವ ಕೆಲಸ ಕೊಡಲಾಗಿತ್ತು. ಅಂದರೆ ಹರಿದ ಕಂಬಳಿಗಳನ್ನು ಒಂದರ ಮೇಲೊಂದಿಟ್ಟು ಹೊಲಿದು ಕೌದಿಗಳಂತೆ ಮಾಡಬೇಕಾಗುತ್ತಿತ್ತು. ಇಂಥ ನೂರಾರು ಕಂಬಳಿಗಳನ್ನು ನಾನು ಹೊಲಿದಿರಬಹುದು. ನಮಗೆ ೬ರಿಂದ ೧೧, ೧ರಿಂದ ೫ರ ವರೆಗೆ ಒಟ್ಟು ೯ ತಾಸು ಕೆಲಸ ಮಾಡಬೇಕಾಗುತ್ತಿತ್ತು. ಆದರೆ ನಾನೆಂದೂ ಬೇಸರಿಯಲಿಲ್ಲ. ನಾನಂತೂ ಅವರ ಕಡೆಗೆ ಹೆಚ್ಚು ಕಂಬಳಿಗಳನ್ನು ಬೇಡುತ್ತಿರುತ್ತಿದ್ದೆ. ಪ್ರಿಟೋರಿಯಾದಲ್ಲಿ ತುಪ್ಪ ಕೂಡ ಸಿಗುತ್ತಿದ್ದಿಲ್ಲವಾದ ಕಾರಣ ನಾನು ಅನ್ನ ಉಣ್ಣುವದನ್ನು ಬಿಟ್ಟುಬಿಟ್ಟೆ. ಒಂದು ಸಾರೆ ಗೋವಿನಜೋಳದ ಗಂಜಿಯನ್ನು ತೆಗೆದುಕೊಳ್ಳುತಿದ್ದೆ. ಡಾಕ್ಟರರು ರೊಟ್ಟಿ ಕೊಡುತ್ತಿದ್ದರು. ಆದರೆ ನಾನು ಅದನ್ನು ಸ್ವೀಕರಿಸುತ್ತಿದ್ದಿಲ್ಲ. ಕೊನೆಗೆ ಡಾಕ್ಟರರು ಸೋತು ತುಪ್ಪವನ್ನು ಕೊಡಹತ್ತಿದರು. ರೊಟ್ಟಿಯನ್ನೂ ಕೊಡಹತ್ತಿದರು. ಕೆಲವು ದಿನ ನಮಗೆ ಹೊರಗೆ ಕೆಲಸ ಮಾಡಲಿಕ್ಕೆ ಸಿಕ್ಕಿತ್ತು. ದೊಡ್ಡ ದೊಡ್ಡ ಗುದ್ದಲಿಗಳನ್ನು ಕೊಟ್ಟಿದ್ದರು. ಮತ್ತು ಇಲ್ಲಿಯಗಿಂತಲೂ ಬಿರುಸಾದ ಭೂಮಿಯನ್ನು ಅಗಿಯಬೇಕಾಗುತ್ತಿತ್ತು. ಬಳಿಕ ಮುನಿಸಿಪಾಲಿಟಿಯ ವಾಟರ ಟ್ಯಾಂಕಿನ ಕೆಲಸ ಮಾಡಬೇಕಾಯಿತು. ಅಲ್ಲಿಯೂ ನಮ್ಮನ್ನು ಕಳಿಸಿದರು. ಝೀಣಾಭಾಯಿ ದೇಸಾಯಿ ಎಂಬ ಹೆಸರಿನವರೊಬ್ಬರಿದ್ದರು. ಅವರು ಪಾಪ, ಅಗಿಯುತ್ತ ಅಗಿಯುತ್ತ ಮೂರ್ಛೆಹೊಂದಿ ಬಿದ್ದರು. ಆದರೂ ಗ್ರಿಫಿಥ್ ಹೆಸರಿನ ವಾರ್ಡರನು ಅಗಿಯಿರಿ, ಅಗಿಯಿರಿ ಎಂದು ಒದರುತ್ತಲೇ ಇದ್ದ. ಕೊನೆಗೆ ನಾನು ಈ ಪ್ರಕಾರ ಮಾಡಿದರೆ ನಾವು ಯಾರೂ ಕೆಲಸ ಮಾಡುವದಿಲ್ಲವೆಂದು ಎಚ್ಚರಿಕೆ ಕೊಟ್ಟೆ. ಆಗ ಮಾತ್ರ ಅವನು ಎಚ್ಚತ್ತ. ಆ ದಿನಗಳಲ್ಲಿ ನನ್ನ ತೂಕವು ಬಹಳ ಕಡಿಮೆಯಾಗಿತ್ತು. ಆದರೆ ಆ ಕಾಲದಲ್ಲಿ ತೂಕದ ಬಗ್ಗೆ ಯಾರು ವಿಚಾರ ಮಾಡುತ್ತಿದ್ದರು? ಮೂರನೆಯ ಸಾರೆ ಜೇಲಿಗೆ ಹೋದಾಗ ನನ್ನ ಊಟದ ಪ್ರಶ್ನೆ ಬಿಟ್ಟುಹೋಗಿತ್ತು. ನಾನು ಖಜ್ಜೂರಿ, ಶೇಂಗಾ, ನಿಂಬಿಹಣ್ಣು ಬೇಡಿದ್ದೆ. ಆ ಪ್ರಕಾರ ಅದು ನನಗೆ ಸಿಕ್ಕಿತ್ತು. ಹಿರಾಲಾಲನು ಕೂಡ ಆ ಕಾಲಕ್ಕೆ ಬಹಳ ಸಾಹಸವನ್ನು ತೋರಿಸಿದ್ದ. ಅವನನ್ನು ದೂರದಲ್ಲಿ ಎಲ್ಲಿಯೊ ಒಂದು ಏಗಂಟ ಜೇಲಿಗೆ ಕಳಿಸಿದ್ದರು. ಅಲ್ಲಿಂದ ಬದಲಿ ಮಾಡಿಸಿಕೊಳ್ಳುವದಕ್ಕಾಗಿ ಏಳು ದಿವಸ ಉಪವಾಸ ಮಾಡಿ ಕೊನೆಗೆ ಗೆದ್ದ. ನಾನು ಆ ಕಾಲಕ್ಕೆ ಹೊರಗೆ ಇದ್ದೆ. ಆದರೆ ಈ ವಿಷಯದ ಕಡೆಗೆ ನಾನು ಸ್ವಲ್ಪೂ ಕೂಡ ಲಕ್ಷ್ಯ ಕೊಡಲಿಲ್ಲ. ಅವೆಲ್ಲ ದಿನಗಳು ನಿಜವಾದ ಜೇಲವಾಸದ ದಿನಗಳು. ಇದೇನು ಜೇಲವಾಸವೇ! ಅಲ್ಲಿದ್ದಷ್ಟು ಕಷ್ಟವು ಇಲ್ಲಿಯ ಸಾಮಾನ್ಯ ಕೈದಿಗಳಿಗೆ ಕೂಡ ಇಲ್ಲ. ಹಿಂದುಗಡೆ ತೊಂದರೆಗಳು ಕಡಿಮೆಯಾಗಿದ್ದವು. ತಿನ್ನುಣ್ಣುವದರಲ್ಲಿಯೂ ಸುಧಾರಣೆಯಾಗಿತ್ತು. ಈ ಸುಧಾರಿಸಿದ ಪರಿಸ್ಥಿತಿಯಲ್ಲಿ ಇಮಾಮಸಾಹೇಬರು ಬಂದಿದ್ದರು."

ಇದು ದಕ್ಷಿಣ ಆಫ್ರಿಕೆಯ ಇತಿಹಾಸದಲ್ಲಿ ಅಮೂಲ್ಯವಾದ ಒಂದು ಪ್ರಕರಣ.

* * *

ಇವತ್ತು ಬಾಪೂ 'ಪೆಟ್ ಪರೇಡ್' ಓದಿ ಮುಗಿಸಿದರು. ವಲ್ಲಭಭಾಯಿಯವರಿಗೆ ಅದನ್ನು ಅವಶ್ಯ ಓದಬೇಕೆಂದು ಹೇಳಿದರು. ಮದ್ಯಪಾನಪ್ರತಿಬಂಧದ ಪೂರ್ಣ ಇತಿಹಾಸವು ಇದರಲ್ಲಿ ಸಿಗುತ್ತದೆ. ಕೆಲವು ಪ್ರಕರಣಗಳಂತೂ ಬಹಳೇ ಚೆನ್ನಾಗಿವೆ. ಇದಕ್ಕೂ ಮೊದಲು ಬಾಪೂ ಎಷ್ಟೋ ಪುಸ್ತಕಗಳನ್ನು ಓದಿ ಮುಗಿಸಿ-ದ್ದಾರೆ. ಇವತ್ತು Adam's Peak to Elephanta (ಆಡಾಮ್ಸ ಪೀಕ ಟು ಎಲೆಫಂಟಾ) ಪ್ರಾರಂಭ ಮಾಡಿದರು. ಇಂದು . . . ರಿಂದ ಅನೇಕ ಸಣ್ಣ ಸಣ್ಣ ಪುಸ್ತಕಗಳು ಬಂದವು. ಅದೊಂದು ನಗೆಸುವ ದೊಡ್ಡ ಸಾಧನೆಯಾಯಿತು. 'ಜ್ಞಾನಕಿರಣ' ಎಂಬ ಹೆಸರಿನ ಎಷ್ಟೋ ಪತ್ರಿಕೆಗಳು ಒಂದು ದೊಡ್ಡ ಕಾಗದದ ಮೇಲೆ ಮುದ್ರಿಸಲ್ಪಟ್ಟಿದ್ದವು. ವಲ್ಲಭಭಾಯಿಯವರು ಅವನ್ನೆಲ್ಲ ಕತ್ತರಿಸಿ ಹೊಲಿದು ಒಂದು ಪುಸ್ತಕ ಮಾಡಿ ಬಾಪೂ ಅವರಿಗೆ ಹೇಳಿದರು: "ಓದಲಿಕ್ಕೆ ಯೋಗ್ಯವಾಗಿದೆ. ಆದರೆ ಓದುವದರಿಂದ ಜ್ಞಾನ ಹೆಚ್ಚಾದೀತು!" ಬಾಪೂ ಅದನ್ನು ತೆಗೆದುಕೊಂಡು ಒಂದೊಂದು ಸಾಲು ಓದಿ ಬಹಳ ನಕ್ಕರು. ವಿಶೇಷವಾಗಿ 'ದೀಪವನ್ನು ಹಚ್ಚಬೇಡಿರಿ' ಎಂಬ ಪತ್ರಿಕೆಯನ್ನು ಓದಿ ವಲ್ಲಭಭಾಯಿಯವರು: "ಈ ಪತ್ರಿಕೆಯನ್ನು ದೀಪದ ಬೆಳಕಿನಲ್ಲಿ ಕುಳಿತು ಬರೆದಿರಬೇಕು" ಎಂದರು. ನಗೆಸುವಂಥ ಇನ್ನೂ ಎಷ್ಟೋ ಭಾಗವಿತ್ತು. ಸ್ವಲ್ಪ ತಡೆದು ಬಾಪೂ ಅಂದರು: "ಪಾಪ! ಎಲ್ಲರೂ ತಮ್ಮ ತಮ್ಮ ಬುದ್ಧಿಗನುಸಾರವಾಗಿ ಕೈಯಿಂದಾದಷ್ಟು ಮಾಡತೊಡಗಿದ್ದಾರೆ." ಸ್ವಲ್ಪ ಹೊತ್ತು ತಡೆದು ಮತ್ತೆ ಹೇಳಿದರು: "ಅಪ್ಪಿತಪ್ಪಿಯಾದರೂ ಕಾಂಗ್ರೆಸ್ಸಿನ ಗುರುತಾದರೂ ಇದೆಯೋ? ಇದರ ಹಿಂದೆ ಎಂಥ ಅಂಜುಬುರುಕ ಮನೋವೃತ್ತಿ ಹುದುಗಿದೆ! ಎಲ್ಲಿ ಸ್ಪಷ್ಟವಾಗಿ ಉಲ್ಲೇಖಮಾಡಬೇಕಾಗಿರುವದೊ ಅಲ್ಲಿ ಕೂಡ ಒತ್ತಾಯದ ಮೌನವನ್ನು ತಳೆಯಬೇಕಾಗಿದೆ! ಎಲ್ಲ ಪ್ರವೃತ್ತಿಗಳೂ ಕಾಂಗ್ರೆಸ್ಸಿನವೇ ನಡೆದಾಗ ಸರಕಾರವು ಕೂಡ ಇದು ಒಳ್ಳೆಯದೆ ಆಗಿದೆಯೆಂದು ತಿಳಿಯುತ್ತದೆ. ಮರುಕದ ಪರಿಸ್ಥಿತಿ."

* * *

ಬಾಪೂ ನಾನು ಜಾತಿಬಾಂಧವನೆಂಬ ಭಾವನೆಯಿಂದ ಜೀವಣಜಿಯವರ ಪರಿಚಯಮಾಡಿಕೊಟ್ಟರು. ಇವತ್ತು ನನಗೆ ದುರ್ಗಾಳನ್ನು ಭೆಟ್ಟಿಯಾಗಗೊಟ್ಟರು. ಬಂಧುಬಳಗದವರು ಮತ್ತು ಮಿತ್ರರ ವಿಷಯದಲ್ಲಿ ಕಾಯದೆಯ ಹಾಸ್ಯಜನಕ ಮಾದರಿಯನ್ನು ತೋರಿಸುವದಕ್ಕಾಗಿ ನಾನು ಮುಲಕಾಸಿ ಮತ್ತು ಅವರ ಶಕುಂತಲಾ ಇವರ ಕತೆಯನ್ನು ಹೇಳಿದೆ. ವಿಷ್ಣುನ ಪತ್ರದಲ್ಲಿ ಇದು ಇತ್ತೆಂದು ಬಾಪೂಗೆ ತಿಳಿಸಿದೆನು. ಬಾಪೂ: 'ಇಂಥ ಮಾತುಗಳು ವೃತ್ತಪತ್ರಗಳಲ್ಲಿ ಏಕೆ ಬರುತ್ತಿರಲಿಕ್ಕಿಲ್ಲ?"

ನಿನ್ನೆ ಬಾ ಇವರು ಬಾರ್ಡೋಲಿ ತಾಲೂಕಿನಲ್ಲಿ ಪ್ರಚಾರಕ್ಕೆ ಹೋಗಿದ್ದಾರೆಂಬ ಸುದ್ದಿ ಬಂತು. ಇದರ ಮೇಲೆ ನಾನು: "ಈ ಸಾರೆ ಬಾ ಅವರಿಗೆ ೬ ತಿಂಗಳು ಶಿಕ್ಷೆಯಾಗುವದು ಎಂದೆ." ಬಾಪೂ: "ಸಿ ಕ್ಲಾಸು ಮತ್ತು ಸಕ್ತ

**೧೬-೩-೩೨** ಮಜೂರಿ ಸಿಕ್ಕರೂ ಮಹತ್ವದ್ದಲ್ಲ. ಬಾ ಅವರಿಗೆ ಸಿ ಕ್ಲಾಸು ಸಿಕ್ಕರೆ ಉತ್ತಮ." ಇವತ್ತು ಸಂಜೆಗೆ ವೃತ್ತಪತ್ರಗಳಲ್ಲಿ ಈ ಸುದ್ದಿಯೂ ಬಂದುಬಿಟ್ಟಿತು. ಈ ಸುದ್ದಿ ಕೇಳಿ ಬಾಪೂ ಅವರ ಆನಂದಕ್ಕೆ ಪಾರಾವಾರ ವಿರಲಿಲ್ಲ. ಖೊಕ್ ಖೊಕ್ ಎಂದು ನಕ್ಕರು. ಬಳಿಕ ಇಷ್ಟೇ ನುಡಿದರು: "೬೦ ವರ್ಷದ ಮುದುಕಿಗೆ ಸಕ್ತಮಜೂರಿ ಕೆಲಸ ಕೊಡಲಿಕ್ಕೆ ಇವರಿಗೆ ಹೇಗೆ ನಾಚಿಕೆ ಬಂದಿರಲಿಕ್ಕಿಲ್ಲ?" ನಗನಗುತ್ತ ವಲ್ಲಭಭಾಯಿಯವರಿಗೆ ಅಂದರು: ನಿಮಗೆ ಸಿ ಕ್ಲಾಸ ಸಿಗಬೇಕಾಗಿತ್ತು". ವಲ್ಲಭಭಾಯಿ ಹೇಳಿದರು: "ನನ್ನನ್ನು ಕ್ಯಾಂಪ ಜೇಲಿಗೆ ಕಳಿಸಿದರೆ ಬಹಳ ಆನಂದವಾಗುವದು".

ಒಬ್ಬರು ಕೇಳಿದ ಪ್ರಶ್ನೆಗೆ ಬಾಪೂ ಉತ್ತರ ಬರೆಸಿದರು:

"It is possible and necessary to treat human beings on terms of equality but this can never apply to their manner. One would be affectionate and attentive to a rascal and a saint, but one cannot and must not put saintliness and rascality on the same footing."

"ಮನುಷ್ಯಮಾತ್ರರ ಸಂಗಡ ಸಮಭಾವದಿಂದ ನಡೆಯುವದು ಸಾಧ್ಯವಿದೆ ಮತ್ತು ಅವಶ್ಯವೂ ಇದೆ. ಆದರೆ ಅವರ ಗುಣಾವಗುಣಗಳ ಬಗ್ಗೆ ಈ ರೀತಿಯನ್ನು ಎಂದೂ ಅನ್ವಯಿಸತಕ್ಕದ್ದಲ್ಲ. ಒಬ್ಬ ನೀಚ ಮತ್ತು ಒಬ್ಬ ಸಾಧು ಇವರಿಬ್ಬರನ್ನೂ ಪ್ರೇಮದೃಷ್ಟಿಯಿಂದ ನೋಡಬಹುದು, ಮತ್ತು ಅವರ ಸೇವೆಯನ್ನು ಮಾಡುವದೂ ಸಾಧ್ಯವಿದೆ. ಆದರೆ ನೀಚತನವನ್ನೂ ಸಾಧುತನವನ್ನೂ ಒಂದೇ ಪಾಲಿಕೆಯಲ್ಲಿ ಇಡಲು ಸಾಧ್ಯವಿಲ್ಲ ಮತ್ತು ಇಡಬಾರದು."

ನಾನು ಹೇಳಿದೆ: "ಭಿಡೆ ಶಾಸ್ತ್ರಿಗಳು ಗೀತೆಯ ಸಮತೆಯ ಅರ್ಥವನ್ನು ಮಾಡುವಾಗ ದುಷ್ಟರನ್ನು ಕೊಲ್ಲುವದು ಮತ್ತು ಸದಾಚಾರಿಗಳನ್ನು ಪೂಜಿಸುವದು ಸಮತ್ವವೆಂದು ಹೇಳುತ್ತಾರೆ. ಯಾಕಂದರೆ ದುಷ್ಟರನ್ನು ಕೊಲ್ಲುವದರಲ್ಲಿ ದಯೆ ಮತ್ತು ನ್ಯಾಯಬುದ್ಧಿ ಇರುತ್ತದೆ. ಈ ಮಾತು ನಮ್ಮ ವೃತ್ತಿಯನ್ನು ಅವಲಂಬಿಸಿರುತ್ತದೆ." ಬಾಪೂ ಹೇಳಿದರು: "ಸ್ಟೋಇಕ್ಸ ಕೂಡ ಇದೇ ಅಭಿಪ್ರಾಯದವನಾಗಿದ್ದಾನೆಂಬುದು ನಿನಗೆ ಗೊತ್ತಿದೆಯಲ್ಲವೆ? ನಾನು ಹೇಳುವದು ಇಷ್ಟೆ; ಈ ಪ್ರಕಾರ ದಯೆಯಿಂದ ಕೊಲ್ಲುವದು ಸಾಧ್ಯವೇ ಇಲ್ಲ." ವಲ್ಲಭಭಾಯಿಯವರು ನಗನಗುತ

ಅಂದರು : "ಆಕಳ ಕರವನ್ನು ದಯೆಯಿಂದ ಕೊಲ್ಲಲಿಕ್ಕೆ ಬರುತ್ತಿದ್ದರೆ ದುಷ್ಟರನ್ನೇಕೆ ಬರುವದಿಲ್ಲ?" ಬಾಪೂ ಈ ಮಾತನ್ನು ನಗೆಯಿಂದಲೇ ಮುಗಿಸಿಬಿಟ್ಟರು. ಆದರೆ ವಲ್ಲಭಭಾಯಿಯವರು ಬೇರೊಂದು ಪ್ರಶ್ನೆ ಕೇಳಿದರು : "ಯಾರಿಗಾದರೂ ಸಾಯುವ ಇಚ್ಛೆ ಆಗುತ್ತಿದ್ದರೆ?" ಅದಕ್ಕೆ ಬಾಪೂ ಹೇಳಿದರು : "ಅವಶ್ಯ ಆಗಬಹುದು. ಆತ್ಮಹತ್ಯೆಮಾಡಿಕೊಳ್ಳುವವನು ತನ್ನ ಇಚ್ಛೆ ಇಲ್ಲದೆಯೆ ಆತ್ಮಹತ್ಯೆಮಾಡಿಕೊಳ್ಳುತ್ತಿದ್ದರೆ?"

*    *    *

ಲಾಠೀ ವಿಚಾರದಲ್ಲಿ ಟಾಮ್ಸನ್ನರು ಮಾಡಿದ ವ್ಯಾಖ್ಯೆಯನ್ನು ಕೇಳಿ ಬಾಪೂ ಅಂದರು : "ಈಗ ಇವರು ಸ್ವತಃ ತಮ್ಮ ನಿಜಸ್ವರೂಪ ತೋರಿಸಹತ್ತಿದ್ದಾರೆ. ಬೇಗನೇ ಇದನ್ನು ಏಕೆ ಕೊನೆಗಾಣಿಸುವದಿಲ್ಲ ಎಂದು ಕೇಳುವವರೂ ಹಲವರಿದ್ದಾರೆ." ಮ್ಯಾಕ್ಡೊನಾಲ್ಡ ಮತ್ತು ಹೋರರ ವಿಷಯಕ್ಕೆ ಕೆಲವು ಮಾತುಗಳು ಹೊರಟವು. ವಲ್ಲಭಭಾಯಿ : "ಎಲ್ಲರೂ ಕಳ್ಳರೇ, ಇಲ್ಲದಿದ್ದರೆ ಹೋರನು ಪಾರ್ಲಿಮೆಂಟದಲ್ಲಿ ಈ ಪ್ರಕಾರ ಮಾತನಾಡಬಹುದೆ?" ಬಾಪೂ : "ಕಳ್ಳರಲ್ಲ. ವಿಲಾಯತಿಯಲ್ಲಿ ನಾನು ನೋಡಿದ್ದೇನೆ. ಅಲ್ಲಿ ಕಳ್ಳರಾಗುವ ಅವಶ್ಯಕತೆಯೇ ಇಲ್ಲ. ಹೋರೆ ಮತ್ತು ಲಾರ್ಡ ಡಿಕಿನ್‌ಸನ್‌ರಂಥವರು ನಿಮ್ಮಂಥ ಜನರಿಂದ ರಾಜ್ಯ ನಡೆಸುವದು ಹೇಗಾದೀತು ಎಂದು ಪ್ರಾಮಾಣಿಕತನದಿಂದ ವಿಚಾರಮಾಡುತ್ತಾರೆ. ಇದೇ ಪ್ರಕಾರ ಬೇರೆ ಜನರೂ ಪ್ರಾಮಾಣಿಕ ಅಭಿಪ್ರಾಯವುಳ್ಳವರಾಗಿರಬಹುದು. ನಮ್ಮ ಕಡೆಗೆ ಅಧಿಕಾರವಿದ್ದರೆ ನಾವು ಹೇಗೆ ವರ್ತಿಸಬಹುದು?" ವಲ್ಲಭಭಾಯಿ ಹೇಳಿದರು : "ನಾವೂ ಹೀಗೆಯೇ ಮಾಡಬಹುದು. ಆದರೆ ನಾವು ದುಷ್ಟರೆಂದು ಹೇಳಿಸಿಕೊಳ್ಳುವದರಿಂದ ಮುಕ್ತರಾಗುವೆವು." ಬಾಪೂ : "ಇಲ್ಲ, ಆ ಕಾಲಕ್ಕೆ ನಮಗೆ ಯಾರಾದರೂ ದುಷ್ಟರೆಂದು ಹೇಳಿದರೆ ಕೆಟ್ಟ ಎನಿಸುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ಜನರನ್ನು ದುಷ್ಟರೆಂದು ತಿಳಿಯುವ ಕಾರಣವಿಲ್ಲ."

*    *    *

ಮೇಜರ ಮಾರ್ಟಿನ್ನರ ಪತ್ರ ಬಂತು. ಅದರಲ್ಲಿ ಹೀಗೆ ಬರೆಯಲಾಗಿತ್ತು. 'ಸರಕಾರಕ್ಕೆ ಪತ್ರವನ್ನು ಕಳಿಸಿದೆ ಮತ್ತು ಮರುಟಪಾಲಿಗೆ ಉತ್ತರವನ್ನೂ ಕೇಳಿದೆ. ಇದೇ ಪ್ರಕಾರ ಹರಿದಾಸರ ಸ್ಥಿತಿಯ ಬಗ್ಗೆ ಭಂಡಾರಿಯವರನ್ನು ವಿಚಾರಿಸಿದೆ.'

ಮೇಜರ ಭಂಡಾರಿಯವರ ಹೆಸರಿನಿಂದ ಮ್ಯಾಕ್ಸವೆಲ್ಲರ ಪತ್ರ ಬಂತು. ಅದರಲ್ಲಿ ಹೀಗೆ ಬರೆದಿತ್ತು. 'ಸಾರ್ಜಂಟ ವಿಸ್ಸ ಮತ್ತು ರೋಜರ್ಸರಿಗೆ ಗಡಿಯಾರಗಳನ್ನು ಕಳಿಸಿದೆ. ಇದಕ್ಕಾಗಿ ಅವರ ಪತಿಯಿಂದ ಆಭಾರ ಮನ್ನಿಸುವದಕ್ಕೆ (appreciation) ಇಂಡಿಯಾ ಆಫೀಸು ಮುಂಬಯಿ ಸರಕಾರಕ್ಕೆ ಬರೆದಿದೆ. ಇದನ್ನು ಗಾಂಧೀಜಿಗೆ ತೋರಿಸಬೇಕು.' ಈ ಪತ್ರವನ್ನು ಬಾಪೂಗೆ ತೋರಿಸಲಾಯಿತು.

ರಂಗೂನದ ಮದನಜೀತ ಎಂಬುವವರು ತಮ್ಮ ೭೨ ನೇ ವಯಸ್ಸಿನಲ್ಲಿ ಇನ್‌ಸೀನ ಜೇಲದಲ್ಲಿ ತೀರಿಕೊಂಡರು. ಈ ಮನುಷ್ಯನಲ್ಲಿ ಅನೇಕ ನ್ಯೂನತೆಗಳಿದ್ದವು. ಆದರೂ ಅವನು ಬ್ರಹ್ಮದೇಶದ ಸಲುವಾಗಿ ಸನ್ಯಾಸ ವಹಿಸಿದ್ದ

೧೭-೩-೩೨ ನೆಂಬುದರಲ್ಲಿ ಸಂದೇಹವಿಲ್ಲ. ಜೇಲಿನಲ್ಲಿ ಸ್ವರ್ಗವಾಸಿಯಾಗಿ ಅವನು ತನ್ನ ಸೇವೆಗೆ ಬಂಗಾರಕ್ಕೆ ಕುಂದಣ ಕೂಡಿಸಿದಂತೆ ಮಾಡಿದನು. ಈ ಸುದ್ದಿಯನ್ನು ಕೇಳಿ ಬಾಪೂಗೆ ಅಭಿಮಾನವೆನಿಸಿತು.

ಬಾ ಅವರಿಗೆ ಸಾದಾ ಶಿಕ್ಷೆಯಾಗಿದೆಯೆಂದು ಟಾಯಿಮ್ಸದಲ್ಲಿದೆ. ಬೆಂಥಾಮರು ದುಂಡುಮೇಜಿನ ಪರಿಷತ್ತಿನ ವಿಷಯಕ್ಕೆ ವ್ಯಕ್ತಪಡಿಸಿದ ಅಭಿಪ್ರಾಯವು ಇಂದಿನ 'ಕ್ರಾನಿಕಲ್'ದಲ್ಲಿ 'ಅಡವ್ಹಾನ್ಸ' ಪತ್ರದಿಂದ ಉದ್ಧೃತವಾಗಿತ್ತು. ಇದರಿಂದ ಇವರ ಮನಸ್ಸಿನಲ್ಲಿದ್ದದ್ದು ಹೊರಬೀಳುತ್ತದೆ. ಶ್ರೀಮತಿ ನಾಯಡೂರಿಗೆ 'ಸಿ' ಕ್ಲಾಸು ಸಿಕ್ಕರೆ ಹೇಗೆ ಆದೀತೆಂದು ಇವತ್ತು ಬೆಳಿಗ್ಗೆ ಮಾತುಗಳು ನಡೆದಿದ್ದವು. ಆಗ ಬಾಪೂ ಅಂದರು: "ಇವರ ವಿಷಯದಲ್ಲಿ ಹೀಗೆ ಮಾಡುವದಿಲ್ಲ. ಈ ಜನರು ಇಷ್ಟು ದುಷ್ಟರಾಗುವದಿಲ್ಲ." ವಲ್ಲಭಭಾಯಿ ಅಂದರು: "ನೋಡಿರಿ, ಯಾರು ಬಾ ಅವರಿಗೆ 'ಸಿ' ಕ್ಲಾಸು ಕೊಟ್ಟರೂ ಅವರ ವಿಷಯದಲ್ಲಿ ನೀವು ಅವರು ಇಷ್ಟು ದುಷ್ಟರಾಗುವದಿಲ್ಲವೆಂದು ಹೇಳುತ್ತೀರಿ. ನಿಮಗೆ ಕಂಡವರೆಲ್ಲ ನ್ಯಾಯದರ್ಶಿಗಳೇ". ಸ್ಯಾಮ್ಯುಅಲ್ ಹೋರರ ಬಗ್ಗೆ ವಲ್ಲಭಭಾಯಿಯವರು ಕೇಳಿದರು: "ಈ ಮನುಷ್ಯನು ಈ ಪ್ರಕಾರ ಹೇಗೆ ಕಣ್ಣು ಮುಚ್ಚಿ ಕೂಡ್ರುತ್ತಾನೆ?" ಬಾಪೂ ಹೇಳಿದರು: "ಇದು ಕಾನ್ಸರ್ವೇಟಿವ್ಹ ಜನರ ಸ್ವಭಾವ. ನೋಡುವದಿಲ್ಲವೆ? ಹಿಂದಿನ ಯುದ್ಧದಲ್ಲಿ ಜರ್ಮನ್ ಜನರು ಫ್ರಾನ್ಸದ ವರೆಗೆ ಬಂದರೂ ಈ ಜನರು 'ನಾವು ಗೆದೆಯಹತ್ತಿದ್ದೇವೆ' 'ನಾವು ಗೆದೆಯಹತ್ತಿದ್ದೇವೆ' ಎಂದು ಹೇಳುತ್ತಿರಲಿಲ್ಲವೆ?"

* * *

ಬಾಪೂ ಅವರ ಮೊಳಕೈ ಮೇಲ್ಭಾಗದ ಎಲುವಿನಲ್ಲಿಯೂ ಮತ್ತು ಬಲಗೈ ಹೆಬ್ಬಟ್ಟಿನಲ್ಲಿಯೂ ಬಹಳ ನೋವಿರುತ್ತದೆ. ಬಾಪೂ ಹೇಳಿದರು: "ಇವು ವೃದ್ಧಾಪ್ಯದ ಚಿನ್ಹಗಳು. ಈ ನೋವಿನ ವಿಚಾರವನ್ನು ಬಿಟ್ಟೇಬಿಡಬೇಕು. ಇವು ಅನಿವಾರ್ಯವೆಂದು ತಿಳಿದು ಇವುಗಳ ಬಗ್ಗೆ ವ್ಯರ್ಥ ಚಿಂತೆ ಮಾಡುವದನ್ನು ಬಿಟ್ಟುಬಿಡಬೇಕು". ವಲ್ಲಭಭಾಯಿ: "ಆ ಹಠಯೋಗಿಯ ರೀತಿಯಂತೇನು?" ಬಾಪೂ: "ನಾನು ಹೊರಗಿದ್ದರೆ Blood Pressure (ರಕ್ತದ ಒತ್ತಡ) ಹೆಚ್ಚಾಗುತ್ತಿತ್ತೆಂದು ಸ್ಪಷ್ಟ ಕಾಣುತ್ತದೆ. ಯಾಕಂದರೆ ನಿದ್ರೆ ಹತ್ತುವದಿಲ್ಲ, ಹಸಿವೆ ಇನ್ನೂ ಆಗುವದಿಲ್ಲ." ಇದಕ್ಕೆ ನಾನು ಅಂದೆ: "ಇಲ್ಲಿ ಬಂದದ್ದು ದೇವರ ಕೃಪೆಯೆಂದೇ ಹೇಳಬೇಕಲ್ಲ!" ಬಾಪೂ ಹೇಳಿದರು: "ಖಂಡಿತ. ಇದಲ್ಲದೆ ಅನ್ಯಕಾರಣಗಳ ಸಲುವಾಗಿಯಾದರೂ ನಾನು ಹೊರಗುಳಿದು ಏನು ಮಾಡಬಹುದಾಗಿತ್ತು? ಹಿಂದೂ-ಮುಸಲ್ಮಾನ ಪ್ರಶ್ನೆ,

ಸರಹದ್ದಪ್ರಾಂತದ ಪ್ರಶ್ನೆ ಇವೆಲ್ಲ ಬಿಕ್ಕಟ್ಟಿನ ಪ್ರಶ್ನೆಗಳಿದ್ದವು. ಕೆಂಪಂಗಿಯ ಸೈನಿಕರ ಬಗ್ಗೆ ಏನು ಮಾಡಬೇಕು? ಈಗ ನಿಜವಾದ ಕಾಂಗ್ರೆಸವಾದಿಗಳು ಉಳಿಯುವರು. ಉಳಿದವರು ಬೇರೆ ಹೋಗುವರು. ನಮ್ಮ ಬಿಡುಗಡೆಯಾಗುವವರೆಗೆ ದೇವರು ಎಲ್ಲ ಸ್ಥಿತಿಯನ್ನು ಅನುಕೂಲ ಮಾಡಿ ಇಡುವನೆಂದು ಆಸೆಯಿದೆ."

ಮತಾಧಿಕಾರ ಸಮಿತಿಯ ಎದುರಿನ . . . ಇವನ ಸಾಕ್ಷಿಯನ್ನು ಓದಿ ಬಾಪೂ ಹೇಳಿದರು: "ಇವನಂತೂ ತೀರ ಮಾರುಹೋದವನಂತೆ ಮಾತಾಡುತ್ತಾನೆ. ಪ್ರೌಢಮತಾಧಿಕಾರದ ವಿರುದ್ಧ ಮಾತಾಡುವವನಿಗೆ ಏನನ್ನಬೇಕು?"

ಮಾರ್ಟಿನ್ನರಿಗೆ ಬರೆದ ನಿರ್ಣಾಯಕ ಪತ್ರದ (ultimatum) ಉತ್ತರವನ್ನು ಕೊಡುವದಕ್ಕಾಗಿ ಇವತ್ತು ಸುಪರಿಂಟೆಂಡೆಂಟ ಸಾಹೇಬರು ಬಂದರು—ಸುಮಾರು ಹನ್ನೆರಡು ಗಂಟೆಗೆ. ಇತ್ತಕಡೆಗೆ ಬಾಪೂ ಇವತ್ತು
೧೮-೩-೩೨ ಸಾಯಂಕಾಲದ ಊಟ ಬಿಡುವ ನೋಟೀಸು ಕೊಡುವ
ದಕ್ಕಾಗಿ ಪತ್ರಬರೆಯುವ ವಿಚಾರದಲ್ಲಿದ್ದರು! "ಪ್ರತಿ ಹದಿನೈದು ದಿವಸಕ್ಕೊಮ್ಮೆ ನೀವು ಮೂರು ಕೈದಿಗಳನ್ನು ಭೆಟ್ಟಿಯಾಗುವದಕ್ಕೆ ಒಪ್ಪಿಗೆಯು ಇವತ್ತು ಬಂದಿದೆ. ಜೇಲಿನ ಆಡಳಿತೆಯ ಚರ್ಚೆ ಮಾಡಕೂಡದು. ರಾಜನೀತಿಯ ಚರ್ಚೆ ಮಾಡಬಾರದು. ಎರಡನೇ ಕೈದಿಗಳ ಆಗುಹೋಗುಗಳ ಚರ್ಚೆಯಾಗತಕ್ಕದ್ದಲ್ಲ. ಭೆಟ್ಟಿಯು ಇಪ್ಪತ್ತು ನಿಮಿಷ ಮಾತ್ರ ನಡೆಯಬೇಕು. ಮುಂತಾದ ಶರ್ತುಗಳು ಕೂಡ ಇದರ ಸಂಗಡವೇ ಇವೆ!" ಎಂದು ಸುಪ. ರಿಂಟೆಂಡೆಂಟರು ತಿಳಿಸಿದರು. ಸರದಾರ ಮತ್ತು ಮಹದೇವ ಇವರಿಗೆ ಈ ಜನರೊಂದಿಗೆ ಮಾತಾಡಲಿಕ್ಕೆ ಬರಬಾರದೆಂದು ಈ ಜನರ ಭೆಟ್ಟಿಗೆ ಬಾಪೂ ಅವರು ಆಫೀಸಿನಲ್ಲಿ ಹೋಗಬೇಕೆಂಬ ಶರ್ತು ಕೂಡ ಇದರ ಜೊತೆಗಿತ್ತು! ಇವೆಲ್ಲವೂ ಸಂತೋಷಜನಕವಿದ್ದಿಲ್ಲ. ಆದರೆ ಇವುಗಳ ವಿರುದ್ಧ ಹೋರಾಡುವದಿಲ್ಲವೆಂದು ಬಾಪೂ ಹೇಳಿದರು. ಅವರು ಹರಿದಾಸ, ನರಸಿಂಹಭಾಯಿ ಮತ್ತು ಛಗನಲಾಲ ಜೋಶಿ ಇವರ ಭೆಟ್ಟಿಯನ್ನು ಕೇಳಿದರು. ಸ್ತ್ರೀಯರನ್ನೂ ಭೆಟ್ಟಿಗೆ ಕರೆಯಬೇಕೆಂದು ಬಳಿಕ ಲಕ್ಷ್ಯದಲ್ಲಿ ಬಂತು. ಸರಿ. ಗಂಗಾಬಹೆನರನ್ನು ಕರೆದರು. ಗಂಗಾಬಹೆನರ ಹೆಸರನ್ನೆತ್ತಿದಕೂಡಲೇ ಮೇಜರರು ಚಕಿತರಾದರು. ತಿರುಗಿಬಂದರು. ಸ್ತ್ರೀಯರಿಗೆ ಅವರ ಜೇಲಿನಿಂದ ಹೊರಬೀಳುವ ಹುಕುಮು ಇಲ್ಲ. ನಿಮ್ಮನ್ನು ಹೇಗೆ ಭೆಟ್ಟಿಗೆ ಕರೆದುಕೊಂಡು ಹೋಗಲು ಬಂದೀತು! ಎಂಬ ಮುಂತಾದ ಮಾತುಗಳಾದವು. ಕೊನೆಗೆ ಇನ್ಸ್ಪೆಕ್ಟರ ಜನರಲ್‌ರಿಗೆ ಮತ್ತೆ ಪತ್ರ ಬರೆಯುವದಾಗಿ ಹೇಳಿ ಹೋದರು. ಹೊರಗಿನ ಜನರ ಭೆಟ್ಟಿಯ ಆಗ್ರಹವನ್ನು ಇಡಲಿಕ್ಕಾಗದೆಂದು ಬಾಪೂ ಅವರ ಸ್ಪಷ್ಟ ವಿಚಾರವಿದೆ. ಜೇಲಿನಲ್ಲಿ ಬಂದು ಹೊರಗಿನ ಜನರ ಭೆಟ್ಟಿಯ ಆಶೆ

ಇಡುವದರಲ್ಲಿ ಅರ್ಥವೇ ಇಲ್ಲ. ಆದರೆ ಜೇಲಬಾಂಧವರ ಪರಿಚಯ ಮಾಡಿಕೊಳ್ಳುವದು ಅಧಿಕಾರವಿದ್ದಂತೆ ಕರ್ತವ್ಯವೂ ಇದೆ. ಇದರ ಆಗ್ರಹವನ್ನು ಎಂದೂ ಬಿಡಲಿಕ್ಕಾಗುವದಿಲ್ಲ. ಈ ಸಿದ್ಧಾಂತಕ್ಕನುಸಾರವಾಗಿಯೇ ಇಂದಿನವರೆಗೆ ಹೆಜ್ಜೆಯನ್ನಿಡಲಾಗಿದೆ.

ಇವತ್ತು ಬಾಪೂ ನಾರಾಯಣದಾಸಭಾಯಿಯವರಿಗೆ ಅ, ಬ ಇವರ ವಿಷಯದಲ್ಲಿ ಒಂದು ಗಂಭೀರ ಪ್ರಶ್ನೆ ಉದ್ಭೂತವಾಗುವಂಥ ಪತ್ರ ಬರೆದರು. ಅ ನ ಸರುತ್ವದ ವಿರುದ್ಧ ಕೊನೆಯ ಉಪಾಯವೆಂದು ಅ ನ Sterilization ( ವಂಧ್ಯೀಕರಣ ) ಮಾಡಬೇಕು. ಅಥವಾ 'ಬ'ಗೆ Birth control ( ಗರ್ಭನಿರೋಧ )ದ ಉಪಾಯ ಕಲಿಸಬೇಕು. ಇಷ್ಟು ಸೂಚನೆ ಕೊಟ್ಟಮೇಲೂ ಎಲ್ಲವನ್ನೂ ನಾರಾಯಣದಾಸಭಾಯಿಯ ಮೇಲೆ ಬಿಟ್ಟುಬಿಟ್ಟರು. ನಿನ್ನ ಬುದ್ಧಿಗೆ ಹಿಡಿಯದಿದ್ದರೆ ಬಿಟ್ಟುಬಿಡಬೇಕು. ನಿನ್ನ ಮೇಲೆ ಆವಶ್ಯಕತೆಗಿಂತ ಹೆಚ್ಚು ಭಾರವೆನಿಸಿದರೂ ಬಿಟ್ಟುಬಿಡಬೇಕು ಮುಂತಾಗಿ.

ಇವತ್ತು ಸ್ಯಾಮ್ಯುಅಲ್ ಹೋರರ The Fourth Seal ( ದಿ ಫೋರ್ಥ ಸೀಲ ) ಪೂರ್ಣ ಮುಗಿಸಿದರು. ಪುಸ್ತಕವು ಸುಂದರವಾಗಿದೆ. ಇದರಲ್ಲಿ ಗ್ರ್ಯಾಂಡ ಡಚೆಸ್ಸರ ಚಿತ್ರವನ್ನು ಅದ್ಭುತವಾಗಿ ಚಿತ್ರಿಸಲಾಗಿದೆ. ಲೇಖಕರ ರಶಿಯನ್ ಭಾಷೆಯನ್ನು ಕಲಿಯುವ ಉತ್ಕಟೇಚ್ಛೆ, ಅದರ ಸಫಲತೆ, ಸಾಮ್ರಾಜ್ಯಸೇವೆಯನ್ನು ಮಾಡುವ ತೀವ್ರ ಇಚ್ಛೆ ಮುಂತಾದ ಎಲ್ಲ ಮಾತುಗಳು ಸ್ಪಷ್ಟವಾಗಿ ಲಕ್ಷ್ಯಕ್ಕೆ ಬರುತ್ತವೆ. ಬಾಪೂ ಅವರ ವಿಮರ್ಶೆಯು ಹೀಗಿತ್ತು: ಕೊನೆಯ ಪ್ರಕರಣದಲ್ಲಿ ಝಾರನನ್ನು ಸಮರ್ಥಿಸುವಾಗ ರಾಜನಿಷ್ಠೆಯು ಅವಶ್ಯಕ್ಕಿಂತ ಹೆಚ್ಚಾಗಿ ತೋರುತ್ತದೆ. ನಾನು ಹೇಳಿದೆ: "ಝಾರನು ಗಾದಿಯನ್ನು ಬಿಡದಿದ್ದರೆ ಯುದ್ಧದ ಪರಿಣಾಮವೇ ಬೇರೆಯಾಗುತ್ತಿತ್ತೆಂದು ಅವನು ತಿಳಿಯುತ್ತಾನೆ. ಈ ಯುದ್ಧವು ವಿಪ್ಲವದಲ್ಲಿ ಪರಿಣಮಿಸಿತು ಮತ್ತು ಯಾವುದೇ ರೀತಿಯಿಂದ ಏಕಾಗಲೊಲ್ಲದು ಅದರಲ್ಲಿ ಪ್ರಜರು ಭಾಗ ತೆಗೆದುಕೊಂಡರು ಎಂಬ ಮಾತು ಅವನಿಗೆ ಮಾನ್ಯವಿಲ್ಲ. ಅವನಿಗಂತೂ Pale Horse ತೋರಿಸಲಾಯಿತು. ಮತ್ತು ಅದರ ಹಿಂದೆ ಸಾವು, ಸರ್ವನಾಶ, ಬರಗಾಲ ಮುಂತಾದ ದೃಶ್ಯಗಳೇ ಕಂಡುಬಂದಿವೆ". ಬಾಪೂ ಹೇಳಿದರು: "ಇದು ನಿಜ ರಾಜನ ವಿಷಯಕ್ಕೆ ಅವನ ಈ ಮಾತೂ ಸತ್ಯವಿದೆ. ಅವನು ಸಿಂಹಾಸನವನ್ನು ಬಿಡದಿದ್ದರೆ ಮತ್ತು ರಾಜ್ಯವನ್ನು ಆಳಿ ತೋರಿಸಿದ್ದರೆ ಅವನಿಗೆ ಸಹಜ ಮರಣವಿಲ್ಲದೆ ಸಾಯುವ ಪ್ರಸಂಗ ಬರುತ್ತಿದ್ದಿಲ್ಲ. ಅಲ್ಲದೆ ಈ ದುರವಸ್ಥೆಯನ್ನು ಅನುಭವಿಸುವ ಪ್ರಸಂಗವೂ ಬರುತ್ತಿದ್ದಿಲ್ಲ." "ಅವನು ಸಿಂಹಾಸನವನ್ನು ಬಿಡದಿದ್ದರೆ ಪ್ರಜರು ಅವನನ್ನು ಕೊಲ್ಲುತ್ತಿದ್ದಿಲ್ಲವೆ?" ಬಾಪೂ: "ಹೀಗೆ ಹೇಳಲಿಕ್ಕೆ ಆಗುವದಿಲ್ಲ. ಆದರೆ ಅವನು ಧೈರ್ಯದಿಂದ ಪ್ರಜರ ವಿರುದ್ಧ ಹೋರಾಡಬೇಕಿತ್ತು!"

ಮದನಜೀತರು ಎಂದು ಮತ್ತು ಹೇಗೆ ಬಾಪೂ ಅವರ ಸಹವಾಸದಲ್ಲಿ ಬಂದರು ಬಳಿಕ ಹೇಗೆ ಬಿಟ್ಟು ಹೋದರು ಎಂಬದನ್ನು ಕುರಿತು ಬಾಪೂ ಅವರನ್ನು ಕೇಳಿದೆ. ತಿಳಿದುಕೊಳ್ಳಬೇಕಾದ ಎಷ್ಟೋ ಸಂಗತಿಗಳು ಅವರಿಂದ

**೧೯-೩-೩೨** ದೊರೆತವು. ಮದನಜೀತರು ಜುನಾಗಡದ ನಾಗರಿಕರು. ಜಂಜೀಬಾರದಿಂದ ಆಫ್ರಿಕಾಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಬಾಪೂ ಆಶ್ರಯ ಕೊಟ್ಟಿದ್ದರು. ಮನೆಯನ್ನು ಹಾಳು ಮಾಡಿಕೊಂಡಮೇಲೆ ಒಳ್ಳೆಯ ಮತ್ತು ಕೆಟ್ಟ ಅನುಭವಗಳನ್ನು ತೆಗೆದುಕೊಳ್ಳುತ್ತ ಹಾಗೂ ಹೀಗೂ ಬಾಪೂರವರ ಹತ್ತಿರ ಬಂದಿದ್ದರು. ಬಾಪೂ ಅವರ ತಿಜೋರಿಯೊಳಗಿಂದ ರೂಪಾಯಿಗಳು ಹೋಗಿದ್ದವು. ಅದರ ಕೀಲೀಕೈಯ ಬಗ್ಗೆ ಮದನಜೀತರನ್ನು ವಿಚಾರಿಸಲು ಅವರು ಸಿಟ್ಟಿಗೆದ್ದು ಮನೆ ಬಿಟ್ಟು ಹೊರಟು ಹೋದರು. ಅವರು ಬಹಳ ದಿನಗಳವರೆಗೆ ಅಡವಿಯಲ್ಲಿಯೇ ತಿರುಗುತ್ತಿದ್ದರು. ತಿಜೋರಿಯ ಕೀಲೀಕೈ ಕಳ್ಳ ಬೇರೆ ಯಾವನೋ ಇದ್ದನೆಂದು ತಿಳಿದ ಕೂಡಲೆ ಬಾಪೂ ಮದನಜೀತರನ್ನು ಕರೆಯಿಸಿ ಅವರಿಗೆ ವಿನಂತಿ ಮಾಡಿಕೊಂಡರು. ಅವರು ತಿರುಗಿ ಬಂದರು. ಆದರೆ ಬಾಪೂರವರ ಸಂಗಡ ಇರಲಿಲ್ಲ. ಬಾಪೂ ಅವರ ಕಡೆಯಿಂದ ಮುದ್ರಣಾಲಯವನ್ನು ತೆಗೆಯಿಸಿ ಅದರಲ್ಲಿ ಬಹಳ ಹಣವನ್ನು ತೊಡಗಿಸಿದರು. ಅವರಿಗೆ Indian Opinion (ಇಂಡಿಯನ್ ಒಪೀನಿಯನ್) ತೆಗೆಯಬೇಕೆಂದು ಹೊಳೆಯಿತು. ಅದರಲ್ಲಿಯ ಲೇಖಗಳನ್ನು ಸಂಪಾದಕರು ಬರೆಯುತ್ತಿದ್ದರು. ಅವುಗಳನ್ನು ಬಾಪೂ ನೋಡಿದಮೇಲೆ ಮುದ್ರಿಸಲಾಗುತ್ತಿತ್ತು. ಇದೆಲ್ಲವೂ ಹಾನಿಯ ಉದ್ಯೋಗವಾಗಿತ್ತು. ಪ್ರತಿತಿಂಗಳು ಬಾಪೂ ಅವರಿಗೆ ೫೦—೬೦ ಪೌಂಡುಗಳನ್ನು ಕೈಯಿಂದ ಕೊಡಬೇಕಾಗುತ್ತಿತ್ತು ಮತ್ತು ಬಹಳ ಪ್ರಯತ್ನದಿಂದ ೪೦೦ ಪ್ರತಿಗಳು ಖರ್ಚಾಗುತ್ತಿದ್ದವು. ಬಾಪೂ ಛಗನಲಾಲರನ್ನು ಮೇಲ್ವಿಚಾರಣೆಗಾಗಿ ಕಳಿಸಿದರು. ಆದರೆ ಮದನಜೀತರು ಅವರಿಗೆ ಕೈಹಾಕಗೊಡಲಿಲ್ಲ. ಹಿಂದಿನಿಂದ ವೆಸ್ಟ ಎಂಬುವವರು ಹೋದರು. ಅವರು ಇದು ದಿವಾಳಿ ತೆಗೆಯುವ ಧಂದೆಯಾಗಿದೆಯೆಂದೂ ಇದನ್ನು ಬಂದು ಮಾಡಿಬಿಡಬೇಕೆಂದೂ ವರದಿಮಾಡಿದರು. ಅದನ್ನು ಫಿನಿಕ್ಸಕ್ಕೆ ಒಯ್ಯಬೇಕೆಂದು ಬಾಪೂ ಅವರು ನಿರ್ಣಯ ಮಾಡಿದಕೂಡಲೇ ಮದನಜೀತರು ಹಿಂದುಸ್ತಾನಕ್ಕೆ ಹೊರಟುಹೋದರು. ಗೋಖಲೆಯವರ ಹೆಸರಿನಿಂದ ಒಂದು ಪತ್ರವನ್ನು ಒಯ್ದಿದ್ದರು. ಬರ್ಮಾದಲ್ಲಿ ಕೂಡ ಅವರು ಬಾಪೂ ಅವರನ್ನು ಬಹಳ ಟೀಕಿಸಿದರು. ಅವರಲ್ಲಿ ಹೊಗಳುವಂಥ ಗುಣವೆಂದರೆ ಅವರು ಸ್ವಂತದ ಸಲುವಾಗಿ ಒಂದು ಒಡಕು ಕವಡೆಯನ್ನೂ ಸಂಗ್ರಹಿಸಲಿಲ್ಲ. ಅನೇಕ ಚಳವಳಿಗಳಲ್ಲಿ ಭಾಗ ತೆಗೆದುಕೊಂಡರೂ ಅವುಗಳಲ್ಲಿ ಅವರ ಸ್ವಾರ್ಥವಿರಲಿಲ್ಲ. ಎರಡನೆಯವರ ವಿಷಯಕ್ಕೆ ಅವಿಶ್ವಾಸ ತೋರುವದು, ಎರಡನೆಯವರ ದೋಷಗಳನ್ನೇ ಎಣಿಸುವದು, ಇವು ಅವರಲ್ಲಿಯ ದುರ್ಗುಣಗಳು. ಆದರೆ ಸಮಾಜಸೇವೆಗಾಗಿ ಅವರು ತೆಗೆದುಕೊಂಡ

ಸನ್ಯಾಸವು ನಿಜವಾದದ್ದಿತ್ತು. ರಂಗೂನದಲ್ಲಿ ಕೂಡ ಅವರು ಸ್ವಾರ್ಥಕ್ಕಾಗಿ ಏನನ್ನೂ ಮಾಡಲಿಲ್ಲ. ಅವರು ರಾಷ್ಟ್ರಸೇವೆಯಲ್ಲಿಯೇ ತಮ್ಮ ಜೀವನವನ್ನು ಸವೆಸಿದರೆಂಬುದರಲ್ಲಿ ಸಂದೇಹವಿಲ್ಲ. ಅವರ ಜೀವನದ ಅಂತವನ್ನು ಜೇಲಿನಲ್ಲಿ ಮಾಡಿ ದೇವರು ಅವರ ಪ್ರತಿಷ್ಠೆಯನ್ನು ಹೆಚ್ಚಿಸಿದನು.

ಇವತ್ತು ಡಾಹ್ಯಾಭಾಯಿ ಭೆಟ್ಟಿಗೆ ಬಂದಿದ್ದರು. ಬೆಳಿಗ್ಗೆ ಬಾಪೂರವರು ಜೋಶೀ, ನರಸಿಂಹಭಾಯಿ ಮತ್ತು ಹರಿದಾಸರಿಗೆ ಭೆಟ್ಟಿಯಾದರು. ವ್ಹಾಯಿಸ್‌ರಾಯರು ಸರೋಜನಿದೇವಿಯವರಿಗೆ ಭೆಟ್ಟಿಯಾಗಿದ್ದರೆಂದು ಡಾಹ್ಯಾಭಾಯಿ ಹೇಳುತ್ತಿದ್ದರು. "ಸತ್ಯಸಂಗತಿ ಪ್ರಗಟವಾದದ್ದು ಒಳ್ಳೆಯದೇ ಆಯಿತು. ಅಲ್ಲಿ ಹೋಗುವದರಿಂದ ಏನು ಸ್ವರಾಜ್ಯ ಸಿಗುತ್ತಿತ್ತೇ ?" ಎಂದು ಸರೋಜನಿಯವರು ಹೇಳಿದರು. ಜಮುನಾ-ಲಾಲಜಿಯವರನ್ನು ಹತ್ತಿಕ್ಕಲಿಕ್ಕೆ ವಾರ್ಡರನು ಪ್ರಯತ್ನಮಾಡಿದನೆಂಬುದನ್ನು ಕೇಳಿ ತುಂಬ ಆಶ್ಚರ್ಯವೆನಿಸಿತು.

* * *

ಆಶ್ರಮದಿಂದ ಪ್ರತಿ ವಾರ ಟಪಾಲಿನಿಂದ ದೊಡ್ಡ ಪಾಕೀಟುಗಳು ಬರುತ್ತಿದ್ದವು. ಅವುಗಳ ಮೇಲೆ ಪಾರ್ಸಲ್ಲಿಗೆ ಸುತ್ತಿಬರುವ ಬ್ರಾವುನ್ ಪೇಪರ ಅಂಟಿಸಿ ಇಲ್ಲಿ ಹೊಸ ಪಾಕೀಟುಗಳನ್ನು ತಯಾರಿಸಲಾಗುತ್ತಿದೆ. ಈ ಪಾಕೀಟುಗಳು ಬ್ರಾವುನ ಪೇಪರದ ಬೆಲೆಗೇ ಬೀಳುತ್ತವೆಯೆಂದು ನಾನು ಅನ್ನುತ್ತಿದ್ದೆ. ಬಾಪೂ ಹೇಳಿದರು : "ಹೌದು. ಆದರೆ ಅಂಟಿನ ಬಾಟಲಿ ಅಷ್ಟು ಬರುತ್ತಿದೆ." ಮೊದಲು ಸರಿ ತಯಾರಿಸಿ ಹಿಂದಿನಿಂದ ಅದು ಕೆಡದಂತೆ ಮಾಡುವಂಥ ಯಾವುದಾದರೊಂದು ವಸ್ತುವಿನ ಶೋಧ ದಲ್ಲಿದ್ದೆವು. ಬಳಿಕ ಅದರಿಂದ ಮನಸ್ಸನ್ನೇ ತೆಗೆದೆವು ಮತ್ತು ಮಧ್ಯಮಮಾರ್ಗವನ್ನು ಅನುಸರಿಸಲಾಯಿತು. ಇದಕ್ಕೆ ವಲ್ಲಭಭಾಯಿಯವರು : "ಮಧ್ಯಮಮಾರ್ಗಿಗಳಂತೂ ಎಲ್ಲಿಯೋ ಹೋಗಿ ಕುಳಿತಿದ್ದಾರೆ."

* * *

. . . ರ ಮೇಲಿದ್ದ ಹಾಜರಿ ನೋಟೀಸನ್ನು ಹಿಂತೆಗೆದುಕೊಂಡಿದ್ದಾರೆಂಬುದನ್ನು ಓದಿ ನಾನು ಅಂದೆ : ". . . ಇವರೆಲ್ಲರೂ ಒಂದೇ ಪ್ರಕಾರದ ತರ್ಕಕ್ಕೆ ಅಧೀನರಾಗಿದ್ದಾರೆ." ಬಾಪೂ ಹೇಳಿದರು : "ಹೌದು, ದೌರ್ಬಲ್ಯದ ತರ್ಕಕ್ಕೆ ಅಧೀನ ರಾಗಿದ್ದಾರೆ."

ಸರೋಜಿನಿದೇವಿಯವರಿಗೆ ಸಿಮ್ಲಾದಿಂದ ಆಮಂತ್ರಣ ಬಂದಿತ್ತು. ಅಲ್ಲಿ ಹೋಗಬೇಕೋ ಬಾರದೋ ಎಂಬುದರ ಬಗ್ಗೆ ಬಾಪೂ ಅವರ ಅಭಿಪ್ರಾಯ ಕೇಳಲಾ ಗಿತ್ತು. ಬಾಪೂ ತಮ್ಮ ಅಭಿಪ್ರಾಯ ಹೇಳಲು ನಿರಾಕರಿಸಿದರು. ಸರದಾರರು ಡಾಹ್ಯಾಭಾಯಿಯ ಮುಂದೆ ಹೇಳಿ ಕಳಿಸಿದರು : "ಹೇಳು, ಹೋಗಕೂಡದೆಂದು."

ಟಿಪ್ಪಣಿ ಮಾಡುವಂಥ ವಿಶೇಷ ಮಹತ್ವದ ಸಂಗತಿಯೇನೂ ಇಲ್ಲ. ಛಗನಲಾಲ ಜೋಶಿಯವರಿಗೆ ಕಳಿಸುವ ಪುಸ್ತಕಗಳ ಪಟ್ಟಿ ತಯಾರಿಸಲು ಹೇಳಿದರು. ಅದರಲ್ಲಿ ಬ್ರೈಲ್ಸಫೋರ್ಡ, ಕ್ರೋಜಿಯರ ಮತ್ತು ಡ್ಯೂರಂಟರ ಪುಸ್ತಕ
೨೦-೩-೩೨ ಗಳನ್ನು ಸಮೂದಿಸಲಿಕ್ಕೆ ಬೇಡೆಂದರು. ಯಾಕಂದರೆ ಅವು
ರಾಜಕೀಯವೆಂದು ತಿಳಿಯಲಾಗುತ್ತಿದೆ. ಮತ್ತು 'ಕ' ವರ್ಗದವರಿಗೆ ಕೊಡುವದಿಲ್ಲ. ಇವುಗಳ ಪಟ್ಟಿ ಮಾಡುತ್ತ ಮಾಡುತ್ತ ಪ್ರತಿಯೊಂದು ಪುಸ್ತಕದ ಬಗ್ಗೆ ಮಾತು ನಡೆಯುತ್ತಲೇ ಇತ್ತು. ಬಾಪೂ ಹೇಳಿದರು: "'ಸಾಕೇತ' ಓದಿ ತೆಗೆ, ಎರಡು ದಿವಸದ ಕಳಿಸ." ೬೫೦ ಪುಟದ ಕಾವ್ಯವನ್ನು ಎರಡು ದಿವಸಗಳಲ್ಲಿ ಪೂರ್ಣ ಮಾಡುವದು ಕಠಿಣವೆನಿಸಿತು. ಆದರೆ ಬಾಪೂ ವಿಚಾರ ಮಾಡದೆ ಹೇಳುವದಿಲ್ಲವೆಂದು ತಿಳಿದು ಪ್ರಾರಂಭ ಮಾಡಿಬಿಟ್ಟೆ. ಮತ್ತು ರಾತ್ರಿ ಮಲಗುವ ವರೆಗೆ ೩೦೦ ಪುಟ ಓದಿ ಮುಗಿಸಿದೆ. ಅದು ಅಷ್ಟು ಆಕರ್ಷಕವಿತ್ತು. ಬೆಳಗಿನ ಮೂರು ಮುಕ್ಕಾಲು ಗಂಟೆಗೆ ಏಳುವದಿಲ್ಲದಿದ್ದರೆ ಅದನ್ನು ಪೂರ್ತಿ ಮಾಡಿಯೇ ಮಲಗುತ್ತಿದ್ದೆ.

ಸಾಕೇತವನ್ನು ಇಂದು ನಾಲ್ಕು ಗಂಟೆಗೆ ಓದಿ ಮುಗಿಸಿದೆ. ಅಪೂರ್ವವಾದ ಮನೋಹರವಾದ ಕೃತಿಯಿದೆ. ರಾಮಾಯಣ ಕಥೆಯನ್ನು ಮುಖ್ಯ ಆಧಾರವನ್ನಾಗಿಟ್ಟುಕೊಂಡು ಕವಿಯು ಅದರ ಮೇಲೆ ತನ್ನ ಸುಂದರವಾದ
೨೧-೩-೩೨ ಕಲ್ಪನಾಸೃಷ್ಟಿಯನ್ನು ರಚಿಸಿದ್ದಾನೆ. ಭಾಷೆ ಸರಳವೂ ಸುಬೋ-
ಧವೂ ಆಗಿದೆ. ಕಾವ್ಯಪ್ರವಾಹವು ಅಕೃತ್ರಿಮವಾದುದೂ ಪ್ರಸಾದಮಯವಾದುದೂ ಆಗಿದೆ. ಸ್ವಚ್ಛವಾಗಿ ಹರಿಯುವ ಝರಿಯಂತೆ ಮೊದಲಿನಿಂದ ಕೊನೆಯ ವರೆಗೂ ಹರಿಯುತ್ತದೆ. ಎಷ್ಟು ಸಲ ಈ ಕಥೆ ಓದಿದರೂ ಕಣ್ಣೀರು ಉದುರಿಸದೆ ಎಷ್ಟೋ ಪ್ರಸಂಗಗಳನ್ನು ಓದಲಿಕ್ಕೆ ಆಗುವದಿಲ್ಲ. ಇದೇ ಸ್ಥಿತಿಯು ಈ ಸಾರೆಯೂ ಆಯಿತು. ಊರ್ಮಿಲೆಯ ಚಿತ್ರವು ಸ್ವತಂತ್ರವೇ ಇದೆ. ಇದು ನಾವೀನ್ಯಪೂರ್ಣವಾಗಿಯೂ ಶೋಭಾಮಯವಾಗಿಯೂ ಇದೆ. ೯ನೇ ಸರ್ಗವು ಮಾತ್ರ ಆವಶ್ಯಕತೆಗಿಂತ ಹೆಚ್ಚಾಗಿ ಸಂಸ್ಕೃತ ಕವಿಗಳ ಅನುಕರಣವೆನಿಸುತ್ತದೆ. ಆದರೂ ಕೂಡ ಇದೇ ಕಾವ್ಯವು ಮೈಥಿಲೀಶರಣ ಗುಪ್ತರದೊಂದು ಚಿರಕಾಲ ಬಾಳುವ ಕೃತಿಯಾಗಿ ನಿಲ್ಲುವದು. ಇದನ್ನು ಓದುವದು ಮನೋರಂಜಕವಾಗಿದೆ ಇಷ್ಟೇ ಅಲ್ಲ ಪುಣ್ಯಕರವೂ, ಉನ್ನತಿಪ್ರದವೂ ಆಗಿದೆ. ಆರಂಭದಿಂದ ಕೊನೆಯ ವರೆಗೆ ಉನ್ನತಭಾವದಲ್ಲಿ ಇರಿಸುವಂಥ ಪುಸ್ತಕಗಳಲ್ಲಿ ಇದೊಂದಾಗಿದೆ. ಇಂಥ ಪುಸ್ತಕಗಳು ಓದಲಿಕ್ಕೆ ಸಿಗುವದು ಬಹಳ ಅಪರೂಪ.

ನಿನ್ನೆ ಮತ್ತು ಇವತ್ತು ಕೂಡಿ ಬಾಪೂ ಆಶ್ರಮವಾಸಿಗಳಿಗೆ ೪೦ ಪತ್ರಗಳನ್ನು

ಬರೆದರು (ಇಮಾಮ ಸಾಹೇಬರ ಸಂಸ್ಮರಣಗಳ ಹೊರತಾಗಿ) ಅವುಗಳಲ್ಲಿ ಉಲ್ಲೇಖ. ನೀಯವಾದ ಒಂದೆರಡು ಪತ್ರಗಳಲ್ಲಿಯ ವಿಷಯವನ್ನು ಕೊಡುತ್ತೇನೆ. ಜುಗತ-ರಾಮರು ಹೊರಗಿನ ಸ್ಥಿತಿಯ ಉಲ್ಲೇಖಮಾಡುತ್ತ ಕೆಲವು ಜನರು ಗಟ್ಟಿಯಾಗಿ ನಿಂತಿದ್ದಾರೆ. ಕೆಲವರು ಬಿದ್ದಿದ್ದಾರೆ ಎಂದು ಬರೆದಿದ್ದರು. ಅದಕ್ಕೆ ಉತ್ತರರೂಪದಲ್ಲಿ ಬಾಪೂ ಹೀಗೆ ಬರೆದರು :

"ನಿಮ್ಮ ಪತ್ರವನ್ನು ನಾವು ನಿರೀಕ್ಷಿಸಿಯೇ ಇದ್ದೆವು. ಹುಟ್ಟುವವರೆಲ್ಲರೂ ಬದುಕಿ ಉಳಿಯುವದಿಲ್ಲ. ಮತ್ತು ಹವೆ ಕೆಟ್ಟಾಗ ಮೃತ್ಯುಸಂಖ್ಯೆ ಹೆಚ್ಚಾಗುತ್ತದೆ. ಆದುದರಿಂದ ನೀನು ಬರೆದದ್ದು ನೋಡಿ ನನಗೆ ಆಶ್ಚರ್ಯವಾಗಿಲ್ಲ. ಮೃತ್ಯುಸಂಖ್ಯೆ ಹೆಚ್ಚಾಗಿಲ್ಲದ್ದಕ್ಕೆ ಆಶ್ಚರ್ಯವೂ ಆನಂದವೂ ಆಗುತ್ತದೆ. ಸಾವಿಗಾಗಿ ದುಃಖ ಪಡುವದಾದರೂ ಏತಕ್ಕೆ ? ಸಾಯಲಿಕ್ಕೆ ಯೋಗ್ಯರಾದವರ ಸಾವು ಸ್ವಾಗತಾರ್ಹವೇ ಆಗಿದೆ, ಮತ್ತು ಸಾಯುವವರು ಮತ್ತೆ ಹುಟ್ಟುವದಕ್ಕಾಗಿಯೇ ಅಲ್ಲವೇ ? ಅಂದ ಮೇಲೆ ದುಃಖಕ್ಕೆ ಕಾರಣವೇ ಇಲ್ಲ. ಏಕಾಂತದಲ್ಲಿರುವ ಕಲೆಯನ್ನು ಸಾಧಿಸದವನು ಹೊರಗಿನ ಪರಿಸ್ಥಿತಿಯ ಬದಲಾವಣೆಯಿಂದ ಅಶಾಂತನಾಗುತ್ತಾನೆ. ಆದರೆ ಒಬ್ಬನೇ ನಿಲ್ಲಲಿಕ್ಕೆ ಯೋಗ್ಯನಾದವನೇ ಸತ್ಯನಾರಾಯಣನ ಸಾನ್ನಿಧ್ಯವನ್ನು ಪಡೆಯಬಲ್ಲ."

ಬ್ರಹ್ಮಚರ್ಯೆಯನ್ನು ಪಾಲಿಸಲು ಇಚ್ಛಿಸುವ ಒಂದು ಹುಡುಗಿಗೆ ಬಾಪೂ ಬರೆಯುತ್ತಾರೆ :

"ಬ್ರಹ್ಮಚರ್ಯ ಪಾಲನೆಯಲ್ಲಿ ಎಲ್ಲಕ್ಕೂ ಮುಖ್ಯ ವಸ್ತು ಭ್ರಾತೃಭಾವನೆಯ ಸಾಕ್ಷಾತ್ಕಾರ ಮಾಡಿಕೊಳ್ಳುವದರಲ್ಲಿದೆ. ನಾವೆಲ್ಲರೂ ಒಬ್ಬನೇ ತಂದೆಯ ಮಕ್ಕಳಾಗಿದ್ದೇವೆ. ಅವರಲ್ಲಿ ವಿವಾಹ ಎಂತಹದು ? ಊಟವು ಕೇವಲ ಔಷಧರೂಪವಾಗಿರಬೇಕು. ಸ್ವಾದಕ್ಕಾಗಿ ಅಲ್ಲ. ಮನಸ್ಸನ್ನೂ ಶರೀರವನ್ನೂ ಸೇವಾಕಾರ್ಯದಲ್ಲಿ ತೊಡಗಿಸಿರಬೇಕು. ಸತ್ಯನಾರಾಯಣನ ಧ್ಯಾನ ಮಾಡುತ್ತಿರಬೇಕು. ಕೂದಲ ಕತ್ತರಿಸುವ ಧರ್ಮದ ಅರ್ಥವು ಸ್ಪಷ್ಟವಾದರೆ ಲೋಕಲಜ್ಜೆಯನ್ನು ಬಿಟ್ಟು ಕತ್ತರಿಸಬೇಕು. ದೇವರಭಕ್ತಿಗಾಗಿ ದಿನಾಲು ಸೇವಾಕಾರ್ಯದಲ್ಲಿ ತಲ್ಲೀನರಾಗಿರಬೇಕು.

"ಮನೋವಿಕಾರವು ನಮ್ಮ ನಿಜವಾದ ಶತ್ರುವೆಂದು ತಿಳಿದು ದಿನಾಲು ಹೋರಾಡುತ್ತಿರಬೇಕು. ಈ ಯುದ್ಧದ ವರ್ಣನೆ ಮಹಾಭಾರತದಲ್ಲಿದೆ."

ಲೋಜಾನದಲ್ಲಿ God is Truth ( ದೇವರೇ ಸತ್ಯವು ) ಮತ್ತು Truth is God ( ಸತ್ಯವೇ ದೇವರು ) ಎಂಬ ವಿಷಯದ ಮೇಲೆ ಆದ ಪ್ರವಚನದ ವಿಷಯವನ್ನೇ ಬಾಲಕರಿಗೆ ಬರೆದ ಪತ್ರದಲ್ಲಿ ಒಳ್ಳೆ ಸುಂದರ ರೀತಿಯಿಂದ ಚರ್ಚಿಸಲಾಗಿದೆ.

"ನಾನು ಮಾಡಿದ 'ದೇವರ' ವ್ಯಾಖ್ಯೆಯು ನೆನಪಿದೆಯೋ ? ದೇವರು ಸತ್ಯನರೂಪಿಯಾಗಿದ್ದಾನೆ ಎನ್ನುವದರ ಬದಲು ಸತ್ಯವೇ ದೇವರಿದ್ದಾನೆಂದು ನಾನು ಹೇಳುತ್ತೇನೆ. ನನಗೆ ಮೊದಲಿನಿಂದಲೂ ಹೀಗೆ ಅನಿಸಿದ್ದಿಲ್ಲ. ನಾಲ್ಕು ವರ್ಷಗಳ

ಹಿಂದೆ ಮಾತ್ರ ಹೊಳೆಯಿತು. ಆದರೆ ಅಜ್ಞಾನ ದಶೆಯಲ್ಲಿ ಕೂಡ ನನ್ನ ವರ್ತನೆ ಇದೇ ಪ್ರಕಾರದ್ದಿದೆ. ದೇವರನ್ನು ನಾನು ಸತ್ಯರೂಪದಲ್ಲಿಯೇ ಅರಿತೆನು. ಒಂದು ಸಮಯ ಹೀಗಿತ್ತು: ದೇವರ ಅಸ್ತಿತ್ವದಲ್ಲಿಯೇ ನಾನು ಸಂಶಯಪಡುತ್ತಿದ್ದೆ. ಆದರೆ ಸತ್ಯದ ಅಸ್ತಿತ್ವದ ವಿಷಯಕ್ಕೆ ಎಂದೂ ಸಂಶಯವಿದ್ದಿಲ್ಲ. ಈ ಸತ್ಯವು ಕೇವಲ ಜಡವಲ್ಲ, ಆದರೆ ಶುದ್ಧ ಚೈತನ್ಯಮಯವಾಗಿದೆ. ಅದೇ ರಾಜ್ಯವಾಳುತ್ತದೆ. ಆದುದರಿಂದ ದೇವರಿದ್ದಾನೆ. ಈ ವಿಚಾರವು ನಿಮ್ಮ ಹೃದಯಕ್ಕೆ ತಾಗಿದರೆ ನಿಮ್ಮ ಉಳಿದ ಪ್ರಶ್ನೆಗಳು ಇದರಲ್ಲಿಯೇ ಬಂದುಬಿಡುತ್ತವೆ. ಆದರೆ ತಿಳಿಯದಿದ್ದರೆ ಕೇಳಿರಿ. ನನ್ನ ಸಲುವಾಗಿಯಂತೂ ಇದು ಅನುಭವಗಮ್ಯವಿದ್ದಂತೆಯೇ ಇದೆ. ಇದ್ದಂತೆ ಎಂದು ಹೇಳುವ ಕಾರಣವೆಂದರೆ ನನಗೆ ಆ ಸತ್ಯದೇವನ ಸಾಕ್ಷಾತ್ಕಾರವಾಗಿಲ್ಲ. ಕೇವಲ ಅದರ ಭಾಸವಾಗಿದೆ. ಶ್ರದ್ಧೆಯು ಸ್ಥಿರವಾಗಿದೆ.

* * *

ಆಸ್ಟ್ರೇಲಿಯಾದ ಮುಖ್ಯಪ್ರಧಾನರನ್ನು ನಾಶಮಾಡುವ ಹೊಂಚು ಒಂದು Imperialist conspiracy ( ಸಾಮ್ರಾಜ್ಯವಾದಿಗಳ ಹೊಂಚು ) ಎಂದು ಇವತ್ತಿನ ಸುದ್ದಿಗಳ ಮೇಲಿಂದ ಬಾಪೂ ಅವರಿಗೆ ಅನಿಸಿತು. ಆಸ್ಟ್ರೇಲಿಯಾದಲ್ಲಿ ಕೂಲಿಕಾರ ಪಕ್ಷದ ಪ್ರಭಾವವಿದೆ. ಅಂದರೆ ಸಮಾಜವಾದದ ಪ್ರಭಾವವಿದೆ. ಮತ್ತು ಸಮಾಜವಾದ ಅಥವಾ ಸಾಮ್ಯವಾದವನ್ನು ವಿರೋಧಿಸುವದಕ್ಕಾಗಿ Imperialism ( ಸಾಮ್ರಾಜ್ಯವಾದ ) ಅಥವಾ Fascism ( ಫ್ಯಾಸಿಝಮ್ ) ಇರುತ್ತವೆ. ಇದರ ಪ್ರಚಾರ ನಡೆದಿದೆಯೆಂದು ಅನಿಸುತ್ತದೆ. ದಕ್ಷಿಣ ಆಫ್ರಿಕೆಯಲ್ಲಿ ಇದೇ ಆಯಿತಲ್ಲವೇ ? Jameson Raid ( ಜೇಮೀಸನ್ ರೇಡ )ದ ಹಿಂದೆ ಇದಲ್ಲದೆ ಇನ್ನೇನಿತ್ತು ? ಆ ಕ್ರೂಗರನ ಮಂತ್ರಿ, ಮಹಾ ಅಷ್ಟಾವಧಾನಿಯಾದ ಚಾಣಕ್ಯನಂತಿದ್ದನು. ಆದುದರಿಂದ ವಿರೋಧಿಯ ಎಲ್ಲ ಹಂಚಿಕೆಗಳು ನಿರುಪಯುಕ್ತವಾದವು. ಎಲ್ಲರೂ ಹಿಡಿಯಲ್ಪಟ್ಟರು. ವಿಶೇಷ ನ್ಯಾಯಾಲಯದಲ್ಲಿ ಖಟ್ಲೆ ನಡೆಸಿ ಎಲ್ಲರಿಗೂ ಫಾಶೀ ಶಿಕ್ಷೆ ಕೊಡಿಸಲಾಯಿತು.

•

ಇವತ್ತಿನ ಸಣ್ಣ ಪುಟ್ಟ ಅನುಭವಗಳು ಕೂಡ ಬರೆಯಲು ಯೋಗ್ಯವಾಗಿವೆ. ಬೆಳಿಗ್ಗೆ ನಾಲ್ಕು ಗಂಟೆಯ ಪ್ರಾರ್ಥನೆಯ ನಂತರ ನಿಂಬೀ ಹಣ್ಣು, ಜೇನುತುಪ್ಪ
ಕೂಡಿಸಿದ ನೀರು ಕುಡಿಯುತ್ತಾರೆ. ಜೇನುತುಪ್ಪ ಮತ್ತು ನಿಂಬೀ
೨೨-೩-೩೨ ಹಣ್ಣಿನ ರಸದ ಮೇಲೆ ಎಸರಾದ ನೀರು ಸುರುವಲಾಗುತ್ತಿದೆ.
ನೀರು ಕುಡಿಯಲಿಕ್ಕೆ ಬರುವಂತೆ ಆಗುವವರೆಗೆ ನಾವು ಕೆಲವು
ನಿಮಿಷ ಹಾಗೆಯೇ ಕೂಡುತ್ತೇವೆ. ಅಥವಾ ಕೂತಲ್ಲಿಯೇ ಓದುತ್ತೇವೆ. ನಿನ್ನೆನಿಂದ ಬಾಪೂ ತಮ್ಮ ನೀರಿನಮೇಲೆ ಬಟ್ಟೆಯ ತುಂಡನ್ನು ಮುಚ್ಚಲಿಕ್ಕೆ ಪ್ರಾರಂಭ ಮಾಡಿದರು. ಇವತ್ತು ಬೆಳಿಗ್ಗೆ ಕೇಳಿದರು: " ಮಹಾದೇವ ಈ ಬಟ್ಟೆಯನ್ನು ಏಕೆ

ಮುಚ್ಚುತ್ತೀನೆಂಬುದು ನಿನಗೆ ಗೊತ್ತೆ? ಹವೆಯಲ್ಲಿ ಹೇಳಲಿಕ್ಕೆ ಬಾರದಷ್ಟು ಸಣ್ಣ ಸಣ್ಣ ಜಂತುಗಳಿರುತ್ತವೆ. ಅವು ನೀರಿನ ಉಗಿಯಿಂದ ಒಳಗೆ ಬೀಳುವ ಸಂಭವವಿರುತ್ತದೆ. ಇದರಿಂದ ಅವುಗಳ ರಕ್ಷಣೆಯಾಗುತ್ತದೆ.'' ವಲ್ಲಭಭಾಯಿಯವರು ಎಂದಿನಂತೆ ಹೇಳಿದರು : " ಈ ಮಟ್ಟದ ವರೆಗೆ ನಮ್ಮಿಂದ ಅಹಿಂಸೆಯನ್ನು ಪಾಲಿಸುವದಾಗದು.'' ಬಾಪೂ ನಗುತ್ತ ನುಡಿದರು : " ಅಹಿಂಸೆಯನ್ನು ಪಾಲಿಸುವದಾಗುವದಿಲ್ಲ ಆದರೆ ಸ್ವಚ್ಛತೆಯನ್ನು ಪಾಲಿಸಲಿಕ್ಕಾಗುತ್ತಿದೆಯಲ್ಲವೆ ? ''

*          *          *

ಅನ್ಯ ವೃತ್ತಪತ್ರಗಳು ತಮ್ಮ ಗ್ರಾಹಕರನ್ನು ಹೆಚ್ಚಿಸುವದಕ್ಕಾಗಿ ಎಷ್ಟೋ ಯುಕ್ತಿಗಳನ್ನು ಹೂಡಿವೆ. ಇದೇ ಪ್ರಕಾರ ಕ್ರಾನಿಕಲ್‌ದಲ್ಲಿ ಅನೇಕ ಪ್ರಕಾರದ ಮೇಲಾಟಗಳು ಬರುತ್ತವೆ. ಇವತ್ತು ಕೆಲವು ಉದ್ಯೋಗಗಳ ಚಿತ್ರಗಳನ್ನು ಕೊಟ್ಟಿದ್ದರು ಮತ್ತು ಆ ಉದ್ಯೋಗಗಳ ಹೆಸರಿನ ಮೇಲಾಟವಿತ್ತು. ಬಾಪೂ ಹೇಳತೊಡಗಿದರು : " ವಲ್ಲಭಭಾಯಿ, ಹೆಸರುಗಳನ್ನು ಸೂಚಿಸಿರಿ. ಇನಾಮು ಬೇಕಲ್ಲವೆ ? ನಿಜವಾಗಿ ಪತ್ರಗಳನ್ನು ಬರೆಯಿಸುವ ಕೆಲಸವನ್ನು ಬದಿಗಿಟ್ಟು ಬಾಪೂ ಈ ವಿನೋದದಲ್ಲಿ ತೊಡಗಿದರು. ಎಲ್ಲ ಹೆಸರುಗಳನ್ನು ಬರೆಯುವದಾದಮೇಲೆ ನನಗೆ ಅಂದರು : " ಮಹದೇವ ಅ, ಬ, ಕ, ರ ಹೆಸರಿನಿಂದ ಇವುಗಳನ್ನು ಕಳಿಸಿಕೊಡು.'' ಸಾಯಂಕಾಲ ನಾನು ಕೇಳಿದೆ : " ಬಾಪೂ, ನಾನು ಇವುಗಳನ್ನು ಕಳಿಸಬೇಕೆಂದು ನೀವು ನಿಜವಾಗಿಯೂ ಇಚ್ಛಿಸುತ್ತೀರಾ ? " ಬಾಪೂ ಹೇಳಿದರು : " ಇದರಲ್ಲೇನಿದೆ ? ಇದರಲ್ಲಿ ಸ್ವಲ್ಪ ಬುದ್ಧಿಯ ಉಪಯೋಗವಿದ್ದು ನಿರ್ದೋಷ ಮನೋರಂಜನೆಯಿದೆ. '' ಇದರ ಉತ್ತರಗಳನ್ನು ಡಾಹ್ಯಾಭಾಯಿಯ ಮುಖಾಂತರ ಕಳಿಸುವದನ್ನು ಗೊತ್ತುಮಾಡಿದೆವು.

*          *          *

ಅನಿವಾರ್ಯ ಪ್ರಸಂಗ ಬಂದಾಗ ಮಾತ್ರ ಬಾಪೂ ಸುಪರಿಂಟೆಂಡೆಂಟರಿಂದ ಯಾವುದಾದರೊಂದು ಸವಲತ್ತು ಬೇಡುತ್ತಾರೆ. ಬಾಪೂಜಿಯವರಿಗೆ ಖಗೋಲ ಮತ್ತು ಆಕಾಶದರ್ಶನದ ನಾದ ಇತ್ತೀಚೆಗೆ ಬಹಳ ಹಿಡಿದಿದೆ. ಎಂತಲೇ ಅವರು ಗ್ರಹಣ ಹಿಡಿಯುವದಕ್ಕಿಂತ ಎಷ್ಟೋ ದಿನ ಮೊದಲಿನಿಂದಲೆ ಅದು ಯಾವಾಗ ಹಿಡಿಯುವದು? ಎಲ್ಲಿಂದ ಕಾಣಿಸುವದು? ಎಂದು ಮಾತಾಡತೊಡಗಿದ್ದರು. ಇವತ್ತು ಬೆಳಗಿನಲ್ಲಿ ಸುಪರಿಂಟೆಂಡೆಂಟರನ್ನು ಕೇಳಿದರು : " ಎದುರಿಗಿನ ಬಾಗಿಲು ಮತ್ತು ಗೋಡೆಯು ಗ್ರಹಣ ನೋಡುವದಕ್ಕೆ ಅಡ್ಡಬರುವವು. ಯಾಕಂದರೆ ಆರೂ ಕಾಲು ಗಂಟೆಗೆ ಹಿಡಿಯುತ್ತದೆ ಮತ್ತು ಆ ಕಾಲಕ್ಕೆ ಚಂದ್ರನು ಗೋಡೆಯ ಕೆಳಗೆ ಇರುವದರಿಂದ ನೋಡಲಿಕ್ಕೆ ಬರುವದಿಲ್ಲ. ಆದರೆ ನೀವು ಬಾಗಿಲನ್ನು ತೆರೆಯಿಸಿದರೆ ನಾವು ಗ್ರಹಣವನ್ನು ನೋಡಬಹುದು.'' ಸುಪರಿಂಟೆಂಡೆಂಟರು ' ಆಗಲಿ ' ಎಂದರು. ಪಾಪ ಜೇಲರ ಸಾಹೇಬರು ಆರು ಗಂಟೆಗೆ ಬಂದು ಕುಳಿತರು. ಆರೂಕಾಲು ಆರೂವರೆ

ಗಂಟೆಗೆ ನಾವು ನೋಡಲು ಹೊರಟೆವು. ಆದರೆ ಚಂದ್ರನು ಸತ್ಯಾಗ್ರಹ ಹೂಡಿದನು. ಎದುರಿನ ಕ್ಷಿತಿಜದ ಮೇಲಿನ ಮೋಡಗಳಲ್ಲಿ ಅಡಗಿಕೊಂಡವನು ಅಡಗಿಕೊಂಡೇ ಬಿಟ್ಟನು. ಅವನು ಹೀಗೆ ಅಣಕವಾಡುತ್ತಿದ್ದಂತೆ ಭಾಸವಾಯಿತು. ‘ ನಿಮಗೆ ಗ್ರಹಣ ಹಿಡಿದದ್ದರಿಂದ ನೀವು ಜಗತ್ತಿನಲ್ಲಿ ಯಾರಿಗೂ ಕಾಣಿಸಿಕೊಳ್ಳುವದಿಲ್ಲ, ಅಂದ ಮೇಲೆ ಏತಕ್ಕಾಗಿ ನನ್ನ ಗ್ರಹಣ ನೋಡಬಯಸುತ್ತೀರಿ ?’ ಏಳು ಹೊಡೆಯುವ ವರೆಗೆ ದಾರಿ ಕಾಯ್ದೆವು. ಪ್ರಾರ್ಥನೆಯ ಸಮಯವಾಯಿತು. ಬಾಪೂಗೆ ಬೇಸರವಾಯಿತು. ಮರುಕದ ಧ್ವನಿಯಲ್ಲಿ ವಲ್ಲಭಭಾಯಿಯವರಿಗೆ ಮಾತಾಡಿದರು : “ ಗ್ರಹಣವಂತೂ ಕಾಣುವದಿಲ್ಲ.” ಜೇಲರರಿಗೆ ಹೇಳಿದರು : “ ಇನ್ನು ನೀವು ಹೊರಡಿರಿ. ನಿಮಗೆ ತೊಂದರೆ ಕೊಟ್ಟದ್ದಕ್ಕಾಗಿ ಕ್ಷಮಿಸಿರಿ.” ಜೇಲರರು ಹೇಳಿದರು : “ ಇಲ್ಲ ಇನ್ನೂ ೫-೧೦ ನಿಮಿಷ ತಡೆಯಬಹುದು. ಇದುವರೆಗೆ ತಡೆದಿರುವಿರಿ. ಇನ್ನೂ ಸಲ್ಪ ಹೊತ್ತು ನೋಡಬಹುದು. ಬಹುತರವಾಗಿ ಮೋಡಗಳು ಚದುರಿ ಚಂದ್ರನು ಕಾಣಬಹುದು.” ತಡೆದೆವು. ಏಳೂಕಾಲು ಆಯಿತು. ಕೊನೆಗೆ ಬಾಪೂ ನಿರಾಶರಾಗಿ ಹೇಳಿದರು : “ ಸಾಕು. ಇನ್ನು ನೀವು ಹೋಗಬಹುದು. ನಾವು ಪ್ರಾರ್ಥನೆ ಮಾಡುವೆವು.” ನಾನು ಬಾಪೂರನ್ನು ಕೇಳಿದೆ: “ ಬಾಪೂ, ಗ್ರಹಣ ನೋಡಲಿಕ್ಕೆ ಇದಕ್ಕೂ ಮೊದಲು ನೀವು ಎಂದಾದರೂ ಇಷ್ಟು ಉತ್ಸುಕತೆಯಿಂದ ದಾರಿ ಕಾಯ್ದಿದ್ದೀರಾ ?” ಬಾಪೂ : “ ಇಲ್ಲ, ಎಂದೂ ಇಲ್ಲ. ಇದು ನನ್ನ ಆಕಾಶದರ್ಶನದ ಹೊಸ ಹವ್ಯಾಸದ ಪರಿಣಾಮವಾಗಿದೆ.” ನಾನು: “ ಸಣ್ಣವರಿದ್ದಾಗ ?” ಬಾಪೂ: “ ಸಣ್ಣವ-ನಿದ್ದಾಗ? ಆಗಂತೂ ಅವ್ವನು ಗ್ರಹಣ ನೋಡಲಿಕ್ಕೆ ಎಲ್ಲಿ ಕೊಡುತ್ತಿದ್ದಳು ? ಆಕೆಯು ಹೇಳುತ್ತಿದ್ದಳು: ‘ ಇಲ್ಲ ಮಗು. ನೀನು ಗ್ರಹಣ ನೋಡಬಾರದು. ನೋಡಿದರೆ ಏನಾದರೂ ಅನಿಷ್ಟ ಸಂಭವಿಸಬಹುದು.’ ಇದನ್ನು ಕೇಳಿ ನಾವು ಸುಮ್ಮನಾಗುತ್ತಿದ್ದೆವು ”

ರಾತ್ರಿ ಪತ್ರ ಬರೆಯಿಸಲಿಕ್ಕೆ ಕುಳಿತರು. ಒಬ್ಬ ಸರಕಾರಿ ಪೆನ್ಸನರನ ಪತ್ರವಿತ್ತು. ಅವನಿಗೆ ೭೦ ವರ್ಷ ವಯಸ್ಸಾಗಿತ್ತು. ಮತ್ತು ದಮ್ಮು ಬೇನೆಯು ತೊಂದರೆ ಕೊಡುತ್ತಿತ್ತು. “ ನೀವು ಅನೇಕ ಪ್ರಯೋಗ ಮಾಡಿದ್ದೀರಿ. ಮತ್ತು ನೈಸರ್ಗಿಕ ಉಪಾಯಗಳಿಂದ ರೋಗಗಳನ್ನು ಗುಣ ಮಾಡಿದ್ದೀರಿ. ಅಂದ ಮೇಲೆ ನನಗೆ ಯಾವುದಾದರೂ ಉಪಾಯ ಸೂಚಿಸಬಹುದಲ್ಲವೇ ?” ಎಂದು ಕೇಳಿದ್ದನು. ಬಾಪೂಗೆ ನಾನು ಹೇಳಿದೆ: “ ಇಂಥ ಪತ್ರಗಳಿಗೆಲ್ಲ ಎಲ್ಲಿ ಉತ್ತರಕೊಡುತ್ತ ಕೂಡುತ್ತೀರಿ?” ಬಾಪೂ “ ಆಗಲಿ ” ಎಂದು ಪತ್ರವನ್ನು ಹರಿದು ಹಾಕಿದರು. ಆಗ ಸರದಾರರು “ ಯಾಕೆ, ಅವರಿಗೂ ಬರೆಯಿರಲ್ಲ. ಉಪವಾಸ ಮಾಡು. ಸೊಪ್ಪಿನ ಪಲ್ಲೆ ತಿನ್ನು. ಕುಂಬಳಕಾಯಿ ತಿನ್ನು. ಸೋಡಾ ಕುಡಿ.” ಎಂದು ಅಂದರು. ಬಾಪೂ ಗಹಗಹಿಸಿ ನಕ್ಕು ನನಗೆ ಹೇಳಿದರು: “ ಮಹದೇವ ಆ ಕಾಗದ ತೆಗೆದುಕೊ. ನನಗೆ ಅದಕ್ಕೆ ಉತ್ತರ ಬರೆಯುವದಿದೆ.” ನಿಜವಾಗಿಯೂ ಪತ್ರ ಬರೆಯಿಸಿದರು. ಆದರ

ಸಾರಾಂಶ ಹೀಗಿತ್ತು: ‘ ನೀವು ಡಾ. ಮುಥುಗೆ ಬರೆಯಬೇಕು. ಆದರೆ ನನ್ನ ಅಶಾಸ್ತ್ರೀಯವಾದರೂ ಅನುಭವಜ್ಞಾನದಿಂದ ಹೇಳುವದಾದರೆ, ಮೂರು ಉಪವಾಸ ಮಾಡಬೇಕು. ಆ ಮೇಲೆ ಹಾಲು ಕಿತ್ತಳೆ ಹಣ್ಣಿನ ರಸ ತೆಗೆದುಕೊಂಡು ಪಾರಣೆ ಮಾಡಬೇಕು. ಇದನ್ನು ಮಾಡಿ ನೋಡಿರಿ. ವ್ಯತ್ಯಾಸ ಕಾಣುವದು. ” ಇಷ್ಟು ಬರೆಯಿಸಿದ ಮೇಲೆ ಅಂದರು : “ ಈ ಪ್ರಯೋಗವನ್ನು ಚೆನ್ನಾಗಿ ಮಾಡಿ ನೋಡಿದ್ದೇನೆ. ಬಹಾದ್ದೂರಸಿಂಗನೆಂಬ ಹೆಸರಿನ ಮನುಷ್ಯನಿಗೆ ನೈಸರ್ಗಿಕ ಉಪಾಯ ಮಾಡಲಾಯಿತು. ಅವನಿಗೆ ಗುಣವಾದ್ದರಿಂದ ಅವನು ತನ್ನ ಮಿತ್ರನಾದ ಲುಟಾವನಸಿಂಗನನ್ನು ನನ್ನ ಕಡೆಗೆ ಕರೆದುಕೊಂಡು ಬಂದ. ಅವನು ನನ್ನ ಪಕ್ಷಗಾರನೂ ಇದ್ದ. ಆ ಕಾಲಕ್ಕೆ ಪಕ್ಷಗಾರ ಜನರು ಈ ರೋಗ ಕುರಿತು ಮಾತನಾಡುತ್ತಿದ್ದರು. ಮತ್ತು ನನಗೆ ಉಪಾಯಗಳನ್ನು ಕೇಳುತ್ತಿದ್ದರು. ಲುಟಾವನಸಿಂಗನಿಗೆ ನಾನು ಉಪವಾಸ ಮಾಡಿಸಿ ಬಳಿಕ ಅವನನ್ನು ಅನ್ನ, ಹಾಲು, ಕಿತ್ತಳೆಹಣ್ಣಿನ ತೋಟಿಯ ಪಾಕ ಇವುಗಳ ಮೇಲೆ ಇಟ್ಟೆನು. ಒಂದು ತಿಂಗಳಲ್ಲಿ ಅವನ ದಮ್ಮು ಕಡಿಮೆಯಾಗುತ್ತ ಬಂತು. ಅವನಿಂದ ಬೀಡಿಯನ್ನು ಬಿಡಿಸಿದ್ದೆನು. ಅಲ್ಲಿ ನಾವು ಮಲಗುವ ದೊಡ್ಡ ಕೋಣೆಯಿತ್ತು. ಅದರಲ್ಲಿ ೫-೬ ಜನರು ಮಲಗುತ್ತಿದ್ದರು. ಒಂದು ದಿನ ಹೀಗಾಯಿತು. ನಾನು ಹೊರಗೆ ಮಲಗಿದ್ದೆ. ಲುಟಾವನಸಿಂಗನು ಒಳಗೆ ಮಲಗಿದ್ದ. ನನ್ನ ಹತ್ತಿರ ಟಾರ್ಚ ಯಾವಾಗಲೂ ಇರುತ್ತಿತ್ತು. ಬೀಡಿ ಹೊತ್ತಿಸುವದನ್ನು ನೋಡಿದ ಕೂಡಲೆ ನಾನು ‘ ಟಾರ್ಚ ’ ಹೊತ್ತಿಸಿದೆ. ಲುಟಾವನಸಿಂಗನು ಲಜ್ಜಿತನಾಗಿ ನನ್ನ ಕಾಲು ಹಿಡಿದು ಹೇಳಿದ: “ ನಾನು ಇನ್ನೆಂದೂ ಸೇದುವದಿಲ್ಲ. ಈ ಹರಾಮಖೋರ ಮನಸ್ಸು ಕೇಳಲೊಲ್ಲದು ಏನು ಮಾಡಲಿ ? ” ಇದರ ಮೇಲೆ ಅವನು ಬೀಡಿಯನ್ನು ಎಂದೂ ಸೇದಲಿಲ್ಲವೆಂದು ನನಗೆನಿಸುತ್ತದೆ. ಮತ್ತು ದಮ್ಮಂತೂ ಹೋಗಿಯೇ ಬಿಟ್ಟಿತು.

* * *

ಇವತ್ತು ಬಾಪೂ ಅವರ ಸೂಚನೆಯ ಪ್ರಕಾರ ಕುಕ್ಕರ, ಅಕ್ಕಿ, ಬೇಳೆ ಮುಂತಾದವುಗಳನ್ನು ತರಿಸಲಾಯಿತು. ವಲ್ಲಭಭಾಯಿ ಅಂದರು : “ ಮೂರು ತಿಂಗಳಿಂದ ಪಥ್ಯದ ಊಟ ಸಿಗುತ್ತಿತ್ತು. ಇನ್ನು ನೀನು ಎಂತಹ ಊಟ ಮಾಡಿಸುತ್ತೀ ಎಂಬುವದನ್ನು ನೋಡುವೆನು.” ಬಾಪೂ ಒಳ್ಳೆಯ ಪ್ರೇಮದಿಂದ ಈ ಬದಲಾವಣೆಯನ್ನು ಸೂಚಿಸಿದರು. ಆದರೆ ಈಗ ನಡೆದ ಚಪಾತಿ, ಬೇಯಿಸಿದ ಸೊಪ್ಪು ಮತ್ತು ಹಾಲಿನ ಪ್ರಯೋಗಗಳಲ್ಲಿ ಬದಲಾವಣೆಯಾಗಬೇಕೆಂದು ಅವರ ಒಪ್ಪಿಗೆಯಿದ್ದಂತೆ ಕಾಣಲಿಲ್ಲ. ‘ **जानामि धमं न च मे प्रवृत्तिः** ’ ಎಂಬಂತೆ ಪ್ರಸಂಗವೊದಗಿತು. ಬಾಪೂ ಅವರ ತಂದೆಯು ಚಿಕ್ಕಂದಿನಲ್ಲಿ ಅವರಿಗೆ ನಾಟಕ ನೋಡಲಿಕ್ಕೆ ಒಪ್ಪಿಗೆ ಕೊಟ್ಟಂತೆಯೆ ಈ ಮಾತೂ ಅಲ್ಲವಷ್ಟೆ ! ಎಂದು ಒಂದು ಕ್ಷಣಹೊತ್ತು ಅನಿಸಿತು.

ಬಾಪೂ From Adam's Peak to Elephanta ( ಫ್ರಾಮ್ ಆ್ಯಡಮ್ಸ

ಪೀಕ ಟು ಎಲೆಫಂಟಾ ) ಮುಗಿಸಿ ಸ್ಟೋಕ್ಸನ ಪುಸ್ತಕ ತೆಗೆದುಕೊಂಡರು. ಓಹೋ, ಮರೆಯಿತು. * ಮಘನ ವಿಷಯಕ್ಕೆ ಮೈಥಿಲೀಶರಣ ಬಾಬೂ ಅವರು ಬರೆದ 'ಅನಘ' ಎಂಬ ಹೆಸರಿನ ಚಿಕ್ಕ ಹೊತ್ತಿಗೆಯನ್ನು ಬಾಪೂ ಒಂದು ದಿನದಲ್ಲಿ ಓದಿ ಮುಗಿಸಿದರು. ಮತ್ತು ನನಗೂ ಕೂಡ ಓದಲು ಆಗ್ರಹಮಾಡಿದರು.

ಹೇಮಪ್ರಭಾದೇವಿಯ ಸಾಧುತ್ವ, ಕುಶಲತೆ, ಧೈರ್ಯ, ಸಾಹಸ ಮತ್ತು ಉದ್ಯೋಗಶೀಲತೆ ಇವುಗಳ ವಿಷಯಕ್ಕೆ ಬಾಪೂ ನಿನ್ನೆಯೇ ನಾರಾಯಣದಾಸರಿಗೆ ಬರೆದ ಪತ್ರದಲ್ಲಿ ವರ್ಣಿಸಿದ್ದರು. ಈ ಭಗಿನಿಯದೊಂದು ಕರುಣಾಪೂರ್ಣ ಪತ್ರ ಬಂದಿತ್ತು. ಅದರಲ್ಲಿ ಅವರು ಹೀಗೆ ಕೇಳಿದ್ದರು: "ಈ ಮಾನವ ದೇಹವಿದ್ದಾಗ ದೇವರ ದರ್ಶನವಾಗಬಲ್ಲದೋ ?" ಅದಕ್ಕೆ ಬಾಪೂ ಉತ್ತರಿಸಿದರು: "ಮನುಷ್ಯ ದೇಹವಿದ್ದಾಗ ದೇವರ ದರ್ಶನವಾಗಬಲ್ಲದೊ ಇಲ್ಲವೊ ಎಂಬ ಪ್ರಶ್ನೆ ಗೀತಾಭಕ್ತರ ಮನಸ್ಸಿನಲ್ಲಿ ಉದ್ಭವಿಸುವದೇ ಇಲ್ಲ. ಅವನು ಕರ್ಮ ಮಾಡಲಿಕ್ಕೆಮಾತ್ರ ಅಧಿಕಾರಿ, ಫಲದ ಅಧಿಕಾರಿಯಲ್ಲ. ಮತ್ತು ಯಾವ ಮಾತಿನ ಅಧಿಕಾರವಿಲ್ಲವೊ ಅದನ್ನು ಕುರಿತು ವಿಚಾರಮಾಡಿ ಪ್ರಯೋಜನವೇನು ? ಆದರೂ ದೇಹವಿರುವವರೆಗೆ ಪೂರ್ಣ ಸಾಕ್ಷಾತ್ಕಾರವು ಅಸಂಭವವು. ನಾವು ನೇರವಾಗಿ **ಆತನ** ವರೆಗೂ ಅವಶ್ಯ ಹೋಗಿ ಮುಟ್ಟುತ್ತೇವೆ. ಆದರೆ ಶರೀರವಿರುವದರಿಂದ ದ್ವಾರಪ್ರವೇಶವು ಅಸಂಭವವೆಂದೆನಿಸುತ್ತದೆ. ದೇವರ ವಿರಹದ ದುಃಖವು ನಮಗೆ ಯಾವಾಗಲೂ ಇರಬೇಕು. ಅದು ಇರದಿದ್ದರೆ ಪ್ರಯತ್ನ ಬಂದಾಗುವದು ಅಥವಾ ಶಿಥಿಲವಾಗುವದು. ವಿರಹದುಃಖದ ಪರಿಣಾಮವು ನಿರಾಶೆಯಾಗಿರಬಾರದು, ಆಶೆಯಾಗಿರಬೇಕು; ಆಲಸ್ಯವಾಗಿರಬಾರದು, ಹೆಚ್ಚೆಚ್ಚು ಉದ್ಯೋಗಶೀಲತೆಯಾಗಿರಬೇಕು. ಪ್ರಯತ್ನವು ಎಷ್ಟು ಅಲ್ಪವಾಗಿದ್ದರೂ ಅದು ಎಂದೂ ವ್ಯರ್ಥಹೋಗುವದಿಲ್ಲ. ಇದು ದೇವರ ಅಭಿವಚನವಿದೆ. ಆದಕಾರಣ ನಮ್ಮ ವಿರಹದುಃಖವು ಆನಂದದಾಯಕವಾಗಿರಬೇಕು. ಯಾಕೆಂದರೆ ಒಂದಿಲ್ಲೊಂದು ದಿನ ಸಾಕ್ಷಾತ್ಕಾರವಾಗದೆ ಇರಲಾರದೆಂದು ನಮಗೆ ವಿಶ್ವಾಸವಿರಬೇಕು.

ಹಿಂದಿನ ಸೋಮವಾರ ಬರೆದ ಪತ್ರಗಳಲ್ಲಿ ಒಂದನ್ನು ಕುರಿತು ಬರೆಯುವದು ಉಳಿದು ಹೋಗಿದೆ. ಈ ಪತ್ರದಲ್ಲಿ ಬಾಪೂ ಒಂದು ಹೊಸ ವಿಚಾರವನ್ನು ಇಟ್ಟಿದ್ದರು:

೨೩-೩-'೩೨ ಹಿಂದುಸ್ತಾನವು ಎಲ್ಲಕ್ಕಿಂತಲೂ ಏಕೆ ಪ್ರಿಯವಾಗಿದೆ ? ಇದರ ಕಾರಣವು ಇದು ನನ್ನದೆಂಬುದಲ್ಲ. ಆದರೆ ಇದರಲ್ಲಿ ಎಲ್ಲಕ್ಕೂ ಹೆಚ್ಚು ಉತ್ತಮಗುಣಗಳಿವೆ ಎಂದು. ಗೌರವಶಾಲಿಯಿದ್ದಾಗ್ಯೂ ಅದು ಗುಲಾಮವಿದೆಯೆಂಬುದೇನೋ ನಿಜ; ಆದರೆ ಇದು ಸಹ ಅದರ ಉತ್ತಮತನವೇ ಆಗಿದೆ. ಎರಡನೆಯ ಯಾವದೇ ರಾಷ್ಟ್ರವನ್ನು ಗುಲಾಮವನ್ನಾಗಿ ಮಾಡುವ ಬದಲು

* ಮಘ — ಮಹಾತ್ಮಾ ಬುದ್ಧನ ಒಬ್ಬ ಶಿಷ್ಯ.

ಅದು ತಾನೇ ಗುಲಾಮವಾಗಿದೆ. ದುಷ್ಟತನ ಮತ್ತು ಗುಲಾಮಗಿರಿಗಳಲ್ಲಿ ಯಾವು ದಾದರೊಂದನ್ನು ಆರಿಸುವದಾದರೆ ಗುಲಾಮಗಿರಿಯೇ ಹೆಚ್ಚು ಒಪ್ಪುವಂತಹದಾಗಿದೆ. ಈ ಎಲ್ಲ ವಿಚಾರಗಳು ಅಹಿಂಸೆಯಿಂದ ಉದ್ಭೂತವಾಗುತ್ತವೆಂಬುದು ಸ್ಪಷ್ಟವಿದೆ.

ಅಹಿಂಸೆಯ ಇನ್ನೊಂದು ಮಾದರಿಯನ್ನು ನೋಡಿ. ವಲ್ಲಭಭಾಯಿಯವರು ಸುಪರಿಂಟೆಂಡಂಟರನ್ನು ನಗೆಯಾಡಿದಾಗೆಲ್ಲ ಬಾಪೂ ಹೇಳುತ್ತಿದ್ದರು: "ಹಾಗಲ್ಲ ವಲ್ಲಭಭಾಯಿ. ನೀವು ಅನ್ಯಾಯಮಾಡುತ್ತೀರಿ. ಅವರ ದೋಷವಿಲ್ಲ. ಅವರ ಕೈಯಲ್ಲಿದ್ದುದನ್ನೆಲ್ಲ ಮಾಡುತ್ತಾರೆ." ಆದರೆ ಇಂದಿನ ಪ್ರಸಂಗವು ಪರೀಕ್ಷೆಯದಾಗಿತ್ತು. ಬಾಪೂ ಅವರಿಗೆ ಕೈದಿಗಳನ್ನು ಭೆಟ್ಟಿಯಾಗಲು ಒಪ್ಪಿಗೆ ಸಿಕ್ಕ ದಿನವೇ ಸ್ತ್ರೀಯರನ್ನೂ ಭೆಟ್ಟಿಯಾಗುವ ಬೇಡಿಕೆಯನ್ನು ಮಾಡಲಾಗಿತ್ತು. ಸುಪರಿಂಟೆಂಡಂಟರು ಸಿಟ್ಟಿಗೆದ್ದಿದ್ದರು. ಕೊನೆಗೆ ಪತ್ರ ಬರೆಯುವ ಒಪ್ಪಿಗೆಯನ್ನು ತಮ್ಮ ಆಫೀಸರರಿಂದ ತೆಗೆದುಕೊಂಡು ಬಂದಿದ್ದರು. ಈ ಪತ್ರವನ್ನು ಬಾಪೂ ಬರೆದದ್ದೂ ಆಯಿತು. ಆದರೂ ಕೂಡ ಅವರು, ತಾವು ಅದನ್ನು ಕೊಡಲು ಮರೆತೆನೆಂದು ಹೇಳಿದರು. ವಸ್ತುತ: ಅವರು ಮರೆತಿದ್ದಿಲ್ಲ. ಆದರೆ ಅಲ್ಲಿ ಉಪವಾಸ ನಡೆದ ಕಾರಣ ಅವರು ಅಲ್ಲಿಗೆ ಹೋಗಿದ್ದಿಲ್ಲ. ಇಷ್ಟರಲ್ಲಿಯೇ ಅಕಸ್ಮಾತ್ತಾಗಿ ಗಂಗಾಬಹನ ಝವೇರಿಯವರು ಭೆಟ್ಟಿಗಾಗಿ ಬಂದರು. ಅವರು ನಾನೀಬಹನರಿಗೆ ಭೆಟ್ಟಿಯಾಗಿ ಬಂದಿದ್ದರು. ಕಾರಣ ಅವರಿಂದ ಉಪವಾಸದ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದವು. ಸುಪರಿಂಟೆಂಡಂಟರು ಅಲ್ಲಿ ಹೋಗಲು ಒಲ್ಲೆನ್ನುತ್ತಾರೆ. ಯಾಕೆಂದರೆ ಈ ಜನರು ಉಪವಾಸ ಬಿಟ್ಟಾಗಲೇ ಹೋಗುತ್ತೇವೆನ್ನುತ್ತಾರೆ. ಈ ಮಾತು ಬಾಪೂ ಅವರಿಗೆ ಅಸಭ್ಯತನದ್ದೆನಿಸಿತು. ಮತ್ತು ಇವತ್ತು ಸುಪರಿಂಟೆಂಡಂಟರಿಗೆ ಸೌಮ್ಯತನದಿಂದಲೇ ಏಕಾಗಲೊಲ್ಲದು ಬಹಳ ಕಠೋರ ಶಬ್ದಗಳನ್ನು ಉಪಯೋಗಿಸಬೇಕಾಯಿತು. ಅವರು ಸುಪರಿಂಟೆಂಡಂಟರಿಗೆ: "ನಾನು ನಿಮ್ಮ ಆಫೀಸರನಾಗಿದ್ದರೆ ಇದೇ ಮಾತಿನ ವಿಷಯಕ್ಕೆ ನಿಮ್ಮನ್ನು ಸಸ್ಪೆಂಡಮಾಡುತ್ತಿದ್ದೆ." ಅವರು ಕೇಳುತ್ತಾ ಇದ್ದರು. ಅಲ್ಲಿ ಹೋಗಲು ಮನಸ್ಸಿನಿಂದಲೋ ಮನಸ್ಸಿಲ್ಲದೆಯೋ ಅವರು ಇಚ್ಛೆಯನ್ನು ಪ್ರಕಟಮಾಡಿದರು. ಆದರೆ ಸಾಯಂಕಾಲದ ವರೆಗೆ, ರಾತ್ರಿಯ ವರೆಗೆ ಉತ್ತರ ಬರಲಿಲ್ಲ. ನನಗೆ ಈ ಮನುಷ್ಯನ ಜಡತ್ವದ ಬಗ್ಗೆ ಆಶ್ಚರ್ಯವಾಯಿತು. ಬಾಪೂ ಅಂದರು: "ದೇಶೀ ಸುಪರಿಂಟೆಂಡಂಟರ ವಿರುದ್ಧ ಹೋರಾಡುವ ಪ್ರಸಂಗವು ಕೂಡ ನನ್ನ ಹಣೇಬರಹದಲ್ಲಿ ಬರೆದಿರಬಹುದೆ? ಆಗಲಿ, ಬರೆದಿದ್ದರೆ ನೋಡಿಕೊಳ್ಳುವೆನು." ಇದುವರೆಗೆ ಅವರ ವಿಷಯದಲ್ಲಿದ್ದ ಸಹಿಷ್ಣುತೆಯು ಅಹಿಂಸೆಯ ನಮೂನೆಯದಾಗಿತ್ತು. ಇಂದಿನ ಕಠೋರತೆಯು ಸತ್ಯಾಗ್ರಹದ್ದು, ಮತ್ತು ಎದುರಾಳಿಯಲ್ಲಿ ಧರ್ಮಜಾಗ್ರತೆಯನ್ನುಂಟುಮಾಡುವ ಉತ್ಕಂಠತೆಯ ಮಾದರಿಯದಾಗಿತ್ತು.

* * *

ಇವತ್ತು . . . ರ ಪತ್ರ ಬಂತು. ಇದರಿಂದ ಬಾಪೂಗೆ ಸಂತೋಷವಾಯಿತು.

ಇಟ್ಟಿದ್ದರು. ಆದರೆ ಇವತ್ತು ಮೊದಲನೆಯ ದಿವಸವೆ ನೀರು ಕಡಿಮೆ ಬೆಂಕಿ ಹೆಚ್ಚಾಗಿ ಬೇಳೆಯು ಹೊತ್ತಿಬಿಟ್ಟಿತು.

* * *

ವೃತ್ತಪತ್ರ ಓದಿ ಬಾಪೂ ಅಂದರು: "ಎಲ್ಲವೂ ಸರಿಯಾಗಿ ಸಾಗಿವೆ. ನಾವು ಮಾತ್ರ ಪಾರಾಗಿದ್ದೇವೆ. ಬೆಂಥಾಲರು ಪ್ರಸಿದ್ಧಿಸಿದ ಪತ್ರದ — ಮುಸಲ್ಮಾನ ಪರಿಷತ್ತಿನ ಕಾರ್ಯಕಲಾಪಗಳ—ಅರ್ಥವೇನು? ನಾವು ಒಳಗೆ ಇದ್ದುದು ಬಹಳ ಚೆನ್ನಾಗಿ ಆಗಿದೆ."

ವಲ್ಲಭಭಾಯಿಯವರು ದಿನಾಲು ಆನಂದದಿಂದ ವೃತ್ತಪತ್ರ ಓದುತ್ತಾರೆ. ಬಾಪೂ ಮನಸ್ಸುಗೊಟ್ಟು ಕೇಳುತ್ತಾರೆ. ಅಥವಾ ಮನಸ್ಸುಗೊಟ್ಟು ಕೇಳುತ್ತಿರುವಂತೆಯಾದರೂ ತೋರಿಸುತ್ತಾರೆ. ಎಷ್ಟೋ ಸಾರೆ ಬಾಪೂ ಏನಾದರೂ ಬರೆಯುತ್ತಿದ್ದರೆ, ಓದುತ್ತಿದ್ದರೆ ವಲ್ಲಭಭಾಯಿಯವರು ಓದುವದನ್ನು ನಿಲ್ಲಿಸುತ್ತಾರೆ. ಬಾಪೂ ತಮ್ಮ ಕೆಲಸವನ್ನು ಮುಗಿಸಿದರೋ ಇಲ್ಲವೋ ಎಂಬುದನ್ನು ಮೇಲಿಂದ ಮೇಲೆ ನೋಡುತ್ತಾರೆ. ಅದಕ್ಕೆ ಬಾಪೂ: "ಏನು ವಲ್ಲಭಭಾಯಿ, 'ಹೂ' ಎಂದಾಗಲೇ ನಿಮ್ಮ ಕತೆ ಸಾಗುವದೇನು? ಆಗಲಿ 'ಹೂ'." ಈ ಪ್ರಕಾರ ನಡೆದಿದ್ದರೂ ಬಾಪೂಗೆ ವೃತ್ತಪತ್ರ ಓದುವದು ಮನಸ್ಸಿಗೆ ಬರುವದಿಲ್ಲ. ಸರ್ವಸಾಮಾನ್ಯ ಕೈದಿಯು ಹೊರಗಿನ ಸುದ್ದಿಯನ್ನು ತಿಳಿದುಕೊಳ್ಳುವದಕ್ಕಾಗಿ ಚಡಪಡಿಸುತ್ತಾನೆ. ತುರುಂಗಿನಿಂದ ವೃತ್ತಪತ್ರಗಳನ್ನು ತರಿಸುವದು ಸಾಧ್ಯವಿದ್ದರೆ ತರಿಸುತ್ತಾನೆ. ಆದರೆ ಈ ವಿಷಯದಲ್ಲಿ ಬಾಪೂ ಅವರ ಮನೋವೃತ್ತಿಯು ತೀರ ಭಿನ್ನವಾಗಿದೆ. ವೃತ್ತಪತ್ರಗಳು ಸಿಗದಿದ್ದರೆ ಆ ಸಮಯವನ್ನು ಒಳ್ಳೇ ಆನಂದದಿಂದ ಅದಕ್ಕೂ ಹೆಚ್ಚಿನ ಕೆಲಸದಲ್ಲಿ ತೊಡಗಿಸಬಹುದು. ಆದರೆ ಅವು ದೊರೆತಾಗ ಅನೇಕ ಸಾರೆ ಅರುಚಿಯನ್ನು ತೋರಿಸಿದರೆ ಆಶ್ಚರ್ಯವಲ್ಲ. . . . ರ ವಿಷಯಕ್ಕೆ ಸುದ್ದಿ ಓದಿ ಚಿಂತೆಯುಂಟಾಗಿತ್ತು. ಅವರ ಪತ್ರದ ದಾರಿ ನೋಡಿದೆವು. ಪತ್ರ ಬಂದ ಮೇಲೆ ಆನಂದವಾಯಿತು. ಅವರಿಗೆ ಹೀಗೆ ಬರೆದರು: "ನಿಮ್ಮ ಪತ್ರ ಬಂದ ಮೇಲೆ ಹೇಳುವಂಥ ಸಂಗತಿ ಉಳಿಯುವದಿಲ್ಲ. ನಿಜವಾಗಿ ನೋಡಿದರೆ ಹೊರಗೆ ಆಗುವದನ್ನು ಕುರಿತು ವಿಚಾರವನ್ನೇ ಮಾಡಬಾರದು. ಆದರೆ ವೃತ್ತಪತ್ರ ಓದುವದನ್ನು ಬಂದು ಮಾಡುವವರೆಗೆ ಅಥವಾ ಬಂದಾಗುವವರೆಗೆ ಅದರ ವಿಷಯಕ್ಕೆ ವಿಚಾರ ಮಾಡದಿರುವದು ಅಥವಾ ವಿಚಾರ ಬರದಿರುವದು ಅಸಂಭವವಿದೆ. ಆದುದರಿಂದ ನಿಮ್ಮನ್ನು ಕೇಳಿ ಮನಸ್ಸಿಗೆ ಸಮಾಧಾನ ಮಾಡಿಕೊಂಡೆನು. ಹೇಳುವ ಮಾತಿನ ಸಾರವನ್ನು ಸರಿಯಾದ ಹೊತ್ತಿಗೆ ಅವನಿಗೆ ಕಳಿಸಿಕೊಟ್ಟರೆ ಉತ್ತಮವಾಗುತ್ತಿತ್ತೆಂದು ನನ್ನ ಹಿಂದಿನ ಅನುಭವವು ಹೇಳುತ್ತದೆ. ಆದರೆ ಈಗ ಅದನ್ನು ಮಾಡುವ ಅವಶ್ಯಕತೆಯಿಲ್ಲ. ಭವಿಷ್ಯಕ್ಕಾಗಿ ಈ ಸೂಚನೆಯು ಉಪಯೋಗವಾಗಬಲ್ಲದು."

ಜುಗತರಾಮರಿಗೆ ಬರೆದರು: "ನೀನು ಪತ್ರವನ್ನು ಚೆನ್ನಾಗಿ ಬರೆದಿರುತ್ತಿ. ನಮ್ಮ ಗಾಡಿಯನ್ನು ನಡೆಸುವವನು ಮನುಷ್ಯನಲ್ಲ, ದೇವರು. ಅದರಲ್ಲಿ ಕುಳಿತಂಥ ನಾವು ಅವನ ಮೇಲೆ ಶ್ರದ್ಧೆಯನ್ನಿಟ್ಟಿರುವವರೆಗೆ ಗಾಡಿಯು ಅವಶ್ಯ ಮುಂದ ಸಾಗುವದು. ಶ್ರದ್ಧೆ ಹಾರಿದ ಕೂಡಲೆ ಗಾಡಿ ನಿಂತಿತೆಂದೇ ತಿಳಿ."

* * *

ಆಶ್ರಮದ ಬಾಲಕರು ಎಷ್ಟೋ ಸಾರೆ ಸುಂದರವಾದ ಪ್ರಶ್ನೆ ಕೇಳುತ್ತಾರೆ. ಇಂದೂ ಪರೇಖ ಕೇಳಿದ್ದಾಳೆ: "ಶಿಖಂಡಿಯನ್ನು ಮುಂದೆ ಮಾಡಿ ಭೀಷ್ಮನನ್ನು ಕೊಲ್ಲಿಸಿದ್ದು, ಸೂರ್ಯನಿಗೆ ಸುದರ್ಶನ ಚಕ್ರ ಅಡ್ಡ ಹಿಡಿದು ಜಯದ್ರಥನನ್ನು ಕೊಲ್ಲಿಸಿದ್ದು ಶ್ರೀಕೃಷ್ಣಭಗವಾನನು ಸರಿಯಾದ ಕಾರ್ಯ ಮಾಡಿದನೆ? ಅದು ಸರಿಯಾದದ್ದಲ್ಲದಿದ್ದರೆ ನಾವಿಂಥ ನಾಟಕಗಳನ್ನು ಆಡಬಹುದೆ?" ಈ ಹುಡಿಗಿಗೆ ಯಾವಾಗಲೂ ಬರೆಯುತ್ತಿರುವ ಎರಡು ಇಂಚು ಅಗಲ, ನಾಲ್ಕು ಇಂಚು ಉದ್ದ ಕಾಗದದ ತುಂಡಿನಲ್ಲಿ ಹೀಗೆ ಬರೆದರು: "ನಿನ್ನ ಪ್ರಶ್ನೆಯು ಅತ್ಯಂತ ಮಹತ್ವದ್ದಾಗಿದೆ. ಮಹಾಭಾರತವು ಒಂದು ಕಾವ್ಯ. ಇತಿಹಾಸವಲ್ಲ. ಮನುಷ್ಯನು ಹಿಂಸೆಯ ದಾರಿಯನ್ನು ಹಿಡಿದರೆ ಅದರಲ್ಲಿ ಅಸತ್ಯ ಬಂದೇ ಬರುವದು. ಅದರಿಂದ ಶ್ರೀಕೃಷ್ಣನಂಥವರು ಕೂಡ ಪಾರಾಗಲಾರರು. ಹಾಗೆ ನೋಡಿದರೆ ಕೆಟ್ಟದು ಯಾವಾಗಲೂ ಕೆಟ್ಟದೇ. ಶಿಖಂಡಿಯನ್ನು ಮುಂದೆ ಮಾಡುವದರಲ್ಲಿ, ಸೂರ್ಯನನ್ನು ಮುಚ್ಚುವದರಲ್ಲಿ ದೋಷವಂತೂ ಇದ್ದೇ ಇತ್ತು. ನನ್ನ ನೆನಪಿನಂತೆ ವ್ಯಾಸರು ಕೂಡ ಈ ಪ್ರಸಂಗಗಳನ್ನು ದೋಷವೆಂದೇ ವರ್ಣಿಸಿದ್ದಾರೆ. ಈ ಪ್ರಕಾರ ಉದಾಹರಣೆಯುಳ್ಳ ನಾಟಕಗಳಲ್ಲಿ ಇಂಥ ಉದಾಹರಣೆಗಳು ಅನುಕರಣೀಯವಲ್ಲವೆಂದು ತೋರಿಸಿದರೆ ಅವುಗಳನ್ನು ಆಡುವದರಲ್ಲಿ ದೋಷವಿಲ್ಲ. ಆದರೂ ನೀನು ಕೇಳಿದ ಪ್ರಶ್ನೆಯು ಬಹಳ ವಿಚಾರಾರ್ಹವಾಗಿದೆ." ನಾರಾಯಣದಾಸರಿಗೆ ವಿಸ್ತಾರಪೂರ್ವಕವಾಗಿ ಪತ್ರ ಬರೆದರು: "ನನಗೆ ಈ ಪ್ರಶ್ನೆಯು ಬಹಳ ಮನಸ್ಸಿಗೆ ಬಂತು. ನಾಟಕದ ಉದ್ದೇಶವು ಈ ದೋಷವನ್ನು ಕೆಟ್ಟದ್ದೆಂದು ತೋರಿಸುವದಿದ್ದರೆ ಅದನ್ನು ಆಡುವದರಲ್ಲಿ ಯಾವ ಬಾಧೆಯೂ ಇಲ್ಲವೆಂದು ತಿಳಿಯುತ್ತೇನೆ. ಇಷ್ಟಾದಮೇಲೆಯೂ ಇಂಥ ನಾಟಕಗಳನ್ನಾಡುವ ಬಗ್ಗೆ ನನ್ನ ಮನಸ್ಸಿನಲ್ಲಿ ಸಂದೇಹವಿದ್ದೇ ಇದೆ. ಮಹಾಪುರುಷರು ಮಾಡಿದ ಕೆಟ್ಟ ಕೆಲಸಗಳನ್ನು ಕೆಟ್ಟ ಕೆಲಸಗಳೆಂದೇ ವರ್ಣಿಸಿದರೂ ಕೂಡ ಅವುಗಳ ವರ್ಣನೆ ಮಾಡುವ ಆವಶ್ಯಕತೆಯಿಲ್ಲದೆ ಬಾಲಕರಮುಂದೆ ಇಂಥ ಕೆಲಸಗಳನ್ನು ಮೇಲಿಂದಮೇಲೆ ವರ್ಣಿಸುವದರಲ್ಲಿ ನನಗೆ ಯಾವ ಲಾಭವೂ ಕಾಣುವದಿಲ್ಲ. ಒಂದು ವೇಳೆ ಹೀಗಾಗುವ ಸಂಭವವೂ ಇದೆ: ಕೃತಿಗಳ ಕೆಟ್ಟತನವನ್ನು ಮರೆತು ಬಿಡಬಹುದು. ಮತ್ತು ಮಹಾಪುರುಷರು ಮಾಡಿರುವರು ಆದಕಾರಣ ನಾವೂ ಮಾಡಬಹುದು ಎಂಬ ಪರಿಣಾಮ ಮಾತ್ರ ಉಳಿಯಬಹುದು. ಇಂಥ ಪ್ರಸಂಗಗಳನ್ನೇ ಎತ್ತಿ ಆರಿಸಿ ತೆಗೆದು

ಇಟ್ಟಿದ್ದರು. ಆದರೆ ಇವತ್ತೂ ಮೊದಲನೆಯ ದಿವಸವೆ ನೀರು ಕಡಿಮೆ ಬೆಂಕಿ ಹೆಚ್ಚಾಗಿ ಬೇಳೆಯು ಹೊತ್ತಿಬಿಟ್ಟಿತು.

* * *

ವೃತ್ತಪತ್ರ ಓದಿ ಬಾಪೂ ಅಂದರು: "ಎಲ್ಲವೂ ಸರಿಯಾಗಿ ಸಾಗಿದೆ. ನಾವು ಮಾತ್ರ ಪಾರಾಗಿದ್ದೇವೆ. ಜೆಂಘಾಲರು ಪ್ರಸಿದ್ಧಿಸಿದ ಪತ್ರದ — ಮುಸಲ್ಮಾನ ಪರಿಷತ್ತಿನ ಕಾರ್ಯಕಲಾಪಗಳ — ಅರ್ಥವೇನು? ನಾವು ಒಳಗೆ ಇದ್ದುದು ಬಹಳ ಚೆನ್ನಾಗಿ ಆಗಿದೆ."

ವಲ್ಲಭಭಾಯಿಯವರು ದಿನಾಲು ಆನಂದದಿಂದ ವೃತ್ತಪತ್ರ ಓದುತ್ತಾರೆ. ಬಾಪೂ ಮನಸ್ಸುಗೊಟ್ಟು ಕೇಳುತ್ತಾರೆ. ಅಥವಾ ಮನಸ್ಸುಗೊಟ್ಟು ಕೇಳುತ್ತಿರುವಂತೆಯಾದರೂ ತೋರಿಸುತ್ತಾರೆ. ಎಷ್ಟೋ ಸಾರೆ ಬಾಪೂ ಏನಾದರೂ ಬರೆಯುತ್ತಿದ್ದರೆ, ಓದುತ್ತಿದ್ದರೆ ವಲ್ಲಭಭಾಯಿಯವರು ಓದುವದನ್ನು ನಿಲ್ಲಿಸುತ್ತಾರೆ. ಬಾಪೂ ತಮ್ಮ ಕೆಲಸವನ್ನು ಮುಗಿಸಿದರೋ ಇಲ್ಲವೋ ಎಂಬುದನ್ನು ಮೇಲಿಂದ ಮೇಲೆ ನೋಡುತ್ತಾರೆ. ಅದಕ್ಕೆ ಬಾಪೂ: "ಏನು ವಲ್ಲಭಭಾಯಿ, 'ಹೂ' ಎಂದಾಗಲೇ ನಿಮ್ಮ ಕತೆ ಸಾಗುವದೇನು? ಆಗಲಿ 'ಹೂ'." ಈ ಪ್ರಕಾರ ನಡೆದಿದ್ದರೂ ಬಾಪೂಗೆ ವೃತ್ತಪತ್ರ ಓದುವದು ಮನಸ್ಸಿಗೆ ಬರುವದಿಲ್ಲ. ಸರ್ವಸಾಮಾನ್ಯ ಕೈದಿಯು ಹೊರಗಿನ ಸುದ್ದಿಯನ್ನು ತಿಳಿದುಕೊಳ್ಳುವದಕ್ಕಾಗಿ ಚಡಪಡಿಸುತ್ತಾನೆ. ತುಡುಗಿನಿಂದ ವೃತ್ತಪತ್ರಗಳನ್ನು ತರಿಸುವದು ಸಾಧ್ಯವಿದ್ದರೆ ತರಿಸುತ್ತಾನೆ. ಆದರೆ ಈ ವಿಷಯದಲ್ಲಿ ಬಾಪೂ ಅವರ ಮನೋವೃತ್ತಿಯು ತೀರ ಭಿನ್ನವಾಗಿದೆ. ವೃತ್ತಪತ್ರಗಳು ಸಿಗದಿದ್ದರೆ ಆ ಸಮಯವನ್ನು ಒಳ್ಳೇ ಆನಂದದಿಂದ ಅದಕ್ಕೂ ಹೆಚ್ಚಿನ ಕೆಲಸದಲ್ಲಿ ತೊಡಗಿಸಬಹುದು. ಆದರೆ ಅವು ದೊರತಾಗ ಅನೇಕ ಸಾರೆ ಅರುಚಿಯನ್ನು ತೋರಿಸಿದರೆ ಆಶ್ಚರ್ಯವಲ್ಲ. . . . ರ ವಿಷಯಕ್ಕೆ ಸುದ್ದಿ ಓದಿ ಚಿಂತೆಯುಂಟಾಗಿತ್ತು. ಅವರ ಪತ್ರದ ದಾರೀ ನೋಡಿದೆವು. ಪತ್ರ ಬಂದ ಮೇಲೆ ಆನಂದವಾಯಿತು. ಅವರಿಗೆ ಹೀಗೆ ಬರೆದರು: "ನಿಮ್ಮ ಪತ್ರ ಬಂದ ಮೇಲೆ ಹೇಳುವಂಥ ಸಂಗತಿ ಉಳಿಯುವದಿಲ್ಲ. ನಿಜವಾಗಿ ನೋಡಿದರೆ ಹೊರಗೆ ಆಗುವದನ್ನು ಕುರಿತು ವಿಚಾರವನ್ನೇ ಮಾಡಬಾರದು. ಆದರೆ ವೃತ್ತಪತ್ರ ಓದುವದನ್ನು ಬಂದು ಮಾಡುವವರೆಗೆ ಅಥವಾ ಬಂದಾಗುವವರೆಗೆ ಆದರ ವಿಷಯಕ್ಕೆ ವಿಚಾರ ಮಾಡದಿರುವದು ಅಥವಾ ವಿಚಾರ ಬರದಿರುವದು ಅಸಂಭವವಿದೆ. ಆದುದರಿಂದ ನಿಮ್ಮನ್ನು ಕೇಳಿ ಮನಸ್ಸಿಗೆ ಸಮಾಧಾನ ಮಾಡಿಕೊಂಡೆನು. ಹೇಳುವ ಮಾತಿನ ಸಾರವನ್ನು ಸರಿಯಾದ ಹೊತ್ತಿಗೆ ಅವನಿಗೆ ಕಳಿಸಿಕೊಟ್ಟರೆ ಉತ್ತಮವಾಗುತ್ತಿತ್ತೆಂದು ನನ್ನ ಹಿಂದಿನ ಅನುಭವವು ಹೇಳುತ್ತದೆ. ಆದರೆ ಈಗ ಅದನ್ನು ಮಾಡುವ ಅವಶ್ಯಕತೆಯಿಲ್ಲ. ಭವಿಷ್ಯಕ್ಕಾಗಿ ಈ ಸೂಚನೆಯು ಉಪಯೋಗವಾಗಬಲ್ಲದು."

ಜುಗತರಾಮರಿಗೆ ಬರೆದರು : "ನೀನು ಪತ್ರವನ್ನು ಚೆನ್ನಾಗಿ ಬರೆದಿರುತ್ತಿ. ನಮ್ಮ ಗಾಡಿಯನ್ನು ನಡೆಸುವವನು ಮನುಷ್ಯನಲ್ಲ, ದೇವರು. ಅದರಲ್ಲಿ ಕುಳಿತಂಥ ನಾವು ಅವನ ಮೇಲೆ ಶ್ರದ್ಧೆಯನ್ನಿಟ್ಟಿರುವವರೆಗೆ ಗಾಡಿಯು ಅವಶ್ಯ ಮುಂದ ಸಾಗುವದು. ಶ್ರದ್ಧೆ ಹಾರಿದ ಕೂಡಲೆ ಗಾಡಿ ನಿಂತಿತೆಂದೇ ತಿಳಿ."

* * *

ಆಶ್ರಮದ ಬಾಲಕರು ಎಷ್ಟೋ ಸಾರೆ ಸುಂದರವಾದ ಪ್ರಶ್ನೆ ಕೇಳುತ್ತಾರೆ. ಇಂದೂ ಪರೇಖ ಕೇಳಿದ್ದಾಳೆ: "ಶಿಖಂಡಿಯನ್ನು ಮುಂದೆ ಮಾಡಿ ಭೀಷ್ಮನನ್ನು ಕೊಲ್ಲಿಸಿದ್ದು, ಸೂರ್ಯನಿಗೆ ಸುದರ್ಶನ ಚಕ್ರ ಅಡ್ಡ ಹಿಡಿದು ಜಯದ್ರಥನನ್ನು ಕೊಲ್ಲಿಸಿದ್ದು ಶ್ರೀಕೃಷ್ಣಭಗವಾನನು ಸರಿಯಾದ ಕಾರ್ಯ ಮಾಡಿದನೆ? ಅದು ಸರಿಯಾದದ್ದಲ್ಲದಿದ್ದರೆ ನಾವಿಂಥ ನಾಟಕಗಳನ್ನು ಆಡಬಹುದೆ?" ಈ ಹುಡಿಗಿಗೆ ಯಾವಾಗಲೂ ಬರೆಯುತ್ತಿರುವ ಎರಡು ಇಂಚು ಅಗಲ, ನಾಲ್ಕು ಇಂಚು ಉದ್ದ ಕಾಗದದ ತುಂಡಿನಲ್ಲಿ ಹೀಗೆ ಬರೆದರು: "ನಿನ್ನ ಪ್ರಶ್ನೆಯು ಅತ್ಯಂತ ಮಹತ್ವದ್ದಾಗಿದೆ. ಮಹಾ ಭಾರತವು ಒಂದು ಕಾವ್ಯ. ಇತಿಹಾಸವಲ್ಲ. ಮನುಷ್ಯನು ಹಿಂಸೆಯ ದಾರಿಯನ್ನು ಹಿಡಿದರೆ ಅದರಲ್ಲಿ ಅಸತ್ಯ ಬಂದೇ ಬರುವದು. ಅದರಿಂದ ಶ್ರೀಕೃಷ್ಣನಂಥವರು ಕೂಡ ಪಾರಾಗಲಾರರು. ಹಾಗೆ ನೋಡಿದರೆ ಕೆಟ್ಟದು ಯಾವಾಗಲೂ ಕೆಟ್ಟದೇ. ಶಿಖಂಡಿಯನ್ನು ಮುಂದೆ ಮಾಡುವದರಲ್ಲಿ, ಸೂರ್ಯನನ್ನು ಮುಚ್ಚುವದರಲ್ಲಿ ದೋಷವಂತೂ ಇದ್ದೇ ಇತ್ತು. ನನ್ನ ನೆನಪಿನಂತೆ ವ್ಯಾಸರು ಕೂಡ ಈ ಪ್ರಸಂಗಗಳನ್ನು ದೋಷವೆಂದೇ ವರ್ಣಿಸಿದ್ದಾರೆ. ಈ ಪ್ರಕಾರ ಉದಾಹರಣೆಯುಳ್ಳ ನಾಟಕಗಳಲ್ಲಿ ಇಂಥ ಉದಾಹರಣೆಗಳು ಅನುಕರಣೀಯವಲ್ಲವೆಂದು ತೋರಿಸಿದರೆ ಅವುಗಳನ್ನು ಆಡುವದರಲ್ಲಿ ದೋಷವಿಲ್ಲ. ಆದರೂ ನೀನು ಕೇಳಿದ ಪ್ರಶ್ನೆಯು ಬಹಳ ವಿಚಾರಾರ್ಹ ವಾಗಿದೆ." ನಾರಾಯಣದಾಸರಿಗೆ ವಿಸ್ತಾರಪೂರ್ವಕವಾಗಿ ಪತ್ರ ಬರೆದರು : "ನನಗೆ ಈ ಪ್ರಶ್ನೆಯು ಬಹಳ ಮನಸ್ಸಿಗೆ ಬಂತು. ನಾಟಕದ ಉದ್ದೇಶವು ಈ ದೋಷವನ್ನು ಕೆಟ್ಟದ್ದೆಂದು ತೋರಿಸುವದಿದ್ದರೆ ಅದನ್ನು ಆಡುವದರಲ್ಲಿ ಯಾವ ಬಾಧೆಯೂ ಇಲ್ಲವೆಂದು ತಿಳಿಯುತ್ತೇನೆ. ಇಷ್ಟಾದಮೇಲೆಯೂ ಇಂಥ ನಾಟಕಗಳನ್ನಾಡುವ ಬಗ್ಗೆ ನನ್ನ ಮನಸ್ಸಿನಲ್ಲಿ ಸಂದೇಹವಿದ್ದೇ ಇದೆ. ಮಹಾಪುರುಷರು ಮಾಡಿದ ಕೆಟ್ಟ ಕೆಲಸಗಳನ್ನು ಕೆಟ್ಟ ಕೆಲಸಗಳೆಂದೇ ವರ್ಣಿಸಿದರೂ ಕೂಡ ಅವುಗಳ ವರ್ಣನೆ ಮಾಡುವ ಆವಶ್ಯಕತೆಯಿಲ್ಲದೆ ಬಾಲಕರಮುಂದೆ ಇಂಥ ಕೆಲಸಗಳನ್ನು ಮೇಲಿಂದಮೇಲೆ ವರ್ಣಿಸುವದರಲ್ಲಿ ನನಗೆ ಯಾವ ಲಾಭವೂ ಕಾಣುವದಿಲ್ಲ. ಒಂದು ವೇಳೆ ಹೀಗಾಗುವ ಸಂಭವವೂ ಇದೆ: ಕೃತಿಗಳ ಕೆಟ್ಟತನವನ್ನು ಮರೆತು ಬಿಡಬಹುದು. ಮತ್ತು ಮಹಾಪುರುಷರು ಮಾಡಿರುವರು ಆದಕಾರಣ ನಾವೂ ಮಾಡಬಹುದು ಎಂಬ ಪರಿಣಾಮ ಮಾತ್ರ ಉಳಿಯಬಹುದು. ಇಂಥ ಪ್ರಸಂಗಗಳನ್ನೇ ಎತ್ತಿ ಆರಿಸಿ ತೆಗೆದು

ಅವುಗಳ ನಾಟಕಗಳನ್ನು ಹುಡುಗರಿಂದ ಆಡಿಸುವದು ನನಗೆ ಸರಿತೋರುವದಿಲ್ಲ. ನಮ್ಮ ಎಲ್ಲ ನಾಟಕಗಳೂ ರವೀಂದ್ರನಾಥರ 'ಮುಕ್ತಧಾರಾ' ಮತ್ತು ನಾನು ಇದೀಗ ಓದಿ ಮುಗಿಸಿದ ಮೈಥಿಲೀಶರಣ ಗುಪ್ತರ 'ಅನಘ' ಗಳಂತೆ ಇರಬೇಕು. ಇದು ಬಹಳ ಚೆನ್ನಾಗಿ ಇದೆ. ಬಾಲಕರೆದುರಿಡಲು ಯೋಗ್ಯವಾಗಿದೆ. ಅದರ ಹಿಂದೀ ಸರಳವಾಗಿದ್ದು ಬಹಳ ಸವಿಯಾಗಿದೆ ಮತ್ತು ಅದರ ಭಾಸಗಳೂ ಬಹಳ ಉತ್ತಮ ವಾಗಿವೆ.

* * *

ಅಮೇರಿಕನ್ನರಿಗೆ ಗುಣವರ್ಣನೆ ಮಾಡುವಾಗ ಕೂಡ ಉಪ್ಪು ಕಾರ ಹಚ್ಚದೆ ಸಂತೋಷವಾಗುವದಿಲ್ಲ. ಅದಕ್ಕೆ ಪ್ರಮಾಣವು ಮಿಲ್ಲರಂತಹ ಸಹೃದಯ ಸುದ್ದಿಗಾರರ ವಿವರಣೆಯಿಂದ ದೊರೆಯುತ್ತದೆ ಇನ್ನೊಂದು ಉದಾಹರಣೆಯು ಇಂದು ಓದಿದ ಲೇಖದಲ್ಲಿ ದೊರೆಯುತ್ತದೆ.

"When a customs official at Marseilles, France, asked him whether he had any cigarettes, cigars, firearms, alcohol or narcotics in his luggage he replied in the negative. Nevertheless the travelling equipment was examined. It proved to consist of: 3 spg. wheels, 3 looms, 1 can goats' milk, 1 package dried raisins, 1 copy Thoreau's Civil Disobedience, 1 set false teeth 6 dicepers."

ಮಾರ್ಸೆಲಿಸ್ (ಫ್ರಾನ್ಸ) ದ ಸುಂಕದ ಅಧಿಕಾರಿಯು "ನಿಮ್ಮ ಸಾಮಾನು ಗಳಲ್ಲಿ ಸಿಗಾರೇಟ, ಚಿರೂಟು, ಮದ್ದುಗುಂಡು, ಕುಡಿಯುವ ನಾರಾಯಿ ಮತ್ತು ನಿಶೆ ಮಾಡುವಂತಹ ಯಾವುದಾದರೂ ವಸ್ತು ಇದೆಯೆ ?" ಎಂದು ಗಾಂಧೀಜ ಯವರನ್ನು ಕೇಳಿದನು. ಆಗ ಅವರು ನಕಾರಾತ್ಮಕ ಉತ್ತರ ಕೊಟ್ಟರು. ಆದರೂ ಕೂಡ ಅವರ ಸಾಮಾನುಗಳನ್ನು ತಪಾಸಿಸಲಾಯಿತು. ಅದರಲ್ಲಿ ಹೊರಬಿದ್ದೇನಂದರೆ: ಮೂರು ನೂಲುವ ರಾಟೆಗಳು, ಮೂರು ಮಗ್ಗಗಳು, ಒಂದು ಆಡಿನ ಹಾಲಿನ ಡಬ್ಬಿ, ಒಂದು ಒಣಗಿದ ದ್ರಾಕ್ಷೆಯ ಹಣ್ಣಿನ ಪುಡಿಕೆ, ಥೂರೊ ಇವರ 'ಸವಿನಯ ಕಾಯದೆ ಭಂಗ'ದ ಒಂದು ಪ್ರತಿ, ಕೃತ್ರಿಮ ಹಲ್ಲಿನ ಒಂದು ಜತೆ ಮತ್ತು ಆರು ಖಾಟೀ ಥಾನುಗಳು. ಎಷ್ಟು ಸತ್ಯಸಂಗತಿ!—ವಾಚಕರು ಭ್ರಮೆಯಲ್ಲಿ ಬಿದ್ದಿರಬೇಕು ಮತ್ತು ಇದು ಸಂಪೂರ್ಣ ಸತ್ಯವೆಂದೂ ನಂಬಬೇಕು! ಇದರಲ್ಲಿ ಮೊದಲಿನಿಂದ ಕೊನೆಯವರೆಗೆ ಒಂದು ಮಾತೂ ಸತ್ಯವಾದದ್ದಲ್ಲ.!

ಇವತ್ತು ಬಾಪೂ ಅವರ ಒಂದು ಮಾತಿನಿಂದ ವಲ್ಲಭಭಾಯಿ ಮತ್ತು ನಾನು ಇಬ್ಬರೂ ಬೆಚ್ಚಿಬಿದ್ದೆವು. "ಆಯಾಸವು ಕಡಿಮೆಯಾಗಲೊಲ್ಲದು. ನಾನು ನಿರೀಕ್ಷಿಸಿದ ಸ್ಫೂರ್ತಿ ಶರೀರದಲ್ಲಿ ಬರಲೊಲ್ಲದು." ಎಂದು ಬಾಪೂ ಹೇಳುತ್ತಾರೆ. ಇದಕ್ಕೆ

ವಲ್ಲಭಭಾಯಿ ಹೇಳಿದರು : "ಯಾಕಂದರೆ ನೀವು ಖಜ್ಜೂರಿ ತಿನ್ನುವದನ್ನು ಬಿಟ್ಟಿರಿ. ಸರಿಯಾಗಿ ಆಹಾರ ತೆಗೆದುಕೊಳ್ಳುವದಿಲ್ಲ. ಖಜ್ಜೂರಿಯನ್ನೂ ಹಣ್ಣನ್ನೂ ತರಿಸಿರಿ. ತಿನ್ನದೆ ಸ್ಫೂರ್ತಿ ಹೇಗೆ ಬರಬೇಕು ?" ಬಾಪೂ: "ನಿಮಗೆ ನಿಜವಾಗಿ ಹೇಳಲಾ ? ಹತ್ತಿಪ್ಪತ್ತು ಉಪವಾಸ ಮಾಡಿದರೆ ಎಷ್ಟೊಂದು ಚೆನ್ನಾದೀತು ? ಎಂದು ನನಗೆ ಯಾವಾಗಲೂ ಎನಿಸುತ್ತದೆ. ಸ್ತ್ರೀಯರ ಪ್ರಕರಣದ ಕಾಲಕ್ಕೆ ಇದು ಉತ್ತಮ ಸಂಧಿಯೆಂದು ನನಗೆ ಅನಿಸಿತ್ತು. ಆದರೆ ಆ ಪ್ರಕರಣವು ಮುಗಿದು ಹೋಯಿತು. ಇಷ್ಟು ಉಪವಾಸ ಮಾಡಿದರೆ ಮತ್ತೆ ಶರೀರದಲ್ಲಿ ಸ್ಫೂರ್ತಿ ಬರುವದೆಂದು ಅನಿಸುತ್ತದೆ." ಇಂಥ ಉಪವಾಸದ ಪ್ರಸಂಗ ಬಂದರೆ ಬಾಪೂ ಸ್ವಾಗತ ಮಾಡುವರು. ಎಷ್ಟೋ ಸಾರೆ ಉಪವಾಸ ಮಾಡುವ ತೀವ್ರ ಇಚ್ಛೆಯ ಮೂಲಕ ಉಪವಾಸ ಕೈಕೊಳ್ಳುವ ಪ್ರಸಂಗವಿರದಿದ್ದರೂ ಬಾಪೂ ಉಪವಾಸ ಮಾಡಿಬಿಡುವ ಸಂಭವವಿದೆ. ನಿಜವಾಗಿ ನನ್ನ ಮೈಯಲ್ಲಿ ನಡುಗು ಹುಟ್ಟಿತು. ನಾನು ನನ್ನ ಭೀತಿಯನ್ನು ಬಾಪೂ ಅವರಿಗೆ ತೋರಿಸಲಿಲ್ಲ.

ಕಾಕಾ, ಪ್ರಭುದಾಸ ಮತ್ತು ಜಮನಾಲಾಲಜಿಯವರ ಆರೋಗ್ಯದ ವಿಷಯ-ವಾಗಿ ತಿಳಿದುಕೊಳ್ಳುವದಕ್ಕೂ ಕೈದಿಗಳ ಸಂಗಡ ಪತ್ರವ್ಯವಹಾರ ಮಾಡುವದಕ್ಕೂ ಆಯ್. ಜಿ. ಪಿ. ಗೆ ಪತ್ರ ಬರೆದರು. ನಮ್ಮ ಕುಕ್ಕರದ ಬೇಳೆ
೨೫-೩-'೩೨ ಹೊತ್ತಿತು. ಬಾಪೂ ಅದರ ಕಾರಣ ಹುಡುಕಿ ತೆಗೆಯಲಿಕ್ಕೆ ಹೇಳಿದರು. ನೀರು ಕಡಿಮೆಯಾಗಿತ್ತೆಂಬುದು ಸ್ಪಷ್ಟವಿದೆ. ಆದರೆ ಹಿಂದಿನಿಂದ ಬಾಪೂ ತಮ್ಮ ಸ್ವಭಾವಕ್ಕನುಸರಿಸಿ ಅದರ ರಚನೆಯ ವಿಷಯ-ವಾಗಿ ಪ್ರಶ್ನಿಸಿದರು. ೧೯೩೦ರಲ್ಲಿ ತಾವು ಸ್ವತಃ ಒಂದು ಕುಕ್ಕರನ್ನು ತಯಾರು ಮಾಡಿಸಿದ್ದರು. ಆದರೆ ಅದನ್ನು ಯಾರೋ ತೆಗೆದುಕೊಂಡು ಹೋಗಿಬಿಟ್ಟರೆಂದು ಬಾಪೂ ಹೇಳಿದರು. ಆಮೇಲೆ ನನ್ನ ಕುಕ್ಕರದ ರಚನೆ ನೋಡಿ ಹೇಳತೊಡಗಿದರು : "ಕೆಳಗಿನ ಬೇಳೆ ಬೇಯಿಸುವ ಡಬ್ಬಿಯಲ್ಲಿ ಬೇಳೆ ಬೇಯಿಸುವ ಬದಲು ನೀರು ಹಾಕು ಮತ್ತು ಬೇಳೆಯನ್ನು ಅದರ ಮೇಲಿನ ಡಬ್ಬಿಯಿಂದ ಪ್ರಾರಂಭಮಾಡು. ಅಂದರೆ ಮೂರು ಡಬ್ಬಿಗಳನ್ನು ಉಪಯೋಗಿಸುವ ಬದಲು ನಾಲ್ಕು ಉಪಯೋಗ ಮಾಡು ಮತ್ತು ಎಲ್ಲಕ್ಕೂ ಕೆಳಗಿನ ಡಬ್ಬಿಯ ಉಗಿಯಿಂದ ಎಲ್ಲ ಅಡಿಗೆಯನ್ನು ತಯಾರಿಸು." ವಲ್ಲಭಭಾಯಿ ಅಂದರು : "ನನಗೆ ಚಲೋ ಬೇಳೆ ಸಿಗಬೇಕಾದರೆ ೪-೫ ದಿವಸಗಳು ಈ ಪ್ರಯೋಗದಲ್ಲಿಯೇ ಹೊರಟುಹೋಗುವವು." ನನಗೆ ಬಾಪೂ ಅವರ ಸೂಚನೆಯು ಚೆನ್ನಾಗಿ ಕಾಣುತ್ತದೆ ಮತ್ತು ಅವರು ಹೇಳಿದಂತೆ ಮಾಡಬೇಕೆಂದಿದ್ದೇನೆ.

* * *

ಇವತ್ತು ಆಕ್ಸಫರ್ಡ ಯುನಿವ್ಹರ್ಸಿಟಿ ಪ್ರೆಸದಿಂದ ನನ್ನ ಕಡೆಗೆ ಆತ್ಮಕಥೆಯ

ಬಾಲೋಪಯೋಗಿ ಸಂಸ್ಕರಣದ ಪ್ರೂಫ ಬಂದವು. ಬಾಪೂ ಅವನ್ನು ಓದಿ ಅವುಗಳಲ್ಲಿ ಅನೇಕ ಸುಧಾರಣೆ ಮಾಡತೊಡಗಿದರು.

ಬಾಪೂ Fors Clavigera ( ಫೋರ್ಸ್ ಕ್ಲೆವ್ಹಿಜೆರಾ ) ಎಂಬ ಪುಸ್ತಕ ಕೂಡ ಓದಲು ಪ್ರಾರಂಭಮಾಡಿದರು. ಅವರು ಅದನ್ನು ಒಳ್ಳೆ ಆಸಕ್ತಿಯಿಂದ ಓದುತ್ತಾರೆ. ಪ್ರತಿವಾರ ಆಶ್ರಮಕ್ಕೆ ಕಳಿಸುವ ಸಾಹಿತ್ಯ ಅಥವಾ ಪುರಸ್ಕಾರ ಇದರಲ್ಲಿ ಹೊರಡ ಬಹುದೆಂಬ ಭರವಸೆ ಬಾಪೂ ಅವರಿಗಿದೆ.

ಇವತ್ತು ಸಾಯಂಕಾಲ ತಿರುಗಾಡುವಾಗ ವೃತ್ತಪತ್ರಗಳಿಲ್ಲದುದರಿಂದ ಮಾತುಗಳು ಪ್ರಾರಂಭವಾದುವು . . . ರ ಚರ್ಚೆ ನಡೆದಿತ್ತು. ಒಂದಾನೊಂದು ಕಾಲ ಹೀಗಿತ್ತು. ಬಾಪೂ ಅವರ ಕಿವಿಹಿಂಡಿ ಹೇಳುತ್ತಿದ್ದರು : " ನೀವು ಪ್ರತಿನಿತ್ಯ ಪ್ರತಿಸ್ಥಳದಲ್ಲಿ ' ನಾನು ರಾಜದ್ರೋಹಿ ' ' ನಾನು ರಾಜದ್ರೋಹಿ ' ಎಂದು ಏತಕ್ಕಾಗಿ ಹೇಳುತ್ತೀರಿ? ಪ್ರಸಂಗ ಬಂದಾಗ ಹೇಳಿದರೆ ಸರಿ ಹೋದೀತು. ಆದರೆ ಯಾವಾಗಲೂ ಇದರ ಆವಶ್ಯಕತೆಯಿಲ್ಲ. " . . . ರು ಉತ್ತರ ಕೊಟ್ಟಿದ್ದರು : " ಯಾರಿಗೆ ಗೊತ್ತು, ಎಂದಾದರೊಂದು ದಿನ ನಾವು ನಮ್ಮ ಸಿದ್ಧಾಂತದಿಂದ ಜಾರಿದರೆ ನಮಗೆ ಜ್ಞಾಪಕ ಕೊಡಲಿಕ್ಕೆ ಉಪಯೋಗ ಬೀಳಬಹುದು. " ಬಾಪೂ ಹೇಳಿದರು : " ಕುಮುದ ಹಾಡುತ್ತಿದ್ದಳಲ್ಲ ಅಂತಹದೇ ಆಗಿದೆ ಈ ಮಾತು. **प्रमाद्धन मुज साचा स्वामी, ये विण अप्रिय सर्व वीजुं ।** ' ಯೋಗಧನದ ವಿಷಯಕ್ಕೆ ಸ್ವಲ್ಪವೂ ಭಾವನೆಯಿದ್ದಿಲ್ಲ. ಆದುದರಿಂದ ಪಾಠಮಾಡಿ ಭಾವನೆಯನ್ನು ಹುಟ್ಟಿಸಿಕೊಳ್ಳ ತೊಡಗಿದಳು ! "

ಮುಂದೆ ಗೋವರ್ಧನರಾಮರ ವಿಷಯವಾಗಿ ಮಾತು ಹೊರಟವು. ಬಾಪೂ ಹೇಳಿದರು : " ಮೊದಲನೆಯ ಭಾಗದಲ್ಲಿ ಅವರು ತಮ್ಮ ಶಕ್ತಿಯನ್ನು ಸೂರೆ-ಮಾಡಿದ್ದಾರೆ. ಕಾದಂಬರಿಯ ರಸವು ಮೊದಲನೆಯ ಭಾಗದಲ್ಲಿಯೇ ತುಂಬಿಕೊಂಡಿದೆ. ಚರಿತ್ರ ಚಿತ್ರಣವು ಅದರಂತೆ ಇನ್ನೆಲ್ಲಿಯೂ ದೊರೆಯದು. ಎರಡನೆಯದರಲ್ಲಿ ಹಿಂದೂ ಸಂಸಾರದ ಸರ್ವೋತ್ಕೃಷ್ಟ ಚಿತ್ರವಿದೆ. ಮೂರನೆಯದರಲ್ಲಿ ಅವರ ಕಲೆಯು ಕುಂದ ತೊಡಗಿತು. ಮತ್ತು ನಾಲ್ಕನೆಯದರಲ್ಲಿ ' ನನಗೆ ಜಗತ್ತಿಗೆ ಹೇಳುವದನ್ನೆಲ್ಲ ಇದೇ ಪುಸ್ತಕದಲ್ಲಿ ಹೇಳಿಬಿಟ್ಟರೆ ಎಷ್ಟು ಒಳ್ಳೆಯದು ' ಎಂಬ ವಿಚಾರವು ಅವರಿಗೆ ಉಂಟಾಗಿದೆ. "

ನಾನು ಹೇಳಿದೆ: " ಅವರಲ್ಲಿ ಸಣ್ಣ ಕತೆಗಳನ್ನು ಬರೆಯುವ ಕಲೆ ಇದ್ದಿಲ್ಲ. ಅವರು ಬರೆಯಲೇ ಇಲ್ಲ. ಆದರೆ ಬರೆಯಬೇಕೆಂದು ಅಪೇಕ್ಷಿಸಿದ್ದರೂ ಬರೆಯಲು ಶಕ್ಯರಾಗುತ್ತಿದ್ದಿಲ್ಲ. ಈ ಕಲೆಯೂ ಅದರೊಂದಿಗೆ ಕಾದಂಬರಿಗಳನ್ನು ಬರೆಯುವ ಕಲೆಯೂ ಟಾಗೋರರಿಗೆ ಸಾಧಿಸಿದ್ದವು. "

ಬಾಪೂ ಅಂದರು : " ಟಾಗೋರರ ಮಾತೇನು ? ಅವರು ಸಾಧಿಸದಿದ್ದುದು

ಯಾವುದು ? ಸಾಹಿತ್ಯದ ಒಂದಾದರೂ ಕ್ಷೇತ್ರವನ್ನು ಅವರು ಬಿಟ್ಟಿರುವರೇ ! ಮತ್ತು ಎಲ್ಲಕ್ಕೂ ಹೆಚ್ಚಿನದೆಂದರೆ— ಇಂಥ ಅಲೌಕಿಕ ಶಕ್ತಿವಾನ ಮನುಷ್ಯನು ನಮ್ಮಲ್ಲಿಯಂತೂ ಇಲ್ಲವೇ ಇಲ್ಲ. ಆದರೆ ಜಗತ್ತಿನಲ್ಲಿ ಸಹ ಇರುವನೋ ಇಲ್ಲವೋ ಎಂಬ ಬಗ್ಗೆ ನನಗೆ ಸಂದೇಹವಿದೆ." . . . ಆ ಮೇಲೆ ವಲ್ಲಭಭಾಯಿ ಮಾತಾಡಿದರು: "ಅವರ ಶಾಂತಿನಿಕೇತನ ನಡೆಯಬಹುದೋ ? ಅವರಂತೂ ಮುದುಕರಾದರು. ಅವರ ಸ್ಥಾನಕ್ಕೆ ಬರುವವರು ಯಾರೂ ಇಲ್ಲ." ಬಾಪೂ ಹೇಳಿದರು : "ಇದನ್ನು ಹೇಳುವದು ಕಠಿಣ. ಆದರೆ ಹೀಗೆ ಹೇಗೆ ಅನ್ನಲಿಕ್ಕೆ ಬಂದೀತು ? ದೇವರು ಇಷ್ಟು ಅಸಾಧಾರಣ ಮನುಷ್ಯನನ್ನು ಹುಟ್ಟಿಸಿದನು. ಅಂದಮೇಲೆ ಅವನ ಕೆಲಸವು ಹೀಗೆ ಮೂಲೆಗುಂಪಾಗಿ ಬೀಳಬೇಕೆಂದು ಆತನ ಇಚ್ಛೆ ಇರಲಿಕ್ಕಿಲ್ಲ !" ವಲ್ಲಭಭಾಯಿ ಮಾತಾಡಿದರು : "ಇದೇನೋ ಸರಿ. ಆದರೆ ಅವರ ಅಲೌಕಿಕ ಕೃತಿಗಳನ್ನು ಯಾರು ಯಾವ ಕ್ಷೇತ್ರದಲ್ಲಿ ತರಬಹುದು ? " ನಾನು ಹೇಳಿದೆ : " ನಂದಲಾಲ ಬೋಸ, ಅಸಿತ ಹಲಧರರಂಥ ಉತ್ತಮ ಚಿತ್ರಕಾರರು ಅಲ್ಲಿ ಇದ್ದಾರೆ. ವಿಧುಶೇಖರ ಶಾಸ್ತ್ರಿಯವರೂ ಇದ್ದಾರೆ." ವಲ್ಲಭಭಾಯಿ ಅಂದರು : " ಚಿತ್ರಕಲೆಯಂತೂ ಒಳ್ಳೆಯದೆ. ಆದರೆ ಆದರ ಪಾಠಶಾಲೆಗಳು ಎಷ್ಟು ನಡೆಯಬಹುದು ? ನಮ್ಮದಂತೂ ಖಾದಿ ಮತ್ತು ರಾಟೆಯಿದೆ. ಅದಕ್ಕಾಗಿ ಬಾಪೂ ಅವರ ಅವಶ್ಯಕತೆಯಿಲ್ಲ. ಬಾಪೂ ಇಲ್ಲದಿದ್ದರೂ ಧೂಧಾಭಾಯಿ ಬಂದು ನಡಿಸಬಹುದು. ಜನರು ತಮ್ಮ ಕೈಯಲ್ಲಿ ತೆಗೆದುಕೊಂಡು ಅಖಂಡವಾಗಿ ನಡಿಸುತ್ತಿರುವಂತೆ ಅವರು ಒಂದೂ ವಸ್ತುವನ್ನು ಕೊಡಲಿಲ್ಲ."

ನಾನು ಹೇಳಿದೆ : " ಗಾಂಧೀಜಿಯವರ ಎಲ್ಲ ಮಾತುಗಳನ್ನೂ ಜನರು ಮರೆತು ಬಿಡುವರು. ಆದರೆ ಖಾದೀ ಮತ್ತು ಮದ್ಯ-ನಿಷೇಧಗಳು ಯಾವಾಗಲೂ ಉಳಿಯುವವು ಎಂದು ಒಬ್ಬ ಮಹಾತ್ಮನು ಹೇಳುತ್ತಿದ್ದನು."

ಬಾಪೂ : " ಇದರ ಕಾರಣವೆಂದರೆ ಇದು ಸಾಮಾನ್ಯ ಜನರಿಗೆ ಒಪ್ಪಿಗೆಯಿದೆ. ಇದನ್ನು ತೀರ ಸರ್ವಸಾಮಾನ್ಯ ಮನುಷ್ಯನೂ ನಡೆಸಬಲ್ಲನು."

ಈ ಸಮಯಕ್ಕೆ ನನ್ನ ಮನಸ್ಸಿನಲ್ಲಿ ಅನೇಕ ವಿಚಾರಗಳು ಅಲೆದಾಡಿದವು. ' ಬಾಪೂ ಅವರ ಪಶ್ಚಾತ್ ಆಶ್ರಮವನ್ನು ನಡಿಸುವವರು ಯಾರು ? ಆಶ್ರಮದ ಅಸಾಧಾರಣ ವ್ರತಗಳ ಪಾಲನೆಗಾಗಿ ಯಾವಾಗಲೂ ಅವುಗಳ ಬೆನ್ನುಹತ್ತಿ ಹಗಲು ರಾತ್ರಿ ಅವುಗಳ ಬಗ್ಗೆ ಜಾಗ್ರತವಿರಲಿಕ್ಕೆ ಹೇಳುವವರಾರು? ಭಿನ್ನ ಪ್ರಕೃತಿಯ ಭಿನ್ನ ಪ್ರದೇಶದ, ಭಿನ್ನ ರುಚಿ ಮತ್ತು ಶಕ್ತಿಯ ಸ್ತ್ರೀ-ಪುರುಷರೂ ಮಕ್ಕಳು-ಮರಿಗಳೂ ಇದ್ದಂಥ ನಮ್ಮ ಆಶ್ರಮದ ಪರಿವಾರವನ್ನು ಬಾಪೂವಿನ ಪಶ್ಚಾತ್ ನಡೆಸುವವರು ಯಾರು? ದೇವರು. ಸತ್ಯ ಮತ್ತು ಅಹಿಂಸೆಯಲ್ಲಿ ಶ್ರದ್ಧೆಯನ್ನಿಡುವಂಥ ಮತ್ತು ಅದಕ್ಕಾಗಿ ಸಾಯಲು ಸಿದ್ಧರಿದ್ದಂಥ ಅಜ್ಞಾತ ಜನರು ಅನೇಕರಿರುವದರಿಂದ ನಮ್ಮಲ್ಲಿ ನ್ಯೂನತೆಗಳಿದ್ದಾಗ್ಯೂ ಅವಿಶ್ವಾಸ ತಳೆಯಲು ಕಾರಣವಿಲ್ಲ."

ಕೂಡಲೇ ನಾನು ಹೇಳಿದೆ: "ಟಾಗೋರರ ವಿಷಯದಲ್ಲಿ ಇಷ್ಟು ಹೇಳಬಹುದು: ಇದುವರೆಗೂ ಅವರ ಕಡೆಗೆ ಅಸಾಧಾರಣ ಪ್ರತಿಭಾಶಾಲಿಯಾದ ಜನರು ಆಕರ್ಷಿತರಾಗಿ ಬರದಿದ್ದರೂ ಬಹುತರ ಇನ್ನು ಮೇಲೆ ಅವರ ಕೆಲಸವನ್ನು ಮುಂದುವರಿಸುವದಕ್ಕಾಗಿ ಅಂಥವರು ಬರಬಹುದು. ಶಾಂತಿನಿಕೇತನವನ್ನು ಅವರ ಆದರ್ಶದಂತೆಯೇ ಮುಂದುವರಿಸುವದಕ್ಕಾಗಿ ಹೊಸ ಜನರು ಯಾಕೆ ಭಾಗ ತೆಗೆದುಕೊಳ್ಳಲಿಕ್ಕಿಲ್ಲ?"

ಬಾಪೂ ಹೇಳಿದರು: "ಸರಿಯಾದ ಮಾತು. ಇವತ್ತು ಅವರ ಪ್ರಚಂಡ ಶಕ್ತಿಗೆ ಹೆಚ್ಚು ಜನರು ಆಕರ್ಷಿತರಾಗದಿದ್ದರೂ ಭವಿಷ್ಯದಲ್ಲಿ ಆಗಬಹುದು. ಇವತ್ತು ಕೂಡ ರಮಾನಂದ ಚಟರ್ಜಿಯಂಥವರು ಇದ್ದೇ ಇರುವರು. ದೇವರ ದಯೆಯಿದ್ದರೆ ಇನ್ನೂ ಹೆಚ್ಚು ಜನರು ಬರಬಹುದು. ಮತ್ತು ಅವರ ಶ್ರೀನಿಕೇತನದ ಕೆಲಸವಂತೂ ನಡೆದೇ ನಡೆಯುವದು. ಎಲ್ಮಹರ್ಸ್ಟರಂಥವರು ಇಂಗ್ಲಂಡ ಬಿಟ್ಟು ಇಲ್ಲಿಗೆ ಇದನ್ನು ನಡೆಸಲಿಕ್ಕೆ ಬಂದರೆ ನನಗೆ ಆಶ್ಚರ್ಯವಾಗಲಿಕ್ಕಿಲ್ಲ."

ವಲ್ಲಭಭಾಯಿ: "ನಮ್ಮ ಕೆಲಸ ಮುಂದೆ ನಡೆಯುವದೆಂಬುದರಲ್ಲಿ ನನಗೆ ಭರವಸೆಯಿದೆ. ಇದರಲ್ಲಿ ವಿಶೇಷ ವಿಚಾರ ಮಾಡತಕ್ಕಂಥ ಮಾತೇನೂ ಇಲ್ಲ."

ಬಾಪೂ: "ಲೀಡರರಲ್ಲಿ ದೇವದಾಸನು ನೂಲುವ ವಿಷಯವಾಗಿ ಬರೆದ ಮಾರ್ಮಿಕ ವಾಕ್ಯವು ನನಗೆ ಜ್ಞಾಪಕವಾಗುತ್ತದೆ— It is too simple to command attention and belief. ರಾಟಿಯ ವಿಷಯವು ಅತ್ಯಂತ ಸಾದಾ ಇರುವದರಿಂದ ಜನರ ಧ್ಯಾನ ಮತ್ತು ಶ್ರದ್ಧೆಗಳನ್ನು ಆಕರ್ಷಿಸಲಾರದು."

ಮಹೆರಬಾಬಾರ ಮಾತು ಹೇಗೋ ಹೊರಟಿತು. ಬಾಪೂ ಹೇಳತೊಡಗಿದರು: "ಅವನು ಒಳ್ಳೇ ಯೋಗ್ಯತೆಯ ಮನುಷ್ಯನು. ಆತ ಯಾರನ್ನೂ ಹುಡುಕಲಿಕ್ಕೆ ಹೋಗುವದಿಲ್ಲ. ಆದರೆ ಜನರು ಆತನನ್ನು ಹುಡುಕಿಕೊಂಡು ಬರುತ್ತಾರೆ. ದುಡ್ಡು ತಾನಾಗಿ ಬರುತ್ತದೆ. ವಿಲಾಯತಿಯಿಂದ ಯಾವಳಾದರೂ ಚಲಚ್ಚಿತ್ರದ ತಾರೆ ಕರೆದರೂ ಹೋಗುವರು. ಅಮೇರಿಕೆಯ ಶ್ರೀಮಂತರು ಕರೆದರೂ ಹೋಗುವರು ಮತ್ತು ಅವರ ಪ್ರಭಾವವಾದರೂ ಏಕೆ ಬೆಳೆಯಲಿಕ್ಕಿಲ್ಲ? ಏಳು ವರ್ಷಗಳಿಂದ ಮೌನ, ಆದರೂ ಹುಚ್ಚನಲ್ಲ. ಇಷ್ಟು ಮಾತುಗಳು ಜನರನ್ನು ಆಕರ್ಷಿಸಲಿಕ್ಕೆ ಸಾಕು."

"ಅವರು ನಿಮಗೆ ತಮ್ಮ ಪುಸ್ತಕವನ್ನು ಓದಲಿಕ್ಕೆ ಕೊಟ್ಟಿದ್ದರು. ಅದು ನಿಮಗೆ ಹೇಗೆನಿಸಿತು?" ಎಂದು ನಾನು ಕೇಳಿದೆ. ಬಾಪೂ: "ಅದರಲ್ಲಿ ಯಾವ ಮಾತೂ ಅಸಾಧಾರಣವಾಗಿ ತೋರಲಿಲ್ಲ. ಮತ್ತು ಇಂಗ್ಲೀಷ ಭಾಷೆಯಲ್ಲಿ ಬರೆದಿತ್ತು. ಅವರ ಶಿಷ್ಯನು ಅವರ ವಿಚಾರಗಳನ್ನು ಬರೆದದ್ದರಿಂದ ಗಡಿಬಿಡಿ ಗೊಂದಲಗಳಾದಂತಿವೆ. ನಿಮಗೆ ಬರೆಯುವದಿದ್ದರೆ ಗುಜರಾತಿಯಲ್ಲಿ ಬರೆಯಿರಿ ಅಥವಾ ನಿಮ್ಮ ಮಾತೃಭಾಷೆಯಾದ ಪಾರ್ಸಿಯಲ್ಲಿ ಬರೆಯಿರಿ. ನಾವು ಪರಕೀಯ ಭಾಷೆಯಲ್ಲಿ ಏಕೆ ಬರೆಯಬೇಕು?

ಎಂದು ನಾನು ತಿಳಿಸಿದೆ. ಈ ಮಾತು ಅವರಿಗೆ ಒಪ್ಪಿಗೆಯಾಯಿತು."

ನಾನು: "ಅವರ ಮುಖಮುದ್ರೆಯ ಮೇಲೆ ಒಂದು ಪ್ರಕಾರದ ಪ್ರಸನ್ನತೆಯಿದೆ."

ಬಾಪೂ: "ಹೌದು, ಇದೆ. ಅವರಿಗೆ ಯಾವಾಗಲೂ ಆನಂದವೇ ಆನಂದವಿದೆಯೆಂದು ಅವರು ದೃಢತೆಯಿಂದ ಹೇಳುತ್ತಾರೆ. ಅವರಿಗೆ ಸಾಕ್ಷಾತ್ಕಾರವಾಗಿದೆಯೆಂದು ಅವರು ತಿಳಿಯುತ್ತಾರೆ. ಅವರು ಬಾಲಬ್ರಹ್ಮಚಾರಿಯಿದ್ದು ತಮಗೆ ವಿಕಾರವಾಗುವದಿಲ್ಲೆಂದು ಹೇಳುತ್ತಾರೆ. ಮತ್ತು ಅವರು ನಿಜ ಹೇಳುವರೆಂದು ನಾನು ಭಾವಿಸಿದ್ದೇನೆ. ಅವರಲ್ಲಿ ಆಡಂಬರವಂತೂ ಇಲ್ಲವೇ ಇಲ್ಲ.

ಇಂದು ಬೆಳಿಗ್ಗೆ ಸ್ಟೋಕ್ಸರ ಪುಸ್ತಕ ಓದುತ್ತ ಓದುತ್ತ ಒಮ್ಮೆಲೆ ಅಂದರು: "ನಿನ್ನ ಹತ್ತಿರ ಈಶೋಪನಿಷತ್ ಇದೆಯೋ? ಅದರ ಹದಿನೆಂಟು ಮಂತ್ರಗಳಲ್ಲಿ ಎಲ್ಲವೂ ಬಂದು ಬಿಟ್ಟಿದೆ. ಅಥವಾ ಮೊದಲಿನ ಮಂತ್ರದಲ್ಲಿಯೇ ಎಲ್ಲವೂ ತುಂಬಿಕೊಂಡಿದೆ. ಮತ್ತೆ ಮತ್ತೆ ಓದಬೇಕೆಂದು ಜೀವ ತಲ್ಲಣಿಸುತ್ತದೆ. ಎಲ್ಲ ಶ್ಲೋಕಗಳನ್ನು ಪಾಠಮಾಡಬೇಕೆಂದು ಮನಸ್ಸಾಗುತ್ತದೆ."

ನಾನು: "ನನ್ನ ತಂದೆಯು ಚಿಕ್ಕಂದಿನಲ್ಲಿಯೇ ಇವನ್ನು ನನಗೆ ಪಾಠಮಾಡಿಸಿದ್ದರು. ಅವರು ನಥೂರಾಮ ಶರ್ಮಾರ ಪುಸ್ತಕದಿಂದ ಓದುತ್ತಿದ್ದರು. ನನ್ನ ಕಕ್ಕ ಅವರ ಶಿಷ್ಯರಿದ್ದರು."

ಬಾಪು: "ನಥೂರಾಮ ಶರ್ಮಾ ಇವರ ಪುಸ್ತಕವು ಚನ್ನಾಗಿದೆ. ಅವರ ಅನುವಾದವನ್ನು ಓದುವಾಗ ಹಿತವೆನಿಸುತ್ತದೆ. ನಥೂರಾಮರ ಪ್ರಭಾವವು ಅಷ್ಟಿಷ್ಟಿದ್ದಿಲ್ಲ."

ನಾನು: "ಒಂದಾನೊಂದು ಸಮಯ ಪ್ರಾತಃಕಾಲ ಮತ್ತು ಸಾಯಂಕಾಲ ಸಂಧ್ಯಾ ಮಾಡಿದ ಹೊರತು ನಮಗೆ ಊಟ ಸಿಗುತ್ತಿದ್ದಿಲ್ಲ. ನನ್ನ ಕಕ್ಕಂದಿರ ನಿಯಮಗಳು ಇಷ್ಟು ಕಠೋರವಾಗಿದ್ದವು."

ಬಾಪೂ: "ಹೌದು, ಅವರಲ್ಲಿ ಅನೇಕ ಉತ್ತಮ ಗುಣಗಳಿದ್ದವು. ಬಳಿಕ ಆಡಂಬರ ಬೆಳೆದು ಕಾರ್ಯ ಕೆಟ್ಟಿತು. ನಾನು ಎಲ್ಲ ಉಪನಿಷತ್ತುಗಳ ಅವರ ಅನುವಾದಗಳನ್ನೇ ಓದಿದ್ದೆನು, ಮತ್ತು ಅದು ನನಗೆ ಒಳ್ಳೆಯದೆನಿಸಿತು."

ಇವತ್ತು ಕಮಿಶನರ ಕೇಡಲ್ ಬಂದಿದ್ದ. 'ಮಹದೇವರಾವ' ದೇಸಾಯಿಯವರ ವಿಷಯವಾಗಿ ವಿಚಾರಿಸಿದ. ಆದರೆ ನಾನು ಬಹಿರ್ದೆಶೆಗೆ ಹೋಗಿದ್ದೆ. ಅವನು ಬಾಪೂ ಅವರಿಗೆ ಹೇಳಿದ: "ಈ ಸಾರೆ ಯುದ್ಧದಲ್ಲಿ ಸರಕಾರ ಮತ್ತು

೨೬–೩–'೩೨ ಜನರು ಈ ಎರಡೂ ಪಕ್ಷಗಳಲ್ಲಿಯೂ ಕಹಿತನವಿಲ್ಲ. ನಾನು ಜನರಿಗೆ ಇಷ್ಟು Credit (ಶ್ರೇಯ)ಸ್ಸು ಕೊಡುತ್ತೇನೆ."

ಬಾಪೂ ಹೇಳಿದರು: 'You may keep the credit and let us have the cash.

ನೀವು ಶ್ರೇಯಸ್ಸನ್ನು ಇಟ್ಟುಕೊಳ್ಳಿರಿ, ಮತ್ತು ನಮಗೆ ನಗದು ಹಣ ಕೊಟ್ಟುಬಿಡಿ." ಬಳಿಕ ಕಮಿಶನರ ಹೇಳಹತ್ತಿದ: "ನನ್ನ ಈ ಭಾಗದಲ್ಲಿ ನೂರಕ್ಕೆ ೯೯ ರಷ್ಟು ಜನರು ಮಹಾತ್ಮರನ್ನು ಗುರುತಿಸುವದಿಲ್ಲ, ಆದರೆ ನನ್ನನ್ನು ಗುರುತಿಸುತ್ತಾರೆ." ಈ ಮನುಷ್ಯನಿಗೆ ಗೋಧರಾದ ದಿನಗಳಿಂದ ಮಹಾತ್ಮರ ಪರಿಚಯವಿದೆ. ಮುಂಬೈಯಲ್ಲಿ ಕೂಡ ಭೆಟ್ಟಿಯಾಗಿದ್ದನು. ಈ ಅಭಿಪ್ರಾಯ ವ್ಯಕ್ತಮಾಡುವಾಗ ಅವನಿಗೆ ತನ್ನ ಅವಿವೇಕದ ಅರಿವು ಕೂಡಾ ಆಗಿರಲಿಕ್ಕಿಲ್ಲವೇ! ಇಷ್ಟರಲ್ಲಿ ನಾನು ಬಂದೆ. ನನಗೆ ಹೇಳತೊಡಗಿದ: "ಸರಕಾರವು ನಿಮ್ಮನ್ನು ಇಲ್ಲಿ ಗಾಂಧೀಜಿಯವರ ಯೋಗಕ್ಷೇಮ ನೋಡುವದಕ್ಕಾಗಿ ಇಟ್ಟಿದೆ." ನಾನು ಉತ್ತರ ಕೊಟ್ಟೆ: "ನಾನು ಅವರ ಯೋಗಕ್ಷೇಮ ತೆಗೆದುಕೊಳ್ಳುತ್ತೇನೆಯೊ ಅಥವಾ ಅವರು ನನ್ನದು ತೆಗೆದುಕೊಳ್ಳುತ್ತಾರೆಯೊ ಹೇಳುವದು ಕಠಿಣ." ಅವನು ಮತ್ತೆ ಮಾತಾಡಿದ: "ನಿಮ್ಮಂಥ ಮೂವರು ಉತ್ತಮ ತಲೆಯುವರನ್ನು ಸರಕಾರವು ಒಂದೆಡೆಗೆ ಇಟ್ಟಿರುವದು ಸರಕಾರಕ್ಕೆ ನಿಮ್ಮ ವಿಷಯಕ್ಕೆ ಎಷ್ಟು ವಿಶ್ವಾಸವಿದೆ ಎಂಬುದನ್ನು ತೋರಿಸುತ್ತದೆ."

ಇವತ್ತು ಮಿರಾಬಹೆನರ ಎರಡು ವಾರದ ಪತ್ರಗಳು ಬಂದವು. ಸುಪರಿಂಟೆಂಡೆಂಟನ ಹತ್ತಿರ ಅವು ಕೂಡಿ ಬಿದ್ದಿರಬೇಕು. ಆದರೆ ಅವನು ಈ ಪತ್ರ ಬಂದಿವೆಯೆಂದು ಹೇಳಿದ್ದಿಲ್ಲ. ಬಾಪೂ ಅವರಿಗೆ ಇದು ಬಹಳ ಕೆಡಕೆನಿಸಿತು. ಆದುದರಿಂದ ಡಾಹ್ಯಾಭಾಯಿಯ ಭೆಟ್ಟಿಯಾದಮೇಲೆ ಬಾಪೂ ಸುಪರಿಂಟೆಂಡೆಂಟನಿಗೆ ಹೇಳಿದರು: 'ನಾನು ಎಲ್ಲವನ್ನೂ ಸಹನ ಮಾಡಿಕೊಳ್ಳುವೆ. ಆದರೆ ನೀವು ನನಗೆ ಮೋಸ ಮಾಡುವದನ್ನು ಸಹಿಸೆನು. ನೀವು ಪ್ರಾಮಾಣಿಕತನದಿಂದ ನಡೆದರೆ ನಾನು ನಿಮ್ಮೆದುರಿಗೆ ಮೇಕೆಯಂತೆ ಬಾಗಿ ನಡೆಯುವೆನು. ಇಂಥ ಸುದ್ದಿಯನ್ನು ಹೇಳಲಿಕ್ಕಾಗುವದಿಲ್ಲವೆಂದು ನೀವು ಅಂದರೆ ನಡೆದೀತು. ಆದರೆ ಸುಳ್ಳು ಮತ್ತು ಮೋಸಗಳನ್ನು ನಾನು ಸಹಿಸಲಾರೆ." ಅವನು ಚೇತರಿಸಿಕೊಂಡ. ಇಲ್ಲ, ಇನ್ನುಮುಂದೆ ಹೀಗೆ ಎಂದೂ ಆಗುವದಿಲ್ಲವೆಂದು ಭರವಸೆ ಕೊಟ್ಟ.

The living church (ದಿ ಲಿವಿಂಗ ಚರ್ಚ) ಎಂಬ ಹೆಸರಿನ ಅಮೇರಿಕೆಯ ಒಂದು ಸಾಪ್ತಾಹಿಕದಲ್ಲಿ What is Gandhi's religion? (ಗಾಂಧೀಯವರ ಧರ್ಮ ಯಾವದು?) ಎಂಬ ಶಿರೋನಾಮದ ಕೆಳಗೆ ಒಂದು ಅತ್ಯಂತ ಮಹತ್ವದ ಲೇಖ ಬಂತು. ಇದನ್ನು ಅಮೇರಿಕೆಯಿಂದಲೇ ಯಾರೋ ಬರೆದು ಕಳಿಸಿದ್ದಾರೆ. ಪಾದ್ರೀ ಸಮಾಜದಲ್ಲಿ ಬಾಪೂ ಅವರ ಪ್ರಭಾವವು ಬಹಳ ಹೆಚ್ಚಿದ್ದರಿಂದ ಅದರ ಪ್ರಚಾರಕರು ಗಾಬರಿಗೊಂಡಿದ್ದಾರೆಂಬುದನ್ನು ಈ ಲೇಖದಲ್ಲಿ ಕಾಣಿಸಲಾಗಿದೆ. ಇದರ ಲೇಖಕರಾದ ರೆಸ್ಟರೆಂಡ್ ಮಾಡಿಯುವರು ಒಳ್ಳೇ ಶಕ್ತಿಶಾಲಿಗಳೆಂದು ತೋರುತ್ತದೆ. ಎಂಟು ವರ್ಷಗಳಿಂದ ಬಾಪೂ ಅವರ ಎಲ್ಲ ಸಾಹಿತ್ಯಗಳನ್ನು ಓದುತ್ತಿರುತ್ತಾರೆ. ಬಾಪೂಗೆ ಕ್ರೈಸ್ತರೆಂದು ಹೇಳುವವರನ್ನೂ, ಅವರನ್ನು

ಈಸಾ ಮಸೀಹ (ಕ್ರೈಸ್ತಧರ್ಮ ಪ್ರವರ್ತಕ) ರೆಂದು ತಿಳಿಯುವವರನ್ನೂ ಮತ್ತೂ ಈ ಕಾಲದ ಪ್ರತ್ಯಕ್ಷ ಕ್ರಿಸ್ತನೆಂದು ಭಾವಿಸುವವರನ್ನೂ ಈ ಲೇಖದಲ್ಲಿ ಬಲವಾಗಿ ಟೀಕಿಸಲಾಗಿದೆ. ಇದರಲ್ಲಿ ಕೆಲವು ಟೀಕೆಗಳು ಬಹಳ ಮಾರ್ಮಿಕವಾಗಿವೆ.

The Americans look at him without understanding him. Gandhi is not a christian, makes no pretence of being so, and owes very little of anything to the teaching of Christ . . . I can have little in common with those among us who are trying to persuade America that Gandhi, a Hindu to the core is really 'unconsciously Christian' . Gandhi believed in 'non-violence' to any creature long before he ever heard of Christianity. It was part of his child hood faith. His mother taught it to him The principle of Ahimsa (non-violence) whereon he lays so much stress today is distinctly and beyond controversy a part of his Hindu heritage''.

ಅಮೇರಿಕೆಯ ಜನರು ಅರಿಯದೆ ಗಾಂಧೀಯವರನ್ನು ಹಿಂಬಾಲಿಸುತ್ತಿದ್ದಾರೆ. ಗಾಂಧಿಯು ಕ್ರೈಸ್ತರಲ್ಲವೇ ಅಲ್ಲ. ಅವರೂ ಕೂಡಾ ಹಾಗೆ ಹೇಳುವದಿಲ್ಲ. ಅವರಲ್ಲಿದ್ದ ಗುಣಗಳಲ್ಲಿ ತೀರ ಸ್ವಲ್ಪು ಅಂಶಕ್ಕೆ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಋಣಿಯಾಗಿರುವರು. ನಮ್ಮಲ್ಲಿ ಕೆಲವು ಜನರು ಗಾಂಧಿಯು ಸ್ವತಃ ಅರಿಯದಿದ್ದರೂ ಅವನು ಕ್ರಿಸ್ತನಿದ್ದಾನೆಂದು ಅಮೇರಿಕೆಗೆ ತಿಳಿಸಲು ಪ್ರಯತ್ನಿಸುತ್ತಿದ್ದಾರೆ. ನಾನೇನು ಇದನ್ನು ಒಪ್ಪುವದಿಲ್ಲ. ಅವರು ನಖಶಿಖಾಂತ ಹಿಂದುವಾಗಿದ್ದಾರೆ. ಕ್ರಿಶ್ಚಿಯನ್ ಧರ್ಮದ ಬಗ್ಗೆ ಅವರು ಏನಾದರೂ ಅರಿತುಕೊಳ್ಳುವ ಪೂರ್ವದಲ್ಲಿ ಅಥವಾ ಕೇಳಿಕೊಳ್ಳುವ ಮೊದಲೇ ಅವರು ಪ್ರಾಣಿಮಾತ್ರದ ವಿಷಯಕ್ಕೆ ಅಹಿಂಸಾಧರ್ಮವನ್ನು ಮನ್ನಿಸುತ್ತಿದ್ದರು. ಅವರು ಚಿಕ್ಕಂದಿನಿಂದ ಅಹಿಂಸೆಯನ್ನು ತಮ್ಮ ಧರ್ಮದ ಒಂದು ಸಿದ್ಧಾಂತವೆಂದು ತಿಳಿಯುತ್ತಾರೆ. ಇದನ್ನು ಅವರಿಗೆ ಅವರ ತಾಯಿಯು ಕಲಿಸಿದ್ದರು. ಇವತ್ತು ಅವರು ಯಾವ ಅಹಿಂಸಾ ಸಿದ್ಧಾಂತದ ಮೇಲೆ ಇಷ್ಟು ಜೋರು ಕೊಡುತ್ತಾರೆಯೊ ಅದು ಅವರಿಗೆ ಹಿಂದೂ ಧರ್ಮದ ಪರಂಪರೆಯಿಂದ ಸಿಕ್ಕಿತೆಂಬುದು ನಿರ್ವಿವಾದ ಮಾತು."

ಇಷ್ಟು ಹೇಳಿ–ಇಷ್ಟು ನಿಜವಾದ ಮಾತನ್ನು ಹೇಳಿ–ಮಹಮ್ಮದ ಅಲ್ಲಿಯವರು ಒಂದು ನಾರೆ ಹೇಳಿದ ಮಾತನ್ನೇ ಈ ಪಾದ್ರಿಯು ಸೌಮ್ಯಭಾಷೆಯಲ್ಲಿ ಬಾಪೂ ಅವರ ವಿಷಯವಾಗಿ ಬರೆಯುತ್ತಾನೆ :

" Let us be done with the idea that Christianity is the only religion that can produce good men. The question is when other

religions have done their best, can Christianity, at its best, surpass them? We believe so. Mr. Gandhi is quite certainly a better Hindu than I am a Christian—that is, he practises his religion in a much better fashion than I do mine. He is probably as high a type as his religion can produce, while I am a very poor advertisement for mine. But that is not the question. It is not at all fair to judge the relative worth of Christianity and Hinduism by comparing Christians like me with Mr. Gandhi. The real question is, can Christianity at its best produce a higher type of man than Hinduism? If not, then we ought all to become Hindus. And if Hinduism can produce a type worthy to be compared with Christ himself, then why strive to make the Hindus Christian?"

". . . I would by no means seek to deny Gandhi is a 'great soul.' I believe that he is so. But from what knowledge I can get from my reading, I most certainly say that I do not think him as great a soul as very many of the Christian saints have been. I also fully believe that we have many better men in the Christian church today, although their virtues have not been so highly publicized. The battles they are fighting are not of such a spectacular character, but demand a courage and a devotion not inferior to that which Gandhi exhibits in his political contest with the British Empire."

"ಕ್ರಿಶ್ಚಿಯನ್ ಧರ್ಮ ಒಂದರಲ್ಲಿ ಮಾತ್ರ ಉತ್ತಮವಾದ ಜನರು ಹುಟ್ಟುತ್ತಾರೆಂಬ ಮಾತನ್ನು ನಾವು ಮರೆಯಬೇಕು. ಯಾವದೇ ಧರ್ಮದ ಉತ್ತಮೋತ್ತಮ ವ್ಯಕ್ತಿಗಿಂತ ಕ್ರಿಶ್ಚಿಯೇನ್ ಧರ್ಮದ ಉತ್ತಮೋತ್ತಮ ವ್ಯಕ್ತಿಯು ಶ್ರೇಷ್ಠನು ಅಹುದೋ ಅಲ್ಲವೋ ಎಂಬುದೇ ಪ್ರಶ್ನೆಯಾಗಿದೆ. ನಿಶ್ಚಯವಾಗಿ ಹೌದೆಂದು ನಾನು ತಿಳಿಯುತ್ತೇನೆ. ನನ್ನಂಥ ಕ್ರಿಶ್ಚಿಯನ್ನನಿಗಿಂತ ಗಾಂಧಿಯು ಉತ್ತಮವಾದ ಹಿಂದುವಾಗಿದ್ದಾನೆಂದು ನಾನು ಅವಶ್ಯ ಹೇಳುವೆನು. ಇದರ ಅರ್ಥವಿಷ್ಟೇ: ನಾನು ನನ್ನ ಧರ್ಮವನ್ನು ಯಾವ ರೀತಿಯಿಂದ ಆಚರಿಸುತ್ತೇನೆಯೋ ಅದಕ್ಕಿಂತ ಹೆಚ್ಚು ಉತ್ತಮ ರೀತಿಯಿಂದ ಗಾಂಧಿಯವರು ತಮ್ಮ ಧರ್ಮವನ್ನು ಆಚರಿಸುತ್ತಾರೆ. ಹಿಂದೂ ಧರ್ಮವು ಉತ್ಪನ್ನ ಮಾಡಬಹುದಾದ ಎಲ್ಲಕ್ಕೂ ಶ್ರೇಷ್ಠ ತರಗತಿಯ ಮನುಷ್ಯನು ಗಾಂಧೀ ಇರಬಹುದು. ಆದರೆ ನಾನು ಕ್ರಿಶ್ಚಿಯನ್ ಧರ್ಮದ ಒಳ್ಳೇ ಹೀನ ತರಗತಿಯ ಪ್ರತಿನಿಧಿಯೆಂದು ಹೇಳಬಹುದು. ಆದರೆ ನಮ್ಮ ಪ್ರಶ್ನೆಯು ಇದಿರುವದಿಲ್ಲ.

ಗಾಂಧೀಜಿಯಂಥ ಹಿಂದುವಿನ ಸಂಗಡ ನನ್ನಂಥ ಕ್ರಿಶ್ಚಿಯನ್ನನನ್ನು ಹೋಲಿಸಿ ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳ ತುಲನೆ ಮಾಡುವದು ಎಷ್ಟೆಷ್ಟೂ ಉಚಿತವೆನಿಸಲಾರದು. ಕ್ರಿಶ್ಚಿಯನ್ ಧರ್ಮ ಮತ್ತು ಹಿಂದೂ ಧರ್ಮಗಳಲ್ಲಿ ಅತ್ಯಂತ ಉತ್ತಮ ರೀತಿಯಿಂದ ಆಚರಣೆ ಮಾಡುವವರೊಳಗೆ ಯಾವ ಧರ್ಮದವನು ಶ್ರೇಷ್ಠನಾಗಬಹುದೆಂಬುದೇ ಮುಖ್ಯ ಪ್ರಶ್ನೆ. ಕ್ರಿಶ್ಚಿಯನ್ ಧರ್ಮದವನು ಶ್ರೇಷ್ಠನಾಗಲಾರನೆಂದು ನಾವು ಹೇಳುವದಾದರೆ ನಾವೆಲ್ಲರೂ ಹಿಂದೂ ಧರ್ಮ ಸ್ವೀಕರಿಸಬೇಕು. ಹಿಂದೂ ಧರ್ಮವನ್ನಾಚರಿಸುವದರಿಂದ ವ್ಯಕ್ತಿಯು ಇಸಾ ಮಸೀಹ (ಕ್ರೈಸ್ತ) ನ ಸಂಗಡ ತುಲನೆ ಮಾಡುವಷ್ಟು ಶ್ರೇಷ್ಠ ಮಟ್ಟಕ್ಕೆ ಮುಟ್ಟುತ್ತಾನೆಂದವೇಲೆ ನಾವು ಹಿಂದುಗಳನ್ನು ಕ್ರೈಸ್ತರನ್ನಾಗಿ ಮಾಡುವ ಪ್ರಯತ್ನವನ್ನಾದರೂ ಏಕೆ ಮಾಡಬೇಕು?"

" . . . ಗಾಂಧಿಯವರು ಮಹಾತ್ಮರಿದ್ದಾರೆಂಬ ಮಾತನ್ನು ಅಲ್ಲಗಳೆಯುವದು ನನ್ನ ಉದ್ದೇಶವಿಲ್ಲ. ಅವರು ಮಹಾತ್ಮರಿದ್ದಾರೆಂದು ನಾನು ಒಪ್ಪುತ್ತೇನೆ. ಆದರೆ ನಾನು ಓದಿದ್ದರ ಮೇಲಿಂದ ಇಂಥ ಅನೇಕ ಕ್ರಿಶ್ಚಿಯನ್ ಮಹಾತ್ಮರು ಆಗಿ ಹೋಗಿರುವರು. ಅವರ ಮಟ್ಟವನ್ನು ಗಾಂಧೀಯವರು ಮುಟ್ಟಲಾರರೆಂದು ನಾನು ನೂರಿ ನೂರಿ ಹೇಳಬಲ್ಲೆ. ಕ್ರಿಶ್ಚಿಯನ್ ಸಂಪ್ರದಾಯದಲ್ಲಿ ಗಾಂಧಿಗಿಂತ ಶ್ರೇಷ್ಠರಾದ ಮಹಾತ್ಮರು ಇಂದಿಗೂ ಕೂಡ ಇದ್ದಾರೆಂದು ನಾನು ನಂಬುತ್ತೇನೆ. ಆದರೆ ವ್ಯತ್ಯಾಸ ನಿಷ್ಟೇ, ಆವರ ಮಾಹಾತ್ಮ್ಯದ ಬಗ್ಗೆ ಆಷ್ಟೊಂದು ಪ್ರಚಾರವಾಗಿಲ್ಲ. ಈ ಜನರು ಹೋರಾಡುವ ಹೋರಾಟಗಳು ಜನರ ಕಣ್ಣಿಗೆ ಬೀಳುವಂತಹವಿರುವದಿಲ್ಲ. ಬ್ರಿಟಿಶ್ ಸಾಮ್ರಾಜ್ಯಶಾಹಿಯೊಡನೆ ಹೋರಾಡುವ ರಾಜನೈತಿಕ ಹೋರಾಟದಲ್ಲಿ ಗಾಂಧಿಯು ತೋರಿಸುವ ಧೈರ್ಯ ಮತ್ತು ನಿಷ್ಠೆಗಳಿಗಿಂತ ಈ ಜನರ ಧೈರ್ಯ ಮತ್ತು ನಿಷ್ಠೆಗಳು ಸ್ವಲ್ಪು ಕೂಡಾ ಕೀಳು ತರಗತಿಯವಾಗಿರುವದಿಲ್ಲ."

ಇಷ್ಟು ಹೇಳಿ ಅವನು ಆ್ಯಂಡ್ರೂಜ ಮತ್ತು ಹೋಮ್ಸರಂಥ ಕ್ರಿಶ್ಚಿಯನ್ನರನ್ನು ಕಟುವಾಗಿ ಟೀಕಿಸುತ್ತಾನೆ. " ಗಾಂಧೀಯವರನ್ನು ಕ್ರೈಸ್ತನಿಗೆ ಹೋಲಿಸಿ ಆವರು ದುಷ್ಟ ಮೂರ್ತಿಪೂಜೆಯ ಅಪರಾಧವನ್ನು ತಮ್ಮ ತಲೆಯಮೇಲೆ ತೆಗೆದುಕೊಂಡಿದ್ದಾರೆ. "

" Idolatry consists in giving to any person or to any thing the place which belongs to our Lord "

" ನಮ್ಮ ಭಗವಾನ್ ಕ್ರೈಸ್ತನಿಗಿದ್ದ ಸ್ಥಾನ ಅಥವಾ ಪದವಿಯನ್ನು ಯಾವುದೇ ವ್ಯಕ್ತಿ ಅಥವಾ ವಸ್ತುವಿಗೆ ಕೊಡುವದರ ಹೆಸರೇ ಮೂರ್ತಿಪೂಜೆಯು."

ಈ ಪಾದ್ರಿಯು Our Lord 'ನಮ್ಮ ಲಾರ್ಡ' ನಿಗೆ ದೇವರೆಂದು ತಿಳಿಯುತ್ತಾನೆ, ಆದರೆ ಉಳಿದ ಕ್ರಿಶ್ಚಿಯನ್ನರು ಹಾಗೆ ತಿಳಿಯುವದಿಲ್ಲ. ಆದುದರಿಂದ ಅವರು ಕ್ರೈಸ್ತನಿಗೆ ದೇವಾಂಶವೆಂದು ತಿಳಿಯುವಂತೆ ಬಾಪೂ ಅವರಿಗೂ ತಿಳಿಯುತ್ತಾರೆ. ಈ ಮನುಷ್ಯನು ಕ್ರಿಶ್ಚಿಯನ್ ಧರ್ಮದ ಅಹಿಂಸೆಯು ಗಾಂಧೀ ಕಲಿಸುವ ಅಹಿಂಸೆಗಿಂತ

—ಗೋರಕ್ಷಣೆಯ ಅಹಿಂಸೆಗಿಂತ—ಶ್ರೇಷ್ಠವಾದುದೆಂದು ತಿಳಿಯುತ್ತಾನೆ! ಕ್ರೈಸ್ತನು Resist not evil— 'ಕೆಡಕಿನ ಪ್ರತೀಕಾರ ಮಾಡಬೇಡ' ಎಂದು ಹೇಳಿದ್ದನು. ಆದರೆ ಈ ಗಾಂಧಿಯು Passive resistance ಅಂದರೆ ನಿಃಶಸ್ತ್ರ ಪ್ರತೀಕಾರ ಕಲಿಸುತ್ತಾನೆ. ಇವನ Non-violent resistance— ಅಹಿಂಸಕ ಪ್ರತೀಕಾರದ ಹಿಂದೆ hatred ಅಂದರೆ ದ್ವೇಷವು ಹುದುಗಿದೆ. ಆದರೆ Christian non-violence — ಕ್ರಿಶ್ಚಿಯನ್ ಅಹಿಂಸೆಯಲ್ಲಿ love ಅಂದರೆ ಪ್ರೇಮ ತುಂಬಿದೆ ಎಂದು ಇವನ ತಿಳಿವಳಿಕೆ. ಈ ಮನುಷ್ಯನು ಬಾಪೂಗೆ ಭೆಟ್ಟಿಯಾಗಿದ್ದರೆ ಈ ಪ್ರಕಾರ ಬರೆಯು ತ್ತಿದ್ದಿಲ್ಲ. ಇವನು ಭೆಟ್ಟಿಯಾಗದಿದ್ದುದೇ ಇವನಲ್ಲಿಯ ಕೊರತೆ. ಈ ಮನುಷ್ಯನು ಬಾಪುವಿನ ಎಲ್ಲ ಸಾಹಿತ್ಯದ ಅಧ್ಯಯನ ಮಾಡದಿರುವದೂ ಅವನಿಗೆ ಬಾಪುವಿನ ನಿಜಪರಿಚಯದ ಅಭಾವವೂ ಹಿಂದೂ ಧರ್ಮದ ಸಂಬಂಧದಲ್ಲಿ ಬಾಪುವಿನ ವಿಚಾರಗಳ ಬಗ್ಗೆ ಇದ್ದ ಅವನ ಅಜ್ಞಾನವೂ ಇದಕ್ಕೆ ಕಾರಣವಾಗಿವೆ. ಅದಕ್ಕಾಗಿಯೇ ಅವನು ಹೀಗೆ ಬರೆಯುತ್ತಾನೆ:

"Christ gave to the world a sublime moral religion, Gandhi gives to the world a new way to get your enemy down—and as his spiritual contribution recommends the especial veneration of the cow."

—"ಕ್ರೈಸ್ತನು ಜಗತ್ತಿಗೆ ಒಂದು (ಭವ್ಯ) ಉನ್ನತವಾದ ನೀತಿಧರ್ಮವನ್ನು ಕೊಟ್ಟಿದ್ದಾನೆ. ಆದರೆ ಗಾಂಧಿ ಶತ್ರುಗಳನ್ನು ಜಯಿಸುವದಕ್ಕೆ ಒಂದು ರೀತಿಯನ್ನು ತೋರಿಸುತ್ತಾರೆ. ಆಧ್ಯಾತ್ಮದ ವಿಷಯಕ್ಕೆ ಇವರ ಕೊಡುಗೆಯೆಂದರೆ ಇಷ್ಟೆ: ಮುಖ್ಯವಾಗಿ ಆಕಳನ್ನು ಪೂಜಿಸಬೇಕೆಂಬ ಉಪದೇಶ."

ಕ್ರೈಸ್ತನಂತೆ ಗಾಂಧಿಯವರಿಗೂ ಇಹಲೋಕದ ರಾಜ್ಯ ಬೇಡ. ಮತ್ತು ಗಾಂಧಿಯವರ ಅಹಿಂಸೆಯು ಜಗತ್ತಿನ ಅಣು-ಪರಮಾಣು ಕುರಿತು ಇದೆ ಎಂಬ ಮಾತು ಈ ಬಡಪಾಯಿಗೆ ಗೊತ್ತಿಲ್ಲ. ಗಾಂಧಿಯವರು ಶತ್ರುಗಳನ್ನು ಪರಾಜಿತರನ್ನಾಗಿ ಮಾಡುವ ಹೊಸ ದಾರಿಯನ್ನು ತೋರಿಸುವದಿಲ್ಲ, ಆದರೆ ಶತ್ರುಗಳನ್ನು ಮಿತ್ರರನ್ನಾಗಿ ಮಾಡುವ ದಾರಿಯನ್ನು ತೋರಿಸುತ್ತಾರೆ. ಗಾಂಧಿಯವರ ವಿಚಾರದಂತೆ ಬಾಹ್ಯಶತ್ರುಗಳಿಗಿಂತ ಆಂತರಿಕ ಶತ್ರುಗಳೊಂದಿಗೆ ಹೋರಾಡುವ ಹೋರಾಟವು ಹೆಚ್ಚು ಮಹತ್ವದ್ದೂ, ಕಠಿಣವಾದದ್ದೂ ಆಗಿದೆ.

*     *     *

ಪ್ರೂಲಿಚಂದರ ಪತ್ರ ಬಂತು. ಅದರಲ್ಲಿ ಅವರು ಹೀಗೆ ಬರೆಯುತ್ತಾರೆ: "ನನ್ನನ್ನು ನೆನಪಿನಲ್ಲಿಟ್ಟುಕೊಂಡದ್ದು ನಾನು ನನ್ನ ಸೌಭಾಗ್ಯವೆಂದು ತಿಳಿಯುತ್ತೇನೆ ಧ್ರಾಂಗಧ್ರಾದ ಪ್ರಶ್ನೆಯನ್ನು ದೇವರು ಪ್ರೇರೇಪಿಸಿದಂತೆ ಮುಗಿಸಿ ಬಿಟ್ಟೆನು. ಮತ್ತು

ಆದರಿಂದ ನನಗೆ ಅತ್ಯಂತ ಸಂತೋಷವಾಗಿದೆ. ಈಗ ದೇವರು ಸೂಚಿಸಿದಂತೆ ಕಾರ್ಯ ಮಾಡುತ್ತ ನಡೆದಿದ್ದೇನೆ."

ಬಾಪೂ ಅಂದರು : " ಈ ವಾಕ್ಯಗಳಲ್ಲಿ ನನ್ನ ಹಾಗೂ ಅವರ ದಾರಿಗಳು ಭಿನ್ನ ಭಿನ್ನವಾಗಿವೆಯೆಂದು ವಿವೇಕಪೂರ್ವಕವಾಗಿ ತೋರಿಸಲಾಗಿದೆ."

ನಾನು ಹೇಳಿದೆ : " ಈ ಪ್ರಕರಣದ ವಿಷಯವಾಗಿ ಇರಬಹುದು. ಆದರೆ ಅವರು ತಮ್ಮ ಸತ್ಯಾಗ್ರಹದ ರೀತಿಯೂ ಬೇರೆಯೆಂದು ಹೇಳಬಯಸುತ್ತಾರೆ."

ಬಾಪೂ ಹೇಳಿದರು : " ಇದು ಸ್ಪಷ್ಟವಿದೆ. ಅತ್ಯಂತ ಮೃದುವಾದ ಭಾಷೆಯು ಅಧ್ಯಾಹಾರದ್ದಿರುತ್ತದೆ ಮತ್ತು ಅವರು ಅಧ್ಯಾಹಾರದ ಭಾಷೆಯನ್ನು ಪ್ರಯೋಗಿಸಿದ್ದಾರೆ."

ಇಷ್ಟಾದ ಮೇಲೆ ಅವರು ಒಬ್ಬ ಅಹಮದಾಬಾದಿಯು ಒಮ್ಮೆ ತಮಗೆ ಮಾಡಿದ ಸ್ವಾಗತದ ಮನೋರಂಜಕ ಸುದ್ದಿಯನ್ನು ಹೇಳಿದರು. ಅವರು ಮ್ಯಾಟ್ರಿಕ್ ಪರೀಕ್ಷೆಗೆ ಅಹಮದಾಬಾದಕ್ಕೆ ಹೋದಾಗ ತಮ್ಮ ಅಣ್ಣಂದಿರ ಹೇಳಿಕೆಯಂತೆ ಆ ಗೃಹಸ್ಥರಲ್ಲಿ ಇಳಿದಿದ್ದರು. " ಈ ಭಾಯಿಯು ನನ್ನನ್ನು ಕರೆಯಲಿಕ್ಕೆ ಬಂದರು. ಗಾಡಿಯಲ್ಲಿ ತಮ್ಮ ಮನೆಯವರೆಗೆ ಬಂದರು. ನಂತರ ನನ್ನನ್ನು ಬಿಟ್ಟು ಮನೆಯೊಳಗೆ ಹೊರಟು ಹೋದರು. ಬಾಡಿಗೆಯನ್ನು ಯಾರು ಕೊಡಬೇಕು ? ನಾನು ಆ ಗಾಡಿಯವನನ್ನು ಕೇಳಿ ಬಾಡಿಗೆ ಕೊಟ್ಟುಬಿಟ್ಟೆನು. ನಾನು ಬಾಡಿಗೆ ಕೊಟ್ಟಮೇಲೆ ಈ ಮನುಷ್ಯ ಹೊರಗೆ ಬಂದ. ಅವರು ಅಧ್ಯಾಹಾರದ ಭಾಷೆಯನ್ನು ಉಪಯೋಗಿಸಿದ್ದರು. ಅವರ ಮನೆಯಲ್ಲಿ ಇನ್ನೂ ಎಷ್ಟೋ ತರಹದ ಕೃಪಣತನದ ಮಾದರಿಗಳಿಗೆ ಕಡಿಮೆ ಇರಲಿಲ್ಲ. ನನ್ನನ್ನು ಅದರೊಳಗಿಂದ ಪಾರುಮಾಡುವದಕ್ಕಾಗಿ ದ್ವಾರಕಾದಾಸ ಪಟ್ವಾರಿಯು ಬಂದು ತಮ್ಮ ಮನೆಗೆ ಕರೆದೊಯ್ದರು." ನಾನು ನನ್ನ ಹೊಸದೊಂದು ಅನುಭವವನ್ನು ನಿವೇದಿಸಿದೆನು. ಬಾಪೂ " ನಿನ್ನ ಅನುಭವವು ನನಗಿಂತಲೂ ಹೆಚ್ಚಿನದಿದೆ. " ಎಂದು ಅಂದರು.

* *

' ಟ್ರಿಬ್ಯೂನ'ದಲ್ಲಿ ಡೇಲಿ ಟೆಲಿಗ್ರಾಫದ ಸುದ್ದಿಗಾರನು ಪೇಶಾವರದ ವಿಷಯವಾಗಿ ಬರೆದ ಒಂದು ಲೇಖವಿದೆ. ಅದರಲ್ಲಿ ನಿರ್ಲಜ್ಜತನದಿಂದ ಪೇಶಾವರವು ಹೇಗೆ ಹತ್ತಿಕ್ಕಲ್ಪಟ್ಟಿದೆ ಎಂಬುದರ ಬಿಚ್ಚುವರ್ಣನೆಯಿದೆ. ಬಾಪೂ ಹೇಳಿದರು. " ಇದರಲ್ಲಿ ನಮ್ಮ ಇಡೀ ಪ್ರಶ್ನೆಯು ಬಂದುಹೋಗುತ್ತದೆ. ದಬ್ಬಾಳಿಕೆಯ ಹೊರತು ತಾವು ಅನ್ಯ ಮಾರ್ಗವನ್ನು ಅನುಸರಿಸಲೇ ಇಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾರೆ."

' ನ್ಯೂ ಲೀಡರ'ದಲ್ಲಿ ಬ್ರೈಲ್ಸ್‌ಫೋರ್ಡನ ಉತ್ತಮ ಲೇಖವಿತ್ತು. ಅವನು ಹಿಂದು-ಸ್ತಾನದ ಪರಿಸ್ಥಿತಿಯ ಪ್ರತ್ಯಕ್ಷ ಚಿತ್ರವನ್ನು ಚಿತ್ರಿಸಿದ್ದಾನೆ. 'ಟ್ರಿಬ್ಯೂನ'ದಲ್ಲಿ ಬಂಗಾಲದ ಪ್ರವಾಸೀ ಪತ್ರ ಮತ್ತು ಇಕಬಾಲ ಮುಸ್ಲಿಮ್ ಪರಿಷತ್ತಿನ ಭಾಷಣ ಇವುಗಳನ್ನು ಕುರಿತು ಅನೇಕ ಲೇಖಗಳಿದ್ದವು. ಈ ಲೇಖಗಳನ್ನು ನೋಡಿ ಬಾಪೂ ಅಂದರು

ಸಾರೆ ಅಂದರು : "ವಿಚಾರ ಪ್ರಕಟ ಮಾಡುವದರಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಪತ್ರವೆಂದರೆ 'ಟ್ರಿಬ್ಯೂನು'. ಸುದ್ದಿಗಳನ್ನು ಕೊಡುವದರಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಪತ್ರವೆಂದರೆ 'ಹಿಂದೂ'. ಟ್ರಿಬ್ಯೂನದವನು ತನ್ನ ಅಗಾಧವಾದ ಅನುಭವದಿಂದ ಎಲ್ಲ ಸಂಗತಿಗಳನ್ನು ಆಕಲನ ಮಾಡಿಕೊಂಡು ಅವುಗಳ ಪೃಥಕ್ಕರಣ ಮಾಡುವ ಅವನ ರೀತಿಯು ಎಲ್ಲರನ್ನೂ ಮೀರಿದೆ."

ಬಾಪೂ ಸ್ಪಷ್ಟೀಕರಿಸಿದರು : "ಇಕಬಾಲದ ಮುಸಲ್ಮಾನರ ರಾಷ್ಟ್ರೀಯತೆಯನ್ನು ವಿರೋಧಿಸುವ ಮನೋವೃತ್ತಿಯು ಉಳಿದ ಮುಸಲ್ಮಾನರಲ್ಲಿ ತುಂಬಿಕೊಂಡಿದೆ. ಆದರೆ ಅವರು ಆಡಿತೋರಿಸುವದಿಲ್ಲ ಇಷ್ಟೆ. 'ಹಿಂದುಸ್ತಾನ ಹಮಾರಾ' ಎಂಬ ಹಾಡನ್ನು ಈಗ ಅವರು ಅಲ್ಲಗಳೆಯುತ್ತಾರೆ." ನಾನು ಕೇಳಿದೆ : "ಇವರ ಮತ್ತು ಶೌಕತಅಲ್ಲಿ, ಮಹಮ್ಮದಅಲ್ಲಿಯವರ Pan Islamism ಒಂದೇ ಆಗಿವೆಯೊ ಹೇಗೆ?" ಬಾಪೂ : "ಒಂದೇ ಆಗಿವೆ. ಆದರೆ ಈ Anti Nationalism (ರಾಷ್ಟ್ರೀಯತೆಯ ವಿರೋಧ)ಕ್ಕೂ Pan-Islamism (ಮುಸ್ಲಿಮ್ ಸಾಮ್ರಾಜ್ಯ)ಕ್ಕೂ ಯಾವ ಸಂಬಂಧವೂ ಇಲ್ಲ. 'ಮೊದಲು ನಾನು ಮುಸಲ್ಮಾನ ಆ ಮೇಲೆ ಹಿಂದುಸ್ತಾನಿ' ಎಂಬ ಮಾತನ್ನು ನಾನು ಸಮರ್ಥಿಸಬಲ್ಲೆ. ಯಾಕಂದರೆ ನಾನು ಕೂಡ ಮೊದಲು ಹಿಂದೂ ಆದುದರಿಂದಲೇ ನಿಜವಾದ ಹಿಂದುಸ್ತಾನಿ ಎಂದು ಹೇಳುವ ಅಭಿಪ್ರಾಯದವನಾಗಿರುವೆನಲ್ಲವೆ? ಮಹಮ್ಮದಲ್ಲಿಯವರು ಈ ಮಾತನ್ನು ಚನ್ನಾಗಿ ಹೊಂದಿಸಿಕೊಳ್ಳುತ್ತಿದ್ದರು. ಈ ಜನರಿಗೆ 'ನಾನು ಮೊದಲು ಮುಸಲ್ಮಾನ' ಎಂಬುದರ ಹಳೆಯ ಅರ್ಥವೇ ಉಳಿದಿಲ್ಲ. ಇವತ್ತು ನಾನು ಮುಸಲ್ಮಾನನಿದ್ದೇನೆ ಅಂದರೆ Nationalist (ರಾಷ್ಟ್ರೀಯ) ಇಲ್ಲವೆಂದೇ ಅರ್ಥವಾಗಿ ಬಿಟ್ಟಿದೆ."

* * *

ಶಂಕರಲಾಲ (ಬ್ಯಾಂಕರ)ರ ತಮ್ಮಂದಿರಾದ ಧೀರಜಲಾಲರ ನಿಧನವಾರ್ತೆ ಬಂತು. ನಮ್ಮೆಲ್ಲರ ಮನಸ್ಸಿನ ಮೇಲೆ ದೊಡ್ಡ ಆಘಾತವಾಯಿತು. ಧೀರಜಲಾಲರಂಥ ಆಜ್ಞಾಧಾರಕ ಭ್ರಾತೃಭಕ್ತರಾದ ತಮ್ಮಂದಿರಿದ್ದುದರಿಂದ ಶಂಕರಲಾಲರು ಮನೆಯ ಕಡೆಗೆ ಯಾವ ಚಿಂತೆಯನ್ನೂ ಮಾಡದೆ ಅಥವಾ ಮನೆಮಾರು ಬಿಟ್ಟು ಎಲ್ಲವನ್ನೂ ದೇಶಕ್ಕೆ ಸಮರ್ಪಿಸಲು ಶಕ್ತರಾಗಿದ್ದರು. ಇಂಥ ತಮ್ಮನು ಗತಿಸಿ ಹೋದದ್ದರಿಂದ ಶಂಕರಲಾಲರ ಮೇಲೆ ಆಕಲ್ಪಿತವೂ ಬಹಳ ದೊಡ್ಡದೂ ಮತ್ತು ದುಃಖದಾಯಕವೂ ಆದ ಭಾರವು ಬೀಳುವದು ಎಂಬ ವಿಚಾರದಿಂದ ಮನಸ್ಸಿನಲ್ಲಿ ಒಂದು ಪ್ರಕಾರದ ಉದ್ವೇಗವುಂಟಾಯಿತು. ಬಾಪೂ, ಅವರಿಗೂ ಧೀರಜಲಾಲರ ಹೆಂಡತಿಗೂ ಸಮಾಧಾನಪರ ತಂತಿಯನ್ನು ಕಳಿಸಿದರು.

ಬಾಪೂ ತಮ್ಮ ಸ್ವಂತದ ಬಗ್ಗೆ ಎಷ್ಟು ಕಾಳಜಿಯನ್ನು ಮಾಡುವದಿಲ್ಲ. ಆದರೆ ಎರಡನೆಯವರ ಸಲುವಾಗಿ ಬಹಳ ಕಳಕಳಿಮಾಡುತ್ತಾರೆ. ನಾವು ಇಲ್ಲಿ ಬಂಧಿತರಾಗಿ ಕುಳಿತಿದ್ದರೂ ನಮಗೆ ಇಂಥ ಉದಾಹರಣೆಗಳು

೨೭-೩-'೩೨ ದಿನಾಲು ಸಿಕ್ಕುತ್ತವೆ. 'ಸರದಾರರ ಸಲುವಾಗಿ ನೀನು ವಿಶೇಷ ಅಡಿಗೆಯನ್ನು ಏಕೆ ತಯಾರಿಸುವದಿಲ್ಲ? ನಿನ್ನ ಮೇಲೆ ಅವರು ಬಹಳ ಭರವಸೆಯನ್ನಿಟ್ಟಿದ್ದರು.' ಈ ಪ್ರಕಾರ ಸವಿನಾತಿನಿಂದ ನನ್ನ ದೋಷ ತೋರಿಸಿಕೊಟ್ಟು ಅಡಿಗೆ ಮಾಡಲಿಕ್ಕೆ ನನಗೆ ಒಂದು ಪ್ರಕಾರದ ಪ್ರೇರಣೆ ಮಾಡಿದರು. ಹರಿದಾಸ ಗಾಂಧಿಯವರ ವಿಷಯವಾಗಿ ಮೇಜರ ಮಾರ್ಟಿನ್ನರಿಗೆ ಸಾಮಾನ್ಯವಾಗಿ ultimatum ( ನಿರ್ಣಾಯಕ ಪತ್ರವನ್ನು ) ಕೊಟ್ಟರು. ಕೈದಿ ಕೈದಿಗಳೊಳಗೆ ಪತ್ರ ಬರೆಯುವ ಸವಲತ್ತು ಇರಲೇಬೇಕೆಂದು ಮೇಜರ ಮಾರ್ಟಿನ್ನರಿಗೆ ಪತ್ರ ಬರೆದರು. ಈ ಪತ್ರವನ್ನು ಕಳಿಸುವ ಮೊದಲೇ ಮೇಜರ ಭಂಡಾರಿಯವರು ಬಂದು ಇದರ ವಿಷಯಕ್ಕೆ ಒಪ್ಪಿಗೆಯನ್ನೂ ಕೊಟ್ಟು ಹೋದರು. ಆದುದರಿಂದ ಕೂಡಲೇ ಮೀರಾಬೇನ, ಕಾಕಾ, ಪ್ರಭುದಾಸ, ಮಣಿ, ಜಮುನಾಲಾಲಜಿ ಮತ್ತು ದೇವದಾಸ ಮೊದಲಾದವರೆಲ್ಲರಿಗೂ ಪತ್ರ ಬರೆದರು. ಮೀರಾಬಹನರು ಪತ್ರ ಸಿಗದ್ದರಿಂದ ದಿನಾಲು ವ್ಯಾಕುಲಚಿತ್ತರಾಗಿರಬಹುದೆಂದು ತಿಳಿದು ಈಗಾಗಲೇ ಒಂದು ಪತ್ರವನ್ನು ಬರೆದಿದ್ದರು. ಆದರೆ ಅವರಿಂದ ಎರಡು ಪತ್ರಗಳು ಬಂದದ್ದರಿಂದ ಅವುಗಳಿಗೆ ಈ ಪತ್ರ ಮುಟ್ಟಿದ್ದಕ್ಕೆ ಉತ್ತರರೂಪವಾಗಿ ಮತ್ತೊಂದನ್ನು ಬರೆದು ಈ ಪತ್ರವನ್ನು ಕೂಡಲೇ ಕಳಿಸಿಕೊಡಬೇಕೆಂದು ಜೇಲರರಿಗೆ ವಿನಂತಿ ಮಾಡಿಕೊಂಡರು. ಗುಂಗಾಡಗಳ ಕಾಟಕ್ಕಾಗಿ ಸರದಾರರಿಗೆ ರಾತ್ರಿ ನಿದ್ರೆ ಬರುವದಿಲ್ಲ. ಆದುದರಿಂದ ಅವರಿಗೆ ಕೂಡಲೇ ಮಚ್ಛರದಾನಿ ಸಿಗಬೇಕೆಂದು ಜೇಲರರಿಗೆ ಸ್ವತಃ ಚೀಟಿ ಬರೆದರು. ಮತ್ತು ಅಂದು ರವಿವಾರವಿದ್ದರೂ ಪತ್ರವನ್ನು ಜೇಲರರ ಮನೆಗೆ ಒಯ್ದು ಮುಟ್ಟಿಸೆಂದು ವಾರ್ಡರನಿಗೆ ಸೂಚನೆ ಮಾಡಿದರು. ಬಾಪೂ ರಾತ್ರಿ ಮೂತ್ರವಿಸರ್ಜನೆಗಾಗಿ ಎದ್ದಾಗ ಅವರ ಕಡಾವಿಗೆಯ ಸಪ್ಪಳದಿಂದ ನನಗೆ ಬಹುತರವಾಗಿ ಎಚ್ಚರವಾಗುತ್ತದೆ. ಇದು ಅವರಿಗೆ ತಿಳಿದಕೂಡಲೇ ಕಡಾವಿಗೆಗಳನ್ನು ಹಾಕುವದು ಬಿಟ್ಟು ಚಪ್ಪಲಿಗಳನ್ನು ಹಾಕಹತ್ತಿದರು. ಖೋಲಿಯಲ್ಲಿ ಹೋಗುವದನ್ನು ಬಂದುಮಾಡಿದರು. ಮತ್ತು ಪಾತ್ರೆಯನ್ನು ತಮ್ಮ ಮಂಚದ ಹತ್ತಿರವೇ ಇಡಹತ್ತಿದರು. ಪಾತ್ರೆಯು ಖೋಲಿಯಲ್ಲಿದ್ದಾಗ ನಾನು ಮಲಗಿದ ಸ್ಥಳವನ್ನು ಬಿಟ್ಟು ಸುತ್ತುವರಿದು ಕಳ್ಳಹೆಜ್ಜೆಯಿಂದ ಖೋಲಿಯೊಳಗೆ ಹೋಗುತ್ತಿದ್ದರು. ತಮ್ಮ ಸಲುವಾಗಿ ಪೇಟೆಯಿಂದ ಹಣ್ಣುಗಳನ್ನು ತರಿಸಲಾಗದು, ಆದರೆ ಆಸ್ಪತ್ರೆಯಲ್ಲಿದ್ದ ಹರಿದಾಸ ಗಾಂಧಿಯವರ ಸಲುವಾಗಿ ಪೇಟೆಯಿಂದ ಹಣ್ಣುಗಳನ್ನು ತರಿಸಲೇಬೇಕು! ಎಂದು ಹೇಳುತ್ತಿದ್ದರು.

‘ऐसो को अुदार जगमांही, बिनु सेवा जो द्रवै दीनपर,
राम सरिस कोअु नाहीं, ऐसो को अुदार ’

‘ ಯಾವ ಸೇವಾಪೇಕ್ಷೆಯೂ ಇಲ್ಲದೆ ದೀನರನ್ನು ನೋಡಿ ಕಳಕಳಿ ಪಡುವಂಥ ಉದಾರರು ಜಗತ್ತಿನಲ್ಲಿ ಯಾರಿರುವರು? ಇಷ್ಟು ಉದಾರರಾದವರು ರಾಮನಿಗೆ ಸರಿಸಮಾನರು ಯಾರೂ ಇಲ್ಲ.’

* * *

ಇವತ್ತು ಬೆಳಿಗ್ಗೆ ತಿರುಗಾಡುವಾಗ ಸದ್ಯದ ಪರಿಸ್ಥಿತಿಯ ಮೇಲೆ ಚರ್ಚೆ ನಡೆಯಿತು. ಬಾಪೂ ಹೇಳಿದರು: “ಈಗ ಒಪ್ಪಂದವಾಗಬೇಕೆಂದು ನಾನು ಇಚ್ಛಿಸುವದೇ ಇಲ್ಲ. ಇನ್ನೂ ಅದಕ್ಕೆ ಸಮಯ ಬಂದಿಲ್ಲ. ನಾವು ಅದಕ್ಕಾಗಿ ಸಿದ್ಧರಿಲ್ಲ. ನಮ್ಮಲ್ಲಿ ಇನ್ನೂ ಅನೇಕರಿಗೆ ಬಾಯಿ ಬಂದುಮಾಡಿಕೊಂಡು ಜೇಲೊಳಗೆ ಹೋಗಿ ಅಲ್ಲಿಯೇ ಬೀಳಬೇಕಾಗಿದೆ. ಸರಕಾರವು ಅಕಲ್ಪಿತರೂಪವಾಗಿ ನನ್ನ ಸಂಗಡ ಸರಳತನದಿಂದ ನಡೆಯತೊಡಗಿದೆ. ಕೈದಿಗಳಿಗೆ ಪತ್ರ ಬರೆಯಲು ಒಪ್ಪಿಗೆಕೊಡುವ ಉದಾರತೆಯನ್ನು ತೋರಿಸಬಹುದೆಂಬ ಆಶೆ ನನಗಿರಲಿಲ್ಲ. ಆದರೆ ಅವರ ಮೇಲೆ ನಮ್ಮ ಅಹಿಂಸೆಯ ಪರಿಣಾಮವಾಗಿರುವ ಸಂಭವವೂ ಇದೆ. ಇಲ್ಲಿ ಬಂದಂಥ ಕೇವಲನು ಬಹಳ ತಿಳಿವಳಿಕೆಯ ಮನುಷ್ಯನಲ್ಲ. ಆದರೆ ಒಮ್ಮೊಮ್ಮೆ ಅವನ ಬಾಯಿಂದ ತಿಳಿವಳಿಕೆಯ ಮಾತುಗಳೂ ಹೊರಡುತ್ತವೆ. ಈ ಸಲದ ನಮ್ಮ ಹೋರಾಟದಲ್ಲಿ ಕಹಿತನವಿಲ್ಲವೆಂದು ಅವನು ಹೇಳಿದಾಗ ಊಟದ ಮೇಜಿನ ಬದಿ ಈ ಜನರು ಹೊಡೆಯುವ ಹರಟೆಯ ಪ್ರತಿಧ್ವನಿ ಈ ಮಾತಿನಲ್ಲಿತ್ತೆಂದು ತಿಳಿಯಬೇಕು. ಈಗ ಕೂಡ ನಾವು ಹೆಚ್ಚು ಅಹಿಂಸೆಯನ್ನು ಆಚರಿಸಿದರೆ ಅದರ ಪರಿಣಾಮವು ಹೆಚ್ಚು ಆಗಬಹುದು.”

* * *

ಇವತ್ತು ವಲ್ಲಭಭಾಯಿಯವರು ಧಾರ್ಮಿಕ ಪ್ರಶ್ನೆಗಳ ಚರ್ಚೆಯನ್ನು ನಡೆಸಿದ್ದರು. ಶೇಕ್ಸಪಿಯರನ ಜೂಲಿಯಸ್ ಸೀಝರ ಹೇಗೆ ಐತಿಹಾಸಿಕ ಗ್ರಂಥವಲ್ಲವೋ ಹಾಗೇ ರಾಮಾಯಣ ಭಾರತಗಳು, ರಾಮ ಕೃಷ್ಣರು ಸಂಪೂರ್ಣ ಪಾತ್ರಗಳಲ್ಲ. ಎಲ್ಲರೂ ತಮ್ಮ ತಮ್ಮ ಕಾಲದ ಮಹಾಪುರುಷರಾಗಿದ್ದರು. ಆ ಕಾಲದ ಜನರು ಅವರ ಗುಣಗಳನ್ನು ೧೦ ಮಡಿ ೧೦೦ ಮಡಿ ಮಾಡಿ ವರ್ಣಿಸಿದ್ದಾರೆ. ಒಂದೇ ಒಂದು ಉತ್ತಮ ಕೆಲಸ ಮಾಡಿದರೂ ಜನರು ಅವರ ಗುಣಗಾನವನ್ನೇ ಮಾಡುವರು. ಇದೇ ಮಾತನ್ನು ನಮ್ಮ ಅವತಾರೀ ಪುರುಷರ ವಿಷಯಕ್ಕೂ ಹೇಳಬಹುದು. ಕ್ರಿಸ್ತ ಮತ್ತು ಮಹಮ್ಮದರ ವಿಷಯವೂ ಹೀಗೆಯೇ ಇದೆ. ನಾನು ಆ ಅಮೇರಿಕನ್ ಪಾದ್ರಿಯ ಮಾತನ್ನೆತ್ತಿದೆನು. ಬಾಪೂ ಹೇಳತೊಡಗಿದರು: “ಹಿಂದೂಧರ್ಮದ ಉತ್ತಮೋತ್ತಮ ವ್ಯಕ್ತಿಯು ಕ್ರಿಶ್ಚಿಯನ್ ಧರ್ಮದ ಉತ್ತಮೋತ್ತಮ ವ್ಯಕ್ತಿಗಿಂತ

ಶ್ರೇಷ್ಠನಾಗಬಲ್ಲನೆಂದು ನಾನೆಂದೂ ಹೇಳಿಲ್ಲ. ಕಾರಣವೆಂದರೆ ಹಿಂದೂಧರ್ಮವು ಯಾವದೇ ಧರ್ಮವನ್ನು ನೀಚವೆಂದು ತಿಳಿಯುವದಿಲ್ಲ. ಮತ್ತು ಯಾರಿಗೂ ತಮ್ಮ ಧರ್ಮವನ್ನು ಬಿಡಲು ಹೇಳುವದಿಲ್ಲ. ಕ್ರಿಶ್ಚಿಯನ್ನರು ಕ್ರೈಸ್ತನನ್ನು ದೇವರೆಂದು ತಿಳಿಯುತ್ತಾರೆ. ಮತ್ತು ಯಾವದೇ ಮನುಷ್ಯನನ್ನು ಏಸೂ ಕ್ರಿಸ್ತನ ಸಂಗಡ ತುಲನೆ ಮಾಡುವದು ಅಥವಾ ಯಾವದೇ ಮನುಷ್ಯನಲ್ಲಿ ಏಸೂ ಕ್ರಿಸ್ತನ ಗುಣಗಳನ್ನು ಆರೋಪಿಸುವದು ಮೂರ್ತಿಪೂಜೆಯೆಂದು ತಿಳಿಯುತ್ತಾರೆ. ಮುಸಲ್ಮಾನರು ಮಹಮ್ಮದ ಪೈಗಂಬರನನ್ನು ದೇವರೆಂದು ತಿಳಿಯುವದಿಲ್ಲ ಮತ್ತು ಯಾವದೇ ವಸ್ತು ಅಥವಾ ವ್ಯಕ್ತಿಯಲ್ಲಿ ದೇವತ್ವವನ್ನು ಆರೋಪಣೆ ಮಾಡುವದು ಮೂರ್ತಿಪೂಜೆ ಯೆಂದು ತಿಳಿಯುತ್ತಾರೆ. ಈ ಮಾತು ನಿಜವಾಗಿದ್ದರೂ ಆ ಜನರು ಪೈಗಂಬರನ ಮೂರ್ತಿಯನ್ನೇ ಪೂಜೆ ಮಾಡುತ್ತಾರೆ. ಸಚರಾಚರ ವಸ್ತುಗಳನ್ನೆಲ್ಲ ಆತನು ವ್ಯಾಪಿಸಿರುವಾಗ ಯಾವದೇ ವಸ್ತು ಅಥವಾ ವ್ಯಕ್ತಿಗಳಲ್ಲಿ ದೇವರ ಆರೋಪಣೆಯ ಮಾತೆಲ್ಲಿದೆ? ಸ್ವಲ್ಪು ಹೆಚ್ಚು, ಸ್ವಲ್ಪು ಕಡಿಮೆ, ಎಲ್ಲ ವ್ಯಕ್ತಿಗಳಲ್ಲಿಯೂ ದೇವಾಂಶ ವಿದ್ದೇ ಇದೆ. ಆ ಅಮೇರಿಕನ್ ಪಾದ್ರಿಗೆ ಅಹಿಂಸೆಯ ಅರ್ಥವಾಗಿಲ್ಲ. ಮತ್ತು ಏಸೂ ಕ್ರಿಸ್ತನ Resist not evil "ಕೆಡಕಿನ ಪ್ರತೀಕಾರ ಮಾಡಬೇಡ" ಎಂಬುದರ ಭಾವವೂ ತಿಳಿದಿಲ್ಲ. Love thy enemies "ನಿನ್ನ ಶತ್ರುಗಳನ್ನು ಪ್ರೀತಿ ಮಾಡು" ಎಂಬು Non resistance (ಅಪ್ರತೀಕಾರ)ದರ Positive aspect (ಸಕ್ರಿಯ ಪ್ರಕಾರ) ವಾಗಿದೆ. Resist evil by good (ಕೆಡಕನ್ನು ಒಳ್ಳೆಯದರಿಂದ ಪ್ರತೀಕಾರ ಮಾಡು) ಎಂಬ ವಾಕ್ಯವು ಬಾಯಿಬಲ್ಲಿನಲ್ಲಿ ಎಲ್ಲಿಯೂ ಇದ್ದಂತೆ ನನಗೆ ಜ್ಞಾಪಕವಿಲ್ಲ. (ಬಾಯಿಬಲ್ಲದಲ್ಲಿ ಇಂಥದೊಂದು ವಾಕ್ಯವಿದ್ದುದು ನನಗೆ ಜ್ಞಾಪಕ ವಿದೆಯೆಂದು ಹೇಳುವದು ನನ್ನ ಉದ್ದೇಶವಾಗಿತ್ತು.)

*        *        *

ಇವೊತ್ತು "ಟ್ರಿಬ್ಯೂನ"ದಲ್ಲಿ ಮುಸ್ಲಿಮ ಪರಿಷತ್ತನ್ನು ಕುರಿತು ಒಂದು ಸುಂದರ ಲೇಖವಿತ್ತು. ಅದನ್ನು ಓದಿ ಹೇಳಿದ ಮೇಲೆ ಬಾಪೂ ಅಂದರು: "Long live Kalinath Ray" (ಕಾಲೀನಾಥ ರೇ ಅವರೇ ಚಿರಜೀವಿಯಾಗಿರಿ). "ಜಾತೀಯ ಪ್ರಶ್ನೆ ಮತ್ತು ಅಸ್ಪೃಶ್ಯರ ಸಲುವಾಗಿ ಸಂಯುಕ್ತಮತಾಧಿಕಾರದಂಥ ಪ್ರಶ್ನೆಗಳ ಮೇಲೆ ಈ ಮನುಷ್ಯನ ಲೇಖಗಳು ಬಹಳ ಅನುಭವಪೂರ್ಣ ಮತ್ತು ಜ್ಞಾನಪೂರ್ಣವಾಗಿರುತ್ತವೆ."

*        *        *

ಇಂದು ಬಾಪೂ ಇಮರ್ಸನರಿಗೆ ಪತ್ರ ಬರೆದರು. "ಮುಂಬಯಿ ಸರಕಾರ ದವರು ಜಮೀನಗಳನ್ನು ಮಾರಿಬಿಡುವೆವು, ಹಿಂದಿನಿಂದ ತಿರುಗಿ ಸಿಗಲಾರವು ಎಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಆದರೆ ನಾನು ನಿಮ್ಮ ಜ್ಞಾಪಕಕ್ಕೆ ತರುವದೇ-

K4310

ನಂದರೆ ಹಿಂದಿನ ವರ್ಷ ನಾವು ಒಪ್ಪಂದದ ಮಾತುಕತೆ ನಡೆಸಿದಾಗ ಇನ್ನು ಮುಂದೆ ಇಂಥ ಪ್ರಶ್ನೆ ಬಂದರೆ ಜಮೀನಗಳನ್ನು ಮಾರತಕ್ಕದ್ದಲ್ಲವೆಂದು ಆಯರ್ವಿನ್ನರು ಹೇಳಿದ್ದರು. ನೀವು ಈ ಶುಭೇಚ್ಛೆಯನ್ನು ಮಣ್ಣುಗೂಡಿಸುವಿರಾ? ಯಾವ ಕೃತಿಗಳ ಬಗ್ಗೆ ಭಾವೀ ಸಂತಾನವು ನಮ್ಮನ್ನು ದೂಷಿಸಬಹುದು ಅಥವಾ ಯಾವ ಮಾತುಗಳ ಬಗ್ಗೆ ನಮಗೆ ಹಿಂದಿನಿಂದ ಪಶ್ಚಾತ್ತಾಪವಾದಾಗ್ಯೂ ಅವುಗಳ ಬಗ್ಗೆ ನಮಗೆ ಏನೂ ಮಾಡಲಿಕ್ಕೆ ಬರಲಾರದು ಅಂಥ ಕೃತಿಗಳನ್ನಾದರೂ ಮಾಡಬೇಡಿರಿ! ಶತ್ರುಗಳ ಶತ್ರುತ್ವವನ್ನು ಅನೇಕ ಪೀಳಿಗೆಗಳವರೆಗೆ ಉಳಿಸತಕ್ಕದ್ದಿದೆ ಏನು?" ಈ ಪತ್ರದ ಮೇಲೆ "ಖಾಸಗಿ" ಎಂದು ಬರೆಯಬೇಕೇನು? ಎಂದು ನಾನು ಕೇಳಿದೆ. ಬಾಪೂ ಹೌದೆಂದರು. ಇದಕ್ಕೆ ಸರದಾರರೆಂದರು: "ಬರೆಯದಿದ್ದರೇನಾಯಿತು? ಯಾರಾದರೂ ಓದಿದರೆ ಏನಾಗುವದು? ಯಾರಾದರೂ ಓದಿದವರು ಈ ಜನರಂತೆ ತಲೆ ತೆಗೆದು ನಿಂತವರು ಯಾರೂ ಇಲ್ಲವೆಂದು ಅನ್ನಬಹುದು. ಜೇಲಿನಲ್ಲಿ ಹೊದರೂ ಹೋರಾಟ ನಿಲ್ಲುವದಿಲ್ಲ?"

* * *

ಕೆಂಗ್ಸ ಕಾಲೇಜದಲ್ಲಿ Secret of happiness "ಸುಖದ ರಹಸ್ಯ" ಎಂಬ ವಿಷಯದಮೇಲೆ ಬಾಲ್ಡವಿನ್ನರ ಭಾಷಣವಾಯಿತು. ಮ್ಯಾಂಚೆಸ್ಟರ ಗಾರ್ಡಿಯನದಲ್ಲಿ ಅದರ ಸಾರವು ಬಂದಿತ್ತು. ಕ್ರಾನಿಕಲ್ಲದಲ್ಲಿ ಅದನ್ನು ಉದ್ಧೃತ ಮಾಡಲಾಗಿತ್ತು: ಸರ್ ಆಲಫ್ರೆಡ್‌ರಂಥ ಶಸ್ತ್ರವೈದ್ಯರು "ಸುಖ ಮತ್ತು ಜೀವನಸಾಫಲ್ಯ" ಈ ವಿಷಯದ ಮೇಲೆ ಪ್ರತಿವರ್ಷ ಭಾಷಣ ಮಾಡುವದಕ್ಕಾಗಿ ದಾನ ಮಾಡುವದೂ ಒಂದು ಆಶ್ಚರ್ಯಕರ ಸಂಗತಿಯಾಗಿದೆ. ಭಾಷಣದಲ್ಲಿ ಬಾಲ್ಡವಿನ್ನರ ಆರಿಸಿ ತೆಗೆದ ಶಬ್ದ, ಮತ್ತು ಆರಿಸಿ ತೆಗೆದ ವಾಕ್ಯಗಳ ಶೈಲಿಯು ಒಡೆದು ಕಾಣಿಸುತ್ತಿತ್ತು. ಸುಖದ ವಿಷಯದಲ್ಲಿ ಮಾತನಾಡುವ ಬದಲು ಆತನು ದೇವರ ವಿಷಯದಲ್ಲಿ ಹೇಳುವಂತೆ 'ನೇತಿ, ನೇತಿ' ಎಂದು ಹೇಳಿ ತನ್ನ ಕೆಲಸ ಮುಗಿಸಿಬಿಟ್ಟಿದ್ದನು. ದೇವರು ಸುಖರೂಪಿ ಅಥವಾ ಆನಂದರೂಪಿಯಾಗಿದ್ದಾನೆ. ಆದುದರಿಂದ ಅವನ ವ್ಯಾಪ್ತಿಯು ನೇತಿ ನೇತಿ ಎಂಬುದರಿಂದಾದರೆ ಆಶ್ಚರ್ಯವೇನು? ಆದರೂ ಭಾಷಣದ ಅಂತ್ಯದಲ್ಲಿ ತೆಗೆದ ಉದ್ಗಾರಗಳು ಹೃದಯಂಗಮವಾಗಿವೆ.

"Happiness may be the echo of virtue in the soul, it is certainly a harmony in the mind. It may radiate from beggars and Gypsies, lords of the universe who own no service to fame and fortune. It may be the beautific vision of the holiest saints or the insight of the greatest thinkers in the art of apprehending reality."

"ಸುಖವು ಹೃದಯದಲ್ಲಿ ನೆಲಿಸಿದ ಗುಣಗಳ ಪ್ರತಿಧ್ವನಿಯು. ಮನಸ್ಸಿನ ಮಿಲನವಂತೂ ಇದ್ದೇ ಇದೆ. ಬಿಕ್ಷುಕರು ಮತ್ತು ಸಿದ್ದೀ ಜನರ ಹೃದಯದಿಂದ ಸಹ-

ಇದು ಹೊರಹೊಮ್ಮುತ್ತದೆ. ಕೀರ್ತಿ ಮತ್ತು ಸಂಪತ್ತಿನ ಬಗ್ಗೆ ಅವರಿಗೆ ಲಾಲಸ ಇಲ್ಲದಿರುವ ಕಾರಣ ಅವರು ಜಗತ್ತಿನ ದೊರೆಗಳಾಗಿರುವರು. ಪವಿತ್ರರಾದ ಸಂತರಿಗೆ ಆಗುವ ಪರಮಾನಂದಾನುಭವಕ್ಕೆ ಸುಖವೆಂದು ತಿಳಿಯಲಾಗುತ್ತದೆ. ಅಥವಾ ಮಹಾಜ್ಞಾನೀ ಪುರುಷರಲ್ಲಿರುವ ತತ್ವವನ್ನು ಆಕಲನ ಮಾಡುವ ಕಲೆಯ ಅಂತರ್ದೃಷ್ಟಿಗೂ ಸುಖವೆನ್ನಬಹುದು."

ಆದರೂ ಸುಖದ ನಮ್ಮ ಕಲ್ಪನೆಯನ್ನು ಯಾರಾದರೂ ಮುಟ್ಟಬಹುದೋ? '**यद्यत्परवशं दुःखं यद्यदात्मवशं सुखम्**'॥ ಗಟೇರ ಶತಾಬ್ದಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ. ಅವರ ಅನೇಕ ಉಕ್ತಿಗಳನ್ನು ಉದ್ಧೃತಮಾಡಲಾಗುತ್ತಿದೆ. ಸುಖದ ನಮ್ಮ ವ್ಯಾಖ್ಯೆಗೆ ಅವರು ಪರ್ಯಾಯ ರೂಪದಲ್ಲಿ ಹೀಗೆ ಹೇಳಿದ್ದಾರೆ: 'Every thing that frees our spirit without giving us self mastery is pernicious.' ಯಾವದೇ ವಸ್ತುಗಳು ಆತ್ಮವಿಜಯವನ್ನು ತಂದುಕೊಡದೆ ಚಿತ್ತವನ್ನು ನಿರಂಕುಶಮಾಡುವವೋ ಅವು ಅತ್ಯಂತ ಹಾನಿಕಾರಕವಿರುತ್ತವೆ. ಗೀತೆಯಲ್ಲಂತೂ ವಚನಾಮೃತಗಳು ತುಂಬಿರುತ್ತವೆ. '**यस्त्वात्मरतिरेव स्यात्॥ सुखमात्यंतिकम् यत्तद्**'॥ ಮತ್ತು '**यं लब्ध्वा चापरं लाभं मन्यते नाधिकम् ततः**'॥ ಅತ್ಯಂತ ಕೆಳದರ್ಜೆಯ ಅಥವಾ ಅತಿಮಂದ ಮನುಷ್ಯನಿಗೂ ತಿಳಿಯುವಂಥ ವ್ಯಾಖ್ಯೆಯು ಬೇಕಿದ್ದರೆ ಅದು ಇಲ್ಲಿ ಇದೆ — 'ಇನ್ನೊಬ್ಬರ ಸುಖಕ್ಕಾಗಿ ಜೀವಿಸುವದು. ಇನ್ನೊಬ್ಬರು ಸುಖಿಗಳಾಗಿರುವದನ್ನು ನೋಡುವದು. ಇದೇ ಸುಖವು! ಇದಕ್ಕಿಂತ ಹೆಚ್ಚಿನ ಸುಖವು ಬೇರೊಂದಿಲ್ಲ.

*

ರೋಮಾ ರೋಲಾರು ಬಾಪೂ ಅವರ ಸ್ವಿತ್ಸರಲಂಡದ ಅಂದರೆ ರೋಲಾರ ಭೆಟ್ಟಿಯ ಕಾಲದ ಒಂದು ಅತಿಶಯ ಸಜೀವವಾದ, ವಿನೋದಯುಕ್ತವಾದ ಮತ್ತು ನಾವೀನ್ಯಪೂರ್ಣವಾದ ವರ್ಣನೆಯನ್ನು ಒಬ್ಬ ಅಮೇರಿಕೆಯ ಮಿತ್ರನಿಗೆ ಬರೆದ ಪತ್ರದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಅವರು ಬಾಪೂ ಹಾಗೂ ತಮ್ಮ ನಡುವೆ ಆದ ಭೆಟ್ಟಿಯನ್ನು ಸಾಧು ಡೊಮಿನಿಕ ಮತ್ತು ಸಂತ ಫ್ರಾನ್ಸಿಸರ ಭೆಟ್ಟಿಗೆ ಹೋಲಿಸಿದ್ದಾರೆ. ಆದರೆ ಡೊಮಿನಿಕ್ ಯಾರು? ರೋಲಾರೊ ಅಥವಾ ಗಾಂಧಿಯವರೊ? ಡೊಮಿನಿಕರು ಭೆಟ್ಟಿಯಾಗಲು ಹೋಗಿದ್ದರು. ಆದರೆ ಡೊಮಿನಿಕರ ಜೀವನಕ್ಕಿಂತ ಫ್ರಾನ್ಸಿಸರ ಜೀವನವು ಗಾಂಧಿಜೀಯವರ ಜೀವನದೊಂದಿಗೆ ಹೆಚ್ಚು ಹೋಲುವದು. ಇಡೀ ಪತ್ರವು ವಿನೋದದಿಂದ ತುಂಬಿರುವದರಿಂದ ಈ ತುಲನೆಯು ಅಪೂರ್ಣವೆಂದೇ ಹೇಳಬಹುದು. ಆದರೆ ಅದರಲ್ಲಿ ವಿಚಾರಮಾಡುವಂಥ ಒಂದು ಸಂಗತಿ ಇದೆ. ಡೊಮಿನಿಕ್ ಅಥವಾ ಫ್ರಾನ್ಸಿಸ್ ಇವರಲ್ಲಿ ಯಾರೊಬ್ಬರ ಸಂಗಡ ತಮ್ಮ ತುಲನೆಮಾಡುವದು ಬಲವಾದ ಆತ್ಮವಿಶ್ವಾಸದ ಮತ್ತು ಆತ್ಮಪರಿಶುದ್ಧತೆಯ ಕಲ್ಪನೆಯನ್ನು ಪ್ರಕಟಿಸುತ್ತದೆ. ನನಗೆ

ಜ್ಞಾಪಕವಿದ್ದಮಟ್ಟಿಗೆ ಸಂತ ಫ್ರಾನ್ಸಿಸರು ಉಗ್ರ ತಪಶ್ಚರ್ಯದ ಮೂರ್ತಿಯಾಗಿದ್ದರು ಮತ್ತು ಡೊಮಿನಿಕ್‌ರು '**युक्ताहारविहार**', '**युक्तस्वप्नावबोध**', '**कर्मसु युक्तचेष्ट**'। ರಾಗಿದ್ದರು. ಆದರೆ ಫ್ರಾನ್ಸಿಸರು ಯೋಗೀಗಳು ಇದ್ದಿಲ್ಲವೆಂದು ಯಾರು ಹೇಳುವರು ?

*  *  *

ಗಟೆ ಇವನ ಜೀವನದಲ್ಲಿ ತ್ಯಾಗ ಮತ್ತು ಭೋಗ, ವಿಲಾಸ ಮತ್ತು ವೈರಾಗ್ಯ ಇವು ಒಡೆದುಕಾಣುತ್ತವೆ. ಆದರೆ ಕೊನೆಗೆ ಭೋಗ ವಿಲಾಸಗಳಿಂದ ಬಿಡುಗಡೆಯು ಅವನಿಗೆ ತ್ಯಾಗ ಮತ್ತು ವೈರಾಗ್ಯದಿಂದಲೇ ದೊರೆತಿವೆ. ಪ್ರಯತ್ನಶೀಲ ಮನುಷ್ಯನಿಗೆ ಯಾವಾಗಲೂ ಆಶೆಯಿರುವದೆಂಬ ಉತ್ತರವನ್ನು ಕೊಟ್ಟು ಹೋಗಿದ್ದಾನೆ. ಪ್ರಯತ್ನಶೀಲತೆಯ ಲಕ್ಷಣವು ಅವನ ಈ ಪ್ರಸಿದ್ಧ ಪಂಕ್ತಿಗಳಲ್ಲಿ ಕಂಡುಬರುತ್ತದೆ :

> Who has not cut his bread with sorrow
> Who hasn't spent the midnight hours
> Weeping and watching for tomorow.
> He khows you not, ye heavenly powers!'

'ಯಾವನು ಸಂತಪ್ತ ಹೃದಯದೊಂದಿಗೆ ಊಟ ಮಾಡಿರುವದಿಲ್ಲವೋ, ಯಾವನು ನಾಳಿನ ದಾರಿಕಾಯುತ್ತ ಅಳುತ್ತ ನಿದ್ದೆಗೆಟ್ಟು ಇಂದಿನ ರಾತ್ರಿ ಕಳೆದಿಲ್ಲವೋ ಆತನು ದೇವರೇ, ನಿನ್ನನ್ನು ಅರಿತಿಲ್ಲ.'

ಶ್ರೀಮತಿ ನಾಯುಡುರವರು ಬನಾರಸಕ್ಕೆ ಹೋಗುವ ವಿಷಯದಲ್ಲಿ ಬಾಪೂ ಅವರ ಗ್ರಹಿಕೆ ಹೀಗಿತ್ತು : ಶ್ರೀಮತಿಯವರನ್ನು ಮಾಲವೀಯಾಜಿಯವರು ಕರೆದಿರಬಹುದು. ಮತ್ತು ಅವರು ೫ ತಾಸು ಮಾತಾಡಿದ್ದು ಕಾಂಗ್ರೆಸ
೨೮–೩–'೩೨ ಅಧಿವೇಶನ ಕೂಡಿಸುವ ವಿಷಯವಾಗಿ ಇರಬಹುದು. ಆ ಜನರು ಕಾಂಗ್ರೆಸ್ಸು ಕಟ್ಟಳೆಗೆಟ್ಟದು ಎಂದು ಹೇಳುತ್ತಾರೆ. ಆದುದರಿಂದ ಅದರ ಅಧಿವೇಶನ ಕೂಡಿಸಿ, ಅದರ ದೊಡ್ಡದೊಂದು ಸಮಸ್ಯೆಯನ್ನುಂಟುಮಾಡಿ ಅದಕ್ಕಾಗಿ ಜೇಲಿಗೆ ಏಕೆ ಹೋಗಬಾರದು ಎಂಬುದಾಗಿ ಇದ್ದರೆ ಆಶ್ಚರ್ಯವಲ್ಲ.

ಭಾವೀ ಶಾಸನಸಭೆಗಳಲ್ಲಿ ಭಾಗತೆಗೆದುಕೊಳ್ಳುವ ವಿಷಯಕ್ಕೆ ಬಾಪೂ ಅವರು ಹೇಳಿದರು : " ಇದನ್ನು ನೋಡಿ ಹೇಳಬಹುದು. ವಿಲಾಯತಿಯಲ್ಲಿಯೂ ನಾನು ಹೇಳಿದ್ದೆ. ಇಲ್ಲಿಯೂ ನಾನು ಹೇಳುತ್ತೇನೆ. ಅದರಲ್ಲಿ ಏನೂ ಅಧಿಕಾರ ಸಿಗದಿದ್ದರೆ ಅದನ್ನು ಕಟುವಾಗಿ ವಿರೋಧಿಸಬೇಕು ಮತ್ತು ಅಧಿಕಾರ ಸಿಗುತ್ತಿದ್ದರೆ ಶಾಸನಸಭೆಗಳನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಬೇಕು. ನಾನು ಇರದಿದ್ದರೂ ಇಷ್ಟು ಹೇಳಿ ಹೋಗುವೆನು." ವಲ್ಲಭಭಾಯಿಯವರೆಂದರು : " ಇಲ್ಲಿಯವರೆಗೆ ಸಂಗಡ ಕರೆದು

ಕೊಂಡು ಬಂದಿರಿ. ಇನ್ನು ಮೇಲೆ ಒಬ್ಬರೇ ಈ ಪ್ರಕಾರ ಹೊರಟುಹೋಗಬಲ್ಲಿರಾ ? ”

* * *

ರಸ್ಕಿನ್ನರ Fors Clevegera (ಫೋರ್ಸ್ ಕ್ಲೆವಜಿರಾ) ವನ್ನು ಬಾಪೂ ಒಳ್ಳೇ ಅಭಿರುಚಿಯಿಂದ ಓದತೊಡಗಿದರು. ಇಂದು ಹೇಳಿದರು : ಈ ಪುಸ್ತಕವನ್ನು ಮತ್ತೆ ಮತ್ತೆ ಓದಿದರೂ ಬೇಸರವೆನಿಸುವದಿಲ್ಲ. ಇದರಿಂದ ಹೊಸಹೊಸ ವಿಚಾರಗಳು ಹೊಳೆಯುತ್ತವೆ. ಮೂಲ ಶಿಕ್ಷಣದ ವಿಷಯದಲ್ಲಿ ಕೆಲ ವಿಚಾರಗಳು ಬಹಳ ಸುಂದರ ಕಂಡದ್ದರಿಂದ ಈ ವಿಷಯದಮೇಲೆ ಒಂದು ಲೇಖವನ್ನು ಬರೆದು ಆಶ್ರಮಕ್ಕೆ ಕಳಿಸಿದರು.

ಜಾನ ರಸ್ಕಿನ್ನನು ಒಬ್ಬ ಉತ್ತಮ ಲೇಖಕನು, ಅಧ್ಯಾಪಕನು ಮತ್ತು ಧರ್ಮಜ್ಞನು ಆಗಿದ್ದನು. ಅವನ ದೇಹಾಂತವು ೧೮೮೦ ನೇ ಇಸ್ವಿಯ ಸುಮಾರಕ್ಕೆ ಆಯಿತು. ನನ್ನ ಮೇಲೆ ಅವನ ಒಂದು ಪುಸ್ತಕದ ಆಳವಾದ ಪರಿಣಾಮವಾಗಿದೆ. ಮತ್ತು ಅವನು ಸೂಚಿಸಿದ ಮಾರ್ಗದ ಮೇಲೆ ನನ್ನ ಜೀವನದಲ್ಲಿ ಮಹತ್ವಪೂರ್ಣ ಪರಿವರ್ತನೆಯನ್ನು ಮಾಡಿಕೊಂಡೆ. ಈ ಮಾತು ಬಹುಜನ ಆಶ್ರಮವಾಸಿಗಳಿಗೆ ಗೊತ್ತಿರಬಹುದು. ಅವನು ೧೮೭೧ ರಲ್ಲಿ ಕೇವಲ ಕಾಯಕರ ವರ್ಗವನ್ನು ಲಕ್ಷ್ಯದಲ್ಲಿಟ್ಟುಕೊಂಡು ಒಂದು ಮಾಸಿಕ ಪತ್ರಿಕೆಯನ್ನು ಹೊರಡಿಸಲು ಪ್ರಾರಂಭ ಮಾಡಿದ. ಆ ಪತ್ರವನ್ನು ಟಾಲಸ್ಟಾಯರ ಎಷ್ಟೋ ಪತ್ರಗಳಲ್ಲಿ ಹೊಗಳಿದ್ದನ್ನು ನಾನು ಓದಿದ್ದೇನೆ. ಆದರೆ ಇವರಿಗೆ ಆ ಪತ್ರಗಳನ್ನು ಒಟ್ಟುಗೂಡಿಸುವದು ಆಗಲಿಲ್ಲ. ಅವನ ಪ್ರವೃತ್ತಿಯ ವಿಷಯಕ್ಕೂ ಅಧ್ಯಾತ್ಮದ ವಿಷಯಕ್ಕೂ ಒಂದು ಪುಸ್ತಕವು ನನ್ನ ಕಡೆಗೆ ಬಂದಿತ್ತು. ಅದನ್ನು ನಾನು ಓದಿದೆ. ಅದರಲ್ಲಿ ಈ ಪತ್ರಗಳ ಉಲ್ಲೇಖವಿತ್ತು. ಇದರ ಮೇಲಿಂದ ನಾನು ರಸ್ಕಿನ್ನನ ವಿಲಾಯತಿಯ ಒಬ್ಬ ಶಿಷ್ಯಳಿಗೆ ಬರೆದೆ. ಅವಳೇ ಈ ಪುಸ್ತಕದ ಲೇಖಿಕೆ ಇದ್ದಾಳೆ. ಅವಳು ನಾಶ, ಬಡವಿ. ಆದುದರಿಂದ ಅವಳು ಈ ಪುಸ್ತಕವನ್ನು ಹೇಗೆ ಕಳಿಸಬಲ್ಲಳು ? ಮೂರ್ಖತನದಿಂದ ಅಥವಾ ಸುಳ್ಳು ವಿನಯದಿಂದ ನಾನು ಅವಳಿಗೆ ಆಶ್ರಮದಿಂದ ರೂಪಾಯಿ ತರಿಸಿಕೊಳ್ಳಲು ಬರೆಯಲಿಲ್ಲ. ಈ ಸಜ್ಜನ ಸ್ತ್ರೀಯು ತನಗಿಂತ ಹೆಚ್ಚು ಯೋಗ್ಯತೆಯುಳ್ಳ ಮಿತ್ರರಿಗೆ ನನ್ನ ಪತ್ರವನ್ನು ಕಳಿಸಿಕೊಟ್ಟಳು. ಅವರು ಸ್ಪೆಕ್ಟೇಟರದ ಒಡೆಯರಾಗಿದ್ದಾರೆ. ವಿಲಾಯತಿಯಲ್ಲಿ ಅವರಿಗೆ ನಾನು ಭೆಟ್ಟಿಯೂ ಆಗಿದ್ದೆನು. ಈ ಪತ್ರಗಳನ್ನು ಪುಸ್ತಕಾಕಾರವಾಗಿ ಪ್ರಕಟಿಸಿದ ನಾಲ್ಕು ಭಾಗಗಳನ್ನು ಅವರು ನನಗೆ ಕಳಿಸಿಕೊಟ್ಟರು. ಇವುಗಳಲ್ಲಿ ಮೊದಲನೆಯ ಭಾಗವನ್ನು ನಾನು ಓದುತ್ತಲಿದ್ದೇನೆ. ಇವರ ವಿಚಾರಗಳು ಉತ್ತಮವಿದ್ದು ನಮ್ಮ ಬಹ್ವಂಶ ವಿಚಾರಗಳಿಗೆ ಹೊಂದುತ್ತವೆ. ನಾವು ಬರೆದದ್ದೆಲ್ಲ ಮತ್ತು ಆಶ್ರಮದಲ್ಲಿ ನಾವು ಮಾಡುತ್ತಿರುವ ಆಚರಣೆಗಳೆಲ್ಲ ರಸ್ಕಿನ್ನನ ಈ ಕೃತಿಗಳಿಂದ ಕಳವು ಮಾಡಲ್ಪಟ್ಟವುಗಳೋ ಎಂದು ಅಪರಿಚಿತ ಮನುಷ್ಯನು ಅನ್ನುವಷ್ಟು ಅವು ಹೋಲುತ್ತವೆ. ‘ ಕಳವು ಮಾಡಲ್ಪಟ್ಟವು ’ ಎಂಬ ಶಬ್ದದ ಅರ್ಥವು ಏನೆಂಬುದು ಹೊಳೆದಿರಬಹುದು. ಯಾರಿಂದಲಾದರೂ ಯಾವದೇ ಆಚಾರ ಅಥವಾ ವಿಚಾರವನ್ನು ತೆಗೆದುಕೊಂಡು ಅವರ ಹೆಸರನ್ನು ಬಿಟ್ಟುಬಿಟ್ಟು ಇದು ತನ್ನ ಕೃತಿಯೆಂದು ತೋರಿಸಿದರೆ ಅದನ್ನು ಕಳವು ಮಾಡಲ್ಪಟ್ಟಂತೆ ಎಂದು ತಿಳಿಯಲಾಗುತ್ತದೆ.

ರಸ್ಕಿನ್ನನು ಬಹಳ ಬರೆದಿದ್ದಾನೆ. ಈ ಸಾರೆ ಅದರೊಳಗಿಂದ ಸ್ವಲ್ಪನ್ನೇ ಕೊಡುತ್ತೇನೆ. ಏನೂ ಅಕ್ಷರಜ್ಞಾನ ಆಗದಿರುವದಕ್ಕಿಂತ ಸ್ವಲ್ಪಾದರೂ ಆಗುವದು ಒಳ್ಳೆಯದೆಂದು

ನಾನು ರಸ್ಕಿನ ಮತ್ತು ಟಾಲಸ್ಟಾಯರಲ್ಲಿಯ ಒಂದು ಸಾಮ್ಯವನ್ನು ಸೂಚಿಸಿದೆನು: "ಟಾಲಸ್ಟಾಯನು ತನ್ನ ಕಲಾನಿಷ್ಠ ಜೀವನವನ್ನು ಬಿಟ್ಟು ಸೇವಾನಿಷ್ಠ ಜೀವನವನ್ನು ಪ್ರಾರಂಭಮಾಡಿದನು ಮತ್ತು ಕಲೆಯ ಮೇಲಿನ ಪುಸ್ತಕ ಬರೆಯುವದನ್ನು ಸಂಪೂರ್ಣ ತ್ಯಾಗಮಾಡಿ ಸಾಮಾನ್ಯ ಜನರ ಉನ್ನತಿಯಾಗುವಂಥ ಗೃಹೋಪಯೋಗೀ ಪುಸ್ತಕಗಳನ್ನೂ ಕಥೆಗಳನ್ನೂ ಬರೆಯಲು ಪ್ರಾರಂಭಿಸಿದನು. ರಸ್ಕಿನ್ನನ ಜೀವನದ ಮೊದಲನೇ ಭಾಗವು ಕಲಾನಿಷ್ಠವಾಗಿಯೇ ಇತ್ತು. ಈ

ಹೇಳುವದು ಮಹಾದೋಷವೆಂದು ಅನ್ನುತ್ತಾನೆ. ಯಾವದು ಸತ್ಯವಿದೆ, ಆತ್ಮಜ್ಞಾನ ಮಾಡಿಕೊಡುವಂಥಾದ್ದು ಇದೆ ಅದೇ ಶಿಕ್ಷಣವು. ಅದನ್ನೇ ಕಲಿಯಬೇಕು ಎಂದು ರಸ್ಕಿನ್ನನ ಸ್ಪಷ್ಟ ಅಭಿಪ್ರಾಯವಿದೆ. ಈ ಜಗತ್ತಿನಲ್ಲಿ ಮನುಷ್ಯಪ್ರಾಣಿಗೆ ಮೂರು ವಸ್ತು ಹಾಗೂ ಮೂರು ಗುಣಗಳ ಆವಶ್ಯಕತೆ ಇದೆಯೆಂದು ಹೇಳುತ್ತಾನೆ. ಯಾರಿಗೆ ಇವನ್ನು ಪ್ರಾಪ್ತಮಾಡಿಕೊಳ್ಳುವದು ಗೊತ್ತಾಗುವದಿಲ್ಲವೋ ಅವರಿಗೆ ಜೀವನಮಂತ್ರವೇ ಗೊತ್ತಾಗುವದಿಲ್ಲ. ಆದುದರಿಂದ ಈ ಆರು ವಸ್ತುಗಳು ಶಿಕ್ಷಣದ ಆಧಾರವಾಗಬೇಕು. ಸ್ವಚ್ಛ ಹವೆ, ಸ್ವಚ್ಛ ನೀರು, ಸ್ವಚ್ಛ ಮಣ್ಣು ಎಂದು ಯಾವದಕ್ಕೆ ಹೇಳುತ್ತಾರೆಯೋ ಅವುಗಳನ್ನು ಹೇಗೆ ಇಡಬೇಕು ಅವುಗಳ ಉಪಯೋಗವೇನು ಎಂಬುದನ್ನು ಮನುಷ್ಯಮಾತ್ರರು ಬಾಲ್ಯದಿಂದ –ಮುದುಕರಿರಲಿ, ಹುಡುಗಿಯರಿರಲಿ- ಅರಿಯಬೇಕು. ಇದೇ ಪ್ರಕಾರ ಅವನು ಮೂರು ಗುಣಗಳಲ್ಲಿ ಗುಣಜ್ಞತೆ, ಆಶೆ ಮತ್ತು ಪ್ರೇಮ ಇವುಗಳ ಗಣನೆ ಮಾಡಿದ್ದಾನೆ. ಯಾರಿಗೆ ಸತ್ಯದ ಮಹತ್ವವೆನಿಸುವದಿಲ್ಲವೋ ಯಾರು ಉತ್ತಮ ವಸ್ತುಗಳನ್ನು ಅರಿಯುವದಿಲ್ಲವೋ ಅವರು ತಮ್ಮ ಸೊಕ್ಕಿನಲ್ಲಿಯೇ ತಿರುಗಾಡುತ್ತಾರೆ. ಅಂಥವರಿಗೆ ಆತ್ಮಾನಂದ ದೊರೆಯಲಾರದು. ಇದೇ ಪ್ರಕಾರ ಯಾರಲ್ಲಿ ಆಶಾವಾದವಿಲ್ಲವೋ ಅಂದರೆ ದೇವರ ನ್ಯಾಯವಿಚಾರದಲ್ಲಿ ಶಂಕಿಸುತ್ತಾರೆಯೋ ಅವರ ಹೃದಯಗಳು ಪ್ರಫುಲ್ಲಿತವಾಗಿ ಇರಲಾರವು. ಮತ್ತು ಯಾರಲ್ಲಿ ಪ್ರೇಮವಿಲ್ಲವೋ ಅಂದರೆ ಅಹಿಂಸೆ ಇಲ್ಲವೋ ಯಾರು ಜೀವಮಾತ್ರವನ್ನು ತನ್ನ ಕುಟುಂಬವೆಂದು ತಿಳಿಯುವದಿಲ್ಲವೋ ಅಂಥವರು ಜೀವನಮಂತ್ರವನ್ನು ಎಂದೂ ಸಾಧ್ಯಮಾಡಿಕೊಳ್ಳಲಾರರು.

ಈ ವಿಷಯದ ಮೇಲೆ ರಸ್ಕಿನ್ನನು ತನ್ನ ವಿನೋದದ ಭಾಷೆಯಲ್ಲಿ ಬಹಳ ವಿಸ್ತಾರಪೂರ್ವಕ ಬರೆದಿದ್ದಾನೆ. ಆದರೆ ಅದನ್ನು ಇನ್ನೊಂದು ಸಮಯ ಜನಸಾಮಾನ್ಯರ ಭಾಷೆಯಲ್ಲಿ ಕೊಡಲು ಪ್ರಯತ್ನಪಡುವೆ. ಇವತ್ತಂತೂ ಇಷ್ಟರಿಂದಲೇ ಸಮಾಧಾನ ಪಡೆಯಿರಿ. ಇದೇ ಸಮಯದಲ್ಲಿ ಇನ್ನೊಂದು ಹೇಳಬಹುದು: ನಾವು ಯಾವುದನ್ನು ಹಳ್ಳಿಗರ ಭಾಷೆಯಲ್ಲಿ, ಶಬ್ದಗಳಲ್ಲಿ ವಿಚಾರ ಮಾಡುತ್ತಿದ್ದೇವೆ ಮತ್ತು ಆಚರಣೆಯಲ್ಲಿ ತರಲು ಪ್ರಯತ್ನಿಸುತ್ತಿದ್ದೇವೆ, ಅದೆಲ್ಲವನ್ನೂ ರಸ್ಕಿನ್ನನು ಸಾಮಾನ್ಯವಾಗಿ ತನ್ನ ಪ್ರೌಢ ಹಾಗೂ ವಿಕಸಿತ ಭಾಷೆಯಲ್ಲಿ ಇಂಗ್ಲೀಷ ಜನತೆಗೆ ತಿಳಿಯುವ ರೀತಿಯಲ್ಲಿ ಮಂಡಿಸಿದ್ದಾನೆ. ನಾನು ಇಲ್ಲಿ ಎರಡು ಭಾಷೆಗಳ ತುಲನೆಮಾಡದೆ ಇಬ್ಬರು ಭಾಷಾಶಾಸ್ತ್ರಿಗಳ ತುಲನೆ ಮಾಡಿದ್ದೇನೆ. ರಸ್ಕಿನ್ನನ ಭಾಷಾಶಾಸ್ತ್ರಜ್ಞಾನವನ್ನು ನನ್ನಂಥವನು ನಿರಿಗಟ್ಟಲಾರನು. ಆದರೆ ಹೀಗೊಂದು ಸಮಯ ಬರಬಹುದು: ಭಾಷಾಪ್ರೇಮವು ಅತ್ಯಂತ ವ್ಯಾಪಕವಾದಾಗ ಭಾಷೆಯ ಬೆನ್ನುಹತ್ತಿ ಅದರಲ್ಲಿಯೇ ತಲ್ಲೀನನಾದ, ರಸ್ಕಿನ್ನನಂಥ ಶಾಸ್ತ್ರಜ್ಞನು ಹುಟ್ಟುವನು. ಆಗ ಅವನು ಇಂಗ್ರಜೀ ರಸ್ಕಿನ್ನನಷ್ಟೇ ಪ್ರಭಾವಶಾಲೀ ಲೇಖ ಬರೆಯುವನು.

ಕಲಾನಿಷ್ಠೆಯ ಕಾಲದಲ್ಲಿ ಅವನು Modern Painters ( ಮಾಡರ್ನ ಪೇಂಟರ್ಸ ) Stones of Venice ( ಸ್ಟೋನ್ಸ ಆಫ್ ವೇನಿಸ ) ಮೊದಲಾದ ಪುಸ್ತಕಗಳನ್ನು ಬರೆದನು. ಬಳಿಕ ಸೌಂದರ್ಯೋಪಾಸನೆಯು ಉತ್ತಮ ವಸ್ತುವೆಂದು ತಿಳಿದಿದ್ದನು. ಆದರೆ ಸುತ್ತುಮುತ್ತಲೂ ದುಃಖ, ದಾರಿದ್ರ್ಯ, ಬಡಕು ಇದ್ದಾಗ ಸೌಂದರ್ಯದ ಆನಂದವನ್ನು ಸವಿಯುವದು ಹೇಗೆ ಸಾಧ್ಯ? ಎಂದು ಅವನಿಗೆ ಹಿಂದಿನಿಂದ ಹೊಳೆಯಿತು. ಆದುದರಿಂದ ಅವನು ತನ್ನ ಲೆಕ್ಕಣಿಕೆಯನ್ನು Dipped in blood & tears 'ರಕ್ತ ಮತ್ತು ಕಣ್ಣೀರುಗಳಲ್ಲಿ ಮುಳುಗಿಸಿ' ಮತ್ತು Unto This Last' ( ಅಂಟು ಧಿಸ್ ಲಾಸ್ಟ ) 'ಸರ್ವೋದಯ' ಪುಸ್ತಕಗಳನ್ನು ಬರೆದನು. ಟಾಲಸ್ಟಾಯನಿಗಾದ ಅನುಭವವೇ ರಸ್ಕಿನ್ನನಿಗೂ ಆಯಿತು." ಬಾಪೂ ಹೇಳಿದರು: "ಈ ತುಲನೆಯು ಒಂದು ವಿಶಿಷ್ಟ ಸೀಮೆಯನ್ನು ಮೀರಿದ ಮೇಲೆ ಉಳಿಯಲಾರದು. ಯಾಕಂದರೆ ಟಾಲಸ್ಟಾಯನು ತನ್ನ ಕಲಾಜೀವನ ಅಂದರೆ ಭೂತಕಾಲವನ್ನು ನಿಂದಿಸಿದ, ಅದನ್ನು ಅಲ್ಲಗಳೆದ. ಆದರೆ ರಸ್ಕಿನ್ನನು Unto This Last ( ಅಂಟು ಧಿಸ್ ಲಾಸ್ಟ ) ಮತ್ತು Fors ( ಫೋರ್ಸ ) ಪುಸ್ತಕ ಬರೆದು ತನ್ನ ಕಲಾಮಯ ಜೀವನಕ್ಕೆ ತಿಮಿರವನ್ನಿಟ್ಟನು." ನಾನು ಅಂದೆ: "ಟಾಲಸ್ಟಾಯನು ಕ್ರಾಂತಿಕಾರಿಯಾಗಿದ್ದರಿಂದ ಅವನು ತನ್ನ ಜೀವನದಲ್ಲಿಯೂ ಪರಿವರ್ತನೆ ಮಾಡಿದ ಆದರೆ ರಸ್ಕಿನ್ನನು ವಿಚಾರವನ್ನು ಕೊಟ್ಟು ಸುಮ್ಮನೆ ಕುಳಿತುಬಿಟ್ಟ." ಬಾಪೂ ಅಂದರು: "ಇದು ಬಹಳ ದೊಡ್ಡ ವ್ಯತ್ಯಾಸವಲ್ಲವೇ? ಟಾಲಸ್ಟಾಯನ ಹಾಗೆ ಜೀವನ ಪರಿವರ್ತನವು ರಸ್ಕಿನ್ನನಲ್ಲಿಲ್ಲ." ವಲ್ಲಭಭಾಯಿ ಹೇಳಿದರು: "ಇವತ್ತು ವಿಲಾಯತಿಯಲ್ಲಿ ರಸ್ಕಿನ್ನನ ಹೆಸರನ್ನು ಯಾರೂ ತೆಗೆದುಕೊಳ್ಳುವದಿಲ್ಲವಲ್ಲವೇ?" ಬಾಪೂ ಎಂದರು: "ಹೌದು, ತೆಗೆದು ಕೊಳ್ಳುವದಿಲ್ಲ. ಆದರೆ ರಸ್ಕಿನ್ನನನ್ನು ಮರೆಯಲಾಗದು. ಅವನ ಕಾಲವು ಬರಹತ್ತಿದೆ. ಯಾವನು ರಸ್ಕಿನ್ನನ ಹೆಸರನ್ನು ಕೇಳಲಿಲ್ಲ ಮತ್ತು ಅವನ ವಿಷಯವಾಗಿ ಅಲಕ್ಷ ಮಾಡಿರುವನೋ ಅಂಥವನೂ ಕೂಡ ರಸ್ಕಿನ್ನನ ಕಡೆಗೆ ಒಲಿಯುವಂಥ ಸಮಯ ಬರಹತ್ತಿದೆ."

* * *

ಆಶ್ರಮದಲ್ಲಿ ತಿಲಕನ್ ಎಂಬ ಹೆಸರಿನ ವಿದ್ಯಾರ್ಥಿ ಬಂದಿರುವನು. ಅವನಿಗೆ ಬರೆದರು:

Vanity is emptyness. Self respect is substance No one's self respect is ever hurt except by self. vanity is always hurt from outside.

"In the phrase 'Seeing God face to face', 'face to face' is not to be taken literally. It is a matter of decided feeling. God is formless. He can, therefore, only be seen by spirtual sight-vision."

“ಅಹಂಕಾರದಲ್ಲಿ ಡಾಂಭಿಕತನವಿದೆ. ಸ್ವಾಭಿಮಾನವು ಸಾರವತ್ತಾದುದು. ಯಾರದೇ ಸ್ವಾಭಿಮಾನಕ್ಕೆ ಎರಡನೆಯವರಿಂದ ಧಕ್ಕೆ ತಟ್ಟಲಾರದು. ಸ್ವಾಭಿಮಾನಕ್ಕೆ ತನ್ನಿಂದಲೇ ಧಕ್ಕೆ ತಟ್ಟುತ್ತದೆ. ಅಹಂಕಾರಕ್ಕೆ ಯಾವಾಗಲೂ ಹೊರಗಿನ ಧಕ್ಕೆ ತಟ್ಟುತ್ತದೆ. ಆದುದರಿಂದ ಎರಡನೆಯವರು ಅದಕ್ಕೆ ಆಘಾತ ಮಾಡಬಹುದು.”

“ದೇವರನ್ನು ಸಾಕ್ಷಾತ್ ನೋಡುವದು, ಈ ಪ್ರಯೋಗದಲ್ಲಿ ‘ಸಾಕ್ಷಾತ್’ ಇದರ ಅರ್ಥವನ್ನು ಅಕ್ಷರಶಃ ಮಾಡಬಾರದು. ಈ ಪ್ರಯೋಗವು ನಮ್ಮ ಭಾವನೆಯ ನಿಶ್ಚಿತತೆಯನ್ನು ತೋರಿಸುವದಕ್ಕಾಗಿ ಇರುತ್ತದೆ. ಹಾಗೆ ನೋಡಿದರೆ ದೇವರು ನಿರಾಕಾರನಿದ್ದಾನೆ. ಅವನು ಆಧ್ಯಾತ್ಮಿಕವಾದ ಅಂತರ್ದೃಷ್ಟಿಯಿಂದಲೇ ಕಾಣಬಲ್ಲನು.”

ಮತ್ತೊಂದು ಪತ್ರದಲ್ಲಿ ಬಾಪೂ ಬರೆದರು:

“ಯಾವ ಪ್ರಕಾರ ಒಂದು ಗಿಡದ ಎಲೆಗಳು ಕೂಡಿಕೊಂಡೇ ಇರುವವೋ ಅದೇ ಪ್ರಕಾರ ಸಮಾನ ಆಚಾರ-ವಿಚಾರಗಳುಳ್ಳವರ ಮಾತಾಗಿದೆ. ಇದು ಸ್ವಾಭಾವಿಕವಾದ ಆಕರ್ಷಣವುಳ್ಳದ್ದಾಗಿದೆ.

“ಸಂಗಡಿಗರೂ ಸಹಕಾರಿಗಳೂ ಕೋಟಿಗಟ್ಟಲೆ ಇರಬಹುದು. ಆದರೆ ಮಿತ್ರನು ದೇವರೊಬ್ಬನೆ. ಅನ್ಯರ ಮಿತ್ರತ್ವವು ದೇವರ ಮಿತ್ರತ್ವದಲ್ಲಿ ಬಾಧೆಯುಂಟು ಮಾಡುತ್ತದೆ. ಇದು ನನ್ನ ಅಭಿಪ್ರಾಯವೂ ಅನುಭವವೂ ಆಗಿದೆ.

“ಭಗವಾನ್ ಶ್ರೀಕೃಷ್ಣನು ಭೌತಿಕ ಸಾಧನಗಳ ಸಹಾಯವಿಲ್ಲದೆ ಬಂದು ಹೋಗಿ ಮಾಡುತ್ತಿದ್ದನೆಂಬ ಮಾತು ನನಗೆ ಗೊತ್ತಿಲ್ಲ. ಅಥವಾ ಅದನ್ನು ನಾನು ನಂಬುವದಿಲ್ಲ. ನಿಜವಾದ ಯೋಗಿಯು ವಿಭೂತಿತ್ವವನ್ನೇ ತ್ಯಾಗ ಮಾಡುತ್ತಾನೆ. ಯಾಕಂದರೆ ಅವನ ಯೋಗವು ಕೇವಲ ಸಾಕ್ಷಾತ್ಕಾರ ಪಡೆಯುವದಕ್ಕಾಗಿಯೇ ಇರುತ್ತದೆ. ಅದನ್ನು ಕ್ಷುಲ್ಲಕ ವಸ್ತುಗಳ ಜೊತೆಗೆ ವಿನಿಮಯ ಮಾಡುವದು ಹೇಗೆ ಸಾಧ್ಯ?”

ಈ ಪತ್ರದಲ್ಲಿ ನಾನು ‘ವಿಭೂತಿ’ ಶಬ್ದಕ್ಕೆ ಬದಲು ‘ಸಿದ್ಧಿ’ ಇರಬೇಕೆಂದು ಸೂಚಿಸಿದೆ. ಬಾಪೂ ಅದನ್ನು ಒಪ್ಪಿಕೊಳ್ಳಲಿಲ್ಲ. ಬಹಳ ಹೊತ್ತು ಚರ್ಚೆಯಾದ ನಂತರವೂ ಅವರು ಅದಕ್ಕೇ ಅಂಟಿಕೊಂಡು ನಿಂತರು. ವಿಭೂತಿಯಲ್ಲಿ ‘ಸಿದ್ಧಿ’ ಬಂದು ಹೋಗುತ್ತದೆಂದು ಹೇಳಿದರು. ವಿಭೂತಿಗಳ ತ್ಯಾಗವೆಂದರೆ ವಿಭೂತಿಗಳ ಉಪಯೋಗವನ್ನು ತ್ಯಾಗ ಮಾಡುವದು. ತ್ಯಾಗ ಮಾಡುವದೆಂದರೆ ಕಣ್ಣುರೆಪ್ಪೆಗಳು ಮುಚ್ಚಿ ತೆರೆಯುವದನ್ನು ಮಾಡುತ್ತಿದ್ದರೂ ಆ ಬಗ್ಗೆ ನಮಗೆ ಹೇಗೆ ಅದರ ಅರಿವೇ ಇರುವದಿಲ್ಲವೋ ಹಾಗೆಯೇ ನಮಗೆ ಅದರ ವಿಷಯದಲ್ಲಿ ವಿಚಾರವಿರಬಾರದು.

ಸ್ಯಾಮ್ಯುಅಲ್ ಹೋರನ 'ಫ್ರೋರ್ಥ ಸೀಲ' ಎಂಬ ಪುಸ್ತಕವು ಅವನ ರಶಿಯಾದ ಅನುಭವವನ್ನು ಕುರಿತು ಬರೆಯಲ್ಪಟ್ಟಿದೆ. ಯುದ್ಧ ಪ್ರಾರಂಭವಾಗುವ ಸಮಯಕ್ಕೆ ಒಂದು ವರ್ಷ ರಶಿಯನ್ ಭಾಷೆಯ ಅಭ್ಯಾಸ

೨೯-೩-'೩೨ ಮಾಡಿ ಅವನು ದೇಶದ ಸೇವೆಗಾಗಿ ರಶಿಯಾಕ್ಕೆ ಹೋಗಲು ಅಪ್ಪಣೆ ಕೇಳಿದ. ಅವನು ಗೂಢಚಾರರ ವಿಭಾಗದ ಮೇಲಧಿಕಾರಿಯಾಗಿ ಹೋಗಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ. ಪುಸ್ತಕದಲ್ಲಿ ಆ ಕಾಲದ ಪರಿಸ್ಥಿತಿಯನ್ನೂ ಪಾತ್ರಗಳನ್ನೂ ಕುರಿತು ವಿನೋದಪೂರ್ಣವಾದ ವರ್ಣನೆಯಿದೆ. ರಶಿಯಾ ದೇಶದ ಯುದ್ಧಸಾಮಗ್ರಿಯ ಅವ್ಯವಸ್ಥೆಯನ್ನು ನೋಡಿ ಅವನು ಬರೆದದ್ದು ಇಂಗ್ಲಂಡ ಮತ್ತು ಬೇರೆ ಯಾವದೇ ದೇಶದ ನಡುವಿನ ಭೇದವನ್ನು ಇಂದಿಗೂ ವ್ಯಕ್ತಮಾಡಿ ತೋರಿಸುತ್ತದೆ. ರಶಿಯದ ಸೈನ್ಯವಿಭಾಗದ ಆಫೀಸರರಿಲ್ಲದ ಆಫೀಸುಗಳು, ಬಹುಕಾಲದ ರಜೆಯ ದಿನಗಳು ಮತ್ತು ಅನಿಶ್ಚಿತ ಸಮಯ ಇವೆಲ್ಲವುಗಳ ಬಗ್ಗೆ ಚರ್ಚೆ ಮಾಡಿ ಅವನು ಬರೆಯುತ್ತಾನೆ :

"ಕೆಲಸದ ದಿವಸಗಳಲ್ಲಿ ಕೂಡ ಆಫೀಸರರು ಹೊತ್ತಿಗೆ ಸರಿಯಾಗಿ ಆಫೀಸಿಗೆ ಬರುತ್ತಿದ್ದಿಲ್ಲ. ಆದುದರಿಂದ ರಶಿಯದ ಜೊತೆಗಾರರೊಂದಿಗೆ ಭೆಟ್ಟಿಯ ಸಮಯವನ್ನು ಗೊತ್ತುಮಾಡುವದು ನನಗೆ ಕಠಿಣವೆನಿಸುತ್ತಿತ್ತು. ಉದಾಹರಣೆಗಾಗಿ ಹೇಳಬೇಕಾದರೆ ನಾನು ರಶಿಯವನ್ನು ತಲ್ಪಿದಾಗ ಒಂದು ಸಂಗತಿ ನನ್ನ ನೆನಪಿನಲ್ಲಿದೆ. ಎಲ್ಲ ಖಾತೆಗಳ ಮುಖ್ಯ ಆಫೀಸರನಾದ ಕ್ವಾರ್ಟರ ಮಾಸ್ಟರ ಜನರಲ್ಲನದೊಂದು ರೂಢಿ : ಅವನು ರಾತ್ರಿ ಹನ್ನೊಂದು ಘಂಟೆಗೆ ಆಫೀಸಿಗೆ ಬರುತ್ತಿದ್ದ. ಮರುದಿನ ಏಳು ಘಂಟೆಯವರೆಗೆ ಕೆಲಸ ಮಾಡುತ್ತಿದ್ದ. ಹಗಲಿನಲ್ಲಿ ಕೆಲಸ ಮಾಡಿ ರೂಢಿಯಿದ್ದ ನಮ್ಮಂಥವರಿಗೆ ಇಂಥ ಜನರೊಂದಿಗೆ ಸಹಯೋಗ ಮಾಡುವದು ಕಠಿಣವೆನಿಸುತ್ತಿತ್ತು. ಈ ಜನರ ರೀತಿನೀತಿಗಳನ್ನು ನೋಡಿ ಲಂಡನ್ನದ ಮುಖ್ಯ ಅಧಿಕಾರಿಯು ಈ ಎಲ್ಲ ಮಾತುಗಳ ಬಗ್ಗೆ ಏನು ತಿಳಿದುಕೊಳ್ಳುವನೊ ಎಂದು ನನ್ನ ತಲೆಯಲ್ಲಿ ವಿಚಾರಗಳು ಬರುತ್ತಿದ್ದವು. ನಮ್ಮಲ್ಲಿ ಶಿಸ್ತಿನಿಂದ ಕೆಲಸ ಮಾಡುವ ಆಫೀಸರರು, ನುರಿತ ಟಾಯಪಿಸ್ಟರು, ಕಾರ್ಡುಗಳ ಮೇಲಿಂದ ಸೂಚಿಪಟ್ಟಿಗಳನ್ನು ಸಿದ್ಧಮಾಡುವ ವಿಶೇಷಜ್ಞರು ಮತ್ತು ಉಳಿದ ಎಲ್ಲ ವಿಭಾಗಗಳ ಜನರು ಇವರೆಲ್ಲರ ಕುಶಲತೆಯಿಂದ ಲಂಡನ್ನದ ಆಡಳಿತೆಯು ಮಾದರಿಯದೆಂದು ತಿಳಿಯಲಾಗುತ್ತದೆ. ಆದರೆ ಈ ಜನರ ಕೆಲಸ ಮಾಡುವ ಓರಣಗೆಟ್ಟ ಆಡಳಿತೆಯನ್ನು ನೋಡಿ ನಮ್ಮವರು ಏನೆಂದುಕೊಳ್ಳುವರೊ ? ರಶಿಯದಲ್ಲಿ ನಾನು ದಿನಗಳೆದಂತೆ ನಾವು ಮಾಡುತ್ತಿರುವಷ್ಟು ಉತ್ಕಟತೆಯಿಂದ ಬೇರೆ ಯಾವ ದೇಶವೂ ಯುದ್ಧವನ್ನು ಮಾಡುತ್ತಿರುವದಿಲ್ಲವೆಂದು ಬಹಳ ದಿವಸಗಳಿಂದ ನನ್ನ ತಲೆಯಲ್ಲಿ ಸುಳಿದಾಡುತ್ತಿದ್ದ ವಿಚಾರವು ಮತ್ತಿಷ್ಟು ದೃಢವಾಗುತ್ತ ಹೋಯಿತು. ಆಫೀಸಿನ ದೈನಂದಿನದ ಕೆಲಸವು ಕೂಡ ವಿಭಾಗಗಳ ಅವ್ಯವಸ್ಥೆಯ

ಮೂಲಕ ಮೇಲಿಂದ ಮೇಲೆ ಬಂದು ಬೀಳುತ್ತಿತ್ತು. ಒಂದು ಸಲ ಹೀಗಾಯಿತು: ನಾವು ಕಳಿಸುತ್ತಿದ್ದ ತಂತೀಮಾರ್ಗವು ಹತ್ತು ದಿವಸಗಳ ವರೆಗೂ ಕೆಟ್ಟುಬಿದ್ದಿತ್ತು. ಈ ಹತ್ತು ದಿನಗಳಲ್ಲಿ ನಾನು ದಿನಾಲು ಎಷ್ಟೋ ತಂತಿಗಳನ್ನು ಕಳಿಸುತ್ತಿದ್ದೆ. ಅವು ಹೋಗುತ್ತಿರಲೇ ಇಲ್ಲ. ಏನಾಗಿದೆ ಎಂಬುದನ್ನು ತಿಳಿಸಬೇಕೆಂಬುದೂ ಯಾರಿಗೂ ಹೊಳೆಯಲಿಲ್ಲ. ಲಂಡನ್ನಿಂದ ತಂತಿ ಬಾರದ್ದರಿಂದ ನಾನು ಚಿಂತೆಗೊಳಗಾದೆ. ತಪಾಸಣೆ ಮಾಡಿದ ಮೇಲೆ ನನಗೆ ತಿಳಿದದ್ದೇನಂದರೆ: ತಂತಿ ಕಳಿಸಲಿಲ್ಲವೆಂಬ ವಿಷಯವು ನನಗೆ ಗೊತ್ತಾದರೆ ನಾನು ಚಿಂತೆಗೊಳಗಾಗುವೆನೆಂದು ತಿಳಿದು ತಂತಿ ವಿಭಾಗದ ಅಧಿಕಾರಿಯು ನನಗೆ ಈ ಸುದ್ದಿಯನ್ನು ತಿಳಿಸಲಿಲ್ಲ."

ರೋಜರ ಕೇಸಮೆಂಟರ ವ್ಯಕ್ತಿತ್ವದ ಬಗ್ಗೆ ವರ್ಣನೆಮಾಡುತ್ತ ಲೇಖಕನು ಹೀಗೆ ಬರೆಯುತ್ತಾನೆ:

"ರಾತ್ರಿಯಲ್ಲಿ ೧೦೦ ಡಿಗ್ರಿ ಉಷ್ಣತೆಯಿದ್ದಾಗ ಕೂಡ ಅವನು ಅಯರ್ಲಂಡದ ಕೈನೂಲಿನ ಅತಿ ದಪ್ಪವಾದ ಖಾದಿಯನ್ನೇ ತೊಡುತ್ತಿದ್ದನು. ಕಾಲುಚೀಲ ಅಥವಾ ಚಪ್ಪಲಿಗಳ ಮಾತೇ ಇದ್ದಿಲ್ಲ. ಆದರೆ ನಂಬಲಿಕ್ಕೆ ಬಾರದಷ್ಟು ಸ್ವೇಚ್ಛಾಚಾರಿಯೂ ವಿಟಮಾರಿಯೂ ಆಗಿದ್ದನು." ಅವನ ಬಗ್ಗೆ ಮತ್ತೂ ಬರೆಯುವದೇನಂದರೆ: "ಅವನಲ್ಲಿ ಈ ಎಲ್ಲ ವಿಕ್ಷಿಪ್ತತನಗಳಿದ್ದರೂ ನಮ್ಮ ಈ ಹಿಂಸಾಮಾರ್ಗವನ್ನು ಧಿಕ್ಕರಿಸುವಂಥ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡುವಂಥ ಅತಿ ವಿರಳ ವ್ಯಕ್ತಿಗಳ ಪಂಕ್ತಿಯಲ್ಲಿ ಇವನೊಬ್ಬನಾಗಿದ್ದನು. ಅವನು ನಡುವೆ ಕೈಹಾಕದಿದ್ದರೆ ರಬ್ಬರದ ಸಲುವಾಗಿ ಕಾಂಗೊ ಮತ್ತು ಪುಟುಮಾಯೋಗಳಲ್ಲಿ ನಡೆದ ಅತ್ಯಾಚಾರದ ಕಲಂಕವು ಯಾವ ಅಡೆತಡೆಯಿಲ್ಲದೆ ಮುಂದೆ ಸಾಗುತ್ತಿತ್ತು. ಆದರಂತೆ ಅಲ್ಲಿಯ ಬಡ ನಿವಾಸಿಗಳಿಗೆ ಆಗುತ್ತಿದ್ದ ಉಪದ್ರವವೂ ಕೊಲೆಯೂ ಹಾಗೆಯೇ ನಡೆಯುತ್ತಿದ್ದವು. ಇವರಲ್ಲಿಯ ಮರುಕದ ಮಾತೆಂದರೆ ರಬ್ಬರದ ವ್ಯಾಪಾರಿಗಳು ಕಾಂಗೋದ ನಿವಾಸಿಗಳ ಮೇಲೆ ಮಾಡುತ್ತಿರುವ ಅತ್ಯಾಚಾರವನ್ನೇ ಇಂಗ್ಲಂಡವು ಅಯರ್ಲಂಡದ ಮೇಲೆ ಮಾಡುತ್ತಿರುತ್ತದೆ ಎಂದು ೧೯ನೇ ಶತಮಾನದ ಈ ಡಾನ್ ಕ್ವಿಗ್ಝೋಟನ ಅಭಿಪ್ರಾಯವಾಗಿತ್ತು. ಅವನು ತನ್ನ ಮನಸ್ಸಿನ ಈ ವಿಕ್ಷಿಪ್ತತೆಯನ್ನು ಧಾರ್ಮಿಕ ಸಿದ್ಧಾಂತವನ್ನಾಗಿ ಮಾಡಿಕೊಂಡಿದ್ದನು. ಆದುದರಿಂದಲೇ ಅವನಿಗೆ ರಾಜದ್ರೋಹಿಯಾಗಿ ಸಾಯಬೇಕಾಯಿತು.

ರಶಿಯಾದ ಝಾರನ ವಿಷಯವಾಗಿ ಅವನು ಹೀಗೆ ಬರೆಯುತ್ತಾನೆ:--

"ಅವನ ಜೊತೆಯಲ್ಲಿ ಮಾತಾಡುವಾಗ ಅವನೊಬ್ಬ ವಿನೀತನೂ ಧರ್ಮಭೀರುವೂ ಸಜ್ಜನನೂ ಆಗಿದ್ದನೆಂದು ಅನಿಸಿತು. ಇಂಥವನ ಕೊನೆಯಾಗಬಹುದೆಂದು ಯಾರೂ ಊಹೆಯನ್ನು ಕೂಡ ಮಾಡಲಾರರು. ಆದರೆ ಅವನ ಸಾರ್ವಜನಿಕ ಆಡಳಿತೆಯ ಬಗ್ಗೆ ದೊರೆಯುವ ಪುರಾವೆಗಳ ಮೇಲಿಂದ ನೋಡಿದರೆ ಅವನೊಬ್ಬ ಹೀನ ಕೃತ್ಯ

ಗಳನ್ನು ಮಾಡುವ ಅಪರಾಧಿಯೆಂದು ತಿಳಿದು ಅವನ ಮೇಲೆ ಖಟ್ಲೆ ನಡೆಸಬಹುದಾಗಿತ್ತೆಂದು ಅನಿಸುತ್ತದೆ. ಅವನು ತನ್ನ ಮಿತ್ರರಿಗೆ ಸಂಪೂರ್ಣ ಮಾರುಹೋಗಿದ್ದನು. ರಾಜಕಾರಣದಲ್ಲಿ ಉದಾರ ವೃತ್ತಿಯನ್ನು ತೋರಿಸಿದ ಉದಾಹರಣೆಗಳು ತೀರ ವಿರಳ. ಅವನು ರಾಜಕೀಯ ಆಡಳಿತದ ನೌಕೆಯ ಚುಕ್ಕಾಣಿಯನ್ನು ಒಳ್ಳೇ ರೀತಿಯಲ್ಲಿ ನಡೆಸದ್ದರಿಂದ ಅದು ಬಂಡೆಗಲ್ಲಿಗೆ ಹೋಗಿ ಅಪ್ಪಳಿಸುವಂತೆ ಮಾಡಿದ. ಅವನ ಈ ಎಲ್ಲ ದೋಷಗಳನ್ನು ಒಪ್ಪಿಕೊಂಡಮೇಲೂ ಇಂದಿನ ಅವಸರದ ತೀರ್ಪಿನ ವಿರುದ್ಧ ಅವನು ಸಜ್ಜನ ಮನುಷ್ಯನಿದ್ದನೆಂದು ಇತಿಹಾಸವು ಅವಶ್ಯವಾಗಿ ಎತ್ತಿ ಹೇಳುವದೆಂದು ನನಗೆನಿಸುತ್ತಿದೆ. ಇತಿಹಾಸವು ಹೃದಯವೆಂಬ ಕೋರ್ಟಿನಲ್ಲಿ ನ್ಯಾಯಬೇಡುತ್ತಿದೆ. ಹೃದಯದ ಕೋರ್ಟಿನಲ್ಲಿ ಸಾಕ್ಷಿಯ ದೃಷ್ಟಿಯಿಂದ ಕೃತಿಗೆ ಮಹತ್ವಕೊಟ್ಟಷ್ಟೆ ಉದ್ದೇಶಕ್ಕೂ ಕೊಡಲಾಗುತ್ತಿದೆ. ಅವನು ತನ್ನ ಲಿಬಿಯನ್ ಮಿತ್ರರನ್ನು ತ್ಯಾಗ ಮಾಡಿದ್ದನು. ಆದರೆ ತನ್ನ ಯುದ್ಧ ಮಿತ್ರರನ್ನು ಎಂದೂ ತ್ಯಾಗ ಮಾಡಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಅವನು ವಂಟಿಲಾಗವನ್ನು ಹೊಂದಿರಬಹುದು, ಅನೇಕ ಕಾರಸ್ಥಾನಗಳನ್ನೂ ರಚಿಸಿರಬಹುದು. ಆದರೆ ಅವನು ತನ್ನ ಹಳೆಯ ಧರ್ಮಕ್ಕೆ ದೃಢವಾಗಿ ಅಂಟಿಕೊಂಡು ನಿಂತನು, ವಿಚಲಿತನಾಗಲಿಲ್ಲ. ಅವನು ಪ್ರೀತಿಯ ತಂದೆಯೂ ನಂಬುಗೆಯ ಪತಿಯೂ ಆಗಿದ್ದನು. ರಾಜ್ಯದ ದೈನಂದಿನದ ಕಾರ್ಯಗಳನ್ನು ನಡೆಸಲಿಕ್ಕೂ ಮೈಮುರಿದು ದುಡಿಯಲಿಕ್ಕೂ ಅವನಿಗೆ ಎಂದೂ ಆಯಾಸವಾಗುತ್ತಿದ್ದಿಲ್ಲ. ಎಷ್ಟೋ ರಾಜರು ಶಾಂತಿಕಾಲದಲ್ಲಿ ಶಾಂತಿಪೂರ್ವಕವಾಗಿ ರಾಜ್ಯವಾಳುವದಕ್ಕೆ ಹುಟ್ಟಿರುತ್ತಾರೆ. ಆದರೆ ಅವರ ಶುಭ ಉದ್ದೇಶಗಳು ಅದಮ್ಯ ಶಕ್ತಿಗಳ ಉತ್ಪಾತದೆದುರು ನಿರುಪಯೋಗಿಯಾಗಿ ಬಿಡುವವು. ಇಂಥ ರಾಜರುಗಳ ಯಾದಿಯಲ್ಲಿ ಇವನೂ ಒಬ್ಬನೆಂದು ಇತಿಹಾಸವು ಗಣಿಸುವದು

ಹೋರಸ ರಶಿಯಾ ದೇಶದ ಜನರು ಎಷ್ಟೊಂದು ಧಾರ್ಮಿಕರಿರುವರೆಂಬುದರ ಬಗ್ಗೆ ಅನೇಕ ಚಿತ್ರಗಳನ್ನು ಕೊಟ್ಟಿದ್ದಾನೆ: "ದೇವಾಲಯಗಳಲ್ಲಿ ದಿನವಂತೆ ಒಳ್ಳೆ ಜನದಟ್ಟಣೆಯಿತ್ತು. ದೇವರಪೂಜೆಯ ದೀಪಗಳು ಉರಿಯುತ್ತಿದ್ದವು. ಇವನ್ನು ಬಿಟ್ಟು ಉಳಿದೆಲ್ಲ ಕಡೆಗೆ ಕತ್ತಲೆಯಿತ್ತು. ಆದರೆ ಪ್ರಾರ್ಥನೆ ಪ್ರಾರಂಭವಾಗುತ್ತಲೆ ಎಲ್ಲರೂ ತಮ್ಮ ತಮ್ಮ ಮೇಣಬತ್ತಿಗಳನ್ನು ಹೊತ್ತಿಸಿದರು. ಚಾಪೀ ಮತ್ತು ನನ್ನ ಹೊರತಾಗಿ ಇನ್ನಾರ ಹತ್ತಿರವೂ ಬಾಯಿಬಲ್ ಇದ್ದಿಲ್ಲ. ಇಂಥ ದಟ್ಟಣೆಯಲ್ಲಿ ನಾಲ್ಕೈದು ತಾಸುಗಳ ವರೆಗೆ ಜನರು ಹೇಗೆ ನಿಂತುಕೊಂಡಿರುತ್ತಿದ್ದರೆಂಬುದರ ಕಲ್ಪನೆ ಮಾಡುವದು ಕಠಿಣ. ಒಂದು ಕಾಸಿನ (ಸಿಡಿಗೆ) ಅಕ್ಕ ಪಕ್ಕದಲ್ಲಿ ನಿಂತುಕೊಂಡು ಎಲ್ಲರೂ ಪ್ರಾರ್ಥನೆ ಮಾಡುತ್ತಿದ್ದರು." ತರುವಾಯ ಅವನು ರಶಿಯದ ಹಳೆಯ ಭಾವುಕ ಕ್ರೈಸ್ತರ ವಿಷಯವನ್ನು ಹೇಳುತ್ತ ಒಬ್ಬ ಒಕ್ಕಲಿಗನ ವಿಷಯವಾಗಿ ಬರೆಯುತ್ತಾನೆ: "ಹತ್ತಿರದ ಅಂಗಡಿಯಿಂದ ಅವನು ಭಜನಾವಳಿಯೊಂದನ್ನೇ ಕೊಂಡುಕೊಂಡನು.

ಅದು ತರತರಹದ ಭಜನೆಗಳಿಂದಲೂ ಸಂತರ ಆಶೀರ್ವಚನಗಳಿಂದಲೂ ಶಾಪವಚನಗಳಿಂದಲೂ ತುಂಬಿತ್ತು. ದೇವತೆಗಳ ಹಾಗೂ ಭೂತಗಳ ವಿಚಿತ್ರ ಚಿತ್ರಗಳೂ ಬಹಳ ಇದ್ದವು. ಪುಸ್ತಕದ ಬಾಯಿಂಡಿಂಗು ಚರ್ಮದ್ದಿದ್ದು ಒಳ್ಳೇ ಎದ್ದು ಕಾಣಿಸುವಂತಿತ್ತು. ಬಣ್ಣ ಅಚ್ಚುಗಳಲ್ಲಿ ಆಕ್ಸಫರ್ಡ ಮತ್ತು ಕೆಂಬ್ರಿಜದ ಮುದ್ರಣಾಲಯಗಳನ್ನು ಹಿಮ್ಮೆಟ್ಟಿಸುವಂತಹದಿತ್ತು. ಬೆಲೆಯೂ ಹೆಚ್ಚಾಗಿತ್ತು. ಕುರಿ ಚರ್ಮದ ಕೋಟನ್ನು ತೊಟ್ಟ ಒಬ್ಬ ರೈತನು ಅಂಗಡಿಯಲ್ಲಿ ಹೊಕ್ಕು ಸಂತರ ವಚನಗಳ ಎರಡು ಪುಸ್ತಕಗಳನ್ನು ಖರೀದಿ ಮಾಡುವದಕ್ಕಾಗಿ ಐವತ್ತು ರುಬೆಲ್ ತೆಗೆದನು. ಇದನ್ನು ನೋಡಿ ನಾನು ದಂಗುಬಡಿದುನಿಂತೆನು. ನಾನು ಅವನ ಸಂಗಡ ಸ್ವಲ್ಪ ಮಾತಾಡಿದಾಗ ಎರಡು ಸುಂದರ ಸಚಿತ್ರ ಪುಸ್ತಕಗಳನ್ನು ಖರೀದಿ ಮಾಡುವದಕ್ಕಾಗಿ ಅವನು ಅನೇಕ ವರುಷಗಳಿಂದ ರೂಪಾಯಿಗಳನ್ನು ಕೂಡಿ ಹಾಕುತ್ತಿದ್ದನೆಂದು ಹೇಳಿದನು. ರಶಿಯದಲ್ಲಿ ಒಂದು ತುದಿಯಿಂದ ಎರಡನೇ ತುದಿಯವರೆಗೆ ಅತ್ಯಂತ ಘೋರತನದ ಶ್ರದ್ಧಾಳುಗಳೂ ಕರ್ಮಠರೂ ಧರ್ಮವನ್ನು ಕಠೋರ ರೀತಿಯಿಂದ ಪಾಲನ-ಮಾಡುವಂಥ ಕೋಟ್ಯಾವಧಿ ಭಾವುಕ ಸ್ತ್ರೀ ಪುರುಷರೂ ಇದ್ದಾರೆ."

ಕ್ಯಾಪ್ಟನ್ ಕೋನೀ ಮತ್ತು ಆಡ್ಮಿರಲ್ ಕೋಲಚಕ್ಕರ ಚಿತ್ರಗಳು ಸಜೀವ ತುಂಬಿನಿಂತಿವೆ. ಅವನು ಜಪಾನದಲ್ಲಿ ಗೆದ್ದ ಕತ್ತಿಯನ್ನು ಬೋಲ್ಶೆವಿಕ್ಕರು ಕಸಿದುಕೊಳ್ಳಲಿಕ್ಕೆ ಹೋದಾಗ ಅವನು ಅದನ್ನು ಸಮುದ್ರದಲ್ಲಿ ಒಗೆಯುವಾಗಿನ ಮತ್ತು ಸಾಯುವಾಗಿನ ಸ್ಥಿತಿಯ ವರ್ಣನೆಗಳು ಒಳ್ಳೇ ಹೃದಯಂಗಮವಾಗಿವೆ. ನಾಟಕದಲ್ಲಿಯ ಕೊನೆಯ ಅಂಕನ್ನು ಇರ್ಕುಟಸ್ಕದಲ್ಲಿ ಆಡಿದ್ದರು. ಅಲ್ಲಿ ಬೋಲ್ಶೇವಿಕ್ಕರು ಖಟ್ಲೆ ನಡೆಸುವ ಫಾರ್ಸನ್ನು ಮಾಡಿದರು. ಯಾವ ಸಾಕ್ಷೀದಾರರ ಸಾಕ್ಷಿಗಳನ್ನು ತೆಗೆದುಕೊಳ್ಳಲಾಯಿತೊ ಅದರ ವರ್ಣನೆಯನ್ನು ನಾನು ಅವರ ಶಬ್ದಗಳಲ್ಲಿಯೆ ಕೊಡುತ್ತೇನೆ:

". . . ಮೇಲಿನ ಕೋರ್ಟಿನ ಚವಕಸಿಯ ಕಾಲಕ್ಕೆ ಜಜ್ಜನನ್ನು ಕೇಳ-ಲಾಯಿತು: 'ನಿಮ್ಮೆದುರು ಸಾಕ್ಷೀ ಹೇಳುವಾಗ ಅವನ ಮುಖಚರ್ಯೆ ಹೇಗಿತ್ತು?'

ಉ: "ಯುದ್ಧದಲ್ಲಿ ಸೋತು ಕೈದಿಯಾಗಿ ಬಂದುನಿಂತ ಸೇನಾಪತಿಯಂತೆ ಅವನು ನನ್ನೆದುರಿಗೆ ನಿಂತಿದ್ದನು. ನನ್ನ ತಿಳಿವಳಿಕೆಯ ಪ್ರಕಾರ ಅವನು ಸಂಪೂರ್ಣ ಗೌರವಪೂರ್ಣವಾಗಿ ವ್ಯವಹರಿಸುತ್ತಿದ್ದನು. ಅವನು ತನ್ನ ಯಾವ ಮಿತ್ರರನ್ನೂ ಮೋಸಗೊಳಿಸಲಿಲ್ಲ."

ಸಾವಿನ ಶಿಕ್ಷೆಯನ್ನು ಹೇಳಿದಾಗ ಅವನು ಕೋರ್ಟಿಗೆ ಪ್ರಶ್ನಿಸಿದನು: "ಇದು ನ್ಯಾಯಕೋರ್ಟಿನ ತೀರ್ಪೋ ಅಥವಾ ಲಷ್ಕರೀ ಕಾಯ್ದೆಯಿಂದ ಕೊಟ್ಟ ಹುಕುಮೋ?" ಗುಂಡು ಹಾಕಿ ಕೊಲ್ಲುವ ಸೈನ್ಯವು ಬಂದಾಗ ಅವನು ತನ್ನ ಕಾಲಿನ ಅಂಗುಷ್ಠದಿಂದ ಬರ್ಫದ ಮೇಲೆ 'ಅಂತಿಮ ನಮಸ್ಕಾರ' ಎಂದು ಬರೆದನು. ಆಮೇಲೆ

ಸಿಗಾರೆಟ್ಟು ಹೊತ್ತಿಸಿ ಸಾವಿನ ಭೆಟ್ಟಿಗೆ ಸಿದ್ಧನಾದನು.

"ಈ ಎಲ್ಲ ಹೊತ್ತಿನಲ್ಲಿ ಅವನು ವೀರನಂತೆ ವರ್ತಿಸಿದನು" ಎಂಬ ಮಾತನ್ನು ಜಜ್ಜನು ಒಪ್ಪಿಕೊಂಡನು.

"ಕೊಲೆಗಡಕನೆದುರಿನಲ್ಲಿ ಕೂಡ ?"

"ಇದರಲ್ಲಿ ಏನಾದರೂ ಸಂಶಯವಿದೆಯೆ ?"

ಅವನ ಸಾವಿನ ಸುದ್ದಿಯು ಮಾಸ್ಕೋಕ್ಕೆ ತಪ್ಪಿದಾಗ ಅಲ್ಲಿಯ ರಸ್ತೆಯಮೇಲೆ ಹೋಗುತ್ತಿದ್ದ ಒಬ್ಬನು ಅವನ ವಿಷಯವಾಗಿ ಅಸಮಾನಕರವಾದ ಶಬ್ದಗಳನ್ನಾಡಿದನು.

ಮತ್ತೊಬ್ಬ ಹಾದಿಕಾರನು ಸಿಟ್ಟಿಗೆದ್ದು ಮಾತನಾಡಿದ: "ಕೋಲಚಕ್ಕನ ವಿಷಯವಾಗಿ ನೀವು ಅಪಮಾನಕಾರಕ ಮಾತುಗಳನ್ನಾಡಬಾರದು. ಅವನು ನಮ್ಮ ಜೊತೆಗೇ ಹೋರಾಡಿದ್ದಾನೆ. ಆದರೆ ನಮಗೆ ಅವನನ್ನು ಕೊಲ್ಲಬೇಕಾಯಿತು. ಅವನು ಒಬ್ಬ ಶ್ರೇಷ್ಠ ಪುರುಷನಿದ್ದನು."

ಗೃಹಯುದ್ಧದ ಕಾಲಕ್ಕೆ ಮಾಡಿದ ಅತ್ಯಾಚಾರಗಳ ಬಗ್ಗೆ ಅವನ ಮೇಲೆ ನಿರಾಧಾರವಾದ ಆರೋಪಗಳನ್ನು ಹೊರಿಸಲಾಯಿತು. ಆಗ ಅವುಗಳನ್ನು ಬೀಸಿ ಒಗೆದು ಲೆನಿನ್ನನು ಹೇಳಿದ: "ಕೋಲಚಕ್ಕನಮೇಲೆ ಆರೋಪಗಳನ್ನು ಹೊರಿಸುವದು ಮೂರ್ಖತನವು. ಇಂಥ ಸಮರ್ಥನೆಯು ಪ್ರಜಾತಂತ್ರದ ವಿಪರ್ಯಾಸವೆಂದು ಹೇಳಬಹುದು. ತನಗೆ ದೊರೆತ ಸಾಧನಗಳಿಂದಲೇ ಕೋಲಚಕ್ಕನು ಕೆಲಸ ಮಾಡಿದನು."

ಇದಾದ ನಂತರ ಅವನು ರಶಿಯದ ಗ್ರಾಂಡ ಡ್ಯೂಕ ಸರ್ಜನ ಪತ್ನಿಯೂ ಹೇಸ್ ಡಾರ್ಮಸ್ಟಾಟ (ಜರ್ಮನಿ)ದ ರಾಜಕುಮಾರಿಯೂ ಆದ ಎಲಿಜಾಬೇಥಳ ವರ್ಣನೆಮಾಡುತ್ತಾನೆ. ಅದು ಅಪೂರ್ವವಾದ ಸೌಂದರ್ಯದಿಂದ ಕೂಡಿದೆ. ಹೆಸ್‌ಡಾರ್ಮಸ್ಟಾಟದ ನಾಲ್ಕನೇ ಗ್ರ್ಯಾಂಡ ಡ್ಯೂಕನಾದ ಅವಳ ತಂದೆಯು ಜರ್ಮನ್ನನಿದ್ದನು. ತಾಯಿಯು ಇಂಗ್ಲಂಡದ ವಿಕ್ಟೋರಿಯಾ ರಾಣಿಯ ಮಗಳಾದ ರಾಜಕುಮಾರಿ ಎಲಿಸಳು. ಅವಳ ಮಾತಾಪಿತೃಗಳ ಜೀವನವು ಸುಂದರವೂ ಸರಳವೂ ನಿರ್ಮಲವೂ ಆಗಿತ್ತು. ತಾಯಿ-ತಂದೆಗಳು ಅವಳಿಗೆ ರಾಜಮನೆತನದ ಸಂಸ್ಕಾರವನ್ನಲ್ಲದೆ ಒಂದು ಸುಶೀಲ ಕುಟುಂಬದ ಸಂಸ್ಕಾರವನ್ನು ಮಾಡಲೂ ಪ್ರಯತ್ನಿಸಿದ್ದರು. ಅವರು ಒಟ್ಟು ನಾಲ್ಕು ಜನ ಅಕ್ಕತಂಗಿಯರು. ಅವರಲ್ಲಿ ಎಲಿಜಾಬೇಥಳು ೧೮೮೪ರಲ್ಲಿ ರಶಿಯದ ಗ್ರ್ಯಾಂಡ ಡ್ಯೂಕ ಸರ್ಜನ ಸಂಗಡ ಮದುವೆಯಾದಳು. ಅವಳ ತಂಗಿಯು ಝಾರ ನಿಕೋಲಸನ ಸಂಗಡ ಮದುವೆಯಾದಳು. ಗ್ರಾಂಡ್ ಡ್ಯೂಕನು ಝಾರನಿಗೆ ಕಕ್ಕನಾಗುತ್ತಿದ್ದನು. ಸ್ಯಾಮುಅಲ್ ಹೋರನು ಎಲಿಜಾಬೇಥಳಿಗೆ ಎರಡುಸಾರೆ ಭೆಟ್ಟಿಯಾಗಿದ್ದನು: ಒಂದು ಸಾರೆ ಗ್ರ್ಯಾಂಡ್ ಡ್ಯೂಕ ಸರ್ಜನು ಮಾಸ್ಕೋದ

ಗವರ್ನರನಿದ್ದಾಗ ಮಾಸ್ಕೋದ ರಾಣಿಯಿದ್ದಳು ಆಗ. ಎರಡನೇ ಸಾರೆ ಭಿಕ್ಷುಣಿಯ ರೂಪದಲ್ಲಿ ಅಂದರೆ ಒಂದು ಮಠದ ಅಧ್ಯಕ್ಷಿಣಿ ಅಥವಾ ಕುಲಮಾತೆಯಿದ್ದಾಗ. “ಗ್ರ್ಯಾಂಡ ಡಚೆಸ್‌ಳನ್ನು ಭೆಟ್ಟಿಯಾಗಿ ಹೊರಗೆ ಬಂದ ಮೇಲೆ ನನಗೆ ಅವಳಲ್ಲಿ ಒಬ್ಬ ಸಂತಳ ದರ್ಶನವಷ್ಟೇ ಅಲ್ಲ ಆದರೆ ಕ್ರಿಸ್ತಿಯನ್ ಸಮಾಜದ ಅತ್ಯುತ್ತಮ ಸೇವೆ ಸಲ್ಲಿಸುವಂಥ ಒಬ್ಬ ಮಹಾವಿಭೂತಿಯ ದರ್ಶನವೂ ಆಯಿತು. ಅಲ್ಲಿ ಆ ಉದಾತ್ತ ವಿಚಾರದ ಮಹಿಳೆಯ ಪ್ರೇರಣೆಯಿಂದಲೂ ಅವಳ ನೇತೃತ್ವದಲ್ಲಿಯೂ ಆಸ್ಪತ್ರೆ, ದವಾಖಾನೆ, ಅನಾಥಾಲಯ, ಪಾಠಶಾಲೆ, ಕ್ಷಯರೋಗಿಗಳ ಆರೋಗ್ಯಧಾಮ, ನರ್ಸುಗಳ ತರಬೇತಿಕೇಂದ್ರ ಮುಂತಾದ ಅನೇಕ ಸಂಸ್ಥೆಗಳು ನಡೆದಿದ್ದವು.

“ಆದರೆ ಅವಳು ರಾಜಕುಮಾರಿಯಾಗಿರದೆ ಭಿಕ್ಷುಣಿ ಏಕೆ ಆಗಿದ್ದಳು? ಅವಳ ವಿವಾಹಿತ ಜೀವನವು ಸುಖಮಯವಾಗಿತ್ತು. ಗ್ರ್ಯಾಂಡ್ ಡ್ಯೂಕ ಸರ್ಜನ ತಂದೆಯಾದ ಎರಡನೇ ಝಾರ ಅಲೆಕ್ಝಾಂಡರನು ಕೃತ-ಗುಲಾಮರನ್ನು (Serfs) ಮುಕ್ತಮಾಡಿದ್ದನು. ಯಾರೋ ಅರಾಜ್ಯವಾದಿಗಳ ಕೈಯಿಂದ ಅವನ ಕೊಲೆಯಾಗಿತ್ತು. ಬಳಿಕ ನಿಕೋಲಸನು ಝಾರನಾದ ಮೇಲೆ ಅವನು ಮಾಸ್ಕೋದ ಗವರ್ನರನಾಗಿದ್ದನು. ಜಪಾನದ ಯುದ್ಧದಲ್ಲಿ ಸೋತ ಬಳಿಕ ಅವನು ನಿಕೋಲಸನಿಗೆ ಹೇಳಿದುದು ಹೀಗೆ: “ಪ್ರಜೆಗಳಿಗೆ ಸೋತು ಇಲ್ಲದೆ ಅವರ ಒತ್ತಾಯದಿಂದ ಅವರಿಗೆ ಪ್ರಜಾಪ್ರಾತಿನಿಧ್ಯ ಸಭೆಯನ್ನು ಕೊಡದೆ ಉದಾರತೆಯ ಚಿನ್ಹವೆಂದು ಕೊಡಿರಿ.” ರಾಜನು ಈ ಸಲಹೆಯನ್ನು ಮನ್ನಿಸದ್ದರಿಂದ ಅವನು ರಾಜೀನಾಮೆಯನ್ನು ಕೊಟ್ಟು ಮಾಸ್ಕೋ ಬಿಡುವ ಸಿದ್ಧತೆಯಲ್ಲಿದ್ದನು. ಸಾಮಾನುಗಳನ್ನೆಲ್ಲ ಸ್ಟೇಶನ್ನಿಕ್ಕೆ ರವಾನಿಸಲಾಗಿತ್ತು. ಇಷ್ಟರಲ್ಲಿ ಒಬ್ಬ ಕ್ರಾಂತಿಕಾರಿಯು ಬಂದು ಸರ್ಜನನ್ನು ಕೊಲೆ ಮಾಡಿದನು. ಈ ಕೊಲೆ ಸಂಭವಿಸಿದಾಗ ಎಲಿಜಾಬೇಥಳು ಮುಂಚೂಣಿಯಾದ ಸೈನ್ಯದ ಸಲುವಾಗಿ ಮಾಸ್ಕೋದಲ್ಲಿ ತೆರೆಯಲಾದ ಒಂದು ಸೇವಾಕೇಂದ್ರದಲ್ಲಿ ಕೆಲಸ ಮಾಡಲಿಕ್ಕೆ ಹೋಗುವ ಸಿದ್ಧತೆಯಲ್ಲಿದ್ದಳು. ಇಷ್ಟರಲ್ಲಿ ಅವಳಿಗೆ ಕ್ರೆಮ್ಲಿನ್ನದ ರಾಜಮಹಲಿನ ಒಂದು ಭಾಗವು ಕಿಡಿಕಿಗಳು ಬಾಂಬಿನ ಆಘಾತದಿಂದ ಹಾರಿದ ಹಾಗೆ ಕೇಳಿಸಿತು. ಅವಳು ತನ್ನ ಪತಿ ಸತ್ತುಬಿದ್ದದ್ದನ್ನು ನೋಡಿದಳು. ಅವನ ಬಂಡಿಯು ನುಚ್ಚುನೂರಾಗಿತ್ತು. ಬಂಡಿ ಹೊಡೆಯುವವನು ಘಾಯಾಳುವಾಗಿದ್ದನು.”

ಸರ್ಜನ ಕೊಲೆ ಹೇಗೆ ಸಂಭವಿಸಿತು, ಅವನ ಕೊಲೆಯ ಷಡ್ ಯಂತ್ರವು ಯಾರದಿತ್ತು ಎಂಬ ವಿಷಯದಲ್ಲಿ ಹೋರನು ಹೃದಯ ವಿದಾರಕವಾದ ಮಾತುಗಳನ್ನು ವಿಸ್ತಾರಪೂರ್ವಕವಾಗಿ ಬರೆದಿದ್ದಾನೆ. ಇವರಲ್ಲಿ ಒಬ್ಬ ಕೊಲೆಗಾರನಿದ್ದ. ಅವನು ರಾಜ್ಯದ ವಿರುದ್ಧ ಅಪರಾಧಗಳನ್ನು ಮಾಡುವದರ ಸಲುವಾಗಿ ಜನರನ್ನು ಉದ್ರೇಕಿಸುವದಕ್ಕಾಗಿ ಪೋಲಿಸ ವಿಭಾಗದವರೇ ಇಟ್ಟ ಮನುಷ್ಯನಾಗಿದ್ದ. ಜ್ಞಾಪಕ ಇಡುವಂಥ ಒಂದು ಪ್ಯಾರಾದಲ್ಲಿ ಹೋರನು ಬರೆಯುತ್ತಾನೆ: “ಅಪರಾಧ ಮಾಡುವ

ದಕ್ಕೆ ಉತ್ತೇಜನ ಕೊಡುವಂಥ ನೀಚ ಖಲುಷರು ನಿಜವಾಗಿಯೂ ಇರುತ್ತಿರಬಹುದೇ? ಈ ಪ್ರಕಾರದ ಅಪರಾಧೀ ಮನೋವೃತ್ತಿಯು ಯಾವನೋ ಒಬ್ಬ ಸ್ವತಃ ಅಪರಾಧಿಯಾದ ಮತ್ತು ತಲೆಕೆಟ್ಟವನ ಬೋಧನಲ್ಲವೆ ? ಅವರ ಕಾರ್ಯಗಳು ಪೈಶಾಚಿಕ ಉಪಾಯ–ಯೋಜನೆಯವಾದವುಗಳು. ಅವರು ಯಾವಾಗಲೂ ಭಯದಲ್ಲಿರಬೇಕಾಗುತ್ತಿದೆ. ಪುರಸ್ಕಾರ ದೊರೆಯುವ ಯಾವ ಭರವಸೆಯೂ ಇರುವದಿಲ್ಲ. ಆದುದರಿಂದ ಇಂಥ ಜನರಿರಬಲ್ಲರೆಂದು ನಂಬಲು ಕೂಡ ನನ್ನ ಮನಸ್ಸು ಒಪ್ಪುವದಿಲ್ಲ. ಪೋಲೀಸ ವಿಭಾಗದವರು ಇಂಥ ಜನರನ್ನು ನಾಶ ಕ್ರಾಂತಿಕಾರರ ಅತ್ಯಾಚಾರಗಳಿಗೆ ಏತಕ್ಕಾಗಿ ಉತ್ತೇಜನ ಕೊಡಬೇಕು ? ಪೋಲೀಸ ವಿಭಾಗದಲ್ಲಿ ತಮ್ಮ ವರ್ಚಸ್ಸನ್ನು ಬೆಳೆಸಿಕೊಳ್ಳುವ ಆಕಾಂಕ್ಷೆಯಿಂದ ಇಂಥ ವಿದ್ಯಾರ್ಥಿ ಬುದ್ಧಂಥ ಸಮಾಜದ್ರೋಹಿಗಳು ಹುಟ್ಟುತ್ತಾರೆಂಬ ಸ್ವೀಕರಣವು ನನಗೆ ಸರಿಯಾಗಿ ತೋರುವದಿಲ್ಲ. ಒಂದಿಲ್ಲೊಂದು ದಿನ ಇಂಥ ಜನರ ಕಾರಸ್ಥಾನವು ಹೊರಬೀಳದೆ ಇರುವದಿಲ್ಲ: ಫಾಸೀ ಶಿಕ್ಷೆಯಿಂದಾಗಲಿ, ಕೊಲೆಯಾಗುವದರಿಂದಾಗಲಿ ಅವರು ಉಳಿದುಕೊಂಡರೆಂದು ತಿಳಿಯೋಣ. ಆದರೂ ಅವರು ಈ ಪಕ್ಷದ ಅಥವಾ ಆ ಪಕ್ಷದ ಹೆದರಿಕೆಯಲ್ಲಿರಲು ಸಿದ್ಧರಾಗಬೇಕಾದರೆ ಅವರಿಗೆ ಸಿಗುವ ಅಂತಹ ಹಿರಿದಾದ ಬಹುಮಾನವಾದರೂ ಯಾವುದು ? ಈ ಪ್ರಶ್ನೆಗಳಿಗೆ ನನಗೆ ಸಮಾಧಾನಕರವಾದ ಉತ್ತರ ದೊರೆತಿಲ್ಲ. ಆದರೆ ಇಂಥ ಜನರು ಇದ್ದಾರೆಂದು ನನಗೆ ವಿಶ್ವಾಸಪೂರ್ವಕವಾದ ಪ್ರಮಾಣಗಳಿಂದ ಮನವರಿಕೆಯಾಗಿದೆ. ಅವರಲ್ಲಿ ಒಬ್ಬರಾದ ಗುಪ್ತಗಾರನಾಗಿದ್ದವನು ನೀಚತನದ ಪ್ರಚೋದನೆಗೆ ಬಲಿ ಬಿದ್ದು ಗ್ರಾಂಡ ಡ್ಯೂಕನ ಕೊಲೆ ಮಾಡಿದನು.

" ಈ ಕೊಲೆಯಲ್ಲಿ ಇಬ್ಬರು ಜೊತೆಗಾರರಿದ್ದರು. ಒಬ್ಬನ ಹೆಸರು ಕಾಲೀವ ಇತ್ತು. ಇವನು ಉತ್ಸಾಹಿಯೂ ಸ್ವೇಚ್ಛಾಚಾರಿಯೂ ಕವಿಯೂ ಆಗಿದ್ದನು. ಭೀತಿಯನ್ನುಂಟುಮಾಡುವಂಥ ದೊಡ್ಡ ದೊಡ್ಡ ಕಣ್ಣುಗಳು, ಯಾವುದೋ ಕನಸು ಕಾಣುವಂತಹ ಮನುಷ್ಯನ ನಗೆಮುಖ—ಇಂಥ ಈ ಯುವಕನು ಗುಪ್ತಗಾರರಂಥ ಭಯಂಕರ ಜನರ ಸಹವಾಸದಲ್ಲಿ ಹೇಗೆ ಬಿದ್ದನು ? ಅವನು ಬಾಂಬು ಒಗೆದಿದ್ದನು. ಅವನು ಒಂದು ಬಡತನದ, ಶಾಂತಿಪ್ರಿಯವಾದ ಕುಲೀನ ಮನೆತನದಲ್ಲಿ ಹುಟ್ಟಿದ್ದನು. ಅವನ ತಂದೆಯು ಕಾಸಾನದಲ್ಲಿ ಪೋಲೀಸನಿದ್ದನು. ಪೋಲೀಸ ಖಾತೆಯಲ್ಲಿ ಲಂಚ ತಿನ್ನದವರು ತೀರ ವಿರಳ. ಅಂಥವರಲ್ಲಿ ಇವನೊಬ್ಬನು. ಇವನ ಅಣ್ಣನು ಸ್ವತಃ ದುಡಿದು ಬೆವರು ಸುರಿಸಿ ಉಪಜೀವನ ಸಾಗಿಸುತ್ತಿದ್ದನು. ಕಾಲೀವ ಮತ್ತು ಅವನ ಅಣ್ಣನು ವಿಶ್ವವಿದ್ಯಾಲಯವನ್ನು ಪ್ರವೇಶಿಸಿದರು. ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಸಾಮಾನ್ಯವಾಗಿ ಕೆಲವು ವಿಶೇಷ ಘಟನೆಗಳ ಪರಂಪರೆಯು ನಡೆದು ಬಂದಿತ್ತು. ಆದರಲ್ಲಿ ಇವನೂ ಸಿಕ್ಕುಬಿದ್ದನು. ಮೊದಲು ಸಂಶಯದಿಂದ ಕಾಲೇಜ ಬಿಟ್ಟು ಹೊರಗೆ ಹಾಕುವದು, ಆ ಮೇಲೆ ಪೋಲೀಸರ ಕಾವಲು, ಬಳಿಕ ಗಡಿಪಾರು,

ಗವರ್ನರನಿದ್ದಾಗ ಮಾಸ್ಕೋದ ರಾಣಿಯಿದ್ದಳು ಆಗ. ಎರಡನೇ ಸಾರೆ ಭಿಕ್ಷುಣಿಯ ರೂಪದಲ್ಲಿ ಅಂದರೆ ಒಂದು ಮಠದ ಅಧ್ಯಕ್ಷಿಣಿ ಅಥವಾ ಕುಲಮಾತೆಯಿದ್ದಾಗ. "ಗ್ರ್ಯಾಂಡ ಡಚೆಸ್‌ಳನ್ನು ಭೆಟ್ಟಿಯಾಗಿ ಹೊರಗೆ ಬಂದ ಮೇಲೆ ನನಗೆ ಅವಳಲ್ಲಿ ಒಬ್ಬ ಸಂತಳ ದರ್ಶನವಷ್ಟೇ ಅಲ್ಲ ಅದರೆ ಕ್ರಿಶ್ಚಿಯನ್ ಸಮಾಜದ ಅತ್ಯುತ್ತಮ ಸೇವೆ ಸಲ್ಲಿಸುವಂಥ ಒಬ್ಬ ಮಹಾವಿಭೂತಿಯ ದರ್ಶನವೂ ಆಯಿತು. ಅಲ್ಲಿ ಆ ಉದಾತ್ತ ವಿಚಾರದ ಮಹಿಳೆಯ ಪ್ರೇರಣೆಯಿಂದಲೂ ಅವಳ ನೇತೃತ್ವದಲ್ಲಿಯೂ ಆಸ್ಪತ್ರೆ, ದವಾಖಾನೆ, ಅನಾಥಾಲಯ, ಪಾಠಶಾಲೆ, ಕ್ಷಯರೋಗಿಗಳ ಆರೋಗ್ಯಧಾಮ, ನರ್ಸುಗಳ ತರಬೇತಿಕೇಂದ್ರ ಮುಂತಾದ ಅನೇಕ ಸಂಸ್ಥೆಗಳು ನಡೆದಿದ್ದವು.

"ಆದರೆ ಅವಳು ರಾಜಕುಮಾರಿಯಾಗಿರದೆ ಭಿಕ್ಷುಣಿ ಏಕೆ ಆಗಿದ್ದಳು? ಅವಳ ವಿವಾಹಿತ ಜೀವನವು ಸುಖಮಯವಾಗಿತ್ತು. ಗ್ರ್ಯಾಂಡ್ ಡ್ಯೂಕ ಸರ್ಜನ ತಂದೆಯಾದ ಎರಡನೇ ಝಾರ ಅಲೆಕ್ಝಾಂಡರನು ರೈತ-ಗುಲಾಮರನ್ನು (Serfs) ಮುಕ್ತಮಾಡಿದ್ದನು. ಯಾರೋ ಅರಾಜ್ಯವಾದಿಗಳ ಕೈಯಿಂದ ಅವನ ಕೊಲೆಯಾಗಿತ್ತು. ಬಳಿಕ ನಿಕೋಲಸನು ಝಾರನಾದ ಮೇಲೆ ಅವನು ಮಾಸ್ಕೋದ ಗವರ್ನರನಾಗಿದ್ದನು. ಜಪಾನದ ಯುದ್ಧದಲ್ಲಿ ಸೋತ ಬಳಿಕ ಅವನು ನಿಕೋಲಸನಿಗೆ ಹೇಳಿದುದು ಹೀಗೆ: "ಪ್ರಜೆಗಳಿಗೆ ಸೋತು ಇಲ್ಲವೆ ಅವರ ಒತ್ತಾಯದಿಂದ ಅವರಿಗೆ ಪ್ರಜಾಪ್ರಾತಿನಿಧ್ಯ ಸಭೆಯನ್ನು ಕೊಡದೆ ಉದಾರತೆಯ ಚಿಹ್ನವೆಂದು ಕೊಡಿರಿ" ರಾಜನು ಈ ಸಲಹೆಯನ್ನು ಮನ್ನಿಸದ್ದರಿಂದ ಅವನು ರಾಜೀನಾಮೆಯನ್ನು ಕೊಟ್ಟು ಮಾಸ್ಕೋ ಬಿಡುವ ಸಿದ್ಧತೆಯಲ್ಲಿದ್ದನು. ಸಾಮಾನುಗಳನ್ನೆಲ್ಲ ಸ್ಟೇಶನ್ನಕ್ಕೆ ರವಾನಿಸಲಾಗಿತ್ತು. ಇಷ್ಟರಲ್ಲಿ ಒಬ್ಬ ಕ್ರಾಂತಿಕಾರಿಯು ಬಂದು ಸರ್ಜನನ್ನು ಕೊಲೆ ಮಾಡಿದನು. ಈ ಕೊಲೆ ಸಂಭವಿಸಿದಾಗ ಎಲಿಜಾಬೇಥಳು ಮಂಚೂರಿಯಾದ ಸೈನ್ಯದ ಸಲುವಾಗಿ ಮಾಸ್ಕೋದಲ್ಲಿ ತೆರೆಯಲಾದ ಒಂದು ಸೇವಾಕೇಂದ್ರದಲ್ಲಿ ಕೆಲಸ ಮಾಡಲಿಕ್ಕೆ ಹೋಗುವ ಸಿದ್ಧತೆಯಲ್ಲಿದ್ದಳು. ಇಷ್ಟರಲ್ಲಿ ಅವಳಿಗೆ ಕ್ರೆಮ್ಲಿನ್ನದ ರಾಜಮಹಲಿನ ಒಂದು ಭಾಗದ ಕಿಡಿಕಿಗಳು ಬಾಂಬಿನ ಆಘಾತದಿಂದ ಹಾರಿದ ಹಾಗೆ ಕೇಳಿಸಿತು. ಅವಳು ತನ್ನ ಪತಿ ಸತ್ತುಬಿದ್ದದ್ದನ್ನು ನೋಡಿದಳು. ಅವನ ಬಂಡಿಯು ನುಚ್ಚುನೂರಾಗಿತ್ತು. ಬಂಡಿ ಹೊಡೆಯುವವನು ಘಾಯಾಳುವಾಗಿದ್ದನು."

ಸರ್ಜನ ಕೊಲೆ ಹೇಗೆ ಸಂಭವಿಸಿತು, ಅವನ ಕೊಲೆಯ ಷಡ್ಯಂತ್ರವು ಯಾರದಿತ್ತು ಎಂಬ ವಿಷಯದಲ್ಲಿ ಹೋರನು ಹೃದಯ ವಿದಾರಕವಾದ ಮಾತುಗಳನ್ನು ವಿಸ್ತಾರಪೂರ್ವಕವಾಗಿ ಬರೆದಿದ್ದಾನೆ. ಇವರಲ್ಲಿ ಒಬ್ಬ ಕೊಲೆಗಾರನಿದ್ದ. ಅವನು ರಾಜ್ಯದ ವಿರುದ್ಧ ಅಪರಾಧಗಳನ್ನು ಮಾಡುವವರ ಸಲುವಾಗಿ ಜನರನ್ನು ಉದ್ರೇಕಿಸುವದಕ್ಕಾಗಿ ಪೋಲಿಸ ವಿಭಾಗದವರೇ ಇಟ್ಟ ಮನುಷ್ಯನಾಗಿದ್ದ. ಜ್ಞಾಪಕವಿಡುವಂಥ ಒಂದು ಪ್ಯಾರಾದಲ್ಲಿ ಹೋರನು ಬರೆಯುತ್ತಾನೆ: "ಅಪರಾಧ ಮಾಡುವ

ದಕ್ಕೆ ಉತ್ತೇಜನ ಕೊಡುವಂಥ ನೀಚ ಖಲುಪರು ನಿಜವಾಗಿಯೂ ಇರುತ್ತಿರಬಹುದೇ? ಈ ಪ್ರಕಾರದ ಅಪರಾಧೀ ಮನೋವೃತ್ತಿಯು ಯಾವನೋ ಒಬ್ಬ ಸ್ವತಃ ಅಪರಾಧಿಯಾದ ಮತ್ತು ತಲೆಕೆಟ್ಟವನ ಶೋಧವಲ್ಲವೆ? ಅವರ ಕಾರ್ಯಗಳು ಪೈಶಾಚಿಕ ಉಪಾಯ–ಯೋಜನೆಯವಾದವುಗಳು. ಅವರು ಯಾವಾಗಲೂ ಭಯದಲ್ಲಿರಬೇಕಾಗುತ್ತಿದೆ. ಪುರಸ್ಕಾರ ದೊರೆಯುವ ಯಾವ ಭರವಸೆಯೂ ಇರುವದಿಲ್ಲ. ಆದುದರಿಂದ ಇಂಥ ಜನರಿರಬಲ್ಲರೆಂದು ನಂಬಲು ಕೂಡ ನನ್ನ ಮನಸ್ಸು ಒಪ್ಪುವದಿಲ್ಲ. ಪೋಲೀಸ ವಿಭಾಗದವರು ಇಂಥ ಜನರನ್ನು ನಾಶ ಕ್ರಾಂತಿಕಾರರ ಅತ್ಯಾಚಾರಗಳಿಗೆ ಏತಕ್ಕಾಗಿ ಉತ್ತೇಜನ ಕೊಡಬೇಕು? ಪೋಲೀಸ ವಿಭಾಗದಲ್ಲಿ ತಮ್ಮ ವರ್ಚಸ್ಸನ್ನು ಬೆಳಸಿಕೊಳ್ಳುವ ಆಕಾಂಕ್ಷೆಯಿಂದ ಇಂಥ ದ್ವಿಧಾರಿ ಖಡ್ಗದಂಥ ಸಮಾಜದ್ರೋಹಿಗಳು ಹುಟ್ಟುತ್ತಾರೆಂಬ ಸ್ಪಷ್ಟೀಕರಣವು ನನಗೆ ಸರಿಯಾಗಿ ತೋರುವದಿಲ್ಲ. ಒಂದಿಲ್ಲೊಂದು ದಿನ ಇಂಥ ಜನರ ಕಾರಸ್ಥಾನವು ಹೊರಬೀಳದೆ ಇರುವದಿಲ್ಲ: ಫಾಸೀ ಶಿಕ್ಷೆಯಿಂದಾಗಲಿ, ಕೊಲೆಯಾಗುವದರಿಂದಾಗಲಿ ಅವರು ಉಳಿದುಕೊಂಡರೆಂದು ತಿಳಿಯೋಣ. ಆದರೂ ಅವರು ಈ ಪಕ್ಷದ ಅಥವಾ ಆ ಪಕ್ಷದ ಹೇವರಿಕೆಯಲ್ಲಿರಲು ಸಿದ್ಧರಾಗಬೇಕಾದರೆ ಅವರಿಗೆ ಸಿಗುವ ಲಾಭವು ಸೇರಿದಾದ ಬಹುಮಾನವಾದರೂ ಯಾವುದು? ಈ ಪ್ರಶ್ನೆಗಳಿಗೆ ನನಗೆ ಸಮಾಧಾನಕರವಾದ ಉತ್ತರ ದೊರೆತಿಲ್ಲ. ಆದರೆ ಇಂಥ ಜನರು ಇದ್ದಾರೆಂದು ನನಗೆ ವಿಶ್ವಾಸಪೂರ್ವಕವಾದ ಪ್ರಮಾಣಗಳಿಂದ ಮನವರಿಕೆಯಾಗಿದೆ. ಅವರಲ್ಲಿ ಹಸರಾದ ಗುಪ್ತಗಾರನಾಗಿದ್ದವನು ನೀಚತನದ ಪ್ರಚೋದನೆಗೆ ಬಲಿ ಬಿದ್ದು ಗ್ರಾಂಡ ಡ್ಯೂಕನ ಕೊಲೆ ಮಾಡಿದನು.

“ಈ ಕೊಲೆಯಲ್ಲಿ ಇನ್ನಿಬ್ಬರು ಜೊತೆಗಾರರಿದ್ದರು. ಒಬ್ಬನ ಹೆಸರು ಕಾಲೀವ ಇತ್ತು. ಇವನು ಉತ್ಸಾಹಿಯೂ ಸ್ವೇಚ್ಛಾಚಾರಿಯೂ ಕವಿಯೂ ಆಗಿದ್ದನು. ಭೀತಿಯನ್ನುಂಟುಮಾಡುವಂಥ ದೊಡ್ಡ ದೊಡ್ಡ ಕಣ್ಣುಗಳು, ಯಾವುದೋ ಕನಸು ಕಾಣುವಂತಹ ಮನುಷ್ಯನ ನಗೆಮುಖ—ಇಂಥ ಈ ಯುವಕನು ಗುಪ್ತಗಾರರಂಥ ಭಯಂಕರ ಜನರ ಸಹವಾಸದಲ್ಲಿ ಹೇಗೆ ಬಿದ್ದನು? ಅವನು ಬಾಂಬು ಒಗೆದಿದ್ದನು. ಅವನು ಒಂದು ಬಡತನದ, ಶಾಂತಿಪ್ರಿಯವಾದ ಕುಲೀನ ಮನೆತನದಲ್ಲಿ ಹುಟ್ಟಿದ್ದನು. ಅವನ ತಂದೆಯು ವಾರ್ಸಾದಲ್ಲಿ ಪೋಲೀಸನಿದ್ದನು. ಪೋಲೀಸ ಖಾತೆಯಲ್ಲಿ ಲಂಚ ತಿನ್ನದವರು ತೀರ ವಿರಳ. ಅಂಥವರಲ್ಲಿ ಇವನೊಬ್ಬನು. ಇವನ ಅಣ್ಣನು ಸ್ವತಃ ದುಡಿದು ಬೆವರು ಸುರಿಸಿ ಉಪಜೀವನ ಸಾಗಿಸುತ್ತಿದ್ದನು. ಕಾಲೀವ ಮತ್ತು ಅವನ ಅಣ್ಣನು ವಿಶ್ವವಿದ್ಯಾಲಯವನ್ನು ಪ್ರವೇಶಿಸಿದರು. ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಸಾಮಾನ್ಯವಾಗಿ ಕೆಲವು ವಿಶೇಷ ಘಟನೆಗಳ ಪರಂಪರೆಯು ನಡೆದು ಬಂದಿತ್ತು. ಅದರಲ್ಲಿ ಇವನೂ ಸಿಕ್ಕುಬಿದ್ದನು. ಮೊದಲು ಸಂಶಯದಿಂದ ಕಾಲೇಜ ಬಿಟ್ಟು ಹೊರಗೆ ಹಾಕುವದು, ಆ ಮೇಲೆ ಪೋಲೀಸರ ಕಾವಲು, ಬಳಿಕ ಗಡಿಪಾರು,

ಕೊನೆಗೆ ಅಲ್ಲಿಂದ ಪಲಾಯನ ಹೇಳಿ ಪಶ್ಚಿಮ ಯುರೋಪದ ಭೂಗತ ಯಾತ್ರೆ ಮಾಡುವದು. ಈ ಘಟನೆಯ ಪರಂಪರೆಯಲ್ಲಿ ಈತನೂ ಸಿಕ್ಕುಬಿದ್ದನು. ಅವನ ವಿಶ್ವವಿದ್ಯಾಲಯದ ಜೀವನವು ಹಾಳಾಯಿತು. ಅವನ ಹೃದಯದಲ್ಲಿ ದ್ವೇಷದ ಮುಳ್ಳು ನಟ್ಟುಬಿಟ್ಟಿತು. ಮೆಲ್ಲಮೆಲ್ಲಗೆ ಅವನು ಕ್ರಾಂತಿಕಾರೀ ಜನರ ಕಡೆಗೆ ಆಕರ್ಷಿತನಾಗುತ್ತ ನಡೆದನು. ಕೊನೆಗೆ ಅವರ ಕಾರ್ಯಕಾರಿಣೀ ಸಮಿತಿಯಲ್ಲಿ ಎಲ್ಲರಿಗಿಂತ ಪ್ರಮುಖ ಕಾರ್ಯಕರ್ತನಾದನು. ಅವನು ಧಾರ್ಮಿಕವೃತ್ತಿಯವನಿದ್ದನು. ತನ್ನ ಸಹಕಾರಿಗಳ ನಾಸ್ತಿಕತೆಯ ಬಗ್ಗೆ ಅವನಿಗೆ ಅಪ್ರೀತಿ ಇತ್ತು. ಜಗತ್ತಿನಲ್ಲಿ ಅವನ ವಿಷಯವಾಗಿ ಯಾರೂ ಪ್ರೇಮ ತೋರಿಸದಿದ್ದರೂ ಅವನ ಹೃದಯದಲ್ಲಿ ಯಾರ ವಿಷಯವಾಗಿಯೂ ರಾಗದ್ವೇಷವಿದ್ದಿಲ್ಲ. ಇವನ ಜೊತೆಗಾರರು ನಿರ್ದಯ ವಿನಾಶಕಾರಕ ಕಾರ್ಯಕ್ರಮಗಳಲ್ಲಿ ತೊಡಗಿರುತ್ತಿದ್ದರು. ಆದರೆ ಇವನಿಗೆ ಅರಾಜ್ಯವೆಂಬ ಶಬ್ದದಲ್ಲಿಯೂ ತಿರಸ್ಕಾರವಿತ್ತು. ಒಂದು ಸಾರೆ ಗ್ರ್ಯಾಂಡ ಡಚೆಸಳು ತನ್ನ ಪತಿಯ ಜೊತೆಗೆ ಗಾಡಿಯಲ್ಲಿ ಕುಳಿತಾಗ ಇವನು ಬಾಂಬನ್ನು ಒಗೆಯಲಿಲ್ಲ. ಅವನು ಸರ್ಜನನ್ನು ದ್ವೇಷಮಾಡುವಂತಹ ದುಷ್ಟನೆಂದು ಭಾವಿಸಿರಲಿಲ್ಲ. ಆದರೆ ತನ್ನ ಸ್ವಪ್ನಸೃಷ್ಟಿಯ ಮಾರ್ಗದಲ್ಲಿ ಒಂದು ವಿಘ್ನವೆಂದು ತಿಳಿಯುತ್ತಿದ್ದನು. 'ನಾವು ಹೊಸ ವಿಚಾರಗಳ ಬಂಟರು, ಹೊಸ ಸೃಷ್ಟಿಗಾಗಿ ಹೋರಾಡುತ್ತಿದ್ದೇವೆ, ಭವಿಷತ್ತನ್ನು ನಿರ್ಮಿಸುತ್ತಿದ್ದೇವೆ. ಸರ್ಜನು ಭೂತಕಾಲದ ಪ್ರತಿನಿಧಿಯು. ಆದುದರಿಂದ ಅವನನ್ನು ನಾಶಮಾಡಲೇ ಬೇಕು' ಎಂದು ಅವನು ತನ್ನ ಮಿತ್ರರಿಗೆ ಹೇಳುತ್ತಿದ್ದ."

ಹಿಂದಿನಿಂದ ಗ್ರ್ಯಾಂಡ್ ಡಚೆಸ ಎಲಿಜಾಬೇಥಳು ಜೇಲಿನಲ್ಲಿ ಈ ಮನುಷ್ಯನಿಗೆ ಭೆಟ್ಟಿಯಾಗಲು ಹೋಗುತ್ತಾಳೆ. ಈ ದೃಶ್ಯವು ಯಾವುದೇ ನಾಟಕದ ಯಾವುದೇ ಸುಂದರವಾದ ದೃಶ್ಯವನ್ನೂ ಮರೆಸುವಂತಹದಾಗಿದೆ. ಕೊಲೆ ಆದನಂತರ ಗ್ರ್ಯಾಂಡ್ ಡಚೆಸಳು ಜೇಲಿನಲ್ಲಿ ಅವನಿಗೆ ಭೆಟ್ಟಿಯಾಗಹೋದಳು. ಅವಳ ಪತಿಯು ಹಳೇ ಧರ್ಮರೂಢಿಗಳನ್ನು ಕಠೋರವಾಗಿ ಪಾಲಿಸುವವನಾಗಿದ್ದನು. ಸಾಯುವ ಕಾಲಕ್ಕೆ ರಾಗದ್ವೇಷಾದಿಗಳನ್ನು ಬಿಡಬೇಕು. ಮತ್ತು ಕೊಲೆ ಮಾಡುವವನಿಗೆ ದೇವರ ಧ್ಯಾನ ಮಾಡಲಿಕ್ಕೆ ಸಂಧಿಯನ್ನೊದಗಿಸಿಕೊಡಲು ಸಹಾಯ ಮಾಡಬೇಕು' ಎಂದು ಕಲಿಸಿದ್ದನು. ಆದುದರಿಂದ ಎಲಿಜಾಬೇಥಳು ತನ್ನ ಪತಿಯನ್ನು ಕೊಲೆಮಾಡಿದವನಿಗೆ ಜೇಲಿನಲ್ಲಿ ಭೆಟ್ಟಿಯಾಗಹೋದಳು ಮತ್ತು ಭಾವಪೂರ್ಣ ಹೃದಯದಿಂದ ಅವನೊಂದಿಗೆ ಮಾತನಾಡಿದಳು. ಇದಕ್ಕಿಂತ ಹೆಚ್ಚು ಹೃದಯದ್ರಾವಕ ಭೆಟ್ಟಿಯು ಯಾವುದಾದರೂ ಇರಬಹುದೆ? ಒಂದು ಬದಿಗೆ ಒಂದು ಉಚ್ಚಕುಲದ ಸುಂದರ ವಿಧವೆಯು ತನ್ನ ಪತಿಯ ಕೊಲೆ ಮಾಡಿದ್ದಕ್ಕಾಗಿ ಪಶ್ಚಾತ್ತಾಪ ವ್ಯಕ್ತಮಾಡಲು ಕೊಲೆಗಡಕನಿಗೆ ಪ್ರಾರ್ಥಿಸುತ್ತಿದ್ದಾಳೆ. ಅವನ ಕೈಯಲ್ಲಿ ಬಾಯಬಲ್ಲಿಟ್ಟು ಅವನಿಗೆ ಕ್ರಿಸ್ತನ

ದಯಾಧರ್ಮದ ಉಪದೇಶ ಮಾಡುತ್ತಿದ್ದಾಳೆ. ಎರಡನೇ ಬದಿಗೆ ಒಬ್ಬ ಕ್ರಾಂತಿಕಾರಕನಾದ ಸ್ವಪ್ನಶೀಲ ಯುವಕನಿದ್ದಾನೆ. ಅವನಿಗೆ ತಾನು ಒಂದು ವಿಧಿನಿರ್ಮಿತ ಕಾರ್ಯ ಮುಗಿಸಿದೆನೆಂಬ ದೃಢ ವಿಶ್ವಾಸವಿದೆ. ತಾನು ರಕ್ತ ಹರಿಸಿದ್ದರ ಪರಿಣಾಮವಾಗಿಯೂ ತನ್ನನ್ನೇ ಆಹುತಿಯಾಗಿ ಕೊಡಲು ಸಿದ್ಧನಾಗಿದ್ದುದರ ಪರಿಣಾಮವಾಗಿಯೂ ಜಗತ್ತು ಮೊದಲಿಗಿಂತಲೂ ಹೆಚ್ಚು ಒಳ್ಳೆಯದಾಗುವದೆಂದು ಅವನಿಗೆ ಬಲವಾದ ನಂಬುಕೆಯಿದೆ.

ಜೇಲಿನ ಖೋಲಿಗಳ ಬಾಗಿಲುಗಳು ತೆರೆದವು. ಗ್ರ್ಯಾಂಡ್ ಡಚೆಸ್ ಒಬ್ಬಳೇ ಒಳಗೆ ಹೋದಳು. ಕಾಲೀವನು ಆಶ್ಚರ್ಯಯುಕ್ತ ಮುಖಮುದ್ರೆಯಿಂದ ಕೇಳಿದ: "ತಾವು ಯಾರು? ಏತಕ್ಕಾಗಿ ಬಂದಿದ್ದೀರಿ?"

ಎಲಿಜಾಬೇಥ: "ನಾನು ಗ್ರ್ಯಾಂಡ ಡ್ಯೂಕರ ಹಂಡತಿ. ಅವರು ನಿನಗೆ ಮಾಡಿದ ಅನ್ಯಾಯವಾದರೂ ಏನು?"

ಕಾಲೀವ: "ನನಗೆ ನಿಮ್ಮ ಕೊಲೆಮಾಡುವದಿದ್ದಿಲ್ಲ. ನಾನು ನನ್ನ ಕೈಯಲ್ಲಿ ಬಾಂಬು ಹಿಡಿದುಕೊಂಡು ನಿಮ್ಮನ್ನು ನಿಮ್ಮ ಪತಿಯ ಜೊತೆಗೆ ಅನೇಕ ಸಲ ನೋಡಿದ್ದೇನೆ ಆದರೆ ನೀವು ಅವರ ಜೊತೆಗಿದ್ದುದರಿಂದ ನಾನು ಬಾಂಬನ್ನು ಒಗೆಯಲಿಲ್ಲ."

ಎಲಿಜಾಬೆಥ: "ಆದರೆ ಅವರ ಕೊಲೆಮಾಡುವದರಿಂದ ನನ್ನ ಕೊಲೆಯೂ ಆದಂತೆಯೆ ಎಂಬ ವಿಚಾರ ನಿನಗೆ ಬರಲಿಲ್ಲವೆ? ಆ ನಿರ್ದೋಷಿಯನ್ನು ಕೊಲ್ಲುವಾಗ ನಿನ್ನ ಹೃದಯದಲ್ಲಿ ಸ್ವಲ್ಪಕೂಡ ದಯೆ ಅಂಕುರಿಸಲಿಲ್ಲವೆ? ಆದದ್ದು ಆಗಿ ಹೋಯಿತು. ನಿನ್ನ ಸಾವು ಹತ್ತಿರವೇ ಬಂದಿದೆ. ನೀನು ಪಶ್ಚಾತ್ತಾಪ ವ್ಯಕ್ತಮಾಡು. ದೇವರಲ್ಲಿ ದಯೆಯನ್ನು ಯಾಚಿಸು. ನಿನಗಾಗಿ ನಾನು ಈ ಬಾಯಬಲ್ಲನ್ನು ತಂದಿದ್ದೇನೆ."

ಎಲಿಜಾಬೆಥಳು ಅವನ ಕೈಯಲ್ಲಿ ಬಾಯಬಲ್ ಇಟ್ಟರೆ ಅವಳ ಪತಿಯನ್ನು ಕೊಲೆ ಮಾಡಿದವನು ಎಲಿಜಾಬೆಥಳ ಕೈಯಲ್ಲಿ ತನ್ನ ದಿನಚರಿಯನ್ನು ಕೊಟ್ಟು ಹೇಳಿದ: "ನಾನು ಬಾಯಬಲ್ಲನ್ನು ಓದುವೆ. ನೀವು ನನ್ನ ದಿನಚರಿಯನ್ನು ಓದಿರಿ. ನಾನು ಕೊಲೆ ಏಕೆ ಮಾಡಬೇಕಾಯಿತು, ನನ್ನ ಧ್ಯೇಯದಲ್ಲಿ ವಿಘ್ನ-ತರುವವರ ನಾಶಮಾಡುವ ಪ್ರತಿಜ್ಞೆಯನ್ನು ನಾನು ಹೇಗೆ ತೆಗೆದುಕೊಂಡೆ ಮತ್ತು ಅದನ್ನು ಹೇಗೆ ಪೂರ್ತೈಸಿದೆ ಎಂಬುದನ್ನು ನೀವು ಈ ದಿನಚರಿಯಲ್ಲಿ ನೋಡಬಹುದು."

ಇಬ್ಬರೂ ಒಬ್ಬರನ್ನೊಬ್ಬರು ಬೀಳ್ಕೊಂಡರು. ಆ ಯುವಕನು ಅಚಲವಾದ ಧೈರ್ಯದಿಂದ ಮೃತ್ಯುವನ್ನಾಲಿಂಗಿಸಿದನು. ಇಬ್ಬರ ಮಧ್ಯ—ಕೊಲೆಗಾರ ಮತ್ತು ಆವನ ಶಿಕಾರಿ—ದಲ್ಲಿ—ಹೊರಗಣ್ಣಿಗೆ ಬಹಳ ದೊಡ್ಡ ಅಂತರವಿದ್ದಂತೆ ಕಾಣುತ್ತದೆ. ಆದರೆ ಈ ಕೊಲೆಗಾರನ—ಯಾಕಂದರೆ ಅವನು ನಾಸ್ತಿಕನಿದ್ದಿಲ್ಲ—ಮತ್ತು ಅವನಿಗೆ

ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಲಿಕ್ಕೆ ಹೇಳಿದ ಕ್ರಿಶ್ಚಿಯನ್ ಮಹಿಳೆಯ ಮಧ್ಯದಲ್ಲಿ ಬಹುಶಃ ಹೆಚ್ಚು ಗಾಢವಾದ ಸಮಭಾವವಿತ್ತು.

ಈ ಯುವಕನು ನ್ಯಾಯಾಧೀಶನೆದುರು ಹೇಳಿದ: "ನಾನು ಯಾವದನ್ನೂ ಸ್ಪಷ್ಟೀಕರಿಸಲು ಬಯಸುವದಿಲ್ಲ. ನಾನು ಗ್ರ್ಯಾಂಡ ಡ್ಯೂಕನ ಹೆಂಡತಿಯೆದುರು ಹೃದಯ ಬಿಚ್ಚಿ ಮಾತಾಡಿದ್ದೇನೆ. ಇದರ ಸಾಕ್ಷಿಯನ್ನು ಅವರೇ ಸ್ವತಃ ಕೊಡುವರು."

ಇನ್ನು ಮೂರನೇ ಕ್ರಾಂತಿಕಾರಿಯ ಚಿತ್ರವನ್ನು ನೋಡಿರಿ. ಯಾವ ಮನುಷ್ಯನು ಇಂಥ ಚಿತ್ರವನ್ನು ಚಿತ್ರಿಸಿದ್ದಾನೆಯೊ ಅವನು ಬಂಗಾಲವನ್ನು ಅರಿತಿರಲಾರನೆ?

"ನನ್ನ ಮನಸ್ಸಿನ ಮೇಲೆ ಈ ರಹಸ್ಯಮಯ ವ್ಯಕ್ತಿ—ಬೋರಿಸ್ ಸಾವಿಯಾ-ಕೋವ—ಗಿಂತ ಹೆಚ್ಚು ಆಳವಾದ ಪ್ರಭಾವವು ಬೇರೆ ಯಾರದೂ ಬಿದ್ದಿಲ್ಲ. ಅವನು ತೀಕ್ಷ್ಣ ವಿಚಾರಕನಿದ್ದನು. ಅವನ ತರ್ಕದ ಮುಂದೆ ರೂಢಿ, ರೀತಿರಿವಾಜು, ಪ್ರಚಲಿತ ವಿಚಾರ ಪದ್ಧತಿ, ಮೊದಲಾದವುಗಳು ನುಚ್ಚುನೂರಾಗಿ ಹೋಗುತ್ತಿದ್ದವು. ಅವನು ಹೃದಯಭೇದಕ ಲೇಖಕನಿದ್ದ. ಓದುಗರ ಮನಸ್ಸಿನ ಮೇಲೆ ಅಲೌಕಿಕ ಭಾವಗಳ ಜ್ವಾಲೆಗಳನ್ನು ಜಾಗೃತಗೊಳಿಸಲು ಸಮರ್ಥನಾಗಿದ್ದ. ಅವನು ಅಸಾಧಾರಣ ಸಾಹಸಿಯೂ ಆಗಿದ್ದ. ಎಂಥ ಭಯಂಕರ ಒಳಸಂಚುಗಳೇ ಇರಲಿ ಅವನು ಅವುಗಳ ನಾಯಕನಾಗುತ್ತಿದ್ದ. ಇಂತಹ ಅವಿಶ್ರಾಂತವಾಗಿ ದುಡಿಯುವ ಯೋಜಕನ ಕೈಚಳಕ ಎದುರು ನಿಲ್ಲುವವರು ಬಹಳ ಕಡಿಮೆ. ಇವನೂ ಇವನ ಬಂಧು ಸಾವಿನಕೋರ ಇಬ್ಬರೂ ಸೇಂಟ ಪೀಟರ್ಸಬರ್ಗದ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದರು. ಕಲಾನ ಕಾಲದಲ್ಲಿ ರಾಜ್ಯವಿರೋಧಿ ಪ್ರದರ್ಶನ ಮಾಡಿದ್ದಕ್ಕಾಗಿ ಉಳಿದ ಬಹಳ ಜನರ ಜೊತೆಗೆ ಇವರನ್ನೂ ಪೋಲೀಸರು ಹಿಡಿದರು. ಲಂಡನ್ನದ ವಿದ್ಯಾರ್ಥಿಗಳು ನ್ಯಾಯಂದವೆದುರಿನಿಂದ ಘೋಷಣೆಗಳನ್ನು ಮಾಡುತ್ತ ಎಷ್ಟೋ ಸಾರೆ ಹೋಗುತ್ತಾರೆ. ಈ ತರುಣರು ಸಹ ಇದಕ್ಕೂ ಹೆಚ್ಚಾಗಿ ಏನನ್ನೂ ಮಾಡಿದ್ದಿಲ್ಲ. ಆದರೆ ಸೇಂಟ ಪೀಟರ್ಸ ಬರ್ಗದಲ್ಲಿ ಇಂಥ ಸಾಮಾನ್ಯ ಮಾತಿನದು ಕೂಡ ಭಯಂಕರ ಪರಿಣಾಮವಾಯಿತು. ಈ ಯುವಕರ ತಂದೆ ನ್ಯಾಯಾಧೀಶನಿದ್ದನು. ಅವನನ್ನು ನೌಕರಿಯಿಂದ ದೂರಮಾಡಲಾಯಿತು. ಆದರಿಂದ ಅವನು ಹುಚ್ಚು ಹಿಡಿದು ಸತ್ತು ಹೋದನು. ಅಣ್ಣನನ್ನು ಗಡಿಪಾರು ಮಾಡಿ ಸೈಬೇರಿಯಾಕ್ಕೆ ಕಳಿಸಲಾಯಿತು ಅಲ್ಲಿ ಅವನು ಆತ್ಮಹತ್ಯೆ ಮಾಡಿಕೊಂಡ. ಬೋರಿಸನು ಜೇಲಿನಿಂದ ಓಡಿಹೋದುದರಿಂದ ಗಲ್ಲಿನ ಶಿಕ್ಷೆಯಿಂದ ಪಾರಾದ. ಒಂದು ದೊಡ್ಡ ಜನಜಂಗುಳಿ ನೆರೆಯಿತು, ಸ್ವಲ್ಪ ಗದ್ದಲವಾಯಿತು, ಇಬ್ಬರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಉದ್ದಂಡತೆಯನ್ನು ತೋರಿಸಿದರು. ಆಯಿತು. ಇಷ್ಟರಿಂದ ಒಂದು ಸುಖೀ ಕುಟುಂಬವು ಪ್ರೀತಿ, ಕರುಣೆ ರಹಿತವಾದ ಚಕ್ರದಲ್ಲಿ ಸಿಕ್ಕುಬಿದ್ದಿತು. ಒಬ್ಬ ಹುಡುಗನು ಬದುಕಿದನು. ಅವನು ಹೃದಯದಲ್ಲಿ ವಿಷ, ಕೈಯಲ್ಲಿ ಬಾಂಬು ಹಿಡಿದುಕೊಂಡು ಬೀದಿಯ ಮೇಲೆ

ತಿರುಗಾಡಹತ್ತಿದ . . . ಹತ್ತು ವರುಷಗಳ ವರೆಗೆ ಎಷ್ಟೋ ಭಯಂಕರ ಒಳಸಂಚು ಗಳೊಳಗಿಂದ ಅವನ ಹೆಸರು ಜಾರುತ್ತ ಬಂತು. ಎಷ್ಟೋ ವರುಷ ಷಡ್ಯಂತ್ರದ ತನ್ನ ಜೊತೆಗಾರರ ರೂಢಶಬ್ದಗಳ ಘೋಕಂ ಪಟ್ಟಿಯಲ್ಲಿ ಅವನ ತೇಜಸ್ಸು ಕಳೆ ಗುಂದುತ್ತ ಬಂತು. ಸೂಕ್ಷ್ಮ ಭಾವನೆಯು ಅವನ ಬುದ್ಧಿಯು ಅಸ್ಪಷ್ಟವಾಗುತ್ತ ಬಂತು. ಅವನು ತನ್ನ ಮನಸ್ಸಿಗೆ ಕೇಳತೊಡಗಿದ: " ಈ ಕೊಲೆಸುಲಿಗೆಗಳಿಂದ ಏನಾಗುವದು ? ಹಿಂಸೆಮಾಡುವದು ಉಚಿತವೊ ಅನುಚಿತವೊ ? ಒಂದು ವೇಳೆ ಹಿಂಸೆಯು ಉಚಿತವಾದರೆ ಯುದ್ಧದಲ್ಲಿ ಎದುರಾಳಿಯನ್ನು ಕೊಲ್ಲುವದರಲ್ಲಿ ಮತ್ತು ಸಾಮಾನ್ಯ ಕೊಲೆ ಮಾಡುವದರಲ್ಲಿ ಏನಾದರೂ ಅಂತರವಿದೆಯೆ? ಇಲ್ಲವೆ ? ಹಿಂಸೆಯು ಉಚಿತವಲ್ಲದಿದ್ದರೆ ಯುದ್ಧ, ಸಾಮಾನ್ಯ ಹತ್ಯೆ, ಗ್ರ್ಯಾಂಡ ಡ್ಯೂಕನಂಥವರ ಕೊಲೆ ಮಾಡುವದು ಎಲ್ಲವೂ ಅಷ್ಟೇ ಕೆಟ್ಟವುಗಳೆಂದು ತಿಳಿಯಬಾರದಲ್ಲವೆ? ತನ್ನ ಈ ಶಂಕೆ ಮತ್ತು ಹೃದಯಮಂಥನಗಳನ್ನು ಇವನು ಸ್ವತಃ ಬರೆದ ಎರಡು ವಿಲಕ್ಷಣ ಪುಸ್ತಕಗಳಲ್ಲಿ 'ದಿ ಪೇಲ ಹಾರ್ಸ' (The Pale Horse) ಮತ್ತು ದಿ ಟೇಲ ಆಫ್ ವಾಟ ವಾಜ ನಾಟ (The Tale of what was not) ಇವ ಸ್ಪಷ್ಟವಾಗಿ ವರ್ಣಿಸಿ ದ್ದಾನೆ. ಗ್ರ್ಯಾಂಡ್ ಡ್ಯೂಕನ ಕೊಲೆಯ ಕಾಲಕ್ಕೆ ಈ ಮನುಷ್ಯನು ಈ ಮಂಥನ ದಲ್ಲಿಯೇ ಇದ್ದನು. ಅನೇಕ ರಶಿಯನ್ ಕ್ರಾಂತಿಕಾರಕರಂತೆ ಇವನು ರೂಪ ನಿರೀತ ನಾಗುತ್ತ ನಡೆದಿದ್ದನು. . . . ಆ ನಂತರ ಅವನು ತನ್ನ ಸರ್ವಶಕ್ತಿಯನ್ನು ಬೊಲ್ಶೆವಿಕ್ ಚಳವಳಿಯ ವಿರುದ್ಧ ಉಪಯೋಗಿಸಿದ. ಈ ಮನುಷ್ಯ ಒಂದು ಸಲ ಹೋರನ ಗಾಡಿಯಲ್ಲಿಯೇ ಇದ್ದ. ಅದೇ ಕಣ್ಣಿನ ಹೊಳಪು, ಅದೇ ಭಾವನೆಯು ಸೂಕ್ಷ್ಮತೆ. ಅದೇ ಬುದ್ಧಿಯ ಚಮತ್ಕಾರ ಮತ್ತು ಒಂದು ವಿಷಯದಿಂದ ಎರಡನೇ ವಿಷಯಕ್ಕೆ ಪ್ರವೇಶಿಸುವ ಚಿಕ್ಕಿನಂಥ ಅದೇ ಚುರುಕುತನ. ಹಿಂದಿನಿಂದ ಯಾವನೋ ಒಬ್ಬ ಹೆಂಗಸು ಅವನನ್ನು ಮೋಸಗೊಳಿಸಿದಳು. ಅವನು ರಶಿಯಾಕ್ಕೆ ಹೋದ. ಅಲ್ಲಿ ಅವನ ಮೇಲೆ ಖಟ್ಲೆ ನಡೆಯಿತು. ಅವನು ತನ್ನ ಮೊದಲಿನ ಸಂಗಡಿಗರನ್ನು ವಂಚಿಸಿದ. ಅವನು ಸೋವಿಯಟ್ಟಿನ ಶತ್ರುವಾಗಲು ಒಲ್ಲೆನೆಂದ. ಕಡೆಗೆ ಜೇಲಿನ ಮಹಡಿಕಿಡಿಕಿಯೊಳಗಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡ. ಈ ವಿಚಿತ್ರ ಕಥೆಯನ್ನು ಚನ್ನಾಗಿ ಅವನ ಪರಿಚಯವಿದ್ದವರು ಕೂಡ ಒಪ್ಪುವದಿಲ್ಲ." ಇಷ್ಟು ಹೇಳಿ ಹೋರನು ಮತ್ತೆ ಎಲಿಜಾಬೆಥಳ ವಿಷಯವಾಗಿ ಹೇಳುತ್ತಾನೆ. ಆವಳು ತನ್ನ ಎಲ್ಲ ಒಡವೆಗಳನ್ನೂ— ಮಂಗಲಸೂತ್ರರೂಪವಾದ ಉಂಗುರವನ್ನು ಹೊರತುಮಾಡಿ - ಮಾರಿಬಿಟ್ಟಳು. ಅದರಲ್ಲಿ ಒಂದು ಮೂರಾಂಶಭಾಗವನ್ನು ರಾಜ್ಯಕ್ಕೆ, ಒಂದು ಮೂರಾಂಶ ವನ್ನು ಆಪ್ತೇಷ್ಟರಿಗೆ, ಒಂದು ಮೂರಾಂಶವನ್ನು ಧರ್ಮಕಾರ್ಯಕ್ಕೆ — ದವಾಖಾನೆ, ಅನಾಥಾಲಯ, ಪಾಠಶಾಲೆ, ಆರೋಗ್ಯಾಲಯ ಮುಂತಾದವುಗಳಿಗೆ— ಕೊಟ್ಟಳು. ತಾನು ಸ್ವತಃ ಅರಮನೆಯನ್ನು ಬಿಟ್ಟುಬಿಟ್ಟಳು. ಬ್ರಹ್ಮಚಾರಿಣಿಯರ ಒಂದು ಮಠಾಶ್ರಮ-

ವನ್ನು ಸ್ಥಾಪಿಸಿ ಅದರಲ್ಲಿ ಇರತೊಡಗಿದಳು. ಅವಳ ಸಂಸ್ಥೆಯು ಅಸಾಧಾರಣ ಸಂಸ್ಥೆಯಾಯಿತು. ಸರ್ವಸಾಮಾನ್ಯವಾಗಿ ಇಂಥ ಸಂಸ್ಥೆಗಳಲ್ಲಿ ಸೇರುವವರು ಪಾಠ, ಪೂಜೆ, ಧ್ಯಾನ, ಜಪ, ತಪ, ವ್ರತ, ಉಪವಾಸ ಮುಂತಾದವುಗಳಲ್ಲಿಯೇ ಮಗ್ನರಾಗಿರುತ್ತಾರೆ. ಎಲಿಜಾಬೆಥಳು ತನ್ನ ಆಶ್ರಮದಲ್ಲಿ ಈ ವ್ರತಗಳ ಪಾಲನೆಯ ವಿಷಯದ ಕಡೆಗೆ ವಿಶೇಷ ಲಕ್ಷ್ಯಕೊಟ್ಟಳು. ಆದರೆ ಅದರ ಜೊತೆಗೇ ಸಮಾಜ ಸೇವೆಯ ಪ್ರವೃತ್ತಿಗಳ ಕಡೆಗೂ ಅಷ್ಟೇ ಲಕ್ಷ್ಯವನ್ನು ಕೊಟ್ಟಳು. ಆಶ್ರಮದಲ್ಲಿ ನೂರಾರು ಸ್ತ್ರೀಯರು ಸಮಾವಿಷ್ಟರಾದರು. ಅವರಲ್ಲಿ ಇಪ್ಪತ್ತರಷ್ಟು ಸ್ತ್ರೀಯರಂತೂ ಆಜೀವ ಬ್ರಹ್ಮಚರ್ಯದ ದೀಕ್ಷೆಯನ್ನು ತೆಗೆದುಕೊಂಡಿದ್ದರು. ಉಳಿದವರು ಆಶ್ರಮವಾಸದ ದೀಕ್ಷೆಗೆ ಪಾತ್ರರಾದರು. ಈ ಆಶ್ರಮವಾಸಿಗಳಲ್ಲಿ ರಾಜಕುಮಾರಿಯರಿದ್ದರು, ಸುಶಿಕ್ಷಿತ ಪರಿವಾರದ ಸ್ತ್ರೀಯರಿದ್ದರು ಮತ್ತು ಕೃತವರ್ಗದ ಸ್ತ್ರೀಯರೂ ಇದ್ದರು. ಒಬ್ಬ ತರುಣ ಕೃತಸ್ತ್ರೀಯಂತೂ ಜಪಾನದ ಯುದ್ಧದಲ್ಲಿ ಸಿಪಾಯಿವೇಷ ಧರಿಸಿ ಯುದ್ಧ ಮಾಡಿದ್ದಳು. ಅದಕ್ಕಾಗಿ ಅವಳಿಗೆ ಪದಕ ಸಿಕ್ಕಿತ್ತು. ಈ ಸೇವಾಶ್ರಮದ ಕೆಲಸವು ಒಳ್ಳೇ ಭರದಿಂದ ಸಾಗಿತು. ಅನೇಕ ಸ್ಥಳಗಳಿಂದ ನರ್ಸುಗಳ ಸಲುವಾಗಿ ಈ ಆಶ್ರಮಕ್ಕೆ ಬೇಡಿಕೆ ಬರುವಷ್ಟು ಇದರ ಕೆಲಸವು ಪ್ರಸಿದ್ಧಿಯನ್ನು ಹೊಂದಿತ್ತು. ಇವಳ ದವಾಖಾನೆಗೆ ಅತ್ಯಂತ ಕಷ್ಟಸಾಧ್ಯವಾದ ರೋಗಿಗಳು ಬರುತ್ತಿದ್ದರು. ಎಲಿಜಾಬೆಥಳು ಶ್ರೇಷ್ಠ ನರ್ಸಳೆಂದು ತಿಳಿವಳಿಕೆ ಹಬ್ಬಿತ್ತು. ಇವಳ ಅನಾಥಾಲಯವು ಇಡೀ ಯುರೋಪದಲ್ಲಿಯೇ ಅತ್ಯಂತ ಉತ್ಕೃಷ್ಟವೆಂದು ತಿಳಿಯಲ್ಪಡುತ್ತಿತ್ತು. ಇದರ ವೆಚ್ಚಕ್ಕಾಗಿ ದಾನಗಳು ರಾಶಿರಾಶಿಯಾಗಿ ಬರುತ್ತಿದ್ದವು.

ತೀರ ಬಡವರ್ಗದ ಅಸಾಧ್ಯವೆಂದು ತಿಳಿಯಲ್ಪಟ್ಟ ಕ್ಷಯರೋಗಿಗಳ ಸಲುವಾಗಿ ಎಲಿಜಾಬೆಥಳು ನಿರಂತರವಾದ ಆಶ್ರಮ ಸ್ಥಾಪಿಸಿದ್ದಾಳೆಂದೂ ಮರಣೋನ್ಮುಖರಾಗಿರುವಂಥ ರೋಗಿಗಳನ್ನು ಅವಳು ದಿನಾಲು ನೋಡಲು ಹೋಗುತ್ತಾಳೆಂದೂ ತಿಳಿದ ಕೂಡಲೆ ಅವಳ ಈ ಕೆಲಸದಿಂದ ಮಾಸ್ಕೋದ ಸಮಾಜದ ಆತ್ಮವು ಸಹ ಜಾಗ್ರತವಾಯಿತು. ಅವಳ ಸುಂದರ ಚರಿತ್ರವು ಅವಳ ರಾತ್ರಿ ಹಗಲು ನಡೆಯುವ ಜಪ, ತಪ ಮತ್ತು ಧ್ಯಾನ ಧಾರಣ ಮುಂತಾದವುಗಳಿಂದ ಮತ್ತಷ್ಟು ತೇಜಸ್ವಿಯಾಗಿತ್ತೆಂದು ಅವಳ ಅತ್ಯಂತ ನಿಕಟವರ್ತಿಯಾದ ಮಿತ್ರರು ನನಗೆ ಹೇಳಿದ್ದರು. ಹಗಲು ಅನೇಕ ಕೆಲಸಗಳನ್ನು ಮುಗಿಸಿ ರಾತ್ರಿಯ ಬಹುಭಾಗವನ್ನು ಅವಳು ಧ್ಯಾನದಲ್ಲಿಯೂ ಭಜನೆಯಲ್ಲಿಯೂ ಕಳೆಯುತ್ತಿದ್ದಳು. ಒಂದೆರಡು ಗಳಿಗೆ ನಿದ್ರೆ ಮಾಡುತ್ತಿದ್ದರೂ ಅದು ಕೂಡ ಗಾದಿಯಿಲ್ಲದೆ ಹಲಗೆಯ ಮೇಲೆ ಮಲಗಿಕೊಂಡು. ಭೋಜನದಲ್ಲಿ ಮಾಂಸ ಮುಂತಾದ್ದನ್ನು ಅವಳು ಎಷ್ಟೋ ದಿನಗಳಿಂದ ಬಿಟ್ಟುಬಿಟ್ಟಿದ್ದಳು. ಅವಳು ತನ್ನ ಜೀವನದಲ್ಲಿ ಭಕ್ತಿಯೋಗ ಮತ್ತು ಕರ್ಮಯೋಗಗಳ ಮಿಲನವನ್ನು ಚನ್ನಾಗಿ ಸಾಧಿಸಿದ್ದಳು.

ಯುದ್ಧಕಾಲದಲ್ಲಿ ಅವಳು ಈ ಸಂಸ್ಥೆಯ ಪ್ರವೃತ್ತಿಯನ್ನು ಪ್ರಸಂಗೋಚಿತವಾದ ಸೇವೆಯ ಕಡೆಗೆ ಹೊರಳಿಸಿದಳು. ಗಾಯಾಳುಗಳಿಗಾಗಿ ಸಿಗುವ ದಾನದೊಳಗಿಂದ ಜನರು ಹಣವನ್ನು ಅಪಹರಿಸುತ್ತಾರೆಂದು ತಿಳಿದ ಕೂಡಲೆ ಅವಳು ಪ್ರತಿಯೊಬ್ಬ ದಾನಿಗೆ ಪಾವತಿಯನ್ನು ಕಳಿಸುವ ಪದ್ಧತಿಯನ್ನು ರೂಢಿಯಲ್ಲಿ ತಂದಳು. ಈ ಪದ್ಧತಿಯೆಂದರೆ ಅವಳು ತನ್ನ ಜಪಾನ ಯುದ್ಧ ಕಾಲದಲ್ಲಿ ಬಂದ ಅನುಭವದ ಉಪಯೋಗವನ್ನು ೧೯೧೪ರಲ್ಲಿ ಪೂರ್ತಿಗೊಳಿಸಲಾಯಿತೆಂದು ಹೇಳಬಹುದು. ಆದರೆ ಅವಳ ಜೀವನದ ಕಠೋರ ಪರೀಕ್ಷೆಯಾಗುವದು ಇನ್ನೂ ಬಾಕಿ ಉಳಿದಿತ್ತು. ಅವಳು ಜರ್ಮನ್ ರಾಜಮನೆತನದ ಕುಮಾರಿ ಇದ್ದಳೆಂಬದನ್ನು ನಾವು ಅರಿತಿದ್ದೇವೆ. ಆದುದರಿಂದ ೧೯೧೫ ರಲ್ಲಿ ಜರ್ಮನ್ ವಿರೋಧಿ ಗುಂಡಾ ಜನರ ಧ್ಯಾನವು ಇವಳ ಸಂಸ್ಥೆಯ ಕಡೆಗೆ ಹೊರಳಿತು. ಅಲ್ಲಿ ರಶಿಯಾದ ಸಲುವಾಗಿ ಪ್ರತಿಯೊಂದು ಪ್ರಕಾರದ ಯುದ್ಧಕಾರ್ಯವು ಜರಗುತ್ತಿತ್ತು. ಆದರೂ ಅವಳ ಸಂಸ್ಥೆಯನ್ನು ಶತ್ರುಪ್ರವೃತ್ತಿಯ ಕೇಂದ್ರವೆಂದು ತಿಳಿಯಲಾಯಿತು. ಒಂದು ಸಾರೆ ಒಂದು ಗುಂಡಾ ಜನರ ತಂಡವು ಆಶ್ರಮವನ್ನು ಸುಡುವುದಕ್ಕಾಗಿ ಅದರ ಮೇಲೆ ಏರಿ ಬಂತು. ಆದರೆ ಮಾಸ್ಕೋದ ಮೇಯರನು ಅಲ್ಲಿ ಹೋಗಿ ಗುಂಡಾ ಜನರನ್ನು ತಡೆದು ಆಶ್ರಮ ಸುಡುವದನ್ನು ನಿಲ್ಲಿಸಿದನು. ಅವಳ ತಂಗಿಯು ಝಾರನ ರಾಣಿಯಾಗಿದ್ದಳು. ಅವಳಿಗೆ ಇವಳು ಯಾವಾಗಲೂ ಉತ್ತಮ ಸಲಹೆಯನ್ನು ಕೊಡುತ್ತಿದ್ದಳು. ಆದರೆ ಅವಳು ರಾಸ ಪುಟಿನ್ನನ ಬಲೆಯಲ್ಲಿ ಸಿಕ್ಕಿದ್ದಳು. ಇವಳ ಸಲಹೆಯ ಲಾಭವನ್ನು ಅವಳು ತೆಗೆದು ಕೊಳ್ಳಬೇಕಾದಷ್ಟು ತೆಗೆದುಕೊಳ್ಳಲಿಲ್ಲ. ಹಿಂದುಗಡೆ ಇಬ್ಬರೂ ಅಕ್ಕತಂಗಿಯರು ಮೇಲಿಂದಮೇಲೆ ಭೆಟ್ಟಿಯಾಗುವದೂ ತಪ್ಪಿ ಹೋಯಿತು.

೧೯೧೭ರಲ್ಲಿ ಕ್ರಾಂತಿಯಾದಾಗ ಮಾಸ್ಕೋದ ಗುಂಡಾ ಜನರಿಗೆ ಮತ್ತೆ ತಲೆ ತಿರುಗಿತು. ಜೇಲು ಒಡೆದು ಬಂದ ಕೈದಿಗಳು, ಮತ್ತು ಬೇರೆ ಗುಂಡಾ ಜನರು ಇವಳನ್ನು ಜರ್ಮನಿಯ ಗುಪ್ತಚಾರಿಣಿಯೆಂದು ಹಿಡಿಯಲಿಕ್ಕೆ ಇವಳ ಸಂಸ್ಥೆಗೆ ಮುತ್ತಿಗೆ ಹಾಕಿದರು. ಈ ಹೆಂಗಸು ಹೊರಗೆ ಬಂದು ಆ ಸಮೂಹದೆದುರಿಗೆ ನಿಂತು ಹೇಳತೊಡಗಿದಳು: “ನಿಮಗೆ ಏನು ಬೇಕಾಗಿದೆ? ಬೇಕಾದ್ದನ್ನು ಒಳಗೆ ಬಂದು ತೆಗೆದುಕೊಂಡು ಹೋಗಿರಿ. ಇಲ್ಲಿ ಯಾವದೇ ಆಯುಧಗಳನ್ನಾಗಲಿ, ಮದ್ದುಗುಂಡು ಗಳನ್ನಾಗಲಿ ಅಥವಾ ಯಾವ ಗುಪ್ತಚಾರರನ್ನಾಗಲಿ ಬಚ್ಚಿಟ್ಟಿಲ್ಲ. ಇದ್ದರೆ ಹುಡುಕಿ ತೆಗೆದುಕೊಂಡು ಹೋಗಿರಿ. ಆದರೆ ಎಚ್ಚರಿಕೆ, ಐದು ಜನರಿಗಿಂತ ಹೆಚ್ಚು ಜನರು ಒಳಗೆ ಬರತಕ್ಕದ್ದಲ್ಲ.”

ಜನಸಮುದಾಯವು ಒದರತೊಡಗಿತು: “ಇದಾವುದನ್ನೂ ನಾವು ಕೇಳುವ ದಿಲ್ಲ. ನಿಮ್ಮನ್ನು ಬಂಧಿಸಬೇಕಾಗಿದೆ. ನಮ್ಮ ಸಂಗಡ ನಡೆಯಿರಿ.”

ಎಲಿಜಾಬೆಥಳು ಶಾಂತಚಿತ್ತದಿಂದ ಉತ್ತರಕೊಟ್ಟಳು: “ನಾನು ಬರಲಿಕ್ಕೆ

ಸಿದ್ಧಳಿದ್ದೇನೆ. ಆದರೆ ನಾನು ಈ ಸಂಸ್ಥೆಯ ಕುಲಮಾತೆ. ಆದುದರಿಂದ ನನಗೆ ಎಲ್ಲ ಕೆಲಸಗಳನ್ನೂ ಕಾಯದೇಶೀರ ರೀತಿಯಿಂದ ಒಪ್ಪಿಸಿಕೊಡಲಿಕ್ಕೆ ಬೇಕು.”

ಹೀಗೆ ಹೇಳಿ ಅವಳು ಭಗಿನಿಯರಿಗೆ ಪ್ರಾರ್ಥನಾ ಮಂದಿರದಲ್ಲಿ ಸೇರಲಿಕ್ಕೆ ಹೇಳಿದಳು. ಆ ಸಮುದಾಯದೊಳಗಿಂದ ಐದು ಜನರಿಗೆ ಆಯುಧಗಳನ್ನು ಹೊರಗಿಟ್ಟು ಒಳಗೆ ಬರಬಹುದೆಂದು ಹೇಳಿದಳು. ಅವಳು ಅವರನ್ನು ಏಸುವಿನ ಕ್ರೂಸದ ಹತ್ತಿರ ಕರೆದೊಯ್ದಳು. ಅವರು ಮಂತ್ರಮುಗ್ಧರಾದವರಂತೆ ಅವಳು ಕರೆದುಕೊಂಡು ಹೋದಲ್ಲಿಗೆ ಹೋಗಿ ಅವಳ ಜೊತೆಗೆ ಅವರು ಕ್ರೂಸಿನೆದುರು ಕಾಲುಬಿದ್ದರು. ಆ ಮೇಲೆ ಈ ಮಹಿಳೆಯು ಅವರಿಗೆ ಹೇಳಿದಳು: “ಇನ್ನು ನಿಮಗೆ ಬೇಕಾದದ್ದನ್ನು ಹುಡುಕಿ ತೆಗೆದುಕೊಂಡು ಹೋಗಿರಿ.” ಅವರು ಅತ್ತಿತ್ತ ಹುಡುಕಿದಂತೆ ಮಾಡಿ ಹೊರಗೆ ಬಂದು ಹೇಳಿದರು: “ಇದಂತೂ ನಿರುದ್ಯೋಗಿಗಳದೊಂದು ಆಶ್ರಮವದೆ ಆಶ್ರಮ. ಇಲ್ಲಿ ಮತ್ತೇನೂ ಇಲ್ಲ.”

ಈ ಬಿರುಗಾಳಿಯು ಬಂದ ದಾರಿಯಿಂದ ತಿರುಗಿ ಹೋಯಿತು. ರಶಿಯದಲ್ಲಿ ಝಾರನು ಓಡಿಹೋದ ಮೇಲೆ ಪ್ರಜೆಗಳು ಅಧಿಕಾರವನ್ನು ಕೈಯಲ್ಲಿ ತೆಗೆದುಕೊಂಡರು. ಈ ಅಧಿಕಾರವು ಪ್ರಜೆಗಳ ಒಂದು ಪಕ್ಷದ ಕೈಯಲ್ಲಿತ್ತು. ಆದರಿಂದ ಪ್ರಜೆಗಳ ಎರಡನೆಯ ಉಗ್ರಪಕ್ಷಕ್ಕೆ ಸಂತೋಷವಿದ್ದಿಲ್ಲ. ಆದುದರಿಂದ ನಮಗಾಲ ಸರಕಾರ ಸ್ಥಾಪಿಸಿದ ಕೊಡಲಿಸೆಯ ಪಕ್ಷದವರು ಎಲಿಜಾಬೆಥಳ ಬಳಿಗೆ ಬಂದು ಹೇಳಿದರು: “ಪ್ರಜೆಗಳ ತಲೆ ತಿರುಗಿದೆ. ನೀವು ಜೀವಂತ ಉಳಿಯಬೇಕಾದರೆ ಆಶ್ರಮ ಬಿಟ್ಟು ಕ್ರೆಮ್ಲಿನದ ರಾಜಮಂದಿರಕ್ಕೆ ನಡೆಯಿರಿ. ಅಲ್ಲಿ ನೀವು ಹೆಚ್ಚು ಸುರಕ್ಷತರಾಗಿ ಇರುವಿರಿ.”

ಆದರೆ ಎಲಿಜಾಬೆಥಳು ಅತ್ಯಂತ ನಿಷ್ಠೆಯಪೂರ್ವಕವಾಗಿ ತನ್ನ ಜೀವನವನ್ನು ಸೇವಾಕಾರ್ಯದಲ್ಲಿ ಅರ್ಪಿಸಿದ್ದಳು. ಆದುದರಿಂದ ಅವಳು ಆಶ್ರಮಬಿಟ್ಟು ಬರಲಿಕ್ಕೆ ಒಲ್ಲೆಂದಳು. ಅವಳು ಹೇಳಿದಳು: “ನಾನು ರಾಜಮಹಲನ್ನು ಬಿಟ್ಟದ್ದು ಇಂಥ ಕ್ರಾಂತಿಕಾರರ ವಿರುದ್ಧ ತಿರುಗಿ ಆ ಮಹಲಿನ ಆಶ್ರಯ ಪಡೆಯುವದಕ್ಕಾಗಿ ಅಲ್ಲ. ನಿಮ್ಮಿಂದ ನನ್ನ ಆಶ್ರಮದ ರಕ್ಷಣೆ ಮಾಡಲು ಸಾಧ್ಯವಿಲ್ಲದಿದ್ದರೆ ಅದನ್ನು ದೇವರಿಗೆ ಒಪ್ಪಿಸಿರಿ.”

ಈ ಪ್ರಕಾರ ದಾವಾನಲವು ಧಗಧಗಿಸುತ್ತಿದ್ದರೂ ಗಾಯಾಳುಗಳಾದ ಸಿಪಾಯಿಗಳ ಸೇವೆ, ಮರಣೋನ್ಮುಖರಾಗಿರುವ ಸ್ತ್ರೀಯರಿಗೆ ಧೈರ್ಯಕೊಡುವದು, ಬಡವರಿಗೆ ಸಹಾಯ ಮಾಡುವದು ಇನ್ನು ಉಳಿದ ವೇಳೆಯನ್ನು ಭಜನೆ ಕೀರ್ತನೆಗಳಲ್ಲಿ ಕಳೆಯುವದು ಇವೇ ಮುಂತಾದ ತನ್ನ ಕೆಲಸಗಳನ್ನು ಅವಳು ನಡೆಸಿಯೇ ಇದ್ದಳು. ಇನ್ನೊಂದು ಕಡೆಗೆ ಬೊಲ್ಶೆವಿಕರು ಆ ಆಡಳಿತೆ ನಡೆಸುವ ಸರಕಾರವನ್ನು ಕಿತ್ತು ಹಾಕುವ ಕಾರಸ್ಥಾನವನ್ನು ನಡೆಸಿಯೇ ಇದ್ದರು. ಆ ಕಾಲಕ್ಕೆ ಇವಳು ತನ್ನ ಒಬ್ಬ ಮಿತ್ರನಿಗೆ ಒಂದು ಪತ್ರ ಬರೆದಳು. ಅದು ಹೀಗಿದೆ:

"ಇಂಥ ಸಮಯದಲ್ಲಿಯೇ ಈಶ್ವರನ ಮೇಲಿನ ಶ್ರದ್ಧೆಯು ನಿಜವಾದ ಪರೀಕ್ಷೆಯಾಗುತ್ತದೆ. ಇಂಥ ಪರೀಕ್ಷಾಕಾಲದಲ್ಲಿಯೇ ಶಾಂತ ಮತ್ತು ಪ್ರಸನ್ನಚಿತ್ತವುಳ್ಳವರೇ 'ದೇವರೇ ನಿನ್ನ ಇಚ್ಛೆಯು ಪೂರ್ಣವಾಗಲಿ' ಎಂದು ಹೇಳಬಲ್ಲರು. ನನ್ನ ಪ್ರೀತಿಯು ರಶಿಯಾದ ಸುತ್ತುಮುತ್ತು ವಿನಾಶದ ಹೊರತಾಗಿ ಮತ್ತೊಂದು ಕಾಣುವದೇ ಇಲ್ಲ. ಇಂಥ ಒರೆಗಲ್ಲಿನ ಮೇಲೆ ಒರೆ ಹಚ್ಚುವ ರುದ್ರದೇವರಾಗಲಿ ಅಥವಾ ದಯಾಳುವೂ ಕೃಪಾನಿಧಿಯೂ ಆದ ಪರಮಾತ್ಮನಾಗಲಿ ಒಂದೇ ಇದ್ದಾರೆಂದು ನನ್ನ ಅಚಲವಾದ ಶ್ರದ್ಧೆಯಿದೆ. ದೊಡ್ಡದೊಂದು ಬಿರುಗಾಳಿಯನ್ನು ಕಲ್ಪಿಸಿರಿ. ಅದರಲ್ಲಿ ಕೂಡ ಭೀಕರತೆಯು ಜೊತೆಗೆ ಭವ್ಯತೆಯು ಅಂಶವೂ ಇರುವದಿಲ್ಲವೇನು? ಎಷ್ಟೋ ಜನರು ಸಂರಕ್ಷಣೆಗಾಗಿ ಅತ್ತಿತ್ತ ಓಡಾಡುತ್ತಾರೆ, ಕೆಲವರು ಅಂಜಿಕೆಯಿಂದಲೇ ಸತ್ತು ಹೋಗುತ್ತಾರೆ. ಆದರೆ ಕೆಲವೊಂದು ಜನರು ಇಂಥ ದೊಡ್ಡ ಬಿರುಗಾಳಿಯಲ್ಲಿಯೂ ದೇವರ ದೊಡ್ಡಿತೆಯ ದರ್ಶನ ಮಾಡಿಕೊಳ್ಳುತ್ತಾರೆ. ಇದೀಗ ನಮ್ಮ ಸುತ್ತುಮುತ್ತಲೂ ಇಂಥದೇ ಬಿರುಗಾಳಿ ಬೀಸುತ್ತಿರುವದಿಲ್ಲವೆ? ನಾವಂತೂ ಕೆಲಸ, ಸೇವೆ ಮತ್ತು ಪ್ರಾರ್ಥನೆಗಳಲ್ಲಿ ಮಗ್ನರಾಗಿರುತ್ತೇವೆ. ನಮ್ಮ ಆಶೆಯು ಅಖಂಡವಾಗಿದೆ. ಪ್ರತಿನಿತ್ಯ ನಡೆಯುವ ಈ ಎಲ್ಲ ಘಟನೆಗಳಲ್ಲಿ ನಾವಂತೂ ಪರಮಾತ್ಮನ ದಯೆಯ ದರ್ಶನವನ್ನೇ ಮಾಡುತ್ತೇವೆ. ಇಂಥ ಸಮಯದಲ್ಲಿ ಕೂಡ ನಾವು ಆಶೆ ಹಿಡಿದು ಬಾಳುತ್ತಿರುವದು ಚಮತ್ಕಾರವಲ್ಲವೆ?"

ಕೊನೆಗೆ ಬೊಲ್ಶೆವಿಕರಿಗೆ ವಿಜಯವಾಯಿತು. ಸ್ವಲ್ಪೇ ದಿನಗಳಲ್ಲಿ ಕೆಂಪು ಸೇನೆಯು ಇವಳ ಆಶ್ರಮದ ಮೇಲೆ ದಾಳಿ ಮಾಡಿತು. ರಾಜಪರಿವಾರದ ಜೊತೆಗೆ ಇಕ್ಟೆರಿನ್‌ಬರ್ಗದಲ್ಲಿ ಒಟ್ಟುಗೂಡಲಿಕ್ಕೆ ನಡೆಯಿರೆಂದು ಸೈನ್ಯದ ಆಫೀಸರನು ಹುಕುಂ ಕೊಟ್ಟನು. ಇವಳು ಆಶ್ರಮದ ಎಲ್ಲ ಭಗಿನಿಯರಿಗೆ ಭೆಟ್ಟಿಯಾಗಲು ಅಪ್ಪಣೆಯನ್ನು ಕೇಳಿದಳು. ಅಪ್ಪಣೆ ದೊರೆಯಲಿಲ್ಲ. ಮತ್ತೊಬ್ಬ ಭಗಿನಿಯೊಂದಿಗೆ ಇವಳನ್ನು ಕರಕೊಂಡು ಹೋಗಿ ಗಾಡಿಯಲ್ಲಿ ಕೂಡ್ರಿಸಲಾಯಿತು. ದಾರಿಯಲ್ಲಿ ಇವಳು ಆಶ್ರಮದ ಭಗಿನಿಯರ ಹೆಸರಿನಿಂದ ಬೀಳ್ಕೊಡುವ ಪತ್ರವನ್ನು ಬರೆದಳು. ಇಕ್ಟೆರಿನ್‌ಬರ್ಗದಲ್ಲಿ ಝಾರ ಮತ್ತು ಝಾರಿಣಿಯ ಜೊತೆಗೆ ಇವಳನ್ನೂ ಕೆಲವು ದಿನ ಜೇಲಿನಲ್ಲಿಟ್ಟಿದ್ದರು. ಅಲ್ಲಿಂದ ತಿರುಗಿ ಇವಳನ್ನು ಆ ಭಗಿನಿಯ ಸಂಗಡ ತೆಗೆದುಕೊಂಡು ಹೋದರು. ಇವಳಿಗೆ ಅಲ್ಲಿ ರಾಜಕುಟುಂಬದ ಮತ್ತು ಉಳಿದ ಎಲ್ಲ ಜನರ ಭೆಟ್ಟಿಯಾಯಿತು. ಎಲ್ಲರೂ ಕೈದಿಗಳಾಗಿದ್ದರು. ಉಣ್ಣ-ತಿನ್ನಲು ಹಾಗೂ ಉಡ-ತೊಡಲು ಕೊರತೆಯಿತ್ತು. ಪಾಪ! ಇವರೆಲ್ಲರೂ ಸಾವಿನ ದಾರಿಯನ್ನೇ ಕಾಯುತ್ತಿದ್ದರು. ಜುಲೈ ೧೭ ನೇ ತಾರೀಖಿಗೆ ಇಕ್ಟೆರಿನ್‌ಬರ್ಗದಲ್ಲಿ ಝಾರ ಮತ್ತು ಝಾರಿಣಿಯ ವಧೆಯಾಯಿತು. ಜುಲೈ ೧೮ ಕ್ಕೆ ಬೋಲ್ಶೆವಿಕ್ ಕೊಲೆಗಡಕರು ಡಚೆಸ ಮತ್ತು ರಾಜಕುಮಾರರ ಬಳಿಗೆ ಬಂದು ತಲ್ಪಿದರು. ಎಲ್ಲರ ಕಣ್ಣುಗಳ ಮೇಲೆ

ಪಟ್ಟಿಯನ್ನು ಕಟ್ಟಲಾಯಿತು. ಮತ್ತು ಹತ್ತರದಲ್ಲಿಯೆ ಕಬ್ಬಿಣದ ತುಂಡುಗಳ ರಾಶಿಯು ಬಿದ್ದಿತ್ತು. ಅವರಲ್ಲಿ ಎಲ್ಲರನ್ನೂ ಒಗೆಯಲಾಯಿತು. ಯಾರೋ ಅದಕ್ಕೆ ಸುರಂಗವನ್ನು ಹಚ್ಚಿದ ಕೂಡಲೇ ಒಂದರಕ್ಷಣದಲ್ಲಿ ಢಂ ಎಂದು ಎಲ್ಲರೂ ಚೂರುಚೂರಾದರು. ಆ ರಾಶಿಯು ಮೇಲೆ ಹಾಕುವಾಗ ಎಲಿಜಾಬೆಥಳು ಅಂದ ಶಬ್ದವು ದೂರದಲ್ಲಿ ನಿಂತ ಒಬ್ಬ ಒಕ್ಕಲಿಗನಿಗೆ ಕೇಳಿಸಿತು 'ದೇವರೇ ಈ ಜನರನ್ನು ಕ್ಷಮಿಸು. ತಾವು ಏನು ಮಾಡುತ್ತಿದ್ದೇವೆಂಬುದೇ ಅವರಿಗೆ ಗೊತ್ತಿಲ್ಲ.'

ಇಂದು ಬೆಳಿಗ್ಗೆ ತಿರುಗಾಡುವ ಕಾಲಕ್ಕೆ ಒಬ್ಬ ಮುಸಲ್ಮಾನ ನಾಯಕನ ಮಾತು ಹೊರಟಿತು. ವಲ್ಲಭಭಾಯಿಯವರು ಅಂದರು: "ಇವರು ಸಹ ಸಂಕಟ ಕಾಲದಲ್ಲಿ ಮುಸಲ್ಮಾನರಾಗಿದ್ದರು. ಮುಸಲ್ಮಾನರ ಸಲುವಾಗಿ

೩೦-೩-'೩೨ ಪ್ರತ್ಯೇಕ ಸಹಾಯಕೋಶವನ್ನು ಮಾಡಬೇಕೆಂದೂ ಅದಕ್ಕಾಗಿ ಪ್ರತ್ಯೇಕ (ಅಪೀಲನ್ನು) ವಿನಂತಿಪತ್ರಕವನ್ನು ಹೊರಡಿಸಬೇಕೆಂದೂ ಇವರು ಇಚ್ಛಿಸುತ್ತಿದ್ದರು." ಬಾಪೂ: "ಇದರಲ್ಲಿ ಇವರ ತಪ್ಪಿಲ್ಲ. ನಾವು ಇಂಥ ಪರಿಸ್ಥಿತಿಯನ್ನುಂಟುಮಾಡಿದಾಗ ಅವರೇನು ಮಾಡಬೇಕು? ನಾವು ಇವರ ಸಲುವಾಗಿ ಏನು ಉಳಿಸಿದ್ದೇವೆ? ನಾವು ಅಸ್ಪೃಶ್ಯರನ್ನು ತಿಳಿಯುವಂತೆ ಅನೇಕ ಸ್ಥಳಗಳಲ್ಲಿ ಇವರನ್ನೂ ತಿಳಿಯುತ್ತೇವೆ. ದೇವಾಲಯಗಳಿಗೆ ಅಮುತ್‌ಉಲ್ಲಳನ್ನು ಕಳಿಸುವದಾದರೆ . . . ರ ಬಳಿಗೆ ಕಳಿಸುವದು ಸಾಧ್ಯವೆ? ನಿಜವಾಗಿ ನೋಡಿದರೆ ಎಲ್ಲಿ ಎಲ್ಲಿ ಜನರಿಗೂ ಪ್ರವೇಶವಿಲ್ಲವೋ — ಎಲ್ಲಿ ಅಮುತ್‌ಉಲ್ಲಳು ಪ್ರವೇಶ ಮಾಡಲಾರಳೋ—ಅಂಥಲ್ಲಿ ನಾವು ಕೂಡ ಹೋಗಬಾರದು. ಹಿಂದೂ ಜನರು ಮುಂದುವರಿದು ತಮ್ಮ ಹೆಜ್ಜೆಯನ್ನಿಟ್ಟಾಗಲೇ ಈ ಪ್ರಶ್ನೆ ಬಗೆಹರಿಯುವದು. ಇವತ್ತು ಎರಡೂ ಜಾತಿಗಳ ನಡುವೆ ಅಂತರವು ಹೆಚ್ಚಾಗುತ್ತ ನಡೆದಿದೆ. ಹಿಂದೂ ಜನರು ಜಾಗ್ರತರಾಗಿ ತಮ್ಮ ಸೀಮಾರೇಷೆಯನ್ನು ಅಳಿಸಿದಾಗಲೇ ಈ ಅಂತರವು ಕಡಿಮೆಯಾಗುವದು. ಈ ಎಲ್ಲ ಸಂಕುಚಿತ ವಿಚಾರಗಳ ಆವಶ್ಯಕತೆಯು ಒಂದಾನೊಂದು ಕಾಲಕ್ಕೆ ಇದ್ದಿರಬಹುದು. ಇಂದು ಇವುಗಳ ಆವಶ್ಯಕತೆಯಿಲ್ಲ." ವಲ್ಲಭಭಾಯಿ ಅಂದರು: "ಆದರೆ ಈ ಜನರ ರೀತಿರಿವಾಜುಗಳು ಬೇರೆಯಾಗಿವೆ. ಇವರು ಮಾಂಸಾಹಾರಿ, ನಾವು ಶಾಕಾಹಾರಿ. ಯಾವ ಪ್ರಕಾರ ಹೊಂದಬೇಕು?" ಬಾಪೂ: "ಇಲ್ಲ ಭಾಯಿ, ಗುಜರಾತದ ಹೊರತಾಗಿ ಮತ್ತೆಲ್ಲಿಯಾದರೂ ಹಿಂದುಗಳು ಶಾಕಾಹಾರಿ ಇರುವರೆ? ಪಂಜಾಬ, ಯುಕ್ತಪ್ರಾಂತ ಮತ್ತು ಸಿಂಧದಲ್ಲಿಯಂತೂ ಎಲ್ಲರೂ ಮಾಂಸಾಹಾರಿಗಳೆಂದೇ ಹೇಳಬಹುದು. . . . ಈಗಂತೂ ಎಲ್ಲವನ್ನೂ ಒಂದೆ ಕಡೆಯಲ್ಲಿ ಸುಟ್ಟು ತೆಗೆಯಲಾಗುತ್ತಿದೆ. ಆದಷ್ಟೆಲ್ಲ ಒಳಿತಿಗಾಗಿಯೇ ಆಗುವದು ಎಂಬ ಮಾತಿನಲ್ಲಿ ವಿಶ್ವಾಸವಿಡತಕ್ಕದ್ದು."

ಇವತ್ತು ಬಾಪೂರನ್ನು ನೋಡಲಿಕ್ಕೆ ಸಿವ್ಹಿಲ ಸರ್ಜನ್ನನು ಬಂದಿದ್ದ. ಉಪಕಾರ ಮಾಡಲಿಕ್ಕೆ ಬಂದವನಂತೆ ಬಾಪೂ ಅವರ ಎದೆಯ ಮೇಲೆ ಕಿವಿಗೆ ಹಚ್ಚುವ ಳಳಿಗೆಯನ್ನಿಟ್ಟು ಮಾತಾಡಿದ: "ನನ್ನ ಎದೆಯು ಇಷ್ಟು ಚನ್ನಾಗಿದ್ದರೆ ನನಗೆ ಹಿಡಿಸಲಾರದಷ್ಟು ಆನಂದವಾಗುತ್ತಿತ್ತು." ತೀರಿತು, ಇಷ್ಟು ಹೇಳಿ ಮುಂದೆ ಹೊರಟುಹೋದ. ಬಾಪೂ ತಮ್ಮ ಮುಂಗೈ ಸಂದು ಹಾಗೂ ಹೆಬ್ಬಟ್ಟಿನ ನೋವಿನ ಮಾತನ್ನೇ ಎತ್ತಲಿಲ್ಲ. ನನ್ನ ಕಾಲು ನೋಡಿದನು, ಆದರೆ ಅವನ ಹತ್ತಿರ ಯಾವ ಉಪಾಯವೂ ಇದ್ದಿಲ್ಲ. ಬಿಟ್ಟಿಯನ್ನು ಮಾಡಲು ಬಂದವನಂತೆ ಅನಿಸಿತು. ಬಾಪೂ ಅವರ ಜೊತೆಗೆ ಮಾತಾಡುವ ಲಾಲಸೆಯನ್ನು ಬಿಟ್ಟು ಹೀಗೆ ಸುಮ್ಮನೆ ಹೊರಟು ಹೋಗುವ ಸಿವ್ಹಿಲಸರ್ಜನ್ನನು ಇನ್ನೊಬ್ಬನಾವನೂ ಇರಲಿಕ್ಕಿಲ್ಲ. ಈ ಮನುಷ್ಯನ ಸಂಯಮವಾದರೂ ಎಷ್ಟು ದೊಡ್ಡದಾಗಿದೆ!

ಜಾನ ಆ್ಯಂಡರಸನ್ನನು ಎಲ್ಲರ ಸರ್ಟಿಫಿಕೇಟುಗಳನ್ನು ತೆಗೆದುಕೊಂಡು ಬಂದಿದ್ದಾನೆ. ಇವನ ವಿಷಯವಾಗಿ ತೆಗೆದ ಲಾಸ್ಕಿಯವರ ಉದ್ಗಾರಗಳನ್ನು ಬಾಪೂ ಅವರಿಗೆ ತೋರಿಸಲಾಯಿತು. ಬಾಪೂ ಹೇಳತೊಡಗಿದರು: "ನಿಜವಿರ-ಬಹುದು, ಒಂದು ವೇಳೆ ಈ ಮನುಷ್ಯನು ಹೀಗಿದ್ದರೆ ಬಂಗಾಲವನ್ನು ವಶದಲ್ಲಿ ತೆಗೆದು ಕೊಳ್ಳುವನು. ಸುಭಾಷ, ಸೇನಗುಪ್ತ ಮೊದಲಾದವರಿಗೆ ತಿಳಿಸಿ ಹೇಳುವನು, ಕಾಂಗ್ರೆಸ್ಸಿನ ಉಪೇಕ್ಷೆ ಮಾಡುವನು, ಪಂಜಾಬದಲ್ಲಿ ಕೂಡ ಹೀಗೆಯೆ ಆಗುವದೆಂದು ನನಗೆ ಅನಿಸುತ್ತದೆ. ಇಡೀ ಹಿಂದುಸ್ಥಾನದಲ್ಲಿ ಒಂದೇ ಸಲ ಶಾಂತಿಸ್ಥಾಪನೆಯಾಗುವದೆಂದು ನನಗೆ ಅನಿಸುವದಿಲ್ಲ. ಈ ಜನರು ಒಂದೊಂದೇ ಪ್ರಾಂತವನ್ನು ಶಾಂತ ಮಾಡುತ್ತ ಹೋಗುವರೆಂದು ನನ್ನ ಕಲ್ಪನೆ."

* * *

ವ್ಹರಾಂಡಾದಲ್ಲಿ ಮಲಗುವದರ ಬದಲು ಹೊರಗೆ ಮಲಗಲಿಕ್ಕೆ ನನಗೆ ಬಾಪೂ ಒತ್ತಾಯ ಮಾಡಿದರು. ಮೇಜರನಿಗೆ ಹೇಳಿ ನನ್ನ ಸಲುವಾಗಿ ಒಂದು ಹೊರಸನ್ನು ತರಿಸಿದರು.

ಇವತ್ತು ಮೇಜರನು ಹೆಣ್ಣುಮಕ್ಕಳ ವಿಷಯವಾಗಿ ಹೇಳುತ್ತಿದ್ದ: "ಮೂವತ್ತು ನಾಲ್ವತ್ತು ಹೆಣ್ಣುಮಕ್ಕಳು ನಿಮಗೆ ಪತ್ರ ಬರೆಯಬೇಕೆನ್ನುತ್ತಾರೆ. ಅವರ ಬಗ್ಗೆ ಏನು ಮಾಡಬೇಕು? ತಮ್ಮ ಹೆಸರು ಬರೆದು ಕಳಿಸಿದರೆ ಕೆಲಸ ನಡೆಯಲಿಕ್ಕಿಲ್ಲವೆ?" ಬಾಪೂ ಹೇಳಿದರು: "ಅವರು ಅಪೇಕ್ಷಿಸುತ್ತಿದ್ದರೆ ನಾನು ಅವರಿಗೆ ಉದ್ದ ಬರೆಯುವೆ ಮೂರು ನಾಲ್ಕು ಸಾಲು ಬರೆದು ಸಂತುಷ್ಟರಾಗಬೇಕೆಂದು ಹೇಳುವೆ. ಅಂದರೆ ಹೇಗಾಗುವದು? ಅವರು ಮೂರು ನಾಲ್ಕು ಸಾಲು ಬರೆದು ಸಂತುಷ್ಟರಾಗುತ್ತಿದ್ದರೆ ಅವರನ್ನು ಏಕೆ ನಿರಾಶರನ್ನಾಗಿ ಮಾಡುತ್ತೀರಿ? ಅವರೆಲ್ಲರೂ ಸರಳ ಪ್ರಾಣಿಗಳಾಗಿದ್ದಾರೆ."

ಇಂದಿನ ' ಲೀಡರ 'ದಲ್ಲಿ ಬಂದ ಲಂಡನ್ನಿನ ಪತ್ರವು ಚನ್ನಾಗಿತ್ತು. ಸಾಮಾನ್ಯವಾಗಿ ಪ್ರೇಲಕರು ಸೌಮ್ಯ ಶಬ್ದಗಳಲ್ಲಿಯೇ ಬರೆಯುತ್ತಾರೆ. ಆದರೆ ಈ ಸಾರೆ

ಅವರು ಹಿಂದುಸ್ತಾನದ ಘಟನೆಗಳ ಬಗ್ಗೆ ಒಳ್ಳೇ ತಪ್ಪಾಗಿ

೩೧-೩-'೩೨ ಬರೆದಿದ್ದಾರೆ. ಬಾ ಇವರಿಗೆ 'ಸಿ' ಕ್ಲಾಸು ಕೊಟ್ಟು ಬಳಿಕ 'ಎ'

ಕ್ಲಾಸು ಕೊಡಲಾಯಿತು, ಮತ್ತು ಕರಾಚಿಯಲ್ಲಿಯು ಒಬ್ಬ ಎಂಬತ್ತು ವರುಷದ ಮುದುಕಿಯನ್ನು ಬಂಧಿಸಲಾಯಿತು. ಈ ವಿಷಯಗಳ ಮೇಲೆ ಅವರು ಚನ್ನಾಗಿ ಬರೆದಿದ್ದಾರೆ. ಬಾ ಗಾಂಧೀಜಿಯವರ ಪತ್ನಿಯಾದದ್ದರಿಂದ 'ಸಿ' ಕ್ಲಾಸು ಬದಲು ಮಾಡಿ 'ಎ' ಕ್ಲಾಸಿನಲ್ಲಿಡಲಾಯಿತು. ಬೇರೆ ಯಾವುದೊ ಒಬ್ಬ ೬೦ ವರುಷದ ಹೆಂಗಸಿದ್ದರೆ 'ಸಿ' ಕ್ಲಾಸಿನಲ್ಲಿಯೆ ಇಡುತ್ತಿದ್ದರಲ್ಲವೇ ? ಅವರ ಈ ವಾದಸರಣಿ ಯೋಗ್ಯವಾಗಿದೆ. ಸಾಮ್ಯುಅಲ್ ಹೋರನ ಸಲುವಾಗಿ ಬರೆದದ್ದು ಇದಕ್ಕೂ ಉತ್ತಮವಾಗಿದೆ. ಹಿಂದುಸ್ತಾನದಲ್ಲಿ ಇವೆಲ್ಲ ನಡೆದಾಗ ಸಾಮ್ಯುಅಲ್‌ರು 'ಸ್ಟೇಪ' ಅನುತ್ತಾರೆ! 'ಆನೆ ಹೋಗುತ್ತದೆ ನಾಯಿ ಬೊಗಳುತ್ತದೆ' ಎಂಬ ರೂಪಕವು ಇಲ್ಲಿ ಇವರಿಗೆ ಅನ್ವಯಿಸದಿರಬಹುದು. ಆದರೆ ಆನೆಗಳು ಕೈಗೆ ಸಿಕ್ಕದಷ್ಟು ದೂರ ಹೋದ ಮೇಲೆ ನಾಯಿಗಳು ಮಾತ್ರ ಬೊಗಳುತ್ತ ನಿಲ್ಲಬಹುದು. ಆಗ ಪರಿಸ್ಥಿತಿಯನ್ನು ಸುಧಾರಿಸುವದು ತುಂಬ ಕಷ್ಟವಾದೀತು, ಎಂದು ಬರೆದು ಅವರು ಹೋರರಿಗೆ ' ಎಚ್ಚರಿಕೆ ' ಕೊಟ್ಟಿದ್ದಾರೆ.

ಬಾಪೂ ಮಾತಾಡಿದರು: "ಸರಿ, ಇದು ಫಿರೋಜಶಹಾ ಮೇಥಾರವರು ಆಡಿದಂಥ ಮಾತಾಯಿತು. ಅವರಿಗೆ ದಕ್ಷಿಣ ಆಫ್ರಿಕೆಯ ಹೋರಾಟದ ಬಗ್ಗೆ ಏನೂ ಚಿಂತೆಯಿರಲಿಲ್ಲ. ಆದರೆ ಬಾ ಅವರನ್ನು ಹಿಡಿದ ಸುದ್ದಿ ಕೇಳಿದ ಕೂಡಲೇ ಅವರಿಗೆ ಚಿಂಕಿ ಬಿದ್ದಂತಾಗಿ ಟಾವುನ್‌ಹಾಲದಲ್ಲಿ ಅವರು ಪ್ರಸಿದ್ಧ ಭಾಷಣ ಮಾಡಿದರು. ಹ್ರೋಲಕರಿಗೆ ಬಾ ಅವರ ವಿಷಯದ ಸುದ್ದಿಯು ಸಹನವಾಗದ್ದರಿಂದ ಇದನ್ನು ಬರೆದಿದ್ದಾರೆ."

ವಲ್ಲಭಭಾಯಿ : " ಬಾ ಅವರ ಮಾತು ಎಲ್ಲರಿಗೂ ಚುಚ್ಚುವಂತಹದೇ ಆಗಿದೆ. ಬಾ ಅಹಿಂಸೆಯ ಮೂರ್ತಿಯಾಗಿದ್ದಾರೆ. ಇಂಥ ಅಹಿಂಸೆಯ ಮುಖಚರ್ಯೆಯನ್ನು ನಾನು ಬೇರೆ ಯಾವ ಸ್ತ್ರೀಯ ಮುಖದ ಮೇಲೂ ನೋಡಿಲ್ಲ. ಅವರ ಅಪಾರವಾದ ನಮ್ರತೆ ಸರಳತೆಗಳು ಯಾರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡುವಂತಹವಾಗಿವೆ."

ಬಾಪೂ : " ವಲ್ಲಭಭಾಯಿ, ಇದು ಸರಿಯಾದ ಮಾತು. ಆದರೆ ಬಾ ಅವಳ ಎಲ್ಲಕ್ಕೂ ದೊಡ್ಡ ಗುಣವೆಂದರೆ ಅವಳ ಧೈರ್ಯ ಮತ್ತು ಶೂರತನಗಳೆಂದು ನನಗೆ ಅನಿಸುತ್ತದೆ. ಅವಳು ಹಟ ಮಾಡಬಹುದು, ಸಿಟ್ಟು ಮಾಡಬಹುದು, ಈರ್ಷೆ ಮಾಡಬಹುದು. ಆದರೆ ಇಷ್ಟೆಲ್ಲ ಆದಮೇಲೂ ದಕ್ಷಿಣ ಆಫ್ರಿಕೆಯಿಂದ ಇದುವರೆಗಿನ ಅವಳ ಕಾರ್ಯಪಟುತ್ವವನ್ನು ನೋಡಿದರೆ ಅವಳ ಶೂರತನವು ಉಳಿದೇ ಉಳಿಯುತ್ತದೆ."

ಬೆಳಿಗ್ಗೆ 'ಆತ್ಮಕಥೆ'ಯ ಸಂಕ್ಷಿಪ್ತ ಸಂಸ್ಕರಣದ ಪ್ರೂಫ್ ನೋಡುತ್ತ ನಾನುಬಾಪೂಗೆ ಕೇಳಿದೆ: "ನೀವು ನಿಮ್ಮ ತಾಯಿಯ ಏಕಾದಶೀ, ಚಾತುರ್ಮಾಸ, ಚಾಂದ್ರಾಯಣ ಮುಂತಾದ ಕಠಿಣ ವ್ರತಗಳ ಬಗ್ಗೆ ಬರೆದಿರುವಿರಿ. ಆದರೆ ನೀವುಅಲ್ಲಿ saintliness (ಪವಿತ್ರತೆ) ಶಬ್ದವನ್ನು ಉಪಯೋಗಿಸಿರುವಿರಿ. ಅಲ್ಲಿ ನೀವುಪವಿತ್ರತೆಯ ಬದಲು ತಪಶ್ಚರ್ಯ ಎಂದು ಹೇಳಲಿಚ್ಛಿಸುವದಿಲ್ಲವೊ? ಹಾಗಿದ್ದರೆ austerity ಶಬ್ದವನ್ನು ಉಪಯೋಗಿಸಲು ಬರುವದಿಲ್ಲವೇ?"

ಬಾಪೂ ಹೇಳಿದರು: "ಇಲ್ಲ, ನಾನು ಪವಿತ್ರತೆ ಶಬ್ದವನ್ನು ತಿಳಿದೂ ತಿಳಿದೂ ಹಾಕಿದ್ದೇನೆ. ತಪಶ್ಚರ್ಯದಲ್ಲಿ ತೋರಿಕೆಯ ತ್ಯಾಗ, ಸಹನಶೀಲತೆ, ಮತ್ತು ಆಡಂಬರಗಳೂ ಇರುವ ಸಂಭವವಿದೆ. ಆದರೆ ಪವಿತ್ರತೆಯೆಂಬುದು ಆಂತರಿಕ ಗುಣವಾಗಿದೆ. ನನ್ನ ತಾಯಿಯ ಆಂತರಿಕ ಜೀವನದ ಪಡಿನೆರಳು ಅವಳ ತಪಶ್ಚರ್ಯದ ಮೇಲೆ ಬೀಳುತ್ತಿತ್ತು. ನನ್ನಲ್ಲಿ ನೀನು ಏನಾದರೂ ಪವಿತ್ರತೆಯನ್ನು ನೋಡುತ್ತಿದ್ದರೆ ಅದು ನನ್ನ ತಾಯಿಯಿಂದ ಬಂದದ್ದು, ತಂದೆಯಿಂದಲ್ಲ. ನನ್ನ ತಾಯಿಯು ತನ್ನ ವಯಸ್ಸಿನ ನಾಲ್ವತ್ತನೇ ವರ್ಷಕ್ಕೆ ತೀರಿಕೊಂಡಳು. ಆದುದರಿಂದ ನಾನು ಅವಳ ತುಂಬಿದ ಯೌವನವನ್ನು ನೋಡಿದ್ದೇನೆ. ಆದರೆ ಅವಳಲ್ಲಿ ಉಚ್ಛೃಂಖಲತೆಯನ್ನಾಗಲಿ, ಬೆಡುಗುಗಾರಿಕೆಯನ್ನಾಗಲಿ, ಆಡಂಬರವನ್ನಾಗಲಿ ನೋಡಲಿಲ್ಲ. ನನ್ನ ಮೇಲೆ ಅವಳ ಪವಿತ್ರತೆಯ ಮುದ್ರೆಯು ನಿರಂತರವಾಗಿ ಉಳಿದಿರುತ್ತದೆ."

ಬೇಕರಿಯುವನು ಒಂದು ಬೆಕ್ಕನ್ನು ಸಾಕಿದ್ದಾನೆ. ಈ ಬೆಕ್ಕಿಗೆ ಎರಡು ಮರಿಗಳಾಗಿವೆ. ಅವು ಈಗ ಹೊರಬೀಳಹತ್ತಿವೆ. ಬಾಪುವಿನ ನುಣುಪಾದ ಬರಿಗಾಲಿನ ಹತ್ತಿರ ಆ ಬೆಕ್ಕು ಬಹಳ ಹೊತ್ತು ತಿರುಗಾಡುತ್ತಿತ್ತು. ನಿನ್ನೆ

**೧-೪'-೩೨** ಬೆಳಿಗ್ಗೆ ಮರಿಗಳನ್ನು ತೆಗೆದುಕೊಂಡು ಬಂತು. ಮರಿಗಳು ಚಿನ್ನಾಟವಾಡತೊಡಗಿದವು. ಬೆಕ್ಕಿನ ಬಾಲಕ್ಕೆ ಇಲಿ ಎಂದು ತಿಳಿದು ಆ ಮರಿಗಳು ದೂರದಿಂದ ಓಡುತ್ತ ಓಡುತ್ತ ಬಂದು ಆ ಬಾಲವನ್ನು ಬಾಯಲ್ಲಿ ಹಿಡಿಯುತ್ತಿದ್ದವು. ಕಚ್ಚುತ್ತಿದ್ದವು. ಬೆಕ್ಕು ಬಾಲವನ್ನು ಕೊಸರಿಕೊಳ್ಳುತ್ತಿತ್ತು ಮತ್ತೆ ಅದನ್ನು ಉದ್ದಮಾಡುತ್ತಿತ್ತು. ಕೂಡಲೇ ಮತ್ತೆ ಆ ಮರಿಗಳು ಬಾಲವನ್ನು ಬಾಯಲ್ಲಿ ತೆಗೆದುಕೊಂಡು ಒತ್ತಿ ಹಿಡಿಯುತ್ತಿದ್ದವು, ಕಚ್ಚುತ್ತಿದ್ದವು. ಈ ಪ್ರಕಾರ ಚಿನ್ನಾಟವಾಡುತ್ತಿದ್ದವು. ಬಾಪೂ 'ರಸ್ಕಿನ್' ಓದುತ್ತಿದ್ದುದನ್ನು ಬಿಟ್ಟು ಎಷ್ಟೋ ನಿಮಿಷಗಳವರೆಗೆ ಈ ಆಟವನ್ನು ನೋಡುತ್ತಿದ್ದರು.

ಇಂದು ಕುರೇಶಿ ಮತ್ತು ಇಬ್ಬರು ಮಹಾರಾಷ್ಟ್ರೀಯ ಬಂಧುಗಳು ಕ್ಯಾಂಪಿನಿಂದ ಭೆಟ್ಟಿಗೆ ಬಂದಿದ್ದರು. ಈ ಜನರ ಸಂಗಡ ಮಾತಾಡುವದರಲ್ಲಿ ಬಾಪೂಗೆ ನೂಲಲಿಕ್ಕೆ

ಇಂದಿನ ' ಲೀಡರ 'ದಲ್ಲಿ ಬಂದ ಲಂಡನ್ನಿನ ಪತ್ರವು ಚನ್ನಾಗಿತ್ತು. ಸಾಮಾನ್ಯವಾಗಿ ಪ್ರೋಲಕರು ಸೌಮ್ಯ ಶಬ್ದಗಳಲ್ಲಿಯೇ ಬರೆಯುತ್ತಾರೆ. ಆದರೆ ಈ ಸಾರೆ ಅವರು ಹಿಂದುಸ್ಥಾನದ ಘಟನೆಗಳ ಬಗ್ಗೆ ಒಳ್ಳೇ ತಪ್ತರಾಗಿ

೩೧-೩-'೩೨ ಬರೆದಿದ್ದಾರೆ. ಬಾ ಇವರಿಗೆ 'ಸಿ' ಕ್ಲಾಸು ಕೊಟ್ಟು ಬಳಿಕ 'ಎ' ಕ್ಲಾಸು ಕೊಡಲಾಯಿತು, ಮತ್ತು ಕರಾಚಿಯಲ್ಲಿಯ ಒಬ್ಬ ಎಂಬತ್ತು ವರುಷದ ಮುದುಕಿಯನ್ನು ಬಂಧಿಸಲಾಯಿತು. ಈ ವಿಷಯಗಳ ಮೇಲೆ ಅವರು ಚನ್ನಾಗಿ ಬರೆದಿದ್ದಾರೆ. ಬಾ ಗಾಂಧೀಜಿಯವರ ಪತ್ನಿಯಾದದ್ದರಿಂದ 'ಸಿ' ಕ್ಲಾಸು ಬದಲು ಮಾಡಿ 'ಎ' ಕ್ಲಾಸಿನಲ್ಲಿಡಲಾಯಿತು. ಬೇರೆ ಯಾವುದೊ ಒಬ್ಬ ೬೦ ವರುಷದ ಹೆಂಗಸಿದ್ದರೆ 'ಸಿ' ಕ್ಲಾಸಿನಲ್ಲಿಯೆ ಇಡುತ್ತಿದ್ದರಲ್ಲವೇ ? ಅವರ ಈ ವಾದಸರಣಿ ಯೋಗ್ಯವಾಗಿದೆ. ಸಾಮ್ಯುಅಲ್ ಹೋರನ ಸಲುವಾಗಿ ಬರೆದದ್ದು ಇದಕ್ಕೂ ಉತ್ತಮವಾಗಿದೆ. ಹಿಂದುಸ್ಥಾನದಲ್ಲಿ ಇದೆಲ್ಲ ನಡೆದಾಗ ಸಾಮ್ಯುಅಲ್‌ರು 'ಸ್ಲೀಪ' ಆಡುತ್ತಾರೆ! 'ಆನೆ ಹೋಗುತ್ತದೆ ನಾಯಿ ಬೊಗಳುತ್ತದೆ' ಎಂಬ ರೂಪಕವು ಇಲ್ಲಿ ಇವರಿಗೆ ಅನ್ವಯಿಸದಿರಬಹುದು. ಆದರೆ ಆನೆಗಳು ಕೈಗೆ ಸಿಕ್ಕದಷ್ಟು ದೂರ ಹೋದ ಮೇಲೆ ನಾಯಿಗಳು ಮಾತ್ರ ಬೊಗಳುತ್ತ ನಿಲ್ಲಬಹುದು. ಆಗ ಪರಿಸ್ಥಿತಿಯನ್ನು ಸುಧಾರಿಸುವದು ತುಂಬ ಕಷ್ಟವಾದೀತು, ಎಂದು ಬರೆದು ಅವರು ಹೋರರಿಗೆ 'ಎಚ್ಚರಿಕೆ' ಕೊಟ್ಟಿದ್ದಾರೆ.

ಬಾಪೂ ಮಾತಾಡಿದರು: "ಸರಿ, ಇದು ಫಿರೋಜಶಹಾ ಮೇಥಾರವರು ಆಡಿದಂಥ ಮಾತಾಯಿತು. ಅವರಿಗೆ ದಕ್ಷಿಣ ಆಫ್ರಿಕೆಯ ಹೋರಾಟದ ಬಗ್ಗೆ ಏನೂ ಚಿಂತೆಯಿರಲಿಲ್ಲ. ಆದರೆ ಬಾ ಅವರನ್ನು ಹಿಡಿದ ಸುದ್ದಿ ಕೇಳಿದ ಕೂಡಲೇ ಅವರಿಗೆ ಬೆಂಕಿ ಬಿದ್ದಂತಾಗಿ ಟಾವುನ್‌ಹಾಲದಲ್ಲಿ ಅವರು ಪ್ರಸಿದ್ಧ ಭಾಷಣ ಮಾಡಿದರು. ಪ್ರೋಲಕರಿಗೆ ಬಾ ಅವರ ವಿಷಯದ ಸುದ್ದಿಯು ಸಹನವಾಗದ್ದರಿಂದ ಇದನ್ನು ಬರೆದಿದ್ದಾರೆ."

ವಲ್ಲಭಭಾಯಿ : " ಬಾ ಅವರ ಮಾತು ಎಲ್ಲರಿಗೂ ಚುಚ್ಚುವಂತಹದೇ ಆಗಿದೆ. ಬಾ ಅಹಿಂಸೆಯ ಮೂರ್ತಿಯಾಗಿದ್ದಾರೆ. ಇಂಥ ಅಹಿಂಸೆಯ ಮುಖಚರ್ಯೆಯನ್ನು ನಾನು ಬೇರೆ ಯಾವ ಸ್ತ್ರೀಯ ಮುಖದ ಮೇಲೂ ನೋಡಿಲ್ಲ. ಅವರ ಅಪಾರವಾದ ನಮ್ರತೆ ಸರಳತೆಗಳು ಯಾರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡುವಂತಹವಾಗಿವೆ."

ಬಾಪೂ : " ವಲ್ಲಭಭಾಯಿ, ಇದು ಸರಿಯಾದ ಮಾತು. ಆದರೆ ಬಾ ಅವಳ ಎಲ್ಲಕ್ಕೂ ದೊಡ್ಡ ಗುಣವೆಂದರೆ ಅವಳ ಧೈರ್ಯ ಮತ್ತು ಶೂರತನಗಳೆಂದು ನನಗೆ ಅನಿಸುತ್ತದೆ. ಅವಳು ಹಟ ಮಾಡಬಹುದು, ಸಿಟ್ಟುಮಾಡಬಹುದು, ಈರ್ಷೆ ಮಾಡಬಹುದು. ಆದರೆ ಇಷ್ಟೆಲ್ಲ ಆದಮೇಲೂ ದಕ್ಷಿಣ ಆಫ್ರಿಕೆಯಿಂದ ಇದುವರೆಗಿನ ಅವಳ ಕಾರ್ಯಪಟುತ್ವವನ್ನು ನೋಡಿದರೆ ಅವಳ ಶೂರತನವು ಉಳಿದೇ ಉಳಿಯುತ್ತದೆ."

ಬೆಳಿಗ್ಗೆ 'ಆತ್ಮಕಥೆ'ಯ ಸಂಕ್ಷಿಪ್ತ ಸಂಸ್ಕರಣದ ಪ್ರೂಫ್ ನೋಡುತ್ತ ನಾನುಬಾಪೂಗೆ ಕೇಳಿದೆ: "ನೀವು ನಿಮ್ಮ ತಾಯಿಯ ಏಕಾದಶೀ, ಚಾತುರ್ಮಾಸ, ಚಾಂದ್ರಾಯಣ ಮುಂತಾದ ಕಠಿಣ ವ್ರತಗಳ ಬಗ್ಗೆ ಬರೆದಿರುವಿರಿ. ಆದರೆ ನೀವುಅಲ್ಲಿ saintliness (ಪವಿತ್ರತೆ) ಶಬ್ದವನ್ನು ಉಪಯೋಗಿಸಿರುವಿರಿ. ಅಲ್ಲಿ ನೀವುಪವಿತ್ರತೆಯ ಬದಲು ತಪಶ್ಚರ್ಯ ಎಂದು ಹೇಳಲಿಚ್ಛಿಸುವದಿಲ್ಲವೊ? ಹಾಗಿದ್ದರೆ austerity ಶಬ್ದವನ್ನು ಉಪಯೋಗಿಸಲು ಬರುವದಿಲ್ಲವೇ?"

ಬಾಪೂ ಹೇಳಿದರು: "ಇಲ್ಲ, ನಾನು ಪವಿತ್ರತೆ ಶಬ್ದವನ್ನು ತಿಳಿದೂ ತಿಳಿದೂ ಹಾಕಿದ್ದೇನೆ. ತಪಶ್ಚರ್ಯದಲ್ಲಿ ತೋರಿಕೆಯ ತ್ಯಾಗ, ಸಹನಶೀಲತೆ, ಮತ್ತು ಆಡಂಬರಗಳೂ ಇರುವ ಸಂಭವವಿದೆ. ಆದರೆ ಪವಿತ್ರತೆಯೆಂಬುದು ಆಂತರಿಕ ಗುಣವಾಗಿದೆ. ನನ್ನ ತಾಯಿಯ ಆಂತರಿಕ ಜೀವನದ ಪಡಿನೆರಳು ಅವಳ ತಪಶ್ಚರ್ಯದ ಮೇಲೆ ಬೀಳುತ್ತಿತ್ತು. ನನ್ನಲ್ಲಿ ನೀನು ಏನಾದರೂ ಪವಿತ್ರತೆಯನ್ನು ನೋಡುತ್ತಿದ್ದರೆ ಆದು ನನ್ನ ತಾಯಿಯಿಂದ ಬಂದದ್ದು, ತಂದೆಯಿಂದಲ್ಲ. ನನ್ನ ತಾಯಿಯು ತನ್ನ ವಯಸ್ಸಿನ ನಾಲ್ವತ್ತನೇ ವರ್ಷಕ್ಕೆ ತೀರಿಕೊಂಡಳು. ಆದುದರಿಂದ ನಾನು ಅವಳ ತುಂಬಿದ ಯೌವನವನ್ನು ನೋಡಿದ್ದೇನೆ. ಆದರೆ ಅವಳಲ್ಲಿ ಉಚ್ಛೃಂಖಲತೆಯನ್ನಾಗಲಿ, ಬೆಡಗುಗಾರಿಕೆಯನ್ನಾಗಲಿ, ಆಡಂಬರವನ್ನಾಗಲಿ ನೋಡಲಿಲ್ಲ. ನನ್ನ ಮೇಲೆ ಅವಳ ಪವಿತ್ರತೆಯ ಮುದ್ರೆಯು ನಿರಂತರವಾಗಿ ಉಳಿದಿರುತ್ತದೆ."

ಬೇಕರಿಯವನು ಒಂದು ಬೆಕ್ಕನ್ನು ಸಾಕಿದ್ದಾನೆ. ಈ ಬೆಕ್ಕಿಗೆ ಎರಡು ಮರಿಗಳಾಗಿವೆ. ಅವು ಈಗ ಹೊರಬೀಳಹತ್ತಿವೆ. ಬಾಪುವಿನ ಸುಣುಪಾದ ಬರಿಗಾಲಿನ ಹತ್ತಿರ ಆ ಬೆಕ್ಕು ಬಹಳ ಹೊತ್ತು ತಿರುಗಾಡುತ್ತಿತ್ತು. ನಿನ್ನೆ

**೧-೪'-೩೨** ಬೆಳಿಗ್ಗೆ ಮರಿಗಳನ್ನು ತೆಗೆದುಕೊಂಡು ಬಂತು. ಮರಿಗಳು ಚಿನ್ನಾಟವಾಡತೊಡಗಿದವು. ಬೆಕ್ಕಿನ ಬಾಲಕ್ಕೆ ಇಲಿ ಎಂದು ತಿಳಿದು ಆ ಮರಿಗಳು ದೂರದಿಂದ ಓಡುತ್ತ ಓಡುತ್ತ ಬಂದು ಆ ಬಾಲವನ್ನು ಬಾಯಲ್ಲಿ ಹಿಡಿಯುತ್ತಿದ್ದವು. ಕಚ್ಚುತ್ತಿದ್ದವು. ಬೆಕ್ಕು ಬಾಲವನ್ನು ಕೊಸರಿಕೊಳ್ಳುತ್ತಿತ್ತು ಮತ್ತೆ ಆದನ್ನು ಉದ್ದಮಾಡುತ್ತಿತ್ತು. ಕೂಡಲೇ ಮತ್ತೆ ಆ ಮರಿಗಳು ಬಾಲವನ್ನು ಬಾಯಲ್ಲಿ ತೆಗೆದುಕೊಂಡು ಒತ್ತಿ ಹಿಡಿಯುತ್ತಿದ್ದವು, ಕಚ್ಚುತ್ತಿದ್ದವು. ಈ ಪ್ರಕಾರ ಚಿನ್ನಾಟವಾಡುತ್ತಿದ್ದವು. ಬಾಪೂ 'ರಸ್ಕಿನ್' ಓದುತ್ತಿದ್ದುದನ್ನು ಬಿಟ್ಟು ಎಷ್ಟೋ ನಿಮಿಷಗಳವರೆಗೆ ಈ ಆಟವನ್ನು ನೋಡುತ್ತಿದ್ದರು.

ಇಂದು ಕುರೇಶಿ ಮತ್ತು ಇಬ್ಬರು ಮಹಾರಾಷ್ಟ್ರೀಯ ಬಂಧುಗಳು ಕ್ಯಾಂಪಿನಿಂದ ಭೆಟ್ಟಿಗೆ ಬಂದಿದ್ದರು. ಈ ಜನರ ಸಂಗಡ ಮಾತಾಡುವದರಲ್ಲಿ ಬಾಪೂಗೆ ನೂಲಲಿಕ್ಕೆ

ತಡವಾಯಿತು. ಆದುದರಿಂದ ಮಧ್ಯಾಹ್ನದ ನಿದ್ರೆ ತಪ್ಪಿಹೋಯಿತು. ಹೆಣ್ಣುಮಕ್ಕಳ ಪತ್ರಗಳೂ ಇಂದು ಬಂದವು. ಎಲ್ಲರೂ ಆನಂದದಲ್ಲಿದ್ದು ಉದ್ಯೋಗದಲ್ಲಿ ದಿನಗಳನ್ನು ಕಳೆಯುತ್ತಾರೆ.

ಇವತ್ತು ಸಾಯಂಕಾಲ ತಿರುಗಾಡುವಾಗ ಯಾವದೋ ಒಂದು ಸಂದರ್ಭದಲ್ಲಿ ಅಂಬೇಡಕರರ ಮಾತು ಹೊರಟಿತು. ಬಾಪೂ ಅಂದರು: "ನಾನು ವಿಲಾಯತಿಗೆ ಹೋಗುವವರೆಗೆ ಈ ಅಂಬೇಡಕರನು ಅಸ್ಪೃಶ್ಯನಿದ್ದಾನೆಂಬುದು ನನಗೆ ಗೊತ್ತಿರಲಿಲ್ಲ. ಅವನು ಯಾವದೋ ಒಬ್ಬ ಬ್ರಾಹ್ಮಣನಿದ್ದಾನೆಂದು ನಾನು ತಿಳಿದಿದ್ದೆ. ಇವನಿಗೆ ಅಸ್ಪೃಶ್ಯರ ಬಗ್ಗೆ ಬಹಳ ಮನಸ್ಸಿಗೆ ಹತ್ತಿದ್ದರಿಂದ ಆವೇಶದಲ್ಲಿ ಬಂದು ಅತಿಶಯೋಕ್ತಿಯಿಂದ ತುಂಬಿದ ಮಾತುಗಳನ್ನಾಡುತ್ತಾನೆ ಎಂದು ನಾನು ತಿಳಿದುಕೊಂಡಿದ್ದೆ." ವಲ್ಲಭಭಾಯಿ ಹೇಳಿದರು: "ನನಗೆ ಇಷ್ಟು ಮಾತ್ರ ಗೊತ್ತಿತ್ತು. ಯಾಕಂದರೆ ಅವರು ಗುಜರಾತದಲ್ಲಿ ಠಕ್ಕರರ ಸಂಗಡ ತಿರುಗಾಡಿದಾಗ ನನ್ನ ಪರಿಚಯವಾಗಿತ್ತು." ಹಿಂದಿನಿಂದ ಠಕ್ಕರಬಾಪಾ ಅವರ ವಿಷಯಕ್ಕೂ ಸರ್ವ್ಹಂಟ್ಸ್ ಆಫ್ ಇಂಡಿಯಾದವರ ಅಸ್ಪೃಶ್ಯತೆಯು ವಿಷಯಕ್ಕೂ ಮಾತು ಹೊರಟವು. ಬಾಪೂ ಅಂದರು: "ಇಂದು ಈ ಪ್ರಶ್ನೆಯು ತಾಳಿದ ಸ್ವರೂಪಕ್ಕೆ ಈ ವಿಷಯದ ಬಗ್ಗೆ ಮೊದಲಿನಿಂದಲೂ ಇದ್ದ ಈ ಜನರ ವೃತ್ತಿಯೇ ಕಾರಣವಾಗಿದೆ. ೧೯೧೫ರಲ್ಲಿ ಗೋಖಲೆಯವರು ತೀರಿದ ಮೇಲೆ ನಾನು ಪುಣೆಯ ಸರ್ವ್ಹಂಟ್ಸ್ ಆಫ್ ಇಂಡಿಯಾ ಸೊಸಾಯಿಟಿಯ ಹಾಲಿನಲ್ಲಿದ್ದಾಗಲೇ ಇದನ್ನು ಕಂಡುಹಿಡಿದಿದ್ದೇನೆ. ಆ ಪ್ರಸಂಗವು ನನಗೆ ಚನ್ನಾಗಿ ಜ್ಞಾಪಕವಿದೆ. ನಾನು ದೇವಧರರಿಗೆ ಅವರ ಕಾರ್ಯಪ್ರವೃತ್ತಿಗಳ ಸಂಕ್ಷಿಪ್ತ ವರದಿಯನ್ನು ಕೇಳಿದೆ. ಆದರಿಂದ ನಾನು ನನ್ನ ಕೈಯಲ್ಲಿ ಯಾವ ಕೆಲಸಗಳನ್ನು ತೆಗೆದುಕೊಳ್ಳ ತಕ್ಕದ್ದೆಂಬುದು ಗೊತ್ತಾಯಿತು. ಈ ವರದಿಯಲ್ಲಿ ಅಸ್ಪೃಶ್ಯರ ವಿಷಯವಾಗಿ ಹೀಗೆ ಬರೆದಿತ್ತು. 'ಅವರ ಹತ್ತರ ಹೋಗಿ ಭಾಷಣ ಮಾಡುವದು, ಅವರ ಮೇಲೆ ಹೇಗೆ ಅನ್ಯಾಯಗಳಾಗುತ್ತಿವೆಯೆಂಬುದನ್ನು ತಿಳಿಸಿ ಹೇಳಿ ಅವರಲ್ಲಿ ಜಾಗ್ರತಿಮಾಡುವದು ಮುಂತಾದವುಗಳಿದ್ದವು.' 'ನಾನು ದೇವಧರರಿಗೆ ಹೇಳಿಬಿಟ್ಟೆ: ನಾನು ರೊಟ್ಟಿಯನ್ನು ಬೇಡಿದರೆ ಅದಕ್ಕೆ ಬದಲು ಕಲ್ಲು ದೊರೆಯುತ್ತಿದೆ. ಈ ರೀತಿಯಿಂದ ಅಸ್ಪೃಶ್ಯರ ಕೆಲಸ ಹೇಗಾಗಬಲ್ಲದು? ಇದು ಸೇವೆಯಲ್ಲ. ಇದಂತೂ ನಮ್ಮ ಹೇಡಿತನವು. ಅಸ್ಪೃಶ್ಯರ ಉದ್ಧಾರ ಮಾಡುವವರು ನಾವು ಯಾರು? ನಾವು ಅವರ ಮೇಲೆ ಮಾಡಿದ ಅನ್ಯಾಯಕ್ಕಾಗಿ ನಮಗೆ ಪ್ರಾಯಶ್ಚಿತ್ತ ತೆಗೆದುಕೊಳ್ಳ ಬೇಕಾಗಿದೆ. ಋಣ ತೀರಿಸಬೇಕಾಗಿದೆ. ಈ ಕಾರ್ಯವು ಈ ಜನರೊಂದಿಗೆ ಬೆರೆತರೆ ಮಾತ್ರ ಆಗಬಲ್ಲದು; ಅವರೆದುರಿಗೆ ಭಾಷಣ ಮಾಡುವದರಿಂದ ಆಗಲಾರದು.' ಶಾಸ್ತ್ರಿಗಳು ಗಾಬರಿಯಾಗಿ ಮಾತಾಡಿದರು: 'ನೀವು ಈ ಪ್ರಕಾರ ನ್ಯಾಯಾಸನದ ಮೇಲೆ ಕುಳಿತು ಮಾತಾಡುವಿರೆಂದು ನನಗೆ ಅನಿಸಿದ್ದಿಲ್ಲ.' ಹರಿನಾರಾಯಣ ಆಪ್ಟೆಯವರು ಸಹ ತುಂಬ ರೇಗಿದರು.

ನಾನು ಹೇಳಿದೆ : 'ನೀವು ಸಮಾಜದಲ್ಲಿ ಬಂಡೆಬ್ಬಿಸುತ್ತೀರೆಂದು ನನಗೆನಿಸುತ್ತದೆ.' ಅವರು ಅಂದರು : 'ಬಂಡು ಎದ್ದರೂ ಅಡ್ಡಿ ಇಲ್ಲ. ನಾನಂತೂ ಇದನ್ನೇ ಮಾಡುವವನು.' ಈ ಪ್ರಕಾರ ಬಹಳ ವಾದವಿವಾದವಾಯಿತು. ಮರುದಿನ ಶಾಸ್ತ್ರಿ, ದೇವಧರ, ಆಪ್ಟೆ ಎಲ್ಲರಿಗೂ 'ನಿಮ್ಮನ್ನು ನೋಯಿಸೇನೆಂದು ನನಗೆ ಕಲ್ಪನೆಯಿದ್ದಿಲ್ಲ' ಎಂದು ಹೇಳಿ ನಾನು ಕ್ಷಮೆಯನ್ನು ಬೇಡಿದೆ. ಇದರ ಪರಿಣಾಮವು ಅವರ ಮೇಲೆ ಚನ್ನಾಗಿ ಆಯಿತು. ಹಿಂದಿನಿಂದ ನಾವೆಲ್ಲರೂ ಒಂದಾದೆವು." ವಲ್ಲಭಭಾಯಿ : "ನೀವಂತೂ ಎಲ್ಲರ ಸಂಗಡ ಒಂದಾಗುತ್ತೀರಿ. ನಿಮಗೇನಿದೆ ? 'ವೈಶ್ಯನ ಮೀಸೆ ಕೆಳಗೆ,'" ಬಾಪೂ: "ನೋಡಿರಿ, ಅದಕ್ಕಾಗಿ ನಾನು ಮೀಸೆಯನ್ನು ಬೋಳಿಸಿ ಬಿಡುತ್ತೇನಲ್ಲವೆ ?"

೨-೪-'೩೨

ಚಪಾತಿಯನ್ನು ಲಟ್ಟಿಸುವದಕ್ಕಾಗಿ ನನಗೆ ಲಟ್ಟಣಿಯು ಬೇಕಾಗಿತ್ತು. ಇದರ ಸಲುವಾಗಿ ಮನುಷ್ಯನು ಮೂರುನಾಲ್ಕು ಸಾರೆ ಉಗ್ರಾಣಕ್ಕೆ ಹೋಗಿ ಕೇಳಿ ಬಂದ. ಅದು ಬಾರದ್ದರಿಂದ ವಾರ್ಡರನು 'ಇವತ್ತು ಬಾಟ್ಲಿಯಿಂದ ಚಪಾತಿಯನ್ನು ಲಟ್ಟಿಸಿರಿ. ಲಟ್ಟಣಿಯು ನಾಳೆ ಬರುವದು' ಎಂದು ಹೇಳಿದ. 'ಇಲ್ಲಿ ಬಾಟ್ಲಿಯಿಂದ ಚಪಾತಿಗಳನ್ನು ಲಟ್ಟಿಸುವ ಜನರೂ ಇದ್ದಾರೆಂ'ದು ವಲ್ಲಭಭಾಯಿಯವರು ಅಂದರು. ಬಾಪೂ ಹೇಳಿದರು : "ವಲ್ಲಭಭಾಯಿ, ನಿಜವಾಗಿಯೂ ಬಾಟ್ಲಿಯಿಂದ ಚಪಾತಿಗಳನ್ನು ಚನ್ನಾಗಿ ಲಟ್ಟಿಸಲಿಕ್ಕೆ ಬರುತ್ತದೆ." ಬಾಪೂ ಈ ಪ್ರಯೋಗವನ್ನೂ ಮಾಡಿಬಿಟ್ಟಿದ್ದರು "ನೀವು ಫಿನಿಕ್ಸ ಆಶ್ರಮಕ್ಕೆ ಹೋದಿರಲ್ಲ ಅಲ್ಲಿಯ ವರೆಗೆ ಅಡಗಿಯವನಿದ್ದನಲ್ಲವೆ ?" ಎಂದು ನಾನು ಕೇಳಿದೆ. ಬಾಪೂ : "ಇಲ್ಲ. ಅದಕ್ಕಿಂತ ಮೊದಲೇ ಬಿಡಿಸಲಾಗಿತ್ತು. ಒಬ್ಬ ಬ್ರಾಹ್ಮಣ ಅಡಗಿಯವನಿದ್ದ. ತುಂಬ ಒಳ್ಳೆಯವನು. ಅವನು ಬಿಟ್ಟ ಮೇಲೆ ಒಬ್ಬ ಜಿದ್ದೀ ಬಂದ. ಅವನು ಹೇಳತೊಡಗಿದ : 'ಭಾಯೀಸಾಹೇಬ, ನೀವು ಖಾರ ಮುಂತಾದ್ದನ್ನು ಉಪಯೋಗ ಮಾಡಗೊಡದಿದ್ದರೆ ನಡೆಯಲಾರದು.' ಇದಕ್ಕೆ ನಾನು 'ಹಾಗಾದರೆ ಹೊರಟುಹೋಗು' ಎಂದು ಹೇಳಿದೆ. ಅಂದಿನಿಂದ ಅಡಗಿಯವನಿಲ್ಲದೆ ಕೆಲಸ ಸಾಗತೊಡಗಿತು. ಅಡಿಗೆ ಮಾಡುವದು, ಬಟ್ಟೆ ಒಗೆಯುವದು, ಶೌಚಕೂಪ ಸ್ವಚ್ಛ ಮಾಡುವದು, ಬೀಸುವದು ಈ ಎಲ್ಲ ಕೆಲಸಗಳನ್ನು ಮನೆಯಲ್ಲಿ ಕೈಯಿಂದಲೇ ಮಾಡಿಕೊಳ್ಳಲಾಗುತ್ತಿತ್ತು. ಬೀಸುವದಕ್ಕಾಗಿ ೬ ಪೌಂಡು ಬೆಲೆ ಬಾಳುವ ಕಬ್ಬಿಣದ ಬೀಸುವ ಕಲ್ಲನ್ನು ತೆಗೆದುಕೊಂಡಿತ್ತು. ಒಬ್ಬರಿಗೆ ಅದು ಜಡ ಬರುತ್ತಿತ್ತು. ಆದರೆ ಇಬ್ಬರು ಅದರ ಮೇಲೆ ಆಯಾಸವಿಲ್ಲದೆ ಬೀಸಬಹುದಾಗಿತ್ತು. ಬೆಳಗಿನ ಜಾವದಲ್ಲೆದ್ದ ಮೇಲೆ ನನ್ನ ಮೊದಲಿನ ಕೆಲಸವು ಇದೇ ಆಗಿತ್ತು. ಇಷ್ಟಪಟ್ಟವರನ್ನು ನನ್ನ ಸಂಗಡ ಬೀಸಲಿಕ್ಕೆ ಕೂಡ್ರಿಸಿಕೊಳ್ಳುತ್ತಿದ್ದೆ. ನಿಂತುಕೊಂಡು ಬೀಸುವಂತಹ ಬೀಸುವಕಲ್ಲು.

ಗೂಟವನ್ನು ತಿರುಗಿಸಲಿಕ್ಕೂ ಇಬ್ಬರು ಬೇಕಾಗುತ್ತಿದ್ದರು. ಹದಿನೈದು ನಿಮಿಷದಲ್ಲಿ ನಮ್ಮ ಮನೆಯ ಎಲ್ಲ ಹಿಟ್ಟನ್ನೂ ಬೀಸಲಾಗುತ್ತಿತ್ತು. ಅದು ಸಹ ನಮಗೆ ಬೇಕಾದಂತಹದು—ಗಡುತರ ಅಥವಾ ಸಣ್ಣ."

ಬಾರ್ಡೋಲಿಯಲ್ಲಿ ಜನರು ಎಲ್ಲ ರೂಪಾಯಿಗಳನ್ನು ಜಮಾ ಮಾಡಿಸಿದರು, ಜಮಾ ಮಾಡಿಸದ್ದಕ್ಕೆ ವಿಷಾದ ವ್ಯಕ್ತಮಾಡಿದರು. ಕಮಿಶನರನಿಗೆ ಹಾರತುರಾಯಿಗಳನ್ನು ಹಾಕಿದರು. 'ಸರಕಾರಕೀ ಜಯ' ಅಂದರು!! ವಲ್ಲಭಭಾಯಿ ಹೇಳತೊಡಗಿದರು: "ಸರಕಾರದ ಜಯವಂತೂ ಆಗಿದೆ. ಇನ್ನು ನಮ್ಮನ್ನು ಏತಕ್ಕೆ ಬಂಧಿಸಿಟ್ಟಿದ್ದಾರೆಂದು ಸರಕಾರಕ್ಕೆ ಬರೆಯೋಣವೆ?" ಬಾಪೂ: "ಸರಿ, ನನಗೆ ಒಪ್ಪಿಗೆ ಇದೆ!"

ಮ್ಯುರಿಯಲ್ ಲಿಸ್ಟರಳ ಪತ್ರವು ವಿಲಾಯತಿಯ ಹಳೇ ನೆನಪುಗಳನ್ನು ಯಾವಾಗಲೂ ಹೊಸದನ್ನಾಗಿ ಮಾಡುತ್ತಿದೆ. ಅವಳ ಪತ್ರದಲ್ಲಿ ಅತ್ಯುಕ್ತಿ ಇರದಿದ್ದರೆ—ಹಾಗೇನೂ ಅನಿಸುವದಿಲ್ಲ—ಬಾಪುವಿನ ಅಲ್ಲಿಯ

೩–೪–'೩೨ ಇರುವಿಕೆಯ ಪರಿಣಾಮವು ಸಾಮಾನ್ಯ ಜನರಲ್ಲಿ ಚನ್ನಾಗಿ ಉಳಿದಿದೆಯೆಂದು ಹೇಳಬಹುದು.

ಚೀನ–ಜಪಾನ ಯುದ್ಧವನ್ನು ತಡೆಯುವದಕ್ಕಾಗಿ ಮಿಸ್ ಮೊಡ ರಾಯಡನ್ ಮತ್ತು ಕ್ರೋಜಿಯರವರು ಸತ್ಯಾಗ್ರಹ–ಸೈನ್ಯವನ್ನು ಸಿದ್ಧಮಾಡುತ್ತಿದ್ದರು. ಅದರಲ್ಲಿ ೬೦೦ ಸ್ತ್ರೀ–ಪುರುಷರು ಹೆಸರು ಬರೆಸಿದ್ದಾರೆಂದು ಮ್ಯುರಿಯಲ್ ಹೇಳುತ್ತಾಳೆ. ಈ ಸುದ್ದಿಯು ಮಹತ್ವಪೂರ್ಣವಾದದ್ದೆಂದು ಹೇಳಬಹುದು. ಇದನ್ನು ಸಹ ನಾನು ಬಾಪೂ ಅವರ ಅಹಿಂಸಾಪ್ರಚಾರದ ಪರಿಣಾಮವೆಂದೇ ತಿಳಿಯುತ್ತೇನೆ. ಈ ಸಮಾಚಾರವನ್ನು ಸ್ವಾಗತಿಸುತ್ತ ಬಾಪೂ ವಿಮರ್ಶೆ ಮಾಡಿದರು: "ಇಲ್ಲಿ ಸಹ ನಾವು ಶಸ್ತ್ರಗಳಿಂದ ಯುದ್ಧಮಾಡತೊಡಗಿದರೆ ಇದೇ ಆರುನೂರು ಜನರು ಆ ಯುದ್ಧವನ್ನು ಬಂದುಮಾಡಿಸಲಿಕ್ಕೆ ಬರಬಹುದು! ಈ ಜನರಿಗೆ ಶಕ್ತಿಯು ಹೊರತು ಬೇರೆ ಯಾವ ಸಂಗತಿಯೂ ಬಿಂಬಿಸುವದಿಲ್ಲ."

ಈ ಸಾರೆ ಬಾಪೂ ಬಹಳ ಪತ್ರಗಳನ್ನು ಬರೆದರು ಮತ್ತು ಬರೆಯಿಸಿದರು. ಬೆಳಿಗ್ಗೆ ಸುರೇಂದ್ರನ ಹೆಸರಿಗೆ ಒಂದು ಪತ್ರಬರೆದು ಅದನ್ನು ಸುಪರಿಂಟೆಂಡಂಟರ ಮುಖಾಂತರ ಕಳಿಸಿದರು. "ಬ್ರಹ್ಮಚರ್ಯದ ಬಗ್ಗೆ ನೀನು

೪–೪–'೩೨ ಬರೆದದ್ದು ನನಗೆ ಸಿಕ್ಕಿತ್ತು. ಭೆಟ್ಟಿಯಾದಾಗ ಅವಶ್ಯ ಚರ್ಚೆ ಮಾಡುವಾ. ಇಮಾಮುಸಾಹೇಬರಲ್ಲಿ ನಾನು ಹೇಳಿದ ವಿಚಾರವೇ ದೃಢವಾಗಿದೆ ಮತ್ತು ದೃಢವಾಗುತ್ತ ನಡೆದಿದೆ. ಅಂದರೆ ಅನುಭವವು ಅದರ ಸತ್ಯತೆ

ಯನ್ನು ಸಿದ್ಧ ಮಾಡುತ್ತಿದೆ. ಮೂರೂ ಕಾಲಗಳಲ್ಲಿ ಮತ್ತು ಎಲ್ಲ ಪರಿಸ್ಥಿತಿಯಲ್ಲಿ ಸ್ಥಿರವಾಗಿ ಉಳಿಯುವದೇ ಬ್ರಹ್ಮಚರ್ಯವು. ಈ ಸ್ಥಿತಿಯು ಬಹಳ ಕಠಿಣವು. ಆದರೆ ಇದರಲ್ಲಿ ಆಶ್ಚರ್ಯದ ಮಾತು ಏನೂ ಇಲ್ಲ. ನಮ್ಮ ಜನ್ಮವು ವಿಷಯ ಗಳಿಂದಲೇ ಘಟಿತವಾದದ್ದಾಗಿದೆ. ವಿಷಯಗಳಿಂದುಂಟಾದ ಶರೀರವು ನಮಗೆ ಬಹಳ ನೆಟ್ಟಗೆನಿಸುತ್ತಿದೆ. ವಂಶಪರಂಪರೆಯಿಂದ ಬಂದ ಈ ವಿಷಯೀಉತ್ತರಾಧಿ ಕಾರಿಯನ್ನು ನಿರ್ವಿಷಯಿಯನ್ನಾಗಿ ಮಾಡುವದು ಕಠಿಣವೆ ಆಗಿದೆ. ಅಂದರೂ ಸಹ ಇದು ಅಮೂಲ್ಯವಾದ ಆತ್ಮದ ನಿವಾಸಸ್ಥಾನವಾಗಿದೆ. ಆತ್ಮದ ಸಾಕ್ಷಾತ್ಕಾರ ವಾದಾಗ ಬ್ರಹ್ಮಚರ್ಯವು ಸಹಜವೇ ಸಾಧ್ಯವಾಗಬಲ್ಲದು. ಮತ್ತು ಆ ಬ್ರಹ್ಮಚರ್ಯವು ಸಾಕ್ಷಾತ್ ರಂಭೆಯು ಸ್ವರ್ಗದಿಂದಿಳಿದು ಬಂದು ಸ್ಪರ್ಶಮಾಡಿದರೂ ಅಖಂಡ ವಾಗಿಯೇ ಉಳಿಯುತ್ತದೆ. ಎಲ್ಲರ ತಾಯಂದಿರೂ ರಂಭೆಗೆ ಸಮಾನರಾಗಿರಬಲ್ಲರು. ತಾಯಿಯಂತಿರುವ ರಂಭೆಯ ವಿಚಾರ ಮಾಡಿದರೂ ವಿಕಾರಗಳು ಶಾಂತವುಳಿಯು ತ್ತವೆ. ಇದೇ ಪ್ರಕಾರ ಯಾವದೇ ಸ್ತ್ರೀ ಬಗ್ಗೆ ವಿಚಾರ ಮಾಡಿದರೂ ವಿಕಾರಗಳು ಶಾಂತವುಳಿಯಬೇಕು. ಆದರೆ ಎಷ್ಟು ವಿಸ್ತಾರ ಮಾಡಲಿ ? ಇದರ ಮೇಲೆ ಪುನಃ ಪುನಃ ವಿಚಾರ ಮಾಡಿ ಫಲಿತಾರ್ಥವನ್ನು ತೆಗೆಯಬೇಕು.

"ಖುರ್ಚಿ ಬಡಿದು ಪೆಟ್ಟು ಹತ್ತಿದ್ದು ನೋಡಿ ಯಾರಾದರೂ ಕನಿಕರ ಪಟ್ಟರೆ ಅದು ಅಹಿಂಸೆಯ ಪರಿಣಾಮವೆಂದು ನೀನು ತಿಳಿಯುವದು ಯೋಗ್ಯವಲ್ಲ. ಆದರೆ ಇದು ಮಹತ್ವದ ವಿಷಯವಲ್ಲ. ಶ್ರದ್ಧೆಯು ಬೆಳೆದಂತೆ ಬುದ್ಧಿಯೂ ಬೆಳೆಯುವದು. ಬುದ್ಧಿಯೋಗವನ್ನು ಈಶ್ವರನು ಮಾಡಿಸುತ್ತಾನೆಂದು ಗೀತೆಯು ಕಲಿಸುತ್ತದೆಂದು ಅನಿಸುತ್ತದೆ. ಶ್ರದ್ಧೆಯನ್ನು ಹೆಚ್ಚಿಸುವದು ನಮ್ಮ ಕರ್ತವ್ಯವಾಗಿದೆ. ಇಲ್ಲಿ ಶ್ರದ್ಧೆ ಮತ್ತು ಬುದ್ಧಿಗಳ ಅರ್ಥವೇನೆಂಬುದನ್ನು ತಿಳಿದುಕೊಳ್ಳುವ ಆವಶ್ಯಕತೆಯಿದೆ. ಈ ತಿಳಿವಳಿಕೆ ಸಹ ವ್ಯಾಖ್ಯೆಯಿಂದ ಬರಲಾರದು. ನಿಜವಾದ ನಮ್ರತೆಯನ್ನು ಕಲಿಯುವದರಿಂದ ಬರುತ್ತದೆ. ತನಗೆ ತಿಳಿಯುತ್ತದೆಂದು ಯಾವನಿಗೆ ಅನಿಸುತ್ತ-ದೆಯೋ ಅವನಿಗೆ ಏನೂ ತಿಳಿಯುವದಿಲ್ಲ. ಯಾವನಿಗೆ ತನಗೆ ಏನೂ ತಿಳಿ-ಯುವದಿಲ್ಲವೆಂದು ಅನಿಸುತ್ತದೆಯೋ ಅವನಿಗೆ ಯಥಾಸಮಯ ಜ್ಞಾನವಾಗುತ್ತದೆ. ತುಂಬಿದ ಕೊಡದಲ್ಲಿ ಗಂಗಾಜಲವನ್ನು ಹಾಕುವ ಸಾಮರ್ಥ್ಯವು ಈಶ್ವರನಿಗೂ ಇಲ್ಲ. ಆದುದರಿಂದ ನಾವು ದಿನಾಲು ದೇವರೆದುರಿಗೆ ರಿಕ್ತಹಸ್ತದಿಂದಲೇ ನಿಲ್ಲಬೇಕು. ನಮ್ಮ ಅಪರಿಗ್ರಹವಾದರೂ ಇದನ್ನೇ ಕಲಿಸುತ್ತದೆ. ಇನ್ನು ಸಾಕು. ನನಗೆ ಬರೆಯಬೇಕೆನಿಸಿ ದಾಗ ಬರೆ. ಪತ್ರ ಕೊಡುವರು."

ಇವತ್ತು ಆಶ್ರಮಕ್ಕೆ ಐವತ್ತೆರಡು ಪತ್ರಗಳನ್ನು ಬರೆಯುವದಲ್ಲದೆ ಬೇರೆ ಏಳೆಂಟು ಪತ್ರಗಳನ್ನು ಬರೆದರು. ಸಾಮ್ಯುಅಲ್ ಹೋರರ 'ದಿ ಫೋರ್ಥ ಸೀಲ' ಎಂಬ ಪುಸ್ತಕದಿಂದ ಗ್ರ್ಯಾಂಡ ಡಚೆಸ್ ಎಲಿಜಾಬೆಥಳ ಚಿತ್ರವನ್ನು ನಾನು ಆಶ್ರಮಕ್ಕೆ

ಕಳಿಸಿದೆ. ಚಿಲ್ಲರೆ ಪತ್ರಗಳಲ್ಲಿ ಕೆಲವು ವಿನೋದದ ಪತ್ರಗಳಿದ್ದವು. ಒಬ್ಬನು ಕೇಳಿದ್ದನು : "ನಿಜ ಹೇಳುವದರಿಂದ ಯಾರದಾದರೂ ಪ್ರಾಣಹೋಗುತ್ತಿದ್ದರೆ ಮತ್ತು ಸುಳ್ಳು ಹೇಳುವದರಿಂದ ಹೋಗದಿದ್ದರೆ ಅಂಥಲ್ಲಿ ನಿಜ ಹೇಳಬೇಕೋ ಅಥವಾ ಸುಳ್ಳು ಹೇಳಬೇಕೋ?" ಬಾಪೂ ಅವನಿಗೆ ಬರೆದರು : "ಸತ್ಯವು ಪ್ರಸ್ತುತವಿದ್ದಲ್ಲಿ ಎಷ್ಟೇ ಬಲಿದಾನವನ್ನುಮಾಡಿ ಅವನು ಸತ್ಯವನ್ನೇ ಹೇಳಬೇಕು." ಒಬ್ಬ ಅಮೇರಿಕನ್ನನು ಬರೆದಿದ್ದ : "ಕ್ರಿಶ್ಚಿಯನ್ ತತ್ವಗಳ ಪ್ರಚಾರವನ್ನೇ ಮಾಡುವದರಲ್ಲಿ ಸಮಯ ಕಳೆಯುವ ಕರಾರಿನ ಮೇಲೆ ನೀವು ಬಿಡುಗಡೆಯಾಗಬಯಸಿದರೆ ನಿಮ್ಮನ್ನು ಕೂಡಲೇ ಬ್ರಿಟಿಶ್ ಸರಕಾರದಿಂದ ಬಿಡುಗಡೆಮಾಡಿಸುವೆನು." ಬಾಪೂ ಇವನಿಗೂ ಉತ್ತರ ಕೊಡುವ ಶ್ರಮತೆಗೆದುಕೊಂಡರು :

"I thank you for your letter. My answer to your first question is that I would not like anybody to get me out and certainly not on any condition. I cannot give up for any consideration whatsoever, what I regard as my life's mission."

"ನಿಮ್ಮ ಪತ್ರಕ್ಕಾಗಿ ಆಭಾರಿ ಇದ್ದೇನೆ. ನಿಮ್ಮ ಮೊದಲನೆಯ ಪ್ರಶ್ನೆಗೆ ನನ್ನ ಉತ್ತರವಿಷ್ಟೇ— ಎರಡನೆಯವರು ನನ್ನನ್ನು ಬಿಡುಗಡೆ ಮಾಡಿಸುವದು ನನಗೆ ಒಪ್ಪಿಗೆ ಇಲ್ಲ. ಎರಡನೆಯದೆಂದರೆ ಯಾವದೊಂದು ಕರಾರಿನ ಮೇಲೆ ಬಿಡುಗಡೆಯಾಗುವದನ್ನಂತೂ ನಾನು ಇಚ್ಛಿಸುವದೇ ಇಲ್ಲ. ಯಾವದನ್ನು ನಾನು ನನ್ನ ಜೀವನದ ಧರ್ಮಕಾರ್ಯವೆಂದು ತಿಳಿದಿರುವೆನೊ ಅದನ್ನು ಯಾವದೇ ಆಮಿಷಕ್ಕಾಗಿ ಬಿಡಲಾರೆ."

ಒಬ್ಬ ಅಮೇರಿಕನ್ನನಿಂದ ಒಂದು ಒಳ್ಳೇ ಪತ್ರ ಬಂದಿತ್ತು. ಅವನು ಮೊದಲು ನಾಸ್ತಿಕನಿದ್ದ. ಹಿಂದಿನಿಂದ ಮೂರು ವರುಷ (ಧರ್ಮದ ವಿರೋಧ ಮಾಡಿದ್ದಕ್ಕಾಗಿ) ಜೇಲಿನಲ್ಲಿದ್ದು ಆಸ್ತಿಕನಾದ. ಆ ಮೇಲೆ ಅವನು ಕ್ರಿಶ್ಚಿಯನ್ ಸಾಯನ್ಸ ಓದಿದ. ಅದರಿಂದ ಅವನ ಶ್ರದ್ಧೆಯು ಜಾಗ್ರತವಾಯಿತು. ಸಾಮಾನ್ಯವಾಗಿ ಈ ಪಂಥದವರು ಗಾಂಧೀಜಿಯವರ ಚಟಪಟಿಕೆಗಳ ಬಗ್ಗೆ ಮೌನವಾಗಿರುತ್ತಾರೆ. ಅವನಿಗೆ ತಮ್ಮ ಪತ್ರಿಕೆಗಳಲ್ಲಿ ಬ್ರಿಟಿಶ ಸಾಮ್ರಾಜ್ಯವಾದದ ಸಮರ್ಥನೆಯನ್ನೇ ಮಾಡುತ್ತಿರುತ್ತಾರೆ. ಕ್ರಿಶ್ಚಿಯನ್ ಶಾಸ್ತ್ರದ ವಿಷಯದಲ್ಲಿ ಆತನು ಬಾಪೂ ಅವರ ಅಭಿಮತವನ್ನು ಕೇಳಿದ್ದ. ಬಾಪೂ ಅವನಿಗೆ ಬರೆದರು :

"I have met many Christian Science friends. Some of these have sent me Mrs. Eddy's works. I was never able to read them through. I did however glance through them. They did not produce the impression the friends who sent them to me had expected. I have learnt from childhood and experience has confirmed the soundness of the teaching that spiritual gifts

should be used for the purpose of healing bodily ailments. I do however believe in abstention from use of drugs and the like. But this is purely on physical, hygienic grounds. I do also believe in utter reliance upon God, but then not in the hope that He will heal me, but in order to submit entirely to His will, and to share the fate of millions who even though they wished to, can have no scientific medical help. I am sorry to say, however, that I am not always able to carry out my belief into practice. It is my constant endeavour to do so. But I find it very difficult, being in the midst of temptation, to enforce my belief in full."

"ನನಗೆ ಎಷ್ಟೋ ಕ್ರಿಶ್ಚಿಯನ್ ಸಾಯನ್ಸ ಮಿತ್ರರ ಪರಿಚಯವಿದೆ. ಅವರಲ್ಲಿ ಕೆಲವರು ಶ್ರೀಮತಿ ಎಡೀಯವರ ಪುಸ್ತಕಗಳನ್ನು ನನಗೆ ಓದಲಿಕ್ಕೆ ಕಳಿಸಿದ್ದಾರೆ. ಇವೆಲ್ಲವುಗಳನ್ನು ನನಗೆ ಸಂಪೂರ್ಣ ಓದುವದು ಸಾಧ್ಯವಾಗಿಲ್ಲ. ಆದರೆ ಮೇಲೆ ಮೇಲಿನಿಂದ ನೋಡಿದ್ದೇನೆ. ಈ ಮಿತ್ರರು ಅಪೇಕ್ಷಿಸಿದಂತೆ ಈ ಪುಸ್ತಕಗಳು ನನ್ನ ಮೇಲೆ ಪರಿಣಾಮ ಮಾಡಲಿಲ್ಲ. ಆಧ್ಯಾತ್ಮಿಕ ಶಕ್ತಿ ಮತ್ತು ಸಿದ್ಧಿಗಳ ಉಪಯೋಗ ವನ್ನು ಶಾರೀರಿಕ ರೋಗಪರಿಹಾರಕ್ಕಾಗಿ ಮಾಡಿಕೊಳ್ಳಬಾರದೆಂಬ ಮಾತನ್ನು ನಾನು ಚಿಕ್ಕಂದಿನಿಂದಲೇ ಕಲಿತಿದ್ದೇನೆ. ಮತ್ತು ಅನುಭವದಿಂದಲೂ ಈ ಮಾತಿನ ಸತ್ಯತೆಯಲ್ಲಿ ನನಗೆ ನಂಬುಗೆಯುಂಟಾಗಿದೆ. ಮನುಷ್ಯನು ಔಷಧ ಮುಂತಾದವುಗಳಿಂದ ಸಹ ದೂರ ಇರಬೇಕೆಂದು ನನ್ನ ಮತ. ಆದರೆ ಈ ಮಾತನ್ನು ಕೇವಲ ಶಾರೀರಿಕ ಆರೋಗ್ಯದೃಷ್ಟಿಯಿಂದ ಹೇಳಿದ್ದೇನೆ. ಮತ್ತು ಸಂಪೂರ್ಣ ದೇವರನ್ನೇ ಮೊರೆ ಹೋಗುವದರಲ್ಲಿ ನನ್ನ ವಿಶ್ವಾಸವಿದೆ. ದೇವರನ್ನು ಮೊರೆಹೋಗುವದು ಆವನು ನನ್ನನ್ನು ಗುಣಮಾಡುವನೆಂಬ ಉದ್ದೇಶದಿಂದಲ್ಲ—ಆದರೆ ಸಂಪೂರ್ಣ ಅವನ ಅಧೀನದಂತೆ ನಡೆಯುವದಕ್ಕಾಗಿ ಮತ್ತು ಬಹಳ ಇಚ್ಛಿಪಟ್ಟಾಗ್ಯೂ ಶಾಸ್ತ್ರೀಯ ಔಷಧೋಪಚಾರವು ದೊರೆಯದ ಲಕ್ಷಾವಧಿ ಬಡಜನರ ದುಃಖದಲ್ಲಿ ಸಮಭಾಗಿ ಯಾಗುವದಕ್ಕಾಗಿ. ಯಾವಾಗಲೂ ನನ್ನ ಈ ವಿಶ್ವಾಸದಂತೆ ನಡೆಯುವದು ನನ್ನಿಂದಾಗುವದಿಲ್ಲವೆಂದು ವಿಷಾದಪೂರ್ವಕವಾಗಿ ಹೇಳುತ್ತೇನೆ. ನಿಶ್ಚಯವಾಗಿ ನನ್ನ ಪ್ರಯತ್ನವು ಯಾವಾಗಲೂ ಇತ್ತಕಡೆಗೇ ಇರುತ್ತದೆ. ಆದರೆ ಅನೇಕ ಲಾಲಸೆಗಳ ಮೂಲಕ ಸಂಪೂರ್ಣವಾಗಿ ಅವನ್ನು ಕೃತಿಯಲ್ಲಿ ತರಲು ಶಕ್ತನಾಗಿಲ್ಲ."

ಈ ಸಾರೆಯ ಪತ್ರಗಳಲ್ಲಿ ಸ್ತ್ರೀಯರನ್ನುದ್ದೇಶಿಸಿ ಬರೆದ ಪತ್ರವು ತುಂಬ ಮಹತ್ವದ್ದಿತ್ತು. ಅದು ಸಂಪೂರ್ಣ ಉದ್ಧೃತ ಮಾಡಲು ಯೋಗ್ಯವಾಗಿದೆ. ಆದರಲ್ಲಿಯೂ ಹೆಚ್ಚು ಮಹತ್ವದ ಭಾಗವು ಇಂತಿದೆ: "ಸ್ತ್ರೀಯರಲ್ಲಿ ನಾನು ಕಂಡ ಅತಿ ದೊಡ್ಡ

ದೋಷವೆಂದರೆ ಅವರು ತಮ್ಮ ವಿಚಾರಗಳನ್ನು ಇಡೀ ಜಗತ್ತಿನಿಂದ ಬಚ್ಚಿಡುತ್ತಾರೆ. ಇದರಿಂದ ಅವರಲ್ಲಿ ಡಂಭಾಚಾರವು ಬರುತ್ತದೆ. ಅಸತ್ಯವು ಮನೆಮಾಡಿದಲ್ಲಿಯೇ ಡಂಭಾಚಾರವು ಬರಬಲ್ಲದು. ಡಂಭಾಚಾರದಂಥ ವಿಷಮಯ ವಸ್ತುವನ್ನು ನಾನು ಈ ಜಗತ್ತಿನಲ್ಲಿ ಬೇರೆ ಯಾವದನ್ನೂ ನೋಡಿಲ್ಲ. ಯಾವಾಗಲೂ ಹತ್ತಿಡಲ್ಪಟ್ಟ ಹಿಂದುಸ್ತಾನದ ಮಧ್ಯಮವರ್ಗದ ಸ್ತ್ರೀಯರಲ್ಲಿ ಡಂಭವು ಬಂದಾಗ ಅದು ಅವರನ್ನು ಕೀಟಕದಂತೆ ಒಳಗೊಳಗೇ ಕೊರೆದು ತಿಂದುಬಿಡುವದು. ಅವರು ಹೆಜ್ಜೆಹೆಜ್ಜೆಗೂ ತಮಗೆ ಒಪ್ಪಿಗೆಯಾಗದ್ದನ್ನೆ ಮಾಡುತ್ತಾರೆ. ಮತ್ತು ಅದನ್ನು ಅವರು ಮಾಡಲೇ ಬೇಕಾಗುತ್ತದೆಂದು ತಿಳಿಯುತ್ತಾರೆ. ಈ ಜಗತ್ತಿನಲ್ಲಿ ಅವರು ಯಾರಿಗೂ ಅಂಜುವ ಕಾರಣವಿಲ್ಲವೆಂಬದು ಸ್ವಲ್ಪ ವಿಚಾರ ಮಾಡಿದರೆ ಅವರಿಗೆ ಗೊತ್ತಾಗುವದು. ತಾವು ಇದ್ದಕ್ಕಿದ್ದಂತೆ ಇಡೀ ಜಗತ್ತಿನೆದುರು ಧೈರ್ಯದಿಂದ ನಿಲ್ಲಲಿಕ್ಕೆ ಅವರು ಕಲಿತರೆ ನಾನು ಹೇಳಿದ ಬೇರೆ ಕಾರಣಗಳಿಂದಲೂ ಪಾರಾಗಬಲ್ಲರು."

ಪ್ರೇಮಾಬಹನಳು ಬರೆದಿದ್ದಳು: "ಈಗ ಆಶ್ರಮದಲ್ಲಿ ಎಲ್ಲರೂ ಸಾಧನೆಗಳ ಬೆನ್ನುಹತ್ತಿದ್ದಾರೆ. ಪ್ರಾರಂಭಮಾಡಿದ್ದರ ಬೆನ್ನುಹತ್ತುವದು ನಿಮ್ಮ ಪರಂಪರೆ ಯಲ್ಲವೆ?" ಬಾಪೂ ಇದರ ಉತ್ತರವನ್ನು ವಿಸ್ತಾರಪೂರ್ವಕವಾಗಿ ಕೊಟ್ಟರು: "ಆಶ್ರಮಕ್ಕೆ ನೀನು ಕೊಟ್ಟ ಪ್ರಮಾಣಪತ್ರವನ್ನು ನಾನು ಕೊಡುವದಿಲ್ಲ. ನೀನು ಹೇಳಿದ ಮಾತು ನಿಜವಿದ್ದರೆ ಈ ಪ್ರಮಾಣಪತ್ರವು ನನಗೆ ನೆಟ್ಟಗೆನಿಸುವದು. ಆಶ್ರಮವು ತಾನು ಕೈಕೊಂಡ ಕೆಲಸದ ಹಿಂದೆ ಹುಚ್ಚಾಗಿ ಬೆನ್ನುಹತ್ತುತ್ತದೆಂಬ ವಿಚಾರವು ನಿನ್ನ ಮನಸ್ಸಿನ ಮೇಲೆ ಆಗಿರಬಹುದು, ಆದರೆ ಅದು ನಿಜವಾದುದಲ್ಲ. ನಾವು ಇದುವರೆಗೆ ಆಶ್ರಮದ ವ್ರತಗಳನ್ನು ಸಂಪೂರ್ಣ ಆಚರಣೆಯಲ್ಲಿ ತರಲು ಎಲ್ಲಿ ಸಮರ್ಥ ರಾಗಿದ್ದೇವೆ? ಆಶ್ರಮದಲ್ಲಿ ನಮಗೆ ಹಿಂದೀ, ಉರ್ದು, ತಮಿಳು, ತೆಲಗು, ಸಂಸ್ಕೃತ ಕಲಿಯಬೇಕಾಗಿದೆ. ಈ ವಿಷಯಗಳನ್ನು ಕುರಿತು ಬಹಳ ಕಡಿಮೆ ಪ್ರಯತ್ನ ಮಾಡಲಾಗಿದೆ. ಚರ್ಮದ ಕಲೆಯನ್ನು ನಾವು ಎಲ್ಲಿ ಕಲಿತಿದ್ದೇವೆ? ಅತಿ ಜಿನುಗಾದ ನೂಲನ್ನು ನೂಲಲು ನಮಗೆ ಎಲ್ಲಿ ಬರುತ್ತದೆ? ಇಂಥ ಎಷ್ಟೋ ಮಾತುಗಳನ್ನು ಹೇಳಬಹುದು. ನನ್ನ ಸಂಶಯದ ಸಮರ್ಥನೆಗಾಗಿ ಇಷ್ಟು ಸಾಕು. ಲಾಠೀ ಮುಂತಾದ್ದನ್ನು ಎಲ್ಲರೂ ಆಡಬಲ್ಲರೆಂದು ಹೇಳುವದು ಮಿಠಾಯಿಯನ್ನು ಎಲ್ಲರೂ ಬಯಸುತ್ತಾರೆಂದು ಹೇಳಿದಂತೆಯೇ ಸರಿ. ಜಗತ್ತಿನಲ್ಲಿ ಇಂಥ ಎಷ್ಟೋ ವಸ್ತುಗಳಿವೆ; ಅವುಗಳಿಗಾಗಿ ಪರಿಶ್ರಮ ಮಾಡಬೇಕಾಗಿಲ್ಲ. ನಾವೂ ಒಂದು ಬಗೆಯಿಂದ ಪಶುಗಳ ಸಂಬಂಧಿಕರೇ ಆಗಿದ್ದೇವೆ. ಆದುದರಿಂದ ಈ ಗುಣವು ನಮ್ಮಲ್ಲಿ ಸ್ವಾಭಾವಿಕವಾಗಿದೆ. ಅದನ್ನು ಕಲಿಯಬೇಕಾಗಿಲ್ಲ. ಅದನ್ನು ಕಲಿಯಬೇಕೊ ಬಾರದೊ ಎಂಬುದೇ ಪ್ರಶ್ನೆ-ಯಾಗಿದೆ. ಪಶುಜಾತಿಯ ಎಲ್ಲ ಗುಣಗಳೂ ತ್ಯಾಜ್ಯವೆಂದು ಹೇಳಲಿಕ್ಕೆ ಬರುವಂತಿಲ್ಲ."

ಗೀತೆಗೆ ಅರ್ಥವನ್ನು ಬರೆದಂತೆ ಉಪನಿಷತ್ತಿಗೂ ಬರೆಯಿರಿ ಎಂದು ಸೂಚಿ

ಸಿದ್ದಕ್ಕೆ ಇದೇ ಪತ್ರದಲ್ಲಿ ಗಾಂಧೀಜಿ ಬರೆದರು: "ಉಪನಿಷತ್ತುಗಳನ್ನು ನಾನು ಮೆಚ್ಚುತ್ತೇನೆ. ಆದರೆ ಅವುಗಳ ಅರ್ಥ ಬರೆಯುವಷ್ಟು ನನ್ನ ಯೋಗ್ಯತೆಯಿದೆಯೆಂದು ನಾನು ತಿಳಿಯುವದಿಲ್ಲ."

ಪತ್ರದಲ್ಲಿ ಇನ್ನೂ ಕೆಲವು ಸಾಮಾನ್ಯ ಮಾತುಗಳಿದ್ದವು: "ತನ್ನ ಪ್ರೀತಿಯ ಜನರಿಗೆ ತನ್ನ ದೋಷಗಳನ್ನು ಕೇಳಿದವನಿಗೆ ಕೊನೆಗೆ ಅವರಿಂದ ತನ್ನ ಪ್ರಶಂಸೆಯನ್ನೇ ಕೇಳಬೇಕಾಗುವದು. ಯಾಕಂದರೆ ಪ್ರೇಮವು ದೋಷಗಳ ಮೇಲೆ ತೆರೆಯನ್ನು ಹಾಕುತ್ತದೆ ಅಥವಾ ದೋಷಗಳನ್ನೇ ಗುಣದ ರೂಪದಲ್ಲಿ ನೋಡುತ್ತದೆ. ಪ್ರಸಂಗ ವಿಶೇಷದಲ್ಲಿ ದೋಷ ತೋರಿಸಿದರೂ ಅದು ಪ್ರೇಮದ ಸ್ವಭಾವವಾಗಿದೆ. ನಿನಗೆ . . . ಎದುರಿಗೆ 'ಹಿಸ್ಟೆರಿಕಲ್' ಎಂದು ಕರೆದಿದ್ದೆ. ಅದು ಕೂಡ ನಿನ್ನ ಪ್ರಶಂಸೆಯೆ ಇತ್ತೆಂದು ಕಿಸನನು ಅನ್ನಲಿಲ್ಲವೆ? ನಿನಗೆ 'ಹಿಸ್ಟೆರಿಕಲ್' ಎಂದು ಹೇಳದಿದ್ದರೆ ನೀನು ಹೆಚ್ಚು ಹುಚ್ಚಳಾಗುತ್ತಿದ್ದಿ. ನೀನು 'ಹಿಸ್ಟೆರಿಕಲ್' ಇದ್ದೇ ಇರುವಿ. ನೀನು ಹುಚ್ಚಳಂತಾಗುತ್ತೀಯಲ್ಲ ಆದರ ಅರ್ಥವೇನು? ಯಾರು ಆವೇಶಯುಕ್ತರಾಗುತ್ತಾರೆಯೊ ಅವರು 'ಹಿಸ್ಟೆರಿಕಲ್' ಇದ್ದೇ ಇರುತ್ತಾರೆ."

ಹರಿಲಾಲಭಾಯಿಯು ಸೆರೆ ಕುಡಿದು ಹೇಗೆ ವಿಕಾರವಶನಾದನೆಂಬುದರ ವರ್ಣನೆಯನ್ನು ಮಾಡುವ ಹೃದಯಭೇದಕವಾದ ಪತ್ರವು ಮನೂ ಇವಳಿಂದ ಬಂದಿತ್ತು. ಅದರ ಜೊತೆಗೇ ಅವಳ ಅಬಚಿಯ ಪತ್ರದಲ್ಲಿ ಮನೂನ ಅಳುವಿಗೆ ತಡೆಯೇ ಇಲ್ಲ ಎಂಬುದನ್ನು ಬರೆಯಲಾಗಿತ್ತು. ಆದುದರಿಂದ ಬಾಪೂ ಮತ್ತು ನಾನು ಪಾಪ, ಆ ಹುಡುಗಿಯ ಕರುಣಾವಸ್ಥೆಯ ಕಲ್ಪನೆಯನ್ನು ಮಾಡಿದೆವು. ಬಾಪೂ ಅವಳಿಗೆ ವಾತ್ಸಲ್ಯಪ್ರೇಮದಿಂದ ಸೂಸುವ ಒಂದು ಪತ್ರ ಬರೆದರು: "ಚಿ. ಮನು, ನಿನ್ನ ಪತ್ರ ಕೈಸೇರಿತು. ಅದನ್ನು ನಾನು ಎರಡು ಸಾರೆ ಪೂರ್ಣ ಓದಿದೆ. ನೀನು ಗಾಬರಿಯಾಗುವ ಕಾರಣವಿಲ್ಲ. ಹರಿಲಾಲನ ದುರ್ದಶೆಯನ್ನು ನೀನು ಕಣ್ಣುಬಿಟ್ಟು ನೋಡಿದ್ದು ಒಳ್ಳೆಯದೇ ಆಯಿತು. ನನಗೇನೊ ಎಲ್ಲ ಪರಿಸ್ಥಿತಿ ಗೊತ್ತಿತ್ತು. ಇಷ್ಟಾದಮೇಲೂ ನಾವು ಯಾರ ವಿಷಯದಲ್ಲೂ ನಿರಾಶರಾಗಬೇಕಾಗಿಲ್ಲ. ದೇವರು ಏನನ್ನು ಮಾಡಲಾರನು? ಹರಿಲಾಲನಲ್ಲಿ ಏನಾದರೂ ಪುಣ್ಯಾಂಶ ಇದ್ದರೆ ಅದು ಹೊರಚಿಮ್ಮಿ ಬರುವದು. ನಾವು ಅವನಿಗೆ ಹೆಚ್ಚು ದಯೆ ತೋರಿಸಬಾರದು. ನಾವು ಸುಳ್ಳು ದಯೆ ತೋರಿಸದೆ ಹೆಚ್ಚೆಚ್ಚು ಪವಿತ್ರವಾಗುತ್ತ ಹೋದರೆ ಅದರ ಪರಿಣಾಮವು ಹರಿಲಾಲನ ಮೇಲೂ ಆಗೇ ತೀರುವದು. ನಿನ್ನ ಹೃದಯವನ್ನು ಕಠೋರ ಮಾಡಬೇಕು. ಶೆರೆ ಕುಡಿಯುವದನ್ನು ಬಿಡುವವರೆಗೆ ನೀನು ನನ್ನ ಪಾಲಿಗೆ ಇಲ್ಲವೇ ಇಲ್ಲವೆಂದು ಹರಿಲಾಲನಿಗೆ ಬರೆಯಬೇಕು. ನಾವೆಲ್ಲರೂ ಈ ಮಾರ್ಗ ವನ್ನನುಸರಿಸಿದರೆ ಹರಿಲಾಲನು ಶುದ್ಧಿಯ ಮೇಲೆ ಬರಬಹುದು. ಶೆರೆಗುಡುಕನಿಗೆ ದೊಡ್ಡ ಆಘಾತವಾದರೆ ಅವನು ಬಹುತರವಾಗಿ ತನ್ನ ದುರ್ಮಾರ್ಗವನ್ನು ಬಿಡುತ್ತಾನೆ.

ಆಶ್ರಮದ ಟಪಾಲು ಈ ಸಾರೆ ಸಾಕಷ್ಟು ದೊಡ್ಡದಾಗಿತ್ತು. ಮಕ್ಕಳ ಪತ್ರಗಳಲ್ಲಿ ಚಿಗುರಿ ಅರಳುವ ಅವರ ಮನಸ್ಸಿನ ಸುಂದರ ಚಿತ್ರವು ಮೂಡಿರುತ್ತದೆ.

ದಿಲ್ಲಿಯಲ್ಲಿ ಕಾಂಗ್ರೆಸ್ಸಿನ ಅಧಿವೇಶನವನ್ನು ಸೇರಿಸುವದರ ವಿಷಯದಲ್ಲಿ ಸರದಾರರು ಚಿಂತಿತರಾಗಿದ್ದಾರೆ. ಅವರು ಹೇಳಿದರು : "ವ್ಯರ್ಥವಾಗಿ ಜನರ ಮನಸ್ಸು ಚಲವಿಚಲವಾಗುವವು. ಅಧಿವೇಶನವಾಗುವಾಗ ಜನರು ಮಾಡಬೇಕಾದ ಬಹಳ ಕೆಲಸಗಳನ್ನು ಬಿಟ್ಟುಕೊಡುವರು. ಅಳ್ಳೆದೆಯವರು ಒಂದಿಲ್ಲೊಂದು ತರ್ಕವಿತರ್ಕ ಮಾಡತೊಡಗುವರು. ಮತ್ತು ಮಾಲವಿಯಾಜಿಯವರು ಕಾಂಗ್ರೆಸ ಅಧಿವೇಶನ ಸೇರಿಸಹತ್ತಿರುವರು, ಅದರಲ್ಲಿ ಏನಾದರೂ ಆಗಿಯೇ ಆಗುವದು ಎಂದು ಪ್ರಚಾರ ಮಾಡತೊಡಗುವರು. ಕೆಲವು ಜನರು ದಿಲ್ಲಿಗೆ ಹೋಗುವವರೆಗೆ ವ್ಯರ್ಥವಾಗಿ ಎಲ್ಲ ಕಾರ್ಯಗಳನ್ನೂ ನಿಲ್ಲಿಸಿಬಿಡುವರು. ಇದರಿಂದ ಲಾಭ ತೋರುವದಿಲ್ಲ, ಹಾನಿಯೆ ತೋರುತ್ತದೆ." ಬಾಪೂ ಹೇಳಿದರು : "ಹಾನಿಯಂತೂ ಇಲ್ಲವೇ ಇಲ್ಲ. ಯಾವ ಕಾಂಗ್ರೆಸ್ಸು ೪೭ ವರುಷ ಎಂದೂ ತಡೆದು ನಿಂತಿಲ್ಲವೊ ಅದನ್ನು ಇಂದು ತಡೆದು ನಿಲ್ಲಿಸದೆ ಅದರ ಅಧಿವೇಶನ ಜರುಗಿಸಲೇಬೇಕೆಂಬ ವಿಚಾರವು ಸುಂದರವಾಗಿದೆ. ಈ ಕಲ್ಪನೆಯಲ್ಲಿಯೂ ತಥ್ಯಾಂಶವಿದೆ. ವಾಸ್ತವಿಕವಾಗಿ ಅದರಿಂದ ಏನೂ ಆಗುವದಿಲ್ಲ ಹೋಗುವದಿಲ್ಲ. ಅದನ್ನು ಮಾಡುವದರಿಂದ ಕೆಲವು ಜನರು ಹಿಡಿಯಲ್ಪಡಬಹುದು. ಮಾಲವೀಯಾಜಿಯನ್ನು ಬಂಧಿಸುವದು ಒಳ್ಳೆಯ ಮಾತಾಗಿದೆ." ವಲ್ಲಭಭಾಯಿ : "ಆದರೆ ಅವರು ಮಾಲವೀಯಾಜಿ ಇದ್ದಾರೆ. ಎಪ್ರಿಲ ೨೪ ನ್ನು ಬದಲುಮಾಡಿ ಒಂದು ತಿಂಗಳು ಮುಂದೆ ಹಾಕಬಹುದು. ಹಾಗೆ ಅವರು ಹಿಡಿಯಲ್ಪಟ್ಟರೆ ನಿಸ್ಸಂಶಯವಾಗಿ ಒಳ್ಳೆಯದಾಗುವದು."

ಖೇಡಾಜಿಲ್ಲೆಯಿಂದ ಬಂದ ಪತ್ರಗಳಿಂದ ಈ ಸಲವೂ ಹಳ್ಳಿಗಳು ಸಾಕಷ್ಟು ಕಷ್ಟ ಸಹನ ಮಾಡುತ್ತವೆಂದು ಗೊತ್ತಾಗುತ್ತಿದೆ. ಬಾರ್ಡೋಲಿಗೆ ಯಾವಾಗಲೂ ಒಂದು ಕಾವು ಬೇಕು. ಬೋರಸಾದವು ಯಾರ ಪ್ರೇರಣೆಯಿಲ್ಲದೆ ಹೋರಾಡಬಲ್ಲದೆಂದು ತೋರಿಸಿಕೊಟ್ಟಿದೆ.

ಬಾಪೂ ಹಾಲು ಬಿಟ್ಟು ಎರಡು ತಿಂಗಳಾದವು. ಪ್ರಕೃತಿಯು ಸರಿಯಾಗಿದೆಯೆಂದು ಹೇಳುತ್ತಾರೆ. ಆದರೆ ಆಯಾಸವೆನಿಸುತ್ತದೆಯೆಂದೂ ಅನ್ನುತ್ತಾರೆ. ಬದಾಮಿಯು ಹಾಲಿನ ಸರಿಯಾಗುತ್ತದೆಂದು ಹೇಳಬಹುದು.

**೭—೪—'೩೨** ಇವತ್ತು ಮೂರು ಸೇರು ಬದಾಮಿಯನ್ನು ಇಲ್ಲಿಯ ಬೇಕರಿಯ ಭಟ್ಟಿಯಲ್ಲಿ ಹುರಿಸಲಾಯಿತು. ಸಿಪ್ಪೆ ಸುಲಿಯಲಿಲ್ಲ. ಬಾಪೂ ಅವರ ತಿಳಿವಳಿಕೆಯ ಪ್ರಕಾರ ಆಫ್ರಿಕಾದಲ್ಲಿ ನೆಲಗಡಲೆಯ (ಶೇಂಗಾ) ನ್ನು ಇದೇ ಪ್ರಕಾರ ಭಟ್ಟಿಯಲ್ಲಿ ಹುರಿಸುವದರಿಂದ ಮೇಲಿನ ಸಿಪ್ಪೆ ಸುಲಿಯುತ್ತಿತ್ತು. ಕೊನೆಗೆ

ಸಿಪ್ಪೆ ಸುಲಿಯಲಿಲ್ಲ, ಬೀಸುವದಕ್ಕೂ ಹೆಚ್ಚು ವೇಳೆ ಹಿಡಿಯಿತು. ಆದರೂ ಸಹ ಬೆಣ್ಣೆಯಂತೆ ನುಣುಪಾಗಲಿಲ್ಲ. ಆದರೆ ಒಳ್ಳೆ ಚೆನ್ನಾಗಿ ಹುರಿಯಲ್ಪಟ್ಟಿತ್ತು. ಇವತ್ತು ಬಾಪೂ ಆಶ್ರಮ ವಿಷಯವಾಗಿ ಬರೆದದ್ದರಲ್ಲಿ ಹೇಳಿದ್ದಾರೆ : "ಆಹಾರದ ಪ್ರಯೋಗ ಮಾಡುವದನ್ನು ನಾನು ಪಶ್ಚಿಮದಲ್ಲಿ ಕಲಿತೆನು." ನಿನ್ನೆ ವಲ್ಲಭಭಾಯಿ ನಗನಗುತ್ತ ಅಂದರು : "ಪ್ರಯೋಗವನ್ನು ಸಾಯುವವರೆಗೂ ಮಾಡುತ್ತಿರಬೇಕೇನು ?" ಬಾಪೂ : "ಹೌದು, ನನ್ನ ಪ್ರಯೋಗವಂತೂ ಮುಂದುವರಿದೇವರಿಯುವದು.."

ಇವತ್ತು ಕ್ಯಾಂಪ ಜೇಲಿನಿಂದ ಹೆಣ್ಣುಮಕ್ಕಳ ಪತ್ರ ಬಂದವು. ಅದರಲ್ಲಿ ಗಂಗಾಬಹನ, ತಾರಾಬಹನ, ತಾರಾದೇವಿ, ಜೊತ್ಸ್ನಾ ಶುಕ್ಲ, ಅಮಿನಾ, ಚಂಚಲ ಬಹನ, ವಸುಮತಿ ಮತ್ತು ಮೂರು ಮಹಾರಾಷ್ಟ್ರೀಯ ಹೆಣ್ಣುಮಕ್ಕಳ ಪತ್ರಗಳಿದ್ದವು. ಎಲ್ಲ ಪತ್ರಗಳೂ ಹೆಣ್ಣುಮಕ್ಕಳ ಉಕ್ಕಿ ಬರುವ ಪ್ರೇಮದ ಚಿನ್ಹಗಳಾಗಿದ್ದವು. ಕರ್ನಾಟಕದ ಮನೋರಮಾಬಾಯಿಯವರ ಪತ್ರವಂತೂ ಹೃದಯವಿದಾರಕವೇ ಆಗಿತ್ತು : "ನಮ್ಮ ಕರ್ನಾಟಕದ ಅಕ್ಕತಂಗಿಯರಲ್ಲಿ ಕೆಲವರಿಗಂತೂ ಎಂದೂ ನಿಮ್ಮ ದರ್ಶನವೇ ಆಗಿಲ್ಲ. ಅವರ ಶ್ರದ್ಧೆಯು ಅಪಾರವಿದೆ. ಅವರ ಬಿಡುಗಡೆಯಾದ ಮೇಲೆ ಕೂಡ ಅವರಿಗೆ ನಿಮ್ಮ ದರ್ಶನವಾಗಬಹುದೊ ಇಲ್ಲವೊ ಎಂಬುದನ್ನು ಹೇಳಲು ಬರುವದಿಲ್ಲ. ಯಾಕಂದರೆ ಅವರು ಬಹಳ ದೂರದ ಹಳ್ಳಿಗಳಲ್ಲಿ ಇರುತ್ತಾರೆ. ಆದುದರಿಂದ ನೀವು ಇಲ್ಲಿಯೇ ಬಂದು ನಮಗೆ ದರ್ಶನಕೊಟ್ಟು ಹೋದರೆ ಎಷ್ಟು ಒಳ್ಳೆಯದಾದೀತು ?" ಒಬ್ಬ ಹೆಣ್ಣುಮಗಳು ಬರೆಯುತ್ತಾಳೆ : "ನಿಮ್ಮ ಸಂಗಡ ಎಂದೂ ಪತ್ರವ್ಯವಹಾರ ಮಾಡಿಲ್ಲ. ಆ ಪತ್ರವ್ಯವಹಾರವನ್ನು ಮಾಡುವ ಯೋಗವು ಜೇಲಿನಲ್ಲಿ ಬಂದದ್ದು ಸೌಭಾಗ್ಯವೇ ಅಲ್ಲವೆ ?" ಪ್ಯಾರೇಲಾಲರ ವೃದ್ಧ ತಾಯಿ ಆನಂದದಲ್ಲಿದ್ದೇನೆಂದು ಬರೆದು ತುಳಸೀಕೃತ ರಾಮಾಯಣ ಕಳಿಸಲಿಕ್ಕೆ ಹೇಳುತ್ತಾರೆ. ಅಮೀನಾ ತನಗೇನೂ ಚಿಂತೆ ಇಲ್ಲೆಂದೂ ದೇವರು ಮಕ್ಕಳನ್ನು ರಕ್ಷಿಸುವನೆಂದೂ ಬರೆಯುತ್ತಾಳೆ. ಹೆಣ್ಣುಮಕ್ಕಳ ಪತ್ರ ಓದಿ ಒಂದೆರಡು ಪೌಂಡು ರಕ್ತ ಹೆಚ್ಚಾದಂತೆ ಅನಿಸಿತು. ಭವಿಷ್ಯದಲ್ಲಿ ಈ ಹೆಣ್ಣುಮಕ್ಕಳು ದೇಶದ ಆಡಳಿತೆಯ ಕಡಿವಾಣವನ್ನು ತೆಗೆದುಕೊಳ್ಳುವರೆಂಬುದರಲ್ಲಿ ನನಗೆ ಎಷ್ಟೂ ಸಂದೇಹವಿಲ್ಲ. ನಿರ್ಭಯತೆಯ ಶಿಕ್ಷಣವನ್ನು ಪಡೆದ ಹೆಣ್ಣುಮಕ್ಕಳ ಸಂತಾನವು ಈ ದೇಶದ್ದೊಂದು ಬೆಲೆ ಬಾಳುವಂತಹ ತರುಣ ಸೇನೆಯಾಗುವದು.

ಇವತ್ತು ಸಿರಿಯಾದಿಂದ ಉಣ್ಣೆಯಿಂದ ತಯಾರಾದ ಒಂದು ಸುಂದರ ಜಮಖಾನೆಯು ಬಂತು. ಇದರಲ್ಲಿ ಗಡದು ಕೆಂಪು, ಕೇಸರಿ ಮತ್ತು ಖಾಕೀ ಬಣ್ಣದ ಪಟ್ಟೆಗಳಿದ್ದು ಕಂದೀಬಣ್ಣದ ಸುಂದರವಾದ ಬಳ್ಳಿಗಳಿವೆ. ಇದರ ಜೊತೆಗೆ ಬಂದ ಇಡೀ ಪತ್ರವೇ ಉದ್ಧೃತ ಮಾಡಲು ಯೋಗ್ಯವಾಗಿದೆ :

British Consulate,
Aleppo Syria,
Sunday Jan. 17th After Eng. service.

Dear Mr. Gandhi,

The day has come, when being in prison, I feel that you will be free to accept one of our Armenian National Coloured "Killims", spun and woven by the refugees. I am come to live and work amongst them in view of my country's debt towards these war victims who have passed through such horrors of death, and also because I find that they are the "child"—nation "set in the midst of those at strife". The colours are red—sacrifice; sky-blue—hope; gold—the light.

Yours with deepest gratitude for the message you are bringing to our world.

Moto Edith Roberto

ಬ್ರಿಟಿಶ ರಾಯಭಾರಿ ನಿವಾಸ
ಆಲೆಪ್ಪೊ, ಸಿರಿಯಾ
ರವಿವಾರ ತಾ. ೧೭ನೇ ಜನೆವರಿ.

ಪ್ರಿಯ ಗಾಂಧೀಜಿ,

ಇನ್ನೂ ನೀವು ಜೇಲಿನಲ್ಲಿದ್ದೀರಿ. ನಿಮಗೆ ಇಲ್ಲಿ ಒಂದು ಜಮಖಾನೆಯನ್ನು ಸ್ವೀಕರಿಸಲು ಪರವಾನಿಗೆ ಇರಬಹುದೆಂದು ನಾನು ತಿಳಿಯುತ್ತೇನೆ. ಇವನ್ನು ಇಲ್ಲಿಯ ನಿರಾಧಾರ ಶರಣಾರ್ಥಿಗಳು ಸ್ವತಃ ನೂತು ನೇಯ್ದು ತಯಾರುಮಾಡಿರುತ್ತಾರೆ. ಮತ್ತು ಇದು ಆರ್ಮೀನಿಯನಾದ ರಾಷ್ಟ್ರೀಯ ಬಣ್ಣದ್ದು ಇರುತ್ತದೆ. ಯುದ್ಧದ ಬೇಟೆಯಲ್ಲಿ ಸಿಕ್ಕು ಮೃತ್ಯುಯಾತನೆಗಳೊಳಗಿಂದ ಹಾಯ್ದು ಬಂದ ಜನರ ನಮ್ಮ ದೇಶದ ಋಣ ತೀರಿಸುವದಕ್ಕಾಗಿ ನಾನು ಇಲ್ಲಿಗೆ ಬಂದು ಈ ಜನರ ಮಧ್ಯದಲ್ಲಿ ವಾಸಿಸುತ್ತೇನೆ. ಈ ಜಾತಿಯು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದು ಒಂದು ಮತ್ತೊಂದರ ಸಂಗಡ ಯುದ್ಧ ಮಾಡುವ ದೊಡ್ಡ ರಾಷ್ಟ್ರಗಳ ನಡುವೆ ಸಿಕ್ಕಿರುತ್ತದೆ. ಇವರಿಗೆ ಸಹಾಯ ಮಾಡುವ ಕಾರಣಗಳಲ್ಲಿ ಇದೂ ಒಂದಾಗಿದೆ. ಬಣ್ಣಗಳು ಈ ಪ್ರಕಾರ ಇರುತ್ತವೆ: ಕೆಂಪು ಬಣ್ಣವು ತ್ಯಾಗದ ಗುರುತೆಂದೂ ನೀಲವರ್ಣವು ಆಶೆಯ ಪ್ರತೀಕವೆಂದೂ ಮತ್ತು ಹಳದೀ ಬಣ್ಣವು ಪ್ರಕಾಶದ ಚಿನ್ಹವೆಂದೂ ತಿಳಿಯಲಾಗಿದೆ.

ಜಗತ್ತಿಗೆ ನೀವು ಕೊಡುವ ಸಂದೇಶಕ್ಕಾಗಿ ಅತ್ಯಂತ ಆಭಾರದ ಭಾವನೆಯುಳ್ಳವಳಾದ,

ನಿಮ್ಮ

ಮೋಟೊ ಎಡಿಥ ರಾಬರ್ಟೋ

ನಾನಾಭಾಯಿಯ ಪತ್ರ ಬಂತು. ಅದರಲ್ಲಿ ದಕ್ಷಿಣಾಮೂರ್ತಿಯ ಆರ್ಥಿಕ ಸ್ಥಿತಿ ಕುರಿತು ಚಿಂತೆಯನ್ನು ವ್ಯಕ್ತಮಾಡಲಾಗಿತ್ತು. ಮತ್ತು ಗಿಜುಭಾಯಿ ಮಕ್ಕಳಿಗೆ ಕ್ಷಯವಾದ್ದರಿಂದ ಪಂಚಗಣಿಯಲ್ಲಿಡುವ ಬಗ್ಗೆ ಬರೆದಿತ್ತು.

ಕ್ಷಯದ ಬಗ್ಗೆ ಹೀಗೆ ಬರೆದರು: "ಕ್ಷಯಕ್ಕಿಂತಲೂ ಕ್ಷಯದ ಅಂಜಿಕೆಯೇ ಹೆಚ್ಚು ದುಃಖ ಕೊಡುತ್ತದೆ. ಯಾವನಿಗೆ ಕ್ಷಯವಾಗುತ್ತಿದೆಯೊ ಅವನು ಸ್ವತಃ ತನ್ನ ಬೇನೆಯ ವಿಚಾರವನ್ನೇ ಮಾಡುತ್ತಿರುತ್ತಾನೆ. ಮತ್ತು ಅವನಿಗೆ ನೋಡಿದಲ್ಲೆಲ್ಲಾ ಕ್ಷಯರೋಗದಿಂದಾಗುವ ವ್ಯಥೆಯೇ ಕಂಡುಬರುತ್ತಿದೆ. ಮನಸ್ಸಿನಿಂದ ಈ ಭೂತವನ್ನು ಹೊಡೆದೋಡಿಸಿದರೆ ಬೇನೆಯು ಕೂಡಲೇ ವಾಸಿಯಾಗುತ್ತದೆ."

ದಕ್ಷಿಣಾಮೂರ್ತಿಯವರ ಆರ್ಥಿಕ ವಿವಂಚನೆಯ ಬಗ್ಗೆ ಹೀಗೆ ಬರೆದರು:

"ದುಡ್ಡಿನ ಪ್ರಶ್ನೆ ನಿಮ್ಮನ್ನೇತಕ್ಕೆ ಪೀಡಿಸುತ್ತದೆ? ಈ ಮಾತನ್ನು ನೀವು ನನ್ನಿಂದ ಕಲಿಯಿರಿ. ಯಾಕಂದರೆ ಈ ಕಲೆಯಲ್ಲಿ ನಾನು ವಿಶೇಷಜ್ಞನೆಂದು ಹೇಳಬಲ್ಲೆ. 'ಮಹಾತ್ಮ' ನಾಗುವದಕ್ಕಿಂತ ಮೊದಲು ನಾನು ಕಲಿತ ಮಾತೆಂದರೆ—ಸಾಲ ತಂದು ವ್ಯಾಪಾರಮಾಡುವದು ಹೇಗೆ ತಪ್ಪಾದ ಅರ್ಥಶಾಸ್ತ್ರವೊ ಹಾಗೇ ಸಾಲ ಮಾಡಿ ಸಾರ್ವಜನಿಕ ಸಂಸ್ಥೆ ನಡೆಸುವದೂ ತಪ್ಪು ಧರ್ಮಶಾಸ್ತ್ರವು ಎಂಬುದು. ಯಾವ ಸಂಸ್ಥೆಯಲ್ಲಿ ಉತ್ತಮೋತ್ತಮ ಜನರಿಗೆ ಭಿಕ್ಷೆಗಾಗಿ ಓಡಾಡಬೇಕಾಗುತ್ತಿದೆಯೋ ಅದರ ಹೆಸರೇ ಉದ್ರಿ ವ್ಯಾಪಾರ. ನೀವು ಅಂಕಿ ಸಂಖ್ಯೆಗಳ ಲೆಕ್ಕವನ್ನಿಟ್ಟಿದ್ದೀರಿ, ಅದರ ಜೊತೆಗೇ ಎಷ್ಟು ರೂಪಾಯಿ ಕೂಡುತ್ತಿವೆಯೊ ಅದಕ್ಕನುಸಾರವಾಗಿಯೇ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂಬ ಲೆಕ್ಕವನ್ನೇಕಿಡುವದಿಲ್ಲ? ನಾನು ಬರೆದುದನ್ನು ಕಾರ್ಯಕಾರಿಗೊಳಿಸುವದು ಬಹಳ ಸುಲಭ. ಕೇವಲ ಸಂಕಲ್ಪದ ಆವಶ್ಯಕತೆಯಿದೆ. ಪ್ರತಿಯೊಂದು ವರ್ಷದ ಸಂಖ್ಯೆಯನ್ನು ನಿಶ್ಚಿತಗೊಳಿಸಬೇಕು. ಅದಕ್ಕನುಸಾರವಾಗಿ ಮನೆಯಲ್ಲಿ ಕುಳಿತಲ್ಲಿಯೇ ರೂಪಾಯಿಗಳು ಬಂದರೆ ಸಂಸ್ಥೆಯನ್ನು ನಡೆಯಿಸಬೇಕು. ಬರದಿದ್ದರೆ ಬಂದು ಮಾಡಬೇಕು. ನಿಮ್ಮ ಸಂಸ್ಥೆಯಂತೂ ಬಹಳ ಹಳೆಯದೆಂದು ಹೇಳಬಹುದು. ಅದರ ಹಿಂದಿನ ಇತಿಹಾಸವು ಉಜ್ವಲವಾಗಿದೆ. ಉತ್ತಮ ಶಿಕ್ಷಕರಿದ್ದಾರೆ. ಇಷ್ಟಾದ ಮೇಲೂ ಜನರಲ್ಲಿ ಶ್ರದ್ಧೆ ಏಕೆ ಹುಟ್ಟಬಾರದು? ನಿಮ್ಮ ಸಾಹಸವನ್ನೇ ಈಶ್ವರಾರ್ಪಣ ಮಾಡಿ ಅವನ ಹೆಸರಿನಿಂದ ಸಂಕಲ್ಪಮಾಡಿರಿ. ಅವನ ಇಚ್ಛೆ ಇದ್ದರೆ ಅವನು ಸಂಸ್ಥೆಯನ್ನು ನಡೆಯಿಸುವನು. '**हरिने भजता हजी कोईनी लाज जता नथी जाणी रे ।**' ಈ ಭಜನೆಯನ್ನು ಇವತ್ತು ಸಾಯಂಕಾಲದ ಪ್ರಾರ್ಥನೆಯ ಕಾಲಕ್ಕೆ ಹಾಡಿತ್ತು. ಒಬ್ಬ ಹುಡುಗಿಗೆ ನಾನು ಬರೆದ ಪತ್ರದ ಮೇಲಿಂದ ಅದು ನೆನಪಾಯಿತು. ವಲ್ಲಭಭಾಯಿಯಾಗಲಿ ನಾನಾಗಲಿ ಹೊರಗಿದ್ದರೆ ನಿಮ್ಮನ್ನು ಈ ಪೀಡೆಯು ಬಾಧಿಸುತ್ತಿದ್ದಿಲ್ಲನೆಂದು ಬರೆಯುತ್ತೀರಿ. ಪೀಡೆ ಎಲ್ಲಿದೆ? ಇದ್ದರೂ ಅದನ್ನು ನೀಗಿಸುವವರು

ನಾವು ಯಾರು ? ಕುರುಡನು ಕುರುಡನಿಗೆ ಹೇಗೆ ದಾರಿಯನ್ನು ತೋರಿಸಬಲ್ಲನು ? ತೊಂದರೆ ಇದೆಯೆಂದು ತಿಳಿದರೂ ಅದನ್ನೂ ಅವನ ಸ್ವಾಧೀನ ಮಾಡಿಬಿಡಿರಿ. ಈ ಎಲ್ಲ ಮಾತುಗಳನ್ನು ಪಾಂಡಿತ್ಯವೆಂದು ತಿಳಿದು ಬಿಸಾಟಬೇಡಿರಿ. ಅವುಗಳನ್ನು ಕೃತಿಯಲ್ಲಿ ತರುವ ಪ್ರಯತ್ನಮಾಡಿರಿ."

" ಏನು ತಾವು ಪರಂಧಾಮವನ್ನು ಮುಟ್ಟಿ ದೇವರ ದರ್ಶನ ಮಾಡಿಕೊಂಡು ಬಿಟ್ಟಿದ್ದೀರಾ ? " ಎಂದು ಒಬ್ಬ ಓವ್ಹರಸೀಯರನು ಪ್ರಶ್ನಿಸಿದ್ದನು. ಅವನಿಗೂ ಸಹ ಬಾಪೂ ಉತ್ತರ ಕೊಟ್ಟರು :

"I have your letter. I am unable to say that I have reached my destination. I fear I have much distance to cover . . ."

"ನಿಮ್ಮ ಪತ್ರ ಮುಟ್ಟಿತು. ನನ್ನ ಗುರಿಯನ್ನು ಸಾಧಿಸಿರುವೆನೆಂದು ಹೇಳಲಾರೆ. ನನಗಿನ್ನೂ ಬಹು ದೂರದ ಮಾರ್ಗಕ್ರಮಣ ಮಾಡುವದಿದೆ . . . ."

ಉಷಾ ಮಾಸಿಕದಲ್ಲಿ ಅಕ್ಕಿಯ ವಿಷಯವಾಗಿ ವೈದ್ಯರ ಒಂದು ಲೇಖವಿತ್ತು. ವಲ್ಲಭಭಾಯಿಯವರು ಅದನ್ನು ಧ್ಯಾನಪೂರ್ವಕ ಓದಿ ಬಾಪೂಗೆ ಹೇಳತೊಡಗಿದರು : ನೋಡಿರಿ, ನಾವು ಅನ್ನ ಉಣ್ಣುವದನ್ನು ನೋಡಿ ನೀವು ನಮಗೆ ಹೆಸರಿಡುತ್ತೀರಿ. ಆದರೆ ಅಕ್ಕಿಯಲ್ಲಿ ಇಷ್ಟು ತತ್ವಗಳಿವೆ. ಇಷ್ಟು ಹೆಚ್ಚು ಗುಣಗಳಿವೆ." ಬಾಪೂ ನಕ್ಕು ಅಂದರು : " ಹೌದು, ಭಾಯಿ ಹೌದು." ಇದಾದ ಮೇಲೆ ನಾನು ಒಂದೊಂದರಂತೆ ಅದರ ಗುಣವನ್ನು ಓದಲು ಪ್ರಾರಂಭ ಮಾಡಿದೆ. ಬಾಪೂ ಪ್ರತಿಯೊಂದರ ಖಂಡನ ಮಾಡುತ್ತ ನಡೆದಿದ್ದರು. " ಅಕ್ಕಿಯ ಪ್ರೋಟೀನು ಬೇರೆ ಯಾವದೇ ಪ್ರೋಟೀನಿಗಿಂತ ಶ್ರೇಷ್ಠವಾದದ್ದು." ಬಾಪೂ ಹೇಳಿದರು : " ಆದರೆ ಅದರಲ್ಲಿ ಪ್ರೋಟೀನು ಇರುವ ದಾದರೂ ಎಷ್ಟು ? ಬಹಳ ಕಡಿಮೆ, ಇಷ್ಟಕ್ಕಾಗಿ ಅದು ಶ್ರೇಷ್ಠವೆಂದು ಹೇಳ ಬಹುದೊ ? " Herald of health ( ಆರೋಗ್ಯ ಸಂರಕ್ಷಕ )ದೊಳಗಿಂದ ವೈದ್ಯರು ಈ ಮುದ್ದೆ ತೆಗೆದುಕೊಂಡದ್ದಕ್ಕಾಗಿ ಬಾಪೂಗೆ ನಗೆ ಬಂತು : " ಅನ್ನ ತಿನ್ನುವ ಕುಳ್ಳರಾದ ಜಪಾನಿಗಳು ಪ್ರಶಾಂತ ಮಹಾಸಾಗರದಲ್ಲಿ ನಾವನ್ನು ನಡೆಸುತ್ತಿರ ಬಹುದು, ಪಾನಾಮದ ಎರಡು ಸಮುದ್ರಗಳನ್ನು ಕೂಡಿಸುವ ಕಾಲುವೆಯನ್ನು ಅಗೆಯುತ್ತಿರಬಹುದು, ಮಂಚೂರಿಯಾದ ಬರ್ಫದಲ್ಲಿ ರಸಿಯಾದ ವಿರುದ್ಧ ಯುದ್ಧ ಮಾಡುತ್ತಿರಬಹುದು, ಅಥವಾ ತನ್ನ ಹೊಲದಲ್ಲಿ ನೇಗಿಲು ಹೊಡೆಯುತ್ತಿರಬಹುದು, ಅಂದಮಾತ್ರಕ್ಕೆ ಅವರು ಬಟಾಟೆ ಮತ್ತು ಮಾಂಸ ತಿನ್ನುವ ಇಂಗ್ಲೀಷ ಅಥವಾ ಅಮೇರಿಕನ್ ಮನುಷ್ಯರಿಗಿಂತ ಕಡಿಮೆ ಎಂದು ಸಿದ್ಧವಾಗುವದಿಲ್ಲ. " ಬಾಪೂ ಹೇಳಿದರು : " ವೈದ್ಯರು ಇಂಥ ಸುಳ್ಳುಸಂಗತಿಗಳನ್ನು ಹೇಳಿದರೆ ಮುಂದೇನು ಗತಿ ? ಇದು ಎಷ್ಟು ತಪ್ಪು ಇದೆ ? ಯಾವ ಜಪಾನಿಯು ಕೇವಲ ಅಕ್ಕಿಯ ಮೇಲೆ ಇರುತ್ತಾನೆ ? ಅಕ್ಕಿಯು ಅವನ ಮುಖ್ಯಾಹಾರವಲ್ಲ. ಅವರು ಮಾಂಸ ಮತ್ತು

ಮೀನಗಳನ್ನು ತಿನ್ನುತ್ತಾರೆ. ಈ ಜನರಿಗೆ ಅಕ್ಕಿಯ ಮೇಲೆಯೇ ಜೀವಿಸುವವರೆಂದು ಹೇಗೆ ಹೇಳಲಿಕ್ಕಾದೀತು? ಬಿಹಾರೀ ಜನರು ಮಾತ್ರ ಅಕ್ಕಿಯ ಮೇಲೆ ಜೀವಿಸುತ್ತಾರೆ. ಅವರೆಲ್ಲರೂ ಎಷ್ಟು ಬಲಹೀನರೂ ರೋಗಿಗಳೂ ಆಗಿದ್ದಾರೆ! ಶರೀರದ ಘಟನೆ ಅಕ್ಕಿಯಿಂದಾಗುವದೇ ಇಲ್ಲ. "

ಆರ್ಮಿನಿಯನ್ ಪತ್ರದಲ್ಲಿ ಆಕಾಶದ ಬಣ್ಣವು ಆಶೆಯ ಚಿಹ್ನವೆಂದು ಬರೆದಿವೆ. ಜಮುಖಾನೆಯಲ್ಲಿ ಖಾಕೀ ಬಣ್ಣವಿದೆ. ಬಾಪೂ ಅಂದರು: " ಇದಕ್ಕೆ ಆಕಾಶದ ಬಣ್ಣವೆಂದು ಹೇಗೆ ಹೇಳಿರಬಹುದು ? " ಸಾಯಂಕಾಲ ತಿರುಗಾಡುವಾಗ್ಗೆ ಹೇಳತೊಡಗಿದರು: " ಅಲ್ಲಿ ಆಕಾಶದಲ್ಲಿ ಕಾಣುವ ಖಾಕೀ ಬಣ್ಣದ ತುಂಡಿನಂತೆಯೇ ಈ ಬಣ್ಣವಿರುತ್ತದೆ. ಸರಿಯಾದ ಆಕಾಶದ ಬಣ್ಣವು ಬಹುತರವಾಗಿ ಹಾಗೇ ಇರಬಹುದು. ಡೀನ ಫೆರಾರನು ಬರೆದ ಕ್ರೈಸ್ತನ ಜೀವನ ಚರಿತ್ರೆಯನ್ನು ಓದಿದ್ದೆ. ಅದರಲ್ಲಿ ನೆಜರೆಥದ ಮುಂದಿನ ಗುಡ್ಡಗಳ ಕಾರಣದಿಂದ ಅಲ್ಲಿಯ ಆಕಾಶದ ಬಣ್ಣವು ಹೀಗೆಯೇ ಇದೆ ಎಂದು ವರ್ಣಿಸಿದ್ದು ನನಗೆ ಜ್ಞಾಪಕವಿದೆ !"

ನಿನ್ನೆ ನರಸಿಂಹಭಾಯಿ ಪಟೇಲರು ಆಫ್ರಿಕಾದಿಂದ ಬರೆದ ಪತ್ರಗಳನ್ನು ಓದಿದರು. ಅವುಗಳಲ್ಲಿ ಯಾವ ಪತ್ರದಲ್ಲಿ ನರಸಿಂಹಭಾಯಿಯವರ ವಿಚಾರಗಳು ಹೇಗೆ ಬದಲಾದವೆಂಬುದಿದ್ದಿತೊ ಅದನ್ನು ನನಗೆ ಒತ್ತಿ ಓದಿ ಹೇಳಿದರು; ಯಾಕಂದರೆ ನಾನು ನೂಲುತ್ತಿದ್ದೆ. ಅದರಲ್ಲಿ ಹಿಂದುಸ್ತಾನವನ್ನು ಬಿಟ್ಟಮೇಲೆ ಸಹ ಸರಕಾರದ ಬಗ್ಗೆ ಅವರ ಕ್ರೋಧ ಮತ್ತು ವೈರಭಾವ ಹೇಗೆ ಸ್ಥಿರವಾಗಿ ಉಳಿದಿದ್ದವು, ಅವರು ಇಂಗ್ರೇಜಿ ಪ್ರವಾಸಿಗಳ ಸಂಗಡ ತಮ್ಮ ಉಪನ್ಯಾಸಗಳನ್ನು ಅದಲು ಬದಲು ಮಾಡುತ್ತ ಟಾಲಸ್ಟಾಯರ A Murderer's Remorse( ಕೊಲೆಗಾರನ ಪಶ್ಚಾತ್ತಾಪ) ಎಂಬ ಪುಸ್ತಕವನ್ನು ಓದಿದ ಕೂಡಲೇ ಅವರ ಕಣ್ಣುಗಳು ಹೇಗೆ ತೆರೆದವು ಎಂಬುದನ್ನು ಬರೆದಿತ್ತು. ಅವರು ಆ ಪುಸ್ತಕವನ್ನು ಅನೇಕ ಸಲ ಓದಿ ಅದರ ಅನುವಾದವನ್ನು ಮಿತ್ರರಲ್ಲಿ ತಿರುಗಾಡಿಸಿದರು ಮತ್ತು ಅವರು ಅಹಿಂಸೋಪಾಸಕರಾದರು. ಬಾಪೂ ಹೇಳಿದರು: " ಇವರ ಸತ್ಯತನವು ಪ್ರಶಂಸನೀಯವಿದೆ. "

ಒಂದು ಪತ್ರವು—ಅಂಬಾಲಾಲ ಮೋದಿಯವರದು—ಜೋಲಿಯಾ ಖಡಕೆ * ನಡಿಯಾದದಿಂದ ಬಂದಿತ್ತು. ಅದಕ್ಕೆ ಉತ್ತರ ಬರೆದ ಮೇಲೆ ಜೋಲಿಯಾದ ಅರ್ಥ ಕೇಳಿದೆನು. ಅವರ ಮೇಲಿಂದ ಓಣಿಗಳ ಹೆಸರನ್ನು

೮-೪-'೩೨ ಕುರಿತು ಮಾತು ನಡೆದವು. ವಲ್ಲಭಭಾಯಿ ಹೇಳತೊಡಗಿದರು: " ನಾಗರವಾಡಾ ಅಂದರೆ ಢೇಡವಾಡಾ." ಬಾಪೂಗೆ ಕೂಡ ನಗೆ ಬಂದಿತು. ಆದರೆ ಈ ನಗೆಯನ್ನು ತಡೆಯುವದಕ್ಕಾಗಿಯೊ ಏನೋ ಅನಾಯಾಸ ರಾಜಕೋಟದ ನಾಗರವಾಡೆಯ ನೆನಪು ಮಾಡುತ್ತ ಮಾಡುತ್ತ ಅವರಿಗೆ ಕೆಲವು

* ಒಂದು ಓಣಿಯ ಹೆಸರು.

ಸ್ಮರಣೆಗಳು ಮತ್ತೆ ಹೊಸತಾದವು. ೧೮೯೬-೯೭ರಲ್ಲಿ ರಾಜಕೋಟದಲ್ಲಿ ಮೊದಲನೇ ಸಲ ಪ್ಲೇಗು ಬಂದಿತ್ತು. ಆ ಕಾಲಕ್ಕೆ ಬಾಪೂ ಅದೇ ದಕ್ಷಿಣ ಆಫ್ರಿಕೆಯಿಂದ ಬಂದಿದ್ದರು. ಅವರಿಗೆ ಸುಧಾರಣೆ ಮಾಡುವ ಮನಸ್ಸಂತೂ ಇದ್ದೇ ಇತ್ತು. ಆದುದರಿಂದ ಪ್ಲೇಗನಿವಾರಣೆ ಮಾಡುವ ಕಾರ್ಯದಲ್ಲಿ ಸಹಾಯ ನೀಡಿದರು. ಮುಖ್ಯ ಕಾರ್ಯಕ್ರಮವೆಂದರೆ ಆಗಿನ ಕಾಲದ ಶೌಚಕೂಪಗಳನ್ನು ನಾಶಮಾಡಿ ಸೂರ್ಯಪ್ರಕಾಶ ಬರುವಂಥ, ಭಂಗೀಜನರು ಮುಂದಿನ ಭಾಗದಿಂದ ಹೊಕ್ಕು ಆ ಭಾಗವನ್ನು ಸ್ವಚ್ಛಮಾಡಲಿಕ್ಕೆ ಅನುಕೂಲವಾಗುವಂಥ ಎರಡನೇ ಶೌಚಕೂಪಗಳನ್ನು ರಚಿಸುವದು. ಈ ಬದಲಾವಣೆ ಮಾಡಲಿಕ್ಕೆ ಬಡಜನರು ಬಹಳ ಅನುಕೂಲರಾದರು. ಆದರೆ ಹೆಚ್ಚಿನ ಹೆಚ್ಚು ವಿರೋಧವು ನಾಗರವಾಡೆಯಲ್ಲಿ ಆಯಿತು. ಅವರು ಅನ್ನುತ್ತಿದ್ದರು: "ನೋಡಿರಿ, ಬಂದಾರ ಬಹಳ ದೊಡ್ಡವರು. ಶೌಚಕೂಪಗಳ ಸುಧಾರಣೆ ಮಾಡಲಿಕ್ಕೆ!" ನನ್ನ ಸಂಬಂಧಿಕರೂ ಪೋಲಿಸ ಸುಪರಿಂಟೆಂಡೆಂಟರೂ ಆದ ಮೇಘಜೀಭಾಯಿಯುವರದೂ ಬೇರೆಯುವರದೂ ನನಗೆ ಸಹಾಯವಿತ್ತು. ಆದರೆ ನಾಗರವಾಡೆಯ ಜನರು ಯಾರ ಮಾತನ್ನೂ ಕೇಳಲಿಲ್ಲ ಇಷ್ಟೇ ಅಲ್ಲ ಬೈಗಳ ಸುರಿಮಳೆ ಮಾಡಿದ್ದು ಬೇರೆ! ನಾನು ಢೇಡವಾಡೆಯಲ್ಲಿಯೂ ಹೋಗಿದ್ದೆ—ಆದರೆ ಢೇಡವಾಡೆ ಎಲ್ಲಿ, ನಾಗರವಾಡೆ ಎಲ್ಲಿ! ಢೇಡವಾಡೆಯ ಸ್ವಚ್ಛತೆಗೆ ಎಲ್ಲೆಯಿದ್ದಿಲ್ಲ! ಅಲ್ಲಿಯ ಸ್ವಚ್ಛ ಗಲ್ಲಿಗಳಲ್ಲಿ ಏನೂ ಹಾಸದೆ ಕೂಡಲಿಕ್ಕೆ ಬರುವಂತಿತ್ತು, ಆದರೆ ನಾಗರವಾಡೆಯು ಕೊಳೆಯ ತವರೂರಾಗಿತ್ತು.

ಆ ವೇಳೆಗೆ ಬರಗಾಲವೂ ಇತ್ತು. ಬರಗಾಲಪೀಡಿತರ ಸಲುವಾಗಿ ಆಫ್ರಿಕೆಯಿಂದಲೂ ರೂಪಾಯಿಗಳು ಬಂದಿದ್ದವು. ನನಗೆ ಸ್ವಲ್ಪ ಅನುಭವವಿದ್ದುದರಿಂದ ಒಂದು ಮಧ್ಯವರ್ತಿಯ ಸ್ಥಳಕ್ಕೆ ಹೋಗಿ ಧಾನ್ಯ ಹಂಚತೊಡಗಿದೆ. ಅಲ್ಲಿ ದಂಗೆಯ ಚಿನ್ಹಗಳು ತೋರುವಷ್ಟು ಗೊಂದಲವೆದ್ದಿತು.

ಮೂರನೆಯ ಕೆಲಸವು ಒಂದು ಹಿಂದೂ ಮುಸ್ಲಿಮ್ ತಂಟೆಯ ಬಗ್ಗೆ ಇತ್ತು. ಈ ತಂಟೆಯಲ್ಲಿ ಒಬ್ಬಿಬ್ಬ ಮುಸಲ್ಮಾನರು ಪರಿಚಯದವರಿದ್ದುದರಿಂದ ಅವರಿಂದ ತಂಟೆಯನ್ನು ತೀರಿಸುವದರಲ್ಲಿ ನನಗೆ ಯಶದೊರೆಯಿತೆಂದು ಜ್ಞಾಪಕವಿದೆ.

ಅದೇ ಕಾಲಕ್ಕೆ ವಿಕ್ಟೋರಿಯಾ ಮಹಾರಾಣಿಯ ವಜ್ರಮಹೋತ್ಸವವಿತ್ತು. ನಾನು ಸಂಪೂರ್ಣ ಭಾಗತೆಗೆದುಕೊಂಡಿದ್ದೆನು. ಮಗನಲಾಲ ಮತ್ತು ಛಗನಲಾಲರಿಗೆ God Save the King ಕಲಿಸಿದ್ದೆನು. ಈ ಹುಡುಗರಿಂದ ಸಣ್ಣ ಸಣ್ಣ ಅನೇಕ ಕೆಲಸ ಮಾಡಿಸಿಕೊಂಡಿದ್ದೆನು. ಆಗಿನಿಂದಲೇ ಈ ಹುಡುಗರನ್ನು ನನ್ನ ವಶಕ್ಕೆ ತೆಗೆದುಕೊಂಡೆನೆಂದು ಹೇಳಬಹುದು. ಭವಿಷ್ಯದಲ್ಲಿ ಈ ಹುಡುಗರು ಉಪಯೋಗ ಬೀಳುವರೆಂದು ನನಗೆ ಅನಿಸಿತು.

*            *            *

ಇವತ್ತು ಬಾಪೂ ಅನೇಕ ಪತ್ರಗಳನ್ನು ಬರೆದರು ಮತ್ತು ಬರೆಯಿಸಿದರು. ಪ್ರೇಮಾಬಹನ ಮತ್ತು ಮೀರಾಬಹನರಿಗೆ ತಮ್ಮ ಕೈಯಿಂದ ಉದ್ದವಾದ ಪತ್ರಗಳನ್ನು ಬರೆದರು— ಎಡಗೈಯಿಂದ. ಬಲಗೈ ಹೆಬ್ಬಟ್ಟು ಬಹಳ ನೋವಾಗುವದರಿಂದ ಎಡಗೈಯಿಂದ ಬರೆಯಬೇಕಾಗುತ್ತಿದೆ. ಆದರಿಂದ ಸ್ವಲ್ಪೇ ಬರೆಯಲು ಸಾಧ್ಯವಾಗುತ್ತಿದೆ. ಕಾರಣ ಸಾಮಾನ್ಯ ಪತ್ರಗಳನ್ನು ನನ್ನಿಂದ ಬರೆಯಿಸುತ್ತಾರೆ. ಆದರೆ ಈ ಪ್ರಕಾರದ ಮುಖ್ಯ ಪತ್ರಗಳನ್ನೆಲ್ಲ ತಾವೇ ಬರೆಯುತ್ತಾರೆ. ನನ್ನ ಕಡೆಯಿಂದ ಬರೆಯಿಸಿದ ಪತ್ರಗಳಲ್ಲಿ ಅಂಬಾಲಾಲ ಮೋದಿಯವರದೊಂದಿತ್ತು. ಅದನ್ನು ಕುರಿತು ನಾನು ಮೇಲೆ ಬರೆದಿದ್ದೇನೆ. ಸಂತರಾಮ ಮಂದಿರದಲ್ಲಿ ಸಂತರಾಮ ಮಹಾರಾಜರ ಆಜ್ಞೆಯಿಂದ ದೇಶದ ಶಾಂತಿಗಾಗಿ ಗೀತಾ, ರಾಮಾಯಣ ಮುಂತಾದವುಗಳ ಪಾರಾಯಣ ಪ್ರಾರಂಭವಾಗಿದೆ. ಮಹಾರಾಜರು ಈ ವಿಷಯ ಕುರಿತು ಬಾಪೂ ಅವರ ಅಭಿಪ್ರಾಯ ಕೇಳಿದ್ದರು. ಬಾಪೂ ಅದಕ್ಕೆ ಉತ್ತರ ಬರೆದರು : " ನಿಮ್ಮ ಪತ್ರ ಮತ್ತು ಗುಜರಾತಿ ಗೀತಾ–ರಾಮಾಯಣಗಳು ಕೈ ಸೇರಿದವು. ಇವೆರಡಕ್ಕಾಗಿ ಮಹಾರಾಜರ ಆಭಾರ ಮನ್ನಿಸುತ್ತೇನೆ. ಬ್ರಾಹ್ಮಣ ಪಂಡಿತರು ಸಂತಪುರುಷರಾಗಿ ಜನರಲ್ಲಿ ಉಪನಿಷದಾದಿಗಳ ಪ್ರಚಾರ ಮಾಡಿದರೆ ಒಳ್ಳೆಯದೆಂಬ ಬಗ್ಗೆ ಭಿನ್ನಾಭಿಪ್ರಾಯವೇ ಆಗಲಾರದು. ವಿದ್ವತ್ತೆ ಮತ್ತು ಸಾಧುತ್ವಗಳ ಮಿಲನವು ಈಗಿನ ಕಾಲದಲ್ಲಿ ಅಪರೂಪವಾಗಿದೆ. ಆದುದರಿಂದ ಇಂಥ ಪ್ರವೃತ್ತಿಗಳ ಬಗ್ಗೆ ಮನಸ್ಸಿನಲ್ಲಿ ಉದಾ-ಸೀನತೆಯಂತೂ ಇದ್ದೇ ಇರುತ್ತದೆ.

" ಗೀತಾ–ರಾಮಾಯಣಗಳ ಪೂರ್ಣ ಪಾರಾಯಣದ ವಿಷಯದಲ್ಲಿ ಮೇಲಿನಂತೆ ಅಥವಾ ಅದಕ್ಕೂ ಹೆಚ್ಚು ಉದಾಸೀನತೆಯಿರುತ್ತದೆ. ಅರ್ಥ ತಿಳಿಯದೆ ಅಥವಾ ಅರ್ಥ ತಿಳಿದರೂ ಸಹ ಕೇವಲ ಉಚ್ಚಾರಣೆಗಾಗಿ—ಕೇವಲ ಉಚ್ಚಾರಣೆಯಲ್ಲಿಯೆ ಪುಣ್ಯವಿದೆಯೆಂದು ತಿಳಿದು—ಅಥವಾ ಆಡಂಬರ ಅಥವಾ ಕೀರ್ತಿಗಾಗಿ ಯಾರಾದರೂ ಪಾಠಮಾಡುತ್ತಿದ್ದರೆ ನನ್ನ ದೃಷ್ಟಿಯಿಂದ ಅವರ ಪಾರಾಯಣಕ್ಕೆ ಎಷ್ಟೂ ಬೆಲೆಯಿಲ್ಲ. ಇಷ್ಟೇ ಅಲ್ಲ, ಅದರಿಂದ ಹಾನಿಯಾಗುತ್ತದೆಂದು ನನ್ನ ತಿಳಿವಳಿಕೆ. ಮೇಲಿನ ದೋಷಗಳನ್ನು ದೂರಮಾಡುವ ಉಪಾಯಗಳನ್ನು ಮಹಾರಾಜರು ಕಂಡುಹಿಡಿದಿದ್ದರೆ ಮತ್ತು ಅದಕ್ಕನುಸಾರವಾಗಿ ಪಾರಾಯಣವನ್ನು ಮಾಡಿಸುತ್ತಿದ್ದರೆ ಅದರಿಂದ ಲಾಭವೇ ಆಗುವದೆಂಬುದರಲ್ಲಿ ಸಂದೇಹವಿಲ್ಲ. ನಾನು ಕೈದಿ ಇದ್ದೇನೆಂಬ ಮಾತನ್ನು ಲಕ್ಷ್ಯದಲ್ಲಿಟ್ಟು ನನ್ನ ಇಂಥ ಪತ್ರಗಳು ಸಾರ್ವಜನಿಕ ಉಪಯೋಗವಾಗಬಾರದೆಂಬ ವಿಷಯದಲ್ಲಿ ಜಾಗರೂಕತೆಯನ್ನು ವಹಿಸಿರಿ."

ಎರಡನೆಯ ಪತ್ರವನ್ನು ಹನುಮಾನಪ್ರಸಾದ ಪೋದ್ದಾರರಿಗೆ ಹಿಂದಿಯಲ್ಲಿ ಬರೆಯಿಸಿದರು. ಇದರಲ್ಲಿ ಅವರು ಕೇಳಿದ ಎಷ್ಟೋ ಪ್ರಶ್ನೆಗಳಿಗೆ ಉತ್ತರವಿದ್ದವು :

೧–೨. ದೇವರ ಅಸ್ತಿತ್ವವನ್ನು ನಂಬಬೇಕು. ಯಾಕಂದರೆ ನಾವು ನಮ್ಮ

ಅಸ್ತಿತ್ವವನ್ನು ನಂಬುತ್ತೇವೆ. ಜೀವದ ಅಸ್ತಿತ್ವವಿದ್ದರೆ ಜೀವರಾಶಿಗಳ ಸಮುದಾಯವಾದಂಥ ದೇವರೂ ಇದ್ದೇ ಇರುತ್ತಾನೆ. ನನ್ನ ದೃಷ್ಟಿಯಿಂದ ಇದೇ ಪ್ರಬಲ ಪ್ರಮಾಣವಾಗಿದೆ.

೩. ನಮ್ಮ ಅಸ್ತಿತ್ವದಲ್ಲಿ ನಂಬುಗೆ ಇಡದಿರುವದರಿಂದ ಆಗುವ ಹಾನಿಯೇ ದೇವರ ಅಸ್ತಿತ್ವದಲ್ಲಿ ನಂಬುಗೆ ಇಡದಿರುವದರಿಂದಲೂ ಆಗುವ ದೊಡ್ಡ ಹಾನಿಯು. ಅರ್ಥಾತ್ ದೇವರ ಅಸ್ತಿತ್ವದಲ್ಲಿ ನಂಬುಗೆ ಇಡದಿರುವದು ಆತ್ಮಹತ್ಯೆಯಂತಿದೆ. ದೇವರ ಅಸ್ತಿತ್ವದಲ್ಲಿ ನಂಬುಗೆ ಇಡುವದು ಒಂದು ಮಾತು, ಮತ್ತು ದೇವರನ್ನು ಹೃದಯಗತ ಮಾಡಿಕೊಳ್ಳುವದು ಮತ್ತು ಅದಕ್ಕೆ ಅನುಕೂಲವಾಗಿ ಆಚರಣೆಯನ್ನಿಡುವದು ಎರಡನೆಯ ಮಾತು. ನಿಜವಾಗಿ ನೋಡಿದರೆ ಈ ಜಗತ್ತಿನಲ್ಲಿ ನಾಸ್ತಿಕರಾರೂ ಇಲ್ಲವೇ ಇಲ್ಲ. ನಾಸ್ತಿಕತೆಯು ಆಡಂಬರ ಮಾತ್ರವಿರುತ್ತದೆ.

೪. ದೇವರ ಸಾಕ್ಷಾತ್ಕಾರವು ರಾಗದ್ವೇಷಾದಿಗಳಿಂದ ಸಂಪೂರ್ಣ ಮುಕ್ತರಾದವರಿಗೆ ಆಗಬಲ್ಲದೆ ಹೊರತು ಬೇರೆಯವರಿಗೆ ಆಗಲಾರದು. ಯಾವನಾದರೂ ಮನುಷ್ಯನು ತನಗೆ ಸಾಕ್ಷಾತ್ಕಾರವಾಗಿದೆಯೆಂದು ಹೇಳುತ್ತಿದ್ದರೆ, ಅವನಿಗೆ ಸಾಕ್ಷಾತ್ಕಾರವಾಗಿಲ್ಲವೆಂದೇ ನನ್ನ ಅಭಿಪ್ರಾಯ. ಈ ವಿಷಯವು ಅನುಭವಗಮ್ಯವಿದ್ದರೂ ಅನಿರ್ವಚನೀಯವಿದೆ. ಇದರಲ್ಲಿ ನನಗೆ ಎಷ್ಟೂ ಸಂದೇಹವಿಲ್ಲ.

೫. ದೇವರಲ್ಲಿ ವಿಶ್ವಾಸವಿಡುವದರಿಂದಲೇ ನಾನು ಜೀವಿಸಿರಬಲ್ಲೆನು. ನಾನು ಮಾಡಿದ ದೇವರ ವ್ಯಾಖ್ಯೆಯನ್ನು ನೆನಪಿನಲ್ಲಿಡಬೇಕು. ನನ್ನೆದುರಿಗೆ ಸತ್ಯವನ್ನು ಬಿಟ್ಟು ಬೇರೆ ಯಾವ ದೇವರಿಲ್ಲ. ಸತ್ಯವೇ ದೇವರು.

“ಸತ್ಯವೇ ದೇವರು” ಎಂಬುದರ ಮತ್ತು “ಎಲ್ಲವನ್ನೂ ದೇವರ ಮೇಲಿನ ಶ್ರದ್ಧೆಯಿಂದ ಮಾಡತಕ್ಕದ್ದು, ಎಲ್ಲವನ್ನೂ ದೇವರ ಮೇಲಿನ ನಂಬುಗೆಯಿಂದ ಮತ್ತು ಅವನ ಪ್ರೇರಣೆಯಿಂದ ಮಾಡತಕ್ಕದ್ದು,” ಎಂಬುದರ ಮೇಳವು ಹೇಗೆ ಕೂಡುತ್ತದೆಂದು ನಾನು ಇಂದು ತಿರುಗಾಡುವ ಕಾಲಕ್ಕೆ ಕೇಳಿದೆ. ಇವತ್ತೇ ‘ಸತ್ಯಾಗ್ರಹ ಆಶ್ರಮದ ಇತಿಹಾಸ’ ದಲ್ಲಿ ಈ ವಾಕ್ಯವನ್ನು ಬರೆಯಿಸಿದ್ದರು: “ಈ ಪ್ರಕಾರ ಶ್ರದ್ಧೆಯನ್ನಿಡುವವರು ದೇವರು ಕೊಟ್ಟ ಹಣದಿಂದ ದೇವರು ಕೊಟ್ಟ ಕೆಲಸಗಳನ್ನು ಮಾಡಬೇಕು. ದೇವರು ತಾನೇ ಸ್ವತಃ ಯಾವುದಾದರನ್ನೂ ಮಾಡುತ್ತಾನೆಂದು ನಮಗೆ ನೋಡಲಿಕ್ಕಾಗಲಿ ತಿಳಿಯಲಿಕ್ಕಾಗಲಿ ಕೊಡುವದಿಲ್ಲ. ಅವನು ಮನುಷ್ಯರಿಗೆ ಪ್ರೇರಣೆಮಾಡಿ ಅವರ ಮುಖಾಂತರ ತನ್ನ ಕಾರ್ಯವನ್ನು ಮಾಡಿಸುತ್ತಾನೆ.” ಇಂಥ ವಾಕ್ಯಗಳಲ್ಲಿ ‘ಈಶ್ವರ’ ಶಬ್ದದ ಬದಲು ಪರ್ಯಾಯ ಶಬ್ದವೆಂದು ‘ಸತ್ಯ’ ಶಬ್ದವನ್ನು ಬರೆದರೆ ನಡೆದೀತೆ? ಸತ್ಯವು ಇಂಥ ಕೆಲಸಮಾಡುತ್ತಿದೆ, ಮನುಷ್ಯರನ್ನು ಪ್ರೇರಿತಮಾಡುತ್ತಿದೆ, ಪ್ರವೃತ್ತಿಯನ್ನು ನಡೆಸುತ್ತಿದೆ, ಕಳಿಸುತ್ತಿದೆ ಮುಂತಾಗಿ ಹೇಗೆ ಹೇಳಲಿಕ್ಕಾಗುತ್ತಿದೆ?” ಬಾಪೂ ಹೇಳಿದರು : “ಅವಶ್ಯವಾಗಿ ಹೇಳಲಿಕ್ಕಾಗುತ್ತಿದೆ.

ಸತ್ಯದ ಅರ್ಥವು ಸಂಕುಚಿತವಿಲ್ಲ. ಆದರ ವಿಶಾಲಾರ್ಥವು ಹೀಗಿದೆ: ಸತ್ಯವೆಂದರೆ ಆಗುವದು, ಶಾಶ್ವತವಿದ್ದಂಥ ವಸ್ತು. ಈ ಶಕ್ತಿಯ ಬಲದಿಂದಲೇ ಎಲ್ಲವು ಆಗುತ್ತದೆಂಬುದೇ ಈಶ್ವರ–ಶ್ರದ್ಧೆಯು. ಈಶ್ವರ ಶಬ್ದವು ಪ್ರಚಲಿತವಿದ್ದುದರಿಂದ ನಾವು ಅದನ್ನು ಸ್ವೀಕರಿಸಿದ್ದೇವೆ. ಈಶ್ವರ ಶಬ್ದವು 'ಈಶ' ಅಂದರೆ 'ರಾಜ್ಯ ನಡೆಸು' ಈ ಧಾತುವಿನಿಂದ ಬಂದಿದೆ. ಆದುದರಿಂದ ನನ್ನ ದೃಷ್ಟಿಯಿಂದ ಇದು ಸತ್ಯಕ್ಕಿಂತ ಕಡಿಮೆ ತರಗತಿಯ ಶಬ್ದವಿದೆ. ಯಾವದು ಅಚಲವಾದ ಸತ್ಯವಿದೆಯೊ ಅದರ ಶಕ್ತಿಯಿಂದ ಎಲ್ಲ ಪ್ರವೃತ್ತಿಗಳು ನಡೆಯುತ್ತಿವೆ ಮತ್ತು ಮನುಷ್ಯನಿಗೆ ಪ್ರೇರಣೆ ದೊರೆಯುತ್ತದೆ. ಮುನಶಿ ಇವನಿಗೂ ಕೂಡ ಸಂಶಯವಿತ್ತು. ಅವನು ನನ್ನನ್ನು ಕೇಳಿದ್ದನು: '**ईश्वरप्रणिधानात् वा**' ದಲ್ಲಿ ಈಶ್ವರ ಇದರ ಅರ್ಥವೇನು? ನಾನು ಅವನಿಗೆ ಬರೆದೆನು: "ಈಶ್ವರ ಅಂದರೆ ಸತ್ಯ. ' ಈ ಸೂತ್ರದ ಮೇಲೆ ಭಾಷ್ಯ ಮಾಡುವ ಕೆಲವು ಭಾಷ್ಯಕಾರರು ಸೂತ್ರದಲ್ಲಿ ಈ ಶಬ್ದಗಳು ನಿರರ್ಥಕ ಇವೆಯೆಂದೂ, ಪತಂಜಲಿಯು ಕೇವಲ ಪ್ರಚಲಿತವಿದ್ದ ಶ್ರದ್ಧೆಗೆ ಧಕ್ಕೆ ತಟ್ಟಬಾರದೆಂದೇ ಬರೆದಿದ್ದಾನೆಂದೂ ಹೇಳಿದ್ದಾರೆ. ಆದರೆ ನಾನು ಎಂದೂ ಹೀಗೆ ತಿಳಿಯುವದಿಲ್ಲ. ಪತಂಜಲಿಯಂಥ ಸಮರ್ಥ ಸೂತ್ರಕಾರನು ಒಂದೂ ಶಬ್ದವನ್ನು ನಿರರ್ಥಕವಾಗಿ ಉಪಯೋಗಿಸಲಾರನು. ನಾನು ಮಾಡಿದ ಅರ್ಥವನ್ನೇ ಅವನು ಮಾಡಿರುವನೋ ಇಲ್ಲವೊ ಎಂಬುದನ್ನು ಹೇಳಲಾರೆ. ನಾನು ಮಾಡುವ ಅರ್ಥವನ್ನು ತೆಗೆದುಕೊಂಡರೆ ಈ ಶಬ್ದವು ಆವಶ್ಯಕವಿದೆ."

ಮೀರಾಬಹನರ ೨೪ ಪುಟದ ಪತ್ರ ಬಂತು. ಇದರ ಪ್ರತಿಯೊಂದು ಪಂಕ್ತಿಯೂ ನಿರ್ಮಲಭಕ್ತಿಯಿಂದ ತುಂಬಿದೆ. ಬಾಪೂ ಅವರ ಹತ್ತಿರ ನಿಂತು ಸೇವೆ ಮಾಡಿದ ಹೊರತು ಅವರಿಗೆ ಸಮಾಧಾನವಾಗುವದಿಲ್ಲ. ಬಾಪೂ ನೀನು ಮೋಹವನ್ನು ಬಿಡಬೇಕು, ಈ ಮೋಹವನ್ನು ಬಿಡದಿದ್ದರೆ ನನ್ನ ಅಭಾವದಲ್ಲಿ ನೀನು ಅಸಹಾಯಳಾಗುವಿ ಎಂದು ಹೇಳುತ್ತಾರೆ. ಈ ತಂಟೆಯು ಮೀರಾಬಹನರು ಬಂದಂದಿನಿಂದ ಬಾಪೂ ಮತ್ತು ಅವರ ಮಧ್ಯದಲ್ಲಿ ನಡೆದಿದೆ. ಇವತ್ತು ಅವರು ತಮ್ಮ ಪತ್ರದಲ್ಲಿ ಮತ್ತೆ ತಮ್ಮ ಹೃದಯವನ್ನು ತೆರೆದಿಟ್ಟಿದ್ದಾರೆ. ಅವರ ನಿರ್ಮಲತೆಯು ಅದ್ಭುತವಾಗಿದೆ:

"Bapu, I am never without that thought in my mind, as to how best to serve you. I think and pray and reason with myself and it always ends the same way in my heart of hearts. When you are taken from us, as in jail, an instinct impels me to work with all my strength at outward service of your cause. I feel no doubt and no difficulty. When you are with us, an equally strong instinct impels me to retire into silent personal service—trying to do anything else, I feel lost and futile. The

capacity for the former depends on the fulfilment of the latter. The one is the counterpart of the other and something continually tells me that it was for fulfilment in that way that I was led to you. The instinct is so strong that I cannot get round it or through it or over it. It is difficult to ask you to have faith in it as the full proof of its correctness can only come after your death. But there it is, Bapu, and I can only leave it at that. This much I know full-well that during this struggle my strength, capacity and inner peace and happiness are much greater than last time, because I had been able to serve according to my instinct (except for one short spell of anguish since your previous release). The fact that I was on the point of a break-down when I came here, had nothing to do with this question. It was sheer over-work, because when I saw that I was shortly going to be arrested, I simply spent my strength recklessly, knowing an enforced rest was coming. And there was more than enough work around me to be reckless over.

"Who knows if it is all delusion! But a woman has to go by instinct. It is strength with her than any amount of reason, and her full strength can only be harnessed and brought into service if her nature is able to express itself. I have no thought, no care, no longing in all the world except for you--*you the cause--you the ideal*. To serve that cause in this life and to reach that ideal in after life. God who has brought me from utter darkness to the light of your path will surely not answer my prayers by leaving me now to follow a wrong instinct! I have not written all this for the sake of argument, but simply to share with you the result of my ceaseless strivings to *understand* since I have been in jail".

"ಬಾಪೂ, ನಿಮ್ಮ ಉತ್ತಮ ಸೇವೆಯನ್ನು ಹೇಗೆ ಮಾಡಬಲ್ಲೆನೆಂಬ ವಿಚಾರವು ನನ್ನ ಮನಸ್ಸಿನಿಂದ ಒಂದು ಕ್ಷಣ ಸಹ ಹೋಗಲೊಲ್ಲದು. ನಾನು ವಿಚಾರ ಮಾಡುತ್ತೇನೆ, ನನ್ನ ಮನಸ್ಸಿಗೆ ತಿಳಿಸಿ ಹೇಳುತ್ತೇನೆ, ದೇವರನ್ನು ಪ್ರಾರ್ಥಿಸುತ್ತೇನೆ. ಆದರೆ ಕೊನೆಗೆ ನನ್ನೊಳಗಿಂದ ಒಂದೇ ಧ್ವನಿಯು ಹೊರಡುತ್ತಿದೆ. ಈಗ ಜೇಲಿನಲ್ಲಿರಿಸಿದಂತೆ ನಿಮ್ಮನ್ನು ನಮ್ಮ ಮಧ್ಯದೊಳಗಿಂದ ಎತ್ತಿಕೊಂಡು ಹೋದಾಗ ನಿಮ್ಮ ಧ್ಯೇಯ ಸಾಧಿಸುವ ಹೊರಗಿನ ಕೆಲಸಗಳಲ್ಲಿ ಪೂರ್ಣ ಉತ್ಸಾಹದಿಂದ ಬೀಳುತ್ತೇನೆ. ಯಾವದೇ

ಸಂಶಯವಾಗಲಿ, ತೊಂದರೆಯಾಗಲಿ ಉಂಟಾಗುವದಿಲ್ಲ. ನೀವು ನಮ್ಮ ಹತ್ತಿರ ಇದ್ದಾಗ ಒಂದು ಅಸಾಧಾರಣ ಪ್ರಬಲ ವೃತ್ತಿಯು ಮೂಕತನದಿಂದ ನಿಮ್ಮ ಸೇವೆಯಲ್ಲಿ ಮಗ್ನಳಾಗಿರಲು ನನಗೆ ಪ್ರೇರಣೆ ಮಾಡುತ್ತಿರುತ್ತದೆ. ಮತ್ತು ಬೇರೆ ಯಾವ ಕೆಲಸ ಮಾಡುವ ಪ್ರಯತ್ನ ಮಾಡುವದೂ ನನಗೆ ಮಿಥ್ಯಾ ಎಂದು ಎನಿಸುತ್ತದೆ, ದಾರಿ ತಪ್ಪಿದಂತೆ ಆಗುತ್ತದೆ. ನಿಮ್ಮ ಸ್ವಂತದ ಸೇವೆ ಮಾಡುವದರಲ್ಲಿ ಯಶ ದೊರೆತರೆ, ಆ ಬಾಹ್ಯಕೆಲಸ ಮಾಡುವದಕ್ಕೆ ಶಕ್ತಿಬರುತ್ತದೆಂದೂ ಒಂದು ಮತ್ತೊಂದಕ್ಕೆ ಪೂರಕವಾಗಿದೆಯೆಂದೂ ಅನಿಸುತ್ತದೆ. ನಿಮ್ಮ ಹತ್ತಿರ ನನ್ನನ್ನು ಎಳೆತಂದದ್ದು ನಿಮ್ಮ ಸೇವೆ ಮಾಡುವದಕ್ಕಾಗಿಯೆ ಎಂದು ಯಾರೊ ನನಗೆ ಯಾವಾಗಲೂ ಒಳಗಿಂದೊಳಗೆ ಹೇಳುತ್ತಿರುತ್ತಾರೆ. ಅದರಿಂದ ಬಿಡುಗಡೆಯಾಗದಷ್ಟು ಹೆಚ್ಚು ನನ್ನ ಈ ವೃತ್ತಿಯು ಪ್ರಬಲವಾಗಿದೆ. ಈ ಮಾತನ್ನು ನೀವು ಒಪ್ಪಿಕೊಳ್ಳಿರೆಂದು ಹೇಳುವದೂ ಕಠಿಣವಿದೆ. ಯಾಕಂದರೆ ಈ ಮಾತಿನ ಸತ್ಯತೆಯ ಪೂರ್ಣ ಪ್ರಮಾಣವಂತೂ ನಿಮ್ಮ ಮೃತ್ಯುವಿನ ನಂತರವೇ ದೊರೆಯುವದು. ಆದುದರಿಂದ ಇದೊಂದು ವೃತ್ತಿಯಿದೆ ಎಂದಿಷ್ಟೇ ಹೇಳಿ ನಾನು ಬಂದು ಮಾಡುತ್ತೇನೆ. ಈ ಸಲದ ಯುದ್ಧದಲ್ಲಿ ನನ್ನ ಬಲ, ನನ್ನ ಶಕ್ತಿ, ನನ್ನ ಅಂತಃಶಾಂತಿ, ಮತ್ತು ಸುಖ ಇವು ಕಳೆದ ಸಲದಗಿಂತ ಎಷ್ಟೋ ಹೆಚ್ಚಾಗಿರುತ್ತವೆ. ಇದಕ್ಕೆ ಒಂದೇ ಒಂದು ಕಾರಣವೆಂದರೆ ಈ ಸಾರೆ ನನ್ನ ವೃತ್ತಿಗನುಸಾರವಾಗಿ ನನಗೆ ಕೆಲಸಮಾಡಲು ಸಾಧ್ಯವಾಯಿತು. ನಿಮಗಿಂತ ಮೊದಲು ಬಿಡುಗಡೆಯಾದ ಮೇಲೆ ಕೇವಲ ಒಂದು ಸಲ ಅದೂ ಕೆಲ ಸಮಯದವರೆಗೆ ದುಃಖಿತಳಾಗಿದ್ದೆ. ಈ ಸಾರೆ ಇಲ್ಲಿ (ಜೇಲಿನಲ್ಲಿ) ಬರುವ ಪೂರ್ವದಲ್ಲಿ ನನ್ನ ಸ್ವಾಸ್ಥ್ಯವು ಕೆಡುವದರಲ್ಲಿತ್ತು, ಆದರೆ ಈ ಮಾತಿನದು ಈ ಪ್ರಶ್ನೆಯುಗೂಡ ಯಾವ ಸಂಬಂಧವೂ ಇಲ್ಲ. ಇದರ ಕಾರಣವು ಕೇವಲ ಶಕ್ತಿಯಿಂದ ಹೆಚ್ಚು ಕೆಲಸ ಮಾಡಬೇಕಾಗಿತ್ತು. ಸ್ವಲ್ಪೇ ದಿನಗಳಲ್ಲಿ ನನ್ನನ್ನು ಹಿಡಿಯುವರೆಂದು ತಿಳಿದು ನಾನು ನನ್ನ ಶಕ್ತಿಯ ವಿಷಯವಾಗಿ ಹಿಂದು ಮುಂದು ನೋಡದೆ ಅದನ್ನು ವೆಚ್ಚ ಮಾಡತೊಡಗಿದೆ. ಒತ್ತಾಯದ ವಿಶ್ರಾಂತಿ ನನಗೆ ಸಿಕ್ಕೇ ಸಿಗುವದೆಂದು ಗೊತ್ತಿತ್ತು. ಮತ್ತು ನನ್ನ ಹತ್ತಿರ ಕೆಲಸದ ಗುಡ್ಡ ಇದ್ದುದರಿಂದ ಹೆಚ್ಚಿನ ವಿಚಾರ ಮಾಡಲು ಅವಕಾಶವೇ ಇದ್ದಿಲ್ಲ.

"ಯಾರಿಗೆ ಗೊತ್ತು, ಇದೆಲ್ಲವೂ ಭ್ರಮೆಯಲ್ಲವಷ್ಟೆ? ಆದರೆ ಹೆಂಗಸು ತನ್ನ ಮನೋವೃತ್ತಿಯಂತೆಯೇ ನಡೆಯುತ್ತಾಳಲ್ಲವೆ? ಅವಳ ಶಕ್ತಿಯು ಬುದ್ಧಿಗಿಂತ ವೃತ್ತಿಯನ್ನನುಸರಿಸಿಯೇ ಕೆಲಸ ಮಾಡುತ್ತಿದೆ. ಅವಳು ತನ್ನ ಸ್ವಭಾವವನ್ನು ಪ್ರಕಟ ಮಾಡಲು ಶಕ್ತಳಾದರೆ ಮಾತ್ರ ತನ್ನ ನಿಜವಾದ ಶಕ್ತಿಯನ್ನು ವಶದಲ್ಲಿಟ್ಟುಕೊಂಡು ಸೇವೆಯಲ್ಲಿ ತೊಡಗಿಸಲು ಸಮರ್ಥಳಾಗಬಲ್ಲಳು. ಈ ಜಗತ್ತಿನಲ್ಲಿ ನೀವೇ ಒಬ್ಬರು, ನೀವೇ ನನ್ನ ಕೆಲಸ, ನೀವೇ ನನ್ನ ಆದರ್ಶ. ಇದನ್ನು ಬಿಟ್ಟು ನನಗೆ

ಇಡೀ ಜಗತ್ತಿನಲ್ಲಿ ಬೇರೆ ಯಾವ ವಿಚಾರವಿಲ್ಲ, ಬೇರೆ ಚಿಂತೆಯಿಲ್ಲ, ಬೇರೆ ಇಚ್ಛೆಯಿಲ್ಲ. ಈ ಜನ್ಮದಲ್ಲಿ ಈ ಕಾರ್ಯ ಪೂರ್ಣ ಮಾಡಬೇಕು, ಮುಂದಿನ ಜನ್ಮದಲ್ಲಿ ಈ ಆದರ್ಶ ಮುಟ್ಟಬೇಕೆಂಬ ನನ್ನ ಪ್ರಾರ್ಥನೆಯನ್ನು ದೇವರು ಕೇಳಲಿಕ್ಕಿಲ್ಲವೆ? ಅವನು ನನ್ನ ವೃತ್ತಿಗಳನ್ನು ತಪ್ಪು ಮಾರ್ಗದ ಮೇಲೆ ಒಯ್ಯುವ ಕಾರಣವಾದರೂ ಏನು? ಅವನೇ ನನ್ನನ್ನು ಗಾಢಾಂಧಃಕಾರದಿಂದ ನಿಮ್ಮ ಪ್ರಕಾಶಮಯ ಮಾರ್ಗಕ್ಕೆ ಎಳೆದು ತರಲಿಲ್ಲವೇನು? ಇದೆಲ್ಲವನ್ನೂ ನಾನು ನಿಮ್ಮ ಸಂಗಡ ತರ್ಕಮಾಡುವದಕ್ಕಾಗಿ ಬರೆಯುತ್ತಿರುವದಿಲ್ಲ. ಆದರೆ ಜೇಲಿನಲ್ಲಿ ಬಂದಮೇಲೆ ಸತ್ಯ ಸಂಗತಿಯನ್ನು ತಿಳಿದುಕೊಳ್ಳಲಿಕ್ಕೆ ನಿರಂತರ ಪ್ರಯತ್ನ ನಡೆಸಿದ್ದೇನೆ. ಅದರಿಂದ ನನಗೆ ಹೊಳೆದದ್ದನ್ನು ನಿಮ್ಮ ಮುಂದೆ ಇಡುವದಕ್ಕಾಗಿ ಬರೆಯುತ್ತಿದ್ದೇನೆ."

ಅದಕ್ಕೆ ಬಾಪೂ ಉತ್ತರ ಕೊಟ್ಟರು:

"I understand and appreciate all you say about yourself. Let me put you at rest. When I come out you shall certainly be with me and resume your original work of personal service. I quite clearly see that it is the only way for your self-expression. I shall no longer be guilty as I have been before of thwarting you in any way whatsoever. My only consolation in thinking over the past is that in all I did, I was guided by nothing else than the deepest love for you and regard for your well-being. I see once more that good Government is no substitute for self-government. A Gujarati proverb says, what one sees for oneself may not be visible to the nearest friend though he may have ever so powerful a searchlight. Both these proverbs may not be universally applicable. They certainly are in your case. You need therefore fear no interference from me henceforth. And who can give me more loving service than you!"

"ನೀನು ಬರೆದದ್ದೆಲ್ಲವೂ ನನಗೆ ಅರ್ಥವಾಗುತ್ತದೆ ಮತ್ತು ಅದು ಯೋಗ್ಯವೂ ಇದೆ. ನಾನು ನಿನ್ನನ್ನು ನಿಶ್ಚಿಂತಳನ್ನಾಗಿ ಮಾಡುವೆ. ನಾನು ಜೇಲಿನಿಂದ ಬಿಟ್ಟು ಬಂದಮೇಲೆ ನೀನು ನನ್ನ ಹತ್ತಿರವೇ ಇದ್ದು ಮೊದಲಿನಂತೆ ನನ್ನ ಸೇವೆಯ ಕೆಲಸವನ್ನೇ ಕೈಕೊಳ್ಳುವಿ. ನಿನ್ನ ಆತ್ಮ ವಿಕಾಸಕ್ಕೆ ಇದೊಂದೇ ಮಾರ್ಗವೆಂಬುದು ನನಗೆ ಚನ್ನಾಗಿ ಕಾಣುತ್ತದೆ. ಮೊದಲು ಹೀಗೆ ಮಾಡಿದ್ದರೂ, ಇನ್ನು ನನ್ನ ಸೇವೆಯ ಕೆಲಸದಿಂದ ನಿನ್ನನ್ನು ವಂಚಿತಳನ್ನಾಗಿ ಮಾಡುವ ಅಪರಾಧವನ್ನು ಮಾಡುವದಿಲ್ಲ. ಭೂತಕಾಲದಲ್ಲಿ ಆದದ್ದರ ವಿಷಯವಾಗಿ ವಿಚಾರಮಾಡಿದಾಗ ಅದರ ಬಗ್ಗೆ ನನಗೆ ಬಹಳ ಸಂತೋಷವಾಗುತ್ತದೆ. ಯಾಕೆಂದರೆ ನಿನ್ನ ವಿಷಯವಾಗಿ ಮಾಡಿದ್ದೆಲ್ಲವೂ

ನಿನ್ನ ವಿಷಯವಾಗಿದ್ದ ನನ್ನ ಆಳವಾದ ಪ್ರೇಮದಿಂದಲೂ ನಿನ್ನ ಕಲ್ಯಾಣದ ಭಾವನೆಯಿಂದಲೂ ಪ್ರೇರಿತನಾಗಿ ಮಾಡಿದ್ದೇನೆ. 'ಸ್ವರಾಜ್ಯ'ದ ಕೆಲಸವನ್ನು 'ಸುರಾಜ್ಯ'ವು ಮಾಡಲಾರದೆಂದು ನನಗೆ ಗೊತ್ತು. ಒಂದು ಗುಜರಾತಿ ನಾಣ್ಣುಡಿಯಿದೆ **'ધણીને સૂઝે ઢાંકણીમાં ને પડોસીને ન સૂઝે આરસીમાં'** ಮನೆಯವರಿಗೆ ರಾತ್ರಿಯಲ್ಲಿ ಕಂಡದ್ದು ಹೊರಗಿನವರಿಗೆ ಹಗಲಲ್ಲಿ ಕಾಣುವದಿಲ್ಲ. ಇವೆರಡೂ ನಾಣ್ಣುಡಿಗಳು ಎಲ್ಲಕಡೆಯಲ್ಲಿಯೂ ಅನ್ವಯಿಸಲ್ಪಡುವದಿಲ್ಲ. ಆದರೆ, ನಿನ್ನ ವಿಷಯದಲ್ಲಿ ಎರಡೂ ಉತ್ತಮರೀತಿಯಿಂದ ಅನ್ವಯಿಸುತ್ತವೆ. ಆದುದರಿಂದ ಭವಿಷ್ಯದಲ್ಲಿ ನನ್ನಿಂದ ಯಾವ ಆತಂಕವೂ ಆಗಲಿಕ್ಕಿಲ್ಲೆಂಬ ಭರವಸೆಯನ್ನಿಡು. ನನ್ನ ಸೇವೆಯನ್ನು ನಿನಗಿಂತ ಹೆಚ್ಚು ಪ್ರೇಮದಿಂದ ಮಾಡುವವರು ಯಾರಿದ್ದಾರೆ ?"

ಆಯಿತು. ಈ ಕೊನೆಯ ವಾಕ್ಯದಲ್ಲಿ ಬಾಪೂಅವರ ಸೋಲು–ಪ್ರೇಮಕ್ಕೆ ಸೋತ ಸೋಲು—ಅದೆ. ಮೀರಾಬೇನರಷ್ಟು ಪ್ರೇಮಪೂರ್ಣ ಸೇವೆಯು ಬೇರೆ ಯಾರದೂ ಇಲ್ಲವೆಂಬುದು ಅಕ್ಷರಶಃ ಸತ್ಯವಿದೆ. ಶಂಕರಲಾಲರು ಬಾಪೂ ಅವರ ಜೊತೆಗಿದ್ದಾಗ ಅವರ ಸೇವಾಕಾರ್ಯವು ಅಪೂರ್ವವಾದದ್ದಿತ್ತು. ಕೃಷ್ಣದಾಸಜಿಯವರ ಸೇವೆಯಲ್ಲಿ ಕಂಡುಬರುವ ಸಾವಧಾನವು ಅವರ ನಿರ್ಮಲ ಪ್ರೇಮದ ದ್ಯೋತಕವಾಗಿತ್ತು. ಆದರೆ ಮೀರಾಬಹನರ ಸೇವೆಯಲ್ಲಿ ಅದಕ್ಕೂ ಭಿನ್ನವಾದ ಒಂದು ಮಾಧುರ್ಯವಿದೆ. ಯಾಕಂದರೆ ಇದರಲ್ಲಿ ತನ್ನನ್ನೇ ಅರ್ಪಣ ಮಾಡುವ ಮಾತಿದೆ. ಮತ್ತು ರಾತ್ರಂದಿವಸ ಬಾಪೂ ಅವರಲ್ಲಿಯ ನಿಷ್ಠೆ—ಅವ್ಯಭಿಚಾರೀ ಭಕ್ತಿಯಿವೆ. ಶಂಕರಲಾಲರಾಗಲಿ, ಕೃಷ್ಣದಾಸರಾಗಲಿ ಅದನ್ನು ಸರಿಗಟ್ಟಲಾರರು. ನನಗಂತೂ ಈ ಮೂವರ ಹತ್ತಿರ ಹೋಗುವ ಶಕ್ತಿಯು ಕೂಡ ಇಲ್ಲ. ಇದರ ಕಾರಣವು ಸ್ಪಷ್ಟವಿದೆ. ನನ್ನಲ್ಲಿ ಆ ಅವ್ಯಭಿಚಾರಿ ಭಕ್ತಿಯಾಗಲಿ, ಶರೀರ ಮತ್ತು ಮನಸ್ಸಿನ ಆ ಶುದ್ಧಿ ಮತ್ತು ಪವಿತ್ರತೆಯಾಗಲಿ ಇರುವದಿಲ್ಲ. ನಾನು ನನಗೆ ಒಪ್ಪಿಸಿದ ಸಣ್ಣ ಸಣ್ಣ ಕೆಲಸಗಳನ್ನು ಕೂಡ ಮರೆಯುತ್ತೇನೆ. ಆದರೆ ಮೀರಾಬೇನರು ಸೇವೆಗಾಗಿ ಅನೇಕ ಕೆಲಸಗಳನ್ನು ಹುಟ್ಟಿಸಿ ಬಾಪೂ ಅವರಿಗೆ ಅವನ್ನು ಸ್ವೀಕರಿಸುವಂತೆ ಮಾಡುತ್ತಾರೆ. ಇಂದು ನನಗೆ ದಿಂಬಿನ ಹೊದಿಕೆಗಳನ್ನು ಹೊದಿಸಲಿಕ್ಕೆ ಹೇಳಿದ್ದರು. ನಾನು 'ಹೂ' ಎಂದು ಹೇಳಿದೆ. ಕೂಡಲೇ ನನಗೆ ಬೇರೊಂದು ಕೆಲಸವನ್ನು ಒಪ್ಪಿಸಿದ್ದರಿಂದ ನಾನು ಅದರಲ್ಲಿ ತೊಡಗಿದೆ. ಹೊದಿಕೆ ಹೊದಿಸುವದು ಉಳಿದು ಹೋಯಿತು. ಅದು ನನಗೆ ಜ್ಞಾಪಕವಾಗುವ ಮೊದಲೆ ವಲ್ಲಭಭಾಯಿಯವರು ಹೊದಿಕೆಗಳನ್ನು ಹೊದಿಸಿದ್ದರು. ದೇವರು ಬಾಪೂರ ಚರಣಗಳಲ್ಲಿ ತಂದು ಒಗೆದಿದ್ದಾನೆ. ಅಂದಮೇಲೆ ಒಂದಿಲ್ಲೊಂದು ದಿವಸ ಆ ಶಕ್ತಿಯನ್ನೂ ಕೊಡುವನೆಂಬ ಶ್ರದ್ಧೆಯಿಂದ ಈ ಒಡ್ಡರ ಬಂಡಿಯನ್ನು ಸಾಗಿಸಿಕೊಂಡು ಹೊರಟಿದ್ದೇನೆ.

* * *

ತಮ್ಮ ಪತ್ರದಲ್ಲಿ ಉದ್ಧೃತ ಮಾಡಿದ ಗುಜರಾತಿ ನಾಣ್ಣುಡಿಯ ವಿಷಯವಾಗಿ ಬಾಪೂ ನನಗೆ ಕೇಳಿದರು: "ಇದಕ್ಕೆ ಸಮಾನವಾದ ಇಂಗ್ರೇಜಿ ಗೊತ್ತಿದೆಯೆ?" ಇಂಗ್ರೇಜಿಯಂತೂ ಹೊಳೆಯಲಿಲ್ಲ. ಆದರೆ ಹಿಂದಿನಿಂದ ಇದರ ಪೃಥಕ್ಕರಣ ಮಾಡಿದಾಗ ಗುಜರಾತಿ ಅರ್ಥ ಸಹ ನನಗೆ ಸರಿಯಾಗಿ ತಿಳಿದಿದ್ದಿಲ್ಲವೆಂದು ಗೊತ್ತಾಯಿತು. ಬಾಪೂ ಅವರಿಗೂ ಅದರ ಅರ್ಥ ಸರಿಯಾಗಿ ಗೊತ್ತಾಗಿರಲಿಲ್ಲ.

ಜೇಲಿಗೆ ಎನ್ದು ಇದೇ ನಾಣ್ಣುಡಿಯ ಸಂಬಂಧವಾಗಿ ನಾನು ವಲ್ಲಭಭಾಯಿಯವರನ್ನು ಕೇಳಿದೆ. ಬಾಪೂ ಅಂದರು : "ಯಾಕೆ? ಇವರ ಪರೀಕ್ಷೆ ತೆಗೆದುಕೊಳ್ಳುತ್ತೀಯಾ?" ನಾನು ಹೇಳಿದೆ: "ವಲ್ಲಭಭಾಯಿಯವರ ಹತ್ತರ

೯-೪-'೩೨

ಇಂಥ ನಾಣ್ಣುಡಿಯ ದೊಡ್ಡ ಸಂಗ್ರಹವಿದೆ. ಆದುದರಿಂದ ಬಹುತರವಾಗಿ ಇವರ ಲಕ್ಷ್ಯದಲ್ಲಿ ಬರಬಹುದು." ಬಾಪೂ ಹೇಳಿದರು: "ಹೌದು, ಇದು ನನಗೆ ಗೊತ್ತಿದೆ, ಆದರೆ ಇದರ ಅರ್ಥದ ಬಗ್ಗೆ ನಮಗೆ ಸಂಶಯವೆಲ್ಲಿದೆ? ನಮ್ಮೆದುರಿಗಂತೂ ಇದರ ರಚನೆಯ ಮತ್ತು ಈ ನಾಣ್ಣುಡಿಯ ಉಪಯೋಗವನ್ನು ಸರಿಯಾಗಿ ಹೇಗೆ ಮಾಡಬೇಕು ಎಂಬ ಪ್ರಶ್ನೆಯಿದೆ. 'ಮನೆಯವರಿಗೆ ಕತ್ತಲೆಯಲ್ಲಿ ಕಂಡದ್ದು ಹೊರಗಿನವರಿಗೆ ಹಗಲಿನಲ್ಲಿ ಕಾಣುವದಿಲ್ಲ' ಎಂದು ಇದರ ಅರ್ಥವು ಸ್ಪಷ್ಟವಿದೆ. ಆದರೆ ಇದರ ಶಬ್ದಾರ್ಥವನ್ನು ಹೇಗೆ ಕೂಡಿಸಬೇಕು?" ಈ ಪ್ರಕಾರ ಮಾತುಗಳು ನಡೆದಾಗಲೇ ಪೇಟೆಯಿಂದ ಕೆಲವು ಸಾಮಾನು ತರಿಸುವ ಮಾತು ಹೊರಟಿತು. ಬಾಪೂ ಈ ವಸ್ತುಗಳಲ್ಲಿ ಸ್ವಾಭಾವಿಕವಾಗಿ ಕಾಟಕಸರು ಮಾಡುತ್ತಲೇ ಇರುತ್ತಾರೆ. ವಲ್ಲಭಭಾಯಿ ಅಂದರು : "ನೀವು ಉಳಿಸಿದರೆ ಜೇಲಿನವರು ತಿಂದುಹಾಕುವರು. ಈ ಜನರು ಹೇಗಾದರೂ ಮಾಡಿ ನೂರರ ಲೆಕ್ಕವನ್ನು ಭರತಿ ಮಾಡುವರು. "मियाँ लूटे मूठ मूठ और अल्ला लूटे ऊंट ऊंट" ಬಾಪೂ ಅಂದರು : "ನೋಡು, ನೋಡು. ನೀನು ತಿಳಿದುಕೊಳ್ಳಲಿಕ್ಕೆ ಹೊಸ ನಾಣ್ಣುಡಿಯು ಸಿದ್ಧವಿದೆ."

* * *

ಇವತ್ತು ಹೀರಾಲಾಲ ಶಹಾರ ಪತ್ರದಲ್ಲಿ ಬಹಳ ವಿನೋದವಿತ್ತು. ಬಾಪೂರಿಗೆ ಖಗೋಲದ ನಾದ ಹತ್ತಿದ್ದರಿಂದ ಶಹಾರಿಗೆ ಯಾವದಾದರೂ ಉಪಯುಕ್ತ ಸಾಹಿತ್ಯವನ್ನು ತಿಳಿಸಲಿಕ್ಕೆ ಕೇಳಿದ್ದರು. ದುರ್ಬಿನ್ನಿನ ವಿಷಯವಾಗಿಯೂ ಕೆಲವು ಮಾಹಿತಿ ಕೇಳಿತ್ತು. ಅವರು ತಮ್ಮ ಸ್ವಭಾವಕ್ಕನುಸಾರವಾಗಿ ಆಳವಾದ ನೀರಲ್ಲಿ ಇಳಿಸಿದರು. ಜ್ಯೋತಿಷ್ಯದ ಉತ್ತಮ ಪುಸ್ತಕಗಳನ್ನೂ ನಕಾಶೆಗಳನ್ನೂ ಕಳಿಸಿದರು. ಇಷ್ಟೇ ಅಲ್ಲ ಕಾಳಿದಾಸನ ನಾಟಕಗಳನ್ನು ಓದಲಿಕ್ಕೂ ಸೂಚಿಸಿದರು. ದುರ್ಬಿನ್ನು ಭಾವನಗರದ ಪಟ್ಟಾಣಿ ಸಾಹೇಬರಿಂದ ತರಿಸಿಕೊಳ್ಳಿರಿ ಅಥವಾ ಪುಣೆಯಲ್ಲಿ ಪ್ರೊ. ತ್ರಿವೇದಿಯವರ ಕಡೆಗೂ ದೊರೆಯಬಹುದೆಂದು ತಿಳಿಸಿದರು. ನಾನು ನಕ್ಕು ಬಾಪೂಗೆ ಹೇಳಿದೆ:

"ಬಾಪೂ, ಇದು ಸನ್ಯಾಸಿಯ ಲಂಗೋಟಿಯ ಕಥೆಯಂತಾಯಿತು." ಬಾಪೂ ಅಂದರು : "ಹೌದು, ತಿಳಿಯದೆ ಹೊಳೆಯದೆ ಯಾವದೇ ವಸ್ತುವಿನ ಇಚ್ಛೆ ಮಾಡಿದರೆ ಕಷ್ಟ ಭೋಗಿಸಬೇಕಾಗುತ್ತದೆ. ಇವರಿಗೆ ಬರೆಯಬೇಕಾಗುವದು."

*   *   *

ಬಾಪೂ ತಮ್ಮ ಬಹಳ ಪತ್ರಗಳಲ್ಲಿ ನಾನು ಕೈದೀ ಇದ್ದೇನೆಂದು ಬರೆಯುತ್ತಾರೆ. 'ನನ್ನ ಪತ್ರವನ್ನು ಎಲ್ಲಿಯೂ ಪ್ರಕಟಿಸಬಾರದೆಂಬದನ್ನು ಲಕ್ಷ್ಯದಲ್ಲಿಡಿರಿ' ಎಂದು ಹೇಳುತ್ತಾರೆ. ಆದರೆ ಎಲ್ಲಿ ಪತ್ರವನ್ನು ಪ್ರಕಟಿಸುವ ಭಯವೇ ಇರುವದಿಲ್ಲ, ಅಲ್ಲಿ ಈ ಪ್ರಕಾರ ಏಕೆ ಬರೆಯಬೇಕು? ಆ ವಿಷಯ ಇಂದು ಗೊತ್ತಾಯಿತು. ಡಾ. ಮಥೂರಿಗೆ ಅವರು ಕಳಿಸಿದ ಪುಸ್ತಕಗಳು ಮುಟ್ಟಿದ ಬಗ್ಗೆ ಬರೆದ ಪತ್ರವನ್ನು ಅವರು ಪ್ರಕಟಮಾಡಿ ಬಿಟ್ಟರು! ಎಷ್ಟು ಕಡೆಯಿಂದ ಜಾಗರೂಕತೆಯನ್ನು ವಹಿಸಬೇಕಾಗುತ್ತದೆ?

*   *   *

ಬಾಪೂ 'ಆತ್ಮಕಥೆ'ಯಲ್ಲಿ ತಮ್ಮ ಪ್ರಾರಂಭಿಕ ಜೀವನದಲ್ಲಿ ಅವರಿಗೆ ಆತ್ಮ-ವಿಶ್ವಾಸವು ಕಡಿಮೆಯಿತ್ತೆಂಬ ವಿಚಾರವನ್ನು ಪ್ರಕಟಿಸಿದ್ದಾರೆ. ಆದರೆ ಈ ನ್ಯೂನತೆಯನ್ನು ತೋರಿಸುವ ಎಲ್ಲ ಪ್ರಸಂಗಗಳನ್ನೂ ಕೊಟ್ಟಿಲ್ಲ. ಈಗ ತೂಗಿ ತೆಗೆದ ವಾಕ್ಯಗಳಲ್ಲಿ ಬಾಪೂ ಅವರು ಅಪೂರ್ವವಾದ ತರ್ಕದಿಂದ ಎದುರಾಳಿಗಳನ್ನು ಮುಗ್ಧ ಮಾಡುವ ರೀತಿಯನ್ನೂ, ಅನೇಕ ಸಲ ತಮ್ಮ ಮೇಲೆ ಆಗುವ ಹಲ್ಲೆಗಳನ್ನು ವಿಲಕ್ಷಣರೀತಿಯಿಂದ ಖಂಡಿಸುವದನ್ನೂ ನೋಡಿದರೆ ವಕೀಲರಾಗಿ ಪ್ರಸಿದ್ಧಿಗೆ ಬರುವ ಬಗ್ಗೆ ಅವರಿಗೆ ಮೊದಲಿನಿಂದಲೂ ವಿಶ್ವಾಸವಿರಬೇಕೆಂದು ಅನಿಸುತ್ತದೆ. ಲಾಯಿಡ ಜಾರ್ಜರ ಜೀವನ ಚರಿತ್ರೆ ಓದಿದ ಮೇಲೆ ಅವನ ೧೬ ವರ್ಷದ ವಯಸ್ಸಿನಲ್ಲಿ ಬರೆದ ದಿನಚರಿಯಲ್ಲಿ ಸಹ, ಮಹೇಚ್ಛೆ, ಮಹತ್ವಾಕಾಂಕ್ಷೆ, ಕೀರ್ತಿ, ಕಲೆಗಳ ವಿಷಯವಾಗಿ ಅವನಿಗಿದ್ದ ಆತ್ಮವಿಶ್ವಾಸವು ದೃಷ್ಟಿಗೆ ಬೀಳುತ್ತದೆ. ಬಾಪೂ ಅವರಲ್ಲಿ ಅದು ಇದ್ದಿಲ್ಲ. ಇದಕ್ಕೆ ಉದಾಹರಣೆಯೆಂದು ಇವತ್ತು ಮಾತಾಡಿದರು. ಬ್ಯಾರಿಸ್ಟರ ಧಂದೆಯು ನಡೆದೀತೆಂದು ಅವರಿಗೆ ಭರವಸೆಯಿದ್ದಿಲ್ಲ. ವೆಚ್ಚವೇನೊ ಆಗಿಹೋಗಿತ್ತು. ಆದುದರಿಂದ ಮುಂಬೈಯಲ್ಲಿ ಯಾವದೋ ಒಂದು ಶಾಲೆಯಲ್ಲಿ ೭೫ ರೂಪಾಯಿಗಳ ಶಿಕ್ಷಕನ ನವಕರಿಗಾಗಿ ಅರ್ಜಿ ಹಾಕಿದರು. ಈ ಶಾಲೆಯ ಶಿಕ್ಷಕರಾದರೂ ಎಂಥವರಿರಬೇಕು? ಬಾಪೂ ಅವರನ್ನು ಭೆಟ್ಟಿಗೆ ಕರೆದು ಮಾತಾಡಿ ಅವರನ್ನು ನವಕರಿಗೆ ಅಯೋಗ್ಯರೆಂದು ಗೊತ್ತುಮಾಡಿದರು! ಯಾರಲ್ಲಿ ಆತ್ಮವಿಶ್ವಾಸವು ಸ್ವಲ್ಪಸಹ ಇಲ್ಲವೊ ಅವರಿಗಾಗಿ ಈ ಉದಾಹರಣೆಯು ವಿಚಾರಾರ್ಹವಾಗಿದೆ. ಮತ್ತು ಆಶೆಯನ್ನು ಹುಟ್ಟಿಸುವಂತದು ಆಗಿದೆ. ಪುನಃ ಪುನಃ ವಿಚಾರ ಮಾಡಿದ ಮೇಲೆಯೂ ಬಾಪೂ ಅವರನ್ನು ಬಾಪೂರನ್ನಾಗಿ ಮಾಡಿದ ವಸ್ತು ಅವರ ಅಖಂಡ ಸತ್ಯೋಪಾಸನೆ

ಯೆಂದು ನನಗೆ ಸ್ಪಷ್ಟ ಅನಿಸುತ್ತದೆ. ಇದೇ ಸತ್ಯದಿಂದ ನಿರ್ಭಯತೆ ಉಂಟಾಯಿತು. ಆದರಿಂದ ದೇವರಲ್ಲಿ ಶ್ರದ್ಧೆಯನ್ನಿಟ್ಟು ನಡೆಯುವದಕ್ಕಾಗಿ ಸತ್ಯದ ಪ್ರಯೋಗದ ಮಾರ್ಗಗಳು ತೆರೆಯುತ್ತ ಹೋದವು. ಸತ್ಯದ ಅಖಂಡ ಆರಾಧನೆ, ಸತ್ಯವನ್ನಾ-ಚರಿಸುವ ಪೂರ್ಣ ಸಿದ್ಧತೆ ಇವು ಮನುಷ್ಯನನ್ನು ಎಂಥ ಉನ್ನತ ಶಿಖರದ ಮೇಲೆ ಒಯ್ದು ಮುಟ್ಟಿಸದಿರಲಾರವು ಎಂಬುದನ್ನು ಹೇಳುವದು ಕಠಿಣ ಕೆಲಸ. ನಾನು ಬಾಪೂಗೆ ಕೇಳಿದೆ: "ಆದರೆ ೭೫ ರೂಪಾಯಿಗಳ ನವಕರಿಗೆ ನಿಮ್ಮ ಮನಸ್ಸಾದರೂ ಹೇಗೆ ಒಪ್ಪಿತು ? ಇದೇನೂ ತಿಳಿಯದಂತಾಗಿದೆ." ಬಾಪೂ ಹೇಳಿದರು : "ಮಹದೇವ, ನನಗೆ ಯಾವದೂ ಮಹತ್ವಾಕಾಂಕ್ಷೆಯೇ ಇದ್ದಿಲ್ಲ. ಯಾವದೇ ಪ್ರಕಾರ ಉಪ-ಜೀವನ ಸಾಗಬೇಕು, ಮತ್ತು ಇದ್ದಲ್ಲಿಯೇ ಏನಾದರೂ ಸೇವೆ ಮಾಡುತ್ತಿರಬೇಕು ಎಂಬುದರ ಹೊರತಾಗಿ ಬೇರೆ ವಿಚಾರವೇ ಇದ್ದಿಲ್ಲ."

* * *

ವಲ್ಲಭಭಾಯಿಯು ಈ ಮಾತನ್ನು ಕೇಳಿದ ಮೇಲೆ ತಮ್ಮದೊಂದು ವಿನೋದಕರ ಸಂಗತಿಯನ್ನು ಹೇಳಿದರು: "ನನ್ನ ಸೋದರ ಮಾವ ಮುನಸಿಪಾಲಿಟಿಯಲ್ಲಿ ಓವ್ಹರಸೀಯರರಿದ್ದರು. ಈ ಹುಡುಗ ಏನು ಕಲಿಯಬಲ್ಲ ಎಂಬ ವಿಚಾರವು ಅವರ ತಲೆಯಲ್ಲಿ ಬಂತು. ಕೊಡಿರಿ, ಹಾದಿಗೆ ಹಚ್ಚುತ್ತೇನೆ ಎಂದು ಅನ್ನುತ್ತಿದ್ದರು. ಆದ್ದರಿಂದ ಅವರು ನನಗೆ ಅನೇಕ ಸಲ ಹೇಳುತ್ತಿದ್ದರು "ಎನೊ, ನೀನು ಬಂದು ಬಿಡು, ನಿನಗೆ ಮುಕಾದಮ್ಮನ ಕೆಲಸ ಕೊಡಿಸುವೆ. ಮತ್ತು ನಾಳಿನಿಂದಲೇ ಗಳಿಸತೊಡಗುವಿ!"

ಮಿರಾಬಹನರಿಗೆ ಪತ್ರ ಬರೆಯುತ್ತ ಬರೆಯುತ್ತ ಬಾಪೂ ಕೇಳಿದರು : "inexhaustible ಪದದಲ್ಲಿ ಅಕ್ಷರಗಳು ಯಾವವು? ಇದರಲ್ಲಿ 'h' ಇದೆಯೊ ಇಲ್ಲವೊ? ನಾನು 'h' ಬರೆದಿದ್ದೇನೆ." ನನಗೂ ಸಂಶಯ ಬಂತು. ಶಬ್ದಕೋಶದಲ್ಲಿ 'h' ಹೊರಟಿತು. ಮತ್ತೆ ಹೇಳಿದರು : "ಇದರ ಧಾತು ನೋಡಿದರೆ ತಿಳಿಯುವದು." ಧಾತು 'h' ದಿಂದಲೇ ಪ್ರಾರಂಭವಾಗುತ್ತಿತ್ತು : ಶಬ್ದವು haus to draw. ಆಗ ಬಾಪೂ ಹೇಳಿದರು : "ಆದರೆ 'h' ಬರದಂಥವು ಬೇರೆ ಎಷ್ಟೋ ಇವೆ, ಅವು ಯಾವವು ? "ನಾನು ಹೇಳಿದೆ : "exonerate." ಬಾಪೂ ಹೇಳಿದರು : "ಇಲ್ಲ, ಇಲ್ಲ, ಇದರಲ್ಲಿ 'h' ಇದ್ದೇ ಇದೆ." ನಾನು : "ಎಂದೂ ಇಲ್ಲ. ಇದರಲ್ಲಿ ಮೂಲವು onus ಇದೆ." ಬಾಪೂ : "ಇಲ್ಲ ಇಲ್ಲ, ಇದರಲ್ಲಿ honour ಮೂಲ ಇರಲಿಕ್ಕೆ ಬೇಕು." ನಾನು : "ಇದರಲ್ಲಿ ನಾವು ಶರ್ತನ್ನು ಇಟ್ಟರೆ ನಾನೇ ಗೆಲ್ಲುವೆ" ಶಬ್ದಕೋಶ ತೆರೆದವು, ನಾನೇ ಗೆದ್ದೆನು. ಆ ಮೇಲೆ ಎರಡನೇ ಶಬ್ದ enexorable ಹೊರಟಿತು. ಇದರ ಮೇಲೆ ಆನಂದಿತರಾಗಿ ಹೇಳತೊಡಗಿದರು: "ಈ ಪ್ರಕಾರ ಲ್ಯಾಟಿನ್ ಧಾತು ತಿಳಕೊಳ್ಳುವದ ರಲ್ಲಿ ಬಹಳ ಅರ್ಥವಿದೆ. ಯಾವದೇ ಧಾತು ತಿಳಕೊಳ್ಳುವದರಿಂದ ಅನೇಕ ಅಪರಿಚಿತ ಶಬ್ದಗಳ ಅರ್ಥವಾಗುತ್ತದೆ." ಇವತ್ತು ಬೆಳಿಗ್ಗೆ 'ಧನ್ಯ' ಶಬ್ದದ ಧಾತು

ಕೇಳುತ್ತಿದ್ದರು ' ಮನ್ಯ,' ' ಗಣ್ಯ' ಶಬ್ದಗಳು ಮನ್, ಮತ್ತು ಗಣ್ ಧಾತುವಿನಿಂದ ಆಗುವಂತೆ ' ಧನ್ಯ' ಶಬ್ದವು ಧನ್ ಧಾತುವಿನಿಂದ ಆಗಬಹುದೆ ? ಹಾಗಾದರೆ ಧನ್ ಇದರ ಅರ್ಥವೇನಿರಬಹುದು ?

ರವಿವಾರ ಮೂರು ಗಂಟೆಗೆ ಬಾಪೂ ಮೌನ ಹಿಡಿಯುತ್ತಾರೆ. ಆದುದರಿಂದ ಯಾರಾದರೂ ಆಫೀಸರರಿಗೆ ಭೆಟ್ಟಿಯಾಗುವದಿದ್ದರೆ ರವಿವಾರ ಮತ್ತು ಸೋಮವಾರ ಎರಡೂ ದಿವಸ ನಿರ್ದಿಷ್ಟ ಸಮಯವು ದೈನಂದಿನ ಮಾತಿಗಾಗಿ

**೧೦-೪-'೩೨** ಇದ್ದೇ ಇರುತ್ತದೆ. ಇಪತ್ತು ಮೂರಕ್ಕೆ ನಾಲ್ಕಾರು ನಿಮಿಷ ಕಡಿಮೆ ಇತ್ತು. ಆದ್ದರಿಂದ ವಲ್ಲಭಭಾಯಿ ಹೇಳತೊಡಗಿದರು : "ಇನ್ನು ಐದು ನಿಮಿಷ ಉಳಿದಿವೆ. ನೀವು ಏನಾದರೂ ಒಪ್ಪಿಸುವದಿದ್ದರೆ, ಬರೆಯುವ ದಿದ್ದರೆ ಮಾಡಿ ಮುಗಿಸಿರಿ." ನಾನು ಅಂದೆ: "ಮೃತ್ಯುಪತ್ರ ಮಾಡಲಿಕ್ಕೆ ಹೇಳುವವ ರಂತೆ ನೀವು ಮಾತಾಡಹತ್ತಿದ್ದೀರಿ." ಬಾಪೂ ಹೇಳತೊಡಗಿದರು: "ಹಾಗಾದರೆ ತೆಗೆದುಕೊಳ್ಳಿರಿ ಹೇಳಿಯೇ ಬಿಡುತ್ತೇನೆ. ಏನಾದರೂ ತಪ್ಪುತಡಿಗಳಾಗಿದ್ದರೆ ಕ್ಷಮಿಸಿರಿ." ಹೀಗೆ ಹೇಳಿ ಖೊಳ್ಳೆಂದು ನಕ್ಕರು. ಅವರು ತಾವು ಮಾಡಿದ ವಿನೋದ ಕ್ಕಾಗಿ ನಕ್ಕಿದ್ದಿಲ್ಲ. ಆದರೆ ಒಂದು ಸವಿ ನೆನಪು ಅವರನ್ನು ನಗೆಸಿತ್ತು. ಅದನ್ನು ಅವರೇ ಹೇಳಿದರು : " ಭೋಳೆ ಬಾ ಹೇಳತೊಡಗಿದಳು : ' ತಪ್ಪುತಡಿಗಳಾಗಿದ್ದರೆ ಕ್ಷಮಿಸಿರಿ. " ವಲ್ಲಭಭಾಯಿಯವರಿಗೆ ಗೊತ್ತಿಲ್ಲದ್ದರಿಂದ ಕೇಳಿದರು: " ಯಾವಾಗಿನ ಮಾತು ? " " ನನ್ನನ್ನು ಹಿಡಿಯಲಿಕ್ಕೆ ಬಂದಾಗಿನ ಮಾತು. ಇತ್ತ ಕಣ್ಣೀರು ಸುರಿಯುತ್ತವೆ. ಅತ್ತ ಹೇಳುತ್ತಾಳೆ : ' ತಪ್ಪುತಡಿಗಳನ್ನು ಕ್ಷಮಿಸಿರಿ ' ಎಂದು. ಇನ್ನು ಈ ಜನ್ಮದಲ್ಲಿ ಭೆಟ್ಟಿಯಾಗುವದೊ ಇಲ್ಲವೊ ಮತ್ತು ಕ್ಷಮೆ ಬೇಡದೆ ಸತ್ತರೆ ಮುಂದೇ-ನಾಗುವದೊ ಎಂದು ಆ ಬಡಪ್ರಾಣಿಗೆ ಅನಿಸಿರಬಹುದು. " ಎಲ್ಲರೂ ಖೊಳ್ಳೆಂದು ನಕ್ಕೆವು.

ಥಾಮಸ್ ಹಾರ್ಡಿಯವರು Some crusted characters (ಸಮ್ ಕ್ರಸ್ಟೆಡ್ ಕ್ಯಾರೆಕ್ಟರ್ಸ) ಎಂಬ ಹೆಸರಿನಿಂದ ಕೆಲವು ಚರಿತ್ರ ಚಿತ್ರಿಸಿದ್ದಾರೆ. ಇಂಥದೇ ಒಂದು ಪಾತ್ರ ನಾಸಿಕದಲ್ಲಿ ಭೆಟ್ಟಿಯಾಗಿತ್ತು. ಅವನು ಬಂಗಾಲಿ ಅಡಿಗೆಯವನಿದ್ದನು. ಬ್ರಿಹ್ಮೀ, ಮದ್ರಾಸೀ, ಮತ್ತು ಇಂಗ್ರೇಜಿ ಮಾತಾಡುತ್ತಿದ್ದನು. ಏಳನೇ ಸಾರೆ ಶಿಕ್ಷೆ ಯಾಗಿ ಬಂದಿದ್ದನು. ಅಗಸರವನಿದ್ದನು. ಈಗ ಈ ಮಾಲಿಕೆಯಲ್ಲಿ ಇಲ್ಲಿಯ ಸೋಮಾ ಸರಿಹೋಗುತ್ತಾನೆ. ಅಮೀರನಾಗಲಿಕ್ಕೆ ರೂಪಾಯಿಯ ಆವಶ್ಯಕತೆಯಿಲ್ಲೆಂದು ಅವನು ಸಿದ್ಧಮಾಡಿ ತೋರಿಸುತ್ತಾನೆ. ಅವನು ಠಾಕರಡಾ ಜಾತಿಯವನು. ಮನೆ ಯಿಂದ ಬಹಳವಾದರೆ ಎರಡು ಗುಂಠೆ ಜಮೀನು ಇರಬಹುದು. ಆದರೆ ಅವನು ಅಮೀರನಿದ್ದಾನೆ, ಚಲಾಳಾ ಎಂಬ ಊರಿನವನು. ಹೇಳುತ್ತಾನೆ : " ಉತ್ತಮ-

ಅರಳೆ ಅಂದರೆ ಚಲಾಳದ್ದು, ಅತ್ಯುತ್ತಮ ತೊಗರಿಬೇಳೆ ಅಂದರೆ ಚಲಾಳದ್ದು, ದಾಳಿಂಬರಹಣ್ಣು ಸಹ ಅಲ್ಲಿಯದೇ. ಘೋಲಕಾದ ದಾಳಿಂಬರ ಹಣ್ಣು, ಘೋಲ-ಕಾದ ದಾಳಿಂಬರ ಹಣ್ಣು ಎಂದು ಸುಳ್ಳೇ ಘೋಲಕಾದ ಹೆಸರಾಗಿದೆ! ಘೋಲಕಾದಲ್ಲಿ ದಾಳಿಂಬರ ಹಣ್ಣು ಬೆಳೆಯುವವರು ಯಾರಿದ್ದಾರೆ? ನನ್ನ ಬಿಡುಗಡೆಯಾಗಿ ಚಲಾಳ ಮುಟ್ಟಿದ ಮೇಲೆ ಚಲಾಳದಲ್ಲಿ ಎಂಥ ದಾಳಿಂಬರ ಆಗುತ್ತಿವೆಯೆಂಬುದನ್ನು ತೋರಿಸುತ್ತೇನೆ.' ಚಲಾಳದ ತರುವಾಯ ಪ್ರಸಿದ್ಧಿಯನ್ನು ಪಡೆದ ಸ್ಥಳಗಳಲ್ಲಿ ಎರಡನೇ ನಂಬರು ಗುಜರಾತದ್ದು ಬರುತ್ತದೆ. 'ಈ ಮಹಾರಾಷ್ಟ್ರದಲ್ಲಿ ಏನಿದೆ ಮಣ್ಣು? ಎಲ್ಲಿ ನಮ್ಮ ಗುಜರಾತ, ಎಲ್ಲಿ ಮಹಾರಾಷ್ಟ್ರ! ನೋಡಿರಿ, ಈ ಮಾರುತಿನ್ನ. ವಾರ್ಡರ ಆಗಿದ್ದಾನೆ. ಶುದ್ಧ ಹೆಗ್ಗನಂತಿದ್ದಾನೆ. ಕಾಯಿ ಹೆಚ್ಚಲಿಕ್ಕೆ ಮೂರು ಸಾರೆ ಕುಳಿತ,ಆದರೆ ಇನ್ನೂವರೆಗೆ ಚಾಕು ಹ್ಯಾಗೆ ಹಿಡೀಬೇಕೆಂಬೋದು ಗೊತ್ತಾಗಲೊಲ್ಲದು. ಇವರ ಮಾತಾರೆ ಎಂಥಾವು? ಇಕಡೆ, ತಿಕಡೆ! ಅಡಿಗೆ ಮಾಡಲಿಕ್ಕೆ ನನ್ನಿಂದ ಕಲಿತ, ಆದರ ಅವ ಹಾಂಗ ಒಪ್ಪೋದಿಲ್ಲ, ನೀವೇ ಹೇಳಿರಿ; ಪಳದೆಯಲ್ಲಿ ಎಂದಾದರೂ ಸಕ್ಕರಿಯನ್ನು ಹಾಕುತ್ತಾರೆಯೆ? ಬೆಲ್ಲ ಹಾಕುತ್ತಾರೆ. ಬೇಳೆ ಬೇಯದಿದ್ದರೆ ನನ್ನ ಕೈಯಿಂದ ಸೋಡಾ ಕಡಿಮೆ ಬಿತ್ತೆಂದು ಹೇಳುವದಿಲ್ಲ! ವಲ್ಲಭಬಾಪಾ ಸೋಡಾ ಕಡಿಮೆ ಕೊಟ್ಟಿದ್ದಾರೆಂದು ಹೇಳುತ್ತಾನೆ!' ಅರಳೀ ಸ್ವಚ್ಛ ಮಾಡಲಿಕ್ಕೆ ಕುಳಿತರೆ ಹೇಳುತ್ತಾನೆ: 'ಇದೇನು ಅರಳಿಯೇನು? ಇಂಥ ಅರಳಿಯನ್ನು ಸಹ ಹಿಂಜು-ತ್ತಾರೆಯೆ? ಇದಂತೂ ಎಲಿಗಸರಿನಿಂದ ಮಾಡಿದ ಹತ್ತಿಯಾಗಿದೆ– ೪–೫ ರೂಪಾಯಿ ದರದ್ದು. ಹಿಂಜಲಿಕ್ಕೆ ಬೇಕಾಗುವ ಉತ್ತಮ ಅರಳಿಯನ್ನು ಹತ್ತಿಯ ತೊಳೆಗಳು ಚನ್ನಾಗಿ ಒಡೆವಾಗಲೇ ಬಿಡಿಸಿ ಇಟ್ಟುಕೊಳ್ಳಬೇಕು. ಅಂಥದರ ಬಟ್ಟೆಗಳು ಚನ್ನಾಗಿ ಆಗುತ್ತವೆ, ಇದರವು ಆಗುವದಿಲ್ಲ. ನಾನು ೬೦–೬೦ ಗಜ ನೇಯಲಿಕ್ಕೆ ಹುಕುಂ ಮಾಡಿದ್ದೇನೆ.' ಹಿಂದಿನಿಂದ ಅವನನ್ನು ಅಡಿಗೆಯ ಕೆಲಸಕ್ಕೆ ಹಚ್ಚಿದರು. ಆಡಿನ ಹಾಲನ್ನು ನಾವು ಹೆಪ್ಪು ಹಾಕಿದರೆ ಅವನು ಸ್ವತಃ ನೋಡುತ್ತಿದ್ದ, ತಿಂದೂಬಿಡುತ್ತಿದ್ದ. ಆದರೆ ನಾವು ಆಕಳ ಹಾಲಿನ ಮೊಸರನ್ನು ಮಾಡಿದ ದಿವಸ ಅಂದೆವು: 'ಈ ಮೊಸರು ಚನ್ನಾಗಿ ಹೆಪ್ಪಾಗಿದೆ.' ಕೂಡಲೇ ಹೇಳತೊಡಗಿದ: 'ಕತ್ತಿಯ ಲದ್ದಿಯು ಹಪ್ಪಳವಾಗಬಹುದೆ? ಇದು ಯಾವುದರಿಂದ ಆಗುತ್ತದೆಯೊ ಅದರಿಂದಲೇ ಆಗಬೇಕು' ದಾಳಿಂಬರ ತೋಟದ ವಿಷಯವಾಗಿ ಬಹಳ ಮಾತಾಡುತ್ತಾನೆ. 'ನಿಮ್ಮ ಆಶ್ರಮದಲ್ಲಿ ದಾಳಿಂಬ ಆಗುತ್ತಿವೆಯೆ?' ನಾನು ಹೇಳಿದೆ: 'ಚಲೋ ಆಗುವದಿಲ್ಲ.' ಹೇಳತೊಡಗಿದ: 'ಚನ್ನಾಗಿ ಶ್ರಮ ಮಾಡುತ್ತಿರಲಿಕ್ಕಿಲ್ಲ. ನೀರು ಎಷ್ಟು ಹಾಯಿಸುತ್ತೀರಿ? ಅದಕ್ಕಾಗಿ ಶ್ರಮ ಮಾಡಲಿಕ್ಕೆ ಬೇಕು. ಮತ್ತು ಸುತ್ತಲು ತೆಗ್ಗು ಮಾಡಿ ನಡುಮಟ ನೀರು ಹಾಯಿಸಲಿಕ್ಕೆ ಬೇಕು.' ಮುಂತಾಗಿ. ತನ್ನ ಅಪರಾಧ ಒಪ್ಪುತ್ತಾನೆ, ಅದಕ್ಕಾಗಿ ಪಶ್ಚಾತ್ತಾಪವೂ ಅವನಿಗಾಗುತ್ತದೆ.

ಹೇಳುತ್ತಾನೆ: 'ಇನ್ನು ಈ ಜನ್ಮದಲ್ಲಿ ಜೇಲಿಗೆ ಬರುವದಿಲ್ಲ. ದೇವರು ಕೈಕಾಲು ಕೊಟ್ಟಿದ್ದಾನೆ. ದುಡಿದು ಉಣ್ಣುತ್ತೇನೆ. ಯಾರೂ ಹಾಗೇ ಉಪವಾಸ ಸಾಯುವದಿಲ್ಲ. ನಾನು ಹಿಡಿಯಲ್ಪಟ್ಟೆನು— ಒಬ್ಬ ಮುಸಲ್ಮಾನನು ಜಬರೀ ಸಂಭೋಗ ಮಾಡಿ ಎಲ್ಲರನ್ನೂ ಹಿಡಿಸಿಬಿಟ್ಟನು. ಸ್ವತಃ ದಾಟಿಗೊಂಡನು-ಅದಕ್ಕೂ ಸ್ವಲ್ಪೇ ದಿನ ಮೊದಲು ಒಬ್ಬ (ಪಾಟೇದಾರನು) ಜಮೀನದಾರನು ಒಕ್ಕಲತನಕ್ಕಾಗಿ ೧೫ ಬಿಘೆ ಜಮೀನು ಕೊಡುತ್ತೇನೆಂದು ಹೇಳಿದ್ದನು. ಆದರೆ ದೈವದಾಟ. ಯಾರ ಕಡೆಗೂ ಒಂದು ಪೈ ಸಾಲವಿಲ್ಲ. ನೂರಿನ್ನೂರು ರೂಪಾಯಿಗಳನ್ನು ನನಗೆ ಬೇರೆಯವರೇ ಕೊಡಬೇಕಾಗಿದೆ. ನಮಗೆ ಬಾರೈಯಾ ಎಂದು ಹೇಳುತ್ತಾರೆ. ಹಾಗೆ ನೋಡಿದರೆ ನಾವು ಚಲಾಳದವರು, ಆದರೆ ಚರೋತರದ ಮೂಲನಿವಾಸಿಗಳು."

ಇವತ್ತು ಮೌನವಾರವಿದ್ದುದರಿಂದ ವಲ್ಲಭಭಾಯಿಯವರು ಬಾಪೂಗೆ ಹೇಳತೊಡಗಿದರು: "ಇವತ್ತಿಗೆ ೧೪ ವಾರಗಳು ಆಗಿ ಹೋದವು. ಇನ್ನು ನಿಮಗೆ ಇಲ್ಲಿ
ಎಲ್ಲಿಯವರೆಗೆ ಇರುವದಿದೆ? ವಿಲಾಯತಿಗೆ ಹೋಗದಿದ್ದರೆ
**೧೧-೪-'೩೨** ಆ ೩-೪ ತಿಂಗಳು ಸಹ ಇದರಲ್ಲಿಯೇ ಲೆಕ್ಕಕ್ಕೆ ಹತ್ತುತ್ತಿದ್ದವು.
ಅವು ಹಾಗೇ ವ್ಯರ್ಥಹೋದವು." ಬಾಪೂ ನಗೆಯ ಹೊರ
ತಾಗಿ ಬೇರೆ ಏನು ಉತ್ತರ ಕೊಡಬಲ್ಲರು?

* * *

ಆಸ್ಟ್ರೇಲಿಯಾ ಮತ್ತು ಅಮೇರಿಕಾ ಕುರಿತು ಮಾತಾಡುತ್ತ ಹೇಳತೊಡಗಿದರು: "ಅಮೇರಿಕಾ ದೇಶವನ್ನಂತೂ ತಮ್ಮ ಧರ್ಮ ರಕ್ಷಣೆಗಾಗಿ ಓಡಿ ಹೋದ ಜನರು ಕಟ್ಟಿದರು. ಆದರೆ ಆಸ್ಟ್ರೇಲಿಯಾವನ್ನು ಶಿಕ್ಷೆಹೊಂದಿದ ಅಪರಾಧಿಗಳು ಕಟ್ಟಿದ್ದಾರೆ, ಇದರಲ್ಲಿ ಏನಾದರೂ ಸಂಶಯ ಉಂಟೆ? ಆಸ್ಟ್ರೇಲಿಯಾ ಇಷ್ಟೆ ಏಕೆ? ಈ ಜನರು ಯಾರನ್ನು ದೇಶರಕ್ಷಕರೆಂದೂ ದೇಶಸೇವಕರೆಂದೂ ಪೂಜಿಸುತ್ತಾರೆಯೊ ಅವರೆಲ್ಲರೂ ಯಾರಿದ್ದರು? ಡ್ರೇಕನಂತೂ ಪೂರ್ಣ ಸಮುದ್ರಗಳ್ಳನಿದ್ದನು. ಆ ಸರ್ ಫ್ರಾನ್ಸಿಸ್ ಡ್ರೇಕ! ಕ್ಲಾಯಿವ್ಹ ಯಾವನಿದ್ದನು? ಹೇಸ್ಟಿಂಗ್ಸ ಯಾವನಿದ್ದನು? ಸೆಸಿಲ್ ರೋಡಸ್ ಏನಿದ್ದ? ದೊಡ್ಡ ಜೂಜುಗಾರ, ಠಕ್ಕ ಮತ್ತು ಸುಲಿಗೆಗಾರ ಮನುಷ್ಯನಿದ್ದನು. ಅವನು ರೊಡೇಶಿಯಾ ಸ್ಥಾಪಿಸಿದ. ಈಸ್ಟ ಇಂಡಿಯಾ ಕಂಪನಿಯ ಇತಿಹಾಸವು ಕಣ್ಣಮುಂದೆ ಕಟ್ಟಿದಂತೆ ರೊಡ್‌ರಾ ಕಂಪನಿಯದೂ ಕಟ್ಟಿದೆ. ಹೌದು, ಒಂದು ಮಾತಿದೆ: ಇವರಲ್ಲಿ ಒಳ್ಳೆಯ ಜನರೂ ಹುಟ್ಟಿದರೆಂಬುದರಲ್ಲಿ ಸಂದೇಹವಿಲ್ಲ."

* * *

ಸಣ್ಣಸಣ್ಣ ಮಾತುಗಳಲ್ಲಿ ಬಾಪೂ ಅವರ ಶಾಸ್ತ್ರೀಯ ಜ್ಞಾನವು ಎಷ್ಟಿದೆ ಮತ್ತು ಇನ್ನೂ ಎಷ್ಟೊಂದನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸುತ್ತಾರೆಂಬುದು

ಮೇಲಿಂದ ಮೇಲೆ ಮತ್ತು ಕ್ಷಣ ಕ್ಷಣಕ್ಕೆ ಕಂಡುಬರುತ್ತದೆ. ಆಶ್ರಮದಿಂದ ಬೇನೆಯ ವಿಷಯವಾಗಿ ಪತ್ರಗಳು ಬರುತ್ತವೆ. ಪ್ರಶ್ನೆಗಳನ್ನು ಸಹ ಕೇಳುತ್ತಾರೆ. "'ವೆಟ್ ಶೀಟ ಪ್ಯಾಕ್' ಯಾವದೇ ಜ್ವರದಲ್ಲಿ ಹಾಕಬಹುದೊ ಹೇಗೆ?" ಎಂದು ಕೇಳಲಾಗಿತ್ತು. ಬಾಪೂ ಬರೆದರು: "ಅವಶ್ಯ ಹಾಕಬಹುದು. ಆದರೆ ಇಷ್ಟೆ, ಬಟ್ಟೆಯನ್ನು ಚನ್ನಾಗಿ ಹಿಂಡಿರಬೇಕು, ಅದರಲ್ಲಿ ಒಂದು ಹನಿ ಸಹ ನೀರು ಉಳಿಯಬಾರದೆಂಬುದನ್ನು ನೋಡಬೇಕು." ನಾನು ಹೇಳಿದೆ "ಯುರೋಪದಲ್ಲಿ ಇನ್‌ಫ್ಲುಯಂಝಾ ಬೇನೆಯುವರನ್ನು ಬರ್ಫದ ಮೇಲೆ ಮಲಗಿಸಿ ರೋಗವಾಸಿ ಮಾಡುತ್ತಾರೆ." ಬಾಪೂ ಹೇಳಹತ್ತಿದರು: "ತೀರ ಗೊತ್ತಾಗುವಂಥ ಮಾತಿದೆ. ಬರ್ಫದ ಮೇಲೆ ಮನುಷ್ಯನಿಗೆ ಥಂಡಿ ಹತ್ತುತ್ತದೆ ಏನು? ಇಲ್ಲ. ಅವನಿಗೆ ಬಿಸಿ ಹತ್ತುತ್ತದೆ. ಯಾವದೊಂದು ಕ್ರಿಯೆಯಾಗುತ್ತಿರುವಾಗ ಅದರ ಪ್ರತಿಕ್ರಿಯೆ ಉಂಟಾಗುತ್ತದೆ. ಆದರೆ ಅದು ಆಯಿಸ ಇರಬಾರದು. ಸ್ನೋ ಇರತಕ್ಕದ್ದು. ಆಯಿಸವನ್ನು ಕುಟ್ಟಿ ಆಯಿಸದ ಟೆಂಪರೇಚರದಲ್ಲಿಯೆ ಇಟ್ಟರೆ ಅದು ಸ್ನೋ ಆಗುತ್ತದೆ." ವೆಟ್‌ಶೀಟ ಪ್ಯಾಕ್‌ದ ವಿಷಯವಾಗಿ ಬಾಪೂ ಎಷ್ಟೋ ಪ್ರಯೋಗ ಮಾಡಿ ಅನುಭವ ತೆಗೆದುಕೊಂಡಿದ್ದಾರೆ. ಗಂಗಾ ಬಹನಳು ಸುಟ್ಟುಕೊಂಡಿದ್ದಳು. ಮತ್ತು ಅವಳಿಗೆ ಬಹಳ ಉರಿಯಾಗುತ್ತಿತ್ತು. ಆಗ ವೆಟ್ ಶೀಟ ಪ್ಯಾಕ್ ಹಾಕಲಾಗಿತ್ತೆಂಬದು ಜ್ಞಾಪಕವಿದೆ. ಇದೇ ಪ್ರಕಾರ ಪ್ಲೇಗಬೇನೆಯಲ್ಲಿಯೂ ಮಾಡುತ್ತಾರೆ.

ಮನು ಮತ್ತೆ ದಯಾಜನಕ ಪತ್ರ ಬರೆದು ಅದರಲ್ಲಿ ಅಬಚಿಯು ಭಾಯೀಗೆ (ಹಿರಾಲಾಲನಿಗೆ) ಕಪಾಳಕ್ಕೆ ಮೂರು ನಾಲ್ಕು ಏಟು ಕೊಟ್ಟಳು ಎಂದು ಅಂದಿದ್ದಾಳೆ. ಬಾಪೂ ಬರೆದರು: "ಕಪಾಳಕ್ಕೆ ಹೊಡೆದದ್ದು ಉತ್ತಮವಾಯಿತು. ಇದರಲ್ಲಿ ಹಿಂಸೆಯಿದ್ದಿಲ್ಲ, ಶುದ್ಧ ಪ್ರೇಮವಿತ್ತು."

ನಿನ್ನೆ ಬಾಪೂ ಆಶ್ರಮದ ಇತಿಹಾಸದಲ್ಲಿ ಸತ್ಯದ ವ್ರತ ಕುರಿತು ವಿಸ್ತಾರ ಪೂರ್ವಕವಾಗಿ ಬರೆಯಿಸಿದ್ದರು. ಈಗೀಗ ತಿಳಿದೋ ತಿಳಿಯದಲೊ ನಮಗೆ ಸತ್ಯದ ಭಂಗವನ್ನು ಮಾಡುವ ರೂಢಿಯು ಹೇಗೆ ಬಿದ್ದಿದೆಯೆಂಬುದನ್ನು

೧೨-೪-'೩೨ ನೋಡಲಿಕ್ಕೆ ಇಂದು ಬೆಳಿಗ್ಗೆ ಸಿಕ್ಕಿತು. ಮರ್‍ಫಿ ಎಂಬ ಹೆಸರಿನ ಸ್ಕಾಚ್ ಕೈದಿಯು ನಮ್ಮ ನೆರೆಯಲ್ಲಿಯೇ ಇದ್ದಾನೆ. ಇನಸ್ಪೆಕ್ಟರ ಜನರಲ್ಲರ ಸಲುವಾಗಿ ಬಣ್ಣ ಕೊಡಿಸುವದಕ್ಕೆ ಒಂದು ಪೆಟ್ಟಿಗೆ ಬಂದಿತ್ತು. ಆದರ ಮೇಲೆ ಅವನ ಹೆಸರನ್ನು ಇಂಗ್ಲೀಷಿನಲ್ಲಿ ಬಿಳೇ ಅಕ್ಷರಗಳಲ್ಲಿ ಮರ್‍ಫಿಯು ಬರೆದಿದ್ದ. ಇನಸ್ಪೆಕ್ಟರ ಮತ್ತು ಜನರಲ್ ಇವುಗಳ ನಡುವೆ ಅವುಗಳನ್ನು ಕೂಡಿಸುವ ಚಿನ್ಹ ( — ) ವನ್ನು ಹಾಕಿದ್ದ. ಜೇಲರನು ಅವನಿಗ ಈ ಚಿನ್ಹ ಬೇಕಾಗಿಲ್ಲ ತೆಗೆದುಹಾಕು ಎಂದು ಹೇಳಿದ. ಪಾಪ, ಅವನು ಅದನ್ನು ತೆಗೆದು

ಕೊಂಡು ಅಳಿಸಲಿಕ್ಕೆ ಹೊರಟಾಗ ನಾನು ವ್ಹರಾಂಡಾದಲ್ಲಿ ಕುಳಿತಿದ್ದು ನೋಡಿ ಕೇಳತೊಡಗಿದ: "ಈ ಹಾಯಿಫನ್ ಬೇಕಾಗಿಲ್ಲವೆಂದು ಜೇಲರನು ಹೇಳುವದು ಸರಿಯಾಗಿದೆಯೆ ?" ನಾನು ನಕ್ಕು ಅವನಿಗೆ ಹೇಳಿದೆ: "ಜೇಲರನಿಗೆ ನಿನಗಿಂತ ಉತ್ತಮ ಇಂಗ್ರೇಜಿ ಗೊತ್ತಿರಬಹುದು". ಬಾಪೂ ಅಂದರು : "ಹೌದು ಅದು ಸರಿಯಿದೆ. ಹಾಯಿಫನ್ ತೆಗೆದುಹಾಕು, ಅದು ಬೇಕಾಗಿಲ್ಲ." ಅವನು ಹೊರಟು ಹೋದ ಮೇಲೆ ಬಾಪೂ ಹೇಳತೊಡಗಿದರು : "ನಿನ್ನ ಉತ್ತರದಲ್ಲಿ ಸತ್ಯದ ಭಂಗವೆಷ್ಟಿತ್ತು ? ನೀನು ಏನು ಉತ್ತರ ಕೊಡುತ್ತೀಯೆಂಬುದು ಅವನಿಗೆ ತಿಳಿಯಲೇ ಇಲ್ಲ. ಜೇಲರನಿಗೆ ನಿನಗಿಂತ ಇಂಗ್ರೇಜಿ ಕಡಿಮೆ ತಿಳಿಯುತ್ತದೆ ಆದರೆ ಅವನಿಗೆ ಅನುಭವ ಹೆಚ್ಚು ಇದ್ದುದರಿಂದ ಅವನ ಮಾತು ಕೇಳಲಿಕ್ಕೆ ಬೇಕು ಎಂದು ನಿನಗೆ ಹೇಳುವದಿದ್ದರೆ ಆದರ ಅರ್ಥವು ವಿಪರೀತವಾಗಿತ್ತು. ಅಥವಾ ಅವನ ಮಾತು ಕೇಳಬಾರದೆಂದು ಹೇಳುವದಿದ್ದರೆ ಹಾಗೆ ಸ್ಪಷ್ಟ ಹೇಳಬಹುದಿತ್ತು. ನೀನಂತೂ '**नरो वा कुंजरो वा**' ಎನ್ನುವಂತೆ ಮಾತಾಡಿದಿ."

ನಾನು ಸುಮ್ಮನೆ ಕೇಳುತ್ತ ನಿಂತೆನು. ಎಲ್ಲ ವಿಚಾರವೂ ಸರಿಯಾಗಿಯೇ ಇತ್ತು.

ಇವತ್ತು ಒಂದು ಪತ್ರ ಬರೆಸುವದಿತ್ತು. ಆ ಸಮಯಕ್ಕೆ ನಾನು ನೂಲುತ್ತಿದ್ದೆ. ಆದುದರಿಂದ ಬಾಪೂ ಅಂದರು : "ಇವನ ನೂಲುವದನ್ನು ಎಂದೂ ಬಿಡಿಸಲಾಗದು." ವಲ್ಲಭಭಾಯಿ ಅಂದರು: "ನಾನು ಬರೆಯುತ್ತೇನೆ." ಬಾಪೂ ಹೇಳಿದರು: "ಅವಶ್ಯ ಬರೆಯಿರಿ, ನಿಮ್ಮ ಸಲುವಾಗಿ ನನಗೆ ದಯೆ ಬರುವದೆಂದು ತಿಳಿಯಬೇಡಿರಿ." ಬರೆಯಿಸಿದರು. ಆದರೆ ಸಾಯಂಕಾಲಕ್ಕೆ ವಲ್ಲಭಭಾಯಿಯವರಿಗೆ ಇದಕ್ಕೂ ಕಠಿಣ ಕೆಲಸವನ್ನು ಕೊಟ್ಟರು. ಆಕಾಶದರ್ಶನ ಕುರಿತು ಒಂದು ಉದ್ದವೂ ಗಂಭೀರವೂ ಆದ ಲೇಖನವನ್ನು ಆಶ್ರಮಕ್ಕೆ ಕಳಿಸುವದಿತ್ತು. ಅದರ ಒಂದು ಪ್ರತಿಯನ್ನು ಕ್ಯಾಂಪ ಜೇಲಿಗೂ ಮತ್ತೊಂದನ್ನು ಸ್ತ್ರೀಯರ ಜೇಲಿನಲ್ಲಿದ್ದ ಆಶ್ರಮವಾಸಿಗಳಿಗೂ ಕಳಿಸಲು ಬಾಪೂ ಪರವಾನಿಗೆಯನ್ನು ತೆಗೆದುಕೊಂಡಿದ್ದರು. ಆದುದರಿಂದ ಈ ಲೇಖಗಳ ಪ್ರತಿಗಳನ್ನು ಮಾಡುವ ಕೆಲಸ ಬೆಳೆಯಿತು. ಒಂದು ಪ್ರತಿಯನ್ನು ನಾನು ನಿನ್ನೆ ಮಾಡಿದ್ದೆನು. ಆದುದರಿಂದ ಇವತ್ತು ಇನ್ನೊಂದು ಪ್ರತಿಯನ್ನು ಕ್ಯಾಂಪ ಜೇಲಿನ ಸಲುವಾಗಿ ಮಾಡುವದಿತ್ತು. ನಾನು ಯಾವದೋ ಕೆಲಸದಲ್ಲಿದ್ದೆ. ಬಾಪೂಗೆ ಸ್ವಲ್ಪ ಇತಿಮಿತಿಯಾಯಿತು. ನಾನು ರಾತ್ರಿ ಅದರ ಎರಡನೇ ಪ್ರತಿ ಮಾಡಿ ಮಲಗುವ ನಿರ್ಧಾರ ಮಾಡಿದ್ದೆ. ನಾನು ಅದರ ಪ್ರತಿಯನ್ನು ಮಾಡುವೆನೆಂದು ಬಾಪೂಗೆ ಹೇಳಿಯೂ ಬಿಟ್ಟಿದ್ದೆ. ಆದರೆ ಬಾಪೂ ಹೇಳಿದರು: "ವಲ್ಲಭಭಾಯಿ ಏಕೆ ಮಾಡಬಾರದು? ಇವರಿಗೆ ಒಪ್ಪಿಸೋಣ." ವಲ್ಲಭಭಾಯಿ ಕೂಡಲೇ ಕುಳಿತುಬಿಟ್ಟರು. ಅದಕ್ಕೆ ಸುಮಾರು ಒಂದು ತಾಸಾಗಿರಬಹುದು. ನಾನು ಬಾಪೂಗೆ ಹೇಳಿದೆ: "ಯಾರಿಗೆ ಒಂದು ಪತ್ರ ಬರೆಯಲು ಸಹ ದಣುವಾಗುತ್ತಿದೆಯೊ ಅಂಥವರಿಗೆ ಈ ಕೆಲಸ

ವನ್ನೊಪ್ಪಿಸಿದಿರಲ್ಲ.” ಬಾಪೂ ಅಂದರು : “ ದಣುವಾದರೆ ಬಿಟ್ಟುಬಿಡುವರು.”

ವಲ್ಲಭಭಾಯಿಯವರಿಗೆ ಇದು ನಿಜವಾಗಿಯೂ ಹೊಸ ಅನುಭವವಾಗಿತ್ತು. ಅವರಿಗೆ ‘ ಅಲ್ಪೋಕ್ತಿ,’ ‘ ಅತಂದ್ರಿತ ’ಗಳಂಥ ಶಬ್ದಗಳು ಅಪರಿಚಿತ ಹಾಗೂ ಉಚ್ಚರಿಸಲಿಕ್ಕೆ ಕಠಿಣವಾದವುಗಳಾಗಿದ್ದವು. ಅವರು ಕೇಳುತ್ತ ಹೋದರು. ಮತ್ತು ದೃಢನಿಶ್ಚಯದಿಂದ ಕೆಲಸ ಮುಗಿಸಿ ಮಲಗಿಕೊಂಡರು! ವಲ್ಲಭಭಾಯಿಯವರ ಸೌಜನ್ಯವು ಹೆಚ್ಚೆ ಹೆಚ್ಚಿಗೂ ನೋಡಲಿಕ್ಕೆ ಸಿಗುತ್ತದೆ. ಪ್ರೇಮಪೂರ್ವಕವಾಗಿ ಅವರು ಹಣ್ಣುಗಳನ್ನು ವ್ಯವಸ್ಥಿತವಾಗಿಡುತ್ತಾರೆ, ಹಲ್ಲು ಕಡ್ಡಿ ಕುಟ್ಟುವದನ್ನು ಮರೆತಿದ್ದರೆ ನೆನಪಾಗುತ್ತಲೇ ಹಲ್ಲು ಕಡ್ಡಿಯನ್ನು ತರಲು ಓಡುತ್ತಾರೆ. ಇವೆಲ್ಲವೂ ಅವರ ಅಪಾರ ಭಕ್ತಿಯನ್ನು ತೋರಿಸುತ್ತದೆ. ಈ ಭಕ್ತಿಯನ್ನು ಕಲಿಯುವದಕ್ಕಾಗಿ ಅವರ ಚರಣದ ಹತ್ತರ ಕೂಡ್ರುವ ಪ್ರೇರಣೆಯಾಗುತ್ತದೆ.

ಹೀರಾಲಾಲ ಶಹಾರ ಪತ್ರದ ಉಲ್ಲೇಖವು ಈ ದಿನಚರಿಯಲ್ಲಿ ಬಂದಿದೆ. ಆ ಪತ್ರದಲ್ಲಿ ಅವರು ಕೆಲವು ಸಂದರ್ಭದಲ್ಲಿ ವಿಶಿಷ್ಟವಾದ ಅರ್ಥ ಕೊಡಿಸುವ ಯುಕ್ತಿಯು ನನಗೆ ಸಾಧಿಸಿದೆ ಎಂದು ಬರೆದಿದ್ದಾರೆ. ಆಕಾಶದರ್ಶನದ ಸಲುವಾಗಿ ಯಾವದಾದರೂ ಸಾಮಾನು ಅಥವಾ ಪುಸ್ತಕ ಬೇಕಾಗಿದ್ದರೆ ಕಳಿಸಿಕೊಡುವೆನೆಂದು ಬರೆದಿದ್ದಾರೆ. ಬಾಪೂ ಅವರಿಗೆ ಒಂದು ಪತ್ರವನ್ನು ಕೈಯಿಂದಲೇ—ಎಡಗೈಯಿಂದ—ಬರೆದರು :

“ ಭಾಯಿ ಶ್ರೀ ಹೀರಾಲಾಲ,

ನಿಮ್ಮ ಪುಸ್ತಕಗಳೂ ಪ್ರೇಮಪೂರ್ಣ ಪತ್ರವೂ ಮುಟ್ಟಿದವು. ಒಂದು ವಾರ ತಡವಾಗಿ ಮುಟ್ಟಿದವು. ಯಾಕಂದರೆ ಡಾಹ್ಯಾಭಾಯಿ ಮರೆತಿದ್ದರು. ಪುಸ್ತಕಗಳು ಉಪಯುಕ್ತವೆಂದು ಸಿದ್ಧವಾಗುವವು. ನಿಮ್ಮ ಪತ್ರ ಹಾಗೂ ಟಿಪ್ಪಣಿಗಳು ಹೆಚ್ಚು ಉಪಯೋಗ ಬೀಳುವವು. ನೀವು ತಿಳಕೊಂಡಷ್ಟು ಲೋಭವು ನನಗಿಲ್ಲ. ಆಕಾಶದಲ್ಲಿ ಹೆಚ್ಚು ಉತ್ತಮ ರೀತಿಯಿಂದ ದೇವರನ್ನು ನೋಡಲು ಸಾಧ್ಯವಾಗುವಷ್ಟರ ಮಟ್ಟಿಗೆ ಅದರ ಸಾಮಾನ್ಯಜ್ಞಾನ ಮಾಡಿಕೊಳ್ಳಬಯಸುತ್ತೇನೆ. ಖಗೋಲವಿದ್ಯೆಯ ಬಗ್ಗೆ ನಿಮಗೆ ಸರಿಕಂಡ ಒಂದು ಸಣ್ಣ ಪುಸ್ತಕ ಕಳಿಸಿಕೊಡಿರಿ. ನಿಮ್ಮ ಪುಸ್ತಕಗಳ ಕಾಳಜಿ ತೆಗೆದುಕೊಳ್ಳುವೆನು. ಈ ವಿಷಯದಲ್ಲಿ ನಿಮ್ಮ ಜಾಗರೂಕತೆಯನ್ನು ನಾನು ನೋಡಿದ್ದೇನೆ ಇಂಥ ಪುಸ್ತಕಗಳನ್ನು ನಾನು ಮಿತ್ರರಿಂದ ಒಮ್ಮೆಲೇ ತೆಗೆದುಕೊಳ್ಳುವದಿಲ್ಲ. ಎಲ್ಲಿಯಾದರೂ ಕಳೆದರೆ ಅಥವಾ ಕೆಟ್ಟರೆ !

“ ನಿಮ್ಮ ಪರಿಶ್ರಮ ಮತ್ತು ಕೌಶಲ್ಯ ಕುರಿತು ಸ್ತುತಿಮಾಡಿದಷ್ಟು ಕಡಿಮೆ. ಆದರೆ ಅದರ ಮುಖ್ಯ ಸೂತ್ರ ತಿಳಿದಿದೆಯೆಂಬ ಅಹಂಕಾರ ಅಷ್ಟೊಂದು ಇಲ್ಲವಷ್ಟೆ ? ಈ ಸೂತ್ರ ಏನಿದೆ ? ಅದನ್ನು ಸೂತ್ರವೆಂದು, ಮುಖ್ಯ ಸೂತ್ರವೆಂದು ತಿಳಿಯಲಿಕ್ಕೆ ನಿಮ್ಮಲ್ಲಿ ಯಾವ ಸಬಲವಾದ ಪ್ರಮಾಣಗಳಿವೆ ? ಪಂಡಿತರು ಅದನ್ನು ಒಪ್ಪಿದುವರೆ ? ನಿಮ್ಮ ಸಂಶೋಧನೆಯಿಂದ ನೀವು ಯಾವ ಫಲ ದೊರೆಯಬಹುದೆಂದು ಹೇಳುತ್ತೀರಿ ?

ಇದರಲ್ಲಿ ಮುಖ್ಯ ಸೂತ್ರವಾದ ರಾಟೆಯ ಅಭಾವದ ದೋಷವಂತೂ ಇಲ್ಲವಷ್ಟೆ? ನಿಮ್ಮಿಂದ ತಿಳಿದುಕೊಳ್ಳಲು ನಾನು ಸಿದ್ಧನಿದ್ದೇನೆ. ಮತ್ತು ನಿಷ್ಪಕ್ಷಪಾತತನದಿಂದ ನಿಮ್ಮ ಪ್ರಮಾಣಗಳನ್ನು ತೂಗಿನೋಡುವೆನು. ಆದರೆ ಶೋಧಕರಿಗೆ—ಸಾಧಕರಿಗೆ ಶೋಭಿಸುವಂಥ ನಮ್ರತೆಯನ್ನು ನಿಮ್ಮಲ್ಲಿ ಹುಟ್ಟಿಸಿಕೊಳ್ಳಿರಿ. ಅದು ಹುಟ್ಟಿಸಿಕೊಳ್ಳುವದರಿಂದ ಬರುವದಿಲ್ಲವೆಂಬುದು ನನಗೆ ಗೊತ್ತಿದೆ. ನಿಜವಾದ ಶೋಧನೆಯಲ್ಲಿ ಅದು ಹುದುಗಿಕೊಂಡೇ ಇರುತ್ತದೆ. ಅವನ ಹತ್ತಿರ ಸಾವಿರಾರು ಪ್ರಮಾಣಗಳಿದ್ದರೂ ಶೋಧಕನಿಗೆ ತನ್ನ ಶೋಧದ ವಿಷಯವಾಗಿ ಶಂಕೆಗಳಿದ್ದೇ ಇರುತ್ತವೆ. ಪರಿಣಾಮವೆಂದರೆ ಅವನು ತನ್ನ ಶೋಧವನ್ನು ಜಗತ್ತಿನ ಮುಂದಿಟ್ಟಾಗ ಅವನಿಗೆ ಸಾಕ್ಷಾತ್ಕಾರವಾಗಿಬಿಡುತ್ತದೆ ಜಗತ್ತು ಆಶ್ಚರ್ಯಚಕಿತವಾಗಿ ಅವನ ಮೇಲೆ ವಿಶ್ವಾಸವಿಡುತ್ತದೆ. ಅವನ ವಾಣಿಯಲ್ಲಿ ಅಧಿಕಾರವಿರುತ್ತದೆ, ತೇಜಸ್ಸಿರುತ್ತದೆ. ಜಗತ್ತು ಅವನ ಮಾತನ್ನು ಒಪ್ಪಿಕೊಳ್ಳುತ್ತದೆ. ಅವನ ಪ್ರಮಾಣಗಳಿಂದ ಜಗತ್ತು ಚಕಿತವಾಗುತ್ತದೆ. ಯಾಕಂದರೆ ಶೋಧಕನು ಶೋಧದ ವಿಷಯವಾಗಿ ಹತ್ತೂನಿಟ್ಟಿನಿಂದ ಹುಡುಕಾಡಿಬಿಡುತ್ತಾನೆ. ಈ ಎಲ್ಲ ಮಾತುಗಳು ನಿಮ್ಮ ಶೋಧದ ವಿಷಯದಲ್ಲಿ ನಿಜವಾಗಿದ್ದರೆ ನನಗೆ ಏನೂ ಹೇಳುವದಿಲ್ಲ. ಹೀಗಿದ್ದರೆ ನಿಮಗೆ ಸಾವಿರ ಪ್ರಣಾಮಗಳು. ದೇವರು ಹೀಗಾಗುವಂತೆ ಮಾಡಲಿ.

"ನಾವೆಲ್ಲರೂ ಅಂದರೆ ಮೂವರು ಆನಂದದಲ್ಲಿದ್ದೇವೆ. ಶಂಕರನಿಗೆ ಹೇಳಿರಿ 'ಪ್ರಕೃತಿಯನ್ನು ಕೆಡಿಸಿಕೊಳ್ಳಬಾರದು, ಪತ್ರವನ್ನು ಬರೆ ಎಂದು'.

ಬಾಪೂನ ಆಶೀರ್ವಾದಗಳು."

ಬಾಪೂರ ಎಡಗೈ ಮೊಳಕೈ ಸಂಧಿನ ಮೇಲ್ಭಾಗದ ಎಲುಬಿನಲ್ಲಿ ನೋವಾಗುತ್ತಿದೆ ಮತ್ತು ಬಲಗೈ ಹೆಬ್ಬೆಟ್ಟಿನಲ್ಲಿ ನೋವಿದೆ. ಅವರು ಕಳೆದ ಮೂರು ದಿವಸಗಳಿಂದ ೨–೫ ಸುತ್ತು (ತಾರು) ಗಳನ್ನು ನೂಲುವ ಪ್ರತಿಜ್ಞೆ

೧೩–೪–'೩೨ ಮಾಡಿದಂತೆ ತೋರುತ್ತದೆ. ಈ ಎರಡೂ ಕೈಗಳಿಗೆ ವಿಶ್ರಾಂತಿ ಕೊಡಿರೆಂದು ಡಾ. ಮೆಹತಾ ಹೇಳುತ್ತಾರೆ. ಆದರೆ ರಾಟಿ ನೂಲುವದರಿಂದ ನೋವು ಹೆಚ್ಚಾಗುವದಿಲ್ಲೆಂದು ಬಾಪೂ ಹೇಳುತ್ತಾರೆ! ರಾಷ್ಟ್ರೀಯ ಸಪ್ತಾಹದ ನಿಮಿತ್ತವಾಗಿ ನೂಲುವದರ ಮೇಲೆ ಹೆಚ್ಚು ಜೋರು ಕೊಟ್ಟಂತೆ ತೋರುತ್ತದೆ ಇವತ್ತು ದಣಿದಿದ್ದರು. ಸರ್ವಸಾಮಾನ್ಯವಾಗಿ ಮೂರುಘಂಟೆಗೆ ನೂಲುವದು ಮುಗಿಯುತ್ತದೆ. ಇವತ್ತು ಮೂರು ಘಂಟೆಗೆ ಪೂರ್ಣವಾಗಲಿಲ್ಲ. ಇವತ್ತು ಸಪ್ತಾಹದ ಕೊನೆಯ ದಿವಸವಿದ್ದುದರಿಂದ ಸಾಯಂಕಾಲದವರೆಗೆ ೫೦೦ ತಾರು ನೂಲದಿದ್ದರೆ ಒಳ್ಳೆಯದಲ್ಲ ಎಂದು ಹೇಳಿ ನಿಶ್ಚಯಪೂರ್ವಕ ಕುಳಿತುಬಿಟ್ಟರು. ಮತ್ತು ಸಾಯಂಕಾಲ ನಾಲ್ಕುಗಂಟೆಗೆ ಪೂರ್ಣ ಮಾಡಿದರು!

ರಾಷ್ಟ್ರೀಯ ಸಪ್ತಾಹದಲ್ಲಿ ವಿಶೇಷ ನಿಷ್ಠೆಯಿಂದ ಹೆಚ್ಚು ಕೆಲಸ ಮಾಡಬೇಕೆಂಬ ಪ್ರಯತ್ನವಿರುತ್ತದೆ. ನಾನು ಆಚರಿಸುತ್ತಿರುವ ನಿತ್ಯಕ್ರಮವೇ ಯಾವಾಗಲೂ ನಡೆದರೆ ದೇವರ ಕೃಪೆಯೆಂದು ನಾನು ತಿಳಿಯುತ್ತೇನೆ. ಜೀವನದ ಒಂದು ದಿನ ಸಹ, ಒಂದು ಕ್ಷಣ ಸಹ ಆಲಸ್ಯದಲ್ಲಿ ಕಳೆಯದಿದ್ದರೆ ಯಾವದೇ ವಾರ–ಪರ್ವಗಳನ್ನು ಆಚರಿಸುವ ಆವಶ್ಯಕತೆಯಿಲ್ಲ.

ಸ್ವರೂಪರಾಣಿ ನೆಹರೂರಿಗೆ ಬಿದ್ದ ಹೊಡೆತವು ಪೋಲೀಸರ ಕೆಲಸವೇ ಆಗಿರಬಹುದೆಂದು ತಿಳಿಯಲು ಬಾಪೂಜಿ ಒಪ್ಪಲಿಲ್ಲ. ಎರಡು ಮೂರು ಅನುಮಾನಗಳನ್ನು ಮಾಡಿದ್ದೆವು. ಹೊಡೆತವು ಪೋಲೀಸರದೆ ಇತ್ತೆಂದು ಇಂದು ಸ್ವತಃ ಸ್ವರೂಪರಾಣಿಯವರೇ ಪ್ರಸಿದ್ಧಮಾಡಿದ್ದರು. ಇದನ್ನು ತಿಳಿದು ಬಾಪೂ ಕುದಿಯಹತ್ತಿದರು. "ಲಾಲಾಜೀಯವರ ಮೇಲೆ ತಿಳಿದೂ ತಿಳಿದೂ ಹೊಡೆತ ಬಿದ್ದಿದ್ದಿಲ್ಲ. ಅಂದರೂ ದೇಶದ ತುಂಬೆಲ್ಲ ಗೊಂದಲವೆದ್ದಿತ್ತು. ಈ ಹೊಡೆತವಂತೂ ಜವಾಹರಲಾಲರ ತಾಯಿಯ ಮೇಲೆ ತಿಳಿದೂ ತಿಳಿದೂ ಬಿದ್ದಿರಬಹುದಲ್ಲವೇ! ಆದರೂ ಸಹ ದೇಶದಲ್ಲಿ ಯಾವದೇ ಪ್ರಕಾರದ ಪುಣ್ಯಪ್ರಕೋಪ ಕಂಡುಬರುವದಿಲ್ಲ. 'ಲೀಡರ'ದವನು ಸಹ ಏನೂ ಬರೆದಿಲ್ಲವೇ?" ಎಂದು ಬಾಪೂಜಿ ಈ ಉದ್ಗಾರಗಳನ್ನು ಪ್ರಗಟ ಮಾಡಿದರು. ವಲ್ಲಭಭಾಯಿ ಅಂದರು: "ಗೊಂದಲವನ್ನೆಬ್ಬಿಸುವವರೆಲ್ಲ ನಾವು ಒಳಗೆ ಕೂತಿದ್ದೇವೆ. 'ಲೀಡರ'ದವನು ಬರೆದದ್ದರಲ್ಲಿ ಏನೂ ಅರ್ಥವಿಲ್ಲ." ಬಾಪೂ ಅಂದರು: "ಆದರೆ ಬರೆದಿದ್ದಾನೆಯೆ?" ವಲ್ಲಭಭಾಯಿ: "ಬರೆದಿದ್ದಾನೆ. ಆದರೆ ಅದನ್ನು ಓದಿ ಏನುಮಾಡುವಿರಿ?" ಬಾಪೂ: "ಇಲ್ಲ ಓದಿ ತೋರಿಸಿರಿ." ಕೇಳಿ ಅವರಿಗೆ ಬಹಳ ಅಸಮಾಧಾನವಾಯಿತು. ಮಾತಾಡಿದರು: "ಅವನಿಗೆ ಸಮತೋಲಬುದ್ಧಿಯವನೆಂದು ಪದವಿ ಸಿಕ್ಕಿದೆಯಲ್ಲವೆ! 'ಹಿಂದೂ' ಮತ್ತು 'ಲೀಡರ' ವೃತ್ತಪತ್ರಗಳ ಲೇಖಗಳು ವಿಚಾರಪೂರ್ವಕವಾಗಿ ಬರೆದ ಲೇಖಗಳೆಂದು ಆ ವೃತ್ತಪತ್ರಕಾರನು ಬರೆದದ್ದನ್ನು ನಾವು ಇವತ್ತೇ ಬೆಳಗ್ಗೆ ಓದಿದ್ದೇವಲ್ಲವೆ?"

ರಾಜಕೀಯ ಸಂಗಡಿಗರನ್ನು ಭೆಟ್ಟಿಯಾಗಲಿಕ್ಕೆ ಇಂದು ಮಾರ್ಟಿನ್ನರಿಗೆ ಪತ್ರಬರೆದರು.

ಸುಪರಿಂಟೆಂಡೆಂಟರ ಸಂಗಡ ಮಾತಾಡುತ್ತ ಇಸ್ಲಾಮದ ವಿಷಯವಾಗಿ ಚರ್ಚೆ ನಡೆಯಿತು. ಬಾಪೂ ಹೇಳಿದರು: "ಇಸ್ಲಾಮದಲ್ಲಿದ್ದ ಉದಾರತೆಯನ್ನೂ, ಸಹಿಷ್ಣುತೆಯನ್ನೂ ಹನಸೀ ಜನರು ಅಳಿಸಿಬಿಟ್ಟರು. ಕುರಾಣದ ಮಿಕ್ಕೆಲ್ಲ ಪ್ರತಿಗಳನ್ನು ನಷ್ಟಮಾಡಿ ಒಂದನ್ನೇ ಉಳಿಸಿದರು. ಇಷ್ಟಾದರೂ ಸ್ವಲ್ಪೂ ಪಾಠಭೇದವಿಲ್ಲದ ಪುಸ್ತಕವೆಂದರೆ ಕುರಾಣವೊಂದೇ ಎಂದು ಈ ಜನರು ಅಭಿಮಾನಪಡುತ್ತಾರೆ. ಮಿಕ್ಕೆಲ್ಲ ಪ್ರತಿಗಳನ್ನು ನಾಶಮಾಡಿದ ಮೇಲೆ ಪಾಠಭೇದ ಉಳಿಯುವದೆಂತು? ಆದರೆ ಇಸ್ಲಾಂದಲ್ಲಿಷ್ಟ ಹಜರತ ಉಮರರ ಉದಾರತೆಯ ಉದಾಹರಣೆಯು ಜಗತ್ತಿನಲ್ಲಿ

ಅಲ್ಲಲ್ಲಿ ದೊರೆಯಬಲ್ಲದು. ಆದರೆ ಅದಕ್ಕೂ ಹೆಚ್ಚಿನ ಉದಾಹರಣೆಯು ಎಲ್ಲಿಯೂ ದೊರೆಯುವದೇ ಇಲ್ಲ. ಅಸಹಿಷ್ಣುತೆಯುಂಟಾದ ಮೇಲೆ ಸಹ ಕ್ರೈಸ್ತಧರ್ಮದ ಹೆಸರಿನಿಂದ ಆದಷ್ಟು ಹತ್ಯಾಕಾಂಡವಾಗಲಿ, ರಕ್ತಪಾತವಾಗಲಿ ಇಸ್ಲಾಮದ ಹೆಸರಿನಲ್ಲಿ ಆಗಿಲ್ಲ. ”

ಆಯಿತು. ಈಗ ಬಾಪೂ ಅವರು ದಿನಾಲು ೫೦೦ ವಾರು ನೂಲುವ ನಿಶ್ಚಯ ಮಾಡಿದಂತೆ ಕಾಣುತ್ತದೆ. ಇವತ್ತು ಹೆಚ್ಚು ಶ್ರಮ ಬಿತ್ತು. ಭೆಟ್ಟಿಯೊಳಗೆ ಹೆಚ್ಚು ಸಮಯ ಹೋಯಿತು. ಕ್ಯಾಂಪಿನಿಂದ ಮೋಹನಲಾಲ ಭಟ್ಟ,

**೧೪-೪-'೩೨** ಧುರಂಧರ, ಮಣಿಭಾಯಿ ದೇಸಾಯಿ ಬಂದಿದ್ದರು. ಮತ್ತು ರಾಜಕೋಟದಿಂದ ಬಲೀಬಹನ, ಮನು, ಕುಸುಮ ದೇಸಾಯಿ ಮುಂತಾದವರು ಬಂದಿದ್ದರು. ಆದರೆ ಹೆಚ್ಚು ಸಮಯ . . . ಇವರೊಂದಿಗೆ ಹೋಯಿತು. ಸುಪರಿಂಟೆಂಡೆಂಟರ ಜೊತೆಗೆ ಮಾತಾಡುವಾಗ ಅವರು ಸುದ್ದೀ ಹೇಳಿದರು : “ . . . ಆರು ದಿನಗಳಿಂದ ಅವರು ಉಪವಾಸವಿದ್ದಾರೆ. ನೀವು ತಿಳಿಸಿ ಹೇಳಬಹುದೊ ? ” ಬಾಪೂ : “ ಅವಶ್ಯವಾಗಿ, ನೀವು ಕರೆಯಿಸಿರಿ. ” ಕರೆಯಿಸಿದರು. ಲಂಗೋಟಿ ಧರಿಸಿ ಆಫೀಸಿನಲ್ಲಿ ಬಂದರು. ಅವರನ್ನು ಕೇಳಿದ ಮೇಲೆ ಅವರು ಸ್ಪಷ್ಟೀಕರಣ ಕೊಟ್ಟರು : “ ನನ್ನದಂತೂ ಸ್ವಾವಲಂಬನ ವ್ರತವಿದೆ, ಆದುದರಿಂದ ಕೈಯಿಂದ ನೂತ ಬಟ್ಟೆಯನ್ನೇ ಧರಿಸಬೇಕು, ಮತ್ತು ಮಧುಕರಿಯ ಅನ್ನವನ್ನೇ ಊಟಮಾಡಬೇಕು, ಅದು ಸಿಗದಿದ್ದರೆ ಫಲಾಹಾರ ಮತ್ತು ಹಾಲು ಇವುಗಳ ಮೇಲೆಯೇ ಇರುವ ವ್ರತವಿದೆ.” ಸುಪರಿಂಟೆಂಡೆಂಟರು ಹೇಳಿದರು: “ ಈ ವ್ರತವು ನಾಸಿಕದಲ್ಲಿರಲಿಲ್ಲವೆ ?” ಅವರು ಅಂದರು : “ ಸಂಧಿಯಾದನಂತರ ವ್ರತವನ್ನು ತೆಗೆದುಕೊಂಡಿರುತ್ತೇನೆ. ” ಬಾಪೂ ಬಹಳ ತಿಳಿಸಿ ಹೇಳಿದರು : “ ಸ್ವಾವಲಂಬನದ ಅರ್ಥವು ಇದು ಆಗುವದೇ ಇಲ್ಲ. ನಿಮಗೆ ರೊಕ್ಕ ಕೊಡಬೇಕಾಗುತ್ತಿದ್ದರೆ ಆ ಮಾತು ಬೇರೆ. ಇಲ್ಲಿ ಜೇಲಿನವರು ಕೊಟ್ಟದ್ದನ್ನೇ ಉಡುವದು ಉಚಿತವಾಗಿದೆ. ಮತ್ತು ಊಟಕ್ಕೆ ಇಂಥ ಪದಾರ್ಥಗಳೇ ಸಿಗಬೇಕೆಂಬ ಆಗ್ರಹವನ್ನು ಹೇಗೆ ಹಿಡಿಯಲಿಕ್ಕೆ ಬಂದೀತು? ಮಧುಕರೀ ಅಥವಾ ಫಲಾಹಾರದ ವ್ರತಕ್ಕೆ ನಾನು ಯಾವ ಬೆಲೆಯನ್ನೂ ಕೊಡುವದಿಲ್ಲ. ಹಾಲು ಇದು ಆಹಾರವಲ್ಲವೇನು ? ಹಣ್ಣುಹಂಪಲ ಆಹಾರವಲ್ಲವೇನು ? ನಾನಂತೂ ಇದನ್ನು ವಿಲಾಸವೆಂದು ತಿಳಿಯುತ್ತೇನೆ. ಮತ್ತು ಈ ಪ್ರಕಾರ ನಿಮ್ಮಂತೆ ಎಲ್ಲರೂ ವ್ರತ ತೆಗೆದುಕೊಂಡು ಬಂದು ‘ ಸಿ ’ ಕ್ಲಾಸದ ಆಹಾರದಿಂದ ಪಾರಾಗಬಲ್ಲರು. ಈ ಉಪವಾಸವು ನನಗೆ ನಿರರ್ಥಕವೆಂದು ಅನಿಸುತ್ತದೆ. ” . . . ರು ಎರಡನೆಯ ರೀತಿಯಿಂದ ವಾದಮಾಡಿದರು : “ ಹಿಂದೂ ಧರ್ಮದಲ್ಲಿ ವ್ರತವಿದೆ. ಅವುಗಳಿಗಾಗಿ ಸಾಯುವ ಶಕ್ತಿಯನ್ನು ನಾವು ಉಂಟುಮಾಡಿಲ್ಲ. ಆದುದರಿಂದ ನೋಡಿದಲ್ಲೆಲ್ಲ

ಹಿಂದೂ ಧರ್ಮದ ನಿಂದೆಯಾಗುತ್ತಿದೆ. ನೋಡಿರಿ, ನನ್ನ ತಲೆ ಬೋಳಿಸಿದ್ದಾರೆ, ಆದರೆ ಮುಸಲ್ಮಾನರ ಗಡ್ಡಗಳನ್ನು ಇಲ್ಲಿ ಯಾರಾದರೂ ಬೋಳಿಸಿರುವರೇ?'' ಬಾಪೂ ಹೇಳಿದರು : " ನಿಮ್ಮ ಚಂಡಿಕೆಗಳನ್ನು ಬೋಳಿಸುತ್ತಿದ್ದರೆ ನೀವು ಅವಶ್ಯ ಹಾಗೆ ಹೇಳಬಹುದಿತ್ತು. ನೀವು ಮಾಡುತ್ತಿರುವ ಸತ್ಯಾಗ್ರಹವು ಹಿಂದೂ ಧರ್ಮಕ್ಕಾಗಲಿ ನಿಮ್ಮಂಥ ಕಾರ್ಯಕರ್ತರಿಗಾಗಲಿ ಶೋಭೆಯನ್ನು ತರುವದಿಲ್ಲ. ಈ ಜನರು ನಿಮ್ಮನ್ನು ಸಾಯಲಿಕ್ಕೆ ಕೊಡುವದಿಲ್ಲ. ಕೆಲವು ದಿವಸ ಉಪವಾಸಮಾಡಗೊಟ್ಟು ಆ ಮೇಲೆ ನಿಮಗೆ ಹಾಲೂ ಹಣ್ಣನ್ನು ಕೊಡುವ ಸಂಭವವಿದೆ. ಆದರೆ ಇದರಿಂದ ನಿಮ್ಮ ಸತ್ಯಾಗ್ರಹದ ಜಯವಾಯಿತೆಂದು ನಾನು ತಿಳಿಯುವದಿಲ್ಲ. ಇವನ ಬಾಯಲ್ಲಿ ತುರುಕಿರಿ ಮತ್ತು ಇನ್ನು ಮೇಲೆ ಇಂಥ ವ್ಯರ್ಥ ಮಾತುಗಳನ್ನು ಬಿಡಲಿಕ್ಕೆ ಇವನಿಗೆ ಹೇಳಿರಿ ಎಂದು ಈ ಜನರು ಅನ್ನುವರು. ಇಂಥ ವ್ರತಗಳನ್ನು ತೆಗೆದುಕೊಂಡು ಜೇಲಿನಲ್ಲಿ ಬರಲಿಕ್ಕಾಗದು.'' ಅವರು ಒಪ್ಪಲಿಲ್ಲ. ಬಾಪೂ ಹೇಳಿದರು : " ಭಾಯೀ ಈ ಎಲ್ಲ ಮಾತುಗಳನ್ನು ನಾನೇ ಪ್ರಾರಂಭಿಸಿದ್ದೇನೆ. ಈ ವಿಷಯದಲ್ಲಿ ನಾನು ಹೇಳುವದನ್ನಾದರೂ ಕೇಳಿರಿ. '' ಅಂದರೂ ಒಪ್ಪಲಿಲ್ಲ. ಬಾಪೂ ಹೇಳಿದರು : " ಈ ಶರೀರ ಹೋದರೂ ಚಿಂತೆಯಿಲ್ಲ ಎಂದು ನೀವು ಅನ್ನುತ್ತೀರಿ. ಈ ಪ್ರಕಾರ ಹೇಳುವದರಲ್ಲಿಯೂ, ದೇಹವನ್ನು ಕಳೆದುಕೊಳ್ಳುವದರಲ್ಲಿಯೂ ಒಂದು ಪ್ರಕಾರದ ವಿಲಾಸವಿದೆ. ಮತ್ತು ಈ ಪ್ರಕಾರದ ತಿಳಿವಳಿಕೆಯಿಂದ ತೆಗೆದುಕೊಂಡ ವ್ರತಕ್ಕೆ ಅಂಟಿಕೊಂಡು ಕೂಡ್ರುವದು ಮಿಥ್ಯಾಭಿಮಾನವಾಗಿದೆ.'' ಅವರು ಮಿಟ್ಟನೇ ಮಿಸುಗಲಿಲ್ಲ. ಆಗ ಬಾಪೂ ಅಂದರು : " ಆಗಲಿ. ಒಳ್ಳೆಯದು. ಬಲಾತ್ಯಾಯದಿಂದ ನಿಮ್ಮನ್ನು ಬಿಡಿಸಲು ಇಚ್ಛಿಸುವದಿಲ್ಲ. ಆದರೆ ನಿಮ್ಮ ಬುದ್ಧಿಯ ಮೇಲೆ ಪ್ರಭಾವವನ್ನು ಕೆಡಿಸಲು ಸಾಧ್ಯವಾದರೆ ನೀವು ಇದನ್ನು ಬಿಡಿರೆಂದು ಅವಶ್ಯ ಹೇಳುವೆನು." ಆದರೂ ಬಾಪೂ ಸುಪರಿಂಟೆಂಡೆಂಟರಿಗೆ ಹೇಳಿದರು : " ಬೇನೆಯವರೆಂದು ತಿಳಿದು ಇವರಿಗೆ ಹಾಲು ಕೊಡಿರಿ. ಯಾವದೇ ಮನುಷ್ಯನು ಉಪವಾಸ ಮಾಡುತ್ತಿದ್ದರೆ—ಯಾವದೇ ಕಾರಣದಿಂದೇಕಾಗಲೊಲ್ಲದು—ಅವನನ್ನು ಸಾಯಗೊಡಬಾರದಾಗಿದ್ದರೆ ಅವನಿಗೆ ಏನಾದರೂ ಕೊಡಲೇಬೇಕು. ಆದುದರಿಂದ ಹಾಲು ಅಥವಾ ಗ್ಲುಕೋಜ ಕೊಡಿರಿ.'' ಸುಪರಿಂಟೆಂಡೆಂಟರು ಹೇಳಿದರು : " ಇಲ್ಲ, ಇದು ನಿಯಮದ ವಿರುದ್ಧವಿದೆ." ಬಾಪೂ ಅಂದರು : " ನಾನು ನಿಮಗೆ ಆಗ್ರಹಮಾಡಲಾರೆ. ಯಾಕಂದರೆ ಇವರ ಮಾತು ಸರಿಯೆಂದು ನನಗೆ ಅನಿಸುವದಿಲ್ಲ. ಮತ್ತು ನೀವು ಹೇಳುವದರಲ್ಲಿ ಸಾರವಿದೆ. ಆದರೆ ಇವನಂತೂ . . . ಅಂತಹ ಮನುಷ್ಯನಿದ್ದಾನೆ. ಇದನ್ನು ತಿಳಿದು ಕೊಡುವದಿದ್ದರೆ ಕೊಡಿರಿ, ಇಲ್ಲದಿದ್ದರೆ ವಿಶೇಷವೇನೂ ಇಲ್ಲ. ನನ್ನದು ಸ್ವಲ್ಪ ಸಹ ಆಗ್ರಹವಿಲ್ಲ.''

* * *

ಹೊರಗಿನ ಚಳವಳಿಯ ಸಂಬಂಧದಲ್ಲಿ ಅಭಿಪ್ರಾಯವನ್ನು ಕೇಳಿದ ಒಂದೆರಡು ಪತ್ರಗಳು ಬಂದಿದ್ದವು. ಇವನಿಂದ ಇಂಥ ಪತ್ರವನ್ನು ಬರೆಯುವದಾದರೂ ಹೇಗೆ ಆಯಿತು ? ಇವನಿಗೆ ಯಾವದೇ ಪ್ರಕಾರದ ಉತ್ತರವನ್ನು ಕೊಡದಿರುವದೇ ಇದರ ಉತ್ತರವಿದೆ.

* * *

ಸುಪರಿಂಟೆಂಡೆಂಟರು ಸೂಚಿಸಿದರು : "ಸತ್ಯಾಗ್ರಹಿ ಕೈದಿಗಳೊಳಗಿಂದ ಯಾರಾದರೂ ವಾರ್ಡರರಾಗಲಿಕ್ಕೆ ಸಿದ್ಧರಿದ್ದರೆ ನಾನು ಎರಡನೇ ವಾರ್ಡರರನ್ನು ಒಂತೆಗೆದುಕೊಳ್ಳಲಿಕ್ಕೆ ಸಿದ್ಧನಿದ್ದೇನೆ." ಬಾಪೂ ಅವರಿಗೆ ಈ ಸೂಚನೆಯು ಒಪ್ಪಿಗೆಯಾಯಿತು. ಆದರೆ ರಾಜಕೀಯ ಕೈದಿಗಳು ಸಿದ್ಧರಿಲ್ಲವೆಂದು ಬಾಪೂ ಅವರಿಗೆ ಹೇಳಲಾಯಿತು. 'ನಮ್ಮ ಮಾತು ಕೇಳುವದಿಲ್ಲ, ನಮ್ಮ ಹೆಸರಿನಮೇಲೆ ಕೆಟ್ಟ ಶರಾ ಬರೆಯಲಾಗುವದು. ಮತ್ತು ನಮ್ಮ ನಮ್ಮೊಳಗೆ ವೈಮನಸ್ಯ ಉಂಟಾಗುವದು. ಕೆಲವು ಜನರು ತೊಂದರೆ ಕೊಡುವಂಥವರೇ ಇದ್ದಾರೆ. ಇಂಥ ಜನರ ವಿರುದ್ಧ ವರದಿ ಮಾಡಿದರೆ ವಿನಾಕಾರಣ ಅಪ್ರಿಯರಾಗುವೆವು.' ಬಾಪೂ ಹೇಳಿದರು : "ಇದನ್ನು ಸ್ವರಾಜ್ಯದಲ್ಲಿ ಕೂಡ ಮಾಡಬೇಕಾಗುವದು. ನಮ್ಮ ನಮ್ಮೊಳಗೆ ಬಂದೋಬಸ್ತನ್ನು ಇಡಬೇಕಾಗುವದಲ್ಲವೆ ? ನನಗೆ ಕೊಟ್ಟರೆ ಅವಶ್ಯ ಈ ಕೆಲಸ ತೆಗೆದುಕೊಳ್ಳುವೆನು."

* * *

ಬಾಪೂ ಆಕಾಶದರ್ಶನದ ವಿಷಯವಾಗಿ ಲೇಖ ಬರೆದರು. ಅದರ ಪ್ರತಿಗಳನ್ನು ಹೆಂಗಸರಿಗೂ ಗಂಡಸರಿಗೂ ಕಳಿಸಲಿಕ್ಕೆ ಅಪ್ಪಣೆ ದೊರೆಯಿತು. ಜೇಲರನಿಗೆ ಅದನ್ನು ಓದುವ ಇಚ್ಛೆಯಾಯಿತು : "ತರ್ರಿ, ಇದನ್ನು ಓದಿಯಾದರೂ ನೋಡುವೆ." ಆ ಬಡಪ್ರಾಣಿಯು ಎಂದೂ ಆಕಾಶದರ್ಶನವನ್ನೇ ಮಾಡಿದ್ದಿಲ್ಲ. ಅವನ ಕುತೂಹಲವು ಜಾಗ್ರತವಾಯಿತು. ಜೀವನದಲ್ಲಿ ಮೊದಲನೆಯ ಸಾರೆ ಅವನು ಮೃಗ-ನಕ್ಷತ್ರವನ್ನು ಸಾನಂದಾಶ್ಚರ್ಯದಿಂದ ನೋಡಿದನು. ಮತ್ತು ಬಾಪೂ ಅವರಿಗೆ ಈ ಮಾತನ್ನು ಹೇಳಿಯೂ ಬಿಟ್ಟನು. "ಉಳಿದ ನಕ್ಷತ್ರಗಳ ವಿಷಯವಾಗಿ ಸಹ ಇದೇ ಪ್ರಕಾರ ಬರೆಯುವವರಿದ್ದೀರೇನು?" ಎಂದೂ ಕೇಳಿದ.

* * *

'ಬಿಟ್ಟಿ' ಶಬ್ದದ ಉತ್ಪತ್ತಿಯನ್ನು ಇವತ್ತು ಸೋಮಾನು ನನಗೆ ತಿಳಿಸಿದ : "ಸಾಹೇಬ, ಮುಳ್ಳಿನ ಬೇಲಿಯನ್ನು ಚನ್ನಾಗಿ ಹಚ್ಚಿಸು." ಎಂದು ಒಬ್ಬ ಗೌಡನಿಗೆ ಹೇಳಲಾಯಿತು. ಗೌಡನು ಬಿಟ್ಟೀ ಹೊಲೆಯನಿಗೆ ಹೇಳಿದ: 'ಎಲೋ ಹೋಗು ಬೇಲಿ ಹಚ್ಚಿ ಬಾ.' ಎಂದು. ಅವನು ಹೋಗಿ ಕಟ್ಟಿಗೆಗಳನ್ನು ಹಾಗೂ ಹೀಗೂ ನಿಲ್ಲಿಸಿ ಬಂದ. ಗೌಡ ಕೇಳಿದ: "ಎಲೆ ಹೊಲೆಯ, ಬೇಲಿ ಹಚ್ಚಿ ಬಂದೆಯೇನು?" ಅವನು

ಹೇಳಿದ: "ಗಾಳಿಯು ಹೊಡೆತ ಬರದಿದ್ದರೆ ನಿಮ್ಮ ಭಾಗ್ಯದಿಂದ ಬೇಲಿಯು ನಿಲ್ಲಬಹುದು. ಆದರೆ ಗಾಳಿಯು ಜೋರಾಗಿ ಬೀಸಿದರೆ ಅದು ಹಾರಿಯೇ ಹೋಗುವದು." ಗೌಡ ಅಂದ: "ಎಲೇ ಹೊಲೆಯ, ನೀನು ಬಹಳ ಚಲೋ ಬೇಲಿಯನ್ನು ಹಚ್ಚಿದಿ!!"

ಇವತ್ತು ಬೆಳಿಗ್ಗೆ ಬಾಪೂ. . . ಗೆ ಹಿಂದಿಯಲ್ಲಿ ಪತ್ರ ಬರೆಯಿಸಿದರು. ನನ್ನದು ಸ್ವಲ್ಪ ತಪ್ಪುತಿಳಿವಳಿಕೆಯಾಗಿತ್ತು. . . .ಆದರೆ ಹೇಳುತ್ತಾರೆ "ಜೇಲಿನ ಅನ್ನಕ್ಕೆ ನಾನು ಮಧುಕರಿಯೆಂದು ತಿಳಿಯಲು ಸಿದ್ಧನಿದ್ದೇನೆ, ಆದರೆ ಮಧುಕರಿ

೧೫-೪-'೩೨ ಬೇಡಲಿಕ್ಕೆ ನಾಚಿಕೆಯಾಗುತ್ತಿರುವದರಿಂದ ಜೇಲಿನ ಅನ್ನವನ್ನು ಬಿಟ್ಟಿದ್ದೇನೆ. ಬಿಡುಗಡೆಯಾಗಿ ಹೊರಗೆ ಹೋದಮೇಲೂ ನಾಚಿಕೆಯಾಗಬಹುದೆಂದು ಅನಿಸುತ್ತಿದೆ. ಆದುದರಿಂದ ಇಲ್ಲಿ ಸಹ ನನಗೆ ಫಲಾಹಾರ ಮಾಡಬೇಕಾಗುತ್ತಿದೆ!" ಇಷ್ಟು ಸೂಕ್ಷ್ಮ ವಿಷಯ ಕುರಿತು ನಾನು ವಿಚಾರವನ್ನೇ ಮಾಡಿದ್ದಿಲ್ಲ. ಸತ್ಯಾಗ್ರಹವು. . . ಎಷ್ಟೊಂದು ಭೀಷಣವಾದ ರೂಪಧಾರಣ ಮಾಡಬಲ್ಲದೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. . . . ಗೆ ಹಿಂದಿಯಲ್ಲಿ ಬರೆಯಿಸಿದ ಪತ್ರ ಇಲ್ಲಿದೆ:

"ಭಾಯಿ . . . ,

"ನಿಮ್ಮ ಬಗ್ಗೆ ಬಹಳ ವಿಚಾರಮಾಡಿದೆನು. ರಾತ್ರಿಯೂ ವಿಚಾರ ಮಾಡಿದೆನು. ನಾವು ಮೂವರು ಕೂಡಿ ಸಹ ಚರ್ಚೆಮಾಡಿದೆವು. ಅದರ ಉತ್ತರ ಇದೇ ಬಂತು! ನೀವು ಧರ್ಮವೆಂದು ತಿಳಿದದ್ದು ಧರ್ಮವಲ್ಲ, ಅದು ಅಧರ್ಮವು ಎಂದು ನಾವು ನಿಶ್ಚಯ ಪೂರ್ವಕವಾಗಿ ತಿಳಿಯುತ್ತೇವೆ. ಸತ್ಯಾಗ್ರಹ ನಡೆದ ಕಾಲಕ್ಕೆ ಯಾರ ಸಂಬಂಧವು ಸತ್ಯಾಗ್ರಹದ ಜೊತೆಗೆ ಇರುತ್ತದೆಯೊ ಅಂಥ ಯಾವದೇ ಸತ್ಯಾಗ್ರಹಿಯು ಆ ವಿಷಯವಾಗಿ ಅಧ್ಯಕ್ಷನ ಸಮ್ಮತಿಯಿಲ್ಲದೆ ವ್ರತವನ್ನೇ ತೆಗೆದುಕೊಳ್ಳಲಾರನು. ನಿಮ್ಮ ವ್ರತದ ಅರ್ಥವನ್ನು ನೀವು ಮಾಡಿದ್ದು ಅನರ್ಥವಿದೆ. ಜೇಲಿನಲ್ಲಿ ಮಧುಕರಿಗೆ ಅರ್ಥವೇ ಇಲ್ಲ. ಜೇಲವಾಸ ಮುಗಿದ ಮೇಲೆ ಮಧುಕರಿಗಾಗಿ ತಿರುಗಾಡಲು ನಾಚಿಕೆ ಬರುವದೊ ಇಲ್ಲವೊ ಎಂಬುದರ ನಿಶ್ಚಯವನ್ನು ಇವತ್ತು ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲ. ಬಿಡುಗಡೆಯ ಸಮಯಕ್ಕೆ ಮನಸ್ಸು ಹೇಗಿರುವದೆಂಬುದನ್ನು ಇವತ್ತು ನಿಶ್ಚಯ ಮಾಡುವದೆಂದರೆ ದೇವರಂತೆ ಇರುವೆನೆಂದು ಹೇಳುವ ಮಾತಿನಂತಾಯಿತು. 'ಕ' ವರ್ಗಕ್ಕೆ ಯಾವ ಅನ್ನ ಸಿಗುತ್ತದೆಯೊ ಅದನ್ನೇ ಈಶ್ವರಾರ್ಪಣ ಬುದ್ಧಿಯಿಂದ ತಿನ್ನುವದು ನಿಮ್ಮ ಕರ್ತವ್ಯವೆಂದು ನಾವು ಮೂವರೂ ತಿಳಿಯುತ್ತೇವೆ. ಸಂನ್ಯಾಸಧರ್ಮವು ಅದನ್ನೇ ಹೇಳುತ್ತದೆ.

"ಇನ್ನು ಬಟ್ಟೆಯ ವಿಚಾರ. ಜೇಲಿನಲ್ಲಿ ಖಾದಿಯನ್ನೇ ತೊಡುವ ಆಗ್ರಹ

ಹಿಡಿಯುವದು ಯಾವದೇ ಪ್ರಕಾರದಿಂದ ಯೋಗ್ಯವೆಂದು ಹೇಳಲಿಕ್ಕಾಗುವದಿಲ್ಲ ಈ ವಿಷಯ ಕುರಿತು ಕಾಂಗ್ರೆಸ್ಸು ಎಲ್ಲಿಯವರೆಗೆ ನಿರ್ಣಯ ಮಾಡುವದಿಲ್ಲವೋ ಅಲ್ಲಿಯವರೆಗೆ ಜೇಲಿನಲ್ಲಿ ಖಾದಿಯನ್ನೇ ತೊಡುವ ಆಗ್ರಹ ಹಿಡಿಯದಿರುವದು ಪ್ರತಿಯೊಬ್ಬ ಸತ್ಯಾಗ್ರಹೀ ಕೈದಿಯ ಧರ್ಮವಿದೆ. ಈ ವಿಷಯದಲ್ಲಿ ಕೂಡ ನಿಮ್ಮ ಸ್ವಾವಲಂಬನ ವ್ರತಕ್ಕೆ ಯಾವ ರೀತಿಯಿಂದಲೂ ಹಾನಿ ತಟ್ಟುವದಿಲ್ಲ. ಆದ್ದರಿಂದ ಉಪವಾಸವನ್ನು ಬಿಟ್ಟು ತಪ್ಪನ್ನು ಒಪ್ಪಿಕೊಳ್ಳಿರೆಂದು ನನ್ನ ಪ್ರಾರ್ಥನೆಯಿದೆ. ಮತ್ತು ಉಣ್ಣಲಿಕ್ಕೆ ಪ್ರಾರಂಭ ಮಾಡಿರಿ. ಉಪವಾಸ ಮಾಡಿದ್ದರಿಂದ ಒಂದೆರಡು ದಿವಸ ಹಾಲಿನಮೇಲೆ ಅಥವಾ ಹಣ್ಣಿನಮೇಲೆ ಇರುವದು ಒಳ್ಳೆಯದು. ಇದನ್ನು ಕೇವಲ ವೈದ್ಯಕೀಯ ದೃಷ್ಟಿಯಿಂದ ಬರೆಯುತ್ತೇನೆ. ನಾವೆಲ್ಲರೂ ನಿಷ್ಪಕ್ಷಪಾತ ಬುದ್ಧಿಯಿಂದ ಮಾಡಿದ ಅಭಿಪ್ರಾಯಕ್ಕೆ ಅನುಕೂಲವಾಗಿ ವರ್ತಿಸುವಿರೆಂದು ನಾನು ಆಶಿಸುತ್ತೇನೆ.

ಬಾಪೂನ ಆಶೀರ್ವಾದ."

ಜೊತೆಗೆ ಮುಖಪತ್ರವೆಂದು (covering letter) ಭಂಡಾರಿಯವರಿಗೆ ಬರೆದರು:

" Dear Mr. Bhandari,

I would like the accompanying letter to be delivered to . . . at once, if you approve of the contents. They are nothing but re-exhortation to break his fast and take ordinary diet.

Yours sincerely,
M K. Gandhi.

" P. S : If . . . accepts the advice tendered in my letter to him and breaks the fast, I hope you will issue him milk for one or two days, for it is my experience as a fasting expert that the breaking of fasts on solid food often results in great harm to the body.

M. K Gandhi."

" ಭಾಯಿ ಶ್ರೀ ಭಂಡಾರಿ,

ಇದರ ಜೊತೆಗಿರುವ ಪತ್ರದೊಳಗಿನ ವಿಷಯವನ್ನು ನಿಮಗೆ ಒಪ್ಪಿಗೆ ಎನಿಸಿದರೆ ನೀವು . . . ಗೆ ಕೂಡಲೇ ಕೊಡಿರಿ. ಅದರಲ್ಲಿ ಉಪವಾಸವನ್ನು ಬಿಟ್ಟು ದೈನಂದಿನದ ಆಹಾರ ತೆಗೆದುಕೊಳ್ಳಲು ಪ್ರಾರಂಭಮಾಡಲಿಕ್ಕೆ ಮತ್ತೊಮ್ಮೆ ಆಗ್ರಹ ಮಾಡಿಕೊಂಡಿದೆಯಲ್ಲದೆ ಮತ್ತೇನೂ ಇಲ್ಲ.

ನಿಮ್ಮ
ಮೋ. ಕ. ಗಾಂಧೀ."

"ತಾ. ಕ. ಒಂದು ವೇಳೆ ಶ್ರೀ . . . ಈ ಪತ್ರದಲ್ಲಿ ಬರೆದ ನನ್ನ ಸಲಹೆಯನ್ನು ಒಪ್ಪಿಕೊಂಡರೆ ಮತ್ತು ತಮ್ಮ ಉಪವಾಸ ಬಿಟ್ಟರೆ ನೀವು ಅವರಿಗೆ ಒಂದೆರಡು ದಿವಸ ಹಾಲು ಕೊಡುವಿರೆಂದು ಆಶಿಸುತ್ತೇನೆ. ನಾನು ಉಪವಾಸದ ವಿಶೇಷಜ್ಞನಿರುವದರಿಂದ ಗಟ್ಟಿ ಆಹಾರ ತೆಗೆದುಕೊಂಡು ಉಪವಾಸ ಮುರಿಯುವದರಿಂದ ಶರೀರಕ್ಕೆ ಹಾನಿಯಾಗುತ್ತದೆಂದು ಸ್ವಾನುಭವದಿಂದ ಹೇಳಬಲ್ಲೆ.

ಮೋ. ಕ. ಗಾಂಧಿ."

ಸುಪರಿಂಟೆಂಡೆಂಟರು ಭೆಟ್ಟಿಗೆ ಬಂದಾಗ ಬಾಪೂ ಹೇಳಿದರು : "ಈ ಪತ್ರದಿಂದ . . . ಒಪ್ಪದಿದ್ದರೆ ಮಹದೇವನನ್ನು ನೀವು ಅವರ ಭೆಟ್ಟಿಗೆ ಹೋಗಗೊಡಬೇಕಾಗುವದು." ಅಪರಾಹ್ನ ಮೂರರ ವರೆಗೆ ಯಾರೂ ಬಾರದ್ದರಿಂದ ಬಹುತರವಾಗಿ ಒಪ್ಪಿಕೊಂಡಿರಬಹುದೆಂದು ನನಗೆ ಅನಿಸಿತು. ಆದರೆ ೩॥ ಗಂಟೆಗೆ ವಾರ್ಡರನು ಬಂದು ನನ್ನನ್ನು ಕರೆಕೊಂಡು ಹೋದನು. ನಾನು ಅವನಿಗೆ ಒಂದೆರಡು ತಾಸು ತಿಳಿಸಿಹೇಳಬೇಕಾಯಿತು. "ಬಾಪೂಗೆ ಯಾವ ವಿಷಯದಲ್ಲಿ ನನಗೆ ಹೇಳುವದಕ್ಕೆ ಅಧಿಕಾರವಿದೆ, ಆದುದರಿಂದ ಅವರಂತೆಯೇ ಒಪ್ಪಿಕೊಳ್ಳುವೆನು. ಆದರೆ ಈ ವಿಷಯದಲ್ಲಿ ಸಮ್ಮತಿಸುವದಿಲ್ಲ. ಯಾಕೆಂದರೆ ನನ್ನ ಈ ಸ್ಥಿತಿಯು ಬಾಪೂ ಅವರಿಂದ ಸ್ವತಂತ್ರವಾಗಿದೆ. ಸಂನ್ಯಾಸ ಧರ್ಮವನ್ನು ಎಲ್ಲಕಡೆಯಲ್ಲಿ ಪಾಲಿಸಲಿಕ್ಕೆ ಅನುಮತಿಯಿರಬೇಕು. ಮತ್ತು ನಮ್ಮನ್ನು ಹಿಡಿದರೆ ಸರಕಾರವು ಸಂನ್ಯಾಸಧರ್ಮವನ್ನು ಪಾಲಿಸಲಿಕ್ಕೆ ಕೊಡಲಿಕ್ಕೇ ಬೇಕು." ಇಂಥ ಮಾತುಗಳನ್ನು ಅವನು ಹೇಳಿದ. ಮಧುಕರಿಯನ್ನು ಬೇಡುವ ಸಾಹಸ ನನಗಾಗಲೊಲ್ಲದು. ಆದುದರಿಂದ ಫಲಾಹಾರದ ಮೇಲೆ ಇರಬೇಕಾಗುತ್ತದೆಂಬಲ್ಲಿಗೆ ನಮ್ಮ ಎಲ್ಲ ಮಾತುಗಳು ಬಂದು ನಿಂತವು. ಮೃಷ್ಟಾನ್ನವನ್ನು ಬಿಡುವ ಉದ್ದೇಶದಿಂದ ಮಧುಕರಿಯ ವ್ರತವನ್ನು ತೆಗೆದುಕೊಂಡೆನು. ಆದರೆ ಮಧುಕರೀ ಬೇಡುವ ಸಾಹಸವಾಗದ್ದರಿಂದ ಇದರಲ್ಲಿ ಫಲಾಹಾರದ ನಿಯಮವನ್ನಿಟ್ಟಿರುವೆನು. ನಾನು ಹೇಳಿದೆ: "ಆದುದರಿಂದ ನೀವು ಸಮಾಧಾನ ಮಾಡಿಕೊಂಡಿರಿ. ಅದೇ ಪ್ರಕಾರ ಇಲ್ಲಿ ನಡೆ ನಾವು ಕೊಡುವ ಮಧುಕರಿಯನ್ನೇ ತೆಗೆದುಕೊಳ್ಳಿರಿ. ಇದರಿಂದ ಬೇಕಾದರೆ ನೀವು ಸಮಾಧಾನ ಹಚ್ಚಿಕೊಳ್ಳಿರಿ. ಜಗತ್ತಿನಲ್ಲಿ ಸತ್ಯಾಗ್ರಹದ ನಗೆಗೇಡಾಗುವದು, ಮತ್ತು ಬಾಪೂಗೆ ನಿಮ್ಮ ದುರಾಗ್ರಹದಿಂದ ಆಘಾತವಾಗುವದು. ಏನೇ ಆಗಲಿ, ನಿಮ್ಮದು ಇದು ತಪ್ಪೆಂದು ಬಾಪೂ ಅವರಂಥ ಅನುಭವೀ ಸತ್ಯಾಗ್ರಹಿಯ ನಿಃಸ್ವಾರ್ಥ ಸಲಹೆಯಿದೆ ಆದುದರಿಂದ ನಿಮಗೆ ಅವರ ಆಜ್ಞೆಯನ್ನು ಪಾಲಿಸಲೇ ಬೇಕಾಗುವದು." ಕೊನೆಗೆ ಅವನು ಒಪ್ಪಿಕೊಂಡನು. ನಾನು ಜೇನುತುಪ್ಪ, ನಿಂಬೀಹಣ್ಣು, ನೀರು ತೆಗೆದುಕೊಂಡು ಹೋಗಿ ಕುಡಿಸಿ ಬಂದೆನು. ಲಂಗೋಟಿಯನ್ನೇ ಧರಿಸಿದ್ದನು, ಅದರ ಬದಲು ಬಟ್ಟೆಗಳನ್ನು ಧರಿಸಿದನು. ಬಾಪೂ ಅವರ ಶಬ್ದಗಳಲ್ಲಿ : ". . . ಕೊನೆಗೆ ಮರ್ಯಾದೆ ಕಾಯ್ದು. ನೀನು ಹೋದ ಮೇಲೂ ಅವನು ಸಮ್ಮತಿಸದಿದ್ದರೆ

ಬಹಳ ಕೆಡುಕೆನಿಸುತ್ತಿತ್ತು. ಈ ಜನರ ಮುಂದೆ ನಮ್ಮ ಪ್ರತಿಷ್ಠೆ ಹೊರಟು ಹೋಗುತ್ತಿತ್ತು. ಈಗ ಪ್ರತಿಷ್ಠೆ ಉಳಿಯಿತು."

ಯಾವ. 'ವ್ಯಾಪಾರೀ ಪ್ರತೀಕದ ಮೇಲಾಟ'ದಲ್ಲಿ ಬಾಪೂ, ವಲ್ಲಭಭಾಯಿ ಹಾಗೂ ನಾನು ಬುದ್ಧಿ ಹಾಗೂ ಸಮಯವನ್ನು ವೆಚ್ಚ ಮಾಡಿದ್ದೆವೊ ಆದರಲ್ಲಿ ನನ್ನ ಹೆಸರಿಗೆ ಒಂದೂ ಇನಾಮು ಹತ್ತಲಿಲ್ಲ. ವಲ್ಲಭಭಾಯಿಯವರು ನಗನಗುತ್ತ ಅಂದರು : "ದೈವಹೀನರೆಂದು ತಿಳಿಯಲಾಯಿತಲ್ಲದೆ ಜೊತೆಗೆ ಮೂರ್ಖರೂ ಆದೆವು."

ಜಾಲದಂತಿರುವ ಈ ಮೇಲಾಟಗಳಿಗಾಗಿ ತೆಗೆದುಕೊಳ್ಳುತ್ತಿದ್ದ ಶ್ರಮದ ಬಗ್ಗೆ ಬಾಪೂ ಹೇಳತೊಡಗಿದರು : "ಇದರಲ್ಲಿ ಕೇವಲ ಬುದ್ಧಿಯ ಕೆಲಸವಿಲ್ಲ. ಬಹಳಷ್ಟು ದೈವದಾಟವೂ ಇದೆ. ಇಂಥ ಆಟದ ಮೇಲೆ ನಾವು ರೂಪಾಯಿಗಳನ್ನಾಗಲಿ ಸಮಯವನ್ನಾಗಲಿ ವೆಚ್ಚ ಮಾಡಲಾರೆವು."

. . . ರ ಮಾತಿನ ಮೇಲಿಂದ ನಮಗೆ ದೊರೆತ ನಿರ್ಮಲವೃತ್ತಿಯ ಮಹಾರಾಷ್ಟ್ರೀಯ ಸೇವಕರ ಮಾತು ಹೊರಟಿತು. ಇದರಲ್ಲಿ ದೇವ ಮತ್ತು ದಾಸ್ತಾನೆಯವರು ಮೊದಲನೆಯ ಶ್ರೇಣಿಯವರೆಂದು ಗಣಿಸಲಾಗುವದು ಎಂದು ಬಾಪೂ ಹೇಳಿದರು. ವಿನೋಬಾ ಮತ್ತು ಕಾಕಾರಿಗೆ ಮಹಾರಾಷ್ಟ್ರೀಯರೆಂದು ಯಾರು ಹೇಳುವರು ? ನಂತರ ಕಾಕಾರ ವಿಷಯದಲ್ಲಿ ಬಾಪೂ ಕೆಲವು ಸ್ಮರಣೀಯ ಉದ್ಗಾರಗಳನ್ನು ಪ್ರಗಟಮಾಡಿದರು : "ನನಗೆ ಕಾಕಾ ಅವರ ವಿಷಯದಲ್ಲಿ ಒಂದಿನ ಸಾರೆ ಜೇಲಿನಲ್ಲಿ ಆದಷ್ಟು ಅನುಭವ ಮೊದಲು ಎಂದೂ ಆಗಿದ್ದಿಲ್ಲ. ಕಾಕಾರಲ್ಲಿ ಮಹಾರಾಷ್ಟ್ರೀಯತೆಯು ಉಳಿದೇ ಇಲ್ಲ. ಕಾಕಾ ಅವರ ಅಪಾರ ಮೃದುತ್ವವನ್ನು ನಾನು ಜೇಲಿನ ಹೊರಗೆ ಕ್ವಚಿತ್ತಾಗಿ ನೋಡಿರಬಹುದು. ಕಾಕಾ ಅವರು ಅಳುತ್ತಾರೆಂಬ ಕಲ್ಪನೆಯನ್ನು ನೀನು ಎಂದಾದರೂ ಮಾಡಬಲ್ಲಿಯಾ ? ಅವರು ದಳ ದಳ ಕಣ್ಣೀರು ಸುರಿಸುವದನ್ನು ನಾನು ನೋಡಿದ್ದೇನೆ. ಎಷ್ಟೋ ಸಮಯ ನಮ್ಮೊಳಗೆ ವಾದವಿವಾದವಾಗುತ್ತಿತ್ತು. ಕಾಕಾ ನನಗೆ ಹೇಳುತ್ತಿದ್ದರು : "ನನ್ನಲ್ಲಿ ಎಷ್ಟೋ ಕೊರತೆಗಳಿವೆ. ಇವೆಲ್ಲವುಗಳನ್ನು ನೀವು ನೋಡಿದಾಗೆಲ್ಲ ನಿರ್ದಯರಾಗಿ ನನಗೆ ಹೇಳಬೇಕು, ಮತ್ತು ಸುಧಾರಿಸಬೇಕು." ನಾನು ಹೇಳಿದೆ : "ನೀವು ನನ್ನಲ್ಲಿಟ್ಟ ವಿಶ್ವಾಸದ ಪೂರ್ಣ ಉಪಯೋಗ ಮಾಡುವೆನು." ಇದನ್ನು ಕೃತಿಯಲ್ಲಿ ತಂದು ನಾನು ಯಾವಾಗ ಕಠೋರ ಟೀಕೆಯನ್ನು ಮಾಡುತ್ತಿದ್ದೆನೊ ಆಗ ಕಾಕಾ ತಮ್ಮ ತಪ್ಪನ್ನು ಒಪ್ಪಿಕೊಂಡು ಕಣ್ಣೀರು ಸುರಿಸುತ್ತಿದ್ದರು. ಸತ್ಯಾಗ್ರಹದ ಸಿದ್ಧಾಂತಗಳನ್ನಂತೂ ಕಾಕಾ ಅರೆದು ಕುಡಿದಿದ್ದಾರೆ. ಕೇವಲ ಇಷ್ಟೇ. ಅವರ ಸ್ವಭಾವದಲ್ಲಿ ಕೆಲವು ಅನಿಶ್ಚಿತತೆಯಿರುವದರಿಂದ ಎದುರಿಗಿದ್ದವರ ಮೇಲೆ ಎಷ್ಟು ಪ್ರಭಾವ ಬೀಳಬೇಕೊ ಅದಕ್ಕೂ ಕಡಿಮೆ ಬೀಳುತ್ತದೆ. ನೋಡುವದಿಲ್ಲವೆ? ಇಲ್ಲಿಗೆ ಬಂದಾಗ ಕೆಲವು ಮಾತುಗಳಲ್ಲಿ ಅವರಿಗೆ ಪೂರ್ಣ ಆತ್ಮವಿಶ್ವಾಸವೇ ಇದ್ದಿಲ್ಲ; ಈ ಕೆಲಸ ನನ್ನಿಂದಾಗುವದಿಲ್ಲ, ಆ ಕೆಲಸ

ಮಾಡುವದರಿಂದ ನನಗೆ ದಮ್ಮು ಹತ್ತುವದು ಎಂದು ಹೇಳುತ್ತಿದ್ದರು. ೯೬ ಪೌಂಡು ತೂಕ ತೆಗೆದುಕೊಂಡು ಬಂದಿದ್ದರು. ಮತ್ತು ಬಹಳ ಅಶಕ್ತತೆಯೆನಿಸುತ್ತಿತ್ತು. ನಾನು ಅವರಿಗೆ ಕೆಲಸಮಾಡಲಿಕ್ಕೆ ಹಚ್ಚಿದೆ, ತಿರುಗಾಡಲಿಕ್ಕೆ ಹಚ್ಚಿದೆ, ತಿನ್ನುಣ್ಣಲಿಕ್ಕೆ ಹಚ್ಚಿದೆ. ಮತ್ತು ಹೆಚ್ಚಿಗೆ ಇಲ್ಲದಿದ್ದರೂ ಸುಮಾರು ಇಪ್ಪತ್ತು ಪೌಂಡು ತೂಕ ಹೆಚ್ಚಿಸಿದೆ. ಅವರ ಸಂಗಡಿಗರೇ ಅವರನ್ನು ಪಂಗುಗಳನ್ನಾಗಿ ಮಾಡಿದ್ದರೆಂದು ನನಗೆನಿಸುತ್ತದೆ. ಈ ಪಂಗುತನವು ಇಲ್ಲಿ ಹೋಗಹತ್ತಿತು." ಒಂದು ದಿವಸ ಕಾಕಾ ಅವರ ವಿಷಯವಲ್ಲಿ ಡೋಇಲರಿಗಿದ್ದ ಪಕ್ಷಪಾತತನದ ಬಗ್ಗೆ ಹೇಳತೊಡಗಿದರು: "ಡೋಇಲರಿಗೆ ಕಾಕಾ ಅವರ ಬಗ್ಗೆ ವಿಶೇಷ ಅಭಿಮಾನವಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಡೋಇಲನು ಕಾಕಾ ಅವರನ್ನು ಮುಸಲ್ಮಾನರ ಸಲುವಾಗಿ ಸತ್ಯಾಗ್ರಹ ಮಾಡುವದನ್ನು ನೋಡಿದ್ದನು. ಇದೇ ಸತ್ಯಾಗ್ರಹದ ಮೀಮಾಂಸೆಯನ್ನು ಡೋಇಲರು ಇವರಿಂದ ಕೇಳಿರಬಹುದು, ಅನೇಕ ಚರ್ಚೆಗಳೂ ಆಗಿರಬಹುದು. ಡೋಇಲರಂಥ ಮನುಷ್ಯರು ಇವರ ಗುಣ ಹಾಗೂ ಶಕ್ತಿಗಳಿಂದ ಆಕರ್ಷಿತರಾದರೆ ಅದರಲ್ಲಿ ಆಶ್ಚರ್ಯವೇನು?"

ಇದರಲ್ಲಿ ಆಶ್ಚರ್ಯವಿಲ್ಲದಿದ್ದರೆ ಇಲ್ಲಿ ಇದನ್ನೂ ಹೇಳಿ ಬಿಡಬಹುದು: ಕಾಕಾ ಅವರ ವಿಷಯವಾಗಿ ಬಾಪೂ ಆಕಾಶದರ್ಶನ ಸಂಬಂಧದ ತಮ್ಮ ಲೇಖದಲ್ಲಿ 'ಸತ್ಸಂಗ' ವೆಂದು ಹೇಳಿದ್ದಾರೆ. ಈ ಸತ್ಸಂಗದ ಸಲುವಾಗಿ ವಿಶೇಷ ಉತ್ಸುಕರಿರುತ್ತಾರೆ! ಈ ಸತ್ಸಂಗವು ನನ್ನ ಹತ್ತರ ಇವರಿಗೆ ಏನು ಸಿಗುವದು? ವಲ್ಲಭಭಾಯಿಯವರ ಹತ್ತರ ಸಹ ಏನೂ ಸಿಗಲಿಕ್ಕಿಲ್ಲವೆಂದು ನನಗೆ ಭಯವಿದೆ.

ಸೋಮಾ ಅಡಿಗೆಯವನ ಪರಿಚಯ ಮಾಡಿಕೊಟ್ಟಿದ್ದಾನೆ. ಬಾಪೂ ಅವರ ಸೇವೆಯಲ್ಲಿರಿಸಿದ ಮಾರುತಿ ವಾರ್ಡರನು ಮಂದಬುದ್ಧಿಯ, ಅಶಿಕ್ಷಿತ ಮತ್ತು ಸೋಮಾನ ಭಾಷೆಯಲ್ಲಿ 'ಹಳ್ಳಿಯ ಹುಂಬ'

**೧೬-೪-'೩೨** ಎಂದೆನಿಸಿಕೊಳ್ಳುತ್ತಿದ್ದನು. ಈ ಬಡ ಪ್ರಾಣಿಗೆ ದೊಡ್ಡ ದೊಡ್ಡ ಕೆಲಸಗಳು ಗೊತ್ತಾಗುತ್ತಿದ್ದವು. ಸಣ್ಣ ಪುಟ್ಟ ಕೆಲಸಗಳು ಗೊತ್ತಾಗುತ್ತಿದ್ದಿಲ್ಲ. ಮತ್ತು ನಮ್ಮ ಆ ಶ್ರೀಮಂತ ಠಾಕರಡನು ಅನೇಕಸಲ ಹೇಳುತ್ತಿದ್ದ: "ಎಂಥ ಹುಂಬನಿದ್ದಾನೆ. ಹರಿಯುವಮಣಿಯನ್ನು ತಿರುವಿ ಹಿಡಿಯುತ್ತಾನೆ. ಇದುವರೆಗೆ ಸರಿಯಾಗಿ ಹಿಡಿಯಲಿಕ್ಕೆ ಬರುವದಿಲ್ಲ." ಈ ಮಂದ ಬುದ್ಧಿಯ ಹುಂಬನು ಇವತ್ತು ಮಧ್ಯಾನ್ಹ ನನ್ನ ಹತ್ತರ ಬಂದು ಸಂಭಾಷಣ ಮಾಡಿದ. ಅದರಿಂದ ನನ್ನ ಕಣ್ಣುಗಳು ತೆರೆದವು. ಕಣ್ಣೀರಿನಿಂದ ತೊಯ್ದವು. ಮಾರುತಿಯಲ್ಲಿ ಎಷ್ಟು ಕೋಮಲತೆಯಿದೆ ಎಂಬುದು ಇದುವರೆಗೆ ನನಗೆ ಗೊತ್ತಾಗಿದ್ದಿಲ್ಲ. ಇದರಿಂದ ನನಗೆ ದುಃಖವಾಯಿತು. ಅಸಹಕಾರಿಗಳ ಭರತಿ ಆಗಹತ್ತಿದ್ದರಿಂದ ಸರಕಾರಕ್ಕೆ

ಹಳೆ ಅಪರಾಧೀ ಜನರನ್ನು ಬಿಡಲಿಕ್ಕೆ ಪ್ರಾರಂಭಿಸಬೇಕಾಗಿದೆ. ಈ ಪ್ರಕಾರ ಸುಮಾರು ಮೂರೂ ಮುಕ್ಕಾಲು ನೂರು ಕೈದಿಗಳ ಬಿಡುಗಡೆಯಾಗಬಹುದು. ಮಾರುತಿ ನನಗೆ ಅನೇಕ ಸಾರೆ ಕೇಳಿದ : "ಇದರಲ್ಲಿ ಅನೇಕ ತುಂಟರನ್ನೂ ಸರಕಾರ ಬಿಡಲಿಕ್ಕೆ ಹತ್ತಿದೆ. ಇದು ಏತಕ್ಕಾಗಿ ?" "ಸರಕಾರವು ಇವರ ದುಷ್ಟತನವನ್ನು ಸಹನ ಮಾಡಬಲ್ಲದು. ನಮ್ಮ ಜನರನ್ನು ಸಹಿಸಲಾರದು." ಅವನಿಗೆ ಇಷ್ಟು ಹೇಳಿ ನಾನು ಸುಮ್ಮನಾದೆ. ಈ ಭಾಗ್ಯಶಾಲೀ ಜನರಲ್ಲಿ ಮಾರುತಿಯ ಸರತಿಯೂ ಬಂತು. ನಾಳೆ ಬಿಡುಗಡೆ ಎಂದು ತಿಳಿದು ಇವನು ನನ್ನ ಹತ್ತರ ಒಂದು ಸುದ್ದೀ ಹೇಳಿದ. ನಾನು ಅಂದೆ: "ಮಾರುತಿ ನಮ್ಮನ್ನು ಮರೆತು ಬಿಡುವದಿಲ್ಲಷ್ಟೆ ?" ಮಾರುತಿಯು ಗದ್ಗದಿತನಾಗಿ ಮಾತಾಡಿದ: "ಜನ್ಮಜನ್ಮಾಂತರದಲ್ಲಿ ಪುಣ್ಯ ಮಾಡಿರಬಹುದು. ಅಂತೆಯೇ ಜೇಲಿನಂಥ ಸ್ಥಳದಲ್ಲಿ ಮಹಾತ್ಮರ ದರ್ಶನವಾಯಿತು. ಅವನ್ನು ಯಾರು ಮರೆಯಬಲ್ಲರು? ನಾನು ಹೊರಗಿದ್ದರೆ ನನಗೆ ಎಂದೂ ಈ ದರ್ಶನವೇ ಆಗುತ್ತಿದ್ದಿಲ್ಲ. ಇವರ ಸಲುವಾಗಿ ನಾನು ಏನು ಮಾಡಲಿ? ನನ್ನ ಕೃತಜ್ಞತೆಯನ್ನು ಯಾವ ರೀತಿ ತೋರಿಸಲಿ? ನಾನಂತೂ ಬಡವನು. ಒಂದು ಹೊಲವಿದೆ. ಹಾಗೂ ಹೀಗೂ ಉಪಜೀವಿಸುವೆನು. ಆದರೆ ನನಗೆ ಮಹಾತ್ಮರ ಚರಣದಲ್ಲಿ ಏನಾದರೂ ಕಾಣಿಕೆಯನ್ನು ಅರ್ಪಿಸುವ ಇಚ್ಛೆಯಾಗಿದೆ. ಇವರಿಗೆ ಯಾವ ಮಾತಿನದೂ ಕೊರತೆಯಿಲ್ಲ. ಬೇಡಿದ್ದನ್ನು ಸರಕಾರ ಮತ್ತು ಜನರು ಇಬ್ಬರೂ ಇವರೆದುರಿಗೆ ತಂದಿಡಬಲ್ಲರು. ಆದರೆ ಬಡವನಾದ ನನಗೆ ಇವರಿಗೆ ನನ್ನದೇನಾದರೂ ಕಳಿಸುವ ಇಚ್ಛೆಯಾಗಿದೆ. ಏನು ಕಳಿಸಬೇಕೆಂಬದನ್ನು ನೀವು ನನಗೆ ಸೂಚಿಸಿರಿ." ನಾನು ಹೇಳಿದೆ: "ಸಜ್ಜನನೇ, ನೀನು ಏನೂ ಕಳಿಸಬೇಕಾದುದಿಲ್ಲ. ನೀನು ಇಲ್ಲಿ ಪ್ರೇಮಪೂರ್ಣ ಸೇವೆ ಸಲ್ಲಿಸಿರುವಿ. ಇದೇನು ಕಡಿಮೆಯೆ ?" ಕೂಡಲೇ ಮಾರುತಿ ಉತ್ತರ ಕೊಟ್ಟ: "ಅಯ್ಯೊ, ನೀವು ಅದಕ್ಕೆ ಸೇವೆ ಅನ್ನುತ್ತೀರಾ ? ಮಹಾತ್ಮರು ಇಲ್ಲದಿದ್ದರೂ ಎರಡನೇ ಕೆಲಸ ಮಾಡದೆ ಇಲ್ಲಿ ನನಗೆ ರೊಟ್ಟಿಯನ್ನು ಯಾರು ಕೊಡುವವರಿದ್ದರು ? ಸರಕಾರವು ಈ ಕೆಲಸವನ್ನು ಒಪ್ಪಿಸಿತು ಮತ್ತು ನಾನು ಮಾಡಿದೆ. ಇದರಲ್ಲಿ ನನಗೆ ಕೀರ್ತಿ ಎಂತಹದು ? ನಾನು ಸ್ವತಂತ್ರನಾಗಿ ನನ್ನ ಸ್ವೇಚ್ಛೆಯಿಂದ ಸೇವೆ ಸಲ್ಲಿಸಿದಾಗ ಕೀರ್ತಿ ಎಂದು ಹೇಳಬಹುದು. ನಾನು ಸೇವೆ ಮಾಡಲು ಯೋಗ್ಯನೆಲ್ಲಿದ್ದೇನೆ? ಇವರು ಯಾರು ಇರುವರು? ಯಾರನ್ನು ಕೋಟ್ಯವಧಿ ಜನರು ದೇವರೆಂದು ಪೂಜಿಸುವರೊ ಮತ್ತು ಯಾರು ಸ್ವತಃ ಜೇಲಿನಲ್ಲಿ ಬಂದು ನಮ್ಮನ್ನು ಬಿಡುಗಡೆ ಮಾಡಿದರೊ ಅವರೇ ಇವರು. ಇದು ಕಲಿ ಯುಗದ ಒಂದು ಪವಾಡ. ಇವರು ಎಷ್ಟು ಕಷ್ಟ ಸಹಿಸಿದರು ? ಇವರ ಜೊತೆಗಾರರೂ ಎಷ್ಟು ಕಷ್ಟ ಸಹನ ಮಾಡಿದರು ? ಪ್ಯಾರೇಲಾಲರಿದ್ದರು. ಪಾಪ ಅವರು ೧೧ ದಿವಸದ ಉಪವಾಸ ಮಾಡಿದ್ದರು. ಅದಕ್ಕಾಗಿ ಇವರು ಅವರನ್ನು ಬೈಯ್ಯುತ್ತಿ

ದ್ದರು. ಈ ದುಷ್ಟರು ಅವರಿಗೆ ಶೌಚ ಮೂತ್ರಗಳನ್ನು ಮಾಡಲಿಕ್ಕೂ ಬಿಡುತ್ತಿದ್ದಿಲ್ಲ. ಇದೆಲ್ಲವನ್ನು ಅವರು ಏತಕ್ಕಾಗಿ ಮಾಡಿದ್ದರು? ಇವರಿಗೆ ಇಂಥ ಇಂಥ ಜೊತೆಗಾರರಿರುವಾಗ ಅವರ ಸೇವೆಯು ನನ್ನಂಥವನಿಂದ ಯಾವ ರೀತಿ ಆಗಬಲ್ಲದು? ಇನ್ನು ಮುಂದೆ ಇವರನ್ನು ಕಾಣಬಹುದೊ ಇಲ್ಲವೊ ಇದು ಸಹ ದೇವರಿಗೇ ಗೊತ್ತು!" ಇಷ್ಟು ಹೇಳಿ ನಿಶಿದಾದ ಉಪರ್ಗವಿದು ಮತ್ತೆ ಆಗ್ರಹ ಮಾಡತೊಡಗಿದ : "ನನಗೆ ಹೇಳಿರಿ, ಭಾಯಿ ನನಗೆ ಹೇಳಿರಿ. ನಾನು ಇವರ ಸಲುವಾಗಿ ಏನು ಕಳಿಸಲಿ? ಏನಾದರೂ ತಿನ್ನುವದನ್ನು ಕಳಿಸಲೆ? ಅದರಿಂದ ಇವರು ನನ್ನ ಕೈಯ್ಯ ಪದಾರ್ಥ ತಿಂದರೆಂದು ತಿಳಿದು ಸಮಾಧಾನ ಹೊಂದಲೆ?" ಅವನಿಗೆ ಉತ್ತರ ಕೊಡುವ ವಿವಂಚನೆಯಲ್ಲಿ ಸಮಯವು ನಡೆದಿತ್ತು. ಅಷ್ಟರಲ್ಲಿ ಪೆಟ್ಟಿಯ ಸಲುವಾಗಿ ಜೇಲಿನ ಬಾಗಿಲಲ್ಲಿ ಹೋದ ಬಾಪೂ ಮತ್ತು ವಲ್ಲಭಭಾಯಿಯವರು ಬಂದುಬಿಟ್ಟರು. ನನ್ನ ಮಾತು ಬಂದಾಯಿತು.

*

ಬಾಪೂ ಅವರ ಲೋಭವನ್ನು—ಸೇವೆಯ ಲೋಭವನ್ನು—ಯಾರು ಸರಿಗಟ್ಟಬಲ್ಲರು? ಯಾರು ತಿಳಿಯಬಲ್ಲರು? ಕೈ ನೋಯುತ್ತದೆ. ಡಾಕ್ಟರರು ಬೇಡೆಂದು ಹೇಳುತ್ತಾರೆ. ಆದರೂ ರಾಟಿ ನೂಲುವದಕ್ಕೂ ನೋವಿಗೂ ಯಾವದೂ ಸಂಬಂಧವಿಲ್ಲೆಂದು ಹೇಳಿ, ಇವತ್ತು ೪೦೦ ಎಳೆಗಳವರೆಗೆ ಮುಟ್ಟಿದ್ದಾರೆ. ಮತ್ತು ಹೇಳತೊಡಗಿದ್ದಾರೆ: "ನೋಡು, ಪ್ರಗತಿಯಾಗುತ್ತ ನಡೆದಿದೆಯಲ್ಲವೆ?" ಅದರ ಸಂಗಡವೇ ಉರ್ದು ಭಾಷೆಯನ್ನು ಬೆಳೆಸುವ ಮತ್ತು ಗತಿಪೂರ್ವಕ ಓದುವ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವ ಲೋಭವಂತೂ ಇದ್ದೇ ಇದೆ. ರೆಹನಾಬಹೆನರ ಪತ್ರಗಳು ಉರ್ದುವಿನಲ್ಲಿ ಬರುತ್ತವೆ. ಅವರಿಗೆ ಉರ್ದುವಿನಲ್ಲಿ ಬರೆಯುವ ಪ್ರಯತ್ನಮಾಡಿ ಅವರಿಂದ ತಪ್ಪುಗಳನ್ನು ತಿದ್ದಿಸಿಕೊಳ್ಳುತ್ತಾರೆ ಮತ್ತು ಅವರಿಗೆ ನನ್ನ 'ಉಸ್ತಾನಿ' (ಗುರುವಾಣಿ) ಎಂದು ಸಂಬೋಧಿಸಿ ತಾವು ಅವರ 'ಶಾಗಿರ್ದ' (ಶಿಷ್ಯ) ಎಂದು ಬರೆಯುತ್ತಾರೆ. ಇಷ್ಟೆಲ್ಲ ನಡೆದಿತ್ತು. ಆದರೆ ಇಷ್ಟರಿಂದ ಸಂತುಷ್ಟರಾಗದೆ ಈಗ ಜೇಲಿನ ಪುಸ್ತಕಾಲಯದಿಂದ ಎಲ್ಲ ಉರ್ದು ಪುಸ್ತಕಗಳನ್ನು ತರಿಸಿದ್ದಾರೆ. ಬೆಳಗ್ಗೆ ತಿನ್ನುತ್ತ ತಿನ್ನುತ್ತ ಓದುವದನ್ನು ಪ್ರಾರಂಭಿಸಿದ್ದಾರೆ. ಆಕಾಶ ದರ್ಶನದಿಂದಂತೂ ಈಶ್ವರನ ವಿಭೂತಿದರ್ಶನದ ಗಹನತೆಯ ಸುಳಿ ಗುಟುಕು ದೊರೆಯುತ್ತದೆ. ಆದುದರಿಂದ ಈ ವಿಷಯದ ಪುಸ್ತಕ ಭಂಡಾರವು ಹೆಚ್ಚಾಗುತ್ತ ನಡೆದಿದೆ. ಪತ್ರವ್ಯವಹಾರ ಕೂಡ ಹೆಚ್ಚುತ್ತ ನಡೆದಿದೆ. ರಸ್ಕಿನ್ನನ ಪುಸ್ತಕ ಓದುವದರಲ್ಲಿ ಅವರು ಅಷ್ಟೊಂದು ತಲ್ಲೀನರಾಗುವದನ್ನು ಕಂಡಾಗ ಆ ಸಮಯದಲ್ಲಿ ಅವರೊಳಗಿಂದ ಹೊರಡುವ ವಿಚಾರಗಳನ್ನು ಕೂಡ ಕೂತಲ್ಲಿಯೇ ಬರೆದು ಬಿಡಲೊ ಎಂದೆನಿಸುತ್ತದೆ.

. . . ರ ಪ್ರಕೃತಿಯ ಸ್ಥಿತಿ ತಿಳಿದುಕೊಳ್ಳುವದಕ್ಕಾಗಿ ಸುಪರಿಂಟೆಂಡೆಂಟರ

ಒಪ್ಪಿಗೆ ತೆಗೆದುಕೊಂಡು ನನ್ನನ್ನು ಕಳಿಸಿದರು. ಅವರಿಗೆ ಶೌಚಕ್ಕೆ ಆಗಿದ್ದಿಲ್ಲ ಇದನ್ನು ಕೇಳಿ ಅದರ ಸಲುವಾಗಿ ಉಪಾಯ ಕೈಕೊಳ್ಳುವದಕ್ಕಾಗಿ ಕೂಡಲೇ ಜೇಲರನಿಗೆ ಪತ್ರ ಬರೆದರು.

ನಿನ್ನೆ ಬಾಪೂ ಅವರ ಕ್ಷೋಭದ ವಿಷಯ ಮಾತಾಡಿತ್ತು. ಇವತ್ತು ಡಾಕ್ಟರರ ಮಾತನ್ನು ಕೇಳುವ ಉದ್ದೇಶದಿಂದ—ಅಂದರೆ ಎಡಗೈ ಮೊಳಕೈ ಎಲುಬಿಗೆ ವಿಶ್ರಾಂತಿ ಕೊಡಬೇಕೆಂಬ ಅವರ ಸೂಚನೆಯನ್ನು ಕೇಳುವ ಉದ್ದೇಶದಿಂದ

**೧೭-೪-'೩೨** —ಬಾಪೂ ಹೊಸ ಯುಕ್ತಿಯನ್ನು ತೆಗೆದರು. ಬಾರ್ಡೋಲಿಯಲ್ಲಿ ಮಾಡಿದ ಯರವಡಾ ಚಕ್ರದಲ್ಲಿ ಅವರು ಕದಿರನ್ನು ಎಡಗಡೆ, ಬಲಗಡೆ ಎರಡೂ ಕಡೆಗೆ ಹಾಕಲಿಕ್ಕೆ ಬರುವಂತಿದೆ. ಈ ರಾಟೆಯನ್ನು ಬಲಗೈಯಿಂದ ನೂಲಲಿಕ್ಕೆ ಬರುವಂತೆ ಅವರ ಕದಿರನ್ನು ಬಲಗಡೆ ಹಾಕಿ ರಾಟೆಯನ್ನು ನೂಲಹತ್ತಿದರು. ಇದರಲ್ಲಿ ವಿಶ್ರಾಂತಿ ದೊರೆಯುವದು ಎಷ್ಟು ಸಂಭವನೀಯವಿತ್ತೊ ನಾನರಿಯೆ. ಯಾಕಂದರೆ ಎಡಗೈ ಎಳೆಯನ್ನು ತೆಗೆಯುವ ಬದಲು ಚಕ್ರವನ್ನು ತಿರುಗಿಸುತ್ತಿದೆ. ಮತ್ತು ಬಲಗೈ ಎಳೆ ತೆಗೆಯುತ್ತದೆ. ಎರಡೂ ಕೈಗಳ ಮೇಲೆ ಬೀಳುವ ಶಕ್ತಿ ಕೇವಲ ಅದಲುಬದಲಾಗುತ್ತಿದೆ. ಆದರೆ ಬಾಪೂ ಈ ಪ್ರಯೋಗವನ್ನು ಪ್ರಾರಂಭ ಮಾಡಿಯೇ ಬಿಟ್ಟರು. ಸ್ವಲ್ಪ ಹೊತ್ತು ಎಳೆ ಹೊರಡುವದು ಕಠಿಣವಾಯಿತು. ನಾಸಿಕದಲ್ಲಿ ನನ್ನ ಬಲಗೈ ಬಹಳ ನೋಯುತ್ತಿತ್ತು. ಆಗ ನಾನು ಈ ಯುಕ್ತಿಯನ್ನು ಮಾಡಿ ನೋಡಿದ್ದೆ. ಆದರೆ ನನ್ನಿಂದ ಒಂದು ಎಳೆಯನ್ನೂ ತೆಗೆಯುವದಾಗಲಿಲ್ಲ. ಆದ್ದರಿಂದ ಅದನ್ನು ಬಿಟ್ಟು ಬಿಟ್ಟಿದ್ದೆ. ಆದರೆ ಬಾಪೂ ನಗೆ ನಗುತ್ತಲೇ ಇದ್ದರು. ಅವರ ಮೇಲೆ ಸುಮಾರು ಒಂದೂವರೆ ತಾಸು ಪ್ರಯೋಗವನ್ನು ನಡೆಯಿಸಿದರು, ಮತ್ತು ಏಳು ಹುಂಜಿಗಳನ್ನು ನೂತರು. ಏಳನೇ ಹುಂಜಿಯಿಂದಂತೂ ಎಂದಿನಂತೆ ಎಳೆಯು ಹೊರಡಹತ್ತಿತು. ಇದರಿಂದ ಉಲ್ಲಸಿತರಾಗಿ ನನಗೆ ಹೇಳತೊಡಗಿದರು: "ನೋಡು, ೫೫ ತಾರು ಹೊರಟಿವೆ. ಮತ್ತು ನನ್ನ ದಿನದ ೩೭೫ ಎಳೆ ಪೂರ್ಣವಾಗಿವೆ. ಯಾಕಂದರೆ ನಿನ್ನಿನ ೨೭೨ ಎಳೆಗಳು ಹೆಚ್ಚಾಗಿ ಉಳಿದಿವೆ." ನಾನು ಅಂದೆ: "ಬಾಪೂ, ಇದರಲ್ಲಿ ವಿಶ್ರಾಂತಿ ಸಿಗುವದಿಲ್ಲವಲ್ಲ." ಬಾಪೂ ಹೇಳಿದರು: "ವಿಶ್ರಾಂತಿಯು ರೂಢಿಯಾದ ಮೇಲೆ ಸಿಗುವದು. ಸಿಗದಿದ್ದರೂ ಇದು ಹಾನಿಯ ವ್ಯಾಪಾರವಲ್ಲ. ಯಾಕಂದರೆ ಬಲಗೈ ಎಂದಾದರೂ ಪೂರ್ಣ ಬಂದಾದರೆ ಈ ರೂಢಿಯನ್ನು ಕೆಡವಿರುವದು ಒಳ್ಳೆಯದು."

ಇವತ್ತು ಮೇಜರ ಮೆಹತಾ ಅವರು ಬಾಪೂ ಅವರ ಮೊಳಕೈಯನ್ನು ವಿದ್ಯುತ್ತಿನ ಸಹಾಯದಿಂದ ತಿಕ್ಕುವ ಉಪಾಯ ಮಾಡಿದರು.

ಮೇಜರ ಮಾರ್ಟಿನ್ನರು ರಜೆಯ ಮೇಲೆ ಹೋದರು. ಆಗ ತಮ್ಮ ಮನೆಯಲ್ಲಿ

ದ್ದರು. ಈ ಮಿಷ್ಟರು ಅವರಿಗೆ ಶೌಚ ಮೂತ್ರಗಳನ್ನು ಮಾಡಲಿಕ್ಕೂ ಬಿಡುತ್ತಿದ್ದಿಲ್ಲ. ಇದೆಲ್ಲವನ್ನು ಅವರು ಏತಕ್ಕಾಗಿ ಮಾಡಿದ್ದರು? ಇವರಿಗೆ ಇಂಥ ಇಂಥ ಜೊತೆಗಾರರಿರುವಾಗ ಅವರ ಸೇವೆಯು ನನ್ನಂಥವನಿಂದ ಯಾವ ರೀತಿ ಆಗಬಲ್ಲದು? ಇನ್ನು ಮುಂದೆ ಇವರನ್ನು ಕಾಣಬಹುದೊ ಇಲ್ಲವೊ ಇದು ಸಹ ದೇವರಿಗೇ ಗೊತ್ತು!" ಇಷ್ಟು ಹೇಳಿ ನಿಡಿದಾದ ಉಸುರ್ಗರೆದು ಮತ್ತೆ ಆಗ್ರಹ ಮಾಡತೊಡಗಿದ: "ನನಗೆ ಹೇಳಿರಿ, ಭಾಯಿ ನನಗೆ ಹೇಳಿರಿ. ನಾನು ಇವರ ಸಲುವಾಗಿ ಏನು ಕಳಿಸಲಿ? ಏನಾದರೂ ತಿನ್ನುವದನ್ನು ಕಳಿಸಲೆ? ಅದರಿಂದ ಇವರು ನನ್ನ ಕೈಯ್ಯ ಪದಾರ್ಥ ತಿಂದರೆಂದು ತಿಳಿದು ಸಮಾಧಾನ ಹೊಂದಲೆ?" ಅವನಿಗೆ ಉತ್ತರ ಕೊಡುವ ವಿವಂಚನೆಯಲ್ಲಿ ಸಮಯವು ನಡೆದಿತ್ತು. ಅಷ್ಟರಲ್ಲಿ ಛಿಟ್ಟಿಯ ಸಲುವಾಗಿ ಜೇಲಿನ ಬಾಗಿಲಲ್ಲಿ ಹೋದ ಬಾಪೂ ಮತ್ತು ವಲ್ಲಭಭಾಯಿಯವರು ಬಂದುಬಿಟ್ಟರು. ನನ್ನ ಮಾತು ಬಂದಾಯಿತು.

* * *

ಬಾಪೂ ಅವರ ಲೋಭವನ್ನು—ಸೇವೆಯ ಲೋಭವನ್ನು—ಯಾರು ಸಂಗಟ್ಟಿ ಬಲ್ಲರು? ಯಾರು ತಿಳಿಯಬಲ್ಲರು? ಕೈ ನೋಯುತ್ತದೆ. ಡಾಕ್ಟರರು ಬೇಡೆಂದು ಹೇಳುತ್ತಾರೆ. ಆದರೂ ರಾಟಿ ನೂಲುವದಕ್ಕೂ ನೋವಿಗೂ ಯಾವದೂ ಸಂಬಂಧ ಇಲ್ಲೆಂದು ಹೇಳಿ, ಇವತ್ತು ೪೦೫ ಎಳೆಗಳವರೆಗೆ ಮುಟ್ಟಿದ್ದಾರೆ. ಮತ್ತು ಹೇಳತೊಡಗಿದ್ದಾರೆ: "ನೋಡು, ಪ್ರಗತಿಯಾಗುತ್ತ ನಡೆದಿದೆಯಲ್ಲವೆ?" ಅದರ ಸಂಗಡವೇ ಉರ್ದು ಭಾಷೆಯನ್ನು ಬೆಳೆಸುವ ಮತ್ತು ಗತಿಪೂರ್ವಕ ಓದುವ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವ ಲೋಭವಂತೂ ಇದ್ದೇ ಇದೆ. ರಹನಾಬಹೆನರ ಪತ್ರಗಳು ಉರ್ದುವಿನಲ್ಲಿ ಬರುತ್ತವೆ. ಅವರಿಗೆ ಉರ್ದುವಿನಲ್ಲಿ ಬರೆಯುವ ಪ್ರಯತ್ನಮಾಡಿ ಅವರಿಂದ ತಪ್ಪುಗಳನ್ನು ತಿದ್ದಿಸಿಕೊಳ್ಳುತ್ತಾರೆ ಮತ್ತು ಅವರಿಗೆ ನನ್ನ 'ಉಸ್ತಾನಿ' (ಗುರುಮಾಣಿ) ಎಂದು ಸಂಬೋಧಿಸಿ ತಾವು ಅವರ 'ಶಾಗಿರ್ದ' (ಶಿಷ್ಯ) ಎಂದು ಬರೆಯುತ್ತಾರೆ. ಇದೆಲ್ಲ ನಡೆದಿತ್ತು. ಆದರೆ ಇಷ್ಟರಿಂದ ಸಂತುಷ್ಟರಾಗದೆ ಈಗ ಜೇಲಿನ ಪುಸ್ತಕಾಲಯದಿಂದ ಎಲ್ಲ ಉರ್ದು ಪುಸ್ತಕಗಳನ್ನು ತರಿಸಿದ್ದಾರೆ. ಬೆಳಗ್ಗೆ ತಿನ್ನುತ್ತ ತಿನ್ನುತ್ತ ಓದುವದನ್ನು ಪ್ರಾರಂಭಮಾಡಿದ್ದಾರೆ. ಆಕಾಶ ದರ್ಶನದಿಂದಂತೂ ಈಶ್ವರನ ವಿಭೂತಿದರ್ಶನದ ಗುಟುಕಿನ ಮೇಲೆ ಗುಟುಕು ದೊರೆಯುತ್ತದೆ. ಆದುದರಿಂದ ಈ ವಿಷಯದ ಪುಸ್ತಕ ಭಂಡಾರವು ಹೆಚ್ಚಾಗುತ್ತ ನಡೆದಿದೆ. ಪತ್ರವ್ಯವಹಾರ ಕೂಡ ಹೆಚ್ಚುತ್ತ ನಡೆದಿದೆ. ರಸ್ಕಿನ್ನನ ಪುಸ್ತಕ ಓದುವದರಲ್ಲಿ ಅವರು ಅಷ್ಟೊಂದು ತಲ್ಲೀನರಾಗುವದನ್ನು ಕಂಡಾಗ ಆ ಸಮಯದಲ್ಲಿ ಅವರೊಳಗಿಂದ ಹೊರಡುವ ವಿಚಾರಗಳನ್ನು ಕೂಡ ಕೂತಲ್ಲಿಯೇ ಬರೆದು ಬಿಡಲೊ ಎಂದೆನಿಸುತ್ತದೆ.

. . . ರ ಪ್ರಕೃತಿಯ ಸ್ಥಿತಿ ತಿಳಿದುಕೊಳ್ಳುವದಕ್ಕಾಗಿ ಸುಪರಿಟೆಂಡೆಂಟರ

ಒಪ್ಪಿಗೆ ತೆಗೆದುಕೊಂಡು ನನ್ನನ್ನು ಕಳಿಸಿದರು. ಅವರಿಗೆ ಶೌಚಕ್ಕೆ ಆಗಿದ್ದಿಲ್ಲ ಇದನ್ನು ಕೇಳಿ ಅದರ ಸಲುವಾಗಿ ಉಪಾಯ ಕೈಕೊಳ್ಳುವದಕ್ಕಾಗಿ ಕೂಡಲೇ ಜೇಲರನಿಗೆ ಪತ್ರ ಬರೆದರು.

ನಿನ್ನೆ ಬಾಪೂ ಅವರ ಲೋಭದ ವಿಷಯ ಮಾತಾಡಿತ್ತು. ಇವತ್ತು ಡಾಕ್ಟರರ ಮಾತನ್ನು ಕೇಳುವ ಉದ್ದೇಶದಿಂದ—ಅಂದರೆ ಎಡಗೈ ನೋವಕ್ಕೆ ಎಲುಬಿಗೆ ವಿಶ್ರಾಂತಿ ಕೊಡಬೇಕೆಂಬ ಅವರ ಸೂಚನೆಯನ್ನು ಕೇಳುವ ಉದ್ದೇಶದಿಂದ

**೧೭-೪-'೩೨** —ಬಾಪೂ ಹೊಸ ಯುಕ್ತಿಯನ್ನು ತೆಗೆದರು. ಬಾರ್ಡೋಲಿಯಲ್ಲಿ ಮಾಡಿದ ಯರವಡಾ ಚಕ್ರದಲ್ಲಿ ಅವರ ಕಬಿರನ್ನು ಎಡಗಡೆ, ಬಲಗಡೆ ಎರಡೂ ಕಡೆಗೆ ಹಾಕಲಿಕ್ಕೆ ಬರುವಂತಿದೆ. ಈ ರಾಟಿಯನ್ನು ಬಲಗೈಯಿಂದ ನೂಲಲಿಕ್ಕೆ ಬರುವಂತೆ ಅದರ ಕಬಿರನ್ನು ಬಲಗಡೆ ಹಾಕಿ ರಾಟಿಯನ್ನು ನೂಲಹತ್ತಿದರು. ಇದರಲ್ಲಿ ವಿಶ್ರಾಂತಿ ದೊರೆಯುವದು ಎಷ್ಟು ಸಂಭವನೀಯವೋ ನಾನರಿಯೆ. ಯಾಕಂದರೆ ಎಡಗೈ ಎಳೆಯನ್ನು ತೆಗೆಯುವ ಬದಲು ಚಕ್ರವನ್ನು ತಿರುಗಿಸುತ್ತದೆ. ಮತ್ತು ಬಲಗೈ ಎಳೆ ತೆಗೆಯುತ್ತದೆ. ಎರಡೂ ಕೈಗಳ ಮೇಲೆ ಬೀಳುವ ಶಕ್ತಿ ಕೇವಲ ಅದಲುಬದಲಾಗುತ್ತದೆ. ಆದರೆ ಬಾಪೂ ಈ ಪ್ರಯೋಗವನ್ನು ಪ್ರಾರಂಭ ಮಾಡಿಯೇ ಬಿಟ್ಟರು. ಸ್ವಲ್ಪ ಹೊತ್ತು ಎಳೆ ಹೊರಡುವದು ಕಠಿಣವಾಯಿತು. ನಾಸಿಕದಲ್ಲಿ ನನ್ನ ಬಲಗೈ ಬಹಳ ನೋಯುತ್ತಿತ್ತು. ಆಗ ನಾನು ಈ ಯುಕ್ತಿಯನ್ನು ಮಾಡಿ ನೋಡಿದ್ದೆ. ಆದರೆ ನನ್ನಿಂದ ಒಂದು ಎಳೆಯನ್ನೂ ತೆಗೆಯುವದಾಗಲಿಲ್ಲ. ಆದರಿಂದ ಅದನ್ನು ಬಿಟ್ಟುಬಿಟ್ಟಿದ್ದೆ. ಆದರೆ ಬಾಪೂ ನಗೆ ನಗುತ್ತಲೇ ಇದ್ದರು. ಅವರ ಮೇಲೆ ಸುಮಾರು ಒಂದೂವರೆ ತಾಸು ಪ್ರಯೋಗವನ್ನು ನಡೆಯಿಸಿದರು, ಮತ್ತು ಏಳು ಹುಂಜಿಗಳನ್ನು ನೂತರು. ಏಳನೇ ಹುಂಜಿಯಿಂದಂತೂ ಎಂದಿನಂತೆ ಎಳೆಯು ಹೊರಡಹತ್ತಿತು. ಇದರಿಂದ ಉಲ್ಲಸಿತರಾಗಿ ನನಗೆ ಹೇಳತೊಡಗಿದರು: "ನೋಡು, ೧೫ ತಾರು ಹೊರಟಿವೆ. ಮತ್ತು ನನ್ನ ದಿನದ ೩೭೫ ಎಳೆ ಪೂರ್ಣವಾಗಿವೆ. ಯಾಕಂದರೆ ನಿನ್ನಿನ ೭೦ ಎಳೆಗಳು ಹೆಚ್ಚಾಗಿ ಉಳಿದಿವೆ." ನಾನು ಅಂದೆ: "ಬಾಪೂ, ಇದರಲ್ಲಿ ವಿಶ್ರಾಂತಿ ಸಿಗುವದಿಲ್ಲವಲ್ಲ." ಬಾಪೂ ಹೇಳಿದರು: "ವಿಶ್ರಾಂತಿಯು ರೂಢಿಯಾದ ಮೇಲೆ ಸಿಗುವದು. ಸಿಗದಿದ್ದರೂ ಇದು ಹಾನಿಯ ವ್ಯಾಪಾರವಲ್ಲ. ಯಾಕಂದರೆ ಬಲಗೈ ಎಂದಾದರೂ ಪೂರ್ಣ ಬಂದಾದರೆ ಈ ರೂಢಿಯನ್ನು ಕೆಡವಿರುವದು ಒಳ್ಳೆಯದು."

ಇವತ್ತು ಮೇಜರ ಮೆಹತಾ ಅವರು ಬಾಪೂ ಅವರ ಮೊಳಕೈಯನ್ನು ವಿದ್ಯುತ್ತಿನ ಸಹಾಯದಿಂದ ತಿಕ್ಕುವ ಉಪಾಯ ಮಾಡಿದರು.

ಮೇಜರ ಮಾರ್ಟಿನ್ನರು ರಜೆಯ ಮೇಲೆ ಹೋದರು. ಆಗ ತಮ್ಮ ಮನೆಯಲ್ಲಿ

ಹೆಚ್ಚಾದ ಬಾಟ್ಲಿಗಳನ್ನು ಇಲ್ಲಿಯ ದವಾಖಾನೆಗೆ ಕಳಿಸಿ ಹೋದರು. ಬಾಪೂ ಈ ಮಾತನ್ನು ಕೇಳಿ ಅಂದರು : "ನೋಡು, ಇವರಿಗೆ ಜೇಲುವಾಸಿಗಳ ಬಗ್ಗೆ ಎಷ್ಟು ವಿಚಾರವಿದೆ! ಸ್ವಂತದ ಸ್ವಾರ್ಥ ಬಾರದ ಎಲ್ಲ ವಿಷಯಗಳಲ್ಲಿ ಇವರು ಸರಳರೂ ಮತ್ತು ತಮ್ಮ ಕರ್ತವ್ಯ ತಿಳಿಯುವವರೂ ಆಗಿರುತ್ತಾರೆ. ಈ ಜನರೇ ಹೀಗಿರುವರು."

ಬಡತನ — ದಾರಿದ್ರ್ಯದ ಬಗ್ಗೆ ಹೆನ್ರಿ ಜಾರ್ಜನು ಮಾಡಿದ ವರ್ಣನೆಯು ಎಷ್ಟೊಂದು ಹೃದಯಗ್ರಾಹಿಯಾಗಿದೆ. Poverty is the open-mouthed relentless hell which yawns beneath civilized society. ಬಡತನವು ಸಭ್ಯ ಸಮಾಜದ ಕಾಲ್ಕೆಳಗೆ ಬಾಯಿತೆರೆದು ನಿಂತ ನಿಷ್ಠುರ ನರಕವಾಗಿದೆ.

ಇವತ್ತು ಬಾಪೂ ಯರವಾಡಾ ಚಕ್ರದ ಗೊಂಬೆಯಲ್ಲಿ ಹೆಚ್ಚು ಕಡಿಮೆ ಮಾಡಿದರು. ನಿನ್ನಿನ ರಾಟಿಯ ಗಡಗಡೆಯು (ಗರಡಿಯು) ಸರಿಯಾಗಿದ್ದಿಲ್ಲ. ಆದುದರಿಂದ ತಮ್ಮದೇ ರಾಟಿಯನ್ನು ಸರಿಪಡಿಸಿಕೊಂಡರು,

೧೮-೪-'೩೨ ಮತ್ತು ಎಡಗೈಯಿಂದ ನೂಲುವ ಪ್ರಯೋಗವನ್ನು ಮುಂದುವರಿಸಿದರು. ಪರಿಣಾಮವು ನಿನ್ನೆಯಗಿಂತ ಚನ್ನಾಗಿತ್ತು. ನಿನ್ನೆ ೯೫ ಎಳೆಗಳನ್ನು ತೆಗೆಯಲಿಕ್ಕೆ ೩॥ ತಾಸು ಹಿಡಿದಿತ್ತು. ಇವತ್ತು ೮೫ ಎಳೆಗಳು ೨॥ ತಾಸಿನಲ್ಲಿ ಹೊರಟವು. ವಲ್ಲಭಭಾಯಿ ಅಂದರು : "ಇದರಿಂದ ಏನೂ ಲಾಭವಿಲ್ಲ. '**पाकी कोठीअे काना न चढे**' 'ಬಲಿತ ಮರ ಬಾಗುವದಿಲ್ಲ' ನಮ್ಮ ಹಳೇ ಪದ್ಧತಿ ನಡೆದಿತ್ತು, ಅದನ್ನೆ ನಡೆಯಿಸಿರಲ್ಲ." ಬಾಪೂ ಹೇಳಿದರು : "ನಿನ್ನೆಯಗಿಂತ ಇವತ್ತು ಪ್ರಗತಿ ಚನ್ನಾಗಿ ಆಗಿದೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ." ವಲ್ಲಭಭಾಯಿ : "ಇದು ಆಶ್ರಮದಲ್ಲಿ ಯಾರಿಗಾದರೂ ಗೊತ್ತಾದರೆ ಎಡಗೈಯಿಂದ ನೂಲುವದನ್ನು ಪ್ರಾರಂಭ ಮಾಡುವರು, ಮತ್ತು ಈ ಪಂಥ ನಡೆಯತೊಡಗುವದು." ಬಾಪೂ : "ಇದಂತೂ ಗೊತ್ತೇ ಆಗುವದು ಯಾಕಂದರೆ ಈ ಸಾರೆ ಬರೆಯುವೆನು." ವಲ್ಲಭಭಾಯಿಯವರು ಸ್ವಲ್ಪ ಗಂಭೀರರಾಗಿ : "ಇದಕ್ಕಿಂತ ಬಾಲಕರಿಗೇ ಎರಡೂ ಕೈಗಳಿಂದ ರಾಟಿಯಮೇಲೆ ನೂಲಲಿಕ್ಕೆ ಕಲಿಸಿದ್ದರೆ ನೆಟ್ಟಗಿತ್ತು." ಬಾಪೂ ಅಂದರು : "ಸರಿಯಾದ ಮಾತು. ಜಪಾನದಲ್ಲಿ ಬಾಲಕರಿಗೆ ಎರಡೂ ಕೈಗಳನ್ನು ಉಪಯೋಗಿಸಲಿಕ್ಕೆ ಕಲಿಸುತ್ತಾರೆ"

ನಾರಾಯಣದಾಸಭಾಯಿಗೆ ಪತ್ರ ಬರೆದರು. ಅದರಲ್ಲಿ ಪ್ರಯೋಗದ ಉತ್ಪತ್ತಿಯನ್ನು ವರ್ಣಿಸಿದ್ದರು, ಮತ್ತು ಅದರಮೇಲಿಂದ ಹೊರಡುವ ವಿಚಾರಗಳನ್ನೂ ಬರೆದಿದ್ದರು. ಆಶ್ರಮದಲ್ಲಿ ಯಾರಿಗೆ ಸಾಧ್ಯವೊ ಅಂಥವರು ದೈನಂದಿನದ ಅನೇಕ ಕ್ರಿಯೆಗಳ ಸಲುವಾಗಿ ಎಡಗೈ ಬಲಗೈಗಳೆರಡನ್ನೂ ಉಪಯೋಗಿಸಬೇಕೆಂದು ಸೂಚಿಸಿದರು.

* * *

ಆಸಾಮುದಿಂದ ೬೧ ವರ್ಷದ ಒಬ್ಬ ವೃದ್ಧನು ತಾನೇ ನೂತು ತಾನೇ ನೇಯ್ದು ಜೆನುಗು ಬಟ್ಟೆಯ ತುಂಡೊಂದನ್ನು ಬಾಪೂ ಅವರಿಗೆ ಉಡುವದರ ಸಲುವಾಗಿ ಕಳಿಸಿದ್ದಾನೆ. ಈ ಪ್ರಕಾರದ ಎಷ್ಟೋ ಭಕ್ತರು ದೇಶದ ಮೂಲೆ ಮೂಲೆಗಳಲ್ಲಿಯೂ ಇರಬಹುದು.

* * *

ಪುರುಷೋತ್ತಮನು ರಾಜಕೋಟೆದಿಂದ ಒಂದು ಉದ್ದ ಪತ್ರ ಬರೆದು ಮೂರು ಪ್ರಶ್ನೆಗಳನ್ನು ಕೇಳಿದ್ದನು: (೧) ಜೈನ ದರ್ಶನದ ನಿರೀಶ್ವರವಾದ ಮತ್ತು ಗೀತಾದ ಈಶ್ವರವಾದ ಇವುಗಳ ಭೇದದ ವಿಷಯದಲ್ಲಿ. (೨) ಈಶ್ವರನಲ್ಲಿ ಕರ್ತೃತ್ವ ಶಕ್ತಿ ಇಲ್ಲದಿದ್ದರೆ ದಯ ತೋರುವವರು ಯಾರು? ಭಕ್ತಿ ಮಾಡುವವರಿಗೆ ಈಶ್ವರ ಕೃಪೆಯ ಹೊರತಾಗಿ ಶ್ರದ್ಧೆಗೆ ಆಧಾರವಾಗಿ ಇನ್ನೇನಾದರೂ ಉಂಟೇ? ಮನುಷ್ಯನ ಪ್ರಾರ್ಥನೆಯು ಆತನ ಶುಭೇಚ್ಛೆ ಮಾತ್ರವೋ ಅಥವಾ ಇದಕ್ಕಿಂತ ಹೆಚ್ಚಿನದು ಏನಾದರೂ ಇದೆಯೊ? (೩) ಸತ್ಯವೇ ಈಶ್ವರನು, ಬಾಪೂ ಅವರ ಈ ವ್ಯಾಖ್ಯೆಯ ರಹಸ್ಯ.

ಅದಕ್ಕೆ ಬಾಪೂ ವಿಸ್ತಾರಪೂರ್ವಕವಾಗಿ ಉತ್ತರ ಬರೆದರು:

(೧) ಜೈನನಿರೂಪಣ ಮತ್ತು ಸಾಧಾರಣ ವೈದಿಕ ನಿರೂಪಣ ಇವುಗಳಲ್ಲಿ ನನಗೆ ವಿರೋಧ ಕಾಣಿಸಲಿಲ್ಲ. ಕೇವಲ ದೃಷ್ಟಿಕೋನದ ಭೇದವಿದೆ. ವೇದದಲ್ಲಿಯ ದೇವರು ಕರ್ತೃ– ಅಕರ್ತೃ ಎರಡೂ ಆಗಿದ್ದಾನೆ. ಇಡೀ ಜಗತ್ತು ಈಶ್ವರಮಯ ವಿದ್ದುದರಿಂದ ಈಶ್ವರನು ಕರ್ತೃ ಆಗಿದ್ದಾನೆ. ಆದರೆ ಅವನು ಕರ್ತೃವಲ್ಲ ಯಾಕಂದರೆ ಆತನು ಅಲಿಪ್ತನಿದ್ದಾನೆ. ಅವನಿಗೆ ಕರ್ಮದ ಫಲ, ಭೋಗಿಸಬೇಕಾಗುವದಿಲ್ಲ. ನಾವು ಯಾವ ಅರ್ಥದಲ್ಲಿ ಕರ್ಮ ಶಬ್ದವನ್ನು ಬಳಸುತ್ತೇವೆಯೊ, ಆ ಅರ್ಥದಲ್ಲಿ ಜಗತ್ತು ಈಶ್ವರನ ಕರ್ಮವಲ್ಲ. ನೀನು ಉದ್ಧೃತ ಮಾಡಿದ ಗೀತಾಶ್ಲೋಕಗಳನ್ನು ಈ ರೀತಿಯಿಂದ ವಿಚಾರ ಮಾಡಿದರೆ ಅದು ಸರಿ ಹೋಗುತ್ತದೆ. ಇಷ್ಟನ್ನು ಲಕ್ಷದಲ್ಲಿಡು: ಗೀತೆಯು ಒಂದು ಕಾವ್ಯ. ದೇವರು ಏನೂ ಮಾತನಾಡುವದಿಲ್ಲ. ಏನೂ ಮಾಡುವದಿಲ್ಲ. ದೇವರು ಅರ್ಜುನನೊಂದಿಗೆ ಏನಾದರೂ ಹೇಳಿದ್ದಾನೆಂದಲ್ಲ. ದೇವರು ಮತ್ತು ಅರ್ಜುನರ ನಡುವಿನ ಸಂವಾದವು ಕಾಲ್ಪನಿಕವಿದೆ. ಐತಿಹಾಸಿಕ ಕೃಷ್ಣ ಐತಿಹಾಸಿಕ ಅರ್ಜುನರ ನಡುವೆ ಇಂಥ ಸಂವಾದ ನಡೆದಿತ್ತೆಂದು ನಾನು ನಂಬುವದಿಲ್ಲ. ಗೀತೆಯ ಶೈಲಿಯಲ್ಲಿ ಏನಾದರೂ ಅಸತ್ಯ ಅಥವಾ ಅಯೋಗ್ಯವಿದೆಯೆಂಬ ಮಾತೂ ಇಲ್ಲ. ಧರ್ಮಗ್ರಂಥಗಳನ್ನು ಈ ರೀತಿಯಿಂದ ಬರೆಯುವ ಪದ್ಧತಿಯಿತ್ತು. ಇವತ್ತು ಕೂಡ ಯಾರಾದರೂ ಸಂಸ್ಕಾರಯುಕ್ತ ವ್ಯಕ್ತಿಯು ಬರೆದರೆ ಅದರಲ್ಲಿ ಏನಾದರೂ ದೋಷವಿದೆಯೆಂದು ಹೇಳಲಿಕ್ಕಾಗದು. ಜೈನರು ಕಾವ್ಯರಹಿತವಾದ, ತರ್ಕನಿಷ್ಠುರವಾದ ಅರ್ಥಾತ್ ನೀರಸ ಮಾತುಗಳನ್ನು ಬರೆದು ಜಗತ್ತನ್ನು ನಿರ್ಮಾಣಮಾಡಿದವನು ದೇವರಲ್ಲ ಎಂದು ತೋರಿಸಿದರು. ಹೀಗೆ ಹೇಳುವದರಲ್ಲಿ ಯಾವ ದೋಷವಿಲ್ಲ. ಆದರೆ

ಜನಸಮಾಜವು ನೀರಸ ತರ್ಕದಿಂದ ನಡೆಯುವದಿಲ್ಲ. ಅದಕ್ಕೆ ಕಾವ್ಯದ ಆವಶ್ಯಕತೆ ಯಿದೆ. ಆದುದರಿಂದ ಜೈನರ ಬುದ್ಧಿವಾದಕ್ಕೂ ಕೂಡ ಮಂದಿರಗಳ, ಮೂರ್ತಿಗಳ ಮತ್ತು ಇಂಥ ಅನೇಕ ಸಾಧನಗಳ ಆವಶ್ಯಕತೆಯೆನಿಸಿತು. ಕೇವಲ ತರ್ಕ ದೃಷ್ಟಿಯಿಂದ ನೋಡಿದರೆ ಇವುಗಳಲ್ಲಿ ಯಾವುದೂ ಬೇಡ.

(೨) ನಿನ್ನ ಎರಡನೆಯ ಪ್ರಶ್ನೆಯು ಮೊದಲನೇ ಪ್ರಶ್ನೆಯ ಗರ್ಭದಲ್ಲಿಯೆ ಇದೆಯೆಂದು ನಾನು ತಿಳಿಯುವಂತೆ ನಿಜವಾಗಿ ಮೊದಲನೆ ಪ್ರಶ್ನೆಯ ಉತ್ತರದ ಗರ್ಭದಲ್ಲಿ ನಿನ್ನ ಎರಡನೆಯ ಪ್ರಶ್ನೆಯ ಉತ್ತರವು ಬಂದು ಹೋಗುತ್ತದೆ. 'ಕೃಪೆ' ಶಬ್ದವು ಕಾವ್ಯದ ಭಾಷೆ. ಭಕ್ತಿ ಕೂಡ ಕಾವ್ಯವು. ಆದರೆ ಕಾವ್ಯವು ಯಾವದೇ ಅನುಚಿತವಾದ ಅಥವಾ ಕಡಿಮೆ ತರಗತಿಯ ವಸ್ತುವಾಗಲಿ, ಅನಾವಶ್ಯಕ ವಸ್ತು ವಾಗಲಿ ಇದೆಯೆಂಬ ಮಾತಲ್ಲ. ಇದು ಅತ್ಯಂತ ಆವಶ್ಯಕ ವಸ್ತುವಿದೆ. ನೀರು, ಎರಡು ಪಾಲು ಹಾಯಿಡ್ರೋಜನ್ ಒಂದು ಪಾಲು ಆಕ್ಸಿಜನ್‌ಗಳಿಂದ ತಯಾರಾಗಿದೆ ಎಂಬುದು ನ್ಯಾಯಶಾಸ್ತ್ರದ ಮಾತಾಗಿದೆ. ಆದರೆ ನೀರು ದೇವರ ಕೊಡುಗೆ ಎಂದು ಹೇಳುವದು ಕಾವ್ಯದ ಮಾತು. ಈ ಕಾವ್ಯವನ್ನು ತಿಳಿದುಕೊಳ್ಳುವದು ಜೀವನದ ಆವಶ್ಯಕ ಅಂಗವಾಗಿದೆ. ನೀರಿನ ಶಾಸ್ತ್ರ ತಿಳಿಯುವದು ಆವಶ್ಯಕ ಅಂಗವಲ್ಲ. ಇದೇ ಪ್ರಕಾರ ಆಗುವದೆಲ್ಲ ಕರ್ಮದ ಫಲವೆಂದು ಹೇಳುವದು ಅತ್ಯಂತ ತರ್ಕಯುಕ್ತವಾಗಿದೆ. ಆದರೆ ಕರ್ಮದ ಗತಿ ಗಹನವಿದೆ. ನಾವು ದೇಹಧಾರಿಗಳು ಹೇಳಲಿಕ್ಕೆ ಬಾರದಷ್ಟು ಪಾಮರರಿರುವೆವು : ಅತ್ಯಂತ ಸಾಮಾನ್ಯವಾಗಿರುವ ಪರಿಣಾ ಮಕ್ಕೆ ಕೂಡ ಎಷ್ಟೋಂದು ಕರ್ಮಗಳು ಹೊಣೆಗಾರವಿರುತ್ತವೆ. ಅವೆಲ್ಲವುಗಳ ಜ್ಞಾನವು ನಮಗೆ ಆಗುವದಿಲ್ಲ. ಆದುದರಿಂದ ದೇವರ ಕೃಪೆಯ ಹೊರತು ಏನೂ ಆಗಲಾರದು ಎಂದು ಹೇಳುವದು ಸರಿಯಾದದ್ದು ಮತ್ತು ಇದೇ ಶುದ್ಧ ಸತ್ಯವು. ಯಾವದೇ ದೇಹದಲ್ಲಿರುವ ಆತ್ಮವು ಒಂದು ಕೊಡದಲ್ಲಿರುವ ಹವೆಯಂತೆ ಬಂಧಿತವಾಗಿರುತ್ತದೆ. ಮತ್ತು ಆ ಕೊಡದಲ್ಲಿಯ ಹವೆಯು ಎಲ್ಲಿಯವರೆಗೆ ತನ್ನನ್ನು ಬೇರೆಯೆಂದು ತಿಳಿಯುತ್ತದೆಯೊ ಅಲ್ಲಿಯವರೆಗೆ ಅದು ತನ್ನ ಶಕ್ತಿಯ ಉಪಯೋಗ ಮಾಡಿ ಕೊಳ್ಳಲಾರದು. ಇದೇ ಪ್ರಕಾರ ಶರೀರದಲ್ಲಿ ಬಂಧಿತವಾದ ಆತ್ಮವು ತಾನು ಸ್ವತಃ ಏನಾದರೂ ಮಾಡುತ್ತೇನೆಂದು ತಿಳಿದರೆ ಅದು ಸರ್ವಶಕ್ತಿಮಾನ್ ಪರಮಾತ್ಮನ ಶಕ್ತಿಯಿಂದ ವಂಚಿತವಾಗುತ್ತದೆ. ಆದುದರಿಂದ ಆಗುವದನ್ನೆಲ್ಲ ದೇವರೇ ಮಾಡುತ್ತಾನೆಂದು ಹೇಳುವದು ಸರಿಯಾಗಿದೆ, ಮತ್ತು ಸತ್ಯಾಗ್ರಹಿಗೆ ಶೋಭೆಯನ್ನುಂಟು ಮಾಡುತ್ತದೆ. ಸತ್ಯನಿಷ್ಠ ಆತ್ಮದ ಇಚ್ಛೆಯು ಪುಣ್ಯಮಯವಾಗಿ ರುತ್ತದೆ. ಆದುದರಿಂದ ಅದು ಫಲಿಸುತ್ತಲೂ ಇರುತ್ತದೆ. ಈ ವಿಚಾರದಿಂದ ನೀನು ಉದ್ಧೃತ ಮಾಡಿದ ಶ್ಲೋಕದ ಪ್ರಾರ್ಥನೆಯು ನಮ್ಮ ನಿಷ್ಠೆಯ ಪ್ರಮಾಣ ದಿಂದ ಇಡೀ ಜಗತ್ತಿಗೂ ಫಲದ್ರೂಪಿಯಾಗುವದು. ಜಗತ್ತು ನಮ್ಮಿಂದ ಭಿನ್ನ

ವಿಲ್ಲ, ನಾವು ಜಗತ್ತಿನಿಂದ ಭಿನ್ನವಿಲ್ಲ. ಎಲ್ಲರೂ ಒಬ್ಬರಲ್ಲೊಬ್ಬರು ಓತಪ್ರೋತರಾಗಿದ್ದೇವೆ. ಮತ್ತು ಒಬ್ಬರ ಕೆಲಸದ ಪರಿಣಾಮವು ಇನ್ನೊಬ್ಬರ ಮೇಲೆ ಆಗುತ್ತಿರುತ್ತದೆ. ವಿಚಾರವು ಕೂಡ ಕಾರ್ಯವಿದೆ. ಆದುದರಿಂದ ಒಂದೂ ವಿಚಾರವು ವ್ಯರ್ಥ ಹೋಗುವದಿಲ್ಲ ಎಂದು ಇಲ್ಲಿ ತಿಳಿಯತಕ್ಕದ್ದು. ಕಾರಣ ನಾವು ಯಾವಾಗಲೂ ಉತ್ತಮ ವಿಚಾರಗಳನ್ನು ಮಾಡುವ ರೂಢಿಯನ್ನು ಇರಿಸತಕ್ಕದ್ದು.

(೩) ಈಶ್ವರ ನಿರಾಕಾರನಿದ್ದಾನೆ. ಸತ್ಯವೂ ನಿರಾಕಾರವಿದೆ. ಆದುದರಿಂದ ಸತ್ಯವೇ ಈಶ್ವರನು. ಇದನ್ನು ನಾನು ನೋಡಿಯೂ ಇಲ್ಲ. ಮಾಡಿಯೂ ಇಲ್ಲ. ಆದರೆ ಈಶ್ವರನಿಗಿರುವ ಸತ್ಯವೆಂಬ ವಿಶೇಷಣವು ಪರಿಪೂರ್ಣವಾಗಿದೆ, ಮಿಕ್ಕೆಲ್ಲ ವಿಶೇಷಣಗಳು ಅಪೂರ್ಣವಾಗಿವೆ ಎಂಬುದನ್ನು ನಾನು ಕಂಡಿದ್ದೇನೆ. ಈಶ್ವರ ಎಂಬ ಶಬ್ದವೂ ವಿಶೇಷಣವಾಗಿದೆ. ಮತ್ತು ಅನಿರ್ವಚನೀಯವಾದ ದೊಡ್ಡ ತತ್ವವನ್ನು ವಿವರಿಸುವ ಒಂದು ವಿಶೇಷಣವಾಗಿದೆ. ಆದರೆ ಈಶ್ವರ ಇದರ ಧಾತ್ವರ್ಥ ತೆಗೆದುಕೊಂಡರೆ ಈಶ್ವರ ಶಬ್ದವು ನೀರಸವಾಗಿ ತೋರುತ್ತದೆ.

ಈಶ್ವರನನ್ನು ಅರಸನ ರೂಪದಲ್ಲಿ ನೋಡುವದರಿಂದ ಬುದ್ಧಿಗೆ ತೃಪ್ತಿಯಾಗುವದಿಲ್ಲ. ಅವನನ್ನು ಅರಸನ ರೂಪದಲ್ಲಿ ನೋಡುವದರಿಂದ ನಮ್ಮಲ್ಲಿ ಒಂದು ಪ್ರಕಾರದ ಭಯ ಉಂಟಾಗಬಹುದು. ಇದರಿಂದ ಪಾಪಮಾಡುವದಕ್ಕೆ ಅಂಜಬಹುದು, ಮತ್ತು ಪುಣ್ಯ ಮಾಡಲಿಕ್ಕೆ ಪ್ರೋತ್ಸಾಹನ ದೊರೆಯಬಹುದು. ಆದರೆ ಈ ಪ್ರಕಾರ ಭಯ-ವಶರಾಗಿ ಮಾಡಿದ ಪುಣ್ಯವು ಸಾಮಾನ್ಯವಾಗಿ ಪುಣ್ಯವಾಗಿ ಉಳಿಯಲಾರದು. ಪುಣ್ಯ ಮಾಡುವದಾದರೆ ಪುಣ್ಯದ ಸಲುವಾಗಿಯೇ ಮಾಡಬೇಕು. ಫಲಕ್ಕಾಗಿ ಅಲ್ಲ. ಈ ಪ್ರಕಾರ ಅನೇಕ ವಿಚಾರಗಳನ್ನು ಮಾಡುತ್ತ ಮಾಡುತ್ತ ಒಂದು ದಿವಸ ಹೀಗೆ ಹೊಳೆಯಿತು: ಈಶ್ವರನು ಸತ್ಯನಿದ್ದಾನೆಂದು ಹೇಳುವದೂ ಅಪೂರ್ಣ ವಾಕ್ಯವೇ ಎಂದು. ಸತ್ಯವೇ ಈಶ್ವರನೆಂದು ಹೇಳುವದು ಮನುಷ್ಯನ ಮಾತು ನಿಲುಕುವವರೆಗೆ ಪೂರ್ಣ ವಾಕ್ಯವೆನಿಸುವದು. ಸತ್ಯ ಶಬ್ದದ ಧಾತ್ವರ್ಥವನ್ನು ವಿಚಾರಮಾಡಿದರೂ ಇದೇ ಪರಿಣಾಮ ದೊರಕುತ್ತದೆ. ಸತ್ಯ 'ಸತ್' ಧಾತುವಿನಿಂದ ಹೊರಟಿದೆ. ಮತ್ತು ಸತ್ ಇದರ ಅರ್ಥ ಮೂರೂ ಕಾಲಗಳಲ್ಲಿಯೂ ಇರುವಂತಹದು. ಮೂರು ಕಾಲಗಳಲ್ಲಿ ಇರುವಂಥಹದು ಸತ್ಯವೇ ಆಗಿದೆ. ಮತ್ತು ಅದರ ಹೊರತು ಬೇರೆ ಏನೂ ಇರುವದಿಲ್ಲ. ಆದರೆ ಸತ್ಯವನ್ನೇ ಈಶ್ವರನೆಂದು ಕಾಣುವದರಲ್ಲಿ ಶ್ರದ್ಧೆಯು ಸ್ವಲ್ಪವೂ ಕಡಿಮೆಯಾಗಬಾರದು. ನನ್ನ ದೃಷ್ಟಿಯಿಂದ ನೋಡಿದರೆ ಕಡಿಮೆ ಯಾಗುವದರ ಬದಲು ಹೆಚ್ಚಾಗಬೇಕು. ನನ್ನ ಅನುಭವವಂತೂ ಹೀಗಿದೆ. ಸತ್ಯವನ್ನು ಪರಮೇಶ್ವರನೆಂದು ತಿಳಿಯುವದರಿಂದ ಅನೇಕ ಸಂಸಾರಗಳಿಂದ ಪಾರಾಗುತ್ತೇವೆ. ಚಮತ್ಕೃತಿಗಳನ್ನು ನೋಡುವ ಅಥವಾ ಕೇಳುವ ಇಚ್ಛೆ ಉಳಿಯುವದಿಲ್ಲ. ಈಶ್ವರ ದರ್ಶನದ ಅರ್ಥ ತಿಳಿದುಕೊಳ್ಳುವದು ಕಠಿಣವಾಗಬಲ್ಲದು. ಆದರೆ ಸತ್ಯದರ್ಶನದ

ಅರ್ಥ ತಿಳಿದುಕೊಳ್ಳುವದರಲ್ಲಿ ತೊಂದರೆಯೇ ಇಲ್ಲ. ಸತ್ಯದರ್ಶನವು ಮೂಲದಲ್ಲಿಯೇ ಕಠಿಣವಾಗಿರಬಹುದು, ಕಠಿಣವಿದ್ದೇ ಇದೆ ; ಆದರೆ ಸತ್ಯದ ಸಮೀಪಕ್ಕೆ ಹೋದ ಹೋದಂತೆ ನಾವು ಈ ಸತ್ಯರೂಪೀ ಈಶ್ವರನ ದರ್ಶನವನ್ನು ಮಾಡಹತ್ತುತ್ತೇವೆ. ಇದರಿಂದ ಪೂರ್ಣದರ್ಶನದ ಆಶೆಯು ಹೆಚ್ಚಾಗುತ್ತದೆ ಮತ್ತು ಶ್ರದ್ಧೆಯೂ ಹೆಚ್ಚುತ್ತದೆ.

ಇವತ್ತು ಲಕ್ಷ್ಮೀದಾಸಭಾಯಿಯವರು ಬಾಪೂ ಅವರ ಸೂಚನೆಗಳ ಹಾಗೂ ಸುಧಾರಣೆಗಳ ಮೇರೆಗೆ ಮಾಡಿದ ರಾಟಿಯನ್ನು ಕಳಿಸಿದರು. ಈ ವಿಚಾರದಲ್ಲಿಯೂ ಬಾಪೂ ಹೇಳಿದರು : " ಇನ್ನೂ ಇಂತಿಂತಹ ಸುಧಾರಣೆಗಳಾಗಬಲ್ಲವು. " ಲಕ್ಷ್ಮೀದಾಸರು ಕಾತಿಯ ಹುರಿಯ ಕಡಗಣಿಗಳ (ಚಿಲ್ಲು) ಪಕ್ಷಪಾತಿಗಳಾಗಿದ್ದರೆ, ಬಾಪೂ ನೂಲಿನ ದಾರದ ಕಡಗಣಿಯ ಪಕ್ಷಪಾತಿಗಳಾಗಿದ್ದಾರೆ. ಕಾತಿಯಿಂದ ಕರ್ಕಶವಾದ ಶಬ್ದ ಹೊರಡುತ್ತದೆ. ನಾನು ಹೊಸ ರಾಟಿಯಮೇಲೆ ನೂಲಲಿಕ್ಕೆ ಕುಳಿತೆ. ಆದರಿಂದ ಶಬ್ದವಾಗಹತ್ತಿದ ಕೂಡಲೇ ಬಾಪೂ ಕರಳು ಕತ್ತರಿಸುತ್ತಿವೆಯೊ ಎಂಬುವವರಂತೆ ಮೋರೆ ಮಾಡಿ ಹೇಳತೊಡಗಿದರು : " ಯಾವನೊಬ್ಬ ಕಲಾಕಾರನಿಗೆ ತನ್ನ ಕೃತಿಯೊಳಗಿಂದ ಅಪಸ್ವರ ಹೊರಡುವದನ್ನು ಕೇಳಿ ಆಗುವಂತೆ ನನಗೆ ದುಃಖವಾಗಹತ್ತಿದೆ." ಇದರ ಗೊಂಬೆಯಲ್ಲಿ ಸ್ವತಃ ಕೆಲವೊಂದು ಬದಲಾವಣೆಗಳನ್ನು ಸೂಚಿಸಿ ಇಲ್ಲಿಯ ಬಡಿಗನಿಂದ ಹೊಸ ಗೊಂಬೆಯನ್ನು ತಯಾರಿಸಿದರು. ಇದರ ಪರಿಣಾಮವು ಎಡಗೈಯಿಂದ ಕೂಡ ನೂಲಲು ಚನ್ನಾಗಿ ಬಂತು. ಬಾಪೂ ಹುಟ್ಟುತ್ತಲೇ ಯಂತ್ರಶಾಸ್ತ್ರಿಯೂ ಇದ್ದಾರೆ, ವೈದ್ಯರೂ ಇದ್ದಾರೆ ಎಂಬುದನ್ನು ಬಹಳಸಾರೆ ನೋಡಬಹುದು. ವಲ್ಲಭಭಾಯಿಯವರ ಸಲುವಾಗಿ ಗಂಧಕದ ಪಾಕವು ಬಂತು. ಬಾಪೂ ಕೂಡಲೇ ಅದರ ಪೃಥಕ್ಕರಣ ಮಾಡಿದರು ವಲ್ಲಭಭಾಯಿ : " ನಿಮಗೆ ಇದೆಲ್ಲ ಹೇಗೆ ಗೊತ್ತಾಗುತ್ತದೆ ? " ಬಾಪೂ: " ನಾನೊಂದು ವರ್ಷ ಕಂಪಾವುಂಡರನು ಕೂಡ ಇದ್ದೆನಲ್ಲವೆ ? "

೧೯-೪-'೩೨

*　　　*　　　*

ಸುರೇಂದ್ರಜೀಯವರು ಮೊದಲು ಬ್ರಹ್ಮಚರ್ಯದ ವಿಷಯಕ್ಕೆ ಪತ್ರ ಬರೆದಿದ್ದರು. ಅದಕ್ಕೆ ಬಾಪೂ ಉತ್ತರವನ್ನು ಕೊಟ್ಟಿದ್ದರು. ಸುರೇಂದ್ರಜೀಯವರು ಮತ್ತೆ ಸಂದೇಹಗಳನ್ನು ಕಳುಹಿಸಿದರು. ಅವುಗಳಿಗೆ ಉತ್ತರವೆಂದು ಬಾಪೂ ಈ ಮಹತ್ವದ ಉತ್ತರವನ್ನು ಬರೆಯಿಸಿದರು :

" ನಿಮ್ಮ ಪತ್ರದ ಉತ್ತರವನ್ನು ಕೊಡುವ ಅವಸರವಿದ್ದಿಲ್ಲ. ಕೈದಿಯ ದೃಷ್ಟಿಯಿಂದ ಮಿತಿಯನ್ನು ಕಾಯ್ದುಕೊಳ್ಳುವದು ಒಳಿತೆಂದು ವಿಚಾರಮಾಡಿ ಉತ್ತರವನ್ನು

ತಡೆಹಿಡಿದಿದ್ದೆನು. ಮೊದಲಿನ (ವಿಲಾಯತಿಯ) ಪತ್ರದಲ್ಲಿ ನೀವು ನನಗೆ ಬರೆದದ್ದನ್ನು ನಾನು ಪೂರಾ ಮರೆತಿದ್ದೇನೆ. ನನ್ನ ವಿಷಯವಾಗಿ ಮನಸ್ಸಿನಲ್ಲಿ ಬಂದದ್ದನ್ನು ಬರೆಯುವದರಲ್ಲಿ ಸಂಕೋಚಪಟ್ಟುಕೊಳ್ಳಲೇಬಾರದು; ನಿಜವಾಗಿ ಸಂಕೋಚಪಟ್ಟುಕೊಳ್ಳುವದು ದೋಷವೆಂದೇ ತಿಳಿಯಬೇಕು. ಸಂಬಂಧಿಕರೂ ಜೊತೆಗಾರರೂ ನನ್ನ ಯಾವುದೇ ಗುಣದೋಷಗಳನ್ನು ಮನಸ್ಸಿನಲ್ಲಿ ಎಣಿಸುತ್ತಿದ್ದರೆ ಅವನ್ನು ನನ್ನ ಎದುರಿಗೆ ಇಡುವದರಿಂದ ನನಗೆ ಕಲಿಯಲಿಕ್ಕೆ ಸಿಗುವದು; ಯಾಕೆಂದರೆ ಈ ದೋಷ ಎಣಿಸುವದರಲ್ಲಿ ವೈರಭಾವವಂತೂ ಇರುವದೇ ಇಲ್ಲ. ಮತ್ತು ಪ್ರಿಯಜನರ ಸಲುವಾಗಿ ಮನಸ್ಸಿನಲ್ಲಿ ಏನಾದರೂ ಬಂದರೆ ಅದನ್ನು ಕೂಡಲೇ ಹೇಳಿಬಿಡುವದು ಪ್ರೇಮ ಹಾಗು ಮಿತ್ರತೆಯ ಲಕ್ಷಣವಾಗಿದೆ. ಪ್ರೇಮವು ಬಾಯಿಬಿಟ್ಟು ಹೇಳಲಿಕ್ಕೆ ಸಂಕೋಚವೆನಿಸುತ್ತಿದ್ದರೆ ಅದು ಅಪೂರ್ಣವಾಗಿರುತ್ತದೆ.

'ಎಲ್ಲ ಪರಿಸ್ಥಿತಿಯಲ್ಲಿ ಸ್ಥಿರವಾಗಿ ಉಳಿಯುವಂತಹದೇ ಬ್ರಹ್ಮಚರ್ಯವು; 'ಎಲ್ಲ ಪರಿಸ್ಥಿತಿಗಳ' ಪೂರ್ಣ ಅರ್ಥಮಾಡಬೇಕು. ಯಾವದೇ ಲೋಭ ಅಥವಾ ಪ್ರಲೋಭನವು ಎದುರು ಇದ್ದಾಗ್ಯೂ ಯಾವದು ಗಟ್ಟಿಗೊಂಡು ನಿಲ್ಲಬಹುದೊ ಅದು ಬ್ರಹ್ಮಚರ್ಯವು. ಯಾರಾದರೂ ಕಲ್ಲಿನ ಮನುಷ್ಯನನ್ನು ಮಾಡಿದ್ದರೆ ಮತ್ತು ಅದರ ಹತ್ತರ ಒಬ್ಬ ರೂಪವತಿ ಯುವತಿಯು ಹೋದರೆ ಆ ಕಲ್ಲಿನ ಮೂರ್ತಿಯ ಮೇಲೆ ಅದರ ಪರಿಣಾಮವಾಗುವದಿಲ್ಲ. ಇದೇ ಪ್ರಕಾರ ಯಾರು ಕಲ್ಲಿನಂತಹ ಸ್ಥಿತಿಯಲ್ಲಿರಬಲ್ಲರೊ ಅವರು ಬ್ರಹ್ಮಚಾರಿಗಳು. ಆದರೆ ಕಲ್ಲಿನ ಮೂರ್ತಿಯು ಕಿವಿಗಳನ್ನಾಗಲಿ ಕಣ್ಣನ್ನಾಗಲಿ ಉಪಯೋಗಿಸುವದಿಲ್ಲ, ಅದರಂತೆ ಪುರುಷನು ಸಹ ಲಾಲಸೆಗಳನ್ನು ಹುಡುಕುತ್ತ ಹೋಗಬಾರದು. ಅವನು ಬ್ರಹ್ಮಚಾರಿಯೇ ಅಲ್ಲ. ಆದ್ದರಿಂದಲೇ ಯಾವುದಕ್ಕೆ ವಿಕಾರದ ಚಿನ್ಹವೆಂದು ತಿಳಿಯಬಹುದೊ ಅಂಥ ಒಂದು ಕೃತ್ಯವು ಕೂಡ ವ್ಯಕ್ತಿಯ ಕಡೆಯಿಂದ ಆಗಬಾರದು. ಆದರೆ ನಿಮ್ಮ ಮನಸ್ಸಿನಲ್ಲಿಯ ದೊಡ್ಡ ಪ್ರಶ್ನೆಯು ಇಂತಿದೆ: ಸ್ತ್ರೀಜಾತಿಯ ದರ್ಶನ ಮತ್ತು ಅವಳ ಸಹವಾಸವು ಸಂಯಮಕ್ಕೆ ವಿಘಾತಕವೆಂದು ಅನುಭವದಿಂದ ಕಂಡುಬಂದಿದೆ. ಆದುದರಿಂದ ಅದು ತ್ಯಾಜ್ಯವಿದೆ ಎಂಬ ವಿಚಾರದಲ್ಲಿ ನನಗೆ ದೋಷ ಕಾಣಿಸುತ್ತದೆ.

"ಯಾವ ಸಹವಾಸವು ಸ್ವಾಭಾವಿಕವಾಗಿರುವದೊ, ಯಾವುದರ ಮೂಲವು ಸೇವೆಯಾಗಿರುವದೊ ಅದನ್ನು ತ್ಯಾಗ ಮಾಡಿ ಪಾಲಿಸಲ್ಪಡುವಂಥ ಸಂಯಮವು ಸಂಯಮವೂ ಅಲ್ಲ, ಬ್ರಹ್ಮಚರ್ಯವೂ ಅಲ್ಲ. ಅದು ವೈರಾಗ್ಯವಿಲ್ಲದ ತ್ಯಾಗವಾಗಿದೆ. ಆದುದರಿಂದ ಈ ಸಹವಾಸವು ಸಂಧಿ ದೊರೆತಾಗ ಬೆಳೆಯುವದು. 'ಪರ'ನ ದರ್ಶನವಿಲ್ಲದೆ ವಿಷಯದ ನಿವೃತ್ತಿ ಆಗುವದೇ ಇಲ್ಲವೆಂಬುದು ವೇದವಾಕ್ಯ. ಆದರೆ ಇದಕ್ಕೆ ವಿರೋಧವಾಗಿ ವಿಷಯಗಳ ನಿವೃತ್ತಿಯಿಲ್ಲದೆ 'ಪರ'ನ ದರ್ಶನವಾಗಲಾರದು ಎಂಬ ಮಾತು ಅಷ್ಟೇ ಸತ್ಯವಾಗಿದೆ. ಅಂದರೆ ಎರಡೂ ವಿಷಯಗಳು ಜೊತೆಗೊಂಡೇ ನಡೆಯು

ತ್ತವೆ. ಕೊನೆಯ ವಾಕ್ಯವನ್ನು ಸ್ವಲ್ಪ ತಿಳಿದುಕೊಳ್ಳುವದು ಅವಶ್ಯವಿದೆ. ರಸವಂತೂ 'ಪರ'ನ ದರ್ಶನವಾದ ಮೇಲೆಯೇ ಇಲ್ಲದಂತಾಗುತ್ತದೆ. ಅಂದರೆ ವಿಷಯಗಳು ಶಾಂತ ವಾದ ಮೇಲೆ ಕೂಡ ಒಳಗೊಳಗೆ ರಸವು ಉಳಿದುಕೊಂಡರೆ, 'ಪರ'ನ ದರ್ಶನವಾಗದೆ ಇದ್ದಲ್ಲಿ ವಿಷಯವಾಸನೆಗಳು ಜಾಗ್ರತವಾಗುವ ಸಂಭವವಿರುತ್ತದೆ. ಸಾಕ್ಷಾತ್ಕಾರವಾದ ಮೇಲೆ ವಿಷಯವಾಸನೆಯೆಂಬುದೇ ಅಸಂಭವವಾಗುತ್ತದೆ. ಅಂದರೆ ಪುರುಷನು ನರಜಾತಿಯಾಗಿ ಉಳಿಯದೆ ನಪುಂಸಕನಾಗುತ್ತಾನೆ. ಅವನು ಒಂದು ವ್ಯಕ್ತಿಯಾಗಿ ಉಳಿಯದೆ ಶೂನ್ಯನಾಗಿ ಉಳಿಯುತ್ತಾನೆ ಎಂದು ಇದರ ಅರ್ಥವಾಗುವದು. ಎರಡನೇ ಶಬ್ದದಲ್ಲಿ ಹೇಳುವದಾದರೆ ಅವನು ಈಶ್ವರನಲ್ಲಿ ಲೀನನಾಗುತ್ತಾನೆ. ಎಲ್ಲಿ ವಿಷಯ ವಾಸನೆ ಇಲ್ಲವೋ ಅಲ್ಲಿ ರಸವಾದರೇನು ವಿಷಯವಾದರೇನು? ಈ ಪ್ರಕಾರ ಇದು ಬುದ್ಧಿಗೆ ಅತ್ಯಂತ ಸರಿಯಾಗಿ ತೋರುತ್ತದೆ. ಇಲ್ಲಿ 'ಪರ' ಮತ್ತು ಎಲ್ಲಿ ಎಲ್ಲಿ ಈಶ್ವರ, ಬ್ರಹ್ಮ, ಪರಬ್ರಹ್ಮ ಮುಂತಾದ ಶಬ್ದಗಳು ಬರುತ್ತವೆಯೊ ಅಲ್ಲಿ ಅಲ್ಲಿ 'ಸತ್ಯ' ಶಬ್ದ ಉಪಯೋಗಿಸಿ ಅರ್ಥಮಾಡುವದರಿಂದ ಮತ್ತು ತಿಳಿದುಕೊಳ್ಳುವದರಿಂದ ವಸ್ತುಸ್ಥಿತಿಯು ಸ್ಪಷ್ಟವಾಗುವದು ಮತ್ತು ಸಾಕ್ಷಾತ್ಕಾರದ ಅರ್ಥವೂ ಸುಲಭವಾಗಿ ತಿಳಿಯುವದು. ಇದು ಆತ್ಮವಂಚನೆಯ ಆಟವಲ್ಲ. ಆಶ್ರಮದಲ್ಲಿ ಯಾರು ಕುಟುಂಬ ಭಾವನೆಯ ಹೆಸರಿನಿಂದ ಒಳಗೆ ವಿಷಯಗಳ ಸೇವನೆಯನ್ನು ಮಾಡುತ್ತಿರಬಹುದೊ ಅವರು ಮೂರನೆಯ ಅಧ್ಯಾಯದಲ್ಲಿ ಹೇಳಿದಂತೆ ಮಿಥ್ಯಾಚಾರಿಗಳಾಗಿದ್ದಾರೆ. ನಾವು ಇಲ್ಲಿ ಸತ್ಯಾಚಾರಿಗಳನ್ನು ಕುರಿತು ಮಾತಾಡುತ್ತಿದ್ದೇವೆ. ಮತ್ತು ಸತ್ಯಾಚಾರಿಗಳು ಏನು ಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ಆದುದರಿಂದ ಆಶ್ರಮದಲ್ಲಿ ಒಂದು ವೇಳೆ ೧೦೦ ಕ್ಕೆ ೯೯ ಜನರು ಕುಟುಂಬ ಭಾವನೆಯ ಸೋಗುಹಾಕಿ ವಿಷಯ ಗಳ ಸೇವನೆ ಮಾಡುತ್ತಿದ್ದರೂ ೧೦೦ ಕ್ಕೆ ಒಬ್ಬನಾದರೂ ಒಳಗೂ ಹೊರಗೂ ಕೇವಲ ಕುಟುಂಬ ಭಾವನೆಯ ಸೇವೆಯನ್ನೇ ಮಾಡುತ್ತಿದ್ದರೆ ಇದರಿಂದ ಆಶ್ರಮವು ಕೃತಾರ್ಥ ವಾಗುವದು. ಮತ್ತು ಇದರಿಂದ ಆಶ್ರಮದ ಸಲುವಾಗಿ ಗೊತ್ತುಮಾಡಿದ ಆಚರ- ಣೆಯು ಉಚಿತವೆಂದು ತಿಳಿಯಲಾಗುವದು. ಆದುದರಿಂದ ಇನ್ನೊಬ್ಬರು ಏನು ಮಾಡುತ್ತಾರೆಂಬುದನ್ನು ನಾವು ಯೋಚಿಸಬೇಕಾಗಿಲ್ಲ. ನಮ್ಮಿಂದ ಯಾವುದು ಸಾಧ್ಯವಾಗಬಲ್ಲದೆಂಬುದನ್ನೇ ನಾವು ವಿಚಾರಮಾಡಬೇಕಾಗಿದೆ. ಇದರೊಡನೆಯೇ ಇಷ್ಟಂತೂ ಸತ್ಯವಿದೆ: ಯಾರದಾದರೂ ಅಂತಸ್ತಿನ ಮನೆ ನೋಡಿ ನಮ್ಮ ಗುಡಿಸಲವನ್ನು ಕಿತ್ತೊಗೆಯಬಾರದು. ಯಾರಾದರೂ ಕುಟುಂಬಭಾವನೆಯಿಂದ ಇರಬಲ್ಲೆವೆಂದು ಧೈರ್ಯವಾಗಿ ಹೇಳುತ್ತಿದ್ದರೆ, ನಮಗೆ ನಮ್ಮಲ್ಲಿ ಅಂತಹ ಶಕ್ತಿಯು ಇಲ್ಲವೆಂದು ಕಂಡುಬಂದರೆ ಆತನ ಧೈರ್ಯವನ್ನು ಒಪ್ಪಿಕೊಳ್ಳೋಣ. ಆದರೆ ನಾವು ಮಾತ್ರ ಕುಟುಂಬದ ಸ್ಪರ್ಶದಿಂದ ದೂರವಾಗಿ ಉಳಿಯುವಾ. ಆಶ್ರಮದಲ್ಲಿ ನಾವು ಹೊಸತೂ ಭಯಂಕರವೂ ಆದ ಒಂದು ಪ್ರಯೋಗ

ವನ್ನು ಮಾಡುತ್ತಿದ್ದೇವೆ. ಈ ಪ್ರಯೋಗದಲ್ಲಿ ಸತ್ಯಕ್ಕೆ ಅಂಟಿಕೊಂಡು ಯಾರು ಕೂಡಿಕೊಂಡು ಹೋಗಬಹುದೊ ಕೂಡಿಕೊಂಡು ಹೋಗಲಿ. ಯಾರಿಂದ ಕೂಡಿಕೊಂಡು ಹೋಗುವದು ಆಗುವದಿಲ್ಲವೊ ಅವರು ದೂರವಿರಲಿ. ನಾವು ಆಶ್ರಮದಲ್ಲಿ ಎಲ್ಲರೂ ಎಲ್ಲ ರೀತಿಯಿಂದ ಸ್ತ್ರೀಮಾತ್ರರ ಸಂಗಡ ಕೂಡಿಕೊಂಡು ಹೋಗಬೇಕೆಂಬ ಧರ್ಮವನ್ನು ರಚಿಸಿಲ್ಲ. ಈ ಪ್ರಕಾರ ಕೂಡಿಕೊಂಡು ಹೋಗುವದಕ್ಕೆ ನಾವು ಕೇವಲ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಧರ್ಮದ ರಕ್ಷಣೆ ಮಾಡುತ್ತ ಯಾರು ಈ ಸ್ವಾತಂತ್ರ್ಯದ ಉಪಯೋಗ ಮಾಡಿಕೊಳ್ಳಬಹುದೊ ಮಾಡಿಕೊಳ್ಳಲಿ. ಆದರೆ ಈ ಸ್ವಾತಂತ್ರ್ಯವನ್ನು ಅನುಭವಿಸುವಾಗ ಯಾವನಿಗೆ ಧರ್ಮವನ್ನೇ ಕಳೆದುಕೊಳ್ಳುವ ಭೀತಿಯಿದೆಯೊ ಆತನು ಆಶ್ರಮದಲ್ಲಿದ್ದಾಗ್ಯೂ—ಅದರಿಂದ ನೂರು ಗಾವುದ ದೂರವಿರಬಹುದು. ಒಬ್ಬ ಆಶ್ರಮವಾಸಿಯು . . . ಗೆ ತನ್ನ ಮಗಳೆಂದು ಭಾವಿಸುತ್ತಾನೆಂದ ಮೇಲೆ ಆತನು ಅವಳೊಂದಿಗೆ ಅದೇ ಪ್ರಕಾರದ ವ್ಯವಹಾರವನ್ನು ಇರಿಸಬೇಕು. ಆದರೆ ಎರಡನೇ ಆಶ್ರಮವಾಸಿಗೆ ಇಚ್ಛೆಯಿದ್ದಾಗ್ಯೂ ಮನಸ್ಸಿನಲ್ಲಿ ಈ ಪ್ರಕಾರದ ವಿಚಾರವನ್ನಿಡುವದು ಸಾಧ್ಯವಾಗದಿದ್ದರೆ ಅವನು . . . ಳ ಸಹವಾಸವನ್ನು ತ್ಯಾಗ ಮಾಡುವದು ಅವನ ಧರ್ಮವಾಗಿದೆ. ನಾನು ಇಲ್ಲಿ ಮೃತ ದೇಹದ ದೃಷ್ಟಾಂತವನ್ನು ಕೊಟ್ಟಿದ್ದೇನೆ. ಇಂಥ ದೃಷ್ಟಾಂತಗಳನ್ನು ತೆಗೆದುಕೊಳ್ಳುವದರಲ್ಲಿ ಕೂಡ ದೋಷ ಕಂಡುಬಂದರೆ ಈ ಇಬ್ಬರಿಗೆ ಬದಲಾಗಿ 'ಅ' 'ಬ' ಎಂದು ತಿಳಿದುಕೊಳ್ಳಬಹುದು. 'ಕ' ನಮನಸ್ಸು 'ಬ' ನ ವಿಷಯದಲ್ಲಿ 'ಅ' ನಂತೆ ಇರಲು ಶಕ್ಯವಾಗದಿದ್ದರೆ ಆಶ್ರಮದಲ್ಲಿ 'ಕ' ನು ತನ್ನ ಸಲುವಾಗಿ 'ಬ' ನನ್ನು ಮುಟ್ಟದಿರುವದೇ ಧರ್ಮವಾಗಿದೆ. ನನಗೆ ಗೊತ್ತಾದಲ್ಲೆಲ್ಲ ಈ ಧರ್ಮದ ಆಚರಣೆಯನ್ನು ಮಾಡಲಿಕ್ಕೆ ಹೆಚ್ಚಿನ ಪ್ರಯತ್ನ ಮಾಡಿದ್ದೇನೆ.

"ಕುರ್ಸಿಯ ಮಾತು ಮರೆಯಲಿಕ್ಕೆ ಯೋಗ್ಯವಾದುದಾಗಿದೆ. ಇದಕ್ಕೆ ಮಹತ್ವ ಕೊಡುವ ಆವಶ್ಯಕತೆಯಿಲ್ಲ. ನೀವು 'ಕಲ್ಯಾಣಕೃತ್' ಇದ್ದೀರಿ. ಆದುದರಿಂದ ಒಟ್ಟಿನ ಮೇಲೆ ಎಲ್ಲವೂ ಒಳಿತೇ ಆಗುವದು. ಬುದ್ಧಿಯ ಉಪಯೋಗವು ಆಗುತ್ತಲೇ ಇರುವದು. ಬುದ್ಧಿಯನ್ನು ನಿರೋಧಗೊಳಿಸುವ ಆವಶ್ಯಕತೆ ಸಲ್ಪ ಕೂಡ ಇಲ್ಲ. ತಪ್ಪನ್ನು ಮಾಡುತ್ತ ಮಾಡುತ್ತ ಸತ್ಯದ ಪ್ರಯೋಗಗಳೂ ಆಗಬಹುದು. ಬುದ್ಧಿಯ ಎಲ್ಲ ಪ್ರಯೋಗಗಳೂ ತಪ್ಪೇ ಹೊರಡುತ್ತವೆಂಬ ನಿಯಮವಿಲ್ಲ. ನೂರರಲ್ಲಿ ಐದು ಪ್ರಯೋಗಗಳು ತಪ್ಪೆಂದು ಸಿದ್ಧವಾದರೆ, ಅದರಿಂದ ಆಯಿತೇನು? ನಮಗೆ ತಪ್ಪು ಮಾಡುವ ಅಧಿಕಾರವಿದೆ. ಎಲ್ಲಿ ತಪ್ಪಾಗುತ್ತಿದೆಯೋ ಅಲ್ಲಿಂದ ಮತ್ತೆ ಎಣಿಸೋಣ, ಮತ್ತು ಮುಂದುವರಿಯೋಣ.

"ಲಂಡನದಲ್ಲಿ ಯಾವ ಪ್ರಸಂಗದಲ್ಲಿ ಮಾತಾಡಿದ್ದೆನೆಂಬುದು ನನಗೆ ನೆನಪಿಲ್ಲ. ಆದರೆ ವ್ರತ-ಪಾಲನೆ ಮಾಡುವವನು ಸ್ತ್ರೀಸಮಾಜದ ಸೇವೆಯನ್ನು ಹೆಚ್ಚಾಗಿ ಮಾಡ

ಬಲ್ಲನೆಂಬ ವಾಕ್ಯವೇನೊ ಸತ್ಯವಾದದ್ದೇ ಆಗಿದೆ. ಯಾವ ಮಟ್ಟದವರೆಗೆ ನಾನು ಆದರಲ್ಲಿ ಸಫಲವಾಗಿರುವೆನೊ ಆ ಮಟ್ಟದವರೆಗೆ ಸೇವೆಯು ಹೆಚ್ಚೇ ಆಗಿರುವದೆಂಬ ಮಾತು ನಿಸ್ಸಂದೇಹವೆಂದು ತಿಳಿಯಲೇಬೇಕು."

*    *    *

'ಕ' ವರ್ಗದವರಿಗೆ ನೋಟಬುಕ್ಕು ಮುಂತಾದವುಗಳನ್ನು ಕೊಡುವ ವಿಷಯ ವಲ್ಲಿ ಮಾತಾಡುತ್ತ ಬಾಪೂ ಹೇಳಿದರು: "ನಾನಂತೂ ಎಲ್ಲರಿಗೂ ಕೊಡುವೆನು. ಆ ಮೇಲೆ ಯಾರು ಅದರ ದುರುಪಯೋಗ ಮಾಡುತ್ತಾರೆಂಬುದನ್ನು ನೋಡುವೆನು. ಆದರೆ ಮೊದಲು ಸದುಪಯೋಗ ಯಾರು ಮಾಡುವರೆಂಬ ವಿಚಾರ ಮಾಡುವೆನು ಇಂಗ್ಲಂಡದಲ್ಲಿ ಮಹದೇವ ಮತ್ತು ದೇವಿದಾಸರು ಅಲ್ಲಿಯ ಜೇಲು ನೋಡಿಬಂದಿದ್ದರು. ಅಲ್ಲಿ ಕೈದಿಗಳಿಗೆ ಇಲ್ಲಿ ಸಿಗದಂಥ ಎಷ್ಟೋ ಸಾಮಾನ್ಯ ಸವಲತ್ತುಗಳು ಸಿಗುತ್ತವೆಂದು ಅವರು ಹೇಳುತ್ತಿದ್ದರು. ನಾವೂ ಈ ಕೈದಿಗಳೂ ಒಂದೇ ಎಂಬ ಮಾತನ್ನು ನಾವು ಮರೆಯುತ್ತೇವೆ. ನನ್ನೆದುರಿಗೆ ಕ್ವೀನ ಹೇಳುತ್ತಿದ್ದ: "ಈ ಜನರಲ್ಲಿ ಮತ್ತು ನಮ್ಮಲ್ಲಿ ವ್ಯತ್ಯಾಸವಿಷ್ಟೇ, ಇವರು ಹಿಡಿಯಲ್ಪಟ್ಟಿದ್ದಾರೆ ನಾವು ಹಿಡಿಯಲ್ಪಟ್ಟಿಲ್ಲ. ಕೊಲೆಗಾರನು ಕೊಲೆಮಾಡಿ ಬಿಡುತ್ತಾನೆ, ನಾವು ಎಷ್ಟೋ ಜನರ ಕೊಲೆಯನ್ನು ಮನ ದಲ್ಲಿಯೇ ಮಾಡಲಿಚ್ಛಿಸುತ್ತಿರಬಹುದು. ಆದರೆ ಅಂಜಿಕೆಯೊ ಇನ್ನಾವ ಭಾವನೆಯೊ ಕಾರಣವಾಗಿ ಕೊಲೆಯನ್ನು ಮಾಡಿರಲಿಕ್ಕಿಲ್ಲ. ಇದೇ ವ್ಯತ್ಯಾಸ." ಸುಪರಿಂಟೆಂಡೆಂಟ ಸಾಹೇಬರಿಗೆ ಈ ಮಾತಿನ ಮರ್ಮವನ್ನು ತಿಳಿಯುವದಾಗಲಿಲ್ಲ. ಅವರು ಅಂದರು: "ಕ್ವೀನರು ನನ್ನೆದುರು ಇಂಥ ಮಾತನ್ನು ಎಂದೂ ಹೇಳಲಿಲ್ಲ. ನಿಮ್ಮ ಮುಂದೆ ಹೇಳಿದ್ದರೆ ಭಾವಾವೇಶದಲ್ಲಿ ಬಂದು ಹೇಳಿರಬಹುದು." ಈ ಮಾತನ್ನು ಒಪ್ಪಿ ಕೊಳ್ಳುವದರಿಂದ ಏನೊ ಕಡಿಮೆತನ ಬರುತ್ತದೆಂದು ಈ ಮನುಷ್ಯನಿಗೆ ಅನಿಸಿತು! ತೀವ್ರಬುದ್ಧಿಯ ಕೊರತೆ ಈತನಲ್ಲಿದ್ದಷ್ಟು ನಾನು ಇನ್ನೆಲ್ಲಿಯೂ ನೋಡಿಲ್ಲ.

ಕೊನೆಗೆ ನೋಯಿಸುವ ಹಲ್ಲನ್ನು ಇವತ್ತು ಕಿತ್ತಿಸಬೇಕಾಯಿತು. ವಲ್ಲಭಭಾಯಿ ಯವರ ಟೀಕೆಯು ಸರಿಯಾಗಿತ್ತು. ೪೦ ವರ್ಷದ ವಯಸ್ಸಿನಲ್ಲಿಯೆ ಹಲ್ಲುಬೀಳು ವದೆಂದರೇನು? ಕರುಣಾಜನಕ ಪರಿಸ್ಥಿತಿಯಿರುತ್ತಿದೆಯೆಂಬು

೨೦-೪-'೩೨ ದರಲ್ಲಿ ಸಂದೇಹವಿಲ್ಲ. ನನ್ನ ತಂದೆಯು ಸಹ ಇದೇ ವಯಸ್ಸಿ ನಲ್ಲಿ ಹಲ್ಲಿನ ನೋವಿನಿಂದ ಪೀಡಿತರಾಗುತ್ತಿದ್ದರು ಮತ್ತು ಹಲ್ಲು ಗಳನ್ನು ಕಿತ್ತಿಸುತ್ತಿದ್ದರು ಎಂಬುದೂ ನನಗೆ ನೆನಪಿದೆ. ಮೇಜರ ಮೇಹತಾ ಸ್ವತಃ ಬಂದು ಕಿತ್ತಿತೆಗೆದರು. ಈ ಮನುಷ್ಯನ ವಿವೇಕಕ್ಕಾಗಿ ಬಾಪೂ ಮುಗ್ಧರಾಗಿದ್ದಾರೆ.

*    *    *

ಇವತ್ತು ಸಾಯಂಕಾಲ ತಿರುಗಾಡಿ ಬಂದು ಕಾಲನ್ನು ಒರಿಸುತ್ತ ಒರಿಸುತ್ತ

ಅಂದರು: “ ನಾವು ರೋಮ್ನ ವೆಟಿಕನದಲ್ಲಿ ನೋಡಿದ ಯೇಸುಕ್ರಿಸ್ತನ ಮೂರ್ತಿಯು ಕಣ್ಣ ಮುಂದಿನಿಂದ ಸರಿಯುವದೇ ಇಲ್ಲ. ಆದರ ಶರೀರದಮೇಲೆ ನಮ್ಮ ಅಶಿಕ್ಷಿತ ಹಳ್ಳಿಗರು ಸೊಂಟದ ಸುತ್ತುಮುತ್ತಲು ಸುತ್ತಿಕೊಳ್ಳುವರಲ್ಲ ಅಂತಹದೇ ಒಂದು ಬಟ್ಟೆಯ ತುಂಡು ಮಾತ್ರ ಇತ್ತು. ಇದರ ಹೊರತು ಮತ್ತೇನೂ ಇದ್ದಿಲ್ಲ! ಮತ್ತು ಆದರ ಕರುಣಾಭಾವವನ್ನಂತೂ ಬಣ್ಣಿಸಲಿಕ್ಕೆ ಬಾರದಂತಹದು.”

ವಲ್ಲಭಭಾಯಿಯವರು ‘ ಲೀಡರ ’ದಿಂದ ಒಂದು ಅವತರಣಿಕೆಯನ್ನು ಓದಿ ತೋರಿಸಿದರು. ಇದು ಎಡ್ವರ್ಡ ಟಾಮ್ಸನ್ನರು ಇಂಗ್ಲಂಡದ ‘ ಸ್ಪೆಕ್ಟೇಟರ ’ಕ್ಕೆ ಬರೆದ ಒಂದು ಪತ್ರವಿತ್ತು. ಈ ಪತ್ರದಲ್ಲಿ ಡಾಯರನ ಹೊಸದೇ ಆದ ಒಂದು ಸ್ಪಷ್ಟೀಕರಣ ಇದೆ. ಅದೇನಂದರೆ—ಆವರು ಮಾಯಿಲ್ಸ ಅಯರ್ವಿಂಗರ ಜೊತೆಗೆ ದಿಲ್ಲಿಯಲ್ಲಿ ಊಟಕ್ಕೆ ಕುಳಿತಾಗ ಡಾಯರನು ಜಾಲಿಯನ್‌ವಾಲಾದ ನಂತರ ಮಾತಾಡಿದ ಮಾತನ್ನು ಅಯರ್ವಿಂಗರು ಹೇಳಿದ್ದರು : ‘ ಹೊರಗೆ ಹೋಗಲಿಕ್ಕೆ ಬೇರೆ ಬಾಗಿಲು ಇರಲಿಕ್ಕಿಲ್ಲವೆಂಬುದು ನನಗೆ ಗೊತ್ತಿರಲಿಲ್ಲ. ಜನರು ಕುಳಿತುಕೊಂಡದ್ದರಿಂದ ಇವರು ದಂಗೆ ಮಾಡುವರೆಂದು ನನಗೆನಿಸಿತು. ಈ ಮಾತಿಗೆ ಆರು ತಿಂಗಳಾದರೂ ನನ್ನೆದುರಿನಿಂದ ಈ ದೃಶ್ಯವು ಮರೆಯಾಗಲೊಲ್ಲದು. ನನಗೆ ಒಂದು ದಿವಸ ಕೂಡ ನಿದ್ದೆ ಬಂದಿಲ್ಲ. ಹಂಟರ ಕಮಿಟಿಯ ಎದುರು ಕೊಟ್ಟ ಸಾಕ್ಷಿಯು ಎರಡನೆಯವರ ಪ್ರೇರಣೆಯಿಂದ ಹೇಳಿದ ಅಹಂಕಾರವಿತ್ತು.”

ಈ ಟಾಮ್ಸನ್ನನು ಇದೀಗ ‘ ಮ್ಯಾಂಚೆಸ್ಟರ ಗಾರ್ಡಿಯನ್ನಿ ’ನ ಇಲ್ಲಿಯ ಸುದ್ದಿಗಾರನಿದ್ದಾನೆ. ಇವನು ಕಾಂಗ್ರೆಸ್ಸಿನ ಮೇಲೆ ಸೌಮ್ಯ ಟೀಕೆಯನ್ನು ಮಾಡಿದ್ದಾನೆ. ‘ ಮಾಡರ್ನ ರಿವ್ಯೂ ’ದವನು ಇವನ ಸಮಾಚಾರವನ್ನು ಚನ್ನಾಗಿ ತೆಗೆದುಕೊಂಡಿದ್ದಾನೆ. ಈ ಮನುಷ್ಯನು ‘ ಢಾಲಿನ ಎರಡನೇ ಮಗ್ಗಲು ’ (Other side of the shield) ಮತ್ತು ‘ ಹಿಂದುಸ್ತಾನದ ಕಲ್ಯಾಣ ’ (Welfare to India) ಇವುಗಳ ಲೇಖಕನಾಗಿದ್ದಾನೆ. ಆಕ್ಸಫೋರ್ಡದಲ್ಲಿ ಇವನಲ್ಲಿಯೇ ಬಾಪೂರೊಂದಿಗೆ ಅಲ್ಲಿಯ ಪಂಡಿತರ ಭೆಟ್ಟಿಯಾಗಿತ್ತು. ವಲ್ಲಭಭಾಯಿ ಅಂದರು : “ ಈ ಮನುಷ್ಯನು ತೀರ ಸುಳ್ಳುಗಾರನಿದ್ದಾನೆಂದು ಅನಿಸುತ್ತದೆ. ಮಾಡರ್ನ ರಿವ್ಯೂದ ಅಭಿಪ್ರಾಯವಾದರೂ ಇದೇ ಇರಬಹುದು.” ಬಾಪೂ ಹೇಳಿದರು : “ ಇಲ್ಲ. ನಾನು ಇವನಿಗೆ ಸುಳ್ಳುಗಾರನೆಂದು ಹೇಳುವದಿಲ್ಲ. ಈತನ ‘ ಢಾಲಿನ ಎರಡನೇ ಮಗ್ಗಲು ’ ನೀವು ಓದಿಲ್ಲ. ಓದಿದ್ದರೆ ನೀವೂ ಹೀಗೆ ಹೇಳುತ್ತಿದ್ದಿಲ್ಲ. ಈ ಪುಸ್ತಕವನ್ನು ಪ್ರಸಿದ್ಧ ಮಾಡುವದರಲ್ಲಿ ಅವನಿಗೆ ಸ್ವಾರ್ಥವಿದ್ದಿಲ್ಲ. ಯಾರಿಂದಲಾದರೂ ರೂಪಾಯಿ ತೆಗೆದುಕೊಂಡೂ ಪ್ರಕಾಶ ಮಾಡಿಲ್ಲ. ಇದರಲ್ಲಿ ಅವನು ಇಂಗ್ಲೀಷ ಇತಿಹಾಸಕಾರರು ಮುಚ್ಚಿಟ್ಟ ಮಾತುಗಳನ್ನು ಪ್ರಗಟಮಾಡಿದ್ದಾನೆ. ಇಂಗ್ಲೀಷರು ಮಾಡಿದ ಪಾಪದ ಪ್ರಾಯಶ್ಚಿತ್ತವೆಂದು ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಗಲಿಕ್ಕೇ ಬೇಕು ಎಂದು

ಬರೆದಿದ್ದಾನೆ. ಈ ಪುಸ್ತಕದ ಸಲುವಾಗಿ ಇಂಗ್ಲೀಷರು ಅವನ ಮೇಲೆ ತುಂಬ ಕೋಪಗೊಂಡಿದ್ದಾರೆ. ಈ ಮನುಷ್ಯನು ಅಪ್ರಾಮಾಣಿಕನಲ್ಲ, ಆದರೆ ರಹಸ್ಯಮಯನಾಗಿದ್ದಾನೆ, ಸಮತೋಲರಹಿತನಾಗಿದ್ದಾನೆ. ಇವತ್ತು ನನ್ನನ್ನು ಬೈಯುವನು, ನಾಳೆ ನನ್ನ ಸ್ತುತಿ ಮಾಡುವನು. ಇವತ್ತು ಜಯಕರರನ್ನು ಏರಿಸಿ ಕುಳ್ಳಿರಿಸಿದರೆ ನಾಳೆ ಕೆಳಗೊಗೆಯುವನು. ಇವನ ಜೊತೆಗೆ ಆಡಿದ ಮಾತುಕತೆಗಳಿಂದ ಇದೇ ಭಾವವು ನನ್ನ ಮೇಲೆ ಮೂಡಿ ನಿಂತಿತು".

ನಾನಾಭಾಯಿಗೆ ಬರೆದ ಪತ್ರವು ಈ ದಿನಚರಿಯಲ್ಲಿ ಮೊದಲು ಬಂದು ಹೋಗಿದೆ. ಅದಕ್ಕೆ ಉತ್ತರವೆಂದು ಅವರು ಉದ್ದವಾದ ಪತ್ರವನ್ನು ಬರೆದರು: "ನಿಮ್ಮ ಸಲಹೆಯನ್ನು ಒಪ್ಪಿಕೊಳ್ಳುವ ಮನಸ್ಸಾಗುತ್ತದೆ. ಆದರೆ ಧೈರ್ಯವಾಗುವದಿಲ್ಲ. ಕ್ಷಣಕಾಲ ಮನಸ್ಸು ಒಪ್ಪುವದಿಲ್ಲ. ದಕ್ಷಿಣಾಮೂರ್ತಿ ವಿದ್ಯಾರ್ಥಿಭವನಕ್ಕಾಗಿ ಭಿಕ್ಷೆಯನ್ನು ಬೇಡಿದರೆ ಅಡ್ಡಿ ಏನು? ನನ್ನ ಈ ಭಾಗವು ದಾನವೆಂದು ತಿಳಿಯಲಾಗುವದು. ನೀವು ಕೂಡ ದರಿದ್ರನಾರಾಯಣನ ಸಲುವಾಗಿ ಭಿಕ್ಷೆ ಬೇಡಲು ಹೊರಟಿದ್ದೀರಿ. ಆದರೆ ನನ್ನ ತಿಳಿವಳಿಕೆ ತಪ್ಪು ಇರುವ ಸಂಭವವಿದೆ. ನನಗೆ ಅವಶ್ಯವಾಗಿ ಮಾರ್ಗದರ್ಶನ ಮಾಡಿರಿ." ಇದಕ್ಕೆ ಉತ್ತರವೆಂದು ಬಾಪೂ ಬರೆಯಿಸಿದರು: "ನನಗೆ ಯಾವುದರ ಸಲುವಾಗಿ ಭೀತಿಯಿತ್ತೋ ಅದೇ ಪರಿಣಾಮ ಉಂಟಾಗಿದೆ. ನಾನು ದರಿದ್ರನಾರಾಯಣನ ಸಲುವಾಗಿ ತಿರುಗಾಡಿದೆ, ಇದರಲ್ಲಿ ನೀವು ನನ್ನ ಸಲಹೆಯೊಂದಿಗೆ ಅಸಂಗತಿಯನ್ನು ತೋರಿಸಿರುವಿರಿ. ನೀವು ಅಸಂಗತಿಯನ್ನು ನೋಡುವಿರೆಂಬ ಸಂದೇಹವಿದ್ದೇ ಇತ್ತು. ಆದರೆ ನನಗೆ ಅಸಂಗತಿ ಕಂಡು ಬರಲಿಲ್ಲ. ನಾನು ಪ್ರಚಾರಕ್ಕಾಗಿ ಹೊರಟಾಗ ಕೂಡ ಇಂತಹದೇನೂ ಅನಿಸಿದ್ದಿಲ್ಲ. ಅಂತರವಿಷ್ಟೆ: ಆಶ್ರಮವು ಹೇಗೆ ನನ್ನ ಸಂಸ್ಥೆಯೊ ಹಾಗೆ ದಕ್ಷಿಣಾಮೂರ್ತಿ ನಿಮ್ಮ ಸಂಸ್ಥೆಯೆನಿಸಿಕೊಳ್ಳುತ್ತಿದೆ. ದಕ್ಷಿಣಾಮೂರ್ತಿ ಸಂಸ್ಥೆಯಲ್ಲಿ ನಿಮ್ಮ ಕೆಲಸವು ರೂಪಾಯಿಗಳನ್ನು ಕಲೆಹಾಕುವದು ಅಲ್ಲ. ಆದರೆ ಕಲಿಸುವದು, ವಿದ್ಯಾರ್ಥಿಗಳಲ್ಲಿ ಅವರ ಆತ್ಮದ ವಿಕಾಸಗೊಳಿಸುವದು ಆಗಿದೆ. ಆಶ್ರಮದಲ್ಲಿ ನನ್ನ ಕೆಲಸವು ಹಣವನ್ನು ತರತಕ್ಕದ್ದಾಗಿಲ್ಲ, ನಿಯಮಗಳ ಪಾಲನ ಮಾಡಿ ಆಶ್ರಮವಾಸಿಗಳಿಂದ ಪಾಲನ ಮಾಡಿಸುವದು, ಮತ್ತು ಆಶ್ರಮದ ವಿವಿಧ ಪ್ರವೃತ್ತಿಗಳನ್ನು ಪುಷ್ಟಿಗೊಳಿಸುವದು ಆಗಿರುತ್ತದೆ. ಹೀಗೆ ಮಾಡುವದರಿಂದ ಆವಶ್ಯಕತಾನುಸಾರವಾಗಿ ಹಣವು ಬರುವದೆಂಬ ಶ್ರದ್ಧೆಯನ್ನಿಡತಕ್ಕದ್ದು. ದರಿದ್ರನಾರಾಯಣನ ಕೋಶದ ಸಲುವಾಗಿ ಇದರ ವಿರುದ್ಧ ನಿಯಮವಿದೆ. ಇದರಲ್ಲಿ ವೃತ್ತಿಯೇ ನಿಧಿಯನ್ನು ಕೂಡಿಸುವದಾಗಿರುತ್ತದೆ. ದಕ್ಷಿಣಾಮೂರ್ತಿ ಸಂಸ್ಥೆಯ ಸಲುವಾಗಿ ನೀವು ಹೋಗಲಾಗದು. ಆದರೆ ಮಿತ್ರರು ಸಂತೋಷದಿಂದ ಬೇಡಬಹುದು. ಬೇಡುವದು ಅವರ ಧರ್ಮವು. ಈಗ ವ್ಯತ್ಯಾಸವು ಲಕ್ಷ್ಯದಲ್ಲಿ ಬಂದಿತೆ? ಈ ಭೇದವು ಇಂದಿನ ಹೊಸಮಾತೇನೂ ಅಲ್ಲ. ದಕ್ಷಿಣ ಆಫ್ರಿಕೆಯಲ್ಲಿ ಕೂಡ ನಾನು

ಇದಕ್ಕನುಸಾರವಾಗಿಯೇ ನಡೆಯುತ್ತಿದ್ದೆ. ತಿಳಿದ ಮೇಲೆ ಪಿನಿಕ್ಸದ ಸಲುವಾಗಿ ಭಿಕ್ಷೆಯನ್ನು ಬಂದುಮಾಡಲಾಯಿತು. ಆದರೆ ಅಲ್ಲಿ ನಡೆಯುತ್ತಿದ್ದ ಲೋಕಸಂಸ್ಥೆಗಳ ಸಲುವಾಗಿ ನಾನು ಮನೆಮನೆಗೂ ಅಲೆದಾಡುತ್ತಿದ್ದೆ. ಆದುದರಿಂದ ಈಗಲೂ ಇದೇ ಮಾತನ್ನು ಹೇಳುತ್ತೇನೆ: ನೀವು ಇಂದಿಲ್ಲ ನಾಳೆ ರೂಪಾಯಿಗಳನ್ನು ಕೂಡಿಸುವದಕ್ಕೆ ನಾನು ಹೋಗುವದಿಲ್ಲವೆಂಬ ನಿಶ್ಚಯವನ್ನು ಮಾಡಬೇಕು. ಸಹಾಯ ಮಾಡುವ ಮಿತ್ರರಾರೆಂಬುದು ನಿಮಗೆ ಗೊತ್ತಿದೆ. ಅವರಿಗೆ ಪತ್ರ ಬರೆಯಿರಿ ಮತ್ತು ನಿಶ್ಚಯ ಮಾಡಿರಿ. ಆಮೇಲೆ ಆಗುವದು ಆಗಲಿ. ಇಂಥ ಸಂಸ್ಥೆಗಳ ಪ್ರತಿಷ್ಠೆಯು ಇನ್ನೂ ಜನರಲ್ಲಿ ಇಲ್ಲ. ಜನರು ತಮಗೆ ತಾವೇ ಇಂಥ ಸಂಸ್ಥೆಗಳಿಗೆ ದಾನ ಕಳಿಸುವದು ಧರ್ಮವೆಂದು ತಿಳಿದಿಲ್ಲ. ಇದೆಲ್ಲವೂ ಅರ್ಧ ಸತ್ಯವಾಗಿದೆ. ಈ ಸಂಸ್ಥೆಗಳನ್ನು ನಡೆಸುವ ನಾವು ಶ್ರದ್ಧೆಯಿಲ್ಲದವರಾಗಿದ್ದೇವೆ, ಆದುದರಿಂದ ದಾನದ ವಿಷಯವಾಗಿ ಜನರಿಗೆ ನಿಜವಾದ ಶಿಕ್ಷಣ ದೊರೆಯಲಿಲ್ಲ. ಇದೊಂದು ದುಷ್ಟ ಚಕ್ರವಿದೆ. ನಾವು ಜನರಿಗೆ ಶಿಕ್ಷಣವನ್ನು ಕೊಡಲಿಲ್ಲ, ಆದುದರಿಂದ ಅವರಿಗೆ ಅದು ದೊರೆಯಲಿಲ್ಲ. ಎಲ್ಲಿಯವರೆಗೆ ಜನರು ತಾವಾಗಿಯೇ ದಾನಕೊಡುವದನ್ನು ಕಲಿಯುವದಿಲ್ಲವೋ ಅಲ್ಲಿಯವರೆಗೆ ನಾವು ಅವರ ಮನೆಗೆ ಅಲೆದಾಡಬೇಕಾಗುವದು. ಈ ರೀತಿಯಿಂದ ಕೆಲಸವು ಎಂದೂ ಕೊನೆಗಾಣುವದಿಲ್ಲ. ಜನರು ಕಲಿಯುವದಿಲ್ಲ ಮತ್ತು ನಮ್ಮಲ್ಲಿ ಶ್ರದ್ಧೆ ಉಂಟಾಗುವದಿಲ್ಲ. ಪರಿಣಾಮವೇನಂದರೆ ಒಂಬತ್ತುದಿನ ನಡೆದರೂ ಒಂದೇಮೈಲು. ಆದುದರಿಂದ ನಮ್ಮೊಳಗೆ ಕೆಲವು ಜನರು ದೊಡ್ಡ ಗಂಡಾಂತರವನ್ನು ಎದುರಿಸಿ ಶ್ರದ್ಧೆಯ ಮಾರ್ಗವನ್ನು ಕೈಕೊಳ್ಳುವ ಆವಶ್ಯಕತೆಯಿದೆ. ಇದಕ್ಕೆ ನೀವು ತುಂಬ ಯೋಗ್ಯರಿದ್ದೀರಿ. ಎರಡನೇ ಸಂಸ್ಥೆಗಳ ತುಲನೆ ಮಾಡಿದರೆ ಇದು ಹಳೆಯದಿದೆ, ಪ್ರತಿಷ್ಠೆಯನ್ನು ಹೊಂದಿದೆ. ಶಿಕ್ಷಕರೆಲ್ಲರೂ ಸ್ವಾರ್ಥಿಗಳಲ್ಲ, ಕೊಡುವ ಶಿಕ್ಷಣವನ್ನು ಪ್ರೇಮದಿಂದ ಕೊಡಲಾಗುತ್ತಿದೆ. ಇದಕ್ಕೆ ಸಾಕ್ಷಿಯೆಂದರೆ ಎಷ್ಟೋ ವಿದ್ಯಾರ್ಥಿಗಳು ತಯಾರಾಗಿರುವರು. ಎಷ್ಟೋ ಜನರು ನಿಯಮಿತರೂಪದಿಂದ ದಾನಕೊಡುವವರು ಸಿಕ್ಕಿದ್ದಾರೆ. ಆದುದರಿಂದ ವ್ಯವಹಾರ ಬುದ್ಧಿಯಿಂದ ವಿಚಾರಮಾಡಿದಾಗ್ಯೂ ನಾನು ಸೂಚಿಸಿದ ಹೆಜ್ಜೆಯು ಅಯೋಗ್ಯವೆಂದು ಅನಿಸುವದಿಲ್ಲ. ಮತ್ತು ನನ್ನ ದೃಷ್ಟಿಯಿಂದ ಶುದ್ಧವಾದ ಶ್ರದ್ಧೆಯೂ ಶುದ್ಧ ವ್ಯವಹಾರವಾಗಿದೆ.

"ಫೀ ಹೆಚ್ಚಿಸಿ ಸ್ವಾವಲಂಬೀ ಆಗುವದರಿಂದ ಶ್ರೀಮಂತರ ಹುಡುಗರೇ ಬರುತ್ತಾರೆಂದು ಏಕೆ ತಿಳಿಯುತ್ತೀರಿ? ಕೆಲವರನ್ನಂತೂ ನೀವು ಪುಕ್ಕಟೆ ತೆಗೆದುಕೊಳ್ಳುತ್ತಿರಬಹುದು. ಇವರ ಭಾರವನ್ನು ನೀವು ಶ್ರೀಮಂತರ ಮೇಲೆ ಹಾಕಿರಿ. ಅವರಿಗೆ ನಿಮ್ಮ ಶಿಕ್ಷಣದ ಆವಶ್ಯಕತೆ ಇದ್ದರೆ ಇಷ್ಟು ಮಾಡಿಕೊಡುವರು; ಕೊಡಲಿಕ್ಕೇಬೇಕು. ನಿಮ್ಮ ಶಿಕ್ಷಣದ ಆವಶ್ಯಕತೆಯ ವಿಷಯದಲ್ಲಿ ಶಂಕೆಯನ್ನು ಏಕೆ ತೆಗೆದುಕೊಳ್ಳುತ್ತೀರಿ? ನನ್ನದು ದೃಢವಿಶ್ವಾಸವೂ ಅನುಭವವೂ ಇದೆ: ನಮ್ಮ

ಉತ್ತಮೋತ್ತಮ ಸಂಸ್ಥೆಗಳ ಅಧ್ಯಾಪಕವರ್ಗವು ಹಣ ಬೇಡುವದರಲ್ಲಿ ತಮ್ಮ ಸಮಯವನ್ನು ತೊಡಗಿಸುವದರಿಂದ ಆವುಗಳ ಪೂರ್ಣ ವಿಕಾಸವಾಗುವದಿಲ್ಲ. ಸಂಸ್ಥೆಯ ಅಂತರ್ವಿಕಾಸವೇ ಅಧ್ಯಾಪಕರ ಸಾಧನೆಯಾಗಿರಬೇಕು. ಅದಕ್ಕೆ ಬದಲಾಗಿ ಅಧ್ಯಾಪಕರು ತಮ್ಮ ಅಮೂಲ್ಯ ಸಮಯವನ್ನು ಹಣ ಕೂಡಿಸುವದಕ್ಕಾಗಿ ವ್ಯಯ ಮಾಡುವದನ್ನು ನೋಡಿದ್ದೇನೆ. ಹೀಗೆ ಮಾಡುವದರಿಂದ ಆಚಾರ್ಯರು ತಮ್ಮ ಧರ್ಮವನ್ನು ಮರೆತರೆಂದು ನನಗನಿಸುತ್ತದೆ. ಅವರು ತಮ್ಮ ಉದ್ಯೋಗದಲ್ಲಿ ಶ್ರದ್ಧೆಯನ್ನಿಡಲಿಲ್ಲ. ಪರಿಣಾಮವನ್ನು ನಾವು ನೋಡಹತ್ತಿದ್ದೇವೆ. ಒಂದು ಸಾರೆ ನೀವೆಲ್ಲ ಶಿಕ್ಷಕರು ಕೂಡಿರಿ. ಆಮೇಲೆ ಇದುವರೆಗೆ ಹಣ ಕೊಡುತ್ತ ಬಂದ ಮಿತ್ರರೊಂದಿಗೆ ಕೂಡಿರಿ. ಅನಂತರ ಸಂಕಲ್ಪ ಮಾಡಿರಿ. ಕೂಡುವದು ಸಲಹೆಯನ್ನು ತೆಗೆದುಕೊಳ್ಳುವದಕ್ಕಾಗಿ ಅಲ್ಲ, ಆದರೆ ಸಂಕಲ್ಪ ಮಾಡುವದಕ್ಕಾಗಿ ಮತ್ತು ಅದನ್ನು ಪ್ರಸಿದ್ಧ ಮಾಡುವದಕ್ಕಾಗಿ ಆಗಿರಬೇಕು. ಶ್ರದ್ಧೆಯು ಯಾರ ಸಲಹೆಯ ದಾರಿಯನ್ನೂ ಕಾಯುವದಿಲ್ಲ. ಸಲಹೆ ತೆಗೆದುಕೊಳ್ಳುತ್ತ ಕುಳಿತರೆ ಕೆಡಿಸಿಕೊಳ್ಳುವಿರಿ.

"ಇವತ್ತು ಇಷ್ಟರಮೇಲೆ ಮುಗಿಸುತ್ತೇನೆ. ಮತ್ತೆ ನನ್ನ ಸಂಗಡ ಜಗಳಾಡುವದಾದರೆ ಆನಂದದಿಂದ ಜಗಳವಾಡಿರಿ. ನಿಮಗೆ ಪತ್ರ ಬರೆಯಲಿಕ್ಕೆ ಬಿಡುವು ಇದ್ದರೆ ನನಗೂ ಇದ್ದೇ ಇದೆ. ಮತ್ತು ಹೊರಗಿದ್ದರೆ ಬಿಡುವು ಸಿಗುತ್ತಲೇ ಇದ್ದಿಲ್ಲ. ಆದುದರಿಂದ ನನ್ನ ವಿಶೇಷ ಜ್ಞಾನದ ಮತ್ತು ವಿಶೇಷ ಅನುಭವದ ಲಾಭವನ್ನು ತೆಗೆದುಕೊಳ್ಳಿರಿ ತೆಗೆದುಕೊಳ್ಳದಿದ್ದರೆ ನೀವು ಹಾನಿಗೀಡಾಗುವಿರಿ. ಈ ವಿಷಯದಲ್ಲಿ ನಾನು ಕುಶಲನಾಗಿದ್ದೇನೆಂದು ಹೇಳಲು ನನಗೆ ಸ್ವಲ್ಪೂ ಸಂಕೋಚವಾಗಲಿ, ನಾಚಿಕೆಯಾಗಲಿ ಎನಿಸುವದಿಲ್ಲ. ನನ್ನ ಕುಶಲತೆಯನ್ನು ನೀವು ಒಪ್ಪಿಕೊಳ್ಳುವಿರೊ ಬಿಡುವಿರೊ ಅದು ನಿಮಗೆ ಗೊತ್ತು. ಸರ್ಪದ ವಿಷವನ್ನು ಇಳಿಸುವದು ಗೊತ್ತಿದ್ದ ಮನುಷ್ಯನು ತನ್ನ ಕಲೆಯ ವಿಷಯದಲ್ಲಿ ಶಂಕಿತನಾಗಿದ್ದರೆ ಅಥವಾ ಅದನ್ನು ಮುಚ್ಚಿಟ್ಟರೆ ಅವನು ಹೇಗೆ ಮೂರ್ಖಶಿರೋಮಣಿ ಎಂದು ತಿಳಿಯಲ್ಪಡುವನೊ ಹಾಗೆಯೆ ನನಗೆ ನನ್ನ ಕಲೆಯು ಗೊತ್ತಿದ್ದೂ ಅದನ್ನು ಮುಚ್ಚಿಟ್ಟರೆ ಅಂಥ ಮೂರ್ಖ ಶಿರೋಮಣಿಯೇ ಆಗುವೆನು. ತಿಳಿದೂ ತಿಳಿದೂ ಹೀಗಾಗುವ ಇಚ್ಛೆ ನನಗಿಲ್ಲ."

* * *

ಹೊರಗೆ ಮಲಗುವ ರೂಢಿಯ ಕುರಿತು ಮಾತುಕತೆಯಾಡುತ್ತಿರುವಾಗ ನಾನು ಬಾಪೂಗೆ ನೆನಪು ಮಾಡಿದೆ: "ನೀವು ದಕ್ಷಿಣ ಆಫ್ರಿಕೆಯಲ್ಲೂ ಸಹ ಹೊರಗೆ ಜೈಲಲ್ಲಿ ಮಲಗುತ್ತಿದ್ದಿರೆಂದು 'ಆತ್ಮಕಥೆ'ಯಲ್ಲಿದೆ." ಬಾಪೂ ಹೇಳಿದರು: "ಹೌದು ಮಲಗುತ್ತಿದ್ದೆ. ಹೊರಗೆ ಮಲಗುತ್ತಿದ್ದೆನೆಂದರೆ ಏನು? ದಕ್ಷಿಣ ಆಫ್ರಿಕೆಯ ಭಯಂಕರ ಚಳಿಯಲ್ಲಿ ಇಷ್ಟೇ ಅಲ್ಲ ಮಳೆಯಲ್ಲೂ ಕೂಡ ಮಲಗಿಕೊಳ್ಳುತ್ತಿದ್ದೆ. ಚಳಿಯಲ್ಲಿ ಸಾಕಷ್ಟು ಹೊದ್ದುಕೊಳ್ಳಲಿಕ್ಕೆ ಇರುತ್ತಿದ್ದವು. ಕಲನ್‌ಬಾಕ್‌ದ ಪಟ್ಟೊ

ಕಂಬಳಿಗಳನ್ನು ಒಟ್ಟುಗೂಡಿಸುತ್ತಿದ್ದೆ ಮತ್ತು ಮಳೆಯಲ್ಲಿ ನೀರು ಕೆಳಗೆ ಹರಿದು ಹೋಗಬೇಕೆಂದು ಬೇಕಾಗುವಂತಹದನ್ನು ಮೇಲೆ ಹಾಕಿಕೊಳ್ಳುತ್ತಿದ್ದೆ. ಮೋರೆಯನ್ನು ಮುಚ್ಚಿಕೊಳ್ಳಲಿಕ್ಕೆ ಒಂದು ಯುಕ್ತಿಯನ್ನು ಹುಡುಕಿಟ್ಟಿದ್ದೆವು. ನಾವು ಹುಚ್ಚರಂತೆ ಪ್ರಯೋಗ ಮಾಡುವವರಾಗಿದ್ದೆವು. ಯಾವುದನ್ನು ಕೈಯಲ್ಲಿ ತೆಗೆದುಕೊಳ್ಳುತ್ತಿದ್ದೆವೊ ಅದರ ಕೊನೆ ಮುಟ್ಟಿಸಿಯೇ ಬಿಡುತ್ತಿದ್ದೆವು. ಉಳ್ಳೇಗಡ್ಡಿಯಲ್ಲಿ ಶಕ್ತಿಯಿದೆ ಎಂದು ತಿಳಿದಕೂಡಲೇ ಉಳ್ಳೇಗಡ್ಡಿಯನ್ನೇ ತಿನ್ನಹತ್ತಿದೆವು. ಒಂದಾನೊಂದು ಕಾಲಕ್ಕೆ ನಾನು ಹುಣಶೀಹಣ್ಣು ಬಹಳ ತಿನ್ನುತ್ತಿದ್ದೆನು. ಹುಣಶೀಹಣ್ಣು ಸ್ಕರ್ವಿ ಎಂಬ ಹೆಸರಿನ ರೋಗವನ್ನು ನಾಶಮಾಡುತ್ತದೆ. ಮತ್ತು ನಿಂಬೇಹಣ್ಣು ತುಟ್ಟಿ ಸಿಗುತ್ತಿದ್ದವಾದ್ದರಿಂದ ಹಿಡಿ ಹಿಡಿ ಹಣ್ಣು ತಿನ್ನುತಿದ್ದೆನು—ಸೋಂಗಾಮೊಂದಿಗೆ--ಹುಣಶೀಹಣ್ಣು ಮತ್ತು ಬೆಲ್ಲದ ನೀರು ಮಾಡಿ!"

ಬೆಳಿಗ್ಗೆ ಬಾಪೂ ಕಾಕಾ ಅವರ ಬಗ್ಗೆ ಮಾತಾಡುತ್ತ ಎದ್ದರು. ಪ್ರಾರ್ಥನಾ ಪ್ರಾರಂಭ ಮಾಡುವದಕ್ಕೆ ಪೂರ್ವದಲ್ಲಿಯೇ ಮಾತಾಡತೊಡಗಿದರು: "ಕಾಕಾರಿಗೆ ಹಾಲು ಕೊಡುವದಿಲ್ಲ; ಈ ಮಾತು ಸರಿಯಾಗಿ ಕಾಣುವದಿಲ್ಲ.

**೨೧-೪-'೩೨** ಆಕಳಿನ ಹಾಲು ಕೊಡುವದು ಸಾಧ್ಯವಿಲ್ಲೆಂದು ಹೇಳಿರಬಹುದು. ಆಕಳ ಬೆಣ್ಣೆ ಕೊಡಲಿಕ್ಕಾಗುವದಿಲ್ಲವೆಂದೇ ಓಲಿವ್ಹ ಆಯಿಲ್ ಕೊಡುತ್ತಿರಬಹುದು. ಅನೇಕ ಸ್ಥಳಗಳಲ್ಲಿ ಆಕಳಹಾಲು ಸಿಕ್ಕದಂತಹ ದುರ್ದಶೆ ಇದೆ. ಮದ್ರಾಸದಲ್ಲಿ ಏನೂ ಸಿಗುವದಿಲ್ಲ, ಪಂಜಾಬದಲ್ಲಿ ಸಿಗುವದಿಲ್ಲ, ಮಹಾರಾಷ್ಟ್ರದಲ್ಲಿ ಕೂಡ ಸಿಗುತ್ತಿರಲಿಕ್ಕಿಲ್ಲ. ಆಕಳ ಹಾಲಿನ ವ್ರತಧಾರಿಗಳು 'ನೇಸಲ್ಸ ಮಿಲ್ಕ' ತೆಗೆದುಕೊಂಡರೆ ನಡೆಯುವದು. ಪರದೇಶದ ಡೇರಿಯ ಬೆಣ್ಣೆಯನ್ನು ತೆಗೆದುಕೊಂಡರೆ ನಡೆಯುವದು—ಯಾಕಂದರೆ ಇವೆಲ್ಲ ಆಕಳಹಾಲಿನವಿರುತ್ತವೆ." ಆಕಳಹಾಲಿನ ವ್ರತವು ನಮ್ಮನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತದೆಂಬುದು ತಿಳಿಯದಂತಾಗಿದೆ!

ಪ್ರಾರ್ಥನೆಯ ನಂತರ ಮಾತಾಡಿದರು: "ಇವತ್ತೇ ಇನಸ್ಪೆಕ್ಟರ ಜನರಲ್ಲರಿಗೆ ಬರೆಯುಬೇಕಾಗುವದು. ಈ ಎಲ್ಲ ಸುದ್ದಿಯು ಗಾಂಧೀಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆ ಏಳಬಹುದು; ಮತ್ತು ಸುಪರಿಂಟೆಂಡೆಂಟರಿಗೆ ನಮ್ಮ ಟಪಾಲನ್ನು ಎಚ್ಚರಿಕೆಯಿಂದ ನೋಡುವ ಹುಕುಂ ಆದರೆ ಅದರಲ್ಲಿ ಆಶ್ಚರ್ಯವಿಲ್ಲ!"

ಗಿರಿಧಾರಿ ಭೆಟ್ಟಿಗೆ ಬರುವವನಿದ್ದ, ಆದರೆ ಬರಲಿಲ್ಲ. ಬೆಳಿಗ್ಗೆ ಬಾಪೂ ಡೋಯಿಲ್ಲರಿಗೆ ಎರಡು ಪತ್ರಗಳನ್ನು ಬರೆದರು: ಒಂದು ಕಾಕಾ ಮತ್ತು ನರಹರಿ ಇವರ ವಿಷಯುವಾಗಿ ಇನ್ನೊಂದು ಭೆಟ್ಟಿಗೆ ಬರುವ ಮತ್ತು ರಾಜಕಾರಣದಲ್ಲಿ ಭಾಗತೆಗೆದುಕೊಳ್ಳುವವರ ಕೈದಿಗಳ ವಿಷಯುವಾಗಿ.

ಗೋಕುಲದಾಸ ಪಟವಾರಿಯನ್ನು ಭೆಟ್ಟಿಯಾಗುವದಕ್ಕೆ ನನ್ನನ್ನು ದವಾಖಾನೆಗೆ ಕಳಿಸುವದಕ್ಕಾಗಿ ಬಾಪೂ ಸುಪರಿಂಟೆಂಡೆಂಟರಿಗೆ ವಿನಂತಿ ಮಾಡಿಕೊಂಡರು. ಆದರೆ ಅವರು ಒಪ್ಪಲಿಲ್ಲ.

ನಿನ್ನೆ ಕಾಕಾ ಅವರಿಗೆ ಬರೆದ ಪತ್ರವೂ ಇನಸ್ಪೆಕ್ಟರ ಜನರಲ್ಲರಿಗೆ ಬರೆದ ಇನ್ನೊಂದು ಪತ್ರವೂ ಹೋಗಲಿಲ್ಲ. ಇಂದು ಬೆಳಿಗ್ಗೆ ಹೋದವು; ಮತ್ತು ಇವತ್ತೇ ಸಾಯಂಕಾಲ ಬೆಳಗಾಂವಿಯಿಂದ ಮಣಿ ಮತ್ತು ಕಾಕಾರ

**೨೨-೪-'೩೨** ಪತ್ರಗಳು ಬಂದವು. ಎರಡೂ ಕಾಗದದೊಳಗಿಂದ ಅನೇಕ ಮಾತುಗಳು ತಿಳಿದುಬಂದವು. ಎಲ್ಲರೂ ಪೂರ್ಣರೀತಿಯಿಂದ ತಪಶ್ಚರ್ಯ ಮಾಡಹತ್ತಿದ್ದಾರೆ. ಕಾಕಾಸಾಹೇಬರಿಗೆ ಹಾಲು, ತುಪ್ಪ ಸಿಗುವದಿಲ್ಲ. ಬೆನ್ನಲ್ಲಿ ನೋವಿದೆ. ನರಹರಿ ಮುಂತಾದವರನ್ನು ಭೆಟ್ಟಿಯಾಗಲು ಸಾಧ್ಯವಿಲ್ಲ ಮತ್ತು ವಾಗ್‌ಯಜ್ಞವನ್ನು ನಡೆಸಿದ್ದಾರೆ. ಇವರ ವಾಗ್‌ಯಜ್ಞದ ಉಪಭೋಗ ತೆಗೆದುಕೊಳ್ಳುವವರೂ ಭಾಗ್ಯಶಾಲಿಗಳೇ ಅಲ್ಲವೆ? ನರಹರಿಯವರು ಉಣ್ಣೆಯನ್ನು ಹಿಂಜುವ ಮತ್ತು ನೂಲುವ ಕೆಲಸ ಮಾಡುತ್ತಾರೆ. ಇವರದು ಇದರ ಹೊರತಾಗಿ ಮತ್ತೇನೂ ಸುದ್ದಿ ಇಲ್ಲ. ಮಣಿ ಸಾಕಷ್ಟು ಸೊರಗಿದ್ದಾಳೆ. ಇಡೀ ಗೀತಾ ಮುಖೋದ್ಗತ ಮಾಡಿದ್ದಾಳೆ, ಮತ್ತು ದುಃಖವನ್ನು ಕೂಡ ಚನ್ನಾಗಿ ಅನು-ಭೋಗಿಸುತ್ತಾಳೆ.

ಇವತ್ತು ಇನ್ನೂ ಬೇರೆ ಅನೇಕ ಪತ್ರಗಳು ಬಂದಿವೆ. ಫಾದರ್ ಎಲ್ವಿನ್‌ರು ಅಲ್ಲಿಯ ಬಿಶಪರು ತಮಗೆ ಕ್ರೈಸ್ತನ ದ್ರೋಹಿ ಎಂಬ ಪದವಿಯನ್ನು ಕೊಟ್ಟಿದ್ದಾರೆಂದೂ ಚರ್ಚಿನಲ್ಲಿ ಪ್ರವಚನ ಮಾಡಲಿಕ್ಕೆ ಕೊಡುವದಿಲ್ಲೆಂದೂ ಬರೆಯುತ್ತಾರೆ. ಮೈಥಿಲೀ ಶರಣ ಗುಪ್ತರು ೧೮ ಪುಟ ಉದ್ದನಾದ ಒಂದು ಪತ್ರದಲ್ಲಿ ಊರ್ಮಿಲಾನ ವಿಷಾದದ ಸ್ಪಷ್ಟೀಕರಣ ಮಾಡಿದ್ದಾರೆ. ಈ ಇಡೀ ಪತ್ರವು ಕಾವ್ಯವೇ ಆಗಿದೆ ಎಂದು ಬಾಪೂ ಹೇಳಿದರು. ಈ ಪತ್ರದ ಪ್ರತಿ ಮಾಡುವವನು ಅಜಮೀರದವನೂ ಮುಸಲ್ಮಾನನೂ ಆಗಿದ್ದು ಮೈಥಿಲೀ ಶರಣರ ಶಿಷ್ಯನಾಗಿದ್ದಾನೆ. ಹಿಂದೀ ಕಾವ್ಯ ಸಾಹಿತ್ಯ ಮೊದ-ಲಾದವುಗಳನ್ನು ತುಂಬ ಪ್ರೀತಿಸುತ್ತಾನೆ.

ನಮ್ಮಲ್ಲಿ ವರ್ತಮಾನ ಪತ್ರ ಓದುವ ಕೆಲಸವು ವಲ್ಲಭಭಾಯಿಯವರದು. ನಾನು ಹಿಂಜಿ ನೂಲುವದಕ್ಕಾಗಿ ವ್ಹರಾಂಡಾದಲ್ಲಿ ಬಂದಾಗ ವಲ್ಲಭಭಾಯಿಯವರು ಎರಡನೇ ಸಾರೆ ವರ್ತಮಾನ ಪತ್ರ ಓದುವದು ಕಂಡುಬರುವದು.

**೨೩-೪-'೩೨** "ಸ್ವಲ್ಪದರಲ್ಲಿ ಸುದ್ದಿ ಏನಿದೆ?" ಎಂದು ನಾನು ಕೇಳುತ್ತೇನೆ. ಕೂಡಲೇ ಅವರ ಹತ್ತಿರ ಉತ್ತರವು ಸಿದ್ಧವಿರುತ್ತದೆ: 'ಮುಸ್ಲಿಮ್ ಪರಿಷತ್ತಿನಲ್ಲಿ ಜಗಳ ಕಲಕತ್ತರ,' 'ಸೆಮ್ಯೂಅಲ್ ಹೋರ ಟೀನಿಸ್'

ಆಡುತ್ತಾರೆ.' ಎರಡನೇ ದಿವಸದ ಸುದ್ದಿಯು 'ಮಿ. ಕ್ಲನ ವಿವಾಹ' ಎಂದು. ಸರೋಜನಿಯವರನ್ನು ಹಿಡಿದ ಸುದ್ದಿಯು ಬಂತು. ಮಾಲವೀಯಾಜಿಯವರು ದಿಲ್ಲಿಗೆ ಹೋಗುವದಕ್ಕಾಗಿ ಮೋಟರನಿಂದ ಹೊರಟಿದ್ದಾರೆ. ೭೦ ವರ್ಷದ ವಯಸ್ಸಿನಲ್ಲಿ ಬಹಳ ಶ್ರಮ ತೆಗೆದುಕೊಂಡರು. ಸರಕಾರಕ್ಕೆ ಓಡಾಡಲು ಹಚ್ಚಿ ಸಂಘ ಕೆಲಸವನ್ನು ಚನ್ನಾಗಿ ಉಂಟುಮಾಡಿದರು.

ನಿನ್ನೆ ಕರಾಚಿ ಜೇಲಿನಲ್ಲಿ ಸತ್ಯಾಗ್ರಹ ಕೈದಿಗಳು ರಾಷ್ಟ್ರೀಯ ಘೋಷಣೆ ಮಾಡಿದ್ದಕ್ಕಾಗಿ ಅವರಿಗೆ ಫಟಕೀ ಹೊಡೆದರು. ಅದನ್ನು ಅನುಮೋದಿಸುವ ಹೇಳಿಕೆ
ಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಗೆಡಹಿದ್ದನ್ನು ಓದಿ
**೨೪-೪-'೩೨** ಬಾಪೂ ಬಹಳ ದುಃಖಿತರಾದರು. ಇವತ್ತು ಎಷ್ಟು ಸೋಲಿ ಸ್ವತಃ
ಅದಿಷ್ಟು ಭಾಗವನ್ನು ಓದುವದಕ್ಕಾಗಿ ಬಾಪೂ ವರ್ತಮಾನ ಪತ್ರ ಬೇಡಿದರು. ಅವರ ಹೃದಯ ಕಂಪಿಸಿತು. ಇವತ್ತು ಮಾಲವೀಯಾಜಿ ಮತ್ತು ಸರೋಜನಿ ಇಬ್ಬರನ್ನೂ ಹಿಡಿದ ಸುದ್ದಿ ಬಂದದ್ದರಿಂದ ಅವರಿಗೆ ಬಹಳ ಆನಂದವಾಯಿತು. ವಲ್ಲಭಭಾಯಿಗೆ ಹೇಳಿದರು : " ಹೇಳಿರಿ, ಇನ್ನಾರಾದರೂ ಬಾಕಿ ಉಳಿದಿದ್ದಾರೆಯೆ ? ಜೇಲಿಗೆ ಹೋಗಬೇಕಾದವರೆಲ್ಲ ಹೋದಂತಾಯಿತಲ್ಲವೇ "

ಎಲ್ವಿನ್ನನ ಪತ್ರದ ಉಲ್ಲೇಖವು ಮೇಲೆ ಬಂದಿದೆ. ಅವನು ಬರೆದಿದ್ದನು : ಬಿಶಪರು ಅವನಿಗೆ ಚರ್ಚಿನಲ್ಲಿ ಪ್ರವಚನ ಮಾಡಲಿಕ್ಕೆ ಅಪ್ಪಣೆ ಕೊಡಲಿಲ್ಲ, ಮತ್ತು
ಸಾಂಪ್ರದಾಯಿಕ ಕ್ರೈಸ್ತರಂತೆ ಅವನಿಗೆ ಚರ್ಚಿನಲ್ಲಿ ಹೋಗ
**೨೫-೪-'೩೨** ಗೊಡುವದಿಲ್ಲವೆಂದು ನಿಶ್ಚಯವನ್ನು ವ್ಯಕ್ತಮಾಡಿದ್ದನು. ಈ
ವಿಷಯವಾಗಿ ಬಾಪೂ ಅವನಿಗೆ ಬರೆದರು :

" I wish you will not take to heart what the Bishop has been saying. Your church is in your heart. Your pulpit is the whole earth. The blue sky is the roof of your church. And what is this Catholicism? It is surly of the heart. The formula has its use. But it is made by man. If I have any right to interpret the message of Jesus as revealed in the Gospels, I have no manner of doubt in my mind that it is in the main denied in the churches whether Roman or Engiish, High or Low. Lazarus has no room in those places. This does not mean that the custodians know that the Son of Sorrows has been banished from the buildings called House of God. In my opinion, this excommunication is the surest

sign that the truth is in you and with you. But my testimony is worth nothing, if when you are alone with your Maker, you do not hear the Voices aying, 'Thou art on the right path'. That is the unfailing test and no other."

"ಬಿಶಪ್ಪರ ಮಾತುಗಳಿಂದ ನೀವು ಸ್ವಲ್ಪ ಸಹ ಗಾಬರಿಯಾಗಬಾರದೆಂದು ನಾನು ಇಚ್ಛಿಸುತ್ತೇನೆ. ನಿಮ್ಮ ವ್ಯಾಸಪೀಠವು ನಿಮ್ಮ ಹೃದಯದಲ್ಲಿದೆ. ಈ ನೀಲ ವರ್ಣದ ಆಕಾಶವು ನಿಮ್ಮ ಚರ್ಚಿನ ಚಪ್ಪರವಾಗಿದೆ. ಮತ್ತು ಈ ಸಂಪ್ರದಾಯಿಕತೆ ಎಂದರೂ ಏನು? ನಿಜವಾಗಿಯೂ ಇದು ಹೃದಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಈ ಹೆಸರಿನ ಉಪಯೋಗವಿರುವದೇನೊ ನಿಜ. ಆದರೆ ಕೊನೆಗೆ ಇದು ಮನುಷ್ಯನು ಕೊಟ್ಟ ಹೆಸರಾಗಿದೆ. ಸುವಾರ್ತೆಗಳಲ್ಲಿ ಕೊಟ್ಟ ಕ್ರಿಸ್ತನ ಸಂದೇಶದ ಅರ್ಥಮಾಡುವ ಅಧಿಕಾರ ನನಗೆ ಇವತ್ತು ಚರ್ಚಗಳಲ್ಲಿ ಸ್ವಲ್ಪಮಟ್ಟಿಗಾದರೂ ಇದ್ದರೆ ಈ ಚರ್ಚು ರೋಮನ್‌ರವಿರಲಿ, ಇಂಗ್ಲೀಷರವಿರಲಿ, ದೊಡ್ಡದಿರಲಿ ಸಣ್ಣದಿರಲಿ ಈ ಸಂದೇಶದಂತೆ ನಡೆಯುವದಿಲ್ಲವೆಂದು ನಾನು ಸ್ವಲ್ಪ ಸಹ ಸಂದೇಹವಿಲ್ಲದೆ ಹೇಳಲಿಕ್ಕೆ ಸಿದ್ಧನಿದ್ದೇನೆ ಲಾಜರಸ ಸಲುವಾಗಿ ಈ ಚರ್ಚಗಳಲ್ಲಿ ಸ್ಥಳವೇ ಇಲ್ಲ. ದೇವಸ್ಥಾನವೆಂದು ಹೇಳಿಸಿಕೊಳ್ಳುವ ಈ ಮಂದಿರಗಳೊಳಗಿಂದ ಕರುಣಾಸಾಗರನಾದ ಕ್ರಿಸ್ತನನ್ನು ಹದ್ದುಪಾರ ಮಾಡಲಾಗಿದೆಯೆಂಬ ಜ್ಞಾನವು ಪೂಜಾರಿಗಳಿಗೆ ಇದೆಯೆಂದು ಇದರ ಅರ್ಥವಲ್ಲ. ನನ್ನ ಮತದ ಪ್ರಕಾರ ಸತ್ಯವು ನಿಮ್ಮೊಳಗಿದೆ ಮತ್ತು ನಿಮ್ಮ ಪಕ್ಷಕ್ಕಿದೆ, ನಿಮಗೆ ಹಾಕಿದ ಬಹಿಷ್ಕಾರವು ಇದರ ನಿಶ್ಚಿತ ಚಿನ್ಹೆಯಾಗಿದೆ. ಆದರೆ ನೀವು ಏಕಾಂತದಲ್ಲಿ ಪರಮಾತ್ಮನ ಧ್ಯಾನದಲ್ಲಿ ಮಗ್ನರಿದ್ದಾಗ 'ನಾನು ಸತ್ಯಮಾರ್ಗವನ್ನನುಸರಿಸಿರುವೆನು' ಎಂಬ ನಾದವನ್ನು ಕೇಳದಿದ್ದರೆ ನನ್ನ ಅಭಿಪ್ರಾಯಕ್ಕೆ ಯಾವ ಬೆಲೆ ಕೊಡಬಾರದು. ನಿಜವಾದ ಪರಿಗೆಲ್ಲು ಅಂತರ್ನಾದವೇ ಆಗಿದೆ, ಬೇರೆ ಯಾವದೂ ಅಲ್ಲ."

ಒಬ್ಬ ಬಂಗಾಲೀ ಸಾಧಕನಿಗೆ ಬ್ರಹ್ಮಚರ್ಯದ ವಿಷಯವಾಗಿ ಬರೆದರು:

"I have your letter. Brahmacharya is a mental state. It is undoubtedly helped by abstentiousness in all respects. But diet plays the Last part in giving one the necessary mental state. Not that wrong diet will not hinder progress. What I want to say is that right diet taken in moderation, is not the only thing in the observance of Brahmacharya though it is undoubtedly one of the necessary things. Indulgence of the palate will be the surest sign of weak mental state which is repugnant to Brahmacharya. The sovereign remedy for the observance of Brahmacharya is realization that the soul is a part of the Divineand that the

Divine resides within us. A heart grasp of the fact induces mental purity and strength. You should therefore read such books as would enable you to grasp the central fact, cultivate such companionship as would constantly make you think of the Divine presence and follow all the directions given about fresh air, hip baths, etc. in my book called 'Self-restraint vs. Self-indulgence'. And when you are doing all these things regularly and industriously, do not brood over all that happens, but have confidence that success is bound to attain your effort."

"ನಿಮ್ಮ ಪತ್ರ ಮುಟ್ಟಿತು. ಬ್ರಹ್ಮಚರ್ಯವು ಮನಸ್ಸಿನ ಒಂದು ಸ್ಥಿತಿಯು. ನಿಸ್ಸಂದೇಹವಾಗಿ ಎಲ್ಲ ತರಹದ ನಿಗ್ರಹದಿಂದ ಅದಕ್ಕೆ ಆವಶ್ಯಕವಾದ ಸಹಾಯ ಸಿಕ್ಕುತ್ತದೆ. ಆವಶ್ಯಕ ಮನಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳುವದಕ್ಕೆ ಆಹಾರವು ತೀರ ಕಡಿಮೆ ,ಸಹಾಯವಾಗುತ್ತದೆ. ತಪ್ಪು ಆಹಾರವು ಪ್ರಗತಿಯನ್ನು ಕುಂಠಿತ ಮಾಡುವದಿಲ್ಲವೆಂತಲ್ಲ. ಇದರ ಮೇಲಿಂದ ನಾನು ಇಷ್ಟೇ ಹೇಳಬಯಸುತ್ತೇನೆ: ಯೋಗ್ಯ ಆಹಾರವನ್ನು ಮಿತಪ್ರಮಾಣದಲ್ಲಿ ತೆಗೆದುಕೊಳ್ಳುವದೊಂದೇ ಸಾಧನವು ಬ್ರಹ್ಮಚರ್ಯಪಾಲನೆಗೆ ನೆರವಾಗುವದಕ್ಕೆ ಸಾಕಾಗುವದಿಲ್ಲ. ಹೌದು, ಅನೇಕ ಆವಶ್ಯಕ ಸಾಧನಗಳಲ್ಲಿ ಇದನ್ನೂ ಒಂದು ತಿಳಿಯಬಹುದು. ಜಿಹ್ವಾಚಾಪಲ್ಯವು ಅಶಕ್ತ ಮನಸ್ಸಿನ ಲಕ್ಷಣವದೆ, ಮತ್ತು ಈ ವಿಷಯವು ಬ್ರಹ್ಮಚರ್ಯಕ್ಕೆ ಬಾಧಕವಿದೆ. ಬ್ರಹ್ಮಚರ್ಯದ ಪಾಲನೆಗೆ ರಾಮಬಾಣ ಉಪಾಯವೆಂದರೆ ಈ ಜೀವವು ಪರಮಾತ್ಮನದೇ ಅಂಶವಾಗಿದೆ, ಮತ್ತು ಪರಮಾತ್ಮನು ನಮ್ಮ ಹೃದಯದಲ್ಲಿ ವಾಸವಾಗಿದ್ದಾನೆ ಎಂಬ ಮಾತಿನ ಅನುಭವವಾಗುವದು. ನಮಗೆ ಈ ಮಾತು ತಿಳಿಯಹತ್ತಿದರೆ ಅದರಿಂದ ಮನಃಶುದ್ಧಿ ಮತ್ತು ದೃಢತೆ ಪ್ರಾಪ್ತವಾಗುತ್ತವೆ. ಈ ಮುಖ್ಯ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಸಹಾಯಕವಾಗುವಂಥ ಪುಸ್ತಕಗಳನ್ನು ನೀವು ಓದಬೇಕು. ಯಾರ ಸಹವಾಸದಿಂದ ನಿಮಗೆ ಯಾವಾಗಲೂ ಪರಮಾತ್ಮನ ಅಸ್ತಿತ್ವದ ವಿಚಾರ ಉಂಟಾಗುವದೊ ಅಂಥವರ ಸಹವಾಸವನ್ನೇ ಮಾಡಬೇಕು. 'ನೀತಿನಾಶದ ಮಾರ್ಗದಲ್ಲಿ' ಎಂಬ ನನ್ನ ಪುಸ್ತಕದಲ್ಲಿ ಶುದ್ಧ ಹವೆ, ಕಟಿಸ್ನಾನ ಮುಂತಾದವುಗಳ ಬಗ್ಗೆ ಕೊಟ್ಟ ಸೂಚನೆಗಳನ್ನು ರೂಢಿಯಲ್ಲಿ ತೆಗೆದುಕೊಂಡು ಬರ್ರಿ. ಎಲ್ಲ ಮಾತುಗಳನ್ನು ನಿಯಮಿತವಾಗಿ ಮತ್ತು ಮನಸ್ಸುಗೊಟ್ಟು ಆಚರಿಸಿರಿ. ಆ ಮೇಲೆ ಸ್ಖಲನವಾದರೆ ಅದರ ವಿಷಯಕ್ಕೆ ಚಿಂತೆಯನ್ನು ಮಾಡಬೇಡಿರಿ. ಆದರೆ ನಿಮ್ಮ ಪ್ರಯತ್ನವು ಫಲಿಸೇ ತೀರುವದು ಎಂಬುದರಲ್ಲಿ ವಿಶ್ವಾಸವಿಡಿರಿ."

ಒಬ್ಬ ಎಮ್. ಎ., ಬಿ. ಎಸ್‌ಸಿ. ಬರೆದನು: "ಬಹಳ ವಿಜ್ಞಾನ ಓದಿದ

ನಂತರ ಈಶ್ವರನ ಮೇಲೆ ಶ್ರದ್ಧೆ ಕೂಡ್ರುವದಿಲ್ಲ, ಆದರೆ ಕೂಡ್ರಲೇಬೇಕೆಂದೆನಿಸುತ್ತದೆ ಇದಕ್ಕೆ ಉಪಾಯವೇನು ?"

ಅವನಿಗೆ ಬರೆದರು :

"I have your pathetic letter. Seeing that God is to be found within, no research in physical sciences can give one a living faith in the Divine. Some have undoubtedly been helped even by physical sciences, but these are to be counted on one's fingertips. My suggestion therefore to you is not to argue about the existence of Divinity, just as you do not argue about your existence, but simply assume like Euclid's axiom, that God is, if only because innumarable teachers have left this evidence and what is more their lives are an unimpeachable evidence. And then as evidence of your own faith, repeat राम नाम every morning and every evening at least for quarter of an hour each time and saturate yourself with Ramayana reading."

"ನಿಮ್ಮ ಕರುಣಾಜನಕ ಪತ್ರ ತಲ್ಪಿತು. ದೇವರು ಒಳಗಿದ್ದಾನೆ ಆದುದರಿಂದ ಎಷ್ಟೇ ಭೌತಿಕ ವಿಜ್ಞಾನದ ಸಂಶೋಧನ ಮಾಡಿದರೂ ಅದರಿಂದ ದೇವರ ಮೇಲೆ ಜಾಗ್ರತವಾದ ಶ್ರದ್ಧೆಯು ಕೂಡ್ರುವದಿಲ್ಲ. ಆದಾಗ್ಯೂ ಕೆಲವು ಜನರಿಗೆ ಭೌತಿಕ ವಿಜ್ಞಾನದಿಂದ ಸಹಾಯ ದೊರೆತದ್ದೇನೊ ನಿಜ. ಆದರೆ ಅವರ ಎಣಿಕೆಯನ್ನು ಬೆರಳಿನ ಮೇಲೆ ಮಾಡಬಹುದು. ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದವಿವಾದ ಮಾಡುವದಿಲ್ಲವೊ ಹಾಗೆಯೆ ದೇವರ ಅಸ್ತಿತ್ವದ ವಿಷಯದಲ್ಲಿಯೂ ವಾದವಿವಾದ ಮಾಡಬೇಡಿರೆಂದು ನಿಮಗೆ ನನ್ನ ಸೂಚನೆಯಿದೆ. ಯುಕ್ಲಿಡ್‌ನ ಸ್ವಯಂಸಿದ್ಧ ಸೂತ್ರದಂತೆ ಇದನ್ನು ಒಪ್ಪಿಕೊಂಡುಬಿಡಿರಿ: ದೇವರಿದ್ದಾನೆ, ಯಾಕಂದರೆ ಅಸಂಖ್ಯ ಧರ್ಮಾತ್ಮರು ಈ ಪ್ರಕಾರ ಹೇಳಿ ಹೋಗಿದ್ದಾರೆ ಮತ್ತು ಅವರ ಜೀವನವು ಈ ಮಾತಿಗೆ ಅಸಂದಿಗ್ಧ ಪ್ರಮಾಣವಾಗಿದೆ. ನಿಮ್ಮ ಸ್ವಂತದ ಶ್ರದ್ಧೆಯ ಪ್ರಮಾಣವೆಂದು ನೀವು ದಿನಾಲು ಬೆಳಿಗ್ಗೆ ಮತ್ತು ಸಾಯಂಕಾಲ ಕಾಲು ಕಾಲು ಗಂಟೆ ರಾಮನಾಮವನ್ನು ಜಪಿಸಿರಿ; ಮತ್ತು ರಾಮಾಯಣ ಓದುವದರಲ್ಲಿ ರಮಮಾಣರಾಗಿರಿ."

ಈ ವಾರ ೪೪ ಪತ್ರಗಳನ್ನು ಬರೆದರು. ಆಶ್ರಮದ ವಾರ್ಷಿಕ ಶಿಕ್ಷ ಕುರಿತು ಮನಸ್ಸಿಗೆ ತಟ್ಟುವಂಥ ಒಂದು ಟಿಪ್ಪಣಿ ಬರೆದು ಕಳಿಸಿದರು. ಚಿಕ್ಕ ಚಿಕ್ಕ ಮಕ್ಕಳಿಗೆ ಬರೆದ ಸಣ್ಣ ಸಣ್ಣ ಚೀಟಿಗಳು ಎಷ್ಟು ಅದ್ಭುತವಾಗಿವೆ! ಒಂದು ಹುಡಿಗಿಯು ಸಣ್ಣ ಸಂವಾದದಲ್ಲಿ ಭಾರತಮಾತೆಯ ವೇಷ ಹಾಕಿದ್ದಳು. ಅವಳಿಗೆ ಬಾಪೂ

ಬರೆದಿದ್ದರು : “ ನೀನು ನಿನ್ನಲ್ಲಿ ಭಾರತಮಾತೆಯ ಗುಣಗಳನ್ನು ತಂದುಕೊಳ್ಳಬೇಕು.” ಆವಳು ಕೇಳಿದಳು : “ ಭಾರತಮಾತೆಯ ಗುಣಗಳು ಯಾವವು ? ” ಬಾಪೂ ಆವಳಿಗೆ ಬರೆದರು : “ ಭಾರತಮಾತೆಯಲ್ಲಿ ಧೈರ್ಯ, ಸಹನಶೀಲತೆ, ಕ್ಷಮೆ, ವೀರತ್ವ, ಅಹಿಂಸೆ, ನಿರ್ಭಯತೆ ಮುಂತಾದ ಗುಣಗಳಿರತಕ್ಕದ್ದು. ಅವುಗಳನ್ನು ತಂದುಕೊಡಲಿಕ್ಕೆ ಆಶ್ರಮ ಇದ್ದೇ ಇದೆ.” ಅವಳು ಇದನ್ನೂ ಕೇಳಿದ್ದಳು : “ ನಮಗೆ ಹಿಂದಿನ ಜನ್ಮದ ನೆನಪು ಯಾಕೆ ಉಳಿಯುವದಿಲ್ಲ ? ” ಅದಕ್ಕೆ ಬರೆದರು : “ ನಮಗೆ ಈ ಜನ್ಮದ್ದಾದರೂ ಎಲ್ಲಿ ಎಲ್ಲಿ ನೆನಪಿರುತ್ತದೆ ? ಮತ್ತು ಇದ್ದರೆ ನಾವು ಹುಚ್ಚರೇ ಆಗಿಬಿಡುವೆವು. ಯಾವದೇ ಮಾತನ್ನು ನೆನಪಿನಲ್ಲಿಟ್ಟುಕೊಂಡು ಅದರೊಳಗಿಂದ ತೆಗೆದುಕೊಳ್ಳುವದನ್ನು ತೆಗೆದುಕೊಂಡು ಆ ಮೇಲೆ ಅದನ್ನು ಮರೆತರೆ ಏನು ಹಾನಿ ? ಅದರ ಬದಲು ಲಾಭವೇ ಇದೆ.”

ಇನ್ನೊಬ್ಬ ಹುಡುಗಿಯು ಕೇಳಿದ್ದಳು : “ ತಂದೆಯ ರಾಜ್ಯದಲ್ಲಿ ಹಿಡಿಸದ್ದು ತಾಯಿಯ ರಾಟೆಯಲ್ಲಿ ಹಿಡಿಸುತ್ತದೆ ಇದರ ಅರ್ಥವೇನು ? ಜನಿವಾರವನ್ನೇ ಏತಕ್ಕಾಗಿ ಧರಿಸುತ್ತಾರೆ ? ಆಕಳಿಗೆ ತಾಯಿ ಎಂದು ಏಕೆ ಕರೆಯುತ್ತಾರೆ ? ” ಆವಳಿಗೆ ಬರೆದರು : “ ತಂದೆಯ ರಾಜ್ಯದಲ್ಲಿ ಲೂಟಿ ನಡೆದಿದ್ದರೆ ಅಲ್ಲಿ ಎಲ್ಲರೂ ಬಡವರಾಗುತ್ತಾರೆ. ತಾಯಿಯ ರಾಟೆಯು ಆವಳ ಬಡ ಪ್ರಜರ ಸಲುವಾಗಿಯೇ ನಡೆಯುತ್ತದೆ. ಜನಿವಾರ ಅಥವಾ ಜಪಮಾಲೆಯು ಪವಿತ್ರತೆಯನ್ನು ಕಲಿಯಲಿಕ್ಕೆ ಸ್ವಲ್ಪಸ್ವಲ್ಪ ಸಹಾಯ ಮಾಡುತ್ತದೆ. ಈಗಿನ ಕಾಲದಲ್ಲಿ ಅದರ ಉಪಯೋಗವು ನಾಕಷ್ಟು ಇಲ್ಲವೆಂದು ತಿಳಿಯಲಾಗುತ್ತದೆ. ಆಕಳು ತಾಯಿಯಂತೆ ಹಾಲು ಕೊಡುತ್ತಿರುವದರಿಂದ ಅದನ್ನು ತಾಯಿಯೆಂದು ತಿಳಿಯಲಾಗಿದೆ. ಇದಲ್ಲದೆ ತಾಯಿಯು ತನ್ನ ಕೂಸಿಗೆ ಮಾತ್ರ ಒಂದು ವರ್ಷದ ವರೆಗೆ ಹಾಲು ಕುಡಿಸುತ್ತಾಳೆ. ಆದರೆ ಆಕಳು ಎಲ್ಲರಿಗೂ ಕುಡಿಸುತ್ತದೆ. ಆದುದರಿಂದ ಅದು ಎಲ್ಲರಿಗೂ ತಾಯಿಯಾಗಿದೆ. ತಾಯಿಯು ಮಕ್ಕಳಿಂದ ಸೇವೆ ತೆಗೆದುಕೊಳ್ಳುತ್ತಾಳೆ, ಆಕಳ ಸೇವೆ ಯಾರು ಮಾಡುತ್ತಾರೆ ? ಆದುದರಿಂದ ಆಕಳು ದೊಡ್ಡ ತಾಯಿಯು.”

ಒಬ್ಬ ಹುಡುಗನು ಕೇಳಿದ್ದನು : “ ರಾಮನಂಥ ಮನುಷ್ಯನು ಸಹ ಸೀತೆಯನ್ನು ಕಳಕೊಂಡ ಮೇಲೆ ಹುಚ್ಚನಂತಾಗಿ ಶೋಕಮಾಡಬೇಕಾಗಿತ್ತೆ ? ” ಬಾಪೂ ಬರೆದರು : “ ರಾಮನು ಇಷ್ಟೊಂದು ಶೋಕಮಾಡಿದ್ದನೆಂಬುದು ಯಾರಿಗೆ ಗೊತ್ತು ? ನಾವು ಓದುವದು ಕಾವ್ಯದ ವರ್ಣನೆಯು. ಈ ಪ್ರಕಾರದ ವಿಲಾಪವು ಜ್ಞಾನಿಗಳಿಗೆ ಶೋಭೆಯನ್ನು ಕೊಡಲಾರದೆಂಬುದು ನಿಜವಿದೆ. ನಮ್ಮ ಕಲ್ಪನೆಯ ರಾಮನು ಈ ಪ್ರಕಾರ ವಿಲಾಪವನ್ನೇ ಮಾಡಿಲ್ಲವೆಂದು ನಾವು ತಿಳಿಯಬೇಕು.” ಒಬ್ಬ ಭಗಿನಿಯು ಬರೆದಳು : “ ನಾನು ನನ್ನ ಮಿತಿಮೀರಿದ ಆಲಸ್ಯವನ್ನು ಒಪ್ಪಿಕೊಳ್ಳಲೇಬೇಕು. ನನಗೆ ದಿನಚರಿ ಬರೆಯುವದೇ ಆಗುವದಿಲ್ಲ.” ಉತ್ತರ : “ ಅದರಲ್ಲಿ

believe it to be their duty should volunteer to place themselves unarmed between the combatants."...

" ಇಂಥ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗುವಂಥ ಒಂದೇ ಮಾರ್ಗವಿದೆ. ಅದ್ಯಾವುದೆಂದರೆ—ಇದು ತಮ್ಮ ಕರ್ತವ್ಯವೆಂದು ತಿಳಿಯತಕ್ಕಂಥ ಸ್ತ್ರೀ ಪುರುಷರು ಸ್ವೇಚ್ಛೆಯಿಂದ ನಿಃಶಸ್ತ್ರರಾಗಿ ಹೋರಾಟ ಮಾಡುವವರ ಮಧ್ಯದಲ್ಲಿ ನಿಲ್ಲತಕ್ಕದ್ದೆಂಬ ನಿರ್ಣಯಕ್ಕೆ ಬರತಕ್ಕದ್ದು." . . .

ಸರ್ ಜಾನ್ ಸಾಯಮನ್ನರಿಗೆ ಬರೆದ ಪತ್ರದಲ್ಲಿ ಈ ಶಬ್ದಗಳಿವೆ:

"Among the little band of six or seven hundred who have volunteerd for service, in the Peace Army are quite a remarkable number of ex-service men who express their horror, at the idea of repetion of the experience of the last war, and their willingness to die rather than plunge the world into it again, and of parents of men who were killed in the war, or of children who (they fear) may grow up to be involved in another war. We are convinced that thousands in the country and elsewhere would volunteer if they believed that the League would take their offer seriously."

"ಶಾಂತಿ ಸೇನೆಯಲ್ಲಿ ಸೇವೆ ಸಲ್ಲಿಸಲಿಕ್ಕೆ ಸಿದ್ಧರಾದ ಆರೇಳು ನೂರು ಜನರ ಸಣ್ಣ ಗುಂಪಿನಲ್ಲಿ ಬಹಳ ಜನರು ಕಳೆದ ಯುದ್ಧದಲ್ಲಿ ಯುದ್ಧಮಾಡಿದ ಸಿಪಾಯಿಗಳಿದ್ದಾರೆ. ಅವರಿಗೆ ದೊರೆತ ಅನುಭವಗಳ ಪುನರಾವೃತ್ತಿಯಾಗುವದೆಂಬ ವಿಚಾರದಿಂದಲೇ ಅವರಿಗೆ ಭೀತಿಯುಂಟಾಗುತ್ತದೆ. ಪುನಃ ಜಗತ್ತನ್ನು ಮತ್ತೆ ಇಂಥ ಯುದ್ಧದಲ್ಲಿ ನೂಕುವದನ್ನು ತಡೆಯುವದಕ್ಕಾಗಿ ಅವರು ಸಾಯಲಿಕ್ಕೂ ಸಿದ್ಧರಿದ್ದಾರೆ. ಕಳೆದ ಯುದ್ಧದಲ್ಲಿ ಸತ್ತಂಥ ಜನರ ತಾಯಿತಂದೆಗಳೂ ನಮ್ಮ ಗುಂಪಿನಲ್ಲಿದ್ದಾರೆ. ತಮ್ಮ ಮಕ್ಕಳು ದೊಡ್ಡವರಾದ ಮೇಲೆ ಯುದ್ಧದಲ್ಲಿ ತೊಡಗುವ ಪ್ರಸಂಗ ಬರಬಹುದೆಂಬ ಕಲ್ಪನೆಯಿಂದ ಥರಥರ ನಡುಗುವ ತಾಯಿತಂದೆಗಳೂ ನಮ್ಮ ಗುಂಪಿನಲ್ಲಿದ್ದಾರೆ. ರಾಷ್ಟ್ರಸಂಘವು ನಮ್ಮ ನಿವೇದನೆಯನ್ನು ಗಂಭೀರತಾಪೂರ್ವಕವಾಗಿ ವಿಚಾರ ಮಾಡಿದರೆ ಈ ದೇಶದಿಂದಲೂ ಬೇರೆ ಕಡೆಯಿಂದಲೂ ಸಾವಿರಾರು ಜನರು ಸ್ವಯಂಸೇವಕರಾಗಿ ಈ ಗುಂಪಿನಲ್ಲಿ ಸೇರಲು ಸಿದ್ಧರಾಗುವರು."

ಮಿಸ್ ರೋಇಡನ್ನಳಿಗೆ ಬಾಪೂ ಬರೆಯಿಸಿದರು :

"I thank you for your letter enclosing the correspondence between yourself and Sir Errie Drummond and Sir John Simon When I read about your movement, I did not think that you were in anyway showing preference to China over India. I then

felt that you are quite right in concentrating your energy over a situation that threatened to involve bloodshed on a vast scale and that too by the adoption of the method of Satyagraha."

"ನಿಮ್ಮ ಪತ್ರಕ್ಕಾಗಿ ಆಭಾರಿ ಇದ್ದೇನೆ. ಸರ್ ಎರಿಕ್ ಡ್ರಮುಂಡ, ಸರ್ ಜಾನ್ ಸಾಯಮನ್ ಮತ್ತು ನಿಮ್ಮ ನಡುವೆ ಆದ ಪತ್ರವ್ಯವಹಾರವನ್ನು ನೀವು ಕಳಿಸಿದ್ದು ಮುಟ್ಟಿತು. ನಿಮ್ಮ ಆಂದೋಲನದ ಬಗ್ಗೆ ನಾನು ಓದಿದಾಗ ನೀವು ಯಾವುದೇ ರೀತಿಯಿಂದ ಹಿಂದುಸ್ತಾನಕ್ಕಿಂತ ಚೀನದ ವಿಷಯದಲ್ಲಿ ಪಕ್ಷಪಾತ ಮಾಡುತ್ತೀರೆಂದು ನನಗೆ ಕಲ್ಪನೆ ಸಹ ಬರಲಿಲ್ಲ. ದೊಡ್ಡ ಪ್ರಮಾಣದ ಮೇಲೆ ರಕ್ತಪಾತವಾಗುವ ಸಂಭವವಿದ್ದಲ್ಲಿ ಆ ಪರಿಸ್ಥಿತಿಯನ್ನು ತಡೆಯುವದಕ್ಕಾಗಿ ನೀವು ನಿಮ್ಮ ಶಕ್ತಿಸರ್ವಸ್ವವನ್ನು ಒಟ್ಟುಗೂಡಿಸುತ್ತಿರುವದು ಅತ್ಯಂತ ಯೋಗ್ಯವಾಗಿದೆ. ಮತ್ತು ನೀವು ಈ ಕಾರ್ಯವನ್ನು ಸತ್ಯಾಗ್ರಹದ ಪದ್ಧತಿಯಿಂದ ಮಾಡುತ್ತಿರುವದು ಅದರ ವೈಶಿಷ್ಟ್ಯವಾಗಿದೆ."

ವಲ್ಲಭಭಾಯಿ ಅಂದರು : "ಆಯಿತು, ಇಷ್ಟೇ ಬರೆಯುವದೇನು ?"

ಬಾಪೂ ಅಂದರು : "ಮತ್ತೇನು ? ಹಿಂದುಸ್ತಾನದ ವಿಷಯದಲ್ಲಿ ಸಹ ಇಂತಹದೇ ಯಾವುದಾದರೊಂದು ಚಳವಳಿ ಮಾಡಿರೆಂದು ಬರೆಯಬೇಕೇನು ?"

ವಲ್ಲಭಭಾಯಿ : "ಇಲ್ಲ. ನಾನಂತೂ ನಮ್ಮದನ್ನು ನೀಗಿಸಿಕೊಳ್ಳುವೆವು. ಆದರೆ ಹೊರಗಿರುತ್ತಿದ್ದರೆ ನಾವು ಕೂಡ ನಿಮ್ಮ ಸಹಾಯಕ್ಕೆ ಬರುತ್ತಿದ್ದೆವೆಂದು ಬರೆಯಿರಲ್ಲ."

ಪ್ರೊ. ರಾವ್ ಎಂಬ ಹೆಸರಿನ ಮನುಷ್ಯನು ಗೋಕುಲದಾಸ ತೇಜಪಾಲ ದವಾಖಾನೆಯಲ್ಲಿ ಸರ್ಪದ ಹೆಡೆಯನ್ನು ಮತ್ತು ಮೊಳೆಗಳನ್ನು ತಿನ್ನುವ ಪ್ರಯೋಗವನ್ನು ಮಾಡಿ ತೋರಿಸಿದ್ದನ್ನು ಕುರಿತು ಭಯಭೀತರಾಗಿ ಬಾಪೂ ಅವರು ನಟರಾಜನ್ನರಿಗೆ ಪತ್ರ ಬರೆದರು :

' Dear Mr. Natarajan,

I am sure you must have read the reports of an exhibition given by an Indian Yogi of his powers before an audience specially assembled at the Gokuldas Tejpal Hospital. The Yogi is reported to have eaten a live viper's head, nails, nitric acid, and the like, and that the Chief justice and his wife were among the distinguished audience. The report states that one lady was so disgusted at the eating of the viper's head that she abruptly left the hall before the exhibition was finished. I do not know how you look at such exhibitions. In my opinion they are degrading both for the demonstrator, as also for the public. And if the demonstrator died, as he most likely would, if these demon-

felt that you are quite right in concentrating your energy over a situation that threatened to involve bloodshed on a vast scale and that too by the adoption of the method of Satyagraha."

" ನಿಮ್ಮ ಪತ್ರಕ್ಕಾಗಿ ಆಭಾರಿ ಇದ್ದೇನೆ. ಸರ್ ಎರಿಕ್ ಡ್ರಮುಂಡ, ಸರ್‌ಜಾನ್ ಸಾಯಮನ್ ಮತ್ತು ನಿಮ್ಮ ನಡುವೆ ಆದ ಪತ್ರವ್ಯವಹಾರವನ್ನು ನೀವು ಕಳಿಸಿದ್ದು ಮುಟ್ಟಿತು. ನಿಮ್ಮ ಆಂದೋಲನದ ಬಗ್ಗೆ ನಾನು ಓದಿದಾಗ ನೀವು ಯಾವುದೇ ರೀತಿಯಿಂದ ಹಿಂದುಸ್ಥಾನಕ್ಕಿಂತ ಚೀನದ ವಿಷಯದಲ್ಲಿ ಪಕ್ಷಪಾತ ಮಾಡುತ್ತೀರೆಂದು ನನಗೆ ಕಲ್ಪನೆ ಸಹ ಬರಲಿಲ್ಲ. ದೊಡ್ಡ ಪ್ರಮಾಣದ ಮೇಲೆ ರಕ್ತಪಾತವಾಗುವ ಸಂಭವವಿದ್ದಲ್ಲಿ ಆ ಪರಿಸ್ಥಿತಿಯನ್ನು ತಡೆಯುವದಕ್ಕಾಗಿ ನೀವು ನಿಮ್ಮ ಶಕ್ತಿಸರ್ವಸ್ವವನ್ನು ಒಟ್ಟುಗೂಡಿಸುತ್ತಿರುವದು ಅತ್ಯಂತ ಯೋಗ್ಯವಾಗಿದೆ. ಮತ್ತು ನೀವು ಈ ಕಾರ್ಯವನ್ನು ಸತ್ಯಾಗ್ರಹದ ಪದ್ಧತಿಯಿಂದ ಮಾಡುತ್ತಿರುವದು ಆದರ ವೈಶಿಷ್ಟ್ಯವಾಗಿದೆ."

ವಲ್ಲಭಭಾಯಿ ಅಂದರು : " ಆಯಿತು, ಇಷ್ಟೇ ಬರೆಯುವದೇನು ? "

ಬಾಪೂ ಅಂದರು: " ಮತ್ತೇನು ? ಹಿಂದುಸ್ತಾನದ ವಿಷಯದಲ್ಲಿ ಸಹ ಇಂತಹದೇ ಯಾವುದಾದರೊಂದು ಚಳವಳಿ ಮಾಡಿರೆಂದು ಬರೆಯಬೇಕೇನು ? "

ವಲ್ಲಭಭಾಯಿ : " ಇಲ್ಲ. ನಾವಂತೂ ನಮ್ಮದನ್ನು ನೀಗಿಸಿಕೊಳ್ಳುವೆವು. ಆದರೆ ಹೊರಗಿರುತ್ತಿದ್ದರೆ ನಾವು ಕೂಡ ನಿಮ್ಮ ಸಹಾಯಕ್ಕೆ ಬರುತ್ತಿದ್ದೆವೆಂದು ಬರೆಯಿರಲ್ಲ. "

ಪ್ರೊ. ರಾವ್ ಎಂಬ ಹೆಸರಿನ ಮನುಷ್ಯನು ಗೋಕುಲದಾಸ ತೇಜಪಾಲ ದವಾಖಾನೆಯಲ್ಲಿ ಸರ್ಪದ ಹೆಡೆಯನ್ನು ಮತ್ತು ಮೊಳೆಗಳನ್ನು ತಿನ್ನುವ ಪ್ರಯೋಗವನ್ನು ಮಾಡಿ ತೋರಿಸಿದ್ದನ್ನು ಕುರಿತು ಭಯಭೀತರಾಗಿ ಬಾಪೂ ಅವರು ನಟರಾಜನ್ನರಿಗೆ ಪತ್ರ ಬರೆದರು :

" Dear Mr. Natarajan,

I am sure you must have read the reports of an exhibition given by an Indian] Yogi of his powers before an audience specially assembled at the Gokuldas Tejpal Hospital. The Yogi is reported to have eaten a live viper's head, nails, nitric acid, and the like, and that the Chief justice and his wife were among the distinguished audience. The report states that one lady was so disgusted at the eating of the viper's head that she abruptly left the hall before the exhibition was finished. I do not know how you look at such exhibitions. In my opinion they are degrading both for the demonstrator, as also for the public. And if the demonstrator died, as he most likely would, if these demon-

strations were continued, those who encouraged him by attending them, I should hold guilty of manslaughter. I do not think that either science or humanity is served by such revolting exhibitions, The text books on Hatha Yoga clearly lay down that the Hathayogis are expected not to exhibit their yogic powers or make use of them for purposes of gain. If you agree with me, will you not initiate an agitation in the daily press for preventing such cruel exhibitions? One man, I suppose, you know, recently died in Rangoon precisely giving demonstrations such as the one reported in Bombay.

Yours sincerely,
M. K. Gandhi"

" ಪ್ರಿಯ ಬಂಧು ನಟರಾಜನ್,

ಗೋಕುಲದಾಸ ತೇಜಪಾಲ ದವಾಖಾನೆಯಲ್ಲಿ ವಿಶೇಷ ರೀತಿಯಿಂದ ಆಮಂತ್ರಿಸಿದ ಜನರ ಸಭೆಯಲ್ಲಿ ಒಬ್ಬ ಹಿಂದುಸ್ತಾನದ ಯೋಗಿಯು ತನ್ನ ಸಿದ್ಧಿಗಳ ಪ್ರದರ್ಶನ ಮಾಡಿದ ವರದಿಯನ್ನು ನೀವು ಅವಶ್ಯ ಓದಿರಬಹುದು. ಈ ಯೋಗಿಯು ಜೀವಂತ ಸರ್ಪದ ತಲೆಯನ್ನೂ ಮೊಳೆಗಳನ್ನೂ ಮತ್ತು ನೈಟ್ರಿಕ್ ಆ್ಯಸಿಡ್ ಮುಂತಾದ ವಸ್ತುಗಳನ್ನೂ ತಿಂದನೆಂದು ವರದಿಯಲ್ಲಿದೆ. ಸಭೆಯಲ್ಲಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರೂ ಮತ್ತು ಅವರ ಪತ್ನಿಯೂ ಪ್ರತಿಷ್ಠಿತ ಪ್ರೇಕ್ಷಕರಾಗಿದ್ದರು. ಆ ಯೋಗಿಯು ಜೀವಂತ ಸರ್ಪದ ತಲೆಯನ್ನು ತಿನ್ನುತ್ತಿದ್ದಾಗ ಒಬ್ಬ ಭಗಿನಿಗೆ ಸಹಿಸದಷ್ಟು ಹೇಸಿಕೆಯೆನಿಸಿ ಸಭೆಯಿಂದ ಒಮ್ಮಿಂದೊಮ್ಮೆಲೇ ಎದ್ದು ಹೋದಳು ಎಂದು ಹೇಳಲಾಗುತ್ತಿದೆ. ಈ ಪ್ರಯೋಗಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂಬುದು ನನಗೆ ಗೊತ್ತಿಲ್ಲ. ಇದನ್ನು ಮಾಡಿ ತೋರಿಸುವವನು ಮತ್ತು ನೋಡುವವನು ಇಬ್ಬರನ್ನೂ ಈ ವಿಷಯವು ಅಧಃಪತನಕ್ಕೆ ಒಯ್ಯುವಂಥಾದ್ದಿದೆಯೆಂದು ನನ್ನ ಅಭಿಪ್ರಾಯವಾಗಿದೆ. ಆ ಯೋಗಿಯು ತನ್ನ ಇಂಥ ಪ್ರಯೋಗಗಳನ್ನು ಹಾಗೇ ಮುಂದುವರಿಸಿದರೆ ಅವಶ್ಯ ಸಾಯುವನು. ಒಂದು ವೇಳೆ ಅವನು ಈ ಪ್ರಕಾರ ಸತ್ತರೆ ಯಾವ ಪ್ರೇಕ್ಷಕರು ಅಲ್ಲಿ ಉಪಸ್ಥಿತರಿದ್ದು ಅವನಿಗೆ ಇಂಥ ಪ್ರಯೋಗಗಳನ್ನು ಮಾಡಲಿಕ್ಕೆ ಪ್ರೋತ್ಸಾಹನ ಕೊಟ್ಟರೊ ಅವರನ್ನು ನರಹತ್ಯೆಯ ಅಪರಾಧಿಗಳೆಂದು ನಾನು ತಿಳಿಯುವೆನು. ಇಂಥ ಹೇಸಿಕೆಯನ್ನುಂಟುಮಾಡುವ ಪ್ರಯೋಗಗಳಿಂದ ವಿಜ್ಞಾನದ ಸೇವೆಯಾಗಲಿ ಮಾನವತೆಯ ಸೇವೆಯಾಗಲಿ ಆಗುವದಿಲ್ಲ. ಹಠಯೋಗಿಗಳು ತಮಗೆ ಪ್ರಾಪ್ತವಾದ ಸಿದ್ಧಿಗಳನ್ನು ಮಾಡಿ ತೋರಿಸಲೂಬಾರದು, ಅಥವಾ ಹಣವನ್ನು ಗಳಿಸುವದಕ್ಕಾಗಿ ಅವುಗಳ ಉಪಯೋಗವನ್ನೂ ಮಾಡಬಾರದು ಎಂದು ಹಠಯೋಗದ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ನೀವು ನನಗೆ ಅನುಕೂಲ

ಮತದವರಿದ್ದರೆ ಈ ಘಾತುಕ ಪ್ರದರ್ಶನಗಳನ್ನು ತಡೆಯುವದಕ್ಕಾಗಿ ದೈನಿಕ ಪತ್ರಗಳಲ್ಲಿ ಚಳವಳಿಯನ್ನು ಪ್ರಾರಂಭ ಮಾಡಬೇಕು. ಇದೇ ಪ್ರಕಾರದ ಪ್ರಯೋಗವನ್ನು ಮಾಡುವಾಗ ಒಬ್ಬ ಮನುಷ್ಯನು ಮೊನ್ನೆ ಮೊನ್ನೆ ರಂಗೂನದಲ್ಲಿ ತನ್ನ ಜೀವ ಕಳೆದುಕೊಂಡದ್ದು ನಿಮಗೆ ಗೊತ್ತಿರಬಹುದೆಂದು ನನಗನಿಸುತ್ತದೆ.

ನಿಮ್ಮ
ಮೊ. ಕ. ಗಾಂಧೀ"

ಇವತ್ತು ಆಕ್ಸಫರ್ಡ ವಿಶ್ವವಿದ್ಯಾಲಯದ ಸಲುವಾಗಿ 'ಆತ್ಮಕಥೆ'ಯ ಸಂಕ್ಷಿಪ್ತ ಸಂಸ್ಕರಣದ ಹೊಸ ಪ್ರಕರಣಗಳನ್ನು ಪೂರ್ಣ ಮಾಡಿದೆನು. ಬಾಪೂ ಎಲ್ಲವನ್ನೂ ನೋಡಿದರು. ಸಾಯಂಕಾಲ ವಲ್ಲಭಭಾಯಿ
೨೭-೪-'೩೨ ಅಂದರು: "ಹೋದ ವರುಷ ಇಲ್ಲಿ ಉತ್ತಮ ಮೋಚಗಾರನಿದ್ದನು, ಈಗ ಅಂತಹ ಮೋಚಗಾರರು ಉಳಿಯಲಿಲ್ಲ. ಎರಡೆರಡು ಇಂಚು ಅಗಲ ಪಟ್ಟಿಗಳನ್ನು ಮಾಡಿ ತಂದದ್ದರಿಂದ ನಾನು ಜೋಡುಗಳನ್ನು ತಿರುಗಿ ಬಿಡಬೇಕಾಯಿತು." ಬಾಪೂ ಅಂದರು: "ನಾನು ತೊಗಲು ತರಿಸಿ ಹೊಲಿದು ಕೊಡಲೇನು? ನಾನು ಕಲಿತ ಕಲೆಯು ಇದುವರೆಗೆ ನನಗೆ ಜ್ಞಾಪಕವಾದರೂ ಇದೆಯೊ ಇಲ್ಲವೊ ಎಂಬುದನ್ನು ನೋಡಿಯಾದರೂ ನೋಡುವೆ. ನನಗೆ ಉತ್ತಮ ಜೋಡುಗಳನ್ನು ಮಾಡಲಿಕ್ಕೆ ಬರುತ್ತಿತ್ತೆಂಬುದು ನಿಮಗೆ ಗೊತ್ತಿದೆಯಲ್ಲವೆ? ನನ್ನ ಕೈಗಾರಿಕೆಯ ಮಾದರಿಯ ನಮೂನೆಯು ಸೋದೇಪುರದ ಖಾದೀ ಪ್ರತಿಷ್ಠಾನದಲ್ಲಿದೆ. ಅಲ್ಲಿ ಸೋರಾಬ್ಜಿ ಅಡಾಜನಿಯಾ ಬಂದಿದ್ದರು. ಅವರ ವಿಷಯಕ್ಕೆ ಸತ್ಯಾನಂದ ಬೋಸನು ಬಹಳ ಪ್ರೇಮ ತೋರಿಸಿದನು. ಆದುದರಿಂದ ಅವರು ಈ ಮನುಷ್ಯನಿಗೆ ನಿಮ್ಮ ಕೈಯಿಂದ ಮಾಡಿದ ಜೋಡುಗಳನ್ನು ಕಳಿಸಿದರೆ ಒಳ್ಳೆಯದೆಂದು ನನಗೆ ಬರೆದರು. ನಾನು ಅವನಿಗೆ ಕಳಿಸಿದ್ದೆನು. ಆದರೆ ಅವನು ಅತ್ಯಂತ ವಿನಯಶಾಲಿಯಾದ ಬಂಗಾಲಿ ಎಂದು ಸಿದ್ಧವಾಯಿತು. ಅವನು ಹೇಳಿದ: 'ಈ ಜೋಡುಗಳು ನನ್ನ ಕಾಲಿಗಾಗಿ ಅಲ್ಲ, ನನ್ನ ತಲೆಯ ಮೇಲೆ ಇಟ್ಟುಕೊಳ್ಳುವದಕ್ಕಾಗಿ ಇರುತ್ತವೆ.' ಅವನು ಒಂದು ದಿವಸವೂ ಅವನ್ನು ಉಪಯೋಗಿಸಲಿಲ್ಲ. ಹಾಗೇ ಇಟ್ಟಿದ್ದನು. ಹಿಂದಿನಿಂದ ಖಾದೀ ಪ್ರತಿಷ್ಠಾನದ ಸಂಗ್ರಹಾಲಯಕ್ಕೆ ಕೊಟ್ಟುಬಿಟ್ಟನು."

ಈ ಕಥೆಯನ್ನು ವರ್ಣಿಸಿ ಹೇಳತೊಡಗಿದರು: "ಮಹದೇವ, ಈ ಸಂಕ್ಷಿಪ್ತ ಸಂಸ್ಕರಣದಲ್ಲಿ ಜೋಡು ಮಾಡುವ ನನ್ನ ಈ ಕಥೆಯು ಎಲ್ಲಿಯಾದರೂ ಬಂದಿದೆಯೆ? ಬರಲೇ ಬೇಕು. ಟಾಲಸ್ಟಾಯ ಫಾರ್ಮದಲ್ಲಿ ಈ ಉದ್ಯೋಗವು

ಚನ್ನಾಗಿ ನಡೆಯುತ್ತಿತ್ತು. ನಾನು ಚಿಕ್ಕಮಕ್ಕಳಿಗೆ ಎಷ್ಟೋ ಜೋಡುಗಳನ್ನು ತಯಾರು ಮಾಡಿದ್ದೇನೆ. ಕ್ಯಾಲನ್‌ಬ್ಯಾಕ್‌ನು ಒಂದು ಟ್ರ್ಯಾಪಿಸ್ಟ ಮೊನೆಸ್ಟರಿಯಲ್ಲಿ ಹೋಗಿ ಕಲಿತು ಬಂದು ನಮಗೆ ಕಲಿಸಿದನು."

* * *

ಮಿಲ್ಸನ ಪತ್ರ ಬಂದಿತ್ತು. ಚೀನಕ್ಕೆ ಹೋಗುತ್ತಿದ್ದೇನೆ, ಎಂದು ಸುದ್ದಿ ತಿಳಿಸಿದನು. ಮತ್ತು ಬರೆದನು :

"We have got marching orders and we won't come back until you have made peace with Government."

"ನಮಗೆ ಇಲ್ಲಿಂದ ಕೂಚು ಮಾಡಲಿಕ್ಕೆ ಆಜ್ಞೆ ಆಗಿದೆ. ನೀವು ಸರಕಾರದ ಸಂಗಡ ಒಪ್ಪಂದ ಮಾಡಿಕೊಳ್ಳುವ ವರೆಗೆ ನಾವು ತಿರುಗಿ ಬರುವದಿಲ್ಲ."

ಬಾಪೂ ಅಂದರು : "ಪರದೇಶೀ ಸುದ್ದಿಗಾರರನ್ನು ಹೊರಗೆ ಹಾಕಿದಂತೆ ಕಾಣುತ್ತದೆ. ಇದರ ಅರ್ಥವನ್ನು ನಾನು ಹೀಗೆಯೇ ಮಾಡುತ್ತೇನೆ. ಸ್ಯಾಮುಅಲ್ ಹೋರನು ಇದೆಲ್ಲವನ್ನೂ ಮಾಡಬಲ್ಲನು. ಈ ಮನುಷ್ಯನು ಯುದ್ಧದಲ್ಲಿ ಕೆಲಸ ಮಾಡಿದ್ದಾನೆ. ಅವನು ನಮ್ಮ ಯುದ್ಧವನ್ನು ಕೇವಲ ಯುದ್ಧವೆಂದು ತಿಳಿದೇ ಎಲ್ಲ ಕೆಲಸ ಮಾಡುತ್ತಿದ್ದಾನೆ." ಮತ್ತೆ ಸ್ವಲ್ಪ ಹೊತ್ತು ನಿಂತು ಮಾತಾಡಿದರು : "ಒಂದೆರಡು ವರುಷ ಇವರದು ಹೀಗೇ ನಡೆದರೆ ನಮ್ಮಲ್ಲಿಯ ಎಲ್ಲ ಕೊಳೆ ಹೊರಟು ಹೋಗುವದು. ಆ ಮೇಲೆ ನಾವು ಉತ್ತಮ ರೀತಿಯಿಂದ ಅಧಿಕಾರ ಭೋಗಿಸಲಿಕ್ಕೆ ಯೋಗ್ಯರಾಗುವೆವು." ನಾನು ಅಂದೆ : "ಆದರೆ ಬಾಪೂ, ಎರಡು ವರುಷ ಇರ-ಬೇಕಾಗುವದೆಂದು ಅನಿಸುತ್ತದೆಯೇನು ?" ಬಾಪೂ : "ಯಾವ ಊಹೆಯೂ ಇಲ್ಲಿ ಕೆಲಸ ಮಾಡಲಾರದು. ಆದರೆ ಎರಡು ವರುಷ ಇರಬೇಕಾಗಿ ಬಂದರೂ ಆಶ್ಚರ್ಯವಿಲ್ಲ. ನಮಗೆ ಇಲ್ಲಿ ಕಷ್ಟವಾದರೂ ಏನಿದೆ ? ಬಿದ್ದಿದ್ದೇವೆ, ಕೆಲಸಬೊಗಸ ಮಾಡುತ್ತೇವೆ ಮತ್ತು ಶಾಂತಿಯಿಂದ ದಿನಗಳನ್ನು ಕಳೆಯುತ್ತಿದ್ದೇವೆ."

* * *

ಹರಿಲಾಲನ ದುಃಖಪೂರಿತ ಪತ್ರವು ಬಂದಿದೆ. ಅದರಲ್ಲಿ ಮನುಳನ್ನು ಬಲೀ-ಬಹೆನಳ ಹತ್ತಿರದಿಂದ ಬಿಡುಗಡೆ ಮಾಡುವ ಬೇಡಿಕೆಯನ್ನು ಮಾಡಲಾಗಿದೆ. ಬಾಪೂರನ್ನು ತಪ್ಪುಗಾರರೆಂದು ಎಣಿಸಲಾಗಿದೆ. ಬಲೀಬಹೆನಳು ಹೊಡೆದದ್ದರ ವಿಷಯವಾಗಿ ತಕರಾರು ಮಾಡಲಾಗಿದೆ. ಬಾಪೂ ಅವನಿಗೆ ಉದ್ದ ಪತ್ರವನ್ನು ಬರೆದಿದ್ದಾರೆ. ಆದರೆ ಅದರ ಕೊನೆಯಭಾಗವು ಸಮುದ್ರದಂತೆ ಕ್ಷಮೆಯಿಂದ ಉಕ್ಕೇರಿ ಬರುವ ತಂದೆಯ ಹೃದಯದಿಂದುದುರುವ ರಕ್ತದ ಹನಿಗಳಂತಿದೆ. "ನಾನು ಇನ್ನೂ ನೀನು ಉತ್ತಮನಾಗುವ ಆಶೆ ಬಿಡುವದಿಲ್ಲ. ಯಾಕಂದರೆ ನಾನು ನನ್ನ ವಿಷಯಕ್ಕೆ ಆಶೆಯನ್ನು ಬಿಡುವದಿಲ್ಲ. ನೀನು ಬಾ ಅವಳ ಹೊಟ್ಟೆಯಲ್ಲಿದ್ದಾಗ

ನಾನು ಅಯೋಗ್ಯನಾಗಿದ್ದೇನೆಂಬುದು ನನಗೆ ಗೊತ್ತಿದೆ. ಆದರೆ ನಿನ್ನ ಜನ್ಮದನಂತರ ನಾನು ಸಾವಕಾಶವಾಗಿ ಪ್ರಾಯಶ್ಚಿತ್ತ ತೆಗೆದುಕೊಳ್ಳುತ್ತ ಬಂದಿದ್ದೇನೆ. ಅದರಿಂದ ಪೂರಾ ಆಶೆಯನ್ನು ಹೇಗೆ ಬಿಡಲಿ? ಕಾರಣ ನಾನು ಮತ್ತು ನೀನು ಜೀವಿಸಿರುವ ವರೆಗೆ, ಕೊನೆಯ ಕ್ಷಣದವರೆಗೆ ಆಶೆಯನ್ನು ಹಿಡಿಯುವೆನು. ಆದರಿಂದ ನಿನಗೆ ಶುದ್ಧಿ ಬಂದಾಗ ನೀನು ನಿನ್ನ ಪತ್ರದ ಉದ್ಧಟತನವನ್ನು ನೋಡಿ ಅಳಬೇಕು, ಮತ್ತು ಮೂರ್ಖತನದ ಬಗ್ಗೆ ನಗಬೇಕೆಂದು, ನನ್ನ ರೂಢಿಯ ವಿರುದ್ಧ, ನಿನ್ನ ಈ ಪತ್ರ ವನ್ನು ಕಾಯ್ದಿಡುತ್ತೇನೆ. ನಿನಗೆ ಚುಚ್ಚಿ ಮಾತಾಡುವದಕ್ಕಾಗಿ ಈ ಪತ್ರವನ್ನು ಕಾಯ್ದಿಡುವದಿಲ್ಲ. ಆದರೆ ದೇವರಿಗೆ ಇಂಥ ಪ್ರಸಂಗ ತೋರಿಸುವದಿದ್ದರೆ, ನಮ್ಮ-ಷ್ಟಕ್ಕೆ ನಾವೇ ನಗುವದಕ್ಕಾಗಿ ಈ ಪತ್ರ ಕಾಯ್ದಿಡುತ್ತೇನೆ. ನಮ್ಮೆಲ್ಲರಲ್ಲಿಯೂ ದೋಷಗಳು ತುಂಬಿವೆ. ಆದರೆ ದೋಷಮುಕ್ತರಾಗುವದು ನಮ್ಮೆಲ್ಲರ ಧರ್ಮವಿದೆ. ನೀನೂ ಆಗು."

ಇವತ್ತು 'ಹಿಂದೂ' ದಲ್ಲಿ ಒಬ್ಬ ಇಂಗ್ಲೀಷ ಮನುಷ್ಯನ ಸುಂದರವಾದ ಲೇಖನವು ಬಂದಿದೆ. ಅವನು ದೇಶದ ಪರಿಸ್ಥಿತಿಯ ಚಿತ್ರವನ್ನು ಇದ್ದಕ್ಕಿದ್ದಂತೆ ಚಿತ್ರಿಸಿದ್ದಾನೆ. ಹೆಸರು ಕೊಟ್ಟಿದ್ದರೆ ಲೇಖನದ ಬೆಲೆಯು ಹೆಚ್ಚುತ್ತಿತ್ತು.

೨೮-೪-'೩೨ ಸರೋಜಿನಿ ದೇವಿಯವರು ಇಲ್ಲಿ ಬರುವ ಸುದ್ದಿ ಬಂದಿದೆ.

ಗುಲಜಾರೀಲಾಲರ ಜಡ್ಡಿನ ವಿಷಯಕ್ಕೆ ಮಾತಾಡುತ್ತ ಬಾಪೂ ಅಂದರು: " ದೇವರು ಅವನನ್ನು ಉಳಿಸಿದರೆ ನೆಟ್ಟಗೆ. ಪ್ಯಾರೆಲಾಲನಂತೆ ಗುಜರಾತದೊಂದಿಗೆ ಓತಪ್ರೋತನಾಗಿ ಹೋಗುವ ಪಂಜಾಬಿಯು ಇವನು ಎರಡನೆಯವನು. ಇವನು ಪ್ಯಾರೇಲಾಲನಿಗಿಂತಲೂ ಒಂದು ತೂಕ ಹೆಚ್ಚಾಗಿದ್ದಾನೆ. ಯಾಕಂದರೆ ಪ್ಯಾರೇಲಾಲನ ದಾರಿಯಲ್ಲಿ ಅಡ್ಡ ಬರುವವರು ಯಾರೂ ಇಲ್ಲ. ಇವನಿಗೆ ಹೆಂಡತಿ ಮಕ್ಕಳು ಮುಂತಾದ ಬಹಳ ಜನರ ವಿರೋಧವಿದೆ. ಈ ಮನುಷ್ಯನು ಒಳ್ಳೇ ಸಂಘಟಕನೂ ಸತ್ಯದ ಏಕನಿಷ್ಠ ಪೂಜಾರಿಯೂ ಆಗಿದ್ದಾನೆ."

ಇವತ್ತು ಸಾಯಂಕಾಲ ನಾವು 'अब हम अमर भये, न मरेंगे' ಎಂಬ ಹಾಡನ್ನು ಹಾಡಿದೆವು. ಬಾಪೂ ಹೇಳಿದರು: " ಈ ಹಾಡು ತೆಗೆದು ಹಾಕಲಿಕ್ಕೆ ಯೋಗ್ಯವಾಗಿದೆ. ಅಮರರಾಗುವದೆಂದು ಹೇಳಿದೆಯಲ್ಲ, ಅಮರರಾಗುವ ಮಾತೆಲ್ಲಿದೆ? ಇದರಲ್ಲಿ ಮುಂದೆ ಕಾರಣವನ್ನು ತೋರಿಸಲಾಗಿದೆ. ಮಿಥ್ಯಾತ್ವವನ್ನು ಬಿಟ್ಟಮೇಲೆ ದೇಹವನ್ನು ಎಂತು ಧಾರಣಮಾಡುವದು? ಅಲ್ಲದೆ ನಾನಂತೂ ಈ ದೇಹವಿರುವ ವರೆಗೆ ಮೋಕ್ಷವಾಗಲಾರದೆಂಬ ನಂಬುಗೆಯುಳ್ಳವನಾಗಿದ್ದೇನೆ. ಮೇಲಾಗಿ ಈ ಮಾತು ಹೇಳಲಿಕ್ಕೆ ಬರುವಂತಹದು ಇರುವದಿಲ್ಲ. ನಮ್ಮಗಂತೂ ಇದು ಹಾಡುವ ವಿಷಯವೇ ಆಗಲಾರದು. ಭಕ್ತಿಯ ಪದಗಳು ನಮ್ಮ ಭಜನಾವಲಿಯಲ್ಲಿ ಉಪ-

ಯೋಗ ಬೀಳುತ್ತವೆ. ಇದರಲ್ಲಿಯಂತೂ ಜೈನರ ತರ್ಕವಾದವಿದೆ, ಭಕ್ತಿ-ರಸವಿಲ್ಲ. ಆದರೆ ಸಮಾಜದ ಸಲುವಾಗಿ ನಾವು ಭಕ್ತಿಯ ಪದಗಳನ್ನು ಇಡಲಿಕ್ಕೆ ಬೇಕು. " ನಾನು ಆದರಲ್ಲಿಯ ಉತ್ತಮ ಭಾವವನ್ನು ತೋರಿಸಿ ಸಮರ್ಥಿಸಿದೆನು. ಬಾಪೂ ಹೇಳಿದರು : " ಇದು ಬೇರೆ ಹಾಡುಗಳಲ್ಲಿಯೂ ಬರುತ್ತದೆ."

ಇದೇ ಪ್ರಕಾರ ಬಾಪೂ ಹೇಳಿದರು : "तद्ब्रह्म निष्कलमहम्' ಇದನ್ನು ಹಾಡುವದರ ವಿಷಯಕ್ಕೂ ನನ್ನ ಹಳೇ ಜಗಳವಿದ್ದೇಇದೆ" 'दिलमे दिया करो दिया करो' ಈ ಹಾಡು ಸಹ ನನಗೆ ಒಪ್ಪಿಗೆ ಇಲ್ಲವೆಂದು ಅವರು ಒಂದು ಸಾರೆ ಹೇಳಿದ್ದರು. ನಾನು : " ಇದು ಒಪ್ಪಿಗೆ ಇರದಿದ್ದರೆ 'हरिने भजतां हजी कोईनी लाज जता नथी जाणीरे' 'ಹರಿಯ ಭಜನೆಮಾಡುವಾಗ ಯಾರ ಮಾನವೂ ಹೋಗುವದಿಲ್ಲ' ಎಂಬದರಲ್ಲಿಯಂತೂ ಭಕ್ತರ ಹೆಸರಿನ ಹೊರತಾಗಿ ಮತ್ತು ಮೊದಲನೇ ಸಾಲನ್ನೊಂದು ಬಿಟ್ಟು ಬೇರೆ ಏನೂ ಇಲ್ಲ." ಆಗ ಬಾಪೂ ಹೇಳಿದರು. : " ಆದರೆ ಈ ಎಲ್ಲ ಭಕ್ತರ ಮಾಲೆಯು ಮಧುರವೆನಿಸುತ್ತದೆ."

ಹೆಣ್ಣುಮಕ್ಕಳಿಗೆ ಇವತ್ತು ಬಹಳ ದೊಡ್ಡ ಪತ್ರ ಬರೆದರು. ಆದರಲ್ಲಿಯ ಮಹತ್ವದ ಭಾಗವು ಇಂತಿದೆ : " ಪಿಂಡಬ್ರಹ್ಮಾಂಡದ ಬಹಳ ದೊಡ್ಡ ಪ್ರಶ್ನೆಯನ್ನು ಕೇಳಿದ್ದೀರಿ. ಆದರೆ ಸ್ವಲ್ಪದರಲ್ಲಿ ತಿಳಿಸುತ್ತೇನೆ. ಪಿಂಡವೆಂದರೆ ಈ ದೇಹವೆಂದು ಈಗ ಸದ್ಯಕ್ಕೆ ತಿಳಿಯೋಣ. ಬ್ರಹ್ಮಾಂಡವೆಂದರೆ ಈ ಪೃಥ್ವಿ. ಈಗ ನಮ್ಮ ದೇಹದಲ್ಲಿದ್ದದ್ದೆಲ್ಲಾ ಪೃಥ್ವಿಯಲ್ಲಿದೆ, ಮತ್ತು ದೇಹದಲ್ಲಿಲ್ಲದ್ದು ಪೃಥ್ವಿಯಲ್ಲಿಲ್ಲ. ದೇಹವು ಮಣ್ಣಿನಿಂದಾಗಿದೆ. ಆದರಂತೆ ಪೃಥ್ವಿಯೂ ಮಣ್ಣಿನಿಂದಾಗಿದೆ. ಪೃಥ್ವಿಯಲ್ಲಿ ಪಂಚತತ್ವಗಳಿವೆ. ಆದರಂತೆ ದೇಹದಲ್ಲಿಯೂ ಪಂಚತತ್ವಗಳಿವೆ. ಪೃಥ್ವಿಯಲ್ಲಿ ಅನೇಕ ಪ್ರಕಾರದ ಜೀವಗಳಿವೆ. ಹಾಗೆ ದೇಹದಲ್ಲಿಯೂ ಅನೇಕ ಪ್ರಕಾರದ ಜೀವಗಳಿವೆ. ದೇಹವು ಅಳಿಯುತ್ತದೆ ಮತ್ತು ಹುಟ್ಟುತ್ತದೆ. ಹಾಗೇ ಪೃಥ್ವೀ ಕೂಡ ರೂಪಾಂತರಗೊಳ್ಳುತ್ತಿರುತ್ತದೆ. ಹೀಗೇ ಈ ವಿಚಾರವನ್ನು ಇನ್ನೂ ವಿಸ್ತರಿಸಬಹುದು. ಆದರೆ ಇಷ್ಟರ ಮೇಲಿಂದ ನಮಗೆ ಶರೀರದ ವಿಷಯಕ್ಕೆ ನಿಜವಾದ ಜ್ಞಾನವಾದರೆ ಪೃಥ್ವಿಯ ವಿಷಯಕ್ಕೂ ನಮಗೆ ನಿಜವಾದ ಜ್ಞಾನವಾಗುವದು. ಈ ದೃಷ್ಟಿಯಿಂದ ಜ್ಞಾನಪ್ರಾಪ್ತಿಗಾಗಿ ನಮಗೆ ಬಹಳಷ್ಟು ನಿರರ್ಥಕ ಪ್ರಯತ್ನ ಮಾಡುವ ಆವಶ್ಯಕತೆಯಿಲ್ಲ. ಶರೀರವಂತೂ ನಮ್ಮ ಹತ್ತರ ಇದ್ದೇ ಇದೆ. ಅದರ ಜ್ಞಾನ ಮಾಡಿಕೊಂಡರೆ ನಮ್ಮ ತೊಂದರೆ ನಿವಾರಣೆಯಾದಂತಾಯಿತು. ಪೃಥ್ವಿಯ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವ ಮೋಹವಿಟ್ಟರೆ ಅದು ಯಾವಾಗಲೂ ಅಪೂರ್ಣವಾಗಿಯೇ ಉಳಿಯುವದು. ಆದುದರಿಂದ ಜ್ಞಾನಿಗಳು ಪಿಂಡದಲ್ಲಿದ್ದದ್ದೇ ಬ್ರಹ್ಮಾಂಡದಲ್ಲಿ ಎಂದು ಕಲಿಸಿ ಹೋಗಿದ್ದಾರೆ. ನಾವು ಆತ್ಮಜ್ಞಾನವನ್ನು ಪ್ರಾಪ್ತ ಮಾಡಿಕೊಂಡರೆ ಆದರಲ್ಲಿ ಎಲ್ಲವೂ ಬಂದು ಹೋಗುತ್ತದೆ. ಆದರೆ ಈ ಆತ್ಮಜ್ಞಾನ

ವನ್ನು ಪ್ರಾಪ್ತ ಮಾಡಿಕೊಳ್ಳುತ್ತ ಮಾಡಿಕೊಳ್ಳುತ್ತ ನಮಗೆ ಎಷ್ಟೊ ಹೊರಗಿನ ಜ್ಞಾನವೂ ಸಿಕ್ಕು ಹೋಗುತ್ತದೆ. ಇದರಲ್ಲಿ ಸಿಕ್ಕ ರಸವನ್ನು ಸವಿಯಲಿಕ್ಕೆ ನಮಗೆ ಅಧಿಕಾರವಿದೆ. ಯಾಕಂದರೆ ಆ ರಸವನ್ನು ಸಹ ನಾವು ಆತ್ಮಜ್ಞಾನದ ನಿಮಿತ್ತ ದಿಂದಲೇ ಸವಿಯುತ್ತೇವೆ. . . . ನನಗನಿಸುತ್ತದೆ: ನರಸಿಂಹಭಾಯಿಯವರು ಗೀತಾದ ಅರ್ಥವನ್ನು ಮಾಡುವಾಗ ಆಳವಾಗಿ ಇಳಿದಂತಿಲ್ಲ. ಗೀತೆಯ ಕೃಷ್ಣನ ವಿಚಾರ ಮಾಡುವಾಗ ನಾವು ಐತಿಹಾಸಿಕ ಕೃಷ್ಣನನ್ನು ಅವನೊಂದಿಗೆ ಹೋಲಿಸ ಬಾರದು. ಕೃಷ್ಣನ ಮುಂದೆ ಹಿಂಸೆ ಅಥವಾ ಅಹಿಂಸೆಯ ಪ್ರಶ್ನೆಯಿದ್ದಿಲ್ಲ. ಅರ್ಜುನನು ಹಿಂಸೆಗಾಗಿ ಹೇಡಿಯಾಗಿದ್ದಿಲ್ಲ. ಆದರೆ ಸ್ವಜನರನ್ನು ಕೊಲ್ಲುವದು ಅವನಿಗೆ ಅಪ್ರಿಯ ವಾಗಿತ್ತು. ಆದುದರಿಂದ ಕೃಷ್ಣನು ಅವನಿಗೆ ಕರ್ತವ್ಯಪಾಲನೆ ಮಾಡುವಾಗ ಸ್ವಜನ ಪರಜನರ ಭೇದ ಮಾಡಲಾಗದೆಂದು ತಿಳಿಸಿಹೇಳಿದನು. ಗೀತೆಯ ಯುಗದಲ್ಲಿ ಯುದ್ಧದಲ್ಲಾಗುವ ಹಿಂಸೆಯನ್ನು ಮಾಡಬೇಕೊ ಮಾಡಬಾರದೊ ಎಂಬ ಪ್ರಶ್ನೆ ಯನ್ನು ಯಾವದೇ ಪ್ರಾಮಾಣಿಕ ಮನುಷ್ಯನು ಕೇಳುತ್ತಿರಲಿಲ್ಲ. ನಿಜವಾಗಿ ಈ ಪ್ರಶ್ನೆಯು ಈ ಕಾಲದಲ್ಲಿಯೇ ಎದ್ದಂತೆ ತೋರುತ್ತದೆ. ಅಹಿಂಸಾ ಧರ್ಮವನ್ನು ಆ ಕಾಲಕ್ಕೆ ಎಲ್ಲ ಹಿಂದುಗಳೂ ಮಾನ್ಯಮಾಡುತ್ತಿದ್ದರು. ಆದರೆ ಎಲ್ಲಿ ಹಿಂಸೆಯಿದೆ ಎಲ್ಲಿ ಅಹಿಂಸೆಯಿದೆ ಎಂಬುದು ಇವತ್ತು ಇದ್ದಂತೆ ಅಂದು ಕೂಡ ಚರ್ಚೆಯ ವಿಷಯ ವಿದ್ದೇ ಇತ್ತು. ಇವತ್ತು ನಾವು ಇಂಥ ಎಷ್ಟೋ ಕೃತಿಗಳನ್ನು ಮಾಡುತ್ತೇವೆ. ಅವುಗಳನ್ನು ನಾವು ಹಿಂಸೆಯೆಂದು ತಿಳಿಯುವದಿಲ್ಲ. ಅವನ್ನೇ ನಮ್ಮ ತರುವಾಯ ಬರುವ ಪೀಳಿಗೆಯು ಒಂದು ವೇಳೆ ಹಿಂಸೆಯೆಂದು ತಿಳಿಯಬಹುದು. ನಾವು ಹಾಲು ಕುಡಿಯುತ್ತೇವೆ, ಧಾನ್ಯ ಬೇಯಿಸಿ ತಿನ್ನುತ್ತೇವೆ. ಆದರಲ್ಲಿ ಜೀವ ಹಿಂಸೆಯಂತೂ ಇದ್ದೇ ಇದೆ. ಬರುವ ಪೀಳಿಗೆಯು ಈ ಹಿಂಸೆಯು ತ್ಯಾಜ್ಯವೆಂದು ತಿಳಿದು ಹಾಲು ಕುಡಿಯುವದನ್ನೂ ಧಾನ್ಯ ಬೇಯಿಸಿ ತಿನ್ನುವದನ್ನೂ ಬಂದು ಮಾಡಿ ಬಿಡುವ ಸಂಭವವು ಸಾಕಷ್ಟು ಇದೆ. ಇವತ್ತು ಈ ಹಿಂಸೆಯನ್ನು ಮಾಡುತ್ತಿದ್ದರೂ ನಾವು ಅಹಿಂಸಾಧರ್ಮದ ಪಾಲನೆ ಮಾಡುತ್ತೇವೆಂದು ನಿಶ್ಚಯಪೂರ್ವಕ ಹೇಳಲು ನಮಗೆ ಸಂಕೋಚವಾಗುವದಿಲ್ಲ. ಸರಿಯಾಗಿ ಇದೇ ಪ್ರಕಾರ ಗೀತೆಯ ಯುಗದಲ್ಲಿ ಯುದ್ಧವು ತೀರ ಸ್ವಾಭಾವಿಕವಾಗಿತ್ತು. ಅದನ್ನು ಮಾಡುತ್ತಿದಾಗ್ಯೂ ಅಹಿಂಸಾ ಧರ್ಮಕ್ಕೆ ಸ್ವಲ್ಪಾದರೂ ಹಾನಿ ತಟ್ಟುತ್ತದೆಂದು ಆ ಕಾಲಕ್ಕೆ ಜನರಿಗೆ ಅನಿಸುತ್ತಿರಲಿಲ್ಲ. ಆದುದರಿಂದ ಗೀತೆಯಲ್ಲಿ ಯುದ್ಧದ ಉದಾಹರಣೆಯನ್ನು ತೆಗೆದುಕೊಳ್ಳಲಾಗಿದೆ. ಅದು ನನಗೆ ತೀರ ನಿರ್ದೋಷವೆಂದು ಅನಿಸುತ್ತದೆ. ಇಡೀ ಗೀತೆಯ ಮನನ ಮಾಡಿ ಸ್ಥಿತಪ್ರಜ್ಞನ, ಬ್ರಹ್ಮಭೂತದ, ಭಕ್ತರ ಅಥವಾ ಯೋಗಿಗಳ ಲಕ್ಷಣ ಗಳನ್ನು ನೋಡಿದರೆ ಆಗ ನಾವು ಒಂದೇ ನಿರ್ಣಯಕ್ಕೆ ಬರುವೆವು: ಗೀತೆಯ ಉಪದೇಶಕ ಅಥವಾ ಗಾಯಕನಾದ ಶ್ರೀ ಕೃಷ್ಣನು ಸಾಕ್ಷಾತ್ ಅಹಿಂಸೆಯ ಅವತಾರ

-ನಾಗಿದ್ದನು. ಅರ್ಜುನನಿಗೆ ನೀನು ಯುದ್ಧ ಮಾಡು ಎಂದು ಉಪದೇಶಮಾಡು ವಾಗ ಅವನ ಅಹಿಂಸೆಗೆ ಸ್ವಲ್ಪ ಕೂಡ ಕುಂದುಬರುವದಿಲ್ಲ. ಇಷ್ಟೇ ಅಲ್ಲ ಅವನು ಎರಡನೇ ಉಪದೇಶ ಮಾಡಿದ್ದರೆ ಅವನ ಜ್ಞಾನವು ಅಪೂರ್ಣವೆಂದು ತಿಳಿಯ ಲಾಗುತ್ತಿತ್ತು. ಅವನನ್ನು ಯೋಗೀಶ್ವರನ ರೂಪದಲ್ಲಿ ಅಥವಾ ಪೂರ್ಣಾವ ತಾರವೆಂದು ಎಂದೂ ಪೂಜಿಸುತ್ತಿದ್ದಿಲ್ಲವೆಂದು ನನ್ನ ನಿಶ್ಚಿತ ಮತವಿದೆ. ಈವಿಷಯು ಕುರಿತು ನಾನು 'ಅನಾಸಕ್ತಿಯೋಗ' ದಲ್ಲಿ ಬರೆದ ವಿಚಾರಗಳನ್ನು ತೆಗೆದು ಕೊಳ್ಳಬೇಕು ".

ಸರದಾರ . . . ಎಂಬ ಹೆಸರಿನ ಸೀಖನು ಬರೆದನು : " ಸಾಧು, ಮಹಾತ್ಮಾ, ಪೈಗಂಬರ, ಮಹಾಪುರುಷ, ರವೀಂದ್ರ ಮತ್ತು ಯೋಗಿ ಅರವಿಂದ ಮುಂತಾದವ ರೆಲ್ಲರೂ ಕೂದಲುಗಳನ್ನು ಕಾಯುತ್ತಾರೆ. ಎಲ್ಲರೂ ಕೂದಲುಗಳ ಮಹತ್ವವನ್ನು ಮಾನ್ಯ ಮಾಡಿದ್ದಾರೆ. ನೀವು ಏಕೆ ಮಾನ್ಯ ಮಾಡುವದಿಲ್ಲ? ನೀವು ಕೂದಲು ಗಳನ್ನು ಕಾಯ್ದರೆ ಜಗತ್ತಿಗೆ ಬಹಳ ನೆಟ್ಟಗೆನಿಸುವದು ಮತ್ತು ನಿಮ್ಮನ್ನು ಹೆಚ್ಚಾಗಿ ಪೂಜಿಸುವರು. ನಾನು ನಿಮ್ಮನ್ನು ಸೀಖರನ್ನಾಗಿ ಮಾಡಲಿಚ್ಛಿಸುವದಿಲ್ಲ. ಯಾಕಂದರೆ ನೀವು ಉತ್ತಮೋತ್ತಮ ಸೀಖರ ಹಾಗೆಯೆ ಇದ್ದಿರಿ. "

"I am not writing this to oonvert you to Sikhism, though much I would like to do so. I see not much difference between a true saint like great guru Nanak Dev and your noble self. I am only suggesting that it will be in the fitness of things if the greatest living Indian and the greatest man of the present world keeps Keshas like all the great men of all times."

" ನೀವು ಸೀಖರಾದರೆ ನನಗೆ ಬಹಳ ನೆಟ್ಟಗೆನಿಸುತ್ತಿದ್ದರೂ ಇದನ್ನು ನಾನು ನಿಮ್ಮನ್ನು ಸೀಖರನ್ನಾಗಿ ಮಾಡಲು ಬರೆಯುತ್ತಿರುವದಿಲ್ಲ. ಮಹಾನ್ ಗುರು ನಾನಕ ದೇವರಂಥ ನಿಜವಾದ ಸಂತರಲ್ಲಿ ಮತ್ತು ನಿಮ್ಮಲ್ಲಿ ಯಾವ ದೊಡ್ಡ ವ್ಯತ್ಯಾಸವೂ ಕಾಣುವದಿಲ್ಲ. ಹಿಂದುಸ್ತಾನದ ಇವತ್ತಿನ ಎಲ್ಲಕ್ಕೂ ದೊಡ್ಡ ಮನುಷ್ಯನೂ ಇಂದಿನ ಜಗತ್ತಿನಲ್ಲಿ ಎಲ್ಲರಿಗಿಂತ ಮಹಾನ್ ಪುರುಷನೂ ಮೊದಲಿನ ಎಲ್ಲ ಮಹಾನ್ ಪುರುಷರಂತೆ ಕೂದಲುಗಳನ್ನು ಕಾಯ್ದರೆ ಒಳ್ಳೆಯದೇ ಇದೆ. "

ಅವನಿಗೆ ಬಾಪೂ ಬರೆದರು :

"With reference to the growing of hair and beard I hold a totally different view from yours. Whatever value, outward symbols had before, they do not and ought not to possess the superlative value that you seem to attach to the growing of hair and beard. For me I can see no reason whatever for departing

from a long established practice which I have accepted for myself. I would far rather that people judged me by my deeds than by my outward appearance."

" ಕೂದಲುಗಳನ್ನೂ, ಗಡ್ಡಗಳನ್ನೂ ಕಾಯುವ ವಿಷಯದಲ್ಲಿ ನನ್ನ ವಿಚಾರವು ನಿಮ್ಮಿಂದ ತೀರ ಭಿನ್ನವಾಗಿದೆ. ಬಾಹ್ಯ ಚಿಹ್ನಕ್ಕೆ ಮೊದಲಿನ ಕಾಲದಲ್ಲಿ ಬೇಕಾದಷ್ಟು ಮಹತ್ವ ಕೊಡುತ್ತಿದ್ದರೂ ಕೂದಲು ಹಾಗೂ ಗಡ್ಡಗಳನ್ನಿಡುವದಕ್ಕೆ ನೀವು ಯಾವ ಉಚ್ಚಸ್ಥಾನ ಕೊಡಬಯಸುತ್ತೀರೊ ಆ ಸ್ಥಾನ ಮತ್ತು ಆ ಮಹತ್ವ ಅವುಗಳಿಗಿರಬಾರದು. ಕೂದಲುಗಳ ವಿಷಯದಲ್ಲಿ ನಾನು ಇದುವರೆಗೆ ಮಾಡುತ್ತ ಬಂದದ್ದರಲ್ಲಿ ಯಾವ ಬದಲಾವಣೆಯನ್ನೂ ಮಾಡುವ ಆವಶ್ಯಕತೆ ನನಗನಿಸುವದಿಲ್ಲ. ನನ್ನ ಹೊರಗಿನ ತೋರಿಕೆಗಳಿಗಿಂತ ನನ್ನ ಆಚರಣೆಗಳಿಂದ ಜನರು ನನ್ನ ಬೆಲೆ ಕಟ್ಟುವದು ನನಗೆ ಬಹಳ ಸೇರುತ್ತದೆ. "

ಇವತ್ತು ಬಾಪೂ ತಾರೀಖು ಮರೆತರು. ನಾನೂ ಕೂಡ ಮರೆತೆನು. ನಾನು ಹೇಳಿದೆ: " ಇವತ್ತು ೨೮ ತಾರೀಖು " ವಲ್ಲಭಭಾಯಿ ಹೇಳಿದರು: " ನಿಮ್ಮ ಗ್ರಹ ನಿನ್ನೆಯಿಂದ ಬದಲಾಗಿದೆ. ಇದನ್ನು ಕೂಡ

**೨೯-೪-'೩೨** ಮರೆಯುತ್ತೀರೇನು ಇವತ್ತು ೨೯ ಆಯಿತು." ಇದಕ್ಕೆ ಬಾಪೂ ಹೇಳಿದರು: " ನಾನು ಎಷ್ಟು ಮುರ್ಖನಿದ್ದೇನೆ! ಗ್ರಹ ಬದಲಿಸಿದುದರ ಪ್ರತ್ಯಕ್ಷ ಪ್ರಮಾಣವೆಂದೊ ಏನೊ ಎಂಬಂತೆ ಇವತ್ತು ಹೋರನಿಂದ ಪತ್ರ ಬಂದಿದೆ."

'ಎಲ್ಲರೂ ನಾಚಿಕೆ ಬಿಟ್ಟವರೇ ಆಗಿದ್ದಾರೆ' ಇದು ವಲ್ಲಭಭಾಯಿಯವರ ನಿರ್ಣಯ. ವಲ್ಲಭಭಾಯಿ ಹೇಳಹತ್ತಿದರು: " ಮೆಲ್ಲ ಮೆಲ್ಲಗೆ ಒಪ್ಪಿಕೊಳ್ಳುವಿರಿ. ಆ ಕಲಕತ್ತೆಯ ಬೆಂಥಾಲನಿಗೂ ನೀವು ಒಳ್ಳೆಯವನೆಂದೇ ತಿಳಿಯುತ್ತಿದ್ದಿರಿ. ಕೊನೆಗೆ ಹೇಗೆ ಹೊರಟನು!" ಬಾಪೂ " ನನಗೆ ನನ್ನ ಅಭಿಪ್ರಾಯವನ್ನು ಬದಲಿಸುವ ಆವಶ್ಯಕತೆ ಅನಿಸಿಲ್ಲ. ಬೆಂಥಾಲನ ವಿಷಯಕ್ಕೆ ಸಿಕ್ಕ ಮಾಹಿತಿಯು ತಪ್ಪಾಗಿತ್ತು. ಹೋರನ ವಿಷಯಕ್ಕೆ ನಾನು ಕೊಟ್ಟಅಭಿಪ್ರಾಯವು ನಿಜವಾಗುತ್ತನಡೆದಿದೆ. ಸೆಂಕಿಯ ವಿಷಯದಲ್ಲಿ ಎಲ್ಲರಿಗೂ ವಿರೋಧವಾಗಿ ನಾನು ಕೊಟ್ಟ ಅಭಿಪ್ರಾಯವೇ ಸರಿಯೆಂದು ಸಿದ್ಧವಾಗಹತ್ತಿದೆ." ನಾನು ಹೇಳಿದೆ: " ಹೋರನು ತೋರಿಸುತ್ತಿರುವ ವಿನಯವನ್ನು ವ್ಯಾಕಡೊನಾಲ್ಡನಿಂದ ತೋರಿಸುವದು ಎಂದೂ ಸಾಧ್ಯವಿದ್ದಿಲ್ಲ. ವಿಲಿಂಗ್ಡನ್ನನಂತೂ ತೋರಿಸಲೇ ಇಲ್ಲ. ಹೋರನ ಬಗ್ಗೆ ಈ ಮಾತನ್ನು ವಲ್ಲಭಭಾಯಿಯವರೂ ಒಪ್ಪಿಕೊಳ್ಳುತ್ತಾರೆ." ಬಾಪೂ " ಬಹುತರ ಆಯರ್ವಿನ್ ಕೂಡ ತೋರಿಸಲಿಲ್ಲ. ಈ ಮನುಷ್ಯನು ಕಾಂಗ್ರೆಸ್ಸ ಅಕ್ರಮವೆಂದು ಸಾರಲಿಲ್ಲ. ಇದರಲ್ಲಿ ಸಹ ಇವನ ಮನಸ್ಸಿನಲ್ಲಿ ಕಾಂಗ್ರೆಸ್ಸಿನ

ಸಂಗಡ ಒಂದಿಲ್ಲೊಂದು ದಿನ ಒಪ್ಪಂದ ಮಾಡಿಕೊಂಡ ಹೊರತು ನಡೆಯಲಾರದೆಂದು ಇರುತ್ತದೆಯೆಂದು ನನಗನಿಸುತ್ತದೆ. ಇವನು ಅಸ್ಪೃಶ್ಯರ ವಿಷಯಕ್ಕೆ ಕೊಟ್ಟ ಉತ್ತರವು ಸರ್ವಸಾಧಾರಣ ಸ್ವೀಕೃತಿಯೆಂದೇ ಹೇಳಬಹುದು. ಎರಡನೇ ಭಾಗದ ವಿಷಯಕ್ಕಂತೂ ಅವನು ಬೇರೆ ಏನಾದರೂ ಹೇಗೆ ಬರೆಯಬಲ್ಲನು ? "

ನಾನು ಹೇಳಿದೆ : "ಮಗನಲಾಲಭಾಯಿ ತೀರಿಕೊಂಡಾಗ ಅಯರ್ವಿನರು ಬರೆದ ಪತ್ರವು ಎಂದೂ ಮರೆಯದಂತಹದು." ( ಬಾಪೂ ಮರೆತೇ ಬಿಟ್ಟಿದ್ದರು. ) ವಲ್ಲಭಭಾಯಿಯವರಿಗೆ ನೆನಪಿತ್ತು. ಅವರು ಹೇಳಿದರು : "ಮಹದೇವ, ಬಾಪೂ ಹೋರಾಟವನ್ನು ಬಂದು ಮಾಡಿದರೆ ಈ ಎಲ್ಲ ಜನರು ಇದೇ ಪ್ರಕಾರದ ಪತ್ರ ಬರೆಯ ಹತ್ತುವರು; ಕೂದಲಗಳನ್ನು ಕಾಯ್ದರೆ ಸೀಖರು ಸಹ ಇವರನ್ನು ನಾನಕನ ಗಾದಿಯ ಮೇಲೆ ಕೂಡ್ರಿಸಿದರೆ ಅದರಲ್ಲಿ ಆಶ್ಚರ್ಯವಿಲ್ಲ."

ಪರ್ಸಿ ಬಾರ್ಟಲೆಟನ ಪತ್ರವು ರವೀಂದ್ರನಾಥ ಟಾಗೋರರ ಪತ್ರದ ಜೊತೆಗೆ ಬಂದಿತು. ಟಾಗೋರರ ಅಪೀಲು ಅನವಶ್ಯಕವಾಗಿ ವಿಸ್ತಾರವಾಗಿತ್ತೆಂದು ಅನಿಸಿತು. ಇದನ್ನು ತೆಗೆದುಕೊಂಡು ಅವರು ವ್ಹಾಯಿಸರಾಯನ ಹತ್ತರ ಹೋದರು. ಆದರೆ ಅವನು ಅದರ ಮೇಲೆ ನೀರೆರಚಿದನು. ಬಾಪೂ ಕೇಳಿದರು : "ನೀನು ಏನು ಅರ್ಥ ಮಾಡುತ್ತಿ ?" ನಾನು ಹೇಳಿದೆ : "ಟಾಗೋರರು ಎರಡೂ ಪಕ್ಷಕ್ಕೂ ಅಂದರೆ ಸರಕಾರಕ್ಕೂ ಮತ್ತು ಕಾಂಗ್ರೆಸ್ಸಿಗೂ ಅಪೀಲು ಮಾಡುತ್ತಾರೆಂದು ನನಗೆನಿಸುತ್ತದೆ." ಬಾಪೂ ಹೇಳಿದರು : "ಇಲ್ಲ, ಎಂದೂ ಇಲ್ಲ. ಇವರು 'We in India' ( ಹಿಂದುಸ್ತಾನದವರು ನಾವು ) ಎಂದು ಹೇಳುತ್ತಾರೆ. ಇದರಲ್ಲಿ ನಮ್ಮನ್ನು ಕೂಡ ಎಣಿಸುತ್ತಾರೆ. ನಾನೂ ಸಹ ಒಪ್ಪಂದಕ್ಕೆ ಸಿದ್ಧನಿರುವೆನೆಂದು ತಿಳಿದು ಅವರು ಅದನ್ನು ನನ್ನ ಹತ್ತರ ಕಳಿಸಿರಬಹುದು. ಈ ಅಪೀಲಿನಲ್ಲಿ ಪಾಲುಗಾರನಾಗುವದಕ್ಕಾಗಿ ನಾನು ಸಹ ಏನಾದರೂ ಭರತಿಹಾಕಬೇಕು ಅಥವಾ ನಾನು ಯಾವುದಾದರೂ ಹೆಜ್ಜೆ ಮುಂದಿಡ ಬೇಕೆಂದು ಅವರು ಇಚ್ಛಿಸುತ್ತಾರೆಂದಲ್ಲ." ನಾನು ಹೇಳಿದೆ : "ಬಾರ್ಟಲೆಟನು ಹೀಗೆ ವಿಚಾರ ಮಾಡುತ್ತಿರಲೇಬೇಕು." "ನನ್ನನ್ನು ಕುರಿತು ಅಪೀಲು ಮಾಡುವ ದಿದ್ದರೆ ಅವರು ಅದನ್ನು ಎಂದೋ ವರ್ತಮಾನಪತ್ರದಲ್ಲಿ ಪ್ರಸಿದ್ಧಿಸಿ ಬಿಡುತ್ತಿದ್ದರು" ಎಂದು ಬಾಪೂ ಹೇಳಿದರು.

ಇವತ್ತು ರಾಮದಾಸ ಮತ್ತು ಒಬ್ಬ ಮಹಾರಾಷ್ಟ್ರೀಯ ವಿದ್ಯಾರ್ಥಿಯು ಬಾಪೂ ಅವರಿಗೆ ಭೆಟ್ಟಿಯಾಗಿ ಹೋದರು. ರಾಮದಾಸನು ನಮ್ಮನ್ನು ಭೆಟ್ಟಿಯಾಗ ಬೇಕೆಂದು ಸುಪರಿಂಟೆಂಡೆಂಟರ ಸಂಗಡ ಬೇಕಾದಷ್ಟು ವಾದಿಸಿದನೆಂದು ಬಾಪೂ ಹೇಳುತ್ತಿದ್ದರು. ಆದರೆ ಅವನು ಒಪ್ಪಲಿಲ್ಲ.

ಬಾಪೂ ದಿನಾಲು ತಮ್ಮ ನೂಲುವ ಪರಿಣಾಮವನ್ನು ಪ್ರಕಟಿಸುತ್ತಾರೆ. ಇವತ್ತು ನಾಲ್ಕು ಹಂಜಿಗಳಿಂದ ೧೦೦ ಮತ್ತು ಎರಡನೇ ಐದು ಹಂಜಿಗಳಿಂದ ೧೦೨

ಒಟ್ಟು ೨೦೨ ಎಳೆಗಳನ್ನು ನೂತರು. ಕುಕ್ಕಡಿಯು ಸುಂದರವಾಗಿಯೂ ಗಟ್ಟಿಯಾಗಿಯೂ ಇತ್ತು. ಕೆಲವು ದಿವಸಗಳ ಮೇಲೆ ಎಡಗೈ ಮೇಲಿನ ಒತ್ತಡವು ಕಡಿಮೆಯಾಗಿಯೇ ತೀರುವದೆಂದು ಬಾಪೂರಿಗೆ ವಿಶ್ವಾಸವಿದೆ.

ಆಕ್ಸ್‌ಫರ್ಡ ಯುನಿವ್ಹರ್ಸಿಟಿ ಪ್ರೆಸ್ಸಿನ ಸಲುವಾಗಿ 'ಆತ್ಮಕಥೆ'ಯ ಸಂಕ್ಷಿಪ್ತ ಆವೃತ್ತಿಗಾಗಿ ಬರೆದ ಉಪೋದ್ಘಾತವನ್ನು ಬಾಪೂರಿಗೆ ನೋಡಲಿಕ್ಕೆ ಕೊಟ್ಟೆ.

**೩೦-೪-'೩೨**

ಮೊದಲನೆ ವಾಕ್ಯಕ್ಕೇ ನಿಂತರು. "ಭಾಷಾಂತರವು ಕಠಿಣ ಇರಬಹುದು, ಆದರೆ ಅದಕ್ಕಿಂತ ಸಂಕ್ಷೇಪವು ಏತಕ್ಕಾಗಿ ಕಠಿಣವಾಗಬೇಕು? ಮೂಲವೇ ಸಂಕ್ಷಿಪ್ತವಿದ್ದರೆ ಅದನ್ನು ಸಂಕ್ಷಿಪ್ತ ಮಾಡುವದು ಕಠಿಣವಾಗುವದೆಂಬುದು ತಿಳಿಯುವಹಾಗಿದೆ. ಆದರೆ ಭಾಷಾಂತರವು ಕಠಿಣವಿದ್ದುದರಿಂದ ಸಂಕ್ಷೇಪವೂ ಕಠಿಣವಾಗಬಾರದು. ತದ್ವಿರುದ್ಧ ಭಾಷಾಂತರ ಮಾಡುವವನಿಗೆ ಸಂಕ್ಷೇಪ ಮಾಡುವದು ಸುಲಭವಾಗಬೇಕು. ಉಳಿದ ಭಾಗವು ವಿದ್ಯಾರ್ಥಿಗಳ ಆವೃತ್ತಿಯಲ್ಲಿ ನಡೆಯಲಾರದು. ಇದು ಪುಸ್ತಕದ ಅವಲೋಕನದ ಕಾಲಕ್ಕೆ ಅಥವಾ ವಿಮರ್ಶೆ ಮಾಡುವ ಕಾಲಕ್ಕೆ ಉಪಯೋಗವಾಗುವದು. ಹಾಗೆಯೇ ಇದನ್ನು ಕೇವಲ ಸಂಕ್ಷೇಪ ಮಾಡುವ ರೀತಿಯ ವಿಷಯವಾಗಿ ಎರಡು ಶಬ್ದಗಳನ್ನು ಬರೆದು ಪೂರ್ಣ ಮಾಡಬೇಕು. ಅವರು ೮೦೦ ಶಬ್ದಗಳ ಉಪೋದ್ಘಾತ ಬರೆಯಲು ಹೇಳಿದ್ದಾರೆ. ಆದುದರಿಂದ ನಾವು ಅದರ ಉಪಯೋಗವನ್ನು ಹಾಗೆ ಮಾಡಬಾರದು. ೬೦೦ ಶಬ್ದಗಳನ್ನು ಬರೆಯುವದಿದ್ದಲ್ಲಿ ನಾವು ೨೦೦ ಶಬ್ದಗಳನ್ನು ಬರೆದುಕೊಟ್ಟಾಗ ನಮ್ಮ ಮಿತತ್ವಕ್ಕೆ ಬೆಲೆ ಬರುವದು." ನಾನು ಉಪೋದ್ಘಾತವನ್ನು ಸುಧಾರಿಸಿ ಮತ್ತೆ ಕೊಟ್ಟೆ. ಆಗ ಬಾಪೂ ಒಪ್ಪಿಗೆ ಕೊಟ್ಟರು. ಮೇಜರನು ಇದನ್ನು ಇನ್‌ಸ್ಪೆಕ್ಟರ ಜನರಲ್ಲರ ಕಡೆಗೆ ಕಳಿಸಲಾಗುವದೆಂದೂ ಅವರು ಅಲ್ಲಿಂದ ನೇರವಾಗಿ ಕಳಿಸುವರೆಂದೂ ಹೇಳಿದನು.

ಲಾರ್ಡ ಆಯರ್ವಿನ್ನರು ಟೊರೆಂಟೋದಲ್ಲಿ ಮಾಡಿದ ಭಾಷಣವು ಬಂತು. ವಲ್ಲಭಭಾಯಿ ಅಂದರು: "ನೋಡಿರಿ ನಿಮ್ಮ ಮಿತ್ರನನ್ನು?" ಬಾಪೂ ಅಂದರು: "ನಾನು ಅವಶ್ಯವಾಗಿ ಅವನನ್ನು ಮಿತ್ರನೆಂದು ತಿಳಿಯುತ್ತೇನೆ. ಅವನ ಇಡೀ ಭಾಷಣ ನೋಡಿದ ಹೊರತು ಅಭಿಪ್ರಾಯ ಕೊಡುವದಿಲ್ಲ."

'ನ್ಯೂಜ ಲೆಟರ' ವೃತ್ತಪತ್ರದಲ್ಲಿ ಪ್ರಸಿದ್ಧವಾದ ಲಾರ್ಡ ಸೆಂಕಿಯವರ ಸಂಪೂರ್ಣ ಲೇಖವನ್ನು ಇಂದು ಇಲ್ಲಿಯ ವೃತ್ತಪತ್ರದಲ್ಲಿ ನೋಡಿದರು. ಇದರಿಂದ ಬಾಪೂ ಅವರಿಗೆ ಬಹಳ ದುಃಖವಾಯಿತು. ಆದರಲ್ಲಿ ಬಾಪೂ

**೧—೫—'೩೨**

ತಮ್ಮ ವಿಷಯಕ್ಕೆ ಬರೆದ ಭಾಗ ಓದಿ ಅಂದರು :

"ವಿಪರ್ಯಾಸದಿಂದ ತುಂಬಿದ ಲೇಖವಿದೆ. ಇವನಿಗೆ ಪತ್ರಬರೆಯಲಿಕ್ಕೆ

ಬೇಕು. ಇವನ ಬಗ್ಗೆ ನನ್ನ ಅಭಿಪ್ರಾಯವು ಸರಿಯೆಂದು ಸಿದ್ಧವಾಗಹತ್ತಿದೆ." ಪತ್ರವನ್ನು ಬರೆಯಿಸಿದರು. ವಲ್ಲಭಭಾಯಿ ಕೇಳುತ್ತಿದ್ದರು. ಪೂರ್ಣವಾದ ಮೇಲೆ ಅಂದರು: "ಇಷ್ಟೆಲ್ಲ ಬರೆಯುತ್ತಿರುವಿರಿ, ಅದರ ಬದಲು ನೀನು ಮೊದಲಿನಿಂದ ಕೊನೆಯವರೆಗೂ ಸುಳ್ಳುಗಾರನಿದ್ದೀ ಎಂದು ಬರೆಯಿರಲ್ಲ."

ಬಾಪೂ ಖೊಕ್ ಖೊಕ್ ಎಂದು ನಕ್ಕರು ಮತ್ತು ಹೇಳಿದರು: "ಇಲ್ಲ, ಇದಕ್ಕಿಂತ ಕಠೋರವಾಗಿ ನಾನು ಹೇಳಿದ್ದೇನೆ. ಅವನ ನಡತೆಯು ಸಜ್ಜನರಿಗೆ ಶೋಭೆಯನ್ನು ಕೊಡುವದಿಲ್ಲವೆಂದು ನಾನು ಹೇಳಿದ್ದೇನೆ. ಇದಕ್ಕೂ ಮುಂದುವರಿದು ನೀನು ದ್ರೋಹಿ ಇರುವಿ, ನೀನು ಮಿತ್ರ ಅಥವಾ ಸಂಗಡಿಗರನ್ನು ಮೋಸ ಮಾಡಿರುವಿ ಎಂದು ಹೇಳಿದ್ದೇನೆ. ಈ ಮಾತು ಇಂಗ್ಲೀಷರಿಗೆ ಬಹಳ ಕೆಡಕೆನಿಸು ವಂತಹದಾಗಿರುತ್ತದೆ. ಆದರೆ ನನಗೆ ಅನಿಸುತ್ತಿರುವದರಿಂದ ನಾನು ಬರೆದಿರುತ್ತೇನೆ. ಯಾಕಂದರೆ ಇವನಿಗೆ ದಿನಾಲು ಭೆಟ್ಟಿಯಾಗುತ್ತಿದ್ದ ಶಫೀ ಅಥವಾ ಆಗಾಖಾನ ರಂಥ ಜನರು ಈ ಎಲ್ಲ ಸುಳ್ಳುಸಂಗತಿಗಳನ್ನು ಹೇಳಿರಬಹುದು. ಇವನು ಅವು ಗಳನ್ನು ನಿಜವೆಂದು ತಿಳಿದನಿಷ್ಟೇ ಅಲ್ಲ ನನ್ನನ್ನು ಎಂದೂ ವಿಚಾರಿಸಲಿಲ್ಲ. ಮತ್ತು ನನ್ನನ್ನು ಇಲ್ಲಿ ಬಂಧಿಸಿಟ್ಟ ಮೇಲೆ ತಪ್ಪು ನನ್ನದಿತ್ತೆಂದು ಹೇಳುತ್ತಾನೆ!"

ಬಾಪೂ ಅವರಿಗೆ ಎಷ್ಟು ಕೆಡಕೆನಿಸಿತೆಂಬುದು ಇದರ ಮೇಲಿಂದ ಗೊತ್ತಾಗು ತ್ತದೆ. ಅವರು ಬರೆಯಿಸಿದ ಮೊದಲನೇ ಪತ್ರದಲ್ಲಿಯ ವಾಕ್ಯವು ಈ ಪ್ರಕಾರದ್ದಿತ್ತು:

"You have given judgment against me on evidence of which I have been kept in ignorance and your judgment has been given at a time when I have been rendered incapable of defending myself."

"ನೀವು ಯಾವ ಪ್ರಮಾಣಗಳ ಆಧಾರದ ಮೇಲಿಂದ ನನ್ನ ವಿರುದ್ಧ ನಿರ್ಣಯ ಕೊಟ್ಟಿರುವಿರೊ ಅವುಗಳ ವಿಷಯವಾಗಿ ನನ್ನನ್ನು ಅಜ್ಞಾನದಲ್ಲಿರಿಸಿದ್ದೀರಿ. ನಾನು ನನ್ನ ಪಕ್ಷವನ್ನು ಸಮರ್ಥಿಸಿಕೊಳ್ಳಲಾರದಂಥ ಸಮಯದಲ್ಲಿ ನೀವು ನಿರ್ಣಯ ಕೊಟ್ಟಿದ್ದೀರಿ."

ಆದುದರಿಂದ ಮೋಸಗಾರಿಕೆಯು ನೀಚತನವು ಹೆಚ್ಚಾಗುತ್ತದೆ. ಬಾಪೂ ಹೇಳತೊಡಗಿದರು: "ನನ್ನ ಬೇಡಿಕೆಯು ಬಹಳ ಹೆಚ್ಚೆಂದು ತೋರಿಸುತ್ತಾನೆ, ಅದೂ ತಪ್ಪಿದೆ. ಯಾವದೇ ಪ್ರಜೆಗಳ ಸ್ವಾತಂತ್ರ್ಯದ ಬೇಡಿಕೆಯು ಬಹಳ ಹೆಚ್ಚೆಂದು ಹೇಗೆ ಹೇಳಬಹುದು? ಒಂದು ವೇಳೆ ನಾನು ಇಂಗ್ಲಂಡದಿಂದ ಗುಲಾಮಗಿರಿಯಪತ್ರವನ್ನು ಬರೆಯಿಸಿಕೊಳ್ಳಲು ಇಚ್ಛಿಸುತ್ತಿದ್ದರೆ ಆ ಬೇಡಿಕೆಯು ಬಹಳ ಹೆಚ್ಚೆಂದು ಹೇಳ ಬಹುದು. ನಾನು ನನ್ನ ಭಾಷಣದಲ್ಲಿ ಕಾಂಗ್ರೆಸ್ಸಿನ ಬೇಡಿಕೆಯನ್ನು ತೋರಿಸಿದೆನು; ಆದರೆ ಚರ್ಚೆಯಲ್ಲಿ ಇನ್ನೂ ಅನೇಕ ಠರಾವುಗಳನ್ನು ಕುರಿತು ಚರ್ಚೆ ಮಾಡುತ್ತಿದ್ದೆನು."

ಲಾರ್ಡ ಆಯರ್ವಿನ್ನರಿಗೂ ಒಂದು ಪತ್ರ ಬರೆಯಿಸಿದ್ದರು. ಆದರೆ ಹಿಂದಿನಿಂದ ಹೀಗೆ ಹೇಳುತ್ತ ಅದನ್ನು ರದ್ದುಗೊಳಿಸಿದರು : " ಈ ಭಾಷಣದ ಪೂರ್ಣ ವರದಿಯನ್ನು ನೋಡಬೇಕು. ಒಂದು ವಿವರಣೆಯಲ್ಲಿ ಬಂದದ್ದನ್ನು ಹೇಳುವ ಅಧಿಕಾರವು ಇವನಿಗಿದೆ. ಎರಡನೇ ವಿವರಣೆಯನ್ನು ವಿರೋಧಿಸಬಹುದಾಗಿದೆ. ಆದರೆ ನಾವು ಯಾವುದೇ ಮಾತನ್ನು ಏಕೆ ಗ್ರಹಿತ ಹಿಡಿಯಬೇಕು ? ಏನಾದರೂ ಬರೆಯುವ ಆವಶ್ಯಕತೆ ಬಿದ್ದರೆ ಹಿಂದಿನಿಂದ ನೋಡುವಾ."

ಸ್ಯಾಮುಅಲ್ ಹೋರರಿಗೂ ಒಂದು ಪತ್ರ ಬರೆಯಿಸಿದರು. ಅದರಲ್ಲಿ 'ನಾನು ನಿಮಗೆ ಬಹಳ ಆಭಾರಿ ಇದ್ದೇನೆ' ಎಂದು ಬರೆಯಿಸಿದ್ದರು. ಹಿಂದಿನಿಂದ 'ಬಹಳ' ಶಬ್ದ ತೆಗೆಸಿ ಹಾಕಿದರು.

೨-೫-'೩೨

ಇವತ್ತು ಬೆಳಿಗ್ಗೆ ಡಾಹ್ಯಾಭಾಯಿಯವರ ಧರ್ಮಪತ್ನಿ ಯಶೋದಾ ಸತ್ತ ಸುದ್ದಿ ಬಂತು. ಸ್ವಲ್ಪದಿನದ ಬಾಳಿನಲ್ಲಿಯೆ ಪಾಪ ಅವಳು ಎಷ್ಟೊಂದು ಕಷ್ಟವನ್ನು ಸಹಿಸಬೇಕಾಯಿತು ? ಎಷ್ಟು ಕಷ್ಟ ಸಹನಮಾಡಲು ಹಚ್ಚಿದಳು ? ಕೊನೆಗೆ ಹೊರಟು ಹೋದಳು ! ಡಾಹ್ಯಾಭಾಯಿಯಂಥ ನಿಷ್ಠಾವಾನ್ ಪತಿಯು ಭಾಗ್ಯದಿಂದಲೇ ಸಿಗುತ್ತಾನೆ. ಅವರು ತಮ್ಮ ಋಣವನ್ನು ಪೂರ್ಣವಾಗಿ ತೀರಿಸಿದರು. ಬಾಪೂ ಈ ಮರಣಕ್ಕೆ ತಾರಿನಲ್ಲಿ Release from living death : 'ಜೀವಂತ ಮರಣದಿಂದ ಮುಕ್ತಿ' ಎಂದು ಬರೆದರು.

ಯಶೋದಾ ಬದಕುವದು ಸಾಧ್ಯವಿಲ್ಲೆಂದು ಗೊತ್ತೇ ಇತ್ತು. ಆದರೂ ಇವತ್ತು ಇಡೀ ದಿವಸ ಅವಳು ಕಣ್ಣು ಮುಂದೆ ಕಟ್ಟಿದಂತಾಗಿತ್ತು ಮತ್ತು ಅವಳ ಸಾವಿನಿಂದ ಅನೇಕ ವಿಚಾರಗಳು ಬರತೊಡಗಿದವು. ಈ ತಾರು ಬರುವದಕ್ಕಿಂತ ಐದು ಹತ್ತು ನಿಮಿಷ ಮೊದಲು ಮಿದನಾಪುರದ ಕಲೆಕ್ಟರ ಡಗಲಸ್‌ನ ಕೊಲೆಯ ಸಮಾಚಾರವನ್ನು ಓದಿದ್ದೆನು. ಈ ವಿಷಯವಾಗಿಯೂ ಬಹಳ ಕೆಡಕೆನಿಸಿತು. " ಬಂಗಾಲದಲ್ಲಿ ಇಂಗ್ಲೀಷರು ಬಾಳನ್ನು ಗಂಡಾಂತರದಲ್ಲಿ ಕಳೆಯುತ್ತಾರೆಂಬುದರಲ್ಲಿ ಸಂಶಯವಿಲ್ಲ. ಅವರ ಮಕ್ಕಳು ಮರಿಗಳ ಗತಿಯು ಏನಾದೀತು ? ನಾವು ನಮ್ಮನ್ನು ಎರಡನೆಯವರ ಸ್ಥಿತಿಯಲ್ಲಿಟ್ಟಾಗ ಹಿಂಸೆಯ ಭೀಷಣ ಸ್ವರೂಪವು ಲಕ್ಷ್ಯದಲ್ಲಿ ಬರುವದು." ಬಾಪೂ ಹೇಳಿದರು : " ಸನ್ '೫೭ ರಲ್ಲಿ ಕೂಡ ಇಂಗ್ಲೀಷರ ಅವಸ್ಥೆ ಹೀಗೇ ಇರಬಹುದು."

ಈ ಸಲದ ಬಾಪೂ ಅವರ ಟಪಾಲು ಸ್ವಲ್ಪ ಹಗುರೆಂದು ಹೇಳಬಹುದು. ಪತ್ರಗಳು ಕಡಿಮೆಯೂ ಇದ್ದವು. ಸುಲಭವೂ ಇದ್ದವು. ಪರಶುರಾಮನು . . . ರ ಲಗ್ನದ ವಿಷಯಕ್ಕೆ ಪ್ರಶ್ನೆ ಕೇಳಿದ್ದನು. ಅವನಿಗೆ ಚನ್ನಾಗಿ ಬುದ್ಧಿಗಲಿಸಿದರು.. ಈ

ಬುದ್ಧಿಗಲಿಸುವಾಗ ಎರಡನೆಯವರ ದೋಷ ನೋಡುವ ವಿಷಯದಲ್ಲಿ ಬಾಪೂ ಅವರ ಅತ್ಯಂತ ಜಾಗರೂಕತೆಯು ನೋಡಲಿಕ್ಕೆ ಸಿಗುತ್ತದೆ. " . . . ನ ವಿಷಯವಾಗಿ ಪ್ರಶ್ನೆ ಕೇಳಿದ್ದು ನಮಗೆ ಶೋಭಿಸುವದಿಲ್ಲ. ಒಬ್ಬರ ಛಿದ್ರ ಎಣಿಸುವದು, ಮತ್ತೊಬ್ಬರಿಗೆ ನ್ಯಾಯವನ್ನು ಬಯಸುವದು ನಮ್ಮ ಕೆಲಸವಲ್ಲ. ನಮಗೆ ನಮ್ಮ ನ್ಯಾಯವಾದ ಕೆಲಸ ಮಾಡುವದರಲ್ಲಿ ದಣುವಾಗಬೇಕು. ಎಲ್ಲಿಯವರೆಗೆ ನಮಗೆ ನಮ್ಮಲ್ಲಿ ಒಂದಾದರೂ ದೋಷ ಕಾಣಿಸುತ್ತದೆಯೊ ಮತ್ತು ಈ ದೋಷವಿದ್ದಾಗ್ಯೂ ನಮ್ಮ ಬಂಧು ಬಳಗದವರು, ಮಿತ್ರರು ಮುಂತಾದವರು ನಮ್ಮನ್ನು ಬಿಡಬಾರದೆಂದು ನಮ್ಮ ಅಂತರಾತ್ಮನು ಇಚ್ಛಿಸುತ್ತಾನೆಯೊ ಅಲ್ಲಿಯವರೆಗೆ ನಮಗೆ ಎರಡನೆಯವರ ದೋಷ ನೋಡುವ ಅಧಿಕಾರವಿಲ್ಲ. ನಾವು ಇಂಥ ದೋಷವನ್ನು —ಅನಿಚ್ಛೆಯಿಂದ—ನೋಡಿದಾಗ, ನಮ್ಮಲ್ಲಿ ಶಕ್ತಿ ಇದ್ದರೆ ಮತ್ತು ಹೀಗೆ ಮಾಡುವದು ಉಚಿತವಾಗಿದ್ದರೆ, ಯಾರ ದೋಷವನ್ನು ನೋಡುತ್ತೇವೆಯೊ ಅವರನ್ನೇ ಕೇಳಬೇಕು. ಆದರೆ ಮತ್ತೆ ಇನ್ನಾರನ್ನೂ ಕೇಳುವ ಅಧಿಕಾರ ನಮಗಿಲ್ಲ. ಇದನ್ನು ಕೇಳುವದರಲ್ಲಿ ಯಾವ ಲಾಭವೂ ಇಲ್ಲ. ಆದರೂ ಸಹ ನಿನಗೆ ನನ್ನನ್ನು ಕೇಳುವ ಮನಸ್ಸಾಯಿತು. ನನ್ನನ್ನು ಕೇಳಿದಿ. ಇದು ಒಳ್ಳೆಯದೇ ಆಯಿತು. ಕೇಳದಿದ್ದರೆ ಹೀಗೆ ವ್ಯಾಖ್ಯಾನ ಕೊಡಲಿಕ್ಕೆ ನನಗೆ ಅವಕಾಶವೇ ಸಿಗುತ್ತಿದ್ದಿಲ್ಲ.

"ಇನ್ನು ಉತ್ತರ ಕೊಡುತ್ತೇನೆ. ಹೊರಗಿನಿಂದ ನೋಡುತ್ತಿರಲಿಕ್ಕೆ ಮತ್ತು ಹೊರಬಿದ್ದ ಸಂಗತಿಗಳನ್ನಷ್ಟೇ ನೋಡುತ್ತಿರಲಿಕ್ಕೆ . . . ನ ಕೆಲಸವು ನಮಗೆ ಸರಿ ಕಂಡುಬರುವದಿಲ್ಲ. ಆದರೆ ಅವನ ಬಾಯಿಂದ ಅವನ ಕೆಲಸದ ಬಗ್ಗೆ ಎಲ್ಲ ಸಂಗತಿ ತಿಳಿದುಕೊಂಡ ಹೊರತು ನಾನು ನಿಶ್ಚಿತವಾದ ನಿರ್ಣಯವನ್ನು ಕೊಡಲಾರೆ. ಪೈಗಂಬರ ಸಾಹೇಬರು ಮಾಡಿದ ಕೆಲಸಗಳನ್ನೆಲ್ಲ ಪೈಗಂಬರ ಸಾಹೇಬರ ಅನುಯಾಯಿಗಳು ಮಾಡಲಿಕ್ಕೇಬೇಕು ಅಥವಾ ಮಾಡುವದು ಉಚಿತವೆಂದು ಹೇಳುವದು ನನ್ನ ವಿಚಾರದ ಪ್ರಕಾರ ಯೋಗ್ಯವಾಗಲಾರದು. ಮಹಾನ್ ಪುರುಷರು ಮಾಡಿದ್ದನ್ನೆಲ್ಲ ಎಲ್ಲರಿಗೂ ಮಾಡುವ ಅಧಿಕಾರವಿರಬೇಕು, ಹೀಗೇನೂ ಅಲ್ಲ. ಹೀಗೆ ಮಾಡುವದರಿಂದ ಕೆಟ್ಟ ಪರಿಣಾಮವಾಗುತ್ತದೆಂಬುದನ್ನು ನಾವು ನೋಡಿದ್ದೇವೆ. ಆದರೆ ಹಿಂದೂ, ಮುಸಲ್ಮಾನ ಮತ್ತು ಬೇರೆ ಧರ್ಮದವರು ಈ ಸುಂದರವಾದ ನಿಯಮಕ್ಕನುಸರಿಸಿ ಯಾವಾಗಲೂ ಕೆಲಸ ಮಾಡುವದು ಕಂಡುಬರುವದಿಲ್ಲ. ಇಷ್ಟೇ ಅಲ್ಲ, ಅವತಾರೀ ಪುರುಷರು ಇಂಥ ಮಾತನ್ನು ಮಾಡಿದ್ದಾರೆ, ಆದುದರಿಂದ ನಮಗೂ ಹೀಗೆ ಮಾಡುವ ಅಧಿಕಾರವಿದೆ ಎಂದು ತಿಳಿದುಕೊಂಡು ನಡೆಯುತ್ತಾರೆ. ಇಂಥ ವಸ್ತುಸ್ಥಿತಿಯಿದ್ದಲ್ಲಿ . . . ನು ಪೈಗಂಬರಸಾಹೇಬರ ಉದಾಹರಣೆ ಕೊಟ್ಟರೆ ನನಗೆ ಆಶ್ಚರ್ಯವಾಗುವದಿಲ್ಲ."

ಪ್ರೇಮಾಬಹೆನಳ ಪತ್ರದಲ್ಲಿ ಇದನ್ನು ಬರೆದರು: "ನಾನು ಯಾವಾಗ ಬರುವೆನೆಂದು ನೀನು ಕೇಳುತ್ತಿ. ಕಣ್ಣು ಉಪಯೋಗಿಸಿ ನೋಡಿದರೆ ನೀನು ನನ್ನನ್ನು

ಅಲ್ಲಿ ನೋಡದಿರಲಾರಿ. ಶರೀರವು ಇಲ್ಲಿಯೇ ಇರಲಿ ಅಥವಾ ಮಣ್ಣುಪಾಲಾಗಿರಲಿ, ನನ್ನ ಆತ್ಮ ಅಲ್ಲಿಯೇ ವಾಸವಾಗಿದೆ. ಶರೀರ ಅಲ್ಲಿ ಇದ್ದಾಗ್ಯೂ ನಾನು ಅಲ್ಲಿ ಇರದಿರುವದೂ ತೀರ ಸಂಭವನೀಯವಿದೆ. ಈ ಸತ್ಯವನ್ನು ನೀನು ಅರಿತುಕೊ ಮತ್ತು ಆ ಮಾಯೆಯನ್ನು ಮರೆತು ಬಿಡು."

ಇವತ್ತು ಹೆಣ್ಣುಮಕ್ಕಳ ಪತ್ರದ ಎರಡನೇ ಕಂತು ಬಂತು. ಮಹಾರಾಷ್ಟ್ರದ ಹೆಂಗಸರು ಎಷ್ಟು ಉತ್ತಮ ಪತ್ರ ಬರೆಯುತ್ತಾರೆ! ಬಾಪೂ ಹೇಳಿದರು: "ಸಂಸ್ಕೃತಿಯ ಪರಿಣಾಮವು ಒಡೆದು ಕಾಣುತ್ತದೆ." ಒಬ್ಬಳು ತನ್ನ ಮಗ ಮತ್ತು ಗಂಡ ಇವರ ಸಲುವಾಗಿ ದರ್ಶನವನ್ನು ಕೇಳುತ್ತಾಳೆ. ಇನ್ನೊಬ್ಬಳು ನಿಮ್ಮ ಪತ್ರ ಬಂದಿದೆಯೆಂದ ಮೇಲೆ ದರ್ಶನವೂ ಆಗಿಯೇ ತೀರುವದೆಂಬ ಶ್ರದ್ಧೆ ಇಡಬೇಕೆಂದು ಬರೆಯುತ್ತಾಳೆ.

. . . ಮ್ಯಾಜಿಸ್ಟ್ರೇಟನ ಮಗಳು ಜೇಲಿನಲ್ಲಿದ್ದಾಳೆ. ಆದರೆ ಜೊತೆಗೇ . . .ಳ ತಾಯಿಯೂ ಇದ್ದಾಳೆ. ಇದೆಂಥ ಈಶ್ವರಲೀಲೆ!

ಸ್ಯಾಮ್ಯುಅಲ್ ಹೋರರ ಭಾಷಣದ ಶಬ್ದಗಳನ್ನು ಬಾಪೂ ಅವರಿಗೆ ಮತ್ತೆ ಓದಿ ಹೇಳಿದ ಮೇಲೆ ಬಾಪೂ ಅಂದರು: "ಇವನ ಮಾತು ನನಗೆ ಒಳ್ಳೆಯವಾಗಿ ತೋರುತ್ತವೆ. ಈತನಿಗೆ ಮಧ್ಯಸ್ಥಿಕೆಯನ್ನು ಮಾಡುವವರ

೩-೫-'೩೨

ಅವಶ್ಯಕತೆಯೇ ಇಲ್ಲ. ಯಾಕಂದರೆ ಇವನಿಗೆ ಯಾರೂ ವಿಶ್ವಾಸಿಕ ಮನುಷ್ಯರಿಲ್ಲ. ಇಂಥವರ ಸಂಗಡ ಹೋರಾಡುವದರಲ್ಲಿ ಆನಂದ ವಿದೆ. ಇಂಥವರ ಕೈಯಿಂದಲೇ ಒಳ್ಳೆಯದು ಆಗುವದು. ಸೆಂಕಿಗಿಂತ ಈ ಮನುಷ್ಯನು ಸಾವಿರಪಾಲು ಮೇಲು. ಅವನು ವಿಚಾರ ಮಾಡುವದೊಂದು ಹೇಳುವದು ಮತ್ತೊಂದು. ಈ ಮನುಷ್ಯನು ಇದ್ದ ವಿಚಾರವನ್ನೇ ಹೇಳುತ್ತಾನೆ. ಒಂದು ಸಲ ನಾನು ಅವನಿಗೆ ಕೇಳಿದೆ: 'ಇಲ್ಲಿ ಇಷ್ಟು ಜನರಿರುವರು, ಇವರಲ್ಲಿ ಯಾರ ಶಕ್ತಿಯಮೇಲೂ ನಿಮ್ಮ ವಿಶ್ವಾಸವಿಲ್ಲವೆಂಬುದನ್ನು ನೀವು ಒಪ್ಪುತ್ತೀರಾ?' ಅವನು ಹೇಳಿದ: 'ನಿಜ ಮನಸ್ಸಿನಿಂದ ಹೇಳುವದಾದರೆ ಈ ಮಾತು ಸತ್ಯವಿದೆ. ನನಗೆ ವಿಶ್ವಾಸವಿಲ್ಲ.' ನಾನು ಈ ಮಾತಿಗಾಗಿ ನಿಮ್ಮ ಪ್ರಾಮಾಣಿಕತೆಯು ನನಗೆ ಬಹಳ ರುಚಿಸುತ್ತದೆಂದು ಹೇಳಿ ಅವನಿಗೆ ಧನ್ಯವಾದ ಕೊಟ್ಟಿದ್ದೆನು."

ಇವತ್ತು ಪರ್ಸೀ ಬಾರ್ಟಲೆಟ್‌ರಿಗೆ ಪತ್ರ ಬರೆದರು. ಅದರಲ್ಲಿ ಬಾಪೂ ಸೂಚಿಸಿದರು: "ಶಾಂತಿ ಮತ್ತು ಒಪ್ಪಂದಗಳಿಗಾಗಿ ಕವಿಯ ಇಚ್ಛೆಗೆ ನನ್ನದೂ ಒಪ್ಪಿಗೆ ಇದೆ. ಆದಕ್ಕೆ ಅಡ್ಡ ಬರುವಂಥ ಯಾವ ಹೆಜ್ಜೆಯನ್ನೂ ಕೈಕೊಳ್ಳುವದಿಲ್ಲ. ದೇಶದ ಸ್ವಾಭಿಮಾನದ ರಕ್ಷಣೆಯ ಕರಾರಿನೊಂದಿಗೆ ಅದು ಸಫಲವಾಗುವಂಥ ಯಾವದೇ ಹೆಜ್ಜೆಯನ್ನು ಕೈಕೊಳ್ಳಲಿಕ್ಕೆ ತಪ್ಪುವದಿಲ್ಲ."

ಹೀರಾಲಾಲಭಾಯಿಯ ಹೆಸರಿನಿಂದ ಬರೆದ ಬಾಪೂ ಅವರ ಪತ್ರವು, ಆಶ್ರಮದ ಟಪಾಲಿಗಿಂತ ಮೊದಲೇ ಹಾಕಿದ್ದರೂ ಅಲ್ಲಿ ಮುಟ್ಟಲಿಲ್ಲವೆಂದು ನಾರಾಯಣದಾಸ ಭಾಯಿ ಬರೆಯುತ್ತಾರೆ. ಈ ಕಾಲಕ್ಕೆ ಎಷ್ಟೋ ಪತ್ರಗಳು ತಪ್ಪು ಸ್ಥಳಕ್ಕೆ ಹೋಗುತ್ತವೆ ಮತ್ತು ಪೋಲೀಸರ ಕಡೆಗೆ ಹೋಗಿ ಬೀಳುತ್ತವೆ.

ಮಾಲವಿಯಜಿಯವರ ಬಿಡುಗಡೆಯಾಯಿತು. ಮೇಜರನು ಇದರ ಸ್ಪಷ್ಟೀಕರಣ ಚನ್ನಾಗಿ ಮಾಡಿದನು. ಪ್ರತ್ಯಕ್ಷ ಆಜ್ಞೆ ಮುರಿಯುವ ವರೆಗೆ ಕಾಯ್ದೆಭಂಗವೆಂದು ಹೇಳಲಿಕ್ಕೆ ಬರುವದಿಲ್ಲ. ಆಜ್ಞೆ ಮುರಿಯುವದಕ್ಕಿಂತ ಮೊದಲೇ ಅವರನ್ನು ಹಿಡಿಯಲಾಗಿತ್ತು; ಈಗ ಬಿಡಲಾಗಿದೆ. ವಲ್ಲಭಭಾಯಿಯವರು ನಿನ್ನೆ ಮತ್ತು ಇವತ್ತು ಒಟ್ಟುಗೂಡಿ ನಾಲ್ಕಾರು ಸಾರೆ ನನಗೂ ಮತ್ತು ಬಾಪೂರಿಗೂ ಹೇಳಿರಬಹುದು: "ಮಾಲವಿಯಜಿಯವರು ಬಿಡುಗಡೆ ಹೊಂದಿದರು!" ಯಾವದಾದರೂ ಇಂಥ ಸುದ್ದಿ ಬಂದರೆ ವಲ್ಲಭಭಾಯಿಯವರು ಅದನ್ನು ಕುರಿತು ವಿಚಾರ ಮಾಡುವರೀತಿಯೇ ಇದು. ಇವತ್ತು ಇಡೀ ದಿವಸ ಅವರು ಇದರ ವಿಷಯಕ್ಕೆ ವಿಚಾರ ಮಾಡಿರಬಹುದು. ಮಲಗುವ ಕಾಲಕ್ಕೂ ಅಂದರು: "ಅಂದರೆ ಮಾಲವಿಯಜಿಯವರನ್ನು ಎಂಟೇ ದಿವಸಗಳಲ್ಲಿ ಬಿಟ್ಟರು!"

ಇವತ್ತು ಆಶ್ರಮದಿಂದ ಬಂದ ಟಪಾಲಿನಲ್ಲಿ ಪ್ರೇಮಾಬಹನಳ ಪತ್ರದಲ್ಲಿ ಸಾಕಷ್ಟು ವಿದ್ರೋಹವೂ ದುಃಖವೂ ಇತ್ತು. ಬಾಪೂ ಅಂದರು: "ಈ ಹುಡಿಗೆ ವಿಚಾರ ಮಾಡುವಂಥ ಅನೇಕ ಮಾತುಗಳನ್ನು ಕೇಳಿದ್ದಾಳೆ."

ಇವತ್ತು ಮುಂಜಾನೆ ರಾಮದಾಸನಿಗೆ ಈ ಪ್ರಕಾರ ಪತ್ರ ಬರೆದರು:

"ಚಿ. ರಾಮದಾಸ, ನಿನ್ನೆ ನಾರಾಯಣದಾಸನ ಪತ್ರ ಸಿಕ್ಕಿತು. ಆದರಿಂದ ನಿಮು ಆಶ್ರಮದಲ್ಲಿ ಬಂದಿದ್ದಾಳೆಂದು ಗೊತ್ತಾಗುತ್ತದೆ.

**೪-೫-'೩೨**

"ಹೋದ ಸಾರೆ ನನಗೆ ಹೇಳಬೇಕಾದದ್ದನ್ನು ನಾನು ತಿಳಿಸಲು ಸಮರ್ಥನಾಗಿಲ್ಲವೆಂಬ ಭಯವಿದೆ. ಸತ್ಯಾಗ್ರಹಿಯು ಊಟದ ತಂಟೆಯಲ್ಲಿ ಎಲ್ಲಿಯೂ ಬೀಳಬಾರದು. ದೊರೆತದ್ದನ್ನು ದೇವರ ಪ್ರಸಾದವೆಂದು ತಿಳಿದು ಉಣ್ಣಬೇಕು ಎಂದು ಮೊದಲಿನಿಂದಲೂ ನನ್ನ ಅಭಿಪ್ರಾಯವಿರುತ್ತದೆ. ಕೈದಿಗಳ ಶರೀರದ ಅಧಿಕಾರಿಯು ದಾರೋಗನಿದ್ದಾನೆ. ಆಹಾರವು ಮರ್ಯಾದೆಯಿಂದ ಸಿಗುತ್ತಿರಬೇಕು. ಹೊಲಸು ಇರಬಾರದು. ಅಖಾದ್ಯವಿರಬಾರದು. ಹೀಗೆ ಸಿಗುತ್ತಿರುವ ವರೆಗೆ ಅದನ್ನು ಸ್ವೀಕರಿಸಬೇಕು. ಪಚನವಾಗುವಂತಹದು ಎಂದೆನಿಸಿದರೆ ಉಣ್ಣಬೇಕು. ಇಲ್ಲದಿದ್ದರೆ ಚೆಲ್ಲಿಬಿಡಬೇಕು. ಎಂಜಲು ಮಾಡದಿದ್ದರೆ ತಿರುಗಿಕೊಡಬೇಕು. ಈಗಿನ ಕಾಲದಲ್ಲಿ ಕೈದಿಗಳ ಆಹಾರವನ್ನು ಗೊತ್ತುಮಾಡುವಾಗ ಸ್ವಲ್ಪಿಲ್ಲ ಸ್ವಲ್ಪು ಆಹಾರಶಾಸ್ತ್ರದ ನಿಯಮವನ್ನು ಪಾಲಿಸಲಾಗು

ತ್ತದೆ. ಆದರೆ ಕೇವಲ ನೀರು ಮತ್ತು ರೊಟ್ಟಿಯನ್ನೇ ಕೊಟ್ಟರೂ ಏನಾಯಿತು?

"ಆಫೀಸರರ ಸಂಗಡ ಈ ವಿಷಯದಲ್ಲಿ ವಿವೇಕಪೂರ್ಣ ಚರ್ಚೆಯನ್ನು ಮಾಡಬಹುದು. ಆದರೆ ಹೋರಾಟ ಮಾಡಲಾಗದು.

"ಬಡಿದಾಟ ಮಾಡಿ ಅನೇಕ ವಸ್ತುಗಳನ್ನು ದೊರಕಿಸಬಹುದು, ಮತ್ತು ದೊರಕಿರುತ್ತವೆ; ಆದರೆ ಅವು ನಮಗೆ ತ್ಯಾಜ್ಯವಿರುತ್ತವೆ.

"ಆದುದರಿಂದ ಪಲ್ಲೆಯ ವಿಷಯದಲ್ಲಿ ಸ್ವಲ್ಪೂ ಜಗಳವಾಗಬಾರದೆಂದು ನನಗನಿಸುತ್ತದೆ. ರುಚಿಸಿದವರು ತಿನ್ನಬೇಕು, ರುಚಿಸದವರು ಬಿಡಬೇಕು. ರೊಟ್ಟಿ, ಬೇಳೆ ಸಿಕ್ಕರೂ ದೇವರ ಕೃಪೆಯೆಂದು ತಿಳಿಯಬೇಕು."

ಸುಪರಿಂಟೆಂಡೆಂಟ ಸಾಹೇಬರು ಇವತ್ತು ಕ್ಯಾಂಪ ಜೇಲಿನಲ್ಲಿ ಮುಂಬೈ ಯಿಂದ ಬಂದ ಎಷ್ಟೋ ಸತ್ಯಾಗ್ರಹಿ ಕೈದಿಗಳು ಹೊಡೆದಾಟ ಮಾಡಿದ ಬಗ್ಗೆ ಪ್ರಸ್ತಾಪಿಸಿದರು. ಒಬ್ಬ ಮನುಷ್ಯನು ಎರಡನೆಯವನ ತಲೆಯಲ್ಲಿ ಮೂರು ಇಂಚಿನ ಗಾಯ ಮಾಡಿದ್ದಾನೆ. ಸುಪರಿಂಟೆಂಡೆಂಟರು ಹೇಳಿದರು: "ಇದಕ್ಕೆ ಫಟಕಿ ಶಿಕ್ಷೆಯಿರುತ್ತದೆ. ಆದರೆ ಇದನ್ನು ಕೊಡಲಿಲ್ಲ. ಇನ್ನೊಮ್ಮೆ ಹೀಗಾದರೆ ನಿರ್ವಾಹ ವಿಲ್ಲದೆ ಈ ಶಿಕ್ಷೆಯನ್ನು ಕೊಡಬೇಕಾಗುತ್ತದೆಂದು ನಾನು ಕೇವಲ ಎಚ್ಚರಿಕೆ ಕೊಟ್ಟಿದ್ದೇನೆ." ಪಾಪ, ಅವರು ಮತ್ತೆ ಹೇಳತೊಡಗಿದರು: "ನಾನು ನನ್ನ ಇಡೀ ನವಕರಿಯಲ್ಲಿ ಎರಡು ಅಥವಾ ಮೂರು ಸಾರೆ ಫಟಕಿಯ ಶಿಕ್ಷೆಯನ್ನು ಕೊಟ್ಟಿದ್ದೇನೆ. ನನಗೆ ಇದು ಫಾಸಿಯ ಶಿಕ್ಷೆಗಿಂತಲೂ ಕೆಡಕೆನಿಸುತ್ತದೆ. ನಾನು ಕೊಟ್ಟ ಈ ಎರಡೂ ಪ್ರಕರಣಗಳು ಭಯಾನಕವಾದವುಗಳಿದ್ದವು. ಒಬ್ಬ ಕೈದಿಯು ಇನ್ನೊಬ್ಬನ ಕಣ್ಣನ್ನು ಬಹುತರ ಕತ್ತಿಯೇ ಬಿಟ್ಟಿದ್ದನು."

ಈ ಮನುಷ್ಯನ ಒಳ್ಳೆಯತನವು ಈ ಪ್ರಕರಣದಲ್ಲಿ ಸ್ಪಷ್ಟ ಕಂಡುಬರುತ್ತದೆ.

ಸರೋಜಿನಿಯವರು ಯಶೋದಾಳ ಮೃತ್ಯುವಿನ ಬಗ್ಗೆ ಒಂದು ಸುಂದರ ಪತ್ರ ಬರೆದು ಸರದಾರರಿಗೆ ಕೊಟ್ಟರು.

ಮಣಿಬೇನ (ಪರೀಖ), ಶಂಕರಲಾಲ, ವನು, ಮೋಹನ ಮತ್ತು ದೀಪಕ ಭೆಟ್ಟಿಯಾಗಲಿಕ್ಕೆ ಬಂದರು. ನಾನು ಭೆಟ್ಟಿಯಾದೆ. ಮನೆಯ ಜನರೇ ಬಂದಂತೆ ಅನಿಸಿತು. ನರಹರಿಯ ತೂಕವು ೨೮ ಪೌಂಡು ಕಡಿಮೆಯಾಗಿದೆ. ಇದರ ಚಿಂತೆ ಯಿಲ್ಲ. ಆದರೆ ಅಲ್ಲಿಯ ದುಷ್ಟ ವಾತಾವರಣದ ಬಗ್ಗೆ ತೊಂದರೆಯಾಗುತ್ತದೆ. ಮಾತಾಡುತ್ತ, ಮಾತಾಡುತ್ತ ಮಣಿಬೇನಳ ಕಣ್ಣಲ್ಲಿ ನೀರು ಬಂದವು.

ಇವತ್ತು ಮಾಲವಿಯಜಿಯವರು ಸುಂದರವಾದ ಪ್ರಕಟನೆಯನ್ನು ಹೊರಗೆಡವಿದ್ದಾರೆ. ಬಾಪೂ ಹೇಳಿದರು: "ಬಹಳ ಶೋಭೆಯನ್ನುಂಟು ಮಾಡುವ ಪ್ರಕಟನೆ. ಇದರಲ್ಲಿ ಒಂದೂ ದುರ್ಬಲ ಶಬ್ದವಿಲ್ಲ. ಪಂಡಿತಜಿ ಯವರ ವಿಷಯದಲ್ಲಿ ಇದು ತೀರ ಸಣ್ಣ ಪ್ರಕಟನೆ ಎಂದು ಹೇಳಬಹುದು.

ಸರಕಾರಕ್ಕೆ ಆವ್ಹಾನವಿದ್ದಂತೆಯೇ ಎಂದೂ ಹೇಳಬಹುದು." ಮಾಲವಿ-ಯಜಿಯವರನ್ನು ಬಿಟ್ಟ ಬಗ್ಗೆ 'ಲೀಡರ' ಪತ್ರವು ಸರಕಾರಕ್ಕೆ ಧನ್ಯವಾದ ಕೊಡುತ್ತಿದೆ. ಸರಕಾರದ ಈ ಕೃತಿಗೆ 'ಉದಾರ' ವೆಂದು ಹೇಳುತ್ತಿದೆ. ಬಾಪು ಅಂದರು: "ಮಾಲವಿಯಜಿಯವರಿಗೆ ಫಾಸೀ ಶಿಕ್ಷೆಯನ್ನು ಕೊಟ್ಟು, ಹಿಂದಿನಿಂದ ಅದನ್ನು ಆಜನ್ಮ ಹದ್ದುಪಾರು ಶಿಕ್ಷೆಗೆ ಬದಲಾಯಿಸಿದ್ದರೆ ಅದಕ್ಕೂ ಸಹ 'ಲೀಡರ' ಪತ್ರವು ಉದಾರತೆಯಂದೇ ಹೇಳುತ್ತಿತ್ತಲ್ಲವೆ? ಹೀಗಿದೆ."

ಮತಾಧಿಕಾರ ಕಮಿಟಿಯು ಮಾಡಿದ ಶಿಫಾರಿಸಿನ ಬಗ್ಗೆ ವೃತ್ತಪತ್ರಗಳಲ್ಲಿ ಬಂದ ಊಹೆಗಳ ಮೇಲಿಂದ ಬಾಪೂ ಒಂದು ಸೂಚಕ ವಾಕ್ಯವನ್ನು ಹೇಳಿದರು:

ಎಷ್ಟೇ ವಿಶಾಲ ಮತಾಧಿಕಾರವಿದ್ದರೂ ಅಧಿಕಾರವಿಲ್ಲದಿದ್ದರೆ

**೫-೫-'೩೨** ಅದು ನಿರುಪಯುಕ್ತ. ಆದರೆ ಎಷ್ಟೇ ಸಂಕುಚಿತ ಮತಾಧಿ

ಕಾರವಿದ್ದರೂ ಅಧಿಕಾರವಿದ್ದರೆ ಉಪಯೋಗವಾಗುತ್ತದೆ."

ಇವತ್ತು ಎರಡೂ ಕೈಯಿಂದ ನಡೆಸುವ (ಮಗನ ಚರಖಾ) ಬಂತು. ಇದನ್ನು ಬಾಪೂ ನಾಳೆಯಿಂದ ಪ್ರಾರಂಭ ಮಾಡುವವರಿದ್ದಾರೆ. ಮಣಿಬೇನ (ಪರೀಖ), ಧೀರು, ಕುಸುಮ ಮತ್ತು ಗಿರಿಧಾರಿ ಬಾಪೂಗೆ ಭೆಟ್ಟಿಯಾಗಲಿಕ್ಕೆ ಬಂದರು. ಮಣಿಬೇನ ಎಲ್ಲ ಹೊತ್ತು ಅಳುತ್ತಿದ್ದಳೆಂದು ಬಾಪೂ ಹೇಳಿದರು. ನನ್ನೆದುರಿಗೆ ಅವರು ಧೈರ್ಯತಾಳಿದ್ದರು. ಬಾಪೂರ ಹತ್ತರ ಅದು ಉಳಿಯಲಿಲ್ಲ. ಬಾಪೂರ ಎದುರಿಗೆ ಹೇಗೆ ಉಳಿಯಬಲ್ಲದು? ಯಾವನಿಂದ ಹೆಚ್ಚು ಸಾಂತ್ವನ ದೊರೆಯುತ್ತದೆಯೊ ಅವನ ಹತ್ತರ ಮನುಷ್ಯನು ಗದ್‌ಗದಿತನಾಗುತ್ತಾನೆ.

ಇಬ್ರಾಹಿಮಜಿ ರಾಜಕೋಟವಾಲಾ ಎಂಬ ಹೆಸರಿನ ಒಬ್ಬ ಮುಸಲ್ಮಾನನು ಬುದ್ಧಿಯಿಂದ ದೇವರ ಅಸ್ತಿತ್ವವು ಸಿದ್ಧವಾಗಲಾರದೆಂದು ಬರೆದಿದ್ದನು! ಅವನಿಗೆ ಬಾಪೂ ಉದ್ದ ಪತ್ರ ಬರೆದರು. ಯಾಕಂದರೆ ಅವನು ಪಾಕೀಟು ಕಳಿಸಿ ಉತ್ತರ ಬೇಡಿದ್ದನು:

"ನಿಮ್ಮ ಪತ್ರ ಮುಟ್ಟಿತು. ದೇವರ ಅಸ್ತಿತ್ವದ ವಿಷಯಕ್ಕೆ ಬುದ್ಧಿಯ ಹತ್ತರ ಪ್ರಮಾಣ ಕೇಳಿದರೆ ಎಲ್ಲಿಂದ ಸಿಗಬೇಕು? ಯಾಕಂದರೆ ದೇವರು ಬುದ್ಧಿಯ ಆಚೆಗಿದ್ದಾನೆ. ಆದರೆ ಬುದ್ಧಿಯ ಆಚೆಗೆ ಏನೂ ಇಲ್ಲೆಂದು ಹೇಳಿದರೆ ಅವಶ್ಯ ತೊಂದರೆಯುಂಟಾಗುತ್ತದೆ. ಬುದ್ಧಿಗೆ ಸರ್ವೋತ್ತಮ ಪದವನ್ನು ಕೊಟ್ಟರೆ ನಾವು ಬಹಳ ತೊಂದರೆಯಲ್ಲಿ ಬೀಳುತ್ತೇವೆ. ಸ್ವತಃ ನಮ್ಮ ಜೀವ ಅಥವಾ ಆತ್ಮ ಸಹ ಬುದ್ಧಿಯ ಆಚೆಗಿದೆ. ಅದರ ಅಸ್ತಿತ್ವವನ್ನು ಸಿದ್ಧಮಾಡುವದಕ್ಕಾಗಿ ಬುದ್ಧಿಯ ಪ್ರಯೋಗಗಳಾಗಿವೆ. ಇದೇ ಮಾತನ್ನೂ ದೇವರ ವಿಷಯಕ್ಕೂ ಹೇಳಬಹುದು. ಆದರೆ ಯಾವನು ಆತ್ಮ ಮತ್ತು ದೇವರನ್ನು ಬುದ್ಧಿಯಿಂದ ತಿಳಿದುಕೊಂಡಿರುವನೊ ಅವನಿಗೆ

ಏನೂ ತಿಳಿದಿಲ್ಲ. ಬುದ್ಧಿಯು ಎಷ್ಟೋ ಸಾರೆ ಜ್ಞಾನಪ್ರಾಪ್ತಿ ಮಾಡಿಕೊಡುವದಕ್ಕೆ ಸಹಾಯಕವಾಗಿರಬಹುದು. ಆದರೆ ಯಾವ ಮನುಷ್ಯನು ಅಲ್ಲಿಯೇ ನಿಂತುಬಿಡುವನೋ ಅವನು ಆತ್ಮಜ್ಞಾನದ ಲಾಭವನ್ನು ಮಾಡಿಕೊಳ್ಳಲಾರನು. ಯಾವನಾದರೂ ಧಾನ್ಯವನ್ನು ತಿನ್ನುವದರಿಂದಾಗುವ ಲಾಭವನ್ನು ಕೇವಲ ಬುದ್ಧಿಯಿಂದ ತಿಳಿಯುತ್ತಿದ್ದರೆ ಅವನು ಪ್ರತ್ಯಕ್ಷ ಧಾನ್ಯವನ್ನು ತಿನ್ನುವದರಿಂದಾಗುವ ಲಾಭವನ್ನು ಹೇಗೆ ಹೊಂದಲಾರನೊ ಹಾಗೇ ಇದು. ಆತ್ಮ ಅಥವಾ ದೇವರು ಅರಿತುಕೊಳ್ಳುವಂಥ ವಸ್ತುವಲ್ಲ. ಅವನು 'ಸ್ವತಃ ಅರಿಯುವವನಾಗಿದ್ದಾನೆ. ಆದುದರಿಂದ ಅವನು ಬುದ್ಧಿಗಿಂತ ಆಚೆಗಿದ್ದಾನೆ. ದೇವರನ್ನು ತಿಳಿದುಕೊಳ್ಳಲಿಕ್ಕೆ ಎರಡು ಮೆಟ್ಟಲುಗಳಿವೆ. ಮೊದಲನೆಯ ಮೆಟ್ಟಲು ಶ್ರದ್ಧೆ. ಎರಡನೆಯದು ಅರ್ಥಾತ್ ಕೊನೆಯದು ಅದರಿಂದಾಗುವ ಅನುಭವ—ಜ್ಞಾನ. ಜಗತ್ತಿನ ಎಲ್ಲಕ್ಕೂ ಹಿರಿಯ ಬೋಧಕರು ತಮ್ಮ ಅನುಭವದ ಸಾಕ್ಷಿಯನ್ನು ಕೊಟ್ಟಿದ್ದಾರೆ. ಜಗತ್ತಿನಲ್ಲಿ ಯಾರನ್ನು ಮೂರ್ಖರೆಂದು ತಿಳಿದು ಬೇರೆ ತೆಗೆದು ಹಾಕಿದ್ದೇವೆಯೊ ಅವರು ಸಹ ತಮ್ಮ ಸ್ವಂತ ಶ್ರದ್ಧೆಯ ಪುರಾವೆಯನ್ನು ಕೊಟ್ಟಿದ್ದಾರೆ. ಇಂಥವರ ಶ್ರದ್ಧೆಯಲ್ಲಿ ನಾವು ನಮ್ಮ ಶ್ರದ್ಧೆಯನ್ನಿಟ್ಟರೆ ಒಂದಾನೊಂದು ದಿವಸ ಅನುಭವವೂ ದೊರೆಯುವದು. ಒಬ್ಬ ಮನುಷ್ಯನು ಎರಡನೆಯವನನ್ನು ಕಣ್ಣಿನಿಂದ ನೋಡುತ್ತಾನೆ. ಆದರೆ ಕಿವುಡನಾಗಿದ್ದುದರಿಂದ ಅವನಿಗೆ ಆಡಿದ್ದು ಏನೂ ಕೇಳಿಸುವದಿಲ್ಲ. ಹೀಗಿದ್ದರೂ ಅವನು ಆಡಿದ್ದು ನನಗೆ ಏನೂ ಕೇಳಿಸಲಿಲ್ಲ ಎಂದು ಹೇಳುವದು ಯೋಗ್ಯವಲ್ಲ. ಅದೇ ಪ್ರಕಾರ ಬುದ್ಧಿಯಿಂದ ದೇವರನ್ನು ಕಂಡುಹಿಡಿಯಲಿಕ್ಕಾಗುವದಿಲ್ಲ ಎಂಬ ವಾಕ್ಯವು ಅಜ್ಞಾನಸೂಚಕವಿದೆ. ಕೇಳುವದು ಹೇಗೆ ಕಣ್ಣಿನ ವಿಷಯವಲ್ಲವೊ ಹಾಗೆ ದೇವರನ್ನು ಗುರುತಿಸುವದು ಇಂದ್ರಿಯಗಳ ಅಥವಾ ಬುದ್ಧಿಯ ವಿಷಯವಲ್ಲ. ಇದಕ್ಕಾಗಿ ಎರಡನೆಯ ಶಕ್ತಿಯೇ ಬೇಕು. ಅದು ಅಚಲಶ್ರದ್ಧೆಯು. ಬುದ್ಧಿಯನ್ನು ಕ್ಷಣಕ್ಷಣಕ್ಕೆ ಚಲವಿಚಲ ಮಾಡುವದು ಸಾಧ್ಯವಿದೆಯೆಂಬುದನ್ನು ನಾವು ನೋಡಿದ್ದೇವೆ. ಆದರೆ ನಿಜವಾದ ಶ್ರದ್ಧೆಯನ್ನು ಚಲವಿಚಲಗೊಳಿಸಬಲ್ಲ ಉದಾರ ಚಿತ್ತದ ವ್ಯಕ್ತಿಯು ಇದುವರೆಗೆ ನಮಗೆ ಪೃಥ್ವಿಯ ಮೇಲೆ ನೋಡಲಿಕ್ಕೆ ಸಿಕ್ಕಿಲ್ಲ."

ಇವತ್ತು ಬಾಪೂ ಮಗನ ರಾಟಿಯ ಮೇಲೆ ಒಂದೆರಡು ತಾಸು ಪರಿಶ್ರಮ ಮಾಡಿ ಕೊನೆಗೆ ೨೪ ಎಳೆಗಳನ್ನು ತೆಗೆದಾಗ ಅವರಿಗೆ ಸಮಾಧಾನವಾಯಿತು.

೬–೫–'೩೨ ವಲ್ಲಭಭಾಯಿಯವರು ಎಲ್ಲ ಹೊತ್ತು ನಗುತ್ತಿದ್ದರು ಮತ್ತು ಹೇಳುತ್ತಿದ್ದರು : "ನೂಲುವದಕ್ಕಿಂತ ಕೆಡಿಸುವದೇ ಹೆಚ್ಚಾಗುವದು." ಬಾಪೂ : "ನನ್ನ ಎಡಗೈಯಿಂದ ನೂಲುವದಕ್ಕೆ ನಗುವವರು ನೀವೇ ಇದ್ದಿರಲ್ಲವೆ? ನೋಡಿರಿ, ಇದು ಎಳೆ ಹೊರಡಹತ್ತಿತು.

ಇನ್ನು ನೀವು ಇತ್ತ ಕಡೆಗೆ ನೋಡಬೇಡಿರಿ, ಅಂದರೆ ಎಳೆಯು ಹೊರಡುತ್ತಲೇ ಇರುವದು."

ಇವತ್ತು ಗಂಗಾಬೇನರ ಮೃತ್ಯುವಿನ ಸಮಾಚಾರ ಬಂತು. ಮೃತ್ಯು ಸಮೀಪಿಸಿ ತೆಂದು ಅವರಿಗೆ ಗೊತ್ತಾಗಿತ್ತು. ಆದುದರಿಂದ ಸಾವಧಾನರಾಗಿದ್ದರು ಮತ್ತು ರಾಮ-ನಾಮ ಜಪ ಮಾಡುತ್ತ ಹೊರಟು ಹೋದರು. ಬಾಪೂ ದೊಡ್ಡ ಗಂಗಾಬೇನರಿಗೆ ಕಳಿಸಿದ ಪತ್ರದಲ್ಲಿ ಬರೆದರು: "ಗಂಗಾಬೇನರು ಜೀವಂತವಿದ್ದು ಆಶ್ರಮವನ್ನು ಸುಶೋಭಿತ ಮಾಡಿದ್ದರು. ಸತ್ತು ಸಹ ಆಶ್ರಮವನ್ನು ಸುಶೋಭಿತ ಮಾಡಿದರು." ಆಶ್ರಮಕ್ಕೆ ತಾರು ಮಾಡಿದರು:

"We were all touched learn Gangaben's death. Am happy that she lived well and died well with faith everlasting. No wonder Totaramji is happy."

"ಗಂಗಾಬೇನರ ಮೃತ್ಯುವಿನ ಸಮಾಚಾರ ಕೇಳಿ ನಮ್ಮೆಲ್ಲರಿಗೂ ದುಃಖ ವಾಯಿತು. ಅವರು ಅಮರ ಶ್ರದ್ಧೆಯೊಂದಿಗೆ ಜೀವಿಸುವದನ್ನು ಅರಿತರು ಮತ್ತು ಸಾಯುವದನ್ನೂ ಅರಿತರು. ಇದಕ್ಕಾಗಿ ನನಗೆ ಆನಂದವಿದೆ. ತೋತಾರಾಮಜಿ ಆನಂದದಿಂದ ಇರುವದರಲ್ಲಿ ಆಶ್ಚರ್ಯವಿಲ್ಲ."

ಸುದ್ದಿ ಬಂದಾಗ ಬಾಪೂ ಅಂದರು: "ನೋಡು, ಈ ನಿರಕ್ಷರ ಸ್ತ್ರೀಯನ್ನು! ಇವಳ ಸಾವು ಎಂಥದಿದೆ! ಇಬ್ಬರೂ ಆಶ್ರಮವನ್ನು ಸುಶೋಭಿತ ಮಾಡಿದರು. ತೋತಾರಾಮಜಿ ಗಿರಮಿಟಿಯಾ ಇದ್ದರು. ಅಲ್ಲಿ ಫೀಜಿಯು ಯಾವುದೊ ಗಿರಮಿಟಿಯಾನ ಹುಡುಗಿಯನ್ನು ಲಗ್ನವಾಗಿರಬಹುದು. ಆದುದರಿಂದ ಇಬ್ಬರೂ ಗಿರಿಮಿಟಿಗಳೇ ಎಂದು ಹೇಳಬಹುದು. ಆದರೆ ಇಬ್ಬರೂ ಎಂಥ ಜೀವನವನ್ನು ಜೀವಿಸಿದರು?"

ಗಂಗಾಬೇನರಂಥ ಸಾವು ನಮ್ಮೆಲ್ಲರಿಗೂ ಬರಲಿ! ಮತ್ತೇನೂ ಭಾಗ್ಯದಲ್ಲಿಲ್ಲ ದಿದ್ದರೂ ಕೊನೆಯ ಕ್ಷಣದಲ್ಲಿ ಆಶ್ರಮದಲ್ಲಿರಬೇಕು ಮತ್ತು ಗಂಗಾಬೇನರಂತೆ ರಾಮನಾಮ ತೆಗೆದುಕೊಳ್ಳುತ್ತ ಪ್ರಾಣ ಬಿಟ್ಟರೆ ಎಷ್ಟು ನೆಟ್ಟಗೆ ಎಂದು ಅನಿಸತ್ತದೆ. ಆದರೆ ಅಂತ್ಯಕಾಲದಲ್ಲಿ ಬಾಯಿಂದ ರಾಮನಾಮ ಹೊರಡಲಿಕ್ಕೆ ಮತ್ತು ಸಾಯುವಾಗ ಆನಂದದಿಂದಿರಲಿಕ್ಕೆ ಜೀವನವು ಸಹ ಹಾಗೇ ಇರಲಿಕ್ಕೆ ಬೇಕಲ್ಲವೆ? ಇದನ್ನೆಲ್ಲಿಂದ ತರಬೇಕು.?

* * *

ದೊಡ್ಡ ಗಂಗಾಬೇನರು ಜೇಲಿನಲ್ಲಿ ಏನೋ ತಂಟೆ ಮಾಡಿದಂತೆ ಕಾಣುತ್ತಿದೆ. ರಾಮದಾಸನಿಗೆ ಪತ್ರ ಬರೆದಂತೆ ಇವರಿಗೂ ನಿನ್ನೆ ಪತ್ರ ಬರೆದಿದ್ದರು. ಇವತ್ತು ಸರೋಜಿನಿಯವರ ಪತ್ರ ಬಂದಿದ್ದು ಅದರಲ್ಲಿ ಅವರು ತಕರಾರು ಮಾಡಿದ್ದರು: "ಗಂಗಾಬಹನರು ಪಲ್ಲೆಯನ್ನು ತೆಗೆದುಕೊಳ್ಳಲು ಕೊಡುವದಿಲ್ಲ; ಅನೇಕ ಭಗಿನಿ

ಯರ ಇಚ್ಛೆಯಿದ್ದಾಗ್ಯೂ ತೆಗೆದುಕೊಳ್ಳಲು ಕೊಡುವದಿಲ್ಲ. ನಾವು ಸತ್ಯಾಗ್ರಹಿಗಳಾಗಿ ಕಷ್ಟಸಹಿಸಲಿಕ್ಕೆ ಬಂದಿದ್ದೇವೆ. ಅಸ್ಪಷ್ಟವಿರದ ವರೆಗೆ ಪಲ್ಲೆಯನ್ನು ತೆಗೆದುಕೊಳ್ಳಲೇ ಬೇಕು." ಮುಂತಾಗಿ. ಬಾಪೂ ಪತ್ರ ಬರೆದು ಗಂಗಾಬಹನರಿಗೆ ಧರ್ಮ ತಿಳಿಸಿದರು: "ನಮ್ಮ ಧರ್ಮವನ್ನು ತಿಳಿಸುವೆ. ಸಕ್ತಮಜೂರಿ ಇದ್ದವರು ಅವರಿಗೆ ಕೊಟ್ಟ ಕೆಲಸವನ್ನು ಪ್ರಸನ್ನಚಿತ್ತದಿಂದ ಮಾಡಬೇಕು. ಕೆಲಸ ಬರದಿದ್ದರೆ ಮತ್ತು ಯಾರನ್ನಾದರೂ ಕಲಿಸಲಿಕ್ಕೆ ಕಳಿಸಿದರೆ ಕಲಿತುಕೊಳ್ಳಬೇಕು. ಅಪರಾಧಮಾಡಿ ಬರುವ ಮಹಿಳೆಯರಿಗಿಂತ ನಮ್ಮ ಶರೀರವು ಹೆಚ್ಚು ಕೆಲಸ ಮಾಡುತ್ತಿದ್ದರೆ ನಾವು ಹೆಚ್ಚು ಕೆಲಸ ಮಾಡುವಾ. ಹೀಗೆ ಮಾಡುವದರಲ್ಲಿ ನಮ್ಮ ಕಲ್ಯಾಣವಿದೆ ಮತ್ತು ಇದು ಸತ್ಯಾಗ್ರಹಿಗೆ ಶೋಭಿಸುತ್ತದೆ. ನಿಮಗೆ ನೇಗೆಯ ಕೆಲಸ ಬರುತ್ತದೆ. ಎರಡನೇ ಭಗಿನಿಯರಿಗೆ ಕಲಿಸಿ ನೀವು ಚನ್ನಾಗಿ ಕೆಲಸ ನಡೆಸಬೇಕೆಂದು ನನಗನಿಸುತ್ತದೆ. ಜೇಲಿನಲ್ಲಿ ಆಗುವ ಉತ್ಪಾದನವು ದೇಶದ ಸಂಪತ್ತಿಯೆಂದೂ, ಆಗುವ ಖರ್ಚು —ಯಾರದೇ ಕೈಯಿಂದ ಮಾಡುತ್ತಿದ್ದರೂ—ದೇಶದ ಖರ್ಚೆಂದೂ ನಾವು ತಿಳಿಯಲಿಕ್ಕೆಬೇಕು. ಆದುದರಿಂದ ಆಗಬಹುದಾದಂಥ ಉತ್ಪನ್ನವನ್ನು ಮಾಡುವಾಗ ನಮಗೆ ಆನಂದವಾಗಲಿಕ್ಕೆ ಬೇಕು. ಪಲ್ಲೆ ತಿನ್ನಬಾರದೆಂಬ ಒಕ್ಕಟ್ಟು ಮಾಡಿದ್ದರೆ ಅದನ್ನು ಸುಧಾರಿಸಿಕೊಳ್ಳಬೇಕು"

*　　　*　　　*

ಇಲ್ಲಿಯ ಬೆಕ್ಕಿನ ಮರಿಗಳು ಈಗ ತೀರ ಈಲಾಗಿವೆ. ಪ್ರಾರ್ಥನಾಸಮಯದಲ್ಲಿ ಬಾಪೂರ ತೊಡೆಯ ಮೇಲೆ ಕೂಡುತ್ತವೆ. ನಮ್ಮ ಸಂಗಡ ಚಿನ್ನಾಟವಾಡುತ್ತವೆ. ಊಟದ ಸಮಯದಲ್ಲಿ ಮೆವ್ ಮೆವ್ ಎಂದು ಗೊಂದಲವೆಬ್ಬಿಸುತ್ತವೆ. ಅನೇಕ ಸಾರೆ ಬಾಪೂರ ಕಾಲಿನ ಸುತ್ತಲೂ ತಿರುಗುತ್ತವೆ. ವಲ್ಲಭಭಾಯಿ ಅವುಗಳನ್ನು ಪೀಡಿಸುತ್ತಾರೆ. ತಂತಿಯ ಜಾಳಿಗೆಯ ಬುಡದಲ್ಲಿಟ್ಟು ಸಂತೋಷಪಡುತ್ತಾರೆ. ಇವತ್ತು ಒಂದು ಮರಿಯು ಬಹಳ ಗಾಬರಿಯಾಯಿತು. ಕೊನೆಗೆ ಅದು ಜಾಳಿಗೆಗೆ ತಲೆ ಅಪ್ಪಳಿಸುತ್ತ ಅಪ್ಪಳಿಸುತ್ತ ಅದನ್ನು ವ್ಹರಾಂಡಾದ ತುದಿಯವರೆಗೆ ಒಯ್ದು ಹೊರಗೆ ಬಂತು. ಇಲ್ಲಿ ಅದು ತನ್ನ ಬುದ್ಧಿಯನ್ನು ಉಪಯೋಗಿಸಿತು. ಪಾಪ, ಅದು ಗಾಬರಿಯಾಗಿತ್ತು ಮತ್ತು ಮೆಲ್ಲಮೆಲ್ಲಗೆ ನಡೆಯುತ್ತಿತ್ತು. ಬಾಪೂರಿಗೆ ದಯೆ ಬಂತು. ಆ ಮೇಲೆ ಅದು ದೂರ ಹೋಗಿ ಶೌಚದ ತಯಾರಿಯನ್ನು ಮಾಡಿತು. ನೆಲವನ್ನು ಹರಡಿ ಶೌಚಮಾಡಿ ಅದನ್ನು ಮುಚ್ಚಿತು. ಅಲ್ಲಿ ಮಣ್ಣು ಬಹಳವಿದ್ದಿಲ್ಲವಾದ್ದರಿಂದ ಎರಡನೇ ಕಡೆಗೆ ಹೋಗಿ ಈ ಕ್ರಿಯೆಯನ್ನು ಸಂತೋಷಪೂರ್ವಕವಾಗಿ ಮಾಡಿತು. ಎರಡನೇ ಮರಿಗಳು ಮಣ್ಣು ಮುಚ್ಚುವದಕ್ಕೆ ಸಹಾಯ ಮಾಡಿದವು! ಬಾಪೂ ಹೇಳಹತ್ತಿದರು: "ಈ ಮರಿಗಳ ಮೇಲೆ ಆಕಾಶದಿಂದ ಪುಷ್ಪವೃಷ್ಟಿಯಾಗಬೇಕು." ಮೀರಾಬೇನರಿಗೆ ಬರೆದ ಪತ್ರದಲ್ಲಿ ಸಹ ಇದರ ನಿರ್ದೇಶಮಾಡುವ

ಸಂಧಿಯನ್ನು ತಂದರು :

"What I said about my being a hindrance is perfectly true I may help to start the thing but not being able to live up to it must hinder further progress. The ideal of voluntary poverty is most attractive. We have made some progress but my utter inability to realize it fully in my own life has made it difficult at the Ashram for the others to do much. They have the will but no finished object lesson. We have two delightful kittens. They learn their lessons from the mute conduct of their mother who never has them out of her sight. Practice is the thing. And just now I fail so helplessly in so many things. But it is no use mourning over the inevitable."

" ನಾನು ಒಂದು ತೊಡಕಾಗುತ್ತೇನೆಂದು ಬರೆದದ್ದು ತೀರ ಸತ್ಯವಿದೆ. ಯಾವದೊಂದು ಪ್ರವೃತ್ತಿಯನ್ನು ಪ್ರಾರಂಭಮಾಡಲು ನಾನು ಸಹಾಯಕನಾಗಬಲ್ಲೆನು. ಆದರೆ ಸ್ವತಃ ನಾನು ಆ ಪ್ರಕಾರ ನಡೆಯದಿದ್ದರೆ ಮುಂದಿನ ಪ್ರಗತಿಯು ಅವಶ್ಯ ಕುಂಠಿತವಾಗುವದು. ಸ್ವೇಚ್ಛಾಪೂರ್ವಕವಾದ ಬಡತನದ ಆದರ್ಶವು ಬಹಳ ಆಕರ್ಷಕವಿದೆ. ನಾವು ಇದರಲ್ಲಿ ಸ್ವಲ್ಪ ಪ್ರಗತಿಯನ್ನೂ ಮಾಡಿದ್ದೇವೆ. ಆದರೆ ನನ್ನ ಸ್ವಂತದ ವಿಷಯದಲ್ಲಿ ಇದನ್ನು ಪೂರ್ಣತಃ ಕಾರ್ಯರೂಪದಲ್ಲಿ ತರಲಿಕ್ಕೆ ನಾನು ತೀರ ಅಶಕ್ತನಾದ್ದರಿಂದ ಆಶ್ರಮದಲ್ಲಿ ಎರಡನೆಯವರಿಗೆ ಸಹ ಈ ದಿಶೆಯಲ್ಲಿ ಮುಂದುವರಿಯುವದು ಕಠಿಣವಾಗುತ್ತಿದೆ. ಅವರ ಇಚ್ಛೆ ಇರುತ್ತದೆ; ಆದರೆ ಅವರೆದುರು ಯಾವದೇ ಪ್ರತ್ಯಕ್ಷಪಾಠವಿರುವದಿಲ್ಲ. ಇಲ್ಲಿ ಎರಡು ಸುಂದರ ಬೆಕ್ಕಿನ ಮರಿಗಳಿವೆ. ಅವುಗಳ ತಾಯಿಯು ಅವುಗಳನ್ನು ದೃಷ್ಟಿಯ ಹೊರಗೆ ಹೋಗಗೊಡುವದಿಲ್ಲ ಮತ್ತು ತಾಯಿಯ ಮೂಕ ವ್ಯವಹಾರದಿಂದ ಅವು ತಮ್ಮ ಪಾಠ ಕಲಿಯುತ್ತವೆ. ಆದುದರಿಂದ ಆಚರಣೆಯೇ ಮುಖ್ಯ ವಸ್ತುವಾಗಿದೆ. ಇತ್ತೀಚೆಗೆ ನಾನು ಎಷ್ಟೋ ವಿಷಯಗಳಲ್ಲಿ ನಿರುಪಾಯನಾಗಿ ಸೋತು ಹೋಗುತ್ತೇನೆ. ಅನಿವಾರ್ಯವಿದ್ದುದಕ್ಕೆ ದುಃಖಿಸುವದು ವ್ಯರ್ಥ. "

ಸರೋಜಿನಿದೇವಿಯವರು ತಮ್ಮನ್ನು ಹಿಡಿದದ್ದರ ವರ್ಣನೆಯನ್ನು ಬರೆದರು. ಇದರ ವರ್ಣನೆಯನ್ನು—ತಾಜಮಹಲಿನಲ್ಲಿ ಮಲಗಲಿಕ್ಕೆ ಕೊಟ್ಟ ಬಗ್ಗೆ—ತಮ್ಮ ಮಗಳಿಗೆ ಮಾಡಿದಾಗ ನಮಗೆ ಮಧ್ಯಕಾಲದ ಕ್ಷಾತ್ರಧರ್ಮದ ನೆನಪಾಗುತ್ತದೆ ಎಂದು ಲೀಲಾ ಹೇಳಿದಳು. ಬಾಪೂ ಅಂದರು :

"I do not know I would share Lilamani's enthusiasm. Chivalry is made of sterner stuff. Chivalrous knight is he who is exquisitely correct in his conduct towards perfect strangers

who are in need of help, but who can make no return to him and who are unable even to mutter a few words of thanks. But of these things some other day and under other auspices."

"ಲೀಲಾಮಣಿಯ ಉತ್ಸಾಹದಲ್ಲಿ ನಾನು ಭಾಗ ತೆಗೆದುಕೊಳ್ಳಬಲ್ಲೆನೆಂದು ನನಗನಿಸುವದಿಲ್ಲ. ಕ್ಷಾತ್ರಧರ್ಮವು ಬಹಳ ಕಠಿಣ ವಸ್ತುವಿದೆ. ಸಹಾಯದ ಅವಶ್ಯಕತೆಯಿದ್ದಂಥ, ಆದರೆ ಅದಕ್ಕೆ ಪ್ರತಿಫಲವೆಂದು ಏನೂ ಕೊಡಲಾರದಂಥ ಅಂದರೆ ಉಪಕಾರಸ್ಮರಣೆಯ ಒಂದು ಶಬ್ದವನ್ನು ಕೂಡ ಆಡದಂಥ ತೀರ ಅಪರಿಚಿತ ವ್ಯಕ್ತಿಗಳ ಸಂಗಡ ಸಹ ಅತ್ಯಂತ ಶುದ್ಧಾಚರಣೆಯನ್ನಿಡುವವನೆ ನಿಜವಾದ ಕ್ಷತ್ರಿಯನು. ಆದರೆ ಈ ವಿಷಯ ಕುರಿತು ಬೇರೊಂದು ಕಾಲದಲ್ಲಿ ಬೇರೊಂದು ಪರಿಸ್ಥಿತಿಯಲ್ಲಿ"

ಟಪಾಲು ತಪ್ಪು ಸ್ಥಳಕ್ಕೆ ಹೋಗುತ್ತವೆ. ಪತ್ರಗಳು ತಡವಾಗಿ ಮುಟ್ಟುತ್ತವೆ. ಈ ವಿಷಯವಾಗಿ ಡೋಯಿಲನಿಗೆ ಉದ್ದ ಪತ್ರ ಬರೆದರು. ಕಾಕಾ, ಪ್ರಭುದಾಸ, ನರಹರಿ ಇವರನ್ನು ಒಂದೆಡೆ ಇಡುವದಕ್ಕಾಗಿಯೂ ಪತ್ರ ಬರೆದರು.

•

ಇವತ್ತು ವಿಶೇಷ ಬರೆದಿಡುವಂತಹದೇನೂ ಇಲ್ಲ. ಡಾಹ್ಯಾಭಾಯಿ ಬಂದಿದ್ದರು. ಪಾಪ, ಅತ್ತರು. ಬಾಪೂ ಹೇಳಿದರು: "ಅಳಬಹುದೆಂದು ನನಗೆ ಅನಿಸಿದ್ದಿಲ್ಲ. ಕೂಸು ನಗುತ್ತಿತ್ತು. ಅದು ಇನ್ನೂ ತಾಯಿಯ ದುಃಖ

೭-೫-'೩೨ ವನ್ನು ಅನುಭವಿಸುವ ವಯಸ್ಸಿಗೆ ಬಂದಿಲ್ಲ. ನನ್ನ ಸ್ಥಿತಿಯು ನನಗೆ ಇನ್ನೂ ವರೆಗೆ ಜ್ಞಾಪಕವಾಗುತ್ತದೆ." ಡಾಹ್ಯಾಭಾಯಿಯವರದೇ ಏನು? ವಲ್ಲಭಭಾಯಿಯವರದು ಸಹ ೩೦ ವರ್ಷದ ವಯಸ್ಸಿನಲ್ಲಿಯೇ ಮನೆ ಮುರಿದಿತ್ತು. ಅವರು ತಮ್ಮ ವಿಧುರತನವನ್ನು ತೇಜಸ್ವಿ ಮಾಡಿ ತೋರಿಸಿದರು. ಈ ಪ್ರಕಾರ ವಿಧುರತನವನ್ನು ತೇಜಸ್ವಿ ಮಾಡಿ ತೋರಿಸುವದು ಸುಲಭ ಸಂಗತಿಯಲ್ಲ. ಡಾಹ್ಯಾಭಾಯಿಯವರಿಗೆ ದೇವರು ಸಹಾಯ ಮಾಡಲಿ!

ಡಾಹ್ಯಾಭಾಯಿಯವರಿಗೆ ಶನಿವಾರ ಬರುವದಕ್ಕೆ ಬಹಳ ತೊಂದರೆಯಾಗುತ್ತದೆ. ರವಿವಾರ ದಿವಸ ಸುಪರಿಂಟೆಂಡೆಂಟನು ಒಂದು ತಾಸು ತೆಗೆದಿಡಬಯಸಿದರೆ ಆನಂದದಿಂದ ತೆಗೆದಿಡಬಹುದು. ಅವನನ್ನು ಸ್ಪಷ್ಟ ಕೇಳಲಾಯಿತು: 'ನೀವು ರವಿವಾರ ದಿವಸ ಏನು ಮಾಡುತ್ತೀರಿ?' ಎಂದು. ಅವನು ಹೇಳಿದ: 'ಕೂತಿರುತ್ತೇನೆ. ವಾರದಲ್ಲಿ ಒಂದೇ ದಿವಸ ಸಿಗುತ್ತದೆಯಲ್ಲವೆ?' ಆದರೆ ಡಾಹ್ಯಾಭಾಯಿಯ ತೊಂದರೆ ಮತ್ತು ಈಗಿನ ಪರಿಸ್ಥಿತಿಯನ್ನು ನೋಡಿ ಸಹ ಅವನ ಬಾಯಿಂದ ಈ ಮಾತು ಹೊರಡಲೊಲ್ಲದು: "ಒಳ್ಳೇದು, ಬರ್ರಿ, ರವಿವಾರ ಬರುತ್ತೀರ್ರಿ." ಎಂದು. ವಿಚಿತ್ರ ಮನುಷ್ಯನಿದ್ದಾನೆ. ಇವನಲ್ಲಿ ಒಳ್ಳೇತನವಿದ್ದೇ ಇದೆ.

ಆದರೆ ಅದಕ್ಕೆ ಮರ್ಯಾದೆ ಇದೆ. ಈ ಮರ್ಯಾದೆಯು ಅಧಿಕಾರದ ತಪ್ಪು ಕಲ್ಪನೆಯದಿರುತ್ತದೆ.

ಅಪ್ಟನ್ ಸಿಂಕ್ಲೇರನ ಪತ್ರ ಬಂತು.' ಅವನು ತನ್ನ ಎಲ್ಲ ಪುಸ್ತಕಗಳನ್ನು ಕಳಿಸಿದ್ದಾನೆ. ಕೊನೆಗೆ ತನ್ನ ಆತ್ಮಕಥೆಯನ್ನು ಕಳಿಸಿದ್ದಾನೆ. ಇವುಗಳ ಜೊತೆಗೇ ನೋಬಲ್ ಪ್ರಾಯಿಜ್ ವಿಷಯವಾಗಿ ಪತ್ರಿಕೆಯನ್ನು ಕಳಿಸಿದ್ದಾನೆ. ಅದರಲ್ಲಿ ತನ್ನ ಬಗ್ಗೆ ಬೇರೆಯವರು ಕೊಟ್ಟ ಅಭಿಪ್ರಾಯಗಳನ್ನು ಹಾಕಿದ್ದಾನೆ. ತನಗೆ ಸ್ವತಃಕ್ಕೆ ನೋಬಲ್ ಪ್ರಾಯಿಜ್ ಸಿಗಬೇಕೆಂದು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾನೆ. ಎಲ್ಲಿ ಆ ಸಿಂಕ್ಲೇರ ಲುಯಿ ಮತ್ತು ಎಲ್ಲಿ ನಾನು ಅಪ್ಟನ್ ಸಿಂಕ್ಲೇರ! ಎಂದು ಭಾಸವಾಗುತ್ತದೆ. ಇದೆಲ್ಲ ಅಮೇರಿಕೆಯ ರೀತಿಯಿರುತ್ತದೆ. ಅವನಿಗೇ ಏನು ದೋಷಕೊಡುವದು? ಅಮೇರಿಕೆಯಲ್ಲಿ ಇದೆಲ್ಲ ಸ್ವಾಭಾವಿಕವೆಂದು ಅನಿಸುತ್ತದೆ. ಬಾಪೂ ಅವನಿಗೆ ಒಂದೇ ಸಾಲು ಬರೆದರು: "ನನಗೆ ನೀವು ಕಳಿಸಿದ ಪತ್ರಿಕೆಯ ಅರ್ಥವಾಗಲಿಲ್ಲ!"

೮-೫-'೩೨

ಬಾಪೂ ವಲ್ಲಭಭಾಯಿಯವರಿಗೆ ಅನೇಕ ವಿಷಯಗಳಲ್ಲಿ ರುಚಿ ತೆಗೆದುಕೊಳ್ಳಲಿಕ್ಕೆ ಹಚ್ಚುವ ಪ್ರಯತ್ನ ಮಾಡುತ್ತಿದ್ದಾರೆ. ನಿನ್ನೆ ಹೀರಾಲಾಲರ 'ಖಗೋಲ ಚಿತ್ರವಮ್' ಹೆಸರಿನ ಪುಸ್ತಕ ಬಂತು. ಅದರ ಪಾನುಗಳು ಕಿತ್ತಿದ್ದವು ಮತ್ತು ಅದರ ಹೊಲಿಗೆಯ ಟಾಕಿಗಳು ಸಹ ಹಳೆಯವಾಗಿ ಹರಿದಿದ್ದವು. ಬಾಪೂ ವಲ್ಲಭಭಾಯಿಯವರಿಗೆ ಹೇಳಿದರು: "ಯಾಕೆ, ಇದನ್ನು ನಿಮಗೆ ಒಪ್ಪಿಸಲೇ? ನೀವು ಎಂದಾದರೂ ಬುಕ್ ಬಾಯಿಂಡರನ ಕೆಲಸ ಮಾಡಿದ್ದೀರಾ? ಮಾಡದಿದ್ದರೆ ನಾನು ಕಲಿಸುವೆನು". ಮತ್ತೆ ಇವತ್ತು ಬೆಳಿಗ್ಗೆ ತಿರುಗಾಡುವಾಗ ಹೇಳಿದರು: "ವಲ್ಲಭಭಾಯಿ, ನಿಮಗೆ ಸಣ್ಣ ಸಣ್ಣ ಕೆಲಸಗಳನ್ನು ಮಾಡುವ ಅಭಿರುಚಿಯು ಚಿಕ್ಕಂದಿನಿಂದಲೇ ಇತ್ತೊ ಅಥವಾ ಇಲ್ಲಿಯೇ ಉಂಟಾಗಿದೆಯೊ? ಅಂದರೆ ನೀವು ಕಲಾಕಾರರಿದ್ದಿರೊ ಅಥವಾ ಇಲ್ಲಿಯೇ ಆದಿರೊ?" ವಲ್ಲಭಭಾಯಿ ಹೇಳಿದರು: "ಇಲ್ಲ, ಅಂಥದೇನೂ ಇಲ್ಲ. ಅವಶ್ಯ ಬಿದ್ದರೆ ಹೊಳೆಯುತ್ತದೆ." ಬಾಪೂ: "ಈ ವಸ್ತುವು ಜನ್ಮಜಾತವಿದೆ. ದಾಸಬಾಬೂರಿಗೆ ಸೂಜಿಯ ಕಣ್ಣಲ್ಲಿ ದಾರವನ್ನು ಸಹ ಪೋಣಿಸಲಿಕ್ಕೆ ಬರುತ್ತಿದ್ದಿಲ್ಲ. ಆದರೆ ಮೋತೀಲಾಲರು ಅನೇಕ ಪ್ರಕಾರದ ಕೆಲಸ ಮಾಡುತ್ತಿದ್ದರು." ನಾನು: "ಮೋತೀಲಾಲರು ನೀರೊಳಗಿನ ಜಂತುಗಳನ್ನು ನಾಶ ಮಾಡುವ ಯಂತ್ರವನ್ನು ಸ್ವತಃ ಮನೆಯಲ್ಲಿಯೇ ತಯಾರಿಸಿದ್ದರು. ಮತ್ತು ಎಲ್ಲ ರೋಗಗಳಿಗೂ ಜಂತುರಹಿತವಾದ ನೀರನ್ನೇ ಕುಡಿಸುತ್ತಿದ್ದರು." ಇವತ್ತು ವಲ್ಲಭಭಾಯಿಯವರು ಹೀರಾಲಾಲರ ಪುಸ್ತಕವನ್ನು ಬಹಳ ಸುಂದರವಾಗಿ ಹೊಲಿದರು. ಅದರ ಹಿಂದೆ ಪಟ್ಟಿಯನ್ನೂ ಹಚ್ಚಿದರು. ಇದಲ್ಲದೆ ನಿನ್ನೆ

ಬದಾಮಿಯನ್ನು ಜಜ್ಜುವ ಯಂತ್ರ ಬಂದಿತ್ತು, ಅದರಿಂದ ಬದಾಮಿ ಜಜ್ಜಿದರು.

ಬಾಪೂರ ಸ್ವಭಾವದಲ್ಲಿದ್ದ ಮಾತನ್ನು ನಾನು ಎಷ್ಟೋ ಸಾರೆ ಜ್ಞಾಪಿಸಿಕೊಂಡಿದ್ದೇನೆ. ಎರಡನೆಯವರಿಗೂ ಹೇಳಿದ್ದೇನೆ. ಅದನ್ನು ಬಾಪೂ ಸ್ವತಃ ಇವತ್ತು ಪ್ರೇಮಾಬೇನರ ಪತ್ರದಲ್ಲಿ ಬರೆದರು:

"ನಾವು ಕುಶಲರಾಗುತ್ತ ಹೋದಂತೆ, ಕೆಲಸದ ಗತಿ ಬೆಳೆಯುವದು. ಅಲ್ಲದೆ ಅದರ ಶ್ರಮ ಕಡಿಮೆಯೆನಿಸುವದು. ಹೊಸ ಉದಾಹರಣೆಯನ್ನು ಕೇಳು. ಎಡಗೈಯಿಂದ ನೂಲುವಾಗ ಮೊದಲನೇ ದಿವಸ ಕೇವಲ ೯೩ ಎಳೆಗಳು ಹೊರಟವು. ಸಮಯವು ಹೆಚ್ಚು ಹತ್ತಿತು. ಆಯಾಸವೂ ಹೆಚ್ಚು ಆಯಿತು. ಮೊದಲಿನಕಿಂತ ಈಗ ಕುಶಲತೆಯು ಬೆಳೆದಿದೆ, ಅಂದರೆ ಕಡಿಮೆ ಹೊತ್ತಿನಲ್ಲಿ ಕಡಿಮೆ ಆಯಾಸದಿಂದ ಎರಡುನೂರಕ್ಕಿಂತ ಹೆಚ್ಚು ಎಳೆಗಳನ್ನು ತೆಗೆಯಹತ್ತಿದ್ದೇನೆ. ಈಗ ಮಗನ ರಾಟಿಯನ್ನು ತೆಗೆದುಕೊಂಡಿದ್ದೇನೆ. ನಿನ್ನೆ ೨೪ ಎಳೆಗಳನ್ನು ತೆಗೆದೆನು. ಸಮಯವೂ ಹೆಚ್ಚು ಹಿಡಿಯಿತು. ಇವತ್ತು ಕಡಿಮೆ ಹೊತ್ತಿನಲ್ಲಿ ೫೬ ಎಳೆಗಳನ್ನು ತೆಗೆದೆನು. ಆಯಾಸವೂ ಕಡಿಮೆ ಆಯಿತು. ಯಾವ ಮಾತು ಒಬ್ಬ ಮನುಷ್ಯನ ವಿಷಯದಲ್ಲಿ ಮತ್ತು ಸಣ್ಣ ಕೆಲಸದ ವಿಷಯದಲ್ಲಿ ನಿಜವಾಗಿರುವದೊ ಅದೇ ಮಾತು ಸಂಸ್ಥೆ ಮತ್ತು ಅದರ ಮಹಾನ್ ಪ್ರವೃತ್ತಿಯ ವಿಷಯಕ್ಕೂ ನಿಜವಾಗಿದೆ.

"योगः कर्मसु कौशलम्" ಕರ್ಮ ಅಂದರೆ ಸೇವಾಕಾರ್ಯ, ಯಜ್ಞ. ನಮ್ಮ ಎಲ್ಲ ಅಡ್ಡಿ ಆತಂಕಗಳಿಗೆ ನಮ್ಮ ಅಕುಶಲತೆಯೇ ಕಾರಣವು. ಕುಶಲತೆಯು ಪ್ರಾಪ್ತವಾದರೆ ಈಗ ಕಷ್ಟದಾಯಕವೆನಿಸಿದ ಮಾತು ಆನಂದದಾಯಕವೆನಿಸುವದು. ಸುವ್ಯವಸ್ಥಿತ, ಸಾತ್ವಿಕ ತಂತ್ರವು ಭಾರವೆನಿಸಬಾರದೆಂದು ನನ್ನ ನಿಶ್ಚಿತವಾದ ಅಭಿಪ್ರಾಯವಿದೆ.

"ನೀನು ಈ ಮಾತು ಸಾಧ್ಯಮಾಡಿಕೊಳ್ಳುವದಕ್ಕೆ ಆಶ್ರಮದಲ್ಲಿ ಬಂದಿರುವಿ. ಇದನ್ನು ನಿನಗೆ ಯಾರೂ ಕಲಿಸುವದಿಲ್ಲ. ಎಲ್ಲರೂ ಅದನ್ನು ಸ್ವತಃ ವಾತಾವರಣದೊಳಗಿಂದ ಗ್ರಹಣಮಾಡಿಕೊಳ್ಳಬೇಕು. ನಿನ್ನಂತೆ ಗ್ರಹಣ ಮಾಡಿಕೊಳ್ಳದಿದ್ದವರು ಆಶ್ರಮದಲ್ಲಿ ಕೊನೆಯವರೆಗೆ ಬಾಳಲಾರರು. ಮಹತ್ವಾಕಾಂಕ್ಷೆಯಿಲ್ಲದವರು ತಾಳಿಕೊಂಡು ಹೋಗಬಹುದು. ಈ ಮಾತು ಬೇರೆ. ಆಶ್ರಮವು ಸ್ವತಂತ್ರ ಸಂಸ್ಥೆ ಇರುವದರಿಂದ ಅದರಲ್ಲಿ ವಿಚಾರ ಮಾಡುವವರಿಗೆ ಬಯಸಿದಷ್ಟು ಉನ್ನತಿ ಹೊಂದಲು ಅವಕಾಶವಿದೆ. ಅದನ್ನು ನಿನಗೆ ಯಾರೂ ಕೊಡಲಾರರು. ನೀನೇ ಸ್ವತಃ ಅನುಕೂಲ ವಾತಾವರಣವನ್ನುಂಟು ಮಾಡಿಕೊಳ್ಳಬೇಕು. ನೀನು ನಿನ್ನ ಗೆಳತಿಯನ್ನೂ ಆಕರ್ಷಿಸಿಕೊಳ್ಳಬಲ್ಲೆ. ಆದರೆ ನಿಜವಾಗಿ ನೋಡಿದರೆ ಅದು ಸ್ವಾರ್ಥವೆಂದೇ ಹೇಳಬಹುದು. ನಿನಗಂತೂ ಅಲ್ಲಿ ಯಾರೇ ಇರಲಿ ಅವರೇ ನಿನ್ನ ಸಖ ಮತ್ತು ಸಖಿಗಳಾಗುವರು. ನಿನ್ನಲ್ಲಿರುವದನ್ನು ಅವರಲ್ಲಿ ತುಂಬು. ಅವರಲ್ಲಿದ್ದದ್ದನ್ನು ನೀನು ತೆಗೆದುಕೊ. ಒಬ್ಬಿಬ್ಬರನ್ನು ಬಿಟ್ಟು ಉಳಿದವರ ಹತ್ತಿರ ನಿನಗೆ ತೆಗೆದುಕೊಳ್ಳತಕ್ಕಂತಹ

ದೇನೂ ಇಲ್ಲವೆಂದು ತಿಳಿಯುತ್ತಿದ್ದರೆ ನೀನು ಮೋಹಕೂಪದಲ್ಲಿ ಬಿದ್ದಿರುವಿ. ನಮಗೆ ಏನನ್ನೂ ತೆಗೆದುಕೊಳ್ಳಲಿಕ್ಕೆ ಬಾರದಂಥವರು ಜಗತ್ತಿನಲ್ಲಿ ಯಾರೂ ಇಲ್ಲವೆಂದು ನನಗನಿಸುತ್ತದೆ. "

ಒಬ್ಬ ಹೊಸ ಆಶ್ರಮವಾಸಿಯು ಕೇಳಿದ: "ತುಡುಗನು ಬಂದರೆ ಅವನನ್ನು ಹೊಡೆಯುವದೆಂತು? ಅವನಿಗೆ ಊಟಕ್ಕೆ ಹಾಕಿ, ಕೂಡಿಸಬೇಕು. ಪಶುಗಳಿಗೆ ಸಹ ತಿನ್ನಲಿಕ್ಕೆ ಧಾನ್ಯ ಹಾಕುತ್ತೇವೆ. ಯಾಕಂದರೆ ಇದು ಸಮತ್ವವಿರುವದು." ಮುಂತಾಗಿ. ಅದಕ್ಕೆ ಬಾಪೂ ಬರೆದರು:

"ನೀವು ಕೇಳಿದ ಪ್ರಶ್ನೆಯು ಕೇಳುವಂತಹದೇ ಆಗಿದೆ. ಬುದ್ಧಿವಾದದಿಂದ ಇದನ್ನು ಬಿಡಿಸಹೋದರೆ ಇದರೊಳಗಿಂದ ಇನ್ನೂ ಅನೇಕ ಪ್ರಶ್ನೆಗಳು ಉದ್ಭವಿಸುವವು ಮತ್ತು ಮನುಷ್ಯನು ಅನಶನ ವ್ರತ ತೆಗೆದುಕೊಂಡು ಸಮಾಧಿಸ್ಥನಾಗಿ ಕೂಡ್ರುವ ವರೆಗೂ ಅವು ನಮ್ಮನ್ನು ಒಯ್ಯುತ್ತವೆ. ಇಂಥ ವಿಚಾರಗಳಿಂದಲೇ ಸನ್ಯಾಸವು ಉಂಟಾಗಿರಬಹುದೆಂದು ಅನಿಸುತ್ತದೆ. ಆದರೆ ಬುದ್ಧಿವಾದದೊಳಗೆ ಸೇರಿದರೆ ನಾವು ಸನ್ಯಾಸವೆಂದು ತಿಳಿಯುವದೂ ಅಪೂರ್ಣವೆಂದೇ ಸಿದ್ಧವಾಗುವದು. ಆದುದರಿಂದ ಕೊನೆಗೆ ಅನಶನದ ಸ್ಥಿತಿಯೇ ಉಂಟಾಗುವದು. ಮನುಷ್ಯನು ಈ ಪ್ರಕಾರ ಮಾಡ ಲಾರನು ಮತ್ತು ಮಾಡಹೋದರೂ ಅವನ ಮನಸ್ಸು ಅನೇಕ ಸೃಷ್ಟಿಗಳನ್ನು ರಚಿಸು ವದರಲ್ಲಿ ತೊಡಗುವ ಸಂಭವವಿದೆ. ಈ ಪ್ರಕಾರದ ವಿಚಾರಧಾರೆಯಿಂದಲೇ ಗೀತೆಯ ಉತ್ಪತ್ತಿಯಾಗಿದೆಯೆಂದು ನನಗನಿಸುತ್ತದೆ. ಗೀತೆಯು ನಮಗೆ ಒಂದು ಬದಿಗೆ ಜೀವನದ ಆದರ್ಶವನ್ನು ತೋರಿಸಿದೆ ಮತ್ತು ಎರಡನೇ ಬದಿಗೆ ಆ ಆದರ್ಶದ ಕಡೆಗೆ ಹೋಗುತ್ತ ಹೋಗುತ್ತ ಜೀವನವನ್ನು ಯಾವ ರೀತಿಯಿಂದ ವ್ಯತೀತಮಾಡ ಬೇಕೆಂಬುವನ್ನು ತೋರಿಸಿಕೊಟ್ಟಿದೆ. ಒಂದು ವಾಕ್ಯದಲ್ಲಿ ಆದು ಈ ರೀತಿಯಿದೆ: 'ಆದರ್ಶವನ್ನು ಲಕ್ಷ್ಯದಲ್ಲಿಟ್ಟು ನಮ್ಮೆದುರಿಗೆ ಬಂದ ಕರ್ತವ್ಯವನ್ನು ಪೂರ್ಣ ಮಾಡುತ್ತ ಹೋಗಬೇಕು ಮತ್ತು ಫಲಾಪೇಕ್ಷೆಯನ್ನಿಡಬಾರದು.' ಈ ಪ್ರಕಾರ ಆಚರಣೆ ಇಡುವದರಿಂದ ಆಶ್ರಮದೆದುರಿಗೆ ಬರುವ ಸಮಸ್ಯೆಗಳು ಬಿಡುಗಡೆಯಾಗುತ್ತ ಇರುವವು. ಆಶ್ರಮದಲ್ಲಿ ಕಳ್ಳನು ಬಂದಾಗ ಅವನನ್ನು ಕೂಡ್ರಿಸುವದಾದರೆ ಕೂಡ್ರಿ ಸಿರಿ. ಆದರೆ ನಮ್ಮಲ್ಲಿ ಈ ಶಕ್ತಿ ಬಂದಿಲ್ಲವೆಂಬ ಮಾತನ್ನು ನಮ್ರತಾಪೂರ್ವಕವಾಗಿ ಒಪ್ಪಿಕೊಂಡು ನಮಗೆ ಶೋಭಿಸುವಂಥ ಉಪಾಯವನ್ನೇ ನಾವು ಮಾಡುತ್ತೇವೆ. ದನ ಮುಂತಾದ ಪಶುಗಳು ಬರುತ್ತವೆ ಮತ್ತು ಪ್ರಾಣಿಗಳು ಬೆಳೆಯನ್ನು ತಿನ್ನುತ್ತವೆ. ಅವುಗಳಿಗಾಗಿ ನಮಗೆ ಶುದ್ಧ ಅಹಿಂಸಕ ಉಪಾಯ ದೊರೆತಿಲ್ಲ. ಆದುದರಿಂದ ಎಷ್ಟೋ ಹಿಂಸೆಗಳನ್ನು, ನಾವು ನಮ್ಮ ಪಾಮರತೆಯನ್ನು ತಿಳಿದುಕೊಂಡು, ಅನಿವಾರ್ಯ ವೆಂದು ಮಾಡುತ್ತೇವೆ. ಗುಲ್ಲುಮಾಡಿ ಅಥವಾ ಕಟ್ಟಿಗೆಯಿಂದ ಹೊಡೆದು ದನಗಳನ್ನು ಹೊರಗೆ ಹಾಕುವದು, ಕಲ್ಲು ಹೊಡೆದಂತೆ ಮಾಡಿ ಅಥವಾ ಕಲ್ಲುಗಳನ್ನು

ಹೊಡೆದು ಪಕ್ಷಿಗಳ ಹೃದಯದಲ್ಲಿ ಭಯವನ್ನುಂಟು ಮಾಡುವದು, ಗಳಿ ಹೊಡೆದು ಅಥವಾ ಬೇರೆ ರೀತಿಯಿಂದ ಜಂತುಗಳ ನಾಶಮಾಡುವದು, ಸರ್ಪಗಳನ್ನು ಹಿಡಿದು ಓಡಿಸುವದು ಅಥವಾ ಹೊಡೆಯುವ ಸ್ವಾತಂತ್ರ್ಯವನ್ನು ಇಟ್ಟುಕೊಳ್ಳುವದು ಇವೆಲ್ಲ ಮಾತುಗಳು ವಿರುದ್ಧವಾಗಿರುವವೆಂಬುದು ನನಗೆ ಗೊತ್ತಿದೆ. ಆದರೆ ಆಶ್ರಮ ಅಥವಾ ಆಶ್ರಮವಾಸಿಯು ಪೂರ್ಣತ್ವವನ್ನು ಮುಟ್ಟಿಲ್ಲ. ಆದುದರಿಂದ ಇಂಥ ಮಾತುಗಳು ವಿರೋಧವಾಗಿದ್ದರೂ ಅವನ್ನು ಮಾಡುತ್ತೇವೆ; ಯಾಕಂದರೆ ಇದರೊಳಗಿಂದಲೇ ಮೋಕ್ಷದ ಮಾರ್ಗವು ದೊರೆಯಬಲ್ಲದು. ಎಲ್ಲ ಕೆಲಸಗಳನ್ನು ನಿಲ್ಲಿಸಿ ಸ್ವಸ್ಥ ಕೂಡುವದು ಈ ವಿರೋಧವಾದ ಕೆಲಸಗಳನ್ನು ಮಾಡುವದಕ್ಕಿಂತಲೂ ಹೆಚ್ಚು ತಪ್ಪಾಗುವದೆಂಬುದರಲ್ಲಿ ನನಗೆ ಸ್ವಲ್ಪೂ ಸಂಶಯವಿಲ್ಲ. ಆದುದರಿಂದಲೇ ಗೀತಾಕಾರನು ಬೆಂಕಿಗೆ ಹೊಗೆಯ ದೋಷ ಅಂಟಕೊಂಡಿರುವಂತೆ ಪ್ರವೃತ್ತಿಗಳಿಗೆ ಒಂದಿಲ್ಲೊಂದು ದೋಷವು ಅಂಟಿಕೊಂಡಿರುತ್ತದೆಂದು ಹೇಳಿದ್ದಾನೆ. ಇದನ್ನು ತಿಳಿದುಕೊಂಡು ಮನುಷ್ಯನು ವಿನಯಶೀಲನಾಗಬೇಕು. ತನ್ನ ಭಾಗ್ಯದಿಂದ ದೊರೆತ ಕರ್ತವ್ಯದ ಪಾಲನೆಯನ್ನು ಸೇವಾಭಾವದಿಂದ ಮಾಡಬೇಕು. ಫಲಪ್ರಾಪ್ತಿಯಲ್ಲಿ ತಾನು ಪರಮಾತ್ಮನ ಕೈಯಲ್ಲಿ ನಿಮಿತ್ತಮಾತ್ರನೆಂದು ತಿಳಿಯಬೇಕು."

"'ಸತ್ಯವೇ ಈಶ್ವರನಿದ್ದಾನೆಂದು' ನೀವು ಮೇಲಿಂದ ಮೇಲೆ ಹೇಳುತ್ತೀರಿ. ಈ ಮಾತು ನಿಮಗೆ 'हिरण्मयेन पात्रेण सत्यस्यापिहित मुखम्' ಎಂಬುದನ್ನು ಓದಿ ಹೊಳೆಯಿತೊ ಅಥವಾ ಸ್ವತಂತ್ರರೂಪದಿಂದಲೊ?" ಎಂದು ಪಂಡಿತಜಿಯವರು ಪ್ರಶ್ನೆ ಕೇಳಿದ್ದರು. ನಿರ್ಮಲ ಹೃದಯದಿಂದ ಬಾಪೂ ಉತ್ತರ ಕೊಟ್ಟರು: "ಸತ್ಯವೇ ಪರಮೇಶ್ವರನಿದ್ದಾನೆ ಎಂಬುದು ಹೊಳೆದಾಗ 'हिरण्मयेन पात्रेण' ಎಂಬ ಮಂತ್ರವು ನನ್ನೆದುರಿಗೆ ಇತ್ತೊ ಇಲ್ಲವೊ ಎಂಬುದು ಯಾವದೂ ನನ್ನ ಲಕ್ಷ್ಯದಲ್ಲಿಲ್ಲ. ಇಂಥ ಮಾತುಗಳು ನನಗೆ ಹೊಳೆಯುತ್ತಿರುವಾಗ ಅವು ಮೌಲಿಕವಾದವುಗಳಲ್ಲವೆನೊ ಎಂಬುವಂತೆ ಹೃದಯದಿಂದ ಹೊರಡುತ್ತವೆ. ನನ್ನ ಸಲುವಾಗಿ ಅವು ಅನುಭವ ಸಿದ್ಧವಾದವುಗಳೆಂದು ಹೇಳಬಹುದು."

ಇದೇ ಪ್ರಕಾರದ ಸ್ಪಷ್ಟೋಕ್ತಿಯನ್ನು ಅವರು ಒಂದು ದಿವಸ ಸುಪರಿಟೆಂಡೆಂಟರಿಗೆ ಉತ್ತರ ಕೊಡುವಾಗ ಉಪಯೋಗಿಸಿದರು. ಸುಪರಿಂಟೆಂಡೆಂಟರ ಸಂಗಡ ಚಮತ್ಕಾರ ಮತ್ತು ಸಿದ್ಧಿಗಳ ಮಾತುಗಳು ನಡೆದಿದ್ದವು. ನಟರಾಜನ್ನರಿಗೆ ಬರೆದ ಪತ್ರವು ಚನ್ನಾಗಿದೆಯೆಂದು ಸುಪರಿಂಟೆಂಡೆಂಟರು ಹೇಳಿದರು. "ಆದರೆ ಇಂಥ ಸಿದ್ಧಿಗಳು ಆಗಬಹುದೋ ಇಲ್ಲವೊ? ಆದರೂ ಅವುಗಳ ಉಪಯೋಗವೇನು?" ಎಂದು ಪ್ರಶ್ನಿಸಿದರು. "ಉಪಯೋಗವಿಷ್ಟೆ, ಇದು ಅಂತಿಮ ಸ್ಥಿತಿಗೆ ಮುಟ್ಟುವದಕ್ಕಿಂತ ಮೊದಲಿನ ಒಂದು ಅವಸ್ಥೆಯಿದೆ. ಮನುಷ್ಯನಿಗೆ ಇದರ ಕಲ್ಪನೆಯೂ ಇರಕೂಡದು. ಈ ಸಿದ್ಧಿಯು ಉಪಯೋಗ ಮಾಡುವ ವಸ್ತುವೇ ಅಲ್ಲ. ಅನಾಯಾಸವಾಗಿ ಇದರ

ಉಪಯೋಗವಾಗುತ್ತಿದ್ದರೆ ಆ ಮಾತು ಬೇರೆ. " "ಮನುಷ್ಯನು ಇದರ ಬಗ್ಗೆ ಕಲ್ಪನೆಯಿಲ್ಲದಿರುವದು ಸಾಧ್ಯವೆ ? " "ಹೌದು ನನಗೆ ಕಲ್ಪನೆಯಿದ್ದಿಲ್ಲ." ಎಂದು ಬಾಪೂ ಹೇಳಿದರು. "ನಿಮ್ಮಲ್ಲಿ ಇಂಥ ಯಾವುದಾದರೂ ಶಕ್ತಿಯಿದೆಯೆ ?" ಬಾಪೂ ಹೇಳಿದರು : "ಹೌದು, ಇಂಥ ಯಾವುದಾದರೂ ಚಮತ್ಕಾರ ಮಾಡುವ ಶಕ್ತಿಯಿಲ್ಲ, ಆದರೆ ಬೇರೆಯಿದೆ. ಇಂಥ ಸ್ಥಳದಲ್ಲಿ ಇಂಥ ಶಬ್ದವನ್ನು ಮಾತಾಡುವೆನೆಂಬುದು ನನಗೇನು ಗೊತ್ತಿತ್ತು ಅಥವಾ ಗೊತ್ತಿದೆ ? ಆದರೆ ಈಶ್ವರನು ಅದನ್ನು ನನಗೆ ಕೊಟ್ಟು ಬಿಡುತ್ತಾನೆ. ಇದು ಒಂದು ಶಕ್ತಿಯಿದೆ· ಆದರೆ ಅದರ ಉಪಯೋಗವೇನು ? ಅದು ತನ್ನಿಂದ ತಾನೇ ಪ್ರಕಟವಾದರೆ ಆಗಲಿ."

ಆಶ್ರಮಕ್ಕೆ ಕಳಿಸಲಿಕ್ಕೆ ಏನಾದರೂ ಬರೆ ಎಂದು ಬಾಪೂ ಹೇಳಿದ್ದರು. ನಾನು ನಾಸಿಕದಲ್ಲಿ 'ಮಂದಿರಗಳ ದರ್ಶನ' ಎಂಬ ಹೆಸರಿನ ನಾಟಕವನ್ನು ಆಲೋಚಿಸಿದ್ದೆ. ಅದರ ಐದು ದೃಶ್ಯಗಳನ್ನು ಬರೆದು ತೆಗೆದಿದ್ದೆ. ಆದರೆ ಬಾಪೂ

೯–೫–'೩೨ ಹೇಳಹತ್ತಿದರು : "ಇದನ್ನು ಜೇಲಿನಿಂದ ಕಳಿಸಲಾಗುವದಿಲ್ಲ. ಇಂಥ ವಸ್ತುಗಳನ್ನು ಈ ಜನರು ಪಾಸು ಮಾಡುವದಿಲ್ಲ. ಪಾಸು ಮಾಡಿದರೂ ಇವರ ಹೆಸರು ಕೆಡುವದು. ಬರೆದು ಇಟ್ಟುಕೊ. ಹೊರಗೆ ಬಿಟ್ಟುಹೋದ ಮೇಲೆ ಪ್ರಸಿದ್ಧಿಸು."

ಬಾಪೂ ಬೆಕ್ಕುಗಳ ನಿರೀಕ್ಷಣೆಯನ್ನು ವಿಶೇಷ ಮಾಡುತ್ತಿದ್ದಾರೆ. ಇವತ್ತಿನ ಪತ್ರವನ್ನು ಬೆಕ್ಕಿನ ಮೇಲೆ ರಚಿಸಿಯೇ ಬರೆದಿದ್ದಾರೆ. ರಾತ್ರಿ ಬೆಕ್ಕಿನ ನೋಟವು ನೋಡುವಂತಹದಿರುತ್ತದೆ. ಹಲ್ಲಿಯ ಮೇಲಿನ ಇದರ ಏಕಧ್ಯಾನ ಮತ್ತು ಏಕಾಗ್ರ ಕಣ್ಣನ್ನು ನಮ್ಮ ಜ್ಞಾನಿಗಳು ನೋಡಿದಂತೆ ಕಾಣುವದಿಲ್ಲ. ಇಲ್ಲದಿದ್ದರೆ ದೇವರ ಧ್ಯಾನವನ್ನು ಹೀಗೆ ಮಾಡಿರಿ ಎಂದು ಹೇಳುತ್ತಿದ್ದರು. ನಿನ್ನೆಯಂತೂ ಒಂದು ವಿಶೇಷತೆಯನ್ನು ನೋಡಿದೆವು. ಹಲ್ಲಿಯು ಬೆಕ್ಕಿನ ಹತ್ತರ ಬರುತ್ತಿರುತ್ತಲೇ ಬೆಕ್ಕು ಬಾಲವನ್ನು ಅಲುಗಾಡಿಸಹತ್ತಿತು. ಆ ಮೇಲೆ ಹಲ್ಲಿಯು ತಿರುಗಿ ವಿರುದ್ಧ ದಿಶೆಯಿಂದ ಗೋಡೆಯ ಮೇಲೆ ಹೊರಟುಹೋಯಿತು. ನೀನು ಎಲ್ಲಿ ಹೋಗುತ್ತಿರುವಿ? ಜಾಣನಾಗಿ ನನ್ನ ಬಾಯಲ್ಲಿ ಬಂದು ಬಿಡು ಎಂದು ಹೇಳುತ್ತಿರುವಂತೆ ಬೆಕ್ಕು ಒದರಹತ್ತಿತು. ಹಿಂದುಸ್ತಾನದ ಮೇಲೆ ಇಂಗ್ಲಂಡದ ಒಡೆತನ ಇರಲೇಬೇಕೆಂದು ಪ್ರಮಾಣಿಕತನದಿಂದ ಹೇಳುತ್ತಿರುವ ಇಂಗ್ಲೀಷರು ಈ ಬೆಕ್ಕಿನ ಜ್ಞಾಪಕ ಮಾಡಿಕೊಡುತ್ತಾರೆ. ಹಾವಿಗಿಂತ ಈ ಬೆಕ್ಕಿನ ಉದಾಹರಣೆಯು ಹೆಚ್ಚು ಸಮಂಜಸವಿದೆ.

ನಿನ್ನೆ ಮಗನ ರಾಟೆಯನ್ನು ನೂಲುತ್ತ ನೂಲುತ್ತ ಆದರ ಮೇಲೆ ಬಲಗೈ ಕೂತಿತು. ಅದರಿಂದ ಬಾಪೂ ಉತ್ಸಾಹಿತರಾದರು. ಆದರೆ ಇವತ್ತು ಆ ರಾಟೆಯು

ಯಾವ ರೀತಿಯಿಂದಲೂ ನಡೆಯಲಿಲ್ಲ. "ನಿಮ್ಮ ಶಾಪ ಹತ್ತ-
೧೦-೫-'೩೨ ದಿದ್ದರೆ ನಡೆಯುತ್ತದೆ." ಎಂದು ವಲ್ಲಭಭಾಯಿಯವರಿಗೆ ಬಾಪೂ ಮುಂಜಾವಿನಿಂದಲೇ ಹೇಳಿಟ್ಟಿದ್ದರು. ೯–೧೦ ಹೊಡೆಯುವ ವರೆಗೆ ನಡೆಸಿದರು. ಆದರೆ ಹಂಜೀ ಕೆಡಿಸುವದರ ಹೊರತು ಮತ್ತೆ ಯಾವ ಪರಿಣಾಮ ಹೊರಡಲಿಲ್ಲ. "ಒಂದು ಕುಕ್ಕಡಿ ತೆಗೆದು ಎರಡನೇದನ್ನು ತುಂಬಿದಿರೇನು?" ಎಂದು ವಲ್ಲಭಭಾಯಿಯವರು ಕೇಳಿದರು. ಮಧ್ಯಾಹ್ನಕ್ಕೂ ಸಹ ಇದೇ ಪ್ರಕಾರ ಆಯಿತು. ರಾಟಿಯ ಹಮ್ಮಿಗೆ ದಾರವನ್ನು ಬಿಗಿ ಮಾಡಲಾಯಿತು, ಎಣ್ಣೆ ಹಾಕಿತು, ಎಲ್ಲ ಉಪಾಯಗಳನ್ನೂ ಮಾಡಲಾಯಿತು. ನಾನೂ ಸಹ ಸ್ವಲ್ಪ ಹೊತ್ತಿನವರೆಗೆ ತಲೆ ಹಾಕಿದೆನು. ಆದರೆ ನಡೆಯಲಿಲ್ಲ. ವಲ್ಲಭಭಾಯಿ ಮಲಗಿ ಎದ್ದು: "ಬಹಳ ನೊಂದಿರಿ, ಇನ್ನು ಬಂದು ಮಾಡಿರಿ." ಎಂದು ಹೇಳತೊಡಗಿದರು. "ಹೌದು, ನೊಂದೆನು ನೊಂದೆನು. ನಮ್ಮ ಸಂಘವು ಬಂದಾಗುವಂತಹದಿಲ್ಲ. ಕೊನೆಗೆ ಸ್ಯಾಮ್ಯುಅಲ್ ಹೋರನ ಬಳಿಗೆ ಕುಳಿತುಕೊಳ್ಳುವವನು ನಾನೇ ಅಲ್ಲವೆ?" ಎಂದು ಬಾಪೂ ನುಡಿದರು. "ಕೆಳಗೆ ಬಹಳಷ್ಟು ನೂತದ್ದು ಬಿದ್ದಂತೆ ಕಾಣುತ್ತದೆ" ಎಂದು ವಲ್ಲಭಭಾಯಿಯವರು ಅಂದರು. ಸಾಯಂಕಾಲ ವಲ್ಲಭಭಾಯಿಯವರಲ್ಲಿ ಸಹ ಚೇಷ್ಟೆ ಮಾಡುವ ವೃತ್ತಿ ಉಳಿದಿರಲಿಲ್ಲ. ಬಾಪೂ ಎಡಗೈಯಿಂದ ಪ್ರಾರಂಭ ಮಾಡಿದರು. ಸುಮಾರು ಐದು ತಾಸು ಪರಿಶ್ರಮ ಮಾಡಿರಬಹುದು. ಬಾಪೂ ಸಂಜೆಗೆ ತೀರ ದಣಿದಿದ್ದರು. ದಣಿದು ನಿರ್ವಿಣ್ಣರಾಗಿ ಎಂಟು ಗಂಟೆಗೆ ಮೊದಲೇ ಕಾಲು ಒತ್ತಿಸಿಕೊಳ್ಳುತ್ತ ಗೊರಕೆ ಹೊಡೆಯಹತ್ತಿದರು. ಮತ್ತೆ ಎದ್ದು, ಕೂಡಲೇ ಮಲಗಿದರು. "ನೋಡಿರಿ, ನಾಳೆ ರಾಟಿಯು ಅವಶ್ಯ ನಡೆಯುವದು. ಶ್ರದ್ಧೆ ಬಹಳ ದೊಡ್ಡ ವಸ್ತುವಿದೆ" ಎಂದು ಬಾಪೂ ಹೋಗುತ್ತ ಹೋಗುತ್ತ ವಲ್ಲಭಭಾಯಿಯವರಿಗೆ ಹೇಳಿದರು. "ಇದರಲ್ಲಿಯೂ ಶ್ರದ್ಧೆಯೇ!" ಎಂದು ವಲ್ಲಭಭಾಯಿಯವರು ಅಂದರು. "ಹೌದು ಹೌದು, ಶ್ರದ್ಧೆ ಇರಲೇಬೇಕು." ಎಂದು ಬಾಪೂ ನುಡಿದರು.

* * *

ಸ್ವಿತ್ಸರ್ಲಂಡದಲ್ಲಿ ಆಫೀ ಎರಿಸ್ಪಾರ್ಶಿ ಹೆಸರಿನ ರಾಜಕುಮಾರಿಯು ಭೆಟ್ಟಿಯಾಗಿದ್ದಳು. ಅವಳ ಪತ್ರಗಳು ಬರುತ್ತಲೇ ಇರುತ್ತವೆ. ಬಾಪೂರ ಲೇಖಗಳನ್ನು ಓದುವದರ ಮತ್ತು ಭೆಟ್ಟಿಯ ಪರಿಣಾಮವು ಈ ಮಹಿಳೆಯ ಮೇಲೆ ಬಹಳವಾಗಿದೆ. ಅವಳು ಅದೇ ಪರಿಣಾಮದ ಮಾತನ್ನು ಆಡುತ್ತಾಳೆ. ಇವತ್ತು ಫಾದರ ಎಲ್ವಿನ್ನರು ರಾಮಕೃಷ್ಣ ಪರಮಹಂಸರ ವಚನಗಳನ್ನು ಸುಂದರ ಅಲಂಕೃತ ಅಕ್ಷರಗಳಲ್ಲಿ ಒಂದು ಕಾಗದದ ಮೇಲೆ ಬರೆದು ಕಳಿಸಿದ್ದಾರೆ:

"When you are at work, use only one of your hands, and let the other touch the feet of the Lord. When your work is

suspended, take his feet in both your hands and put them over your heart."

"ನೀವು ಕೆಲಸ ಮಾಡುತ್ತಿರುವಾಗ ಒಂದು ಕೈಯನ್ನು ಉಪಯೋಗಿಸಿರಿ ಮತ್ತು ಎರಡನೆಯದು ದೇವರ ಚರಣದಲ್ಲಿರಲಿ. ಕೆಲಸ ನಿಲ್ಲಿಸಿದಾಗ ಅವನ ಚರಣಗಳನ್ನು ಎರಡೂ ಕೈಗಳಿಂದ ಹಿಡಿದು ನಿಮ್ಮ ಹೃದಯದ ಮೇಲೆ ಇಟ್ಟು ಕೊಳ್ಳಿರಿ."

"ಬಾಪೂ, ನೀವು ಎಡಗೈ ಮತ್ತು ಬಲಗೈ ಎರಡನ್ನೂ ಕೆಲಸಕ್ಕೆ ಉಪಯೋಗಿಸಲು ಹೇಳುತ್ತೀರಿ. ಇದಕ್ಕೆ ಉತ್ತರವೆಂದು ಈ ವಚನವನ್ನು ನಿಮಗೆ ಕಳಿಸಿದಂತೆ ತೋರುತ್ತದೆ." ಎಂದು ನಾನು ಬಾಪೂರಿಗೆ ಹೇಳಿದೆ. "ಎರಡೂ ಕೈಗಳನ್ನು ಕೆಲಸಕ್ಕೆ ಉಪಯೋಗಿಸಬೇಡಿರೆಂದು ಇದರಲ್ಲಿ ಎಲ್ಲಿ ಹೇಳಿದೆ? ಇದರಲ್ಲಿಯಂತೂ ಎರಡೂ ಕೈಗಳಿಂದ ಕೆಲಸ ಮಾಡಲಿಕ್ಕೆ ಉಪದೇಶಿಸಿದೆ." ಎಂದು ಬಾಪೂ ಅಂದರು.

ಭಗಿನಿಯರ ಪತ್ರಗಳು ಬರುತ್ತಲೇ ಇರುತ್ತವೆ. ಈ ಸಾರೆ ಭಕ್ತಿಬಹೆನಳ ಪತ್ರವು ಉದ್ದನಾಯಿತು. ಭಗಿನಿಯರು ತತ್ವಚರ್ಚೆಯನ್ನು ಚನ್ನಾಗಿ ಮಾಡುತ್ತಾರೆ. ಗೀತೆಯ ವಿದ್ಯಾರ್ಥಿನಿಯಾದ ಒಬ್ಬ ಭಗಿನಿಯು ಪ್ರಶ್ನಿಸಿದಳು: "ಗೀತೆಯಲ್ಲಿ ತನ್ನದು ಪರರದು ಎಂಬ ಭೇದವನ್ನು ಮಾಡಬಾರದೆಂಬ ಉಪದೇಶವಿದೆ. ಆದರೆ ಕರ್ತವ್ಯಪಾಲನೆ ಮಾಡುವಾಗ ಹಿಂಸೆ-ಅಹಿಂಸೆಗಳಲ್ಲಿ ಭೇದ ಮಾಡಲೇಬೇಕಾಗುವದು! ಪೂರ್ಣಾವತಾರನು ಕೊಲ್ಲುವ ಉಪದೇಶವನ್ನು ಹೇಗೆ ಮಾಡಬಲ್ಲನು? ಜಗತ್ತಿನ ಕಲ್ಯಾಣ ಬಯಸುವವನು ಹಿಂಸಾತ್ಮಕ ಯುದ್ಧವನ್ನು ಬಹಳ ಧಿಕ್ಕರಿಸುತ್ತಾನೆ ಮತ್ತು ಹಿಂಸಾತ್ಮಕ ಯುದ್ಧದಿಂದ ಮನುಷ್ಯನು ಮನುಷ್ಯನುಳಿಯದೆ ಪಶುವಾಗುತ್ತಾನೆ. ಆದರೂ ಗೀತೆಯಲ್ಲಿ ಯುದ್ಧದ ಉಪದೇಶ ಹೇಗಿದೆ?"

ಬಾಪೂ ಬರೆದರು: "ಕರ್ತವ್ಯದ ನಿಶ್ಚಯ ಮಾಡುವಾಗ ಅನೇಕ ಪ್ರಶ್ನೆಗಳು ಉದ್ಭವಿಸಬಲ್ಲವು. ಆದರೆ ಗೀತೆಯ ನಿರೀಕ್ಷಣೆ ಮಾಡುವಾಗ ಪ್ರಶ್ನೆ ಮಾಡುವವನ ಪ್ರಶ್ನೆ ಏನಿತ್ತು ಎಂಬುದನ್ನಷ್ಟೇ ವಿಚಾರ ಮಾಡಬೇಕು. ಪ್ರಶ್ನೆಯ ಹೊರಗೆ ಹೋಗಿ ಉತ್ತರ ಕೊಡುವ ಶಿಕ್ಷಕನಿಗೆ ಹುಂಬನೆಂದು ಹೇಳಲಾಗುವದು. ಯಾಕಂದರೆ ಪ್ರಶ್ನಿಸುವವನ ಲಕ್ಷ್ಯವು ತನ್ನ ಪ್ರಶ್ನೆಯಲ್ಲಿಯೇ ಇರುವದು ಮತ್ತು ಎರಡನೆಯದನ್ನು ಏನನ್ನೂ ಕೇಳಲು ಅವನು ಸಿದ್ಧನಿರುವದಿಲ್ಲ. ಅವನಲ್ಲಿ ಯೋಗ್ಯತೆಯಿಲ್ಲದಿದ್ದರೆ ಅವನಿಗೆ ಬೇಸರಬರುತ್ತದೆ. ಧಾನ್ಯದ ಸಸಿಗಳು ಸುತ್ತುಮುತ್ತಲು ಹುಟ್ಟಿದ ಹುಲ್ಲಿನಲ್ಲಿ ಹತ್ತಿಕ್ಕಲ್ಪಡುವಂತೆ ಪ್ರಶ್ನೆಯ ಉತ್ತರವು ಬೇರೆ ಬೇರೆ ವಿವಾದಗಳಲ್ಲಿ ಹತ್ತಿಕ್ಕಲ್ಪಡುವ ಸಂಭವವಿದೆ. ಈ ದೃಷ್ಟಿಯಿಂದ ಕೃಷ್ಣನ ಉತ್ತರವು ಪರಿಪೂರ್ಣವಾಗಿದೆ. ನಾವು ಮೊದಲನೇ ಅಧ್ಯಾಯವನ್ನು ಬಿಟ್ಟು ಎರಡನೆಯದರಲ್ಲಿ ಪ್ರವೇಶಿಸಿದಾಗ ಅದರಲ್ಲಿ ಶುದ್ಧ ಅಹಿಂಸೆಯೇ ಸ್ರವಿಸುತ್ತದೆ. ಕೃಷ್ಣನಿಗೆ

ಪೂರ್ಣಾವತಾರನೆಂದು ತಿಳಿದು ಅಥವಾ ತಿಳಿಯಹಚ್ಚಿ, ಯಾವದೊಂದು ಶಬ್ದಕೋಶದಲ್ಲಿ ಶಬ್ದಾರ್ಥಗಳು ಸಿಗುವಂತೆ ನಮ್ಮ ಮನಸ್ಸಿನಲ್ಲಿ ಉದ್ಭವಿಸುವ ಪ್ರಶ್ನೆಗಳ ಅರ್ಥಗಳು ಅವನ ವಚನಗಳಿಂದ ಸರಿಯಾಗಿ ಸಿಗುವವೆಂಬ ಆಶೆಯನ್ನು ಹಿಡಿಯಬಾರದು. ಈ ಪ್ರಕಾರ ಸಿಕ್ಕರೂ ಅದರಿಂದ ಹಾನಿಯೇ ಆಗುವದು. ಆ ಮೇಲೆ ಮನುಷ್ಯನು ಮುಂದುವರಿಯುವ ಮಾತೇ ಉಳಿಯುವದಿಲ್ಲ. ಶೋಧ ಮಾಡಲು ಅವಕಾಶವೂ ಉಳಿಯುವದಿಲ್ಲ. ಅವನ ಬುದ್ಧಿಯು ಕುಂಠಿತವಾಗಿಬಿಡುತ್ತದೆ. ಆದುದರಿಂದ ಮನುಷ್ಯರಿಗೆ ತಮ್ಮ ತಮ್ಮ ಸಮಯದ ಸಮಸ್ಯೆಗಳನ್ನು ಮಹಾನ್ ಪ್ರಯತ್ನಮಾಡಿ ಮತ್ತು ತಪಶ್ಚರ್ಯ ಮಾಡಿ ಬಿಡಿಸಿಕೊಳ್ಳಬೇಕಾಗುವದು. ಅಂದರೆ ಈಗ ನಮಗೆ ಯುದ್ಧ ಮುಂತಾದ ಪ್ರಶ್ನೆಗಳ ವಿಷಯದಲ್ಲಿ ಬರುವ ಆತಂಕಗಳ ನಿವಾರಣೆಯನ್ನು ಗೀತೆಯಂಥ ಸಂಸ್ಕಾರಯುಕ್ತ ಗ್ರಂಥದೊಳಗೆ ದೊರಕುವ ಸಿದ್ಧಾಂತಗಳ ಸಹಾಯದಿಂದಲೇ ಮಾಡುತ್ತೇವೆ. ನಿಜವಾಗಿ ನೋಡಿದರೆ ಈ ಸಹಾಯವು ಸಹ ತೀರ ಸ್ವಲ್ಪೇ ಸಿಗುವದು. ನಿಜವಾದ ಸಹಾಯವು ತಪಶ್ಚರ್ಯದಿಂದಲೂ ಅನುಭವದಿಂದಲೂ ದೊರೆಯುತ್ತದೆ. ಆಯುರ್ವೇದದಲ್ಲಿ ವನಸ್ಪತಿಗಳ ಅನೇಕ ಗುಣಗಳನ್ನು ಹೇಳಲಾಗಿದೆ. ಮಾರ್ಗದರ್ಶನಕ್ಕಾಗಿ ನಾವು ಆ ವನಸ್ಪತಿಗಳನ್ನೂ ಅವುಗಳ ಗುಣಗಳನ್ನೂ ತಿಳಿಯುವದು ಯೋಗ್ಯವಾಗಿದೆ. ಆದರೆ ಆ ಔಷಧವು ಅನುಭವದ ಒರೆಗಲ್ಲಿಗೆ ಸರಿಯಾಗಿ ಹತ್ತದಿದ್ದರೆ ನಮ್ಮ ಜ್ಞಾನವು ವ್ಯರ್ಥವು. ಇಷ್ಟೇ ಅಲ್ಲ, ಭಾರರೂಪವೂ ಆಗುವದು. ತೀರ ಇದರಂತೆಯೇ ನಮಗೆ ಜೀವನದ ಸೂಕ್ಷ್ಮ ಪ್ರಶ್ನೆಗಳನ್ನೂ ಬಿಡಿಸಬೇಕಾಗಿದೆ. ಇನ್ನು ಈ ವಿಷಯದಲ್ಲಿ ಮತ್ತೇನಾದರೂ ಕೇಳುವದಿದ್ದರೆ ಕೇಳಬೇಕು."

ಮತ್ತೊಬ್ಬ ಭಗಿನಿಯು ಪ್ರಶ್ನಿಸಿದಳು: "ಆತ್ಮ ಅಮರವೆಂಬುದನ್ನು ನೀವು ಒಪ್ಪುತ್ತೀರಿ. ಅಂದ ಮೇಲೆ ಒಂದು ಸ್ನೇಹಲಗ್ನದ ತರುವಾಯ ವಿಧವೆಯಾದರೆ ಕುಂಕುಮವನ್ನು ಏಕೆ ಹಚ್ಚಿಕೊಳ್ಳಬಾರದು?"

ಬಾಪೂ ಇದರ ಉತ್ತರವನ್ನು ಕೊಟ್ಟರು: "ವಿಧುರನು ತನ್ನ ಪತ್ನಿಯ ಮರಣದ ನಂತರ ತನ್ನ ಶರೀರದ ಮೇಲೆ ವಿಧುರತನದ ಯಾವ ಚಿಹ್ನವನ್ನೂ ಕಾಯ್ದುಕೊಳ್ಳುವದಿಲ್ಲ. ಅದರಂತೆಯೆ ನನ್ನ ದೃಷ್ಟಿಯಿಂದ ವಿಧವೆಯೂ ಸಹ ಬಾಹ್ಯ ಚಿಹ್ನ ಕಾಯ್ದುಕೊಳ್ಳುವ ಆವಶ್ಯಕತೆಯಿಲ್ಲ. ಆತ್ಮವು ಅಮರವೆಂಬ ದೃಷ್ಟಿಯಿಂದ ವಿಚಾರ ಮಾಡಿದ ಭಗಿನಿಯ ಈ ದೃಷ್ಟಿಯು ಸರಿಯಾದದ್ದಿರುತ್ತದೆ. ಆದರೆ ಉನ್ನತತರದ್ದೆಂದು ಹೇಳಲಾಗುವದು. ನಾನಂತೂ ಕೇವಲ ನ್ಯಾಯದೃಷ್ಟಿಯಿಂದ ವಿಚಾರಮಾಡುತ್ತಿದ್ದೇನೆ. ಅಂದರೂ ಸಹ ವಿಧವೆಗೆ ಯಾವಾಗಲೂ ತನ್ನ ವೈಧವ್ಯದ ರಕ್ಷಣೆ ಮಾಡಬೇಕೆಂದೆನಿಸಿದರೂ ಅವಳು ಬಾಹ್ಯ ಚಿಹ್ನವನ್ನು ಧರಿಸುವ ಆವಶ್ಯಕತೆಯೇನೂ ಇಲ್ಲ ಎಂದು ಹೃದಯದಿಂದ ಉತ್ತರ ಹೊರಡುತ್ತದೆ."

"ಸಧವೆಯರು ಸಹ ಕುಂಕುಮ ಹಚ್ಚಬಾರದು, ಬಳೆಗಳನ್ನು ಇಡಬಾರದೆಂದು ನೀವು ಹೇಳುತ್ತಿರುವದು ಪಾಪ, ಇವಳಿಗೇನು ಗೊತ್ತು?" ಎಂದು ನಾನು ಹೇಳಿದೆ.

ಬಾಪೂ ಹೇಳತೊಡಗಿದರು: "ನೀನು ಹೇಳಿದರೆ ಬರೆಯುವೆ. ವಸ್ತು ಸ್ಥಿತಿಯೆಂದರೆ ನಮಗಂತೂ ನ್ಯಾಯದ ಮಾತನ್ನೇ ಮಾತಾಡುವದಿದೆ. ಸಧವೆಯರ ಜಗತ್ತೆಲ್ಲ ಎಲ್ಲಿಯ ವರೆಗೆ ಕುಂಕುಮ ಹಚ್ಚುವದನ್ನೂ ಬಳೆಗಳನ್ನು ಇಟ್ಟುಕೊಳ್ಳುವ ದನ್ನೂ ಮಾಡುತ್ತದೆಯೊ ಅಲ್ಲಿಯ ವರೆಗೆ ವಿಧವೆಯರೆದುರಿಗೆ ಈ ಆದರ್ಶ ಸ್ಥಿತಿ ಯನ್ನು ಹೇಗೆ ಇಡಲಿ? ಬಾ ಇವಳಿಗೆ ತಿಳಿಸಿ ತಿಳಿಸಿ ಬೇಸತ್ತೆ. ಆದರೆ ಅವಳು ಒಪ್ಪಲಿಲ್ಲ. ಒಂದಾನೊಂದು ಕಾಲಕ್ಕೆ ನಾನು ವಿಧವೆಯರು ಲಗ್ನಮಾಡಿ ಕೊಳ್ಳಬಾರದೆಂಬ ದೃಢವಿಚಾರದವನಾಗಿದ್ದೆ. ಆ ಸಮಯಕ್ಕೆ ವಿಧುರರೂ ಲಗ್ನವಾಗಬಾರದೆಂದು ಹೇಳುತ್ತಿದ್ದೆ. ವಿಧುರರು ಲಗ್ನ ಮಾಡಿಕೊಳ್ಳದಂಥ ಸ್ಥಿತಿಯನ್ನು ಉಂಟುಮಾಡುವದು ಎಂದೂ ಸಾಧ್ಯವಿಲ್ಲೆಂಬುದನ್ನು ನೋಡಿದೆ. ಆದುದರಿಂದ ವಿಧವೆಯರ ಮೇಲೆ ಶಾಶ್ವತ ವೈಧವ್ಯದ ನೊಗ ಹೇರಬಾರದೆಂಬ ಶುದ್ಧ ನ್ಯಾಯದ ಮಾತನ್ನು ಆಡುವದೇ ಒಳ್ಳೆಯದು."

ನಟರಾಜನ್ನರ ಪತ್ರ ಬಂತು. ಚಮತ್ಕಾರಗಳ ಪ್ರದರ್ಶನ ಮಾಡುವದು ಮೂರ್ಖತನವೆಂಬ ಬಾಪೂರ ಈ ಸೂಚನೆಯನ್ನು ಸ್ವಾಗತಿಸಿದರು:

"I agree with you that exhibition of the kind you refer to, are repulsive and as they serve no useful purpose they should be discouraged by public opinion. They recall a saying of Rama Krishna Paramhansa's which I read somewhere. Some one asked him if it was possible to walk on water. 'Yes' was his reply, 'but commonsense people pay a pice to the ferryman.'"

"ನೀವು ಬರೆಯುವಂತೆ ಅಂಥ ಪ್ರಯೋಗಗಳು ಜುಗುಪ್ಸೆಯನ್ನುಂಟು ಮಾಡುತ್ತವೆ. ಅವುಗಳಿಂದ ಏನೊಂದೂ ಸಿದ್ಧವಾಗುವದಿಲ್ಲವಾದ್ದರಿಂದ ಅವುಗಳಿಗೆ ಉತ್ತೇಜನ ಕೊಡದಿರುವದಕ್ಕೆ ಜನಮತವನ್ನು ಜಾಗ್ರತಗೊಳಿಸಬೇಕು. ನಿಮ್ಮ ಈ ವಿಚಾರಗಳು ನನಗೆ ಒಪ್ಪಿಗೆ ಇರುತ್ತವೆ. ಈ ಸಂದರ್ಭದಲ್ಲಿ ರಾಮಕೃಷ್ಣ ಪರಮ ಹಂಸರ ಒಂದು ವಚನವು, ನಾನು ಎಲ್ಲಿಯೊ ಓದಿದ್ದು, ನೆನಪಿಗೆ ಬರುತ್ತದೆ. 'ನೀರಿನ ಮೇಲೆ ನಡೆದು ಹೋಗಬಹುದೊ?' ಎಂದು ಯಾರೊ ಒಬ್ಬರು ಅವರಿಗೆ ಕೇಳಿದರು. 'ಹೌದು, ಆದರೆ ಸಾಮಾನ್ಯ ಬುದ್ಧಿಯುಳ್ಳ ಮನುಷ್ಯನಿಗೆ ನಾವಿಗನಿಗೆ ಒಂದು ದುಡ್ಡು ಕೊಡುವದೇ ಹೆಚ್ಚು ರುಚಿಸುತ್ತದೆ' ಎಂದು ಅವರು ಉತ್ತರ ಕೊಟ್ಟರು."

ಅವರ ಮಗನು ಒಬ್ಬ ಕ್ರಿಶ್ಚಿಯನ್ ಹುಡಿಗೆಯ ಸಂಗಡ ಲಗ್ನ ಮಾಡಿ ಕೊಂಡನು. ಆ ಮಾತಿನ ಉಲ್ಲೇಖ ಮಾಡುತ್ತ ಬರೆದರು

" Apropos of my son's marriage our venerable friend C. Vijayraghav of Selam wrote to him congratulating us and added that his only wish was that she might become Hindu,' at least an Arya Samajist'. I replied that my Hinduism was wide enough to cover all great religions without any conversion. I rather feel you think the same way."

" ನಮ್ಮ ಹುಡುಗನ ಲಗ್ನದ ಸಂಬಂಧಿ ಸೇಲಮ್ಮದ ನಮ್ಮ ಪೂಜ್ಯ ಮಿತ್ರ ಸಿ. ವಿಜಯರಾಘವರು ನಮಗೆ ಅಭಿನಂದನದ ಪತ್ರ ಬರೆದರು. ಆದರಲ್ಲಿ ಅವರ ಇಚ್ಛೆ ಇಷ್ಟೆ, ಹುಡಿಗೆಯು ಹಿಂದೂ ಆಗಬೇಕು, ' ಕೊನೆಗೆ ಆರ್ಯಸಮಾಜಿಸ್ಟ ' ಆಧರೂ ಆಗಬೇಕು ಎಂದು ತಿಳಿಸಿದರು. ಧರ್ಮಾಂತರ ಮಾಡದೆಯೇ ಎಲ್ಲ ಮಹಾನ್ ಧರ್ಮದವರೂ ಆದರಲ್ಲಿ ಸಮಾವಿಷ್ಟರಾಗುವಷ್ಟು ನನ್ನ ಹಿಂದುತ್ವವು ವಿಶಾಲವಾಗಿದೆ ಎಂದು ನಾನು ಉತ್ತರ ಬರೆದೆ. ತಾವು ಕೂಡ ಇದೇ ಅಭಿಪ್ರಾಯದವರಾಗಿದ್ದೀರೆಂದು ನನಗನಿಸುತ್ತದೆ."

ಇನ್ನೂ ಒಂದು ಮಾತನ್ನು ಬರೆದರು:

" Have you read Countess Tolstoy's Diaries ? I read them only recently and I feel that they are a revelation of the intelligent woman's soul such as I have longed to read and have not so far read. It is a book which all who are devoted to the woman's cause, should read, mark and inwardly digest."

" ನೀವು ಕೌಂಟೆಸ್ ಟಾಲಸ್ಟಾಯರ ದಿನಚರಿಗಳನ್ನು ಓದಿರುವಿರಾ ? ನಾನು ತೀರ ಮೊನ್ನೆ ಮೊನ್ನೆ ಓದಿದೆ. ಅವುಗಳಲ್ಲಿ ಒಬ್ಬ ಬುದ್ಧಿಮಾನ್ ಹೆಂಗಸಿನ ಹೃದಯವು ಪ್ರಕಟವಾಗುತ್ತದೆಂದು ನನಗೆನಿಸುತ್ತದೆ. ನನಗೆ ಇಂಥವನ್ನು ಓದುವ ಇಚ್ಛೆ ಇತ್ತು. ಆದರೆ ಇದುವರೆಗೆ ಓದುವದಾಗಿದ್ದಿಲ್ಲ. ಸ್ತ್ರೀಯರ ಸಲುವಾಗಿ ಕೆಲಸ ಮಾಡುವವರೆಲ್ಲರೂ ಈ ಪುಸ್ತಕವನ್ನು ಓದಬೇಕು, ಅದರ ಮೇಲೆ ವಿಚಾರ ಮಾಡಬೇಕು ಮತ್ತು ಆದನ್ನು ಅರಗಿಸಿಕೊಳ್ಳಬೇಕು."

ಬಾಪೂ ಕಳಿಸಿದ ರಾಜಕೀಯರಲ್ಲದ ಸಂಗಡಿಗರ ಹೆಸರುಗಳಲ್ಲಿ ೧೫ಕ್ಕೆ ಮನ್ನಣೆ ಸಿಕ್ಕಿದೆ ಮತ್ತು ನಾಲ್ವರ ವಿಷಯಕ್ಕೆ ಹಿಂದಿನಿಂದ ಆಜ್ಞೆ ಬರುವದೆಂದು ಸುಪರಿಂಟೆಂಡೆಂಟರು ಸುದ್ದಿಯನ್ನು ತಂದರು. ಹಿಂದಿನ ಜನರಲ್ಲಿ ಕರಮಚಂದ,

೧೧-೫-'೩೨ ನರಗಿಸ್‌ಬಹನ, ಹೀರಾಲಾಲ ಮತ್ತು ದಾಮೋದರದಾಸ ಇರುವರು. ವಲ್ಲಭಭಾಯಿಯವರ ಡಾಕ್ಟರ ಪರೀಕ್ಷೆ ಕುರಿತು ಇಲ್ಲಿಯೇ ಎಲ್ಲ ವ್ಯವಸ್ಥೆಯಾಗುತ್ತದೆ ಮತ್ತು ತಜ್ಞರನ್ನು ಕರೆಸುವ ಆವಶ್ಯಕತೆಯಿಲ್ಲ.

ಹೀಗೆ ನಮಗೆನಿಸುತ್ತದೆಯೆಂದು ಅವರು ಅಸ್ಪಷ್ಟವಾಗಿ ಹೇಳತೊಡಗಿದರು. ಬಾಪೂ ಹೇಳಿದರು: "ನೀವು ಶರೀರದ ಮಾಲಕರಿದ್ದೀರಿ. ಆದರೆ ಮನುಷ್ಯನು ತನ್ನ ತಜ್ಞನನ್ನು ಕರೆಯಿಸಿಕೊಳ್ಳಲಿಕ್ಕೆ ಸ್ವತಂತ್ರನಿದ್ದಾನೆ. ಪ್ರತಿಯೊಬ್ಬ ಕೈದಿಗೆ ತನ್ನ ಶರೀರವನ್ನು ತನ್ನ ಮನುಷ್ಯನಿಗೆ ಒಪ್ಪಿಸುವ ಆಗ್ರಹ ಹಿಡಿಯುವ ಅಧಿಕಾರವಿದೆ. ನೀವು ಹೇಳುತ್ತಿರುವದು ಧಾರ್ಷ್ಟ್ಯರ್ಹದ್ದೆಂದು ನನಗನಿಸುತ್ತದೆ. ವಲ್ಲಭಭಾಯಿಯವರು ಒಪ್ಪಿದರೆ ಈ ವಿಷಯದಲ್ಲಿ ನಾನು ಅವರ ಕಡೆಯಿಂದಲೂ ಸರಕಾರದ ಸಂಗಡ ಕೊನೆತನಕ ಹೋರಾಡಿಸುವೆ. ಇದಂತೂ ನನಗೆ ಒತ್ತಾಯವೆಂದೆನಿಸುತ್ತದೆ ಮತ್ತು ಹೀಗೆ ಬಾಯಿಮಾತಿನ ಉತ್ತರ ನಡೆಯುವದಿಲ್ಲ. ನನಗೆ ಸರಕಾರದಿಂದ ಲೇಖೀ ಉತ್ತರ ಬೇಕು." "ಈ ಪತ್ರವು ನನ್ನ ಹೆಸರಿನಿಂದಲೇ ಇತ್ತಲ್ಲವೆ?" ಎಂದು ಸುಪರಿಂಟೆಂಡೆಂಟರು ಅಂದರು. ಬಾಪೂ: "ಆದರೆ ಅದು ನಿಮ್ಮ ಸೂಚನೆಯ ಪ್ರಕಾರ ಇತ್ತು. ನನಗೆ ಸರಕಾರಿ ಉತ್ತರ ಬೇಕು." ಇಷ್ಟಾದ ಮೇಲೆ ಅವರು ಸ್ವಲ್ಪ ಮೆತ್ತಗಾದರು. ಕೊನೆಗೆ ಮೆಹತಾರಿಂದ ಆಪರೇಶನ್ನದ ಶಿಫಾರಸು ಮಾಡಿಸುವೆನೆಂದೂ ಮತ್ತು ವಲ್ಲಭಭಾಯಿಯವರು ತಮ್ಮ ವಿಶೇಷಜ್ಞರಿಂದ ಆಪರೇಶನ್ ಮಾಡಿಸಿಕೊಳ್ಳಲು ಇಚ್ಛಿಸುತ್ತಾರೆಂದು ಬರೆಯುವೆನೆಂದೂ ವಚನಕೊಟ್ಟು ಹೋದರು.

"ಸರ್ಪದಂಶವನ್ನು ಇಳಿಸುವದಕ್ಕಾಗಿ ಐದು ರೂಪಾಯಿಗಳನ್ನು ಕೊಟ್ಟು ಕೊಂಡು ಕೊಂಡ ಸರ್ಪದಂಶಕ ಮಣಿಯು ನಿರರ್ಥಕವೆಂದು ಅನಿಸಿತು. ಸ್ಮರಣಶಕ್ತಿ ಹೆಚ್ಚಿಸುವದಕ್ಕೆಂದು ೧೨೦ ರೂಪಾಯಿ ಕೊಟ್ಟು ಪೆಲ್‌ಮನ್ನನ ಕೋರ್ಸ ಕೊಂಡೆ. ಈ ರೂಪಾಯಿಗಳೂ ವ್ಯರ್ಥಹಾಳಾದವೆಂದು ಸಿದ್ಧವಾಯಿತು." ಎಂದು ಸುಪರಿಂಟೆಂಡೆಂಟರು ಒಮ್ಮೆ ಹೇಳುತ್ತಿದ್ದರು. ಈ ಪುಸ್ತಕವನ್ನು ಬಾಪೂರಿಗೆ ನೋಡಲಿಕ್ಕೆಂದು ತಂದಿದ್ದರು.

ಕೈದಿಗಳ ಮಾತು ಹೊರಡುತ್ತ, ಎಷ್ಟೋ ಕೈದಿಗಳು ಸುರಂಗ ತೋಡಿ ಹೊರಗೆ ಹೋಗಿದ್ದರೆಂದು ಹೇಳಿದರು. ಬಾಪೂ ವೋರ ಸಂಘವಾಣಿಯ ಮಾತು ತೆಗೆದರು. ಅವನು ಎಷ್ಟೋ ಜನರ ಮೂಗನ್ನು ಕೊಯ್ದಿದ್ದನು ಮತ್ತು ಭಯವನ್ನುಂಟು ಮಾಡಿದ್ದನು. ಅವನಿಗೆ ಸರಕಾರವು ಪೋಲೀಸ ಸುಪರಿಂಟೆಂಡೆಂಟನನ್ನಾಗಿ ಮಾಡಿತು. ಮೇಜರರು ಡಾಹಲ್ಯಾ ಡಾಕೂನ ಮಾತನ್ನು ಹೇಳಿದರು. ಇವನಿಗೆ ಅವರು ಫಾಸೀ ಶಿಕ್ಷೆ ಕೊಟ್ಟಿದ್ದರು. ಅವನು ಒಳ್ಳೇ ಧೈರ್ಯದಿಂದ ಫಾಸೀ ಹೋದನೆಂದು ಹೇಳಲಾಗುತ್ತಿದೆ. ಫಾಸೀ ಹೋಗುವ ದಿವಸ ಗೋಮಾತೆಯ ದರ್ಶನ ಮಾಡಿಸಬೇಕೆಂದು ಬೇಡಿದನು. ಎರಡನೇ ಒಬ್ಬ ಮುಸಲ್ಮಾನನು (ಬೋಹರೆ) ಸಹ ಗೋಮಾತೆಯ ದರ್ಶನ ಮಾಡಿಸಬೇಕೆಂದು ಬೇಡಿದನು.

ಬಾಪೂರಿಗೆ ಇವತ್ತು ರಾಟೆಯ ಮೇಲೆ ಹೆಚ್ಚು ಯಶ ದೊರೆಯಿತು. ಮೂರು ತಾಸು ನೂತು ೧೩೧ ಎಳೆ ತೆಗೆದರು. "ಇವತ್ತು ಪರಿಣಾಮ ಹೇಗಾಗಿದೆಯೆಂಬುದನ್ನು ನೋಡಿರಿ!" ಎಂದು ವಲ್ಲಭಭಾಯಿಯವರಿಗೆ ಹೇಳಿದರು. "ಹೌದು, ಕೆಳಗೆ

ಸಾಕಷ್ಟು ಬಿದ್ದಿದೆ." ಎಂದು ವಲ್ಲಭಭಾಯಿ ಅಂದರು. "ಈ ನೂಲಿನ ಗುಂಜು ಬಂದಾದ ಮೇಲಾದರೂ ಈಗ ಸರಿಯಾಯಿತೆಂದು ಹೇಳುವಿರಲ್ಲವೆ ?" ಎಂದು ಬಾಪೂ ಅಂದರು.

ಇವತ್ತು ಬೆಳಿಗ್ಗೆ ನೂಲುತ್ತ ನೂಲುತ್ತ "ಇದು ಒಂದು ದೊಡ್ಡ ಕಸರತ್ತು ಇದೆ." ಎಂದು ಅಂದರು. "ಇದನ್ನು ಹೇಳುವ ಆವಶ್ಯಕತೆಯೇ ಇಲ್ಲ. ನೋಡುತ್ತಲೇ ಇದ್ದೇ-ವಲ್ಲ." ಎಂದು ನಾನು ಹೇಳಿದೆ. ಬಾಪೂ ಅಂದರು : "ಇಲ್ಲ, ಈ

೧೨-೫-'೩೨ ಅರ್ಥದಲ್ಲಿ ಹೇಳುತ್ತಿರುವದಿಲ್ಲ. ೬೩ ವರ್ಷದ ವಯಸ್ಸಿನಲ್ಲಿ ಇಷ್ಟು ಪರಿಶ್ರಮ ಮಾಡುತ್ತಿರುವದು ನಿಮಗೆ ಕಸರತ್ತು ಎಂದು ಅನಿಸುತ್ತಿರಬಹುದು. ಈ ವಯಸ್ಸಿನಲ್ಲಿ ಸಹ ನನಗೆ ಬಹಳ ರುಚಿ ಉಂಟಾಗುತ್ತಿದೆಯೆಂದು ನಾನು ಹೇಳುತ್ತೇನೆ. ನನ್ನ ಸಲುವಾಗಿ ಇದು ಸರ್ವೋತ್ಕೃಷ್ಟ ಪರಿಶ್ರಮವಾಗಿದೆ. ಪರಿಶ್ರಮದ ಸ್ವಾದವೇ ಬೇರೆಯಾಗಿದೆ. ಪ್ರಸೂತಿಯಾಗಲಿರುವ ಹೆಣ್ಣುಮಗಳಿಗೇ ಪರಿಶ್ರಮದ ಸ್ವಾದವು ಗೊತ್ತಾಗುತ್ತದೆ."

ಮೂರು ತಾಸು ರಾಟೆಯನ್ನು ನಡೆಸಿ ಬಹಳ ದಣಿದಿದ್ದರು. ಆದುದರಿಂದ ಇವತ್ತು ರಾತ್ರಿ ಸಹ ಕಾಲುಗಳನ್ನು ಮಾಲಿಶ ಮಾಡಿಸಿಕೊಳ್ಳುತ್ತ "ನಾನು ಈಗ ಮಲಗುತ್ತೇನೆ." ಅಂದರು. ಆದರೆ ಮಾಲಿಶ ಆದ ಅರ್ಧತಾಸಿನ ಮೇಲೆ ಹೊಸಬರಾದರು ಮತ್ತು ಒಂದು ಸುಂದರವಾದ ಉದ್ದ ಪತ್ರವನ್ನು ಬರೆಯಿಸಿದರು. ಅದು ಸಾಮಾನ್ಯವಿದ್ದಿಲ್ಲ. ಗಹನ ಚಿಂತನದಿಂದ ತುಂಬಿತ್ತು. ಪುರುಷೋತ್ತಮನು ಒಂದು ಉದ್ದ ಪತ್ರ ಬರೆದು ಕೇಳಿದ್ದನು : ಜೈನಧರ್ಮದಲ್ಲಿ ಶುದ್ಧನ್ಯಾಯವಿದ್ದರೆ ಈ ಜನರು ದಯೆಗೆ ಸಹ—ಸ್ವಾತಿಕವೇ ಏಕಾಗಲೊಲ್ಲದು—ರಾಗವೆಂದು ತಿಳಿಯುತ್ತಾರೆ. ಅಂದರೆ ನೀವು ದಯೆಯಿಂದ ಪ್ರೇರಿತರಾಗಿ ಮಾಡಿದ ಕರುವಿನ ಹಿಂಸೆಯನ್ನು ವೀತರಾಗ ಮನುಷ್ಯನು ಮಾಡಲಾರನು—ಅಥವಾ ಅದು ವೀತರಾಗತೆಯನ್ನು ಸೂಚಿಸುವದಿಲ್ಲ. ಪತ್ರವು ಉದ್ದವಾಗಿತ್ತು. ಸುಂದರವಾಗಿತ್ತು. ಅದರ ಉತ್ತರವು ಇಲ್ಲಿದೆ :

"ನಿನ್ನ ಪತ್ರ ಮುಟ್ಟಿತು. ಸುಂದರವಿದೆ. 'ಜೈನಧರ್ಮದಲ್ಲಿ ಶುದ್ಧನ್ಯಾಯದ ಮೇಲೆ ಜೋರು ಕೊಡಲಾಗಿದೆ' ಎಂಬ ವಾಕ್ಯದ ಬಗ್ಗೆ ಸ್ವಲ್ಪ ತಪ್ಪುತಿಳುವಳಿಕೆಯಾಗಿದೆ. ಶುದ್ಧ ನ್ಯಾಯದ ಅರ್ಥವು ಶುದ್ಧ ನೀತಿ, ಶುದ್ಧ ನಿರ್ಣಯ ಎಂದು ಆಗಬಹುದು. ಸಾಮಾನ್ಯವಾಗಿ ನಾವು ಇದೇ ಅರ್ಥದಲ್ಲಿ ಈ ಶಬ್ದವನ್ನು ತಿಳಿಯುತ್ತೇವೆ. ಆದರೆ ನಾನು ಈ ಅರ್ಥದಲ್ಲಿ ಉಪಯೋಗಿಸಿಲ್ಲ. ಜೈನಧರ್ಮದಲ್ಲಿ ತರ್ಕದ ಮೇಲೆ ಹೆಚ್ಚು ಜೋರು ಕೊಡಲಾಗಿದೆ ಎಂದು ಹೇಳುವದೇ ನನ್ನ ಮತಿತಾರ್ಥವಿತ್ತು. ಆದರೆ ತರ್ಕದಿಂದ ಒಮ್ಮೊಮ್ಮೆ ವಿರುದ್ಧ ನಿರ್ಣಯ ಹೊರಡುತ್ತದೆ ಮತ್ತು ಭಯಂಕರ ಪರಿಣಾಮ ಉಂಟಾಗುತ್ತದೆ. ಇದರಲ್ಲಿ ದೋಷವು

ತರ್ಕದ್ದಿರುವದಿಲ್ಲ. ಆದರೆ ಶುದ್ಧ ನಿರ್ಣಯಕ್ಕೆ ಬರಲು ಬೇಕಾಗುವ ಸಾಮಗ್ರಿಗಳು ಯಾವಾಗಲೂ ಇರುವದಿಲ್ಲ. ಇದಲ್ಲದೆ ಬರೆಯುವವನು ಅಥವಾ ಮಾತಾಡುವವನು ವಿಶಿಷ್ಟ ಶಬ್ದವನ್ನು ವಿಶಿಷ್ಟ ಅರ್ಥದಲ್ಲಿ ಉಪಯೋಗಿಸುವನು. ಓದುವವನು ಅಥವಾ ಕೇಳುವವನು ಅದೇ ಅರ್ಥದಲ್ಲಿ ತಿಳಿದುಕೊಳ್ಳುವನೆಂದೂ ಇಲ್ಲ. ಆದುದರಿಂದ ಹೃದಯವನ್ನು ಅಂದರೆ ಭಕ್ತಿ, ಶ್ರದ್ಧೆ, ಅನುಭವ ಜ್ಞಾನಗಳನ್ನು ಮೇಲಿನ ಸ್ಥಾನದಲ್ಲಿ ಇರಿಸಲಾಗಿದೆ. ತರ್ಕವು ಕೇವಲ ಬುದ್ಧಿಯ ವಿಷಯವಾಗಿದೆ. ಹೃದಯದಿಂದ ಸಿದ್ಧವಾದದ್ದು ತರ್ಕಕ್ಕೆ ಅಂದರೆ ಬುದ್ಧಿಗೆ ನಿಲುಕಲಾರದು. ಅದರ ಆವಶ್ಯಕತೆಯೂ ಇಲ್ಲ. ಇದಕ್ಕೆ ವಿರುದ್ಧವಾಗಿ ಎಷ್ಟೋಸಾರೆ ಬುದ್ಧಿಯು ಒಂದು ವಸ್ತುವನ್ನು ಒಪ್ಪುತ್ತದೆ. ಆದರೆ ಅದು ಹೃದಯದೊಳಗಿಳಿಯದಿದ್ದರೆ ತ್ಯಾಜ್ಯವಾಗಿ ಬಿಡುತ್ತದೆ. ನಾನು ಈಗ ಹೇಳಿದುದನ್ನು ಸ್ಪಷ್ಟಮಾಡಿಕೊಳ್ಳುವದಕ್ಕಾಗಿ ನಿನ್ನಷ್ಟಕ್ಕೆ ನೀನೇ ಅನೇಕ ದೃಷ್ಟಾಂತಗಳನ್ನು ಕಲ್ಪಿಸಿಕೊಳ್ಳಬಹುದು. ನಾನು ಇದೀಗ ನ್ಯಾಯ ಶಬ್ದವನ್ನು ಉಪಯೋಗಿಸಿದ ಅರ್ಥದಲ್ಲಿ ಅದು ಎಂದೂ ಸಾಧ್ಯವಸ್ತು ಆಗಲಾರದು. ನ್ಯಾಯ ಮತ್ತು ನಿಷ್ಕಾಮ ಕರ್ಮಗಳೆರಡೂ ಸಾಧನಗಳು. ನ್ಯಾಯವು ಬುದ್ಧಿಯ ವಿಷಯವು. ನಿಷ್ಕಾಮ ಕರ್ಮಯೋಗವು ಹೃದಯದ ವಿಷಯವು. ಬುದ್ಧಿಯಿಂದ ನಾವು ನಿಷ್ಕಾಮತೆಯನ್ನು ಸಾಧಿಸಲಾರೆವು.

" ಈಗ ನಿನ್ನ ಪ್ರಶ್ನೆಗೆ ಬರುತ್ತೇನೆ. ದಯೆ ಮತ್ತು ಅಹಿಂಸೆ ಇವು ಭಿನ್ನವಸ್ತುಗಳಲ್ಲ. ದಯೆಯು ಅಹಿಂಸೆಗೆ ವಿರೋಧಿಯಲ್ಲ. ಮತ್ತು ವಿರೋಧಿಯಾಗಿದ್ದರೆ ಅದು ದಯೆಯಲ್ಲ. ದಯೆಯನ್ನು ಅಹಿಂಸೆಯ ಮೂರ್ತ ಸ್ವರೂಪದಲ್ಲಿ ಗುರುತಿಸಬಲ್ಲೆವು. 'ದಯಾಹೀನ ವೀತರಾಗ-ಪುರುಷ' ಎಂಬ ಪ್ರಯೋಗವು ಸಂಪೂರ್ಣ ತಪ್ಪು. ವೀತರಾಗ ಪುರುಷನು ದಯಾಸಾಗರನಿರಬೇಕು. ಎಲ್ಲಿ ಕೋಟ್ಯಾವಧಿ ಪ್ರಾಣಿಗಳಿಗೆ ಸಂಬಂಧಿಸಿರುತ್ತದೆಯೋ ಅಲ್ಲಿ ಇಂಥ ದಯೆಯು ಸಾತ್ವಿಕವಿದ್ದಾಗ್ಯೂ ರಾಗರಹಿತವಿಲ್ಲವೆಂದು ಹೇಳುವದೆಂದರೆ ದಯೆಯ ಅರ್ಥವಾದರೂ ತಿಳಿಯುವದಿಲ್ಲ ಅಥವಾ ದಯೆಗೆ ಹೊಸ ಅರ್ಥವನ್ನಾದರೂ ಮಾಡಬೇಕು. ತುಲಸೀದಾಸರು ದಯೆ ಶಬ್ದವನ್ನು ಉಪಯೋಗಿಸಿದ ಅರ್ಥದಲ್ಲಿಯೇ ಸರ್ವಸಾಮಾನ್ಯವಾಗಿ ನಾವು ದಯೆ ಶಬ್ದದ ಅರ್ಥ ಮಾಡುತ್ತೇವೆ. ತುಲಸೀದಾಸರ ಅರ್ಥವು ಕೆಳಗಿನ ವಚನದಲ್ಲಿ ತೀರ ಸ್ಪಷ್ಟವಿದೆ. :

दया धर्मको मूल है, पाप (देह) मूल अभिमान।

ದಯೆಯು ಧರ್ಮದ ಮೂಲವಯ್ಯಾ. ಅಭಿಮಾನವು ಪಾಪ (ದೇಹ) ದ ಮೂಲವಯ್ಯಾ.

" ಇಲ್ಲಿ ದಯೆಯು ಕೇವಲ ಅಹಿಂಸೆಯ ಅರ್ಥದಲ್ಲಿಯೆ ಇದೆ. ಅಹಿಂಸೆಯು ಅಶರೀರಿಯಾದ ಆತ್ಮದಲ್ಲಿಯೇ ಸಂಭವವಿದೆ. ಆದರೆ ಆತ್ಮವು ಶರೀರಧಾರಣ ಮಾಡಿದ

ಮೇಲೆ ಆದರಲ್ಲಿ ಅಹಿಂಸೆಯು ದಯೆಯ ರೂಪದಲ್ಲಿ ಮೂರ್ತಿಮಂತವಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಕರುವಿನ ಮೇಲೆ ಮಾಡಿದ ಕ್ರಿಯೆಯು ಶುದ್ಧ. ಅಹಿಂಸೆಯ ಮೂರ್ತಿಸ್ವರೂಪವೇ ಆಗಿತ್ತು. ಆತ್ಮವು ಸ್ವತಃ ಕಷ್ಟಸಹನ ಮಾಡುವದು, ಇದು ಅದರ ಸ್ವಭಾವವೇ ಆದೆ. ಆದರೆ ಎರಡನೆಯವರಿಗೆ ಕಷ್ಟಸಹನ ಮಾಡಲಿಕ್ಕೆ ಹಚ್ಚುವದು ಆತ್ಮದ ಸ್ವಭಾವದ ವಿರುದ್ಧ ಮಾತಾಗಿದೆ. ಕರುವಿನ ದುಃಖದಿಂದ ನನಗಾಗುವ ದುಃಖವನ್ನು ದೂರ ಮಾಡುವ ಉದ್ದೇಶದಿಂದ ನಾನು ಅದನ್ನು ಕೊಲ್ಲಲಿಕ್ಕೆ ಹಚ್ಚಿದ್ದರೆ ಅದು ಅಹಿಂಸೆಯಾಗುತ್ತಿದ್ದಿಲ್ಲ. ಆದರೆ ಕರುವಿಗಾಗುವ ದುಃಖವನ್ನು ದೂರ ಮಾಡುವದು ಅಹಿಂಸೆಯಿತ್ತು. ಅಹಿಂಸೆಯ ಹೊಟ್ಟೆಯಲ್ಲಿಯೆ ಎರಡನೆಯವರಿಗೆ ಆಗುವ ದುಃಖವನ್ನು ಸಹನಮಾಡದಿರುವ ಮಾತೂ ಇರುತ್ತದೆ. ಇದರಿಂದಲೇ ದಯೆ ಉಂಟಾಗುತ್ತದೆ, ವೀರತ್ವವು ಪ್ರಕಟವಾಗುತ್ತದೆ ಮತ್ತು ಅಹಿಂಸೆಗೆ ಅಂಟಿಕೊಂಡಿರುವ ಗುಣಗಳೆಲ್ಲ ಕಾಣಿಸಿಕೊಳ್ಳುತ್ತವೆ. ಎರಡನೆಯವರಿಗೆ ಆಗುವ ದುಃಖವನ್ನು ನೋಡುತ್ತ ಇರುವದು ವಿರೋಧಾತ್ಮಕ ತರ್ಕವು! ಇದಲ್ಲದೆ ಮರಣ ದುಃಖವು ಜೀವನ ದುಃಖಕ್ಕಿಂತ ಮನುಷ್ಯ ಸ್ವಭಾವದಲ್ಲಿ ಹೆಚ್ಚೇ ಇದೆ ಎಂಬುದು ಸಹ ಅಪವಾದರಹಿತ ಸತ್ಯವಲ್ಲ. ನಾವೇ ಮರಣವನ್ನು ಇಷ್ಟು ಭಯಾನಕ ವಸ್ತುವನ್ನಾಗಿ ಮಾಡಿಟ್ಟಿದ್ದೇವೆಂದು ನನಗನಿಸುತ್ತಿದೆ. ಕಾಡುಜನರೆಂದು ತಿಳಿಯಲ್ಪಡುವವರಲ್ಲಿ ಸಾವಿನ ಬಗ್ಗೆ ಇಷ್ಟು ಭೀತಿ ಇರುವದಿಲ್ಲ. ಯುದ್ಧಮಾಡುವ ಜಾತಿಯ ಜನರಲ್ಲಿಯೂ ಈ ಭಯವು ಕಡಿಮೆಯೇ ಇದೆ. ಪಾಶ್ಚಿಮಾತ್ಯ ದೇಶದಲ್ಲಿಯಂತೂ ಈಗ ದುಃಖಪಟ್ಟು ಜೀವಿಸುವದಕ್ಕಿಂತ ಸಾವನ್ನೇ ಒಪ್ಪುವ ಪಂಥವು ಹುಟ್ಟತೊಡಗಿದೆ. ಮರಣದ ಬಗ್ಗೆ ಅತಿಶಯ ಭೀತಿಯನ್ನು ತಿಳಿದುಕೊಂಡದ್ದು ನನಗೆ ಅಜ್ಞಾನದ ಅಥವಾ ಶುಷ್ಕಜ್ಞಾನದ ಲಕ್ಷಣವಾಗಿದೆಯೆಂದು ಅನಿಸುತ್ತದೆ. ಈ ತಿಳಿವಳಿಕೆಯಿಂದ ಅಹಿಂಸೆಯು ನಮ್ಮಲ್ಲಿ, ನಮಗಿಂತ ಹೆಚ್ಚು ಜೈನರಲ್ಲಿ ವಕ್ರರೂಪ ಧಾರಣ ಮಾಡಿದೆ. ಇದರಿಂದ ಬಹುತರವಾಗಿ ನಿಜವಾದ ಅಹಿಂಸೆಯ ಲೋಪವಾಗಿದೆ. ಕ್ರೋಧಾವೇಶದಲ್ಲಿ ಬಾವಿ ಬೀಳುವ ಹೆಣ್ಣುಮಗಳು ಹಗ್ಗ ಸಿಕ್ಕರೆ ಅದರ ಆಶ್ರಯವನ್ನು ತಗೆದುಕೊಳ್ಳುವಳು. ಆದರೆ ಯಾವದೇ ವಿಚಾರದಿಂದೇಕಾಗಲೊಲ್ಲದು ತಿಳಿದುಹೊಳೆದು ಬಾವಿಯಲ್ಲಿ ಬೀಳುವ ಸ್ತ್ರೀಗೆ ಹಗ್ಗ ಸಿಕ್ಕರೂ ಅದನ್ನು ಅವಳು ತಿರಸ್ಕರಿಸುವಳು. ಜಪಾನಿಗಳ 'ಹರಾಕೀರಿಯು' ಇದರ ಪ್ರಸಿದ್ಧ ಉದಾಹರಣೆಯಾಗಿದೆ. 'ಹರಾಕಿರೀಯು' ಜ್ಞಾನಮೂಲಕವಾದುದೊ ಅಜ್ಞಾನಮೂಲಕವಾದುದೊ ಅದು ಇಲ್ಲಿ ಪ್ರಸ್ತುತ ವಿಷಯವಲ್ಲ. ಮನುಷ್ಯನು ಜೀವಿಸುವದಕ್ಕಿಂತ ಸಾವನ್ನೇ ಹೆಚ್ಚು ಪ್ರೀತಿಸುವ ಅಸಂಖ್ಯ ಉದಾಹರಣೆಗಳಿವೆ ಎಂಬುದನ್ನಿಷ್ಟೇ ನಾನು ಇಲ್ಲಿ ತೋರಿಸುತ್ತಿದ್ದೇನೆ. ಪಾಶ್ಚಿಮಾತ್ಯ ದೇಶದಲ್ಲಿ ಊನವಾಗಿ ದುಃಖವನ್ನನುಭವಿಸುತ್ತಿರುವ ಪಶುಗಳನ್ನು ದೇಹಮುಕ್ತಮಾಡುವ ರೂಢಿಯುಂಟು. ಅದರ ಹಿಂದೆ

ಪಶುಗಳಿಗೆ ಮರಣಭಯ ಕಡಿಮೆಯಿದೆ ಮತ್ತು ಒಂದು ಮರ್ಯಾದೆ ಮೀರಿ ದುಃಖ ಉಂಟಾದರೆ ಅವು ಮೃತ್ಯುವನ್ನು ಸ್ವಾಗತಿಸುವವು ಎಂಬ ತಿಳಿವಳಿಕೆಯಿದೆ. ಈ ತಿಳಿವಳಿಕೆಯು ನಿಜವಿಲ್ಲದಿರುವ ಸಂಭವವೂ ಇದೆ. ಆದುದರಿಂದ ಪಶುಗಳಿಗೆ ಸಹ ಅವುಗಳ ಪ್ರಾಣವು ಮನುಷ್ಯನಷ್ಟೇ ಪ್ರಿಯವಾಗಿರುತ್ತದೆಂದು ತಿಳಿದು ವರ್ತಿಸುವದು ನಮ್ಮ ಧರ್ಮವಾಗಿದೆ.

"ಇಲ್ಲಿಯವರೆಗಿನ ಮಾತು ನಿನ್ನ ಮನಸ್ಸಿನಲ್ಲಿ ಬಿಂಬಿಸಿದ್ದರೆ ಸಮಾಜದೃಷ್ಟಿ ಅಥವಾ ಸಮಾಜಧರ್ಮ ಕುರಿತು ಬಹಳ ವಿಚಾರ ಮಾಡಬೇಕಾದದ್ದು ಉಳಿಯುವದಿಲ್ಲ. ಜನರ ಪ್ರವೃತ್ತಿಯು ಅಹಿಂಸೆಯ ಕಡೆಗೆ ಇದ್ದಲ್ಲಿ ಕರುವಿನ ಉದಾಹರಣೆಯ ದುರುಪಯೋಗವಾಗುವ ಸಂಭವವು ಕಡಿಮೆ. ಅಹಿಂಸಾ ವೃತ್ತಿಯಿಲ್ಲದಲ್ಲಿ ಪಶುಹಿಂಸೆ ಆಗಿಯೇ ಆಗುತ್ತದೆ. ಆದುದರಿಂದ ನನ್ನಂಥವನ ಉದಾಹರಣೆಯಿಂದ ಅದರಲ್ಲಿ ಏನಾದರೂ ಹೆಚ್ಚಾಗುವ ಸಂಭವವಿಲ್ಲ. ಕರುವಿನ ಶರೀರ ನಾಶ ಮಾಡುವದಕ್ಕೆ ಪರಿಣಾಮದ ಪೂರ್ಣ ಜ್ಞಾನದ ಅವಶ್ಯಕತೆಯಿದ್ದಿಲ್ಲ. ಕರುವಿಗೆ ಸಾವು ಬೇರೆ ಯಾವದೇ ಪ್ರಕಾರ ಯಾವದೇ ಸಮಯದಲ್ಲಿ ಬರುತ್ತಿದ್ದಿಲ್ಲವಾದರೆ ಈ ಮಾತು ವಿಚಾರ ಮಾಡಲು ಅವಶ್ಯ ಯೋಗ್ಯವಾಗಿತ್ತು. ಅಂದರೆ ಕರುವಿನ ದೇಹದ ನಾಶವನ್ನು ನನ್ನ ಹೊರತು ಬೇರೆ ಯಾರೂ ನಾಶಮಾಡುವದು ಶಕ್ಯವಿಲ್ಲದ ಸ್ಥಿತಿಯಿದ್ದರೆ ಹಿಂದುಗಡೆಯ ಪರಿಣಾಮದ ಪೂರ್ಣ ಜ್ಞಾನವು ಮೊದಲಿಗೇ ಆಗುವದು ನಿಸ್ಸಂದೇಹವಾಗಿ ಅವಶ್ಯವಿತ್ತು. ಇಲ್ಲಿಯಂತೂ ಕರವು ಮತ್ತು ನಾವೆಲ್ಲ ಜೀವಿಗಳೂ ಮರಣವನ್ನು ಯಾವಾಗಲೂ ಬೆನ್ನಿಗೆ ಕಟ್ಟಿಕೊಂಡೇ ತಿರುಗುತ್ತೇವೆ. ಆದುದರಿಂದ ಇದರಲ್ಲಿ ಉಳಿಯುವ ಬಹಳ ದೊಡ್ಡ ಸಂಗತಿಯೆಂದರೆ ಈ ದೇಹವು ಕೆಲವು ದಿವಸ ಅಥವಾ ತಿಂಗಳು ಅಥವಾ ವರುಷ ಹೆಚ್ಚು ಬಾಳುತ್ತಿತ್ತು. ಇದೆಲ್ಲವೂ ಇಲ್ಲಿ ಅಯುಕ್ತವಲ್ಲ. ಯಾಕಂದರೆ ಹೇತು ಅತ್ಯಂತ ನಿಃಸ್ವಾರ್ಥವಿದೆ. ಮತ್ತು ಕರುವಿನದೇ ಸುಖ ನೋಡುವ ಪ್ರಶ್ನೆಯಿದೆ. ಒಂದು ವೇಳೆ ಎಲ್ಲಿಯಾದರೂ ಯಾವುದಾದರೂ ವಿಚಾರದೋಷವಾಗಿದ್ದರೂ ಕರುವಿಗೆ ಎಂದೂ ಬಾರದಂಥ ಕೆಟ್ಟಸ್ಥಿತಿ ಉಂಟಾಗಿರಲಿಕ್ಕಿಲ್ಲ ಎಂದು ಹೇಳಬಹುದು. . . . ಈ ವಿಚಾರ ಧಾರೆಯಲ್ಲಿ ಎಷ್ಟೋ ಪ್ರಚಲಿತ ತಿಳುವಳಿಕೆಗಳ ಮೇಲೆ ಆಘಾತವಿದೆ ಎಂಬುದರಲ್ಲಿ ಸಂದೇಹವಿಲ್ಲ. ನಮ್ಮಲ್ಲಿ ಅಂದರೆ ಹಿಂದೂ ಧರ್ಮದಲ್ಲಿ ಅತ್ಯಂತ ಭೀರುತೆಯೂ ಮತ್ತು ಅತ್ಯಂತ ಆಲಸ್ಯವೂ ಬಂದು ಬಿಟ್ಟಿದೆ. ಆದುದರಿಂದ ಅಹಿಂಸೆಯ ಸೂಕ್ಷ್ಮ ಹಾಗೂ ಮೂಲರೂಪವನ್ನು ಮರೆಯಲಾಗಿದೆ ಮತ್ತು ಅದು ಕ್ಷುಲ್ಲಕ ಜೀವದಯೆಯಲ್ಲಿ ಸಮಾವಿಷ್ಟವಾಗಿದೆ ಎಂದು ನನಗೆ ಅನಿಸುತ್ತದೆ. ಆದರೆ ಮೂಲ ರೂಪದಲ್ಲಿ ಅಹಿಂಸೆಯು ಅಂತರಾಳದ ಅತಿ ಪ್ರಚಂಡ ಭಾವನೆಯಿರುವದು. ಅದು ಅನೇಕ ಪ್ರಕಾರದ ಪರೋಪಕಾರೀ ಕಾರ್ಯದ ಶಾಖೆಗಳಾಗಿ ಪ್ರಕಟವಾಗುತ್ತದೆ. ಇದು ಒಬ್ಬ ಮನುಷ್ಯನಲ್ಲಿಯಾದರೂ ಪೂರ್ಣ

ರೀತಿಯಿಂದ ಪ್ರಕಟವಾದರೆ ಅವನ ತೇಜವು ಸೂರ್ಯನಿಗಿಂತಲೂ ದೊಡ್ಡದಾಗುವದು.. ಇವತ್ತು ಹೀಗೆಲ್ಲಿದೆ ?"

ಈ ಪತ್ರವನ್ನು ಬರೆಯಿಸುತ್ತ ಬರೆಯಿಸುತ್ತ ತುಲಸೀದಾಸರ ವಚನಗಳ ಪಾಠ ಕುರಿತು ಬಹಳ ಚರ್ಚೆಯಾಯಿತು. "'ಪಾಪಮೂಲ' ಪಾಠವನ್ನೂ ನಾನು ಕೇಳಿದ್ದೇನೆ, 'ದೇಹಮೂಲ'ಪಾಠವನ್ನೂ ನಾನು ಕೇಳಿದ್ದೇನೆ. ಮತ್ತು ಈ ಪಾಠ ನನಗೆ ಹೆಚ್ಚು ಉತ್ತಮವೆನಿಸುತ್ತದೆ." ಎಂದು ಬಾಪೂ ಹೇಳಿದ ಕೂಡಲೇ "ದೇಹದ ಮೂಲವು ಅಭಿಮಾನವು ಎಂಬ ವೇದಾಂತೀ ವಿಚಾರದ ಬದಲು ಇಲ್ಲಿ ಧರ್ಮದ ಮೂಲವು ದಯೆ ಮತ್ತು ಪಾಪ ಅಂದರೆ ಅಧರ್ಮದ ಮೂಲವು ಅಭಿಮಾನವು ಎಂಬ ವಿಚಾರವೂ ಇರಬಹುದು." ಎಂದು ನಾನು ಉತ್ತರ ಕೊಟ್ಟೆ. ಬಾಪೂ ಅಂದರು: "ಇದರಲ್ಲಿ 'ದೇಹಮೂಲ ಅಭಿಮಾನ'ದ ಅರ್ಥವು ಹೀಗೆ ಇರಬಹುದು: ದಯೆ ಧರ್ಮದ ಮೂಲವಿದ್ದಂತೆ ದೇಹವು ಅಭಿಮಾನದ ಮೂಲವಿರುವದರಿಂದ ದಯೆಗೆ ವಿರೋಧಿಯಾಗಿದೆ. ಆದರೇ ಇಡೀ ದೇಹವನ್ನೇ ಖರ್ಚುಮಾಡಿಬಿಡುವದೇ ಶುದ್ಧ ದಯೆಯು. ಘಟದಲ್ಲಿ (ದೇಹದಲ್ಲಿ) ಪ್ರಾಣವಿರುವವರೆಗೆ ಈ ದಯೆಯನ್ನು ಬಿಡಬಾರದು. ಸೇವೆಯನ್ನು ಮಾಡುತ್ತ ಅಥವಾ ಮಾಡಲು ಹೋಗುತ್ತ ದೇಹವಿಸರ್ಜನೆಯಾಗುವದು ಶುದ್ಧತಮ ದಯೆಯು. ಈ ವಸ್ತು ಅನುಭವ ಸಿದ್ಧವಾದದ್ದು." ನಾನು ಹೇಳಿದೆ: "ಇದು ಅನುಭವಸಿದ್ಧ ಇದ್ದೇ ಇದೆ. ಆದರೆ ಪ್ರಸ್ತುತ ವಾಕ್ಯದಲ್ಲಿ ಈ ಅರ್ಥ ಹೊರಡುವದಿಲ್ಲ. ಸಾಮಾನ್ಯ ಜನರಸಲುವಾಗಿ ಈ ವಿಚಾರವು ಜಿನುಗು ನೂಲು ನೂತಂತೆ ಆಗುತ್ತಿದೆ. ಆದರೆ ಅಧರ್ಮದ ಮೂಲ ಅಭಿಮಾನವೆಂಬುದನ್ನು ಸಾಮಾನ್ಯ ಜನರು ಸಹ ಸ್ಪಷ್ಟರೀತಿಯಿಂದ ತಿಳಿಯಬಲ್ಲರು." ಬಾಪೂ: "ಇಲ್ಲ ತುಳಸೀ ರಾಮಾಯಣದಲ್ಲಿ ಇಂಥ ರಚನೆಯು ಬರುತ್ತದೆ." ಕೊನೆಗೆ ಎರಡೂ ಪಾಠಗಳನ್ನು ಬರೆಯಬೇಕೆಂಬ ನಿರ್ಧಾರವಾಯಿತು. ಹಿಂದುಗಡೆ ಪತ್ರಕ್ಕೆ ದಯೆಯು ಧರ್ಮದಮೂಲ ಎಂಬುದಿಷ್ಟೇ ಸಾಕೆತ್ತೆಂದು ಅನಿಸಿತು.

**೧೩-೫-'೩೨** ಇವತ್ತು ನಾರಾಯಣದಾಸಭಾಯಿಗೆ ನಿನ್ನೆ ಪುರುಷೋತ್ತಮನಿಗೆ ಬರೆಯಿಸಿದಷ್ಟೇ ಉದ್ದವಾದ ಪತ್ರವನ್ನು ಬರೆಯಿಸಿದರು. ನಿನ್ನೆ ಪ್ರಸೂತಿಯ ಉಪಮೆಯನ್ನು ಕೊಡಲಾಗಿತ್ತು. ಬಾಪೂಜಿಯವರು ಅಂಥದೇ ಯಾವುದೋ ಒಂದು ಪೀಡೆಯಿಂದ ಪೀಡಿತರಾಗಿದ್ದಾರೆ. ಮತ್ತು ಇಂಥ ವಿಚಾರಗಳಿಂದ ತುಂಬಿದ ಪತ್ರಗಳ ಪ್ರಸೂತಿಯೇ ಇದರ ಫಲಶ್ರುತಿಯು. ಎಲ್ಲ ಪ್ರಕಾರದ ದುಡಿಮೆಗೂ ಒಂದೇ ಪ್ರಕಾರದ ಕೂಲಿ ಸಿಗಬೇಕೆಂಬ ವಿಚಾರವನ್ನು ಬಾಪೂಜಿಯು ರಸ್ಕಿನ್ನನಿಂದ ತೆಗೆದುಕೊಂಡರು. ಮತ್ತು ಇದನ್ನು ಆಶ್ರಮದಲ್ಲಿ ಕಾರ್ಯರೂಪದಲ್ಲಿ ತರುವ ತೀವ್ರ ಇಚ್ಛೆಯಿದೆ.

ನಿನ್ನೆ ಶಾರದಾಬಹೆನಳು ಒಂದು ಪತ್ರ ಬರೆದು ಸ್ವದೇಶಿ ಪ್ರದರ್ಶನದಲ್ಲಿ ಕೈ ಮಗ್ಗದ ಸಾಮಾನುಗಳನ್ನು ಇಡುವ ಕುರಿತು ಒಪ್ಪಿಗೆಯನ್ನು ಕೇಳಿದ್ದಳು. ಬಾಪೂ ಹೇಳಿದರು : "ಇಲ್ಲಿಂದ ಅಭಿಪ್ರಾಯ ಕೊಡಲು ಬರುವದಿಲ್ಲ. ನನ್ನ ವಿಚಾರಗಳಿಗೆ ಅಂಟಿಕೊಂಡು ಕೂಡ್ರುವ ಅವಶ್ಯಕತೆಯಿಲ್ಲ. ಪರಿಸ್ಥಿತಿಗೆ ಅನುಸಾರವಾಗಿ ನಿಮಗೆ ಹೊಳೆದಂತೆ ಮಾಡಿರಿ. ಅಮೇರಿಕೆಯ ವಿಷಯವಾಗಿ ಬರೆಯುತ್ತ ಇದೇ ಪತ್ರದಲ್ಲಿ ಹೀಗೆ ಬರೆದಿದ್ದರು: "ಅಮೇರಿಕೆಯಲ್ಲಿ ಕೇವಲ ಭೋಗವಿಲಾಸವೇ ಇಲ್ಲ. ಶುದ್ಧ ಸಂಯಮ ಮತ್ತು ಸೇವಾಪರಾಯಣತೆಯ ಉದಾಹರಣೆಗಳು ಬಹಳ ಸಿಗುತ್ತವೆ" ವಲ್ಲಭಭಾಯಿಯವರು ವಿದೂಷಕನ ಪಾತ್ರವನ್ನು ಪೂರ್ತಿಯಾಗಿ ಮಾಡುವ ನಿಶ್ಚಯ ಮಾಡಿದಂತೆ ಅನಿಸುತ್ತದೆ. "ಮಲಗುತ್ತೇನೆ" ಎಂದು ಬಾಪೂ ಹೇಳಿದರು. ಅವರು ಹೇಳಿದರು : "ಅವಶ್ಯ. ಒಂದಾನೊಂದು ದಿವಸ ಕಾಯಂ ಮಲಗಬೇಕಾಗುವದು. ಆದುದರಿಂದ ಸ್ವಲ್ಪ ರೂಢಿಮಾಡುವ ಆವಶ್ಯಕತೆಯಿದೆ." 'ಯರವಡಾ ಮಂದಿರ' ಎಂದು ವಿಳಾಸ ಬರೆದ ಪತ್ರಗಳು ಬರುತ್ತವೆ. ಪೋಸ್ಟಿನವರೂ ಈ ಪರಿಭಾಷೆಯನ್ನು ಒಪ್ಪಿದ್ದಾರೆ. ವಲ್ಲಭಭಾಯಿಯವರು ಹೇಳಿದರು : "ಮಂದಿರವಂತೂ ಇದ್ದೇ ಇದೆ. ಆದರೆ ಪ್ರಸಾದದ ವಿಷಯಕ್ಕೆ ದಿನಾಲು ತಂಟೆಗಳಾಗುತ್ತವೆ."

ಛಗನಲಾಲ ಜೋಶಿಯವರ ಉದ್ದ ಪತ್ರ ಬಂತು. ನಿನ್ನೆ ದೇವದಾಸರಿಗೆ ಬರೆಯಿಸಿದ ಪತ್ರದಲ್ಲಿ ಬಾಪೂ ತಮ್ಮ ಮನೋರಥಗಳನ್ನು ಇದ್ದಕ್ಕಿದ್ದಂತೆ ಚಿತ್ರಿಸಿದ್ದರು. ರಾಟಿ, ( ಜೋಡಿಳೆ ), ಉರ್ದು, ಆಕಾಶದರ್ಶನ, ಅರ್ಥಶಾಸ್ತ್ರ, ಆಶ್ರಮದ ಇತಿಹಾಸ ಮತ್ತು ರಸ್ಕಿನ್ನನ ಪುಸ್ತಕಗಳು ! ಇವೆಲ್ಲವೂ ಒಂದೇ ಕಾಲಕ್ಕೆ ಹೇಗೆ ನಡೆಯಬಲ್ಲವು ?

"ಹಿಂದೂ" ದಲ್ಲಿ ಹೋರನ ಸಂಪೂರ್ಣ ಭಾಷಣವು ಬಂತು. ಅದರ ಮೇಲೆ ಪೋಲಕನ ವಿಮರ್ಶೆ ಬಂತು. ಬಾಪೂರಿಗೆ ಸಂಪೂರ್ಣ ಭಾಷಣವನ್ನು ಓದಿ ಹೇಳುವ ಇಚ್ಛೆ ನನಗೆ ಇದ್ದಿಲ್ಲ. ಆದರೆ ಪ್ರೀವಾನ ಬಗ್ಗೆ ಅವನು ಮಾಡಿದ ಟೀಕೆಯನ್ನು ಓದಿ ತೋರಿಸಿದೆ. ಬಾಪೂ ಹೇಳಿದರು : "ಸರಿ, ಇದರಲ್ಲಿ ಶುದ್ಧ ಟೋರೀತನವಿದೆ, ತನ್ನ ಜನ್ಮದ ಪ್ರತಿಷ್ಠೆಯ ಅಭಿಮಾನವಿದೆ ಮತ್ತು ಈ ಪ್ರಕಾರ ಪ್ರತಿಷ್ಠೆಯಿಲ್ಲದ ಮನುಷ್ಯರ ವಿಷಯಕ್ಕೆ ಈ ಜನರ ಮನಸ್ಸಿನಲ್ಲಿ ಅತ್ಯಂತ ತಿರಸ್ಕಾರವಿದೆ. ನಾವು ವಿಚಾರ ಮಾಡದಷ್ಟು ತುಚ್ಛತೆಯಿಂದ ಅದನ್ನು ಹಾರಿಸಿಬಿಟ್ಟರು. ಅದರ ಉತ್ತರ ಕೊಡುವದಂತೂ ದೂರ ಉಳಿಯಿತು" ಬಾಪೂರಿಗೆ ಬಹಳ ದುಃಖವಾಯಿತು.

ವಿಚಾರಮಾಡಲು ಅವಶ್ಯವಿದ್ದಂಥ ಎಷ್ಟೋ ಸಾಮಾನ್ಯ ಮಾತುಗಳ ವಿಷಯಕ್ಕೆ ಬಾಪೂ ಅತ್ಯಂತ ಸೂಕ್ಷ್ಮ ಜ್ಞಾನವನ್ನು ಮಾಡಿಕೊಂಡಿರುತ್ತಾರೆ. ಅವುಗಳ ಕಾರ್ಯಪ್ರಣಾಲಿಯನ್ನು ತಿಳಿಸುತ್ತಾರೆ ಮತ್ತು ಅವುಗಳಲ್ಲಿ ಸುಧಾರಣೆ ಮುಂತಾದ್ದನ್ನು ಸೂಚಿಸಬಲ್ಲರು. ಆದರೆ ಎಷ್ಟೋ ವಿಷಯಗಳಲ್ಲಿ ಬಾಪೂರವರ ಅಜ್ಞಾನವೂ

ಮನೋರಂಜಕವಾಗಿದೆ. "ಜವಾಹರಲಾಲನು ತನ್ನ ಸಂಕ್ಷಿಪ್ತ ಹೆಸರನ್ನು ಜೆ. ಎನ್. ಎಂದು ಬರೆಯುವದಿಲ್ಲವೇ?" ಎಂದು ಒಂದು ದಿವಸ ಕೇಳಿದರು. "ಈ ರೂಢಿ ಸಿಂಧದಿಂದ ಪ್ರಾರಂಭ ಮಾಡಿಕೊಂಡು ಕರ್ನಾಟಕದ ವರೆಗೆ ಮುಂಬೈಪ್ರಾಂತದಲ್ಲಿ ಮಾತ್ರವಿದೆ. ಉತ್ತರದವರು ತಂದೆಯ ಹೆಸರನ್ನೇ ಬರೆಯುವದಿಲ್ಲ. ದಕ್ಷಿಣದವರು ಊರಿನ ಹೆಸರು ಮೊದಲು ಬರೆಯುತ್ತಾರೆ. ಆ ಮೇಲೆ ಮನೆತನದ ಹೆಸರು ಬರೆಯುತ್ತಾರೆ ತಂದೆಯ ಹೆಸರಿನ ಅವಶ್ಯಕತೆಯಿಲ್ಲ." ಎಂದು ನಾನು ಹೇಳಿದೆನು. "ಇದು ನನಗೆ ಗೊತ್ತಿದ್ದಿಲ್ಲ." ಎಂದು ಬಾಪೂ ಅಂದರು. "ಕೋಗಿಲೆಯ ಇಂಗ್ಲೀಷ ಹೆಸರೇನು? ಭಾರದ್ವಾಜ ಪಕ್ಷಿ ಮತ್ತು ಕೋಗಿಲೆಯಲ್ಲಿ ಅಂತರವೇನು? Sparrow (ಸ್ಪ್ಯಾರೊ) ಮತ್ತು Swallow (ಸ್ವ್ಯಾಲೊ) ಇವುಗಳಲ್ಲಿ? ನಾವು ಚೀಲ (ಚೀಲ) ಎಂದು ಕರೆಯುವ ಪಕ್ಷಿಯು Lark (ಲಾರ್ಕ) ಅಲ್ಲವಷ್ಟೆ?" ಎಂದು ಇವತ್ತು ಕೇಳತೊಡಗಿದರು.

ಇವತ್ತು ಡಾಹ್ಯಾಭಾಯಿ ಭೆಟ್ಟಿಗೆ ಬಂದಿದ್ದರು. ಈಗ ಒಪ್ಪಂದದ ತಯಾರಿ ಇದೆ, ಸರಕಾರವು ಗಾಂಧೀಯವರ ಸಂಗಡ ಮಾತುಕತೆ ನಡೆಸಿದೆ ಎಂದು ಹೊರಗಿನ ಜನರೆಲ್ಲ ತಿಳಿದಿದ್ದಾರೆಂದು ಹೇಳಿದರು. ಬಾಪೂ ಅಂದರು:

೧೪-೫-'೩೨ "ಗಾಂಧೀಯವರ ಸಂಗಡ ಮಾತುಕತೆ ನಡೆದಿರುವವು, ಅದರಿಂದ ಒಪ್ಪಂದವಾಗುವದು ಎಂದು ಈ ಜನರು ಹೇಳುತ್ತಿರುವ ವರೆಗೆ ಸರಿಯಾಗಿದೆ. ಇಲ್ಲಿಯು ಮಾತುಕತೆಯ ಹೊರತು ಏನೂ ಆಗುವದಿಲ್ಲವೆಂದಿಷ್ಟು ಅವರು ತಿಳಿದರೆ ಅದು ಅವರ ಸಭ್ಯತನ."

ಶಾಸ್ತ್ರೀಯವರು ಮಾಲವೀಯ ಸ್ಮಾರಕ ಗ್ರಂಥದ ಮೇಲೆ 'ಹಿಂದೂ'ದಲ್ಲಿ ವಿಮರ್ಶೆ ಮಾಡಿದ್ದಾರೆ. ಅದನ್ನು ಓದಿಹೇಳಲಿಕ್ಕೆ ಬಾಪೂ ಹೇಳಿದರು. ಓದಿಹೇಳಿದೆ.

ಶಾಸ್ತ್ರೀಯವರಿಗೆ ತೀಕ್ಷ್ಣವಾದ ಚುಚ್ಚುಮಾತುಗಳನ್ನು ನೆನಪಿನಲ್ಲಿಟ್ಟು ಹೊತ್ತು ಹೊತ್ತಿಗೆ ಆಡಿ ತೋರಿಸುವ ಚಟವಿದೆ. ಮಾಲವೀಯಜಿಯವರು ಹಿಂದುಗಳ ಮಿತ್ರರಿದ್ದಷ್ಟೇ ಮುಸಲ್ಮಾನರ ಮಿತ್ರರಿದ್ದಾರೆ ಎಂದು ಹೇಳಿ, ಅದಕ್ಕೆ ಜೋಡಿಸಿದರು: "ಆದರೂ ಮಾಲವೀಯಜಿಯವರ ಕೊಲೆ ಆದರೆ ಸ್ವಲ್ಪೊಂದಲವಾಗಲಿಕ್ಕಿಲ್ಲ ಎಂದು ಒಬ್ಬ ಮುಸಲ್ಮಾನನು ಹೇಳುತ್ತಿದ್ದನು." ಇದನ್ನು ಬರೆಯುವದರ ಉದ್ದೇಶವೇನಿರಬಹುದು? ಕೊನೆಗೆ, "ಇಬ್ಬರೂ ಪ್ರತಿಭಾಶಾಲಿಗಳಿದ್ದಾಗ್ಯೂ ಮಾಲವಿಯಜಿ ಹಾಗೂ ಗಾಂಧೀಜಿ ಇವರಲ್ಲಿ ಸಾಮ್ಯ ಮತ್ತು ಮಿತ್ರತ್ವವಿರುತ್ತದೆಯೆ? . . ." ಎಂದು ಬರೆದದ್ದರ ಅರ್ಥವೇನು?

ಇವತ್ತು 'ಹಿಂದೂ'ದ ಸಿಮ್ಲಾದ ಸುದ್ದಿಗಾರನು ಸತ್ಯಮೂರ್ತಿಯವರು ಗಾಂಧೀಜಿಗೆ ಬರೆದ ಪತ್ರವನ್ನು ಪ್ರಸಿದ್ಧಿಸಿದ್ದಾನೆ. ಬಾಪೂಗೆ ಅದು ಇನ್ನೂ ತಲ್ಪಿಯೇ

ಇಲ್ಲ. ಆದರೆ ಇಷ್ಟರಲ್ಲಿ ಅದರ ಪ್ರತಿ ಸಿಮ್ಲಾದ ಸುದ್ದಿಗಾರನಿಗೆ
೧೫-೫-'೩೨ ಸಿಕ್ಕೂ ಬಿಟ್ಟಿತು! ಹೋರನ ಭಾಷಣಕ್ಕೆ ಉತ್ತರ ಕೊಡುವಾಗ ಗಾಂಧೀಜಿಯವರು ಒಪ್ಪಂದದ ಬೇಡಿಕೆಯನ್ನು ಮಾಡಬೇಕೆಂದು ಸತ್ಯಮೂರ್ತಿಯವರಿಗೆ ಅನಿಸುತ್ತದೆ. ಬಾಪೂ ಹೇಳಿದರು: "ಹಲ್ಲೊಳಗೆ ಕಡ್ಡಿ ಕಚ್ಚಿಕೊಂಡು ನಮ್ಮ ಕಾಲಮೇಲೆ ಬೀಳಿರಿ ಎಂದು ಅವನು ಹೇಳುತ್ತಾನೆ. ಇಷ್ಟು ಇವರಿಗೆ ತಿಳಿಯುತ್ತಿರಲಿಕ್ಕಿಲ್ಲವೆ? ನಮ್ಮ ಜನರಿಗೆ ಬೇಸರಿಕೆ ಬಂದಿರಬಹುದು. ಪ್ರಶ್ನೆಯು ಮುಂದುವರಿದಷ್ಟು ಉತ್ತಮವೆಂದು ನನಗೆನಿಸುತ್ತದೆ. ಯಾಕಂದರೆ ಸ್ವಚ್ಛವಾಗುವಷ್ಟು ಸ್ವಚ್ಛವಾಗಿ ಬಿಡಲಿ. ಅದಾದನಂತರವೇ ನಮ್ಮ ಬಿಡುಗಡೆಯಾಗಬೇಕು."

ವಲ್ಲಭಭಾಯಿಯವರು ಬಾಪೂಗೆ ಸತ್ಯಮೂರ್ತಿಯ ಈ ಲೇಖವನ್ನು ಓದಲು 'ಹಿಂದೂ' ಕೊಟ್ಟರು. "ವಲ್ಲಭಭಾಯಿ, ನೀವು ತಪ್ಪಿದಿರಿ. ಇದೇ ಎಲ್ಲಕ್ಕೂ ದೊಡ್ಡ ಸುದ್ದಿಯೆಂದು ತಿಳಿಯುತ್ತೀರಿ. ಎಲ್ಲಕ್ಕೂ ದೊಡ್ಡ ಸುದ್ದಿಯಂದರೆ ಕೇರಳದ ಸನಾತನೀ ಕ್ರಿಶ್ಚಿಯನ್ನರ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಮಾಡಿದ ಜೋಸೆಫರ ಭಾಷಣವಿದೆ." ಎಂದು ಹೇಳಿ ಬಾಪೂ ಅದರಲ್ಲಿಯ ಮನೋರಂಜಕ ಭಾಗವನ್ನು ಮುಖ್ಯವಾಗಿ ಸರಕಾರದ ಕರ್ತವ್ಯದ ವಿಷಯಕ್ಕೆ ಅವರ ತಟಸ್ಥತೆಯ ಧೋರಣೆಯ ಮೇಲೆ ಮಾಡಿದ ಟೀಕೆಯನ್ನು ಓದಿ ತೋರಿಸಿದರು. ಸರಕಾರದ ಉದ್ವೇಗಗೊಂಡ ಅಧಿಕಾರಿಗಳು ಕ್ಯಾನಿಂಗನ ಸಮಯದಿಂದ ಕ್ರೈಸ್ತನ ಆಜ್ಞೆಯಂತೆಯೇ ರಾಜ್ಯ-ವಾಳುವ ಪದ್ಧತಿಯನ್ನನುಸರಿಸಿದ್ದರೆ ಇಂಗ್ಲೀಷರಿಗೆ ಇವತ್ತು ಕಾಲು ತೆಗೆಯುವ ಪಾಳಿ ಬರುತ್ತಿದ್ದಿಲ್ಲ, ಇತ್ಯಾದಿ ಇತ್ಯಾದಿ. "ಈ ಮನುಷ್ಯನು ಹುಚ್ಚನೇ ಆಗಿದ್ದಾನೆ! ಅಚ್ಚ ಕ್ರಿಶ್ಚಿಯನ್ನನು ಸಹ ಈ ಪ್ರಕಾರ ಬರೆಯುವದಿಲ್ಲ." ಎಂದು ಬಾಪೂ ಅಂದರು.

ಮುಂಬೈಯಲ್ಲಿ ಭಯಂಕರ ದಂಗೆಯಾಗುವ ಸುದ್ದಿ ಬಂತು. ಓದಿ ಎಲ್ಲರಿಗೂ ಬಹಳ ದುಃಖವಾಯಿತು. . . . ಇವತ್ತಿನ ಟಪಾಲಿಗೆ ೪೫ ಪತ್ರಗಳನ್ನು ಬರೆಯಿಸಿದರು. ಲೇಖದ ಸಲುವಾಗಿ ಸರ್ ಫಿಲಿಪ್ ಸಿಡ್ನಿಯ ಹಾಗೆ
೧೬-೫-'೩೨ ಅರಬರ ಅದ್ಭುತ ತ್ಯಾಗದ ಒಂದು ಕತೆಗೆ ತಮ್ಮ ಮೆಚ್ಚುಗೆಯನ್ನು ಕೊಟ್ಟರು.

ದಿನಚರಿ ಬರೆಯುವದನ್ನು ಕುರಿತು ಹೇಳುತ್ತಾರೆ: "ದಿನಚರಿಯಲ್ಲಿ ಬರೆಯುವಷ್ಟನ್ನೆಲ್ಲ ಬರೆಯಬೇಕು. ಗುಹ್ಯತಮ ವಿಚಾರಗಳನ್ನೂ ಬರೆಯಬೇಕು. ನಮ್ಮ ಕಡೆಗೆ ಬಚ್ಚಿಡುವಂತಹದಾದರೂ ಏನಿದೆ? ಆದುದರಿಂದ ಅದನ್ನು ಯಾರಾದರೂ ಓದಬಹುದೆಂಬ ಚಿಂತೆ ಮಾಡುವ ಕಾರಣವಿಲ್ಲ. ಆದುದರಿಂದಲೇ ಎರಡನೇಯವರ ದೋಷಗಳನ್ನಾಗಲಿ ಅವರು ಗೌಪ್ಯವಾಗಿಡಲಿಕ್ಕೆ ಹೇಳಿದ ಮಾತುಗಳನ್ನಾಗಲಿ ಅದರಲ್ಲಿ

ಬರೆಯಬಾರದು. ಅದನ್ನು ಓದುವ ಅಧಿಕಾರವು ಅವನ ಸಹಕಾರಿಗಾಗಲಿ ಅಥವಾ ಅವನಿಂದ ಅಧಿಕಾರ ಪಡೆದ ಮನುಷ್ಯನಿಗಾಗಲಿ ಇರಬಲ್ಲದು. ಆದರೆ ಅದು ಯಾರಿಂದಲೂ ಗೌಪ್ಯವಾಗಿಡತಕ್ಕ ವಸ್ತುವಾಗಲಾರದು."

ದಿನಾಲು ಗೀತೆಯನ್ನು ಓದುವದರಿಂದ ಅದು ನೀರಸವೆನಿಸುತ್ತದೆ ಎಂದು ತಕರಾರು ಮಾಡುವವರಿಗೆ ಬರೆದರು :

" ಗೀತೆಯ ನಿತ್ಯ ಪಾರಾಯಣವು ನೀರಸವಾಗುವ ಕಾರಣವೆಂದರೆ ಅದನ್ನು ಮನನ ಮಾಡುತ್ತಿರಲಿಕ್ಕಿಲ್ಲ. ಅದು ನಿತ್ಯವೂ ಮಾರ್ಗದರ್ಶನ ಮಾಡುವ ಮಾತೆ-ಯಿದ್ದಾಳೆಂದು ತಿಳಿದು ಓದಬೇಕು. ಅಂದರೆ ನೀರಸವೆನಿಸುವದಿಲ್ಲ. ಪ್ರತಿ ನಿತ್ಯದ ಪಾರಾಯಣದ ನಂತರ ಒಂದು ನಿಮಿಷ ಅದನ್ನು ಕುರಿತು ವಿಚಾರ ಮಾಡಬೇಕು. ಅಂದರೆ ನಿತ್ಯವೂ ಒಂದಿಲ್ಲೊಂದು ಹೊಸ ಮಾತು ಹೊಳೆಯುವದು. ಪರಿಪೂರ್ಣ ಮನುಷ್ಯನಿಗೆ ಮಾತ್ರ ಅದರಿಂದ ಏನೂ ದೊರೆಯಲಾರದು. ಗೀತಾಮಾತೆಯು ನಿತ್ಯವೂ ಒಂದಿಲ್ಲೊಂದು ದೋಷವು ಘಟಿಸುವಂಥವರ ಉದ್ಧಾರಕಳೆಂದು ತಿಳಿದು ದಿನಾಲು ಓದುವವರಿಗೆ ನಿತ್ಯ ಪಾರಾಯಣವು ಬೇಸರವಾಗಲಾರದು."

ಒಂದು ಪ್ರಶ್ನೆ ಕೇಳುವವನಿಗೆ ಸಣ್ಣ ಸಣ್ಣ ಉತ್ತರಗಳನ್ನು ಕೊಟ್ಟರು : "(೧) ಯಾವನು ತನ್ನ ಆಚರಣೆಯಿಂದ ನಮ್ಮನ್ನು ಸದಾಚಾರಿಯಾಗಿ ಮಾಡುವನೋ ಅವನೇ ಆಚಾರ್ಯನು. (೨) ನಮ್ಮನ್ನು ಶೂನ್ಯವತ್ತರನ್ನಾಗಿ ಮಾಡುವದೇ ನಿಜವಾದ ವ್ಯಕ್ತಿತ್ವವು. (೩) ಜೀವನದ ರಹಸ್ಯವು ನಿಷ್ಕಾಮ ಸೇವೆಯಾಗಿದೆ. (೪) ನಾವು ವೀತರಾಗರಾಗುವದೇ–ಎಲ್ಲಿಕ್ಕೂ ಶ್ರೇಷ್ಠ ಆದರ್ಶವು (೫) ಅಂತರ್ಬಾಹ್ಯ ನಿಯಮಗಳ ನಿಶ್ಚಯವನ್ನು ಬಹುಶಃ ಋಷಿಮುನಿಗಳು ತಮ್ಮ ಅನುಭವದಿಂದ ಮಾಡಿದ್ದಾರೆ. ಆತ್ಮಾನುಭವ ಮಾಡಿಕೊಂಡವನೇ ಋಷಿಯು. (೬) ಕರ್ತವ್ಯ ಕರ್ಮಗಳ ತ್ಯಾಗಕ್ಕೆ ಗೀತೆಯು ಸನ್ಯಾಸವೆಂದು ಹೇಳುತ್ತದೆ. (೭) ತನ್ನ ದೇಹದ ರಾಜನಾದವನೇ ಪುರುಷನು. (೮) ಸೌಂದರ್ಯವು ಆಂತರಿಕ ವಸ್ತುವಾಗಿರುವದರಿಂದ ಅದರ ಪ್ರತ್ಯಕ್ಷ ದರ್ಶನವಾಗಲಾರದು."

ಇಸಾಪುರದಿಂದ ಫೂಲಚಂದನ ಪತ್ರ ಬಂತು. ತೀರ ಓದಲಿಕ್ಕೆ ಬರಬಾರದೆಂದು ಜೇಲಿನವರು ಅದರಲ್ಲಿ ೧೩ ಸಾಲುಗಳನ್ನು ಟಾಯಿಪರಾಯಿಟರದಿಂದ ಕಾಟು ಹಾಕಿದ್ದರು. ಅವನಿಗೆ ಬಾಪೂ ಬರೆದರು : " ನಾವು ಈ ವಿಷಯಕ್ಕೆ ದುಃಖಪಡಬಾರದು. ಕೈದಿಯಾಗಿರುವದರಿಂದ ಅವರು ಇಟ್ಟಂತೆ ಇರಬೇಕು. ಕೈದಿಗಳಿಗೆ ಪತ್ರ ಬರೆಯಲು ಕೊಡುತ್ತಿದ್ದಿಲ್ಲ. ಓದಲು ಕೊಡುತ್ತಿದ್ದಿಲ್ಲ. ಸಾಕಷ್ಟು ಊಟಕ್ಕೂ ಕೊಡುತ್ತಿದ್ದಿಲ್ಲ. ಇಪ್ಪತ್ತುನಾಲ್ಕು ತಾಸು ಬೇಡಿಗಳನ್ನು ತೊಡಿಸಿ ಹುಲ್ಲಿನ ಮೇಲೆ ಮಲಗಿಸುತ್ತಿದ್ದರು. ಇಂತಹದೂ ಒಂದು ಕಾಲವಿತ್ತು. ಆದುದರಿಂದ ನಮಗೆ ಸಿಗುವದೆಲ್ಲವೂ ಈಶ್ವರ ಕೃಪೆಯೆಂದು ತಿಳಿಯಬೇಕು. ಆದರೆ ಮಾನಭಂಗವಾಗುವಂಥಲ್ಲಿ

ನಾವು ಪ್ರಾಣವನ್ನೂ ಕೊಡಬೇಕು." ಮತ್ತೆ ಬರೆಯುತ್ತಾರೆ: "ಅಲ್ಲಿ ಎಲ್ಲ ಸಹೋದರರು ತಮ್ಮ ತಮ್ಮ ವೇಳೆಯ ಹೆಚ್ಚಿನ ಹೆಚ್ಚು ಉಪಯೋಗ ಮಾಡುತ್ತಿರುವರೆಂದು ನಾನು ಆಶಿಸುತ್ತೇನೆ. ಇಂಥ ಏಕಾಂತ ಮತ್ತು ಇಷ್ಟು ಬಿಡುವಿನ ಸಮಯವು ಪುನಃ ಪುನಃ ಸಿಗಲಾರದು. ಓದಲಿಕ್ಕೆ ಸಿಕ್ಕರೆ ಓದಬೇಕು. ವಿಚಾರ ಮಾಡಲಿಕ್ಕಂತೂ ಸಿಕ್ಕೇಸಿಗುತ್ತದೆ. ಇದ್ದ ಅನೇಕ ಪ್ರವೃತ್ತಿಗಳಲ್ಲಿ ಯಾವದಾದರೊಂದನ್ನು ಕೈಯಲ್ಲಿ ತೆಗೆದುಕೊಳ್ಳಬೇಕು. ಸರಕಾರೀ ಸಮಯ ಅಥವಾ ವಸ್ತು ನಮ್ಮದಲ್ಲವೆಂದು ತಿಳಿದು ನಾವು ಅದನ್ನು ಕೆಡಿಸುತ್ತೇವೆ. ಹೀಗೇಕೋ ನಮಗೆ ತಿಳಿಯುವೊಲ್ಲದು. ಈ ದೊಡ್ಡ ತಪ್ಪನ್ನು ನಾವೆಲ್ಲರೂ ಮಾಡುತ್ತೇವೆ. ಸ್ವಲ್ಪ ವಿಚಾರ ಮಾಡಿದರೆ ಸರಕಾರೀ ಸಮಯ ಅಥವಾ ವಸ್ತು ಪ್ರಜೆಗಳದೇ ಎಂದು ನಮಗೆ ಹೊಳೆದು ಬರುವದು. ಈಗ ಸರಕಾರದ ವಶದಲ್ಲಿರುವದರಿಂದ ಅದನ್ನು ನಾಶಮಾಡಿದರೆ ಪ್ರಜರ ಧನ ಮತ್ತು ಪ್ರಜರ ಸಮಯವನ್ನು ನಾಶಮಾಡಿದರೆಂದು ಹೇಳಲಾಗುವದು. ಆದುದರಿಂದ ನಾವು ನಮ್ಮ ಕೈಯಲ್ಲಿ ಬಂದದ್ದರ ಸದುಪಯೋಗ ಮಾಡಬೇಕು. ಜೇಲಿನಲ್ಲಿ ನಾವು ಏನೇ ಉತ್ಪನ್ನ ಮಾಡಿದರೂ ಅದು ಪ್ರಜರ ಸಂಪತ್ತಿಯಲ್ಲಿ ವೃದ್ಧಿಯನ್ನು ಮಾಡಿದಂತೆಯೇ ಇದೆ. ವಿದೇಶೀ ಸರಕಾರವಿರುವದರಿಂದ ಈ ವಿಚಾರ ಸರಣಿಯಲ್ಲಿ ಯಾವ ವ್ಯತ್ಯಾಸವೂ ಆಗುವದಿಲ್ಲ. ಅದರೆ ನಾನು ಇದಕ್ಕೂ ಮುಂದುವರಿದರೆ ರಾಜನೀತಿ ಬಂದು ಬಿಡುವದು. ಅಲ್ಲದೆ ನಾವು ಕೈದಿಗಳಾದುದರಿಂದ ನಮಗೆ ರಾಜಕಾರಣದಲ್ಲಿ ಬೀಳಲಿಕ್ಕೆ ಬರುವದಿಲ್ಲ. ಕಾರಣ ಈ ಮಾತನ್ನು ಇಲ್ಲಿಗೇ ಮುಗಿಸುತ್ತೇನೆ."

ಮುಂಬಯಿಯ ಹತ್ಯಾಕಾಂಡವು ಇನ್ನೂ ನಡೆದಿದೆ! ಇದನ್ನು ಕೇಳಿ ನಡುಗು ಹುಟ್ಟಿತು. ಎಲ್ಲರೂ ಅಸಹಾಯರಾಗಿ ದೇವರ ಹೆಸರು ತೆಗೆದುಕೊಂಡೆವು.

೧೭-೫-'೩೨ ಇವತ್ತು ಬಾಪೂ ಬಹಳ ಪತ್ರ ಬರೆಯಿಸಿದರು. ಇದರಲ್ಲಿ ಒಂದೆರಡೇ ಮಹತ್ವದವಾಗಿದ್ದವು. ಉಳಿದವುಗಳೆಲ್ಲ ಬೆಳೆಯುತ್ತಿರುವ ಟಪಾಲಿನ ನಿದರ್ಶಕವಾಗಿದ್ದವು. ಹೆಣ್ಣುಮಕ್ಕಳ ಪತ್ರದಲ್ಲಿ ಅನೇಕ ವಿಧದ ಪತ್ರಗಳು ಇದ್ದೇ ಇರುತ್ತವೆ. ಪ್ಯಾರೇಲಾಲರ ಮಾತೋಶ್ರೀಯು ಬಾಪೂರ ಕಡೆಗೆ ಆತ್ಮಕ್ಕೆ ಪರಮಾತ್ಮನ ದರ್ಶನ ಮಾಡಿಕೊಳ್ಳುವ ಕೀಲೀಕೈ ಬೇಡುತ್ತಾರೆ. ಸಾವಿರ ಸೂರ್ಯರಿಗಿಂತಲೂ ಪ್ರಕಾಶಮಾನನಾದ ಪರಮಾತ್ಮನ ದರ್ಶನ ಮಾಡಿಸಿರಿ ಎಂದು ಕೇಳಿಕೊಳ್ಳುತ್ತಾರೆ. ತಾರಾಬಾಯಿ ವಾಜಪೇಯಿ ಎಂಬ ಇನ್ನೊಬ್ಬ ಸಹೋದರಿಯು ಪ್ರಾಣಾಯಾಮದಲ್ಲಿ ಆಗುವ ಸಂಕಟಗಳನ್ನು ನಿವಾರಣೆ ಮಾಡುವದಕ್ಕೆ ಬಾಪೂಗೆ ಕೇಳುತ್ತಾರೆ. ಎಷ್ಟೋ ಕೈದಿಹೆಂಗಸರು ನಿಮ್ಮ ಹೆಸರನ್ನು ಜಪ ಮಾಡುತ್ತ ಬಿಡುಗಡೆ ಹೊಂದಿದರು ಎಂದು ತಿಳಿಸುತ್ತಾರೆ.

ಬಾಪೂ-ಇವರಿಗೆ ಬರೆದರು : " ಈಶ್ವರ ದರ್ಶನವು ಕಣ್ಣಿನಿಂದಾಗುವದಿಲ್ಲ. ಈಶ್ವರನಿಗೆ ಶರೀರವಿಲ್ಲ. ಆದುದರಿಂದ ಅವನ ದರ್ಶನವು ಶ್ರದ್ಧೆಯಿಂದಲೇ ಆಗುತ್ತದೆ. ನಮ್ಮ ಹೃದಯದಲ್ಲಿ ಯಾವದೇ ಪ್ರಕಾರದ ವಿಕಾರಯುಕ್ತ ವಿಚಾರವಿರಬಾರದು, ಯಾವದೇ ಪ್ರಕಾರದ ಭಯವಿರಬಾರದು ಮತ್ತು ನಿತ್ಯ ಪ್ರಸನ್ನತೆಯಿರಬೇಕು. ಆಗ ಹೃದಯ ದಲ್ಲಿ ದೇವರು ವಾಸಿಸುತ್ತಾನೆಂದು ಸೂಚಿತವಾಗುತ್ತದೆ. ಅವನಂತೂ ಸದಾ ಅಲ್ಲಿ ಇದ್ದೇ ಇರುತ್ತಾನೆ. ಆದರೆ ನಾವು ಅವನನ್ನು ನೋಡುವದಿಲ್ಲ. ಯಾಕಂದರೆ ನಮ್ಮಲ್ಲಿ ಶ್ರದ್ಧೆಯಿಲ್ಲ. ಆದುದರಿಂದ ಎಷ್ಟೋ ಪ್ರಕಾರದ ಸಂಕಟಗಳನ್ನು ಅನುಭವಿಸುತ್ತೇವೆ. ನಿಜವಾದ ಶ್ರದ್ಧೆಯುಂಟಾದರೆ ಹೊರಗಿನಿಂದ ತಗಲುವ ಸಂಕಟಗಳೂ ಇಂಥ ಶ್ರದ್ಧಾ ವಂತನಿಗೆ ತಾಗುವದಿಲ್ಲ. ಮೇಲೆ ಬರೆದದ್ದು ತಾರಾದೇವಿ ವಾಜಪೇಯಿಗೆ ಸಂಬಂಧಿಸಿರು ತ್ತದೆ. ಪ್ರಾಣಾಯಾಮವನ್ನು ಶರೀರಕ್ಕೆ ಕಷ್ಟವಾಗದಂತೆ ಮತ್ತು ಕಷ್ಟವಾಗದಷ್ಟು ಮಾಡಬೇಕು. ಹಠಯೋಗದ ಪ್ರಣಾಯಾಮದ ಅನುಭವವು ನನಗೆ ಎಷ್ಟೂ ಇಲ್ಲ. ಆದುದರಿಂದ ಈ ಸಂಬಂಧದಲ್ಲಿ ನಾನು ಅವರಿಗೆ ಮಾರ್ಗವನ್ನು ತೋರಿಸಲಾರೆನು. ಇಂಥ ಪ್ರಾಣಾಯಾಮದ ಆವಶ್ಯಕತೆಯೂ ಇಲ್ಲ. ದೇವರು ಶಾರೀರಿಕ ಕ್ರಿಯೆಗಳಿಂದ ದೊರೆಯುವದಿಲ್ಲ. ದೇವರ ದರ್ಶನಕ್ಕೆ ಭಾವನೆ ಬೇಕು. ಮತ್ತು ಈ ಭಾವನೆಯಂತೆ ಆಚರಣೆ ಬೇಕು. ಪ್ರಾಣಾಯಾಮ ಮುಂತಾದ ಕ್ರಿಯೆಗಳಿಂದ ಶರೀರ ಶುದ್ಧಿ ಯಾಗುತ್ತದೆ. ಮತ್ತು ಅದರಿಂದ ಅಲ್ಪ ಸ್ವಲ್ಪ ಶಾಂತಿ ಸಿಗುತ್ತದೆ. ಇವುಗಳ ಉಪ ಯೋಗ ಇದಕ್ಕಿಂತಲೂ ಹೆಚ್ಚಿಲ್ಲ. "

ಕಿಸಾ ಗೋತಮೀಯಂತೆ ಒಬ್ಬ ಮನುಷ್ಯನು ಪ್ರಶ್ನಿಸುತ್ತಾನೆ : "ಎಂದೂ ಅಶಾಂತನಿರದಂಥ ಯಾವನಾದರೂ ಮನುಷ್ಯನನ್ನು ನೀವು ನೋಡಿದ್ದೀರಾ ? " ಬಾಪೂ ಇವನಿಗೂ ಸಹ ಉತ್ತರ ಬರೆದರು:

" Life without a ruffle would be very dull business. It is not to be expected. Therefore it is wisdom to put up with all the roughness of life and that is one of the rich lessons we learn from Ramayana."

" ಹೋರಾಟವಿಲ್ಲದ ಜೀವನವು ನೀರಸ ವಸ್ತುವಾಗುವದು. ಇಂಥ ಅಪೇಕ್ಷೆ ಯನ್ನೇ ಮಾಡಬಾರದು. ಆದುದರಿಂದ ಜೀವನದ ವಿಷಮತೆಗಳನ್ನು ಸಹಿಸಿಕೊಳ್ಳು ವದರಲ್ಲಿಯೇ ಜಾಣತನವಿದೆ. ರಾಮಾಯಣದಿಂದ ನಮಗೆ ದೊರೆಯುವ ಅಮೂಲ್ಯ ಪಾಠವೇ ಇದು. "

ಇವತ್ತು ನೂಲಲಿಕ್ಕೆ ಕುಳಿತಾಗ " ಇಷ್ಟು ಕಾವ್ಯವನ್ನು ವಲ್ಲಭಭಾಯಿಗೆ ಓದಿ ತೋರಿಸು. ಇಕಬಾಲನದಿರುತ್ತದೆ. " ಎಂದು ಬಾಪೂ ನನಗೆ ಹೇಳಿದರು. " ಈಗ ಇಕಬಾಲನು ಇದನ್ನು ಅಲ್ಲಗಳೆಯುತ್ತಿರಬಹುದು. " ಎಂದು ನಾನು ಅಂದೆ.

ಬಾಪೂ ಅಂದರು: "ಇಲ್ಲ. ಇದು ಹಳೆಯದಿದೆ. ಇದನ್ನು ಅವಶ್ಯ ಒಪ್ಪುತ್ತಾರೆ. ಸರಕಾರವು ಶಾಲೆಗಳಿಗಾಗಿ ಇಟ್ಟ ಉರ್ದು ಪುಸ್ತಕಗಳಲ್ಲಿ ಈ ಕಾವ್ಯ ಮಂಜೂರಾಗಿದೆ. ಆದಕ್ಕಾಗಿಯೇ ವಲ್ಲಭಭಾಯಿಯವರಿಗೆ ಓದಿ ತೋರಿಸಬೇಕಾಗಿದೆ. ಮತ್ತು ಮುಸಲ್ಮಾನ ಹುಡುಗರು ಈ ಶಿಕ್ಷಣದಿಂದಲೇ ದೊಡ್ಡವರಾಗುತ್ತಾರೆ. ಮುಸಲ್ಮಾನ ಹುಡುಗರು ಈ ದೇಶವು ನಮ್ಮ ದೇಶವೆಂದು ಅಭಿಮಾನಪಡುವಂಥ ಒಂದು ಪಾಠವೂ ಇದುವರೆಗೆ ಬಂದಿಲ್ಲ. ಆದರೆ ಇದು ಮುಸಲ್ಮಾನರನ್ನುಳಿದು ಉಳಿದವರ ದ್ವೇಷ ಮಾಡುವ ಉಪದೇಶ ಮಾಡುವಂತಹದಾಗಿದೆ."

## ಪಾಠ ೧೫

चीनो अरब हमारा, हिन्दोस्तां हमारा
मुस्लिम हैं हम, वतन है सारा जहा हमारा ।
दुनिया के बुतकदोंमें, पहला वो घर खुदाका
हम उसके पासबां हैं, वो पासबां हमारा ।
तेगोंके सायेमें हम पलकर जवां हुए हैं

खंजर हिलालका है कौमी निशां हमारा ।
तौहीदकी अमानत, सीनोंमें है हमारे
मुमकिन नहीं मिटाना, नामोनिशा हमारा ।
बातिलसे दबनेवाले, अै आसमां नहीं हम,
सौ बार कर चुका है तू अिम्तेहाँ हमरा ।
अै अर्जे पाक तेरी हुर्मत पे कट मरे हम
है खूं तेरी रगोंमें, अब तक रवां हमारा ।
मगरिबकी वादियोंमें गूंजी अजां हमारी,
थमता न था किसीसे, सैलेरवां हमारा ।

अै मोजे दजला तू भी, पहचानती है हमको,
अब तक है तेरा दरिया, अफसाना ख्वां हमारा ।
अै गुलसिताने अंदलुस वो दिन है याद तुझको,
था तेरी डालियोंमें जब आशियां हमारा ।
सालारे कारवां है मीरे हिजाज अपना,
अिस नामसे है बाकी, आराममें जां हमारा ।
अिकबालका तराना, बांगे दिरा है गोया
होता है जादा पैमा, फिर कारवां हमारा ।

ಚೀನ ನಮ್ಮದು, ಅರಬಸ್ಥಾನ ನಮ್ಮದು, ಹಿಂದುಸ್ಥಾನವೂ ನಮ್ಮದು.

ನಾವು ಮುಸಲ್ಮಾನರು, ಇಡೀ ಜಗತ್ತು ನಮ್ಮ ಮಾತೃಭೂಮಿ.
ಜಗತ್ತಿನ ಮಂದಿರದಲ್ಲಿ ಮೊದಲನೇ ಮನೆಯು ದೇವರದು.
ನಾವು ಆತನ ಕಾವಲುಗಾರರು ಆತನು ( ಖುದಾ ) ನಮ್ಮ ರಕ್ಷಕನು.
ಖಡ್ಗದ ನೆರಳಲ್ಲಿ ಬೆಳೆದು ನಾವು ದೊಡ್ಡವರಾಗಿದ್ದೇವೆ.
ನಮ್ಮ ರಾಷ್ಟ್ರಧ್ವಜವು ಖಂಜೀರ ಮತ್ತು ಬಾಲಚಂದ್ರಾಂಕಿತವಿದೆ.
ನಮ್ಮ ಹೃದಯದಲ್ಲಿ ತೋಹೀದ ( ಏಕೇಶ್ವರವಾದ )ದ ಬಂಡವಾಳವಿದೆ.
ಅಂದರೆ ನಮ್ಮ ಹೆಸರನ್ನಳಿಸುವದು ಸಾಧ್ಯವಿಲ್ಲ.
ಹೇ ಆಕಾಶವೇ! ನಾವು ಅಸತ್ಯದಿಂದ ಹತ್ತಿಕ್ಕಲ್ಪಡುವಂಥವರಲ್ಲ.
ಆದಕಾಗಿ ನೀನು ನಮ್ಮನ್ನು ನೂರಾರು ಸಲ ಪರೀಕ್ಷಿಸಿರುವಿ.
ಹೇ ಪವಿತ್ರಭೂಮಿ! 'ನಿನ್ನ ಮಾನಮರ್ಯಾದೆಗಾಗಿ ನಾವು ನಮ್ಮ ರಕ್ತ ಸುರಿಸಿದ್ದೇವೆ.
ನಿನ್ನ ನಾಡಿಗಳಲ್ಲಿ ಇದುವರೆಗೆ ನಮ್ಮ ರಕ್ತವು ಪ್ರವಹಿಸುತ್ತದೆ.
ನಮ್ಮ ಅಮರ ಧ್ವನಿಯು ಪಶ್ಚಿಮದ ಕಂದರಗಳಲ್ಲಿ ಪ್ರತಿಧ್ವನಿಸುತ್ತಿತ್ತು.
ನಮ್ಮ ಮಹಾಪೂರದ ಪ್ರವಾಹವನ್ನು ಯಾರಿಂದಲೂ ತಡೆಯುವದು ಸಾಧ್ಯವಿದ್ದಿಲ್ಲ.
ಹೇ ಮೊಜೆ ದಜಲಾ (ಬಗದಾದದ ಒಂದು ನದಿ) ನೀವು ಸಹ ನಮ್ಮನ್ನು ಗುರುತಿಸುತ್ತೀರಿ.
ನಾವು ಇನ್ನೂ ನಿನ್ನ ಸುದ್ದಿಯ ಚರ್ಚೆಯನ್ನು ಮಾಡುತ್ತಿರುತ್ತೇವೆ.
ನಿನ್ನ ರಾಜ್ಯದಲ್ಲಿ ನಮ್ಮ ಅಂತಸ್ತಿನ ಮನೆಗಳಾಗಿದ್ದವು. (ನಮ್ಮ ರಾಜ್ಯವಿತ್ತು)
ಹೇ ಅಂದುಲಸ್ ( ಸ್ಪೇನ )ದ ತೋಟಗಳೇ ನಿಮಗೆ ಆ ದಿವಸ ಜ್ಞಾಪಕವಿದೆ.
ನಮ್ಮ ಗುಂಪಿನ ಸರದಾರನು ಹಿಜಾಜದ ಮೀರನಿದ್ದನು.
ಅವನ ಹೆಸರನ್ನು ತೆಗೆದುಕೊಳ್ಳುವದರಿಂದ ನಮ್ಮ ಮನಸ್ಸಿಗೆ ಆನಂದವಾಗುತ್ತದೆ.
ಇಕಬಾಲನ ಈ ಗೀತವು ಢೋಲಿನ ಸಪ್ಪಳವಾಗಿ ಬಿಟ್ಟಿತು.
( ಅಂದರೆ ಇದರ ಸಪ್ಪಳ ಕೇಳಿ ಎಲ್ಲರೂ ನಡೆಯಲಿಕ್ಕೆ, ಕೂಚು ಮಾಡಲಿಕ್ಕೆ ಒಟ್ಟುಗೂಡಿದರು. )
ಆ ಮೇಲೆ ನಮ್ಮ ( ಮುಸಲ್ಮಾನರ ಜಾತಿ ) ಗುಂಪು ಕೂಚು ಮಾಡಲಿಕ್ಕೆ ಸಿದ್ಧವಾಯಿತು.

ಪೂರ್ಣ ಮಾಹಿತಿ ಇಲ್ಲದೆ ನಾವು ಮನುಷ್ಯರಿಗೆ ಎಂಥ ಅನ್ಯಾಯ ಮಾಡುತ್ತೇವೆಂಬುದರ ಒಂದು ಉತ್ತಮ ಉದಾಹರಣೆಯು ನಿನ್ನೆ ದೊರೆಯಿತು. ಭಾಯಿ ಫೂಲಚಂದನ ಪತ್ರ ನಿನ್ನೆ ಇಸಾಪುರದಿಂದ ಬಂದಿತ್ತು. ಆದರಲ್ಲಿ

**೧೮-೫-'೩೨** ೧೩ ಸಾಲುಗಳನ್ನು ಓದಲಿಕ್ಕೆ ಬಾರದ ಹಾಗೆ ಕಾಟು ಹಾಕಲಾಗಿತ್ತು. " ಈ ಕಾಟು ಹಾಕಿದ ಭಾಗದಲ್ಲಿ ಅಂಥ ಮಹತ್ವದ

ವಿಷಯವಿದ್ದಿಲ್ಲ"ವೆಂದು ಸುಪರಿಂಟೆಂಡೆಂಟರು ಹೇಳಿದ್ದರು. ಇಷ್ಟು ಮಾತಿನ ಮೇಲೆ ನಾವು ಅನುಮಾನ ಕಟ್ಟತೊಡಗಿದೆವು. ಅವನು ಓದದಿದ್ದರೆ ಕಾಟು ಹಾಕಿದ ಭಾಗವು ಮಹತ್ವದ್ದಿದ್ದಿಲ್ಲವೆಂದು ಅವನಿಗೆ ಹೇಗೆ ಗೊತ್ತಾಗುತ್ತಿತ್ತು? ಅವನು ಓದಿದ್ದರೆ ಇಸಾಪುರದಲ್ಲಿಯೇ ಕಾಟು ಹಾಕಿದೆಯೆಂದು ಹೇಗೆ ಹೇಳಲಾಗುತ್ತಿದೆ? ಈ ಪ್ರಕಾರ ಕಾಟು ಹಾಕಿದ ಪತ್ರಗಳನ್ನು ನಾವು ಓದುತ್ತೇವೆಂದು ಅವನಿಗೆ ಗೊತ್ತಿದೆ. ಆದುದ ರಿಂದ ನಮಗೆ ಶಿಕ್ಷಣ ಕೊಡುವದಕ್ಕಾಗಿ ಅವನು ಟಾಯಿಪರಾಯಟರದಿಂದ ಕಾಟು ಹಾಕಿಸಿದನು! ಇದಲ್ಲದೆ ಅವನು ಕ್ವೀನನ ವಿಷಯಕ್ಕೆ ಭ್ರಮೆಯಲ್ಲಿ ಬಿದ್ದ ಮನುಷ್ಯ ನಾಗಿದ್ದಾನೆ. ಈ ಎಲ್ಲ ಅನುಮಾನ ಮಾಡುವದರಲ್ಲಿ ಬಾಪೂ ಸಹ ಭಾಗವಹಿಸಿ ದ್ದರು. ಬೆಳಿಗ್ಗೆ ಸುಪರಿಂಟೆಂಡೆಂಟರು ಬಂದರು. ಅವರ ಸಂಗಡ ಸಹಜವಾಗಿ ಮಾತು ಹೊರಡಲು ಅವರು ಹೇಳಿದರು: "ಇದನ್ನು ಇಸಾಪುರದಲ್ಲಿಯೇ ಕಾಟು ಹಾಕಿದೆ. ಆದರೆ ಇದರ ಅನುವಾದವನ್ನು ಇದರ ಜೊತೆಯಲ್ಲಿ ಕಳಿಸಿದ್ದಾರೆ. ಮತ್ತು ಅವರು ಇಷ್ಟು ಭಾಗವನ್ನು ಕಾಟು ಹಾಕಿದೆಯೆಂದು ನನಗೆ ಬರೆದಿದ್ದಾರೆ. ಅದರಲ್ಲಿ ಬೇರೆ ಕೈದಿಗಳ ಹೆಸರು ಇದ್ದುದರಿಂದ ಕಾಟು ಹಾಕಿದಂತೆ ಕಾಣುತ್ತದೆ. ಆದರಲ್ಲಿ ಏನೂ ಇದ್ದಿಲ್ಲ." ನಮಗೆ ಈ ಬಿಚ್ಚುಮಾತು ಬಹಳ ರುಚಿಸಿತು. ಮೊದಲನೇ ದಿನ ಅವರ ವಿಷಯದಲ್ಲಿ ಮಾಡಿದ ಅನ್ಯಾಯಕ್ಕಾಗಿ (ನಮ್ಮ ಮನಸ್ಸಿನಲ್ಲಿಯೇ ಮಾಡಿರ ಬಹುದು) ಪಶ್ಚಾತ್ತಾಪ ಪಟ್ಟೆವು. ಅವಸರ ಮಾಡುವದರಲ್ಲಿ, ಅನುಮಾನ ಮಾಡುವ ದರಲ್ಲಿ ದೋಷವು ನಿಶ್ಚಿತವಾಗಿ ಆಗುತ್ತದೆ.

ಇವತ್ತು ಮೀರಾಬಹನ ಮತ್ತು ಮಣಿಬಹನ ಭೆಟ್ಟಿಗೆ ಬಂದಿದ್ದರು. ಮೀರಾ-ಬಹನರಿಗೆ ಭೆಟ್ಟಿಯಾಗಲು ಕೊಡಲಿಲ್ಲ. ಆವರಿಗೆ ಭೆಟ್ಟಿಯಾಗಗೊಡಬಾರದೆಂಬ ಆಜ್ಞೆ ಈ ಜನರಿಗೆ ನಿನ್ನೆಯೇ ಸಿಕ್ಕಿತ್ತು. ಆದರೆ ಹೇಳಲಿಕ್ಕೆ ಅವರಿಗೆ ಸಂಕೋಚವೆನಿಸಿತು. ಇವತ್ತು ಮೆಲ್ಲಗೆ ಬಾಪೂರನ್ನು ಕರೆದು ಮೀರಾಬಹನರು ಪತ್ರಬರೆದಿದ್ದರು, ಆದನ್ನು ಕೊಟ್ಟಿಲ್ಲ ಎಂದು ಹೇಳಿದರು. ಬಾಪೂ ಮತ್ತು ಮೀರಾಬಹನರಿಗೆ ಬಹಳ ಆಘಾತವಾಯಿತು. "ಮೀರಾ ಇವಳ ಭೆಟ್ಟಿಯನ್ನು ಕೊಡದಿದ್ದರೆ ನನಗೆ ಮತ್ತೆ ಯಾರ ಭೆಟ್ಟಿಯೂ ಬೇಕಿಲ್ಲ." ಎಂದು ಬಾಪೂ ಡೋಯಿಲ್ಲರಿಗೆ ಪತ್ರ ಬರೆದರು.

ಮುಂಬೈ ದಂಗೆಯನ್ನು ಕಾನಪುರ ದಂಗೆಗೆ ಹೋಲಿಸಿ ವಲ್ಲಭಭಾಯಿ ಅಂದರು: "ಕಾನಪುರದಲ್ಲಿ ಪೋಲೀಸರು ನೋಡುತ್ತ ನಿಂತು 'ಹೋಗಿರಿ, ಗಾಂಧೀ ಹತ್ತರ' ಎಂದು ಹೇಳಿದಂತೆ ಇಲ್ಲಿ ಆಗಲಿಲ್ಲವಷ್ಟೆ?" ಬಾಪೂ ಹೇಳಿದರು: "ದೇವರಿಗೆ ಗೊತ್ತು. ನನಗೆ ಇಲ್ಲಿಯ ಬಗ್ಗೆಯೂ—ವೃತ್ತಪತ್ರದಲ್ಲಿಲ್ಲದಿದ್ದರೂ—ಸಂಶಯ ಬರುತ್ತದೆ: 'ಮುಂಬೈಯು ಬಹಳ ಜೋರು ತೋರಿಸುತ್ತದೆ. ಅದಕ್ಕೂ ಒಂದು ಕೈ ತೋರಿಸೋಣ. ಮುಂಬೈ ಮಾಡಿದ್ದನ್ನೆಲ್ಲ ಮಣ್ಣುಗೂಡಿಸುವೆವು.' ನನಗಂತೂ ಗವ್ಹರ್ನರನು ದಂಗೆಯ ಸ್ಥಳದಲ್ಲಿ ಹೋಗುವದೂ ಮನಸ್ಸಿಗೆ ಬರಲಿಲ್ಲ. ನೋಡಿರಿ,

ರಾಜ್ಯವು ನಮ್ಮದಿದೆ, ನಮ್ಮ ಹೊರತು ಯಾರೂ ಏನನ್ನೂ ಮಾಡಲಾರರು ಎಂಬ ನಾತ ಬರುತ್ತದೆ."

ಮೀರಾಬಹೆನಳ ಪತ್ರ ಬಂತು. ದುಃಖವೇನೋ ಬಹಳವಾಯಿತು. ಆದರೆ ಗಟ್ಟಿಮನಸ್ಸು ಮಾಡಿ ಹೊರಟುಹೋದಳು. ಅವಳು ಪುರುಷೋತ್ತಮದಾಸರ ಕಡೆಗೆ ತನ್ನ ಸೇವೆಯನ್ನು ಒಪ್ಪಿಸಿದ್ದಳು. ಈ ದಂಗೆಯಲ್ಲಿ

೧೯–೫–'೩೨

ನನ್ನಿಂದ ಬೇಕಾದ ಕೆಲಸವನ್ನು ತೆಗೆದುಕೊಳ್ಳಬಹುದು, ನಾನು ಜೀವವನ್ನು ಸಂಕಟದಲ್ಲಿ ಹಾಕಿ ಸಹ ಕೆಲಸಮಾಡಲಿಕ್ಕೆ ಸಿದ್ಧಳಿದ್ದೇನೆ ಎಂದು ಹೇಳಿಬಿಟ್ಟಿದ್ದಳು. ಅವಳು ಪುರುಷೋತ್ತಮದಾಸರ ಸಂದೇಶ ತೆಗೆದುಕೊಂಡು ಬಂದಿದ್ದಳು. ಆದರೆ ಸುಪರಿಂಟೆಂಡೆಂಟರು ಅದನ್ನು ಕೊಡಲಿಲ್ಲ. ಪಾಪ, ಸುಪರಿಂಟೆಂಡೆಂಟರಾದರೂ ಏನು ಮಾಡಬೇಕು ?

ಇವತ್ತು . . . ನು ಬರೆಯಬಾರದ ಕಾಗದವನ್ನು ಬರೆದಿದ್ದನು. ಅವನಿಗೆ ಕಠೋರ ಎಚ್ಚರಿಕೆಯನ್ನು ಕೊಡಬೇಕಾಗುವದು.

ನಿನ್ನೆ ಆಶ್ರಮದ ಟಪಾಲು ಬಂತು. ಪ್ರತಿಸಾರೆಯಗಿಂತ ದೊಡ್ಡದಿತ್ತು. ಮೂರು ಬಹಳ ಉದ್ದವಾದ ಪತ್ರಗಳಿದ್ದವು. ಆದರಲ್ಲಿ ತೋತಾರಾಮರ ಪತ್ರ ಅಮೂಲ್ಯವಾಗಿತ್ತು. ರಾಮಚರಿತ್ರವನ್ನು ಓದಿ ಮನಸ್ಸು ಹೆಚ್ಚು ಪವಿತ್ರವಾಗ ಬಲ್ಲದೋ ಅಥವಾ ಈ ಪತ್ರವನ್ನು ಓದಿಯೋ ಎಂಬುದನ್ನು ಹೇಳುವದು ಕಠಿಣ ವಿತ್ತು. ಆದರಲ್ಲಿ ಆವರು ತಮ್ಮ ಪತ್ನಿಯ ಸಂಕ್ಷಿಪ್ತ ವರ್ಣನೆಯನ್ನು ಹೃದಯಂಗಮ ವಾದ ಭಾಷೆಯಲ್ಲಿ ಬರೆದಿದ್ದರು. ಅವಳು ವರದಕ್ಷಿಣೆಯೆಂದು ತನ್ನ ತಂದೆಯ ಕಡೆಯಿಂದ ೫೦೦ ಪೌಂಡುಗಳನ್ನು ತಂದಿದ್ದಳು. ಆದರಲ್ಲಿ ತನ್ನ ಸಲುವಾಗಿ ಒಂದು ದುಡ್ಡನ್ನೂ ವೆಚ್ಚ ಮಾಡದೆ ಮಕ್ಕಳ ಶಿಕ್ಷಣ, ಶಾಲೆಯ ಇಮಾರತುಗಳಿಗಾಗಿಯೇ ವಿನಿಯೋಗಿಸಿದಳು. ೪೦ ಎಕರೆ ಕಬ್ಬಿನ ಜಮೀನು, ೩೦ ಎಕರೆ ಬೇರೆ ಜಮೀನು ಹೀಗೆ ಒಟ್ಟು ೭೦ ಎಕರೆ ಜಮೀನು ಒಂದು ದಿವಸದ ಬಿರುಗಾಳಿಯಿಂದ ನಾಶವಾಗಿ ಹೋಯಿತು. ಆಗ ಯಜಮಾನ ಯಜಮಾನತಿಯು ಗೋವಿನಜೋಳ ಬೀಸಿ ತಿಂದರು. ಆದರೆ ಗಂಗಾದೇವಿಯು ತಂದೆಯಿಂದ ಒಂದು ಪೈಯನ್ನು ಸಹ ಸಹಾಯ ಬೇಡಗೊಡ ಲಿಲ್ಲ. ಇಲ್ಲಿ ದೇಶದಲ್ಲಿ ಆಶ್ರಮದ ಹುಡುಗರನ್ನುಯಾವಾಗಲೂ ತನ್ನವೇ ಎಂದು ತಿಳಿದು ಕೊಂಡಿದ್ದಳು. ಅವಳ ತಾಯಿಯು ಸಾಯುವಾಗ ರಾಮನಾಮ ತೆಗೆದುಕೊಳ್ಳುವ ಉಪದೇಶ ಹಾಗೂ ಉತ್ತರಾಧಿಕಾರ ಕೊಟ್ಟು ಸತ್ತಿದ್ದಳು. ಈ ಸಹೋದರಿಯು ಈ ಉಪದೇಶವನ್ನು ಅಕ್ಷರಶಃ ಪಾಲಿಸಿದಳು. ಈ ದಂಪತಿಯು ದೈವೀ ದಂಪತಿಯೇ ಆಗಿತ್ತು. ಟಾಲಸ್ಟಾಯನ ಕಥೆಯಲ್ಲಿ ದೇವದೂತನು ಬಂದು ಜನರ ಮನೆಗಳಲ್ಲಿ ಇರುತ್ತಾನೆ, ಸೇವೆ ಮಾಡುತ್ತಾನೆ ಆದರೆ ಕೊನೆಯವರೆಗೆ ಯಾರಿಗೂ ಗೊತ್ತಾಗ

ಗೊಡುವದಿಲ್ಲ ಎಂದು ಹೇಳಿದೆ. ಈ ದಂಪತಿಯು ಸಹ ಇಂತಹದೇ ಎಂದು ಹೇಳಬಹುದು.

ಎರಡನೇ ಉದ್ದ ಪತ್ರವು . . . ನದು ಇತ್ತು. ದೊಡ್ಡ ನಿಬಂಧವಿತ್ತು. 'ನೀವು ಸ್ವತಃ ಜೇಲಿನಲ್ಲಿ ವಿಶೇಷ ಸವಲತ್ತುಗಳನ್ನು ಭೋಗಿಸುತ್ತಿದ್ದೀರಿ. ಎರಡನೆಯವರಿಗೆ ಅವುಗಳನ್ನು ಬಿಡುವ ಉಪದೇಶ ಏಕೆ ಮಾಡುತ್ತೀರಿ? ಮನುಷ್ಯನು ಬೇನೆಬೀಳುತ್ತಾನೆ, ಆಗ ಅವನು ಸಾಯುವದನ್ನು ನೋಡಿ ದುಃಖವೇಕಾಗುತ್ತದೆ? ಜೀವಿಸಿದರೆ ಈಶ್ವರನ ಉಪಕಾರವನ್ನೇಕೆ ಸ್ಮರಿಸುತ್ತೇವೆ? ಮಣಿಲಾಲರು ಬದುಕಿಕೊಂಡರು. ಆಗ ನೀವು ದೇವರ ಆಭಾರವನ್ನೇಕೆ ಸ್ಮರಿಸಿದಿರಿ? ಆಯುಷ್ಯದ ಮರ್ಯಾದೆಯೇನು? ಅನೇಕ ದುರಾಚಾರಿ ಜನರು ದೀರ್ಘಕಾಲವೇಕೆ ಬದುಕುತ್ತಾರೆ? ಮತ್ತು ನೀತಿವಂತ ಜನರು ಬೇಗನೆ ಏಕೆ ಹೊರಟು ಹೋಗುತ್ತಾರೆ'? ಮುಂತಾಗಿ. ಇವನಿಗೆ ಬಾಪೂ ಉದ್ದ ಪತ್ರವನ್ನು ಬರೆದಿದ್ದಾರೆ:

". . . ಳು ಭೋಗಿಸುತ್ತಿರುವ ಎರಡು ವಿಶೇಷ ಸವಲತ್ತುಗಳನ್ನು ಅವಳ ಮೇಲೆ ಒತ್ತಾಯ ತಂದು ಅವನ್ನು ಬಿಡಿಸಲಾಗದು. ಸ್ವತಃಕ್ಕೆ ಈ ವಿಷಯ ಕುರಿತು ಹೃದಯದಿಂದ ತಳಮಳ ಉಂಟಾಗುವ ವರೆಗೆ ಈ ವಸ್ತುಗಳನ್ನು ಬಿಡಿಸಲಾಗದು. ನನ್ನ ಉದಾಹರಣೆಯನ್ನು ತೆಗೆದುಕೊಳ್ಳುವದು ಯೋಗ್ಯವಾಗಿದೆ ಮತ್ತು ಯೋಗ್ಯವಾಗಿಯೂ ಇಲ್ಲ. ಯೋಗ್ಯವು ಈ ದೃಷ್ಟಿಯಿಂದಿದೆ: ನಾನು ಕಾರ್ಯಕ್ಷೇತ್ರದಲ್ಲಿ ಪ್ರತ್ಯಕ್ಷ ಇರುವವರೆಗೆ ನನ್ನ ಉದಾಹರಣೆ ಕೊಟ್ಟೇ ಕೊಡಲಾಗುವದು! ಮತ್ತು ಬುದ್ಧಿಭೇದವು ಆಗಿಯೇ ತೀರುವದು. ಯಾಕೆಂದರೆ ಎಷ್ಟೋ ಕಾರಣಗಳ ಮೂಲಕ ನಾನು ಎರಡನೆಯವರಿಂದ ಅಪೇಕ್ಷಿಸುವ ನಡತೆಯನ್ನು ಇತ್ತೀಚೆಗೆ ನನಗೆ ನನ್ನ ಜೀವನದಲ್ಲಿ ತೋರಿಸುವದು ಸಾಧ್ಯವಾಗದಾಗಿದೆ. ನನ್ನ ನೇತೃತ್ವದಲ್ಲಿ ಇಷ್ಟು ಕೊರತೆ ಇದೆಯೆಂಬುದು ನನಗೆ ಗೊತ್ತಿದೆ. ನನ್ನ ಸ್ಥಿತಿಯು ಉಳಿದ ಸಂಗಡಿಗರಿಂದ ಭಿನ್ನವಾಗಿಬಿಟ್ಟಿರುವದರಿಂದ ನನ್ನ ಉದಾಹರಣೆಯನ್ನು ತೆಗೆದುಕೊಳ್ಳುವದು ಯೋಗ್ಯವಾಗಲಾರದು. ಅದರ ಒಂದನೆಯ ಕಾರಣವು ನನ್ನ ಶಾರೀರಿಕ ಅಶಕ್ತತೆಯು. ಎರಡನೆಯ ಕಾರಣವು ಮಹಾತ್ಮಾಪದವು. ಮೂರನೆಯ ಕಾರಣವು ನನ್ನ ವಿಶೇಷ ಪರಿಸ್ಥಿತಿಯು. ನಾನು 'ಕ' ವರ್ಗದಲ್ಲಿದ್ದರೂ ನನ್ನ ಆಹಾರವು ಬೇರೆಯೇ ಆಗುವದು. ಅದರ ಕಾರಣವು ನನ್ನ ಶರೀರ ಮತ್ತು ನನ್ನ ವ್ರತ. ಈ ಮಾತು ಸ್ವಲ್ಪಿಲ್ಲ ಸ್ವಲ್ಪು ಪ್ರತಿಯೊಬ್ಬ ಕೈದಿಗೂ ಅನ್ವಯಿಸುತ್ತದೆ. ಆಹಾರದ ಸವಲತ್ತುಗಳು ನನಗೆ ಸಿಗುವಷ್ಟು ಬೇಗನೆ ಬೇರೆಯವರಿಗೆ ಸಿಗುವದಿಲ್ಲವೆಂಬ ಮಾತು ಬೇರೆ. ನಾನು ಮೂರುತಿಂಗಳಿಗೊಂದು ಸಾರೆಯ ಬದಲು ಪ್ರತಿ ವಾರ ಭೆಟ್ಟಿಯನ್ನು ತೆಗೆದುಕೊಳ್ಳುತ್ತೇನೆ ಮತ್ತು ಪತ್ರಬರೆಯುವದಕ್ಕಂತೂ ಯಾವ ಮರ್ಯಾದೆಯೂ ಇಲ್ಲ. ಈ ವಿಷಯದಲ್ಲಿ ನನ್ನವರಾದ ಮಿತ್ರರು ಯಾರೂ ಇಲ್ಲವೆಂದೂ ಆಪ್ತೇಷ್ಟರನ್ನು ಆಪ್ತೇಷ್ಟ

ರೆಂದು ತಿಳಿದು ಭೆಟ್ಟಿಯಾಗುವದಿಲ್ಲವೆಂದೂ ನಾನು ನನ್ನ ಮನಸ್ಸಿಗೆ ತಿಳಿದುಕೊಂಡಿದ್ದೇನೆ. ನಾನು ಭೆಟ್ಟಿಯಾಗುತ್ತೇನೆ. ಅದರಿಂದ ಸಹ ಒಂದು ನೈತಿಕ ಕೆಲಸ ಹೊರಡುತ್ತದೆ. ನಾನು ಬರೆಯುವದಕ್ಕೂ ಸಹ ಇದೇ ಉದ್ದೇಶವಿದೆ. ಒಳಗಿಂದೊಳಗೆ ಇದರಲ್ಲಿ ಏನಾದರೂ ವಿಲಾಸವಿದ್ದರೆ ಅದು ನನಗೆ ಗೊತ್ತಿಲ್ಲ. ಇರುವ ಸಂಭವವು ಕಡಿಮೆಯಿದೆ. ಯಾಕಂದರೆ ಪತ್ರ ಬರೆಯುವದು ಅಥವಾ ಭೆಟ್ಟಿಯಾಗುವದು ಬಂದಾದರೆ ನನಗೆ ಆಘಾತವಾಗುವದಿಲ್ಲ. '೩೦ ನೇ ಇಸ್ವಿಯಲ್ಲಿ ನನ್ನ ಕರಾರು ಮಂಜೂರಾಗಲಿಲ್ಲ. ಅದರಿಂದ ನಾನು ಭೆಟ್ಟಿ ಯಾಗುವದನ್ನು ನಿಲ್ಲಿಸಿದ್ದೆ. '೨೨ ನೇ ಇಸ್ವಿಯಲ್ಲಿ ಪತ್ರ ಬರೆಯುವದನ್ನು ನಿಲ್ಲಿಸಿದ್ದೆ. ಇದರ ಹೊರತು ನನ್ನನ್ನು ಪ್ರತ್ಯೇಕ ಇಡುವದೂ ಒಂದು ಕಾರಣವಾಗಿದೆ. ಈ ಕಾರಣಗಳಿಂದ ನನ್ನ ಜೊತೆಗೆ ತುಲನೆ ಮಾಡುವದು ಯೋಗ್ಯವಾಗಲಾರದು. ಆದರೆ ಯಾರಿಗೆ ಈ ಮಾತು ಸ್ವಯಂ ಸಿದ್ಧವೆನಿಸುವದಿಲ್ಲವೊ ಅಂಥವರಿಗೆ ಯುಕ್ತಿವಾದ ಮಾಡಿ ತಿಳಿಸುವದು ನನಗೆ ಯೋಗ್ಯವೆನಿಸುವದಿಲ್ಲ. ಯಾರಿಗೆ ಹೊರಗಿನ ಪ್ರಯತ್ನದಿಂದ 'ಅ' ವರ್ಗ ದೊರೆತಿರುವದೊ ಮತ್ತು ಯಾರಿಗೆ ಸಹಜವಾಗಿ 'ಅ' ವರ್ಗ ಸಿಕ್ಕುವದೊ ಈ ಇಬ್ಬರಲ್ಲಿ ಸ್ವಲ್ಪ ವ್ಯತ್ಯಾಸವು ಅವಶ್ಯವಿದೆ. ಆದರೆ ಈ ಭೇದ ಮಾಡುವದರಲ್ಲಿ ಯಾವ ತಥ್ಯವೂ ಇಲ್ಲ. ವರ್ಗವಾಗದಿರುವದೇ ಆದರ್ಶವೆಂಬುದರಲ್ಲಿ ಸಂದೇಹವಿಲ್ಲ. ಮತ್ತು ಯಾರ ವರ್ಗೀಕರಣ ಮಾಡಲಾಗಿದೆಯೊ ಅಂಥವರು ಶ್ರೇಷ್ಠವೆಂದು ಹೇಳಲ್ಪಡುವ ವರ್ಗವನ್ನು ಬಿಡಲಿಕ್ಕೆ ಬೇಕು. ಇಂಥ ಆದರ್ಶದ ರಕ್ಷಣೆಯನ್ನು ತೀರ ಸ್ವಲ್ಪ ಜನರು ಮಾಡುತ್ತಿರುವಾಗ . . . . ಳಂಥ ಹುಡಿಗೆಯ ಮೇಲೆ ಸ್ವಲ್ಪ ಸಹ ಒತ್ತಾಯ ತರುವ ಇಚ್ಛೆಯಾಗುವದಿಲ್ಲ. ಅವಳು ಬಹಳ ವಿಚಾರವಂತಳಿದ್ದಾಳೆ. ತನ್ನಷ್ಟಕ್ಕೆ ತಾನೇ ತನ್ನ ಶಕ್ತಿಯಿದ್ದಷ್ಟು ಸಂಯಮವನ್ನು ಪಾಲಿಸುತ್ತಲೇ ಇರಬಹುದು.

"ಮಣಿಲಾಲನ ಸಲುವಾಗಿ ನಾನು ಪ್ರಾರ್ಥನೆ ಮಾಡಿದ್ದು ಜ್ಞಾನಸೂಚಕವಾಗಿರಲಿಲ್ಲ. ಆದರೆ ತಂದೆಯ ಪ್ರೇಮದ ಸೂಚಕವಾಗಿತ್ತು. 'ದೇವರು ಮನಸ್ಸಿಗೆ ಬಂದದ್ದು ಮಾಡಲಿ' ಎಂಬ ಪ್ರಾರ್ಥನೆಯೊಂದೇ ಶೋಭಿಸುತ್ತದೆ. ಇಂಥ ಪ್ರಾರ್ಥನೆಯನ್ನು ಮಾಡುವದರ ಅರ್ಥವಾದರೂ ಏನು ಎಂಬ ಪ್ರಶ್ನೆಯುಂಟಾಗುತ್ತದೆ. ಪ್ರಾರ್ಥನೆಯ ಸ್ಥೂಲ ಅರ್ಥ ಮಾಡಬಾರದೆಂಬುದೇ ಇದರ ಉತ್ತರವು. ನಮ್ಮ ಹೃದಯದಲ್ಲಿ ವಾಸಿಸುವ ದೇವರ ಅಸ್ತಿತ್ವದ ವಿಷಯದಲ್ಲಿ ನಾವು ಜಾಗ್ರತರಿದ್ದೇವೆ ಮತ್ತು ಮೋಹದಿಂದ ಬಿಡುಗಡೆಯಾಗುವದರ ಸಲುವಾಗಿ ಒಂದು ಕ್ಷಣ ದೇವರು ನಮ್ಮಿಂದ ಬೇರೆಯೆಂದು ತಿಳಿದು ಅವನನ್ನು ಪ್ರಾರ್ಥಿಸುತ್ತೇವೆ. ಅಂದರೆ ಮನಸ್ಸು ನಮ್ಮನ್ನು ಎಳೆದೊಯ್ದತ್ತ ನಾವು ಹೋಗಲಿಚ್ಛಿಸುವದಿಲ್ಲ. ಆದರೆ ದೇವರು ನಮ್ಮಿಂದ ಬೇರೆಯಿದ್ದರೂ ನಮ್ಮ ಸ್ವಾಮಿಯಾಗಿರುವದರಿಂದ ಅವನು ಎಳೆದೊಯ್ದಲ್ಲಿ ನಾವು ಹೋಗಬೇಕಾಗಿದೆ. ಬಾಳಿನಲ್ಲಿ ಶ್ರೇಯವಿದೆಯೊ, ಸಾವಿನಲ್ಲಿ

ಶ್ರೇಯವಿದೆಯೊ ನಮಗೆ ಗೊತ್ತಿಲ್ಲ. ಆದುದರಿಂದ ಜೀವಿಸುವದಕ್ಕೆ ಆನಂದ ಪಡಬಾರದು ಸಾವಿಗೆ ಭಯಪಡಬಾರದು. ಎರಡೂ ಒಂದೇ ಎಂದು ತಿಳಿದು ನಾವು ತಟಸ್ಥರಾಗಿರಬೇಕು. ಇದೇ ಆದರ್ಶವು. ಅಲ್ಲಿಯವರೆಗೆ ಮುಟ್ಟಲಿಕ್ಕೆ ತಡವಾಗುತ್ತಿದೆ ಅಥವಾ ಎಲ್ಲಿಯೋ ಒಬ್ಬನು ಮುಟ್ಟಬಹುದು. ಆದುದರಿಂದ ಆ ಆದರ್ಶವನ್ನು ನಾವು ಎಂದೂ ಬಿಡಬಾರದು ಮತ್ತು ಅದರಲ್ಲಿ ತೊಂದರೆಗಳು ಅನಿಸುತ್ತ ಹೋದಂತೆ ನಾವು ನಮ್ಮ ಪ್ರಯತ್ನಗಳನ್ನು ಹೆಚ್ಚಿಸುತ್ತ ಹೋಗಬೇಕು.

"ಪೂರ್ಣಾಯುಷ್ಯ ೧೦೦ ವರ್ಷಕ್ಕೂ ಹೆಚ್ಚಾಗಬಲ್ಲದು. ಎಷ್ಟೇ ವರ್ಷಗಳಾದಾಗ್ಯೂ ಕಾಲಚಕ್ರವು ಅನಂತವಿದೆ. ಅದರಲ್ಲಿ ಮನುಷ್ಯನ ಒಂದು ಆಯುಷ್ಯದ ಲೆಕ್ಕವು ಒಂದು ಬಿಂದುವಿನ ಒಂದು ಕೋಟ್ಯಾಂಶ ಭಾಗ ಸಹ ಆಗುವದಿಲ್ಲ. ಇದರ ಸಲುವಾಗಿ ಮೋಹವೆಂತಹದು, ಲೆಕ್ಕವೆಂತಹದು ? ನಾವು ಲೆಕ್ಕ ಹಾಕಿದಾಗ್ಯೂ ಅದು ಯಾವದೇ ರೀತಿಯಿಂದ ನಿಶ್ಚಯಾತ್ಮಕವಾಗಲಾರದು. ಹೆಚ್ಚಿನ ಹೆಚ್ಚು ವಯಸ್ಸು ಎಷ್ಟು ಎಂದು ಅನುಮಾನದಿಂದ ಹೇಳಬಹುದು. ಹಾಗೆ ನೋಡಿದರೆ ನಾವು ನಿರೋಗಿ ಬಾಲಕರು ಸಾಯುವದನ್ನೂ ನೋಡುತ್ತೇವೆ. ವಿಷಯಾಸಕ್ತನಾದವನು ದೀರ್ಘಾಯುವಾಗಲಾರನೆಂದು ಸಹ ಹೇಳಲಿಕ್ಕಾಗುವದಿಲ್ಲ. ಬಹಳವಾದರೆ ಪ್ರಾರಂಭದಿಂದಲೇ ಸಾದಾ ಮತ್ತು ವಿಷಯರಹಿತವಾದ ಜೀವನವು ಬಹಳ ಮಾಡಿ ದೀರ್ಘಜೀವಿಯಾಗುತ್ತದೆಂದು ಹೇಳಬಹುದು. ಕೇವಲ ದೀರ್ಘಜೀವಿಯಾಗುವದಕ್ಕಾಗಿ ವಿಷಯಗಳ ಮೇಲೆ ಅಂಕಿತವನ್ನು ಪಡೆಯುವಂಥ ಮನುಷ್ಯನ ಸಲುವಾಗಿ, ಗುಡ್ಡ ಅಗಿದು ಇಲಿ ದೊರಕಿಸುವ ಕೆಲಸ ಮಾಡಿದನೆಂದು ಹೇಳಬಹುದು. ಆತ್ಮದ ಪರಿಚಯ ಮಾಡಿಕೊಳ್ಳುವದಕ್ಕಾಗಿ ನಮಗೆ ವಿಷಯಗಳನ್ನು ಜಯಿಸುವದಿದೆ. ವಿಷಯಗಳನ್ನು ಗೆಲ್ಲುವ ಪ್ರಯತ್ನದಲ್ಲಿ ಶರೀರವು ಹೆಚ್ಚು ದಿವಸ ಬಾಳುವದರ ಬದಲು ಸ್ವಲ್ಪೇ ದಿನ ಬಾಳಿದರೂ ಹಾಗೆ ಮಾಡಗೊಡಬೇಕು. ಶರೀರವು ನಿರೋಗಿ ಅಥವಾ ದೀರ್ಘಾಯುವಾಗುವದು ವಿಷಯರಹಿತತೆಯ ಅತ್ಯಲ್ಪ ಪರಿಣಾಮವಿರುತ್ತದೆ."

ಇವತ್ತು ಬೆಳಗಾವಿಯಿಂದ ಪ್ರಭುದಾಸನ ಉದ್ದ ಪತ್ರ ಬಂತು. ಮತ್ತು ಬಾಪೂ ೬೦೦ ಶಬ್ದಗಳ ಉದ್ದ ಪತ್ರವನ್ನು ಬರೆದರು. ಮಗನ ಚರಖಾದ ಮೇಲೆ ೧೪ ದಿವಸಗಳ ಪರಿಶ್ರಮದ ನಂತರ ಸ್ವತಃಕ್ಕೆ ದೊರೆತ ಹಿಡಿತದ

**೨೦-೫-'೩೨** ವಿಷಯಕ್ಕೆ ಸಂತೋಷ ವ್ಯಕ್ತಪಡಿಸುತ್ತಾರೆ. ಈ ರಾಟಿಯ ಕೌಶಲ್ಯವನ್ನು ಹೊಗಳುತ್ತಾರೆ. ಈ ರಾಟಿಯನ್ನು ಪರೀಕ್ಷಿಸಿ ನೋಡುವ ತಮ್ಮ ಸಂಕಲ್ಪವು ವೃದ್ಧ ಮತ್ತು ಅಶಕ್ತ ಕೈಗಳಿಗೂ—ಸಫಲವಾದದ್ದಕ್ಕಾಗಿ ತಾವು ಧನ್ಯರೆಂದು ತಿಳಿದುಕೊಳ್ಳುತ್ತಾರೆ. ಪ್ರಭುದಾಸರಿಗೆ ಬರೆಯುತ್ತಾರೆ: "ನಿನ್ನ ರಾಟಿಯಲ್ಲಿ ನಾನು ತೆಗೆದುಕೊಳ್ಳುತ್ತಿರುವ ಆಸಕ್ತಿ

ಯನ್ನು ನೀನು ಕಣ್ಣಾರೆ ನೋಡಿದರೆ ನಿನ್ನ ರಕ್ತವು ಒಂದೆರಡು ಸೇರು ಕೂಡಲೇ ಹೆಚ್ಚಾಗುವದು. ನಿನಗೆ ಇಷ್ಟು ಆನಂದವಾಗುವದು. ಕೈಗೆ ಏನೂ ಆಗದಿದ್ದಾಗಲೇ ನಿನ್ನ ರಾಟೆಯ ಪ್ರಯೋಗ ಮಾಡುವ ಸಂಕಲ್ಪ ಮಾಡಿಬಿಟ್ಟಿದ್ದೆನು. ಈಗಂತೂ ಒತ್ತಾಯದಿಂದ ಪುಣ್ಯ ಮಾಡಬೇಕಾಗುತ್ತದೆ. ನೂಲುವದನ್ನಾದರೂ ಬಿಡಬೇಕು ಅಥವಾ ಇದೇ ರಾಟೆಯ ಮೇಲೆ ನೂಲಬೇಕು." ಇಷ್ಟು ಬರೆದ ಮೇಲೆ ಅಂದರು: "ಮಹದೇವ, 'Necessity is the mother of invention' ಇದರ ಗುಜರಾತಿ ಏನು?' ಅಸಂತೋಷವೇ ಏಳಿಗೆಯ ಮೂಲ 'आवश्यकता आविष्कारनी जननी छे,' ಹೀಗೆ ಎರಡು ಮೂರು ಸ್ಥಳದಲ್ಲಿ ಬರೆದದ್ದನ್ನು ನೋಡಿದ್ದೇನೆ ಎಂದು ನಾನು ಹೇಳಿದೆ. ಮತ್ತೆ ವಿಚಾರ ಮಾಡತೊಡಗಿದರು. ವಲ್ಲಭಭಾಯಿಯವರನ್ನು ಕೇಳಿದರು. ವಲ್ಲಭ ಭಾಯಿಯವರು ಒಂದರಮೇಲೊಂದು ನಾಣ್ಣುಡಿಯನ್ನು ಹೇಳತೊಡಗಿದರು. ಅವಶ್ಯ ಬಿದ್ದರೆ ಕತ್ತೆಯ ಕಾಲನ್ನೂ ಹಿಡಿಯಬೇಕಾಗುತ್ತದೆ ಮುಂತಾಗಿ. ಅವಶ್ಯಕತೆ ಕತ್ತೆ ಯನ್ನು ಕುದುರೆಯನ್ನಾಗಿ ಮಾಡುತ್ತದೆಂದು ಒಂದುವೇಳೆ ಆಗಬಹುದು, ಎಂದು ನಾನು ಹೇಳಿದೆ. ಆಮೇಲೆ ಬಾಪೂ: "ಸರಿ, ನನಗೆ ಹೊಳೆಯಿತು. ಇನ್ನು ಬರೆ." ಎಂದು ಅಂದರು. "ಸಂಕಟದಲ್ಲಿ ಸಿಕ್ಕ ಮನುಷ್ಯನಿಗೆ ಹೊಸ ಯುಕ್ತಿಗಳು ಹೊಳೆಯುತ್ತಿರು ವಂತೆ ಈಗ ಸಂಕಟದಲ್ಲಿ ಸಿಕ್ಕ ನಾನು ರಾಟೆಯಮೇಲೆ ಪ್ರಾಪ್ತವಾದ ನನ್ನ ಗತಿಯನ್ನು ಹೆಚ್ಚಿಸುವ ಯುಕ್ತಿಯನ್ನು ಹುಡುಕುತ್ತಿರುವೆನು. ಈ ಮಧ್ಯದಲ್ಲಿ ನಿನ್ನ ಬಿಡುಗಡೆ ಯಾದರೆ ಮತ್ತು ಆಗ ನಾನು ಭೆಟ್ಟಿಯನ್ನು ತೆಗೆದುಕೊಳ್ಳುತ್ತಿದ್ದರೆ ನನಗೆ ಭೆಟ್ಟಿಯಾಗಿ ಹೋಗು ಮತ್ತು ಹೊಸದೇನಾದರೂ ಇದ್ದರೆ ಕಲಿಸಿಹೋಗು." "ಗೀತೆಯಲ್ಲಿ 'मामेकं शरणं व्रज' ಬರುತ್ತದೆ, 'मत्परः' ಬರುತ್ತದೆ. ಅದರಲ್ಲಿ 'ಮತ್ಪರಃ'ದ ಅರ್ಥವೇನು? ನೀವು ಈಶ್ವರನ ಅರ್ಥವನ್ನು ಸತ್ಯವೆಂದು ಮಾಡುತ್ತೀರಿ. ಆಗ ಮನುಷ್ಯನು ಸತ್ಯದ ಪ್ರತೀಕವನ್ನು ಏನೆಂದು ಮಾಡಬೇಕು? ರಾಮನಾಮ ಜಪಿಸ ಬೇಕು. ಆದರೆ ರಾಮ ಯಾರು?" ಈ ಪ್ರಕಾರದ ಸಮಸ್ಯೆಗಳನ್ನು ಪ್ರಭುದಾಸನು ಕೇಳಿದ್ದನು. ಅವನಿಗೆ ಬರೆದರು: "ಮತ್ಪರಃ ಅಂದರೆ ಸತ್ಯಪರಾಯಣ. 'चरणपद्मे मम चित निष्पंदित करो हे,' ಇದರಲ್ಲಿ ಚರಣ ಪದ್ಮದ ಅರ್ಥವು ಸತ್ಯ ನಾರಾಯಣನ ಚರಣಕಮಲ—ಈ ಶಬ್ದವನ್ನು ಉಪಯೋಗಿಸಿ ಭಕ್ತನು ಸತ್ಯವನ್ನು ಮೂರ್ತಿಮಂತ ಮಾಡಿದ್ದಾನೆ. ಸತ್ಯವು ಅಮೂರ್ತವದೆ. ಆದುದರಿಂದ ಎಲ್ಲರೂ ತಮಗೆ ಸರಿ ಕಂಡಂತೆ ಸತ್ಯದ ಮೂರ್ತಿಯನ್ನು ಕಲ್ಪಿಸಿಕೊಳ್ಳಲಿ. ಇದು ಕಲ್ಪನೆ ಯೆಂಬುದನ್ನಿಷ್ಟು ತಿಳಿದುಕೊಂಡ ಮೇಲೆ ಅಸಂಖ್ಯ ಜನರು ಅಸಂಖ್ಯ ಮೂರ್ತಿಗಳನ್ನು ಕಲ್ಪಿಸಬಹುದು. ಇವೆಲ್ಲವೂ ಕಲ್ಪನೆಗಳೇ ಆಗಿರುವವರೆಗೆ ಸತ್ಯವಾಗಿಯೇ ಇರುವವು. ಯಾಕಂದರೆ ಈ ಮೂರ್ತಿಯಿಂದ ಮನುಷ್ಯನು ತನಗೆ ಬೇಕಾದದ್ದನ್ನು ಪ್ರಾಪ್ತಮಾಡಿ ಕೊಳ್ಳುತ್ತಾನೆ. ನಿಜವಾಗಿ ನೋಡಿದರೆ ವಿಷ್ಣು, ಮಹೇಶ್ವರ, ಬ್ರಹ್ಮ, ಭಗವಾನ್,

ಈಶ್ವರ ಈ ಎಲ್ಲ ಹೆಸರುಗಳು ಅರ್ಥವಿಲ್ಲದವು ಅಥವಾ ಅಪೂರ್ಣಾರ್ಥದವು ಇರುತ್ತವೆ. ಸತ್ಯ ಇದು ಪೂರ್ಣ ಅರ್ಥವುಳ್ಳ ಹೆಸರಾಗಿದೆ. ದೇವರ ಸಲುವಾಗಿ ಸಾಯುತ್ತೇನೆಂದು ಯಾರಾದರೂ ಹೇಳಿದರೆ ಇದರ ಅರ್ಥವು ಅವನಿಗೆ ಸ್ವತಃಕ್ಕೆ ತಿಳಿಯುವದಿಲ್ಲ ಮತ್ತು ಕೇಳುವವನಿಗೆ ಸಹ ತಿಳಿಯುವದು ತೀರ ವಿರಳ. ನಾನು ಸತ್ಯಕ್ಕಾಗಿ ಸಾಯುತ್ತೇನೆ ಎಂದು ಹೇಳುವವನಿಗೆ ಸ್ವತಃಕ್ಕೆ ತಿಳಿಯುತ್ತದೆ. ಮತ್ತು ಕೇಳುವವನು ಸಹ ಇದರ ಬಹುಭಾಗವನ್ನು ತಿಳಿದುಕೊಳ್ಳಬಲ್ಲನು. ರಾಮ ಅಂದರೆ ಏನು ಎಂದು ನೀನು ಕೇಳುತ್ತಿ. ಅದರ ಅರ್ಥವನ್ನು ನಾನು ತಿಳಿಸಿಹೇಳಬೇಕು ಮತ್ತು ನೀನು ಅದರ ಜಪ ಮಾಡಬೇಕು; ಅಂದರೆ ಇದು ಬಹುತರ ನಿರರ್ಥಕವಾಗುವದು. ನೀನು ಯಾರನ್ನು ಭಜಿಸಬೇಕೆನ್ನುತ್ತೀಯೊ ಅವನೇ ರಾಮನಿದ್ದಾನೆಂದು ತಿಳಿದು ರಾಮನಾಮವನ್ನು ಜಪ ಮಾಡಿದರೇ ಅದು ನಿನಗೆ ಕಾಮಧೇನುವಾಗಬಲ್ಲದು. ಈ ಸಂಕಲ್ಪದಿಂದ ನೀನು ಜಪ ಮಾಡು. ಆ ಮೇಲೆ ನೀನು ಗಿಳಿಯಂತೆಯೇ ಏಕೆ ಜಪ ಮಾಡಲೊಲ್ಲೆ. ನಿನ್ನ ಜಪದ ಹಿಂದೆ ಸಂಕಲ್ಪವಿದೆ, ಗಿಳಿಯ ಜಪದ ಹಿಂದೆ ಇರುವದಿಲ್ಲ. ಇದು ದೊಡ್ಡ ವ್ಯತ್ಯಾಸ. ಸಂಕಲ್ಪದೊಂದಿಗೆ ನೀನು ಪಾರಾಗಬಲ್ಲೆ. ಗಿಳಿಯು ಸಂಕಲ್ಪರಹಿತವಾದ್ದರಿಂದ ಅದು ದಣಿದು ಬಿಟ್ಟುಬಿಡುವದು. ಅಥವಾ ಅದು ತನ್ನ ಯಜಮಾನನ ಸಲುವಾಗಿ ಮಾಡುತ್ತಿದ್ದರೆ ತನ್ನ ನಿತ್ಯದ ಆಹಾರ ತೆಗೆದುಕೊಂಡು ಸುಮ್ಮನಾಗಿ ಬಿಡುವದು. ಈ ದೃಷ್ಟಿಯಿಂದ ನಿನಗೆ ಯಾವ ಪ್ರತೀಕದ್ದೂ ಆವಶ್ಯಕತೆಯಿಲ್ಲ. ಆದುದರಿಂದ ತುಲಸೀದಾಸನು ರಾಮನಿಗಿಂತ ರಾಮನಾಮದ ಮಹಿಮೆಯನ್ನು ಹೆಚ್ಚಾಗಿ ತೋರಿಸಿದ್ದಾನೆ. ಅಂದರೆ ರಾಮನಿಗೂ ಅರ್ಥಕ್ಕೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಸೂಚಿಸಿದ್ದಾನೆ. ಅರ್ಥವನ್ನು ಭಕ್ತನು ತನ್ನ ಭಕ್ತಿಗನುಸಾರವಾಗಿ ಹಿಂದಿನಿಂದ ಉಂಟುಮಾಡಿಕೊಳ್ಳುವನು. ಇದೇ ಇಂಥ ಪ್ರಕಾರದ ಜಪದ ವೈಶಿಷ್ಟ್ಯವಿದೆ. ಇಲ್ಲದಿದ್ದರೆ ಜಡದಲ್ಲಿ ಜಡವಾದ ಮನುಷ್ಯನಲ್ಲಿ ಅದರಿಂದ ಚೇತನೆ ಬರುತ್ತದೆಂದು ಹೇಳುವದು ಸಿದ್ಧವಾಗಲಾರದು. ಕರಾರು ಒಂದೇ ಇರುವದು. ಹೆಸರಿನ ಜಪವು ಯಾರಿಗಾದರೂ ತೋರಿಸಲಿಕ್ಕಾಗಲಿ ಅಥವಾ ಯಾರಿಗಾದರೂ ಮೋಸಗೊಳಿಸಲಿಕ್ಕಾಗಲಿ ಆಗಿರಬಾರದು. ನಾನು ತೋರಿಸಿದ ರೀತಿಯಲ್ಲಿ ಸಂಕಲ್ಪಪೂರ್ವಕವಾಗಿಯೂ ಶ್ರದ್ಧಾಪೂರ್ವಕವಾಗಿಯೂ ಜಪ ಮಾಡಬೇಕು. ಈ ಪ್ರಕಾರ ಜಪಮಾಡುತ್ತ ಯಾವನು ಬೇಸರಗೊಳ್ಳುವದಿಲ್ಲವೊ ಅವನಿಗೆ ಇದು ಕಲ್ಪತರುವಾಗುವದೆಂಬುದರಲ್ಲಿ ನನಗೆ ಸ್ವಲ್ಪೂ ಸಹ ಸಂದೇಹವಿಲ್ಲ. ಸಹನಶೀಲತೆಯಿದ್ದವರೆಲ್ಲರೂ ಇದನ್ನು ತಮ್ಮ ಸಲುವಾಗಿ ಸಿದ್ಧಮಾಡಿಕೊಳ್ಳಬಲ್ಲರು. ಮೊದಲಿಗೆ ಯಾರಿಗೆ ದಿನಗಳು, ಯಾರಿಗೆ ವರ್ಷಗಳ ವರೆಗೆ ಈ ಜಪಮಾಡುವಾಗ ಮನಸ್ಸು ಭ್ರಮಣಮಾಡುವದು, ಅಸ್ವಸ್ಥವಾಗುವದು, ನಿದ್ರೆಬರುವದು ಮತ್ತು ಇದಕ್ಕೂ ಹೆಚ್ಚು ದುಃಖದ ಪರಿಣಾಮಗಳಾಗುವವು. ಆದರೂ ಯಾವ ಮನುಷ್ಯನು

ಜಪಮಾಡುತ್ತಲೇ ಇರುವನೊ ಅವನಿಗೆ ಈ ಜಪವು ಫಲವನ್ನು ಕೊಟ್ಟೇತೀರುವದು. ಇದು ನಿಸ್ಸಂದೇಹವಾದ ಮಾತು. ರಾಟಿಯಂಥ ಸ್ಥೂಲ ವಸ್ತು ಸಹ ನಮಗೆ ತೊಂದರೆ ಕೊಟ್ಟ ಹೊರತು ಕೈಗೆ ಬರುವದಿಲ್ಲ, ಅಂದ ಮೇಲೆ ಇದಕ್ಕೂ ಕಠಿಣವಾದ ಅನ್ಯವಸ್ತುಗಳು ಇದಕ್ಕೂ ಹೆಚ್ಚು ಕಷ್ಟಕೊಟ್ಟೆ ಸಿದ್ಧಿಯಾಗುತ್ತವೆ. ಹೀಗಿದ್ದಾಗ ಉತ್ತಮ ವಸ್ತುವನ್ನು ಪಡೆಯಲಿಚ್ಛಿಸುವವನು ಸಹನಶೀಲತೆಯಿಂದ ದೀರ್ಘಕಾಲದ ವರೆಗೆ ತನಗೆ ಕೊಟ್ಟ ಔಷಧಿಯ ಸೇವನೆಯನ್ನು ಮಾಡದೆ ನಿರಾಶನಾಗಿ ಕುಳಿತರೆ ಅವನ ವಿಷಯಕ್ಕೆ ಏನು ಹೇಳಬೇಕು? ಇದರಲ್ಲಿ ನಿನ್ನ ಎಲ್ಲ ಪ್ರಶ್ನೆಗಳ ಉತ್ತರ ಬರುತ್ತವೆಯೆಂದು ನನಗನಿಸುತ್ತದೆ. ಯಾಕಂದರೆ ಈ ಪ್ರಕಾರ ಬರೆದ ಮೇಲೆ ನೀನು ಕೇಳುವಂತಹದು ಏನೂ ಉಳಿಯುವದಿಲ್ಲ. ಶ್ರದ್ಧೆಯು ಸ್ಥಿರವಾದರೆ ನಡೆಯುವಾಗ, ತಿರುಗಾಡುವಾಗ, ಉಣ್ಣುವಾಗ, ತಿನ್ನುವಾಗ, ಮಲಗುವಾಗ, ಏಳುವಾಗ ಇದನ್ನೇ ಜಪಿಸು ಮತ್ತು ಸೋಲಿನ ಮಾತನ್ನೇ ಎತ್ತಬೇಡ. ಇಡೀ ಜನ್ಮವೇ ಇದರಲ್ಲಿ ಕಳೆದು ಹೋಗಲೊಲ್ಲದೇಕೆ. 'ಇದನ್ನು ಮಾಡುತ್ತ ಹೋಗು, ಅಂದರೆ ನೀನು ಪ್ರತಿ ದಿನವೂ ಹೆಚ್ಚು ಶಾಂತಿಯನ್ನು ಅನುಭವಿಸುತ್ತ ಹೋಗುವಿ. ಸ್ವಲ್ಪೂ ಸಂದೇಹ ತಾಳಬೇಡ."

ಇವತ್ತು 'ಲೀಡರದ'ಲ್ಲಿ ೭ನೇ ಮೇದ 'ನ್ಯೂ ಸ್ಟೇಟ್ಸಮನ್' ದ ಲೇಖದ ಅವತರಣಿಕೆಯಿತ್ತು. ಅದನ್ನು ಓದಿ ತೋರಿಸಿದೆ. "ಉತ್ತಮ ಲೇಖ" ಎಂದು ಬಾಪೂ ಹೇಳುತ್ತಾರೆ.

ಬದಾಮಿಯು ಎರಡೂಕಾಲು ರೂಪಾಯಿಗೆ ಪೌಂಡಿನಂತೆ ಆಗಿದ್ದರೆ ಬಿಡುವ ನಿಶ್ಚಯ ಮಾಡಿದ್ದರು. ಆದರೆ ಅಲ್ಲಿ ೧೨ ಆಣೆ ಪೌಂಡಿನಂತೆ ಹೊರಟಿತು. "ಸರಿ, ನಾವು ಸಹ ತಿನ್ನೋಣ ಎಂದು ವಿಚಾರ ಮಾಡಿದ್ದೆವು." ಎಂದು ವಲ್ಲಭಭಾಯಿ ಯವರು ಹೇಳತೊಡಗಿದರು. "ನೀವೇನು ತಿನ್ನುತ್ತೀರಿ!" ಎಂದು ಬಾಪೂ ಅಂದರು. "ಹಾಲು ತುಪ್ಪ ಬಿಟ್ಟು ತಿನ್ನಲಿಕ್ಕೆ ಹತ್ತಬೇಕು." ಎಂದು ನಾನು ಹೇಳಿದೆ. ವಲ್ಲಭಭಾಯಿ: "ಇಲ್ಲ, ಆಡಿನ ಹಾಲು ತುಪ್ಪ ಬಿಡೋಣ. ಬಾಪೂ ಸಹ ಇದನ್ನೇ ಬಿಟ್ಟಿರುತ್ತಾರಲ್ಲ!"

ಮುಂಬೈಯಲ್ಲಿ ದಂಗೆಯು ಬಹುತರ ಶಾಂತವಾದ ಸುದ್ದಿ ಇದೆ — ಶಾಂತ ವಾಯಿತು ಅಂದರೆ ಶನಿವಾರ ಕೊಲೆ ಆಗಲಿಲ್ಲ. ಆದರೆ ೨೦-೨೫ ಜನರು ಗಾಯಾಳು ಗಳಾಗಿದ್ದಾರೆ . . . ಡಾಹ್ಯಾಭಾಯಿ ಮತ್ತು ಮಣಿಬೇನ

೨೧-೫'-೩೨ ಬಂದು ಹೋದರು. ಅವರಿಂದ . . . ಸರಕಾರ ಸಹ ಕಾಂಗ್ರೆಸದ ಹತ್ತಿರ ಹೋಗಿರಿ ಎಂದು ಹೇಳಿದ ಸುದ್ದಿ ಬಂದಿದೆ. ಅಂದರೆ ಬಾಪೂ ಅವರ ಭೀತಿಯು ಸರಿಯಾಗಿದ್ದಿತು.

ಇವತ್ತು ಸಾಯಂಕಾಲ ಈ ದಂಗೆಯಿಂದ ಉತ್ಪನ್ನವಾಗುವ ತಮ್ಮ ತಮ್ಮ

ವಿಚಾರಗಳನ್ನು ಒಬ್ಬರಿಗೊಬ್ಬರು ಹೇಳಿದರು. ವಲ್ಲಭಭಾಯಿ ಅಂದರು : "ಸರಳರೀತಿಯಿಂದ ಹೋರಾಡುವದಿಲ್ಲ. ಹಿಂದಿನಿಂದ ಚೂರಿ ಚುಚ್ಚಿ ಹೋಗುವದು, ಖಾದೀ ಧರಿಸಿ ಸುಳ್ಳುವೇಷ ಧಾರಣಮಾಡಿ ಚಾಳುಗಳಲ್ಲಿ ಹೊಕ್ಕು ಹೆಂಗಸರನ್ನು ಹೊಡೆದು ಹೋಗುವವರಿಗೆ ಏನು ಮಾಡಬೇಕು ? ನಾವು ಜನರಿಗೆ ಏನು ಸಲಹೆಯನ್ನು ಕೊಡಬೇಕು ? " ಬಾಪೂ : " ನಾನಂತೂ ನನ್ನ ಮಾರ್ಗವನ್ನು ತೋರಿಸಿದ್ದೇನೆ. ಹೋರಾಡಿರಿ ಇಲ್ಲವೆ ಸಾಯಿರಿ. " ವಲ್ಲಭಭಾಯಿ : " ಹೇಗೆ ಹೋರಾಡಬೇಕು ? ಇವರ ಹಾಗೆ ಯಾರೂ ಮಾಡುವದಿಲ್ಲ. " ಬಾಪೂ : " ಇದು ಸರಿಯಾಗಿರುವದಿಲ್ಲ. ಎಲ್ಲರೂ ಮಾಡುತ್ತಾರೆ. ಹೋದ ಯುದ್ಧದಲ್ಲಿ ಏನಾಗಿತ್ತು ? ಇದೂ ಸಹ ಯುದ್ಧವೇ ಎಂದು ತಿಳಿಯಿರಿ. ಈ ಜನರು ಯುದ್ಧವೆಂದು ತಿಳಿದೇ ಇಂಥ ಅತ್ಯಾಚಾರಗಳನ್ನು ಮಾಡುತ್ತಾರೆ. ಕಾನಪುರದಲ್ಲಿ ಹಿಂದುಗಳು ಸಹ ಮುಸಲ್ಮಾನರಂತೆಯೇ ಮಾಡಿದ್ದರಲ್ಲವೆ ? ಈ ಜನರ ಸಂಗಡ ಇವರಂತೆಯೇ ವರ್ತಿಸಬೇಕೆಂದು ಮುಂಜೆ ಸ್ಪಷ್ಟ ಹೇಳುತ್ತಾನೆ. ನಾನು ಅವನನ್ನು ಧೀರನೆಂದು ತಿಳಿಯುತ್ತೇನೆ. ನಾವು ಅವರ ಸಂಗಡ ಅವರ ರೀತಿಯಲ್ಲಿಯೇ ಹೋರಾಡಲಾರೆವೆಂದು ನಾನು ಹೇಳುತ್ತೇನೆ. ಯಾಕಂದರೆ ಇದು ನಮ್ಮ ರಕ್ತದಲ್ಲಿಲ್ಲ. ಆದುದರಿಂದ ಸಾಯುವದರಲ್ಲಿಯೇ ನಮ್ಮ ಮುಕ್ತಿಯಿದೆ. ನಾವು ಇವತ್ತು ಪಾಲಿಸುತ್ತಿರುವ ಅಹಿಂಸೆಯು ವ್ಯವಹಾರಿಕ ಅಹಿಂಸೆಯು. ಈ ಅಹಿಂಸೆಯಿಂದ ಮುಸಲ್ಮಾನರ ಮೇಲೆ ಪರಿಣಾಮವಾಗಲಿಕ್ಕಿಲ್ಲ. " ನಾನು ಮಾತಾಡಿದೆ : " ಎದುರೆದುರು ನಿಂತು ಎರಡು ಸಮೂಹಗಳು ಹೋರಾಡುತ್ತಿದ್ದರೆ ಒಂದು ವೇಳೆ ಒಂದು ಸಮೂಹಕ್ಕೆ ಸಾಯಲು ಹೇಳಿದರೆ ಅದು ತಿಳಿದೂ ತಿಳಿದೂ ಸಾಯಲು ಸಿದ್ಧವಾಗಬಹುದೆಂದು ಕಲ್ಪಿಸಬಹುದು. ಆದರೆ ಅಲ್ಲಿ ಒಂದು ಇಲ್ಲಿ ಒಂದು ಕೊಲೆ ಸುಲಿಗೆಗಳಾದರೆ, ಅದರಲ್ಲಿ ಏನು ಮಾಡುವದು ಸಾಧ್ಯ? " ಬಾಪೂ : " ಇದರಲ್ಲಿ ಸಹ ಇದೇ ಆಗಬಲ್ಲದು. ನಾವು ತಿಳಿದೂ ತಿಳಿದೂ ಹೀಗೆ ಆಗುತ್ತಿರುವ ಬಿಡಿ ಕೊಲೆಗಳ ಪ್ರತಿಕಾರ ಮಾಡಬಾರದು. ಇದನ್ನು ಇವತ್ತು ಯಾರೂ ಒಪ್ಪುವದಿಲ್ಲ, ಆದುದರಿಂದ ನನ್ನ ಸಲಹೆಯು ನಿರರ್ಥಕವಿದೆ. ನನ್ನಿಂದ ಏನೂ ಆಗದಿದ್ದರೆ ಅದರಿಂದ ಯಾವ ಆತಂಕವೂ ಬರುವದಿಲ್ಲ. ಆದರೆ ನನ್ನ ಅಹಿಂಸೆಯ ಸಲಹೆಯು ನಿಮ್ಮ ಮನಸ್ಸಿನಲ್ಲಿ ನಾಟದಿದ್ದರೆ ಅದು ನನ್ನ ನ್ಯೂನತೆಯು. ಈ ಅಹಿಂಸೆಯ ಪರಿಣಾಮವು ತನ್ನಷ್ಟಕ್ಕೆ ತಾನೇ ಆಗಲಿಕ್ಕೆ ಬೇಕು. ಆದು ಆಗದಿದ್ದರೆ ಅಷ್ಟು ಅಪೂರ್ಣವಿರುತ್ತದೆ. ಆದಾಗ್ಯೂ ಸಮಾಜವು ನನ್ನ ಕಡೆಗೆ ಸಲಹೆಗಾಗಿ ನೋಡುವದು ಮಹಾ ಕರುಣಾಜನಕ ಸ್ಥಿತಿ ಇರುತ್ತದೆ. ಇದು ಸಮಾಜದ ಸಲುವಾಗಿ ಹಾವು ಇಲಿಯಂಥ ಸ್ಥಿತಿಯಾಗಿದೆ. ನಾನು ಇಲ್ಲದಿದ್ದರೆ ಸಮಾಜಕ್ಕೆ ಏನಾದರೂ ಹೊಳೆಯಬಹುದು. ಮತ್ತು ನನ್ನ ಇರುವಿಕೆಯು ಸಮಾಜಕ್ಕೆ ಬಾಧಕವಿದೆ. ಇಂಥ ಸ್ಥಿತಿಯಲ್ಲಿ ನನಗೆ ಅನಶನವೇ ಏಕಮಾತ್ರ

ಉಪಾಯವಾಗಬಲ್ಲದು. ಆದರೆ ಹೀಗೆ ಮಾಡಬೇಕೆಂದು ನನಗೆ ಅನಿಸಲಿಲ್ಲ. ಹೊರಗೆ ಇದ್ದರೆ— ಮತ್ತು ಮುಂಬೈಯಲ್ಲಿಯೇ ಇದ್ದರೆ— ಒಂದು ವೇಳೆ ಇದನ್ನು ಪ್ರಾರಂಭ ಸಹ ಮಾಡಿ ಬಿಡಬಹುದಾಗಿತ್ತು." ನಾನು ಹೇಳಿದೆ: "ಅಂದರೆ ನಾವು ಒಳಗೆ ಇದ್ದದ್ದು ಒಂದು ಪ್ರಕಾರದಿಂದ ದೇವರ ಕೃಪೆಯೆ ಅಲ್ಲವೆ?" ಬಾಪೂ: "ಒಂದು ಪ್ರಕಾರದಿಂದ ಏಕೆ? ಅನೇಕ ಪ್ರಕಾರದಿಂದ. ನಾವು ಹೊರಗಿದ್ದರೆ ಏನು ಮಾಡಬಹುದಾಗಿತ್ತು? ಏನು ಮಾಡಲೂ ಶಕ್ಯವಿದ್ದಿಲ್ಲ." ನಾನು: "ಈಗ ಒಳಗೊಳಗಿನ ಯುದ್ಧವು ಬಹಿರಂಗ ಪ್ರಕಟವಾದರೆ ಆಶ್ಚರ್ಯವಿಲ್ಲ." ಬಾಪೂ: "ಇಲ್ಲ. ಕೋಹಾಟದಲ್ಲಿ ಆಗಿಯೇ ಆಗಿತ್ತಲ್ಲವೆ? ವಿಲಾಯತಿಯಲ್ಲಿಯಾದರೂ ಏನಿತ್ತು? ನಾನು ಮುಸಲ್ಮಾನರಿಂದ ಅಪಮಾನ ಸಹನಮಾಡಿದ್ದನ್ನು, ಕಹಿ ಸಂಗತಿಗಳನ್ನು ನುಂಗಿಕೊಂಡದ್ದನ್ನು ಯಾರಿಗೆ ಹೇಳಲಿ?"

ಇವತ್ತು ರೈಹನಾಬೇನಳಿಗೆ ಪತ್ರ ಬರೆಯುವಾಗ ಬರೆದರು: "ನಿಮ್ಮೆಲ್ಲರಿಗೂ ಅಬೂ ಹವಾದಿಂದ ಲಾಭವಾಗಿರಬಹುದಲ್ಲವೆ? ಅಬ್ಬಾಜಾನ ಓದುತ್ತಾರೆಯೆ? ಅಲ್ಲಿ ತೀರ ತರುಣರಾಗಿರಬೇಕು. ಮುಂಬೈಯ ಹುಚ್ಚುತನವು ನಮ್ಮ ವಿಲಾಸವನ್ನು ಪೂರಾ ಮರೆಸಿ ಬಿಟ್ಟಿದೆ. ಮನುಷ್ಯನು ಮನುಷ್ಯನ ಸಂಗಡ ಧರ್ಮದ ಹೆಸರಿನಲ್ಲಿ ಏಕೆ ಬಡಿದಾಡುತ್ತಾನೆಂಬುದು ನನಗೆ ತಿಳಿಯಲೊಲ್ಲದು. ಆದರೆ ನಾನು ಮನಸ್ಸನ್ನೂ ಲೇಖನಿಯನ್ನೂ ಬಿಗಿಹಿಡಿಯುತ್ತೇನೆ. ಈಗಂತೂ ಈ ವಿಷದ ಬಟ್ಟಲನ್ನು ಕುಡಿಯುತ್ತಿದ್ದೇನೆ."

ಇವತ್ತು ಬಾಪೂ ಇಡೀ ದಿವಸ ಪತ್ರ ಬರೆದರು. ಲೆಕ್ಕಣಿಕೆಯನ್ನು ಮಾಡಿ ಉರ್ದೂ ಕಾಪಿ ಬರೆಯಲು ಪ್ರಾರಂಭ ಮಾಡಿದರು ಮತ್ತು ಲೆಕ್ಕಣಿಕೆಯಿಂದಲೇ ಪತ್ರ ಬರೆದರು. ನನಗೆ ಕೇಳಿದರು: "'೧೭–'೧೮ನೇ ಇಸ್ವಿ ೨೨–೫–'೩೨ ಯಲ್ಲಿ ಲೆಕ್ಕಣಿಕೆಯನ್ನು ಉಪಯೋಗಿಸುತ್ತಿದ್ದೆವು. ಆದರ ಉಪಯೋಗವನ್ನು ಏಕೆ ನಿಲ್ಲಿಸಿದೆವೆಂಬುದು ಏನಾದರೂ ಗೊತ್ತಿದೆಯೆ?" ನಾನು ಸ್ವಲ್ಪ ಇತಿಹಾಸವನ್ನು ಹೇಳಿದೆ. ಟಾಕನ್ನು ಗಾಡಿಯೊಳಗಿಂದ ಒಗೆಯಲಾಗಿತ್ತು, ಜೇಮ್ಸ್‌ಫರ್ಡರಿಗೆ ಎಲ್ಲ ಪತ್ರಗಳನ್ನು ಲೆಕ್ಕಣಿಕೆಯಿಂದಲೇ ಬರೆದಿತ್ತು. ಮುಂತಾಗಿ—ಹಿಂದಿನಿಂದ ಪ್ರವಾಸವು ಹೆಚ್ಚಾಯಿತು— ಮತ್ತು ಯಾವಾಗಲೂ ಮಸಿಯಿಂದಲೇ ಬರೆಯುವದು ಅವಶ್ಯವಾದ್ದರಿಂದ ಪೆನ್ ಪ್ರಾರಂಭವಾಯಿತು. ಸತೀಶ ಬಾಬು ಬಾಪೂ ಅವರಿಗೆ ಮೊದಲನೇ ಪೆನ್ ಕೊಟ್ಟಿದ್ದರು. ಇದೇ ಪ್ರಕಾರ ಬಾಪೂ ತಿಥಿಯನ್ನು ಬರೆಯುತ್ತಿದ್ದರು. ತಾರೀಖು ಬರೆದರೆ ಸಿಟ್ಟಿಗೇಳುತ್ತಿದ್ದರು. ಈಗ ಅವರು ತಿಥಿ ಬರೆಯುವದನ್ನು ಬಿಟ್ಟಿದ್ದಾರೆ ಮತ್ತು ಹೇಳುತ್ತಾರೆ: "ತಾರೀಖನ್ನು ಇಡೀ ಜಗತ್ತೇ ಮಾನ್ಯ ಮಾಡುತ್ತದೆ. ಆದರ ಸಂಗಡ ದ್ವೇಷವೆಂತಹದು?"

ಸಹೋದರಿ ಹೇಮಪ್ರಭಾಳ ಮಗ ಅರುಣನು ಬಹಳ ಅಜಾರಿ ಇದ್ದಾನೆ. ವಿಶ್ರಾಂತಿ ತೆಗೆದುಕೊಳ್ಳುವದಿಲ್ಲ. ಇದನ್ನು ಕೇಳಿ ಅವನಿಗೆ ಪತ್ರ ಬರೆದರು :

"Mother tells me you are ailing and that you insist on reading and working. Will you not give yourself rest and the body a chance of recovery? Though death and life are the faces of the same coin and though we should die as cheerfully as we live, it is necessary until life is there to give the body its due. It is a charge given to us by God. And we have to take all reasonable care about it. Do write me if you can. God bless you."

"ನಿನ್ನ ಆರೋಗ್ಯ ಸರಿಯಾಗಿರುವದಿಲ್ಲ. ಆದರೂ ಸಹ ನೀನು ಓದುವ ಮತ್ತು ಕೆಲಸ ಮಾಡುವ ಆಗ್ರಹ ಹಿಡಿಯುತ್ತಿ ಎಂದು ನಿನ್ನ ತಾಯಿ ಹೇಳುತ್ತಾಳೆ. ನೀನು ವಿಶ್ರಾಂತಿ ತೆಗೆದುಕೊಳ್ಳುವದಿಲ್ಲವೆ? ವಿಶ್ರಾಂತಿ ತೆಗೆದುಕೊಂಡರೆ ಬೇಗನೇ ಗುಣವಾಗುವಿ. ಹಾಗೆ ನೋಡಿದರೆ ಜೀವನ ಮರಣಗಳು ಒಂದೇ ಮುದ್ರೆಯ ಎರಡು ಮಗ್ಗಲುಗಳು. ನಾವು ಎಷ್ಟು ಆನಂದದಿಂದ ಜೀವಿಸುತ್ತೇವೆಯೊ ಅಷ್ಟೇ ಆನಂದ ದಿಂದ ಸಾಯಲಿಕ್ಕೂ ಬೇಕು. ಆದಾಗ್ಯೂ ಜೀವವಿರುವವರೆಗೆ ಶರೀರಕ್ಕೆ ಅದರ ಋಣವನ್ನು ತೀರಿಸಲಿಕ್ಕೇಬೇಕು. ಇದು ನಮಗೆ ದೇವರು ಕೊಟ್ಟ ಇಡುಗಂಟಾಗಿದೆ. ನಾವು ಅದನ್ನು ಯೋಗ್ಯ ರೀತಿಯಿಂದ ಜೋಪಾನ ಮಾಡಿ ಇಡಲಿಕ್ಕೇಬೇಕು. ನಿನಗೆ ಬರೆಯಲು ಸಾಧ್ಯವಾದರೆ ಬರೆ. ದೇವರು ನಿನಗೆ ಕಲ್ಯಾಣ ಮಾಡಲಿ"

ಮಿಸ್ ಫೇರಿಂಗಳಿಗೆ ಬರೆದ ಪತ್ರದೊಳಗಿಂದ:

"I understand all you are doing, Only you must not work yourself into anxiety. If we simply make ourselves instruments of His will, we should never have an anxious moment.

"Yes, there is no calm without a storm. There is no peace without strife. Strife is inherent in peace. Life is a perpetual struggle against strife whether within or without. Hence the necessity of realizing peace in the midst of strife."

"ನೀನು ಮಾಡುತ್ತಿರುವದೆಲ್ಲ ನನಗೆ ತಿಳಿಯುತ್ತದೆ. ಆದರೆ ನೀನು ಬಹಳ ಚಿಂತೆಯನ್ನು ಮಾಡಬಾರದು. ನಾವು ನಮ್ಮನ್ನು ದೇವರಿಚ್ಛೆಗೆ ಸ್ವಾಧೀನ ಪಡಿಸಿದರೆ ನಮಗೆ ಎಂದೂ ಚಿಂತೆಯನ್ನು ಮಾಡಬೇಕಾಗುವದಿಲ್ಲ.

"ಬಿರುಗಾಳಿಯಿಲ್ಲದೆ ಶಾಂತಿಯಿಲ್ಲ. ಯುದ್ಧವಿಲ್ಲದೆ ಸಂಧಿಯಿಲ್ಲ. ಶಾಂತಿ ಯಲ್ಲಿ ಸಂಗ್ರಾಮವು ಅಡಕವಾಗಿದೆ. ಅದರ ಹೊರತು ನಾವು ಶಾಂತಿಯನ್ನು ಅರಿಯ

ಲಾರೆವು. ಜೀವನವು ಒಳಗಿನ ಅಥವಾ ಹೊರಗಿನ ಅಶಾಂತಿಯ ವಿರುದ್ಧ ಅವಿರತ ಸಂಗ್ರಾಮವಿದೆ. ಆದುದರಿಂದ ಸಂಗ್ರಾಮದ ಮಧ್ಯದಲ್ಲಿದ್ದಾಗ್ಯೂ ಶಾಂತಿಯನ್ನನುಭವಿಸುವದು ಅವಶ್ಯವಿದೆ."

ಇವಳ ಎರಡು ಸಣ್ಣ ಸಣ್ಣ ಹುಡಿಗೆಯರಿಗೆ ಪತ್ರ ಬರೆದರು :

"You have sent me a sweet letter. I see you are making friends with birds. We have made friends with a cat and her kittens. I call her sister. It is delightful to watch her love for her young ones. She teaches them all sorts of things by simply doing them. God bless you.

With blessing, Bapu."

"ನೀವು ನನಗೆ ಅಕ್ಕರೆಯ ಪತ್ರವನ್ನು ಬರೆದಿರುತ್ತೀರಿ. ನೀವು ಪಕ್ಷಿಗಳೊಂದಿಗೆ ಗೆಳೆತನ ಮಾಡುತ್ತಿರುವಿರೆಂದು ಗೊತ್ತಾಗುತ್ತದೆ. ನಾವು ಇಲ್ಲಿ ಒಂದು ಬೆಕ್ಕು ಮತ್ತು ಅದರ ಮರಿಗಳ ಸಂಗಡ ಗೆಳೆತನ ಮಾಡಿದ್ದೇವೆ. ನಾನು ಬೆಕ್ಕಿಗೆ ತಂಗಿ ಎಂದು ಕರೆಯುತ್ತೇನೆ. ಬೆಕ್ಕು ತನ್ನ ಮಕ್ಕಳ ಮೇಲೆ ಪ್ರೇಮ ಮಾಡುವದನ್ನು ನೋಡಿ ಆನಂದವಾಗುತ್ತದೆ. ಅದು ಎಲ್ಲ ಮಾತುಗಳನ್ನೂ ಸ್ವತಃ ಮಾಡಿ ತನ್ನ ಮಕ್ಕಳಿಗೆ ಕಲಿಸುತ್ತದೆ. ದೇವರು ನಿಮಗೆ ಕಲ್ಯಾಣ ಮಾಡಲಿ.

ಬಾಪೂನ ಆಶೀರ್ವಾದ"

ಡಾ. ರಾಯರಿಗೆ ಬರೆದ ಪತ್ರದೊಳಗಿಂದ :

"The work you are doing is difficult, but it is the only way to help our people. There is no substitute for Charakha for Universal relief.

"It is nonsense for you to talk of old age so long as you outrun young men in the race for service and in the midst of anxious times fill rooms with your laughter and inpsire youth with hope when they are on the brink of despair."

"ನೀವು ಮಾಡುತ್ತಿರುವ ಕೆಲಸವು ಕಠಿಣವಿದೆ. ಆದರೆ ನಮ್ಮ ಜನರಿಗೆ ಸಹಾಯ ಮಾಡುವ ಮಾರ್ಗವು ಇದೊಂದೇ ಆಗಿದೆ. ಸಾರ್ವತ್ರಿಕ ಪರಿಹಾರ ಸಲ್ಲಿಸುವದಕ್ಕೆ ರಾಟೆಯಂಥ ಬೇರೆ ವಸ್ತುವಿಲ್ಲ.

"ನೀವು ಎಲ್ಲಿಯವರೆಗೆ ಸೇವೆ ಮಾಡುವ ಮೇಲಾಟದಲ್ಲಿ ತರುಣರನ್ನು ಹಿಮ್ಮೆಟ್ಟಿಸುತ್ತೀರಿ, ಕಷ್ಟದ ಕಾಲದಲ್ಲಿ ಸಹ ನೀವು ಕೋಣೆಯನ್ನು ನಿಮ್ಮ ನಗೆಯಿಂದ ತುಂಬಿ ತುಳುಕಿಸುತ್ತೀರಿ ಮತ್ತು ತರುಣರು ನಿರಾಶೆಯ ಕೊನೆಯ ಮೆಟ್ಟಲು ಮುಟ್ಟಿದಾಗ ಅವರಲ್ಲಿ ಆಶಾಕಿರಣಗಳನ್ನು ತುಂಬುತ್ತೀರಿ ಅಲ್ಲಿಯವರೆಗೆ ನೀವು ಮುಪ್ಪು ಬಂತೆಂದು ಹೇಳಿದರೆ ಯಾರು ಒಪ್ಪುವರು ?"

ಬಾಪೂ ಉರ್ದು ಪುಸ್ತಕದಲ್ಲಿ ದಿನಾಲು ಹೊಸ ಹೊಸ ಶೋಧಗಳನ್ನು ಮಾಡುತ್ತ ಹೋಗುತ್ತಾರೆ. ಅದರಲ್ಲಿ ಮಹಮ್ಮದ ಬೆಗಡಾನ ಪಾಠವಿದೆ. ಅವನ ಉಪಹಾರದ ವರ್ಣನೆಯನ್ನು ಪರಾಕ್ರಮದ ವರ್ಣನೆ ಕೊಡುವಂತೆ ಕೊಡಲಾಗಿದೆ.

೨೩–೫–'೩೨ ೧೫೦ ಬಾಳೇಹಣ್ಣು, ೧ ಥಾಲಿ ಜೇನುತುಪ್ಪ, ೧ ಥಾಲಿ ತುಪ್ಪ ಇತ್ಯಾದಿ ಇದಕ್ಕೆ ವಿರುದ್ಧವಾಗಿ ಶಿವಾಜಿಯ ಪಾಠದಲ್ಲಿ ಆತನ ವಿಷಯ ಬರೆಯುವಾಗ ಸ್ವಲ್ಪ ಸಹ ವಿವೇಕವಾಗಲಿ ವಿನಯವಾಗಲಿ ಇರುವದಿಲ್ಲ. ಅವನು ಅಶಿಕ್ಷಿತ, ಹಳ್ಳಿಯ ಕೆಂಚ, ಅಸಂಸ್ಕೃತ, ಸುಲಿಗೆಗಾರ ಮುಂತಾಗಿ ಇತ್ತು.

ಇವತ್ತು ಆಶ್ರಮದ ಪತ್ರಗಳ ಸಂಖ್ಯೆ ಕಡಿಮೆ ಇತ್ತು—೩೯. ಆದರೂ ಪತ್ರಗಳು ಸಾಕಷ್ಟು ಉದ್ದವಾಗಿದ್ದವು. ಹೊರಗಿನ ಪತ್ರಗಳೂ ಉದ್ದವಾಗಿದ್ದವು. ಎಷ್ಟೋ ಸಾರೆ ಗೊತ್ತಾಗದೆ ಬಾಪೂ ಎದುರಿಗಿನ ಮನುಷ್ಯನು ಹೌಹಾರುವಂತೆ ಕಠೋರ ಪತ್ರಗಳನ್ನು ಬರೆಯುತ್ತಾರೆ. ಇಂಥ ಪತ್ರವನ್ನು ಹನುಮಾನ ಪ್ರಸಾದ ಪೋದ್ದಾರರಿಗೆ ಬರೆಯಿಸಿದರು. ನಿಮ್ಮ ಜೀವನದಲ್ಲಿ ದೇವರ ಮೇಲೆ ಅತ್ಯಂತ ಶ್ರದ್ಧೆ ಬೆಳೆದಂಥ ಪ್ರಸಂಗಗಳು ಯಾವು ಯಾವವು ? ಎಂದು ಅವರು ಪ್ರಶ್ನೆ ಕೇಳಿದ್ದರು. ಬಾಪೂ ಅವರಿಗೆ ಬರೆದರು : " ಈಶ್ವರನ ಮೇಲೆ ನನ್ನ ಶ್ರದ್ಧೆಯು ವಿಶೇಷ ಹೆಚ್ಚಾದ ಸಮಯವು ನನಗೆ ನೆನಪಿಲ್ಲ. ಒಂದು ಕಾಲಕ್ಕೆ ಶ್ರದ್ಧೆಯಿದ್ದಿಲ್ಲ. ಅದು ಧರ್ಮವಿಚಾರ ಹಾಗು ಚಿಂತನದಿಂದ ಬರತೊಡಗಿತು ಮತ್ತು ಅದು ಹೆಚ್ಚುತ್ತಲೇ ಹೋಯಿತು. ದೇವರ ನಿವಾಸವು ಹೃದಯದಲ್ಲಿದೆ ಎಂಬ ಜ್ಞಾನವು ವೃದ್ಧಿಯಾದಂತೆ ಶ್ರದ್ಧೆಯು ಬೆಳೆಯುತ್ತ ಹೋಯಿತು. ಆದರೆ ಈ ಪ್ರಶ್ನೆಯನ್ನು ನೀವು ಏತಕ್ಕಾಗಿ ಕೇಳುತ್ತೀರಿ ? ಭವಿಷ್ಯದಲ್ಲಿ ' ಕಲ್ಯಾಣ 'ದಲ್ಲಿ ಪ್ರಸಿದ್ಧಿಸುವದಕ್ಕಾಗಿಯೇನು ? ಹಾಗಿದ್ದರೆ ಇದು ನಿರರ್ಥಕವು. ನೀವು ಸ್ವಂತದ ಸಲುವಾಗಿ ಕೇಳುತ್ತಿದ್ದರೆ, ಎರಡನೆಯವರ ಅನುಭವವು ಉಪಯೋಗ ಬೀಳುವದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ದೇವರ ವಿಷಯಕ್ಕೆ ಶ್ರದ್ಧೆಯನ್ನಿಟ್ಟು ಒಂದೇ ಸವನೆ ಪ್ರಯತ್ನ ಮಾಡುವದರಿಂದ ಶ್ರದ್ಧೆಯು ಬೆಳೆಯುತ್ತದೆ."

•

ಇವತ್ತು ಸಹೋದರಿಯರು ಮತ್ತು ಕ್ಯಾಂಪದಿಂದ ಸಹೋದರರಿಂದ ಉದ್ದವಾದ ಪತ್ರ ಬಂದವು. ಆಶ್ರಮದ ಟಪಾಲು ಬರಲಿಲ್ಲ. ಪಾಪ, ಎಷ್ಟೋ ಅಪರಿಚಿತ ಹೆಣ್ಣು ಮಕ್ಕಳು ಭಾವನಾವಶರಾಗಿ ಬರೆಯುತ್ತಾರೆ. ಇವರ ಪತ್ರಗಳಲ್ಲಿ

೨೪–೫–'೩೨ ಸರಳವೂ ಅಕೃತ್ರಿಮವೂ ಆದ ಶ್ರದ್ಧೆಯು ಹೊರಚಿಮ್ಮುತ್ತಿದೆ. ಒಬ್ಬ ಸಹೋದರಿಯು ತನ್ನ ಪತಿಯು ಸಹ ಹೋರಾಟದಲ್ಲಿದ್ದಾರೆ ಎಂದು ಬರೆಯುತ್ತಾಳೆ. ಮತ್ತೊಬ್ಬಳು ತನ್ನ ಇಬ್ಬರು ಸಹೋದರರು ಸಹ ಜೇಲಿನಲ್ಲಿದ್ದಾರೆ ಎಂದೂ ಮೂರನೆಯವಳು ನಾನೂ ನನ್ನ ಪತಿಯೂ ಇಬ್ಬರೂ ಈ ಕೆಲಸದಲ್ಲಿ ಬಿದ್ದಿರುವದರಿಂದ ನಮ್ಮನ್ನು ಮನೆಯಿಂದ ಹೊರಗೆ ಹಾಕಿದ್ದಾರೆ

ಎಂದು. ಬಾಪೂ ಇವರಿಗೆ ಉದ್ದ ಪತ್ರ ಬರೆದರು. ಒಬ್ಬ ಹುಡುಗಿಯು ಕೇಳಿದಳು : ' ಬಾಪೂ, ನೀವು ವರ್ಣಾಂತರ ಲಗ್ನವನ್ನು ಒಪ್ಪುತ್ತೀರಿ, ಆದರೆ ಎರಡನೇ ಧರ್ಮದವರ ಸಂಗಡ ಮಾಡುವ ವಿವಾಹದ ಬಗ್ಗೆ ನಿಮ್ಮ ಮತವೇನು ? ' ಬಾಪೂ ಬರೆದರು : " ಮಕ್ಕಳು ದೊಡ್ಡವರಾದ ಮೇಲೆಯೇ ಅವರ ವಿವಾಹವಾಗಲಿಕ್ಕೆ ಬೇಕು. ಒಬ್ಬರನ್ನೊಬ್ಬರು ಒಪ್ಪಿಕೊಳ್ಳಬೇಕು. ಮತ್ತು ತಾಯಿತಂದೆಗಳ ಸಮ್ಮತಿಯಿರ ಬೇಕು. ಇಂಥ ವಿವಾಹಗಳಾಗಬೇಕು. ಅಂದರೆ ಎಲ್ಲಿಯೂ ಕೃತ್ರಿಮ ಪ್ರತಿಬಂಧ ಬರುವದಿಲ್ಲ. ಆದರೆ ಯಾರಾದರೂ ನನ್ನ ಒಪ್ಪಿಗೆಯನ್ನು ಕೇಳಿದರೆ ವಿಧರ್ಮೀಯರ ನಡುವೆ ವಿವಾಹವಾಗುವದು ಗಂಡಾಂತರದ ಪ್ರಯೋಗವೆಂದು ತಿಳಿಯುತ್ತೇನೆ. ಯಾಕಂದರೆ ಇಬ್ಬರೂ ತಮ್ಮ ತಮ್ಮ ಧರ್ಮದಲ್ಲಿ ವಿಶ್ವಾಸವುಳ್ಳವರೂ ಮತ್ತು ಆದ ರಂತೆ ನಡೆಯುವವರೂ ಇದ್ದರೆ ಇಬ್ಬರ ನಡುವೆ ತೊಂದರೆಗಳು ಉಂಟಾಗುವ ಸಂಭವ ವಿರುತ್ತದೆ. ಈ ದೃಷ್ಟಿಯಿಂದ ನಾನು ಆ ಭಾಟಿಯಾ ಹುಡುಗಿಯ ಲಗ್ನವು ಗಂಡಾಂತರ ದ್ದೆಂದು ತಿಳಿಯುವೆನು. ಅದು ಧರ್ಮವಿರುದ್ಧವೆಂದು ತಿಳಿಯುವದಿಲ್ಲ. ಇಬ್ಬರ ನಡುವಿನ ಪ್ರೇಮ ನಿರ್ಮಲವಾಗಿರಬೇಕು. ಭಾಟಿಯಾ ಹುಡಿಗೆಗೆ ತನ್ನ ಧರ್ಮ ಪಾಲಿಸಲು ಸಾಧ್ಯವಾಗಬೇಕು. ಹಾಗೆಯೇ ಮುಸಲ್ಮಾನ ಹುಡುಗನು ತನ್ನ ಧರ್ಮ ವನ್ನು. ಇದಲ್ಲದೆ ಖಾದ್ಯಾಖಾದ್ಯ ವಿಷಯದಲ್ಲಿ ಇಬ್ಬರ ವಿಚಾರಗಳೂ ಕೂಡುತ್ತಿ ದ್ದರೆ ನನ್ನ ಮನಸ್ಸು ಇಂಥ ವಿವಾಹವನ್ನು ವಿರೋಧಿಸಲಾರದು. ಉಪಜಾತಿಗಳು ನಾಶವಾಗಬೇಕೆಂದು ಇಚ್ಛಿಸುತ್ತಿರುವದರಿಂದ ನಾನು ಜಾತಿಯ ಹೊರಗಿನ ಲಗ್ನವನ್ನು ಒಪ್ಪುವಂತೆ ಧರ್ಮದ ಹೊರಗಿನ ವಿವಾಹವನ್ನು ಒಪ್ಪುವದಿಲ್ಲ. ಅದನ್ನು ವಿರೋಧಿ ಸುವದಕ್ಕೆ ಆಂದೋಲನವನ್ನೂ ಹೂಡುವದಿಲ್ಲ. ಈ ಎಲ್ಲ ಮಾತುಗಳು ಎಲ್ಲ ಸ್ತ್ರೀ ಪುರುಷರು ತಮ್ಮ ತಮ್ಮ ಸಲುವಾಗಿ ವಿಚಾರಮಾಡುವಂಥವಿರುತ್ತವೆ. ಇವರಲ್ಲಿ ಒಂದೇ ನಿಯಮ ಅನ್ವಯಿಸಲಾರದು."

. . . . ಗೆ ಬರೆಯುವಾಗ ಬರೆದರು : " ಹರಿಜನ ಸಮಿತಿಯ ಠರಾವು ನನಗೆ ಭಯಾನಕವೆನಿಸಿತು. ಇಲ್ಲಿ ಕುಳಿತು ನಾನು ಏನು ತೋರಿಸಲಿ ? ಆದರೆ ಸಮಿತಿಯ ಸದಸ್ಯನು ಜೀವಂತನಿರಲಿಕ್ಕೆ ಒಂದಾದರೂ ಪಾಠಶಾಲೆ ಬಂದಾಗಬೇಕೆ ? ತನ್ನನ್ನು ಮಾರಬೇಕು, ತನ್ನ ಮನೆಮಾರು ಮಾರಬೇಕು ಮತ್ತು ಶಾಲೆಯನ್ನು ನಡೆಯಿಸಬೇಕು ಅಂದರೆ ಅದರ ಹೆಸರು ಸಮಿತಿ. ಆದುದರಿಂದ ನಿರಾಶರಾಗುವದರ ಬದಲು ಆಶಾವಾದಿಗಳಾಗಿರಿ. ನಿಮ್ಮನ್ನು ನೀವು ಮಾರಲು ಸಿದ್ಧರಾದಾಗ ಸಮಿತಿಗೆ ಬೇಕಾದ ವೆಚ್ಚವನ್ನು ಕೊಟ್ಟು ನಿಮ್ಮನ್ನು ಮಾರಲು ತೆಗೆದುಕೊಳ್ಳುವರು. ಈ ವಿಷಯದಲ್ಲಿ ನಿಮಗೆ ಸಂಶಯವಿರಬಹುದು. ನನಗಂತೂ ಎಳ್ಳಷ್ಟು ಇಲ್ಲ. ಭೋಜಾ ಭಗತನ ಕವಿತೆ ನೆನಪಿದೆಯಲ್ಲವೆ : ' भक्ति शीश तणु साटु आगळ वसमी छे वाट ' " *

---

* ಭಕ್ತಿಯ ಬೆಲೆ ಪ್ರಾಣ; ಮುಂದಿನ ಮಾರ್ಗ ಕಠಿಣ.

ಲಂಡನ್ನದಲ್ಲಿ ಎಷ್ಟೋ ಪತ್ರಗಳ ಮೇಲೆ 'ಗಾಂಧೀ, ಲಂಡನ್' ಇಷ್ಟೇ ವಿಳಾಸವಿದ್ದರೂ ಅವು ಬಂದು ಮುಟ್ಟುತ್ತಿದ್ದವು. ಒಂದರ ಮೇಲೆ ವೃತ್ತಪತ್ರದೊಳಗಿಂದ ಕತ್ತರಿಸಿದ ಬಾಪೂರ ಚಿತ್ರವನ್ನು ಅಂಟಿಸಿ ಲಂಡನ್ ಬರೆದು ತಿಕೀಟನ್ನು ಹಚ್ಚಲಾಗಿತ್ತು. ಅದೂ ಸಹ ಮುಟ್ಟಿತು. ಪೋಸ್ಟಖಾತೆಯಲ್ಲಿಯಷ್ಟು ಕುಶಲನೂ ಸಹಾನುಭೂತಿಯುಳ್ಳವನೂ ಆದ ಸೇವಕನು ಬೇರೆ ಯಾವನು ಇರುವನು? ಇಲ್ಲಿಂದ ಬಾಪೂ ಒಂದು ಪತ್ರವನ್ನು ಆಸ್ಟ್ರಿಯಾಕ್ಕೆ ಬರೆದಿದ್ದರು. ಅದನ್ನು ಯಾರಿಗೆ ಬರೆದಿದ್ದರೊ ಅವರಿಗೆ ಸಿಗಲಿಲ್ಲ. ಆದುದರಿಂದ ಅದು ತಿರುಗಿ ಬಂದಿದೆ. ಈ ಪತ್ರದಲ್ಲಿ ಸಹಿಯನ್ನು ಮಾತ್ರ "ಬಾಪೂ" ಎಂದು ಮಾಡಲಾಗಿತ್ತು. ಇಲ್ಲಿಯ ವೃತ್ತಪತ್ರಗಳ ಆಫೀಸಿನವರು ತಿರುಗಿ ಕಳಿಸುವಾಗ ಪಾಕೀಟಿನ ಮೇಲೆ ವಿಳಾಸ ಈ ರೀತಿ ಬರೆದರು: ಶ್ರೀ ಬಾಪೂ ಅಂದರೆ ಮಹಾತ್ಮಾ ಗಾಂಧೀ, ಯರವಡಾ ಸೆಂಟ್ರಲ್ ಜೇಲ. ಅಲ್ಲಿ ಸಹ ಬಾಪೂರನ್ನು ಗುರುತಿಸುವವರೂ ಮತ್ತು ಅವರ ಭಕ್ತರೂ ಇದ್ದಿರಬಹುದು.

ನಮ್ಮ ಪತ್ರಗಳು ಸರಿಯಾಗಿ ಮುಟ್ಟುವದಿಲ್ಲ. ಈ ವಿಷಯಕ್ಕೆ ತಕರಾರು ಮಾಡುವ ಪತ್ರವನ್ನು ಬರೆಯಲಾಗಿತ್ತು. ಗವ್ಹರ್ನರ-ಇನ್-ಕೌನ್ಸಿಲ್‌ರಿಂದ ಅದರ ಉತ್ತರವು ಈ ಪ್ರಕಾರ ಬಂತು: ತಪಾಸಣೆ ನಡೆದಿದೆ. ಮತ್ತು

೨೫-೫-'೩೨ ಪೋಲೀಸ ಕಮಿಶನರರಿಗೆ ಚವಕಶಿ ಮಾಡಲಿಕ್ಕೆ ಹೇಳಿದೆ. ಹರಿಲಾಲನ ಸಂಬಂಧಿ ಬಾಪೂ ಬರೆದ ಪತ್ರವು ಮೂರುವಾರಗಳಾದರೂ (ನಾರಾಯಣದಾಸರಿಗೆ) ಮುಟ್ಟಿದ್ದಿಲ್ಲ. ಅದು ಮುಟ್ಟದೆಯೆಂಬ ಸುದ್ದಿ ಇದರ ಸಂಗಡವೇ ಬಂತು!

ಛಗನಲಾಲ ಜೋಶಿಯವರಿಗೆ ಇಂದು ಉದ್ದ ಪತ್ರ ಬರೆಯಿಸಿದರು. ಅವರ ಪತ್ರದಲ್ಲಿ ಬಾಪೂರ 'ಅದ್ಭುತ ತ್ಯಾಗ' ಈ ಲೇಖದ ಅನರ್ಥವಿತ್ತು. ಆದರಲ್ಲಿ ನೀರನ್ನು ಕುಡಿಯದ ಸಿಪಾಯಿಗಳು ಅದ್ಭುತ ತ್ಯಾಗ ತೋರಿಸಿದರು ಎಂದಿಷ್ಟೇ ಹೇಳುವದಿತ್ತು. ಆದರೆ ಛಗನಲಾಲರು ಬುದ್ಧಿಯ ಪ್ರಯೋಗಮಾಡಿ ಕೇಳಿದರು: "ನೀರು ಕುಡಿಸುವವನು ತನ್ನ ಧರ್ಮದಿಂದ ಚ್ಯುತನಾಗಲಿಲ್ಲವೆ? ಇವನು ಎಲ್ಲರಿಗೂ ನೀರನ್ನು ಕುಡಿಸಬಹುದಿತ್ತು." ಬಾಪೂ ಬರೆದರು: "ಇಲ್ಲಿ ನೀರನ್ನು ತೆಗೆದುಕೊಂಡು ಹೋಗುವವನ ಸ್ತುತಿ ಅಥವಾ ನಿಂದೆಯ ಪ್ರಶ್ನೆಯಿರುವದಿಲ್ಲ. ಆದರೆ ವಿಚಾರಮಾಡಿ ನೋಡಿದರೆ ನೀರನ್ನು ಕುಡಿಸುವ ಮಾತು ನೀರನ್ನು ತೆಗೆದುಕೊಂಡು ಹೋಗುವವನ ಕೈಯಲ್ಲಿಯೇ ಇದ್ದಿಲ್ಲವೆಂಬುದು ಗೊತ್ತಾಗುವದು. ನೀರು ಮೂವರಿಗೂ ಸಾಕಾಗುವಷ್ಟು ಇತ್ತೊ ಇಲ್ಲವೊ ಎಂಬ ಪ್ರಶ್ನೆಯೂ ಮುಖ್ಯವಲ್ಲ. ಆದರೆ ಮೊದಲಿನವರಿಬ್ಬರು ಸಿಪಾಯಿಗಳ ಆರ್ತನಾದ ಕೇಳಿ ಆ ದುಃಖಪೀಡಿತರಿಗೆ ನೀರು ದೊರೆತ ಹೊರತು

ಸ್ವತಃ ನೀರು ಕುಡಿಯಲಿಕ್ಕೆ ನಿರಾಕರಿಸಿದರು. ಇಂಥ ಸ್ಥಿತಿಯಲ್ಲಿ ನೀರನ್ನು ತೆಗೆದುಕೊಂಡು ಹೋಗುವವನು ಸ್ವಧರ್ಮ ಬಿಡುವ ಪ್ರಶ್ನೆಯೇ ಇದ್ದಿಲ್ಲ. ಈ ದೃಶ್ಯದ ಚಿತ್ರವು ನಿಮ್ಮ ಮುಂದೆ ಬರಲಿಲ್ಲವೆಂದು ತೋರುತ್ತದೆ. ನೀರಡಿಕೆಯು ಮನುಷ್ಯನು ಎರಡನೆಯವರ ವಿಚಾರ ಮಾಡದಂಥ ವಸ್ತುವಿದೆ. ಮತ್ತು ನೀರು ಸಿಕ್ಕರೆ ಸ್ವತಃ ಕುಡಿದುಬಿಡುತ್ತಾನೆ. ಈ ಜನರಂತೂ ಸಾವಿನ ಬಾಯಲ್ಲಿ ಸಿಕ್ಕಿದ್ದರು. ಆದರೆ ಇಂಥ ಸ್ಥಿತಿಯಲ್ಲಿ ಸಹ ಅವರು ಉದಾರತೆಯನ್ನು ಬಿಡಲಿಲ್ಲ. ಈ ಪ್ರಕಾರ ಅಂತ್ಯಕಾಲದವರೆಗೆ ಬ್ರಾಹ್ಮೀಸ್ಥಿತಿಯನ್ನು ಪಾಲಿಸಿದರು. ನೀರನ್ನು ತೆಗೆದುಕೊಂಡು ಹೋದವನು ತೀರ ನಿರುಪಾಯನಾಗಿದ್ದನು. ಹಾಗು ಪ್ರಾಣೋತ್ಕ್ರಮಣವಾಗುವದಕ್ಕೆ ಕೆಲವೇ ನಿಮಿಷಗಳು ಉಳಿದಿದ್ದಾಗ ಗಾಯಾಳುಗಳ ಸಂಗಡ ಎಲ್ಲಿಯಾದರೂ ಚರ್ಚೆ ಮಾಡುವದು ಸಾಧ್ಯವೆ ? ಈ ಎಲ್ಲ ಮಾತುಗಳನ್ನು ಮತ್ತೊಮ್ಮೆ ವಿಚಾರ ಮಾಡಿ ನೋಡಬೇಕು. ಅಂದರೆ ಈ ಐತಿಹಾಸಿಕ ಘಟನೆಯು ಭವ್ಯವೂ ಸಂಪೂರ್ಣವೂ ಆದ ತ್ಯಾಗದ ದೃಷ್ಟಾಂತವೆಂದು ಗೊತ್ತಾಗುವದು. ಇದರಲ್ಲಿ ಕಾರಣನಾದ ನೀರು ತೆಗೆದುಕೊಂಡು ಹೋಗುವವನ ಟೀಕೆ ಮಾಡುವದಕ್ಕೆ ಸ್ವಲ್ಪವೂ ಕಾರಣವುಳಿಯುವದಿಲ್ಲ. ಬಹಳ ಮಾಡಿ ಇತಿಹಾಸದಲ್ಲಿ ಇಂಥ ಸಂಪೂರ್ಣ ದೃಷ್ಟಾಂತಗಳು ಸಿಗುವದಿಲ್ಲ. ಸ್ವಲ್ಪಿಲ್ಲ ಸ್ವಲ್ಪ ನ್ಯೂನತೆಯು ಎಲ್ಲಿಯಾದರೂ ಉಳಿದೇ ಉಳಿಯುತ್ತದೆ. ಆದರೆ ನನ್ನ ದೃಷ್ಟಿಯಿಂದ ಇದರಲ್ಲಿ ಯಾವ ನ್ಯೂನತೆಯೂ ಕಂಡುಬರುವದಿಲ್ಲ "

ದರಬಾರೀ ಸಾಧುವಿಗೆ 'ಕಸ್ತೀಸದರಾ' ಗಳಲ್ಲಿ ಯಾವ ಅರ್ಥವೂ ಕಾಣದ್ದರಿಂದ ಅವನು ಅವುಗಳನ್ನು ಬಿಟ್ಟುಬಿಟ್ಟಿದ್ದಾನೆ. ಆದರಿಂದ ಅವನ ಆಪ್ತೇಷ್ಟರಿಗೆ ದುಃಖವಾಗುತ್ತದೆ. ಅವರಿಗೆ ಬಾಪೂ ಬರೆದರು : "ಕಸ್ತೀಸದರಾ ( ಪಾರಸೀ ಜನರ ಒಂದು ಪೋಷಾಕು. ) ಬಿಡುವ ಯಾವ ಆವಶ್ಯಕತೆಯಿದ್ದಿಲ್ಲವೆಂದು ದರಬಾರಿಯವರಿಗೆ ಹೇಳಬೇಕು. ತಿರುಗಿ ಹೋಗುವಾಗ ಹಾಕಿಕೊಳ್ಳುವದು ಒಳ್ಳೆಯದು. ಇವನ್ನು ತೊಡುವದರಲ್ಲಿ ಪಾಪವೂ ಇಲ್ಲ, ಅಂಧ ವಿಶ್ವಾಸವೂ ಇಲ್ಲ. ತೊಡುವದರಿಂದ ಯಾರಿಗೂ ಹಾನಿಯಿಲ್ಲ ಮತ್ತು ತೊಡದಿರುವದರಿಂದ ಪಾರ್ಸೀಗಳಿಗೆ ಆಘಾತವಾಗುತ್ತದೆ. ಈ ಪ್ರಕಾರ ವಿನಾಕಾರಣ ಆಘಾತ ಮಾಡುವದು ಸೇವಕನ ಕೆಲಸವಲ್ಲ, ಮತ್ತು ಇದರಲ್ಲಿ ಅಹಿಂಸೆಯು ಭಂಗವಿರುತ್ತದೆ ತನ್ನ ಮನಸ್ಸಿನಲ್ಲಿ ಇದರ ವಿಷಯಕ್ಕೆ ಸುಳ್ಳು ಆದರವಿರದಿದ್ದರೆ ತೀರಿತು. ಆದರಲ್ಲಿದ್ದ ಮೂರ್ತಿ-ಪೂಜೆಯು ಹೊರಟುಹೋಗಬೇಕು. ಆದಂತೂ ಇಲ್ಲವೇ ಇಲ್ಲ. ಅದು ಪಾರ್ಸಿಗಳ ಬಾಹ್ಯ ಚಿಹ್ನವು. ಇದನ್ನು ತೆಗೆದು ಹಾಕುವದು ನನಗೆ ಯಾವ ರೀತಿಯಿಂದಲೂ ಯೋಗ್ಯವೆನಿಸುವದಿಲ್ಲ. ಇವರ ಸಲುವಾಗಿ ಝೊರೊ ಆಸ್ತರನ ಪುಸ್ತಕಗಳನ್ನು ತರಲಿಕ್ಕೆ ಡಾಹ್ಯಾಭಾಯಿಗೆ ಹೇಳಿದ್ದೇನೆ. ನಾನು ಝೊರೊ ಆಸ್ತರನ ವಚನ

ಗಳನ್ನು ಓದಿದ್ದೇನೆ. ಬಹಳ ವರ್ಷಗಳ ಹಿಂದೆ ವೇದೀದಾದದ ಭಾಷಾಂತರವನ್ನು ಓದಿದ್ದೆನು. ಇದು ನೀತಿಯಿಂದ ತುಂಬಿದೆ. ಬಹಳ ಪ್ರಾಚೀನ ಧರ್ಮವಿರುವದರಿಂದ ಎಲ್ಲ ಪಾರ್ಸೀ ಗ್ರಂಥಗಳು ಉಪಲಬ್ಧ ಇಲ್ಲದಿರುವ ಸಂಭವವಿದೆ. ಆದುದರಿಂದ ಉಪನಿಷತ್ ಮುಂತಾದ ಗ್ರಂಥಗಳಲ್ಲಿ ದೊರೆಯುವ ಜ್ಞಾನವು ಇನ್ನುಳಿದ ಝೊರೊ ಆಸ್ತ್ರರ ಗ್ರಂಥಗಳಿಂದ ದೊರೆಯದಿರುವ ಸಂಭವವೂ ಇದೆ. ಯಾವದು ಸಿಗುತ್ತದೆಯೊ ಅದನ್ನು ನೋಡಿ ದರಬಾರಿಯವರನ್ನು ವಿಚಾರಿಸಬೇಕು. ಝೊರೊ ಆಸ್ತ್ರರ ಆಧಾರವು ವೇದವೆಂಬುದನ್ನು ಇವತ್ತು ಸಹ ಮಾನ್ಯ ಮಾಡಲಾಗಿದೆ. ನನಗೆ ಜ್ಞಾಪಕವಿದ್ದ ಮಟ್ಟಿಗೆ ವೇದೀದಾದದ ಅನುವಾದಕನು ಝುಂದ ಮತ್ತು ಸಂಸ್ಕೃತದ ನಡುವೆ ಬಹಳ ಸಾಮ್ಯವನ್ನು ತೋರಿಸಿದ್ದಾನೆ. ಆದುದರಿಂದ ಇವತ್ತು ಪಾರ್ಸೀ ಧರ್ಮ ಗ್ರಂಥಗಳಲ್ಲಿ ಪಡೆಯದಂತಹವುಗಳನ್ನು ವೇದ ಮತ್ತು ಉಪನಿಷತ್ತುಗಳೊಳಗಿಂದ ಪೂರ್ಣ ಮಾಡಿದರೆ ಪಾರ್ಸೀ ಧರ್ಮಕ್ಕಾಗಲಿ, ಪಾರ್ಸೀತನಕ್ಕಾಗಲಿ ಯಾವ ಕುಂದೂ ಬರುವದಿಲ್ಲ. ನಿಜವಾಗಿ ನೋಡಿದರೆ ತನ್ನ ಧರ್ಮವನ್ನು ಬಿಡದೆ ಬೇರೆ ಯಾವದೇ ಧರ್ಮದಲ್ಲಿ ಏನಾದರೂ ವಿಶೇಷತೆಯನ್ನು ನೋಡಿದರೆ ನಮಗೆ ಅದನ್ನು ತೆಗೆದುಕೊಳ್ಳುವ ಅಧಿಕಾರವಿದೆ. ಬೇರೆ ಧರ್ಮಗಳೊಳಗಿಂದ ಏನೂ ತೆಗೆದುಕೊಳ್ಳ ಬಾರದೆಂಬುದರ ಹೆಸರೇ ಧರ್ಮಾಂಧತೆಯು. ಅದನ್ನು ದರಬಾರೀ ಮತ್ತು ನಾವು ದಾಟ ನಿಂತಿದ್ದೇವೆ. ”

ಭುಸ್ಕುಟೆಯವರು ಕೇಳಿದ್ದರು : “ ನೀವು ಸತ್ಯವನ್ನು ಈಶ್ವರನೆಂದು ತಿಳಿಯು ತ್ತೀರಿ, ಜಗತ್ತಿನ ಕರ್ತಾ ಯಾರೂ ಇಲ್ಲವೆಂದು ತಿಳಿಯುತ್ತೀರಿ. ಆದರೂ ಸಹ ನೀವು ಅನೇಕಸಾರೆ ಅಂತರ್ನಾದವನ್ನು ಕೇಳಿ ಕೆಲಸಮಾಡುತ್ತೀರಿ. ಅದು ಏನು ? ” ಇದರ ಉತ್ತರವನ್ನು ಕೊಡುತ್ತ ಛಗನಲಾಲ ಜೋಶಿಯುವರ ಪತ್ರದಲ್ಲಿ ಬರೆದರು : “ ಜಗತ್ತಿನ ಕರ್ತಾ ಯಾರೂ ಇಲ್ಲ ಇದರ ಅರ್ಥವೇನಾಗಬಲ್ಲದು ? ಜಗತ್ತಿನ ಕರ್ತಾ ಯಾರೂ ಇಲ್ಲವೆಂದು ನಾವು ಹೇಗೆ ಹೇಳಬಲ್ಲೆವು ? ನನ್ನ ಹೇಳಿಕೆಯು ಸ್ವಲ್ಪ ಅನರ್ಥ ವಾದಂತೆ ಪ್ರತೀತವಾಗುತ್ತಿದೆ. ನಾನಂತೂ ಸತ್ಯವೇ ಈಶ್ವರನೆಂದು ಹೇಳಿದ್ದೇನೆ. ಆದುದರಿಂದ ಅವನೇ ಕರ್ತಾ ಎಂದು ತಿಳಿಯಿರಿ. ಆದರೆ ಇಲ್ಲಿ ಕರ್ತಾದ ಅರ್ಥವು ನಾವು ಮಾಡುತ್ತಿರುವಂತೆ ಇರುವದಿಲ್ಲ. ಆದುದರಿಂದ ಸತ್ಯವು ಕರ್ತಾ ಅಕರ್ತಾ ಎರಡೂ ಇದೆ. ಆದರೆ ಇದು ಕೇವಲ ಬುದ್ಧಿವಾದವು. ಯಾರ ಹೃದಯಕ್ಕೆ ಹೇಗೆ ಅನಿಸುತ್ತಿದೆಯೊ ಹಾಗೆ ತಿಳಿಯುವದರಲ್ಲಿ ಯಾವ ಹಾನಿಯೂ ಇಲ್ಲ. ಯಾಕಂದರೆ ಪ್ರತಿಯೊಬ್ಬ ಮನುಷ್ಯನಿಗೆ ಈಶ್ವರನ ಬಗ್ಗೆ ಸಂಪೂರ್ಣ ಜ್ಞಾನವಿರುವದಿಲ್ಲ ಮತ್ತು ಜ್ಞಾನವಿದ್ದಷ್ಟು ತೋರಿಸಿ ಕೊಡಲಾರನು. ಯಾವದೇ ಕಾರ್ಯದ ನಿರ್ಣಯಕ್ಕಾಗಿ ನಾನು ನನ್ನ ಬುದ್ಧಿಯ ಮೇಲೆ ವಿಶ್ವಾಸವಿಡುವದಿಲ್ಲವೆಂಬ ಮಾತು ಸರಿಯಾಗಿದೆ. ಹೃದಯದೊಳಗಿಂದ ಶಬ್ದವು ಹೊರಡುವವರೆಗೆ ಬುದ್ಧಿಯು ಹೇಳುವ ಮಾತನ್ನು

ತಡೆಹಿಡಿಯುತ್ತೇನೆ. ಇದಕ್ಕೆ ಯಾವುದೊ ಒಂದು ಗೂಢ ಶಕ್ತಿ ಎಂದು ಹೇಳಬೇಕೊ ಅಥವಾ ಏನು ಹೇಳಬೇಕೆಂಬುದು ನನಗೆ ಗೊತ್ತಿಲ್ಲ. ಈ ವಿಷಯ ಕುರಿತು ನಾನು ಎಂದೂ ವಿಚಾರ ಮಾಡಿಲ್ಲ, ಅದರ ಪೃಥಕ್ಕರಣವನ್ನೂ ಮಾಡಿಲ್ಲ ಮತ್ತು ಮಾಡುವ ಆವಶ್ಯಕತೆಯೂ ಅನಿಸಿಲ್ಲ. ನನಗೆ ಈ ವಸ್ತುವು ಬುದ್ಧಿಗಿಂತ ಶ್ರೇಷ್ಠ ( ಪರ )ವಾದದ್ದೆಂಬ ವಿಶ್ವಾಸವೂ ಇದೆ, ಜ್ಞಾನವೂ ಇದೆ. ನನಗೆ ಇಷ್ಟು ಸಾಕು. ಇದಕ್ಕಿಂತ ಹೆಚ್ಚು ಸ್ಪಷ್ಟೀಕರಣ ನನ್ನಿಂದಾಗಲಾರದು. ಯಾಕಂದರೆ ಇದಕ್ಕಿಂತ ಹೆಚ್ಚು ನನಗೆ ಗೊತ್ತಿಲ್ಲ."

ಮೀರಾಬಹನರ ಸುಂದರವಾದ ಪತ್ರವು ಬಂದಿದೆ. "ಅವಳಂತೂ ಹಿಂದೂವೇ ಆಗಿಬಿಟ್ಟಿದ್ದಾಳೆ." ಎಂದು ವಲ್ಲಭಭಾಯಿ ಹೇಳತೊಡಗಿದರು. ಈ ಪತ್ರದ ಎಷ್ಟೋ ಭಾಗವು ಆವಳ ಸ್ವಭಾವದ ಮತ್ತು ಪರಿವರ್ತನದ ಉತ್ತಮ ದ್ಯೋತಕವಾಗಿದೆ:

"I had about 40 minutes with the Ramayan last night. I had only got half way through Griffith's full translation when I left jail. I want to read it faithfully from cover to cover, so I am keeping it by me. It gives me extraordinary happiness and peace when I read it. It is something I cannot explain. And what joy it is to read the descriptions,—the forests, the hermits, the animals the birds, the peasants, the fields, the villages, the towsn, Though four or five thousand years have gone by, it is all there in the heart still of this blessed land. Ever since we came back from Europe, this time I have been feeling with double force (if it were possible) the deep, peaceful, eternal joy of Hindu culture. And all the while it stirs in me a feeling of long past associations—it seems all something I have known and loved since time immemorial. Past births seem almost to stare me in the face sometimes. And you can imagine what the reading of the Ramayan means to me?

"I can fairly say that I felt more pleasure in giving up the pen this time, than I have ever felt in possessing one. If I look with envy on any one it is not the man who has possessions, but the man who lives voluntarily and happily without any."

"ನಿನ್ನೆ ರಾತ್ರಿ ಸಾಧಾರಣ ೪೦ ಮಿನಿಟು ರಾಮಾಯಣ ಓದಿದೆ. ಜೇಲಿನಿಂದ ಬಿಡುಗಡೆಯಾದಾಗ ಗ್ರಿಫಿತ್ಥನ ಪೂರ್ಣ ಅನುವಾದದಲ್ಲಿ ಅರ್ಧದಷ್ಟು ಓದಿದ್ದೆ. ನನಗೆ ಈ ಪುಸ್ತಕವನ್ನು ಶ್ರದ್ಧಾಪೂರ್ವಕವಾಗಿ ಮೊದಲನೇ ಪಾನಿನಿಂದ ಕೊನೆಯ

ಪ್ರಾನಿನ ವರೆಗೆ ಓದಿ ಮುಗಿಸಬೇಕಾಗಿದೆ. ಆದುದರಿಂದ ಈ ಪುಸ್ತಕವನ್ನು ನನ್ನ ಜೊತೆಗೇ ಇಡುತ್ತೇನೆ. ಇದನ್ನು ಓದುವಾಗ ಆಗುವ ಆನಂದ ಮತ್ತು ದೊರೆಯುವ ಶಾಂತಿ ಇವುಗಳನ್ನು ಬರೆಯುವುದು ಸಾಧ್ಯವಿಲ್ಲ. ಆದರ ವರ್ಣನೆಯನ್ನು ಓದುವಾಗ ಎಷ್ಟು ಆನಂದವಾಗುತ್ತಿದೆ! ಅರಣ್ಯ, ಆಶ್ರಮ, ಪಶುಪಕ್ಷಿ, ಒಕ್ಕಲಿಗರು, ಹೊಲ, ಹಳ್ಳಿ ಮತ್ತು ಪಟ್ಟಣ ಇವೆಲ್ಲವೂ ನಾಲ್ಕೈದು ಸಾವಿರ ವರುಷ ಗತಿಸಿ ಹೋಗಿದ್ದರೂ ಈ ಧನ್ಯಭೂಮಿಯ ಮೇಲೆ ಇನ್ನೂ ಹಾಗೇ ಇವೆ. ಈ ಸಾರೆ ನಾವು ಯುರೋಪದಿಂದ ತಿರುಗಿ ಬಂದ ಮೇಲೆ ನಾನು ಹಿಂದೂ ಸಂಸ್ಕೃತಿಯಲ್ಲಿ ಅಡಕವಾದ ಈ ಗಂಭೀರ, ಶಾಂತಿಮಯ ಮತ್ತು ಶಾಶ್ವತವಾದ ಇಮ್ಮಡಿ (ಅದು ಸಾಧ್ಯವಿದ್ದರೆ) ಆನಂದವನ್ನು ಅನುಭವಿಸುತ್ತಿದ್ದೇನೆ. ಪುರಾಣಕಾಲದಿಂದ ಈ ವಸ್ತುಗಳನ್ನು ನಾನು ಅರಿತಿರುತ್ತೇನೆ ಮತ್ತು ಇಚ್ಛಿಸುತ್ತೇನೆ ಎಂಬಂತೆ ಈ ವಸ್ತುಗಳು ನನ್ನ ಹೃದಯದಲ್ಲಿ ದೀರ್ಘಕಾಲದ ಸಂಸ್ಕಾರವನ್ನು ಜಾಗ್ರತ ಮಾಡುತ್ತವೆ! ಎಷ್ಟೋ ಸಾರೆಯಂತೂ ನನ್ನ ಎಲ್ಲ ಪುನರ್ಜನ್ಮಗಳು ನನ್ನೆದುರಿಗೆ ಬಂದು ಎವೆಯಿಕ್ಕದೆ ನೋಡುತ್ತಿವೆಯೊ ಅನ್ನುವಂತೆ ಭಾಸವಾಗುತ್ತಿದೆ. ರಾಮಾಯಣ ಓದುವದು ನನಗೆ ಎಷ್ಟು ಮಹತ್ವದ ಸಂಗತಿಯೆಂಬುದನ್ನು ಇದರ ಮೇಲಿಂದ ನೀವು ಅರಿಯಬಹುದು.

"ಈ ಸಾರೆ ಪೆನ್ ಇಟ್ಟುಕೊಳ್ಳುವದಕ್ಕಿಂತ ಅದನ್ನು ಬಿಡುವದರಲ್ಲಿಯೆ ನನಗೆ ಹೆಚ್ಚು ಆನಂದದ ಅನುಭವವಾಗಿದೆ. ನನಗೆ ಯಾರ ವಿಷಯಕ್ಕಾದರೂ ಮತ್ಸರವಾಗುತ್ತಿದ್ದರೆ ಅದು ಬಹಳ ಪರಿಗ್ರಹಮಾಡಿದವರ ವಿಷಯಕ್ಕೆ ಅಲ್ಲ, ಆದರೆ ಸ್ವೇಚ್ಛೆಯಿಂದಲೂ ಆನಂದದಿಂದಲೂ ಪರಿಗ್ರಹವನ್ನು ಬಿಟ್ಟವರ ವಿಷಯಕ್ಕೆ".

ನಟರಾಜನ್ನರ ಪತ್ರ ಬಂತು. ಸರ್ಪದ ಹೆಡೆ ತಿನ್ನುವವನ, ವಿಷ ಕುಡಿಯುವವನ ಮತ್ತು ಆ ಕಾರ್ಯಕ್ರಮಕ್ಕೆ ಹೋಗುವವರ ವಿಷಯಕ್ಕೆ ನೀವು 'ಇಂಡಿಯನ್ ಸೋಶಿಯಲ್ ರಿಫಾರ್ಮದಲ್ಲಿ' ಬರೆಯಬೇಕಾದಷ್ಟು ಕಠೋರತೆಯಿಂದ ಬರೆದಿಲ್ಲ ಎಂದು ಅವರಿಗೆ ಪತ್ರ ಬರೆದಿತ್ತು. ಅವರು ಬರೆದರು:

"As for my paragraph about occult powers which you feel might have been stronger, it is curious but I seem to have utterly lost the taste for and the knack of strong writing particularly in criticizing persons. When I take my pen intending to hit hard, the picture of the other man stands before my eyes and seems to say: 'You do not know what I have to say for myself. I too have ideals however much they may be obscured by my conduct. Judge me as you would yourself.' I avoid all adjectives of judgement as poison and try in all that I say to be completely objective. This has become a habit, and I do not doubt that

in all circumstances, it is a healthy one. As regards this particular matter, the thought that after all, the man takes his life in his hands, weighs my judgement. As for the curious crowd, they, I suppose, find relief from the tyranny of daily circumstances in witnessing facts which show or seem to show that one man at least is able to rise above them."

"ಯೋಗಿಕ ಸಿದ್ಧಿಯ ಪ್ರದರ್ಶನದ ವಿಷಯಕ್ಕೆ ನಾನು ಬರೆದ ವಾಕ್ಯಗಳು ಹೆಚ್ಚು ಕಠೋರವಿರಬೇಕಾಗಿತ್ತೆಂದು ನೀವು ಬರೆಯುತ್ತೀರಿ. ಕಠೋರ ಬರೆಯುವದರಲ್ಲಿ, ವಿಶೇಷವಾಗಿ ಎರಡನೆಯವರನ್ನು ಟೀಕಿಸುವದರಲ್ಲಿ ನನ್ನ ಅಭಿರುಚಿಯು ಇಲ್ಲದಂತಾಗಿದೆ ಎಂದು ಹೇಳಬಯಸುತ್ತೇನೆ. ಈ ಮಾತು ನನ್ನ ಸ್ವಭಾವದಲ್ಲಿಯೇ ಉಳಿದಿಲ್ಲ. ನಾನು ಯಾರದಾದರೊಬ್ಬರ ಮೇಲೆ ಕಠೋರ ಪ್ರಹಾರ ಮಾಡಬೇಕೆಂದು ನನ್ನ ಲೇಖನಿಯನ್ನೆತ್ತಿದಾಗ, ಎದುರಿಗಿನ ಮನುಷ್ಯನ ಚಿತ್ರವು ನನ್ನೆದುರಿಗೆ ಬಂದು ನಿಲ್ಲುತ್ತದೆ ಮತ್ತು 'ನನ್ನ ಸಮರ್ಥನೆಗಾಗಿ ನನಗೆ ಹೇಳುವದು ನಿನಗೇನು ಗೊತ್ತು' ಎಂದು ಹೇಳಿದಂತಾಗುತ್ತಿದೆ. 'ನನಗೂ ಸಹ ಆದರ್ಶ ಇವೆಯಲ್ಲವೆ ? ನನ್ನ ವರ್ತನೆಯಿಂದ ಅವು ಮಸುಕಾಗಿರಬಹುದು. ಆದರೂ ಏನಾಯಿತು ? ನೀವು ನಿಮ್ಮ ವಿಷಯಕ್ಕೆ ತೀರ್ಮಾನ ಮಾಡುವಂತೆ ನನ್ನ ವಿಷಯಕ್ಕೂ ಮಾಡಿರಿ.' ಆದುದರಿಂದ ನಾನು ಟೀಕಾತ್ಮಕ ವಿಶೇಷಣಗಳನ್ನು ಉಪಯೋಗಿಸುವದನ್ನು ವಿಷದಂತೆ ವರ್ಜ್ಯ ಮಾಡುತ್ತೇನೆ ಮತ್ತು ನನಗೆ ಹೇಳುವದನ್ನು ಪೂರ್ಣ ಪರಲಕ್ಷಿಯಾಗಿ ಹೇಳುವ ಪ್ರಯತ್ನ ಮಾಡುತ್ತೇನೆ. ಇದು ನನ್ನ ಸ್ವಭಾವವಾಗಿಬಿಟ್ಟಿದೆ. ಇದು ಯಾವಾಗಲೂ ಒಳ್ಳೆಯದೇ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಪ್ರಸ್ತುತ ವಿಷಯದಲ್ಲಿ ಮತ್ತೇನೂ ಇಲ್ಲದಿದ್ದರೂ ಮನುಷ್ಯನು ತನ್ನ ಜೀವನದ ಬಗ್ಗೆ ಉದಾರನಾಗುತ್ತಾನೆಂದು ಅನಿಸಿತು. ಈ ವಿಚಾರವೇ ನನ್ನ ಟೀಕೆಯನ್ನು ಸೌಮ್ಯವನ್ನಾಗಿ ಮಾಡಿತು. ಕುತೂಹಲದಿಂದ ಒಟ್ಟುಗೂಡಿದ ಜನಜಂಗುಳಿಯ ವಿಷಯಕ್ಕೆ, ಈ ಜನರು ನಿತ್ಯದ ಘಟನೆಯ ತ್ರಾಸದಿಂದ ದುಃಖಶಮನ ಮಾಡಿಕೊಳ್ಳುವ ಉದ್ದೇಶದಿಂದಲೂ ಅವರಿಗೆ ಏನೂ ಇಲ್ಲದಿದ್ದರೂ ಅಲೌಕಿಕ ಶಕ್ತಿಯನ್ನು ತೋರಿಸಬಲ್ಲಂಥ ಒಬ್ಬ ಮನುಷ್ಯನನ್ನಾದರೂ ನೋಡಿ ಸಮಾಧಾನ ಹೊಂದುವ ಉದ್ದೇಶದಿಂದಲೂ ಅಲ್ಲಿಗೆ ಹೋಗಿದ್ದರೆಂದು ನನಗನಿಸಿತು."

ಇವರಿಗೆ ಬಾಪೂ ಕಠೋರ ಉತ್ತರವನ್ನು ಬರೆದರು :

"When I said that writing about the abuse of occult powers you might have been stronger, I used the adjective precisely, in the same sense in which I use it regarding admitted evils. I feel that whilst we should spare evil doers, we dare not

be sparing in our condemnation of evil. Perfect gentleness is not inconsistent with clearest possible denunciation of what one knows to be evil, so long as that knowledge persists; and there would need to be no cause for regret later if our knowledge of the past was found to be a great error of judgement. In our endeavour to approach absoulte truth we shall always have to be content with relative truth from time to time, the relative at each stage, being for us as good as the absolute. It can be easily demonstrated that there would be no progress if there was no such confidence in oneself. Of course our language would be one of caution and hesitation if we had any doubt about the correctness of our position. In the case in point, the motive of the exhibitor, no matter how excellent it may be, in my opinion would be no excuse for his exhibition, and the laziness of the spactators in not having thought out the consequences of their presence at such exhibitions, is again no excuse for their prensence. But I must not labour the point any further. I thought that as I could not endorse the position taken up by you in your letter, I should just place before you my argument for your consideration."

"ಯೋಗಿಕ ಸಿದ್ಧಿಗಳ ದುರುಪಯೋಗದ ವಿಷಯಕ್ಕೆ ಬರೆಯುವಾಗ ನೀವು ಹೆಚ್ಚು ಕಠೋರವಾಗಬೇಕಾಗಿತ್ತೆಂದು ನಾನು ಹೇಳಿದ್ದೆ. ಆಗ ನಾನು ಈ ವಿಶೇಷಣವನ್ನು ಜಾಗರೂಕತೆಯಿಂದ ಉಪಯೋಗಿಸಿದ್ದೆ. ಸರ್ವಮಾನ್ಯ ದುರ್ನಡತೆಗಳ ವಿಷಯಕ್ಕೆ ಬರೆದಂತೆಯೇ ಈ ವಿಷಯದ ಮೇಲೂ ಬರೆಯುಬೇಕೆಂದು ನನ್ನ ವಿಚಾರ. ನಾವು ದುಷ್ಟ ಮನುಷ್ಯರನ್ನು ಬಿಡಬಹುದು ಆದರೆ ದುಷ್ಟತನವನ್ನು ಧಿಕ್ಕರಿಸುವದರಲ್ಲಿ ಸ್ವಲ್ಪೂ ಹಿಂಜರಿಯಬಾರದು. ಒಂದು ವಸ್ತುವು ಕೆಟ್ಟದ್ದೆಂದು ಮಾನ್ಯಮಾಡಿದ ಮೇಲೆ ಮತ್ತು ಈ ಮಾನ್ಯತೆಯು ನಿಶ್ಚಿತ ಇರುವವರೆಗೆ ಈ ದುಷ್ಟತನವನ್ನು ಸ್ಪಷ್ಟ ಶಬ್ದಗಳಲ್ಲಿ ನಿಂದಿಸುವದು ಸೌಮ್ಯ ಸ್ವಭಾವಕ್ಕೆ ಅಸಂಗತವಲ್ಲ. ಮತ್ತು ನಮ್ಮ ಹಿಂದಿನ ವಿಚಾರವು ತಪ್ಪು ಇತ್ತೆಂದು ಗೊತ್ತಾದರೆ ಆದರ ವಿಷಯಕ್ಕೂ ದುಃಖಿಸಲು ಯಾವ ಕಾರಣವೂ ಇಲ್ಲ. ಯಾಕಂದರೆ ಪೂರ್ಣ ಸತ್ಯದ ಸಮೀಪಕ್ಕೆ ಮುಟ್ಟುವ ಪ್ರಯತ್ನದಲ್ಲಿ ನಾವು ಹೊತ್ತು ಹೊತ್ತಿಗೆ ಸಾಪೇಕ್ಷಸತ್ಯದಿಂದ ಸಂತುಷ್ಟರಾಗಿಯೇ ಕೆಲಸ ನಡೆಯಿಸಬೇಕಾಗುವದು. ಈ ಸಾಪೇಕ್ಷಸತ್ಯದ ಪ್ರತಿಯೊಂದು ಅನಸ್ಥೆಯನ್ನೂ ನಾವು ಪೂರ್ಣವೆಂದು ತಿಳಿದೇ ನಡೆಯೋಣ. ನಮ್ಮಲ್ಲಿ ಈ ಪ್ರಕಾರದ ವಿಶ್ವಾಸವಿಲ್ಲದಿದ್ದರೆ

ನಾವು ಪ್ರಗತಿ ಹೊಂದಲಾರೆವು. ಇದು ಸಹಜ ಸಿದ್ಧವಾದ ಮಾತೆಂಬುದನ್ನು ತೋರಿಸುತ್ತದೆ. ಆದರೆ ನಮ್ಮ ಮಾತಿನ ನಿಜತ್ವದ ವಿಷಯಕ್ಕೆ ನಮ್ಮ ಮನಸ್ಸಿನಲ್ಲಿ ಸ್ವಲ್ಪ ಕೂಡ ಸಂಶಯವಿದ್ದರೆ ಅಲ್ಲಿ ನಮ್ಮ ಭಾಷೆಯು ಸಾವಧಾನತನದ್ದಿರಬೇಕು ಮತ್ತು ನಿಶ್ಚಯಾತ್ಮಕವಾಗಿರಬಾರದು. ಪ್ರಸ್ತುತ ವಿಷಯದಲ್ಲಿ ಪ್ರಯೋಗ ಮಾಡುವವನ ಉದ್ದೇಶವು ಎಷ್ಟೇ ಉತ್ತಮವಿದ್ದರೂ ನನ್ನ ಮತದಿಂದ ಅವನ ಪ್ರದರ್ಶನಗಳ ಸಮರ್ಥನೆ ಮಾಡಲಾಗದು. ಅಲ್ಲದೆ, ಇಂಥ ಪ್ರದರ್ಶನದಲ್ಲಿ ಉಪಸ್ಥಿತ ಇರುವದರಿಂದ ಆಗುವ ಪರಿಣಾಮದ ಬಗ್ಗೆ ಪ್ರೇಕ್ಷಕರು ಸ್ವಲ್ಪ ಸಹ ಶ್ರಮ ವಹಿಸಿ ವಿಚಾರ ಮಾಡುವದಿಲ್ಲ. ಇಂಥವರ ಸಮರ್ಥನೆಯನ್ನೂ ಮಾಡಲಾಗದು. ಆದರೆ ಈ ವಿಷಯವನ್ನು ಮುಂದೆ ಬೆಳೆಸುವದಿಲ್ಲ. ಯಾಕೆಂದರೆ ನೀವು ನಿಮ್ಮ ಪತ್ರದಲ್ಲಿ ಕೊಟ್ಟ ಸ್ಪಷ್ಟೀಕರಣಕ್ಕೆ ನಾನು ಸಮ್ಮತಿಸಲಾರೆ. ಆದುದರಿಂದ ನಿಮ್ಮ ವಿಚಾರಾರ್ಥವಾಗಿ ನಾನು ನನ್ನ ಕಾರಣಗಳನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. "

ಇವತ್ತು ಉರ್ದು ಪುಸ್ತಕವನ್ನು ಓದುತ್ತ ಹೇಳತೊಡಗಿದರು: "ಇದರಲ್ಲಿ ವಿಷ ಸುರಿಸುವದರಲ್ಲಿ ಏನೂ ಉಳಿಸಿಲ್ಲ. ಸರಕಾರವು ಈ ಪುಸ್ತಕವನ್ನು ಹಿಂದು-ಮುಸಲ್ಮಾನರ ವೈಷಮ್ಯದ ಕಾಲಕ್ಕಿಂತಲೂ ಮೊದಲು ಮಂಜೂರ ಮಾಡಿತ್ತು ಮತ್ತು ಇವತ್ತಿನ ಮುಸಲ್ಮಾನ ತರುಣರು ಇವೇ ಪುಸ್ತಕಗಳ ಮೇಲೆ ಬೆಳೆದು ದೊಡ್ಡವರಾಗಿದ್ದಾರೆ. "

ಇಂಗ್ಲೀಷರ ವಿಷಯಕ್ಕೆ ಮಾತಾಡುತ್ತ ಹೇಳತೊಡಗಿದರು.: "ಇಲ್ಲ, ಈ ಜನರು ದುರ್ಬಲರಾದ ಹೊರತು ಬಾಗುವವರಲ್ಲ. ಇದು ಇವರ ಸ್ವಭಾವವು. ತಮ್ಮತಮ್ಮೊಳಗೆ ಬಡಿದಾಡುತ್ತಿರಲಿ, ಎರಡನೆಯವರ ಸಂಗಡ ಬಡಿದಾಡುತ್ತಿರಲಿ, ಇವರು ಬಲಶಾಲಿಗಳಿರುವವರೆಗೆ ಸ್ವಲ್ಪೂ ಸಹ ಬಾಗುವದಿಲ್ಲ. ಈಗ ನಿರ್ಬಲರಾಗುತ್ತ ನಡೆದಿದ್ದೇವೆ ಎಂದು ಅವರಿಗೆ ಅನಿಸಿದಾಗ ಮಾತ್ರ ಅವರು ಬಾಗುವರು."

ವಲ್ಲಭಭಾಯಿಯವರು ಪಾಕೀಟುಗಳನ್ನು ತಯಾರಿಸುತ್ತ ಅನೇಕ ವಸ್ತುಗಳನ್ನು ಸಂಗ್ರಹಿಸುವದನ್ನೂ ಅನೇಕ ಪ್ರಕಾರದ ಮಾತುಗಳನ್ನು ಹೇಳುವದನ್ನೂ ನೋಡಿ ಬಾಪೂ ಹೇಳುತ್ತಾರೆ: "ಸ್ವರಾಜ್ಯದಲ್ಲಿ ನಿಮಗೆ ಯಾವ ಕೆಲಸ ಕೊಡಬೇಕು?" "ಸ್ವರಾಜ್ಯದಲ್ಲಿ ಚಿಮುಟಿಗಿ ಮತ್ತು ಕುಂಬಳ ಸೊಟ್ಟ ತೆಗೆದುಕೊಳ್ಳುವೆನೆ"ಂದು ವಲ್ಲಭಭಾಯಿ ಹೇಳಿದರು. ಬಾಪೂ ಹೇಳತೊಡಗಿದರು: "ದಾಸ ಮತ್ತು ಮೋತೀಲಾಲಜಿಯವರು ತಮ್ಮ ತಮ್ಮ ಹುದ್ದೆಗಳ ಎಣಿಕೆ ಹಾಕುತ್ತಿದ್ದರು. ಮಹಮ್ಮದಅಲ್ಲಿ ಶೌಕತಅಲ್ಲಿಯವರು ತಮಗೆ ಶಿಕ್ಷಣಮಂತ್ರಿ ಮತ್ತು ಪ್ರಧಾನ ಸೇನಾಪತಿ ಎಂದು ತಿಳಿದುಕೊಂಡಿದ್ದರು. ಮಾನ ಉಳಿಯಿತು ಮಾನ. ಯಾಕೆಂದರೆ ಸ್ವರಾಜ್ಯ ಸಿಗಲಿಲ್ಲ ಮತ್ತು ಯಾರೂ ಏನೂ ಆಗಲಿಲ್ಲ."

ಇವತ್ತು ಬೆಳಿಗ್ಗೆ ಮೇಜರ ಮೆಹತಾರವರು ಬಾಪೂ ಸ್ನಾನಕ್ಕೆ ಹೋಗುತ್ತಿದ್ದಲ್ಲಿಗೆ

ಬಂದರು. ಬಾಪೂರನ್ನು ಕೇಳಿದರು: "ನೀವು ಸ್ನಾನ ಮಾಡುವಾಗ ಸಬಕಾರವನ್ನು ಉಪಯೋಗಿಸುತ್ತೀರಾ?" ಬಾಪೂ ಹೇಳಿದರು: "ಇಲ್ಲ.
೨೬-೫-'೩೨ ಬಿಸಿನೀರನ್ನು ಉಪಯೋಗಿಸುತ್ತಿರುವದರಿಂದ ಸಬಕಾರದ ಅವಶ್ಯಕತೆಯೇನು?" ಈ ಮನುಷ್ಯನ ಮೇಲೆ ಬಹಳ ಪರಿಣಾಮವಾಯಿತು. "ವಾಹವಾ! ವಾಹವಾ! ಸ್ಪೇನದ ಮಧ್ಯಭಾಗದಲ್ಲಿ ಸಬಕಾರವು ಯಾರಿಗೂ ಗೊತ್ತೇ ಇಲ್ಲ. ಅಲ್ಲಿ ನಿಜವಾದ ಕೋಮಲ ಚರ್ಮದ ಸ್ತ್ರೀಪುರುಷರು ಕಂಡುಬರುತ್ತಾರೆ. ಸಬಕಾರದಿಂದ ಚರ್ಮವು ಬಿರುಸಾಗುತ್ತದೆ. ಕೈ ತೊಳೆದು ಕೊಳ್ಳಲಿಕ್ಕೆ ಮಾತ್ರ ಸಬಕಾರವು ಅವಶ್ಯ ಬೇಕು." ಅನಂತರ ಇಟಲಿಯ ಬಗ್ಗೆ ಮಾತಾಡತೊಡಗಿದರು: "ನೇಪಲ್ಸ ಬಹಳ ಹೊಲಸಿದೆ, ಮುಂಬೈ ಅದಕ್ಕಿಂತ ಸ್ವಚ್ಛವಿದೆ" ಮುಂತಾಗಿ. ಬಾಪೂರನ್ನು ಕೇಳಿದರು: "ನೀವು ಮುಸಲೊನಿಯನ್ನು ಭೆಟ್ಟಿಯಾಗಿದ್ದಿರಾ? ಬಹಳ ಲಕ್ಷ್ಯವನ್ನು ಆಕರ್ಷಿಸುವಂಥ ವ್ಯಕ್ತಿತ್ವವಿದೆಯಲ್ಲವೆ?" ಬಾಪೂ ಹೇಳುತ್ತಾರೆ: "ಹೌದು. ಅದರೆ ಘಾತುಕ ಮನುಷ್ಯ. ಇಂಥ ಘಾತುಕತನದ ಮೇಲೆ ಕಟ್ಟಿದರಾಜ್ಯವು ಎಷ್ಟು ದಿವಸ ನಡೆಯುಬಲ್ಲದು.?" ಮೇಜರ: "ಅವನು ದೇಶವು ಹಾಳಾಗುವದನ್ನು ಉಳಿಸಿದನು." ಬಾಪೂ: "ಎಷ್ಟರವರೆಗೆ ಉಳಿಸಿದನೆಂಬುದನ್ನು ಹೇಳಲಿಕ್ಕಾಗುವದಿಲ್ಲ. ಅವನ ಜುಲುಮೆಯು ಭಯಂಕರವಿದೆ. ಇವನು ಕೊಲೆಗಳನ್ನು ಸಹ ಮಾಡಿಸಿದ್ದಾನೆಂಬ ವಿಷಯಕ್ಕೆ ಪ್ರೊ. ಸಾಲ್ವೆಮಿನೀ ಇವನು ಹೊರೆಗಟ್ಟಲೆ ಪ್ರಮಾಣಗಳನ್ನು ಪ್ರಸಿದ್ಧಿಸಿದ್ದಾನೆ." ಮೇಜರ: "ಆದರೂ ಸಹ ಸುಂದರ ವ್ಯಕ್ತಿತ್ವವಿದೆ." ನಾನು: "ಹೌದು, ಸಿಂಹದ ರೂಪಕ್ಕೆ ಸುಂದರವೆಂದು ಹೇಳುವಂತೆ ಅವನ ವ್ಯಕ್ತಿತ್ವಕ್ಕೂ ಸುಂದರವೆಂದು ಹೇಳಿಕೊಳ್ಳಿರಿ." ಇಷ್ಟಾದ ನಂತರ ಮೇಜರ ಹೇಳಿದರು: "ಪ್ರಾಣಿಯು ಹೆಚ್ಚು ವಿಕರಾಳವಿದ್ದಂತೆ ನೋಡುವದಕ್ಕೆ ಹೆಚ್ಚು ಸುಂದರ ಕಾಣುತ್ತದೆ."

ಇವತ್ತು ಬಾಪೂ ಖಾದಿಯ ಒಂದು ತುಂಡನ್ನು ಹರಿದು ತಮ್ಮ ಸಲುವಾಗಿ ಎರಡು ಟಾವೆಲ್ಲುಗಳನ್ನು ಮಾಡಿದರು. ಒಂದೂವರೆ ಫೂಟು ಉದ್ದ ಒಂದು ಫೂಟು ಅಗಲ. ಇವುಗಳ ದಂಡೆಗೆ ಟಿಬ್ಬಿಗಳನ್ನು ಹಾಕುತ್ತ ಎರಡು ತಾಸಿನ ವರೆಗೆ ಪತ್ರ ಬರೆಯಿಸಿದರು. ಭಿಕ್ಷುಕರ ವಿಷಯಕ್ಕೆ ಆಶ್ರಮದ ವೃತ್ತಿಯೇನು ಮತ್ತು ನಾವು ಡೇರಿಯನ್ನು ಯಾವ ಪ್ರಕಾರ ನಡೆಸಬೇಕೆನ್ನುತ್ತೇವೆ ಎಂಬುದನ್ನು ತಿಳಿಸಿಕೊಡುವ ಉದ್ದ ಕಾಗದವನ್ನು 'ಟಾಯಿಟಸ್'ನಿಗೆ ಬರೆದರು. ಛಕ್ಕಡದಾಸರು ಬಹಳ ಪರಿಶ್ರಮ ಪಟ್ಟು ಒಳ್ಳೇ ವ್ಯವಸ್ಥಿತ ರೀತಿಯಿಂದ ತಯಾರ ಮಾಡಿದ, ಸರಿಯಾದ ಮಾಪು ಮತ್ತು ತೂಕಗಳ, ಸುಂದರ ಮತ್ತು ಅಂದವಾದ ಹಂಜಿಗಳ ಅನೇಕ ಪುಡಿಕೆಗಳನ್ನೂ ತಮ್ಮ ಸುಂದರವಾದ ನೂಲನ್ನೂ ಕಳಿಸಿದ್ದಾರೆ. ಅವರಿಗೆ ಧನ್ಯವಾದದ ಮತ್ತು ಸೂಚನೆಗಳ ಉದ್ದ ಪತ್ರವನ್ನು ಬರೆಯಿಸಿದರು. ಈ ಮನುಷ್ಯನು ಬಟ್ಟೆಯ

ವ್ಯಾಪಾರಿಯಿದ್ದಾನೆ. ಆದರೆ ಸ್ವತಃ ಹಿಂಜುತ್ತಾನೆ. ಹುಡುಗಿಯರು ಹಂಜಿಯನ್ನು ಹೊಸೆಯುತ್ತಾರೆ. ಹತ್ತಿಯನ್ನು ಸಹ ಮನೆಯಲ್ಲಿಯೇ ಅರೆಯುತ್ತಾರೆ. ಎರಡು ತಾಸು ನೂಲುತ್ತಾನೆ. ಏಳು ತಾಸು ಅಂಗಡಿಯಲ್ಲಿ ಕೂಡ್ರುತ್ತಾನೆ. ಈ ಪ್ರಕಾರದ ಕುಟುಂಬಗಳು ಈ ಆಂದೋಲನದ ಅದೃಶ್ಯ ಫಲಗಳು ಮತ್ತು ಅಚಲ ಶ್ರದ್ಧೆಯ ಮಾದರಿಗಳಾಗಿವೆ.

ಫ್ರೀವಾ ಇವರು 'ಟಾಯಿಮ್ಸ'ದಲ್ಲಿ ಹೋರರಿಗೆ ಉತ್ತರ ಕೊಟ್ಟರು. ಬಾಪೂ ಹೇಳಿದರು : "ಬಹಳ ಗೌರವಪೂರ್ಣ ಪತ್ರವೆಂದು ಹೇಳಬಹುದು. ಮತ್ತು 'ಟಾಯಿಮ್ಸ' ಈ ಪತ್ರವನ್ನು ಪ್ರಸಿದ್ಧಿಸಿದ್ದರ ಅರ್ಥವು, ಸ್ವತಃ 'ಟಾಯಿಮ್ಸ'ಕ್ಕೆ ಸಾಮ್ಯುಅಲ್ ಹೋರರ ವರ್ಣನೆಯು ಮಾನ್ಯವಿಲ್ಲವೆಂಬುದನ್ನೇ ತೋರಿಸುತ್ತದೆ. ಈ ಮನುಷ್ಯನು ನಿರ್ಲಜ್ಜನಾದಂತೆ ಕಾಣುತ್ತದೆ. ಇವನು ಪ್ರಾಮಾಣಿಕನಂತೂ ಇದ್ದನು. ಇವನ ಪ್ರಾಮಾಣಿಕತೆಯಲ್ಲಿಯೂ ನಿರ್ಲಜ್ಜತೆಯಿತ್ತು. ಆದುದರಿಂದಲೇ ಇವನಿಗೆ ಹಿಂದುಸ್ತಾನದ ಯಾವದೇ ಮನುಷ್ಯನ ಬುದ್ಧಿ ಅಥವಾ ಶಕ್ತಿಯ ಮೇಲೆ ವಿಶ್ವಾಸವಿಲ್ಲವೆಂದು ಹೇಳಿದನು."

ನಿನ್ನೆ ಬಾಪೂ ಆಡಿದ ಶಬ್ದಗಳನ್ನು ಮ್ಯಾಕ್‌ಡೊನಲ್ಡನು ನಿಜವಾಗಿ ಮಾಡಿದಂತೆ ತೋರುತ್ತದೆ. ಕಾಂಗ್ರೆಸ್ಸಿಗೆ ಬಾಗುವದೆಂದರೆ ಹಿಂಸೆ ಮತ್ತು ಅವ್ಯವಸ್ಥೆಯ ಎದುರು ಬಾಗಿದಂತೆ, ಹಾಗು ಪ್ರಜಾತಂತ್ರದ ಇಂಥ ದುರ್ಬಲ ಅರ್ಥವನ್ನು ಮಾನ್ಯ ಮಾಡಬಾರದು ಎಂದು ಇವನ ಹೇಳಿಕೆ. "ಇವನು ಪೂರ್ಣ ಸಾಮ್ರಾಜ್ಯವಾದಿ ಮನುಷ್ಯನಾಗಿಬಿಟ್ಟಿದ್ದಾನೆ"ಂದು ಬಾಪೂ ಹೇಳಿದರು.

ಮೊಂಡರನ Astronomy without a Telescope (ದುರ್ಬೀನು ಇಲ್ಲದೆ ಖಗೋಲ) ಓದುತ್ತಿದ್ದಾರೆ. ಅದರೊಳಗಿಂದ ಒಂದು ಸುಂದರ ವಾಕ್ಯವನ್ನು ಬಾಪೂ ಉದ್ಧೃತ ಮಾಡುತ್ತಿದ್ದರು. ಇದರಲ್ಲಿ ಇವರು ವಿಜ್ಞಾನದ ಬಗ್ಗೆ ಸುಂದರ ವಾಕ್ಯೆಯನ್ನು ಕೊಟ್ಟಿದ್ದಾರೆ. 'ಸರಿಯಾದ ಅಳತೆ ಇದೇ ವಿಜ್ಞಾನ.' (Science is accurate measurement.) ಈ ಸಿದ್ಧಾಂತವನ್ನು ನೂಲುವ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲ ಕ್ರಿಯೆಗಳಿಗೂ ಅನ್ವಯಿಸತೊಡಗಿದರು. ಸೂತ್ರವಾಕ್ಯವು ಬಾಪೂರ ಸ್ವಭಾವದಲ್ಲಿಯೇ ಇದೆ. ಯಾಕಂದರೆ ಇಡೀ ಜೀವನವೇ ಸೂತ್ರಮಯವಿದೆ. ನಿನ್ನೆ ಛಗನಲಾಲ ಜೋಶಿಯವರಿಗೆ ಬರೆದ ಪತ್ರದಲ್ಲಿಯ ಒಂದು ವಾಕ್ಯ ಬರೆಯುವದು ಉಳಿದಿದೆ : 'ವ್ರತಬದ್ಧನಿಲ್ಲದ ಮನುಷ್ಯನನ್ನು ಯಾರು ನಂಬಬೇಕು?'

ಇವತ್ತು ನಗುನಗುತ್ತ ಅಂದರು : "ನಾನು ಇವತ್ತು ಸರಕಾರದ ಮಾತನ್ನು ಮಾನ್ಯ ಮಾಡಿದರೆ ಸರಕಾರವು ಇವನೇ ನಿಜವಾದ ಮಹಾತ್ಮನು ಎಂದು ಹೇಳತೊಡಗುವದು. ತಪ್ಪು ಮಾಡುತ್ತಾನೆ ಆದರೆ ಎಷ್ಟು ಉತ್ತಮ ರೀತಿಯಿಂದ ಒಪ್ಪಿಕೊಳ್ಳುತ್ತಾನೆ! ಎಲ್ಲ ಗವ್ಹರ್ನರರೂ ನನ್ನ ಪ್ರಶಂಸೆ ಮಾಡಹತ್ತುವರು. ಲೇಡಿ

ವಿಲಂಗ್ಡನ್ನಳಂತೂ ಆನಂದಸಾಗರದಲ್ಲಿ ಮುಳುಗುವಳು. ಆದರೆ ಹಿಂದುಸ್ತಾನ ಏನುಮಾಡಬೇಕು ? ರೆನಾಲ್ಡ್ಸರಂಥವರು ಹುಚ್ಚರೇ ಆಗಿ ಬಿಡುವರು ಮತ್ತು ಅಹಿಂಸೆಯು ಶೋಭೆಯನ್ನು ಹೊಂದತೊಡಗಿದೆ ಎಂದು ತಿಳಿಯುವಂಥ ಅನೇಕ ಜನರು ಅಹಿಂಸಾ ಶಕ್ತಿಯು ಇವತ್ತು ಮಣ್ಣುಪಾಲಾಯಿತು ಎಂದು ತಿಳಿಯ-ತೊಡಗುವರು."

ಇವತ್ತು ಮುಸೊಲಿನಿ ರಾಜ್ಯದಲ್ಲಿ ೮-೧೦ ವರ್ಷದ ಹುಡುಗರಿಗೆ ಕೊಡುತ್ತಿರುವ
ಲಷ್ಕರೀ ಶಿಕ್ಷಣದ ಒಂದು ಚಿತ್ರವನ್ನು ಬಾಪೂರಿಗೆ ತೋರಿಸಿ ಸರದಾರರು ಹೇಳ
ತೊಡಗಿದರು : " ನೋಡಿದಿರಾ ಈ ಮುಸೋಲಿನಿಯ ಸಿಪಾಯಿ
೨೭–೫–'೩೨ ಗಳನ್ನು ? ಈ ಜನರು ದೊಡ್ಡವರಾಗಿ ಜಗತ್ತಿನಲ್ಲಿ ಎಷ್ಟು
ಸಂಹಾರ ಮಾಡುವರು ! " ಬಾಪೂ ಹೇಳಿದರು : " ಹೌದು
ಭಾಯಿ, ನಾನು ಇವರೆಲ್ಲರನ್ನು ನೋಡಿ ಬಂದಿದ್ದೇನೆ. ಇಂಗ್ಲಂಡದಲ್ಲಿ ಸಹ ಫ್ಯಾಸಿಸ್ಟವಾದದ ಪ್ರಚಾರವು ಸರಿಯಾದ ರೀತಿಯಲ್ಲಿ ನಡೆದಿದೆ. ಅಲ್ಲಿ ಪಾರ್ಲಿಮೆಂಟಿನಲ್ಲಿ ಅನೇಕ ಫ್ಯಾಸಿಸ್ಟ ಜನರು ಹೊಕ್ಕಿದ್ದಾರೆ ಮತ್ತು ವಿನ್ಸ್ಟನ್ ಚರ್ಚಿಲ್ಲನು ಮುಸೊಲಿನಿಯ ಪೂಜಾರಿಯಿದ್ದಾನೆ. ಪ್ರಜಾತಂತ್ರದಲ್ಲಿ ಲಾಭವೇನು ಎಂದು ಬಾಲ್ಡ್ವಿನ್‌ನು ನನಗೆ ಕೇಳುತ್ತಿದ್ದನು. ರಾಮುಸೆ ಮ್ಯಾಕ್‌ಡೋನಲ್ಡನ ಸಾಮ್ರಾಜ್ಯವಾದವು ಇವತ್ತು ಅವನ ಕಡೆಯಿಂದಲೇ ಪ್ರಜಾತಂತ್ರದ ಚೇಷ್ಟೆಯನ್ನು ಮಾಡಿಸತೊಡಗಿದೆ. ಇದೆಲ್ಲವೂ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆಯೆಂಬುದನ್ನು ತೋರಿಸುತ್ತದೆ."

ಇವರ ವಿರುದ್ಧ ಈ ಸತ್ಯಾಗ್ರಹದ ಯುದ್ಧ. ಎಂಥ ಬಲಿಷ್ಠ ಯೋದ್ಧರ ಸಂಗಡ ಯುದ್ಧ ಮಾಡಬೇಕಾಗಿದೆ ? ಆದರೂ ಸಹ ಈ ಯುದ್ಧ ಅನಂತಕಾಲ ನಡೆದರೂ ಅದರಲ್ಲಿ ಹೋರಾಡಿ ಸಾಯದೆ ಗತ್ಯಂತರವಿಲ್ಲ.

ನಿನ್ನೆ ಬಾಪೂ ಉರ್ದು ಕಾಪಿ ಬರೆಯುವದನ್ನು ನೋಡಿ ಸರದಾರರು: " ಇದರಲ್ಲಿ ಮನಸ್ಸುಳಿದರೆ ಉರ್ದು ಮುನ್ಶಿಯ ( ಲೇಖಕನ ) ಅವತಾರ ತೆಗೆದು ಕೊಳ್ಳಬೇಕಾಗುವದು ! " ಎಂದು ಅಂದರು.

ಮತ್ತೆ ಹೇಳತೊಡಗಿದರು : " ನಿಮ್ಮ ವಶದಲ್ಲಿದ್ದರೆ ಕಾಲಿನಿಂದ ಸಹ ಬರೆಯುತ್ತಿದ್ದಿರಿ. "

ಬಾಪೂ : " ಕೈ ನಿಂತರೆ ಹಾಗೂ ಸಹ ಮಾಡಬೇಕಾಗುವದು. ಘುಮಲೀ ಹತ್ತರ ಮೂಳೂ ಮಾಣೇಕ ಮತ್ತು ಜೋಧಾ ಮಾಣೇಕರು ಇಂಗ್ಲಿಷರ ಸಂಗಡ ಯುದ್ಧ ಮಾಡುತ್ತ ನೆಲಕ್ಕೆ ಬಿದ್ದಾಗ ಕಾಲಿನಿಂದ ಬಂದೂಕ ನಡೆಸಿದ್ದರೆಂಬುದು ನಿಮಗೆ ಗೊತ್ತಿದೆಯಲ್ಲವೆ ? ಕಾಲಿನಿಂದ ಬಂದೂಕು ಹೊಡೆದರೆ



ಕಾಲಿನಿಂದ ಬರೆಯಲಿಕ್ಕಾಗುವದಿಲ್ಲವೆ? ರಾಟಿ ನಡೆಸಲಿಕ್ಕಾಗುವದಿಲ್ಲವೆ? ಆದರೆ ಕಾಲಿನಿಂದ ಹಂಜಿಯನ್ನು ಎಳೆಯಲಿಕ್ಕೆ ಬರುವದಿಲ್ಲವೆಂಬುದು ದುಃಖದ ಸಂಗತಿ."

ಇವತ್ತು ರಾಟಿಯನ್ನು ನಡೆಸುವಾಗ ಗಾಲಿಯು ತಿರುಗುತ್ತಿದ್ದಿಲ್ಲ. ಕೈ ಹಚ್ಚದಿರುವ ಪ್ರತಿಜ್ಞೆಯನ್ನು ತೆಗೆದುಕೊಂಡಿರುವದರಿಂದ ಕಾಲಿನ ಹೆಬ್ಬಟ್ಟಿನಿಂದಲೇ ಅದನ್ನು ತಿರುಗಿಸಬೇಕಾಗಿತ್ತು. ಒಂದು ಕೈಯಲ್ಲಿ ಹಂಜಿಯ ಉದ್ದ ಎಳೆ, ಒಂದು ಕಾಲು ಪೆಡಲ್ ಮೇಲೆ ಮತ್ತೊಂದು ಕಾಲು ಮೇಲಕ್ಕೆತ್ತಿ ಗಾಲಿಯನ್ನು ತಿರುಗಿಸು-ವಾಗ ಬಾಪೂ ನಟರಾಜನಂತೆ ಕಾಣುತ್ತಿದ್ದರು. "ನನ್ನ ಹತ್ತರ ಕ್ಯಾಮೆರಾ ಇದ್ದರೆ ಫೋಟೊ ತೆಗೆದುಕೊಳ್ಳುತ್ತಿದ್ದೆ." ಎಂದು ವಲ್ಲಭಭಾಯಿ ಅಂದರು.

ಚರಸಾಡಾದಲ್ಲಿ ಸಾವಿರಾರು ಅಂಗಡಿಗಳು ಸುಟ್ಟವು. ಆಕಸ್ಮಿಕ ಬೆಂಕಿ ಹತ್ತಿತ್ತೆಂದು ಕಾರಣ ತೋರಿಸಲಾಗುತ್ತಿದೆ. ಬಾಪೂ ಹೇಳಿದರು: "ಇದರಲ್ಲಿ ಈ ಜನರ ಕೈವಾಡವಿರಲಿಕ್ಕಿಲ್ಲವಷ್ಟೆ ಎಂದು ನನ್ನ ಮನಸ್ಸಿನಲ್ಲಿ ಬರುವಷ್ಟು ನಾನು ಈ ಸರಕಾರದ ಮೇಲೆ ಸಾಶಂಕಿತನಾಗಿದ್ದೇನೆ. ಮುಂಬೈಯಲ್ಲಿ ಆದಂತೆಯೇ ಚರಸಾಡಾ ದಲ್ಲಿಯೂ ಆಗಿರಬಹುದು."

ನಾರಾಯಣದಾಸರ ಮೇಲೆ ಬಾಪೂ ಮುಗ್ಧರಾಗಿದ್ದಾರೆ. ದೇವದಾಸರಿಗೆ ಬರೆದ ಉದ್ದ ಪತ್ರದಲ್ಲಿ ಇವರನ್ನು ಬಹಳ ವರ್ಣಿಸಿದ್ದರು. ನಿನ್ನೆ ಇವರಿಗೆ ಬರೆದ ಪತ್ರದಲ್ಲಿಯಂತೂ ಆ ವರ್ಣನೆ ಇದ್ದೇ ಇತ್ತು. "ಮತ್ತು ಹತ್ತರವೇ ನಾರಾಯಣ ದಾಸರಂಥ ಸಾಧು ಪುರುಷರು. ನಾರಾಯಣದಾಸರ ದೃಢತೆ, ಸಹನ ಶೀಲತೆ, ಧೈರ್ಯ, ತ್ಯಾಗಶಕ್ತಿ, ವಿವೇಕಬುದ್ಧಿ ಮುಂತಾದವುಗಳು ನನ್ನಂಥವನಿಗೆ ಸಹ ಮತ್ಸರ ವನ್ನುಂಟು ಮಾಡುತ್ತವೆ. ಇವರು ನನ್ನನ್ನು ಆಶ್ರಮದ ವಿಷಯಕ್ಕೆ ಸಂಪೂರ್ಣ ನಿಶ್ಚಿಂತನನ್ನಾಗಿ ಮಾಡಿಬಿಟ್ಟಿದ್ದಾರೆ." ನಾರಾಯಣದಾಸರಿಗೆ ಬರೆಯುವಾಗ ಬರೆದಿದ್ದರು: "ನಮಗೆ ಒಳಗೆ ಕುಳಿತು ಬಿಸಿಲನ್ನು ಸಹಿಸುವದಾಗಲೊಲ್ಲದು. ನೀವು ಒಳಗೂ ಹೊರಗೂ ಕೂಡಿಯೇ ತಪಶ್ಚರ್ಯವನ್ನು ಮಾಡುತ್ತಿದ್ದೀರಿ."

ಉರ್ದು ಅಭ್ಯಾಸದ ವಿಷಯಕ್ಕೆ ಬರೆಯುವಾಗ ದೇವದಾಸನಿಗೆ ಬರೆಯುತ್ತಾರೆ: "ಪ್ರತಿಯೊಂದು ಪಾಠಮಾಲೆಯಲ್ಲಿ ಐತಿಹಾಸಿಕ ಭಾಗವಿರುತ್ತದೆ. ಇದರಲ್ಲಿ ಕೆಲವೊಂದು ಪೈಗಂಬರ ಮತ್ತು ಅವರ ಕಾಲದ್ದು, ಕೆಲವೊಂದು ಹಿಂದುಸ್ಥಾನದಲ್ಲಿ ಆಗಿ ಹೋದ ಮುಸಲ್ಮಾನ ಬಾದಶಹರದು ಇರುತ್ತದೆ. ಇದರಲ್ಲಿ ಇಡಲಾಗಿದ್ದ ದೃಷ್ಟಿಕೋನವನ್ನು ಎಲ್ಲರೂ ತಿಳಿದುಕೊಳ್ಳಬೇಕೆಂದು ನನ್ನ ವಿಚಾರ. ಉರ್ದೂದ ಪರಿಚಯದ ಮಹತ್ವವು ನನಗೆ ಹೆಚ್ಚೆಚ್ಚು ಅನಿಸತೊಡಗಿದೆ. ಬರೆಯುವದನ್ನು ಕಲಿಯುವದರಿಂದ ಕಾಗದಪತ್ರಗಳನ್ನು ಬರೆಯಲಿಕ್ಕೆ ಬರುತ್ತದೆ. ಆದರೆ ಇದಕ್ಕೂ ಹೆಚ್ಚಿನ ಮತ್ತು ನಿಜವಾದ ಲಾಭವೆಂದರೆ ಭಾಷೆಯ ಮೇಲಿನ ಹಿಡಿತವು ಹೆಚ್ಚಾಗುತ್ತದೆ. ಅಲ್ಲದೆ ಓದುವದಕ್ಕೂ ಸಹಾಯ ದೊರೆಯುತ್ತದೆ. ನನಗಂತೂ ತಿಳಿದುಕೊಳ್ಳಲಿಕ್ಕೂ

ಸಹಾಯವಾಗುತ್ತದೆ. ಮುಸಲ್ಮಾನ ಸಂಗಡಿಗರಿಗೆ ನಾವು ಉರ್ದುವಿನಲ್ಲಿ ಬರೆಯಲಿಕ್ಕೆ ಬರಬೇಕೆಂದು ನನ್ನ ವಿಚಾರ. ಅವರಿಗೆ ಇಂಗ್ಲೀಷಿನಲ್ಲಿಯೇ ಬರೆಯುವದಾದರೆ ಹಿಂದಿ ಯಾವ ಕಾಲಕ್ಕೂ ರಾಷ್ಟ್ರೀಯ ಭಾಷೆ ಆಗಲಾರದು. ಆದುದರಿಂದ ನನ್ನ ದೃಷ್ಟಿಯಿಂದ ಉರ್ದುವಿನಲ್ಲಿ ಬರೆಯುವ ಶಕ್ತಿಯು ನಮಗೆ ಅವಶ್ಯವಾಗಿದೆ." ರೈಹಾನಾ ತಯಬಜಿಗೆ ಪತ್ರ ಬರೆಯುವದರ ಸಲುವಾಗಿ ಯಾವ ಪ್ರಕಾರ ಉರ್ದು ಬರೆಯುವದು ಪ್ರಾರಂಭವಾಯಿತೆಂಬುದನ್ನು ಹೇಳಿ ಮತ್ತೆ "ಮುಸಲ್ಮಾನರ ಸಂಗಡ ಶುದ್ಧ ಸಂಬಂಧವನ್ನು ಬೆಳೆಸಲಿಕ್ಕೆ ಇದು ಅಹಿಂಸಕವೂ ಸೂಕ್ಷ್ಮವೂ ಆದ ಉಪಾಯವಾಗಿದೆ." ಎಂದು ಬರೆದರು. ಬಿರ್ಲಾರಿಗೆ ಪತ್ರ ಬರೆಯುವಾಗ ಬರೆದರು: "ಆಶಾವಾದ ಮತ್ತು ಭೋಳೆತನ ಇವುಗಳಲ್ಲಿ ನಾನು ಭೇದ ಮಾಡುತ್ತೇನೆ. ಪಂಡಿತಜೀಯವರಲ್ಲಿ ಎರಡೂ ಇವೆ. ದೃಷ್ಟಿಮರ್ಯಾದೆಯ ಮೇಲೆ ನಿರಾಶೆಯ ಚಿಹ್ನವಿರುತ್ತಿದ್ದರೂ ಮತ್ತು ತಿಳಿಯುತ್ತಿದ್ದರೂ ಯಾವನು ಆಶೆ ಹಿಡಿಯುತ್ತಾನೆಯೊ ಅವನೇ ಆಶಾವಾದಿಯು. ಈ ಗುಣವು ಪಂಡಿತಜೀಯವರಲ್ಲಿ ಸಾಕಷ್ಟಿದೆ. ಯಾರಾದರೂ ಆಶೆಯನ್ನು ಹುಟ್ಟಿಸುವ ಮಾತುಗಳನ್ನು ಹೇಳಿದರೆ ಅದರ ಮೇಲೆ ವಿಶ್ವಾಸವಿಡುವದು ಭೋಳೆತನವು. ಇದೂ ಸಹ ಪಂಡಿತಜೀಯವರಲ್ಲಿದೆ. ಅದು ತ್ಯಾಜ್ಯವೆಂದು ನಾನು ತಿಳಿಯುತ್ತೇನೆ. ಪಂಡಿತಜಿ ಮಹಾನ್‌ವ್ಯಕ್ತಿ ಇರುವದರಿಂದ ಅವರಿಗೆ ಇಂಥ ಭೋಳೆತನದಿಂದ ಹಾನಿಯಾಗಿರುವದಿಲ್ಲ. ನೋಡಿರಿ, ನಾವು ಇಂಥ ಭೋಳೆತನದ ಅನುಕರಣವನ್ನು ಎಂದೂ ಮಾಡತಕ್ಕದ್ದಲ್ಲ. ಆಶಾವಾದವು ಅಂತರ್ನಾದದ ಮೇಲೆ ನಿರ್ಭರವಾಗಿದೆ, ಭೋಳೆತನವು ಹೊರಗಿನ ಮಾತಿನ ಮೇಲೆ ನಿರ್ಭರವಾಗಿದೆ." ಮಾಲವೀಯಜಿಯವರು ಅಥವಾ ತಾವು ವಿಲಾಯತಿಗೆ ಹೋಗಬೇಕೊ ಬಾರದೊ ಎಂಬ ವಿಷಯಕ್ಕೆ ಬಿರ್ಲಾರು ಅಭಿಪ್ರಾಯ ಕೇಳಿದ್ದರು. "ನನಗೆ ಅಭಿಪ್ರಾಯ ಕೊಡುವ ಅಧಿಕಾರವಿಲ್ಲ. ಈ ವಿಷಯದ ಮೇಲೆ ನನ್ನ ಸಾಮಾನ್ಯ ವಿಚಾರಗಳು ಪ್ರಸಿದ್ಧವಿವೆ." ಎಂದು ಬಾಪೂ ಬರೆದರು.

**೨೮–೫–'೩೨** ಇವತ್ತು ಸೆಂಕಿಯ ಮೇಲೆ ಬ್ರೈಲ್ಸ್‌ಫೋರ್ಡರ ಪತ್ರ ಓದಿ ಬಾಪೂ ಅಂದರು: "ವಿಲಾಯತಿಗೆ ಹೋಗುವದು ಅತ್ಯಂತ ಅವಶ್ಯವಿತ್ತೆಂದು ದಿನೇದಿನೇ ಹೆಚ್ಚೆಚ್ಚು ಸಿದ್ಧವಾಗತೊಡಗಿದೆ. ಅಲ್ಲಿ ಹೋಗದಿದ್ದರೆ ನಮ್ಮ ವಿಷಯಕ್ಕೂ ನಮ್ಮ ಪ್ರಶ್ನೆಯ ವಿಷಯಕ್ಕೂ ಜನರಿಗೆ ಇಷ್ಟು ತಿಳಿಯುವದು ಸಾಧ್ಯವಿದ್ದಿಲ್ಲ. ಇವತ್ತು ಇಷ್ಟು ಹೆಚ್ಚು ಜನರು ನಿಃಸ್ವಾರ್ಥ ಬುದ್ಧಿಯಿಂದ ಕೆಲಸ ಮಾಡುತ್ತಿರುವದೇನೂ ಸಣ್ಣ ಪುಟ್ಟ ಮಾತಲ್ಲ."

ಎಲ್ವಿನ್ನರ ಪತ್ರದಲ್ಲಿ ಪ್ಲಾಟಿನಸ್‌ರ ಎರಡು ಸುಂದರ ಉದಾಹರಣೆಗಳಿದ್ದವು:

"I have been meditating on the writings of Plotinus so like

the Gita in his stress on the life of beauty which men live when they have climbed above the life of senses. He speaks of the eternal beauty which makes its lovers beautiful so that they too are worthy of love. 'It is for this that souls must run their ultimate and greater race; the prize, of all their striving is this, that they be not without portion in the supreme spectacle. Blessed is he whose eyes have seen the blessed Vision, but he who fails in this has verily failed. For a man may fail to win fair body, may fail to win power or office or a king's throne, and yet it is not failure. Failure it is, although he should gain all else if a man fail of this—for whose winning he ought to reject thrones and principalities of all the earth and sea and sky, if by leaving these behind him and looking beyond them his vision might be converted thither and he should see.'

"Plotinus gives this account of the ascetic process:

'Withdraw in thyself and see thyself. And if as yet thou see no beauty in thyself, then do as does the maker of an image which shall at last be fair; as he strikes off a part and a part planes away, as he makes this smooth and releases that, until he has revealed upon the image its face of beauty. So do thou strip away all excess and make straight all crookedness. Whatsoever is yet prisoned in darkness, labour to release it that it may be bright, and cease not from the fashioning of thine own image, until that day when the glory of virtue as of a god shall flame upon thee and thine eyes shall behold serenity established on her stainless pedestal."

"ನಾನು ಪ್ಲಾಟಿನಸ್‌ನ ಲೇಖನದ ಚಿಂತನೆ ಮಾಡುತ್ತಿದ್ದೇನೆ. ಮನುಷ್ಯನು ವಿಷಯುಗಳೊಳಗಿಂದ ಮುಕ್ತನಾದಾಗಲೇ ಸೌಂದರ್ಯದ ಅನುಭವ ಪಡೆಯಬಲ್ಲನು ಎಂಬುದರ ಮೇಲೆ ಗೀತೆಯು ಒತ್ತಿಹೇಳಿದಷ್ಟೇ ಇವನೂ ಒತ್ತಿ ಹೇಳಿದ್ದಾನೆ. ಶಾಶ್ವತ ಸೌಂದರ್ಯದ ವಿಷಯಕ್ಕೆ ಇವನು ಹೇಳುವದೇನಂದರೆ ಅದು ತನ್ನ ಉಪಾಸಕರನ್ನು ಸುಂದರರನ್ನಾಗಿ ಮಾಡುವದರಿಂದ ಅವರೂ ಸಹ ಪ್ರೇಮಪಾತ್ರರಾಗುತ್ತಾರೆ. 'ಆತ್ಮದ ಅಂತಿಮ ಮತ್ತು ಪರಮ ಪುರುಷಾರ್ಥವು ಇದರ ಸಲುವಾಗಿಯೇ ಇರತಕ್ಕದ್ದು. ಈ ಎಲ್ಲ ಪುರುಷಾರ್ಥದ ಫಲವೆಂದರೆ ಅವರು ಚರಮ ದರ್ಶನದ ಅಧಿಕಾರಿಗಳಾಗುತ್ತಾರೆ. ಈ ದರ್ಶನ ಮಾಡಿಕೊಂಡವರು ಧನ್ಯರು. ಈ ದರ್ಶನ

ವಾಗದಿದ್ದವರು ದೊರಕಿಸಿದ್ದಾದರೂ ಏನು? ಮನುಷ್ಯನಿಗೆ ಸುಂದರ ಶರೀರ ದೊರಕಲಿಕ್ಕಿಲ್ಲ, ಅಧಿಕಾರ ಅಥವಾ ಪದವಿ ದೊರಕಲಿಕ್ಕಿಲ್ಲ, ರಾಜಸಿಂಹಾಸನ ದೊರಕಲಿಕ್ಕಿಲ್ಲ. ಇದರಿಂದ ಅವನಿಗೇನೂ ಹಾನಿಯಿಲ್ಲ. ಇವೆಲ್ಲವುಗಳು ಪ್ರಾಪ್ತವಾದಾಗ್ಯೂ ಆ ದರ್ಶನವಾಗದಿದ್ದರೆ ಆಗ ಹಾನಿಯು. ಇದನ್ನು ಪ್ರಾಪ್ತ ಮಾಡಿಕೊಳ್ಳುವದಕ್ಕಾಗಿ ಮನುಷ್ಯನು ರಾಜಸಿಂಹಾಸನವನ್ನು ಬಿಡಬೇಕು; ಈ ಪೃಥ್ವಿ, ಸಮುದ್ರ ಮತ್ತು ಆಕಾಶಗಳ ಮೇಲಿನ ಅಧಿಕಾರತ್ಯಾಗ ಮಾಡಬೇಕು. ಇವೆಲ್ಲವುಗಳನ್ನು ತಿರಸ್ಕರಿಸಿ ಇವೆಲ್ಲವುಗಳಿಂದ ಹೊರಗೆ ಬಂದರೆ ಅವನ ದೃಷ್ಟಿಯು ಆ ಕಡೆಗೆ ಹೊರಳಬಹುದು ಮತ್ತು **ಅದರ** ದರ್ಶನವಾಗಬಹುದು.'

"ಇದಾದಮೇಲೆ ಪ್ಲ್ಯಾಟಿನಸ್‌ನು ಸಾಧನೆಯ ವರ್ಣನೆ ಮಾಡುತ್ತಾನೆ:

'ಅಂತರ್ಮುಖನಾಗು ಮತ್ತು ನಿನ್ನ ಅಂತರಾತ್ಮನನ್ನು ನೋಡು. ಇಷ್ಟಾದ ಮೇಲೂ ನಿನಗೆ ನಿನ್ನಲ್ಲಿ ಸೌಂದರ್ಯ ಕಾಣದಿದ್ದರೆ ಶಿಲ್ಪಕಾರನು ಮೂರ್ತಿಯ ವಿಷಯಕ್ಕೆ ಮಾಡುವಂತೆ ನೀನೂ ಮಾಡು. ಮೂರ್ತಿಯು ಸುಂದರವಾಗಲಿಕ್ಕೇ ಬೇಕು. ಆದುದರಿಂದ ಅವನು ಕೆಲವೊಂದು ಭಾಗವನ್ನು ಪೂರ್ಣ ತೆಗೆದು ಹಾಕುತ್ತಾನೆ ಮತ್ತು ಕೆಲವೊಂದನ್ನು ಕೆತ್ತಿ ತೆಗೆಯುತ್ತಾನೆ. ಈ ಪ್ರಕಾರ ಮಾಡುತ್ತ ಮಾಡುತ್ತ ಅವನು ತನ್ನ ಮೂರ್ತಿಗೆ ಸೌಂದರ್ಯವನ್ನು ತರುತ್ತಾನೆ. ಇದೇ ಪ್ರಕಾರ ನೀನೂ ಸಹ ನಿನ್ನಲ್ಲಿದ್ದ ಅತಿಶಯೋಕ್ತಿಯನ್ನು ತೆಗೆದು ಹಾಕು, ವಕ್ರತೆಯಿದ್ದರೆ ಅದನ್ನು ತೆಗೆದು ಹಾಕಿ ಸರಳತೆಯನ್ನು ಧಾರಣಮಾಡು. ಯಾವದಾದರೂ ಕತ್ತಲೆಯಲ್ಲಿ ಕೊಳೆಯುತ್ತಿದ್ದರೆ ಅದನ್ನು ಹೊರಗೆ ತರಲಿಕ್ಕೆ ಶ್ರಮಪಡು, ಅಂದರೆ ಅದು ಸಹ ಪ್ರಕಾಶದಲ್ಲಿ ಬರಲಿ. ದೇವರಂತೆ ನಿನ್ನ ಮೇಲೆ ಸದ್ಗುಣಗಳ ಪ್ರಭೆಯು ಹೊಳೆಯಬೇಕು ಮತ್ತು ಅವನ ನಿರ್ಮಲ ಸಿಂಹಾಸನದ ಮೇಲೆ ಆರೂಢನಾಗಿ ಶಾಂತಿ ಸಮತೆಯ ದರ್ಶನ ಮಾಡಿಕೊಳ್ಳಬೇಕು. ಇದಾಗದವರೆಗೆ ನೀನು ನಿನ್ನ ಸ್ವಂತ ಮೂರ್ತಿಯನ್ನು ಕೆತ್ತುವ ಪ್ರಯತ್ನ ಬಿಡಬೇಡ!'"

ಅವನಿಗೆ ಬಾಪೂ ಬರೆದರು:

"The passages are very striking and very beautiful, but first is good for all times, while the second may not appeal to the modern mind. I do not find it difficult to understand it."

"ನೀವು ಕಳಿಸಿದ ಅವತರಣಿಕೆಗಳು ಬಹಳೇ ಆಕರ್ಷಕವೂ ಸುಂದರವೂ ಆಗಿವೆ. ಇವುಗಳಲ್ಲಿ ಮೊದಲನೆಯದು ಶಾಶ್ವತ ಮೂಲ್ಯವುಳ್ಳದ್ದು. ಎರಡನೆಯದು ಆಧುನಿಕ ಮನಸ್ಸಿಗೆ ಹಿಡಿಯುವದಿಲ್ಲ. ಇದನ್ನು ತಿಳಿದುಕೊಳ್ಳುವದು ನನಗೆ ಕಠಿಣವೆನಿಸುವದಿಲ್ಲ."

ನಾನು ಬಾಪೂರನ್ನು ಕೇಳಿದೆ: "ಎರಡನೇ ಅವತರಣಿಕೆಯ ಬಗ್ಗೆ ನಿಮಗೆ

ಹೀಗೇಕೆ ಅನಿಸುತ್ತದೆ? ” ಬಾಪೂ ಹೇಳಿದರು : “ ಇದರಿಂದ ಡಾಂಭಿಕತನ ಉತ್ಪನ್ನವಾಗುವ ಸಂಭವವಿದೆ. ತನ್ನ ಪ್ರಗತಿಯಿಂದ ಯಾರಿಗಾದರೂ ಸಂತೋಷವಾಗುವದೆ? ಅಥವಾ ಆಗಲಿಕ್ಕೆ ಬೇಕೆ? ಈಗ ನಾನು ದೇವತೆಗಳ ಕಾಂತಿಯಿಂದ ಬೆಳಗುತ್ತಿರುವೆನೆಂದು ಯಾರಿಗಾದರೂ ಅನಿಸಬಹುದೆ? ಆದರೂ ಸಹ ಇಂಥದನ್ನು ಓದಿ ಕೆಲವರಿಗೆ ಹೀಗೆನಿಸಬಹುದು. ನಾಥೂರಾಮ ಶರ್ಮಾ ಇದೇ ವೃತ್ತಿಯಿಂದ ಕೆಟ್ಟಿದ್ದಾರೆ. ಜನರು ಕೂಡಲೇ ಇವತ್ತು ಕಾಮವನ್ನು ಜಯಿಸಿದೆನು, ನಾಳೆ ಕ್ರೋಧವನ್ನು ಜಯಿಸುವೆನೆಂದು ತಿಳಿಯತೊಡಗುವರು. ‘ असौ मया हत: शत्रुर्हनिष्ये चापरानपि ” ನಾನು: “ಗೀತಾಕಾರನು ಈ ವಾಕ್ಯವನ್ನು ಈ ಸಂಬಂಧದಲ್ಲಿ ಉಪಯೋಗಿಸಿರಲಿಕ್ಕಿಲ್ಲ. ಇದರ ಮಾರ್ಮಿಕ ಪರಿಣಾಮವಾಗುವಂತೆ ನೀವು ಅದನ್ನು ಉಪಯೋಗಿಸುತ್ತಿದ್ದೀರಿ.” ಬಾಪೂ ನಕ್ಕು ಅಂದರು : “ ಇಲ್ಲ, ಆದರೆ ಸತ್ಯ ಸಂಗತಿಯೇ ಇದೆ. ಇಲ್ಲದಿದ್ದರೆ ಮೂರ್ತಿಕೆತ್ತುವವನ ಉಪಮೆಯು ಸರಿ ಹೋಗುವದಿಲ್ಲ. ಆತ್ಮವನ್ನು ಈ ಪ್ರಕಾರ ಕೆತ್ತುವರೆ? ನಾವು ಅದರ ಮರ್ಮ ತಿಳಿದುಕೊಳ್ಳುವದು ಸರಿಯಾಗಿದೆ. ದಿನಾಲು ತನ್ನನ್ನು ತಾನೇ ನಿರೀಕ್ಷಣ ಮಾಡಿಕೊಳ್ಳುತ್ತಿರಬೇಕು ಮತ್ತು ಇನ್ನೂ ಎಷ್ಟು ಅಂತರ ಗತಿಸುವದು ಉಳಿದಿದೆ ಎಂಬುದರ ವಿಚಾರ ಮಾಡಬೇಕು.”

ನಿನ್ನೆ ವೇಡಛಿ ಆಶ್ರಮದ ಜಪ್ತಮಾಡಿದ ಸಾಮಾನುಗಳಲ್ಲಿದ್ದ ರಾಟಿ, ಮಗ್ಗ ಮೊದಲಾದವುಗಳನ್ನು ಸರಕಾರವು ಸುಟ್ಟು ಹಾಕಿತೆಂಬ ಸುದ್ದಿ ಬಂತು. ಕರಾಡಿಯ ಗುಡಿಸಲುಗಳು ಆಕಸ್ಮಿಕವಾಗಿ ಸುಟ್ಟವು. ಆದರೆ ಈ ರಾಟಿಗಳು

**೨೯-೫-'೩೨** ಸರಕಾರದ ವಶದಲ್ಲಿಯೇ ಇದ್ದುದರಿಂದ ಸರಕಾರವೇ ಸುಟ್ಟಿತೆಂದು ಹೇಳುವದಕ್ಕೆ ಸಂಕೋಚವೇಕಾಗಬೇಕು ?

ಎಷ್ಟೋ ವಿಷಯಗಳನ್ನು ಕುರಿತು ಸರದಾರರ ಅಜ್ಞಾನವು ವಿಸ್ಮಯವನ್ನುಂಟು ಮಾಡುತ್ತದೆ. ನನ್ನನ್ನು ಕೇಳತೊಡಗಿದರು : ವಿವೇಕಾನಂದ ಯಾರಿದ್ದರು? ಎಲ್ಲಿಯವರಿದ್ದರು? ಬಂಗಾಲಿ ಇದ್ದರೆಂಬುದು ಗೊತ್ತಾದ ಮೇಲೆ ರಾಮಕೃಷ್ಣ ಮತ್ತು ಅವರು ಇಬ್ಬರೂ ಬಂಗಾಲದಲ್ಲಿ ಹುಟ್ಟಿದ್ದರೇನು ಎಂದು ಇವತ್ತು ಸ್ವಲ್ಪ ವಿಶೇಷ ಸ್ಪಷ್ಟೀಕರಣ ಕೇಳಿದರು. ‘ ಲೀಡರ ’ದ ಒಂದು ಟಿಪ್ಪಣಿಯಲ್ಲಿ ಸುಭಾಷರ ಪತ್ರ ಬಂದಿತ್ತು. ಇದರಲ್ಲಿ ಅವರು ವಿವೇಕಾನಂದರನ್ನು ತಮ್ಮ ಆದರ್ಶ ಪುರುಷರೆಂದು ತೋರಿಸಿದ್ದರು. ಬಹುತರವಾಗಿ ಇದಕ್ಕಾಗಿಯೇ ಸರದಾರರಿಗೆ ಇಷ್ಟು ಕುತೂಹಲವಾಗಿರಬಹುದು. ಇವರಿಬ್ಬರೂ ಬಂಗಾಲದಲ್ಲಿಯೇ ಹುಟ್ಟಿದ್ದರೇನು ಎಂದು ಇವತ್ತು ಕೇಳಿದರು. ಇನ್ನು ಮೇಲೆ ಅವರು ರೊಮ್ಯಾ ರೋಲ್ಯಾರ ‘ರಾಮಕೃಷ್ಣ ಪರಮಹಂಸ’ ಮತ್ತು ‘ವಿವೇಕಾನಂದ’ ಈ ಎರಡೂ ಪುಸ್ತಕಗಳನ್ನು ಓದಿಬಿಡುವರು.

‘ ಸಂಗ್ರಹ ಮಾಡಿಟ್ಟ ಹಾವು ಸಹ ಕೆಲಸಕ್ಕೆ ಬರುತ್ತದೆ. ’ ಎಂಬ

ನಾಣ್ಣುಡಿಯು ಹೇಗೆ ರೂಢಿಯಲ್ಲಿ ಬಂತು? ಬಾಪೂ ಒಂದು ಮಾತನ್ನು ಹೇಳಿದರು: "ಒಂದು ಮುದುಕೆಯ ಮನೆಯಲ್ಲಿ ಹಾವು ಬಂತು. ಅದನ್ನು ಹೊಡೆದರು. ಒಗೆಸಿ ಬಿಡುವದರ ಬದಲು ಮುದುಕೆಯು ಅದನ್ನು ಚಪ್ಪರದ ಮೇಲೆ ಇಟ್ಟಳು. ಎಲ್ಲಿಂದಲೋ ಮುತ್ತಿನಹಾರವನ್ನು ತಂದು ಹಾರಾಡುತ್ತಿರುವ ಒಂದು ಗಿಡಗವು, ಆ ಹಾವನ್ನು ನೋಡಿದ ಕೂಡಲೇ, ಹಾರಕ್ಕಿಂತ ಹಾವು ಹೆಚ್ಚು ಉಪಯುಕ್ತವೆಂದು ತಿಳಿದು ಹಾರವನ್ನು ಚಪ್ಪರದ ಮೇಲೆ ಒಗೆದು ಹಾವನ್ನು ಎತ್ತಿಕೊಂಡು ಹೋಯಿತು! ಈ ರೀತಿ ಮುದುಕೆಯು ಹಾವಿನ ಸಂಗ್ರಹ ಮಾಡಿ ಹಾರವನ್ನು ದೊರಕಿಸಿದಳು." ಸರದಾರರು ಇದರ ಮೂಲವನ್ನು ಈ ಪ್ರಕಾರ ಹೇಳಿದರು: "ಒಬ್ಬ ಬನಿಯಾನಲ್ಲಿ ಒಂದು ಹಾವು ಬಂತು. ಅದನ್ನು ಹೊಡೆಯುವವರು ಯಾರೂ ಸಿಗಲಿಲ್ಲ. ಸ್ವತಃಕ್ಕೆ ಹೊಡೆಯುವ ಧೈರ್ಯವಿದ್ದಿಲ್ಲ. ಅಥವಾ ಹೊಡೆಯುವದಿದ್ದಿಲ್ಲ. ಆದುದರಿಂದ ಅದನ್ನು ತಪ್ಪೇಲಿಯ ಬುಡದಲ್ಲಿ ಮುಚ್ಚಿಟ್ಟನು. ರಾತ್ರಿ ಕಳ್ಳರು ಬಂದರು. ಉತ್ಸುಕತೆಯಿಂದ ತಪ್ಪೇಲಿ ಎತ್ತ ಹೋದರು. ಅಲ್ಲಿ ಹಾವು ಕಚ್ಚಿತು. ಕಳವು ಮಾಡುವದರ ಬದಲು ಪರಂಧಾಮುವನ್ನು ಹೊಂದಿದರು." ನರಸಿಂಹರಾಯರಿಗೆ ಕೇಳಬೇಕು. ವಿಶೇಷವಾಗಿ ಈ ಸಾರೆಯ 'ವಸಂತ' ದ ಅಂಕನಲ್ಲಿ 'Kill two birds with one stone' — ಒಂದೇ ಕಲ್ಲಿನಿಂದ ಎರಡು ಪಕ್ಷಿಗಳನ್ನು ಕೊಲ್ಲು— ಇದರ ಮೇಲೆ ಇಷ್ಟೊಂದು ಹೆಚ್ಚು ಪುಟಗಳನ್ನು ತುಂಬಿದ್ದಾರೆ.

ಇವತ್ತು ಬಾಪೂ ಪುನಃ ಬಲಗೈಯಿಂದ ಪತ್ರ ಬರೆಯಲಿಕ್ಕೆ ಪ್ರಾರಂಭ ಮಾಡಿದರು. ಎಡಗೈ ಉಪಯೋಗವು ಹೆಚ್ಚಾಗುತ್ತಿರುವದರಿಂದ ಅದರ ಸ್ಥಿತಿಯೂ ಬಲಗೈಯಂತೆಯೇ ಆಗಿಬಿಟ್ಟಿದೆ. ಆದುದರಿಂದ ಇನ್ನು ಕೆಲವು ದಿವಸ ಬಲಗೈಯನ್ನು ಉಪಯೋಗಿಸಿರಿ ಎಂದು ಡಾಕ್ಟರರು ಹೇಳುತ್ತಾರೆ. ಇದರ ವರ್ಣನೆ ಮಾಡುತ್ತ ಬಾಪೂ ಗೋಸೀಬೇನರ ಪತ್ರದಲ್ಲಿ 'ಪುನಶ್ಚ' ಎಂದು ಹೇಳಿ ಬರೆದಿದ್ದಾರೆ: "ಈಗ ನನ್ನ ಎಡಗೈ ಉಪಯೋಗ ಮಾಡದಿರುವ ಸರತಿ ಬಂದಿದೆ. ಮುಪ್ಪು ಜೋರಿನಿಂದ ಬಾಗಿಲವನ್ನು ಬಡೆಯುತ್ತಿರಬಹುದು?" ಎರಡನೇ ರೀತಿಯಿಂದಲೂ ಪತ್ರವು ಮನೋರಂಜಕವಾಗಿದೆ:

"Your welcome letter. I don't expect Jalbhai to trouble to write to me. I expect you the nurses to do that work. A patient has to eat, sleep, complain and bully. He is an angel when he omits to do the two last things. I hope the crutches will go.

"I am no good at choosing books for others, even for you, though so near to me. The book of life is really the book to read

and that you are doing more or less. The other is amusement for those who have no service. One would think that here at least one would have plenty of time to read. Well, spinning and preparatory study leave little time for reading for amusement. But I must stop this lecturing.

" Are you keeping well? Has Nargisbahen lost her headache ? The Govts'. reply regarding her is that I am not to see her. Evidently they think that she is taking an active part in politics or that she suffers from contamination."

" ನಿಮ್ಮ ಪತ್ರದಿಂದ ಆನಂದವಾಯಿತು. ಜಾಲಭಾಯಿಯು ನನಗೆ ಬರೆಯುವ ಶ್ರಮ ತೆಗೆದುಕೊಳ್ಳಬಾರದು. ಇದು ನರ್ಸುಗಳಾದ ನಿಮ್ಮ ಕೆಲಸ. ರೋಗಿಯು ತಿನ್ನುತ್ತಾನೆ, ಮಲಗುತ್ತಾನೆ, ತಕರಾರುಮಾಡುತ್ತಾನೆ ಮತ್ತು ಬೆದರಿಕೆ ಹಾಕುತ್ತಾನೆ. ಕೊನೆಯವೆರಡು ಮಾತು ಮಾಡುವದನ್ನು ಬಿಟ್ಟರೆ ಅವನೊಬ್ಬ ದೇವತೆ. ಅವರಿಗೆ ಊರುಗೋಲುಗಳನ್ನು ಹಿಡಿಯಲಿಕ್ಕೆ ಬೇಕಾಗಲಿಕ್ಕಿಲ್ಲೆಂದು ಆಶಿಸುತ್ತೇನೆ.

" ಎರಡನೆಯವರ ಸಲುವಾಗಿ ಪುಸ್ತಕಗಳನ್ನು ಶಿಫಾರಸು ಮಾಡಲು ನಾನು ತೀರ ಅಯೋಗ್ಯನು. ನೀವು ಇಷ್ಟು ಸಮೀಪದವರಿದ್ದರೂ ನಿಮ್ಮ ಸಲುವಾಗಿ ಕೂಡ ಆರಿಸಲಿಕ್ಕೆ ನಾನು ಅಯೋಗ್ಯನು. ನಿಜವಾಗಿ ಓದುವಂತಹದೆಂದರೆ ಈ ಜೀವನ ಪುಸ್ತಕವೇ ಆಗಿದೆ. ಅದನ್ನಂತೂ ನೀವು ಸ್ವಲ್ಪಿಲ್ಲ ಸ್ವಲ್ಪು ಓದುತ್ತಾ ಇದ್ದೀರಿ. ಬೇರೆ ಪುಸ್ತಕಗಳು ಕೆಲಸವಿಲ್ಲದವರ ವಿನೋದಕ್ಕಾಗಿ ಇರುತ್ತವೆ. ಇಲ್ಲಿ ನಮಗೆ ಓದಲಿಕ್ಕೆ ಬಹಳ ಸಮಯ ಸಿಗುತ್ತಿರಬಹುದೆಂದು ಯಾರಿಗಾದರೂ ಅನಿಸಬಹುದು. ಆದರೆ ನೂಲುವದು ಮತ್ತು ಸಿದ್ಧತೆಯ ಸಲುವಾಗಿ ಓದುವದು ಇವುಗಳಲ್ಲಿ ವಿನೋದದ ಸಲುವಾಗಿ ಓದಲಿಕ್ಕೆ ಸಮಯವೇ ಸಿಗುವದಿಲ್ಲ. ಆದರೆ ನಾನು ಈ ವ್ಯಾಖ್ಯಾನವನ್ನು ನಿಲ್ಲಿಸಲಿಕ್ಕೆ ಬೇಕು.

" ನಿಮ್ಮ ಆರೋಗ್ಯವು ಸರಿಯಾಗಿದೆಯೆ ? ನರಗಿಸಬಹನರ ತಲೆನೋವು ನಿಂತಿತೆ ? ಅವರನ್ನು ನಾನು ಭೆಟ್ಟಿಯಾಗಕೂಡದೆಂದು ಸರಕಾರದಿಂದ ಉತ್ತರ ಬಂದಿದೆ. ಅವರು ರಾಜಕೀಯ ವಿಷಯಗಳಲ್ಲಿ ಸಕ್ರಿಯ ಭಾಗ ತೆಗೆದುಕೊಳ್ಳುತ್ತಾರೆ ಅಥವಾ ಅವರಿಗೆ ರಾಜಕೀಯ ಸಂಸರ್ಗ ಅಂಟಿಕೊಂಡಿದೆ ಎಂದು ಸರಕಾರವು ಅವಶ್ಯವಾಗಿ ತಿಳಿಯುತ್ತಿರಬಹುದು. "

ಮೌನವಾರ ಬರೆಯುವ ಪತ್ರಗಳು ಹೆಚ್ಚಿನ ಅಗತ್ಯದವು ಅಥವಾ ಬಾಪೂ ಸ್ವತಃ ಬರೆಯತಕ್ಕಂಥ ಜನರವು ಅಥವಾ ಬಾಪೂ ಸ್ವಂತ ಅಕ್ಷರದಿಂದ ವಿಶೇಷ ಆಶ್ವಾಸನ ಕೊಡತಕ್ಕಂಥವರವು ಆಗಿರುತ್ತವೆ. ಡಾ. ಮೆಹತಾರ ಸಂಗಡ ನಿಕಟ ಸಂಬಂಧವಿರುವ ಕಾರಣ ಅವರ ಮಗನ ಉತ್ಕರ್ಷದಲ್ಲಿ ತಂದೆಗಿಂತಲೂ ಹೆಚ್ಚು

ನಾಣ್ನುಡಿಯು ಹೇಗೆ ರೂಢಿಯಲ್ಲಿ ಬಂತು? ಬಾಪೂ ಒಂದು ಮಾತನ್ನು ಹೇಳಿದರು: "ಒಂದು ಮುದುಕೆಯ ಮನೆಯಲ್ಲಿ ಹಾವು ಬಂತು. ಅದನ್ನು ಹೊಡೆದರು. ಒಗೆಸಿ ಬಿಡುವದರ ಬದಲು ಮುದುಕೆಯು ಅದನ್ನು ಚಪ್ಪರದ ಮೇಲೆ ಇಟ್ಟಳು. ಎಲ್ಲಿಂದಲೋ ಮುತ್ತಿನಹಾರವನ್ನು ತಂದು ಹಾರಾಡುತ್ತಿರುವ ಒಂದು ಗಿಡಗವು, ಆ ಹಾವನ್ನು ನೋಡಿದ ಕೂಡಲೇ, ಹಾರಕ್ಕಿಂತ ಹಾವು ಹೆಚ್ಚು ಉಪಯುಕ್ತವೆಂದು ತಿಳಿದು ಹಾರವನ್ನು ಚಪ್ಪರದ ಮೇಲೆ ಒಗೆದು ಹಾವನ್ನು ಎತ್ತಿಕೊಂಡು ಹೋಯಿತು! ಈ ರೀತಿ ಮುದುಕೆಯು ಹಾವಿನ ಸಂಗ್ರಹ ಮಾಡಿ ಹಾರವನ್ನು ದೊರಕಿಸಿದಳು." ಸರದಾರರು ಇದರ ಮೂಲವನ್ನು ಈ ಪ್ರಕಾರ ಹೇಳಿದರು: "ಒಬ್ಬ ಬನಿಯಾನಲ್ಲಿ ಒಂದು ಹಾವು ಬಂತು. ಅದನ್ನು ಹೊಡೆಯುವವರು ಯಾರೂ ಸಿಗಲಿಲ್ಲ. ಸ್ವತಃಕ್ಕೆ ಹೊಡೆಯುವ ಧೈರ್ಯವಿದ್ದಿಲ್ಲ. ಅಥವಾ ಹೊಡೆಯುವದಿದ್ದಿಲ್ಲ. ಆದುದರಿಂದ ಅದನ್ನು ತಪ್ಪೇಲಿಯ ಬುಡದಲ್ಲಿ ಮುಚ್ಚಿಟ್ಟನು. ರಾತ್ರಿ ಕಳ್ಳರು ಬಂದರು. ಉತ್ಸುಕತೆಯಿಂದ ತಪ್ಪೇಲಿ ಎತ್ತ ಹೋದರು. ಅಲ್ಲಿ ಹಾವು ಕಚ್ಚಿತು. ಕಳವು ಮಾಡುವದರ ಬದಲು ಪರಂಧಾಮವನ್ನು ಹೊಂದಿದರು." ನರಸಿಂಹರಾಯರಿಗೆ ಕೇಳಬೇಕು. ವಿಶೇಷವಾಗಿ ಈ ಸಾರೆಯ 'ವಸಂತ'ದ ಅಂಕಿನಲ್ಲಿ 'Kill two birds with one stone' — ಒಂದೇ ಕಲ್ಲಿನಿಂದ ಎರಡು ಪಕ್ಷಿಗಳನ್ನು ಕೊಲ್ಲು— ಇದರ ಮೇಲೆ ಇಷ್ಟೊಂದು ಹೆಚ್ಚು ಪುಟಗಳನ್ನು ತುಂಬಿದ್ದಾರೆ.

ಇವತ್ತು ಬಾಪೂ ಪುನಃ ಬಲಗೈಯಿಂದ ಪತ್ರ ಬರೆಯಲಿಕ್ಕೆ ಪ್ರಾರಂಭ ಮಾಡಿದರು. ಎಡಗೈ ಉಪಯೋಗವು ಹೆಚ್ಚಾಗುತ್ತಿರುವದರಿಂದ ಅದರ ಸ್ಥಿತಿಯೂ ಬಲಗೈಯಂತೆಯೇ ಆಗಿಬಿಟ್ಟದೆ. ಆದುದರಿಂದ ಇನ್ನು ಕೆಲವು ದಿವಸ ಬಲಗೈಯನ್ನು ಉಪಯೋಗಿಸಿರಿ ಎಂದು ಡಾಕ್ಟರರು ಹೇಳುತ್ತಾರೆ. ಇದರ ವರ್ಣನೆ ಮಾಡುತ್ತ ಬಾಪೂ ಗೋಸೀಬೇನರ ಪತ್ರದಲ್ಲಿ 'ಪುನಶ್ಚ' ಎಂದು ಹೇಳಿ ಬರೆದಿದ್ದಾರೆ: "ಈಗ ನನ್ನ ಎಡಗೈ ಉಪಯೋಗ ಮಾಡದಿರುವ ಸರತಿ ಬಂದಿದೆ. ಮುಪ್ಪು ಜೋರಿನಿಂದ ಬಾಗಿಲವನ್ನು ಬಡೆಯುತ್ತಿರಬಹುದು?" ಎರಡನೇ ರೀತಿಯಿಂದಲೂ ಪತ್ರವು ಮನೋರಂಜಕವಾಗಿದೆ:

"Your welcome letter. I don't expect Jalbhai to trouble to write to me. I expect you the nurses to do that work. A patient has to eat, sleep, complain and bully. He is an angel when he omits to do the two last things. I hope the crutches will go.

"I am no good at choosing books for others, even for you, though so near to me. The book of life is really the book to read

and that you are doing more or less. The other is amusement for those who have no service. One would think that here at least one would have plenty of time to read. Well, spinning and preparatory study leave little time for reading for amusement. But I must stop this lecturing.

" Are you keeping well? Has Nargisbahen lost her headache ? The Govts'. reply regarding her is that I am not to see her. Evidently they think that she is taking an active part in politics or that she suffers from contamination."

" ನಿಮ್ಮ ಪತ್ರದಿಂದ ಆನಂದವಾಯಿತು. ಜಾಲಭಾಯಿಯು ನನಗೆ ಬರೆಯುವ ಶ್ರಮ ತೆಗೆದುಕೊಳ್ಳಬಾರದು. ಇದು ನರ್ಸುಗಳಾದ ನಿಮ್ಮ ಕೆಲಸ. ರೋಗಿಯು ತಿನ್ನುತ್ತಾನೆ, ಮಲಗುತ್ತಾನೆ, ತಕರಾರುಮಾಡುತ್ತಾನೆ ಮತ್ತು ಬೆದರಿಕೆ ಹಾಕುತ್ತಾನೆ. ಕೊನೆಯವೆರಡು ಮಾತು ಮಾಡುವದನ್ನು ಬಿಟ್ಟರೆ ಅವನೊಬ್ಬ ದೇವತೆ. ಅವರಿಗೆ ಊರುಗೋಲುಗಳನ್ನು ಹಿಡಿಯಲಿಕ್ಕೆ ಬೇಕಾಗಲಿಕ್ಕಿಲ್ಲೆಂದು ಆಶಿಸುತ್ತೇನೆ.

" ಎರಡನೆಯವರ ಸಲುವಾಗಿ ಪುಸ್ತಕಗಳನ್ನು ಶಿಫಾರಸು ಮಾಡಲು ನಾನು ತೀರ ಅಯೋಗ್ಯನು. ನೀವು ಇಷ್ಟು ಸಮೀಪದವರಿದ್ದರೂ ನಿಮ್ಮ ಸಲುವಾಗಿ ಕೂಡ ಆರಿಸಲಿಕ್ಕೆ ನಾನು ಅಯೋಗ್ಯನು. ನಿಜವಾಗಿ ಓದುವಂತಹದೆಂದರೆ ಈ ಜೀವನ ಪುಸ್ತಕವೇ ಆಗಿದೆ. ಅದನ್ನಂತೂ ನೀವು ಸ್ವಲ್ಪಿಲ್ಲ ಸ್ವಲ್ಪು ಓದುತ್ತಾ ಇದ್ದೀರಿ. ಬೇರೆ ಪುಸ್ತಕಗಳು ಕೆಲಸವಿಲ್ಲದವರ ವಿನೋದಕ್ಕಾಗಿ ಇರುತ್ತವೆ. ಇಲ್ಲಿ ನಮಗೆ ಓದಲಿಕ್ಕೆ ಬಹಳ ಸಮಯ ಸಿಗುತ್ತಿರಬಹುದೆಂದು ಯಾರಿಗಾದರೂ ಅನಿಸಬಹುದು. ಆದರೆ ನೂಲುವದು ಮತ್ತು ಸಿದ್ಧತೆಯ ಸಲುವಾಗಿ ಓದುವದು ಇವುಗಳಲ್ಲಿ ವಿನೋದದ ಸಲುವಾಗಿ ಓದಲಿಕ್ಕೆ ಸಮಯವೇ ಸಿಗುವದಿಲ್ಲ. ಆದರೆ ನಾನು ಈ ವ್ಯಾಖ್ಯಾನವನ್ನು ನಿಲ್ಲಿಸಲಿಕ್ಕೆ ಬೇಕು.

" ನಿಮ್ಮ ಆರೋಗ್ಯವು ಸರಿಯಾಗಿದೆಯೆ ? ನರಗಿಸಬಹನರ ತಲೆನೋವು ನಿಂತಿತೆ ? ಅವರನ್ನು ನಾನು ಭೆಟ್ಟಿಯಾಗಕೂಡದೆಂದು ಸರಕಾರದಿಂದ ಉತ್ತರ ಬಂದಿದೆ. ಅವರು ರಾಜಕೀಯ ವಿಷಯಗಳಲ್ಲಿ ಸಕ್ರಿಯ ಭಾಗ ತೆಗೆದುಕೊಳ್ಳುತ್ತಾರೆ ಅಥವಾ ಅವರಿಗೆ ರಾಜಕೀಯ ಸಂಸರ್ಗ ಅಂಟಿಕೊಂಡಿದೆ ಎಂದು ಸರಕಾರವು ಅವಶ್ಯವಾಗಿ ತಿಳಿಯುತ್ತಿರಬಹುದು. "

ಮೌನವಾರ ಬರೆಯುವ ಪತ್ರಗಳು ಹೆಚ್ಚಿನ ಅಗತ್ಯದವು ಅಥವಾ ಬಾಪೂ ಸ್ವತಃ ಬರೆಯತಕ್ಕಂಥ ಜನರವು ಅಥವಾ ಬಾಪೂ ಸ್ವಂತ ಅಕ್ಷರದಿಂದ ವಿಶೇಷ ಆಶ್ವಾಸನ ಕೊಡತಕ್ಕಂಥವರವು ಆಗಿರುತ್ತವೆ. ಡಾ. ಮೆಹತಾರ ಸಂಗಡ ನಿಕಟ ಸಂಬಂಧವಿರುವ ಕಾರಣ ಅವರ ಮಗನ ಉತ್ಕರ್ಷದಲ್ಲಿ ತಂದೆಗಿಂತಲೂ ಹೆಚ್ಚು

ಆಸ್ಥೆ ತೆಗೆದುಕೊಂಡು ಬಾಪೂ ಡಾಕ್ಟರರ ವಿಷಯಕ್ಕೆ ಇದ್ದ ತಮ್ಮ ಋಣವನ್ನು ತೀರಿ ಸುತ್ತಿದ್ದಾರೆ. ಒಬ್ಬ ತಂದೆಯು ಪರದೇಶವನ್ನು ಮುಟ್ಟಿದ ತನ್ನ ಮಗನಿಗೆ ಇದಕ್ಕೂ ಹೆಚ್ಚಿಗೆ ಏನು ಬರೆಯಬಲ್ಲನು ? " ವ್ಹೇನಿಸದಿಂದ ನಿನ್ನ ಪತ್ರ ಮುಟ್ಟಿದೆ. ಹಡಗದಲ್ಲಿ ಹೊತ್ತನ್ನು ಹೇಗೆ ಕಳೆದೆ, ದಾರಿಯಲ್ಲಿ ಏನೇನು ನೋಡಿದೆ, ಏನೇನು ಖರ್ಚು ಮಾಡಿದೆ ಮುಂತಾದ ಸಂಗತಿಗಳನ್ನು ಬರೆದರೆ ನಿನ್ನ ವರ್ಣನ ಮಾಡುವ ಶಕ್ತಿ ಮತ್ತು ಸಾದಾತನದ ಬಗ್ಗೆ ನಿನ್ನ ವಿಚಾರಗಳು ನನಗೆ ತಿಳಿಯುವವು. . . . ತಿರುಗಾಡುವ ವ್ಯಾಯಾಮ ಮಾಡಿ ಶರೀರವನ್ನು ಒಳ್ಳೇ ಸಶಕ್ತವನ್ನಾಗಿ ಮಾಡಿಕೊ. ಯಾವ ಕೆಲಸವನ್ನು ಸ್ವತಃ ಮಾಡಬಲ್ಲೆಯೊ ಅದನ್ನು ಎರಡನೆಯವರಿಂದ ಮಾಡಿಸ ಬೇಡ. ಕಾಲಿನಿಂದ ಹೋಗಬಹುದಾದ ಸ್ಥಳಕ್ಕೆ ವಾಹನವನ್ನು ಉಪಯೋಗ ಮಾಡ ಬೇಡ. ಶರೀರದಲ್ಲಿ ಉಷ್ಣತೆಯನ್ನು ಅಗ್ಗಿಷ್ಟಿಗೆಯ ಮುಂದೆ ಕುಳಿತುಕೊಂಡು ತಂದುಕೊಳ್ಳದೆ ವ್ಯಾಯಾಮದಿಂದ ತಂದುಕೊ. . . .

"ಡಾಕ್ಟರರಿಗೆ ಪತ್ರವನ್ನು ನಿಯಮಿತತನದಿಂದ ಬರೆ. ಅವರಿಗೆ ಲೆಕ್ಕವನ್ನು ಕಳಿಸು. ತಾಯಿತಂದೆಗಳು ತಮ್ಮ ಹುಡುಗ ಹುಡಿಗೆಯರ ಪತ್ರಗಳಿಂದ ಸಂತುಷ್ಟ ರಾಗುವದಿಲ್ಲವೆಂಬುದನ್ನು ಲಕ್ಷ್ಯದಲ್ಲಿಡು. ನಿನ್ನ ತೀರ ಸಣ್ಣ ಸುದ್ದಿಯು ಬಂದರೂ ಸಹ ಅವರಿಗೆ ಸಮಾಧಾನವೆನಿಸುವದು. ಡಾಕ್ಟರರ ದೃಷ್ಟಿಯು ನಿನ್ನ ಮೇಲಿದೆ. ಅವರಿಗೆ ಆನಂದಕೊಡು."

ದಾವುದಭಾಯಿ ಆಶ್ರಮದಲ್ಲಿ ನಿಂತುಬಿಟ್ಟಿದ್ದಾರೆ. ಅವರ ಹಿತದಲ್ಲಿ ಸಹ ಬಾಪೂರಿಗೆ ಅಷ್ಟೇ ಅಭಿರುಚಿಯಿದೆ. "ನಿಮ್ಮ ಪತ್ರ ಚನ್ನಾಗಿದೆ. ಕೆಟ್ಟವಿಚಾರ ಮತ್ತು ವೃತ್ತಿಗಳ ವಿರುದ್ಧ ಸಿಂಹನಂತೆ ಹೋರಾಡಿರಿ. ಹೋರಾಡುವದು ನಮ್ಮ ಧರ್ಮ. ಗೆಲವು ದೇವರ ಕೈಯಲ್ಲಿಯದು. ಹೋರಾಟದಲ್ಲಿಯೇ ನಮ್ಮ ಸಂತೋಷವಿದೆ. ನಮ್ಮ ಹೋರಾಟವು ಯೋಗ್ಯವಾದದ್ದಿರಬೇಕು. ಸತ್ಸಂಗದಲ್ಲಿರ ಬೇಕು. ಅದರ ಸಲುವಾಗಿ ಸದ್ವಾಚನ ಬೇಕು. ಮುಂಬೈಯಂಥ ಪಟ್ಟಣದಲ್ಲಿ ಸದ್ವಾಚನವೇ ಸತ್ಸಂಗವಿದೆ. ಮತ್ತು ನನ್ನ ದೃಷ್ಟಿಯಿಂದ ಸಹೋದರಿ ನೂರಬಾನೂಳ ದರ್ಶನ ಸಹ ಸತ್ಸಂಗವಿದೆ. ಅವಳು ಅತ್ಯಂತ ಸರಳ ಮತ್ತು ಪವಿತ್ರ ಹೆಣ್ಣು ಮಗಳಿದ್ದಾಳೆ."

ಲಕ್ಷ್ಮೀ—ಭಾವೀ ಪುತ್ರವಧೂಗೆ ಗಂಗಾದೇವಿಯ ಮೃತ್ಯುವಿನ ವಿಷಯಕ್ಕೆ ಬರೆಯುವಾಗ ಆಶ್ರಮವು ಈ ಸಾವಿನಿಂದ ಪುನೀತವಾಗಿದೆ ಎಂದು ತಿಳಿಸಿದರು.

ಎಸ್ಥರನ ಪತ್ರದಲ್ಲಿ ಬರೆದರು :

"Feeling is of the heart. It may easily lead us astray unless we would keep the heart pure. It is like keeping house and everything in it clean. The heart is the source from which

khowledge of God springs. If the source is contaminated, every other remedy is useless. And if its purity is assured, nothing else is needed."

"ಭಾವನೆಯ ಸ್ಥಾನವು ಹೃದಯದಲ್ಲಿದೆ. ನಾವು ಹೃದಯವನ್ನು ಶುದ್ಧ ವಿಡದಿದ್ದರೆ ಭಾವನೆಯು ನಮ್ಮನ್ನು ಅಡ್ಡದಾರಿಗೆ ಒಯ್ಯಬಹುದು. ಇದು ಮನೆಯನ್ನೂ ಅದರೊಳಗಿನ ಎಲ್ಲ ವಸ್ತುಗಳನ್ನೂ ಸ್ವಚ್ಛವಾಗಿಡುವ ಮಾತಿನಂತಿದೆ. ಈಶ್ವರಜ್ಞಾನದ ಉಗಮಕ್ಕೆ ಹೃದಯುವೇ ಮೂಲ ಸೆಲೆಯಾಗಿದೆ. ಮೂಲವೇ ಕೆಟ್ಟತೆಂದರೆ ಎಲ್ಲ ಉಪಾಯಗಳೂ ವ್ಯರ್ಥವಾಗುತ್ತವೆ. ಇದನ್ನು ಶುದ್ಧವಿಡುವ ವಿಶ್ವಾಸವಿದ್ದರೆ ಬೇರೆ ಯಾವ ಉಪಾಯ ಮಾಡುವ ಅವಶ್ಯಕತೆಯೂ ಇಲ್ಲ."

ಇವತ್ತು ಸಹ ಬಲಗೈಯಿಂದ ಅನೇಕ ಪತ್ರ ಬರೆದರು. ಮತ್ತು ಆಶ್ರಮಕ್ಕೆ 'ಮೃತ್ಯುವಿನಿಂದ ಸಿಗತಕ್ಕ ಬೋಧೆ' ಎಂಬ ಸಾಪ್ತಾಹಿಕ ಲೇಖವನ್ನು ಬರೆದರು. ಪತ್ರಗಳನ್ನು ಸಹ ಸಾಕಷ್ಟು ಬರೆಯಿಸಿದರು.

೩೦-೫-'೩೨ ಅನೇಕ ಕಾಲ್ಪನಿಕ ಪ್ರಶ್ನೆಗಳನ್ನು ಅಣಿಮಾಡಿ ಅವುಗಳ ಉತ್ತರವನ್ನು ಬಾಪೂರಿಂದ ತೆಗೆದುಕೊಳ್ಳುವದು . . . ಳ ರೂಢಿಯಾಗಿದೆ. ಅವಳ ವಿಷಯಕ್ಕೆ ಸ್ನೇಹವಿರುವದರಿಂದ ಬಾಪೂ ಉದ್ದವಾದ ಉತ್ತರಗಳನ್ನು ಕೊಡುತ್ತಾರೆ. ಈ ಸಾರೆ ಅವಳು ಬಲಾತ್ಕಾರದಿಂದಾಗುವ ಗರ್ಭಪಾತ ಅಥವಾ ಆತ್ಮಹತ್ಯದ ವಿಷಯಕ್ಕೆ ಇದೇ ಪ್ರಕಾರದ ಪ್ರಶ್ನೆಯನ್ನು ಕೇಳಿದಳು ಮತ್ತು ಅದನ್ನು ಪ್ರಸಿದ್ಧಿಸಲು ಅಪ್ಪಣೆಯನ್ನು ಕೇಳಿದಳು. ಪ್ರತಿವಾರ ಇಂಥ ಪ್ರಶ್ನೆಗಳನ್ನು ಕೇಳುವ ಬೆದರಿಕೆಕೊಟ್ಟಳು. ಆದುದರಿಂದ ಬಾಪೂ ಅವಳಿಗೆ ಕಠೋರ ಉತ್ತರವನ್ನು ಬರೆದರು: "ಯಾವದೇ ಸ್ತ್ರೀಯ ಮೇಲೆ ಕೇವಲ ಬಲಾತ್ಕಾರವಾಗುವ ಸಂಭವವಿಲ್ಲೆಂದು ನನ್ನ ಅಭಿಪ್ರಾಯವಿದೆ. ಮತ್ತು ಡಾಕ್ಟರರಾದರೂ ಹೀಗೇ ತಿಳಿಯುತ್ತಾರೆ. ಸಾಯುವ ಸಿದ್ಧತೆಯಿಲ್ಲದ್ದರಿಂದ ಕೊನೆಗೆ ಸ್ತ್ರೀಯು ಅತ್ಯಾಚಾರಿಯ ವಶವಾಗುತ್ತಾಳೆ. ಆದರೆ ಸಾವಿನ ಅಂಜಿಕೆಯನ್ನು ಸಂಪೂರ್ಣ ತ್ಯಜಿಸಿದವಳು ತನ್ನ ಮೇಲೆ ಬಲಾತ್ಕಾರ ಘಟಿಸುವ ಮೊದಲೇ ಸತ್ತು ಬಿಡುವಳು. ಇದನ್ನು ಬರೆಯುವದು ಸುಲಭ, ಮಾಡುವದು ಕಠಿಣ. ಆದುದರಿಂದ ಸ್ವೇಚ್ಛೆಯಿಂದ ಅತ್ಯಾಚಾರಿಯ ವಶವಾಗದ ಸ್ತ್ರೀಯು ಮೇಲೆ ಬಲಾತ್ಕಾರವಾಗಿದೆಯೆಂದು ತಿಳಿಯುವದೇ ನಮಗೆ ಶೋಭಿಸುತ್ತಿದೆ. ಇಂಥ ಸ್ತ್ರೀಗೆ ಗರ್ಭಧಾರಣವಾದರೆ ಅದರ ಪತನವನ್ನು ಅವಳು ಎಂದೂ ಮಾಡಬಾರದು. ಬಲಾತ್ಕಾರಕ್ಕೆ ವಶಳಾದವಳು ಯಾವದೇ ರೀತಿಯಿಂದ ನಿಂದೆಗೆ ಪಾತ್ರಳಿರುವದೇ ಇಲ್ಲ. ಇವಳು ದಯೆಗೆ ಪಾತ್ರಳಿರುವಳು. ತನ್ನ ಮೇಲೆ ಆದ ಬಲಾತ್ಕಾರವನ್ನು ಸಹ ಬಚ್ಚಿಡಲು ಇಚ್ಛಿಸುವ ಸ್ತ್ರೀಗೆ ಗರ್ಭಪಾತದ ಅಥವಾ

ಮತ್ತೆ ಯಾವ ಮಾತಿನ ಅಧಿಕಾರವಿದೆಯೆಂದು ಯಾರು ಹೇಳಬಲ್ಲರು? ಹೀಗೆ ಭಯಭೀತಳಾದ ಸ್ತ್ರೀಯು ಅಧಿಕಾರವಿಲ್ಲದಿದ್ದರೂ ಅಧಿಕಾರವಿದೆಯೆಂದು ತಿಳಿದು ಸ್ವೇಚ್ಛೆಯಿಂದ ವರ್ತಿಸುವಳು. ಬಲಾತ್ಕಾರವಾಗಿ ಹೋದ ಮೇಲೆ ಸ್ತ್ರೀಗೆ ಆತ್ಮ-ಹತ್ಯೆ ಮಾಡಿಕೊಳ್ಳುವ ಅಧಿಕಾರ ಎಷ್ಟೂ ಇಲ್ಲ, ಆತ್ಮಹತ್ಯೆ ಮಾಡಿಕೊಳ್ಳುವ ಯಾವ ಅವಶ್ಯಕತೆಯೂ ಇಲ್ಲ.

"ನನ್ನ ಉತ್ತರವು ನಿನಗೆ ಸಿಗಲಿ ಅಥವಾ ಎರಡನೆಯವರಿಗೆ ಬರೆದಿರಲಿ, ಇದು ಜೇಲಿನೊಳಗಿಂದ ಬರೆದದ್ದಿರುವದರಿಂದ ಪ್ರಸಿದ್ಧಿಸತಕ್ಕದ್ದಲ್ಲ. ನಾನು ಇಲ್ಲಿಂದ ಅನೇಕ ಪತ್ರಗಳನ್ನು ಬರೆಯುತ್ತಿರುತ್ತೇನೆ. ಅವು ಪ್ರಸಿದ್ಧವಾಗುತ್ತಿರುವದು ತೀರ ಶೋಭಿಸುವದಿಲ್ಲ. ಸರಕಾರವು ಈ ಪ್ರಕಾರ ಎಲ್ಲ ಪತ್ರಗಳೂ ಪ್ರಸಿದ್ಧವಾಗುವದನ್ನು ಒಂದು ವೇಳೆ ಸಹಿಸಿದರೂ ಸಹಿಸಬಹುದು. ಆದರೆ ಸತ್ಯಾಗ್ರಹಿಯು ಇಂಥ ಲಾಭವನ್ನು ಪಡೆಯಲಾರನು. ಅವನು ಎಷ್ಟೋ ಬಂಧನಗಳನ್ನು ತನ್ನಷ್ಟಕ್ಕೆ ತಾನೇ ಹಾಕಿಕೊಳ್ಳಬೇಕಾಗುತ್ತದೆ. ಇದೂ ಕೂಡ ಅದೇ ಪ್ರಕಾರದ ಬಂಧನವು. ನನ್ನ ವಿಚಾರಗಳನ್ನು ಕೇಳಲಿಕ್ಕೆ ಅಥವಾ ಆತ್ಮಸಾತ್ ಮಾಡಿಕೊಳ್ಳಲಿಕ್ಕೆ ಜಗತ್ತು ಆತುರವಿಲ್ಲ. ಇದ್ದರೂ ಸಹ ಇಂಥ ಸಮಯದಲ್ಲಿ ತಾಳಿಕೊಂಡು ಹೋಗುವ ಆವಶ್ಯಕತೆಯಿದೆ. ನಾನು ಸ್ವತಃ ನನ್ನ ಅಭಿಪ್ರಾಯಗಳಿಗೆ ಇಷ್ಟು ದೊಡ್ಡ ಬೆಲೆ ಕಟ್ಟುವದಿಲ್ಲ. ಇವತ್ತು ಕೊಟ್ಟ ಅಭಿಪ್ರಾಯವನ್ನು ನಾಳೆ ನಾನು ಬದಲಿಸುವದಿಲ್ಲೆಂದು ಸಹ ಪ್ರತಿಯೊಂದು ಅಭಿಪ್ರಾಯದ ವಿಷಯಕ್ಕೂ ಹೇಳಲಿಕ್ಕಾಗದು. ನಿನ್ನಂಥವಳಿಗೆ ಸ್ವಂತ ಅಭಿಪ್ರಾಯ ಕೊಡಲು ನನಗೆ ಯಾವ ಅಡ್ಡಿಯೂ ತೋರುವದಿಲ್ಲ. ನನ್ನ ಸ್ವಭಾವ, ನನ್ನ ಅಪೂರ್ಣತೆ ಮುಂತಾದವುಗಳನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ನಾನು ಕೊಟ್ಟ ಅಭಿಪ್ರಾಯಗಳನ್ನು ನಿನ್ನಂಥವರು ತುಲನೆ ಮಾಡಬೇಕೆಂದು ನಾನು ತಿಳಿಯುತ್ತೇನೆ.

"ಇನ್ನು ನಿನ್ನ ಪ್ರಶ್ನೆಗಳು. ನಿನ್ನ ಎಷ್ಟೋ ಪ್ರಶ್ನೆಗಳು ಕೇಳಲಿಕ್ಕೆ ಯೋಗ್ಯವಾದವುಗಳಿರುವದಿಲ್ಲ. ಜಿಜ್ಞಾಸುವು ತನಗೆ ಶ್ರದ್ಧೆಯಿದ್ದವರ ಕಡೆಯಿಂದ ತಾತ್ವಿಕ ನಿರ್ಣಯವನ್ನು ಸ್ವಲ್ಪದರಲ್ಲಿ ಸ್ವಲ್ಪ ಕೇಳಿಕೊಳ್ಳಬೇಕು. ಕಾಲ್ಪನಿಕ ಸಂಶಯಗಳ ನಿವಾರಣೆಯನ್ನು ಎಂದೂ ಮಾಡಿಸಬಾರದು. ತಾನೇನಾದರೂ ಕ್ರಮ ತೆಗೆದುಕೊಳ್ಳುವದಿದ್ದರೆ, ಆ ವಿಷಯಕ್ಕೆ ಸಂಶಯವಿದ್ದರೆ ಅದರ ಸಂಬಂಧಿ ಪ್ರಶ್ನೆಯನ್ನು ಅವಶ್ಯ ಕೇಳಬಹುದು. ಯಾವದೇ ಆಗಿ ಹೋದ ಘಟನೆಯ ವಿಷಯಕ್ಕೆ ಕೇಳುವದಾದರೆ ಆ ಸಮಯಕ್ಕೆ ಆ ಘಟನೆಯ ಸ್ಥಿತಿಯನ್ನು ತಿಳಿಸಬೇಕು. ಆ ಘಟನೆಯ ಮೇಲಿಂದ ಎಂದೂ ಸಾರ್ವಜನಿಕ ಪ್ರಶ್ನೆಯನ್ನು ಉದ್ಭೂತಮಾಡಬಾರದು. ಯಾಕಂದರೆ ಈ ಪ್ರಕಾರ ಪ್ರಶ್ನೆಯನ್ನು ಉದ್ಭೂತ ಮಾಡುವಾಗ ಮೂಲ ವಸ್ತುವಿನೊಳಗಿಂದ ಒಂದಿಲ್ಲೊಂದು ಉಳಿದುಹೋಗುವ ಸಂಭವವಿದೆ. ಆದುದರಿಂದ ಸಾರ್ವ-

ಜನಿಕ ಪ್ರಶ್ನೆಯ ಉತ್ತರವನ್ನು ವಿಶಿಷ್ಟ ಘಟನೆಗೆ ಅನ್ವಯಿಸುವದು ಗಂಡಾಂತರದ್ದು."

ಒಬ್ಬ ಮನುಷ್ಯನು ಕ್ರೈಸ್ತ ಮತ್ತು ಬುದ್ಧನ ಪ್ರತೀಕಗಳ ಬಗ್ಗೆ ಪತ್ರ ಬರೆದು ನೀವು ಕ್ರೈಸ್ತ, ಮಹಮ್ಮದ ಮತ್ತು ಬುದ್ಧನ ಏಕೇಶ್ವರವಾದದ ಸಾಮಾನ್ಯಧರ್ಮದ ಪ್ರಚಾರ ಮಾಡಿರಿ. ನೀವು ರಾಜಕಾರಣ ಬಿಟ್ಟು ಧರ್ಮಪ್ರವೃತ್ತಿಯಲ್ಲಿ ಬಿದ್ದರೆ ಶಾಂತಿಯುಂಟಾಗುವದು ಎಂದು ತಿಳಿಸಿದನು. ಅವನಿಗೆ ಬರೆದರು :

" In my opinion unity will come not by mechanical means but by change of heart and attitude on the part of the leaders of public opinion. I do not conceive religion as one of the many activities of mankind. The same activity may be either governed by the spirit of religion or irreligion. There is no such thing for me therefore as leaving politics for religion. For me every, the tiniest, activity is governed by what I consider to be my religion."

" ನನ್ನ ಅಭಿಪ್ರಾಯದಂತೆ ಐಕ್ಯವು ಯಾಂತ್ರಿಕ ಉಪಾಯುಗಳಿಂದ ಸಾಧಿಸುವದಿಲ್ಲ. ಅದಕ್ಕಾಗಿ ಜನತೆಯ ಮುಂದಾಳುಗಳ ಹೃದಯಪರಿವರ್ತನೆಯಾಗಲಿಕ್ಕೆ ಬೇಕು ಮತ್ತು ಅವರ ರೀತಿ ನಡತೆಗಳು ಬದಲಾಗಲಿಕ್ಕೆ ಬೇಕು. ಮನುಷ್ಯನ ಅನೇಕ ಪ್ರವೃತ್ತಿಗಳಲ್ಲಿ ಧರ್ಮವೂ ಒಂದು ಎಂದು ನಾನು ತಿಳಿಯುವದಿಲ್ಲ. ಒಂದೇ ಪ್ರವೃತ್ತಿಯು ಧರ್ಮದಿಂದಲೂ ನಡೆಯುತ್ತಿರಬಹುದು, ಅಧರ್ಮದಿಂದಲೂ ನಡೆಯುತ್ತಿರಬಹುದು. ಆದುದರಿಂದ ನನ್ನ ಮಟ್ಟಿಗೆ ಹೇಳುವದಾದರೆ ರಾಜಕೀಯ ಪ್ರವೃತ್ತಿಯನ್ನು ಬಿಟ್ಟು ಧಾರ್ಮಿಕ ಪ್ರವೃತ್ತಿಯನ್ನು ಹಿಡಿಯುವ ಮಾತೇ ಇರುವದಿಲ್ಲ. ನನ್ನ ಪ್ರತಿಯೊಂದು ತೀರ ಸಣ್ಣ ಪ್ರವೃತ್ತಿಯು ಸಹ ನಾನು ತಿಳಿದುಕೊಂಡಿರುವ ಧರ್ಮದಿಂದ ನಿಯಂತ್ರಿತವಾಗಿರುತ್ತದೆ."

ಕಾನಡಾದಿಂದ ಮಿಸ್ ಗುಲಚೇನ ಲಮ್ಸಡೇನ ಹೆಸರಿನ ಮಹಿಳೆಯು ಸರ್ ಹೆನ್ರಿ ಲಾರೆನ್ಸ ನಮ್ಮಲ್ಲಿದ್ದರು ಮತ್ತು ಅವರು ನಿಮ್ಮ ವಿಷಯಕ್ಕೆ ಹೇಳಿದ್ದಾರೆ ಎಂದು ಬರೆಯುತ್ತಾಳೆ :

" A strange story how he met you in Poona and how you had rooms looking out on a lonely orchard and you were then reading Gibbon's 'Decline and fall of the Roman Empire' and were working at your spinning wheel—in fact he made out that you were very happy and comfortable. I said it sounded like a fairy tale and was too good to be true. Sir Henry asked me to write and ask you to confirm the account of your first meeting 10 years ago unless, said Sir H. Lawrence, Mr. Gandhi's memory is failing, for you must remember that he is 62. I am sure your memory

is not failing, that is why I am writing to ask you whether in this matter Sir H. L. is a comparatively truthful man."

"ನಾನು ಗಾಂಧೀಯವರನ್ನು ಪುಣೆಯಲ್ಲಿ ಭೆಟ್ಟಿಯಾಗಿದ್ದೆನು. ಎದುರಿಗೆ ತೋಟವಿದ್ದ ಏಕಾಂತ ಕೋಣೆಯಲ್ಲಿ ಅವರನ್ನಿಡಲಾಗಿತ್ತು. ಗಿಬನ್ನನ 'ರೋಮನ್ ಸಾಮ್ರಾಜ್ಯದ ಅಸ್ತ ಮತ್ತು ವಿನಾಶ' ಎಂಬ ಪುಸ್ತಕವನ್ನು ಅವರು ಓದುತ್ತಿದ್ದರು ಮತ್ತು ನೂಲುತ್ತಿದ್ದರು.

"ನಮ್ಮೆದುರು ನೀವು ಬಹಳ ಆನಂದದಲ್ಲಿದ್ದಿರೆಂದು ತೋರಿಸಲು ಅವರು ಪ್ರಯತ್ನಪಟ್ಟರು. ಇದು ದೇವಲೋಕದ ಕತೆಯಂತೆ ಅನಿಸುತ್ತದೆ, ಮತ್ತು ನಂಬಲು ಕಠಿಣವಾಗುತ್ತದೆ ಎಂದು ನಾನು ಅಂದೆ. ಆಗ ಹೆನ್ರಿಯು ಹತ್ತುವರುಷ ಮೊದಲಿನ ಭೆಟ್ಟಿಯ ಈ ಸಂಗತಿಯು ನಿಜವಹುದೊ ಅಲ್ಲವೊ ಎಂಬುದನ್ನು ನೀವು ಬರೆದು ಕೇಳಿಕೊಳ್ಳಿರಿ ಆದರೆ ಗಾಂಧೀಯವರ ಸ್ಮರಣಶಕ್ತಿಯು ಕ್ಷೀಣವಾಗಿದ್ದರೆ ಆ ಮಾತು ಬೇರೆ, ಯಾಕಂದರೆ ಅವರ ವಯಸ್ಸು ಈಗ ೬೨ ಇದೆ. ಎಂದು ನನಗೆ ಹೇಳಿದರು. ನಿಮ್ಮ ಸ್ಮರಣಶಕ್ತಿಯು ಕ್ಷೀಣವಾಗಿಲ್ಲೆಂದು ನನಗೆ ಭರವಸೆಯಿದೆ. ಆದುದರಿಂದ ಈ ವಿಷಯದಲ್ಲಿ ಸರ್ ಹೆನ್ರಿ ಲಾರೆನ್ಸರ ಮಾತು ಎಷ್ಟರಮಟ್ಟಿಗೆ ಸತ್ಯವಿದೆ ಎಂಬುದನ್ನು ನಾನು ನಿಮ್ಮನ್ನು ಕೇಳುತ್ತೇನೆ."

ಇದಕ್ಕೆ ಒಂದು ಉತ್ತರವನ್ನು ಬಾಪೂ ಬರೆಯಿಸಿದರು. ಅದರ ಬಗ್ಗೆ ನಾನು ಅಂದೆ: "ಇದರ ಪರಿಣಾಮವು ಈ ಮನುಷ್ಯನ ಸತ್ಯತೆಯ ವಿಷಯಕ್ಕೆ ನೀವು ಸಂದೇಹಪಡುತ್ತೀರಿ ಎಂದಾಗುತ್ತಿದೆ." "ಹಾಗಾದರೆ ಬದಲಿಸು, ಯಾಕಂದರೆ ನಮಗೆ ಹಾಗೆ ಸಂಶಯವಿಲ್ಲ." ಎಂದು ಬಾಪೂ ಅಂದರು. ವಲ್ಲಭಭಾಯಿ ಹೇಳಿದರು: "ಈ ಮನುಷ್ಯನು ಅಲ್ಲಿ ಪ್ರಚಾರಮಾಡುತ್ತಿರಬಹುದು. ಇಲ್ಲಿ ತೋಟವಿಲ್ಲ, ಕೈದಿಗಳಿದ್ದಾರೆ, ಇಂಥ ವರುಷ ಇಲ್ಲಿದ್ದೆನು, ಆಗ ಇಂಥ ಪುಸ್ತಕ ಓದುತ್ತಿದ್ದೆನು ಮತ್ತು ನೂಲುತ್ತಿದ್ದೆನು, ಸ್ಮರಣಶಕ್ತಿ ಕ್ಷೀಣವಾಗುವ ಭಯವು ಸರ್ ಹೆನ್ರಿಗೇ ಇರಬಹುದು, ಯಾಕಂದರೆ ಅವರ ವಯಸ್ಸು ನನಗಿಂತಲೂ ಹೆಚ್ಚಿದೆ ಮುಂತಾಗಿ ಈ ಹೆಣ್ಣುಮಗಳಿಗೆ ಬರೆಯಿರಿ." "ಇಂಥ ಉತ್ತರವನ್ನು ಬರ್ನಾರ್ಡ ಶಾ ಕೊಡಬಲ್ಲರು. ಈ ಉತ್ತರದಲ್ಲಿ ಕುಶಲತೆಯ ಪ್ರಭಾವ ಬೀಳತಕ್ಕದ್ದಲ್ಲವೆಂಬುದೇ ನನ್ನ ಉದ್ದೇಶವಾಗಿತ್ತು." ಎಂದು ನಾನು ಹೇಳಿದೆ. ವಲ್ಲಭಭಾಯಿ ಸಿಟ್ಟಿಗೆದ್ದರು. "ಬಾಪೂ ಏನು ಬರೆಯುತ್ತಾರೆಂಬುದನ್ನೇ ನೋಡುವದಿದೆ." ಎಂದು ನಾನು ಅಂದೆ. ಆ ನಂತರ ಬಾಪೂ ಎರಡನೇ ಪತ್ರ ಬರೆಯಿಸಿದರು:

"I thank you for your letter. I well remember the visit of Sir H. to this prison in 1922 or '23. He is right in his impression that I then passed my time principally in reading the D. & F. of

R. E. and spinning at the wheel. It is also true that he found me quite happy. But there was no lovely orchard then, nor is there now. There were then, as there are now, some tall trees about. The rooms are bare and barred cells of an ordinary Indian prison. As cells they are well lighted and well ventilated. So long therefore as surroundings are concerned, there is no question of my memory betraying me, for at the time of writing I am exactly in the same surroundings as when Sir H. saw me. If therefore his description of them gave you the impression of a fairy tale, it was surely erroneous. Happiness after all is a mental state, and for myself being used now for more then a generation to a hard life I have learnt to detach my happiness from my surroundings."

"ನಿಮ್ಮ ಪತ್ರಕ್ಕಾಗಿ ಆಭಾರಿ. ಸರ್ ಹೆನ್ರಿ ಸನ್ ೧೯೨೨ ಅಥವಾ '೨೩ ರಲ್ಲಿ ಈ ಜೇಲಿನಲ್ಲಿ ಬಂದಿದ್ದರು. ಆ ಕಾಲದ ಭೆಟ್ಟಿಯು ನನಗೆ ಚನ್ನಾಗಿ ಜ್ಞಾಪಕ ವಿದೆ. ಆ ಕಾಲಕ್ಕೆ ನನ್ನ ಸಮಯವನ್ನು ನಾನು ವಿಶೇಷವಾಗಿ ಗಿಬನ್ನನ 'ರೋಮನ್ ಸಾಮ್ರಾಜ್ಯದ ಅಸ್ತ ಮತ್ತು ವಿನಾಶ' ಎಂಬ ಪುಸ್ತಕ ಓದುವದರಲ್ಲಿಯೂ, ರಾಟಿ ನೂಲುವದರಲ್ಲಿಯೂ ಕಳೆಯುತ್ತಿದ್ದೆನು. ಅವರು ನನ್ನನ್ನು ಆನಂದದಲ್ಲಿ ನೋಡಿದ್ದೂ ಸತ್ಯವಿದೆ. ಆದರೆ ಆ ಕಾಲಕ್ಕೆ ಇಲ್ಲಿ ಸುಂದರ ತೋಟವಿದ್ದಿಲ್ಲ. ಇವತ್ತೂ ಇಲ್ಲ. ಆ ಕಾಲಕ್ಕೆ ಇಲ್ಲಿ ಕೆಲವು ಎತ್ತರವಾದ ಮರಗಳಿದ್ದದ್ದು ನಿಜ. ಅವು ಇವತ್ತು ಇವೆ. ಕೋಣೆಗಳು ಹಿಂದುಸ್ತಾನದ ಸಾಮಾನ್ಯ ಜೇಲಿನಲ್ಲಿ ಯಾವ ಅನುಕೂಲತೆಯೂ ಇಲ್ಲದೆ ಇರುವಂತೆಯೇ ಕಟಾಂಜನದವುಗಳಿವೆ. ಅವುಗಳಲ್ಲಿ ಹವೆ ಮತ್ತು ಬೆಳಕು ಚನ್ನಾಗಿ ಬರುತ್ತದೆ. ಸುತ್ತುಮುತ್ತಲಿನ ವರ್ಣನೆಯ ವಿಷಯಕ್ಕೆ ನನ್ನ ನೆನಪು ನನ್ನನ್ನು ವಂಚಿಸಲಾರದು. ಯಾಕಂದರೆ ಇದನ್ನು ಬರೆಯುವಾಗ ಹತ್ತು ವರುಷ ಪೂರ್ವದಲ್ಲಿ ಸರ್ ಹೆನ್ರಿ ಲಾರೆನ್ಸ ನನ್ನನ್ನು ನೋಡಿದ ಸ್ಥಳದಲ್ಲಿಯೇ ಕುಳಿತಿದ್ದೇನೆ. ಆದುದರಿಂದ ಅವರು ಮಾಡಿದ ವರ್ಣನೆಯಿಂದ ನಿಮ್ಮ ಮೇಲೆ ದೇವಲೋಕದ ಕತೆಯ ಪರಿಣಾಮವಾಗಿದ್ದರೆ ಆ ವರ್ಣನೆಯು ಅವಶ್ಯ ತಪ್ಪಿರುತ್ತದೆ. ಆನಂದವು ಮನಸ್ಸಿನ ಒಂದು ಸ್ಥಿತಿಯು. ನನಗೆ ಎಷ್ಟೋ ವರ್ಷಗಳಿಂದ ಕಠಿಣ ಜೀವನದ ರೂಢಿಯಿದೆ. ಆದುದರಿಂದ ಸುತ್ತುಮುತ್ತಲಿನ ಅನುಕೂಲತೆ ಅನನುಕೂಲತೆಗಳಿಗೂ ನನ್ನ ಆನಂದಕ್ಕೂ ಸಂಬಂಧವಿರುವದಿಲ್ಲ."

ವಿನೋಬಾ ಅವರ ತಮ್ಮ ಭಾವೂನ ಪತ್ರದಲ್ಲಿ ಬರೆದರು: "ಜೀವಿಸಿರುವವರ ಮೂರ್ತಿಧ್ಯಾನವು ಒಳ್ಳೆಯದಲ್ಲ. ಯಾವುದರ ಧ್ಯಾನ ಮಾಡುತ್ತೇವೆಯೊ ಅದರಲ್ಲಿ ಪೂರ್ಣತ್ವದ ಆರೋಪಣೆ ಇರುತ್ತದೆ, ಇರಲಿಕ್ಕೇಬೇಕು. ಜೀವಿಸಿರುವವರಲ್ಲಿ

ಯಾರಿಗೂ ಪರಿಪೂರ್ಣ ಎಂದು ಹೇಳಲಾಗದು. ರಾಮಾಯಣ ಮುಂತಾದವುಗಳಲ್ಲಿ ಬಂದ ಚಿತ್ರವು ಚನ್ನಾಗಿರುವದಿಲ್ಲ. ಆದರೆ ಮೂರ್ತಿಯ ಅವಶ್ಯಕತೆಯೇನು? ದೇವರು ನಿರಾಕಾರ ನಿರ್ಗುಣನಿದ್ದಾನೆ. ಆವನ ಧ್ಯಾನವನ್ನೇ ಏಕೆ ಮಾಡಬಾರದು. ಇದು ಅವಶ್ಯವೇ ಇದ್ದರೆ ಓಂಕಾರದ ಧ್ಯಾನ ಮಾಡಬೇಕು, ಅಥವಾ ನಮ್ಮ ಕಲ್ಪನೆಯ ಮೂರ್ತಿಯದು. ಗೀತಾಮಾತೆಯ ಧ್ಯಾನವೇ ಏಕಾಗಬಾರದು? ಆದಕ್ಕೆ ಕಾಮಧೇನುವಿನ ಉಪಮೆಯನ್ನು ಕೊಡಲಾಗಿದೆ. ಈ ಧೇನುವಿನ ಧ್ಯಾನ ಮಾಡ-ಬೇಕು. ಮತ್ತು ಇದರಲ್ಲಿ ಅನೇಕ ಅರ್ಥಗಳು ಹೊರಡುತ್ತವೆ. ಅದರಂತೆ ಜೀವಿಸಿರುವವರ ಮೂರ್ತಿಗಳ ಧ್ಯಾನವು ಹಾನಿಕರವಾಗಬಲ್ಲದು. ಆದುದರಿಂದ ತ್ಯಾಜ್ಯವೆಂದು ತಿಳಿ."

ಆಶ್ರಮದ ಒಬ್ಬ ಬಾಲಕನು ಬರೆಯುತ್ತಾನೆ: "ನೀವು ವಿಲಾಯತಿಯ ವರ್ಣನೆಯನ್ನು ಏಕೆ ಬರೆಯುವದಿಲ್ಲ?" ಎಂದು. ಅವನಿಗೆ ಬರೆದರು: "ಲಂಡನ್ ಬಹಳ ದೊಡ್ಡ ಪಟ್ಟಣ. ಅಲ್ಲಿ ಹೊಗೆಕೊಳವೆಗಳು (Chimney) ಬಹಳ. ಆದುದರಿಂದ ಎಲ್ಲವೂ ಕರ್ರಗಾಗುತ್ತದೆ. ಯಾವದೂ ಬೆಳ್ಳಗೆ ಉಳಿಯಲಾರದು. ಸೂರ್ಯದರ್ಶನವು ದುರ್ಲಭವಾಗುತ್ತದೆ. ಅಲ್ಲಿಯ ಜನರು ನಮಗಿಂತಲೂ ಹೆಚ್ಚು ಉದ್ಯೋಗಶೀಲರಿರುತ್ತಾರೆ. ಅಲ್ಲಿಯ ಬೀದಿಗಳು ಬಹಳ ಸ್ವಚ್ಛವಿರುತ್ತವೆ."

ಈಗ ಯಾವಳೊ ಸನ್ '೩೨ ರ ಮೇಯೋ ಉದ್ಭವಿಸಿದ್ದಾಳೆ. ಇವಳ ಹೆಸರು ಪೆಟ್ರೇಶಿಯಾ ಕೆಂಡೆಲ್ ಇರುತ್ತದೆ. ಇವಳು ಲಂಡನ್ನದ ಜನರಿಗೆ ತಿಳಿಸಿ ಹೇಳುತ್ತಾಳೆ:

"Gandhi is a waning star. Policy of Lord Willingdon is justified. Gandhi's followers disillusioned. Visited jails and found standard of living in prisons far higher than of natives outside; and Lady Willingdon is extremely popular and princes are popular too."

"ಗಾಂಧಿಯು ಈಗ ತೇಜೋಹೀನವಾಗುತ್ತಿರುವ ನಕ್ಷತ್ರನಾಗಿದ್ದಾನೆ. ಲಾರ್ಡ ವಿಲಂಗ್ಡನ್ನನ ಧೋರಣೆಯು ಸರಿಯೆಂದು ಸಿದ್ಧವಾಗಿದೆ. ಗಾಂಧೀ ಅನುಯಾಯಿಗಳ ಭ್ರಮವು ದೂರಾಗಿದೆ. ಜೇಲುಗಳನ್ನು ನೋಡಿದೆನು. ಹೊರಗಿದ್ದ ದೇಶೀಯ ಜನರ ಜೀವನಮರ್ಯಾದೆಗಿಂತ ಜೇಲಿನೊಳಗಿನ ಜೀವನಮರ್ಯಾದೆಯು ಬಹಳ ಉತ್ತಮವಿರುತ್ತದೆ. ಲೇಡೀ ವಿಲಿಂಗ್ಡನ್ ಲೋಕಪ್ರಿಯಳಿದ್ದಾಳೆ ಮತ್ತು ರಾಜರು ಸಹ ಲೋಕಪ್ರಿಯರಿದ್ದಾರೆ."

ಇದು 'ಹಿಂದೂ'ದಲ್ಲಿ ರಾಯುಟರನ ವಿಮಾನ ಟಪಾಲಿನಲ್ಲಿತ್ತು. ಟಾಯಿಮ್ಸ್ಸದಲ್ಲಿ ಬಂದಿಲ್ಲ. "ಟಾಯಿಮ್ಸಿಗೆ ಮುದ್ರಿಸುವದಕ್ಕೆ ನಾಚಿಕೆ ಬಂದಿರಬಹುದು." ಎಂದು ಬಾಪೂ ಹೇಳಿದರು. "ನಾಚಿಕೆ ಏನು ಬರುತ್ತದೆ? ಅವನೂ ಇದರೊಳಗಿರುವನಲ್ಲವೆ?" ಎಂದು ವಲ್ಲಭಭಾಯಿ ಅಂದರು. ಬಾಪೂ ಹೇಳಿದರು: "ಅವನು

ಆದರಲ್ಲಿದ್ದರೂ ಈ ಸಂಗತಿಯು ಇಷ್ಟು ಸ್ಪಷ್ಟವಿರುವದರಿಂದ ಇದನ್ನು ಮುದ್ರಿಸಲಿಕ್ಕೆ ನಾಚಿಕೆಯಾಗಬಹುದು. ಇವಳು ವಿಲಿಂಗ್ಡನ್ ಸಾಹೇಬನು ಎಬ್ಬಿಸಿಕೊಡಿಸಿದ ಯಾವಳೊ ಒಬ್ಬ ಹೆಂಗಸಿದ್ದಾಳೆ."

ಬನಾರಸದಲ್ಲಿ ಸ್ತ್ರೀಯರ ಮೇಲೆ ಆದ ಹಲ್ಲೆಯ ವಿಷಯಕ್ಕೆ ಸರಕಾರದ ಟಿಪ್ಪಣಿಯನ್ನು ನೋಡಿ ವಿಷಾದವಾಯಿತು. ಇದರಲ್ಲಿ ಪಂಡಿತಜೀಯ ಮೇಲೆ ಆಕ್ಷೇಪವಿದೆ. "ಸ್ತ್ರೀಯರ ಮೇಲೆ ಹಲ್ಲೆಯಾಗಿರುತ್ತದೆ. ಆದರೆ ಪಂಡಿತಜೀ ಮಾನವತಿಯರೆಂದು ಹೇಳುವಂಥವರು ವೇಶ್ಯೆಯರು, ಸಾಧನಹೀನ ವಿಧವೆಯರು ಅಥವಾ ಬಾಡಿಗೆಯ ಸ್ವಯಂಸೇವಿಕೆಯರಿದ್ದಾರೆ. ಇದರಲ್ಲಿ ಪಂಡಿತಜೀಯವರು ಒಳ್ಳೇ ಹೊಡೆತ ತಿಂದರೆಂದು ಹೇಳಬಹುದು. ಪಂಡಿತಜೀ ಇದರ ಉತ್ತರಕೊಟ್ಟು ತಪ್ಪನ್ನು ಒಪ್ಪಿಕೊಳ್ಳುವರೆ ? "

ಮುಂಬೈ ದಂಗೆಯು ಇನ್ನೂ ನಡೆದಿದೆ. ಇದರಲ್ಲಿ ಘಾತುಕ ಮತ್ತು ಹೀನ ವೃತ್ತಿಯ ಹಲ್ಲೆಗಳಾಗುತ್ತಿರುವ ಸುದ್ದಿಗಳು ಬರುತ್ತಿರುತ್ತವೆ. ಬಾಪೂ ಹೇಳಹತ್ತಿದರು : " ಯಾವ ಮಾತುಗಳಿಂದ ನನಗೆ ಅತ್ಯಂತ ಆಘಾತ

೩೧–೫–'೩೨ ವಾಗುತ್ತಿದೆಯೊ ಅವನ್ನೇ ಕೇಳಿ ನನಗೆ ಹರ್ಷವಾದಂತೆ ಅನಿಸುತ್ತದೆ. ಯಾಕಂದರೆ ಹೊಲಸೆಲ್ಲ ತೇಲಿ ಮೇಲೆ ಬರಹತ್ತಿದೆ. ಯಾವನೋ ಒಬ್ಬನು ದೊಡ್ಡ ಜರಡೆಯನ್ನು ತೆಗೆದುಕೊಂಡು ಕುಳಿತಂತೆಯೂ ಕಸರನ್ನು ತೆಗೆಯುತ್ತಲೇ ಇರುವಂತೆಯೂ ಆಗಹತ್ತಿದೆ."

ಇವತ್ತು ಬಂದ ಟಪಾಲಿನಲ್ಲಿ ಎಷ್ಟೊ ಅರ್ಥವಿಲ್ಲದ ಮತ್ತು ಹುಡುಗರಂಥ ಪ್ರಶ್ನೆಗಳಲ್ಲಿ " ನಾವು ಮೂರು ಮಣದ ದೇಹವನ್ನು ತೆಗೆದುಕೊಂಡು ಭೂಮಿಯ ಮೇಲೆ ಅಡ್ಡಾಡುತ್ತೇವೆ ಮತ್ತು ಬಹಳ ಕ್ರಿಮಿಗಳು ಹಿಚುಕಲ್ಪಡುತ್ತವೆ. ಈ ಹಿಂಸೆಯನ್ನು ಹೇಗೆ ನಿಲ್ಲಿಸಬೇಕು ?" ಎಂಬದೂ ಒಂದಾಗಿತ್ತು. " ಇದಕ್ಕೆ ಕಾಲನ್ನು ತಲೆಯಮೇಲೆ ತೆಗೆದುಕೊಂಡು ನಡೆಯಬೇಕೆಂದು ಬರೆಯಿರಿ." ಎಂದು ವಲ್ಲಭಭಾಯಿಯವರು ಕೂಡಲೇ ಹೇಳಿದರು.

ಕಲೆಕ್ಟರರು ತಮ್ಮ ನಿಯಮಿತ ಭೆಟ್ಟಿಗೆ ಬಂದಿದ್ದರು. (ಪೆರಿಯವರನ್ನು ಬಿಟ್ಟು) ಇಷ್ಟು ವಿವೇಕಿಯಾದ ಇಂಗ್ಲೀಷ ಆಫೀಸರನನ್ನು ನಾನು ಇದುವರೆಗೆ ನೋಡಿದ್ದಿಲ್ಲ. ಬಾಪೂ ಮತ್ತು ವಲ್ಲಭಭಾಯಿಯವರನ್ನು ಖುರ್ಚಿಯ ಮೇಲೆ ಕೂಡ್ರಿಸಿ ಸ್ವತಃ ಕುಳಿತನು. ಇನ್ನೊಂದು ಖುರ್ಚಿಯ ಮೇಲೆ ಬೆಕ್ಕು ತನ್ನ ಮರಿಗಳಿಗೆ ಹಾಲು ಕುಡಿಸುತ್ತ ಸುಖವಾಗಿ ಮಲಗಿದ್ದರಿಂದ ನನಗೆ ಎದುರಿಗಿನ ಸ್ಟೂಲಮೇಲೆ ಕೂಡ್ರಲಿಕ್ಕೆ ಹೇಳಿದನು. ಆದರೂ ಜೇಲರರು ನಿಂತದ್ದರಿಂದ ಬೇರೆ ಖುರ್ಚಿಯನ್ನು ತರಿಸಿದರು. ಆದು ಬಂದ ಮೇಲೆ ಜೇಲರರಿಗೆ ಆಗ್ರಹಪೂರ್ವಕ ಕೂಡ್ರಿಸಿದರು.

ಬಂದ ಕೂಡಲೇ ನಾವು ಮೂವರಿಗೂ ಹಸ್ತಾಂದೋಲನ ಮಾಡಿದರು. ಹೋಗುವಾಗ ಸಹ ಮಾಡಿದರು. ಬಾಪೂಗೆ ಅಂದರು: "ನಿಮಗೆ ಸುದ್ದಿ ಏನು ಹೇಳಲಿ? ದಂಗೆಯ ಸುದ್ದಿಯನ್ನು ನಿಮಗೆ ಹೇಳುವದು ಅವಶ್ಯವಿದೆಯೆ? ಬಹಳ ದುಃಖದಾಯಕ ಸಂಗತಿ. ಪುಣೆಯಲ್ಲಿ ಸಹ ಕಿಡಿಗೇಡಿತನ ಮಾಡಿದ್ದರು. ಒಬ್ಬ ಹಿಂದುವಿನ ಮೂರ್ಖತನವಿತ್ತು. ಅವನು ಒಂದು ಪೀರನ ಗೋರಿಗೆ ಬಣ್ಣ ಬಡಿದು ಹಿಂದೂ ಸಮಾಧಿಯ ರೂಪ ಕೊಡಲಿಕ್ಕೆ ಪ್ರಯತ್ನಿಸಿದ್ದನು. ಆದರೆ ನಾನು ಕೂಡಲೇ ಅದನ್ನು ಹತ್ತಿಕ್ಕಿಬಿಟ್ಟೆನು. ಮತ್ತು ಈ ಮಾತು ಸಹ ಹಬ್ಬದಂತೆ ಪ್ರತಿಬಂಧ ಮಾಡಿದೆನು. ಮುಂಬಯಿಯಲ್ಲಿ ನಡೆದದ್ದನ್ನು ನೋಡಿದರೆ ನಡಗು ಬರುತ್ತದೆ. ಈಗಂತೂ ಕೇವಲ ರಕ್ತ ಕುಡಿಯುವ ಮಾತೇ ನಡೆದಿದೆ. ಈ ಸುದ್ದಿಯನ್ನು ನಿಮಗೆ ಹೇಳುವದಿರುವದಿಲ್ಲ. ಆದರೆ ಏನು ಮಾಡಲಿ? ಇನ್ನು ಮುಂದೆ ಇದು ಹೆಚ್ಚಾಗಲಾರದು ಮತ್ತು ಇಲ್ಲಿ ಏನೂ ಆಗುವದಿಲ್ಲವೆಂದು ಆಶಿಸುವಾ. ನಿಮ್ಮ ಸಲುವಾಗಿ ನಾನು ಏನಾದರೂ ಮಾಡಬಹುದೊ?" ಬಾಪೂ ಹೇಳಿದರು: "ಇಲ್ಲ. ಆಭಾರಿಯಿದ್ದೇನೆ." "ನಿಜವಾಗಿಯೂ ನಾನು ಏನೂ ಸೇವೆ ಮಾಡುವದು ಸಾಧ್ಯವಿಲ್ಲವೆ? ಒಳ್ಳೆಯದು, ಹಾಗಾದರೆ ನಮಸ್ಕಾರ." ಈ ಮನುಷ್ಯನ ಮುಖದ ಮೇಲೆ ಆಶ್ಚರ್ಯಕರವಾದ ಸಭ್ಯತನದ ಲಕ್ಷಣವಿತ್ತು.

* * *

ಬಾಪೂ ಒಂದು ಮಣೆಯನ್ನು ತಕ್ಕೆ ಮಾಡಿ ಕೂಡುತ್ತಾರೆ. ಅನೇಕ ಸಾರೆ ಈ ಮಣೆಯನ್ನು ಗೋಡೆಗೆ ನೀಟಾಗಿ ಇಡುತ್ತಾರೆ, ಕೋನಾಕೃತಿಯಾಗಿ ಅಲ್ಲ. "ಬಾಪೂ, ಕೋನಾಕೃತಿಮಾಡಿ ಇಟ್ಟರೆ ಬೀಳುವದಿಲ್ಲ ಮತ್ತು ಸ್ವಲ್ಪ ವಿಶ್ರಾಂತಿಯೂ ದೊರೆಯುವದು" ಎಂದು ನಾನು ಹೇಳಿದೆ. ಬಾಪೂ ಹೇಳಿದರು: "ಆರಾಮವೇನೊ ದೊರೆಯುವದು. ಆದರೆ ನಿಜವಾದ ವೈಶಿಷ್ಟ್ಯವು ಅದನ್ನು ನೀಟಾಗಿ ಇಡುವದರಲ್ಲಿಯೇ ಇದೆ. ಟೊಂಕ ಮತ್ತು ಬೆನ್ನುಮೂಳೆ ನೆಟ್ಟಗೆ ಉಳಿಯುವವು, ಇಲ್ಲದಿದ್ದರೆ ಬಾಗುವವು. ಹೀಗೊಂದು ನಿಯಮವಿದೆ: ಒಂದು ವಸ್ತುವನ್ನು ನೀಟಾಗಿ ಇಡಿರಿ ಅಂದರೆ ಅದಕ್ಕೆ ಆಧಾರವಾದ ಎಲ್ಲ ವಸ್ತುಗಳೂ ನೀಟಾಗಿ ಉಳಿಯುವವು. ಒಂದು ವಿಷಯದಲ್ಲಿ ಡೊಂಕಾದರೆ ಆ ಮೇಲೆ ಅನೇಕ ದೋಷಗಳು ಸೇರುವವು."

ರೋಮಾँ ರೋಲಾँರ 'ರಾಮಕೃಷ್ಣರ ಜೀವನಚರಿತ್ರೆ' ಓದಿ ತೆಗೆದೆನು. ಈ ಮನುಷ್ಯನ ಅಗಾಧ ಕಲ್ಪನಾಶಕ್ತಿ, ಉಚ್ಚ ಭಾವನೆಗಳು ವರ್ಣನೀಯವಾಗಿವೆ.

೧-೬-'೩೨

ಸ್ವಿತ್ಸರ್ಲಂಡದ ಹಳ್ಳಿಯಲ್ಲಿ ಕೂತಲ್ಲಿಯೇ ಕುಳಿತು ಇಂಗ್ಲೀಷ ಪುಸ್ತಕಗಳನ್ನೂ ಬಂಗಾಲಿಯ ಇಂಗ್ಲೀಷ ಅನುವಾದಗಳನ್ನೂ ಫ್ರೆಂಚ ಭಾಷಾಂತರ ಮಾಡಿಸಿ ಅವುಗಳನ್ನು ತಿಳಿದುಕೊಂಡು ಎರಡು ವರುಷ ಪರಿಶ್ರಮದ ಕೊನೆಯಲ್ಲಿ ಹಿಂದೀಯರನ್ನು ತಲೆಬಾಗಿಸುವಂಥ ಪುಸ್ತಕ

ಗಳನ್ನು ಹೊರಗೆಡವಿದ್ದಾನೆ. ರಾಮಮೋಹನರಾಯರಿಂದ ಪ್ರಾರಂಭ ಮಾಡಿಕೊಂಡು ರಾಮಕೃಷ್ಣ ಮತ್ತು ವಿವೇಕಾನಂದರ ವರೆಗೆ ರಾಷ್ಟ್ರೀಯ ಧರ್ಮೋತ್ಥಾನದ ಇತಿಹಾಸ ವನ್ನು ಅಪೂರ್ವ ಶಕ್ತಿಯಿಂದ ಕೊಟ್ಟಿದ್ದಾನೆ. ಭಾರತದ ಬಗ್ಗೆ ಈ ಮನುಷ್ಯನ ಭಕ್ತಿಯು ಪ್ರತಿಯೊಂದು ಪುಟದಲ್ಲಿಯೂ ಪ್ರಕಟವಾಗುತ್ತದೆ. ಇದಲ್ಲದೆ ಭಾರತದ ಆಧ್ಯಾತ್ಮಮಾರ್ಗದ ವಿಷಯಕ್ಕೆ ಇವನ ಆಕರ್ಷಣ ಮತ್ತು ಅದರಲ್ಲಿಯ ಸಣ್ಣ ಪುಟ್ಟ ರಹಸ್ಯಗಳನ್ನು ತಿಳಿದುಕೊಳ್ಳುವ ಇವನ ಗ್ರಹಣಶಕ್ತಿ ಸಹ ಅಲ್ಲಲ್ಲಿ ಕಂಡು ಬರುತ್ತವೆ. ತೋತಾಪುರಿಯ ಮತ್ತು ಪರಮಹಂಸರ ಸಂಬಂಧವನ್ನೂ ಕೇಶವಚಂದ್ರ ಸೇನರ ಸಂಬಂಧವನ್ನೂ ಒಳ್ಳೇ ಹೃದಯಂಗಮವಾಗಿ ವರ್ಣಿಸಿದ್ದಾನೆ.

ವಲ್ಲಭಭಾಯಿಯವರಿಗೆ ಈ ಪುಸ್ತಕವನ್ನು ಓದಲು ಶಿಫಾರಸು ಮಾಡುವಾಗ ನಾನು ಹೇಳಿದೆ: "ಬೇರೆ ಮತ್ತೇನೂ ಇಲ್ಲದಿದ್ದರೂ ನಿಮಗೆ ರಾಮಕೃಷ್ಣ ಪರಮ-ಹಂಸರ ಮಧುರವಾದ ವ್ಯಂಗ ಮತ್ತು ವಿನೋದಗಳಲ್ಲಿ— ಯಾವುದಕ್ಕೆ ರೋಲಾನು ವ್ಯಂಗ ವಿನೋದ ಎಂದು ಅನ್ನುತ್ತಾನೆ—ಕೆಲವೊಂದು ನಿಮ್ಮ ಸಂಗಡ ಸಾಮ್ಯ ಕಂಡುಬರುವವು." ಉದಾಹರಣೆಗಾಗಿ ಬ್ರಹ್ಮಸಮಾಜಿಗಳು ಹಗಲು ರಾತ್ರಿ ದೇವರ ಸ್ಮರಣೆ ಮಾಡುವ ಭಜನೆ ಅನ್ನುತ್ತಿದ್ದರು. ಆಗ ರಾಮಕೃಷ್ಣರು ಹೇಳಿದರು: "ಈ ಪ್ರಕಾರ ಸುಳ್ಳು ಏಕೆ ಹೇಳುತ್ತೀರಿ? ದಿವಸಕ್ಕೆ ಎರಡುಸಲ ಭಜಿಸುತ್ತೇವೆ ಎಂದು ಹೇಳಿರಿ? ದೇವರನ್ನು ಏಕೆ ಮೋಸಗೊಳಿಸುತ್ತೀರಿ?" ಬ್ರಹ್ಮಸಮಾಜಿಗಳು ಮೂರ್ತಿ ಪೂಜೆಯಿಂದ ಅಲಿಪ್ತರಿರುತ್ತೇವೆಂದು ಅಭಿಮಾನಪಡುತ್ತಾರೆ. ಅದನ್ನು ಕುರಿತು ರಾಮಕೃಷ್ಣರು ವ್ಯಂಗೋಕ್ತಿಯಾಡಿದರು: "ನೀವು ಅವನ ಅನೇಕ ಗುಣಗಳನ್ನು ಎಣಿಸುತ್ತೀರಿ. ಆದರೆ ಇವೆಲ್ಲ ಅಂಕೆಗಳನ್ನು ಏತಕ್ಕಾಗಿ ಎಣಿಸುತ್ತೀರಿ? ಯಾವನೊಬ್ಬ ಹುಡುಗನು ತಂದೆಗೆ ನಿನ್ನ ಹತ್ತಿರ ಇಷ್ಟು ಮನೆಗಳಿವೆ, ತೋಟಗಳಿವೆ, ಕುದುರೆಗಳಿವೆ ಎಂದು ಹೇಳುವಂತೆ ಇವೆಲ್ಲ ಅಂಕಿಗಳನ್ನು ಏತಕ್ಕಾಗಿ ಎಣಿಕೆ ಹಾಕುತ್ತೀರಿ?" ಈ ಎಲ್ಲ ವ್ಯಂಗೋಕ್ತಿಗಳು ವಲ್ಲಭಭಾಯಿಯ ಶೈಲಿಯವೊ ಎಂಬಂತೆ ಇರುತ್ತವೆ.

ರಾಮಕೃಷ್ಣರ ಅತ್ಯಂತ ಸೂಕ್ಷ್ಮವಾದ ಆಧ್ಯಾತ್ಮಿಕ ಮತ್ತು ಶಾರೀರಿಕ ಭಾವನೆ-ಗಳ ಈ ಎರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. ನಿದ್ದೆಯಲ್ಲಿ ಸಹ ದುಡ್ಡಿನ ಮತ್ತು ಬಂಗಾರದ ಸ್ಪರ್ಶವು ಅವರಿಗೆ ಬೆಂಕಿಯಂತೆ ಅನಿಸುತ್ತಿತ್ತು. ಅದರಂತೆಯೇ ದುಷ್ಟ ಮನುಷ್ಯರ ಸ್ಪರ್ಶವು ಅವರಿಗೆ ಸರ್ಪದಂತೆ ಅನಿಸುತ್ತಿತ್ತು. ಅವರು ಚೀರುತ್ತಾ ಏಳುತ್ತಿದ್ದರು. ಇದನ್ನು ಕುರಿತು ನಾನು ಬಾಪೂರನ್ನು ಕೇಳಿದೆ. ಬಾಪೂ ಹೇಳಿದರು: "ಇದು ಸ್ವಾಭಾವಿಕವಿದೆ, ಆದರೆ ನೀನು ಹೇಳುವಂತೆ ಇದು ಆತ್ಮಶುದ್ಧಿಯ ಪರಾಕಾಷ್ಠೆ ತೋರಿಸುವ ವಸ್ತುವಾಗಿಲ್ಲ. ಒಂದು ವಸ್ತುವಿನ ವಿಷಯಕ್ಕೆ ನಿದ್ರೆಯಲ್ಲಿ ಸಹ ಅದರ ಸ್ಪರ್ಶನಾದರೆ ಮನುಷ್ಯನು ಬೆಚ್ಚಿಬೀಳುವಷ್ಟು

ತಿರಸ್ಕಾರವನ್ನು ಹುಟ್ಟಿಸಿಕೊಳ್ಳಬಹುದು. ಕೆಟ್ಟ ಮನುಷ್ಯನ ಸ್ಪರ್ಶದಿಂದ ಮೆಟ್ಟಿಬೀಳುತ್ತಿದ್ದರೆಂಬುದು ನನಗೆ ವಿರೋಧಯುಕ್ತವಾದ ಮಾತಾಗಿ ತೋರುತ್ತದೆ. ಯಾಕಂದರೆ ಅವರು ಎಲ್ಲರಲ್ಲಿಯೂ ದೇವರನ್ನು ನೋಡುತ್ತಿದ್ದರು. ಕೆಟ್ಟ ಮನುಷ್ಯನ ವಿಷಯಕ್ಕೆ ಅವರಿಗೆ ತಿರಸ್ಕಾರವಿರುವದು ಸಾಧ್ಯವೇ ಇದ್ದಿಲ್ಲ. ನಾವಂತೂ ಇಂಥ ಮಹಾಪುರುಷರ ಹಿರಿಮೆಯನ್ನು ಒಪ್ಪಲೇಬೇಕು. ಇವರ ವಿಷಯದಲ್ಲಿ ಎರಡನೆಯವರಿಗೆ ಆದ ಅನುಭವವು ನಮಗೆ ಆಗದಿರುವ ಸಂಭವವೂ ಇದೆ. ಅವರು ಅನೇಕರನ್ನು ಉದ್ಧಾರ ಮಾಡಿದರೆಂಬ ಮಾತನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು ಮತ್ತು ತಿಳಿದುಕೊಳ್ಳತಕ್ಕದ್ದು."

ನಿವೇದಿತಾನ ಮಾತು ಹೊರಟ ಕೂಡಲೇ ಬಾಪೂ ಹೇಳತೊಡಗಿದರು: "ಇವಳು ನನ್ನ ಮೊದಲನೇ ಭೆಟ್ಟಿಯಲ್ಲಿಯೇ ಇಂಗ್ಲೀಷರ ವಿಷಯಕ್ಕೆ ಅತಿಶಯ ತಿರಸ್ಕಾರ ಮತ್ತು ದ್ವೇಷಯುಕ್ತವಾದ ಮಾತುಗಳನ್ನು ಆಡಿದಳೆಂಬುದನ್ನು ನಾನು ಮರೆಯುವದು ಎಂದೂ ಸಾಧ್ಯವಿಲ್ಲ. ನನಗೆ ಅದು ಸ್ವಲ್ಪ ತೋರಿಕೆಯದೆಂದು ಅನಿಸಿತ್ತು. ಆದರೆ ಬೇರೆ ಅನೇಕ ಜನರು ಇವಳು ಬಡವರಲ್ಲಿ ಬಡವರಾದ ಭಂಗೀ ಜನರ ಓಣಿಯಲ್ಲಿ ಇರುತ್ತಿದ್ದಳೆಂದು ಹೇಳುತ್ತಿರುವದರಿಂದ ಇಷ್ಟು ಪ್ರಮಾಣ ನನಗೆ ಸಾಕು. ಎರಡನೇ ಸಾರೆ ಬಾದಶಾಹನ ಆರಮನೆಯಲ್ಲಿ ಭೆಟ್ಟಿಯಾಗಿದ್ದಳು. ಅಲ್ಲಿ ಬಾದಶಾಹನ ಮುಪ್ಪಿನ ತಾಯಿಯು ಒಂದು ವ್ಯಂಗೋಕ್ತಿಯನ್ನಾಡಿದ್ದು ನೆನಪಿದೆ: "ಇವಳು ತನ್ನ ಧರ್ಮವನ್ನು ಬಿಟ್ಟುಬಿಟ್ಟಿದ್ದಾಳೆ, ಇನ್ನು ನನಗೆ ನನ್ನ ಧರ್ಮವನ್ನು ತಿಳಿಸಿಕೊಡುತ್ತಾಳೆಯೆ? ಎಂದು ಇವಳಿಗೆ ಹೇಳಿರಿ."

ಇವತ್ತು ೭ ನೇ ಅಧ್ಯಾಯದಲ್ಲಿಯ 'अव्यक्तं व्यक्तिमापन्नं' ಈ ಶ್ಲೋಕ ಮತ್ತು ೧೨ ನೇ ಅಧ್ಯಾಯದಲ್ಲಿ ವ್ಯಕ್ತೋಪಾಸನೆಯ ಮೇಲೆ ಮಹತ್ವ ಕೊಡುವ ಶ್ಲೋಕ ಇವುಗಳಲ್ಲಿಯ ವಿರೋಧದ ಕಡೆಗೆ ಬಾಪೂರ ಲಕ್ಷ್ಯವನ್ನು
**೨-೬-'೩೨** ಎಳೆಯಲಾಯಿತು. ಬಾಪೂ ಅಂದರು: "ಇಂಥ ವಿರೋಧಗಳು ಗೀತೆಯಲ್ಲಿ ಅನೇಕ ಸ್ಥಳಗಳಲ್ಲಿವೆ. ಒಂದು ಸ್ಥಳದಲ್ಲಿ ಒಂದು ವಿಷಯದ ಮೇಲೆ ಮಹತ್ವ ಕೊಡಲಾಗಿದೆ. ಮತ್ತು ಎರಡನೇ ಕಡೆಗೆ ಎರಡನೇ ವಿಷಯದ ಮೇಲೆ. ಇದನ್ನು ತಿಳಿದು ಇದರ ಸಮನ್ವಯ ಮಾಡಬೇಕು. ೧೨ ನೇ ಅಧ್ಯಾಯದಲ್ಲಿ ಅವ್ಯಕ್ತೋಪಾಸಾನೆಯ ನಿಷೇಧವಂತೂ ಇಲ್ಲವೇ ಇಲ್ಲ. ಕೇವಲ ಅದು ಕಠಿಣವಾಗಿದೆಯೆಂಬುದನ್ನು ತೋರಿಸಲಾಗಿದೆ." ನಾನು ಪ್ರಶ್ನಿಸಿದೆ: "ನೀವು ಭಾವೂಗೆ ಬರೆದ ಪತ್ರದಲ್ಲಿ ಅವನಿಗೆ ನೀನು ವ್ಯಕ್ತೋಪಾಸನೆಯ ಬದಲು ಅವ್ಯಕ್ತೋಪಾಸನೆ ಮಾಡಬೇಕು ಎಂದು ಹೇಳಿತ್ತು." ಬಾಪೂ ಹೇಳಿದರು: "ಯಾಕಂದರೆ ಅವನು ಜೀವಿಸಿರುವವರ ಧ್ಯಾನ ಮಾಡುತ್ತಾನೆ, ಇದು ಸರಿಯಲ್ಲ. ಜೀವಿಸಿರುವಾಗ

ಯಾವ ಜೀವಂತ ಮನುಷ್ಯನೂ ಪರಿಪೂರ್ಣನಿರುವದಿಲ್ಲ. ಗೀತೆಯಲ್ಲಿ ಮೂರ್ತಿ ಪೂಜೆಯ ಉಲ್ಲೇಖವಿದ್ದರೆ ಅದು ಅವತಾರಗಳ ಪೂಜೆಯದು. " ನಾನು ಕೇಳಿದೆ : "ಹಾಗಾದರೆ ಅವತಾರವಾದರೂ ಕೊನೆಗೆ ಯಾರು ? ನಿಜವಾದ ಮೂರ್ತಿಗಳು ನಮ್ಮ ಹತ್ತರ ಇವೆ ಎಲ್ಲಿ?" ಬಾಪೂ ಹೇಳಹತ್ತಿದರು: "ಆದುದರಿಂದಲೇ ನಾವು ನಮ್ಮ ಕಲ್ಪನೆಯ ಅವತಾರಗಳನ್ನು ಪೂಜಿಸಬಲ್ಲೆವು ಎಂದು ನಾನು ಹೇಳುತ್ತೇನೆ. ರವಿವರ್ಮನ ಚಿತ್ರಗಳನ್ನು ಧ್ಯಾನ ಮಾಡುವದು ನಿಷಿದ್ಧವೆಂದು ನಾನು ಹೇಳುವದಿಲ್ಲ. ಭಾವನೆಯು ಮುಖ್ಯ ವಸ್ತುವು."

ಶಕ್ತಿಮಾರ್ಗದ ವಿಷಯಕ್ಕೆ ನಿನ್ನೆ ಮಾತು ಹೊರಟಿತು. ಆಗ ಬಾಪೂ ಹೇಳ ಹತ್ತಿದರು : "ಇಂದೂಲಾಲ ಇಲ್ಲಿ ಇದ್ದಾಗ ವುಡ್‌ರೂಫನ ಪುಸ್ತಕ ತಂದಿದ್ದರು ಮತ್ತು ಅದನ್ನು ಓದಲಿಕ್ಕೆ ಹೇಳಿದ್ದರು. ಆದರಲ್ಲಿ ಕೆಲವೊಂದು ಭಾಗ ಇಷ್ಟು ಅಸಹ್ಯ ಮತ್ತು ಭೀಭತ್ಸ ಇದ್ದುದರಿಂದ ಅದನ್ನು ನನ್ನಿಂದ ಓದುವದಾಗಲಿಲ್ಲ. ನೃತ್ಯದ ಮಾತು ಬಂದಾಗ ನಾನು ಅಂಜಿಯೇ ಹೋದೆನು. ಮತ್ತು ಪುಸ್ತಕ ಬಿಟ್ಟುಬಿಟ್ಟೆನು. ಇದೇ ಸ್ಥಿತಿಯು ಗೀತಗೋವಿಂದ ಓದುವಾಗ ಆಗಿತ್ತು. ಅದರ ಅನುವಾದ ಮತ್ತು ಆದರಮೇಲೆ ಹಿಂದಿನಿಂದಾದ ಟಿಪ್ಪಣಿಗಳನ್ನು ಓದುವಾಗ ಅದನ್ನು ಓದುವ ಪ್ರಯತ್ನ ಮಾಡುವದು ವ್ಯರ್ಥವೆಂದು ಅನಿಸಿತು."

ಇವತ್ತು 'ಎಲ್ ರಿವ್ಯೂ'ದಲ್ಲಿ ಬಂದ ಲಾಸ್ಕಿಯ ಒಂದು ಲೇಖವು ದುಂಡು ಮೇಜಿನ ಸಮಯಕ್ಕೆ ಮುಸಲ್ಮಾನರ ಗತ್ತುಗಾರಿಕೆಯನ್ನು ಚನ್ನಾಗಿ ಹೊರಗೆಡವಿತ್ತು. ಅದನ್ನು ಓದಿ ಹೇಳಿದ ಮೇಲೆ ಬಾಪೂ ಅಂದರು : "ಸಂಕಿಯ ಪೊಳ್ಳುತನವನ್ನು ಲಾಸ್ಕಿಯು ತಿಳಿದುಕೊಂಡಂತೆ ಕಾಣುತ್ತದೆ. ಇವನ ಮತ್ತು ಬೇರೆಯವರ ಕಣ್ಣು ತೆರೆಯುವವನು ನಾನೇ ಆಗಿದ್ದಕ್ಕೆ ನನಗೆ ಆನಂದವಾಗುತ್ತದೆ. ಯಾಕಂದರೆ ಸಂಕಿಯ ವಿಷಯಕ್ಕೆ ನನ್ನ ಅಭಿಪ್ರಾಯವನ್ನು ನಾನು ಎಂದೂ ಬಚ್ಚಿಟ್ಟಿಲ್ಲ."

"ಬಾಪೂ, ಸಂಕಿಯಪತ್ರದ ಉತ್ತರವು ಇಷ್ಟೊತ್ತಿಗೆ ಬರಬೇಕಲ್ಲವೆ" ಎಂದು ನಾನು ಕೇಳಿದೆ.

ಬಾಪೂ : "ಯಾವ ಕಾಗದ ?"

"ಇವನ ಲೇಖದ ವಿಷಯಕ್ಕೆ ನೀವು ಬರೆದದ್ದು"

"ಆವನಿಗೆ ಪತ್ರ ಯಾವಾಗ ಬರೆಯಿತು ?"

ವಲ್ಲಭಭಾಯಿ : "ಬಾಪೂ, ಹೀಗೆ ಮರೆತರೆ ಹೇಗೆ ನಡೆದೀತು ? ಇನ್ನೂ ನಮಗೆ ಸ್ವರಾಜ್ಯ ತೆಗೆದುಕೊಳ್ಳುವದಿದೆಯಲ್ಲವೆ ?"

ಆ ಮೇಲೆ ನಾನು ಪತ್ರದ ನೆನಪು ಕೊಟ್ಟೆನು. ಎಷ್ಟೋ ವಿವರ ಕೊಟ್ಟಮೇಲೆ ಬಾಪೂ ಹೇಳಹತ್ತಿದರು : "ಈಗ ಸ್ವಲ್ಪ ಮಸಕು ಮಸಕು ನೆನಪಾಗುತ್ತಿದೆ."

ಬಾಪೂ ಈ ಪ್ರಕಾರ ಮರೆತದ್ದು ನನ್ನ ತಿಳಿವಳಿಕೆಯಲ್ಲಿ ಇದೇ ಮೊದಲನೆ-

ಯದು. ಬೇರೆ ಎಷ್ಟೋ ಮಾತುಗಳನ್ನು ಮರೆಯುವ ಉದಾಹರಣೆಗಳು ನನಗೆ ಗೊತ್ತಿವೆ. ಆದರೆ ಇದು ಮಹತ್ವದ್ದೆಂದು ನಾನು ತಿಳಿಯುತ್ತೇನೆ. ರಾತ್ರಿ ಮಲಗುವಾಗ ಕೇಳಿದೆ: "ಬಾಪೂ, ನೀವು ಇಷ್ಟು ಸಣ್ಣ ಸಣ್ಣ ಮಾತುಗಳನ್ನು ಸಹ ನೆನಪಿಡುತ್ತೀರಿ. ಅದು ನನಗೆ ಬಹಳ ಸಾರೆ ಆಶ್ಚರ್ಯವನ್ನುಂಟು ಮಾಡುತ್ತದೆ. ಇಷ್ಟೊಂದು ಚರ್ಚೆ ಮತ್ತು ವಿಚಾರಮಾಡಿದ ಮೇಲೆ ನೀವೇ ಬರೆದ ಪತ್ರದಂಥ ಇಷ್ಟು ದೊಡ್ಡ ಮಾತನ್ನು ನೀವು ಹೇಗೆ ಮರೆತಿರಿ? ದಾವುದನಿಗೆ ಬರೆದ ಪತ್ರವನ್ನು ಇಂಥ ಮನುಷ್ಯನ ಪತ್ರದ ಸಂಗಡ ಇಟ್ಟಿತ್ತೆಂದು ಇವತ್ತೇ ನೀವು ಹೇಳಿದ್ದಿರಿ. ಅದು ನಿಮಗೆ ನೆನಪಿರಬೇಕು ಮತ್ತು ಇದನ್ನು ನೀವು ಮರೆಯಬೇಕು ಇದು ಆಶ್ಚರ್ಯ-ಕಾರಕ ಸಂಗತಿಯು."

ಬಾಪೂ: "ನನ್ನ ವಿಷಯದಲ್ಲಿ ಹೀಗಾಗಿದೆ. ಇದರ ಕಾರಣವೆಂದರೆ ಈ ಎರಡೂ ಸಣ್ಣ ಸಣ್ಣ ಪತ್ರಗಳ ಮೂಲ್ಯವು ನನ್ನೆದುರಿಗೆ ಬೇರೆ ಬೇರೆಯಾಗಿತ್ತು. ಯಾವದೇ ಮಾತಿನಲ್ಲಿ ಯಾವುದಾದರೂ ಮನುಷ್ಯನ ಕಲ್ಯಾಣವು ಅಡಕವಾಗಿದ್ದರೆ ಅದನ್ನು ನಾನು ಎಂದೂ ಮರೆಯುವದಿಲ್ಲ."

ನಾನು: "ಹೌದು, ಸ್ಮೃತಿಯು ವ್ಯಾಖ್ಯೆಯಾದರೂ ಇದೇ ಅಲ್ಲವೆ? ನೆನಪಿಡ-ಲಿಕ್ಕೆ ಅವಶ್ಯವಾದದ್ದನ್ನು ನೆನಪಿನಲ್ಲಿಡುವದು ಮತ್ತು ಉಳಿದದ್ದನ್ನು ಮರೆತು ಬಿಡುವ ಶಕ್ತಿ ಇರುವದು."

ಬಾಪೂ: "ಹೌದು, ನಾನು ಸೆಂಕಿಯ ಪತ್ರಕ್ಕೆ ಇಷ್ಟು ಮಹತ್ವವನ್ನೇ ಕೊಟ್ಟಿದ್ದಿಲ್ಲ. ಅವನಿಗೆ ಬರೆಯಿಸಿದೆನು ಮತ್ತು ಮರೆತು ಬಿಟ್ಟೆನು. ದಾವುದನ ಪತ್ರದ ನೆನಪು ಉಳಿಯುವ ಕಾರಣವೆಂದರೆ ಅದರಲ್ಲಿ ಒಬ್ಬ ಮನುಷ್ಯನ ಆತ್ಯಂತಿಕ ಕಲ್ಯಾಣದ ಮಾತಿತ್ತು. ಸೆಂಕಿಗಂತೂ ಪತ್ರ ಬರೆಯಿಸಿ ಮರೆತು ಬಿಟ್ಟೆನು. ನಿಜವಾಗಿ ಹೇಳುವದಾದರೆ ದೊಡ್ಡವೆಂದು ತಿಳಿಯುವ ಮಾತುಗಳು ನನಗೆ ದೊಡ್ಡವೆಂದು ಅನಿಸುವದಿಲ್ಲ; ಮತ್ತು ಸಣ್ಣ ಮಾತುಗಳು ದೊಡ್ಡವೆನಿಸುತ್ತವೆ. ಮಹಾಭಾರತದಂತೆ ತೋರುವ ಕೆಲಸಗಳು ನನಗೆ ಮಹಾಭಾರತವೆಂದು ಅನಿಸಿಯೇ ಇಲ್ಲ. ಚಂಪಾರಣ್ಯ ದಿಂದ ಪ್ರಾರಂಭಮಾಡಿ ಇಂದಿನವರೆಗಿನ ಎಲ್ಲ ಕೆಲಸಗಳನ್ನು ನಾನು ಹುಡುಕಲಿಕ್ಕೆ ಹೋಗಿದ್ದಿಲ್ಲ; ಆದರೆ ಅವು ನನ್ನ ತೊಡೆಯ ಮೇಲೆ ಬಂದು ಬಿದ್ದಂತೆ ನನಗೆ ಅನಿಸು ತ್ತದೆ. ಮತ್ತು ಇದೇ ಪ್ರಕಾರ ನಡೆದಿದೆ. ದೇವರು ಸರಿಯಾಗಿ ನಡೆಯಿಸಿಕೊಂಡು ಹೋಗುತ್ತಿದ್ದಾನೆ."

ಇಲ್ಲಿಯ ಕುಷ್ಠರೋಗದ ವಾರ್ಡಿನಲ್ಲಿ ಶ್ರೀ ಪರಚೂರೆ ಶಾಸ್ತ್ರಿಗಳೂ ಇದ್ದಾರೆ. ಅವರನ್ನು ಭೆಟ್ಟಿಯಾಗಲಿಕ್ಕೆ ಬಾಪೂ ಪ್ರಯತ್ನ ಮಾಡಿದ್ದರು. ಆದರೆ ಕುಷ್ಠರೋಗಿ ಗಳನ್ನು ಎರಡನೆಯವರಿಗೆ ಭೆಟ್ಟಿಯಾಗಗೊಡುವದಿಲ್ಲ. ಆದುದರಿಂದ ಭೆಟ್ಟಿ-


Vallabhbhai Patel
13.6.48

೩-೬-'೩೨ ಯಾಗಲಿಲ್ಲ. ಆದರೆ ಬಾಪೂಗೆ ಅವರ ಬಗ್ಗೆ ಎಷ್ಟೋ ಸಾರೆ ವಿಚಾರವು ಬರುತ್ತಿರುತ್ತದೆ. ಒಂದು ದಿವಸಅವರ ಪ್ರಕೃತಿಯ ಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಒಂದು ಪತ್ರ ಬರೆದರು. ಆದಕ್ಕೆ ಹಿಂದಿಯಲ್ಲಿ ಸುಂದರ ಉತ್ತರ ಬಂದಿತು. ಅದೆಲ್ಲವೂ ಮನನೀಯವೂ ಪಾವಕವೂ ಇದೆ:

"ಪೂಜ್ಯಪಾದ ಶ್ರೀ ಬಾಪೂಜೀ ಚರಣ ಕಮಲಾಭ್ಯಾಂ ನತಿತತಯೋ ವಿಲಸಂತು,

"ನಿಮ್ಮ ಕೃಪಾಕಟಾಕ್ಷ ಪರಿಪೂರಿತ ಪತ್ರ ನೋಡಿ ಅಂತಃಪ್ರಸಾದ ಸಿಕ್ಕಿದೆ. ಇದೇ ರಾಮದೇವರ ಅನುಗ್ರಹವೆಂದು ನನ್ನ ಶ್ರದ್ಧೆಯು. ಹರೋಳೀಕರ ಮತ್ತು ನಾನು ನಿಶ್ಚಿಂತರಿದ್ದೇವೆ. ಇದುವರೆಗೆ ಅವಯವಭಂಗಾದಿ ವಿಕಲತೆ ಇಲ್ಲ. ನನ್ನ ವಿಶ್ವಾಸವು ಆಸನ, ಪ್ರಾಣಾಯಾಮ, ಧೋತಿ, ನೇತಿ, ಬಸ್ತಿ ಮುಂತಾದ ಕ್ರಿಯೆಗಳ ಮೇಲೆಯೂ ಹವಿಷ್ಯಾನ್ನ ಸೇವನದ್ವಾರಾ ಈ ರೋಗವನ್ನು ನಿವಾರಿಸುವದರ ಮೇಲೆಯೂ ಮತ್ತು ಪೂರ್ಣ ಪರಿಹಾರಕ ಸಾಧನೆಗಳ ಮೇಲೆಯೂ ಅನುಭವಕ್ಕೆ ಅನುಸಾರವಾಗಿ ಬೆಳೆಯತೊಡಗಿದೆ. ನನ್ನ ಶಿಕ್ಷೆಯು ಒಂದು ವರುಷದ ಮೇಲೆ ಎರಡು ತಿಂಗಳು ಇರುತ್ತದೆ. ಹರೋಳೀಕರರದು ಏಳು ತಿಂಗಳದ್ದು—ಇನ್ನು ಎರಡು ತಿಂಗಳು ಉಳಿದಿರುತ್ತವೆ. ನಿಮ್ಮ ಚರಣ ಸೇವೆಯಲ್ಲಿ ಹರೋಳೀಕರರ ಪ್ರಣಿಪಾತ. ಸರದಾರಜಿ ಮತ್ತು ಮಹಾದೇವಭಾಯಿಯವರಿಗೆ ನಮ್ಮ ಇಬ್ಬರ ನಮಸ್ಕಾರ.

"ಗೀತೋಪನಿಷತ್, ಭಾಷ್ಯಾದಿ, ವೇದಾಂತ ಪರಿಶೀಲನೆ, ಆಸನ, ಧ್ಯಾನ, ಭಜನೆ ಮತ್ತು ಪ್ರತಿ ದಿವಸ ೫೦೦ ವಾರು ನಿಯಮಿತದಿಂದ ನೂಲುವದು— ಇವೇ ಕೆಲಸಗಳಲ್ಲಿ ನನ್ನ ಸಮಯವು ಆನಂದದಿಂದ ಕಳೆಯುತ್ತದೆ. ನನ್ನ ಪತ್ನಿಯು ಉನ್ಮಾದ ಮತ್ತು ಮೂರ್ಛೆಯ ರೋಗದಿಂದ ಪೀಡಿತಳಾಗಿ ರೋಗ ಶಯ್ಯೆಯ ಮೇಲೆ ಬಿದ್ದಿರುವ ಕಾರಣದಿಂದ ಹಂಜಿ ಮತ್ತು ಪುಸ್ತಕ ಸಿಗುವದು ಅಶಕ್ಯವಾಗಿದೆ. ಹಂಜಿಯ ಸಂಗ್ರಹವು ನನ್ನ ಹತ್ತರ ಬಹಳ ಕಡಿಮೆ ಇದೆ. ನೂಲುವ ವ್ರತಭಂಗದ ಪ್ರಸಂಗವು ರಾಮಕೃಪೆಯಿಂದ ಯಾವದೇ ರೀತಿಯಿಂದ ನಿವಾರಣೆಯಾಗುವದು. ಕುಷ್ಠರೋಗದ ಕಾರಣದಿಂದ ಜೇಲಿನ ಗ್ರಂಥಸಂಗ್ರಹವು ನಮ್ಮಂಥವರ ಸಲುವಾಗಿ ಮುಚ್ಚಿರುತ್ತದೆಯೊ ಏನೊ? ಪುಸ್ತಕ ಮತ್ತು ಹಂಜಿಗಳನ್ನು ಕಳಿಸುವ ಬೇರೆ ಸಹಾಯಕರಾರೂ ಇಲ್ಲ. ನನ್ನ ದೃಷ್ಟಿಯಿಂದ ಸತ್ಯಾಗ್ರಹಿ ಮತ್ತು ಮುಮುಕ್ಷು ಇಬ್ಬರೂ ಒಂದೇ ಇದ್ದಾರೆ. ಆದರೆ "सहनं सर्व दुःखानां अप्रतिकार-पूर्वकं, चिन्ताविलापरहितं, सा तितिक्षा निगद्यते"। ಈ ಪ್ರಕಾರದ ಸಹನಶಕ್ತಿಯಿಲ್ಲದೆ ಯಜ್ಞಕರ್ಮವು ಅಸಾಧ್ಯವು. ಇದುವರೆಗೆ ನನ್ನ ಸಲುವಾಗಿ ಇಂಥ ವ್ಯಾಧಿ ಜರ್ಜರ ಅವಸ್ಥೆಯಲ್ಲಿ ರಸ್ತೆ-ಹಳ್ಳ-ಜಾತ್ರೆ ಇವುಗಳ ಸ್ವಚ್ಛತೆ ಮತ್ತು ನೂಲುವದು ಈ

ಯಜ್ಞಾರ್ಥ ಮಾರ್ಗದ್ವಯಗಳು ಕೇವಲ ಪರಮೇಶ್ವರನ ಕೃಪೆಯಿಂದ ಮುಕ್ತವಿರುತ್ತವೆ. ಈ ಹೀನ ಜೀವನವು ಮೃತವತ್ ಆಗಿಯೂ, ಭಾರಭೂತವಾಗಿಯೂ ಮತ್ತು ನಿಶ್ವಭಯಪ್ರದವಾಗಿಯೂ ಇರುತ್ತದೆ. ಹೀಗೆ ಎಲ್ಲ ಸಜ್ಜನರ ಮತ್ತು ಶೃತಿಗಳ ಸಮನ್ವಯ ಪೂರ್ವಕವಾದ ಅಭಿಪ್ರಾಯವೆಂದು ನಾನು ತಿಳಿಯುತ್ತೇನೆ. ಇದೇ ಪ್ರಕಾರದ ನಿಮ್ಮ ದೃಢವಿಶ್ವಾಸವು ಸಹ ಸತ್ಯಪೂತ ವಾಣಿಯಿಂದಲೂ ಲೇಖನಿಯಿಂದಲೂ ಅನೇಕಸಲ ಪ್ರಕಟವಾಗಿದೆ. ಸಂಶಯ ನಿರಸನಾರ್ಥವಾಗಿ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಯಜ್ಞಕರ್ಮದ ಸಲುವಾಗಿ ಯಾವದೇ ವ್ಯಕ್ತಿಯ ಶರೀರವು ನಾನಾ ವ್ಯಾಧಿಗಳ ಕಾರಣದಿಂದ ಸಂಪೂರ್ಣ ಅಸಮರ್ಥವಾದರೆ 'अप्रति समाधेय व्याधिनां जलादि प्रवेशेन प्राणत्याग:' ಇತ್ಯಾದಿ ಶ್ರುತಿ ಶಾಸ್ತ್ರಾನುಸಾರ ಪ್ರಾಯೋಪವೇಶನಾದಿ ಮಾಡಿ ಶರೀರತ್ಯಾಗ ಮಾಡುವದು ಶ್ರೇಯಸ್ಕರವೋ ಅಥವಾ ಪ್ರಾಣಧಾರಣೆಯೊ? ಹರಕು ಮುರಕು ಹಿಂದೀ ಭಾಷೆಯ ದೋಷಗಳನ್ನು ಕ್ಷಮಿಸಿರಿ. ಪ್ರಿಯ ಸುಹೃದ ಕಾಕಾಸಾಹೇಬರ ಸ್ಥಿತಿಯು ಹೇಗಿದೆ ಗೊತ್ತಿಲ್ಲ. ವಂದೆ ಮಾತರಂ.

ತಪೋವನವರ್, ೩೧—೫—'೩೨. ಭವದೀಯ ಕೃಪಾಭಿಲಾಷಿ

ದತ್ತಾತ್ರೇಯ ವಾಸುದೇವ ಪರಚುರೆ."

ಬಾಪೂ ಈ ಪತ್ರದ ಸಾರ ತೆಗೆದುಕೊಂಡು ಅದರಮೇಲಿಂದ ಆಶ್ರಮಕ್ಕೆ ಸಾಪ್ತಾಹಿಕ ಲೇಖ ಬರೆದರು ಮತ್ತು ಶಾಸ್ತ್ರೀಜಿಗೆ ಈ ರೀತಿ ಹಿಂದಿಯಲ್ಲಿ ಪತ್ರ ಬರೆದರು: "ನಿಮ್ಮ ಪತ್ರ ಓದಿ ನಮಗೆ ಮೂರು ಜನರಿಗೂ ಬಹಳ ಆನಂದವಾಯಿತು. ನಾನು ಹರೋಳೀಕರರಿಗೆ ಹುಕ್ಕೇರಿಕರ ಎಂದು ತಿಳಿದು ಕೊಂಡೆನು. ನಾನು ಎಷ್ಟು ಮೂರ್ಖನಿದ್ದೇನೆ! ಹೆಸರು ಮತ್ತು ಮುಖ ಲಕ್ಷ್ಯದಲ್ಲಿಡಲು ನಾನು ಬಹಳ ಮಂದನಿದ್ದೇನೆ. ನೀವು ಆನಂದದಿಂದ ವ್ಯಾಧಿಯನ್ನು ಸಹಿಸುತ್ತಿರುವಿರೆಂಬುದನ್ನು ತಿಳಿದು ಬಹಳ ಸಂತೋಷವಾಗುತ್ತದೆ. ನಿಮ್ಮಿಂದ ನಾನು ಇದನ್ನೇ ಅಪೇಕ್ಷಿಸುತ್ತಿದ್ದೆ.

"ನಿಮ್ಮ ಪತ್ನಿಯ ವ್ಯಾಧಿಯ ಸ್ಥಿತಿ ಕೇಳಿ ದುಃಖವಾಗುತ್ತಿದೆ. ಅವರ ಸೇವೆಗೆ ಯಾರಾದರೂ ಇರುತ್ತಾರೆಯೆ? ಮಾತಾಪಿತೃಗಳಿದ್ದಾರೆಯೆ? ಹಂಜಿಯ ಒಂದು ಪುಡಿಕೆಯನ್ನು ಕಳಿಸುತ್ತೇನೆ. ಮಹಾದೇವನು ಇಲ್ಲಿ ತಯಾರಿಸಿದ್ದಾನೆ. ನಮ್ಮ ಹತ್ತರ ಯಾವಾಗಲೂ ಅವಶ್ಯಕ್ಕಿಂತ ಹೆಚ್ಚು ಸಂಗ್ರಹವಿರುತ್ತದೆ. ಆದುದರಿಂದ ಕೇಳಲಿಕ್ಕೆ ಸಂಕೋಚ ಮಾಡಬಾರದು. ಪುಸ್ತಕ ಯಾವದು ಬೇಕು? ಇದನ್ನೂ ತಿಳಿಸಿರಿ. ನಾನು ತರಿಸುವ ಪ್ರಯತ್ನ ಮಾಡುವೆನು.

"ಪ್ರಾಣತ್ಯಾಗದ ವಿಷಯಕ್ಕೆ ಬರೆದ ಮಾತು ಯಾವದೇ ಗ್ರಂಥದಲ್ಲಿದೆಯೆ? ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹೀಗಿದೆ: ಅಸಾಧ್ಯ ರೋಗವುಳ್ಳ, ಎರಡನೆಯವರ ಸೇವೆಯಿಂದಲೇ ಜೀವಿಸಿರುವ, ಮತ್ತು ಯಾವ ಸೇವೆಯನ್ನೂ ಮಾಡಲಿಕ್ಕೆ

ಬಾರದ ಮನುಷ್ಯನಿಗೆ ಪ್ರಾಣತ್ಯಾಗಮಾಡುವ ಅಧಿಕಾರವಿದೆ. ಮುಳುಗಿ ಸಾಯುವದಕ್ಕಿಂತ ಪೂರ್ಣ ಅನಶನ ಮಾಡಿ ಪ್ರಾಣತ್ಯಾಗಮಾಡುವದು ಹೆಚ್ಚು ಉತ್ತಮವೆಂದು ಪ್ರತೀತವಾಗುತ್ತದೆ. ಅನಶನದಲ್ಲಿ ಮನುಷ್ಯನ ದೃಢತೆಯ ಪರೀಕ್ಷೆಯಾಗುತ್ತದೆ. ಮತ್ತು ತನ್ನ ವಿಚಾರ ಬದಲಿಸುವದಕ್ಕೂ ಆಸ್ಪದವಿರುತ್ತದೆ. ಅದನ್ನು ಇಡುವದು ಉಚಿತ ಮತ್ತು ಆವಶ್ಯಕವೆಂದು ಅನಿಸುತ್ತದೆ. ಆದರೆ ಇಂಥ ಮನುಷ್ಯನು ಏನಾದರೂ ಸೇವೆ ಮಾಡುವದು ಸಾಧ್ಯವಿರುವವರೆಗೆ ಅವನು ಪ್ರಾಣತ್ಯಾಗ ಮಾಡುವದು ಅನುಚಿತವಾಗುವದು. ಯಜ್ಞದಲ್ಲಿ ಶಾರೀರಕ ಕ್ರಿಯೆಯು ಒಂದು ದೊಡ್ಡ ಮತ್ತು ಅವಶ್ಯಕ ಅಂಗವಿದ್ದಾಗ್ಯೂ ಅಶಕ್ತತೆಯ ಕಾರಣದಿಂದ ಶರೀರದಿಂದ ಏನೂ ಮಾಡುವದು ಆಗದಿದ್ದರೆ ಮಾನಸಿಕ ಯಜ್ಞವು ಸರ್ವಥಾ ನಿರರ್ಥಕವಲ್ಲ. ಮನುಷ್ಯನು ತನ್ನ ಶುದ್ಧ ವಿಚಾರದಿಂದಲೂ ಸೇವೆ ಸಲ್ಲಿಸಬಲ್ಲನು. ಸಲಹೆ ಇತ್ಯಾದಿಗಳಿಂದ ಸಹ ಸಲ್ಲಿಸಬಲ್ಲನು. ವಿಶುದ್ಧ ಚಿತ್ತದ ವಿಚಾರವೇ ಕಾರ್ಯವು, ಮತ್ತು ಅದು ಮಹತ್ ಪರಿಣಾಮವನ್ನುಂಟು ಮಾಡುತ್ತದೆ."

ಪತ್ರ ಓದಿದರು. ಅದರ ಮೇಲೆ ಲೇಖ ಬರೆಯಿಸಿದರು. ಅನಂತರ ಬಾಪೂ ಒಂದೆರಡು ನಿಮಿಷ ನೋಡುತ್ತ ಕುಳಿತು ಆಳವಾದ ವಿಚಾರದಲ್ಲಿ ಬಿದ್ದರು. ಹಿಂದಿನಿಂದ ಅಂದರು: "ಪರಚೂರೆ ಶಾಸ್ತ್ರಿಯಂಥ ಮನುಷ್ಯನಿಗೆ ಈ ಬೇನೆ ಎಲ್ಲಿಂದ ಬಂತು ?"

ಇವತ್ತು ಲೋದಿಯನ್ ಕಮಿಟಿಯ ವರದಿಯ ಸಾರ ಪ್ರಸಿದ್ಧವಾಯಿತು. ಬಾಪೂ ಅಸ್ಪೃಶ್ಯರ ವಿಷಯಕ್ಕೆ ಮಾಡಿದ ಶಿಫಾರಸಿನ ಸಾರ ಕೇಳಿ ಹೇಳಿದರು: "ಕಮಿಟಿಯು ಅಸ್ಪೃಶ್ಯತೆಯ ವ್ಯಾಖ್ಯೆಯನ್ನು ಮಾಡಿ ಇದುವರೆಗೆ ೭ ಕೋಟಿ ಎಂದು ಹೇಳುತ್ತಿರುವ ಅಸ್ಪೃಶ್ಯರ ಸಂಖ್ಯೆಯನ್ನು ೩॥ ಕೋಟಿ ಎಂದು ಗೊತ್ತು ಮಾಡಿತು. ಈ ಕಮಿಟಿಯ ಇಷ್ಟು ಕೆಲಸವು ಸರಿಯಾಯಿತೆಂದೇ ಹೇಳಬಹುದು. ಇದಕ್ಕಾಗಿ ಬಹುತರ ಲೋದಿಯನ್ನರಿಗೆ ಯಶ ದೊರೆಯಬಹುದು. ಈ ವ್ಯಾಖ್ಯೆಯಾಗುವದರಿಂದ ಹಿಂದುಗಳು ಮನಸ್ಸು ಮಾಡಿದರೆ ಒಂದು ಕ್ಷಣದಲ್ಲಿ ಅಸ್ಪೃಶ್ಯರನ್ನು ಒಂದುಗೂಡಿಸಿಕೊಳ್ಳಬಲ್ಲರು. ಮತ್ತು ಅಸ್ಪೃಶ್ಯರ ಸಲುವಾಗಿ ಎಂದು ಹೇಳುತ್ತಿರುವ ಎಲ್ಲ ಬೇಡಿಕೆಗಳನ್ನು ಶಾಂತ ಮಾಡಬಲ್ಲರು."

ಅಸ್ಪೃಶ್ಯರ ವ್ಯಾಖ್ಯೆಯನ್ನು ಮಾಡುವ ಮತ್ತು ಅವರ ಸಂಖ್ಯೆಯನ್ನು ಗೊತ್ತು ಮಾಡುವದರ ಯಶಸ್ಸು ಲೋದಿಯನ್ನರಿಗೆ ಅಲ್ಲ, ಆದರೆ ತಾಂಬೆ ಮತ್ತು ಚಿಂತಾಮಣಿಯವರಿಗೆ ದೊರೆಯಲಿಕ್ಕೆಬೇಕೆಂದು ಕಾಣುತ್ತದೆ.

೪–೬–'೩೨ ಈ ಜನರ ಭಿನ್ನ ಮತಪತ್ರಿಕೆಯೊಳಗಿನ ಅಸ್ಪೃಶ್ಯತೆಯ ಬಗ್ಗೆ ಇದ್ದ ಭಾಗವನ್ನು ಬಾಪೂಗೆ ಓದಿ ತೋರಿಸಿದೆನು. ಬಾಪೂ ಹೇಳಹತ್ತಿದರು: "ಉತ್ತಮವಾಗಿದೆ. ಅಸ್ಪೃಶ್ಯರಿಗೆ ಪ್ರತ್ಯೇಕ ಮತಾಧಿಕಾರ

ಕೊಟ್ಟರೆ ಇದೊಂದು ನೀಚತನದ ಕೆಲಸವಾಗುವದು. ಮನುಷ್ಯನು ಸ್ವಾರ್ಥಿಯಾಗುವದು ತಿಳಿಯುವಂಥ ಮಾತು. ಆದರೆ ಇಲ್ಲಿ ಇವತ್ತು ಇಡೀ ಪ್ರಜೆಗಳನ್ನೇ ಸ್ವಾರ್ಥಾಂಧ ಮಾಡುವ ಪ್ರಯತ್ನ ನಡೆದಿದೆ. ವೀಲೀಯರ್ಸನು ಇಂಗ್ಲೀಷರ ಮತ್ತು ಮುಸಲ್ಮಾನರ ಐಕ್ಯದ ಮಾತನ್ನು ಹೇಳಿದ್ದನು. ನಾವು ಅವನನ್ನು ಇಂಗ್ಲಂಡದಲ್ಲಿ ನೋಡಿದ್ದೆವು. ಅಂಥದೇ ಮಾತು ಮುಂಬೈಯಲ್ಲಿ ಆದದ್ದನ್ನು ಕೇಳುತ್ತೇವೆ. ಚಟಗಾಂವದಲ್ಲಿಯೂ ಇದೇ ಮಾತು ಇತ್ತು."

*   *   *

ಈ ಸಾರೆ ಸ್ತ್ರೀಯರಿಂದ ಬಂದ ಪತ್ರಗಳಲ್ಲಿ ಸಹೋದರಿ ಉಮಾ ಕುಂದಾಪುರರ ಪತ್ರವು ಬಹಳ ಸುಂದರವಿತ್ತು. "೧೯೬ ಸಹೋದರಿಯರ ಸಹವಾಸವನ್ನು ಬಿಟ್ಟು ಹೋಗಬೇಕಾದ್ದರಿಂದ ದುಃಖವಾಗುತ್ತದೆ. ಇಷ್ಟು ಪ್ರಾಂತದ ಇಷ್ಟು ಸಹೋದರಿಯರ ಈ ದರ್ಶನವು ಹಿಂದುಸ್ತಾನದ ದರ್ಶನವಾದಂತೆಯೇ ಅನಿಸುತ್ತದೆ. ಈ ಸಹೋದರಿಯರ ಸಂಗಡ ಸುಖದಿಂದ ಕಳೆದ ದಿನಗಳು ಯಾವಾಗಲೂ ಜ್ಞಾಪಕಕ್ಕೆ ಬರುವವು. ಇಲ್ಲಿದ್ದಾಗ ನಿಮ್ಮಿಂದ ಬರುವ ಪತ್ರಗಳು ನೋಡಲಿಕ್ಕೆ ಸಿಗುತ್ತಿದ್ದವು. ಹೊರಗೆ ಹೋದರೆ ಈ ಪತ್ರಗಳೂ ನೋಡಲಿಕ್ಕೆ ಸಿಗುವದಿಲ್ಲ."

ಪಂಚಗಣಿಯಿಂದ ಜಾಲ-ಅ-ದಾ. ನವರೋಜಿಯವರಿಂದ ಧನ್ಯವಾದದ ಪತ್ರ ಬಂತು. ಅವರು ಬಹಳ ದೊಡ್ಡ ಅಪಘಾತದಿಂದ ಪಾರಾದರೆಂದು ಹೇಳಬಹುದು. ಈಗ ಹಾಸಿಗೆಯಮೇಲಿದ್ದಾರೆ; ಮತ್ತು ಗಾಯವು ತುಂಬಿ ಬರುಹತ್ತಿದೆ. ಅಲ್ಲಿ ಅವರ ವಾಚನ ಮತ್ತು ಅಭ್ಯಾಸ ನಡೆದಿರುತ್ತವೆ. ಕೂಪರ ಹೆಸರಿನ ಮನುಷ್ಯನು ಒಂದು ಹೊಸ ರಂಟೆಯನ್ನು ತಯಾರಿಸಿದ್ದಾನೆ. ಅದರಲ್ಲಿ ೧೦೦ ಕ್ಕೆ ೧೫ ರಿಂದ ೧೫೦ ರ ವರೆಗೆ ಹೆಚ್ಚು ಉತ್ಪನ್ನ ಕೊಡುವ ಶಕ್ತಿಯಿದೆ ಎಂದು ಅವನ ಹೇಳಿಕೆಯಿದೆ ಎಂದು ಜಾಲರು ಪತ್ರದಲ್ಲಿ ಬರೆದರು. ಇದನ್ನು ಕುರಿತು ಬಾಪೂ ಬರೆದರು :

"If Mr. Cooper's plough is what he claims it to be, I should have no objection to its use, merely because it is a steel plough and therefore the village carpenter will be deprived of a portion of his work. I do not mind the partial deprivation of the carpenter if the plough increases the earning capacity of the farmer. But I have very grave doubts about the claims made by Mr. cooper for the invention. At Sabarmati we have tried almost all improved ploughs manufactured in India and I think even others, but the claims made for each variety have not proved true in the long run. An experienced man has said that the indigenous plough is specially designed for the Indian soil.

It conserves the soil, because it ploughs deep enough for the farmer's crops but never deep enough to do damage. Of course I do not claim to understand agriculture. I am simply giving you the testimony of those who have had considerable experience in these matters. What we have to remember is that all improved implements have to meet the peculiar conditon of India. There is nothing wrong in an engine plough in itself and it may be a great advantage to a man who owns thousands of acres of land, and has a cracked caky soil, which will not yield under the indigenous plough. What, however we want is an implement that would suit owners of small holdings from one acre to three acres."

"ಕೂಪರನು ತನ್ನ ರಂಟೆಯ ವಿಷಯಕ್ಕೆ ಹೇಳುತ್ತಿರುವದು ನಿಜವಿದ್ದರೆ, ರಂಟೆಯು ಕಬ್ಬಿಣದ್ದಿದೆ ಮತ್ತು ಹಳ್ಳಿಯ ಬಡಿಗನ ಕೆಲಸ ಅಷ್ಟು ಕಡಿಮೆಯಾಗುತ್ತದೆ ಎಂಬಿಷ್ಟೇ ಕಾರಣದಿಂದ ನಾನು ಅದಕ್ಕೆ ಆತಂಕವನ್ನೊಡ್ಡಲಾರೆ. ರೈತನ ಉತ್ಪನ್ನವು ಹೆಚ್ಚಾಗುತ್ತಿದ್ದರೆ ಬಡಿಗನ ಉತ್ಪನ್ನವು ಇಷ್ಟು ಕಡಿಮೆಯಾದರೂ ಅಡ್ಡಿ ಇಲ್ಲ. ಆದರೆ ಕೂಪರನು ಈ ತನ್ನ ರಂಟೆಯನ್ನು ಕುರಿತು ಪ್ರತಿಪಾದಿಸುತ್ತಿರುವ ವಿಷಯುಕ್ಕೆ ನನಗೆ ದೊಡ್ಡ ಸಂಶಯವಿದೆ. ಸಾಬರಮತಿಯಲ್ಲಿ ಹಿಂದುಸ್ತಾನ ಮತ್ತು ಅನ್ಯದೇಶಗಳಲ್ಲಿ ತಯಾರಾದ ಬಹುತರ ಎಲ್ಲ ಪ್ರಕಾರದ ಸುಧಾರಿಸಿದ ರಂಟೆಗಳನ್ನು ಉಪಯೋಗಿಸಿ ನೋಡಲಾಯಿತು. ಮತ್ತು ಅವುಗಳ ವಿಷಯಕ್ಕೆ ಹೇಳಿದ ಮಾತು ಕೊನೆಗೆ ನಿಜವಾಗಲಿಲ್ಲ. ದೇಶೀ ರಂಟೆಯ ರಚನೆಯು ಹಿಂದು-ಸ್ತಾನದ ಭೂಮಿಗೆ ಬಹಳ ಉಪಯುಕ್ತವೆಂದು ಒಬ್ಬ ಅನುಭವಿಕ ಮನುಷ್ಯನು ಹೇಳಿದ್ದಾನೆ. ಅದು ಭೂಮಿಯ ರಕ್ಷಣೆ ಮಾಡುತ್ತದೆ. ಯಾಕಂದರೆ ಅದು ರೈತನ ಬೆಳೆಗೆ ಬೇಕಾಗುವಷ್ಟೆ ಆಳವಾಗಿ ಉಳುತ್ತದೆ. ಆದರೆ ಭೂಮಿಗೆ ಹಾನಿ ತಟ್ಟುವಷ್ಟು ಆಳವಾಗಿ ಅದು ಉಳುವದಿಲ್ಲ. ನಿಜವಾಗಿಯೂ ನಾನು ಒಕ್ಕಲತನದ ತಜ್ಞನೆಂದು ಹೇಳಿಕೊಳ್ಳುವದಿಲ್ಲ. ಈ ವಿಷಯದಲ್ಲಿ ಸಾಕಷ್ಟು ಅನುಭವವಿದ್ದವರ ಪ್ರಮಾಣಗಳನ್ನು ಮಾತ್ರ ಕೊಡುತ್ತಿದ್ದೇನೆ. ಸುಧಾರಿಸಿದ ಸಾಧನಗಳು ನಮ್ಮ ಪರಿಸ್ಥಿತಿಗೆ ಅನುಕೂಲವಿರಲಿಕ್ಕೆ ಬೇಕೆಂಬುದನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಎಂಜಿನ್ನಿನ ಸಹಾಯದಿಂದ ನಡೆಯುವ ರಂಟೆಯಲ್ಲಿಯೇ ಸ್ವತಃ ಯಾವ ದೋಷವೂ ಇಲ್ಲ. ಸಾವಿರಾರು ಎಕರೆ ಭೂಮಿ ಇರುವ ಮತ್ತು ಬೀಡುಬಡುವ ಬಿರುಸಾದ ಜಮೀನುಳ್ಳವರಿಗೆ ಇದು ಬಹಳ ಲಾಭದಾಯಕವೆಂದು ಸಿದ್ಧವಾಗಬಹುದು. ಇಂಥ ಭೂಮಿಯನ್ನು ದೇಶೀ ರಂಟೆಯಿಂದ ಚನ್ನಾಗಿ ಹೊಡೆಯುವದಾಗುವದಿಲ್ಲ. ಆದರೆ ಎರಡು ಮೂರು ಎಕರೆ

ಭೂಮಿಯಿರುವ ಒಕ್ಕಲಿಗರಿಗೆ ಅನುಕೂಲವಾಗುವಂಥ ಸಾಧನವು ನಮಗೆ ಬೇಕು."

ಜಾಲರು Greatest good of the greatest number ( ಹೆಚ್ಚಿನ ಹೆಚ್ಚು ಜನರ ಹೆಚ್ಚಿನ ಹೆಚ್ಚು ಕಲ್ಯಾಣ") ಎಂಬ ಸಿದ್ಧಾಂತದ ವಿಷಯಕ್ಕೂ ಸ್ವಲ್ಪ ಉಲ್ಲೇಖ ಮಾಡಿದ್ದರು. ಆ ವಿಷಯಕ್ಕೆ ಬಾಪೂ ಬರೆದರು :

"I do not believe in the doctrine of the greatest good of the greatest number. It means in its nakedness that in order to achieve the supposed good of 51 percent the interest of 49 percent may be, or rather, should be sacrificed. It is a heartless doctrine and has done harm to humanity. The only real, dignified, human doctrine is the greatest good of all, and this can only be achieved by uttermost self-sacrifice."

"'ಹೆಚ್ಚಿನ ಹೆಚ್ಚು ಜನರ ಹೆಚ್ಚಿನ ಹೆಚ್ಚು ಕಲ್ಯಾಣ' ಎಂಬ ಸಿದ್ಧಾಂತದಲ್ಲಿ ನನ್ನ ವಿಶ್ವಾಸವಿಲ್ಲ. ಇದನ್ನು ನಗ್ನ ಸ್ವರೂಪದಲ್ಲಿ ನೋಡಿದರೆ ನಾವು ತಿಳಿದುಕೊಂಡಂಥ ನೂರಕ್ಕೆ ೫೧ ರಷ್ಟು ಜನರ ಹಿತದ ಸಲುವಾಗಿ ೪೯ ಜನರ ಹಿತವನ್ನು ಬಲಿಕೊಡಬೇಕಾಗುವದು. ಅಥವಾ ಬಲಿ ಕೊಡಲಿಕ್ಕೆ ಬೇಕು. ಈ ಸಿದ್ಧಾಂತವು ನಿರ್ದಯವಿದ್ದು ಮಾನವ ಸಮಾಜಕ್ಕೆ ಇದರಿಂದ ಬಹಳ ಹಾನಿಯಾಗಿದೆ. ಎಲ್ಲರ ಹೆಚ್ಚಿನ ಹೆಚ್ಚು ಕಲ್ಯಾಣ ಮಾಡುವದು ಇದೇ ಒಂದು ಸತ್ಯವೂ, ಗೌರವಪೂರ್ಣವೂ ಮನುಷ್ಯತ್ವವುಳ್ಳದ್ದೂ ಆದ ಸಿದ್ಧಾಂತವಿದೆ. ಈ ಸಿದ್ಧಾಂತವು ಮನುಷ್ಯನು ತನ್ನ ಸ್ವಾರ್ಥವನ್ನು ಸಂಪೂರ್ಣವಾಗಿ ಬಿಡಲಿಕ್ಕೆ ಸಿದ್ಧನಾದಾಗಲೇ ಕಾರ್ಯಕಾರಿಯಾಗಬಲ್ಲದು."

ಮಿಸ್ ಪಿಟರಸನ್‌ರಿಗೆ ಬರೆದ ಪತ್ರದಿಂದ :

"'Be careful for nothing' is one of the verses that has ever remained with me and taken possession of me. If God is, why need I care? He is the infallible caretaker. He is a foolish man who fusses although he is well protected."

"'ಯಾವದರ ಬಗ್ಗೆಯೂ ಚಿಂತಿಸಬೇಡ' ಎಂಬ ಈ ಪಂಕ್ತಿಯು ಯಾವಾಗಲೂ ನನ್ನ ನೆನಪಿನಲ್ಲುಳಿದಿದೆ. ಇದನ್ನು ನಾನೆಂದೂ ಮರೆಯಲಾರೆ. ದೇವರಿದ್ದಮೇಲೆ ನಾನೇಕೆ ಚಿಂತಿಸಬೇಕು ? ತಪ್ಪದೇ ನಮ್ಮ ಯೋಗಕ್ಷೇಮವನ್ನು ತೆಗೆದುಕೊಳ್ಳುವವನು ಅಲ್ಲಿ ಕುಳಿತಿದ್ದಾನೆ. ಅವನಿಗೆ ನಮ್ಮ ಬಗ್ಗೆ ಇಷ್ಟು ಚಿಂತೆ ಇರುತ್ತಿದ್ದಾಗ್ಯೂ ಚಿಂತೆ ಮಾಡುವವನು ಮೂರ್ಖನು."

* * *

ಲಾಲಜೀ ನಾರಾಯಣರ ರಕ್ಷಣೆಮಾಡಲಿಕ್ಕೆ ನಿರಾಕರಿಸಿದರು ಮತ್ತು

ಅವರಿಗೆ ಮುಂಬೈಯನ್ನು ಬಿಡುವ ಆಜ್ಞೆ ಸಿಕ್ಕಿತು, ಆದರೆ ಒಬ್ಬ ಮುಸಲ್ಮಾನ ಗುಂಡನಿಗೆ ಅಥವಾ ಗುಂಡರಿಗೆ ಉತ್ತೇಜನ ಕೊಡುವವನಿಗೆ ಈ ಆಜ್ಞೆ ಕೊಡಲಿಲ್ಲ ಎಂಬುದೇ ಮುಂಬೈ ವೃತ್ತಪತ್ರಗಳಲ್ಲಿ ಪ್ರಾಮುಖ್ಯವಾಗಿದೆ. ಹಾಜರಿಯ ಕರಾರು ಮುರಿಯುವ ಕಾಂಗ್ರೆಸ್ಸಿಗರಿಗೆ ಎರಡು ವರ್ಷದ ಶಿಕ್ಷೆ ಮತ್ತು ೧೦೦ ರಿಂದ ೧೦೦೦ ರೂಪಾಯಿಗಳ ವರೆಗೆ ದಂಡವಾಗುತ್ತದೆ. ಆದರೆ ಚೂರಿಯನ್ನು ಬಚ್ಚಿಡುವ ಭಾವೀ ಕೊಲೆಗಡಕನಿಗೆ ೫ ರೂಪಾಯಿ ದಂಡವಾಗುತ್ತದೆ.

* * *

ಆ ದಿವಸ ನಾನು ಬಾಪೂರಿಗೆ ಮೂರ್ತಿಪೂಜೆಯ ವಿಷಯಕ್ಕೆ ಕೇಳುತ್ತಿದ್ದೆ. ತುಕಾರಾಮನ ಒಂದು ಅಭಂಗವನ್ನು ಉಲ್ಲೇಖಿಸಿ ಕೀರ್ತಿಕರನು ತನ್ನ Studies in Vedanta (ವೇದಾಂತದ ಅಧ್ಯಯನ) ಪುಸ್ತಕದಲ್ಲಿ ಹಿಂದೂ ಭಾವನೆಯನ್ನು ಒಳ್ಳೆಯ ರೀತಿಯಲ್ಲಿ ವರ್ಣಿಸಿದ್ದಾನೆ. ಹಿಂದೂ ಮನುಷ್ಯನು ಪ್ರತೀಕದ ಪೂಜೆ ಮಾಡುವದಿಲ್ಲ ಆದರೆ ದೇವರ ಪೂಜೆ ಮಾಡುತ್ತಾನೆ. ಈ ವಿಚಾರವು ಕ್ರಿಶ್ಚಿಯನ್ನರ ಸಂಪರ್ಕದಿಂದಾಗಲಿ ಪಾಶ್ಚಾತ್ಯರ ಸಂಪರ್ಕದಿಂದಾಗಲಿ ಬಂದಿದ್ದಿಲ್ಲ. ಆದರೆ ಇಂಗ್ಲೀಷರು ಬರುವ ಪೂರ್ವದಲ್ಲಿ ತುಕಾರಾಮನು ಸುಂದರ ರೀತಿಯಲ್ಲಿ ಇದನ್ನು ಅಭಂಗದಲ್ಲಿ ಹೆಣೆದಿದ್ದಾನೆ.

**केला मातीचा पशुपति, परी मातीसी काम म्हणती,**
**शिवपूजा शिवासि पावे, माती मातीमाजी समावे,**
**केला पाषाणाचा विष्णु, परि पाषाण नव्हे विष्णु,**
**विष्णुपूजा विष्णुसि अर्पे, पाषाण रहे पाषाणरूपे,**
**केली काशाची जगदंबा, परि कासें नव्हे अम्बा,**
**पूजा अम्बेची अम्बेला घेणे, कांसे रहे कांसेपणे,**
**तैसे पूजिती आम्हा संत, पूजा घेतो भगवंत आम्ही किंकर।**

ಮಣ್ಣಿನ ಶಂಕರನನ್ನೇನೊ ಮಾಡಿದೆವು, ಆದರೆ ಇದರಿಂದ ಮಣ್ಣಿಗೇನು ಬಂತು? ಶಿವನ ಪೂಜೆಯು ಶಿವನಿಗೆ ಸಲ್ಲುತ್ತದೆ ಮತ್ತು ಮಣ್ಣು ಪಾಪ, ಮಣ್ಣಿನಲ್ಲಿ ಕೂಡಿ ಹೋಗುತ್ತದೆ; ಕಲ್ಲಿನ ವಿಷ್ಣು ಮಾಡಿದೆವು, ಆದರೆ ಕಲ್ಲು ವಿಷ್ಣುವಲ್ಲ. ವಿಷ್ಣುವಿನ ಪೂಜೆಯು ವಿಷ್ಣುವಿಗೆ ಅರ್ಪಿತವಾಗುತ್ತದೆ ಮತ್ತು ಕಲ್ಲು ಕಲ್ಲಾಗಿಯೇ ಉಳಿಯುತ್ತದೆ; ಕಂಚಿನ ಜಗದಂಬೆಯನ್ನು ಮಾಡಿದೆವು, ಆದರೆ ಕಂಚು ಮಾತೆಯಲ್ಲ. ಮಾತೆಯ ಪೂಜೆಯನ್ನು ಮಾತೆಯು ಸ್ವೀಕರಿಸುತ್ತಾಳೆ ಮತ್ತು ಕಂಚು ಕಂಚಾಗಿಯೇ ಉಳಿಯುತ್ತದೆ. ಇದೇ ಪ್ರಕಾರ ಸಂತರಾದ ನಮ್ಮನ್ನು ಪೂಜಿಸುತ್ತಾರೆ, ಆದರೆ ಆ ಪೂಜೆಯು ದೇವರಿಗೆ ಮುಟ್ಟುತ್ತದೆ

ಮತ್ತು ನಾವು ಅವನ ಸೇವಕರಾಗಿಯೇ ಉಳಿಯುತ್ತೇವೆ.

* * *

ಇವತ್ತು ಡಾಹ್ಯಾಭಾಯಿ ಭೆಟ್ಟಿಗೆ ಬಂದಿದ್ದರು. ಆದರೆ ಬಾಪೂ ಭೆಟ್ಟಿಗೆ ಹೋಗಲಿಲ್ಲ. ಬಾಪೂ ಹೇಳಿದರು: “ಸರಕಾರದ ಉತ್ತರ ಬರಲಿಕ್ಕೆ ಒಂದು ತಿಂಗಳು ಹಿಡಿಯುವದೆಂದು ತಿಳಿಯಿರಿ. ಅಂದರೆ ನಾನು ಒಂದು ತಿಂಗಳವರೆಗೆ ಭೆಟ್ಟಿ ತೆಗೆದುಕೊಳ್ಳುತ್ತಾ ಇರಬೇಕೊ ಹೇಗೆ? ಇಲ್ಲ. ಇವತ್ತಿನಿಂದಲೇ ನಿಲ್ಲಿಸಲಿಕ್ಕೆ ಬೇಕು.” ವಲ್ಲಭಭಾಯಿ ಮತ್ತು ನಾನು ಆಗ್ರಹ ಮಾಡಿದೆವು. ಆದರೆ ಬಾಪೂ ಅಚಲರಾಗಿಯೇ ಉಳಿದರು. ಆಶ್ಚರ್ಯವೆಂದರೆ ಇದೇ ಸಮಯಕ್ಕೆ ಮಿೂರಾ-ಬಹೆನರು ರಾಜಕೀಯ ಕೆಲಸದಲ್ಲಿ–ಸವಿನಯ ಕಾನೂನ ಭಂಗ ಆಂದೋಲನದಲ್ಲಿ–ಭಾಗ ತೆಗೆದುಕೊಳ್ಳುತ್ತಾರೆ. ಆದುದರಿಂದ ಅವರು ರಾಜಕಾರಣದಿಂದ ಅಲಿಪ್ತರಾದ ಆಶ್ರಮದ ಜನರಲ್ಲಿ ಬರಲಾರರು. ಜೇಲರರು ವಲ್ಲಭಭಾಯಿಯವರನ್ನು ತಿರುಗಿ ಕಳಿಸಲಿಕ್ಕೆ ಬರುವಾಗ ಆ ಪತ್ರವನ್ನು ತೋರಿಸಲಿಕ್ಕೆ ತಂದರು. ಬಾಪೂ ಅಂದರು: “ನಾನು ಹೋಗದಿದ್ದುದು ಜಾಣತನದ್ದಾಯಿತಲ್ಲವೆ? ಹೀಗೆ ದೇವರು ನನ್ನನ್ನು ಆಯುಷ್ಯದಲ್ಲಿ ಅನೇಕ ಸಾರೆ ಪಾರುಮಾಡಿದ್ದಾನೆ.”

ಇವತ್ತು ಬಾಪೂರ ಎಡಗೈ ಮೊಳಕೈ ಮೇಲೆ ಕಟ್ಟಿಗೆಯ ಪಟ್ಟಿಗಳನ್ನು ಕಟ್ಟಲಾಯಿತು. ಪಾಪ! ನಿಮಗೆ ತ್ರಾಸವಾದರೆ ಹೇಳಿರಿ ಎಂದು ಡಾಕ್ಟರನು ಹತ್ತಿಪ್ಪತ್ತು ಸಲ ಅಂದಿರಬಹುದು. ಆದರೆ ಬಾಪೂ ಏತಕ್ಕೆ ಹೇಳುತ್ತಾರೆ?

೫–೬–'೩೨ ಬಾಪೂ ಅಂದರು: “ಇದರಿಂದ ವಿಶ್ರಾಂತಿ ದೊರೆತೀತೆಂದು ಹೇಳಲಿಕ್ಕಾಗದು. ಆದರೆ ಡಾಕ್ಟರರು ಹೇಳುತ್ತಾರೆಂದ ಮೇಲೆ ಪ್ರಯೋಗಮಾಡಿ ನೋಡಬೇಕು.” ಡಾಕ್ಟರರು ಹರಟೆಯ ಮಲ್ಲರಿದ್ದಾರೆ. ದೇಶದ ಭಿಕ್ಷುಕರ ಮಾತು ನಡೆಯಿತು. ಡಾಕ್ಟರರು ಹೇಳಿದರು: “ಸಶಕ್ತ ಜನರು ಭಿಕ್ಷೆ ಬೇಡುವದನ್ನು ನಿಲ್ಲಿಸಬೇಕು ಎಂಬುದನ್ನು ನೀವು ಸಹ ಒಪ್ಪುತ್ತೀರಲ್ಲವೆ ಗಾಂಧೀಜಿ?” ಬಾಪೂ: “ಅವಶ್ಯವಾಗಿ.” ಡಾಕ್ಟರರು: “ಕಾಯದೆಯನ್ನು ಸಹ ಮಾಡುವಿರಾ?” ಬಾಪೂ: “ಕಾಯದೆಯನ್ನು ಅವಶ್ಯ ಮಾಡುವೆನು. ಆದರೆ ಭಾಯಿ, ನನ್ನಂಥವನಿಗೆ ಭಿಕ್ಷೆ ಬೇಡುವ ಅಧಿಕಾರ ಇಟ್ಟುಕೊಳ್ಳಲಾಗುವದು ತಿಳಿಯಿತೆ?” ಡಾಕ್ಟರ: “ನಾವು ದಿನಾಲು ೧೬ ಲಕ್ಷ ರೂಪಾಯಿಗಳನ್ನು ಈ ಭಿಕ್ಷುಕರ ಸಲುವಾಗಿ ಖರ್ಚು ಮಾಡುತ್ತೇವೆ— ಅಂದರೆ ದಾನ ಕೊಡುತ್ತೇವೆ. ಇದರ ಬೇರೆ ಉಪಯೋಗವಾಗುವದು ಸಾಧ್ಯವಿಲ್ಲವೆ?” ವಲ್ಲಭಭಾಯಿ: “ಹೌದು, ಆದರೆ ಇದಕ್ಕಿಂತಲೂ ಹೆಚ್ಚು ದರೋಡೆಖೋರರ ಸಲುವಾಗಿ ಖರ್ಚು ಮಾಡುತ್ತೇವೆ.” ಡಾಕ್ಟರ: “ನನಗೆ ತಿಳಿಯಲಿಲ್ಲ.” ವಲ್ಲಭಭಾಯಿ: “ಏನಂದರೆ? ರಾಯರೆ, ವಿಲಾಯತಿಯಿಂದ

ಇವರೆಲ್ಲರೂ ಲೂಟಿಗಾರರು ಬಂದಿರುವರಲ್ಲವೆ! ಇವರು ದರೋಡೆಖೋರರಗಿಂತ ಉತ್ತಮರೆಂದು ಹೇಳಬಹುದೆ?"

* * *

ಮತಾಧಿಕಾರ ಕಮಿಟಿಯ ವರದಿಯ ಮೇಲೆ ಮೂರು ನಾಲ್ಕು ವೃತ್ತಪತ್ರಗಳಲ್ಲಿ ಬಂದ ವಿಮರ್ಶೆಯನ್ನು ಓದಲಾಯಿತು. ಆದರೆ ಅಸ್ಪೃಶ್ಯರ ಪ್ರತ್ಯೇಕ ಮತಾಧಿಕಾರದ ಮೇಲೆ ನಟರಾಜನ್ನರು ಮಾಡಿದಷ್ಟು ಜೋರದಾರ ವಿಮರ್ಶೆಯನ್ನು ಮತ್ತೆ ಬೇರೆ ಯಾರೂ ಮಾಡಿಲ್ಲ. ನಿರ್ವಾಚನ ಮಂಡಳದ ಭೀಕರತೆಯನ್ನು ಸಾಯ್‌ಮನ್ ಕಮಿಶನ್ ಸಹ ನೋಡಿದೆ ಎಂದು ಹೇಳಿ ಉದ್ಧವಾದ ಅವತರಣಿಕೆಯನ್ನು ಕೊಟ್ಟು ಕಠೋರ ವಿರೋಧ ಮಾಡುತ್ತಾರೆ.

* * *

ಜಯಕರರು ಕಳಿಸಿದ ಕೀರ್ತಿಕರರ Studies in Vedanta (ವೇದಾಂತದ ಆಧ್ಯಯನ) ಬಾಪೂ ಓದತೊಡಗಿದ್ದಾರೆ. तत्त्वमसि ಈ ಪ್ರಕರಣದ ಪ್ರಾರಂಭದಲ್ಲಿ ಕೊಟ್ಟ ಹೇಗಲ್‌ರ ವಾಕ್ಯವನ್ನು ತೋರಿಸಿದರು :

"It is man's highest dignity that he should know himself to be a nullity."

"ಮನುಷ್ಯನು ಸ್ವತಃ ಶೂನ್ಯನಿದ್ದಾನೆ ಎಂಬುದನ್ನು ತಿಳಿದುಕೊಳ್ಳುವದೇ ಅವನ ಎಲ್ಲಕ್ಕೂ ದೊಡ್ಡ ಗೌರವವು."

ನಾನು ಹೇಳಿದೆ: "ಶೂನ್ಯವಾಗಿಬಿಡಬೇಕೆಂದು ನೀವು ಹೇಳುತ್ತಿರುವ ಮಾತೇ ಇದು ಆಗಿದೆ." ಬಾಪೂರ ಮೌನವಿದ್ದುದರಿಂದ ನಕ್ಕರು. ಅವರು ಈ ವಾಕ್ಯವನ್ನು ತೋರಿಸಿದ್ದು ಇದಕ್ಕಾಗಿಯೇ ಇತ್ತು.

* * *

ರೋಲಾನು ಬರೆದ ವಿವೇಕಾನಂದರ ಜೀವನ ಚರಿತ್ರೆ ಓದುವದರಿಂದ ಅನೇಕ ಮಾತುಗಳು ಗೊತ್ತಾಗುತ್ತವೆ. ಅಮೇರಿಕೆಗೆ ಹೋಗುವ ಪೂರ್ವದಲ್ಲಿಯ ಅವರ ಭಾರತ ಭ್ರಮಣವು ಎಲ್ಲರಿಗೂ ಗೊತ್ತಿದೆ. ಆದರೆ ಪ್ರವಾಸದ ಅಂತ್ಯದಲ್ಲಿ ಅವರು ದುಃಖಪೀಡಿತ ದರಿದ್ರ ಭಾರತವನ್ನು ತಮ್ಮ ಕಣ್ಣಾರೆ ನೋಡಿದರು. ಅವರಿಗೆ 'ದರಿದ್ರನಾರಾಯಣನ' ದರ್ಶನವಾಯಿತು ಮತ್ತು ಅವನ ಸೇವೆಗಾಗಿ ತಮ್ಮನ್ನು ಅರ್ಪಣ ಮಾಡಿದರು.

"It was the misery under his eyes, the misery of India that filled his mind to the exclusion of every other thought. It consumed him during sleepless nights. At Cape Commorin it caught and held him in its jaws. He dedicated his life to the unhappy masses. . . . He told them with pathetic passion of the

imperious call of suffering India that forced him to go. It is now my firm conviction that it is futile to preach religion amongst them, without first trying to remove their poverty and their sufferings. It is for these reasons—to find more means for the salvation of the poor India, that I am now going to America."

" ತಮ್ಮ ಕಣ್ಣಾರೆ ನೋಡಿದ ಭಾರತಮಾತೆಯ ಕಂಗಾಲತನದ ವಿಚಾರವು ಉಳಿದೆಲ್ಲ ವಿಚಾರಗಳನ್ನು ಹೊಡೆದೋಡಿಸುವಷ್ಟು ಅವರ ತಲೆಯಲ್ಲಿ ತುಂಬಿತು. ಈ ವಿಚಾರವು ಅವರನ್ನು ತಿನ್ನತೊಡಗಿತು ಮತ್ತು ಅವರ ನಿದ್ರಾಭಂಗ ಮಾಡಿತು. ಕನ್ಯಾಕುಮಾರಿಯಲ್ಲಿಯಂತೂ ಈ ಸಂಗತಿಯು ಅವರನ್ನು ಚನ್ನಾಗಿ ಆವರಿಸಿತು. ಅವರು ತಮ್ಮ ಜೀವನವನ್ನು ದುಃಖಿತ ಜನರಿಗಾಗಿ ಅರ್ಪಣ ಮಾಡಿದರು. ಪೀಡಿತ ಭಾರತದ ತಡೆಯಲಾರದ ಕರೆಯು ತಮ್ಮನ್ನು ಹೊರಗೆ ಹೋಗಲಿಕ್ಕೆ ಒತ್ತಾಯ ಪಡಿಸಿದೆ ಎಂದು ಅವರು ಜನರಿಗೆ ಆರ್ದ್ರ ಹೃದಯದಿಂದ ಹೇಳಿದರು. ಅವರು ಅಂದರು: ' ಈ ಹಸಿದ ಜನರೆದುರು ಧರ್ಮದ ಮಾತಾಡುವದು ವ್ಯರ್ಥವೆಂದು ನನ್ನ ದೃಢವಾದ ನಂಬಿಗೆಯಾಗಿದೆ. ಇವರ ದುಃಖವನ್ನೂ ಬಡತನವನ್ನೂ ಹಿಂಗಿಸುವ ಪ್ರಯತ್ನ ಮೊದಲು ಮಾಡಬೇಕು. ನಾನು ಇದಕ್ಕಾಗಿ, ಬಡ ಭಾರತದ ಉದ್ಧಾರಕ್ಕಾಗಿ, ಹೆಚ್ಚು ಸಾಧನಗಳನ್ನು ದೊರಕಿಸುವದಕ್ಕೆ ಅಮೇರಿಕೆಗೆ ಹೊರಟಿದ್ದೇನೆ.' "

ಈ ಮಾತಿನ ಜ್ಞಾನವು ನನಗೆ ಮೊದಲನೆ ಸಾರೆ ಆಗತೊಡಗಿದೆ. ವಿವೇಕಾನಂದರು ಧರ್ಮಪ್ರಚಾರದ ಸಲುವಾಗಿ, ವೇದಾಂತದ ಸಿಂಹಗರ್ಜನೆ ಮಾಡುವದಕ್ಕಾಗಿ ಅಲ್ಲಿ ಹೋಗಿದ್ದರೆಂದು ಇದುವರೆಗೆ ನನ್ನ ತಿಳಿವಳಿಕೆ ಇತ್ತು. ಹಿಂದುಸ್ತಾನದಲ್ಲಿ ಧರ್ಮಪ್ರಚಾರಕ್ಕೆ ಆಸ್ಪದವಿಲ್ಲ, ಆದುದರಿಂದ ಅಮೇರಿಕೆಗೆ ಹೋಗಿ ಧರ್ಮಪ್ರಚಾರ ಮಾಡಬೇಕು ಮತ್ತು ಅಲ್ಲಿಂದ ಸಂಪತ್ತನ್ನು ತಂದು ಬಡತನವನ್ನು ಹಿಂಗಿಸಬೇಕು ಎಂದು ಅನ್ನುವದು ವಿಚಿತ್ರ ಮಾತೆಂದೇ ಹೇಳಬಹುದು! ಇದು ಕೈಲಾಗದ ಮಾತೆಂದು ಅನಿಸುತ್ತದೆ. ಆದರೆ ಪುಸ್ತಕದಲ್ಲಿ ಎರಡು ಮೂರು ಸ್ಥಳಗಳಲ್ಲಿ ಅವರ ವಿಚಾರವು ಸ್ವಲ್ಪ ಇದೇ ಪ್ರಕಾರದ್ದಿತ್ತೆಂದು ಅನಿಸುತ್ತದೆ. ಮತ್ತು ಈ ಪುಸ್ತಕದ ಇಲ್ಲಿಯ ಸಂಪಾದಕರು ಈ ಮಾತಿನ ವಿಷಯಕ್ಕೆ ಯಾವ ಟಿಪ್ಪಣಿಯನ್ನೂ ಬರೆದಿಲ್ಲ. ಇಂಗ್ಲಂಡಕ್ಕೆ ಹೋಗಿ ತಿರುಗಿ ಬಂದಮೇಲೆ ಸಹ ೩೦ ಕೋಟಿ ರೂಪಾಯಿಗಳನ್ನು ತರಬೇಕಾಗಿತ್ತು ಆದರೆ ಸಿಗಲಿಲ್ಲ ಎಂದು ಹೇಳುತ್ತಿದ್ದರು.

"In that respect his journey had failed. The work had to be taken up again on a new basis. India was to be regenerated by India. Health was to come from within."

" ಈ ವಿಷಯದಲ್ಲಿ ಅವರ ಪ್ರವಾಸವು ನಿಷ್ಫಲವಾಯಿತು. ಆ ಕೆಲಸವನ್ನು ಹೊಸ ಪದ್ಧತಿಯಿಂದ ಮತ್ತೆ ಪ್ರಾರಂಭ ಮಾಡಬೇಕಿತ್ತು. ಹಿಂದುಸ್ತಾನದ ಉದ್ಧಾರ

ವನ್ನು ಹಿಂದುಸ್ತಾನವೇ ಮಾಡಬೇಕಾಗಿತ್ತು. ಆರೋಗ್ಯಪ್ರಾಪ್ತಿಯು ಒಳಗಿಂದಲೇ ಆಗಬೇಕಾಗಿತ್ತು."

ಇವು ರೋಲಾನ ಶಬ್ದಗಳು. ವಿವೇಕಾನಂದರಂಥ ಪ್ರೌಢ ಪುರುಷರಿಗೆ ಇಷ್ಟೊಂದು ವಿಚಾರ ಹೊಳೆಯದಿದ್ದುದು ಅಶ್ಚರ್ಯದ ಸಂಗತಿ. ಮತ್ತು ರೋಲಾರಂಥ ಪ್ರತಿಭಾಶಾಲಿ ವಿಚಾರಕನು ಈ ಮಾತನ್ನು ಐತಿಹಾಸಿಕ ಸತ್ಯವೆಂದು ಬರೆದು ಸಂತುಷ್ಟನಾಗದೆ ಅದರ ಸ್ಪಷ್ಟೀಕರಣ ಕೊಡುತ್ತಾನೆ.

"And so in Vivekanand's eyes the task was a double one: to take to India the money and the goods acquired by western civilization and to take to the west the spiritual treasures of India. A loyal exchange. A fraternal and mutual help."

"ಈ ಪ್ರಕಾರ ವಿವೇಕಾನಂದರ ದೃಷ್ಟಿಯಿಂದ ಈ ಕೆಲಸವು ಎರಡು ನಿಟ್ಟಿನದಾಗಿತ್ತು : ಪಾಶ್ಚಾತ್ಯ ಸಂಸ್ಕೃತಿಯು ಕೂಡಿಹಾಕಿದ ದ್ರವ್ಯ ಮತ್ತು ಸಂಪತ್ತಿಯಲ್ಲಿ ಕೆಲವೊಂದನ್ನು ಹಿಂದುಸ್ತಾನಕ್ಕೆ ತರುವದು ಮತ್ತು ಹಿಂದುಸ್ತಾನದ ಆಧ್ಯಾತ್ಮಿಕ ಭಂಡಾರದೊಳಗಿಂದ ಕೆಲವೊಂದನ್ನು ಪಶ್ಚಿಮಕ್ಕೆ ಕಳಿಸುವದು. ಬಹಳ ಪ್ರಾಮಾಣಿಕ ವಿನಿಮಯವು. ಬಂಧುಭಾವ ಮತ್ತು ಪರಸ್ಪರ ಸಹಾಯದಿಂದ ಕೂಡಿದ್ದು."

ಈ ಪ್ರಕಾರ ಧರ್ಮದ ವ್ಯಾಪಾರವು ನಡೆಯುತ್ತಿರಬಹುದೆ? ಈ ಅಂಶಗಳ ಕಡೆಗೆ ನಾನು ಬಾಪೂರ ಲಕ್ಷ್ಯ ಸೆಳೆದಾಗ ಬಾಪೂ ಹೇಳಿದರು: "ಈ ವಿಷಯದಲ್ಲಿ ವಿವೇಕಾನಂದರು ವಿವೇಕವನ್ನು ಮರೆತಿದ್ದರು ಮತ್ತು ರೋಲಾರು ಸಹ ವಿವೇಕವನ್ನು ಮರೆತಿದ್ದಾರೆ."

ಲಾರ್ಡ ಆಯರ್ವಿನ್ನರ 'ಟಾರೆಂಟೊ' ದ ಭಾಷಣವು ಕೊನೆಗೆ 'ಲೀಡರ' ದಲ್ಲಿ ಸಂಪೂರ್ಣ ಬಂತು. ಪೂರ್ಣ ಓದಲಿಕ್ಕೆ ಮುಕ್ಕಾಲು ತಾಸು ಹಿಡಿಯಿತು. ಬಾಪೂ ಹೇಳಿದರು: "ಇವರು ಯಾರಿಗೂ ದುಃಖವಾಗುವಂಥ ಭಾಷಣ
೬-೬-'೩೨ ಮಾಡಿಲ್ಲ. ಆದರೆ ಈಗ ಮಾಡುವದೇನು? ಬ್ರಿಟಿಶ ರಾಜ್ಯವು ಈ ದೇಶವನ್ನು ದರಿದ್ರ ಮಾಡಿಬಿಟ್ಟಿದೆ ಎಂಬ ಮಾತು ಒಬ್ಬ ಒಳ್ಳೆಯ ಇಂಗ್ಲೀಷ ಮನುಷ್ಯನಿಗೂ ಅನಿಸಲೊಲ್ಲದು. ಅವರು ಅಶೋಕನ ಶಬ್ದಗಳನ್ನು ಉಧೃತಮಾಡಿ ಭಾವೀ ಪೀಳಿಗೆಯು ಅಶೋಕನಂತೆ ಬ್ರಿಟಿಶರನ್ನೂ ಕೊಂಡಾಡುವದು ಎಂದು ಆಶಿಸುತ್ತಾರೆ; ಎಲ್ಲಿಯ ಅಶೋಕ ಎಲ್ಲಿಯ ಬ್ರಿಟಿಶ ರಾಜ್ಯ! ಎಲ್ಲಿಯ ಕೃಷ್ಣ ಎಲ್ಲಿಯ ಕಂಸ!"

ಭಾಷಣವು ಬಹಳ ಪರಿಶ್ರಮಪಟ್ಟು ತಯಾರಿಸಿದ್ದೂ ವಿದ್ವತ್ತಪೂರ್ಣ-

ವಾದದ್ದೂ ಅನಿಸಿತು. ಆದರೆ ಬಹಳ ಆಳವಾದದ್ದೂ ಮತ್ತು ಗಂಡಾಂತರದ್ದೂ ಅನಿಸಿತು. ಕಾಂಗ್ರೆಸ್ಸು ಅನೇಕ ಪಕ್ಷಗಳಲ್ಲಿ ಒಂದು ಪಕ್ಷವಾಗಿದೆ ಎಂಬ ಮಾತಿನ ಜನ್ಮದಾತನು ಅಯರ್ವಿನ್ನನೇ ಆಗಿದ್ದಾನೆಂದು ನಾನು ತಿಳಿಯುತ್ತೇನೆ ಮತ್ತು ಇದೇ ಮಾತನ್ನು ಇವನು ಈ ಲೇಖದಲ್ಲಿ ಪ್ರಕಟಮಾಡಿದ್ದಾನೆ. ಕಾಂಗ್ರೆಸ್ಸು ಅಲ್ಪ ಸಂಖ್ಯಾಕರ ಅನಿವಾರ್ಯ ಹಕ್ಕುಗಳನ್ನು ಒಪ್ಪಲಿಲ್ಲ! ಗಾಂಧಿ ಒಬ್ಬ ಮಹಾನ್ ಮುಂದಾಳು ಆದರೆ ಹಿಂದುಗಳ ಮುಂದಾಳು! ಹಿಂದುಗಳ ಕಡೆಯಿಂದ ಇವರು ಬೇಕಾದಂಥ ತ್ಯಾಗ ಮಾಡಿಸಬಲ್ಲರು, ಆದರೆ ಹಿಂದುಗಳನ್ನು ಬಿಟ್ಟು ಉಳಿದವರು ಅವರನ್ನು ಮನ್ನಿಸುವದಿಲ್ಲ! ಮುಸಲ್ಮಾನರು ದೇಶದ ಹಿಂದೂ ಧರ್ಮದಲ್ಲಿ ಸಮಾವೇಶವಾದಂಥ ಪರದೇಶೀಯರಾಗಿದ್ದಾರೆ. ಈ ಧರ್ಮದ ಜೀವನಶಕ್ತಿಯು ಇಂಥದಿದೆ, ಮುಂತಾಗಿ ಮುಂತಾಗಿ. ಮತ್ತು ಶಾಂತಿ, ವ್ಯವಸ್ಥೆ ಸ್ಥಾಪಿಸುವ ಕೆಲಸವು ಬ್ರಿಟಿಶರ ತಲೆಯ ಮೇಲೆ ಬಂದು ಬಿದ್ದಿದೆ!

ಇಂದಿನ 'ಟಾಯಿಮ್ಸ್' ದಲ್ಲಿ ಮುಂಬೈಯಲ್ಲಿ ದಂಗೆ ಇನ್ನೂ ವರೆಗೆ ನಡೆದಿದೆ ಎಂಬ ಸುದ್ದಿ ಬಂದಿದೆ. ದೀಕ್ಷಿತನನ್ನು ಹಿಡಿಯುವದು ಈ ಜನರು ಶೂರತನವೆಂದು ತಿಳಿಯುತ್ತಾರೆ. ಆದರೆ ಈ ದಂಗೆ ಯಾರು ಮಾಡಿಸುತ್ತಾರೆಂಬುದನ್ನು ಹುಡುಕಿ ತೆಗೆಯುವ ಅವಶ್ಯಕತೆ ಅನಿಸುವದಿಲ್ಲ. ಯಾಕಂದರೆ ಇದನ್ನು ಯಾರು ಮಾಡಿಸುತ್ತಾರೆಂಬುದು ಈ ಜನರಿಗೆ ಗೊತ್ತಿದೆ.

೭-೬-'೩೨

ಸರ್ ಹೆನ್ರಿ ಲಾರೆನ್ಸ ಮತ್ತು ಹಾಟಸನ್‌ರು 'ಮುಂಬೈ ಭೋಜನ' ಕಾಲಕ್ಕೆ ಮಾಡಿದ ಭಾಷಣಗಳು ಬಂದಿವೆ. ಲಾರೆನ್ಸರು ಕಾನಡಾದಲ್ಲಿ ಹೇಗೆ ವಿಷ ಪಸರಿಸಿದ್ದರೆಂಬುದು ಈ ಭಾಷಣದಿಂದ ಗೊತ್ತಾಗುತ್ತದೆ.

"He was prepared to hand Mr. Gandhi the halo of a saint for his conduct at that time; but he would ask them to judge whether if a man was saint at one time he was necessarily a saint for all time. That reputation of sanctity had been of wonderful values to him in his subsequent manoeuvres."

"ಆ ಕಾಲದ ಗಾಂಧೀಜಿಯ ವರ್ತನೆಯ ಮೇಲಿಂದ ಅವರಿಗೆ ನಾನು ಸಾಧು ಪದವಿಯನ್ನು ಕೊಡಲು ಸಿದ್ಧನಿದ್ದೆನು; ಆದರೆ ಒಬ್ಬರು ಒಂದು ಕಾಲಕ್ಕೆ ಸಾಧುವಾಗಿದ್ದವರು ನಿರಂತರ ಸಾಧುವಾಗಿಯೇ ಉಳಿಯುವರೊ ಹೇಗೆ ಎಂಬುದರ ನಿರ್ಣಯಮಾಡುವದನ್ನು ನಿಮ್ಮ ಮೇಲೆಯೇ ಬಿಡುತ್ತೇನೆ. ಇವರ ಸಾಧುತನದ ಪ್ರತಿಷ್ಠೆಯು ಇವರ ಹಿಂದುಗಡೆಯ ಯುಕ್ತಿಗಳ ಸಲುವಾಗಿ ಬಹಳ

ಆಶ್ಚರ್ಯಕಾರಕ ರೀತಿಯಲ್ಲಿ ಉಪಯೋಗವಾಗಿದೆ."

ಈ ಮನುಷ್ಯನು ಮಾತಾಡುವದರಲ್ಲಿ ಮೃದುವಾಗಿರುವಷ್ಟೇ ಬಗಲಲ್ಲಿ ಚೂರಿ-ಯನ್ನು ಇಟ್ಟುಕೊಂಡು ತಿರುಗಾಡುವವನಂತೆ ಕಾಣುತ್ತಾನೆ. ಬಾಪೂ ಹೇಳಿದರು: "ನನ್ನನ್ನು ಜೇಲಿನಲ್ಲಿ ಬಂಧಿಸಿಟ್ಟು ನನ್ನ ವಿಷಯಕ್ಕೆ ಮಾತಾಡುವದರಲ್ಲಿ ಈ ಜನರಿಗೆ ಏನು ಆನಂದವಾಗುತ್ತಿರಬಹುದು ? 'ಸತ್ತವರ ಬಗ್ಗೆ ಒಳ್ಳೆಯದನ್ನೆ ಆಡಬೇಕು' ಎಂಬ ನಾಣ್ಣುಡಿ ಇರಲಿಕ್ಕೂ ಹೀಗೇಕೆ ?" ಇದಕ್ಕಿಂತ ಹಾಟ್ಸನ್ನನ ಭಾಷಣವು ಉತ್ತಮವೆಂದು ಹೇಳಬಹುದು. ಕಾಂಗ್ರೆಸ್ಸಿನ ಪ್ರಭಾವದ ಬೆಲೆಯನ್ನು ಇವನು ಸರಿಯಾಗಿ ಕಟ್ಟಿದ್ದಾನೆ. ವ್ಯಾಪಾರಸ್ಥರಲ್ಲಿ ವೈರಭಾವವಿಲ್ಲದಾಗ್ಯೂ ದಾನಧರ್ಮಕ್ಕೆ ರೊಕ್ಕ ಕೊಡುವ ಜನರು ರಾಜಕಾರಣದಲ್ಲಿ ರೊಕ್ಕ ಸೂರೆ ಮಾಡುತ್ತಿದ್ದಾರೆ. ಹೊರಬೀಳದಂಥ ಸ್ತ್ರೀಯರು ಬೇಕಾದಷ್ಟು ತ್ಯಾಗಮಾಡಲು ಹೊರಬಿದ್ದಿದ್ದಾರೆ. ಇದು ಯಾವದೊಂದು ಮಾರ್ಗವನ್ನು ಹುಡುಕಲಿಕ್ಕೆ ಬೇಕೆಂಬುದನ್ನು ಸೂಚಿಸುತ್ತದೆ. ಸುಳ್ಳು ರಕ್ಷಣೆಯ ಮಾತನ್ನು ಬಿಟ್ಟು ವ್ಯಾಪಾರಿಗಳಿಗೆ ಆರ್ಥಿಕ ಸ್ವಾತಂತ್ರ್ಯದ ಆಶ್ವಾಸನವನ್ನು ಕೊಡತಕ್ಕದ್ದು.

ಎಷ್ಟು ಜೋರಿನಿಂದ ಪ್ರಚಾರ ನಡೆದಿದೆಯೆಂಬುದನ್ನು ನೋಡಬೇಕಾದರೆ ಬಾಪೂರಿಗೆ ಇದುವರೆಗೆ ಸಿಗದ ಸತ್ಯಮೂರ್ತಿಯ ಪತ್ರ ನೋಡಿರಿ. 'ಟಾಯಿಮ್ಸದಲ್ಲಿ' ಪ್ರಸಿದ್ಧವಾಗಿದೆ. ಕಾಂಗ್ರೆಸ್ಸಿಗೆ ಪ್ರಾಂತೀಯ ಸ್ವರಾಜ್ಯದಿಂದ ಸಂತೋಷವಾಗುವ-ದೆಂದು ತೋರಿಸುವದಕ್ಕಾಗಿ ಇದೆ.

ಬಾಪೂ ನಟರಾಜನ್ನರಿಗೆ ಬರೆದ ಪತ್ರಕ್ಕೆ ಉತ್ತರವೆಂದು ನಟರಾಜನ್ನರು ಬರೆಯುತ್ತಾರೆ:

"I fully realize the force of your reasoning on the need for clear cut condemnation of what we feel to be grave evils, even though one's judgment may not be perfect or final. In fact I had said as much in my letter. But I sometimes feel that I, the reformer, was hasty in the judgment of good men and had hurt their feelings, and my present temper is perhaps due to the desire to avoid that mistake."

"ನಾವು ಗಂಭೀರವೆಂದು ತಿಳಿಯುವ ದುರ್ನಡತೆಗಳನ್ನು ಸ್ಪಷ್ಟವಾಗಿ ಖಂಡಿಸಬೇಕೆಂಬ ನಿಮ್ಮ ಈ ವಾದಸರಣಿಯ ಕಸುವು ನನಗೆ ಪೂರ್ಣ ಅರ್ಥವಾಗುತ್ತದೆ. ನಮ್ಮ ನಿರ್ಣಯವು ಸಂಪೂರ್ಣ ಅಥವಾ ಕೊನೆಯದಾಗಿರಲಿಕ್ಕಿಲ್ಲ. ಆ ಮಾತು ಬೇರೆ. ಇಷ್ಟನ್ನು ನಾನು ನನ್ನ ಪತ್ರದಲ್ಲಿ ಹೇಳಿಯೇ ಇದ್ದೆನು. ಆದರೆ ಒಬ್ಬ ಸುಧಾರಕನೆಂಬ ದೃಷ್ಟಿಯಿಂದ ನಾನು ಅನೇಕ ಉತ್ತಮ ಜನರ ವಿಷಯಕ್ಕೆ ಅವಸರ

ದಿಂದ ಅಭಿಪ್ರಾಯವನ್ನು ಮಾಡಿಕೊಂಡು ಅವರ ಮನಸ್ಸು ನೋಯಿಸಿದ್ದೇನೆ. ಆದುದರಿಂದ ಈ ತಪ್ಪಿನಿಂದ ಪಾರಾಗುವ ಇಚ್ಛೆಯಿಂದ ಇಂದಿನ ನನ್ನ ಸ್ವಭಾವವು ಮಾರ್ಪಾಟಾದಂತೆ ತೋರುತ್ತದೆ."

ಪ್ರೋಲಾಕರ ಪತ್ರ ಬಂತು. ಆದರಲ್ಲಿ ಲಂಡನ್ನದ ವೃತ್ತಪತ್ರಗಳು ಹೇಳುವದನ್ನು ಬರೆದಿದ್ದಾರೆ."

೮-೬-'೩೨ "You have taken up the sewing machine having been disillusioned with the slowness of the Charkha. I do not believe it for a moment. But it needs a prompt denial."

"ರಾಟೆಯ ಮಂದಗತಿಯ ಮೂಲಕ ನಿಮ್ಮ ಭ್ರಮ ನಿರಸನವಾಗಿದೆ. ಈಗ ನೀವು ಸಿಂಗರದ ಹೊಲಿಯುವ ಯಂತ್ರದ ಪುರಸ್ಕಾರ ಮಾಡತೊಡಗಿದ್ದೀರಿ. ನನಗಂತೂ ಈ ಮಾತಿನಲ್ಲಿ ಸ್ವಲ್ಪೂ ವಿಶ್ವಾಸವಿಲ್ಲ, ಆದರೆ ನೀವು ಕೂಡಲೇ ಈ ಮಾತಿನ ಖಂಡನೆಯನ್ನು ಮಾಡಬೇಕು."

ಬಾಪೂ ಪ್ರೋಲಕರಿಗೆ ಉದ್ದ ಮತ್ತು ವಿನೋದಪರ ಪತ್ರ ಬರೆದರು. ಆದರಲ್ಲಿ ಪತ್ರವನ್ನು ಎರಡನೇಸಾರೆ ಓದದಿದ್ದುದರ ಪರಿಣಾಮವನ್ನು ವರ್ಣಿಸಿದರು. ಒಂದು ಸಾರೆ ಒಂದು ಪತ್ರದಲ್ಲಿ No ( ಇಲ್ಲ ) ಎಂಬುದನ್ನು ಬರೆಯುವದು ಉಳಿದಿತ್ತು. ಅದರ ಪರಿಣಾಮ ಹೇಗಾಯಿತೆಂಬದನ್ನು ತೋರಿಸಿದರು. ಬಾ ಅವರ ವಿಷಯವಾಗಿ ಬರೆದರು :

"She has aged considerably—in some respects perhaps more than I have. Spiritually she has made wonderful progress."

"ಅವಳು ಮುದುಕೆಯಾಗಿದ್ದಾಳೆ— ಎಷ್ಟೋ ವಿಷಯಗಳಲ್ಲಿ ನನಗಿಂತಲೂ ಹೆಚ್ಚು. ಆಧ್ಯಾತ್ಮಿಕ ದೃಷ್ಟಿಯಿಂದ ಅವಳು ಆಶ್ಚರ್ಯಕಾರಕ ಪ್ರಗತಿ ಮಾಡಿದ್ದಾಳೆ."

ಮತ್ತೆ ರಾಟೆಯ ಬಗ್ಗೆ ಬರೆದರು :

"It will take me many incarnations to become disillusioned with the slowness of the Charkha. The slowness of the Charkha is perhaps its most appealing part for me. But it has so many attractions for me that I can never get tired of it. It has a perenial interest for me. Its implications are growing on me and I make discoveries of its beauties almost from day to day. I am not using a sewing machine in its place or at all. I know how the mistake crept into the papers. My right elbow, having been used for turning the wheel almost without a break for over ten

years, began to give pain and the doctors here came to the conclusion that the pain was of the same type that tennis players often have after continuous use of the racquet. They therefore advised complete rest for the elbow. That might have meant cessation of spinning for some time, but for Prabhudas's invention. You know Prabhudas—Chhaganlal's son. His invention consists in turning the wheel with a pedal and thus freeing the right hand also for drawing the thread and practically doubling the output of yarn. I forestalled the doctors by having this wheel brought to me, and before the peremptory order to stop all work with the right elbow came, I was master of the pedal Charkha called 'Magan Charkha' after the late Maganlal. A stupid reporter who knew nothing about the invention, when he heard that I was moving the wheel with the pedal came to the conclusion that I was working at the sewing machine and since there are pressmen good enough to imagine many things of me and impute all sorts of things to me, they improved upon the false report by deducing dis-illusionment about the Charkha from it. Now you have the whole story."

"ರಾಟೆಯು ಮಂದಗತಿಯು ಮೂಲಕ ನನ್ನ ಭ್ರಮನಿರಸನವಾಗಬೇಕಾದರೆ ನಾನು ಅನೇಕ ಜನ್ಮಗಳನ್ನು ತೆಗೆದುಕೊಳ್ಳಬೇಕಾಗುವದು. ರಾಟೆಯ ಮಂದಗತಿಯೇ ನನ್ನನ್ನು ಆದರ ಕಡೆಗೆ ಎಳೆಯುವ ವಸ್ತುವಾಗಿದೆ. ಇಷ್ಟೇ ಅಲ್ಲ ಆದರಲ್ಲಿ ಇನ್ನೂ ಎಷ್ಟೋ ಆಕರ್ಷಕ ಸಂಗತಿಗಳಿರುವದರಿಂದ ನನಗೆ ಅದರಲ್ಲಿ ಎಂದೂ ಅರುಚಿ ಉಂಟಾಗಲಾರದು. ಆದರಲ್ಲಿಯು ಹೊಸ ಹೊಸ ರಹಸ್ಯಗಳು ನನಗೆ ದಿನೇ ದಿನೇ ಗೊತ್ತಾಗತೊಡಗಿವೆ ಮತ್ತು ಆದರ ಗಹನ ಅರ್ಥಗಳು ಹೆಚ್ಚೆಚ್ಚು ತಿಳಿಯತೊಡಗಿವೆ. ಆದರ ಬದಲು ನಾನು ಹೊಲಿಗೆಯ ಯಂತ್ರವನ್ನು ಉಪಯೋಗಿಸುತ್ತಿರುವದೇ ಇಲ್ಲ. ಆದರೆ ವೃತ್ತಪತ್ರದಲ್ಲಿ ಈ ಹಾರಿಕೆಯ ಮಾತು ಹೇಗೆ ಬಂತೆಂಬುದು ನನಗೆ ಗೊತ್ತಿದೆ. ಕಳೆದ ಹತ್ತು ವರ್ಷಗಳಿಂದ ಒಂದೇಸವನೆ ರಾಟೆಯನ್ನು ನೂಲುತ್ತಿರುವದರಿಂದ ನನ್ನ ಬಲಗೈ ಮೊಳಕೈಗೆ ನೋವುಂಟಾಗತೊಡಗಿದೆ. ಟೇನಿಸ್ ಆಡುವವರು ಒಂದೇ ಸವನೆ ರ್‍ಯಾಕೆಟ್ ಉಪಯೋಗಮಾಡುವದರಿಂದ ನೋವಾಗುವಂತೆಯೇ ನನಗೂ ಆಗಿದೆ ಎಂಬ ನಿರ್ಣಯಕ್ಕೆ ಡಾಕ್ಟರರು ಬಂದರು. ಆದುದರಿಂದ ಅವರು ಮೊಳಕೈಗೆ ಸಂಪೂರ್ಣ ವಿಶ್ರಾಂತಿ ಕೊಡಬೇಕೆಂದು ಸೂಚಿಸಿದರು. ಪ್ರಭುದಾಸನ ಶೋಧವಿಲ್ಲದಿದ್ದರೆ ನೂಲುವದನ್ನು ಕೆಲ ಸಮಯ ನಿಲ್ಲಿಸುವ ಪ್ರಸಂಗ

ಬರುತ್ತಿತ್ತು. ನಿಮಗೆ ಪ್ರಭುದಾಸ ಗೊತ್ತಿರುವನಲ್ಲವೆ ? ಛಗನಲಾಲರ ಮಗ. ಅವನ ಶೋಧವು ಹೀಗಿದೆ : ರಾಟೆಯ ಗಾಲಿಯನ್ನು ಕಾಲಿನಿಂದ ತಿರುಗಿಸಲಿಕ್ಕೆ ಬರುತ್ತದೆ, ನೂಲಿನ ಎಳೆಯನ್ನು ತೆಗೆಯಲಿಕ್ಕೆ ಎರಡೂ ಕೈಗಳು ತೆರವಿರುತ್ತವೆ. ಈ ಪ್ರಕಾರ ನೂಲೂ ಇಮ್ಮಡಿ ಹೊರಡುತ್ತದೆ. ಈ ರಾಟೆ ತರಿಸಿ ನಾನು ಡಾಕ್ಟರರನ್ನು ಸೋಲಿಸಿದೆನು. ಬಲಗೈಯಿಂದ ನೂಲುವದನ್ನು ಸಂಪೂರ್ಣ ನಿಲ್ಲಿಸುವ ಕೊನೆಯ ಆಜ್ಞೆ ಸಿಗುವ ಪೂರ್ವದಲ್ಲಿಯೇ ಮಗನಲಾಲನ ಹೆಸರಿನಿಂದ ಬಂದ ' ಮಗನ ಚರಖಾ' ಎಂದು ಹೇಳುವ ಪೆಡಲ್ ರಾಟೆಯನ್ನು ನಡೆಸಲಿಕ್ಕೆ ಕಲಿತೆನು. ಈ ಶೋಧದ ವಿಷಯಕ್ಕೆ ಏನೂ ಗೊತ್ತಿಲ್ಲದ ಒಬ್ಬ ಮೂರ್ಖ ಸುದ್ದಿಗಾರನು ಗಾಲಿಯನ್ನು ಪೆಡಲ್ ದಿಂದ ತಿರುಗಿಸುತ್ತೇನೆಂದು ಕೇಳಿದ ಕೂಡಲೇ ನಾನು ಹೊಲಿಗೆ ಯಂತ್ರದ ಮೇಲೆ ಕೆಲಸ ಮಾಡುತ್ತೇನೆಂಬ ನಿರ್ಣಯಕ್ಕೆ ಬಂದನು. ವೃತ್ತಪತ್ರಕಾರರಲ್ಲಿ ನನ್ನ ವಿಷಯಕ್ಕೆ ಅನೇಕ ಪ್ರಕಾರದ ಕಲ್ಪನೆಗಳನ್ನು ಊಹಿಸಿಕೊಂಡು ಬೇರೆ ಬೇರೆ ಪ್ರಕಾರದ ಮಾತು ಗಳಿಗೆ ನನ್ನ ಸಂಬಂಧವನ್ನು ಜೋಡಿಸುವ ಪುಣ್ಯಾತ್ಮರೂ ಇದ್ದಾರೆ. ಆಯಿತು ಅವರು ಆ ತಪ್ಪು ವರದಿಯಲ್ಲಿ ತಿದ್ದುಪಡೆಯನ್ನು ಮಾಡಿದರು ಮತ್ತು ರಾಟೆಯ ವಿಷಯಕ್ಕೆ ನನ್ನ ಭ್ರಮವು ದೂರವಾಯಿತೆಂದು ಘೋಷಣೆ ಮಾಡಿದರು. ಇಡೀ ಸಂಗತಿಯು ಹೀಗಿದೆ."

ಭಾಯಿ . . . ಯ ಸ್ಥಿತಿಯು ಕೆಟ್ಟಿದೆ ಮತ್ತು ಅವನು ಬಹಳ ಚಿಂತೆಯಲ್ಲಿರು ತ್ತಾನೆ ಎಂಬ ಸುದ್ದಿಯನ್ನು ಮೀರಾಬಹನ ಕೊಟ್ಟಿದ್ದಳು. ಈ ಸುದ್ದಿಯು ಮತ್ತೆ ಬಂತು. ಬಾಪೂ ಅವನಿಗೆ ಬರೆದದ್ದನ್ನು ಪ್ರತಿಯೊಬ್ಬ ಹಣವಂತನು ಲಕ್ಷ್ಯದಲ್ಲಿಡಲು ಯೋಗ್ಯವಾಗಿದೆ.

" ನಿನ್ನ ಸ್ಥಿತಿಯು ಹೇಗೇ ಇರಲಿ. ಇಷ್ಟು ಲಕ್ಷ್ಯದಲ್ಲಿಡು :

(೧) ನೀನು ಗಳಿಸುವ ಹಣವನ್ನು ನಿನಗೆ ಕಳೆಯುವ ಅಧಿಕಾರವಿದೆ.

(೨) ಹಣ ಕಳೆದುಕೊಳ್ಳುವದು ನಾಚಿಕೆಯ ಮಾತಲ್ಲ, ಕಳೆದುಕೊಂಡ ಮೇಲೆ ಮರೆಮಾಚು ಮಾಡುವದು ನಾಚಿಕೆಯ ಮಾತು. ಪಾಪವೂ ಅಹುದು.

(೩) ಯೋಗ್ಯತೆಗಿಂತ ಹೆಚ್ಚಿನ ಆಡಂಬರವಿಡಬಾರದು. ಇವತ್ತು ಬಂಗಲೆ ಯಲ್ಲಿರುತ್ತಿದ್ದಾಗ್ಯೂ ನಾಳೆ ಗುಡಿಸಿಲಿನಲ್ಲಿರುವ ಸಿದ್ಧತೆಯಿರಬೇಕು.

(೪) ಕೊಡುವವರಿಗೆ ಕೊಡುವಷ್ಟು ರೂಪಾಯಿಗಳು ನಮ್ಮ ಹತ್ತರವಿರ ದಿದ್ದರೂ ಇದರಲ್ಲಿ ನಾಚಿಕೆಯ ಮಾತಿಲ್ಲ.

(೫) ತನ್ನ ಹತ್ತರ ಒಂದು ಪೈಯನ್ನೂ ಇಟ್ಟುಕೊಳ್ಳದೆ ಇದ್ದದ್ದನ್ನೆಲ್ಲ ಕೊಡುವವರಿಗೆ ಕೊಟ್ಟುಬಿಡುವ ಮನುಷ್ಯನು ಎಲ್ಲವನ್ನೂ ಮುಟ್ಟಿಸಿ ದಂತೆಯೆ.

(೬) ಸಾಲತೆಗೆದುಕೊಂಡು ವ್ಯಾಪಾರ ಮಾಡದಿರುವದು ಮೊದಲನೇ ಜಾಣ ತನ. ಸಾಲ ತೆಗೆದುಕೊಂಡಿದ್ದರೆ ಹತ್ತಿರ ಇದ್ದದ್ದನ್ನೆಲ್ಲ ಕೊಟ್ಟು ಅದರೊಳಗಿಂದ ಪಾರಾಗುವದು ಎರಡನೇ ಜಾಣತನ.

ಆಶ್ರಮಕ್ಕೆ ಹೋಗಬೇಕೆಂದೆನಿಸಿದಾಗ ಹೋಗಬಹುದು."

ಉರ್ದು ಪುಸ್ತಕಗಳಲ್ಲಿ ಬಾಪೂ ಅಂಜುಮನೆ ಹಿಯಾಯತೆ ಇಸ್ಲಾಮ ಲಾಹೋರದ ನಾಲ್ಕನೇ ಪುಸ್ತಕವನ್ನು ಓದಲಿಕ್ಕೆ ಪ್ರಾರಂಭಮಾಡಿದ್ದಾರೆ. ಇವತ್ತು ಮಲಗುವ ಪೂರ್ವದಲ್ಲಿ ಎಣ್ಣೆಯಿಂದ ತಿಕ್ಕಿಸಿಕೊಳ್ಳುತ್ತ ಹೇಳಿದರು : " ಈ ಪುಸ್ತಕ ಓದಿ ದಿನೇ ದಿನೇ ಉದಾಸೀನನಾಗಹತ್ತಿದ್ದೇನೆ. ಮುಸಲ್ಮಾನ ಹುಡುಗರಿಗೆ ಚಿಕ್ಕಂದಿ ನಿಂದಲೇ ಹೊಡೆದಾಟ ಬಡೆದಾಟ ಮತ್ತು ರಕ್ತಪಾತ ಮಾಡಲಿಕ್ಕೆ ಕಲಿಸಲಾಗುತ್ತಿದೆ. ಮಹಮ್ಮದ ಪೈಗಂಬರನ ಜೀವನದಲ್ಲಿ ಯುದ್ಧ, ಯುದ್ಧ, ಯುದ್ಧ ! ಬರೆಯುವವನು ಪೈಗಂಬರನ ಜೀವನ ರಹಸ್ಯವನ್ನೇ ಅರಿತಿಲ್ಲ. ಮತ್ತು ಅವರು ಯುದ್ಧದ ಮೇಲೆ ಯುದ್ಧ ಮಾಡುತ್ತಿದ್ದರೆಂದು ಅವನು ವರ್ಣಿಸಿದ್ದಾನೆ."

* * *

ಇವತ್ತು ದುರ್ಗಾ, ಬಾಬಾ, ಆನಂದೀ ಮತ್ತು ರಮಣ ಭೆಟ್ಟಿಗೆ ಬಂದರು. ದುರ್ಗಾ ಮಾವಿನ ಹಣ್ಣು ತಂದಿದ್ದಳೆಂದು ಗೊತ್ತಾಯಿತು. ಇನ್ನೂ ಕೆಲವು ಮಾವಿನ ಹಣ್ಣುಗಳು ಹತ್ತಿರವಿದ್ದವೆಂದು ತಿಳಿದು ಬಾಪೂ ಗಾಬರಿಯಾಗಿ ಅಂದರು : " ಪರಚುರೆಶಾಸ್ತ್ರಿಗೆ ಮಾವಿನಹಣ್ಣು ಕಳಿಸು. ನಾವು ಇಲ್ಲಿ ಮಾವಿನಹಣ್ಣು ತಿನ್ನ ಲಿಕ್ಕೆ ಬಂದಿರುವೆವೇನು ?"

ಆನಂದಿಗೆ ಬಾಪೂರ ಭೆಟ್ಟಿಯಾಗಲಿಲ್ಲ. ನಾನು ಬಾಪೂರ ಸಂಗಡ ಮಾತಾಡಿದೆ. ಬಾಪೂ ಹೇಳಿದರು : " ಅವಳು ಅತ್ತಂತೆ ಉಳಿದವರೂ ಬಹಳ ಅಳುವರು ಮತ್ತು ಈ ಜನರನ್ನು ತಿರುಗಿ ಕಳಿಸುವಾಗ ನನಗೇನು ಕಡಿಮೆ ದುಃಖವಾಗುತ್ತಿದೆಯೆ ? ಆದರೆ ಮಾಡುವದೇನು ? "

ರಾತ್ರಿ ತ್ರಿವೇದಿಯುವರು ಕಳಿಸಿದ ದುರ್ಬೀನಿನಿಂದ ನಕ್ಷತ್ರನೋಡುವ ಪ್ರಯತ್ನ ಮಾಡಿದೆವು. ಸ್ವಲ್ಪ ಸ್ವಲ್ಪ ಕಾಣಿಸಿದವು. ಆದರೆ ನನಗೆ ಸಂತೋಷವಾಗಲಿಲ್ಲ.

ಇವತ್ತು ಬಾಪೂ ಬಹಳ ಪತ್ರಗಳನ್ನು ಬರೆಯಿಸಿದರು. ಆದುದರಿಂದ ದುರ್ಬೀನಿನಿಂದ ನೋಡುವದಕ್ಕೆ ಸಮಯಸಿಗಲಿಲ್ಲ. " ದಿನಾಲು

೯–೬–'೩೨ ಕಾಲು ಗಂಟೆ , ಇದಕ್ಕಾಗಿ ಇಡಬೇಕು " ಎಂದು ಬಾಪೂ ಅಂದರು.

ಪರಚೂರೆ ಶಾಸ್ತ್ರಿ ಮತ್ತು ಕುಷ್ಠರೋಗದ ಬೇರೆ ಕೈದಿಗಳ ಸಲುವಾಗಿ ೫೦ ಮಾವಿನ ಹಣ್ಣುಗಳನ್ನು ಕಳಿಸಿದಾಗ ಬಾಪೂಗೆ ಸಂತೋಷವಾಯಿತು.

ಜಮನಾಲಾಲಜಿಯವರ ಪತ್ರದಲ್ಲಿ ಅನೇಕ ಮಾತುಗಳಿವೆ; ಅವರ ಆರೋಗ್ಯ, ತಿನ್ನುಣ್ಣುವದು, 'ಬ' ವರ್ಗ ಬಿಡುವ ಕಾರಣ ಮುಂತಾದವುಗಳು. ಅವರ ನಿಶ್ಚಯವೃತ್ತಿಯು ಆಶ್ಚರ್ಯಜನಕವಿರುತ್ತದೆ. ಪ್ರಾರಂಭದಿಂದಲೇ ಇದ್ದ ಅವರ ಸಂಯಮಿ ಜೀವನವು ಈಗ ತಪಃಪೂತವಾಗಿದೆ. ಅಂದಮೇಲೆ ಹೇಳುವದೇನು? ವಿನೋಬಾಜಿಯವರ ಸಹವಾಸದಿಂದ ಇಡೀ ಜನ್ಮದ ಲಾಭವಾಗಿದೆಯೆಂದು ಅವರು ಬರೆಯುತ್ತಾರೆ. ಎಷ್ಟೋ ಜನರಿಗೆ ಈ ಅನುಭವ ದೊರೆತಿರಬೇಕು. ರಾಮಕೃಷ್ಣ ಪರಮಹಂಸ ಅಥವಾ ವಿವೇಕಾನಂದರು ಒಬ್ಬ ಮನುಷ್ಯನ ಉನ್ನತಿ ಮಾಡುವದಕ್ಕೆ ನಾವು ಜೀವಿಸಿದರೂ ನಮ್ಮ ಜೀವನ ಸಾಫಲ್ಯವಾಯಿತು ಎಂದು ಹೇಳುವದಿಲ್ಲವೆ?

* * *

· · · ಗೆ ಬರೆದರು: "ನೀನು ಬರೆದಂತೆ ನಿನಗೆ ಕೆಟ್ಟ ವಿಚಾರಗಳು ಬರುತ್ತಲೇ ಇರುತ್ತವೆ ಮತ್ತು ಅದರಿಂದ ನೀನು ಚಿಂತೆ ಮಾಡುತ್ತಿರುತ್ತಿ. ಇದರ ಹೆಸರೇ ನಾವು ನಿರ್ಮಿಸಿದ ನರಕ. ಇದರಲ್ಲಿ ನಿನ್ನ ಎರಡೂ ಪ್ರಶ್ನೆಗಳ ಉತ್ತರವನ್ನು ಕೊಟ್ಟಿದ್ದೇನೆ. ಏತರ ಮೇಲಿಂದ ಬರೆದಿರುವೆನೆಂಬುದನ್ನೂ ಹೇಳಿದ್ದೇನೆ. ಈ ನರಕವು ಹೇಗೆ ಗೊತ್ತಾಯಿತೆಂಬುದನ್ನು ಸಹ ಹೇಳಿದ್ದೇನೆ. ಇದರ ಜ್ಞಾನವಾದರೆ ಈ ನರಕದಿಂದ ಹೇಗೆ ಪಾರಾಗಬಹುದೆಂಬುದು ಸುಲಭವಾಗಿ ತಿಳಿಯಲಿಕ್ಕೆಬೇಕು. ಕೆಟ್ಟ ವಿಚಾರಗಳು ಬಂದರೆ ಹಿಂದಿನಿಂದ ಅವುಗಳದೇ ವಿಚಾರಮಾಡುತ್ತ ಕೂಡ್ರಬಾರದು. ಅವು ಬಂದಿಲ್ಲವೆಂದು ತಿಳಿದು ಮುಂದುವರಿಯಬೇಕು. ಮನುಷ್ಯನಿಗೆ ಪೆಟ್ಟುತಗಲಿದರೆ ಆ ಕಾಲಕ್ಕೆ ಏತರಿಂದ ಪೆಟ್ಟುತಗಲಿತೆಂಬುದನ್ನು ನೋಡುತ್ತ ಕೂಡ್ರುವದಿಲ್ಲ. ಇದರ ಪರಿಣಾಮವು ಕೆಟ್ಟಪಾಗಲಿಕ್ಕಿಲ್ಲವಷ್ಟೆ ಎಂಬ ವಿಚಾರದಲ್ಲಿ ಮನುಷ್ಯನು ಅಲ್ಲಿಯೇ ಕುಳಿತರೆ ಅವನು ಮುಂದುವರಿಯಲಾರನು. ಪೆಟ್ಟುತಿಂದಿದ್ದರೆ ಅದನ್ನು ಲಕ್ಷ್ಯಕ್ಕೆ ತರದೆ ಮುಂದುವರಿದರೆ ಅವನು ತನಗೆ ತಗಲಿದ ಪೆಟ್ಟನ್ನು ಮರೆಯುತ್ತಾನೆ. ಮುಂದುವರಿಯುವದರಿಂದ ಶಕ್ತಿಯು ಬೆಳೆಯುತ್ತದೆ. ಶಕ್ತಿಯು ಬೆಳೆದಂತೆ ನೋವು ಸಹ ಕಡಿಮೆಯಾಗುತ್ತದೆ."

ಇವತ್ತು ಬಾಪೂ ಕ್ಯಾಂಪ ಕೈದಿ ಮತ್ತು ಸರ್ಕಲ್ ಕೈದಿಗಳಿಗೆ ಭೆಟ್ಟಿಯಾದರು. ಅಧ್ಯಾಪಕ, ಜೇಠಾಲಾಲ ಗಾಂಧಿ ಮತ್ತು ಬಿಂದು ಮಾಧವರೂ ಇದ್ದರು. ಪೋಸ್ಟ ಆಫೀಸಿನ ಪತ್ರಗಳನ್ನು ಸುಡುತ್ತಿರುವ

೧೦—೬—'೩೨ ಕಾರ್ಯಕ್ರಮದ ವಿಷಯಕ್ಕೆ ಮಾತುಗಳಾದವು. ಬಾಪೂ ಹೇಳಿದರು: "ಇದು ವ್ಯರ್ಥ ಹಾಗೂ ವಿನಾಶಕ ಪ್ರವೃತ್ತಿಯು. ಇದರಲ್ಲಿ ಹಿಂಸೆಯಿದೆ. ಇದು ಸಫ್ರೆಜಿಟ್‌ರ ಪೂರ್ಣ ಬುದ್ಧಿಗೇಡಿಯಾದ ಅನುಕರಣವು." ಬೇರೆ ಅನೇಕ ಚರ್ಚೆಗಳಾದವು.

ಛಗನಲಾಲ ಜೋಶಿಯವರಿಗೆ ಬರೆದ ಪತ್ರ ಮಹತ್ವದ್ದಿತ್ತು. ಆಶ್ರಮದ ಬದಲಾವಣೆಯ ವಿಷಯಕ್ಕೆ ವಿಶೇಷ ಚರ್ಚೆಯಿತ್ತು. "ಆಶ್ರಮದಲ್ಲಿ ಕೂಲಿಯಿಂದ ಮಾಡಿಸುವ ಕೆಲಸದಲ್ಲಿ ಬಹುಭಾಗವನ್ನು ಸ್ವತಃ ಮಾಡಲಾಗುತ್ತದೆ. ಕೆಲಜನ ನೌಕರರೂ ಇದ್ದಾರೆ. ಆಶ್ರಮದ ನಿಯಮಗಳನ್ನು ಸರಿಯಾಗಿ ಪಾಲಿಸುವಂಥವರೇ ಉಳಿದಿದ್ದಾರೆ. ಅವರ ಜೊತೆಗೆ ಆಶ್ರಮವಾಸಿಗಳೂ ಕೆಲಸ ಮಾಡುತ್ತಾರೆ. ಸಾವಕಾಶವಾಗಿ ಎಲ್ಲ ಕೂಲಿ ಕೆಲಸವನ್ನು ಕೈಯಲ್ಲಿ ತೆಗೆದುಕೊಳ್ಳಲಾಗುತ್ತದೆ. ಹುಡುಗರೂ ಸಹ ಯಥಾಶಕ್ತಿ ಸಹಾಯ ಮಾಡುತ್ತಾರೆ. ಹೊಸದಾಗಿ ಬರುವವರಿಗೆ ಮೊದಲು ಪ್ರಾರ್ಥನೆ, ಭಜನೆ ಮುಂತಾದವುಗಳನ್ನು ಕಲಿಸುವ ಕೆಲಸವಿರುತ್ತದೆ. ಇಷ್ಟಾದ ಮೇಲೆ ಇಂಗ್ಲೀಷ ಕಲಿಯುವವರು ಕಲಿಯಬಹುದು. ಯಜ್ಞಾರ್ಥ ನೂಲುವದನ್ನು ಒಂದು ತಾಸಿನವರೆಗೆ ಎಲ್ಲರೂ ಕೂಡಿ ಮಾಡುತ್ತಾರೆ. ೨೦ ನಂಬರ ಗಿಂತ ಕೆಳಗಿನ ನೂಲನ್ನು ಯಜ್ಞದ ಅಂಕಿಯಲ್ಲಿ ಕೂಡಿಸುವದಿಲ್ಲ. ನೂತ ನೂಲನ್ನೆಲ್ಲ ಅದೇ ದಿವಸ ಬಾಗಿಲಲ್ಲಿ ಕೊಟ್ಟು ಹೋಗಬೇಕು. ಎಲ್ಲವೂ ಅನುಕೂಲ ವಾದರೆ ಈ ನೂಲನ್ನು ಯಾರೂ ತಮ್ಮ ತಮ್ಮ ಸಲುವಾಗಿ ಕೊಂಡುಕೊಳ್ಳ-ಬಾರದೆಂದು ಸೂಚಿಸಿದ್ದೇನೆ. ಹೀಗೆ ಕೊಂಡುಕೊಳ್ಳಲಿಕ್ಕೆ ಅನುಕೂಲತೆ ಇರುವ ವರೆಗೆ ಯಜ್ಞವು ಅಪೂರ್ಣವೆಂದು ಯಾವಾಗಿನಿಂದಲೂ ನನ್ನ ವಿಚಾರವು. ಕಳೆದ ವಾರದಿಂದ, ಶ್ರಮವು ಯಾವದೇ ಪ್ರಕಾರದ್ದಿದ್ದರೂ ಪ್ರತಿ ತಾಸಿಗೆ ಒಂದು ಆಣೆಯಂತೆ ಹಿಡಿದು ಅದರ ಜಮಾಖರ್ಚು ಮಾಡಬೇಕೆಂದು ನಿರ್ಣಯವಾಗಿದೆ. ಆದರೆ ಆದರಂತೆ ಆ ಹಣವನ್ನು ಕೊಟ್ಟು ಬಿಡಬೇಕೆಂದು ನಿರ್ಣಯವಾಗಿಲ್ಲ. ಈಗ ಸದ್ಯಕ್ಕೆ ನಾರಾಯಣದಾಸರಿಗೆ, ಅವರ ಮನಸ್ಸಿಗೆ ಬಂದರೆ ಈ ರೀತಿಯಿಂದ ಲೆಕ್ಕ ಇನ್ನಿಡಲು ಪ್ರಾರಂಭಿಸಲು ನನ್ನ ಸೂಚನೆ ಇತ್ತು. ಈ ಲೆಕ್ಕವನ್ನು ಸಹ ಸಾಮಾನ್ಯ ಖಾತೆ ಕಿರ್ದಿಗಳಲ್ಲಿ ಇಡಬೇಕು. ಇದಲ್ಲದೆ ಈಗಂತೂ ಇದು ಕೇವಲ ಪರಿಣಾಮ ನೋಡುವದಕ್ಕಾಗಿಯೇ ಇದೆ.' ಇದರಿಂದ ಅನೇಕ ಮಾತುಗಳು ಗೊತ್ತಾಗುವವು. ಮತ್ತು ನಾವೆಲ್ಲರೂ ಅಷ್ಟೇ ಕೂಲಿಯನ್ನು ದೊರಕಿಸುವ ಪರಿಣಾಮವು ಇದರಿಂದ ಹೊರಡಬಹುದು. ಅಂದರೆ ನೂಲುವದು, ನೇಯುವದು, ಶೌಚಕೂಪ ಸ್ವಚ್ಛ ಮಾಡುವದು ಮತ್ತು ಯಾವದೇ ಸಾಮಾಜಿಕ ಸೇವೆಗಾಗಿ ಒಂದು ತಾಸಿಗೆ ಒಂದಾಣೆಯಂತೆ ಲೆಕ್ಕಮಾಡಬೇಕು. ಇದರ ಚರ್ಚೆಯನ್ನು ನಾವು ಬಹಳ ಮಾಡಿದ್ದೇವೆಂದು ನಿಮಗೆ ಗೊತ್ತಿರಬಹುದು. ಇತ್ತೀಚೆಗೆ ನಾನು ನಾರಾಯಣ ದಾಸನಿಗೆ ಬಹಳ ಬರೆಯುತ್ತಿದ್ದೇನೆ. ಅದರಲ್ಲಿ ಈ ವಿಷಯ ಕುರಿತು ಮತ್ತೆ ಚರ್ಚೆ ಮಾಡಲಾಗಿದೆ. ನಾರಾಯಣದಾಸನಿಗೆ ಈ ವಿಚಾರಗಳನ್ನು ಆತ್ಮಸಾತ್ ಮಾಡಿಕೊಳ್ಳುವ ಶಕ್ತಿಯು ಈಗ ಬೆಳೆದಿದೆಯೆಂದು ನನಗೆನಿಸುತ್ತಿದೆ. ಆದುದರಿಂದ

ಅವರು ಈ ಸೂಚನೆಯನ್ನು ಸ್ವಾಗತಿಸಿದ್ದಾರೆ. ಈ ಖಾತೆ ಕಿರ್ದಿ ಬರೆಯಲು ಬಹಳ ಸಮಯ ಹತ್ತುತ್ತದೆ ಎಂಬ ಮಾತೂ ಇಲ್ಲ. ಮತ್ತು ಈಗ ನಡೆದ ಪ್ರಯೋಗವನ್ನು ಕೊನೆಗೆ ಕಾರ್ಯಕಾರೀ ಮಾಡುವ ಸ್ಥಿತಿಗೆ ಎಲ್ಲರೂ ಮುಟ್ಟಿದರೆ ಲೆಕ್ಕ ಮಾಡುವ ಕೆಲಸವು ಸಾಮಾನ್ಯ ಗುಜರಾಥೀ ಬಲ್ಲ ಕೆಲಸಗಾರನು ಇಡಲಿಕ್ಕೆ ಬರುವಷ್ಟು ಸುಲಭವಾಗುವದು. ಈ ಪ್ರಕಾರ ಲೆಕ್ಕ ಮಾಡುವದರ ಯಶಸ್ಸು ಸಮಾಜವನ್ನವಲಂಬಿಸಿದೆ. ಯಾಕಂದರೆ ತನ್ನ ಕೆಲಸದ ಗಂಟೆಗಳನ್ನು ಬರೆಯು-ವವನು ಅಥವಾ ಬರೆಯಿಸುವವನು ಕೆಲಸ ಮಾಡುವದರಲ್ಲಿ ಮೈಗಳ್ಳತನ ಮಾಡಿದ್ದರೆ ಅಥವಾ ಮನಬಂದಂತೆ ಕೆಲಸ ಮಾಡಿದ್ದರೆ ಲೆಕ್ಕವು ಎಷ್ಟು ಹೊರಡುತ್ತದೆಂಬುದು ಸಿದ್ಧವು. ಅಂದರೆ, ಖರೆ ಹಾಗೂ ಖೊಟ್ಟಿ ರೂಪಾಯಿಗಳ ಮಿಶ್ರಣ ಮಾಡಿದಂತಾಗುವದು. ಮಕ್ಕಳ ಶಿಕ್ಷಣದ ವಿಷಯಕ್ಕೂ ನಾನು ಇಲ್ಲಿಂದ ಸಾಕಷ್ಟು ಬರೆಯುತ್ತಿದ್ದೇನೆ. ಎಷ್ಟು ಜನ ಆಶ್ರಮವಾಸಿಗಳು ಅದರೊಳಗಿನದನ್ನು ಆತ್ಮಸಾತ್ ಮಾಡಿಕೊಳ್ಳುವರೊ ಹೇಳಲಿಕ್ಕಾಗದು. ಆದರೆ ಅದೆಲ್ಲವನ್ನೂ ಬರೆಯುತ್ತ ಕುಳಿತರೆ ಬಹಳ ಸಮಯಬೇಕಾಗುವದು. ಮತ್ತು ಅಷ್ಟು ಸಮಯ ಕೊಡುವದು ಸಾಧ್ಯವಿಲ್ಲ. ಈ ವಿಷಯದಲ್ಲಿ ಸಹನೆಯನ್ನು ತಾಳು. ನಮ್ಮೆಲ್ಲರಿಗೂ ಇದು ಅಮೂಲ್ಯ ಸಮಯ ದೊರೆತಿದೆ. ನಾವು ನಮಗೆ ತಿಳಿದಂತೆ ಇದರ ಸದುಪಯೋಗ ಮಾಡಿಕೊಳ್ಳಬೇಕು. ಮತ್ತು ಅಂತರ್ ವಿಚಾರಮಾಡುವ ಶಕ್ತಿಯನ್ನುಂಟುಮಾಡಿಕೊಳ್ಳುವದೇ ಎಲ್ಲಕ್ಕೂ ಉತ್ತಮ ಉಪಯೋಗವು. ಅನೇಕ ಸಾರೆ ನಾವು ವಿಚಾರಶೂನ್ಯರಾಗಿರುತ್ತೇವೆ. ಆದರಿಂದ ಕೇವಲ ಓದುವದು ಅಥವಾ ಮಾತಾಡುವದು ರುಚಿಸುತ್ತದೆ. ನಮ್ಮಲ್ಲಿ ಕೆಲವರು ವಿಚಾರವನ್ನೂ ಮಾಡುತ್ತಾರೆ. ಆದರೆ ಕೇವಲ ಗಾಳಿಗೋಪುರ ಕಟ್ಟುವದಕ್ಕೆ. ವಾಸ್ತವಿಕವಾಗಿ ಓದುವದು ಮುಂತಾದ್ದು ಕಲೆ ಇದ್ದಂತೆ ವಿಚಾರ ಮಾಡುವದೂ ಕಲೆ ಇರುತ್ತದೆ. ನಿಶ್ಚಿತ ಸಮಯದಲ್ಲಿ ನಿಶ್ಚಿತ ವಿಚಾರ ಬರಬೇಕು. ಮತ್ತು ಹೇಗೆ ನಿರರ್ಥಕ ಪುಸ್ತಕಗಳನ್ನು ಓದಬಾರದೊ ಹಾಗೆ ನಿರರ್ಥಕ ವಿಚಾರಗಳನ್ನೂ ಬರಗೊಡಬಾರದು. ಹೀಗೆ ಮಾಡುವದರಿಂದ ಯಾವ ಶಕ್ತಿಯು ಉಂಟಾಗುತ್ತಿದೆಯೋ ಹಾಗೂ ಯಾವ ಶಕ್ತಿಯು ಕೇಂದ್ರೀಭೂತವಾಗುತ್ತಿದೆಯೋ ಅದರ ಅಂದಾಜನ್ನು ಮಾಡಲಿಕ್ಕೆ ಬರುವದಿಲ್ಲ. ಈ ಪ್ರಕಾರ ವಿಚಾರ ಮಾಡಲು ಕಲಿಯಲಿಕ್ಕೆ ಇದು ಉತ್ತಮ ಸಮಯವೆಂದು ನನಗೆ ಪ್ರತಿಯೊಂದು ಕಾರಾಗೃಹವಾಸದ ಕಾಲಕ್ಕೂ ಅನುಭವ ಬಂದಿದೆ. ಆದುದರಿಂದ ಆಳ ವಿಚಾರ ಮಾಡುವ ಕಲೆಯನ್ನು ಸಾಧಿಸಲೆಂದು ನಿಮ್ಮೆಲ್ಲರಿಗೂ ನನ್ನ ಸಲಹೆಯಿದೆ ಮತ್ತು ಹೀಗೆ ಮಾಡುವದರಿಂದ ನನ್ನನ್ನು ಹೆಚ್ಚಾಗಿ ಕೇಳುವದೂ ಉಳಿಯುವದಿಲ್ಲ. ಆದರೆ ಯಾರೂ ಇದರ ವಿಪರೀತ ಅರ್ಥವನ್ನು ಮಾಡಬಾರದು. ನನ್ನನ್ನು

ಕೇಳಲಿಕ್ಕೆ ನಾನು ಪ್ರತಿಬಂಧ ಮಾಡುತ್ತಿರುವದಿಲ್ಲ. ಆದರೆ ಪರಾವಲಂಬನದಿಂದ ರಕ್ಷಿಸಲು ಇಚ್ಛಿಸುತ್ತೇನೆ. ನಾನಂತೂ ಕುಳಿತೇ ಇದ್ದೇನೆ. ಯಾವ ಮಾತಿನ ವಿಷಯಕ್ಕೆ ನಾನು ಎಲ್ಲರಿಗಿಂತ ಹೆಚ್ಚು ವಿಚಾರ ಮಾಡಿರುವೆನೊ ಅಥವಾ ಅನುಭವ ತೆಗೆದುಕೊಂಡಿರುವೆನೊ ಸಾಧ್ಯವಿದ್ದಷ್ಟು ಅವುಗಳ ಲಾಭವನ್ನು ಪಡೆಯಲು ನಿಮಗೆ ಅಧಿಕಾರವಿದೆ ಮತ್ತು ನಿಮ್ಮ ಕರ್ತವ್ಯವೂ ಆಗಿದೆ.''

'ಲೀಡರ' ದಲ್ಲಿ ಎರಡು ಸುಂದರ ಲೇಖಗಳಿದ್ದವು. ಒಂದು ಹೊಸ 'ಪಾಯೋನಿಯರ'ದ ಸ್ವಾಮಿತ್ವದ ಬಗ್ಗೆ, ಇನ್ನೊಂದು ಕಾಶ್ಮೀರದ ಪ್ರತ್ಯೇಕ ಮತಾಧಿಕಾರದ ಬಗ್ಗೆ. 'ಪಾಯೋನಿಯರ' ದಲ್ಲಿ ಇಂಗ್ಲೀಷ ಮತ್ತು ಮುಸಲ್ಮಾನರ ಕಾರಸ್ಥಾನದ ನಾತವು ಇರುವ ಹಾಗಿದೆ. ಶ್ರೀವಾಸ್ತವ ಮತ್ತು ಕೆಲವು ಹಿಂದೂ ಜಮೀನದಾರರು ಅದರಲ್ಲಿದ್ದಾಗ್ಯೂ ಸಹ ಇಂಗ್ಲೀಷರು ಮತ್ತು ಮುಸಲ್ಮಾನರು ಈ ಜನರಿಗೆ ಬೆಂಬಲ ಕೊಡುವ ವಚನ ಕೊಡಬೇಕು ಮತ್ತು ಅದಕ್ಕೆ ಬದಲಾಗಿ ಈ ಜನರು ಅವರಿಗೆ ವಿಶೇಷ ಪ್ರತಿನಿಧಿತ್ವ ಕೊಡುವ ವಚನ ಕೊಟ್ಟರೆ ಯಾವ ಆಶ್ಚರ್ಯವೂ ಇಲ್ಲ. ಬಾಪೂ ಅಂದರು: "ಈ ಮತಾಧಿಕಾರದ ಮೇಲೆ ಇದು ಏನು ಬರೆಯುವದೊ ಅದರ ಮೇಲಿಂದ ಗೊತ್ತಾಗುವದು."

ವಲ್ಲಭಭಾಯಿ: "ಇದು ಮುಂಗೈಯಿಂದ ಮೊಳಕೈವರೆಗೆ ಏರಿತು ಮತ್ತು ಮೊಳಕೈಯಿಂದ ಭುಜದ ಮೇಲೆ ಏರುವದು. ಇನ್ನು ಬಿಟ್ಟು ಬಿಡಿರಲ್ಲ, ಬಹಳ ನೂತಿರಿ."

೧೨-೬-'೩೨

ಬಾಪೂ: "ಒಂದಿಲ್ಲೊಂದು ದಿವಸ ಯಾರದಾದ್ದರೂ ಹೆಗಲ ಮೇಲೆ ಏರಲೇ ಬೇಕಲ್ಲವೆ?"

ವಲ್ಲಭಭಾಯಿ: "ಇಲ್ಲ ಇಲ್ಲ, ಹೀಗಾಗಲಾರದು. ದೇಶವನ್ನು ನಡುನೀರಲ್ಲಿ ಬಿಟ್ಟು ಹೋಗಲಿಕ್ಕಾಗದು. ಒಂದು ಸಾರೆ ಹಡಗವನ್ನು ದಂಡೆಗೆ ಹಚ್ಚಿರಿ. ಆ ನತರ ಬೇಕಾದಲ್ಲಿಗೆ ಹೋಗಿರಿ. ನಾನೂ ಸಂಗಡ ಬರುವೆ."

'ಸಿ' ವರ್ಗದ ಜನರಿಗೆ ಬರೆಯುವ ಸಾಮುಗ್ರಿ ಕೊಡುವದಕ್ಕಾಗಿ ಮೇಜರ ಸಂಗಡ ಬಹಳ ಚರ್ಚೆಯಾಯಿತು. ಮೇಜರ ಒಪ್ಪಲೇ ಇಲ್ಲ. ಇದರ ದುರುಪಯೋಗವಾಗುತ್ತಿದೆ, ಆದುದರಿಂದ ನಾನು ಯಾರಿಗೂ ಕೊಡಲಾರೆ ಎಂಬ ಮಾತಿಗೆ ಅವನು ಅಂಟಿಕೊಂಡೇಬಿಟ್ಟನು. ಬಾಪೂ ಹೇಳಿದರು: "ಉಳಿದ ಎಲ್ಲ ಕಡೆಗೂ ಕೊಡುತ್ತಾರೆ." "ಹಾಗಾದರೆ ಅಲ್ಲಿಯೂ ಬಂದಾಗಲಿಕ್ಕೆ ಬೇಕು." ಎಂದು ಮೇಜರ ಹೇಳಿದನು. ಬಾಪೂಗೆ ಬಹಳ ಕೆಡಕೆನಿಸಿತು.

ನಿನ್ನೆ ಮೇಜರನಿಗೆ ಹೇಳಿದ ಮಾತಿನ ವಿಷಯಕ್ಕೆ ಡೋಯಿಲ್ಲರಿಗೆ ಪತ್ರ ಬರೆಯಿಸಿದರು. ಇವತ್ತಿನ ವೃತ್ತಪತ್ರದಲ್ಲಿ ಎಲ್ಲಕ್ಕೂ ಉತ್ತಮವಾದ ಸುದ್ದಿಯೆಂದರೆ ಫಾದರ ಎಲ್ವಿನ್ನರ ಪ್ರಕಟನೆ. ನಿನ್ನೆ 'ಟಾಯಿಮ್ಸ' ದಲ್ಲಿ

೧೨-೬-'೩೨ ಅವರ ವಿಷಯಕ್ಕೆ ಹಾರಿಕೆ ಸುದ್ದಿ ಬಂದಿತ್ತು. ಆದರೂ ಸಹ ಅದನ್ನು ಯಾರೂ ನಂಬಿದ್ದಿಲ್ಲ. ಇವತ್ತು ಒಂದು ಪ್ರಕಾರದಿಂದ ನೆಟ್ಟಗೆನಿಸಹತ್ತಿದೆ. ಯಾಕಂದರೆ ಈ ಹಾರಿಕೆ ಸುದ್ದಿ ಬಂದದ್ದರಿಂದ ಎಲ್ವಿನ್ನರಿಗೆ ಕಾಂಗ್ರೆಸ್ಸಿನ ವಿಷಯಕ್ಕೆ ಈ ರೀತಿ ಬರೆಯಲಿಕ್ಕೆ ಸಂಧಿ ದೊರೆಯಿತು. ನಟರಾಜನ್ನರು ದಸ್ತೂರ ಮ್ಯಾಜಿಸ್ಟ್ರೇಟರಿಗೆ ನಾಯಿಟಹುಡ್ ಕೊಡುವದರ ವಿರುದ್ಧ ಚನ್ನಾಗಿ ಬರೆದಿದ್ದಾರೆ ಮತ್ತು ದೋರಾಬ ತಾತಾರ ಪ್ರಶಂಸೆಯನ್ನು ಚನ್ನಾಗಿ ಮಾಡಿದ್ದಾರೆ. ಶ್ರೀಮತಿ ತಾತಾರ ಬಗ್ಗೆ ಅವರ ಪ್ರೇಮ. ತೀರ ಕೊನೆಯ ದಿನಗಳಲ್ಲಿ ಅವರ ಜೀವನ ಚರಿತ್ರ ಬರೆಯಿಸುವದು, ಮತ್ತು ಲೇಡೀ ಎಬರಹೇನರು ಇವರಿಬ್ಬರ ಪ್ರೇಮವನ್ನು ಶಹಾಜಹಾ ಮುಮತಾಜರ ಸಂಗಡ ಹೋಲಿಸುವದು—ಇವೆಲ್ಲವು ಬಹಳ ಸುಂದರ ವಾಗಿವೆ. ನಮ್ಮ ಪಠ್ಯಪುಸ್ತಕದಲ್ಲಿ ಅನೇಕ ಪಾಠಗಳು ಬರುತ್ತವೆ, ಆದರೆ ಸರ್ ದೋರಾಬ ತಾತಾ ಮತ್ತು ಜಮುಶೇಟಜಿ ತಾತಾರಂಥವರ ಪಾಠಗಳು ಯಾಕೆ ಬರುವದಿಲ್ಲ?

ಭಾರತಿಯ ಪತ್ರಕ್ಕೆ ಉತ್ತರ ಕೊಟ್ಟರು:

"ಸುಂದರವಾದ ಅಕ್ಷರಗಳಲ್ಲಿ ಬರೆದ ನಿನ್ನ ಪತ್ರವು ತಲ್ಪಿದೆ. ಇಂಥ ಪತ್ರ ಗಳಿಂದ ನನಗೆಂದೂ ದಣಿವಾಗುವದಿಲ್ಲ.

"ನೀವು ಸಹೋದರ ಸಹೋದರಿಯರು ವಜ್ರದಂತೆ ಗಟ್ಟಿ

೧೩-೬-'೩೨ ಹಾಗೂ ಕಠೋರರಾಗಿರಿ, ಗಾಳಿ ಬಿಸಿಲುಗಳನ್ನು ಸಹಿಸಿರಿ. ಇದು ನನಗೆ ಸೇರುತ್ತದೆ. ಆದರೆ ಈ ಪ್ರಕಾರದ ಪ್ರಯೋಗವನ್ನು ಸಿಮ್ಲಾದ ಬಿಸಿಲಿನಲ್ಲಿ ಒಮ್ಮೆಲೆ ಮಾಡುವದು ನನ್ನಿಂದಾಗದು. ಈ ಪ್ರಕಾರದ ಸಹನಶಕ್ತಿಯ ಶಿಕ್ಷಣವು ವಿಸಿಷ್ಟ ಪದ್ಧತಿಯಿಂದಲೂ ಸಾವಕಾಶವಾಗಿಯೂ ಆದರೆ ಸಫಲವಾಗುತ್ತದೆ. ಯಾವಾಗಲೂ ಮೃದುವಾಗಿರುವವನು ಸಮಯ ಬಂದಾಗ ಕಠೋರನಾಗುತ್ತಾನೆಂದು ತಿಳಿಯುವದು ತಪ್ಪು. ಇದು ನಿಸರ್ಗದ ವಿರುದ್ಧ ಹೋಗುವಂಥ ಮಾತಾಗಿದೆ. ಇಂಥ ತಪ್ಪಿನ ನೂರಾರು ಉದಾಹರಣೆಗಳು ನನ್ನ ಕಣ್ಣಮುಂದಿವೆ.

"ಸಾಹಿತ್ಯ ಓದುವದು ನನಗೆ ಸೇರುತ್ತಿರುವದೇನೊ ನಿಜ. ಶಾಲೆಯ ಜೀವನದಲ್ಲಿ ಶಾಲೆಯ ಅಭ್ಯಾಸ ಬಿಟ್ಟು ಬೇರೆ ಏನೂ ಮಾಡುವದಾಗಲಿಲ್ಲ. ಆದರ ನಂತರ

ಒಂದರಹಿಂದೊಂದು ಕೆಲಸ ಬಂದದ್ದರಿಂದ ಓದುವದು ತೀರ ಕಡಿಮೆಯಾಯಿತು. ಆದದ್ದು ಜೇಲಿನಲ್ಲಿಯೇ ಆಯಿತು. ಆದರೆ ಇದರಿಂದ ನನಗೆ ಬಹಳ ಹಾನಿಯಾಗಿದೆ ಯೆಂದು ಅನಿಸುವದಿಲ್ಲ. ವಿಚಾರ ಮಾಡಲಿಕ್ಕೆ ಬಹಳ ಸಿಕ್ಕಿತು ಮತ್ತು ಅನುಭವದ ಶಾಲೆಯ ಅಭ್ಯಾಸವು ಪುಸ್ತಕ ಓದುವದಕ್ಕಿಂತ ಹೆಚ್ಚು ಉಪಯುಕ್ತವೆಂಬುದರಲ್ಲಿ ಸಂಶಯವಿಲ್ಲ.

"'ಕಲೆಗಾಗಿ ಕಲೆ' ಸಾಧಿಸಬೇಕೆಂದು ಹೇಳುವವರೂ ಹಾಗೆ ಮಾಡಲಾರರು. ಕಲೆಗೆ ಜೀವನದಲ್ಲಿ ಸ್ಥಾನವಿದೆ. ಕಲೆ ಏತಕ್ಕೆನ್ನಬೇಕೆಂಬುದು ಬೇರೆ ಪ್ರಶ್ನೆ. ಆದರೆ ನಾವೆಲ್ಲರೂ ಶ್ರಮಿಸಬೇಕಾದ ಮಾರ್ಗದಲ್ಲಿ ಕಲೆ, ಸಾಹಿತ್ಯ ಮೊದಲಾದವುಗಳು ಕೇವಲ ಸಾಧನಗಳಿವೆ. ಅವೇ ಸಾಧ್ಯವಾದಾಗ ಬಂಧನರೂಪವಾಗಿ ಮನುಷ್ಯನನ್ನು ಅಧಃಪತನಕ್ಕೆಳೆಯುತ್ತವೆ.

"ಈಶ್ವರ ಇದರ ಅರ್ಥವು 'ಸತ್ಯ.' ಕೆಲವೇ ವರ್ಷಗಳಿಂದ ನಾನು ದೇವರು ಸತ್ಯನಿದ್ದಾನೆಂದು ಹೇಳುವದರ ಬದಲು ಸತ್ಯವು ದೇವರಿದ್ದಾನೆಂದು ಹೇಳತೊಡಗಿ-ದ್ದೇನೆ. ಇದೇ ವಾಕ್ಯವು ನನಗೆ ಹೆಚ್ಚು ನ್ಯಾಯಸಂಗತವಾದದ್ದೆಂದು ಅನಿಸುತ್ತದೆ. ಸತ್ಯದ ಹೊರತು ಈ ಜಗತ್ತಿನಲ್ಲಿ ಬೇರೆ ಯಾವದೂ ಇಲ್ಲ.

"ಇಲ್ಲಿ ಸತ್ಯದ ವ್ಯಾಪಕ ವ್ಯಾಖ್ಯೆಯನ್ನು ಮಾಡತಕ್ಕದ್ದಿದೆ. ಈ ಸತ್ಯವು ಚೇತನಮಯವಿದೆ. ಈ ಸತ್ಯರೂಪಿಯಾದ ದೇವರು ಮತ್ತು ಅವನ ನಿಯಮವು ಭಿನ್ನಭಿನ್ನವಾಗಿಲ್ಲ. ಆದುದರಿಂದ ಅದೂ ಚೇತನಮಯವಾಗಿದೆ. ಈ ಜಗತ್ತು ಸತ್ಯಮಯವಾಗಿದೆ ಅಥವಾ ನಿಯಮಮಯವಾಗಿದೆ ಎಂದು ಹೇಳುವದು ಒಂದೇ ಇದೆ. ಈ ಸತ್ಯದಲ್ಲಿ ಅನಂತ ಶಕ್ತಿಗಳು ತುಂಬಿವೆ. ಗೀತೆಯ ಹತ್ತನೇ ಅಧ್ಯಾಯ-ಕ್ಕನುಸಾರವಾಗಿ ಹೇಳುವದಾದರೆ ಆದರ ಒಂದು ಅಂಶದಿಂದ ಜಗತ್ತು ನಿಂತಿದೆ. ಆದುದರಿಂದ ಈಶ್ವರ ಶಬ್ದ ಬಂದಲ್ಲೆಲ್ಲ ಸತ್ಯ ಶಬ್ದವನ್ನು ಉಪಯೋಗಿಸಿ ಅರ್ಥ ಮಾಡಿದರೆ ಈಶ್ವರನ ವಿಷಯಕ್ಕೆ ನನ್ನ ಅಭಿಪ್ರಾಯವು ತಿಳಿಯುಬಹುದು.

"ಈಶ್ವರನಿರುವದಾದರೆ— ನಾವು ಅವನನ್ನು ಸತ್ಯರೂಪನೆಂದು ತಿಳಿದರೂ— ಅವನ ಆರಾಧನೆಯನ್ನು ಮಾಡುವದು ನಮ್ಮ ಧರ್ಮವಾಗಿ ಬಿಡುತ್ತದೆ. ನಾವು ಯಾತರ ಆರಾಧನೆಯನ್ನು ಮಾಡುತ್ತೇವೆಯೊ ಅದರಂತೆ ಆಗಿಬಿಡುತ್ತೇವೆ. ಪ್ರಾರ್ಥನೆಯ ಅರ್ಥವು ಇದಕ್ಕಿಂತಲೂ ವಿಶೇಷವಾಗಿಲ್ಲ. ಆದರೆ ಈ ಅರ್ಥದಿಂದ ಎಲ್ಲವೂ ತಿಳಿಯುತ್ತದೆಯಲ್ಲವೆ ? ಸತ್ಯವು ನಮ್ಮ ಹೃದಯದಲ್ಲಿ ವಾಸಿಸುತ್ತದೆ. ಆದರೆ ನಮಗೆ ಅದರ ಕಲ್ಪನೆ ಅಥವಾ ಪೂರ್ಣ ಕಲ್ಪನೆ ಇಲ್ಲ. ಅದು ಹಾರ್ದಿಕ ಪ್ರಾರ್ಥನೆಯಿಂದುಂಟಾಗುತ್ತದೆ. . . .

"ನನ್ನ ಅಕ್ಷರ ಓದುವದಕ್ಕೆ ತೊಂದರೆಯಾಗುತ್ತಿದೆಯೆ ? ಈ ಪತ್ರ ಹಾಕಿದ ಪಾಕೀಟನ್ನು ಸರದಾರರು ಮಾಡಿರುತ್ತಾರೆ. ಕೆಲಸಕ್ಕೆಬಾರದ ಕೈಗೆ ಸಿಕ್ಕ ಬಿಳಿಯ

ಕಾಗದಗಳನ್ನೆಲ್ಲ ಇದೇ ಪ್ರಕಾರ ಉಪಯೋಗಮಾಡುವದರಲ್ಲಿ ಅವರು ತಮ್ಮ ಬಹಳ ಸಮಯವನ್ನು ಕಳೆಯುತ್ತಾರೆ.

ಬಾಪೂನ ಆಶೀರ್ವಾದ ”

ಉತ್ತರರೂಪವಾದ ಈ ಪತ್ರದಲ್ಲಿ ಎತ್ತಿದ ಎರಡು ಮುಖ್ಯ ಪ್ರಶ್ನೆಗಳನ್ನು ಭಾರತಿಯ ಪತ್ರದಿಂದಲೇ ತೆಗೆದುಕೊಳ್ಳುವಾ :

“ ನಾವು ಸಂಕುಚಿತ ಅರ್ಥದಲ್ಲಿ ಯಾವುದಕ್ಕೆ ಸಾಹಿತ್ಯವೆಂದು ಹೇಳುತ್ತೇವೆಯೊ ಅದನ್ನು ಓದುವ ನಾದವು ನಿಮಗಿದೆಯೇ ಅಥವಾ ಇತ್ತೊ ? ನಮ್ಮ ದೇಶದ ಸದ್ಯದ ಪರಿಸ್ಥಿತಿಯನ್ನು ಬದಿಗಿರಿಸಿ ವಿಚಾರ ಮಾಡಿದಮೇಲೆ ಸಹ, ಜೀವನದಲ್ಲಿ ಸಾಹಿತ್ಯ, ಕಲೆ ಮತ್ತು ಸೌಂದರ್ಯ ( ಯಾವುದರಲ್ಲಿ ಇಂದ್ರಿಯಗಳ ಆನಂದವೇ ಪ್ರಧಾನ ವಾಗಿರುತ್ತದೆಯೊ ) ಗಳಿಗೆ ಎಷ್ಟು ಸ್ಥಾನವಿದೆ ಎಂಬುದು ಸಂಶಯಾಸ್ಪದವಾಗಿದೆ. ಅತ್ಯುಚ್ಚವಾದ ಕಲೆಯು ಜೀವನದ ಮಹಾನ್ ಪ್ರಶ್ನೆಗಳಿಂದ ಭಿನ್ನವಾಗಿರಲಾರದು ಎಂದು ಎಷ್ಟೋ ಜನರು ಹೇಳುತ್ತಾರೆ. ಇದು ಇರಬಹುದು. ಆದರೆ ಕಲೆಯ ಪಾತ್ರಗಳ ಬಣ್ಣ, ಗಂಧ ಮತ್ತು ರೂಪಗಳ ಆನಂದವನ್ನು ಹೊಂದಿ ಅದರಿಂದಲೇ ಕೃತಕೃತ್ಯರಾಗುವವರೂ ಅನೇಕರಿದ್ದಾರೆ. ಅವರಿಗೆ ಇದಕ್ಕಿಂತಲೂ ಉಚ್ಚವಾದ ಬೇರೆ ಯಾವ ತತ್ವದ ಕಲ್ಪನೆಯೂ ಇರುವದಿಲ್ಲ. ಕಲೆಯನ್ನು ಕಲೆಗಾಗಿಯೇ ಆರಾಧನೆ ಮಾಡಬಹುದೆಂದು ನಿಮಗನಿಸುತ್ತಿದೆಯೆ ? ಮತ್ತು ಮಾಡಬಹುದಾದರೆ ಅದು ಇಷ್ಟವಿದೆಯೆ ?

“ ನಿಮ್ಮ ಬರಹದಲ್ಲಿ ಈಶ್ವರನ ಹೆಸರು ಅನೇಕ ಸಾರೆ ಬರುತ್ತದೆ ಮತ್ತು ಪ್ರಾರ್ಥನೆಯು ಈ ಜೀವನದಲ್ಲಿ ಬಹು ದೊಡ್ಡ ಭಾಗವಹಿಸುತ್ತದೆಂದು ನನಗೆ ಅನಿಸಿರುತ್ತದೆ. ಈ ಶಬ್ದದಿಂದ ನಿಮ್ಮ ಮನಸ್ಸಿನಲ್ಲಿ ಯಾವ ಕಲ್ಪನೆಯು ಬರುತ್ತದೆ? ಈಶ್ವರನು ಒಂದು ಶಕ್ತಿಯೊ ? ಅಥವಾ ಈ ದೃಶ್ಯ-ಜಗತ್ತಿನಿಂದ ಆಚೆಗಿರುವ ಯಾವುದೊಂದು ತತ್ವವೋ ಅಥವಾ ಮತ್ತೇನಾದರೂ ಇರುತ್ತದೆಯೊ ? ನೀವು ದೇವರನ್ನು ಒಪ್ಪುವದಾದರೆ ಏತಕ್ಕಾಗಿ ? ಶ್ರದ್ಧೆ, ಜ್ಞಾನ, ಭಕ್ತಿ ಅಥವಾ ಜೀವನದಲ್ಲಿ ಇಂಥ ಯಾವುದಾದರೊಂದು ಧ್ಯೇಯದ ಆವಶ್ಯಕತೆಗಾಗಿಯೆ ? ”

ಬಾಪೂರ ಉತ್ತರವು ಅವರ ಸಾರಗರ್ಭಿತ, ಮಿತಾಕ್ಷರಿ ಶೈಲಿಯ ಮಾದರಿ ಯಾಗಿದೆ. ಭಾರತಿಯ ಒಂದೊಂದು ಪ್ರಶ್ನೆಯ ಉತ್ತರವು ಅದರಲ್ಲಿ ಬಂದು ಹೋಗುತ್ತದೆ. ಆದರೆ ಅದರಲ್ಲಿ ಬಹಳ ಅಧ್ಯಾಹಾರವೂ ಇರುತ್ತದೆ : ಕಲೆ ಎಂದು ಏತಕ್ಕೆನ್ನಬೇಕೆಂಬ ಪ್ರಶ್ನೆಯು ಉಪಸ್ಥಿತವೇ ಇದೆ. ಸೌಂದರ್ಯವೆಂದು ಏತಕ್ಕೆನ್ನ ಬೇಕು ಎಂಬ ಪ್ರಶ್ನೆಯೂ ನಿಜವಷ್ಟೆ ? ಅನಂತ ಆಕಾಶದಲ್ಲಿಯ ಅಗಣ್ಯ ರವಿಗಳು, ಚಂದ್ರ ಮತ್ತು ತಾರೆಗಳು ನಮ್ಮ ವಶದಲ್ಲಿ ಬರಲಾರವು. ನಿರಂತರ ಜ್ಞಾನ-ಗಂಭೀರತೆ

ಯಲ್ಲಿ ಉಕ್ಕುತ್ತಿರುವ ಸಮುದ್ರವಂತೂ ವಶದಲ್ಲಿ ಬರುವದೇ ಇಲ್ಲ. ಆದರೆ ನಾವು ಈ ವಿಶ್ವದಲ್ಲಿ ಆದರ ಒಂದು ಬಿಂದುವಿನ ಒಂದು ಕೋಟ್ಯಾಂಶ ಭಾಗದಂಥ ಒಂದು ಪರಮಾಣುವಿಗೆ ಸರಿಯಾಗಿದ್ದೇವೆಂಬ ಪ್ರತೀತಿ ಮಾಡಿಕೊಡುತ್ತದೆ. ಭವ್ಯ ಹಿಮಾಚ್ಛಾದಿತ ಪರ್ವತ ಮತ್ತು ನದಿಗಳು—ಇವೆಲ್ಲವುಗಳಲ್ಲಿ ಅವಿಚ್ಛಿನ್ನ ಸೌಂದರ್ಯವು ತುಂಬಿರುತ್ತದೆ. ಈ ಸೌಂದರ್ಯವು ಮೂಢ ಮನುಷ್ಯನ ಹೊರತಾಗಿ ಉಳಿದವರ ಮೇಲೆ ಒಂದು ವಿಶಿಷ್ಟ ಪ್ರಕಾರದ ಉನ್ನತಿಕರ ಪರಿಣಾಮವನ್ನು ಮಾಡದೆ ಇರುವದಿಲ್ಲ. ಈ ಸೌಂದರ್ಯವು ಈ ತರಹದ ಪರಿಣಾಮ ಮಾಡುವ ಕಾರಣವೆಂದರೆ ಅದು ಪರಿಗ್ರಹ ಮತ್ತು ಉಪಭೋಗದ ಕ್ಷುದ್ರಭಾವನೆಯಿಂದ ಅಬಾಧಿತವಿರುತ್ತದೆ. ಕೆಂಟನು ಹೇಳುತ್ತಾನಲ್ಲವೆ ?

"Beauty gives us pleasure from the mere contemplation thereof apart from the vulgar idea of possession and use."

"ಪರಿಗ್ರಹ ಮತ್ತು ಉಪಭೋಗಗಳ ಸ್ಥೂಲ ವಿಚಾರಗಳನ್ನು ಬಿಟ್ಟು ಸೌಂದರ್ಯದ ಕೇವಲ ಚಿಂತನೆಯಿಂದ ನಮಗೆ ಆನಂದ ದೊರೆಯುತ್ತದೆ."

ಆದುದರಿಂದಲೇ ಅದು ಶಾಂತಿಪ್ರದವೂ, ಉನ್ನತಿಪ್ರದವೂ ಆಗಿದೆ. ಇದೇ ಮಾತು ಕಲೆ ಹಾಗೂ ಕಲೆಯ ಪಾತ್ರಗಳದೂ ಆಗಿದೆ. ಕಲೆಯು ಕೇವಲ ಆತ್ಮದ ಕಲೆಯಿದೆ, ಆತ್ಮದ ಪಡಿನೆಳಲಾಗಿದೆ. ಆದುದರಿಂದ ಆತ್ಮದ ರೂಪ, ರಸ, ಗಂಧಗಳಂತೆಯೇ ಕಲೆಯುವೂ ಇರುತ್ತವೆ. ರೂಪ, ರಸ, ಗಂಧಗಳು ಸಹ ಸಾಪೇಕ್ಷವಾಗಿರುತ್ತವೆ, ನಿರಪೇಕ್ಷವಿರುವದಿಲ್ಲ. ಕೇವಲ ರೂಪ, ರಸ, ಗಂಧಗಳಿಂದ ಕೃತಾರ್ಥರಾಗುವ ಪೀಟರ ಬೇಲರು ಅನೇಕರಿರಬಹುದು, ಇದ್ದಾರೆ. ಆದರೆ ಅದರಲ್ಲಿ ಕೃತಾರ್ಥತೆಯು ಇರುವದಿಲ್ಲ. ಕಲೆಗಾಗಿ ಕಲೆಯ ಆರಾಧನೆಯನ್ನು ಕಲಾಕಾರನಾಗಲಿ, ಕಲೆಯನ್ನು ಉಪಭೋಗಿಸುವವನಾಗಲಿ ಮಾಡಲಾರನು. ಕಲಾಕಾರನ ಆತ್ಮದ ಪಡಿನೆಳಲು ಕಲೆಯ ಮೇಲೆ ಬೀಳುವದು ಮತ್ತು ಕಲೆಯನ್ನು ಉಪಭೋಗಿಸುವವನು ಕಲೆಗೆ ಅನುಸಾರವಾಗಿ ಉನ್ನತಿಹೊಂದುವನು ಅಥವಾ ಅವನತಿಹೊಂದುವನು.

ಬಾಪೂ ಬೆಳಿಗ್ಗೆ ೯ ಗಂಟೆಗೆ ಮತ್ತು ಸಾಯಂಕಾಲ ೬ ಗಂಟೆಗೆ ದಿನಾಲು ಸೋಡಾ ಮತ್ತು ನಿಂಬೀಹಣ್ಣು ತೆಗೆದುಕೊಳ್ಳುತ್ತಾರೆ. ಬೇಸಿಗೆಯಲ್ಲಿ ನಿಂಬೀಹಣ್ಣು ತುಟ್ಟಿಯಾಗುತ್ತಿರುವದಿಂದ ಬಾಪೂ ವಲ್ಲಭಭಾಯಿಯವರಿಗೆ
೧೪-೬-'೩೨ ಹುಣಸೆಹಣ್ಣು ಸೂಚಿಸಿದರು. ಹುಣಸೆಹಣ್ಣಿನ ಗಿಡಗಳು ಜೇಲಿನಲ್ಲಿಯೇ ಬಹಳ ಇವೆ. ವಲ್ಲಭಭಾಯಿಯವರು ಈ ಮಾತನ್ನು ವಿನೋದದಲ್ಲಿ ತೆಗೆದರು : "ಹುಣಸೆ ಹುಳಿಯಿಂದ ಎಲುಬುಗಳು ಸಣ್ಣಾಗು

ತ್ತವೆ, ವಾತವಿಕಾರವಾಗುತ್ತದೆ" ಬಾಪೂ ಕೇಳಿದರು: "ಹಾಗಾದರೆ ಜಮುನಾಲಾಲಜಿ ಕುಡಿಯುತ್ತಾರೆ ಅದು ಹೇಗೆ?" ವಲ್ಲಭಭಾಯಿ: "ಜಮುನಾಲಾಲಜಿಯ ಎಲುಬಿನವರೆಗೆ ಮುಟ್ಟುವದಕ್ಕೆ ಹುಣಸೆ ಹುಳಿಗೆ ಮಾರ್ಗವೇ ಇಲ್ಲ." ಬಾಪೂ: "ಆದರೆ ಒಂದು ಸಮಯಕ್ಕೆ ನಾನು ಬಹಳ ಹುಣಸೆಹಣ್ಣನ್ನು ತಿಂದಿದ್ದೇನೆ." ವಲ್ಲಭಭಾಯಿ: "ಆ ಕಾಲಕ್ಕೆ ನೀವು ಕಲ್ಲು ತಿಂದು ಕರಗಿಸುತ್ತಿದ್ದಿರಿ. ಅದು ಇವತ್ತು ಹೇಗೆ ಸಾಧ್ಯ?"

* * *

ವಲ್ಲಭಭಾಯಿಯವರು ಈಗ ಪಾಕೀಟುಗಳನ್ನು ಮಾಡುವದರಲ್ಲಿ ನಿಪುಣರಾಗತೊಡಗಿದ್ದಾರೆ. ದಿನಾಲು ಒಂದಿಲ್ಲೊಂದು ಯುಕ್ತಿಯು ಹೊಳೆಯುತ್ತದೆ ಮತ್ತು ಕಾಗದದ ಪ್ರತಿಯೊಂದು ತುಂಡಿನ ಮೇಲೆಯೂ ಅವರ ದೃಷ್ಟಿಯಿರುತ್ತದೆ. ಬಾಪೂ ಹೇಳಿದರು: "ಆ ಬೆಕ್ಕಿನ ದೃಷ್ಟಿಯು ಹಲ್ಲಿಯ ಮೇಲೆ ಇರುವಂತೆಯೇ ನಿಮ್ಮ ದೃಷ್ಟಿಯು ನಿರುಪಯೋಗಿ ಕಾಗದಗಳ ಮೇಲೆ ಇರುತ್ತದೆ."

* * *

ಇವತ್ತು ಆಯ್. ಜಿ. ಪಿ. ಡೋಯಿಲ್ ಬಂದರು. ಬಾಪೂ 'ಸಿ' ವರ್ಗದವರಿಗೆ ಕಾಗದ ಮತ್ತು ಬರೆಯುವ ಸಾಮುಗ್ರಿಗಳನ್ನು ಕೊಡುವದರ ಸಲುವಾಗಿ ಬರೆದಿದ್ದರು. ಅದೇ ಕೆಲಸಕ್ಕಾಗಿ ಇವರು ಬಂದಿದ್ದರು. ಇವರ ವಿವೇಕಕ್ಕೆ ಮಿತಿ ಇರಲಿಲ್ಲ. ನಮ್ಮೆಲ್ಲರ ಸಂಗಡ ಹಸ್ತಾಂದೋಲನ ಮಾಡಿದರು. ಬಾಪೂಗೆ ಹೇಳಹತ್ತಿದರು: "ಕಾರ್ಯ ಬಾಹುಲ್ಯದ ಮೂಲಕ ಬರುವದಾಗಲಿಲ್ಲ. ನೀವು ಮಾಡಿದ ಬೇಡಿಕೆಯು ಅತ್ಯಂತ ಯೋಗ್ಯವೆಂದೆನಿಸುತ್ತಿದೆ ಮತ್ತು ನಾನು ಮೇಜರ ಭಂಡಾರಿಯವರಿಗೆ ಹೇಳುವೆನು. ಆದರೆ ಇದರ ಸಲುವಾಗಿ ನೀವು ಎಲ್ಲರಿಗೂ ಅನ್ವಯಿಸುವಂಥ ಆಜ್ಞೆಯನ್ನು ಕೇಳಬೇಡಿರಿ. ಯೋಗ್ಯ ಮನುಷ್ಯರಿಗೆ ಈ ಸಾಮಾನುಗಳನ್ನು ಕೊಡಬೇಕೆಂಬುದು ತಿಳಿಯುವಂಥ ಮಾತಾಗಿದೆ." ವಲ್ಲಭಭಾಯಿಗೆ ಹೇಳಿದರು: "ನಿಮ್ಮ ಮಗಳು ಪತ್ರ ಬರೆದಿದ್ದಾಳೆ. ಬೆಳಗಾವಿಯಿಂದ ಒಳ್ಳೆಯ ಸಹೋದರಿಯರನ್ನು ಕರೆತರಿಸುವ ವ್ಯವಸ್ಥೆ ಮಾಡುತ್ತಿದ್ದೇನೆಂದು ಅದಕ್ಕೆ ಉತ್ತರ ಬರೆದಿದ್ದೇನೆ. ಯೋಚನೆ ಮಾಡಬಾರದೆಂದು ಅವಳಿಗೆ ಬರೆಯಿರಿ." ಮನುಷ್ಯನು ಬಹಳ ಸರಳನೆಂದು ಅನಿಸಿತು. ಜೇಲರ ಕೇಳಿದರು: "ಮೊದಲನೇ ಸಾರೆಯೆ ಭೆಟ್ಟಿಯಾಗಿರುವರೇನು?" ನಾನು: "ಹೌದು, ವಿನೋದಿ ಮನುಷ್ಯನೆಂದು ಅನಿಸಿತು." ಜೇಲರ: "ನಿಮಗೆ ಅನುಭವವಿಲ್ಲ. ಮಾತಾಡುವದರಲ್ಲಿಯೇ ಒಳ್ಳೆಯವನಿದ್ದಾನೆ." ಬಾಪೂರ ಒಂದು ಕೆಲಸವನ್ನೂ ಬಿಡಲಿಲ್ಲ. ಇಷ್ಟೇ ಅಲ್ಲ ಕೆಲವನ್ನಂತೂ ಸಾಕಷ್ಟು ತ್ವರೆಯಿಂದ ಮಾಡಿದರೆಂದು ಹೇಳಬಹುದು. ಆದರೆ ನಮ್ಮ ಅನುಭವವೆಲ್ಲಿ ಮತ್ತು ಅವರ ಕೈ ಕೆಳಗಿನ ಜನರ ಅನುಭವವೆಲ್ಲಿ?

ಡೋಯಿಲರು ಒಂದು ಮಾತು ಹೇಳಿದರು: ಕೈದಿಯು ಹೊರಗೆ ಏನು ಮಾಡಿಬಂದಿರುವನೆಂಬ ವಿಚಾರವನ್ನು ಮಾಡಬಾರದೆಂಬುದು ನನ್ನ ಸಿದ್ಧಾಂತ. ಇಲ್ಲದಿದ್ದರೆ ನಾವು ನಮ್ಮ ಒಳ್ಳೆಯತನವನ್ನು ಕಾಯ್ದುಕೊಳ್ಳುವದೇ ಸಾಧ್ಯವಿಲ್ಲ. ಏನು? ಈ ಮಾತು ಸರಿಯಾಗಿದೆಯೆ? ಯಾವನೊಬ್ಬ ಮನುಷ್ಯನು ಜಗಳಗಂಟ ಸ್ವಭಾವದವನಿರಬಹುದು, ಕೊಲೆ ಮಾಡಿ ಬಂದಿರಬಹುದು, ಆದರೂ ಸಹ ಅವನನ್ನು ಎರಡನೆಯವರ ಸಂಗಡವೇ ಇಡಬೇಕೋ ಹೇಗೆ? ಒಂದು ವೇಳೆ ಇದು ಸರಿಯಾಗಿರಬಹುದು. ಮನುಷ್ಯನನ್ನು ತಲೆಬಾಗಿಲ ಒಳಗೆ ತಂದಮೇಲೆ ಅವನ ಸಂಗಡದ ವರ್ತನೆಯು ಅವನ ಜೇಲಿನೊಳಗಿನ ವ್ಯವಹಾರ ಮತ್ತು ನಡತೆಗಳನ್ನೇ ಅವಲಂಬಿಸಿರುತ್ತದೆ. ಅವನು ಮಾಡಿದ ಅಪರಾಧಗಳನ್ನೇ ಏಕೆ ಆಧಾರವಾಗಿ ಹಿಡಿಯಬೇಕು? ಆದರೂ ಸಹ ಕರಿಯ ಟೊಪ್ಪಿಗೆ, ಹಳದಿ ಟೊಪ್ಪಿಗೆ ಮೊದಲಾದವುಗಳು ಇವರನ್ನು ಬೇರೆ ಬೇರೆ ಮಾಡಿಯೇ ಮಾಡುತ್ತವೆ.

* * *

ಬಿರ್ಲಾರು ಕರನ್ಸಿ ವಿಷಯಕ್ಕೆ ಬರೆದ ಪುಸ್ತಕವನ್ನು ಓದುತ್ತ ಓದುತ್ತ ಬಾಪೂ ಹೇಳಿದರು: "ದೊಡ್ಡ ಕಳವು ಕಳವಲ್ಲ, ದೊಡ್ಡ ಲೂಟಿ ಲೂಟಿಯಲ್ಲ, ದೊಡ್ಡ ಪ್ರಮಾಣದ ಮೇಲಿನ ಹತ್ಯಾಕಾಂಡವು ಧರ್ಮಯುದ್ಧವು. ದೇಶದ ಬಂಗಾರವನ್ನು ಅಪಹರಿಸಿದರು, ಸುಖವನ್ನು ಅಪಹರಿಸಿದರು, ಧನವನ್ನು ಸೆಳೆಯುವದು ನಡೆಯುತ್ತಿದೆ. ಇಷ್ಟರಿಂದ ಸಂತುಷ್ಟರಾಗದೆ ಕರನ್ಸಿ ವಿನಿಮಯದ ಕಮಿಶನ್ನಿನ ಜಾಲ ರಚಿಸಿದರೂ ಅದರಿಂದಲೂ ಸಂತೋಷವಾಗದ್ದರಿಂದ ರಿಝರ್ವ ಲೂಟಿಮಾಡಿದರು. ಜಗತ್ತಿನಲ್ಲಿ ಯಾವದೇ ಒಂದು ದೇಶವು ಈ ಪ್ರಕಾರ ಸುಲಿಯಲ್ಪಟ್ಟಿರಲಿಕ್ಕಿಲ್ಲ ಮತ್ತು ಕೊಲ್ಲಲ್ಪಟ್ಟಿರಲಿಕ್ಕಿಲ್ಲ. ಮಹಮ್ಮದ ಗಜನಿಯು ಒಂದುಸಾರೆ ಸುಳಿಗೆ ಮಾಡಿ ಹೊರಟು ಹೋದನು. ಮೊಗಲರು ಸುಲಿಗೆ ಮಾಡಿರಬಹುದು, ಆದರೆ ಅದು ದೇಶದಲ್ಲಿಯೇ ಉಳಿಯಿತು. ಆದರೆ ಈ ಸುಲಿಗೆ !!"

ಡೋಯಿಲರು ಬಂದು ಹೋದದ್ದರಿಂದಲೂ ಮತ್ತು ಅವರು ಕೂಡಲೇ ಬೇಡಿಕೆಗಳನ್ನು ಮಾನ್ಯಮಾಡಿದ್ದರಿಂದಲೂ ಮೇಜರರಿಗೆ ಆಶ್ಚರ್ಯವಾಯಿತು. ಆದರೆ ಡೋಯಿಲರು ತೋರಿಸಿದ ಮುದ್ದೆಮಾಲನ್ನು ಜೇಲರನು
೧೫-೬-'೩೨ ಕೊಟ್ಟು ಬಂದಿರಬಹುದೆಂದು ನಾವು ಅಂದಾಜು ಮಾಡಿದ್ದೆವು
ಮತ್ತು ತಿಳಿದುಕೊಂಡಿದ್ದೆವು. ಆದರೆ ಅದನ್ನು ಜೇಲರನು ಕೊಟ್ಟುಬಂದಿಲ್ಲವೆಂದೂ ಅದು ಬೇರೆ ಜೇಲಿನದಿತ್ತೆಂದೂ ಅವನ ಸಂಗಡದ ಮಾತಿನ ಮೇಲಿಂದ ತಿಳಿಯಿತು. ಬಾಪೂ ಅಂದರು: "ನೋಡಿರಿ, ಈ ಮನುಷ್ಯನಿಗೆ ನಾವು

ಪುನಃ ಅನ್ಯಾಯ ಮಾಡಿದ್ದೇವೆ. ಯಾವದೇ ಮನುಷ್ಯನ ವಿಷಯಕ್ಕೆ ಕೂಡಲೇ ನಿರ್ಣಯ ಮಾಡುವದು ಗಂಡಾಂತರದ್ದು."

. . . ಹೊತ್ತು ಹೊತ್ತಿಗೆ ಉಪಯೋಗವಾಗುತ್ತಿದ್ದರೂ ನಿರರ್ಥಕ ಮತ್ತು ಕುತೂಹಲದಿಂದುಂಟಾಗುವ ಪ್ರಶ್ನೆಗಳನ್ನು ಕೇಳುತ್ತಾನೆ. ಬಾಪೂ ಅವನಿಗೆ ಪತ್ರ ಬರೆದರು:

"ನಾನು ಸಂಯಮಿ ಮತ್ತು ಬ್ರಹ್ಮಚಾರಿ ಜೀವನವನ್ನು ಪಾಲಿಸುತ್ತೇನೆ. ಆದುದರಿಂದ ನಾನು ದೀರ್ಘಾಯು ಆಗಲೇಬೇಕೆಂದು ನಿನ್ನಂತೆ ಬೇರೆಯವರೂ ತಿಳಿದಿದ್ದಾರೆ. ನಿಜವಾಗಿ ನೋಡಿದರೆ ನನ್ನ ವಿಷಯಕ್ಕೆ ಈ ತಿಳಿವಳಿಕೆಯು ಸರಿ-ಯಾದದ್ದಿರುವದಿಲ್ಲ, ಅಥವಾ ಎರಡನೆಯವರ ಸಂಗಡ ತುಲನೆ ಮಾಡಿದರೆ ಅಲ್ಪ ಸ್ವಲ್ಪ ಅಂಶದಲ್ಲಿ ಸರಿಯೆನಿಸಬಹುದು. ಸರ್ವಸಾಧಾರಣ ೩೦ ವರ್ಷ ವಯಸ್ಸಿನ ವರೆಗೂ ನಾನು ವಿಷಯ ಸೇವನೆಯನ್ನು ಮಾಡಿಯೇ ಇದ್ದೆನು. ತಿನ್ನುಣ್ಣುವ ಪದಾರ್ಥದಲ್ಲಿ ಸಂಯಮವಿತ್ತೆಂದೂ ಹೇಳಲಿಕ್ಕೆ ಬರುವದಿಲ್ಲ. ಕೇವಲ ರುಚಿ-ಗಾಗಿಯೇ ನಾನು ಎಷ್ಟೋ ಪದಾರ್ಥಗಳನ್ನು ತಿನ್ನುತ್ತಿದ್ದೆನು. ಆ ಮೇಲೆ ಸಾವಕಾಶವಾಗಿ ಜೀವನ ಪ್ರವಾಹವು ಸಂಯಮದ ಕಡೆಗೆ ಹೊರಳಿತು, ಇದರ ಅರ್ಥವು ನಾನು ಜಿತೇಂದ್ರಿಯನಾದೆನೆಂದು ಅಲ್ಲ. ಇಂದ್ರಿಯಗಳನ್ನು ವಶದಲ್ಲಿಟ್ಟು ಕೊಳ್ಳಲು ಕಲಿತೆನೆಂದು ಹೇಳಬಲ್ಲೆನು. ಈ ಪ್ರಕಾರ ಶರೀರದ ಮೇಲೆ ವಿಷಯ ಮುಂತಾದವುಗಳಿಂದ ಆಗುವ ಪರಿಣಾಮವು ಆಗಿಯೇ ಹೋಗಿತ್ತು. ಅದರಲ್ಲಿ ಎಷ್ಟು ಸಂಯಮ ದೊರೆಯಿತೋ ವಿಷಯದ ಅಷ್ಟು ಪರಿಣಾಮವು ಕಡಿಮೆಯಾಯಿತು. ನನ್ನಷ್ಟು ಸಹ ಸಂಯಮವನ್ನಿಡದ ಬೇರೆ ಸಮಕಾಲೀನರು ನನ್ನ ಅಲ್ಪ ಸ್ವಲ್ಪ ಸಂಯಮದಿಂದ ಮೋಹಿತರಾಗಬಲ್ಲರು. ಆ ಕಾರಣದಿಂದ ನನ್ನಲ್ಲಿರುವ ನ್ಯೂನತೆಗಳು ಅವರ ಲಕ್ಷ್ಯದಲ್ಲಿ ಬರದಿರುವ ಸಂಭವವಿದೆ."

ಜೇಲಿನಿಂದ ದೊರೆಯುವ ವಿಶೇಷ ಸವಲತ್ತುಗಳನ್ನು--ಯಾವದೇ ಉದ್ದೇಶದಿಂದಾಗಲಿ—ನೀವು ಬಿಡದಿದ್ದರೆ ಎರಡನೆಯವರ ಮೇಲೆ ಅದರ ಪರಿಣಾಮವು ಒಳ್ಳೆ-ತಾಗುವದಿಲ್ಲ ಎಂದು ಮೊದಲನೆ ಪತ್ರದ ಉತ್ತರದಲ್ಲಿ ಬರೆಯುಲಾಗಿತ್ತು. ಅದೇ ವಿಷಯದ ಸಂಬಂಧದಲ್ಲಿ ಬರೆದರು: "ನಾನು ಕೈದಿಯ ದೃಷ್ಟಿಯಿಂದ ಉಪಭೋಗಿಸುತ್ತಿರುವ ಸವಲತ್ತುಗಳು ವರ್ಗೀಕರಣದ ಕಾರಣಕ್ಕಾಗಿರುವದಿಲ್ಲ. ನನ್ನನ್ನು ಅಪರಾಧಿ ಕೈದಿಯೆಂದು ತಿಳಿಯುವದಿಲ್ಲ. ಇಂಥ ಕೈದಿಗಳಿಗೆ ಮೊದಲಿನಿಂದಲೂ ಅನೇಕ ಸವಲತ್ತುಗಳಿರುತ್ತವೆ. ಆದರೆ ಇದು ನನ್ನ ಕಾರ್ಯದ ಯಾವದೇ ಪ್ರಕಾರದ ಸಮರ್ಥನೆಯಲ್ಲ. ನನ್ನಂಥ ಕೈದಿಗಳಿಗೆ ಸರಕಾರವು ಕೆಲವು ವಿಶಿಷ್ಟ ಸವಲತ್ತುಗಳನ್ನು ಕೊಡುತ್ತದೆ. ಆದರೆ ಈ ಸವಲತ್ತುಗಳ ಉಪಯೋಗ ಮಾಡುವದು ಮಾಡ

ದಿರುವದು ಕೈದಿಗಳನ್ನೇ ಅವಲಂಬಿಸಿರುತ್ತದೆ. ಆದುದರಿಂದ ನೀನು ಬರೆಯುತ್ತಿರುವಂತೆ ತಪ್ಪುತಿಳುವಳಿಕೆಯುಂಟಾಗುವದು ತೀರ ಸ್ವಾಭಾವಿಕವು. ಈ ತಪ್ಪು ತಿಳುವಳಿಕೆಯಿಂದ ಉಂಟಾಗುವ ಗಂಡಾಂತರವನ್ನು ಸಹಿಸಿಕೊಂಡು ಸಹ ನಾನು ಈಗ ಉಪಭೋಗಿಸುತ್ತಿರುವ ಸವಲತ್ತುಗಳನ್ನು ಇನ್ನು ಮುಂದೆಯೂ ಉಪಯೋಗ ಮಾಡುತ್ತಿರುವದು ಸಾರ್ವಜನಿಕ ದೃಷ್ಟಿಯಿಂದ ಉಚಿತವೆನಿಸುತ್ತದೆ. ಆದರೆ ಈ ವಿಚಾರಶ್ರೇಣಿಯ ಸ್ಪಷ್ಟೀಕರಣ ಮಾಡುವ ಮಾತೇ ಏಳಬಾರದು. ಆದರ ಯೋಗ್ಯತೆಯು ಸ್ವಯಂಸಿದ್ಧವಾಗಿ ತೋರಬೇಕು. ಹೀಗಾಗದಿದ್ದರೂ ನನಗೆ ಅದು ಸರಿಯೆನಿಸುವವರೆಗೆ ನಾನು ಅದಕ್ಕೆ ಅಂಟಿಕೊಂಡೇ ಇರತಕ್ಕದ್ದು. ಈ ನೀತಿಯು ಮುಂದಾಳುಗಳಿಗೆ ಅನ್ವಯಿಸುತ್ತದೆ. ಮುಂದಾಳು ತಾನು ಹೋಗುತ್ತಿರುವ ಮಾರ್ಗದ ಕಾರಣವನ್ನು ಯಾವಾಗಲೂ ಹೇಳಲಾರನು. ತನಗೆ ಸರಿಯೆಂದು ತೋರುತ್ತಿರುವ ಮಾರ್ಗವನ್ನು ಎರಡನೆಯವರ ಮಾತು ಕೇಳಿ ಬಿಟ್ಟುಬಿಟ್ಟರೆ ಅವನು ಮುಂದಾಳುತನದ ಪದವಿಗೆ ಯೋಗ್ಯನಾಗಲಾರನು. ಇಂಥ ಮುಂದಾಳುಗಳು ತಮ್ಮ ಅಧಿಕಾರದಲ್ಲಿರುವವರ ಹಡಗುಗಳನ್ನು ಬಂಡೆಗಲ್ಲಿಗೆ ಒಯ್ದು ಅಪ್ಪಳಿಸಿದ್ದಾರೆ. ಆದುದರಿಂದ ನಿಮ್ಮಂಥವರು ಸಂಶಯವಿದ್ದಲ್ಲಿ ನನ್ನಂಥವನನ್ನು ಅವಶ್ಯ ಸಾವಧಾನ ಮಾಡಬೇಕು. ಆದರೆ ಎಚ್ಚರಿಕೆ ಕೊಟ್ಟ ಮೇಲೂ ಮುಂದಾಳು ತನ್ನ ಮಾರ್ಗವನ್ನು ಬಿಡದಿದ್ದರೆ ಅದೇ ಮಾರ್ಗ ಸರಿಯಾದದ್ದೆಂದು ಶ್ರದ್ಧೆಯಿಂದ ಒಪ್ಪಿಕೊಳ್ಳಬೇಕು. ಇಷ್ಟಾದ ಮೇಲೂ ಶ್ರದ್ಧೆಯು ಎಷ್ಟೋ ಸಾರೆ ತಪ್ಪು ನಿರ್ಣಯ ತೆಗೆದುಕೊಳ್ಳುತ್ತದೆ. ಆದರೆ ಜೀವನದಲ್ಲಿ ಸಮಾಜ ವ್ಯವಸ್ಥೆಯ ತಂತ್ರವು ಮತ್ತೆ ಬೇರೆ ಯಾವ ಪ್ರಕಾರದಿಂದಲೂ ಆಗದು. ಯಾವದೇ ವಿಶಿಷ್ಟ ಅಥವಾ ಒಂದೂ ಸಹ ಸವಲತ್ತನ್ನು ಉಪಭೋಗಿಸಬಾರದೆಂದೆನಿಸಿದಾಗ ಅದನ್ನು ತ್ಯಾಗಮಾಡುವ ಶಕ್ತಿ ನನ್ನಲ್ಲಿದೆಯೆಂದು ನನಗಂತೂ ಈಗ ಅನಿಸುತ್ತಿದೆ. ದಕ್ಷಿಣ ಆಫ್ರಿಕೆಯಲ್ಲಿ ತೀರ ಸಾಮಾನ್ಯ ಕೈದಿಯಂತಿರಲಿಕ್ಕೆ ನಾನು ಸಾಕಷ್ಟು ಸಮಯ ಕಲಿತಿದ್ದೇನೆ.

"ಕೃಷ್ಣದಾಸರ ವಿಷಯಕ್ಕೆ ನೀನು ಕೇಳಿದ್ದನ್ನು ಎಲ್ಲಿಂದ ಕೇಳಿರುವಿ ? ಈ ಮಾತು ತೀರ ಅಸತ್ಯವಿದೆ. ಕೃಷ್ಣದಾಸರನ್ನು ತೆಗೆದು ಹಾಕಿಯೇ ಇಲ್ಲ. ಎಷ್ಟೋ ಕಾರಣಗಳ ಸಲುವಾಗಿ ಅವರು ರಜೆಯನ್ನು ಬೇಡಿದ್ದರು. ಆದರೆ ರಜೆಯನ್ನು ತೆಗೆದುಕೊಂಡಾಗ್ಯೂ ಅವರ ಸಂಬಂಧವು ನಿರಂತರವಾಗಿಯೇ ಉಳಿದಿದೆ. ಯಾರದಾದರೂ ಪ್ರೇರಣೆಯಿಂದ ಇಂಥ ಕ್ರಮ ತೆಗೆದುಕೊಳ್ಳುವದು ನನ್ನ ಸ್ವಭಾವಕ್ಕೆ ವಿರುದ್ಧವಾಗಿದೆ. ಕೃಷ್ಣದಾಸರ ವಿಷಯಕ್ಕೆ ಯಾರೂ ನನಗೆ ಈ ಪ್ರಕಾರದ ಪ್ರೇರಣೆಯನ್ನು ಮಾಡಿಯೇ ಇದ್ದಿಲ್ಲ. ಆದರೆ ನಾನು ಈ ಮಾತಿನ ಮೂಲವನ್ನರಿಯಲು ಇಚ್ಛಿಸುತ್ತೇನೆ. ಆದುದರಿಂದ ತಿಳಿಸುವಂತಹದಿದ್ದರೆ ತಿಳಿಸು."

ಗೋರಖಪುರದಿಂದ ದೇವದಾಸನ ಬೇನೆಯ ವಿಷಯಕ್ಕೆ ತಾರು ಬಂತು. ಈಗ ನೆಟ್ಟಗಿದ್ದಾನೆ. ಜ್ವರವು ವಿಷಮಜ್ವರವಲ್ಲವೆಂದು ಹನುಮಾನ್ ಪ್ರಸಾದರು ತಾರಿನಿಂದ ತಿಳಿಸಿದ್ದಾರೆ. ಜ್ವರ ಬಂದದ್ದು ನಮಗೆ ಗೊತ್ತಿದ್ದಿಲ್ಲ.

೧೬-೬-'೩೨ ಬಾಪೂ ಜ್ವರದ ಬಗ್ಗೆ ಹೆಚ್ಚು ಸಮಾಚಾರ ತಿಳಿಸಲಿಕ್ಕೆ ತಾರು ಮಾಡಿದರು ಮತ್ತು ದೇವದಾಸನಿಗೆ ಪತ್ರ ಬರೆದರು:

" ಚಿ॥ ದೇವದಾಸ,

"ನನಗೆ ಅಂಜಿಕೆ ಇದ್ದೇ ಇತ್ತು. ಮೊನ್ನಿನ ದಿವಸ ಎಲ್ಲಿಂದಾದರೂ ಇಂಥ ಸುದ್ದಿ ಬರಲೇಬೇಕೆಂದು ಏನೋ ಅನ್ನಿಸಿತ್ತು. ಇಷ್ಟರಲ್ಲಿಯೇ ನಿನ್ನೆ ತಾರು ಬಂತು. 'ಈ ತಾರು ಏತರ ಬಗ್ಗೆ ಇದೆ?' ಎಂದು ವಲ್ಲಭಭಾಯಿಯವರನ್ನು ಕೂಡಲೇ ಕೇಳಿದೆನು. ಅದು ನಿನ್ನ ಬೇನೆಯ ವಿಷಯಕ್ಕೆ ಹೊರಟಿತು. ನೀನು ಗೋರಖಪುರ ದಲ್ಲಿ ಇದ್ದು ಜ್ವರದಿಂದ ಪಾರಾಗುವದು ಅಸಂಭವವಿತ್ತು. ಆದರೆ ಈ ಪತ್ರ ಮುಟ್ಟುವ ಹೊತ್ತಿಗೆ ನಿನ್ನ ಜ್ವರ ಆರಿರುವವೆಂದು ನಾನು ತಿಳಿಯುತ್ತೇನೆ. ನಿನ್ನ ಸ್ವಭಾವಕ್ಕನುಸಾರವಾಗಿ ಇಂಥ ಹೊತ್ತಿನಲ್ಲಿ ನಿನ್ನ ಹತ್ತರ ಗೆಳೆಯರು ಮತ್ತು ಆಪ್ತೇಷ್ಟರು ಸುತ್ತಿಕೊಂಡು ಕುಳಿತರೆ ನಿನಗೆ ನೆಟ್ಟಗನಿಸುತ್ತದೆಂದು ನಾನು ತಿಳಿದಿರು ತ್ತೇನೆ. ನೀನು ಇದಕ್ಕೆ ಹಕ್ಕುದಾರನೂ ಇರುವಿ ಯಾಕಂದರೆ ನೀನು ಬಹಳ ಜನರ ಸೇವೆಯನ್ನು ಮಾಡಿದ್ದಿ. ಆದರೆ ನಾನು ಕಲ್ಲೆದೆಯವನಾಗಿದ್ದೇನೆ. ಆದುದರಿಂದ ಪಶ್ಚಿಮದಿಂದ ಓಡಿ ಅಲ್ಲಿಗೆ ಹೋಗಲಿಕ್ಕೆ ಯಾರಿಗಾದರೂ ಪ್ರೇರಣೆ ಮಾಡಬೇಕೆಂದು ಮನಸ್ಸಾಗಲೊಲ್ಲದು. ಆದರೂ ಅದನ್ನು ಹತ್ತಿಕ್ಕುತ್ತೇನೆ. ತತ್ವಜ್ಞಾನವನ್ನು ನಿನ್ನ ಮೇಲೆ ಒರೆ ಹಚ್ಚದಿದ್ದರೆ ಯಾರ ಮೇಲೆ ಹಚ್ಚಲಿ? ನೀನು ಇದನ್ನು ತಿಳಿದು ಕೊಳ್ಳಬೇಕು, ಸಹನಮಾಡಬೇಕು ಮತ್ತು ಆನಂದದಿಂದಿರಬೇಕೆಂದು ನಾನು ಇಚ್ಛಿಸುತ್ತೇನೆ. ನಿನ್ನ ಆಪ್ತೇಷ್ಟರು, ಮಿತ್ರರು ಮತ್ತು ತಾಯಿತಂದೆಗಳು ಎಲ್ಲರೂ ಈಶ್ವರನೇ ಇದ್ದಾನೆ. ಉಳಿದವರು ಹೆಸರಿಗೆ ಇದ್ದಾರೆ. ಅವರು ಸ್ವತಃ ಅಸಹಾಯ ರಿದ್ದಾರೆ. ಅವರು ಇಚ್ಛಿಸಿದ್ದು ಆಗುತ್ತಿದೆಯೆ? ಈ ಒಡಕು ಪಾತ್ರೆಯ ಆಶ್ರಯ ತಗೆದುಕೊಳ್ಳುವದಕ್ಕಿಂತ ಸರ್ವವ್ಯಾಪಕ ಶಕ್ತಿಯ ಆಶ್ರಯವನ್ನು ತಗೆದುಕೊ. ಅವನು ತನ್ನ ಇಚ್ಛೆಗೆ ಬಂದಂಥ ಸಹಾಯವನ್ನು ನಿನ್ನ ಸಲುವಾಗಿ ಕಳಿಸಿಕೊಡುವನು. ನೀನು ಇದ್ದಲ್ಲಿ ನಿನ್ನ ನೆರೆಹೊರೆಯವರನ್ನು ನಿನ್ನ ಕಡೆಗೆ ಆಕರ್ಷಿಸಿಕೊಳ್ಳುವಿಯೆಂದು ನನ್ನ ವಿಶ್ವಾಸವಿದೆ. ಜೇಲಿನಲ್ಲಿ ಬೇರೆ ಅನುಭವ ಬರುವ ಕಾರಣವಿಲ್ಲ.

"ಇಷ್ಟು ಬರೆದ ಮೇಲೆ ಸಹ ಆಶ್ರಮದೊಳಗಿನ ಯಾರದಾದರೂ ಆವಶ್ಯಕತೆ ಯೆನಿಸಿದರೆ ತಾರು ಕೊಡು. ಆದರೆ ಈ ಪತ್ರ ಮುಟ್ಟುವತನಕ ನಿನ್ನ ಬೇನೆಯು ಹಳೆಯಮಾತಾಗಿರಬಹುದೆಂದು ನಾನು ಆಶಿಸುತ್ತೇನೆ. ನಮ್ಮೆಲ್ಲರ ಆಶೀರ್ವಾದಗಳು ನಿನ್ನ ಕಿಸೆಯಲ್ಲಿಯೇ ಇರುತ್ತವೆ."

ಇವತ್ತು ಶ್ರೀಮತಿ ನಾಯಡೂರ ಒಂದು ಸುಂದರ ಪತ್ರ ಬಂತು. ಅದರಲ್ಲಿ ಅವರು ತಮ್ಮ ಉತ್ತಮ ಅಡಿಗೆಯ ಮಾತನ್ನು ಹೇಳುತ್ತಾರೆ :

"Samples of wonderful cookery: Toffee made of tamarind pulp and jaggery, khichri cooked in a broth of drumsticks and other delicacies purely original and spontaneous in inspiration!"

"ನನ್ನ ಆಶ್ಚರ್ಯಕಾರಕ ಅಡಿಗೆಯ ಮಾದರಿ. ಹುಣಸೆಯ ಹುಳಿ ಮತ್ತು ಬೆಲ್ಲದ ಟಾಫೀ. ( ಸೀ ಸಾರು ), ನುಗ್ಗಿಕಾಯಿ ಕೂಡಿಸಿ ಮಾಡಿದ ಕಿಚಡಿ, ಮತ್ತು ಬೇರೆ ಎಷ್ಟೊ ಸ್ವಾದಿಷ್ಟ ಪದಾರ್ಥಗಳು ಅತ್ಯಂತ ಮೌಲಿಕವಾದವುಗಳು ಮತ್ತು ಸ್ವಯಂಪ್ರೇರಿತವಾದವುಗಳು !"

ಇದರ ಮೇಲಿಂದ ನಾನು ವಲ್ಲಭಭಾಯಿಯುವರಿಗೆ ಹೇಳಿದೆ: "ಜೇಲಿನಿಂದಲೇ ನುಗ್ಗೀಕಾಯಿ ದೊರೆತರೆ ನಾನು ನಿಮ್ಮ ಸಲುವಾಗಿ ಸಿದ್ಧಮಾಡಿ ಕೊಡುವೆನು." ವಲ್ಲಭಭಾಯಿ ಅಂದರು : "ಹೋಗೋ, ಇದು ನಿನ್ನಿಂದೇನಾಗುತ್ತದೆ?" ಬಾಪೂ ಹೇಳಿದರು: "ವಲ್ಲಭಭಾಯಿಗೆ ಅವನ್ನು ಝುಣಕದಲ್ಲಿ ಹಾಕಿ ಚನ್ನಾಗಿ ಮಾಡಿದ್ದು ಬೇಕು ಮತ್ತು ನೀನು ಬೇಯಿಸಿದ ಕಾಯಿಗಳ ಬಗ್ಗೆ ಮಾತಾಡುತ್ತಿ!" ಮತ್ತೆ ಅಂದರು: "ಜಗತ್ತಿನಲ್ಲಿ ಎಲ್ಲಿಯಾದರೂ ಪಲ್ಲೆಯನ್ನು ಕೆಡಿಸಿ ತಯಾರಿಸುತ್ತಿದ್ದರೆ ಅದು ಹಿಂದುಸ್ತಾನದಲ್ಲಿ. ಸಿಬನ್ನನ ಪುಸ್ತಕದ ಪ್ರಾರಂಭದಲ್ಲಿ ರೋಮ ದರಬಾರದ ಊಟ ಮತ್ತು ಐಷಾರಾಮದ ವಿಷಯಕ್ಕೆ ಬರೆದಂತೆಯೇ ನಮ್ಮ ಸ್ಥಿತಿಯಿದೆ. ನಾವು ತಿನ್ನುವದರಲ್ಲಿ ಎಷ್ಟೋ ಪ್ರಕಾರದ ಕೃತ್ರಿಮ ಸ್ವಾದವನ್ನುಂಟು ಮಾಡಿದೆವು, ಎಷ್ಟೋ ಮಸಾಲೆಗಳನ್ನು ಹುಡುಕಿದೆವು. ಮತ್ತು ಈ ಮಸಾಲೆಗಳ ಸ್ವಾದಕ್ಕಾಗಿಯೇ ಪಲ್ಲೆಯನ್ನು ತಿನ್ನುತ್ತೇವೆ." ನಾನು: "ಎಷ್ಟೋ ಪದಾರ್ಥಗಳು ಮಸಾಲೆಯ ಹೊರತು ತಿನ್ನಲಿಕ್ಕೇ ಬರುವದಿಲ್ಲ. ಸಿಹಿ ಸೂರಣಗಡ್ಡೆಯನ್ನು ಬೇಯಿಸಿ ತಿನ್ನಬಹುದು, ಆದರೆ ಖಾರವಿದ್ದರೆ ಅದನ್ನು ಒಲೆಯಲ್ಲಿ ಸುಟ್ಟು ತೆಗೆದು ಹಿಂದಿನಿಂದ ಅದರಲ್ಲಿ ಬೆಲ್ಲ, ಹುಣಿಶೆ ಮತ್ತು ಮಸಾಲೆಯನ್ನು ಹಾಕಬೇಕು." ಬಾಪೂ ಹೇಳಿದರು: "ಹಾಗಾದರೆ ಈ ಸೂರಣಗಡ್ಡೆ ತಿನ್ನಲಿಕ್ಕೆ ಯೋಗ್ಯವೆಂದು ನಾನು ತಿಳಿಯುವದಿಲ್ಲ. 'ಅರವೀ' ( ಒಂದು ಪ್ರಕಾರದ ಪಲ್ಲೆ ) ಎಲೆಗಳನ್ನು ಯಾರೂ ಬೇಯಿಸಿ ತಿನ್ನುವದಿಲ್ಲ. ಯಾಕಂದರೆ ಅದನ್ನು ತಿನ್ನಲಿಕ್ಕಾಗುವದಿಲ್ಲ; ಮತ್ತು ಅದನ್ನು ತಿನ್ನಲಿಕ್ಕಾಗುವದಿಲ್ಲವಾದ್ದರಿಂದ ಅದರಲ್ಲಿ ಕಡಲೆಹಿಟ್ಟು, ಮಣ್ಣು ಮಸಂಟು ಮುಂತಾದ್ದನ್ನು ಹಾಕುತ್ತಾರೆ. ಈ ಎಲೆಗಳು ತಿನ್ನಲಿಕ್ಕೆ ಯೋಗ್ಯವಾದವುಗಳಲ್ಲವೆಂದು ಯಾಕೆ ತಿಳಿಯಬಾರದು?"

* * *

ಹೋರ ಬೆಲಿಶಾ ಹೇಳುತ್ತಾನೆ: "೧೬೦ ಲಕ್ಷ ಪೌಂಡು ವಿದೇಶೀ ಸಾಮಾನು ಬರುವದು ಕಡಿಮೆಯಾಯಿತು. ದೇಶದಲ್ಲಿ ಇಷ್ಟು ಉಳಿತಾಯವಾಯಿತು. ಆದರೆ ನಮ್ಮ ಸಾಮಾನು ಸಹ ವಿದೇಶಕ್ಕೆ ಹೋಗುವದು ನಿಂತುಹೋಯಿತು. ಅದಕ್ಕೇನು ಮಾಡಬೇಕು? ಸಾಮ್ರಾಜ್ಯದ ಒಳಗೆ ಸ್ವತಂತ್ರ ವ್ಯಾಪಾರ ಧೋರಣೆಯನ್ನು ನಿಶ್ಚಿತ ಮಾಡಬಹುದಾದಂಥ ಲೋಜಾನ ಮತ್ತು ಓಟಾವಾದಲ್ಲಿಯೇ ಈ ಕಠಿಣ ಪ್ರಶ್ನೆಯು ಬಿಡಬಹುದು. ಆದರೆ ಯಾರೂ ನಮ್ಮ ಸಾಮಾನು ಖರೀದಿ ಮಾಡದಿದ್ದರೆ ಒತ್ತಾಯ ದಿಂದ ಹೇಗೆ ಖರೀದಿ ಮಾಡಲಿಕ್ಕೆ ಹಚ್ಚುವದು ಸಾಧ್ಯ?"

ವಿನಾಶಕಾಲೇ ವಿಪರೀತ ಬುದ್ಧಿ. ಇವರಿಗೆ ವ್ಯಾಪಾರ ಕಾಯಂ ಇಡಬೇಕಾಗಿದ್ದರೆ ಹಾಜಿ ಹಾರೂನ ಹಾರೂನ, ಷಣ್ಮುಖಮ್ ಚೆಟ್ಟಿ ಮತ್ತು ಅತುಲ ಚಟರ್ಜಿ ಇವರ ಮುಖಾಂತರ ಆಗಬಹುದೊ ಅಥವಾ ಇದಕ್ಕಾಗಿ ಗಾಂಧೀ, ಪುರುಷೋತ್ತಮ ದಾಸ ಮತ್ತು ಬಿರ್ಲಾರನ್ನು ಕೇಳುವ ಅವಶ್ಯಕತೆಯುಂಟಾಗಬಹುದೊ?

* * *

ಈ ಸಾರೆ ಆಶ್ರಮಕ್ಕೆ ಬರೆದ ಪತ್ರವು ವಾಡಿಕೆಯಂತೆ ಮಹತ್ವದ್ದಿತ್ತು. ಇದರಲ್ಲಿ ನೌಕರರನ್ನು ಇಟ್ಟುಕೊಳ್ಳುವ ಕರಾರುಗಳಲ್ಲಿ ಇಷ್ಟು ಸೂಚನೆಗಳು ಮಾತ್ರ ಇರುತ್ತವೆ: ಅವರು ಖಾದಿಯನ್ನು ಧರಿಸಬೇಕು, ಮಕ್ಕಳನ್ನು ಕಲಿಯಲಿಕ್ಕೆ ಕಳಿಸಬೇಕು ಮತ್ತು ಮದ್ಯಪಾನದ ವ್ಯಸನವಿರಬಾರದು. ಇದು ಸರಿಯಾದ ಮಾತು. "ನಾವು ಅವರ ಜೀವನದಲ್ಲಿ ಪ್ರವೇಶಮಾಡುವೆವು, ಅವರ ಸುಖದುಃಖಗಳಲ್ಲಿ ಭಾಗಿಯಾಗುವೆವು ಮತ್ತು ಅವರ ಮಕ್ಕಳುಮರಿಗಳ ಪರಿಚಯ ಮಾಡಿಕೊಳ್ಳುವೆವೆಂಬ ವಿಶ್ವಾಸವು ನಮಗಿರಬೇಕು. ಅಂದರೆ ಉಳಿದ ನಿಯಮಗಳನ್ನು ಸ್ವೇಚ್ಛೆಯಿಂದಲೂ ಜ್ಞಾನಪೂರ್ವಕವಾಗಿಯೂ ಪಾಲನಮಾಡುವರು." ಮುಂತಾಗಿ. ನಮ್ಮ ಸಂಗವು ಸತ್ಸಂಗವೆಂಬುದನ್ನು ನಾವು ಸಿದ್ಧ ಮಾಡಿಕೊಡಬೇಕು! ಇದಾದ ನಂತರ ಭರಾವದ (ಒಂದು ಹಿಂದುಳಿದ ಜಾತಿ) ಸಂಗಡ ಗೆಳೆತನವನ್ನು ಮಾಡುವ ಸೂಚನೆಯಿದೆ—ಧೈರ್ಯವಿದ್ದರೆ ಮಾಡಬಹುದು–ಶಕ್ತಿಯು ಹೊರಗಿದ್ದರೆ ಇಲ್ಲ. "ಇವರೆಲ್ಲರ ಸಂಗಡ ಗೆಳೆತನವನ್ನು ಮಾಡುವದಕ್ಕೆ ಸರಳ ಶಾಸ್ತ್ರೀಯ ನಿಯಮವು ನಾವು ಶೂನ್ಯವತ್ ಆಗಿರಬೇಕೆಂದು ಹೇಳುತ್ತದೆ." ಆದರೆ ಜಡ ಅಥವಾ ಮೂಢ ಮನುಷ್ಯನು ಅಥವಾ ಪೂರ್ಣ ಜ್ಞಾನಿ ಮನುಷ್ಯನು ಶೂನ್ಯವತ್ ಆಗಿರಬಲ್ಲನು. ಎರಡದರಲ್ಲಿ ಒಂದೂ ಇರದಂಥವನಿಗೆ ಇದು ದುಸ್ಸಾಧ್ಯ ವಸ್ತುವಾಗಿದೆ.

ಪರಶುರಾಮನ ಒಬ್ಬ ಮಗನು ಕಾನಪುರದಲ್ಲಿ ಬಹಳ ಕಾಯಿಲೆ ಬಿದ್ದಿದ್ದನು. ಕೆಲಸ ಬಿಟ್ಟು ಹೋಗುವ ಧೈರ್ಯವಾಗಲೊಲ್ಲದು ಆದರೂ ಮನಸ್ಸಿಗೆ ಸಮಾಧಾನವಾಗಲೊಲ್ಲದು. ಅವನಿಗೆ ಬಾಪೂ ಬರೆದರು: "ನಿನ್ನ ಹತ್ತರ ಅವನನ್ನು ನೆಟ್ಟಗೆ

ಮಾಡುವ ಗಿಡಮೂಲಿಕೆಗಳಿದ್ದರೆ ಅಥವಾ ನೀನು ಅಲ್ಲಿ ಇರುವದೇ ಗಿಡಮೂಲಿಕೆಯ ಕೆಲಸ ಮಾಡುತ್ತಿದ್ದರೆ ಹೋಗುವದು ನಿನ್ನ ಧರ್ಮವಾಗಬಹುದು. ಅಂದರೆ ನೀನು ಕೈಯಲ್ಲಿ ತೆಗೆದುಕೊಂಡ ಕೆಲಸದಿಂದ ಬಿಡುಗಡೆಯಾಗುತ್ತಿದ್ದರೆ ಇಂಥ ಸಮಯದಲ್ಲಿ ಹೋಗಲಿಕ್ಕೇಬೇಕು, ಆದರೆ ಅದು ವಿಮಲೆಯ ಸಹೋದರನ ಸಲುವಾಗಿ ಅಲ್ಲ. ಇಂಥ ಸ್ಥಿತಿಯಲ್ಲಿ ಯಾರೇ ಬೇನೆ ಬಿದ್ದಿರಲಿ, ಅವನ ಸಲುವಾಗಿ ನೀನು ಹೋಗುವದು ಗಿಡಮೂಲಿಕೆಯಂತೆ ಸಿದ್ಧವಾಗುತ್ತಿದ್ದರೆ ಹೋಗಲಿಕ್ಕೆಬೇಕು. ಇಂಥ ಅನುಭವ ಗಳನ್ನು ಪಡೆಯುತ್ತಾ ಪಡೆಯುತ್ತಾ ಮನುಷ್ಯನು ಹೃದಯದೌರ್ಬಲ್ಯವನ್ನು ತೆಗೆದು ಹಾಕುತ್ತಾನೆ. ಆ ಮಗುವಿನ ಪ್ರಕೃತಿಯು ನೆಟ್ಟಗಾಗಿರಬಹುದೆಂದು ನಾವು ಆಶಿಸುತ್ತೇವೆ."

ಎಷ್ಟೋ ಜನರು ಕೇವಲ ಸ್ಪರ್ಧೆಯ ಭಾವನೆಯಿಂದ ಶಕ್ತಿ ಮೀರಿ ಬಹಳ ಕೆಲಸಮಾಡುತ್ತ ಹೋಗುತ್ತಾರೆ. ಅವರ ಸಲುವಾಗಿ ಹೆಚ್ಚಿನ ಹೆಚ್ಚು ತಾಸುಗಳನ್ನು ಗೊತ್ತುಮಾಡಬೇಕು. ಈ ಸೂಚನೆಯ ವಿಷಯಕ್ಕೆ ಬರೆದರು : " ಕೆಲಸದ ಸಲುವಾಗಿ ಹೆಚ್ಚಿನ ಹೆಚ್ಚು ತಾಸುಗಳನ್ನು ಗೊತ್ತುಮಾಡುವದಾದರೆ ಗೊತ್ತುಮಾಡಬೇಕು. ಆದರೆ ಅದು ಪ್ರತಿಯೊಬ್ಬರ ಸಲುವಾಗಿ ಬೇರೆ ಬೇರೆಯಾಗಬಲ್ಲದೆಂದು ನನಗೆನಿಸು ತ್ತದೆ. ಎಲ್ಲಿ ಕೌಟುಂಬಿಕ ಭಾವನೆಯಿದೆ. ಮತ್ತು ಎಲ್ಲಿ ಪ್ರತಿಯೊಬ್ಬ ಮನುಷ್ಯನು ತಾನು ಎರಡನೆಯವರಷ್ಟೇ ಹೊಣೆಗಾರನೆಂದು ತಿಳಿದುಕೊಳ್ಳುತ್ತಾನೆ, ಅಲ್ಲಿ ಎಲ್ಲರ ಸಲುವಾಗಿ ಹೆಚ್ಚಿನ ಹೆಚ್ಚು ಮರ್ಯಾದೆಯನ್ನು ಗೊತ್ತುಮಾಡುವದು ಅಸಂಭವ-ವಿದ್ದೇ ಇರುತ್ತದೆ, ಒಂದುವೇಳೆ ಅಯೋಗ್ಯವೂ ಆಗಬಹುದು. ಯಾವ ಶರೀರವು ಕೆಲಸ ಕೊಡುತ್ತದೆ, ಯಾರ ಮನಸ್ಸು ಸಿದ್ಧವಿದೆ ಮತ್ತು ಯಾರ ಹತ್ತರ ಬೇರೆ ಯಾವದೂ ಹೆಚ್ಚಿನ ಸೇವೆಯ ಕೆಲಸವಿಲ್ಲ ಅವನು ತನ್ನ ಸಮಯವನ್ನು ಸಂಸ್ಥೆಯ ಸೇವೆಗೆ ಕೊಡಲೇಬಾರದೆಂಬ ನಿಯಮವನ್ನು ಹೇಗೆ ಮಾಡಲಿಕ್ಕೆ ಬಂದೀತು ? ಆದುದರಿಂದ ನಾನು ಇಷ್ಟೇ ಸಾರವನ್ನು ತೆಗೆಯುತ್ತೇನೆ : ನಮ್ಮ ಕೆಲಸದಲ್ಲಿ ಪ್ರತಿ ಯೊಂದು ಸ್ಥಳದಲ್ಲಿಯೂ ವಿವೇಕವಿರಬೇಕು, ಸಾತ್ವಿಕತೆಯಿರಬೇಕು, ಗೊಂದಲವಿರ ಬಾರದು ಅಂದರೆ ಯಾರಿಗೂ ಭಾರವೆನಿಸುವದೇ ಇಲ್ಲ. ಭಾರವು ಯಾವಾಗಲೂ ನಾವು ಹೊರಗಿನ ಒತ್ತಾಯದಿಂದ ಏನಾದರೂ ಮಾಡಿದರೆ ಆಗ ಅನಿಸುತ್ತದೆ. ಸ್ವೇಚ್ಛೆಯಿಂದಲೂ ಆನಂದದಿಂದಲೂ ಮಾಡಿದ ಕೆಲಸವು ಭಾರವೆನಿಸುವದಿಲ್ಲ. ಆದರೆ ಆಸುರೀ ಪ್ರವೃತ್ತಿಯಿದ್ದವನು ಸ್ವಾರ್ಥವಶನಾಗಿ ತನ್ನ ಶರೀರದಿಂದ ಎಷ್ಟೋ ಪ್ರಕಾರದ ಕೆಲಸಗಳನ್ನು ತೆಗೆದುಕೊಳ್ಳುತ್ತಾನೆ ಮತ್ತು ಹಿಂದಿನಿಂದ ಒದ್ದಾಡು ತ್ತಾನೆ. ಇಂಥ ಮನುಷ್ಯನು ಸ್ವಸ್ಥಚಿತ್ತನಿರುವದೇ ಇಲ್ಲ, ಅಂಥವರನ್ನು ನಾವು ಯಾವದೇ ರೀತಿಯಿಂದ ಆದರ್ಶವೆಂದೂ ತಿಳಿಯುವದಿಲ್ಲ."

ಇದೇ ಪತ್ರದಲ್ಲಿ ಇನ್ನೊಂದು ಉದ್ಗಾರ: "ವ್ಯಭಿಚಾರಿಗೆ ಸ್ತ್ರೀಯು ಅವ ಗುಣದ ಖಣಿಯಾಗಿದ್ದಾಳೆಂದು ಹೇಳಿದರೆ ತಪ್ಪಾಗದು. ಧನಲೋಭಿಗೆ ಬಂಗಾರದ ಖಣಿಗಳು ನರಕದ ಖಣಿಗಳಾಗಿದ್ದರೂ ಜಗತ್ತಿಗೆ ಇವು ನರಕದ ಖಣಿಗಳಿರುವದಿಲ್ಲ, ಬಂಗಾರದ ಸದುಪಯೋಗವು ಬಹಳವಿರುತ್ತದೆ."

ನಾರಾಯಣಪ್ಪನಿಗೆ ಬರೆದರು:

"There is nothing like finding one's full satisfaction from one's daily task however humble it may be. To those that wait and watch and pray God always brings greater tasks and responsibilities."

"ನಮ್ಮ ದೈನಂದಿನ ಕೆಲಸಗಳು ಎಷ್ಟೇ ಸಣ್ಣವಿದ್ದರೂ ಅವುಗಳಿಂದ ನಾವು ಪೂರ್ಣ ಸಂತೋಷ ಪಡೆಯುತ್ತಿದ್ದರೆ ಇದರಂಥ ಉತ್ತಮವಾದದ್ದು ಬೇರೆ ಯಾವದೂ ಇಲ್ಲ. ಯಾರು ಮಾರ್ಗ ನಿರೀಕ್ಷಣಮಾಡುತ್ತಾರೆಯೋ, ಜಾಗ್ರತರಾಗಿರು-ತ್ತಾರೆಯೊ ಮತ್ತು ಪ್ರಾರ್ಥನೆ ಮಾಡುತ್ತಾರೆಯೊ ಅಂಥವರ ಸಲುವಾಗಿ ದೇವರು ದೊಡ್ಡ ಕೆಲಸಗಳನ್ನೂ ಹೆಚ್ಚಿನ ಹೊಣೆಗಾರಿಕೆಯನ್ನೂ ತಂದುಕೊಡುತ್ತಾನೆ."

ಮೀರಾಗೆ ಬರೆದ ಪತ್ರದಲ್ಲಿ ಕೈ ನೋವು ಮತ್ತು ಉಪ್ಪಿಲ್ಲದ ಆಹಾರದ ವರ್ಣನೆ ಮಾಡಿ ಬರೆಯುತ್ತಾರೆ:—

"There is a splendid sentence in Sir Jeans' book: 'Life is a progress towards death'. Another reading may be life is a preparation for death. And somehow or other we quail to think of that inevitable and grand event. It is grand event as a preparation for a better life than the past, as it should be for every one who tries to live in the fear of God."

"ಸರ್ ಜೇಮ್ಸ ಜೀನ್ಸನ ಪುಸ್ತಕದಲ್ಲಿ ಒಂದು ಶ್ರೇಷ್ಠ, ಸುಂದರ ವಾಕ್ಯವಿದೆ. 'ಜೀವನವು ಸಾವಿನಕಡೆಯ ಪ್ರಗತಿಯು.' ಇನ್ನೊಂದು ರೀತಿಯಿಂದ 'ಜೀವನವು ಮೃತ್ಯುವಿನ ಸಿದ್ಧತೆ' ಎಂದೂ ಹೇಳಬಹುದು. ಆದರೆ ನಾವು ಈ ಅನಿವಾರ್ಯ ಮತ್ತು ಗಂಭೀರ ಪ್ರಸಂಗದ ವಿಚಾರ ಮಾಡುವ ಕಾಲಕ್ಕೆ ನಮಗೆ ಯಾಕೆ ನಡುಗು ಹುಟ್ಟು-ತ್ತದೆ ಯಾರಿಗೆ ಗೊತ್ತು? ನಮ್ಮ ಭೂತಕಾಲದ ಜೀವನಕ್ಕಿಂತ ಹೆಚ್ಚು ಉತ್ತಮ ಜೀವನದ ಸಿದ್ಧತೆಯ ದೃಷ್ಟಿಯಿಂದ ಈ ಪ್ರಸಂಗವು ದಿವ್ಯವಾಗಿದೆ. ದೇವರಿಗೆ ಅಂಜಿ ನಡೆಯುವ ಪ್ರಯತ್ನ ಮಾಡುವವರಿಗಂತೂ ಅದು ಯಾವಾಗಲೂ ಉತ್ತಮ ಜೀವನದ ಸಿದ್ಧತೆ ಇರುತ್ತದೆ."

. . . ರು ಕೇಳಿದರು : “ ವಿಷದ ಹಾವು ಶರೀರದ ಮೇಲಿಂದ ಹಾಯ್ದು ಹೋದ ಸಂಗತಿಯು ನಿಜವೆ ? ” ಬಾಪೂ ಉತ್ತರ ಬರೆದರು : “ ಹಾವಿನ ಮಾತು ನಿಜವಿದೆ ಮತ್ತು ನಿಜವೂ ಇಲ್ಲ. ಹಾವು ನನ್ನ ಶರೀರದ ಮೇಲಿಂದ ಹಾಯ್ದು ಹೋಗುತ್ತಿತ್ತು. ಇಂಥ ಸಮಯದಲ್ಲಿ ಸುಮ್ಮನೆ ಬಿದ್ದುಕೊಂಡ ಹೊರತು ನಾನು ಅಥವಾ ಬೇರೆಯವರು ಮತ್ತೇನು ಮಾಡಬಹುದಾಗಿತ್ತು ? ಆದುದರಿಂದ ಇದರಲ್ಲಿ ಲೇಖಕನು ಸ್ತುತಿ ಮಾಡಿದಂತೆ ಸ್ತುತಿಗೆ ಕಾರಣವೇನೂ ಕಾಣಿಸುವದಿಲ್ಲ. ಅದು ವಿಷದ ಹಾವು ಇತ್ತೊ ಇಲ್ಲವೊ ಎಂಬುದನ್ನಾದರೂ ಹೇಗೆ ಹೇಳಲಿಕ್ಕೆ ಬರುತ್ತದೆ ? ಮೃತ್ಯುವೊಂದು ಭಯಂಕರ ಘಟನೆಯಲ್ಲ ಎಂಬ ವಿಚಾರವು ಬಹಳ ವರ್ಷಗಳಿಂದ ಇರುವದರಿಂದ ನನ್ನ ಮೇಲೆ ಯಾವುದೇ ಪ್ರಕಾರದ ಮೃತ್ಯು ಬಹಳ ಹೊತ್ತು ಪರಿಣಾಮ ಮಾಡಲಾರದು. ”

ಬಾಪು ಮೀರಾಳ ಪತ್ರದಲ್ಲಿ ಜೀವನವು ಸಾವಿನ ಸಿದ್ಧತೆ ಎಂದು ಹೇಳಿದ್ದರು. ಗೇಟೆ ಅವರನ್ನು ಪ್ರಾಣೇಶ್ವರನೆಂದು ತಿಳಿಯುವ ಮಗಳು
೧೮-೬-'೩೨ ತನ್ನ ಒಂದು ಪತ್ರದಲ್ಲಿ ಇದೇ ಶಬ್ದಗಳನ್ನು ಉಪಯೋಗ ಮಾಡಿದ್ದಾಳೆ :

“ How could I be other than happy in the thought that at last he has attained that eternal bliss for which his whole earthly life had been a preparation ? ”

“ ಅವರಿಗೆ ಕೊನೆಗೆ ಶಾಶ್ವತ ಶಾಂತಿ ದೊರೆತಿದೆ ಎಂಬ ವಿಚಾರದಿಂದ ನನಗೆ ಆನಂದ ಹೇಗಾಗಲಿಕ್ಕಿಲ್ಲ ? ಅವರ ಇಡೀ ಸಂಸಾರಿಕ ಜೀವನವು ಇದಕ್ಕಾಗಿ ಒಂದು ಸಿದ್ಧತೆಯೇ ಇತ್ತು. ”

ಛಗನಲಾಲ ಜೋಶಿಯವರಿಗೆ ಪತ್ರ ಬರೆದರು. ಅದರಲ್ಲಿ ಅಪರಿಗ್ರಹ ವ್ರತದ ವ್ಯಾಖ್ಯೆಯ ವಿಷಯಕ್ಕೆ ಕೇಳಿದುದನ್ನು ಮತ್ತೊಮ್ಮೆ ತಿಳಿಸಿ ಹೇಳಿದರು : “ ನಿಸರ್ಗವು ಜೀವಮಾತ್ರಕ್ಕೆ ಬೇಕಾಗುವ ವಸ್ತುಗಳನ್ನು ಪ್ರತಿ ಕ್ಷಣ ಉತ್ಪನ್ನ ಮಾಡುತ್ತಿದೆ, ಮತ್ತು ಸ್ವಲ್ಪ ಸಹ ಹೆಚ್ಚು ಮಾಡುವದಿಲ್ಲ. ಈ ಸತ್ಯದ ಅನುಭವವು ನನಗೆ ದಿನಾಲು ಆಗಹತ್ತಿದೆ. ಈ ಹಿರಿಯ ನಿಯಮವನ್ನು ನಾವು ಇಚ್ಛೆಯಿಂದಲೋ ಅನಿಚ್ಛೆಯಿಂದಲೋ, ತಿಳಿದೊ ತಿಳಿಯದೆಯೊ, ಪ್ರತಿಕ್ಷಣಕ್ಕೂ ಮುರಿಯುತ್ತೇವೆಂಬುದನ್ನೂ ನಾನು ನೋಡುತ್ತಿದ್ದೇನೆ. ಈ ನಿಯಮಭಂಗದಿಂದ ಒಂದು ಬದಿಗೆ ಅನೇಕ ಜನರು ಹೆಚ್ಚು ತಿಂದು ಕಷ್ಟಪಡುತ್ತಿದ್ದಾರೆ ಮತ್ತು ಎರಡನೇ ಬದಿಗೆ ಬಹಳ ಜನರು ಉಪವಾಸದಿಂದ ಬಳಲುತ್ತಿದ್ದಾರೆ. ಈ ಪ್ರಕಾರ ಒಂದು ಬದಿಗೆ ಜನರು ಉಪವಾಸ

ಸಾಯುತ್ತಿದ್ದಾರೆ ಮತ್ತು ಎರಡನೇ ಬದಿಗೆ ಅಮೇರಿಕೆಯ ಧನಿಕರು ಅರ್ಥಶಾಸ್ತ್ರದ ತಪ್ಪು ಅರ್ಥಮಾಡಿ ಧಾನ್ಯವನ್ನು ನಷ್ಟಮಾಡುತ್ತಿದ್ದಾರೆ. ಈ ಸಂಕಟದಿಂದ ಪಾರಾಗಲು ನಾವು ಪ್ರಯತ್ನಿಸುತ್ತಿದ್ದೇವೆ. ನಿಸರ್ಗದ ಈ ನಿಯಮದ ಸಂಪೂರ್ಣ ಪಾಲನೆಯು ಈಗಂತೂ ಅಗತ್ಯವೇ ಇದೆ. ಆದರೆ ಇದರಿಂದ ನಾವು ಗಾಬರಿಯಾಗುವ ಕಾರಣವೇನೂ ಇಲ್ಲ. "

ಪ್ರಾರ್ಥನೆಯ ವಿಷಯವಾಗಿ ಕೇಳುತ್ತ ಪ್ರೇಮಾಬಹನಳು ಆಕ್ಷೇಪವೆತ್ತಿದಳು. ನೀವು ಸಾಕಾರ ಮೂರ್ತಿಯ ವಿರೋಧವನ್ನು ಹೇಗೆ ಮಾಡುತ್ತೀರಿ? ದೇವರ ವಿಷಯಕ್ಕೆ ಭಾವನೆಯು ನಮ್ಮ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಯ ಸಂಗಡ ಬದಲಾಗುತ್ತ ನಡೆದಿದೆ. ಶಂಕರಾಚಾರ್ಯರ ಕಾಲದಲ್ಲಿ ಸ್ವರಾಜ್ಯವಿತ್ತು. ಆದುದರಿಂದ ದೇವರ ಸಂಗಡ ಸಮಾನತೆಯ ಮಾತು ಇತ್ತು. ರಾಮಾನುಜರ ಕಾಲದಲ್ಲಿ ದಾಸ್ಯವಿತ್ತು. ಆದುದರಿಂದ ಮನುಷ್ಯನು ದಾಸಾನುದಾಸನಾಗಲಿಚ್ಛಿಸಿದನು. ನೀವು ಸಾಕಾರದ ನಿಷೇಧಮಾಡುತ್ತೀರಿ, ಆದರೂ ಸಹ ತುಕಾರಾಮನು '**सुंदर ते ध्यान उभा विटेवरी**' ಇದರಲ್ಲಿಯೇ ಸಾಕ್ಷಾತ್ಕಾರಮಾಡಿಕೊಂಡನು. ಈ ವಿಷಯದ ಮೇಲೆ ಬಾಪೂ ಬರೆದರು: "ಪ್ರಾರ್ಥನೆಯಲ್ಲಿ ನಾನು ಸಾಕಾರ ಮೂರ್ತಿಯ ನಿಷೇಧ ಮಾಡಿಲ್ಲ. ನಿರಾಕಾರಕ್ಕೆ ಅದಕ್ಕಿಂತಲೂ ಉಚ್ಚಸ್ಥಾನ ಕೊಟ್ಟಿದ್ದೇನೆ. ಒಂದು ವೇಳೆ ಈ ಪ್ರಕಾರ ಭೇದಮಾಡುವದು ಸರಿಯಾಗಲಿಕ್ಕಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಅನುಕೂಲವಾಗಬಹುದು. ಇದರಲ್ಲಿ ತುಲನೆಗೆ ಸ್ಥಾನವಿಲ್ಲ. ನನ್ನ ದೃಷ್ಟಿಯಿಂದ ನಿರಾಕಾರವು ಹೆಚ್ಚು ನೆಟ್ಟಗೆ. ಶಂಕರ, ರಾಮಾನುಜರ ಬಗ್ಗೆ ಮಾಡಿದ ಪೃಥಕ್ಕರಣವು ನನಗೆ ಸರಿ ತೋರಲಿಲ್ಲ. ಪರಿಸ್ಥಿತಿಗಿಂತಲೂ ಅನುಭವದ ಪ್ರಭಾವವು ಹೆಚ್ಚಾಗಿರುತ್ತದೆ. ಸತ್ಯದ ಪೂಜಾರಿಯ ಮೇಲೆ ಪರಿಸ್ಥಿತಿಯ ಪ್ರಭಾವವು ಬೀಳಬಾರದು. ಅವನು ಅದನ್ನು ಭೇದಿಸಿ ದಾಟಿ ಹೋಗಬೇಕಾಗುವದು. ಪರಿಸ್ಥಿತಿಯ ಆಧಾರದ ಮೇಲೆ ಗೊತ್ತುಪಡಿಸಿದ ಅಭಿಪ್ರಾಯವು ಬಹಳ ಮಾಡಿ ತಪ್ಪಾಗುವದನ್ನು ನಾವು ನೋಡುತ್ತೇವೆ. ಪ್ರಸಿದ್ಧ ಉದಾಹರಣೆಯು ಆತ್ಮ ಮತ್ತು ದೇಹದ್ದು ಇರುತ್ತದೆ. ದೇಹದ ಸಂಗಡ ಇನ್ನೂ ಆತ್ಮದ ನಿಕಟ ಸಂಬಂಧವಿರುವದರಿಂದ ಆತ್ಮವು ಕೂಡಲೇ ದೇಹದಿಂದ ಭಿನ್ನವಾಗಿ ಕಾಣಿಸಿಕೊಳ್ಳುವದಿಲ್ಲ. ಈ ಪರಿಸ್ಥಿತಿಯನ್ನು ಭೇದಿಸಿ ಯಾವನು 'ಇದು ಅಲ್ಲ' ಎಂದು ಮೊದಲನೇ ವಾಕ್ಯ ಹೇಳಿದನೊ ಅವನ ಶಕ್ತಿಯನ್ನು ಇನ್ನೂ ಯಾರೂ ಮುಟ್ಟಿಯೇ ಇಲ್ಲ. ಇಂಥ ಎಷ್ಟೋ ಉದಾಹರಣೆಗಳು ನಿನಗೆ ಸಹಜವಾಗಿ ದೊರೆಯುವವು. ತುಕಾರಾಮ ಮುಂತಾದ ಸಂತರ ವಚನಗಳ ಶಬ್ದಾರ್ಥ ಮಾಡುವದು ಯೋಗ್ಯವೇ ಅಲ್ಲ. ಅವರ ಒಂದು ವಚನವನ್ನು ಇದೀಗ ಓದಿದ್ದೇವೆ. ಅದನ್ನು ನಿನ್ನ ಸಲುವಾಗಿ ಉಧೃತಮಾಡುತ್ತೇನೆ: '**केला मातीचा पशुपति**'

ಎಂಬ ಅಭಂಗವಿರುತ್ತದೆ. ಇಂಥ ಸಾಧುಸಂತರ ಭಾಷೆಯು ಹಿಂದಿರುವ ಕಲ್ಪನೆಯನ್ನು ನಾವು ನೋಡಬೇಕಾದುದೇ ಇದರ ಸಾರ. ಅವರು ಸಾಕಾರ ದೇವರ ಚಿತ್ರವನ್ನು ತೆಗೆಯುತ್ತಿದ್ದರೂ ನಿರಾಕಾರವನ್ನೇ ಭಜಿಸುತ್ತಿರಬಹುದು. ನಾವು ಸಾಮಾನ್ಯ ಮನುಷ್ಯರು ಹೀಗೆ ಮಾಡಲಾರೆವಾದ್ದರಿಂದ ಅದರ ಭೇದ ತಿಳಿದುಕೊಂಡು ನಡೆಯದಿದ್ದರೆ ಸತ್ತು ಹೋಗಬಹುದು"

ಇದೇ ಪತ್ರದಲ್ಲಿಯ ಎರಡನೇ ಉದ್ಗಾರ: "ತನ್ನ ಕೆಲಸದಲ್ಲಿ ತನ್ಮಯನಾದವನಿಗೆ ಕೆಲಸದ ಭಾರ ಅಥವಾ ದಣಿವು ಅನಿಸುವದಿಲ್ಲ, ರುಚಿಯಿಲ್ಲದವನಿಗೆ ಸ್ವಲ್ಪ ಕೂಡ ಹೆಚ್ಚೆನಿಸುತ್ತದೆ. ಕೈದಿಗೆ ಒಂದು ದಿವಸವು ಒಂದು ವರ್ಷವೆನಿಸುತ್ತಿರುವಂತೆ ಭೋಗಿಗೆ ಒಂದು ವರ್ಷ ಒಂದು ದಿವಸವೆನಿಸುತ್ತದೆ. ಮೊದಲು ಯುರೋಪದ ಸಂಗೀತವನ್ನು ಕೇಳುವಾಗ ಬೇಸರ ಉಂಟಾಗುತ್ತಿತ್ತು. ಈಗೀಗ ಸ್ವಲ್ಪ ತಿಳಿಯಹತ್ತಿದೆ. ರುಚಿಯೂ ಉಂಟಾಗಹತ್ತಿದೆ."

ಪರಶುರಾಮನು ಹೆಚ್ಚಿನ ಹೆಚ್ಚು ಕೆಲಸದ ಮರ್ಯಾದೆಯನ್ನು ಕೇಳಿದ್ದನು. ಬಾಪೂ ಅವನಿಗೆ ಕೊಟ್ಟ ಉತ್ತರ ಮತ್ತು ಮೇಲಿನ ಉದ್ಗಾರಗಳು ಕೆಳಗಿನ ಉದ್ಗಾರಗಳ ಸಂಗಡ ತುಲನೆ ಮಾಡಲು ಯೋಗ್ಯವಾಗಿವೆ.

"The man who loves God does not measure his work by the eight hours system. He works at all hours and is never off duty. As he has opportunity he does good. Everywhere at all times, and in all places, he finds opportunity to work for God. He carries, fragrance with him wherever he goes."

"ದೇವರನ್ನು ಪ್ರೀತಿಸುವವನು (ದಿನಾಲು) ಎಂಟು ಗಂಟೆಯ ಲೆಕ್ಕದಿಂದ ತನ್ನ ಕೆಲಸವನ್ನು ಅಳೆಯುವದಿಲ್ಲ. ಅವನು ಯಾವಾಗಲೂ ಕೆಲಸ ಮಾಡುತ್ತಲೇ ಇರುತ್ತಾನೆ. ಅವನಿಗೆ ಬಿಡುವೇ ಇಲ್ಲ. ಸಮಯ ದೊರೆತಾಗಲೆಲ್ಲ ಅವನು ಒಳ್ಳೆಯದನ್ನು ಮಾಡುತ್ತಿರುತ್ತಾನೆ. ಅವನಿಗೆ ಸದಾಸರ್ವದಾ ಮತ್ತು ಸರ್ವತ್ರ ಈಶ್ವರಪ್ರೀತ್ಯರ್ಥವಾಗಿ ಕೆಲಸ ಮಾಡಲು ಸಂಧಿ ದೊರೆತೇ ದೊರೆಯುತ್ತದೆ. ಅವನು ಹೋದಹೋದಲ್ಲಿ ತನ್ನ ಸುಗಂಧವನ್ನು ಬೀರುತ್ತಾನೆ."

. . . ಗೆ ಬರೆದ ಪತ್ರದಲ್ಲಿ "ನೀನು ಆತ್ಮವಿಶ್ವಾಸ ಕಳೆದುಕೊಂಡು ಕೂಡ್ರುವದು ಸರಿಯಲ್ಲ. ಮನುಷ್ಯನಿಗೆ ಕುವಿಚಾರಗಳು ಅನೇಕ ಸಾರೆ ಬರುತ್ತವೆ. ಆದರೆ ಮನೆಯಲ್ಲಿ ಬಿದ್ದ ಕಸವನ್ನು ಯಾವನು ಮೇಲಿಂದ ಮೇಲೆ ತೆಗೆಯುತ್ತಾನೆಯೋ ಅವನು ಸ್ವಚ್ಛವಾಗಿದ್ದಾನೆ ಮತ್ತು ತನ್ನ ಮನೆಯನ್ನು ಸ್ವಚ್ಛವಿಡುತ್ತಾನೆ ಎಂದು ಹೇಳುತ್ತಾರೆ. ಅದೇ ಪ್ರಕಾರ ಕುವಿಚಾರಗಳು ಬಂದ ಕೂಡಲೆ ಯಾವನು ತೆಗೆದು

ಹಾಕುತ್ತಾನೆಯೊ ಅವನು ಯಾವಾಗಲೂ ಜಯಿಸುತ್ತಾನೆ. ಅವನನ್ನು ಎಂದೂ ಡಾಂಭಿಕನೆಂದು ಕರೆಯಲಾಗದು. ಈ ಡಾಂಭಿಕತನದಿಂದ ಪಾರಾಗುವದಕ್ಕೆ ನಾನು ಒಂದು ಚಿನ್ನದಂತಹ ಉಪಾಯವನ್ನು ತೋರಿಸಿದ್ದೇನೆ. ನಾವು ಈ ವಿಚಾರಗಳನ್ನು ಎಂದೂ ಬಚ್ಚಿಡತಕ್ಕದ್ದಲ್ಲ. ಆದರೆ ಪ್ರಕಟ ಮಾಡತಕ್ಕದ್ದು. ಅದರ ಡಂಗುರ ಸಾರುವ ಆವಶ್ಯಕತೆಯೂ ಇಲ್ಲ. ಯಾವನಾದರೊಬ್ಬ ಮಿತ್ರನಿಗೆ ಅವಶ್ಯವಾಗಿ ಹೇಳಬೇಕು. ಇಡೀ ಜಗತ್ತಿಗೆ ಗೊತ್ತಾದರೂ ಅಡ್ಡಿ ಇಲ್ಲ ಎಂದೆನ್ನುವಂತಹ ಮನಸ್ಸಿನ ಸ್ಥಿತಿಯಿರಬೇಕು. ವಿನೋಬಾರ ವಚನಗಳ ಮೇಲೆ ಶ್ರದ್ಧೆಯಿಡು ಮತ್ತು ನಿರಾಶನಾಗಬೇಡ. "

ಹೊರಗೆ ಕೆಲಸಕ್ಕೆ ಹೋಗುವ ರಾಜಕೀಯ ಕೈದಿಗಳಿಗೆ ಬೇಡಿಗಳನ್ನು ಹಾಕುತ್ತಾರೆ. ಅದರ ವಿರುದ್ಧ ಸತ್ಯಾಗ್ರಹ ಮಾಡಬೇಕೊ ಬಾರದೊ ಈ ವಿಷಯದ ಮೇಲೆ "ಕೈದಿಗಳ ನಡತೆಯ ವಿಷಯಕ್ಕೆ ಪ್ರಕಟಮಾಡುವಂತಹದನ್ನು ಇಲ್ಲಿಂದ ಬರೆಯಲಿಕ್ಕೆ ಬರುವದಿಲ್ಲ. ಇದರ ಬಗ್ಗೆ ಹೆಚ್ಚು ಸ್ಪಷ್ಟೀಕರಣವಾಗಬೇಕೆಂದು ನೀವು ಬರೆಯುವದು ಸರಿಯಾಗಿದೆ. ಅದು ಪ್ರಸಂಗ ಬಂದಾಗಲೇ ಆಗುವದು. ಬೇಡಿಗಳ ವಿಷಯಕ್ಕೆ ನಿಮ್ಮ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಆದರೆ ನನ್ನ ಅಭಿಪ್ರಾಯವು ಇನ್ನೂ ಮೊದಲಿನಂತೆಯೇ ಇದೆ. ಯಾಕಂದರೆ ನನ್ನ ದೃಷ್ಟಿಯಿಂದ ರಾಜಕೀಯ ಹಾಗೂ ಬೇರೆ ಕೈದಿಗಳಲ್ಲಿ ವ್ಯತ್ಯಾಸವಿಲ್ಲ. ಆದುದರಿಂದ ಇಡೀ ಜೇಲಿನ ಪದ್ಧತಿಯಲ್ಲಿಯೇ ಸುಧಾರಣೆಯ ಅವಶ್ಯಕತೆಯಿದೆ. ಜೇಲು ಶಿಕ್ಷೆಯ ಸ್ಥಳವಲ್ಲ, ಸುಧಾರಣೆಯ ಸ್ಥಳವೆಂದು ತಿಳಿಯತಕ್ಕದ್ದು. ಹೀಗೆ ತಿಳಿದರೆ ಸುಳ್ಳು ಸಹಿ, ಖೊಟ್ಟಿ ಕಾಗದ ಮಾಡಿ ಜೇಲಿನಲ್ಲಿ ಬಿದ್ದವನಿಗಾದರೂ ಬೇಡಿಗಳ ಆವಶ್ಯಕತೆಯೇನು? ಬೇಡಿಗಳಿಂದ ಆವನೇನು ಸುಧಾರಿಸುವದಿಲ್ಲ. ಯಾರ ಬಗ್ಗೆ ಓಡಿಹೋಗುವ ಭೀತಿಯಿಲ್ಲ, ಯಾರಲ್ಲಿ ಜಗಳಾಡುವ ಶಕ್ತಿಯಿಲ್ಲ, ಇಚ್ಛೆಯೂ ಇಲ್ಲ ಇಂಥವರಿಗೆ ಬೇಡಿಯನ್ನು ಹಾಕುವದು ನನಗೆ ಅಸಹ್ಯವೆನಿಸುತ್ತದೆ. ಆದರೆ ಒಬ್ಬ ರಾಜಕೀಯ ಕೈದಿಯಿದ್ದಾನೆ, ಶರೀರದಿಂದ ನಿನ್ನಂತೆಯೇ ಪೈಲವಾನನಿದ್ದಾನೆ, ದಿನಾಲು ಜೇಲನ್ನು ಒಡೆಯುವ ಯುಕ್ತಿಗಳನ್ನು ಹುಡುಕುತ್ತಿದ್ದಾನೆ, ಕೈಯೊಳಗಿಂದ ತಪ್ಪಿಸಿಕೊಂಡು ಹೋಗಿದ್ದಾನೆ, ಬಾಯಿಯಿಂದಲೂ ಹಗುರಾಗಿದ್ದಾನೆ ಇಂಥವನಿಗೆ ಬೇಡಿಗಳನ್ನು ಹಾಕುವದು ನಾನು ಕರ್ತವ್ಯವೆಂದು ತಿಳಿಯುತ್ತೇನೆ. ಇದರಲ್ಲಿಯ ಸಾರವಿಷ್ಟೆ: ರಾಜಕೀಯ ಮತ್ತು ಅರಾಜಕೀಯ ಎಂಬ ಭೇದವು ತಪ್ಪು ಇದೆ. ನಾವು ಬೇಡುವ ಪ್ರತಿಯೊಂದು ಸವಲತ್ತಿಗೂ ಕೇವಲ ನೀತಿಯ ಆಧಾರವಿರಬೇಕು. ಮತ್ತು ಇಂಥ ಪ್ರಕಾರದ ಎಲ್ಲ ಕೈದಿಗಳಿಗೂ ಅನ್ವಯಿಸುವಂತಹದಿರಬೇಕು. ಇದೇ ನಮ್ಮ ಸುಧಾರಕರ ಧರ್ಮ. ರಾಜಕೀಯ ಕೈದಿಗಳಿಗೆ ಗೋದಿ, ಅರಾಜಕೀಯ ಕೈದಿಗಳಿಗೆ ಗೋವಿನಜೋಳ ಇದು ನಮಗೆ ಅಸಹ್ಯವೆನಿಸ

ಬೇಕು. ಆದರೆ ಗೋವಿನಜೋಳ ಜೀರ್ಣವಾಗದಂಥ ಖೂನಿ ಕೈದಿಯಿದ್ದರೂ, ಅವನಿಗೆ ಗೋದಿ ಸಿಗಲಿಕ್ಕೆ ಬೇಕು. ಅದರಂತೆ ಗೋವಿನಜೋಳ ಸಹಜವಾಗಿ ಜೀರ್ಣ ಮಾಡಬಲ್ಲ, ಉತ್ತಮ ಪಚನಶಕ್ತಿಯುಳ್ಳ ರಾಜಕೀಯ ಕೈದಿಯು ಸ್ವತಃ ಗೋದಿ ಯನ್ನು ಬಿಟ್ಟು ಗೋವಿನಜೋಳ ಬೇಡಿ ತೆಗೆದುಕೊಂಡು ಎರಡನೆಯವರ ಮಾನ ವನ್ನೂ ಕಾಯಬೇಕು. ಆದರೆ ಇದು ನನ್ನ ವಿಚಾರವಾಯಿತು. ಇವುಗಳ ವಿಷಯ ವಾಗಿ ಈ ಸ್ಥಳದಿಂದ ಎಷ್ಟೂ ಆಗ್ರಹ ಹಿಡಿಯಲಾರೆ. ಎಲ್ಲರೂ ತಮ್ಮ ತಮ್ಮ ಅಂತರ್ನಾದದಂತೆ ನಡೆಯಲಿ."

ಈ ವಾರದ ಇನ್ನೂ ಅನೇಕ ಪತ್ರಗಳ ಟಿಪ್ಪಣಿ ಮಾಡುವದು ಉಳಿದಿದೆ. ಪ್ರಾರ್ಥನೆ ಮತ್ತು ಧ್ಯಾನ ಇವುಗಳ ವಿಷಯಕ್ಕೆ ಹೊತ್ತು ಹೊತ್ತಿಗೆ ಚರ್ಚೆಯಾಗು ತ್ತಲೇ ಇರುತ್ತದೆ. ಭಾವೂನಿಗೆ ಧ್ಯಾನದ ವಿಷಯಕ್ಕೆ ವಿಸ್ತಾರ

೧೮-೬-'೩೨ ಪೂರ್ವಕ ಆದೇಶಗಳನ್ನು ಕೊಟ್ಟರು: "ಕಲ್ಪನೆಯ ಚಿತ್ರವನ್ನು ಯಾವುದನ್ನೇ ತೆಗೆದಿರಲಿ, ಅದರ ಧ್ಯಾನ ಮಾಡಿರಲಿ ಇದು ನನಗೆ ದೋಷವೆಂದು ಕಾಣುವದಿಲ್ಲ. ಆದರೆ ಗೀತಾಮಾತೆಯಃ ಧ್ಯಾನದಿಂದ ಸಂತೋಷವಾಗುತ್ತಿದ್ದಾರೆ ಮತ್ತೇನು ಬೇಕು? ಗೀತೆಯ ಧ್ಯಾನವು ಎರಡು ರೀತಿ ಯಿಂದ ಆಗಬಲ್ಲದು: ಒಂದು ಅದನ್ನು ಮಾತೆಯ ಸ್ವರೂಪವೆಂದು ತಿಳಿಯಲಾಗಿದೆ. ಆದುದರಿಂದ ಎದುರಿಗೆ ತಾಯಿಯ ಚಿತ್ರದ ಆವಶ್ಯಕತೆಯಿದ್ದರೆ ಅಥವಾ ತಮ್ಮ ತಾಯಿಯಲ್ಲಿಯೇ (ಅವಳು ಸತ್ತಿದ್ದರೆ) ಕಾಮಧೇನುವಿನ ಆರೋಪಣೆಮಾಡಿ ಗೀತಾ ಸ್ವರೂಪವೆಂದು ತಿಳಿದು ಅದರ ಧ್ಯಾನಮಾಡಬೇಕು. ಅಥವಾ ಯಾವದೇ ಕಾಲ್ಪನಿಕ ಚಿತ್ರವನ್ನು ಮನಸ್ಸಿನಲ್ಲಿ ಚಿತ್ರಿಸತಕ್ಕದ್ದು. ಅದಕ್ಕೆ ಗೋಮಾತೆಯ ಸ್ವರೂಪವನ್ನು ಕೊಟ್ಟರೂ ನಡೆಯುವದು. ಎರಡನೇ ಪ್ರಕಾರದ್ದು ಸಾಧ್ಯವಾದರೆ ನಾನು ಹೆಚ್ಚು ಒಳ್ಳೆಯದೆಂದು ತಿಳಿಯುತ್ತೇನೆ. ನಾವು ಯಾವಾಗಲೂ ಪಠನಮಾಡುತ್ತಿರುವ ಅಧ್ಯಾಯದೊಳಗಿನ ಅಥವಾ ಬೇರೆ ಯಾವದೇ ಅಧ್ಯಾಯದೊಳಗಿನ ಯಾವದೇ ಶ್ಲೋಕ ಅಥವಾ ಶಬ್ದದ ಧ್ಯಾನಮಾಡುವದೇ ಅದರ ಚಿಂತನೆ ಮಾಡುವದು. ಗೀತೆ-ಯಲ್ಲಿದ್ದ ಶಬ್ದಗಳೆಲ್ಲವೂ ಅದರ ಆಭೂಷಣಗಳು. ಮತ್ತು ಪ್ರಿಯ ಜನರ ಆಭೂಷಣ ಗಳ ಧ್ಯಾನಮಾಡುವದೂ ಸಹ ಅವರದೇ ಧ್ಯಾನಮಾಡಿದಂತೆ. ಇದೇ ಮಾತು ಗೀತೆಗೂ ಅನ್ವಯಿಸುತ್ತದೆ. ಆದರೆ ಇದರ ಹೊರತು ಯಾರಿಗಾದರೂ ಮತ್ತೆ ಯಾವುದಾದರೂ ರೀತಿ ದೊರೆತರೆ ಅವನು ಅದೇ ರೀತಿಯಿಂದ ಧ್ಯಾನಮಾಡಬಹುದು. ಎಷ್ಟು ತಲೆಗಳೊ ಅಷ್ಟು ವಿವಿಧತೆಗಳು. ಯಾವವೇ ಎರಡು ವ್ಯಕ್ತಿಗಳು ಒಂದೇ ಪದ್ಧತಿಯಿಂದ ಒಂದೇ ವಸ್ತುವಿನ ಧ್ಯಾನವನ್ನು ಮಾಡುವದಿಲ್ಲ. ಇಬ್ಬರ ವರ್ಣನೆ ಮತ್ತು ಕಲ್ಪನೆ ಯಲ್ಲಿ ಸ್ವಲ್ಪಿಲ್ಲ ಸ್ವಲ್ಪು ವ್ಯತ್ಯಾಸವಿದ್ದೇ ಇರುತ್ತದೆ.

"ಆರನೇ ಅಧ್ಯಾಯದ ಪ್ರಕಾರ ಸ್ವಲ್ಪ ಕೂಡ ಮಾಡಿದ ಸಾಧನೆಯು ನಿರರ್ಥಕ ಹೋಗುವದಿಲ್ಲ. ಮತ್ತು ಬಿಟ್ಟಲ್ಲಿಂದ ಮುಂದೆ ಎರಡನೇ ಜನ್ಮದಲ್ಲಿ ಮುಂದುವರಿಯುತ್ತದೆ. ಇದೇ ಪ್ರಕಾರ ಯಾರಲ್ಲಿ ಕಲ್ಯಾಣಮಾರ್ಗದ ಕಡೆಗೆ ಹೋಗುವ ಇಚ್ಛೆಯೇನೊ ಇದೆ, ಆದರೆ ಅದನ್ನು ಆಚರಣೆಯಲ್ಲಿ ತರುವ ಶಕ್ತಿ-ಯಿಲ್ಲ, ಅಂಥವನ ಇಚ್ಛೆಯು ಎರಡನೇ ಜನ್ಮದಲ್ಲಿ ದೃಢವಾಗುವ ಸಂಧಿಯು ಅವನಿಗೆ ಪ್ರಾಪ್ತವಾಗಿಯೇ ತೀರುವದು. ಈ ವಿಷಯದ ಬಗ್ಗೆಯೂ ನನ್ನ ಮನಸ್ಸಿ-ನಲ್ಲಿ ಯಾವದೇ ಸಂಶಯವಿಲ್ಲ. ಹಾಗಾದರೆ ನಾವು ಈ ಜನ್ಮದಲ್ಲಿ ಸಿಥಿಲವಾಗಿ ನಡೆದರೂ ಸಾಗುವದು ಎಂದು ಇದರ ಅರ್ಥ ಮಾಡಬಾರದು. ಇಂಥ ಇಚ್ಛೆಯು ಇಚ್ಛೆಯಲ್ಲ, ಅಥವಾ ಅದು ಬೌದ್ಧಿಕವಾದುದು ಹಾರ್ದಿಕವಲ್ಲ. ಬೌದ್ಧಿಕ ಇಚ್ಛೆಯ ಸಲುವಾಗಿ ಯಾವ ಸ್ಥಾನವೂ ಇಲ್ಲ. ಅದು ಮೃತ್ಯುವಿನ ನಂತರ ಉಳಿಯುವದಿಲ್ಲ. ಆದರೆ ಯಾವ ಇಚ್ಛೆಯು ಹೃದಯದಲ್ಲಿ ನಾಟುತ್ತದೆಯೊ ಅದರ ಹಿಂದೆ ಪ್ರಯತ್ನ ವಿರಲೇಬೇಕು. ಆದರೆ ಎಷ್ಟೋ ಕಾರಣಗಳಿಂದ ಮತ್ತು ಶಾರೀರಿಕ ಅಶಕ್ತತೆಯಿಂದ ಈ ಇಚ್ಛೆಯು ಈ ಜನ್ಮದಲ್ಲಿ ಪೂರ್ಣವಾಗದಿರುವ ಸಂಭವವಿರುತ್ತದೆ. ಮತ್ತು ಈ ಪ್ರಕಾರದ ಅನುಭವವು ದಿನಾಲು ನಮಗೆ ಆಗುತ್ತದೆ. ಆದರೆ ಈ ಇಚ್ಛೆಯನ್ನು ತೆಗೆದುಕೊಂಡು ಜೀವವು ದೇಹವನ್ನು ಬಿಡುತ್ತದೆ. ಮತ್ತು ಎರಡನೇ ಜನ್ಮದಲ್ಲಿ ಈ ಜನ್ಮದ ಉಪಾಧಿಗಳು ಕಡಿಮೆಯಾಗಿ ಈ ಇಚ್ಛೆಯು ಫಲಿಸುತ್ತದೆ ಅಥವಾ ಹೆಚ್ಚು ದೃಢವಂತೂ ಆಗಿಯೇ ಆಗುತ್ತದೆ. ಈ ಪ್ರಕಾರ ಸದಾಚಾರಿ ಮನುಷ್ಯನು ಉತ್ತರೋತ್ತರ ಮುಂದುವರಿಯುತ್ತಲೇ ಇರುತ್ತಾನೆ.

"ಜ್ಞಾನೇಶ್ವರ ಮಹಾರಾಜರು ನಿವೃತ್ತಿನಾಥರು ಜೀವಂತರಿರಲಿಕ್ಕೆ ಅವರ ಧ್ಯಾನಮಾಡಿದ್ದರೂ ಮಾಡಿರಲಿ. ಆದರೆ ಇಷ್ಟಾದಮೇಲೂ ಅದನ್ನು ನಾವು ಅನುಕರಣೆ ಮಾಡಲಿಕ್ಕೆ ಯೋಗ್ಯವಲ್ಲೆಂದು ನನ್ನ ದೃಢ ವಿಶ್ವಾಸವಿದೆ. ಧ್ಯಾನಮಾಡತಕ್ಕ ವ್ಯಕ್ತಿಯು ಪೂರ್ಣತ್ವವನ್ನು ಮುಟ್ಟಿರಬೇಕು. ಜೀವಂತವ್ಯಕ್ತಿಯ ವಿಷಯಕ್ಕೆ ಈ ಪ್ರಕಾರ ವಿಚಾರಮಾಡುವದು ತೀರ ಅನುಚಿತವೂ ಅನವಶ್ಯಕವೂ ಆಗಿರುತ್ತದೆ. ಜ್ಞಾನೇಶ್ವರಮಹಾರಾಜರು ಶರೀರಧಾರಿಗಳಾದ ನಿವೃತ್ತಿನಾಥರ ಧ್ಯಾನಮಾಡಿರ ಲಿಕ್ಕಿಲ್ಲ ಮತ್ತು ತಮ್ಮ ಕಲ್ಪನೆಯ ಪ್ರಕಾರ ಪೂರ್ಣತ್ವವನ್ನು ಹೊಂದಿದ ನಿವೃತ್ತಿ-ನಾಥರ ಧ್ಯಾನಮಾಡಿರಬಹುದು. ಹೀಗಾಗುವ ಸಂಭವವಿದೆ. ಆದರೆ ಇಂಥ ಗೊಂದಲ ದಲ್ಲಿ ನಾವೆಲ್ಲಿ ಬೀಳೋಣ! ಜೀವಂತಮೂರ್ತಿಯ ಧ್ಯಾನಮಾಡುವ ಪ್ರಶ್ನೆಯಿದ್ದಾಗ ಕಾಲ್ಪನಿಕ ಮೂರ್ತಿಗೆ ಸ್ಥಾನವಿಲ್ಲ. ಮತ್ತು ಇದರ ಉಲ್ಲೇಖ ಮಾಡಿ ಉತ್ತರಕೊಟ್ಟಿ-ದ್ದರೆ ಈ ಉತ್ತರದಿಂದ ಬುದ್ಧಿಭ್ರಂಶವಾಗುವ ಸಂಭವವಿದೆ.

"ಮೊದಲನೇ ಅಧ್ಯಾಯದಲ್ಲಿ ಕೊಟ್ಟ ಹೆಸರುಗಳೆಲ್ಲ ನನ್ನ ಅಭಿಪ್ರಾಯದಂತೆ

ವ್ಯಕ್ತಿವಾಚಕವಾಗಿರದೆ ಗುಣವಾಚಕವಾಗಿರುವದೇ ಹೆಚ್ಚಾಗಿದೆ. ದೈವೀ ಮತ್ತು ಆಸುರೀವೃತ್ತಿಗಳ ನಡುವಿನ ಹೋರಾಟದ ವರ್ಣನೆ ಮಾಡುವಾಗ ಕವಿಯು ಈ ವೃತ್ತಿಗಳನ್ನು ಮೂರ್ತಿಮಂತಾಗಿ ಮಾಡಿದ್ದಾನೆ. ಈ ಕಲ್ಪನೆಯಲ್ಲಿ ಕೌರವ ಪಾಂಡವರ ನಡುವೆ ಹಸ್ತಿನಾಪುರದ ಹತ್ತಿರ ನಿಜವಾಗಿಯೂ ಯುದ್ಧಹಾಗಿರಬಹು-ದೆಂಬುದನ್ನು ಅಲ್ಲಗಳೆದಿಲ್ಲ. ಆ ಯುಗದ ಯಾವದೋ ದೃಷ್ಟಾಂತ ತೆಗೆದುಕೊಂಡು ಕವಿಯು ಈ ಮಹಾನ್ ಗ್ರಂಥವನ್ನು ರಚಿಸಿದ್ದಾನೆಂದು ನನ್ನ ಕಲ್ಪನೆ. ಇದರಲ್ಲಿ ತಪ್ಪಾಗುವ ಸಂಭವವೂ ಇದೆ. ಅಥವಾ ಈ ಎಲ್ಲ ಹೆಸರುಗಳು ನಿಜವಾಗಿಯೂ ಐತಿಹಾಸಿಕವಾಗಿದ್ದರೆ ಇತಿಹಾಸದ ಆರಂಭಕ್ಕಾಗಿ ಈ ಹೆಸರುಗಳನ್ನು ಕೊಡುವದು ಅನುಚಿತವೆಂದೂ ತಿಳಿಯಲಾಗದು. ಮತ್ತು ವಿಷಯದ ವಿಚಾರಕ್ಕಾಗಿ ಮೊದಲನೇ ಅಧ್ಯಾಯವು ಅವಶ್ಯವಿದೆ. ಆದುದರಿಂದ ಗೀತಾಪಾರಾಯಣದ ಕಾಲಕ್ಕೆ ಅದನ್ನು ಓದುವದೂ ಅವಶ್ಯವಿದೆ.

"ಎರಡನೆಯವರು ಮಾಡಿದ ಹಂಜಿಗಳಿಂದ ನೂಲುವದು ನಿಸ್ಸಂಶಯವಾಗಿಯೂ ಅಪೂರ್ಣ ಯಜ್ಞವಾಗಿದೆ. ಅಶಕ್ತನಾಗಿರುವದರಿಂದ ನನ್ನಂಥ ಮನುಷ್ಯನು ಹಂಜಿ-ಗಳನ್ನು ಮಾಡಿಕೊಳ್ಳದಿರುವ ಸಂಭವವಿದೆ. ಆದರೆ ಶಕ್ತಿಯಿದ್ದವನು ತನ್ನ ಹಂಜಿ ಗಳನ್ನು ತಾನೇ ಮಾಡಿಕೊಳ್ಳಲಿಕ್ಕೆಬೇಕು."

ನಾಸಿಕದಿಂದ ಮಥುರಾದಾಸರ ಪತ್ರ ಬಂತು. ಅವರು ಬರೆಯುತ್ತಾರೆ: "ನಾನು ವಿವಾಹವಿಚ್ಛೇದನವನ್ನು ಸಮರ್ಥಿಸಿ ಒಂದು ನಾಟಕ ಬರೆದಿದ್ದೇನೆ. ಅದು ಕಿಶೋರಲಾಲಜಿಯವರಿಗೆ ಒಪ್ಪಿಗೆಯಾಗಿದೆ." ಸಂತತಿನಿಯಮನದ ಆವಶ್ಯಕತೆ ಯನ್ನು ತೋರಿಸುವದಕ್ಕಾಗಿ ಅವರು ಈ ಮುದ್ದೆಗಳನ್ನು ಮಂಡಿಸಿದ್ದಾರೆ: ಬ್ರಹ್ಮ ಚರ್ಯವು ಎಲ್ಲರಿಗೂ ಸಾಧ್ಯವಿಲ್ಲ. ಪಶುಗಳ ಸಂಗಡ ಮನುಷ್ಯರ ತುಲನೆಮಾಡ ಲಾಗದು. ಪಶುಗಳು ಬೇಕಾದಾಗ, ಬೇಕಾದಲ್ಲಿ ವಿಷಯತೃಪ್ತಿಯನ್ನು ಮಾಡಿಕೊಳ್ಳು ತ್ತವೆ. ಮನುಷ್ಯನು ಹಾಗೆ ಮಾಡಿಕೊಳ್ಳಲಾರನು ಮುಂತಾಗಿ. ಇದರ ಅನರ್ಥ ವಾಗಬಹುದೆಂದು ಅದಕ್ಕೆ ಕೆಟ್ಟದ್ದೆಂದು ಹೇಳಲಿಕ್ಕಾಗುವದಿಲ್ಲ. ಮುದ್ರಣಕಲೆ ಯೊಳಗಿಂದ ಭಯಂಕರ ಪರಿಣಾಮ ಉಂಟಾದುದರಿಂದ ಆ ಕಲೆಯು ಕೆಟ್ಟದ್ದೆಂದು ಸಿದ್ಧವಾಗುವದಿಲ್ಲ. ಮುಂತಾಗಿ ಮುಂತಾಗಿ.

ಅವರಿಗೆ ಬಾಪೂ ಬರೆದರು: "ನೀವು ನಾಟಕ ಬರೆಯಬಹುದೆಂದು ನಾನು ಎಂದೂ ತಿಳಿದಿದ್ದಿಲ್ಲ. ನಿಮ್ಮ ವಿಚಾರಗಳು ಇತ್ತೀಚಿನ ಸುಧಾರಕರ ಕಡೆಗೆ ಬಹಳ ಒಲೆಯುತ್ತ ನಡೆದಿವೆ. ಒಂದು ವಿಶಿಷ್ಟ ಮರ್ಯಾದೆಯ ಒಳಗೆ ವಿವಾಹ ವಿಚ್ಛೇದನೆ ಯನ್ನು ನಾನು ಅವಶ್ಯ ಒಪ್ಪುತ್ತೇನೆ. ಆದರೆ ಇದರ ಪ್ರಚಾರ ಮಾಡಲಿಕ್ಕೆ ಸ್ವಲ್ಪ ಕೂಡ ಮನಸ್ಸು ಒಪ್ಪುವದಿಲ್ಲ. ಸಾಮಾನ್ಯವಾಗಿ ಇಂದಿನ ನಮ್ಮ ಮನಸ್ಸಿನ

ಸ್ಥಿತಿಯು ನಾಳೆ ಸಹ ಇರುವದೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರದಷ್ಟು ನಾವು ನಮ್ಮ ವೃತ್ತಿಗಳ ಗುಲಾಮರಾಗಿದ್ದೇವೆ. ಅಂದರೆ ಸ್ವೇಚ್ಛೆಯಿಂದ ಆದ ವಿವಾಹವು ಬಹಳ ಪ್ರಬಲ ಕಾರಣವಿಲ್ಲದಿರುವ ವರೆಗೆ ಮುರಿಯಬಾರದು. ಇದೇ ಯೋಗ್ಯವೆನಿಸುತ್ತದೆ. ಅಸ್ಪೃಶ್ಯತೆಯ ಪ್ರಶ್ನೆಗಾಗಿ ನಾನು ಬಾ ಇವಳಿಗೆ ಸೋಡಚೀಟಿ ಕೊಟ್ಟಿದ್ದರೆ ಇವತ್ತು ಇದ್ದಂಥ ಸುಂದರ ಸ್ಥಿತಿಯು ಎಂದೂ ಇರುತ್ತಿದ್ದಿಲ್ಲ! ಬಾ ಎಲ್ಲಿ ಬೀಳುತ್ತಿದ್ದಳೊ ಯಾರಿಗೆ ಗೊತ್ತು! ನಾನು ಎಂಥ ವಿವಾಹ ಮಾಡಿಕೊಳ್ಳುತ್ತಿದ್ದೆನೊ ಇದನ್ನಾದರೂ ಯಾರು ಹೇಳಬಲ್ಲರು? ಆದರೆ ಸೋಡಚೀಟಿ ಕೊಡುವದು ಹಣೆ-ಬರಹದಲ್ಲಿ ಇಲ್ಲದ್ದರಿಂದ ಆ ವಿಷಮಕಾಲವು ದಾಟಿ ಹೋಯಿತು. ಮತ್ತು ಈಗಂತೂ ಅದರ ನೆನಪು ಮಾತ್ರ ಉಳಿದಿದೆ. ಆದುದರಿಂದ ನೀವು ನಿಮ್ಮ ಪುಸ್ತಕದಲ್ಲಿ ಇಚ್ಛೆಯಾದಾಗ ಒಬ್ಬರು ಇನ್ನೊಬ್ಬರ ಸಂಬಂಧವನ್ನು ಕಡಿದುಕೊಳ್ಳಲಿಕ್ಕೆ ಬಿನ್ ತಿಕೀಟಿನ ಪರವಾನಿಗೆಯನ್ನು ಕೊಟ್ಟಿರಲಿಕ್ಕಿಲ್ಲೆಂದು ಆಶಿಸುತ್ತೇನೆ.

"ವಿಷಯಭೋಗದ ಇಚ್ಛೆಯಾದಾಗ ಅದನ್ನು ತೃಪ್ತಿಮಾಡಿಕೊಳ್ಳುವದು ಮನುಷ್ಯನ ಧರ್ಮವಾದರೆ ಸಂತತಿನಿಯಮನದ ಕೃತ್ರಿಮ ಉಪಾಯಗಳ ಆವಶ್ಯಕತೆಯು ನನಗೆ ಗೊತ್ತಾಗುತ್ತದೆ. ಆದರೆ ಸಂತಾನೇಚ್ಛೆಯ ಹೊರತು ವಿಷಯ-ಭೋಗವು ಪಾಪದ ಮೂಲವೆಂದು ತಿಳಿದರೆ—ಮತ್ತು ನನ್ನ ದೃಷ್ಟಿಯಿಂದ ತಿಳಿಯತಕ್ಕದ್ದು—ಕೃತ್ರಿಮ ಉಪಾಯಗಳಿಂದ ಸಂತತಿ ಉತ್ಪತ್ತಿಯನ್ನು ತಡೆಹಿಡಿಯುವದು ಪಾಪದ ಮೇಲೆ ಬಡ್ಡಿ ಆಕರಣೆ ಮಾಡಿದಂತೆ. 'ಬಿತ್ತಿದ್ದನ್ನು ಬೆಳೆದುಕೊ' 'ಮಾಡಿದ್ದುಣ್ಣೊ ಮಹಾರಾಯಾ' ಎಂದು ನಿಸರ್ಗದ ನಿಯಮವಿದೆ. ಮನುಷ್ಯನು ವಿಷಯಭೋಗ ಮಾಡಿದರೆ ಸಂತಾನದ ಹೊಣೆಯನ್ನು ಹೊರಲಿ. ಇಲ್ಲಿ ಸ್ತ್ರೀ ಏಕೆ ಹೊರಬೇಕೆಂಬ ಪ್ರಶ್ನೆಯಿಲ್ಲ. ಯಾಕಂದರೆ ನಾವು ಸ್ತ್ರೀಯು ಎಲ್ಲ ರೀತಿಯಿಂದಲೂ ಸ್ವತಂತ್ರಳೆಂದು ತಿಳಿಯುತ್ತೇವೆ. ಇತ್ತೀಚೆಗೆ ಕೃತ್ರಿಮ ಉಪಾಯಗಳ ಉಪಯೋಗವನ್ನು ಪಶ್ಚಿಮದಲ್ಲಿ ಮಾಡುತ್ತಿರುವವರ ಒಂದು ಪರಿಣಾಮವಂತೂ ಗೊತ್ತೇ ಇರುತ್ತದೆ; ವಿವಾಹದ ಪವಿತ್ರತೆಯು ನಾಶವಾಗಿದೆ, ಮತ್ತು ಯಾರಿಗೆ ಯಾವಾಗ ಮನಸ್ಸಿಗೆ ಬರುತ್ತದೆಯೊ ಆಗ ಅನಿರ್ಬಂಧ ಭೋಗೇಚ್ಛೆಯನ್ನು ಭೋಗಿಸುತ್ತಾರೆ. ಈ ವಸ್ತುವಿನ ಪ್ರಚಾರ ಪ್ರಾರಂಭವಾಗಿ ಇನ್ನೂ ಕೆಲವು ವರ್ಷಗಳು ಸಹ ಕಳೆದಿಲ್ಲ. ಆದರೂ ಸಹ ಇದುವರೆಗೆ ತಿಳಿಯುತ್ತಬಂದ ಪವಿತ್ರ ಬಂಧನಗಳು ಈಗ ಮುರಿಯತೊಡಗಿವೆ. ಇತ್ತೀಚೆಗೆ ಪಶ್ಚಿಮದಲ್ಲಿ ಒಳ್ಳೇ ಶ್ರೇಷ್ಠ ವಿಚಾರಕರೆಂದು ಹೇಳಲ್ಪಡು-ವಂಥವರೂ ಕೂಡ ವಿವಾಹವು ಒಂದು ಭ್ರಮೆ ಎಂದು ತಿಳಿಯತೊಡಗಿದ್ದಾರೆ. ಒಂದೇ ಹೊಟ್ಟೆಯ ಅಣ್ಣ-ತಂಗಿಯರು ಸಹ ಒಬ್ಬರಿಗೊಬ್ಬರ ಪ್ರತಿ ವಿಕಾರವಶರಾದರೆ ಮತ್ತು ವಿಕಾರವನ್ನು ತೃಪ್ತಿಪಡಿಸಿಕೊಂಡರೆ ಇದರಲ್ಲಿ ಯಾವ ದೋಷವೂ

ಇಲ್ಲ. ಇಷ್ಟೇ ಅಲ್ಲ, ಯೋಗ್ಯವೇ ಇದೆ ಎಂದು ತಿಳಿಯತೊಡಗಿದ್ದಾರೆ. ಈ ಎಲ್ಲಾ ವಿಚಾರಗಳನ್ನು ನಾನು ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗುವ ಅತಿ-ರೇಕವೆಂದು ತಿಳಿಯುವದಿಲ್ಲ. ಆದರೆ ಇದು ಸಂತತಿನಿಯಮನದ ಹಿಂದಿರುವ ವಿಚಾರ ಸರಣಿಯ ಸರಳ ಮತ್ತು ಸಹಜವಾದ ಪರಿಣಾಮವು. ನಾವು ಇವತ್ತು ವಿವಾಹ ಮುಂತಾದ ಬಂಧನಗಳು ಆತ್ಮಪೋಷಕವೆಂದು ತಿಳಿದಿರುತ್ತೇವೆ. ಅವು ಆತ್ಮನಾಶಕವಾಗುವ ಸಂಭವವೂ ಇದೆ. ಆದರೆ ನಾನು ವಾದವಿವಾದಕ್ಕಾಗಿ ಇಂಥ ಮಾತುಗಳ ಸಂಭಾವ್ಯವನ್ನು ಒಪ್ಪುವದಕ್ಕಿಂತ ಮುಂದುವರಿಯಲಾರೆ. ನೀತಿ ಮತ್ತು ಶಾಸ್ತ್ರಗಳ ಹೆಸರಿನಿಂದ ಆಗುತ್ತಿರುವ ಈ ಎಲ್ಲ ಮಾತುಗಳು ನನಗೆ ಅತ್ಯಂತ ಗಂಡಾಂತರಪ್ರಾಯವಾಗಿ ತೋರುತ್ತವೆ. ತೋರಿಕೆಯ ದಯೆಯಿಂದ, ಪುಕ್ಕತನದಿಂದ ಮತ್ತು ತಮ್ಮ ಕ್ಷಣಿಕ ಅನುಭವಗಳಿಂದ ಈ ಹೊಸ ವಿಚಾರಗಳ ಬುಗ್ಗಿಗಳು ಪುಟಿಯುತೊಡಗಿವೆ. ಅವುಗಳಲ್ಲಿ ತೋಯಿಸಿಕೊಳ್ಳಬಾರದೆಂದು ನಾನು ಇಚ್ಛಿಸುತ್ತೇನೆ. ಹಿಂದುಸ್ತಾನದ ಪರಿಸ್ಥಿತಿಯನ್ನು ನೋಡುತ್ತಿರಲಿಕ್ಕೆ ಈಗಂತೂ ಈ ಕೃತ್ರಿಮ ಉಪಾಯಗಳಿಗೆ ಇಲ್ಲಿ ಯಾವ ಸ್ಥಾನವೂ ಇಲ್ಲ. ಎಲ್ಲಿ ಅಸಂಖ್ಯ ಮನುಷ್ಯರ ಶರೀರಗಳು ನಷ್ಟವಾಗಿ-ಹೋಗಿವೆ, ಮನಸ್ಸು ಬಲಹೀನವಾಗಿವೆ, ಅಂಥಲ್ಲಿ ಕಾಮವಾಸನೆ ಹುಟ್ಟಿದಕೂಡಲೇ ಅದನ್ನು ಪೂರ್ತಿಮಾಡತೊಡಗಿದರೆ ನಮ್ಮ ಉನ್ನತಿಯು ತೀರ ಕುಂಠಿತವಾಗುವದು. ಈ ಉಪಾಯಗಳ ಸಹಾಯ ಪಡೆಯುವವರು ವಾಸ್ತವಿಕವಾಗಿ ಹೇಡಿಗಳಂತಿದ್ದಾರೆ. ವೃತ್ತಪತ್ರಗಳಲ್ಲಿ ಬರುವ ಜಾಹೀರಾತುಗಳ ಕಡೆಗೆ ಹೊರಳಿ ನೋಡಿರಿ. ಈ ಮಾತನ್ನು ನಾನು ದೀರ್ಘ ಅನುಭವದಿಂದ ಹೇಳುತ್ತೇನೆ. ‘ನೀತಿನಾಶದ ಮಾರ್ಗದ ಮೇಲೆ’ ಎಂಬ ಲೇಖಗಳನ್ನು ಪ್ರತಿ ವಾರ ಬರುತ್ತಿರುವ ಶಕ್ತಿಹೀನ ವಿದ್ಯಾರ್ಥಿ ಮತ್ತು ಅಧ್ಯಾಪಕರ ಪತ್ರಗಳಿಗೆ ಉತ್ತರರೂಪವಾಗಿ ಬರೆಯಲಾಗಿದೆ. ಹಿಂದುಸ್ತಾನದ ತರುಣರು ತಮ್ಮ ಮೇಲೆ ಕಠೋರ ಬಂಧನ ಹಾಕಿಕೊಂಡಾದರೂ ಸಂಯಮನದ ಪಾಠ ಕಲಿಯತಕ್ಕದ್ದು. ಹುಡಿಗಿಯರ ಸ್ಥಿತಿಯು ಕೂಡ ಬಹಳ ವಿಚಿತ್ರವಿದೆ! ಆಶ್ರಮದಲ್ಲಿಯೇ ಬೆಳಸಿದ . . . ಅಂಥ ಹದಿನೈದು ವರುಷದ ಹುಡಿಗೆಯು, ಶರೀರದಿಂದ ಬಲಹೀನವಿದ್ದಾಗ್ಯೂ, ಲಗ್ನ ಬೇಕೆಂದು ಹೇಳುವದು ಎಂಥ ವಿಚಿತ್ರ ಸಂಗತಿ! ಹದಿನೈದು ವರುಷದ ಹುಡಿಗಿಗೆ ವಿಕಾರವೇಕುಂಟಾಗಬೇಕು? ಆದರೆ ನಮ್ಮ ವಾತಾವರಣವೇ ಮಲಿನವಿದೆ. ಚಿಕ್ಕಂದಿನಿಂದಲೇ ಹುಡುಗ-ಹುಡಿಗಿಯರಿಗೆ ವಿಕಾರದ ಗುಟುಕನ್ನು ಕುಡಿಸುತ್ತಾರೆ. ಇಂಥವರಿಗೆ ವಿಕಾರಗಳ ವಶವಾಗುವ ಧರ್ಮ ಕಲಿಸಲು ನಾನಂತೂ ಸ್ವಲ್ಪೂ ಸಿದ್ಧನಿಲ್ಲ. ಆದರೆ ಈಗ ಈ ಮಾತನ್ನು ಬೆಳೆಸುವದಿಲ್ಲ. ಇಷ್ಟರಿಂದ ನೀನು ನನ್ನ ವಿಚಾರಗಳನ್ನು ತಿಳಿದುಕೊಳ್ಳಬಹುದು.”

ನಿನ್ನೆ ದೇವದಾಸನಿಂದ ತಂತಿ ಬಂತು. ಇದರಲ್ಲಿ ಜ್ವರದ ವಿವರಣೆ ಇತ್ತು.

ಹನ್ನೆರಡು ದಿವಸಗಳಿಂದ ಜ್ವರ ಬರುತ್ತವೆ. ಸೌಮ್ಯ ವಿಷಮಜ್ವರದ ಸಂಶಯವಿದೆ. ಹೆಚ್ಚಿನ ಹೆಚ್ಚು ೧೦೨° ಮತ್ತು ಕಳೆದ ಮೂರು ದಿನಗಳಿಂದ ೧೦೦° ಕಿಂತಲೂ ಕಡಿಮೆ ಇರುತ್ತವೆ. ಹವೆ ಬಹಳ ಕೆಟ್ಟದಿದೆ. ನಿಮ್ಮಿಂದ ಪತ್ರವಿಲ್ಲ. ಬಾಪೂ ಹೇಳಿದರು: "'ನೀವು ನನ್ನ ಬದಲಿ ಮಾಡಿಸುವದು ಸಾಧ್ಯವಿದ್ದರೆ ಮಾಡಿಸಿರಿ' ಎಂದು ಹೇಳುವದಕ್ಕಾಗಿಯೇ ಹವೆಯ ವರ್ಣನೆಯನ್ನು ಬರೆಯಲಾಗಿದೆ."

ಬೆಳಿಗ್ಗೆ ಇದರ ಬಗ್ಗೆ ವಿಚಾರ ಮಾಡುತ್ತಿದ್ದರು. ವಲ್ಲಭಭಾಯಿ ಅಂದರು: "ಅವನ ಬದಲಿಯನ್ನು ಮಾಡಿಸಲೇಬೇಕು" ಬಾಪೂ ಹೇಳಿದರು: "ಎರಡನೆಯವರ ಮುಖಾಂತರವಂತೂ ಇಲ್ಲವೇ ಇಲ್ಲ. ಅರ್ಜಿ ಮಾಡುವದಾದರೆ ನಾವು ಸ್ವತಃ ಮಾಡುವಾ. ಆದರೆ ಮನಸ್ಸಾಗಲೊಲ್ಲದು. ಹರಿಲಾಲ ದಕ್ಷಿಣ ಆಫ್ರಿಕೆಯ ಜೇಲಿನಲ್ಲಿ ಅತ್ಯಂತ ಕೆಟ್ಟ ಸ್ಥಳದಲ್ಲಿದ್ದನು, ಆದರೆ ಅವನು ತನ್ನ ಬದಲಿಯನ್ನು ತಾನೇ ಸ್ವತಃ ಮಾಡಿಸಿಕೊಂಡನು. ನಾನು ಬರೆದಿದ್ದಿಲ್ಲ." ವಲ್ಲಭಭಾಯಿ ಹೇಳಿದರು: "ನಾವು ಕೈದಿಗಳಿಲ್ಲಿದ್ದೇವೆ? ಇಲ್ಲಿಯ ಸ್ಥಿತಿಯು ಬೇರೆಯಿದೆ. ಅರ್ಜಿ ಮಾಡಲಿಕ್ಕೆ ಬೇಕು." ಆದುದರಿಂದ ಕೊನೆಗೆ ಬಾಪೂ ಒಪ್ಪಿಕೊಂಡು ಜೇಲಿಗೆ ತಾರು ಮಾಡಿದರು: "ನನ್ನ ಮಗನು ಯಾವ ಕಾರಣವೂ ಇಲ್ಲದೆ ಸಂಗಡಿಗರಿಲ್ಲದೆ ಅತ್ಯಂತ ಕೆಟ್ಟ ಸ್ಥಳವಾದ ಗೋರಖಪುರದಲ್ಲಿದ್ದಾನೆ. ಅವನಿಗೆ ಜ್ವರ ಬರುತ್ತವೆ. ಅವನನ್ನು ಡೆಹರಾಡೂನಕ್ಕೆ ಬದಲಿಮಾಡಿರಿ. ಅಥವಾ ನನ್ನ ಹತ್ತರ ಇಲ್ಲಿಗೆ ಕಳಿಸಿರಿ."

**೧೯-೬-'೩೨**

ಇವತ್ತು ಬೆಳಿಗ್ಗೆ ಪ್ರಾರ್ಥನೆಯಲ್ಲಿ ೧೧ ನೆಯ ಅಧ್ಯಾಯವಿತ್ತು. ಪ್ರಾರ್ಥನೆ ಮುಗಿದ ಮೇಲೆ ಬಾಪೂ ಹೇಳಿದರು: "ಮಿ. ಬೇಕರರು ವೆಲಿಂಗ್ಟನ್ನ ಕನ್‌ವೆನ್‌ಶನ್ನದಲ್ಲಿ ನನ್ನನ್ನು ಕ್ರಿಶ್ಚಿಯನ್ನನಾಗಿ ಮಾಡಲಿಕ್ಕೆ ಕರೆದುಕೊಂಡು ಹೋದ ದಿವಸದ ನೆನಪಾಗುತ್ತದೆ. ಅವರು ಯಾವಾಗಲೂ ನನ್ನ ಸಂಗಡ ಚರ್ಚೆಮಾಡುತ್ತಿದ್ದರು. ನೀವು ನನ್ನಲ್ಲಿ ಶ್ರದ್ಧೆಯನ್ನು ಜಾಗ್ರತಮಾಡಿರಿ, ನನ್ನ ಮೇಲೆ ಯಾವದೇ ಉತ್ತಮ ಪರಿಣಾಮವನ್ನು ನೀವು ಮಾಡಲಿಚ್ಛಿಸಿದರೆ ಅದನ್ನು ಮಾಡಿಸಿಕೊಳ್ಳಲು ನಾನು ಸಿದ್ಧನಿದ್ದೇನೆ ಎಂದು ನಾನು ಅವರಿಗೆ ಹೇಳುತ್ತಿದ್ದೆ. ಆದುದರಿಂದ ಅವರು ನನಗೆ ವೆಲಿಂಗ್ಟನ್ ಕನ್‌ವೆನ್‌ಶನ್ನಕ್ಕೆ ಬಾ ಅಲ್ಲಿ ಸಮರ್ಥ ಜನರು ಬರುವರು. ಅವರನ್ನು ನೀನು ಭೆಟ್ಟಿಯಾದರೆ ನಿನಗೆ ವಿಶ್ವಾಸ ಹುಟ್ಟದೆ ಇರುವದೇ ಇಲ್ಲ ಎಂದು ಹೇಳಿದರು. ಇಡೀ ಡಬ್ಬಿಯಲ್ಲಿ ಕೆಂಪು ಜನರೇ ಕುಳಿತಿದ್ದರು, ಮೇಲಿನ ಬಂಕದಲ್ಲಿ ನಾನೊಬ್ಬನೇ ಹುದುಗಿಕೊಂಡು ಕುಳಿತಿದ್ದೆ. ಆ ಜನರು ಹೇಳತೊಡಗಿದರು: ನೋಡಿರಿ ಹಿಕ್ಸ ನದಿ ಬಂತು. ಭವ್ಯ ಪ್ರದೇಶವಿದೆ; ನೋಡಿರಿ, ಸೂರ್ಯೋದಯ ದರ್ಶನವನ್ನು ಮಾಡಿಕೊಳ್ಳಿರಿ. ಆದರೆ ನಾನು ಇಳಿಯಲೇ ಇಲ್ಲ. ನಾನು ೧೧ ನೇ ಅಧ್ಯಾಯ ಪಠನ ಮಾಡುತ್ತಿದ್ದೆ.

ಬೇಕರರು 'ಏನು ಓದುತ್ತಿ?' ಎಂದು ಕೇಳಿದರು. 'ಭಗವದ್ಗೀತೆ' ಎಂದು ನಾನು ಹೇಳಿದೆ. ಎಂಥ ಮೂರ್ಖನಿದ್ದಾನೆ, ಬಾಯಿಬಲ್ ಓದುವದಿಲ್ಲ ಎಂದು ಅವರಿಗೆ ಅನಿಸಿರಬಹುದು. ಆದರೆ ಏನು ಮಾಡುವದು? ಅವರಿಗೆ ನನ್ನ ಮೇಲೆ ಒತ್ತಾಯ ಮಾಡುವದಿದ್ದಿಲ್ಲ. ಕನ್‌ವೆನ್‌ಶನ್‌ದಲ್ಲಿ ನನ್ನ ಸಲುವಾಗಿ ವಿಶೇಷ ಪ್ರಾರ್ಥನೆಯೂ ಆಯಿತು. ಆದರೆ ನಾನು ಇದ್ದಕ್ಕಿದ್ದ ಹಾಗೆಯೇ ಹಿಂತಿರುಗಿದೆ."

ಬಟ್ಟೆ ವ್ಯಾಪಾರಿಯು ಅಂಗಡಿಯಲ್ಲಿ ನೌಕರಿ ಮಾಡುತ್ತಿರುವ ಒಬ್ಬ ಬಡ ಮನುಷ್ಯ ಕೇಳಿದ: "ನಮ್ಮ ಉದ್ಯೋಗದಲ್ಲಿ ಸುಳ್ಳಿನ ಹೊರತು ಕೆಲಸ ನಡೆಯುವದಿಲ್ಲ. ಏನು ಮಾಡಬೇಕು? ಎರಡನೇ ಉದ್ಯೋಗ ಹೊಳೆಯಲೊಲ್ಲದು." ಅವನಿಗೆ ಬರೆದರು: "ಯಾವದೇ ಪರಿಸ್ಥಿತಿಯಲ್ಲಿದ್ದು ಸತ್ಯದ ಆಚರಣೆಯನ್ನು ಆಚರಿಸುವವನೇ ಸತ್ಯಾರ್ಥಿ ಎಂದು ತಿಳಿಯಲ್ಪಡುವನು. ವ್ಯಾಪಾರದಲ್ಲಿಯಾಗಲಿ, ನವಕರಿಯಲ್ಲಿಯಾಗಲಿ, ಯಾರಿಗೂ ಸುಳ್ಳು ಮಾತಾಡಬೇಕೆಂಬ ಒತ್ತಾಯವಿಲ್ಲ. ಒತ್ತಾಯ ಕಂಡಲ್ಲಿ ಹೋಗಬಾರದು, ಉಪವಾಸ ಸತ್ತರೂ ಚಿಂತೆಯಿಲ್ಲ."

ನಾನಾಭಾಯಿ ಮಶ್ರೂವಾಲಾರಿಗೆ ಬರೆದರು: "ಸುಶೀಲಾ ಮತ್ತು ಸೀತಾ ಅಲ್ಲಿ ಉಳಿಯುವರೆಂಬ ಸುದ್ದಿಯಿಂದ ಅಲ್ಲಿ ಅವರ ಪ್ರಕೃತಿ ಹೆಚ್ಚು ಸುಧಾರಿಬಹುದೆಂದು ತಿಳಿದು ನನಗೆ ಸಂತೋಷವಾಗಹತ್ತಿತ್ತು. ಯಾವದಕ್ಕಾಗಿ ಆನಂದಪಡಬೇಕು ಯಾವದಕ್ಕಾಗಿ ಅಳಬೇಕು ಎಂಬುದು ಯಾರಿಗೆ ಗೊತ್ತು? ಎರಡನ್ನೂ ಬಿಡೋಣ!"

ಇಂಗ್ಲಂಡದಲ್ಲಿ ನಮಗೆ ಸಹಾಯಮಾಡುವ ಅನೇಕ ಸ್ತ್ರೀಯರಲ್ಲಿ ಲಾರೀ ಸೋಯರಳೂ ಇದ್ದಳು. ಅವಳಿಗೆ ಒಂದು ಸಾರೆ ಕ್ಯಾನ್ಸರ ಆಯಿತು, ಆ ಮೇಲೆ ಕ್ಷಯ ಹತ್ತಿತು. ಆದರೆ ಅವಳಷ್ಟು ಉಲ್ಲಸಿತ ಮತ್ತು ತೇಜಸ್ವಿ ಹುಡಿಗೆಯನ್ನು ನಾನು ತೀರ ಅಪರೂಪವಾಗಿ ನೋಡಿದ್ದೇನೆ. ಅವಳು ಬಹಳ ದಿವಸಗಳ ಸಂಗಾತಿಯಲ್ಲ ಎಂದು ಡಾಕ್ಟರರ ಅಭಿಪ್ರಾಯವಿದೆ. ಆದುದರಿಂದ ಅವಳಿಗೆ ಕಾಗದ ಬರೆಯಿರಿ ಎಂದು ಹೊರೆಸ್ ಬರೆದನು. ಬಾಪೂ ಅವಳಿಗೆ ಕೂಡಲೇ ಕಾಗದ ಬರೆದರು:

"My dear Lauri,

Prof. Horace Alexander reminds me of your existence and tells me how weak you are. Of course I remember you perfectly. Weak in body you may be, but the very first time I met you I saw how strong you were in will. And if God wants more service from you in your present existence, He will give you sufficient strength of body. For those who have faith in God,

life and death are alike. Ours is to serve till the last breath. Do write to me when you can. Love from Mahadeo.

Yours Bapu

"P. S. I write nothing about ourselves as you must know all there is to know."

"ಪ್ರಿಯ ಲಾರಿ,

ಪ್ರೊ. ಹೊರೆಸ್ ಅಲೆಗ್ಝಾಂಡರರು ನನಗೆ ನಿನ್ನ ಜ್ಞಾಪಕ ಮಾಡಿಕೊಡುತ್ತಾರೆ. ನೀನು ಬಹಳ ಕಾಯಿಲೆ ಇದ್ದೀ ಎಂದು ಹೇಳುತ್ತಾರೆ. ನನಗೆ ನಿನ್ನ ಸಂಪೂರ್ಣ ನೆನಪಿದೆ. ನೀನು ಶರೀರದಿಂದ ಅಶಕ್ತಳಿರಬಹುದು, ಆದರೆ ನಾನು ನಿನ್ನನ್ನು ನೋಡಿದಾಗಿನಿಂದ ನೀನು ಮನಸ್ಸಿನಿಂದ ಬಹಳ ಗಟ್ಟಿ ಇರುವೆಯೆಂಬುದು ನನಗೆ ಗೊತ್ತಿದೆ. ಮತ್ತು ದೇವರಿಗೆ ನಿನ್ನ ಈ ಶರೀರದಿಂದ ಕೆಲಸಮಾಡಿಸಿಕೊಳ್ಳಬೇಕಾಗಿದ್ದಾರೆ ನಿನ್ನನ್ನು ಶರೀರದಿಂದಲೂ ಗಟ್ಟಿಮುಟ್ಟಾಗಿ ಮಾಡುವನು. ದೇವರ ಮೇಲೆ ಶ್ರದ್ಧೆಯಿದ್ದವರಿಗೆ ಜೀವನ, ಮರಣ ಎರಡೂ ಒಂದೇ ಇವೆ. ಕೊನೆಯ ಉಸಿರಿರುವವರೆಗೆ ಸೇವೆಮಾಡುವದು ನಮ್ಮ ಕರ್ತವ್ಯವಾಗಿರುತ್ತದೆ. ನೀನು ಬರೆಯಬಹುದಾದಾಗ ಬರೆ. ಮಹಾದೇವನ ಪ್ರೀತಿಗಳು.

ಬಾಪೂನ ಆಶೀರ್ವಾದಗಳು.

"ತಾ. ಕ. ನಮ್ಮ ವಿಷಯಕ್ಕೆ ಏನೂ ಬರೆಯುತ್ತಿರುವದಿಲ್ಲ. ತಿಳಿಯಲಿಕ್ಕೆ ಯೋಗ್ಯವಾದುದೆಲ್ಲವೂ ನಿನಗೆ ಗೊತ್ತೇ ಇರಬಹುದು."

ಮಕ್ಕಳು ನಾನಾ ಪ್ರಕಾರದ ಪ್ರಶ್ನೆಗಳನ್ನು ಕೇಳುತ್ತಾರೆ: "ಸ್ವತಃ ಕೈಯಿಂದ ಪಾತ್ರೆ ತಿಕ್ಕುವದು, ಶೌಚಕೂಪ ಸ್ವಚ್ಛಮಾಡುವದು ಸೇವೆ ಹೇಗಾಗುತ್ತದೆ?" ಅವರಿಗೆ ಬರೆದರು: "ಪಾತ್ರೆ ತಿಕ್ಕುವ ಮತ್ತು ಶೌಚಕೂಪ ಸ್ವಚ್ಛಮಾಡುವ ಕೆಲಸವು ಸಾಮಾನ್ಯವಾಗಿ ರುಚಿಸುವದಿಲ್ಲ. ಆದುದರಿಂದ ವಿಶಿಷ್ಟಜಾತಿಗಳ ಕಡೆಯಿಂದ ಮಾಡಿಸಿಕೊಳ್ಳಲಾಗುತ್ತದೆ, ಇದು ದೋಷವಾಗಿದೆ. ಕಾರಣ ಪರೋಪಕಾರ ಭಾವನೆಯಿಂದ ಈ ಕೆಲಸವನ್ನು ಮಾಡುವವನು ಸೇವೆ ಮಾಡುತ್ತಾನೆ."

ಒಬ್ಬ ಹುಡಿಗೆಯು ಬರೆಯುತ್ತಾಳೆ: "ನೀವು ಬೆಕ್ಕಿನಮರಿಗಳನ್ನು ಎಷ್ಟು ಆಡಿಸುತ್ತೀರಿ, ಬಗಲಲ್ಲಿ ತೆಗೆದುಕೊಳ್ಳುತ್ತೀರಿ. ನಾನೂ ಸಹ ಬೆಕ್ಕಾಗಿದ್ದರೆ ಬಹಳ ಒಳ್ಳೆಯದಾಗುತ್ತಿತ್ತಲ್ಲವೆ?" ಅವಳಿಗೆ ಬಾಪೂ ಬರೆದರು: "ಬೆಕ್ಕಿನಮರಿಗಳು ನನ್ನ ಬಗಲಲ್ಲಿ ಕೂಡುವಂತೆ ಮಕ್ಕಳು ಸಹ ಕೂಡುತ್ತಾರೆ. ಬೆಕ್ಕಿಗೆ ಬುದ್ಧಿಯಿಲ್ಲ ನಮಗೆ ಬುದ್ಧಿಯಿರುತ್ತದೆ. ಆದುದರಿಂದ ಬೆಕ್ಕಿನ ಜನ್ಮವು ಇಚ್ಛಿಸಲಿಕ್ಕೆ ಯೋಗ್ಯವಾದುದಲ್ಲವೆಂದು ಹೇಳಬಹುದು."

ಪರೋಪಕಾರೀ ಪುಂಜಾಭಾಯಿಗೆ ( ಯಾರು ಬಾಪೂರನ್ನು ಪ್ರಭು ಎಂದು ತಿಳಿಯುತ್ತಾರೆ ; ಮತ್ತು ಹೇ ಪ್ರಭು (೩) ಎಂದು ಸಂಬೋಧಿಸುತ್ತಾರೆ. ) ಬರೆದರು : " ನೀವು ಬಹಳ ಬರೆಯಬಲ್ಲಿರಿ. ನೀವು ಜನ್ಮ ಸಾರ್ಥಕಮಾಡಿಕೊಂಡಿರುತ್ತೀರಿ. ಯಾರ ಮನಸ್ಸು ಪರೋಪಕಾರದಲ್ಲಿಯೇ ತಲ್ಲೀನವಾಗುತ್ತಿರುತ್ತದೆಯೊ ಮತ್ತು ಯಾರು ಕೊನೆಯವರೆಗೆ ಇದೇ ಸ್ಥಿತಿಯಲ್ಲಿರುತ್ತಾರೊ ಅವರ ಜನ್ಮವು ಸಫಲವಾಗಿದೆ. ನೀವು ಮತ್ತೆ ಮಲಗಿದ್ದಿರೆಂದು ನಾರಾಯಣದಾಸನು ಹೇಳುತ್ತಾನೆ. ಹೀಗೆ ಮಾಡುತ್ತ ಮಾಡುತ್ತ ಎಂದಾದರೂ ಪೂರ್ಣ ನಿದ್ರೆ ಬರಬಹುದು.. ಬಂದಾಗ ಸ್ವಾಗತ ಮಾಡಿರಿ. "

ಬಹಳ ಧಾರ್ಮಿಕ ಗ್ರಂಥಗಳನ್ನು ಓದುವ ಮತ್ತು ಬಹಳ ವಿಚಾರಮಾಡುವ ರೂಢಿಯಿದ್ದಂಥ ಒಬ್ಬ ಸಹೋದರನಿಗೆ ಬಾಪೂ ಬರೆದರು : " ಈಗ ರಾಯಚಂದ ಭಾಯಿ ಮತ್ತು ಗೀತೆಯನ್ನು ಸಹ ಓದುವದನ್ನು ಬಿಡಲಿಕ್ಕೆ ನಾನು ಶಿಫಾರಸು ಮಾಡುತ್ತೇನೆ. ಇದನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಪ್ರಾರ್ಥನೆಯ ಸಮಯಕ್ಕೆ ಎಷ್ಟು ಗೀತೆ ಮತ್ತು ಭಜನೆ ನಡೆಯುತ್ತಿದೆಯೊ ಅವನ್ನೇ ತಿಳಿದುಕೊಂಡು ಮನನಮಾಡತಕ್ಕದ್ದು. ಈ ಸಂಯಮವು ಕಠಿಣವಿದೆ. ಆದರೆ ನೀವು ಅದರ ಚಮತ್ಕಾರವಾದ ಪರಿಣಾಮವನ್ನು ಅನುಭವಿಸಬಹುದು. ಈಗ ಓದುವದೇ ನಿಮ್ಮ ಕೆಲಸವೆಂದು ತೋರುತ್ತದೆ. ಬಿಡುವು ಸಿಕ್ಕಾಗ ನಿಮ್ಮ ಮನಸ್ಸೊಪ್ಪಿದ ಉಪಯುಕ್ತ ಕೆಲಸಗಳನ್ನು ತೆಗೆದುಕೊಳ್ಳಿರಿ. ತರ್ಕವನ್ನೆಲ್ಲ ಬಿಟ್ಟುಬಿಡಿರಿ. ' ನನಗೆ ಒಂದು ಹೆಜ್ಜೆ ಸಾಕು ' ಎಂಬುದರ ಅರ್ಥ ಇದೇ ಇರುತ್ತದೆ. ಯಾವ ಸಾಧನವು ಬಂಧನಕಾರಿಯಾಗುತ್ತದೆಯೊ ಅದನ್ನು ಬಿಟ್ಟು ಬಿಡಿರಿ. ವರ್ತಮಾನಪತ್ರವನ್ನು ಓದಬಹುದು. "

ಒಬ್ಬ ಹುಡಿಗೆಯು ಕೇಳುತ್ತಾಳೆ: "ತಪ್ಪಿನ ಬಗ್ಗೆ ಕ್ಷಮೆ ಬೇಡುವದಕ್ಕೆ ಸಂತೋಷವಾಗುತ್ತದೆಯೆ ? ನಾಚಿಕೆಯಾಗುವದಿಲ್ಲವೆ ? ಆದರೂ ಸಹ ನಾಚಿಕೆಯಾಗಬಾರದೆಂದು ನೀವು ಹೇಗೆ ಹೇಳುತ್ತೀರಿ ? " ಬಾಪೂ ಬರೆದರು : " ತಪ್ಪುಮಾಡುವದು ಕೆಟ್ಟ ಕೆಲಸ, ಆದುದರಿಂದ ಅದಕ್ಕಾಗಿ ನಾಚಿಕೆಯಾಗುತ್ತದೆ. ತಪ್ಪಿಗಾಗಿ ಕ್ಷಮೆ ಬೇಡುವದು ಉತ್ತಮ ಕೆಲಸ, ಅದಕ್ಕಾಗಿ ನಾಚಿಕೆ ಎಂತಹದು ? ಮಾಫೀ ಬೇಡುವದರ ಅರ್ಥವೆಂದರೆ ಮತ್ತೆ ತಪ್ಪುಮಾಡದಿರುವ ನಿಶ್ಚಯಮಾಡುವದು. ಇದೇ ನಿಶ್ಚಯವಿದ್ದರೆ ಆದರಲ್ಲಿ ಏತಕ್ಕಾಗಿ ನಾಚಿಕೆ ? ಇದು ತಿಳಿಯಿತಷ್ಟೆ ? ಸತ್ಯ ಮತ್ತು ಅಹಿಂಸೆಗಳ ತುಲನೆಯನ್ನೇನು ಮಾಡುವದು ? ಮಾಡುವದೆ ಆದರೆ ನಾನು ಸತ್ಯವು ಅಹಿಂಸೆಗಿಂತಲೂ ಹೆಚ್ಚೆಂದು ಹೇಳುತ್ತೇನೆ ; ಯಾಕಂದರೆ ಅಸತ್ಯವೂ ಸಹ ಹಿಂಸೆಯಿದೆ. ಸತ್ಯಪ್ರಿಯನಿದ್ದವನು ಅಹಿಂಸೆಯನ್ನು ಒಂದಿಲ್ಲೊಂದು ದಿವಸ ಆತ್ಮಸ್ಸಾತ್ ಮಾಡಿಕೊಳ್ಳುವನು. "

ಇಬ್ಬರು ನಿಜವಾದ ದರಿದ್ರನಾರಾಯಣನ ಮಂದಿರದಲ್ಲಿ ಹೋಗಿ ಅವನ ಸೇವೆಯನ್ನು ಪ್ರಾರಂಭಮಾಡಿದ್ದಾರೆ : ಜೀವರಾಮು ಮತ್ತು ಜೇಠಾಲಾಲ. ಜೀವರಾಮನು ಓರಿಸಾದ ಅಜ್ಞಾನ, ಆಲಸಿ ಮತ್ತು ದಾರಿದ್ರ್ಯಗ್ರಸ್ತ ಪ್ರಾಂತದಲ್ಲಿ ಹೋಗಿದ್ದಾನೆ. ಜೇಠಾಲಾಲನು ಮಧ್ಯಪ್ರಾಂತದ ಅನಂತಪುರ ಊರಲ್ಲಿ ಹೋಗಿದ್ದಾನೆ. ದಿನಾಲು ಒಂದಾಣೆ ಕೊಟ್ಟರೂ ಸಹ ದೊಡ್ಡ ಸಹಾಯವೆಂದು ತಿಳಿಯುವ ಲಕ್ಷಗಟ್ಟಲೆ ಜನರು ಅಲ್ಲಿ ವಾಸಿಸುತ್ತಾರೆ. ಆರಾಣೆ ಬೆಲೆಬಾಳುವ ರಾಟೆಯನ್ನು ಸಹ ಕೊಂಡುಕೊಳ್ಳುವ ಯೋಗ್ಯತೆಯಿಲ್ಲದ ಜನರಲ್ಲಿ ಕೆಲಸಮಾಡುವದು ಎಷ್ಟು ಕಠಿಣವಿರಬಹುದು ? ಅಲ್ಲಿ ಜೇಠಾಲಾಲನು ಜಿಗಟುತನದಿಂದ ತಳವೂರಿ ಮೂರುವರುಷಗಳಿಂದ ಬಿದ್ದಿದ್ದಾನೆ. ಜೇಠಾಲಾಲನ ಕೆಲಸದ ವರದಿ ಬಂತು. ಅವನಿಗೆ ಬಾಪೂ ಪ್ರೋತ್ಸಾಹನ ಮತ್ತು ಸೂಚನೆಗಳನ್ನು ಕೊಡುವ ಉದ್ದವಾದ ಪತ್ರ ಬರೆದರು. ಬಿಹಾರದಲ್ಲಿ ಜನರು ಉಪವಾಸ ಸಾಯುತ್ತಾರೆ, ಉಡಲಿಕ್ಕೆ ಪೂರ್ಣ ಬಟ್ಟೆಗಳಿಲ್ಲ, ಅಲ್ಲಿ ರಾಟೆಯು ತನ್ನಷ್ಟಕ್ಕೆ ತಾನೇ ಸಜೀವವಾಯಿತು, ಇದಕ್ಕೆ ಬಾಪೂ ಶಾಸ್ತ್ರೀಯ ಪ್ರಯೋಗವೆಂದು ಹೇಳುವದಿಲ್ಲ. ಆದರೆ " ನಿನ್ನ ಪ್ರಯೋಗಕ್ಕೆ ನಾನು ಶಾಸ್ತ್ರೀಯವೆಂದು ಹೇಳುತ್ತೇನೆ. ಆದುದರಿಂದ ನಿನ್ನ ಮೇಲೆ ಯಾವಾಗಲೂ ನನ್ನ ದೃಷ್ಟಿಯಿದೆ, ಇರುತ್ತದೆ. ಪ್ರಾರಂಭದಿಂದ ಕೊನೆಯವರೆಗೆ ನಿನ್ನ ಕೆಲಸದ ವರದಿಯನ್ನು ತಿಳಿದುಕೊಳ್ಳುವ ಇಚ್ಛೆಯು ಯಾವಾಗಲೂ ಇರುತ್ತದೆ. ನೀನು ಅನುಭವಿಕನಿರುತ್ತಿ, ಆದುದರಿಂದ ಇನ್ನೂ ಹೆಚ್ಚು ತೊಂದರೆಗಳನ್ನು ಅನುಭವಿಸಬೇಕಾಗುವದು. ದೊಡ್ಡ ಕೆಲಸಗಳಲ್ಲಿ ಯಾವಾಗಲೂ ಹೀಗಾಗುತ್ತಿರುತ್ತದೆ. ಮಾರ್ಗವು ಸ್ವಚ್ಛವಾಯಿತು, ಆದುದರಿಂದ ಬೇಗನೆ ಪ್ರಗತಿಯಾಗುವದು ಎಂದು ತಿಳಿದು ಸ್ವಲ್ಪ ವಿರಾಮ ತೆಗೆದುಕೊಳ್ಳುವಷ್ಟರಲ್ಲಿಯೇ ಕಂದಕವು ದೃಷ್ಟಿಗೆ ಬೀಳುತ್ತದೆ. ಕಾರಣ ನೀನು ಅಲ್ಲಿ ಸಮಾಧಿ ಹಚ್ಚಿಕೊಂಡು ಕೂಡ್ರಬೇಕು. ಮೊದಲನೇ ಮಾತೆಂದರೆ ಅಖಂಡ ಧೈರ್ಯ. ಇಂಥ ಧೈರ್ಯಕ್ಕಾಗಿ ಆತ್ಮವಿಶ್ವಾಸವಿರಬೇಕು. ಆತ್ಮವಿಶ್ವಾಸವೆಂದರೆ ತಮ್ಮ ಕೆಲಸದ ವಿಷಯಕ್ಕೆ ಅಖಂಡ ಶ್ರದ್ಧೆ. ಇಷ್ಟಾದಮೇಲೆ ತಿಳಿಯದೆ ಅಸಂಖ್ಯ ತಪ್ಪಾಗುತ್ತಿದ್ದರೂ ಚಿಂತೆ ಮಾಡುವ ಕಾರಣವಿಲ್ಲ. ನಮ್ಮಿಂದ ಎಲ್ಲಿಯಾದರೂ ತಪ್ಪಾಗುತ್ತಿದೆಯೆ ಎಂಬ ಭೀತಿಯಿಂದ ಸೊರಗುವ ಆವಶ್ಯಕತೆಯೂ ಇಲ್ಲ. ನಿನ್ನ ಪ್ರಯೋಗವು ಶಾಸ್ತ್ರೀಯವೆಂದು ನಾನು ತಿಳಿಯುತ್ತೇನೆ. ನನ್ನ ಮನಸ್ಸಿನಲ್ಲಿ ಅದರ ಅರ್ಥವು ಅದು ಇವತ್ತೇ ಪೂರ್ಣ ರೂಪದಿಂದ ಶಾಸ್ತ್ರೀಯವಿರುತ್ತದೆಂದಲ್ಲ. ಆದರೆ ನಿನ್ನ ಕೆಲಸದಲ್ಲಿ ಶಾಸ್ತ್ರೀಯ ಪ್ರಯೋಗದ ಲಕ್ಷಣಗಳಿವೆ. ಮತ್ತು ಈ ಪ್ರಕಾರದ ಪ್ರಯೋಗಕ್ಕೆ ಬೇಕಾಗುವ ಧೈರ್ಯವೂ ನಿನ್ನಲ್ಲಿದೆ. ಒಂದು ಮಾತಿನ ನ್ಯೂನತೆಯನ್ನು ನಾನು ಮೊದಲಿನಿಂದಲೇ ನಿನ್ನಲ್ಲಿ ನೋಡಿದ್ದೆನು. ಆ ನ್ಯೂನತೆಯನ್ನು ನೀನು ತಿಳಿದು ಹೊಳೆದು ದೂರ

ಮಾಡಿರುವಿ ಅಥವಾ ನಿನಗೆ ತಿಳಿಯದಂತೆಯೇ ನಿನ್ನ ಸತ್ಯನಿಷ್ಠೆಯು ಕಾರಣಕ್ಕಾಗಿ ಅದು ದೂರಾಗಿರುತ್ತದೆಂದು ನಾನು ತಿಳಿದಿದ್ದೆನು. ಆ ನ್ಯೂನತೆಯು ಇದು ಇತ್ತು: ಅಪೂರ್ಣ ಕೆಲಸದಿಂದ ಸಂತೋಷ ಹೊಂದಿ ನೀನು ಕೂಡಲೇ ಲೆಕ್ಕ ಹಾಕುತ್ತಿದ್ದಿ. ಇದನ್ನು ನಾನು ಈಗ ನಿನ್ನಲ್ಲಿ ನೋಡುವದಿಲ್ಲ. ಶಾಸ್ತ್ರೀಯ ಪ್ರಯೋಗಕಾರನು ತನ್ನಲ್ಲಿ ಅಖಂಡ ಶ್ರದ್ಧೆಯಿರುವದರಿಂದ ಎಂದೂ ನಿರಾಶನಾಗುವದಿಲ್ಲ. ಆದರೆ ಅದರ ಸಂಗಡವೇ ಅವನಲ್ಲಿ ಬಹಳ ನಮ್ರತೆಯಿರುತ್ತದೆ. ಅವನು ತನ್ನ ಕೆಲಸದಿಂದ ಸಂತುಷ್ಟನಾಗುವದಿಲ್ಲ, ಮತ್ತು ಕೂಡಲೇ ಲೆಕ್ಕ ಹಾಕುವದಿಲ್ಲ. ಆದರೆ ಹೊತ್ತು ಹೊತ್ತಿಗೆ ಆಳವಾಗಿ ಲೆಕ್ಕಹಾಕಿದ ಮೇಲೆ ಇದರ ಪರಿಣಾಮವು ಇದೇ ಆಗುವದೆಂದು ಹೇಳುತ್ತಾನೆ. ಇಂಥ ಶಾಸ್ತ್ರೀಯ ನಮ್ರತೆಯ ನ್ಯೂನತೆಯು ನಮ್ಮೆಲ್ಲರಲ್ಲಿಯೂ ಇದೆ. ಆದುದರಿಂದ ನಾನು ನಿನ್ನಲ್ಲಿ ನೋಡಿದ ನ್ಯೂನತೆಯೇನೂ ಆಶ್ಚರ್ಯದ್ದಾಗಿದ್ದಿಲ್ಲ. ನಿನ್ನಲ್ಲಿ ಕೊನೆಯವರೆಗೂ ಹೋಗಿ ಮುಟ್ಟುವ ಶಕ್ತಿಯಿದೆಯೆಂದು ಮಾತ್ರ ನಾನು ತಿಳಿದಿದ್ದೇನೆ. ಆದುದರಿಂದ ಈ ನ್ಯೂನತೆಯು ನಿನ್ನಲ್ಲಿರಬಾರದೆಂಬ ತೀವ್ರ ಇಚ್ಛೆಯಿಂದ ಅನೇಕ ವರ್ಷಗಳ ಹಿಂದೆಯೇ ಬಹಳ ಸಾವಕಾಶವಾಗಿ ನಿನ್ನ ಧ್ಯಾನವನ್ನು ಆ ಮೂತಿನ ಕಡೆಗೆ ಎಳೆದಿದ್ದೆನು. ಕಾರ್ಯಸಿದ್ಧಿಗಾಗಿ ನಿನ್ನ ಸಂಗಡಿಗರನ್ನು ಕಲೆಹಾಕುವದು ಮೊದಲನೇ ಆವಶ್ಯಕತೆಯಾಗಿದೆ. ಸಾವಕಾಶವಾಗಿ ಸಂಗಡಿಗರು ಕೂಡಿಕೊಳ್ಳುವಂತಹದೇ ನಿನ್ನ ಸಾಧನೆ ಆಗಿದೆ. ಅವರನ್ನು ಸಂಗ್ರಹ ಮಾಡಲಿಕ್ಕೆ ಒಂದು ಗುಣದ ಉಪಾಸನೆಯನ್ನು ನಾವು ಮಾಡಲೇ ಬೇಕಾಗುತ್ತದೆ—ಸಹಿಷ್ಣುತೆ ಮತ್ತು ಅದರ ಹೊಟ್ಟೆಯಲ್ಲಿರುವ ಉದಾರತೆ. ನಾವು ಮಾಡುವದನ್ನು ಅಥವಾ ಮಾಡಲಿಚ್ಛಿಸುವದನ್ನು ಎಲ್ಲ ಸಂಗಡಿಗರೂ ಅದರಂತೆಯೇ ಮಾಡಲಾರರು. ಆದರೆ ಸಂಗಡಿಗರು ಉತ್ತಮ ಉದ್ದೇಶವುಳ್ಳವರೂ, ಪ್ರಯತ್ನಶೀಲರೂ ಇರುವರೆಂದು ಅನಿಸುವವರೆಗೆ ಅವರನ್ನು ಸಂಬಾಳಿಸಬೇಕು. ಹೀಗೆ ಮಾಡದಿದ್ದರೆ ಸಂಗಡಿಗರು ಹೆಚ್ಚಾಗುವದಿಲ್ಲ. ಎಷ್ಟೋ ಜನರಿಗೆ ದೊರೆಯುವದೇ ಇಲ್ಲ.

"ಇನ್ನು ನಿಮ್ಮ ಕಾರ್ಯಕ್ರಮದ ಪದ್ಧತಿಯ ವಿಷಯಕ್ಕೆ ಇನ್ನೂ ಒಂದು ಮಾತಿನ ಆವಶ್ಯಕತೆಯಿದೆಯೆಂದು ಅನಿಸುತ್ತದೆ. ಬೇರೆ ಪದ್ಧತಿಯಿಂದ ಕೆಲಸ ಮಾಡುವವರ ಕಡೆಯಿಂದಲೂ ಕಲಿತುಕೊಳ್ಳುವ ಇಚ್ಛೆಯಾಗಲಿಕ್ಕೆಬೇಕು. ಶಾಸ್ತ್ರೀಯ ಪ್ರಯೋಗವು ಒಂದೇ ರೀತಿಯಲ್ಲಿ ಸಫಲವಾಗಬಹುದೆಂದು ತಿಳಿಯುವದು ದೊಡ್ಡ ತಪ್ಪು. ಅನೇಕ ಜನರು ಹೀಗೆ ತಿಳಿಯುವದೇನೋ ನಿಜ. ಆದರೆ ಹೀಗೆ ತಿಳಿದುಕೊಂಡು ಅವರು ಬಹಳ ಹಾನಿಗೊಳಗಾಗುತ್ತಾರೆ. ನಮಗಂತೂ ನಾವು ಸತ್ಯ ಅಥವಾ ಪರಿಪೂರ್ಣವೆಂದು ತಿಳಿದುಕೊಂಡ ಪದ್ಧತಿಯೇ ಸರಿಯಾದುದೆಂಬ ವೃತ್ತಿಯು ನಮ್ಮದಿರ

ಬೇಕು. ಆದರೆ ಇದರಲ್ಲಿಯ ಪೂರ್ಣತ್ವವನ್ನು ನೋಡದ ಅಥವಾ ಇದರಲ್ಲಿಯ ಅಪೂರ್ಣತ್ವವನ್ನು ನೋಡುವಂಥ ಜನರು ಅವಶ್ಯವಾಗಿ ಬೇರೆ ಪದ್ಧತಿಯಿಂದ ಉಳಿದ ಕೆಲಸವನ್ನು ಮಾಡಬಹುದು. ಇಂಥ ಭಾವನೆಯನ್ನು ವಿಕಾಸಮಾಡುವದರಿಂದ ನಮ್ಮ ಗ್ರಹಣಶಕ್ತಿಯು ಬೆಳೆಯುತ್ತದೆ.

"ನೀನು ಈಗ ಕೆಲಸಮಾಡುತ್ತಿರುವ ಪದ್ಧತಿಯ ವಿಷಯಕ್ಕೆ ಏನೂ ಹೇಳಲಾರೆ. ಯಾಕಂದರೆ ನಿನ್ನ ಕೆಲಸದ ಬಗ್ಗೆ ಪಕ್ಷಪಾತ ವಿರುವದರಿಂದ ಇಲ್ಲಿಂದ ಎಲ್ಲವೂ ಅತ್ಯುತ್ತಮವೆಂದು ಅನಿಸುತ್ತದೆ. ಅಲ್ಲಿ ಕಣ್ಣಿನಿಂದ ನೋಡಿದರೆ ನನಗೆ ಎಷ್ಟೋ ವಿಚಾರಗಳು ಬರುವ ಹಾಗೂ ಅವುಗಳನ್ನು ನಿನ್ನ ಮುಂದೆ ಇಡುವ ಸಂಭವವಿದೆ. ಇಲ್ಲಿ ಕುಳಿತುಕೊಂಡು ನಿನ್ನ ಕೆಲಸದ ಚಿತ್ರವನ್ನು ಸರಿಯಾದ ರೀತಿಯಲ್ಲಿ ತೆಗೆಯಲಾರೆ. ಆದುದರಿಂದ ಯಾವದೇ ಸೂಚನೆಯನ್ನು ಮಾಡಿದರೂ ಅವಿನಯವೇ ಅನಿಸಬಹುದು."

ಭಾಯಿ ಜೀವರಾಮರ ಸ್ಥಿತಿಯು ಜೇಠಾಲಾಲನಗಿಂತಲೂ ಹೆಚ್ಚು ಅಸಾಧಾರಣ ವಿರುತ್ತದೆ. ಅವರು ೧೯೨೨ರಲ್ಲಿ ಲಕ್ಷ ರೂಪಾಯಿಗಳನ್ನು ದಾನಮಾಡಿದ್ದರು, ಮತ್ತು ಈ ರೀತಿ ಸಂಪತ್ತಿಯನ್ನೆಲ್ಲ ಸೂರೆಮಾಡಿ ಕಕ್ಕನ ವೈರತ್ವವನ್ನು ಸಂಪಾದಿಸಿದ್ದರು. ಆ ಮೇಲೆ ವ್ಯಾಪಾರ ಬಿಟ್ಟು ಫಕೀರರಾಗಿ ಇವತ್ತು ೫೦ ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸಿನಲ್ಲಿ ಪತ್ನಿಯನ್ನು ಸಂಗಡ ಕರೆದುಕೊಂಡು ಅಲ್ಲಿ ಬಂದಿದ್ದಾರೆ. ಛಗನಲಾಲ ಗಾಂಧೀಯಂಥವನು ಬೇಸರಪಟ್ಟು, ಬೇನೆ ಬಿದ್ದು ಅಲ್ಲಿಂದ ತಿರುಗಿ ಬರಬೇಕಾಯಿತು. ಅಲ್ಲಿಯೇ ಈ ಮನುಷ್ಯನು ಶ್ರದ್ಧೆಯಿಂದ ಕೆಲಸ ನಡೆಸಿದ್ದಾನೆ ಮತ್ತು ಎರಡನೆಯವರನ್ನು ಆಕರ್ಷಿಸುತ್ತಿದ್ದಾನೆ.

ಇವರಿಬ್ಬರ ವಿಚಾರಮಾಡುವಾಗ ರೋಮಾರೋಲಾರ ಪುಸ್ತಕದ ಒಂದು ಅಂಶವು ಜ್ಞಾಪಕವಾಗುತ್ತಿದೆ:

"In speaking of classes among workers, it is small matter for wonder that Vivekananda places first, not the illustrious, those crowned with the halo of glory and veneration, not even the Christs and Buddhas; but rather the nameless, the silent ones—the unknown soldiers. The page is a striking one, not easily forgotten when read: 'The great men in the world have passed away unknown. The Buddhas and Christs that we know are but second rate heroes in comparison with the greatest men of whom the world knows nothing. Silently they live and silently they pass away, and in time their thoughts find expression in Buddhas

and Christs and it is these latter that become known to us. They leave their ideas to the world; they put forth no claim for themselves and establish no schools or systems in their name. Their whole nature shrinks from such a thing. They are the pure 'sattwikas' who can never make any stir but only melt down in love . . . The highest men are calm, silent, unknown. They are the men who really know the power of thought; they are sure that even if they go into a cave and close the door and simply think five pure thoughts and then pass away, these five thoughts of theirs will live throughout eternity.' "

"ಕಾರ್ಯಕರ್ತರ ವರ್ಗೀಕರಣ ಮಾಡುವಾಗ ವಿವೇಕಾನಂದರು ಕೀರ್ತಿಶಾಲಿಗಳೂ ಪೂಜಾರ್ಹರೂ ತೇಜೋರಾಶಿಯಿಂದ ವಿಭೂಷಿತರೂ ಆದ ಪ್ರಸಿದ್ಧ ಮನುಷ್ಯರಿಗೆ ಅಗ್ರಸ್ಥಾನವನ್ನು ಕೊಟ್ಟಿಲ್ಲ. ಕ್ರೈಸ್ತ ಮತ್ತು ಬುದ್ಧರಂಥವರಿಗೂ ಕೊಡಲಿಲ್ಲ. ಆದರೆ ಹೆಸರುಗಳು ಪ್ರಸಿದ್ಧಿಗೆ ಬಾರದಂಥ ಮೂಕ ಮತ್ತು ಅಜ್ಞಾತ ಸೈನಿಕರಿಗೆ ಕೊಟ್ಟಿದ್ದಾರೆ. ಇದರಲ್ಲಿ ಯಾವ ಆಶ್ಚರ್ಯದ ಸಂಗತಿಯೂ ಇರುವದಿಲ್ಲ. ಅವರ ಬರಹದ ಈ ಪುಟವು ಚಮತ್ಕಾರಕವಿದೆ. ಇದನ್ನು ಓದಿದ ಮೇಲೆ ಸಹಜವಾಗಿ ಮರೆಯಲಾಗುವದಿಲ್ಲ. ಅವರು ಹೇಳುತ್ತಾರೆ:

"ಜಗತ್ತಿನ ಮಹಾಪುರುಷರಂತೂ ಅಜ್ಞಾತರಾಗಿಯೇ ಉಳಿದಿದ್ದಾರೆ. ಯಾರ ವಿಷಯಕ್ಕೆ ಜಗತ್ತು ಏನೂ ಅರಿತಿಲ್ಲವೊ ಅಂಥ ಸರ್ವಶ್ರೇಷ್ಠ ವ್ಯಕ್ತಿಗಳ ತುಲನೆಯಲ್ಲಿ ಕ್ರೈಸ್ತ ಮತ್ತು ಬುದ್ಧರು ಎರಡನೇ ತರಗತಿಯ ದೊಡ್ಡ ಮನುಷ್ಯರೆಂದು ತಿಳಿಯಬೇಕು. ಈ ಜನರು ಮೂಕರಾಗಿ ಉಳಿಯುತ್ತಾರೆ ಮತ್ತು ಮೂಕರಾಗಿಯೇ ಹೊರಟುಹೋಗುತ್ತಾರೆ. ಸಮಯ ಸಾಧಿಸಿ ಅವರ ವಿಚಾರಗಳು ಬುದ್ಧ ಮತ್ತು ಕ್ರೈಸ್ತರ ಮುಖಾಂತರ ಪ್ರಕಟವಾಗುತ್ತವೆ. ಈ ಹಿಂದಿನಿಂದ ಬಂದ ಜನರನ್ನು ನಾವು ಅರಿಯುತ್ತೇವೆ. ಆ ಜನರು ತಮ್ಮ ವಿಚಾರಗಳನ್ನು ಮಾತ್ರ ಜಗತ್ತಿನಲ್ಲಿ ಬಿಟ್ಟು ಹೋಗುತ್ತಾರೆ. ಅವರು ತಮ್ಮದೆಂದು ಏನನ್ನೂ ಹೇಳುವದಿಲ್ಲ ಮತ್ತು ಅವರು ತಮ್ಮ ಹೆಸರಿನಿಂದ ಯಾವದೇ ಸಂಪ್ರದಾಯವನ್ನಾಗಲಿ, ತತ್ವಜ್ಞಾನವನ್ನಾಗಲಿ ಸ್ಥಾಪಿಸುವದಿಲ್ಲ. ಇಂಥ ವಸ್ತುಗಳಿಂದ ಅವರು ಸ್ವಭಾವದಿಂದಲೇ ದೂರ ಓಡುತ್ತಾರೆ. ಅವರೇ ಶುದ್ಧ ಸಾತ್ವಿಕರು. ಅವರು ಯಾವದೇ ಆಂದೋಲನವನ್ನು ಮಾಡುವದಿಲ್ಲ. ಕೇವಲ ಪ್ರೇಮದಲ್ಲಿಯೇ ಮಗ್ನರಾಗಿರುತ್ತಾರೆ. ಎಲ್ಲಕ್ಕೂ ಶ್ರೇಷ್ಠ ಮನುಷ್ಯನು ಶಾಂತನೂ, ಮೂಕನೂ, ಅಜ್ಞಾತನೂ ಆಗಿರುತ್ತಾನೆ. ವಿಚಾರಗಳ ಶಕ್ತಿಯು ಎಷ್ಟಿರುತ್ತದೆಂಬುದನ್ನು ಆ ಜನರೇ ನಿಜವಾಗಿ ಅರಿತಿರುತ್ತಾರೆ. ಅವರು ಯಾವದೇ

ಗುಹೆಯಲ್ಲಿ ಹೋಗಿ ಕುಳಿತು, ಆದರ ಬಾಗಿಲು ಬಂದುಮಾಡಿ ನಾಲ್ಕಾರು ಉತ್ತಮ ವಿಚಾರಗಳನ್ನು ಮಾಡಿ ಹೊರಟುಹೋದರೂ ಅವರ ಈ ವಿಚಾರಗಳು ಅನಂತ ಕಾಲದವರೆಗೆ ಜೀವಿತವಿರುವವೆಂದು ಅವರ ವಿಶ್ವಾಸವಿರುತ್ತದೆ."

ರಾಜಕುಮಾರಿ ಎರಿಸ್ಟಾರ್ಶಿ ಯಾವಾಗಲೂ ಪತ್ರ ಬರೆಯುತ್ತಿರುತ್ತಾಳೆ. ಈ ಸಲದ ಪತ್ರದಲ್ಲಿ ಆವಳು ತನ್ನ ತೊಂದರೆಗಳನ್ನು ವರ್ಣಿಸಿದ್ದಾಳೆ :

"I always look forward with joy for the
೨೦-೬-'೩೨ mail day to come round again when I may write to you. It is such a great help and means to me more than I can express into words. The fact of knowing you lit up my whole Path, giving me strength to bear all the present difficulties. It is with financial worries I have now to cope with. Please to pray for me Mahatmaji, that God might give me necessary courage and clear sight, especially for my mother's sake, who is over 80 years old. I feel it is an oredal to pass, and God will lead me through, and I offer it to him as an act of self purification that it may be counted for your sake. All my thoughts and prayers surround you, with incessant devotion and faith for brighter days. God ever keep you and bless you, dear Mahatmaji.

'O'er moor and fen, over crag and torrent
Till the night is gone.'

With deepest and faithful affection
Efy Aristarchi"

"ಟಪಾಲು ಬರುವ ದಿವಸವನ್ನು ನಾನು ಯಾವಾಗಲೂ ಉತ್ಸಾಹದಿಂದ ಪ್ರತೀಕ್ಷೆ ಮಾಡುತ್ತಿರುತ್ತೇನೆ. ಆ ದಿವಸ ನಿಮಗೆ ಬರೆಯಲಿಕ್ಕೆ ಸಿಗುತ್ತಿರುವದರಿಂದ ನನಗೆ ಆಗುವ ಉತ್ಸಾಹ ಮತ್ತು ದೊರೆಯುವ ಶಾಂತಿಗಳನ್ನು ಶಬ್ದಗಳಲ್ಲಿ ವರ್ಣಿಸುವದು ಆಶಕ್ಯವಿದೆ. ನಾನು ನಿಮ್ಮನ್ನು ಆರಿಯುಹತ್ತಿದ್ದೇನೆಂಬ ಸಂಗತಿಯೇ ನನ್ನ ಮಾರ್ಗಕ್ಕೆ ಬೆಳಕು ಕೊಡುತ್ತದೆ ಮತ್ತು ನನ್ನ ಸಂಕಟಗಳನ್ನು ನಿವಾರಣೆಮಾಡಿಕೊಳ್ಳಲು ಶಕ್ತಿಕೊಡುತ್ತದೆ. ಈಗ ನಾನು ಆರ್ಥಿಕ ಸಂಕಟದಲ್ಲಿದ್ದೇನೆ. ಮಹಾತ್ಮಾಜಿ, ದೇವರು ನನಗೆ ಆವಶ್ಯವಿದ್ದ ಧೈರ್ಯ ಮತ್ತು ಶುದ್ಧ ದೃಷ್ಟಿ ಕೊಡುವಂತೆ ನೀವು ನನ್ನ ಸಲುವಾಗಿ, ವಿಶೇಷವಾಗಿ ೮೦ ವರ್ಷ ಮೀರಿದ ನನ್ನ ತಾಯಿಯ ಸಲುವಾಗಿ, ಪ್ರಾರ್ಥನೆ ಮಾಡಿರಿ. ನನ್ನ ಪರೀಕ್ಷೆ ನಡೆದಿದೆ ಮತ್ತು ದೇವರು ಅವಶ್ಯ ಪಾರುಮಾಡುವನು. ಈ ಪರೀಕ್ಷೆಯನ್ನು ನಾನು ಆತ್ಮ

ಶುದ್ಧಿಯ ಒಂದು ಕ್ರಿಯೆ ಎಂದು ತಿಳಿಯುತ್ತೇನೆ ಮತ್ತು ಅದನ್ನು ನಿಮ್ಮ ಹೆಸರಿಗೆ ಅರ್ಪಣಮಾಡುತ್ತೇನೆ. ಹೆಚ್ಚು ಉತ್ತಮ ದಿವಸಗಳ ಆಶೆಯಿಂದ ನನ್ನ ವಿಚಾರಗಳು ಮತ್ತು ಪ್ರಾರ್ಥನೆಗಳು ಅವಿರತ ನಿಷ್ಠೆಯಿಂದಲೂ, ಶ್ರದ್ಧೆಯಿಂದಲೂ ನಿಮ್ಮನ್ನು ಅನುಲಕ್ಷಿಸಿ ನಡೆದಿರುತ್ತವೆ. ಪ್ರಿಯ ಮಹಾತ್ಮಾಜಿ, ದೇವರು ನಿಮ್ಮನ್ನು ರಕ್ಷಿಸಲಿ ಮತ್ತು ನಿಮ್ಮ ಕಲ್ಯಾಣಮಾಡಲಿ.

'कठिन भूमि गिरिवरकी घाटी, शोर मचाती नदियाँ बहतीं ।
सबके पार लगा अपनाओ, मैं हूँ नाथ तुम्हारी दासी ।'

'ಪರ್ವತದ ಮೇಲಿನ ದಾರಿಗಳು ಕಠಿಣವಾಗಿರುತ್ತವೆ. ನದಿಗಳು ಗರ್ಜನೆ ಮಾಡುತ್ತ ಹರಿಯುತ್ತಿವೆ. ಇವೆಲ್ಲವುಗಳಿಂದ ನನ್ನನ್ನು ಪಾರುಮಾಡಿ ನನ್ನನ್ನು ನಿಮ್ಮವಳನ್ನಾಗಿ ಮಾಡಿಕೊ. ದೇವರೇ ನಾನು ನಿನ್ನ ದಾಸಿ.'

ಎರಿಸ್ಟಾಶಿಯ ಪ್ರೇಮಪೂರ್ವಕ ಪ್ರಣಾಮ."

ಮತ್ತೊಂದು ಕಾರ್ಡಿನ ಮೇಲೆ ಸುಂದರ ಚಿತ್ರವಿತ್ತು ಹಿಂಬದಿಗೆ "ईशावास्यमिदं सर्व यत्किंच जगत्यांजगत्" ಎಂಬ ಮಂತ್ರವಿತ್ತು.

ಬಾಪೂ ಬರೆದರು:

"Dear sister,

I continue to receive your kind messages. The latest brings the news of your financial worries. My prayers are certainly with you. Those who walk in the fear of God do not fear financial or any other losses. They often come to the God-fearing as blessings in disguise. May this trouble be so with you. Your faith and fortitude should cheer your aged mother.

Yours sincerely
M. K. Gandhi

"You know the next part of the beautiful verse you have quoted from an Upanishad. It means 'Enjoy the world by renouncing all.' How apposite!"

"ಪ್ರಿಯ ಸಹೋದರಿ,

"ನಿನ್ನ ಪ್ರೇಮಪೂರ್ವಕ ಪತ್ರಗಳು ನನಗೆ ಮುಟ್ಟುತ್ತಿರುತ್ತವೆ. ತೀರ ಇತ್ತೀಚಿನ ಪತ್ರದಲ್ಲಿ ನಿನ್ನ ಆರ್ಥಿಕ ತೊಂದರೆಯ ಉಲ್ಲೇಖವಿದೆ. ನಾನು ನಿನ್ನ ಸಲುವಾಗಿ ಅವಶ್ಯವಾಗಿ ಪ್ರಾರ್ಥನೆ ಮಾಡುತ್ತೇನೆ. ದೇವರಿಗೆ ಅಂಜಿ ನಡೆಯುವವನು ದ್ರವ್ಯ-

ಕ್ಕಾಗಲಿ ಅಥವಾ ಬೇರೆ ಪ್ರಕಾರದ ಯಾವದೇ ಹಾನಿಗಾಗಲಿ ಅಂಜುವ ಕಾರಣವಿಲ್ಲ. ದೇವರ ಭಕ್ತರಿಗೆ ಎಷ್ಟೋ ಸಾರೆ ಇಂಥ ಸಂಕಟಗಳು ಅದೃಶ್ಯ ಆಶೀರ್ವಾದಗಳೆಂದು ಸಿದ್ಧವಾಗುತ್ತವೆ. ನಿನ್ನ ಶ್ರದ್ಧೆ ಮತ್ತು ಧೈರ್ಯಗಳಿಂದ ನಿನ್ನ ತಾಯಿಗೆ ಉತ್ಸಾಹ ದೊರೆಯುವದು.

ನಿನ್ನ

ಮೋ. ಕ. ಗಾಂಧೀ

" ನೀನು ಉಪನಿಷತ್ತಿನಿಂದ ಉಧೃತ ಮಾಡಿದ ಸುಂದರ ಶ್ಲೋಕದ ಚರಣದ ಉತ್ತರಾರ್ಧವು ಹೀಗಿದೆ. '**तेन त्यक्तेन भुंजीथाः**' ಇದು ಎಷ್ಟು ಯಥಾ-ಯೋಗ್ಯವಿದೆ ! "

ಅಬ್ಬಾಸ ಬಾಬಾ ಮರಳಿ ಜೇಲಿಗೆ ಬಾರದಿದ್ದಕ್ಕೆ ಅವರಿಗೆ ಎಷ್ಟು ದುಃಖ ವಾಗಿದೆಯೆಂಬುದನ್ನು ತಿಳಿಯಲು ಒಂದು ವಾಕ್ಯ ಸಾಕು :

" Need I say there is hardly a minute of my conscious hours when I am not thinking of you and your companions and wondering how much I am disappointing you ? "

" ನಾನು ಜಾಗ್ರತನಿರುವ ಕಾಲಕ್ಕೆ ನಿಮ್ಮ ಹಾಗೂ ನಿಮ್ಮ ಸಂಗಡಿಗರನ್ನು ಕುರಿತು ವಿಚಾರ ಮಾಡದೆ ಒಂದು ಕ್ಷಣ ಸಹ ಹೋಗುವದಿಲ್ಲ ಮತ್ತು ನಿಮ್ಮನ್ನು ಎಷ್ಟು ನಿರಾಶೆ ಗೊಳಿಸುತ್ತಿದ್ದೇನೆಂದು ಯೋಚನೆಯಾಗುತ್ತದೆ. "

ಅವರಿಗೆ ಬರೆದ ಪತ್ರದಲ್ಲಿ ಬಾಪೂ ಹೇಳಿದರು :

" You can't disappoint me even if you try. You may not therefore, allow such a thought to depress you. "

" ನೀವು ಎಷ್ಟು ಪ್ರಯತ್ನಮಾಡಿದರೂ ನನ್ನನ್ನು ನಿರಾಶಮಾಡಲಾರಿರಿ. ಆದುದರಿಂದ ಇಂಥ ವಿಚಾರಮಾಡಿ ಉದಾಸರಾಗಬಾರದು. "

ಪಾಪ ! ರೈಹಾನಾ ಆಜಾರಿಯಿಂದ ತ್ರಸ್ತಳಾಗಿದ್ದಾಳೆ. ಅವಳಿಗೆ ಬಾಪೂ ಉರ್ದುವಿನಲ್ಲಿ ಬರೆದರು : " ನಿರೋಗಿ ಇರುವದು ಒಳ್ಳೆಯದೊ ರೋಗಿ ಇರುವದು ಒಳ್ಳೆಯದೊ ಯಾರಿಗೆ ಗೊತ್ತು ? ನಲ ದಮಯಂತಿಯ ಕತೆಯನ್ನು ಕೇಳಿರುವಿರಲ್ಲವೇ ? ನಳನು ಬಹಳ ಸುಂದರನಿದ್ದನು. ಅವನನ್ನು ರಕ್ಷಿಸಲಿಕ್ಕೆ ದೇವರು ಕರ್ಕೋಟಕ ನಾಗನಿಗೆ ಆಜ್ಞೆಮಾಡಿದನು—ಹೋಗು ನಳನನ್ನು ಕಡಿದು ಅವನನ್ನು ಕುರೂಪಿಯನ್ನಾಗಿ ಮಾಡು. ನಾಗನು ಕಡಿದ ಕೂಡಲೇ ನಳನು ಗಾಬರಿಯಾದನು. ಕೊನೆಗೆ ಅವನಿಗೆ ಇದು ದೇವರ ಆಜ್ಞೆಯೆಂದು ಗೊತ್ತಾಯಿತು. ಸರಿಯಾಗಿ ಇದೇ ರೀತಿಯಲ್ಲಿ ನಿಮ್ಮ ಬಗ್ಗೆಯೂ ತಿಳಿಯುತ್ತೇನೆ. ಆದುದರಿಂದ ನೋವಿಗೆ ಉಪಚಾರ

ಮಾಡುತ್ತಿರಬೇಕು, ಆದರೆ ಒಳಿತು–ಕೇಡು ಇವುಗಳನ್ನು ಕುರಿತು ಸ್ವಲ್ಪೂ ಕಾಳಜಿ ಮಾಡಬಾರದು. ನೀವು ಎಲ್ಲ ಸ್ಥಿತಿಯಲ್ಲಿ ಹಾಡುತ್ತ ಕುಣಿಯುತ್ತ ಇರಬೇಕು ಮತ್ತು ಆಮ್ಮಾಜಾನರ ಸೇವೆಯಲ್ಲಿರಬೇಕು. ( ನಂತರ ಗುಜರಾತಿಯಲ್ಲಿ ) ನನ್ನ ಭಾಷಣವು ಪೂರ್ಣವಾಯಿತು. ನಿಮಗೆ ಏನೇ ಆದರೂ ನಗುತ್ತಲೇ ಇರಬೇಕು. ನೀವು ದೇವರಿಗೆ ಸರ್ವಸ್ವವನ್ನು ಅರ್ಪಣಮಾಡಿದ್ದರೆ ಶರೀರವು ಅವನದಿರುತ್ತದೆ, ನಿಮ್ಮದಲ್ಲ. ರೋಗವೂ ಸಹ ಅವನಿಗೇ, ನಿಮಗಲ್ಲ. ಅಂದಮೇಲೆ ದುಃಖವೆಂತ-ಹದು? ನೀವು ಗುಜರಾತಿಯಲ್ಲಿ ಕಳಿಸಿದ ಗಜಲ ( ಪದ್ಯ ) ನ್ನು ತಿಳಿದುಕೊಳ್ಳ ಬೇಕಾಗುವದು. ನಿಮಗೆ ಚತುರ ಶಿಷ್ಯ ದೊರೆತಿದ್ದಾನೆಂದು ನೀವು ತಿಳಿದಿರುವಿರಿ. ಸ್ವಲ್ಪೇ ಸಮಯದಲ್ಲಿ ನಿಮ್ಮ ಕಣ್ಣು ತೆರೆಯುವವು. ಚತುರನೇ ಇದ್ದರೆ ಅವನು ಶಿಷ್ಯನೇಕಾಗುತ್ತಾನೆ? ಅದು ಸಹ ನಿಮ್ಮಂಥ ಗುರುವಿನದೆ? ಆದುದರಿಂದ ಅಡ್ಡಿ ಇಲ್ಲ. ನಿಮ್ಮಂತೆಯೇ ನಾನು. ಅಥವಾ ನನ್ನಂತೆಯೇ ನೀವು. ನೀವು ನನ್ನನ್ನು ಶಿಷ್ಯನನ್ನು ಮಾಡಿಕೊಂಡಿರೊ ಅಥವಾ ನಾನು ನಿಮ್ಮನ್ನು ಗುರುವಿನ ಪೀಠದ ಮೇಲೆ ಕೂಡ್ರಿಸಿದೆನೊ ಎಂಬುದನ್ನು ಯಾರು ಹೇಳಬೇಕು ?"

*　　　*　　　*

' ವಸಂತ 'ದ ಫಾಲ್ಗುಣ ಅಂಕಿನಲ್ಲಿಯ ಆನಂದಶಂಕರರ ಪ್ರಾಸಂಗಿಕ ಟಿಪ್ಪಣಿಯಿಂದ ವಲ್ಲಭಭಾಯಿಯವರಿಗೂ ನನಗೂ ಸಿಟ್ಟು ಬಂತು. ' ಆವರು ನಮ್ಮ ಯುದ್ಧವನ್ನು ಹಿಂದಿನ ಮಹಾಯುದ್ಧದ ಸಂಗಡ ಹೇಗೆ ತುಲನೆ ಮಾಡಿದರು? ಪ್ರಜರ ನಿರ್ಧನತೆಯು ಮತ್ತು ಬೇರೆ ಮಾತುಗಳನ್ನೂ ಯುದ್ಧದಲ್ಲಿ ಯಾವದೇ ಪಕ್ಷದ ಕಲ್ಯಾಣವಾಗುವದಿಲ್ಲ ಎಂಬ ಪ್ರಕಾರದ ಮಾತುಗಳನ್ನೂ ಹೇಳಿ ವ್ಯರ್ಥ ಆಗಂತುಕ ಸಲಹೆಯನ್ನು ಏಕೆ ಕೊಡುತ್ತಾರೆ?' ಮುಂತಾಗಿ. ಬಾಪೂ ಹೇಳಿದರು : " ಇಲ್ಲ, ಹೀಗಿರುವದಿಲ್ಲ. ನೀವು ಅಹಿಂಸೆಯನ್ನು ಮರೆಯತೊಡಗಿರುವಿರೆಂದು ಅವರು ಹೇಳಿರುವರು. ಆದುದರಿಂದ ಈ ಯುದ್ಧವು ಸಾಮಾನ್ಯ ಯುದ್ಧದಂತೆ ಆಗುತ್ತ ನಡೆದಿದೆ. ನಮ್ಮಿಂದ ತಪ್ಪುಗಳಾಗುತ್ತವೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಈ ಟಪಾಲು ಪೆಟ್ಟಿಗೆ ಸುಡುವದನ್ನು ಯಾರು ಸೂಚಿಸಿರಬಹುದು? ಇದರಲ್ಲಿ ವ್ಯರ್ಥ ಅಪಾರ ಹಾನಿಯಾಗುತ್ತದೆ. ಈ ಪ್ರಕಾರ ಈ ಯುದ್ಧವು ಸಾಮಾನ್ಯಯುದ್ಧದ ಕಕ್ಷೆಯೊಳಗೆ ಇಳಿಯತೊಡಗಿದೆಯೆಂದು ಆನಂದಶಂಕರರು ಹೇಳುತ್ತಾರೆ." ನಾನು ಹೇಳಿದೆ : " ಆದರೆ ಹಿಂದಿನ ಉದ್ಗಾರಗಳಲ್ಲಿ ಇಂಥ ಯಾವದೇ ಮಾತು ಇರುವದಿಲ್ಲ. ' ನಮ್ಮ ಯುದ್ಧವು ದೀರ್ಘಕಾಲ ನಡೆದರೆ ಎರಡೂ ಪಕ್ಷಗಳಿಗೆ ಸಾಕಷ್ಟು ಹಾನಿಮಾಡಿಯೇ ಬಂದಾಗುವದು. ನಾವಂತೂ ಈ ಯುದ್ಧದಲ್ಲಿ ಒಂದೂ ಪಕ್ಷದ ಇಷ್ಟಸಿದ್ಧಿಯ ಮಾರ್ಗವನ್ನು ನೋಡುವದಿಲ್ಲ.' ಈ ಎಲ್ಲ ಉದ್ಗಾರಗಳಲ್ಲಿ ಈ ಯುದ್ಧವನ್ನೇ ಕೇಳು

ಗಳಿದಿದ್ದಾರೆ." ಬಾಪೂ: "ಇಲ್ಲ, ಇಲ್ಲ, ಇದರ ಅರ್ಥವಿಷ್ಟೇ ನಾವು ಅಹಿಂಸೆಯನ್ನು ಮರೆತಿದ್ದೇವೆ."

ನಾನು: "ಹಾಗಾದರೆ ನೀವು ಇಂಥ ಇಂಥ ವಿಷಯಗಳಲ್ಲಿ ಅಹಿಂಸೆಯಿಂದ ಚ್ಯುತರಾಗಿದ್ದೀರಿ ಎಂದು ಅವರು ಹೇಳಬೇಕಿತ್ತು."

ಬಾಪೂ : "ಇದು ಸರಿ. ಆದರೆ ಇದು ಆನಂದಶಂಕರರ ಶಕ್ತಿಯ ಹೊರಗಿನ ಮಾತು. ಅವರಿಗೆ ಯಾವಾಗಲೂ ನ್ಯಾಯಾಧೀಶರ ಸ್ಥಾನವನ್ನು ತೆಗೆದು ಕೊಳ್ಳುವ ರೂಢಿಯಿದೆ— ನಟರಾಜನ್ನರಂತೆ. ಇವರಿಬ್ಬರೂ ಬುದ್ಧಿವಾದಿಗಳಿದ್ದಾರೆ. ಹೃದಯವು ಮೆಲ್ಲ ಮೆಲ್ಲಗೆ ಹಿಂದೆ ಸರಿಯುತ್ತದೆ. ನ್ಯಾಯಾಧೀಶರ ಸ್ಥಾನ ತೆಗೆದು ಕೊಂಡರೆ ನನಗೆ ತೊಂದರೆಯಿಲ್ಲ. ಪ್ರತಿಯೊಬ್ಬ ವೃತ್ತಪತ್ರಕಾರನೂ ನ್ಯಾಯಾಧೀಶನ ಸ್ಥಳ ತೆಗೆದುಕೊಳ್ಳುತ್ತಾನೆ. ಆದರೆ ಇದರಿಂದ ಎರಡು ಪಕ್ಷಗಳಲ್ಲಿ ಒಂದು ಸತ್ಯವಾಗಿರಲೇಬೇಕೆಂದು ಅವರು ತಿಳಿದುಕೊಳ್ಳುವ ಕಾರಣವಿಲ್ಲ. ಅವರು ಎರಡೂ ಪಕ್ಷಗಳನ್ನು ಕುರಿತು ತಟಸ್ಥಭಾವದಿಂದ ಶೋಧಮಾಡಲೇಬೇಕು ಮತ್ತು ಒಂದು ಪಕ್ಷವು ತೀರ ಸುಳ್ಳಿದ್ದರೆ ಅದರಂತೆ ಹೇಳಬೇಕು, ಒಬ್ಬರದೇ ತಪ್ಪಿದ್ದರೆ ಅದನ್ನು ಬೈಲಿಗೆಳೆಯಬೇಕು. ನಮ್ಮ ಯುದ್ಧದ ಜಮಾ ರಕಮನ್ನು ತೋರಿಸುವದು ಆನಂದ ಶಂಕರರ ಶಕ್ತಿಯಲ್ಲ. ಉದ್ಧಾರಿಯನ್ನು ತೋರಿಸಿ, 'ನೋಡಿರಿ, ಇದರಿಂದ ನಿಮ್ಮ ಎಲ್ಲ ಜಮಾ ತೀರಿಹೋಗುವದು' ಎಂದು ಹೇಳುವರು."

* * *

ಇವತ್ತು ವಲ್ಲಭಭಾಯಿಗೆ ಬಂದ ಪತ್ರದಲ್ಲಿ ಅವರ ೯೦ ವರ್ಷದ ತಾಯಿಯು ಇನ್ನೂ ಅಡಿಗೆ ಮಾಡುತ್ತಾರೆಂಬ ಸುದ್ದಿಯಿದೆ. ಕಾಶೀಭಾಯಿಯು ಅವರಿಗೆ ಸಾಮಾನುಗಳನ್ನು ಸರಿ ಮಾಡಿಕೊಡುತ್ತಾರೆ ಮತ್ತು ಮುದುಕಿಯು ಬೇಳೆ, ಅನ್ನ ಮತ್ತು ಪಲ್ಲೆಯನ್ನು ಮಾಡಿಕೊಡುತ್ತಾರೆ. ಇದು ಸಹ ಆ ಕಾಲದ ಒಂದು ಚಮತ್ಕಾರವೆ. ಹತ್ತು ವರುಷ ಮೊದಲು ಅವರಿಂದ ಅಡಿಗೆ ಮಾಡುವದನ್ನು ಬಿಡಿಸ ಹೋಗಿದ್ದರೆ ಅವರು ಇಲ್ಲೆನ್ನಬಹುದಾಗಿತ್ತು. ಇವತ್ತು ೩೦ ವರುಷದ ಸಾಧಾರಣ ಶಿಕ್ಷಣವನ್ನು ಹೊಂದದ ಸ್ತ್ರೀಯು ಕೂಡ ಅಡಿಗೆ ಮಾಡಲಿಕ್ಕೆ ಅಂಜುತ್ತಾಳೆ.

ಕೆಲವು ಕೈದಿಗಳು ನಿನ್ನೆ ಬಂದ ಕಮೀಟಿಯ ಮುಂದೆ ಸುಪರಿಂಟೆಂಡೆಂಟರು ಅವರ ಯಾರ್ಡಿನಲ್ಲಿ ೧೩ ನೇ ತಾರೀಖಿನ ನಂತರ ಬರಲಿಲ್ಲವೆಂದೂ ಈ ಅವಧಿಯಲ್ಲಿ ಅವರಿಗೆ ಬಹಿರ್ದಿಶೆಗೆ ಹೋಗಲು ಸಾಕಷ್ಟು ಸಮಯ ಕೊಡುತ್ತಿದ್ದಿಲ್ಲವೆಂದೂ ತಕರಾರು ಮಾಡಿದರೆಂದು ಇವತ್ತು ಸುಪರಿಂಟೆಂಡೆಂಟರು ದೂರು ಹೇಳಿದರು. ನಾನು ಒಂದು ದಿವಸ

೨೧–೬–'೩೨

ಬಿಟ್ಟು ಒಂದು ದಿವಸ ಅಲ್ಲಿ ಹೋಗುತ್ತೇನೆ. ಆದರೂ ಮುಂಬೈಯಿಂದ ಬಂದ ಈ ಕೈದಿಗಳು ಏತಕ್ಕಾಗಿ ಸುಳ್ಳಾಡಿರಬಹುದು? ನಾನು ಈ ಜನರಿಗೆ ಶಿಕ್ಷೆಕೊಡುವೆನು ಎಂದು ಸುಪರಿಂಟೆಂಡೆಂಟರು ಹೇಳುತ್ತಾರೆ. ಬಿಚ್ಚುಮನಸ್ಸಿನವನಿರುವದರಿಂದ ಶಿಕ್ಷಿಸುವೆನೆಂದು ಹೇಳಿದರು. ವಲ್ಲಭಭಾಯಿ ಹೇಳಿದರು: "ಅವನು ಎಲ್ಲಕ್ಕೂ ದೊಡ್ಡ ಜೇಲಿನ ಸುಪರಿಂಟೆಂಡೆಂಟನಿದ್ದಾನೆಂದು ಹೇಗೆ ಗೊತ್ತಾಗಬೇಕು? ಅವನು ಸತ್ಯ ಸಂಗತಿಯನ್ನು ಹೇಳುತ್ತಾನೆಂಬುದು ಹೇಗೆ ಗೊತ್ತು? ಆ ಜನರ ಹೇಳಿಕೆ ಏನೆಂಬುದು ನಮಗೆಲ್ಲಿ ಗೊತ್ತಿದೆ?" ಬಾಪೂ: "ನಿಮ್ಮನ್ನು ಯಾವದಾದರೂ ಜೇಲಿನ ಸುಪರಿಂ-ಟೆಂಡೆಂಟರೆಂದು ನಿಯಮಿಸಿದರೆ ಗೊತ್ತಾಗುವದು." ಇದೇ ಪ್ರಕಾರ ಪ್ರೇಮಾಬಹೆನಳು ಸುಪರಿಂಟೆಂಡೆಂಟರ ಬಗ್ಗೆ ಮಾಡಿದ ಅನುದಾರ ಟೀಕೆಗೆ ಉತ್ತರ ಕೊಡುತ್ತ ಬಾಪೂ ಸುಪರಿಂಟೆಂಡೆಂಟರ ಪಕ್ಷವೆತ್ತಿ ಪ್ರೇಮಾಬಹೆನಳನ್ನು ನಾಚಿಸಿದ್ದರೆಂದು ಅವಳು ತನ್ನ ಇಂದಿನ ಪತ್ರದಲ್ಲಿ ಬರೆಯುತ್ತಾಳೆ. ನಿನ್ನೆ ಆನಂದಶಂಕರಭಾಯಿಯವರ ವಿಷಯಕ್ಕೂ ಹೀಗೇ ಮಾಡಿದ್ದರು.

*　　*　　*

ನಿಮ್ಮಲ್ಲಿ ದೇವರ ವಿಷಯಕ್ಕೆ ಶ್ರದ್ಧೆಯು ಯಾವಪ್ರಕಾರ ಜಾಗ್ರತವಾಯಿತು ಎಂಬುದರ ಬಗ್ಗೆ ಜೀವನದಲ್ಲಿಯ ಯಾವದಾದರೂ ವಿಶಿಷ್ಟ ಪ್ರಸಂಗವನ್ನು ತಿಳಿಸಿರಿ ಎಂದು ಹನುಮಾನ್‌ಪ್ರಸಾದ ಪೋದ್ದಾರರು ಒಂದು ತಿಂಗಳ ಹಿಂದೆ ಪತ್ರಬರೆದು ಕೇಳಿದ್ದರು. ಇದನ್ನು ನಿಮ್ಮ ಸಲುವಾಗಿ ಕೇಳುತ್ತೀರೊ ಅಥವಾ 'ಕಲ್ಯಾಣ' ದಲ್ಲಿ ಎಂದಾದರೂ ಛಾಪಿಸುವದರ ಸಲುವಾಗಿ ಕೇಳುತ್ತೀರೊ ಎಂದು ಬಾಪೂ ಕೇಳಿದ್ದರು. 'ಕಲ್ಯಾಣ' ದ ಉಪಯೋಗದ ಸಲುವಾಗಿ ಎಂದು ಈಗ ಅವರ ಪತ್ರ ಬಂತು. ಅವರಿಗೆ ತಿರುಗಿ ಪತ್ರಬರೆದರು: "ಯಾವದಾದರೂ ವ್ಯಕ್ತಿಯನ್ನು ಎದುರಿಗಿಟ್ಟುಕೊಂಡು ಆಧ್ಯಾತ್ಮಿಕ ಪ್ರಶ್ನೆಯ ಉತ್ತರಕೊಡಲಿಕ್ಕೆ ನನಗೆ ಅನುಕೂಲವಾಗುತ್ತದೆ. ವೃತ್ತಪತ್ರಗಳಿಗೆ ಬರೆಯಲಿಕ್ಕೆ ಕಷ್ಟವಾಗುತ್ತದೆ. ನನಗೆ ಕೇಳಿದ ಪ್ರಶ್ನೆಯು 'ಕಲ್ಯಾಣ' ದ ಸಲುವಾಗಿಯೇ ಇತ್ತೆಂದು ಈಗ ನನಗೆ ಗೊತ್ತಾಯಿತು. ಹಾಗಾದರೆ ನನ್ನ ಬುದ್ಧಿಯು ಜಡವಾಗಿದೆಯೆಂದು ತಿಳಿಯಿರಿ. ವೃತ್ತಪತ್ರದಲ್ಲಿ ಏನಾದರೂ ಬರೆದರೆ ಅದರಿಂದ ಜನರಿಗೆ ಲಾಭವಾಗುವದಿಲ್ಲವೆಂದು ಇದರ ಅರ್ಥವಲ್ಲ. ನಾನು ನನ್ನ ಪ್ರಕೃತಿಯ ವಿಚಾರ ಹೇಳುತ್ತಿದ್ದೇನೆ. ಇದೇ ಕಾರಣದಿಂದ ನಾನು 'ಯಂಗ ಇಂಡಿಯಾ'ದಲ್ಲಿ ಅನೇಕ ಸಲ ಬರೆದಿದ್ದೇನೆ. ನನ್ನ ದೃಷ್ಟಿಯಿಂದ ಅದು ವೃತ್ತಪತ್ರವಿದ್ದಿಲ್ಲ, ಆದರೆ ಮಿತ್ರರಿಗೆ ನನ್ನ ಸಾಪ್ತಾಹಿಕ ಪತ್ರವಿತ್ತು. ಅದರಲ್ಲಿ ಅಥವಾ 'ನವಜೀವನ' ದಲ್ಲಿ ಬರುವ ಯಾವದೇ ಆಧ್ಯಾತ್ಮಿಕ ವಿಷಯಗಳು ಬಹುತರವಾಗಿ ಒಂದಿಲ್ಲೊಂದು ವ್ಯಕ್ತಿಯನ್ನು ಎದುರಿಗಿಟ್ಟುಕೊಂಡೇ ಬರೆಯಲ್ಪಟ್ಟಿವೆ. ಇದಕ್ಕೆ

ಕಾರಣವಿದೆ. ನಾನು ಶಾಸ್ತ್ರಜ್ಞನಲ್ಲ. ಆದರೂ ಬುದ್ಧಿಯ ಉಪಯೋಗವನ್ನು ಸಾಕಷ್ಟು ಮಾಡಿಕೊಳ್ಳುತ್ತೇನೆ. ಆದರೆ ನಾನು ಏನೇ ಮಾತಾಡುವದು ಅಥವಾ ಬರೆಯಲಿ ಬುದ್ಧಿಯಿಂದ ಉತ್ಪನ್ನವಾಗುವದಿಲ್ಲ. ಅದರ ಮೂಲವು ಹೃದಯ ದಲ್ಲಿರುತ್ತದೆ ಮತ್ತು ಹೃದಯದ ಮಾತು ನಿಬಂಧ ರೂಪದಲ್ಲಿ ಬರಲಾರದು."

ಬಾಪೂ ಇದನ್ನೂ ಬರೆದಿದ್ದರು: "ಯಾರಿಗೆ ಯಾವ ಪ್ರಸಂಗದಲ್ಲಿ ಈಶ್ವರ ಜ್ಞಾನವಾಯಿತೆಂಬುದನ್ನು ತಿಳಿಯುವದರಿಂದ ಈಶ್ವರಜ್ಞಾನವಾಗುವದಿಲ್ಲ, ಆದರೆ ಅದು ಸಂಯಮಮಯವಾದ ಶ್ರದ್ಧೆಯಿಂದ ಬರುತ್ತದೆ." ಪೋದ್ದಾರರು ಸಂಯಮ ಮಯವಾದ ಶ್ರದ್ಧೆಯ ಸ್ಪಷ್ಟೀಕರಣವನ್ನು ಕೇಳಿದ್ದರು. "'ಸಂಯಮಮಯ ಶ್ರದ್ಧೆ' ಈ ಶಬ್ದ ಪ್ರಯೋಗವನ್ನು ನಾನು ನಿರುಪಾಯನಾಗಿ ಮಾಡಿದ್ದೆನು. ಅದು ನನ್ನ ಎಲ್ಲ ಭಾವಗಳನ್ನು ಸ್ಪಷ್ಟಪಡಿಸುವದಿಲ್ಲ. ಬೇರೆ ಶಬ್ದ ರಚನೆಯು ಈ ಸಮಯಕ್ಕೆ ನನ್ನ ಲಕ್ಷ್ಯದಲ್ಲಿ ಬರಲೊಲ್ಲದು. ತಾತ್ಪರ್ಯವಿಷ್ಟೇ, ಈ ಶ್ರದ್ಧೆಯು ಮೂಢ, ವಿವೇಕಹೀನ ಮತ್ತು ಅಂಧವಾದದ್ದು ಇರಬಾರದು. ಅರ್ಥಾತ್ ಬುದ್ಧಿಯು ಕೆಲಸ ಮಾಡುವ ಸ್ಥಳದಲ್ಲಿ ಯಾರಾದರೂ 'ಬುದ್ಧಿ ಏನೇ ಹೇಳಲಿ, ನಾನು ಶ್ರದ್ಧೆಯಿಂದ ಅದನ್ನೇ ಒಪ್ಪುತ್ತೇನೆ ಮತ್ತು ಒಪ್ಪುವೆನು.' ಎಂದು ಹೇಳಿದರೆ ಶ್ರದ್ಧೆಯಲ್ಲಿ ಸಂಯಮವಿಲ್ಲ ಎಂದು ತಿಳಿಯಬೇಕು. ಪೃಥ್ವಿಯು ದುಂಡಾಗಿದೆಯೋ ಇಲ್ಲವೊ ಎಂದು ಹೇಳುವದು ಬುದ್ಧಿಯ ವಿಷಯವು. ಆದರೆ ಯಾರಾದರೂ ಪೃಥ್ವಿಯು ಸಮಪಾತಳಿ ಇರುವದಾಗಿ ನನ್ನ ಶ್ರದ್ಧೆಯಿದೆಯೆಂದು ಹೇಳಿದರೆ! ಈ ಶ್ರದ್ಧೆಯು ಸಂಯಮಮಯವಾದುದು ಇರುವದಿಲ್ಲ."

ಪತ್ರದ ಮೇಲ್ಭಾಗದಲ್ಲಿ ತೋರಿಸಿದ ಭೇದವು ಬಾಪೂರ ಲೇಖ ಮತ್ತು ಕಾಕಾ-ರಂಥವರ ನಿಬಂಧಗಳ ನಡುವಿನ ಭೇದವನ್ನು ತೋರಿಸುತ್ತದೆ. ರೋಮಾ ರೋಲಾ ಇವರು ಬಾಪೂ intellectual ( ಬುದ್ಧಿ ಪ್ರಧಾನ ) ಅಲ್ಲ ಎಂದು ಹೇಳು-ವಾಗ ಬಹುತರ ಇದರ ಪೂರ್ಣ ಕಲ್ಪನೆಯಿಲ್ಲದೆ ಬಾಪೂ ಹೇಳುವದನ್ನೇ ಹೇಳಲಿಚ್ಛಿಸುತ್ತಾರೆ.

* * *

ಮ್ಯುರಿಯಲ್ ಲಿಸ್ಟರರ ಸಂಗಡ ಕೆಲಸಮಾಡುತ್ತಿರುವ ಒಬ್ಬ ಹೆಣ್ಣು ಮಗಳು ಸೌಂದರ್ಯವನ್ನು ನೋಡುವ ಮತ್ತು ಭೋಗಿಸುವ ಲಾಲಸೆಯು ಏಕಾಗುತ್ತದೆ ಎಂದು ಪ್ರಶ್ನೆ ಕೇಳಿದ್ದಳು. ಆವಳಿಗೆ ಬಾಪೂ ಬರೆದರು:

"A craving for things of beauty is perfectly natural. Only there is no absolute standard of beauty. I have therefore come to think that craving is not to be satisfied; but that from the craving for things outside of us, we must learn to see beauty from

within. And when we do that, a whole vista of beauty is opened out to us and the love of appropriation vanishes. I have expressed myself clumsily but you follow what I mean."

"ಸುಂದರ ವಸ್ತುಗಳನ್ನು ಇಚ್ಛಿಸುವದು ತೀರ ಸ್ವಾಭಾವಿಕವು. ಆದರೆ ಸೌಂದರ್ಯ ಏತಕ್ಕೆನ್ನಬೇಕೆಂಬ ವಿಷಯಕ್ಕೆ ನಿಶ್ಚಿತ ಅಳತೆಗೋಲು ಇರುವದಿಲ್ಲ. ಆದುದರಿಂದ ಈ ಇಚ್ಛೆಯು ಪೂರ್ತಿಮಾಡಲು ಯೋಗ್ಯವಾಗಿರುವದಿಲ್ಲವೆಂಬ ವಿಚಾರಕ್ಕೆ ನಾನು ಬಂದಿದ್ದೇನೆ. ಬಾಹ್ಯ ವಸ್ತುಗಳಲ್ಲಿ ಲೋಲುಪತೆಯನ್ನು ಇಡುವದರ ಬದಲು ನಾವು ಆಂತರಿಕ ಸೌಂದರ್ಯವನ್ನು ನೋಡಲಿಕ್ಕೆ ಕಲಿಯಬೇಕು. ಇದು ನಮಗೆ ಬಂದರೆ ಸೌಂದರ್ಯದ ವಿಶಾಲ ಕ್ಷೇತ್ರವು ನಮ್ಮೆದುರಿಗೆ ನಿಲ್ಲುವದು. ಆ ನಂತರ ಇದರ ಮೇಲೆ ಅಧಿಕಾರ ಪ್ರಾಪ್ತಮಾಡಿಕೊಳ್ಳುವ ಇಚ್ಛೆಯು ಇಲ್ಲದಂತಾಗುತ್ತದೆ. ನಾನು ಈ ವಿಷಯವನ್ನು ಸ್ವಲ್ಪ ಅವ್ಯವಸ್ಥಿತ ರೀತಿಯಿಂದ ಇಟ್ಟಿದ್ದೇನೆ. ಆದರೆ ನಾನು ಹೇಳುವದನ್ನು ನೀವು ತಿಳಿದುಕೊಳ್ಳಬಲ್ಲಿರೆಂದು ಆಶಿಸುತ್ತೇನೆ."

ಎರಡನೇ ಪ್ರಶ್ನೆಯನ್ನು ಅವಳು purpose of life (ಜೀವನದ ಧ್ಯೇಯ)ದ ವಿಷಯಕ್ಕೆ ಕೇಳಿದ್ದಳು. ಅದನ್ನು ಕುರಿತು ಬರೆದರು :

"The purpose of life is undoubtedly to know oneself. We cannot do it unless we learn to identify ourselves with all that lives. The sum total of that life is God. Hence the necessity of realizing God living within everyone of us. The instrument of this knowledge is boundless selfless service."

"ಜೀವನದ ಧ್ಯೇಯವು ನಿಸ್ಸಂದೇಹವಾಗಿ ತನ್ನನ್ನು—ಆತ್ಮನನ್ನು—ಗುರುತಿಸುವದಿರುತ್ತದೆ. ಪ್ರಾಣಿಮಾತ್ರಗಳ ಸಂಗಡ ನಾವು ಆ ಭೇದವನ್ನು ಅನುಭವಿಸಲಿಕ್ಕೆ ಕಲಿಯದ ವರೆಗೆ ಆತ್ಮನನ್ನು ಗುರುತಿಸಲಾರೆವು. ಇಂಥ ಜೀವನದ ಸಮಗ್ರ ಯೋಗವೇ ದೇವರು. ಆದುದರಿಂದ ನಮ್ಮೆಲ್ಲರಲ್ಲಿಯೂ ಇರತಕ್ಕಂಥ ದೇವರನ್ನು ಗುರುತಿಸುವದು ಅವಶ್ಯವಿದೆ. ಇಂಥ ಜ್ಞಾನವು ಅಪರಿಮಿತವೂ ನಿಸ್ವಾರ್ಥವೂ ಆದ ಸೇವೆಯಿಂದಲೇ ಪ್ರಾಪ್ತವಾಗಬಲ್ಲದು."

ಅಸ್ಪೃಶ್ಯೋದ್ಧಾರದ ಬಾವುಟವನ್ನು ಸ್ವಾಮಿ ವಿವೇಕಾನಂದರು ಹಚ್ಚಿದರು, ಅದನ್ನು ಗಾಂಧೀಜಿಯವರು ಎತ್ತಿಕೊಂಡರು ಎಂದು ರೋಲಾರು ಎರಡು ಮೂರು ಸ್ಥಳದಲ್ಲಿ ಬರೆಯುತ್ತಾರೆ. ರೋಲಾರ ಪುಸ್ತಕವು ಒಬ್ಬ ಇತಿಹಾಸಕಾರನ ಪುಸ್ತಕವಿರುತ್ತದೆ. ಬಾಪೂರಿಗಿಂತ ಮೊದಲು ವಿವೇಕಾನಂದ ಮತ್ತು ದಯಾನಂದರು ಅಸ್ಪೃಶ್ಯೋದ್ಧಾರದ ಪ್ರಶ್ನೆಯನ್ನು ಎತ್ತಿದ್ದರು. ಆದುದರಿಂದ ಬಾಪೂಗೆ ಆದರ ಉತ್ತರಾಧಿಕಾರ ಸಿಕ್ಕಿತೆಂದು ಹೇಳುವದು ಐತಿಹಾಸಿಕ ದೃಷ್ಟಿಯಿಂದ ಸರಿಯಾಗಿದೆ.

ಆದರೆ ನಾನು ಬಾಪೂಗೆ ವಿಚಾರಿಸಿದೆ: "ನಿಮಗೆ ಈ ಪ್ರಶ್ನೆ ಹೊಳೆದಾಗ ಇವರಿಬ್ಬರ ಮಾತು ಗೊತ್ತಿತ್ತೆ?" ಆಗ ಬಾಪೂ ಹೇಳಿದರು: "ನಾನು ವಿವೇಕಾನಂದರ ರಾಜ ಯೋಗದ ಹೊರತಾಗಿ ಬೇರೆ ಯಾವ ಪುಸ್ತಕವನ್ನೂ ಓದಿಲ್ಲ. ದಯಾನಂದರ ಆರ್ಯಸಮಾಜದ ವಿಷಯಕ್ಕೆ ಕಲ್ಪನೆಯಿತ್ತು. ಆದರೆ ಅಸ್ಪೃಶ್ಯೋದ್ಧಾರದ ಕೆಲಸದ ವಿಷಯಕ್ಕೆ ಅವರು ಏನು ಕಲ್ಪನೆ ಮಾಡಿದ್ದರೆಂಬುದು ಗೊತ್ತಿದ್ದಿಲ್ಲ. ಅಸ್ಪೃಶ್ಯರ ಸೇವೆಯ ಕೆಲಸವು ನನ್ನ ಮೌಲಿಕ ಸ್ಫೂರ್ತಿಯು." ನಾನು ಅಂದೆ: "ಬಹುತರ ದಕ್ಷಿಣ ಆಫ್ರಿಕೆಯ ವಾತಾವರಣ ಮತ್ತು ಅಲ್ಲಿಯ ಕೆಲಸದ ಮೂಲಕ ಈ ಪ್ರಶ್ನೆ ನಿಮ್ಮ ಮುಂದೆ ಬಂದಿರಬಹುದು ಮತ್ತು ನಿಮಗೆ ಈ ಕೆಲಸವನ್ನು ಕೈಯಲ್ಲಿ ತೆಗೆದು ಕೊಳ್ಳಬೇಕೆಂದೆನಿಸಿರಬಹುದು." ಬಾಪೂ ಹೇಳಿದರು: "ಇದು ಸರಿ. ಇದು ಅಲ್ಲಿಯೇ ಹೊಳೆಯಿತು." ನಾನು: "'ದರಿದ್ರನಾರಾಯಣ' ಶಬ್ದವು ವಿವೇಕಾನಂದರದು, ಇದು ನಿಮಗೆ ಗೊತ್ತಿತ್ತೆ?" ಬಾಪೂ: "ಇಲ್ಲ, ನಾನು ಇದನ್ನು ಎಲ್ಲಕ್ಕೂ ಮೊದಲು ದಾಸಬಾಬೂರಿಂದ ಕೇಳಿದೆ ಮತ್ತು ಅದು ಅವರದೇ ಇರಬಹುದೆಂದು ತಿಳಿದಿದ್ದೆ. ಆದರೆ ಹಿಂದಿನಿಂದ ಈ ಶಬ್ದವು ಸ್ವಾಮಿ ವಿವೇಕಾನಂದರದೆಂದು ಗೊತ್ತಾಯಿತು."

ಮೀರಾಬಹನಳ ಪತ್ರ ಬಂದಿತು. ಜೀವನವು ಸಾವಿನ ಸಿದ್ಧತೆ ಎಂಬ ಬಾಪೂರ ವಾಕ್ಯದ ಈ ಭಾವವು ಅವಳ ಮನಸ್ಸಿಗೆ ಬಹಳ ರುಚಿಸಿತು. ಮೃತ್ಯುವಿನ ಸುಳ್ಳು ಅಂಜಿಕೆಯ ವಿಷಯಕ್ಕೆ ಶೇಕ್ಸಪೀಯರನ ವಾಕ್ಯವು ಅವಳಿಗೆ

೨೨-೬-'೩೨ ನೆನಪಾಯಿತು. ಅವಳು ಪತ್ರದಲ್ಲಿ ಇದನ್ನೂ ಬರೆದಿದ್ದಳು:

"Cowards die many times before their deaths, the valiants only taste of death, but once." "ಪುಕ್ಕ ಮನುಷ್ಯರು ತಮ್ಮ ಸಾವಿಗಿಂತ ಮೊದಲು ಎಷ್ಟೋ ಸಾರೆ ಸಾಯುತ್ತಾರೆ. ಶೂರರಿಗೆ ಸಾವಿನ ಆನಂದವು ಒಂದೇ ಸಲ ಸಿಗುತ್ತದೆ." ಆದರೆ ಇವುಗಳಲ್ಲಿ ಒಂದರಲ್ಲಿಯೂ ಬಾಪೂರ ಭಾವವು ಇಲ್ಲವೆಂದು ಇವಳು ಹೇಳಿದ್ದಾಳೆ. ಹಿಂದೂ ಮೋಕ್ಷಭಾವನೆ, ಶೂರರಿಗೆ ಈ ಜನ್ಮದಲ್ಲಿಯೇ ಮೋಕ್ಷ ಸಿಗುತ್ತದೆ ಮತ್ತು ಅವರು ತಿರುಗಿ ಬರಬೇಕಾಗುವದಿಲ್ಲ—ಎಂಬುದರ ಅರ್ಥವನ್ನು ಬಾಪೂ ಹೀಗೆ ಮಾಡಿದರು:

"I do not suppose you have noticed that 'the valiants only taste of death but once' has a deep meaning conveying the perfect truth according to the Hindu conception of salvation. It means freedom from the wheel of birth and death. If the word valiant may be taken to mean those who are strong in their search after God, they die but once, for they need not be reborn and put on the mortal coil."

"'ಶೂರರಿಗೆ ಸಾವಿನ ಆನಂದವು ಒಂದೇ ಸಲ ಸಿಗುತ್ತದೆ' ಎಂಬ ಈ ವಾಕ್ಯದಲ್ಲಿಯ ಆಳವಾದ ಅರ್ಥವು ನಿನ್ನ ಲಕ್ಷ್ಯದಲ್ಲಿ ಬಂದಂತೆ ಕಾಣುವದಿಲ್ಲ. ಇದರಲ್ಲಿ ಹಿಂದುಗಳ ಮೋಕ್ಷಭಾವನೆಗನುಸಾರವಾಗಿ ಸಂಪೂರ್ಣ ಸತ್ಯ ಸಮಾವೇಶವಾಗಿದೆ. ಜನನಮರಣದ ತಿರುಗಣಿಯಿಂದ ಮುಕ್ತಿಹೊಂದುವದೇ ಇದರ ಅರ್ಥ. ಶೂರ ಇದರ ಅರ್ಥವನ್ನು ದೇವರ ಶೋಧದಲ್ಲಿ ಶೂರರು ಎಂದು ಮಾಡಿದರೆ ಇವರು ಮಾತ್ರ ಒಂದೇ ಸಲ ಸಾಯುತ್ತಾರೆ. ಅವರಿಗೆ ಪುನಃ ಜನ್ಮತೆಗೆದುಕೊಳ್ಳಬೇಕಾಗುವದಿಲ್ಲ ಅಥವಾ ಸಾಯಬೇಕಾಗುವದಿಲ್ಲ."

ನಿಶ್ಚಯಮಾಡಿದ ಮೇಲೆ ಪ್ರಾಣಕೊಟ್ಟು ಸಹ ಅದಕ್ಕೆ ಅಂಟಿಕೊಂಡಿರುವವನಿಗೆ ಶೂರನೆಂದೂ ಮತ್ತು ನಿಶ್ಚಯವನ್ನು ಮೇಲಿಂದ ಮೇಲೆ ಮುರಿಯುವವನಿಗೆ ಪುಕ್ಕನೆಂದೂ ತಿಳಿದಿದ್ದೇನೆ. ನಿಶ್ಚಯ ಮುರಿಯುವವನು ಎಷ್ಟು ಸಾರೆ ಮುರಿಯುತ್ತಾನೊ ಅಷ್ಟು ಸಾರೆ ಸಾಯುತ್ತಾನೆ ಮತ್ತು ಶೂರನಿಗೆ ಒಂದೇ ಸಲ ಸಾಯಬೇಕಾಗುತ್ತದೆ ಎಂಬ ಈ ಭಾವವನ್ನು ನಾನು ಒಂದು ಸಾರೆ ಹಚ್ಚಿದ್ದೆನು. 'ಜೀವನವು ಸಾವಿನ ಸಿದ್ಧತೆ' ಇದರ ಭಾವವು 'करले सिंगार चतुर अलबेली'* ಇದರಲ್ಲಿಯೂ ಇದೆ. ಮಾತ್ರ ಅಲ್ಲಿ ಸಾಯುವದಕ್ಕಿಂತ ಮೊದಲು ಸಾವಿನ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ಜೀವಕ್ಕೆ ಉಪದೇಶವಿದೆ. ಯಾವನ ಜೀವನವು ಒಂದು ದೀರ್ಘ ಸಿದ್ಧತೆಯ ರೂಪದಲ್ಲಿರುವದಿಲ್ಲವೊ ಅವನಿಗೆ ಕೊನೆಗೆ ಸಿದ್ಧತೆ ಹೊಳೆಯುವದೇ ಇಲ್ಲ. ಅಂದರೆ ಕೊನೆಗೆ ಅವನು ಇದ್ದಲ್ಲಿಯೇ ಇರುವನು.

ಕೆಲವು ದಿವಸಗಳ ಹಿಂದೆ ಹೇಳಿದಂತೆ ಬಾಪೂರ ಲೇಖನಿಯು ಹೃದಯದಿಂದ ಬರೆಯುತ್ತಿದೆ ಮತ್ತು ಆದರಿಂದ ಪ್ರತಿಯೊಬ್ಬರ ಸಲುವಾಗಿ (ತಮ್ಮ ಸಲುವಾಗಿ ಸಹ) ಯೋಗ್ಯ ಉದ್ಗಾರ ಹೊರಡುತ್ತದೆ. ನಿನ್ನೆ ತಿಲಕಮ್ಮಗೆ

೨೩–೬–'೩೨ ಕಾಗದ ಬರೆದರು. ಅದರಲ್ಲಿ ಮೀರಾನ ವಿಷಯಕ್ಕೆ ಬರೆಯುತ್ತಾರೆ:

"She is a pure soul with an infinite capacity for self-sacrifice."

"ಅವಳು ವಿಶುದ್ಧ ಜೀವಿಯು. ಅವಳಲ್ಲಿ ಆತ್ಮತ್ಯಾಗದ ಅಪಾರಶಕ್ತಿಯಿದೆ."

ಇವತ್ತು ದೇವದಾಸರಿಗೆ ದೀರ್ಘ ಪತ್ರ ಬರೆದರು. ಯಾಕಂದರೆ ಯು. ಪಿ. ಗವ್ಹರ್ನರರಿಗೆ ಕೊಟ್ಟ ತಾರಿನ ಸೂಚನೆಯನ್ನು ಕೊಡಬೇಕಾಗಿತ್ತು. ಆದರಲ್ಲಿ ಸಹ ನಿಮಿಷಾರ್ಧದಲ್ಲಿ ಅನೇಕ ಶಬ್ದಚಿತ್ರಗಳನ್ನು ಚಿತ್ರಿಸಿದರು. "ಹರಿಲಾಲರ ಕೆಂಪು ಬಟ್ಟಲು ದಿನಾಲು ತುಂಬಿದ್ದಿರುತ್ತದೆ. ಕುಡಿದು ಅಲ್ಲಿ ಇಲ್ಲಿ ತಿರುಗಾಡುತ್ತಾನೆ ಮತ್ತು

* ಚತುರಳಾದ ಸುಂದರಿಯೆ ಸಿಂಗಾರವನ್ನು ಮಾಡಿಕೊ.

ಭಿಕ್ಷೆ ಬೇಡುತ್ತಾನೆ. ಬಲಿ ಮತ್ತು ಮನೂರನ್ನು ಬೆದರಿಸುತ್ತಾನೆ. ಇದರಲ್ಲಿ ಸಹ ರೂಪಾಯಿಗಳನ್ನು ಎಬ್ಬಿಸುವ ಉದ್ದೇಶವೇ ಇರುತ್ತದೆಂದು ಕಾಣುತ್ತದೆ. ನನಗೂ ಸಹ ಬಹಳ ಉದ್ಧಟ ಪತ್ರ ಬರೆದಿದ್ದಾನೆ. ಮನುಳನ್ನು ತನ್ನ ವಶಕ್ಕೆ ತಗೆದುಕೊಳ್ಳುವದಕ್ಕಾಗಿ ಬಲಿಯ ಮೇಲೆ ಖಟ್ಲೆ ಹಾಕುವ ಬೆದರಿಕೆ ತೋರಿಸಿದ್ದಾನೆ. ನನಗೆ ದುಃಖವಾಗುವದಿಲ್ಲ. ದಯೆ ಬರುತ್ತದೆ. ನಗುವೂ ಬರುತ್ತದೆ. ಇಂಥ ಇನ್ನೂ ಅನೇಕ ಜನರಿದ್ದಾರೆ. ಅವರದೇನಾಗಬಹುದು? ಅವರ ಸಲುವಾಗಿ ಸಹ ನಾನು ಅಷ್ಟೇ ವಿಚಾರಮಾಡಬೇಕಲ್ಲವೆ? ಅವರೆಲ್ಲರೂ ಸ್ವಭಾವ ನಿಯತ ಕರ್ಮ ಮಾಡುತ್ತಾರೆ. ಮಾಡುವದೇನು? ನಮ್ಮ ವರ್ತನೆಯು ಸರಳವಿದ್ದರೆ ಅವನು ಕೊನೆಗೆ ದಾರಿಗೆ ಬರುವನು. ಹರಿಲಾಲನು ಈಗ ಇದ್ದಂತೆ ಆಗಿದ್ದುದರಲ್ಲಿ ನನ್ನ ಪಾಲು ಕಡಿಮೆಯೆಂದು ತಿಳಿಯುವದಿಲ್ಲ. ಅವನ ಬೀಜಬಿತ್ತಿದಾಗ ನಾನು ಮೂಢ ದೆಶೆಯಲ್ಲಿದ್ದೆನು. ಅವನ ಪಾಲನೆಯಾದ ಕಾಲವು ಶೃಂಗಾರದ್ದೆಂದು ಹೇಳಬಹುದು. ನಾನು ಮದ್ಯಸೇವನೆಯನ್ನು ಮಾಡುತ್ತಿದ್ದಿಲ್ಲ. ಈ ನ್ಯೂನತೆಯನ್ನು ಹರಿಲಾಲನು ಪೂರ್ತಿಮಾಡಿದನು. ನಾನು ಒಬ್ಬಳೆ ಸ್ತ್ರೀಯ ಸಂಗಡ ಆಟವಾಡುತ್ತಿದ್ದೆನು. ಆದರೆ ಹರಿಲಾಲನು ಅನೇಕ ಸ್ತ್ರೀಯರ ಸಂಗಡ ಆಡುತ್ತಾನೆ. ವ್ಯತ್ಯಾಸವು ಕೇವಲ ಪ್ರಮಾಣದ್ದಿರುತ್ತದೆ, ಪ್ರಕಾರದ್ದಿರುವದಿಲ್ಲ. ಆದುದರಿಂದ ನಾನು ಪ್ರಾಯಶ್ಚಿತ್ತ ತೆಗೆದುಕೊಳ್ಳಲಿಕ್ಕೆ ಬೇಕು. ಪ್ರಾಯಶ್ಚಿತ್ತವೆಂದರೆ ಆತ್ಮಶುದ್ಧಿಯು. ಅದು ಬಸವನ ಹುಳದ ಗತಿಯಿಂದ ಸಾಗಿದೆ." ಮತ್ತು ನಾರಾಯಣದಾಸರ ಚಿತ್ರ: "ನಾನು ಇಲ್ಲಿ ಕುಳಿತಲ್ಲಿಯೇ ಆಶ್ರಮದಲ್ಲಿ ಬದಲಾವಣೆ ಮಾಡುತ್ತಿರುತ್ತೇನೆ. ನಾರಾಯಣದಾಸನ ಅನನ್ಯಶ್ರದ್ಧೆ, ಅವನ ಪಾವಿತ್ರ್ಯ, ದೃಢತೆ, ಅವನ ಉದ್ಯಮಶೀಲತೆ ಮತ್ತು ಕಾರ್ಯದಕ್ಷತೆ ಇವೆಲ್ಲವುಗಳ ಲಾಭ ತೆಗೆದುಕೊಳ್ಳುತ್ತಿದ್ದೇನೆ."

ಒಬ್ಬ ಪ್ರಸಿದ್ಧ ಮಹಿಳೆಯು ವಿಧವೆಯಾಗಿ ಒಬ್ಬ ಪ್ರಸಿದ್ಧ ಸಜ್ಜನನ ಸಂಗಡ ಲಗ್ನವಾಗಿದ್ದಳು. ಆ ಸಜ್ಜನನು ಸತ್ತ ಮೇಲೆ ಅವಳು ಪುನಃ ಲಗ್ನ ಮಾಡಿಕೊಳ್ಳುವಳೇ ಎಂದು ನಾನು ಸಹಜವಾಗಿ ಕೇಳಿದೆನು. ವಲ್ಲಭಭಾಯಿ ಹೇಳಿದರು: "ಇನ್ನು ಈ ಕುದುರೆಯನ್ನು ಮನೆಯಲ್ಲಿ ಯಾರು ಕಟ್ಟಿಕೊಳ್ಳುವರು? ಅವಳನ್ನು ಎಲ್ಲರೂ ಬಲ್ಲರು ಅವಳಿಗೆ ವಯಸ್ಸು ಆಗಿದೆ, ಇನ್ನು ಅವಳು ಲಗ್ನಮಾಡಿಕೊಳ್ಳುವ ಇಚ್ಛೆಯನ್ನೂ ಮಾಡುವದಿಲ್ಲ." ಬಾಪೂ: "ಒಬ್ಬ ೬೪ ವರ್ಷದ ಸ್ತ್ರೀಯು ಲಗ್ನವಾಗಿದ್ದು ನನಗೆ ನೆನಪಿದೆ. ಅವಳ ಹೆಸರು ಮಿಸೆಸ್ ಓ ಎಂದು. ನನಗೆ ಅವಳ ಪರಿಚಯವಿತ್ತು. ಅವಳು ಲಗ್ನವಾದಮೇಲೆ 'ಈಗ ನಾನು ಮಿಸೆಸ್ ಓ ಇಲ್ಲ. ಮಿಸೆಸ್ ಪೀ ಆಗಿದ್ದೇನೆ ನೀವು ನಮ್ಮಲ್ಲಿಗೆ ಬಂದಾಗ ನನ್ನ ಪತಿಯ ಸಂಗಡ ಪರಿಚಯವಾಗುವದು.' ಎಂದು ಪತ್ರ ಬರೆದಿದ್ದಳು. ಈ ಸ್ತ್ರೀಯು ಕೇವಲ ಒಬ್ಬ ಜೊತೆಗಾರನನ್ನು ಮಾಡಿ

ಕೊಳ್ಳುವದಕ್ಕಾಗಿ ಲಗ್ನವಾಗಿದ್ದಳು." ನಾನು ಹೇಳಿದೆ: "ಗೇಟೆ ೭೩ ವರ್ಷದ ವಯಸ್ಸಿನಲ್ಲಿ ೧೮ ವರ್ಷದ ಹುಡಿಗೆಯನ್ನು ಲಗ್ನಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದ್ದನು. ಅವಳ ತಾಯಿತಂದೆಗಳಿಗೆ ಆಘಾತವಾಯಿತು. ಅವರು ಇಲ್ಲ ವೆಂದು ಹೇಳಿದರು" ವಲ್ಲಭಭಾಯಿ: "ಗೇಟೆ ಇದ್ದುದರಿಂದ ಕೇವಲ ಆಘಾತ ವಾಯಿತು. ನಾನು ಇದ್ದಿದ್ದರೆ ಕಾಸಿದ ಕಬ್ಬಿಣದಿಂದ ಬರೆ ಕೊಡುತ್ತಿದ್ದೆ ಮತ್ತು ಅವನಿಗೆ ನಿನ್ನ ಬುದ್ಧಿಯು ನಷ್ಟವಾಗಿದೆ, ಅದು ಬರೆಕೊಡುವದರಿಂದಲೇ ದಾರಿಯ ಮೇಲೆ ಬರುವದೆಂದು ಹೇಳುತ್ತಿದ್ದೆ."

*　　　*　　　*

ಪ್ರೇಮಾಬಹೆನಳ ಪತ್ರದಲ್ಲಿ ಈ ಸಾರೆ ಬಹಳ ಮಹತ್ವದ ಪ್ರಶ್ನೆಗಳನ್ನು ಕುರಿತು ಚರ್ಚೆಯಿತ್ತು. ಅವುಗಳಿಗೆ ಬಾಪೂ ಬಹಳ ದೀರ್ಘ ಪತ್ರ ಬರೆದರು:

"ಮೀನದ ವಿಷಯದಲ್ಲಿ ನಿನ್ನ ಸಲುವಾಗಿ ಯಾವ ಅಪವಾದವನ್ನೂ ಮಾಡಿಲ್ಲ. ಕಾಡ್‌ಲಿವ್ಹರ ಆಯಿಲ್ ನಿಷಿದ್ಧವಿದೆ, ಆದರೂ ಅದನ್ನು ಆಶ್ರಮದಲ್ಲಿ ನಡೆಯ-ಗೊಟ್ಟಿದೆ. ಮಾಂಸ—ಮೀನದ ಮಾಂಸವನ್ನು ತಿನ್ನಬಾರದೆಂದು ಆಶ್ರಮವು ಮರ್ಯಾದೆಯನ್ನು ಹಾಕಿಕೊಂಡಿದೆ. ಆದರೆ ವ್ಯಕ್ತಿಗಳಿಗಾಗಿ ಹಾಕಿಲ್ಲ. ಹಾಕಲಿಕ್ಕೂ ಬರುವದಿಲ್ಲ. ಆದುದರಿಂದ ಇಮಾಮುಸಾಹೇಬರು ತಿನ್ನಬಹುದಾಗಿತ್ತು. ನಿನ್ನ ಸ್ಥಳ ದಲ್ಲಿ ನಾರಾಯಣದಾಸನಿದ್ದಾನೆಂದು ತಿಳಿ. ಅವನಂತೂ ಇಡೀ ಜನ್ಮದಲ್ಲಿ ಮಾಂಸ ಮುಂತಾದ್ದನ್ನು ತಿಂದಿಲ್ಲ. ಆದರೆ ಅವನಿಗೆ ಭಯಂಕರ ಬೇನೆ ಬಂದರೆ ಮತ್ತು ಅವನಿಗೆ ಮಾಂಸ ತಿಂದು ಬದುಕಬೇಕೆಂದೆನಿಸಿದರೆ ನಾನು ಎಂದೂ ಅಡ್ಡಿ ಮಾಡುವದಿಲ್ಲ. ನನ್ನ ವಿಚಾರವು ಇವತ್ತು ಅವನಿಗೆ ಗೊತ್ತಿದೆ. ಆದಾಗ್ಯೂ ಸಾಯುವ ಸಮಯದ ವಿಷಯುವೇ ಬೇರೆ. ಸಾಯುವ ಕಾಲಕ್ಕೆ ಇಚ್ಛೆಯಾದರೆ ಅದಕ್ಕೆ ಅಡ್ಡಿ ಮಾಡದಿರು ವದೇ ನನ್ನ ಧರ್ಮ. ಇದಕ್ಕೆ ವಿರುದ್ಧ, ಯಾವನಾದರೂ ಬಾಲಕನಿದ್ದರೆ ಮತ್ತು ಅವನಿಗಾಗಿ ನಾನು ನಿರ್ಣಯ ತೆಗೆದುಕೊಳ್ಳಬೇಕಾಗಿದ್ದರೆ ಅವನಿಗೆ ಸಾಯಲಿಕ್ಕೆ ಕೊಡುವೆನು, ಆದರೆ ಮಾಂಸ ಕೊಡುವದಿಲ್ಲ. ಬಾ ಇವಳ ಮೇಲೆ ಇಂಥದೇ ಪ್ರಸಂಗ ಬಂದಿತ್ತು. ಇದು ನಿನಗೆ ಗೊತ್ತಿದೆ. ಈ ಸಂಗತಿಯು ಬಹಳ ಮಾಡಿ 'ಆತ್ಮಕಥೆ' ಯಲ್ಲಿದೆ. ನಿನಗೂ ಮತ್ತು ಅಲ್ಲಿ ಯಾರಿಗೂ ಗೊತ್ತಿರದಿದ್ದರೆ ಕೇಳು. ನಾನು ಬರೆದು ಕಳಿಸುವೆನು. ಬಾ ಮತ್ತು ನನ್ನ ಸಲುವಾಗಿ ಅದು ಪುಣ್ಯಪ್ರಸಂಗವಿತ್ತು. ಈಗ ತಿಳಿಯಿತೆ? ನಾನು ನಿನಗೆ ಮೀನ ತಿನ್ನಲಿಕ್ಕೆ ಆಗ್ರಹ ಮಾಡುವದಿಲ್ಲ. ಅದಿಲ್ಲದೆ ನೀನು ಸಾಯುತ್ತಿದ್ದರೆ ಮತ್ತು ಸಾಯಲಿಕ್ಕೆ ನೀನು ಸಿದ್ಧಳಿದ್ದರೆ ನಾನು ನಿನ್ನನ್ನು ಸಾಯಗೊಡಲಿಕ್ಕೆ ಸಿದ್ಧನಿದ್ದೇನೆ. ಮೀನ ತಿಂದು ಬದುಕಿದರೂ ಸಾಯುವ ದಕ್ಕಾಗಿಯೇ ಅಲ್ಲವೆ? ಯಾರಿಗೆ ಇದು ಮಾನ್ಯವಿದೆಯೊ ಮತ್ತು ಯಾರು ಇದನ್ನು

ಪಾಲಿಸುತ್ತಾರೊ ಇದು ಅವರ ಧರ್ಮವು. .ಇಂಥ ಧರ್ಮವನ್ನು ಹಾಲಿನ ವಿಷಯದಲ್ಲಿ ನಾನೆಲ್ಲಿ ಪಾಲಿಸುತ್ತೇನೆ? ಆದರೆ ಪ್ರಾಣಿಮಾತ್ರಗಳ ಹಾಲನ್ನು ತ್ಯಾಗಮಾಡುವ ಧರ್ಮವು ನನಗೆ ದೀಪದಂತೆ ಸ್ಪಷ್ಟ ಕಾಣಿಸುತ್ತದೆ. ಆದರೆ ಇಂಥ ಧರ್ಮಗಳು ಎರಡನೆಯವರಿಂದ ಪಾಲನೆಮಾಡಿಸತಕ್ಕವುಗಳಾಗಿರುವದಿಲ್ಲ, ಸ್ವತಃ ಪಾಲನೆ ಮಾಡತಕ್ಕವುಗಳಾಗಿರುತ್ತವೆ.''

* * *

"ಸ್ತ್ರೀ-ಪುರುಷರ ವಿಷಯಕ್ಕೆ ನೀನು ಯೋಗ್ಯವಾಗಿ ಕೇಳಿರುತ್ತಿ.

"ಯಾವ ಯಾವ ವಿಷಯಗಳ ಬಗ್ಗೆ ಮಕ್ಕಳಿಗೆ ಕುತೂಹಲವಾಗುತ್ತಿದೆಯೊ—ಅವುಗಳ ವಿಷಯಕ್ಕೆ ನಮಗೆ ಜ್ಞಾನವಿದ್ದರೆ—ಅವನ್ನು ಅವರಿಗೆ ಹೇಳಬೇಕು; ಜ್ಞಾನವಿಲ್ಲಧಿದ್ದರೆ ಅಜ್ಞಾನವನ್ನು ಒಪ್ಪಿಕೊಳ್ಳಬೇಕು. ಹೇಳದಂಥ ಮಾತುಗಳಿದ್ದರೆ ತಡೆಯಬೇಕು ಮತ್ತು ಎರಡನೆಯವರನ್ನು ಕೇಳುವದಕ್ಕೂ ಅಡ್ಡಿ ಮಾಡಬೇಕು. ಅವರ ಮಾತನ್ನು ಎಂದೂ ಹಾರಿಸಿ ಒಗೆಯಬಾರದು. ಮಕ್ಕಳಿಗೆ ನಮ್ಮ ಕಲ್ಪನೆಗಿಂತ ಹೆಚ್ಚು ಗೊತ್ತಿರುತ್ತದೆ. ಅವರಿಗೆ ತಿಳಿಯದ ವಿಷಯದ ಜ್ಞಾನವನ್ನು ನಾವು ಮಾಡಿಕೊಡದಿದ್ದರೆ ಅವರು ಅನುಚಿತ ಮಾರ್ಗದಿಂದ ತಿಳಿದುಕೊಳ್ಳಲಿಕ್ಕೆ ಕಲಿಯುವರು. ಇಷ್ಟಾದ ಮೇಲೂ ಕೊಡಲಿಕ್ಕೆ ಯೋಗ್ಯವಿಲ್ಲದ ಜ್ಞಾನವನ್ನು, ಈ ಕೇಡನ್ನು ಸಹನಮಾಡಿಕೊಂಡು ಸಹ, ಕೊಡಬಾರದು. ಕೊಡದಂಥಾದ್ದೂ ಸ್ವಲ್ಪೇ ಇರುತ್ತದೆ. ಭೀಭತ್ಸ ಕ್ರಿಯೆಯ ಜ್ಞಾನವನ್ನು ಅವರು ಇಚ್ಛಿಸಿದರೆ ಅದನ್ನು ಎಂದೂ ಕೊಡ-ಬಾರದು. ಆ ಮೇಲೆ ನಾವು ಪ್ರತಿಬಂಧ ಮಾಡಿದಾಗ್ಯೂ ಅವರು ಅಡ್ಡದಾರಿಯಿಂದ ಅದನ್ನು ಪ್ರಾಪ್ತಮಾಡಿಕೊಂಡರೂ ಅಡ್ಡಿ ಇಲ್ಲ.

"ಮಕ್ಕಳು ಪಕ್ಷಿಗಳಲ್ಲಿ ನಡೆಯುವ ಕ್ರಿಯೆಯನ್ನು ನೋಡಿ ಅದನ್ನು ತಿಳಿದುಕೊಳ್ಳಲು ಇಚ್ಛಿಸಿದರೆ ನಾನು ಅವರನ್ನು ಸಮಾಧಾನ ಮಾಡುವೆನು ಮತ್ತು ಅದರಿಂದ ಬ್ರಹ್ಮಚರ್ಯದ ಪಾಠವನ್ನು ಕಲಿಸುವೆನು. ಪಕ್ಷಿ, ಪಶು ಮತ್ತು ಮನುಷ್ಯರೊಳಗಿನ ವ್ಯತ್ಯಾಸವನ್ನು ತೋರಿಸುವೆನು. ಇದೇ ಪ್ರಕಾರ ಆಚರಣೆ ಮಾಡುತ್ತಿರುವಂಥ ಸ್ತ್ರೀಪುರುಷರು ಮನುಷ್ಯದೇಹ ಧಾರಣಮಾಡಿದಾಗ್ಯೂ ಪಶುಪಕ್ಷಿಗಳಂತೇ ಇದ್ದಾರೆ. ಇದು ನಿಂದೆಯ ಮಾತಲ್ಲ, ವಸ್ತುಸ್ಥಿತಿಯ ಮಾತಾಗಿರುತ್ತದೆ. ಪಶುತ್ವದಿಂದ ಹೊರಬೀಳುವದಕ್ಕಾಗಿಯೆ ನಮಗೆ ಮನುಷ್ಯದೇಹ ಮತ್ತು ಬುದ್ಧಿ ದೊರೆತಿವೆ.

"ಮಾಸಿಕ ಧರ್ಮದ ಪೂರ್ಣಜ್ಞಾನವನ್ನು ವಯಸ್ಸಿಗೆ ಬಂದ ಹುಡಿಗೆಗೆ ಕೊಡಬೇಕು. ಅದಕ್ಕಿಂತ ಸಣ್ಣ ಹುಡಿಗೆಗೆ ಗೊತ್ತಾಗಿದ್ದರೆ ಮತ್ತು ಕೇಳಿದರೆ, ಅವಳಿಗೂ ಅವಳು ತಿಳಿಯುವಷ್ಟು ತಿಳಿಸಬೇಕು.

"ನಾವು ಎಷ್ಟೇ ಪ್ರಯತ್ನ ಮಾಡಿದರೂ ಹುಡುಗ, ಹುಡಿಗೆಯರು ಕೊನೆಯ

ವರೆಗೆ ನಿರ್ದೋಷರಾಗಿ ಉಳಿಯಲಾರರು. ಇದನ್ನು ತಿಳಿದು ಅವರೆಲ್ಲರಿಗೂ ಒಂದು ವಿಶಿಷ್ಟ ವಯಸ್ಸಿನಲ್ಲಿ ಈ ಜ್ಞಾನವನ್ನು ಕೊಡುವದೇ ಒಳ್ಳೆಯದು. ಈ ಜ್ಞಾನ ಪಡೆಯುವವನು ಬ್ರಹ್ಮಚರ್ಯ ಪಾಲಿಸಲಿಕ್ಕೆ ಶಕ್ತನಾಗದಿದ್ದರೆ ಇಂಥ ನಿರ್ಬಲ ಬ್ರಹ್ಮಚರ್ಯವು ಯಾವ ಪ್ರಯೋಜನದ್ದೂ ಅಲ್ಲ. ಈ ಜ್ಞಾನ ಪಡೆದ ಮೇಲೆ ಬ್ರಹ್ಮಚರ್ಯವು ಸಬಲವಾಗಬೇಕು. ನನ್ನ ಸ್ವಂತಕ್ಕಂತೂ ಹೀಗೇ ಆಗಿದೆ.

"ಜ್ಞಾನ ಕೊಡುವದರಲ್ಲಿ ಮತ್ತು ತೆಗೆದುಕೊಳ್ಳುವದರಲ್ಲಿ ಬಹಳ ವ್ಯತ್ಯಾಸ ಇದೆ. ಒಬ್ಬ ಮನುಷ್ಯನು ತನ್ನ ವಿಕಾರಗಳನ್ನು ವೃದ್ಧಿಗೊಳಿಸುವದಕ್ಕಾಗಿ ಜ್ಞಾನ ಪ್ರಾಪ್ತಮಾಡಿಕೊಳ್ಳುತ್ತಾನೆ, ಎರಡನೆಯವನಿಗೆ ಅದು ಅನಾಯಾಸ ಸಿಗುತ್ತದೆ, ಮೂರನೆಯವನು ವಿಕಾರಗಳನ್ನು ನಾಶಮಾಡುವದಕ್ಕಾಗಿ ಮತ್ತು ಎರಡನೆಯವರಿಗೆ ಸಹಾಯಮಾಡುವದಕ್ಕಾಗಿ ಜ್ಞಾನ ಸಂಪಾದಿಸುತ್ತಾನೆ. ಈ ಜ್ಞಾನವನ್ನು ಕೊಡುವ ಯೋಗ್ಯತೆಯಿದ್ದವನೇ ಇದನ್ನು ಕೊಡಬಲ್ಲನು. ಇದು ನಿನಗೆ ಗೊತ್ತಿರಬೇಕು. ನೀನು ಜ್ಞಾನ ಕೊಡುವದರಿಂದ ಹುಡಿಗೆಯರಲ್ಲಿ ವಿಕಾರ ಎಂದೂ ಉಂಟಾಗಲಾರ ದೆಂಬ ಆತ್ಮವಿಶ್ವಾಸವಿರಬೇಕು. ವಿಕಾರಗಳನ್ನು ನಾಶಮಾಡುವದಕ್ಕಾಗಿ ನೀನು ಆ ಜ್ಞಾನವನ್ನು ಕೊಡುತ್ತಿರುವಿ ಎಂಬ ಅರಿವು ನಿನಗಿರಬೇಕು. ನಿನ್ನಲ್ಲಿ ವಿಕಾರ ಗಳುಂಟಾಗುವ ಸಂಭವವಿದ್ದರೆ ನೀನು ಆ ಜ್ಞಾನವನ್ನು ಕೊಡುತ್ತಿರುವಾಗ ನಿನ್ನಲ್ಲಿ ವಿಕಾರ ಉಂಟಾಗದಂತೆ ನೋಡಿಕೊಳ್ಳಬೇಕು.

"ಸ್ತ್ರೀ ಪುರುಷರ, ಪತಿ ಪತ್ನಿಗಳ ಸಾಂಸಾರಿಕ ಜೀವನದ ಮೂಲದಲ್ಲಿ ಭೋಗವಿದೆ. ಹಿಂದೂಧರ್ಮವು ಅದರಲ್ಲಿ ತ್ಯಾಗವನ್ನುಂಟುಮಾಡಲಿಕ್ಕೆ ಪ್ರಯತ್ನಿಸಿದೆ. ಅಥವಾ ಎಲ್ಲ ಧರ್ಮಗಳೂ ಮಾಡಿವೆ ಎಂದು ಹೇಳಬಹುದು. ಪತಿ ಬ್ರಹ್ಮ–ವಿಷ್ಣು–ಮಹೇಶ್ವರ ಇದ್ದರೆ ಪತ್ನಿಯೂ ಅದೇ ಇದ್ದಾಳೆ. ಪತ್ನಿ ದಾಸಿಯಲ್ಲ, ಸರಿಸಮಾನ ಹಕ್ಕುಳ್ಳ ಮೈತ್ರಿಣಿಯಿದ್ದಾಳೆ, ಸಹಚಾರಿಣಿಯಿದ್ದಾಳೆ. ಇಬ್ಬರೂ ಒಬ್ಬರಿಗೊಬ್ಬರು ಗುರುಗಳಾಗಿದ್ದಾರೆ.

"ಹುಡಿಗೆಯ ಪಾಲು ಹುಡುಗನ ಸರಿಸಮಾನ ಇರತಕ್ಕದ್ದು.

"ಪತಿಯು ಗಳಿಸುವ ಸಂಪತ್ತಿನಲ್ಲಿ ಪತಿಪತ್ನಿಗಳಿಬ್ಬರೂ ಸರಿಸಮಾನ ಹಕ್ಕು ದಾರರಿದ್ದಾರೆ. ಪತಿಯು ಪತ್ನಿಯ ಸಹಾಯದಿಂದಲೇ ಗಳಿಸುತ್ತಾನೆ. ಅಂದ ಮೇಲೆ ಪತ್ನಿಯು ಅಡಿಗೆಯನ್ನು ಮಾಡುತ್ತಿದ್ದರೂ ಅಷ್ಟೆ. ಅವಳು ದಾಸಿಯಲ್ಲ, ಸಮಪಾಲುಗಾರಳಿದ್ದಾಳೆ.

"ಯಾವ ಪತಿಯು ಪತ್ನಿಯ ಸಂಗಡ ಅನ್ಯಾಯದಿಂದ ವರ್ತಿಸುತ್ತಾನೆಯೋ ಅವನಿಂದ ಪ್ರತ್ಯೇಕವಿರುವ ಅಧಿಕಾರ ಅವಳಿಗಿದೆ.

"ಮಕ್ಕಳ ಮೇಲೆ ಇಬ್ಬರದೂ ಸಮಾನ ಹಕ್ಕು ಇದೆ. ಪತ್ನಿಯು ಅಯೋಗ್ಯ

ಳಿದ್ದರೆ ಮಕ್ಕಳು ದೊಡ್ಡವರಾದನಂತರ ಅವರ ಮೇಲೆ ಅವಳ ಹಕ್ಕು ಉಳಿಯುವದಿಲ್ಲ. ಇದೇ ಮಾತು ಪತಿಗೂ ಅನ್ವಯಿಸುತ್ತದೆ.

"ಸ್ವಲ್ಪದರಲ್ಲಿ ಸ್ತ್ರೀ-ಪುರುಷರ ನಡುವೆ ನಿಸರ್ಗವು ಮಾಡಿದ ಮತ್ತು ಬರಿಗಣ್ಣಿಗೆ ಕಾಣಿಸುವಂಥ ಭೇದವನ್ನು ಬಿಟ್ಟು ಬೇರೆ ಯಾವ ಭೇದವೂ ನನಗೆ ಮಾನ್ಯವಿಲ್ಲ. ಈ ವಿಷಯ ಕುರಿತು ನಿನ್ನ ಒಂದೂ ಪ್ರಶ್ನೆ ಬಾಕಿ ಉಳಿದಿದೆಯೆಂದು ನನಗೆನಿಸುವದಿಲ್ಲ.

"ನಾರಾಯಣದಾಸನ ವಿಷಯಕ್ಕೆ ನನಗೆ ಸಂಪೂರ್ಣ ವಿಶ್ವಾಸವಿದೆ. ಅವನು ನನಗೆ ಶಾಂತಿಯಿದೆಯೆಂದು ಹೇಳಿದರೆ ನಾನು ಅಶಾಂತಿಯಿದೆಯೆಂದು ತಿಳಿಯಲು ಸಿದ್ಧನಿಲ್ಲ. ಅವನಿಗೆ ನಾನು ಚನ್ನಾಗಿ ಎಚ್ಚರಿಕೆ ಕೊಟ್ಟಿದ್ದೇನೆ. ದೂರ ಕುಳಿತು ಇನ್ನು ಅವನನ್ನು ಪೀಡಿಸುವದಿಲ್ಲ. ನಾರಾಯಣದಾಸನಲ್ಲಿ ಅನಾಸಕ್ತಿಯಿಂದ ಕೆಲಸಮಾಡುವ ದೊಡ್ಡ ಶಕ್ತಿಯಿದೆ. ಅನಾಸಕ್ತನು ಯಾವಾಗಲೂ ಆಸಕ್ತನಿಗಿಂತಲೂ ಹೆಚ್ಚು ಕೆಲಸ ಮಾಡುತ್ತಾನೆ, ಬಿಡುವು ಇದ್ದವನಂತೆ ಕಾಣಿಸುತ್ತಾನೆ ಮತ್ತು ಎಲ್ಲರಿಗಿಂತ ಹಿಂದಿನಿಂದ ದಣಿಯುತ್ತಾನೆ. ನಿಜವಾಗಿ ನೋಡಿದರೆ ಅವನಿಗೆ ದಣಿವು ಅನಿಸಲೇಬಾರದು. ಆದರೆ ಇದು ಆದರ್ಶವಾಯಿತು. ನೀನು ಅಲ್ಲಿರುತ್ತೀ. ಆದುದರಿಂದ ನಿನಗೆ ಅಶಾಂತಿ ಕಾಣುತ್ತಿದ್ದರೆ ಮತ್ತು ನಾರಾಯಣದಾಸನು ತನ್ನನ್ನು ತಾನೇ ವಂಚಿಸಿಕೊಳ್ಳುತ್ತಾನೆಂದು ಅನಿಸುತ್ತಿದ್ದರೆ ನಿನ್ನ ಧರ್ಮವು ನನಗಿಂತಲೂ ಭಿನ್ನವಾಗುವದು. ನೀನು ನಾರಾಯಣದಾಸನಿಗೆ ಎಚ್ಚರಿಕೆ ಕೊಡಲೇಬೇಕು. ನಾನೂ ಅಲ್ಲಿ ಇದ್ದರೆ ಮತ್ತು ಅವನು ಪ್ರತ್ಯಕ್ಷ ಹೇಳುವದಕ್ಕಿಂತ ಭಿನ್ನ ಸಂಗತಿಯನ್ನೇ ನೋಡಿದರೆ ಅವನಿಗೆ ಅವಶ್ಯ ಎಚ್ಚರಿಕೆ ಕೊಡುವೆ. ನೀನು ಎಚ್ಚರಿಕೆ ಕೊಟ್ಟ ಮೇಲೆ ಕೂಡ ಅವನು ನಿನ್ನ ವಿರೋಧ ಮಾಡಿದರೂ ನೀನು ಅವನನ್ನು ಸತ್ಯಾಗ್ರಹಿ ಎಂದು ತಿಳಿಯುವವರೆಗೆ ಅವನು ಹೇಳುವದನ್ನು ಮಾನ್ಯ ಮಾಡಲೇಬೇಕು. ಎಷ್ಟೋ ಸಾರೆ ನಮಗೆ ನಮ್ಮ ಕಣ್ಣುಗಳೂ ಮೋಸಗೊಳಿಸುತ್ತಿವೆ. ನನಗೆ ನೀನು ಮೋರೆಯ ಮೇಲೆ ಉದಾಸೀನಳಾಗಿ ಕಾಣಿಸುತ್ತಿ. ಆದರೆ ನೀನು ಇಲ್ಲವೆಂದರೆ ನಾನು ನಿನ್ನ ಮಾತನ್ನು ಒಪ್ಪಲೇಬೇಕು. ನನ್ನಿಂದ ನೀನು ಮುಚ್ಚಿಡುತ್ತಿ ಎಂಬ ಭಯವಿದ್ದರೆ ಅಥವಾ ಸಂಶಯವಿದ್ದರೆ ಆ ಮಾತು ಬೇರೆ. ಆ ಮೇಲೆ ನಿನ್ನನ್ನು ಕೇಳುವ ಪ್ರಶ್ನೆ ಉಳಿಯುವದಿಲ್ಲ. ತಿಳಿದುಕೊಳ್ಳಲಿಕ್ಕೆ ನನಗೆ ಬೇರೆ ಸಾಧನವನ್ನು ಹುಡುಕಬೇಕಾಗುವದು. ಆದರೆ ಆಶ್ರಮ-ಜೀವನವು ಇದೇ ಪ್ರಕಾರ ನಡೆಯುತ್ತಿದೆ. ಅದರ ತಳಹದಿಯು ಸತ್ಯವೇ ಆಗಿರುತ್ತದೆ. ಅಲ್ಲಿ ಉತ್ತಮ ಉದ್ದೇಶದಿಂದ ಸಹ ಮೋಸಗೊಳಿಸಲು ಸಾಧ್ಯವಿಲ್ಲ.

"ಜುಲೈ ನಾಲ್ಕನೇ ತಾರೀಖಿನ ಮಾರ್ಗ ಪ್ರತೀಕ್ಷೆಯನ್ನು ಅವಶ್ಯ ಮಾಡು. ಯಾವ ವರ್ಷದ ಜುಲೈ ನಾಲ್ಕನೇ ತಾರೀಖು ಎಂಬುದು ವಿಚಾರಮಾಡತಕ್ಕ ಮಾತಾಗಿದೆ. ವರ್ಷ ಯಾವದೇ ಇರಲಿ. ತಿಂಗಳು ಮತ್ತು ತಾರೀಖು ನಿಶ್ಚಯ

ವಾದರೂ ಸಂತೋಷದ ಸಂಗತಿ. ಬೇರೆ ಮತ್ತೆ ಯಾವ ತಿಂಗಳದಾಗಲಿ ಅಥವಾ ಬೇರೆ ತಾರೀಖಿನದಾಗಲಿ ದಾರಿಯನ್ನು ನೋಡುತ್ತಿರುವದಿಲ್ಲವಷ್ಟೆ? ಈ ನಾಲ್ಕನೇ ಜುಲೈ ಹೋದ ಮೇಲೆ ೧೯೩೩ ರ ಜುಲೈವರೆಗೆ ಶಾಂತವಾಗಿರಬೇಕು."

ಮೀರಾಬೇನಳಿಗೆ ಪತ್ರ ಬರೆದಿದ್ದರು. ಆದರಲ್ಲಿ ಬಾಪೂ ತಮ್ಮ ಸ್ವಾಸ್ಥ್ಯದ ವಿಷಯಕ್ಕೆ ಸ್ವಲ್ಪ ವಿಸ್ತಾರ ಪೂರ್ವಕವಾಗಿ ಪರಿಸ್ಥಿತಿಯನ್ನು ತೋರಿಸಿದ್ದರು. ಉಪ್ಪಿಲ್ಲದ ಊಟವನ್ನು ಹೇಗೆ ಬಿಡಬೇಕಾಯಿತು, ಬಹಿರ್ದೆಶೆಯು ತೆಳ್ಳಗಾಯಿತು ಮುಂತಾಗಿ. ಈ ಸಂಗತಿಯನ್ನು ಪತ್ರದೊಳಗಿಂದ ತೆಗೆದು ಹಾಕಲಿಕ್ಕೆ ಬೇಕು ಎಂದು ಮೇಜರರು ಹೇಳಿದರು. ಬಾಪೂ ಆದರಲ್ಲಿ ಬರೆದರು. "ಇದರೊಳಗಿನ ಯಾವದೇ ಮಾತನ್ನು ಪ್ರಕಟಮಾಡಬಾರದು." ಪಾಪ, ಕಟೇಲಿಯು ಪತ್ರ ತಿರುಗಿ ತೆಗೆದುಕೊಂಡು ಹೋದನು. ಮೇಜರ ಹೇಳಿದರು: "ಇಲ್ಲ, ಎರಡನೇ ಪತ್ರವನ್ನೆ ಬರೆಯಬೇಕು. ಇದರಿಂದ ಕೆಲಸ ನಡೆಯದು. ಸ್ವಾಸ್ಥ್ಯದ ಸುದ್ದಿಯನ್ನು ಈ ಪ್ರಕಾರ ಕೊಡಬಾರದೆಂದು ಕಾಯ್ದೆ ಇದೆ. ಮೀರಾಬಹಿನರ ಮೇಲೆ ಸರಕಾರದ ಕಣ್ಣಿದೆ, ಆದುದರಿಂದ ಈ ಪತ್ರ ಸರಕಾರದ ಕಡೆಗೆ ಹೋಗದೆ ಇರುವದಿಲ್ಲ."

ವಲ್ಲಭಭಾಯಿ ಕೇಳಿದರು: "ಕೆಲವು ದಿವಸಗಳ ಹಿಂದೆ ಒಬ್ಬ ಹುಡುಗನು ಇಲ್ಲಿ ಸತ್ತಿದ್ದನೆ?" ಮೇಜರರು ನಿರ್ವಿಕಾರ ಮನಸ್ಸಿನಿಂದ ಹೇಳಿದರು: "ಹೌದು" ಬಾಪೂ "ಎಷ್ಟು ದೊಡ್ಡವನಿದ್ದನು?" ಸುಪರಿಂಟೆಂಡೆಂಟ: "ನನಗೆ ಗೊತ್ತಿಲ್ಲ." ವಲ್ಲಭಭಾಯಿ: "ಆವನಿಗೆ ಏನಾಗಿತ್ತು?" ಸುಪರಿಂಟೆಂಡೆಂಟ: "ಕಾಮಣಿ, ಎರಡೇ ದಿವಸ ದವಾಖಾನೆಯಲ್ಲಿದ್ದನು ಮತ್ತು ಸತ್ತನು." ಅವನು ಏನೂ ಆಗದವನಂತೆ ಹೇಳಿದನು ಮತ್ತು ನಾವು ಕೇಳಿದೆವು!!

ಮೇಜರರನ್ನು ಬಾಪೂ ಕೇಳಿದರು: "ಸ್ವಾಸ್ಥ್ಯದ ಸುದ್ದಿಯನ್ನು ಕೊಡಬಾರದೆಂಬ ನಿಯಮವಿದೆಯೇ?" ಮೇಜರ ಹೇಳಿದರು: "ಹೌದು, ನಿಮ್ಮಂಥವರ

೨೪-೬-'೩೨

ವಿಷಯಕ್ಕೆ ಜನರು ಬೇಕಾದ್ದನ್ನು ತಿಳಿದುಕೊಂಡು ಚಿಂತೆಮಾಡತೊಡಗುವರು. ಲೇಡಿ ಠಾಕರಸಿಯು ನಿಮ್ಮ ಪ್ರಕೃತಿಯ ವಿಷಯಕ್ಕೆ ಕೇಳಿ ವಿಚಾರಿಸಲಿಕ್ಕೆ ಬಂದಿದ್ದರು. ನಿಮಗೆ ಬಹಿರ್ದೆಶೆಗೆ ಹತ್ತಿದೆ ಎಂಬ ಸುದ್ದಿಯು ಪ್ರಕಟವಾದರೆ ಹಿಂಡುಗಟ್ಟಲೆ ಜನರು ವಿಚಾರಿಸಲಿಕ್ಕೆ ಬರುವರು!" ವಲ್ಲಭಭಾಯಿ: "ಗಾಂಧೀ ವಿಷಯದಲ್ಲಿ ಯಾರೂ ಸುದ್ದಿಯನ್ನು ಕೇಳಬಾರದೆಂದು ಆರ್ಡಿನನ್ಸ ತೆಗೆಸಿರಿ!" ಬಾಪೂ: "ಇಲ್ಲ. ಇಂಥ ನಿಯಮವಿದೆಯೆ ಅಥವಾ ನಮ್ಮ ಸಲುವಾಗಿಯೇ ಹೀಗೆ ಹೇಳುತ್ತಿರೊ ಇದನ್ನು ತಿಳಿಯಲಿಚ್ಛಿ

ಸುತ್ತೇನೆ. ನನ್ನ ಸಲುವಾಗಿದ್ದರೆ ನನಗೆ ಗೊತ್ತಾಗುತ್ತಿದೆ. ಆದರೆ ನಿಯಮವೇ ಇದ್ದರೆ ನನಗೆ ಅದರ ವಿರುದ್ಧ ಹೋರಾಡಬೇಕಾಗುವದು." ಮೇಜರ: "ನಿಯಮವಂತೂ ಇದ್ದೇ ಇದೆ. ಆದರೆ ಹೋರಾಡುವ ವಿಷಯಗಳು ಅನೇಕ ಇವೆ. ಇದರ ವಿರುದ್ಧ ಏನು ಹೋರಾಡುವದು?" ಬಾಪೂ: "ಇಂಥ ಸಣ್ಣ ಸಣ್ಣ ಮಾತುಗಳು ಅನೇಕ ಇವೆ ಮತ್ತು ನನ್ನ ಬಗ್ಗೆ ಸುದ್ದಿ ಕೊಡುವದರಿಂದ ಸುಳ್ಳು ಸುದ್ದಿಗಳು ಹರಡುವದು ಬಂದಾಗುವದು." ಮೇಜರ: "ನಾವು ನಿಜವಾದ ಸುದ್ದಿಯನ್ನು ಕೊಡುತ್ತೇವೆ. ಯಾವನಾದರೂ ಮನುಷ್ಯನು ಹೆಚ್ಚು ಬೇನೆ ಬಿದ್ದರೆ ತಾರನ್ನು ಕೊಡುತ್ತೇವೆ." ಜೇಲರ: "ಹುಡುಗ ಸತ್ತನಲ್ಲವೆ? ಅವನಿಗಾಗಿ ಟೆಲಿಫೋನ ಮಾಡಿದ್ದೆವು." ಬಾಪೂ: "ಅಂದರೆ ರೋಗವು ಕಠಿಣ ಪರಿಸ್ಥಿತಿಗೆ ಹೋಗುವವರೆಗೆ ನೀವು ತಡೆಹಿಡಿಯುತ್ತೀರಿ-" ವಲ್ಲಭಭಾಯಿ: "ಸಾಯುವ ಭಯ ಉಂಟಾದಾಗಲೇ ಸುದ್ದಿಯನ್ನು ಕೊಡುತ್ತಿರಬಹುದು. ಹೀಗೇ ಇರಬಹುದು." ಮೇಜರ ಸಿಟ್ಟಿಗೆದ್ದರು.

ಬಾಪೂಗೆ ನಾನು ಹೇಳಿದೆ: "ಆ ಹುಡುಗನ ಸಾವಿನ ವಿಷಯಕ್ಕೆ ಇವನು ಅಲಕ್ಷ್ಯ ತೋರಿಸಿದ್ದನ್ನು ನೋಡಿ ನನಗೆ ಸಿಟ್ಟು ಬಂದಿದೆ." ಬಾಪು: "ನೌಕರಿಯಲ್ಲಿ ಮನುಷ್ಯನು ಹೀಗೇ ಆಗುತ್ತಾನೆ." ನಾನು: "ನಮ್ಮಲ್ಲಿ . . . ನಿಷ್ಕಾಳಜಿಯ ಮನುಷ್ಯನಿದ್ದನು. ಆದರೆ ಯಾರದಾದರೂ ಬೇನೆಯ ವಿಷಯ ಕೇಳಿದರೆ ಅವನಿಗೆ ಚಿಂತೆಯಾಗುತ್ತಿತ್ತು, ದುಃಖವೂ ಆಗುತ್ತಿತ್ತು. ದಿನಾಲು ಅದರ ವಿಷಯಕ್ಕೆ ಮಾತಾಡುತ್ತಿದ್ದನು ಮತ್ತು ಸುದ್ದಿಯನ್ನೂ ಮುಟ್ಟಿಸುತ್ತಿದ್ದನು." ಬಾಪೂ: "ಆ ಮನುಷ್ಯನು ಸೆರೆ ಕುಡಿಯುತ್ತಿದ್ದನಲ್ಲವೆ? ಸೆರೆ ಕುಡಿಯುವವರ ಭಾವನೆಗಳು ಹೀಗೆ ಸೂಕ್ಷ್ಮವಿರುತ್ತವೆ." ನಾನು: "ಆಶ್ಚರ್ಯ." ವಲ್ಲಭಭಾಯಿ: "ನೋಡು, ಭಾವನೆಗಳನ್ನು ತೀಕ್ಷ್ಣಮಾಡುವದಕ್ಕಾಗಿ ಎಲ್ಲಿಯಾದರೂ ಸೆರೆ ಕುಡಿಯುವದನ್ನು ಕಲಿಯಬೇಡ." ಬಾಪೂ ಹೇಳಿದರು: "ಟಾಲಸ್ಟಾಯನು ಆ ಮನುಷ್ಯನಿಗೆ ಸೆರೆ ಕುಡಿಸುತ್ತಿರುವವರೆಗೆ ಅವನಿಗೆ ಕೊಲೆ ಮಾಡುವ ಧೈರ್ಯವಾಗುತ್ತಿರಲಿಲ್ಲ. ಅವನು ತಂಬಾಕು ಸೇದಿದ ಕೂಡಲೇ ಭಾವನೆಗಳು ಕಲ್ಲಾಗತೊಡಗಿದವು, ಬುದ್ಧಿಯು ಕಾಡಿಗೆಗಟ್ಟಿದರೆ ಮನುಷ್ಯನು ಬೇಕಾದ್ದನ್ನು ಮಾಡಲು ಸಿದ್ಧನಾಗುವನು."

ಈ ವಿನೋದವು ನಡೆದಿತ್ತು. ಅಷ್ಟರಲ್ಲಿ ಮೇಜರ ತಿರುಗಿ ಬಂದರು. ಜೊತೆಯಲ್ಲಿ ಮೇಜರ ಡೋಯಿಲ್ ಮತ್ತು ಟಾಮಸ್ ಇದ್ದರು. ಡೋಯಿಲ್ಲರು ಟಾಮಸರ ಪರಿಚಯ ಮಾಡಿಕೊಟ್ಟರು. ಬಾಪೂರ ಎದುರಿಗೆ ಖುರ್ಚಿ ಹಾಕಿಕೊಂಡು ಕುಳಿತನು. ಟಾಮಸ (ಗೃಹಮಂತ್ರಿ) ನನ್ನು ಬಾಪೂ ಮೊದಲು ಎಂದೂ ಭೆಟ್ಟಿಯಾಗಿದ್ದಿಲ್ಲ. ಆವನು ಸ್ಪಷ್ಟೀಕರಣ ಮಾಡಿದನು. "ನಾನು ಯಾವದೇ ಸರ-

ಕಾರೀ ಕೆಲಸದ ಮೇಲೆ ಬಂದಿಲ್ಲ. ಕೇವಲ ನಿಮ್ಮ ಪರಿಚಯ ಮಾಡಿಕೊಳ್ಳ-ಲಿಕ್ಕೆ ಬಂದಿದ್ದೇನೆ." ಬಾಪೂ: "ನನಗೆ ಬಹಳ ಸಂತೋಷವಾಯಿತು." ಪ್ರಕೃತಿಯ ವಿಷಯಕ್ಕೆ ಕೇಳಿದನು. ಪರಿಸ್ಥಿತಿಯ ಮಾತು ನಡೆಯಿತು. ಪುಸ್ತಕ ಮುಂತಾದವುಗಳು ಸಾಕಷ್ಟು ಇವೆಯೊ ಇಲ್ಲವೊ ಎಂದು ಕೇಳಿದನು. ಉರ್ದು ಓದುವ ಮಾತು ನಡೆಯಿತು. ಬಾಪೂ ಹೇಳಿದರು: "ಲಾಹೋರ ಅಂಜುಮಾನದ ಪುಸ್ತಕಗಳು ನನ್ನ ವಿಚಾರದಿಂದ ಕಣ್ಣುತೆರೆಯುವಂಥವಿರುತ್ತವೆ." ಟಾಮಸನು ಬಹಳ ಮನಸ್ಸುಗೊಟ್ಟು ಕೇಳಿದನು ಮತ್ತು ಪ್ರಶ್ನೆಮಾಡಿದನು: "ಬೇರೆ ದೇಶೀ ಭಾಷೆಗಳಲ್ಲಿಯೂ ಇಂಥ ಪುಸ್ತಕಗಳಿವೆಯೆ?" ಬಾಪೂ ಹೇಳಿದರು: "ನನಗೆ ಗೊತ್ತಿಲ್ಲ. ಗುಜರಾಥಿಯಲ್ಲಿಯಂತೂ ವಿಶೇಷವಾಗಿ ಈ ಪ್ರಕಾರದವಿಲ್ಲ." ಮತ್ತೆ ಕೇಳಿದನು: "ಇದರಲ್ಲಿ ಪೈಗಂಬರನ ವಿಷಯಕ್ಕೆ ಇರುವದೆ?" ಬಾಪೂ ಹೇಳಿದರು: "ಇಲ್ಲ, ಮುಸಲ್ಮಾನ ಧರ್ಮದ ವಿಷಯಕ್ಕೆ ಎಲ್ಲವೂ ಇದೆ ಮತ್ತು ನಾನಂತೂ ಮುಸಲ್ಮಾನ ಮನೋವೃತ್ತಿಯನ್ನು ತಿಳಿದುಕೊಳ್ಳುವದಕ್ಕಾಗಿ ಇವುಗಳನ್ನು ಓದು-ತ್ತೇನೆ." ಮತ್ತೆ ಟಾಮಸ್ ಕೇಳಿದನು: "ನೀವು ಏನಾದರೂ ಬರೆಯುತ್ತಿರುವಿರಾ?" ಬಾಪೂ: "ಹೌದು, ಇತ್ತೀಚಿಗೆ ಆಶ್ರಮದ ಇತಿಹಾಸ ಬರೆಯುತ್ತಿದ್ದೇನೆ." ಟಾಮಸ "ಅಂದರೆ ನೀವು ಬಹಳ ಕಾಗದ ಪತ್ರಗಳನ್ನು ನೋಡಬೇಕಾಗುತ್ತಿರ-ಬಹುದು." ಬಾಪೂ ಹೇಳಿದರು: "ಇಲ್ಲ, ನಾನು 'ಆತ್ಮಕಥೆ' ಮತ್ತು ಸತ್ಯಾಗ್ರಹದ ಇತಿಹಾಸಗಳನ್ನು ಸಹ ಕಾಗದಪತ್ರಗಳಿಲ್ಲದಲೇ ಬರೆದಿದ್ದೆನು." ಟಾಮಸ: "ಎಲ್ಲ ವನ್ನೂ ನೆನಪಿನಿಂದಲೆ?" ಬಾಪೂ: "ಹೌದು, ಹಿಂದಿನಿಂದ ಕಾಗದಪತ್ರಗಳ ಸಂಗಡ ಹೋಲಿಸಿ ನೋಡಿದರೆ ಅದರಲ್ಲಿ ಏನೂ ತಪ್ಪು ಕಂಡುಬರಲಿಲ್ಲ. ಈ ಇತಿಹಾಸವನ್ನು ಬರೆಯುವದು ಸುಲಭವಿದೆ. ಯಾಕಂದರೆ ಇದರಲ್ಲಿ ಇತಿಹಾಸ-ಕ್ಕಿಂತಲೂ ನೈತಿಕದೃಷ್ಟಿ ಹೆಚ್ಚಾಗಿರುತ್ತದೆ. ಎಲ್ಲ ವ್ರತ ಹಾಗೂ ನಿಯಮಗಳ ವಿಕಾಸವು ಹೇಗೆ ಆಗುತ್ತಹೋಯಿತೆಂಬುದನ್ನು ನನಗೆ ಬರೆಯುವದಿದೆ." ಬಾಪೂ ಎಲ್ಲವನ್ನೂ ನೆನಪಿನಿಂದಲೇ ಬರೆಯುವರೆಂಬದನ್ನು ಕೇಳಿ ಟಾಮಸ್ ಸ್ತಬ್ಧನಾದನು. ನಂತರ ಭೆಟ್ಟಿಯ ಮಾತು ಹೊರಟಿತು. "ನೀವು ಸರೋಜಿನಿಯವರಿಗೆ ಭೆಟ್ಟಿಯಾಗು ತ್ತಿರಲಿಕ್ಕಿಲ್ಲ." ಬಾಪೂ: "ಅವರಿಗೆ ಭೆಟ್ಟಿಯಾಗಲಿಕ್ಕೆ ಪರವಾನಿಗೆ ಇಲ್ಲ." ಮೀರಾಬಹನಳ ಭೆಟ್ಟಿಯ ಮಾತು ಹೊರಟಿತು. ಟಾಮಸ್: "ಆದರೆ ನೀವು ಬೇರೆ ಭೆಟ್ಟಿಗಳನ್ನು ಏಕೆ ನಿಲ್ಲಿಸಿದಿರಿ? ಈ ಪ್ರಕಾರ ನೀವು ನಿಮ್ಮನ್ನೇ ಏಕೆ ಶಿಕ್ಷೆಗೆ ಗುರಿಮಾಡಿದಿರಿ?" ಬಾಪೂ: "ಅವರು ಮಾಡುತ್ತಿರುವ ಕೆಲಸಕ್ಕಾಗಿ ಅವರನ್ನು ಭೆಟ್ಟಿಯಾಗಗೊಡದಿದ್ದರೆ ನನಗೆ ಯಾರ ಭೆಟ್ಟಿಯೂ ಬೇಡ." ಟಾಮಸ್: "ಆದರೆ ಅವರು ವಿಲಾಯತಿಗೆ ಕಳಿಸುತ್ತಿರುವ ಪತ್ರಗಳನ್ನು ಬಂದು ಮಾಡಿದರೆ ನಮಗೆ

ಯಾವ ಅಡ್ಡಿಯೂ ಇಲ್ಲ." ಬಾಪೂ ಹೇಳಿದರು : "ಬಂದು ಮಾಡುವದಿಲ್ಲ. ನಿಮಗೆ ನೋಡುವದಾದರೆ ನೋಡಿರಿ." ಟಾಮಸ್ : "ಆಗುವ ಹಾನಿಯು ಆಗಿಯೇ ಹೋಗುತ್ತದೆ. ನಾವು ಹಿಂದಿನಿಂದಲೇ ನೋಡುತ್ತೇವಲ್ಲವೆ ?" ಬಾಪು : "ನೀವು ಅದರ ನಿರಾಕರಣೆ ಮಾಡಿರಿ. ಅದು ವಿಶ್ವಾಸಾರ್ಹವಾಗಿದ್ದರೆ ಅವರು ತಿದ್ದುಪಡೆ ಮಾಡಿಕೊಳ್ಳುವರು." ಟಾಮಸ್ : "ಹಾನಿಯಾದ ಮೇಲೆ ತಿದ್ದುಪಡೆ ಎಂತಹದು?" ಬಾಪೂ : "ಹೀಗೆ ಸರಕಾರವೇನು ಸುಳ್ಳು ಸುದ್ದಿ ಪ್ರಸಿದ್ಧಿಸುವದಿಲ್ಲವೆ ? ಮಾನವೀ ವ್ಯವಹಾರದಲ್ಲಿ ಹೀಗೆ ಆಗುತ್ತಲೇ ಇರುವದು." ಟಾಮಸ್ : "ಹೌದು, ಇರಬಹುದು, ಆದರೆ ನಾವಂತೂ ಇಂಥ ಸುದ್ದಿ ಹರಡುವದನ್ನು ತಡೆಯಬೇಕಾಗುವದು." ಬಾಪೂ : "ನೀವು ಇಚ್ಛಿಸಿದರೆ ಅದರ ಸಂಗಡವೇ ನಿಮಗೊಂದು ಪ್ರತಿ ಸಿಗುವಂತೆ ಮಾಡುವೆನು. ಆದರೆ ಕಾಟು ಹಾಕುಗೊಡಲಾರೆ. ನಿಮ್ಮ ವಿರೋಧಿಗಳ ಮಾತು ಸತ್ಯವಿದ್ದರೆ ನೀವು ಅವರ ಆಭಾರ ಮನ್ನಿಸಬೇಕು." ಟಾಮಸ್ : "ಆದರೆ ಎಲ್ಲರೂ ಸತ್ಯವಂತರಿರುವದಿಲ್ಲ." ಬಾಪೂ : "ಆದರೆ ಮೀರಾ ನಮ್ಮ ಸತ್ಯವಂತರ ಮೊದಲನೇ ಪಂಕ್ತಿಯಲ್ಲಿದ್ದಾಳೆ. ಆವಳು ತಿಳಿದೂ ತಿಳಿದೂ ಸ್ವಲ್ಪಸಹ ಸುಳ್ಳು ಮಾತಾಡುವದಿಲ್ಲ." ಟಾಮಸ್ : "ಹೀಗಿರಬಹುದು. ಆದರೆ ಸ್ತ್ರೀ ಎಂಥವಳೇ ಇರಲಿ, ಅವಳಿಗೆ ಕೂಡಲೇ ಎಲ್ಲವನ್ನೂ ಒಪ್ಪಿಕೊಳ್ಳುವ ರೂಢಿಯಿರುತ್ತದೆ." ಬಾಪೂ : "ಮೀರಾ ಈ ಜಾತಿಯವಳಲ್ಲ, ಆದರೆ ಅವಳು ಬರೆದದ್ದರ ಪ್ರತಿಯನ್ನು ನಿಮಗೆ ಕಳಿಸುವಂತೆ ನಾನು ನಿಶ್ಚಿತವಾಗಿ ಮಾಡಬಲ್ಲೆನು." ಪ್ರಾಂತೀಯ ಸ್ವರಾಜ್ಯದ ಮಾತು ಹೊರಟಿತು. ಅವನೇ ತೆಗೆದನು ! ಬಾಪೂ ಹೇಳಿದರು : "ನನ್ನ ಪ್ರಾಂತೀಯ ಸ್ವರಾಜ್ಯದಲ್ಲಿ ಮತ್ತು ಸಾಮಾನ್ಯವಾಗಿ ತಿಳಿಯಲ್ಪಡುವ ಪ್ರಾಂತೀಯ ಸ್ವರಾಜ್ಯದಲ್ಲಿ ವ್ಯತ್ಯಾಸವಿದೆ. ನನ್ನ ಪ್ರಾಂತೀಯ ಸ್ವರಾಜ್ಯದಲ್ಲಿ ಪ್ರಾಂತದ ಅಧಿಕಾರವು ಎಲ್ಲ ವಿಷಯಗಳಲ್ಲೂ ಸಂಪೂರ್ಣವಿರುವದು. ಸೈನ್ಯ, ಅಬಕಾರಿ ಮತ್ತು ಎಲ್ಲ ವಿಷಯುಗಳಲ್ಲಿ. ಕೇಂದ್ರ ಸರಕಾರದ ನೈತಿಕ ಅಂಕುಶವಿರುವದೇ ಹೊರತು ಇದಕ್ಕಿಂತಲೂ ಹೆಚ್ಚು ಸ್ವಲ್ಪೂ ಇರಲಾರದು. ಸೆಮ್ಯುಅಲ್ ಹೋರನಿಗೆ ನಾನು ಇದೇ ಮಾತನ್ನು ಹೇಳಿದ್ದೆನು. ಅದು ಅವನಿಗೆ ತಿಳಿಯಿತು. ಆದುದರಿಂದ ಅವನು ಎಲ್ಲಿಯೂ ನನ್ನ ಉಪಯೋಗ ಮಾಡಿಕೊಳ್ಳಲಿಲ್ಲ ಮತ್ತು ಗಾಂಧೀಗೆ ಪ್ರಾಂತೀಯ ಸ್ವರಾಜ್ಯದಿಂದ ಸಂತೋಷವಿದೆಯೆಂದೂ ಹೇಳಲಿಲ್ಲ." ಟಾಮಸ್ : "ನೀವು ಹೇಳುವ ಪ್ರಾಂತೀಯ ಸರಕಾರವು ಆಕಾಶಕ್ಕೆ ಹಾರುವ ಮಾತಾಯಿತು. ಅದರ ಮೇಲೆ ನೈತಿಕ ಅಧಿಕಾರ ಬೇಕಲ್ಲವೆ ? ಕೆಲಸ ನಡೆಯುವದಾದರೂ ಹೇಗೆ ?" ಬಾಪೂ : "ಹೌದು, ಅಲ್ಲಿಯೂ ಸಹ ಜನರು ಪ್ರಾಂತದಿಂದಲೇ ಕಳಿಸಲ್ಪಟ್ಟವರಿರುವರಲ್ಲವೆ ? ಪ್ರಾಂತವು ಮಾಡುವದೆಲ್ಲ ಸರಿಯಾಗಿ ಮಾಡುತ್ತದೆಂದೇ ಅವರು ತಿಳಿಯಬೇಕು. ಅರಸನ ನೈತಿಕ ಅಧಿಕಾರದಿಂದ ಎಲ್ಲ

ಕೆಲಸವೂ ಆಗುತ್ತದೆಂದು ತಿಳಿಯಲಾಗುವದಿಲ್ಲವೆ? ಆ ಸೋಗು ನಡೆದಂತೆ ಈ ಸೋಗೂ ನಡೆಯುವದು. ಇಂಥ ಪ್ರಾಂತೀಯ ಸ್ವರಾಜ್ಯ ಕೊಟ್ಟರೆ ನಾನು ಇಂದೇ ತೆಗೆದುಕೊಳ್ಳುವೆನು. ನನ್ನ ಈ ಪ್ರಾಂತೀಯ ಸ್ವರಾಜ್ಯವು ಸಪ್ರೂ ಶಾಸ್ತ್ರೀ ಮುಂತಾದವರಿಗೆ ಒಪ್ಪಿಗೆಯಿಲ್ಲೆಂಬುದು ನನಗೆ ಗೊತ್ತಿದೆ. ಕೆಲವು ಕಾಂಗ್ರೆಸ್ಸಿಗರಿಗೂ ಒಪ್ಪಿಗೆ ಇರಲಿಕ್ಕಿಲ್ಲ. ಆದರೆ ನನಗಂತೂ ಇದೇ ಬೇಕು." ಟಾಮಸ್ : "ಇದು ಆಕಾಶಕ್ಕೆ ಹಾರುವ ಮಾತಾಗಿದೆ. ಮತ್ತು ಇದಕ್ಕಾಗಿ ಅನಿಶ್ಚಿತ ಸಮಯದ ವರೆಗೆ ತಡೆಯಬೇಕಾಗುವದು." ಬಾಪೂ : "ನಾನು ಬೇಕಾದಷ್ಟು ಸಮಯ ತಡೆಯಲು ಸಿದ್ಧನಿದ್ದೇನೆ." ಟಾಮಸ್ : "ಇವತ್ತು ಅರ್ಧ ರೊಟ್ಟಿ ಸಿಗುತ್ತಿದ್ದರೆ ಏಕೆ ತೆಗೆದುಕೊಳ್ಳುವದಿಲ್ಲ ?" ಬಾಪೂ : "ನನಗೆ ಅದು ರೊಟ್ಟಿಯೆಂಬ ವಿಶ್ವಾಸವಾದರೆ ಅವಶ್ಯ ತೆಗೆದುಕೊಳ್ಳುವೆನು. ಆದರೆ ರೊಟ್ಟಿಯಾಗಿರದೆ ಮಣ್ಣು ಅಥವಾ ಕಲ್ಲಾಗಿದ್ದರೆ ಹೇಗೆ ತೆಗೆದುಕೊಳ್ಳಲಿ ? ಅದಕ್ಕಿಂತ ನಿಜವಾದ ರೊಟ್ಟಿಯ ಮಾರ್ಗನಿರೀಕ್ಷಣೆ ಮಾಡಬೇಡವೆ ?"

ಮೇಜರ ಡೋಯಿಲ್ಲರು ಬಾಪೂಗೆ ಹಲ್ಲಿನ ಸೆಟ್ಟು ಹಾಕಿಕೊಂಡಿರಲು ಶಿಫಾರಸು ಮಾಡಿದರು. ಒಂದು ಸಾರೆ ದವಡೆಯಿಂದ ಆಹಾರ ತಿನ್ನುವ ರೂಢಿ ಬಿದ್ದರೆ ತಿರುಗಿ ಅವು ಹಲ್ಲಿನ ಸೆಟ್ಟುಗಳನ್ನು ಸರಿಯಾಗಿ ಹಿಡಿಯುವದಿಲ್ಲ. ಹೋಗಹೋಗುತ್ತ ಟಾಮಸರು ವಲ್ಲಭಭಾಯಿಯವರ ಕೈ ಕುಲುಕಿದರು, ನನ್ನ ಕೈಗಳನ್ನೂ ಕುಲಕಿದರು. ನನ್ನ ಸಂಗಡ ರಾಟಿಯ ವಿಷಯಕ್ಕೆ ಮಾತಾಡಿದರು. ಅವನ ಅಜ್ಞಾನವೆಷ್ಟೆಂದರೆ, "೪೦ ವಾರ ನೂಲಿನಲ್ಲಿ ಒಂದು ಕೋಟು ಆಗಬಹುದಲ್ಲವೆ ?" ಎಂದು ಕೇಳಿದನು. "೧೪೦೦೦ ವಾರಿಗೆ ಒಂದು ಧೋತರವಾಗುತ್ತದೆ"ಂದು ನಾನು ಹೇಳಿದೆ. ಆಗ ಅಂದನು : "ಓಹೊ, ಅಂದ ಮೇಲೆ ನೀವು ೧೪ ದಿವಸ ನೂತಾಗ ಒಂದು ಧೋತರಕ್ಕಾಗುವಷ್ಟು ನೂಲುವಿರಿ. ಇದೇ ಅಲ್ಲವೆ ? ಇದು ಬಹಳ ಹಾನಿಯ ಉದ್ಯೋಗ." ನಾನು ಹೇಳಿದೆ : "ಇದು ಬಿಡುವಿನ ಉದ್ಯೋಗ. ಮುಖ್ಯ ಉದ್ಯೋಗವೆಂದು ಇದರ ಪ್ರಶ್ನೆಯೇ ಇಲ್ಲ." ಆಗ ಅಂದನು : "ಇದು ತ್ರಾಸದಾಯಕದ್ದೆಂದು ಅನಿಸುತ್ತಿರಬಹುದಲ್ಲವೆ ?" ನಾನು ಹೇಳಿದೆ : "ಇಲ್ಲ. ಇದರಿಂದ ವಿಶ್ರಾಂತಿ ದೊರೆಯುತ್ತಿದೆ. ಇಡೀ ದಿವಸ ಓದಿ ಬರೆದು ಬೇಸರಗೊಂಡ ಮೇಲೆ ಅದರೊಳಗಿನ ಮನಸ್ಸು ತೆಗೆದು ಇದರಲ್ಲಿ ಹಾಕುವದರಿಂದ ಆಗುವ ಪರಿವರ್ತನದಿಂದ ಅದಕ್ಕೆ ವಿಶ್ರಾಂತಿ ದೊರೆಯುತ್ತದೆ." ಅವನು ಹೇಳಿದ : "ವಿಶ್ರಾಂತಿಯೇನು ಸಿಗುತ್ತದೆ? ಇದು ಯಾಂತ್ರಿಕ ಕೆಲಸವಿದೆ. ವಿಶ್ರಾಂತಿಯು ಬ್ರಿಜ್‌ದಂಥ ಯಾವುದಾದರೂ ಆಟವಾಡುವದರಿಂದ ದೊರೆಯುತ್ತದೆ." ಬ್ರಿಜ್‌ದಲ್ಲಿ ಅವನು ಸಾವಿರ ಗಳಿಸುತ್ತಿರಬಹುದು ಸಾವಿರ ಕಳೆಯುತ್ತಿರಬಹುದು, ಆದರೆ ಬಡವರ ಕಿಸೆಯಲ್ಲಿ ಒಂದು ಪೈ ಸಹ ಹೋಗುವದಿಲ್ಲವೆಂಬುದು ಪಾಪ, ಈ ಪ್ರಾಣಿಗೇನು ಗೊತ್ತು ?

ಬಾಪೂ ಇವತ್ತು ಮೊರಾರ ಪಟೇಲ (ಸ್ಯಾದಲಾವಾಲೆ) ರಿಗೆ ಭೆಟ್ಟಿಯಾದರು. ಅವರು ವಲ್ಲಭಭಾಯಿಯವರಿಗೆ ಬಾರ್ಡೋಲಿಯು ಲಜ್ಜೆ ಕಳೆದುಕೊಳ್ಳುವದಿಲ್ಲ ಎಂದು ಸಂದೇಶ ಕಳಿಸಿದರು. ಇದರಲ್ಲಿ ಬಿದ್ದವರಲ್ಲಿ ಎಷ್ಟೋ ಜನರು ಸಂಪೂರ್ಣ ಹಾಳಾಗುವರು. ಪಾಪ, ಡಾಕ್ಟರ ಘಾಟಕ (ಸಾತಾರೆಯವರು) ಹೇಳಿದರು: "ನನಗೆ ಏನೂ ಹೇಳುವದಿಲ್ಲ. ನಮಗೆ ೭ ರಿಂದ ೩ ರ ವರೆಗೆ ಬಿಡುವು ದೊರೆಯುದಷ್ಟು ಚಕ್ಕೀ (ಬೀಸುವ) ಕೆಲಸ ಕೊಡುತ್ತಾರೆ.''

ಈ ಜನರು ಭೆಟ್ಟಿಗೆ ಬಂದಾಗ ಬಾಪೂ ನೆಲದ ಮೇಲೆ ಕೂಡುತ್ತಾರೆಂಬುದು ಈಗ ಗೊತ್ತಾಯಿತು, ಯಾಕಂದರೆ ಆ ಜನರ ಸಲುವಾಗಿ ಖುರ್ಚಿ ಇಡುವದಿಲ್ಲ, ಆದುದರಿಂದ ಬಾಪೂ ಸಹ ಕೆಳಗೇ ಕೂಡ್ರುತ್ತಾರೆ.

*   *   *

ತಯಬಜೀ ಬಾಬಾರ ಹಲ್ಲುಗಳು ನಿಜವಾದವುಗಳೊ ಕೃತ್ರಿಮವೊ ಎಂಬ ಮಾತು ಹೊರಟಾಗ ಬಾಪೂ ಹೇಳಹತ್ತಿದರು: "ಅವರು ಪಂಜಾಬದಲ್ಲಿಯೇ ಸಾಯುವ ಹಾಗಾಗಿದ್ದರಲ್ಲವೆ? ನನ್ನನ್ನು ಕರೆದು ಮೃತ್ಯುಪತ್ರವನ್ನು ಸಹ ಮಾಡಿದ್ದರು. ಎರಡು ಮೂರು ದಿವಸಗಳಲ್ಲಿ ನೆಟ್ಟಗಾಗಿ ತಿರುಗಿ ಕೆಲಸಕ್ಕೆ ಹತ್ತಿದರು. ಆದರೆ ಇಷ್ಟಾದ ಮೇಲೂ ಅವರು ತಮ್ಮ ಮನೆಗೆ ಹೋಗುವ ಮಾತನ್ನೇ ಎತ್ತುತ್ತಿದ್ದಿಲ್ಲ. 'ಮನೆಗೆ ಹೋಗುವದಿಲ್ಲ, ಮಿಸೆಸ್ ತಯಬಜಿಯನ್ನು ಇಲ್ಲಿ ಕರೆಸಿಕೊಳ್ಳಿರಿ' ಎಂದು ಹೇಳುತ್ತಿದ್ದರು.

*   *   *

ಪ್ರಾಂತೀಯ ಸ್ವರಾಜ್ಯದ ವಿಷಯಕ್ಕೆ ಇನ್ನೂ ಕೆಲವು ಮಾತುಗಳು: ಬಾಪೂ ಹೇಳಿದರು: "ಈ ಸ್ವರಾಜ್ಯದಿಂದಲೇ ಇಡೀ ದೇಶದ ಸ್ವರಾಜ್ಯವಾಗಬಲ್ಲದು. ಇದೇ ನಿಜವಾದ ಸ್ವರಾಜ್ಯ. ಇಲ್ಲದಿದ್ದರೆ ಇದು ಯಾವ ಸ್ವರಾಜ್ಯವೂ ಅಲ್ಲ. ಫೆಡರೇಶನ್ ಕೊಡುವದರಿಂದ ರಾಷ್ಟ್ರೀಯ ಐಕ್ಯತೆಯು ಆಗುವದಿಲ್ಲವೆಂಬುದು ಆ ಜನರಿಗೆ ಗೊತ್ತಿದೆ. ಆದುದರಿಂದ ಆ ಜನರು ಈ ಫೆಡರೇಶನ್‌ದ ಮಾತನ್ನು ಆಡುತ್ತಾರೆ. ಸಪ್ರು, ಶಾಸ್ತ್ರೀ ಮತ್ತು ಜಯಕರರು ಮುಸಲ್ಮಾನರಿಗೆ ಅಂಜುತ್ತಾರೆ. ಆದುದರಿಂದ ಗಟ್ಟಿ ಮುಟ್ಟಾದ ಕೇಂದ್ರ ಸರಕಾರವನ್ನು ಬೇಡುತ್ತಾರೆ. ನಮ್ಮ ಗಟ್ಟಿಮುಟ್ಟಾದ ಕೇಂದ್ರವು ಪ್ರಾಂತದಲ್ಲಿಯೇ ಇರುತ್ತದೆ. ನಮ್ಮ ಅವಶ್ಯಕತೆಗನುಸಾರವಾಗಿ ನಮ್ಮದೇ ಸೈನ್ಯವಿರಬೇಕು ಮತ್ತು ನಾವು ನಮ್ಮ ಪದ್ಧತಿಯ ಪ್ರಕಾರ ಎಲ್ಲ ಕೆಲಸಗಳನ್ನೂ ನಡೆಸಬೇಕು. ಇದರ ಪರಿಣಾಮ ಒಂದೇ ಆಗಬಹುದು. ಪ್ರತಿಯೊಂದು ಪ್ರಾಂತವು ತನ್ನ ತನ್ನ ಪದ್ಧತಿಯಂತೆ ವಿಕಾಸ ಮಾಡುತ್ತ ಇಡೀ ದೇಶದ ವಿಕಾಸವನ್ನು ಮಾಡಲಿ ಅಥವಾ ಹೊಡೆದಾಡಿ ಸಾಯಲಿ. ಇವತ್ತು ಕೇಂದ್ರವು ಅವರನ್ನು ಸುಲಿದು

ತಿನ್ನುತ್ತಿದೆ ಆದರೆ ಮಂದಗಾಮಿಗಳು ಬೇಡುತ್ತಿರುವ ಮತ್ತು ಈ ಜನರು ಕೊಡುತ್ತಿರುವ ಫೆಡರೇಶನ್ನು ಪ್ರಾಂತವನ್ನು ತಿಂದುಬಿಡುತ್ತದೆ. ವಲ್ಲಭಭಾಯಿಯವರ ಶಬ್ದದಂತೆ ಇದರಲ್ಲಿ ಮುನಸಿಪಾಲಟಿಯ ಸ್ವರಾಜ್ಯವಿದೆ. ನನ್ನ ಕಲ್ಪನೆಯ ಸ್ವಾತಂತ್ರ್ಯವು ಅಮೇರಿಕೆಯ ರಾಜ್ಯಗಳಲ್ಲಿ ಅಥವಾ ಸ್ವಿಝರ್ಲಂಡದ ನಗರರಾಜ್ಯಗಳಲ್ಲಿ ಇದ್ದಂತೆ ಇರುತ್ತದೆ. ಈ ವಿಷಯದಲ್ಲಿ ಬಹಳ ಜನ ನಮ್ಮ ಕಾಂಗ್ರೆಸಿಗರು ಸಹ ನನಗೆ ಅನುಕೂಲರಾಗದಿರುವ ಸಂಭವವಿದೆ. ಆದರೆ ಅದರಿಂದೇನು? ಅವರಿಗೂ ತಿಳಿಯುವದು. ಗಟ್ಟಿಮುಟ್ಟಾದ ಕೇಂದ್ರದ ಪರಿಣಾಮ ನೋಡುವದಾದರೆ ನಾಣ್ಯದ ಇಡೀ ಇತಿಹಾಸವನ್ನು ನೋಡಬಹುದಲ್ಲ. ನಾಣ್ಯ ತಯಾರಿಸುವದರಲ್ಲಿಯೆ ೩೫ ಕೋಟಿ ರೂಪಾಯಿ ಲಾಭವಾಗುತ್ತದೆ. ಅದನ್ನು ರಿಝರ್ವದಲ್ಲಿ ತೆಗೆದುಕೊಂಡು ಹೋದರು ಮತ್ತು ಕರಗಿಸಿಬಿಟ್ಟರು."

ಈ ಸಾರೆ ಬಾಪೂ ಆಶ್ರಮದ ಟಪಾಲನ್ನು ಇವತ್ತು ಶನಿವಾರವೇ ಪೂರ್ಣ ಮುಗಿಸಿಬಿಟ್ಟರು. ಆಶ್ರಮದ ಪತ್ರಗಳು ಸ್ವಲ್ಪ ಕಡಿಮೆಯೇ ಇದ್ದವು. ಹೊರಗಿನ ಪತ್ರಗಳಂತೂ ಕಡಿಮೆ ಆಗೇ ಬಿಟ್ಟವೆ. ಸರಕಾರದ ಅವ್ಯವಸ್ಥೆಯು ಎಷ್ಟಿದೆ ಎಂಬುದರ ಮಾದರಿಯು ಇವತ್ತು ಸುಪರಿಂಟೆಂಡೆಂಟರಿಂದ ಗೊತ್ತಾಯಿತು. ಪರ್ಸಿ ಬಾರ್ಟಲೆಟರಿಗೆ

೨೫-೬-'೩೨

(ಟಾಗೋರರ ಅಪೀಲಿನ ಉತ್ತರರೂಪವಾಗಿ) ಬಾಪೂ ಮೇ ತಿಂಗಳಲ್ಲಿ ಪತ್ರ ಬರೆದಿದ್ದರು. ಅದು ಮಹತ್ವದ್ದೆಂದು ಸುಪರಿಂಟೆಂಡೆಂಟರು ಸರಕಾರದ ಕಡೆಗೆ ಕಳಿಸಿದ್ದರು. ಅಲ್ಲಿಂದ ಅದು ಭಾರತ ಸರಕಾರದ ಕಡೆಗೆ ಹೋಯಿತು, ಮುಂದೆ ಇಂಡಿಯಾ ಆಫೀಸದ ಕಡೆಗೆ ಹೋಯಿತು ಮತ್ತು ಕೊನೆಗೆ ಈ ತಿಂಗಳಲ್ಲಿ ಪರ್ಸೀ ಬಾರ್ಟಲೆಟರಿಗೆ ಬಹಳ ತಡವಾಗಿ ಇತ್ತೀಚೆಗೆ ಮುಟ್ಟಿತು. ಈ ಪತ್ರವು ಯಾರ್ಕದ ಆರ್ಚಬಿಶಪ್, ಲಿಂಡಸೆ, ಯಂಗ ಹಜ್ಬಂಡ ಮತ್ತು ಮರೆ ಇವರ ಮುಖಪತ್ರದೊಂದಿಗೆ ಪ್ರಕಾಶಿತವಾಗಿದೆ. ಕಾರಣ ಆ ವಿಷಯ ಕುರಿತು ಚರ್ಚೆ ಪ್ರಾರಂಭವಾಯಿತು. ಮುಂಬೈ ಸರಕಾರದ ಕಣ್ಣು ಇವತ್ತು ತೆರೆದವು. ಆದುದರಿಂದ ಸುಪರಿಂಟೆಂಡೆಂಟರಿಗೆ, ಗಾಂಧೀಯವರು ಈ ಪತ್ರ ಎಂದು ಬರೆದರು? ನೀವು ಹೇಗೆ ಪಾಸುಮಾಡಿದಿರಿ? ಮುಂತಾಗಿ ಕೇಳಿತು. ಸುಪರಿಂಟೆಂಡೆಂಟ ಸಾಹೇಬರು ಮಳೆ ಬರುವದಕ್ಕಿಂತ ಮೊದಲು ಒಡ್ಡು ಕಟ್ಟಿಟ್ಟದ್ದರಿಂದ ಒಳ್ಳೇ ಹರ್ಷಿತರಾಗಿದ್ದರು. ಒಡ್ಡನ್ನು ಸ್ಥಿರ ಮತ್ತು ಗಟ್ಟಿಮುಟ್ಟು ಮಾಡುವದಕ್ಕಾಗಿ ನನ್ನಿಂದ ಪತ್ರದ ಪ್ರತಿಯನ್ನು ತೆಗೆದುಕೊಂಡು ಹೇಳಹತ್ತಿದರು: "ನಾನು ಪ್ರತಿಯನ್ನು ಸಹ ಇಟ್ಟಿದ್ದೇನೆಂದು ಇನ್ನು ಬರೆಯುವೆನು!" ಪುನಃ ಸುದ್ದಿ ಹೇಳಿದರು: "ಬಿರ್ಲಾರ ಪತ್ರದ ವಿಷಯಕ್ಕೂ

ನನ್ನನ್ನು ಕೇಳಿದ್ದಾರೆ. ಅದರಲ್ಲಿಯಂತೂ ಏನೂ ಇದ್ದಿಲ್ಲ. ಅವರು ವಿಲಾಯತಿಗೆ ಹೋಗುವ ವಿಷಯಕ್ಕೆ ಅಭಿಪ್ರಾಯ ಕೇಳಿದ್ದರು, ನಾನು ಇಲ್ಲಿಂದ ಅಭಿಪ್ರಾಯ ಕೊಡಲಾರೆ, ಈ ವಿಷಯದಲ್ಲಿ ನನ್ನ ವಿಚಾರಗಳು ಎಲ್ಲರಿಗೂ ಗೊತ್ತಿವೆ ಎಂದು ನೀವು ಬರೆದಿದ್ದಿರಿ. ಇದರಲ್ಲಿ ತಪಾಸುನೂಡುವದೇನಿದೆ ? " ಇಲ್ಲಿಂದ ಹೋಗುವ ಪತ್ರಗಳಿಗಾಗಿ ಸರಕಾರವು ಅಧೀರವಾಗಿದೆಯೆಂದು ಅನಿಸುತ್ತದೆ. ಆದುದರಿಂದಲೇ ಈ ವಾರ ಇಲ್ಲಿ ಕೆಲವೇ ಪತ್ರ ಕೊಟ್ಟಿರುವ ಸಂಭವವೂ ಇರುತ್ತದೆ! ದೇವರೇ ಬಲ್ಲ!

ಇವತ್ತು ವಲ್ಲಭಭಾಯಿಯವರು ಕೇಳಿದರು: " ಮೋಜಿಜ ಯಾರು ? ಅವನು ಮಹಮ್ಮದನಿಗಿಂತಲೂ ಮೊದಲು ಆದನೊ ಅಥವಾ ಹಿಂದುಗಡೆಯೊ ? " ಆಶ್ರಮದ ಹುಡಿಗೆಯರಲ್ಲಿ ಶಾರದೆಯು ಬಹಳ ವಿಚಕ್ಷಣಳಿದ್ದಾಳೆ. ಅವಳು ಕೇಳಿದ ಒಂದು ಪ್ರಶ್ನೆ ಹೀಗಿತ್ತು: ಸಹೋದರಿಯು ಫಲಾಪೇಕ್ಷೆಯಿಲ್ಲದಲೇ ಒಂದೇ ಧರ್ಮವನ್ನು ಆಚರಿಸುತ್ತಿದ್ದರೆ ಸಹೋದರನ ಸಹಧರ್ಮಚಾರಿಣಿ ಎಂದು ಏಕೆ ಕರೆಯಲ್ಪಡುವದಿಲ್ಲ? ಈಗ ಆಶ್ರಮದಲ್ಲಿ ಪಕ್ಷಿಗಳು ಬಹಳ ಬರತೊಡಗಿವೆ. ಇದಕ್ಕಾಗಿ ಸಹ ಈ ಹುಡಿಗೆಯು ಬಹಳ ಆನಂದ ವ್ಯಕ್ತಮಾಡಿದ್ದಳು. ಹೊಸದಾಗಿ ಬಂದ ನವಿಲುಗಳಲ್ಲಿ ಒಂದು ಸುಂದರವಾದ ನವಿಲು ಸತ್ತಿದ್ದರ ಉಲ್ಲೇಖಮಾಡಿ ಅದು ಜೀವಂತವಿದ್ದಾಗ ಬಹಳ ಸುಂದರ ಕಾಣಿಸುತ್ತಿತ್ತೆಂದೂ ಸತ್ತ ಮೇಲೆ ಕೆಟ್ಟ ಕಾಣಿಸುತ್ತಿತ್ತೆಂದೂ ಮತ್ತು ಅದರ ಶರೀರಕ್ಕೆ ಕೆಟ್ಟ ನಾತ ಬರುತ್ತಿತ್ತೆಂದೂ ಬರೆದಿದ್ದಳು. ಬಾಪೂ ಅವಳಿಗೆ ಬರೆದರು: " ನವಿಲಿನ ಸ್ಥಿತಿಯಂತೆಯೇ ನಮ್ಮದೂ ಎಂದು ತಿಳಿ. ಸುಂದರ ಕಾಣಿಸಿ ಕೊಳ್ಳುವ ಸ್ತ್ರೀ-ಪುರುಷರು ಸಹ ಸತ್ತ ಮೇಲೆ ನೋಡಲಿಕ್ಕೆ ಚನ್ನಾಗಿ ಕಾಣುವದಿಲ್ಲ ಮತ್ತು ನಾವು ಅವರನ್ನು ಕೂಡಲೇ ದಹನಮಾಡಿ ಬಿಡುತ್ತೇವೆ. ಆದುದರಿಂದ ಶರೀರದ ಮೇಲೆ ಮೋಹವಿಡಬಾರದು . . . ಸಹಧರ್ಮಚಾರಿಣಿಯ ಅರ್ಥವು ಮೂಲದಲ್ಲಿ ನೀನು ಮಾಡಿದಂತೆಯೇ ಇರುತ್ತದೆ. ಆದರೆ ವ್ಯವಹಾರದಲ್ಲಿ ಇದು ಪತ್ನಿಯ ಸಲು ವಾಗಿ ಉಪಯೋಗಿಸಲ್ಪಡುತ್ತದೆ. ಸಹೋದರಿಯು ಲಗ್ನವಾದ ಮೇಲೆ ಸಹೋದರನ ಸಂಗಡ ಇರುವದಿಲ್ಲ. 'ಚಾರಿಣಿ' ಇದರಲ್ಲಿ ಜೀವನಪರ್ಯಂತ ಸಂಗಡವಿರುವ ಭಾವವಿದೆ. ಶಬ್ದಕ್ಕೆ ಒಂದು ಅರ್ಥವು ರೂಢವಾದ್ದರಿಂದ ಅದನ್ನು ಬದಲಿಸುವದು ಕಷ್ಟ. ಅವಶ್ಯವೂ ಇಲ್ಲ."

ಇನ್ನೊಂದು ಪತ್ರದಲ್ಲಿ ಬರೆದರು: " ಮಂದಿರ ಮತ್ತು ಚೌರಸ್ತೆಗಳ ಉಪ-ಯೋಗವು ಪ್ರಸಿದ್ಧವಿದೆ. ಅವುಗಳ ಮುಖಾಂತರ ಜನರು ಒಂದುಗೂಡುತ್ತಾರೆ. ಭಜನೆ ಮುಂತಾದವುಗಳನ್ನು ಮಾಡುತ್ತಾರೆ. ಸಭೆಗಳನ್ನು ಸೇರಿಸುತ್ತಾರೆ ಮತ್ತು ಉದ್ದೇಶವೂ ಇದೇ ಇತ್ತು.

" ಮೂರ್ತಿಪೂಜೆಯ ಅವಶ್ಯಕತೆ ಇದೆಯೊ ಇಲ್ಲವೊ ಎಂಬ ಪ್ರಶ್ನೆಯೇ

ಉದ್ಭವಿಸುವದಿಲ್ಲ. ಯಾಕಂದರೆ ಅದು ಅನಾದಿ ಕಾಲದಿಂದ ಇದೆ ಮತ್ತು ಇರುವದು. ದೇಹಧಾರಿಗಳೆಲ್ಲರೂ ಮೂರ್ತಿಪೂಜಕರಿದ್ದೇ ಇರುವರು.

"ವೈಷ್ಣವ ಧರ್ಮದ ಪೂಜಾ ವಿಧಿಯಲ್ಲಿ ಬದಲಾವಣೆಯು ಇಷ್ಟವಾಗಬಲ್ಲದು. ದೇವರು ಎಲ್ಲ ಸ್ಥಳದಲ್ಲಿಯೂ ಇರುವದರಿಂದ ಮೂರ್ತಿಯಲ್ಲಿಯೂ ಇದ್ದಾನೆ. ಮೂರ್ತಿ ಪೂಜೆಯ ನಾಶವು ನಾನು ಅಸಂಭವವೆಂದು ತಿಳಿಯುತ್ತೇನೆ."

ಮಗನ ಹೆಂಡತಿಗೆ: "ಬಾಬೂನ ಕಿವಿಯಲ್ಲಿ ಎಣ್ಣೆ ಹಾಕುವಾಗ ಅದರಲ್ಲಿ ಬಳ್ಳೊಳ್ಳಿಯ ಬೇಳೆಯನ್ನು ಹಾಕಿ ಮರಳಿಸಿದರೆ ಹೆಚ್ಚು ಲಾಭದಾಯಕವಾಗಬಹುದು."

ಇನ್ನೊಂದು ಪತ್ರದಲ್ಲಿ: "ಅನಾಸಕ್ತಿಯ ಅರ್ಥವು ನನ್ನ ಹಾಗೂ ನಿನ್ನವು ವಿಷಯಕ್ಕೆ ಅನಾಸಕ್ತನಾಗಿರುವದು, ಮತ್ತು 'ಪರ' ದ ವಿಷಯಕ್ಕೆ ಅಂದರೆ ಸತ್ಯದ ವಿಷಯಕ್ಕೆ, ದೇವರ ವಿಷಯಕ್ಕೆ ತನ್ಮಯನಾಗುವವರೆಗೆ, ತದ್ರೂಪನಾಗುವವರೆಗೆ ಆಸಕ್ತಿಯಿರುವದು. ಈ ಅರ್ಥವು ತಿಳಿಯದ್ದರಿಂದ ನಿರುತ್ಸಾಹ ಮುಂತಾದ ದೋಷಗಳು ಉಂಟಾಗುತ್ತವೆ."

ಇವತ್ತು ಅಕಸ್ಮಾತ್ತಾಗಿ ಆಲ್ಫೋಂರ್ಸೋರನ್ನು ಕರೆಯಲಿಕ್ಕೆ ಹೋದಾಗ ಕ್ರೆಸ್‌ವೆಲ್ಲನ ಭೆಟ್ಟಿಯಾಯಿತು. ಅವನಿಗೆ ನಮ್ಮನ್ನು ಭೆಟ್ಟಿಯಾಗಲಿಕ್ಕೆ ಬರುವದಿಲ್ಲವಾದ್ದರಿಂದ ದುಃಖವಾಗುತ್ತದೆ. ಅವನು ರಾಜಕೀಯ ಕೈದಿ

೨೬-೬-'೩೨ ಗಳ ವಿಷಯಕ್ಕೆ ವೃತ್ತಪತ್ರಗಳಿಗೆ ಪತ್ರ ಬರೆದ ಕಾರಣಕ್ಕಾಗಿ ಭೆಟ್ಟಿಯನ್ನು ತಡೆಹಿಡಿದಿರಬೇಕೆಂಬ ಭ್ರಮೆ ಅವನಿಗಿದೆ. ಜಯಕರರಿಗೆ ಭೆಟ್ಟಿಯಾಗುತ್ತಾನೆ. ಇವತ್ತು ಜಯಕರರು ಬರಲಿದ್ದಾರೆಂದು ಹೇಳುತ್ತಾನೆ. ಅವರು ತೀರ ನಿರಾಶರಾಗಿದ್ದಾರೆ ಮತ್ತು ಶಾಸನಸಭೆಗೆ ರಾಜೀನಾಮೆ ಕೊಡುವ ಸಂಭವವೂ ಇದೆ. ಯಾಕಂದರೆ ಅದರಲ್ಲಿ ಏನೂ ಕೆಲಸ ಆಗುವದಿಲ್ಲ. ಇದೇ ವಿಷಯ ಚರ್ಚೆಮಾಡುವದಕ್ಕೆ ಅವರು ಇಲ್ಲಿ ಬರುತ್ತಿದ್ದಾರೆ. ನನಗೆ ಯೋಗ್ಯವಾದ ಯಾವದಾದರೂ ಕೆಲಸವಿದ್ದರೆ ಸೂಚಿಸಿರೆಂದೂ ಪುಸ್ತಕ, ಹಣ್ಣು ಮುಂತಾದವುಗಳು ಬೇಕಾದರೆ ಬರೆಯಿರೆಂದೂ ಎರಡು ವಾರಗಳಿಂದ ಪತ್ರ ಬರೆಯುತ್ತಿದ್ದೇನೆಂದು ಹೇಳಿದನು. ಆದರೆ ಅವನ ಪತ್ರಗಳನ್ನು ಇಲ್ಲಿ ಮುಟ್ಟಿಸಿದಾಗಲ್ಲವೆ!

ಸಾಪ್ತಾಹಿಕ 'ಟಾಯಿಮ್ಸ್'ದಲ್ಲಿ ಎಷ್ಟೋ ಉತ್ತಮ ಸಂಗತಿಗಳು ಬರುತ್ತವೆ. ...ನ್ನು ...ಗ ಒಬ್ಬ ಇಂಗ್ಲೀಷ ಮನುಷ್ಯನು ಹಿಂದುಸ್ತಾನದ ಸ್ತ್ರೀಯರ ವಿಷಯಕ್ಕೆ ಉ... ಲೇಖಮಾಲೆಯನ್ನು ಬರೆಯುತ್ತಿದ್ದಾನೆ. 'ದುರ್ಗಾವತಿ'—ಮಹೋಬಾದ ... ಪುತ್ರಿ—ಯೊಂಗೆ ಗೊತ್ತಿದ್ದಳು. ಬಾಪೂಗೆ ಲೇಖ ಓದಿ ತೋರಿಸಿದೆವು. ಕೂಡಲೇ

ಅದು ಬಹಳ ಮನಸ್ಸಿಗೆ ಬಂತು. ನಟರಾಜನ್ನರು ಮತಾಧಿಕಾರದ ಮೇಲೆ ಸುಂದರ ಲೇಖಮಾಲೆಯನ್ನು ಬರೆಯುತ್ತಿದ್ದಾರೆ. ಪರೋಕ್ಷ ಪ್ರೌಢ ಮತಾಧಿಕಾರದ ಲೇಖದಲ್ಲಿ ಅವರು ಬಾಪೂರ ದುಂಡಮೇಜಿನ ಭಾಷಣಕ್ಕೆ ಒಳ್ಳೇ ಪುಷ್ಟಿಕೊಟ್ಟಿದ್ದಾರೆ. 'ಟಾಯಿಮ್ಸ'ದಲ್ಲಿ ಲಾರ್ಡ ಗ್ರೇ ಅವರ ವಿಷಯಕ್ಕೆ ಒಂದು ವಿನೋದದ ಕಥೆಯಿದೆ. ಅವರ ೭೦ ನೇ ವರ್ಷದ ಹುಟ್ಟು ಹಬ್ಬವನ್ನು ಜೇಮ್ಸ ಬೇರಿ ತಮ್ಮಲ್ಲಿ ಆಚರಿಸಿದರು. ಲಾರ್ಡ ಗ್ರೇ ರಾಜಕಾರಣದಿಂದ ನಿವೃತ್ತರಾಗಿ ಫೆಲೊಡನ್ನದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಪಕ್ಷಿಗಳ ಸಂಗಡ ಆಟವಾಡುತ್ತಿದ್ದಾರೆ. ಸರ್ ಜೇಮ್ಸರು ಭಾಷಣ ಮಾಡುತ್ತ 'ನಾನು ನನ್ನ ಕೆನರೀ ಪಕ್ಷಿಯ ಸಂಗಡ ಇವತ್ತು ಗ್ರೇರ ಜನ್ಮದಿನವಿದೆ, ನಾವು ಆಚರಿಸೋಣವೆ? ಎಂದು ಮಾತಾಡಿದೆ. ಆಗ ಅದು ಕೂಡಲೇ ಗ್ರೇರನ್ನು ಗುರುತಿಸಿ 'ಆಚರಿಸಿರಿ. ಆದರೆ ನಮ್ಮೆಲ್ಲರಿಗೂ ಅವರನ್ನು ಭೆಟ್ಟಿಯಾಗಲಿಕ್ಕೆ ಕರೆಯಬೇಕು' ಎಂದು ನುಡಿಯಿತು. ಈ ಎಲ್ಲ ಪಕ್ಷಿಗಳನ್ನು ಒತ್ತಟ್ಟಿಗೆ ಕೂಡಿಸಲಾಗಿತ್ತು.' ನಮ್ಮಲ್ಲಿ ಪಕ್ಷಿಗಳದಾಗಲಿ, ಹೂಗಳದಾಗಲಿ, ಹಸಿರು ಹುಲ್ಲು, ಗಿಡ, ಸಸಿಗಳದಾಗಲಿ ಅಥವಾ ಪಶುಗಳದಾಗಲಿ ಯಾವ ಅಭಿರುಚಿಯೂ ಇಲ್ಲ. ಕಾಲಿದಾಸನ ಕಾಲಕ್ಕೆ ಸುತ್ತುಮುತ್ತಲಿನ ಸೃಷ್ಟಿಯೊಂದಿಗೆ ಮನುಷ್ಯರು ಅನುಭವಿಸುತ್ತಿದ್ದ ಐಕ್ಯದ ವಿಷಯಕ್ಕೆ ಇವತ್ತಿನ ಅಹಿಂಸೆಯ ಪೂಜಾರಿಗಳಾದ ನಾವು ಉದಾಸೀನರಾಗಿದ್ದೇವೆ. ಆದರೆ ಅಹಿಂಸೆಯ ಸಂಬಂಧವಿರದಂಥ ಪಾಶ್ಚಿಮಾತ್ಯ ಜನರಲ್ಲಿ ಬಾಹ್ಯಸೃಷ್ಟಿಯೊಂದಿಗಿನ ಐಕ್ಯತೆಯು ಹೆಚ್ಚೆ ಹೆಚ್ಚಿಗೂ ಕಂಡುಬರುತ್ತಿದೆ. ಮ್ಯುರಿಯಲ್ ಪತ್ರ ಬರೆದರೆ ವಸಂತಋತುವು ಬರುವಾಗ ಯಾವ ಯಾವ ಹೂವಿನಿಂದ ತೋಟ-ಪಟ್ಟಿಗಳೂ, ಅಡವಿಗಳೂ ಆಚ್ಛಾದಿಸಲ್ಪಡುತ್ತವೆಯೊ ಅವುಗಳ ವರ್ಣನೆ ಬರೆಯುತ್ತಾಳೆ. ಪ್ರೀವಾನ ಪತ್ನಿಯು ತನ್ನ ಸಣ್ಣ ಮನೆಯ ಆವಾರದಲ್ಲಿ ಆಗುತ್ತಿರುವ ಅನೇಕ ಪಲ್ಲೆಗಳ ಅಗಿಗಳು ಚಿಗಿಯುತ್ತಿರುತ್ತವೆ ಎಂದು ಬರೆಯುತ್ತಾಳೆ. ಅವುಗಳಿಗಾಗಿ ಅವಳು ಪ್ರಾಣ ಕೊಡುತ್ತಾಳೆ. ನಾವು?

'ಧಾನ್ಯ ಮತ್ತು ಫಲ ಇವುಗಳಲ್ಲಿಯ ಭೇದದ ವಿಷಯಕ್ಕೆ ರಾಮೇಶ್ವರದಾಸನಿಗೆ ಬರೆದರು:

"ತಿನ್ನುವದರಲ್ಲಿ ಧಾನ್ಯ ಮತ್ತು ಫಲ ಇವುಗಳಲ್ಲಿ ಉಂಟು ಮಾಡಿದ ಭೇದವು ...ಪ್ಪ ಇರುತ್ತದೆ. ಶಾರೀರಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಧಾನ್ಯವೆಂದು ...ಲ್ಪಡುವಂಥ ಎಷ್ಟೋ ಪದಾರ್ಥಗಳು ಅನೇಕ ಪರಿಸ್ಥಿತಿಗಳಲ್ಲಿ ಫಲವೆಂದು ...ಲ್ಪಡುವಂಥ ವಸ್ತುಗಳಿಗಿಂತ ಹೆಚ್ಚು ಸಾತ್ವಿಕವಿರಬಲ್ಲವು. ಖಟಗಡಲೆ ಫಲವೆಂದು ...ಲ್ಪಡುತ್ತದೆ. ಆದರೆ ಸರ್ವಸಾಧಾರಣ ಎಲ್ಲ ರೋಗಗಳಲ್ಲಿಯೂ ತ್ಯಾಜ್ಯವಿರು ...ಕ್ಕಿಯು ಧಾನ್ಯವಿದ್ದಾಗ್ಯೂ ಮಿತಿಯಿಂದ ತಿನ್ನಬಹುದು. ಯಾವನಿಗೆ ಕೇವಲ

ಇಂದ್ರಿಯ ದಮನ ಮಾಡುವದಿದೆಯೊ ಅವನು ಅಕ್ಕಿಯನ್ನು ತಿಂದು ಹೇಗಾದರೂ ಜೀವಿಸಬಲ್ಲನು. ಆದರೆ ಬಟಗಡಲೆಯು ಅವನಿಗೆ ತ್ಯಾಜ್ಯವಾಗಬಲ್ಲದು. ನಿಮ್ಮ ಪ್ರಕೃತಿಗೆ ಪೇಢೆ ವಿಷದ ಸಮಾನವೆಂದು ತಿಳಿಯಿರಿ. ಬೇಳೆ, ಅನ್ನ, ರೊಟ್ಟಿ, ಪಲ್ಲೆ ಮುಂತಾದ ಜಡ ಆಹಾರವನ್ನು ಉಣ್ಣುವದರ ಬದಲು ಸ್ವಲ್ಪ ಹಣ್ಣು ಅಂದರೆ ದ್ರಾಕ್ಷಿ, ಕಿತ್ತಳೆ ಹಣ್ಣು, ದಾಳಿಂಬರ ಹಣ್ಣು ಅಥವಾ ಇಂಥವೇ ಯಾವುದಾದರೂ ರಸವುಳ್ಳ ಹಣ್ಣನ್ನು ತಿಂದರೆ ಅದು ಅವಶ್ಯ ಹಗುರಾಗಿ ಉಳಿಯುವದು. ತಿನ್ನುವ ಪದಾರ್ಥದ ರೂಪದಲ್ಲಿ ಎರಡೂ ಧಾನ್ಯವೆಂದೇ ತಿಳಿಯಿರಿ. ಅನ್ನ ಮತ್ತು ಫಲಗಳಲ್ಲಿಯ ಭೇದವನ್ನು ಸ್ವಾದ ಬಿಡುವದರಲ್ಲಿ ಅಸಮರ್ಥರಿದ್ದಾಗ್ಯೂ ದೇವರಿಗೂ ತಮಗೂ ವಂಚನೆ ಮಾಡುವಂಥ ವೈಷ್ಣವರು ಉಂಟು ಮಾಡಿದಂತೆ ಕಾಣುತ್ತದೆ. ವೈಷ್ಣವ ಮನೆತನದಲ್ಲಿ ಹುಟ್ಟಿರುವೆನಾದುದರಿಂದ ನಾನು ಅನುಭವದ ಮಾತನ್ನು ಬರೆಯುತ್ತಿದ್ದೇನೆ."

ಇಂದು ನೂಲುವಾಗ ನನಗೆ ಬಹಳ ಆಯಾಸವೆನಿಸಿತು. ಈ ಹಂಜಿಗಳಲ್ಲಿ ೫೦ ನಂಬರಿನ ನೂಲು ತೆಗೆಯುವ ಶಕ್ತಿಯಿರಲಿಕ್ಕಿಲ್ಲ ಅಥವಾ ಇನ್ನೂ ನನ್ನ ಕೈಗೆ ರೂಢಿಯಾಗಿರಲಿಕ್ಕಿಲ್ಲ. ಸಾವಕಾಶವಾಗಿ ನೂತರೂ ಹರಿಯು
೨೭-೬-'೩೨ ತ್ತದೆ. ಆದುದರಿಂದ ೮೪೦ ವಾರು ನೂಲುವದಕ್ಕಾಗಿ ಐದು ತಾಸುಗಳು ಹೊರಟುಹೋಗುತ್ತವೆ. ಇದಲ್ಲದೆ ಆಯಾಸವೆನಿಸುವದು ಬೇರೆ. ಇದು ಹಾನಿಯ ವ್ಯಾಪಾರ. ಬಾಪೂರಿಗೆ ನಾನು ಸೋತೆನೆಂದು ಹೇಳಿದೆ! ಬಾಪೂ ಹೇಳಿದರು: "ಕೂಡಲೇ ಬದಲು ಮಾಡಬೇಕು. ಆಯಾಸವಾಗುತ್ತಿದ್ದರೆ, ಕುಸಿದು ಬೀಳುವ ಸಂಭವವಿದ್ದರೆ ಇಂಥ ಎಳೆದಾಟದಲ್ಲಿ ಯಾವ ಅರ್ಥವೂ ಇಲ್ಲ. ನೂಲುವ ಸಮಯವನ್ನು ಅರ್ಧ ಮಾಡಿಬಿಡು" ಆದುದರಿಂದ ನಾಳಿನಿಂದಲೇ ಈ ಬದಲಾವಣೆಯನ್ನು ಮಾಡಬೇಕಾಗುವದು. ಇಷ್ಟಾದರೂ ನನ್ನ ವೇಗವೇನೂ ಇಲ್ಲ. ಮಿಶ್ರ ಅರಳೆಯಿಂದ ಕೇಶೂ ೫೦ ನಂಬರಿನ ನೂಲನ್ನು ತಾಸಿಗೆ ೩೫೦ ರ ವೇಗದಿಂದ ತೆಗೆಯುತ್ತಾನೆಂಬುದು ನಾರಾಯಣದಾಸರ ಪತ್ರದಿಂದ ಗೊತ್ತಾಗುತ್ತದೆ. ಕೇಶೂನ ವೇಗವೆಲ್ಲಿ? ನನ್ನ ವೇಗವೆಲ್ಲಿ? **योगः कर्मसु कौशलम्** ಸೂತ್ರವನ್ನು ನಾನು ಒಂದಾದರೂ ವಿಷಯದಲ್ಲಿ ಮುಟ್ಟುವೆನೆಂದು ಕಾಣಿಸುವದಿಲ್ಲ. ಸಾಕಷ್ಟು ಸಮಯದಿಂದ ಹಿಂಜುತ್ತಿದ್ದೇನೆ ಆದರೂ ದೋಷವಿಲ್ಲದ ಹಂಜಿಗಳನ್ನು ಮಾಡಲಿಕ್ಕೆ ಕಲಿಯಲಿಲ್ಲ. ನೂಲುವದರಲ್ಲಿ ನೂಲು ಚನ್ನಾಗಿದ್ದರೂ ವೇಗ ಏನೂ ಇಲ್ಲ!

ನಿನ್ನೆ ವಿಚಾರಮಾಡಿದ ಬದಲಾವಣೆಯನ್ನು ಇವತ್ತು ಮಾಡಿದ ಕೂಡಲೇ

ಸ್ವಲ್ಪೂ ಆಯಾಸವಾಗಲಿಲ್ಲ. ಎರಡು ತಾಸು ಉಳಿತಾಯವಾದ್ದರಿಂದ ಆ ಸಮಯವನ್ನು ಓದುವದರಲ್ಲಿ ಹಾಕಲು ಸಾಧ್ಯವಾಯಿತು.

೨೮-೬-'೩೨ ಇವತ್ತು ಹೋರನ ಪ್ರಕಟನೆ ಬಂತು. ಪ್ರಾಂತ ಮತ್ತು •ಸಂಸ್ಥಾನಗಳು ಅನುಕೂಲವಾಗುತ್ತ ಹೋದಂತೆ ಫೆಡರೇಶನ್ನು ಆಗುತ್ತಹೋಗುವದು. ಈಗಂತೂ ಪ್ರಾಂತಿಕ ಸ್ವರಾಜ್ಯದ ಬುರಿಕೆಯನ್ನು ತೆಗೆದು ಕೊಳ್ಳಿರಿ ಎಂದು ಅವನ ಹೇಳಿಕೆ. "ನಿಮಗೆ ಹೇಗೆ ಅನಿಸುತ್ತದೆ?" ಎಂದು ಸುಪರಿಂಟೆಂಡೆಂಟರು ಕೇಳಿದರು. ಬಾಪೂ ಹೇಳಿದರು: "ಅನಿಸುವದೇನು? ಮುಂದ-ಗಾಮಿಗಳು ವಿಚಾರಮಾಡುತ್ತಿರುವಂತೆ ಏನೂ ಆಗಿಲ್ಲ. ಲಂಡನ್ನದಲ್ಲಿ ನಾನು ವಿಚಾರ ಮಾಡಿದಂತೆಯೇ ಆಗಹತ್ತಿದೆ."

"ಇದು ಪ್ರಾಂತೀಯ ಸ್ವರಾಜ್ಯವಿರುವದೇ ಇಲ್ಲ. ಮಂತ್ರಿಗಳ ಕೈಯಲ್ಲಿ ಯಾವ ಅಧಿಕಾರವೂ ಉಳಿಯುವದಿಲ್ಲ. ಪ್ರತಿಯೊಂದು ವಿಭಾಗವು ಹೆಚ್ಚು ವೆಚ್ಚ ದಾಯಕವಾಗುವದು. ಪ್ರಾಂತೀಯ ಸ್ವರಾಜ್ಯದ ನನ್ನ ಅರ್ಥವು ಹೀಗಿದೆ: ಕೇಂದ್ರ ಸರಕಾರವು ಪ್ರಾಂತಗಳ ಸೇವೆ ಮಾಡತಕ್ಕದ್ದು, ಪ್ರಾಂತಗಳು ಕೇಂದ್ರದ್ದಲ್ಲ. ಈ ಕರಡಿನಲ್ಲಿ ಪ್ರಾಂತಗಳ ಮೇಲೆ ಕೇಂದ್ರದ ಅಧಿಕಾರ ನಡೆಯುವದು. ನಾವು ನಮ್ಮ ಇಚ್ಛಾನುಸಾರ ತೆಗೆಯಲಿಕ್ಕೆ ಬಾರದ ಈ ಎಲ್ಲ ಪೂರ್ಣ ಗ್ಯಾರಂಟೀವಾಲೆ ಸನದೀ ಆಫೀಸರರು ನಮ್ಮ ತಲೆಯ ಮೇಲೆ ಕುಳಿತೇ ಇರುವರು. ಆ ಮೇಲೆ ಪ್ರಾಂತೀಯ ಸ್ವರಾಜ್ಯವೆಲ್ಲುಳಿಯಿತು?" ಸುಪರಿಂಟೆಂಡೆಂಟರು ಹೇಳಹತ್ತಿದರು: "ಹಾಗಾದರೆ ಯುದ್ಧವು ಮುಂದುವರಿಯುವದೆ?" ಬಾಪೂ: "ಇದರಲ್ಲಿ ಸಂಶಯುವಿದೆಯೇನು?"

ಇವತ್ತು ಬಿರ್ಲಾರಿಂದ ಹುಂಡಣಾವಳದ ವಿಷಯಕ್ಕಿದ್ದ ಎಲ್ಲ ಮಹತ್ವಪೂರ್ಣ ಸಾಹಿತ್ಯವನ್ನು ತರಿಸಿದರು.

* * *

ಬಾಪೂರ ಲೋಭಕ್ಕೆ ಮಿತಿಯಿಲ್ಲ. ಆಶ್ರಮದಲ್ಲಿ ಒಂದರ ಹಿಂದೆ ಮತ್ತೊಂದು ಬದಲಾವಣೆಯನ್ನು ಮಾಡುತ್ತಲೇ ಹೋಗುತ್ತಾರೆ. ಲಾಗ್ ಬುಕ್ ಹೊರಟಿದೆ, ಪ್ರತಿಯೊಬ್ಬರ ಕೆಲಸದ ತಾಸುಗಳನ್ನು ಬರೆಯಲಾಗುತ್ತಿದೆ, ಯಜ್ಞದ ಎಲ್ಲ ನೂಲನ್ನು ತೆಗೆದುಕೊಳ್ಳಲಾಗುತ್ತಿದೆ, ಮೂರುವರೆ ಗಂಟೆಗೆ ಎಲ್ಲರಿಗೂ—ಚಿಕ್ಕಮಕ್ಕಳಿಗೆ ಸಹ—ಎಬ್ಬಿಸಲಾಗುತ್ತಿದೆ ಮತ್ತು ನಾಲ್ಕು ಗಂಟೆಗೆ ಪ್ರಾರ್ಥನೆಯಾಗುತ್ತಿದೆ. ಈ ಎಲ್ಲ ಒತ್ತಡವನ್ನು ಎಲ್ಲರೂ ಎಲ್ಲಿಯವರೆಗೆ ಸಹಿಸಬಲ್ಲರು! ಪ್ರತಿಯೊಂದು ಪತ್ರದಲ್ಲಿ ಒಂದಿಲ್ಲೊಂದು ಬೇಡಿಕೆ ಇದ್ದೇ ಇರುತ್ತದೆ. ಯಾರ ಮನೆಗಳು ಮುಚ್ಚಿರುತ್ತ-ವೆಯೊ ಅವು ಸಹ ಸ್ವಚ್ಛವಾಗಲಿಕ್ಕೆ ಬೇಕು. ಅವಶ್ಯ. ಆದರೆ ಅದಕ್ಕಾಗಿ ಈ ಚಕ್ರ-ದೊಳಗಿಂದ ಸಮಯ ಎಲ್ಲಿಂದ ತೆಗೆಯಬೇಕು? ಮನೆಯ ಮೇಲೆ ಅದು ಎಂದು

ಸ್ವಚ್ಛವಾಯಿತು ಎಂಬುದರ ದಿನಾಂಕ ಬೇಕು, ಅದನ್ನು ಎಂದು ಸ್ವಚ್ಛಮಾಡ-ಬೇಕೆಂಬುದರ ರಜಿಸ್ಟರ ಬೇಕು ಮತ್ತು ಆದರ ದಿನಾಂಕ ಸಹ ಮನೆಯ ಮೇಲೆ ಬೇಕು. ಈ ಕೆಲಸ ಮತ್ತೆ ಹೆಚ್ಚಾಯಿತು. ಬಾಪೂರ ಆಶೆ ಅನಂತವಿದೆ. ಏನು? ಮನುಷ್ಯನ ಶಕ್ತಿಯೂ ಅನಂತವಿದೆಯೆ? ಕೆಲಸದ ಈ ಚೌಕಟ್ಟಿನಲ್ಲಿ ಸಿಕ್ಕ ಹುಡು-ಗರಿಗೆ ಮಲಗಲಿಕ್ಕೆ ಸಾಕಷ್ಟು ಸಮಯ ಸಿಗುವದಿಲ್ಲ ಎಂಬ ಮಾತಿನ ಕಡೆಗೆ ನಾನು ಬಾಪೂರ ಲಕ್ಷ್ಯವನ್ನು ಎಳೆದೆನು. ಅವರು ಚರ್ಚೆ ಮಾಡುವ ವಚನಕೊಟ್ಟಿದ್ದಾರೆ.

ಮೀರಾಬಹನ ಮತ್ತು . . . ರ ಎರಡು ಪತ್ರ ಬಂದವು. . . . ರು ತಮ್ಮ ಕರುಣಾಜನಕ ಸ್ಥಿತಿಯನ್ನು ವರ್ಣಿಸಿ ಜೀವನಮುಕ್ತಾಯ ಮಾಡುವ ಮಾತನ್ನೂ ಹೇಳಿದ್ದಾರೆ. ಕೂಡಲೇ ಬಾಪೂ . . . ಗೆ ಪತ್ರ ಬರೆದರು.

೨೯-೬-'೩೨ "ಆತ್ಮಹತ್ಯೆಯ ಇಚ್ಛೆಯು ಹೇಗಾಗುತ್ತಿದೆ? ನೀವು ಯಾವದೇ ಕಳವು ಮಾಡಿಲ್ಲವೆಂದು ನಾನು ತಿಳಿದಿದ್ದೇನೆ. ಆದಲ್ಲದೆ ಸಟ್ಟಾ ಆಡದಿರುವ ನಿಶ್ಚಯ ಸಹ ಮಾಡಿರುವಿರಿ. ಆದುದರಿಂದ ಈ ಕಥೆಯು ಪೂರ್ಣ ವಾಯಿತು. ಕಳವು ಮಾಡಿದ್ದರೂ ಅದು ಆತ್ಮಹತ್ಯೆಯ ಕಾರಣವಾಗಲಾರದು. ಕಳವು ಮಾಡಿದ್ದರೆ ಅದನ್ನು ಒಪ್ಪಿಕೊಳ್ಳುವ ಮನುಷ್ಯನು ಕಳವು ಮಾಡು ವಾಗ ಸಿಗದ ಮನುಷ್ಯನಿಗಿಂತ ಅಥವಾ ಎಂದೂ ಕಳವು ಮಾಡುವ ಇಚ್ಛೆಯೇ ಆಗದ ಮನುಷ್ಯನಿಗಿಂತ ಉತ್ತಮನು. ಆದುದರಿಂದ ನಿಮಗೆ ಆತ್ಮಹತ್ಯೆಗೆ ಯಾವ ಕಾರಣವೂ ಇಲ್ಲ. ಇನ್ನು ಉಳಿಯಿತು ಸಾಲ. ನಿಮ್ಮ ಹತ್ತರ ಇದ್ದುದನ್ನೆಲ್ಲ ಸಾಲಗಾರರಿಗೆ ಒಪ್ಪಿಸಿ ಬಿಟ್ಟರೆ ನಿಮ್ಮ ಹೊಣೆ ತೀರಿತು. ಸಾಲಗಾರರು ನಿಮ್ಮನ್ನು ಸೆರೆಮನೆಯಲ್ಲಿ ಕಳಿಸಿದರೆ ಕಳಿಸಲಿ. ಅದರಲ್ಲಿಯೂ ನಾಚಿಕೆ ಪಡುವಂಥ ಮಾತಿಲ್ಲ. ಆಗುವದನ್ನು ಸಹನ ಮಾಡಿಕೊಳ್ಳುವದರಲ್ಲಿ ಪುರುಷಾರ್ಥವಿದೆ. ಮುಂದಿನ ಸಲುವಾಗಿ ನಾನು ಬರೆದೇ ಇದ್ದೇನೆ. ನೀವಿಬ್ಬರೂ ಆಶ್ರಮದಲ್ಲಿ ಹೋಗಿ ಇರ್ರಿ. ಅಲ್ಲಿ ಹೋಗಲಿಕ್ಕೆ ಸ್ವಲ್ಪೂ ಸಂಕೋಚ ಮಾಡಬೇಡಿರಿ. ಧನವಂತನೆಂದು ಹೋದಲ್ಲಿಯೇ ಧನಹೀನನೆಂದು ಹೇಗೆ ಹೋಗಲಿ ಎಂಬ ಅಹಂಕಾರದ ವಿಚಾರ ತರಬೇಡಿರಿ. ಆಶ್ರಮವು ಸಾಧುವೃತ್ತಿಯ ಜನರ ಸಲುವಾಗಿ ಇರುತ್ತದೆ. ನನಗೆ ಬರೆಯುತ್ತಿರಬೇಕು. ಮೀರಾಬಹನಳಿಂದ ಉತ್ಸಾಹ ದೊರೆಯುತ್ತಿದ್ದರೆ ತೆಗೆದುಕೊಳ್ಳಿರಿ. ಸತ್ಸಂಗವು ಒಂದು ಪರುಷಮಣಿ ಎಂದು ತಿಳಿದು ಅದರ ಸುಗಂಧದಲ್ಲಿ ಇರ್ರಿ."

ಹೋರನ ಭಾಷಣ ಬಂತು. ಕಾಂಗ್ರೆಸ್ಸು ಸರಕಾರವನ್ನು ತಿರಸ್ಕರಿಸುವ ದನ್ನು ಬಿಡುವವರೆಗೆ ಅದರ ಸಂಗಡ ಒಪ್ಪಂದವಾಗಲಾರದು. ಯುದ್ಧವು ಅರ್ಧಕ್ಕೆ ನಿಲ್ಲಲಾರದು. ಬ್ರಿಟಿಶ ರಾಜ್ಯದಂಥ ಸಾಧನಸಂಪನ್ನ ರಾಜ್ಯವು ಇಂಥ ಆಂದೋ

ಲನವನ್ನು ಹತ್ತಿಕ್ಕದಿದ್ದರೆ ಅದರ ಪ್ರತಿಷ್ಠೆ ಕಡಿಮೆಯಾಗುವದು. ಈ ಯುದ್ಧದ ಇತ್ಯರ್ಥ ಮಾಡಲೇಬೇಕು—ಹೀಗೆ ಅವನ ಧ್ವನಿ ಇತ್ತು. ಬಾಪು ದೇವದಾಸನಿಗೆ ಬರೆದ ಪತ್ರದಲ್ಲಿ ಈ ಮಾತು ಸಹಜವಾಗಿ ಅಪ್ರಕಟ ಉಲ್ಲೇಖವಾಗಿ ಬಿಟ್ಟಿತ್ತು: "ನಮ್ಮೆಲ್ಲರಿಗೂ ಸಾಕಷ್ಟು ತಾಳ್ಮೆಯಿದೆ. ಆದುದರಿಂದ ನಾಲ್ಕಾರು ವರುಷ ಕಳೆದರೂ ಯಾವ ತೊಂದರೆಯಿಲ್ಲ. ಬಡ್ಡಿ ಸಹಿತ ವಸೂಲ ಮಾಡಿಕೊಳ್ಳುವೆವು." ನಾನು ಬಾಪೂಗೆ ಇದರ ಅರ್ಥ ಕೇಳಲಿಲ್ಲ. ಇಂಥ ವಿಷಯಗಳಲ್ಲಿ ಮೌನವಾಗಿರುವದೇ ಒಳ್ಳೆಯದು. ಅದರ ಪೃಥಕ್ಕರಣ ಮಾಡಲಾಗುವದಿಲ್ಲ ಮತ್ತು ನಾನು ಈ ಪ್ರಕಾರದ ಕುತೂಹಲಗಳನ್ನು ಹತ್ತಿಕ್ಕುವ ರೂಢಿಯನ್ನು ಕೆಡವಿದ್ದೇನೆ.

ದೇವದಾಸನು ರಾಜಾಜಿಗೆ Wet Parade ( ವೆಟ್ ಪರೇಡ ) ಪುಸ್ತಕ ಕಳಿಸಿದ್ದನು. ರಾಜಾಜಿ ಈ ವಿಷಯದ ಬಗ್ಗೆ ದೇವದಾಸನಿಗೆ ಬರೆದ ಪತ್ರದಲ್ಲಿ ಕೆಲವೊಂದು ಉದ್ಗಾರಗಳನ್ನು ತೆಗೆದರು. ಅಮೇರಿಕೆಯ ಮತ್ತು ಇಂಗ್ಲೀಷ ಲೇಖಕರ ವಿಷಯಕ್ಕೆ ಇವರ ಅಭಿಪ್ರಾಯವು ಲಕ್ಷ್ಯದಲ್ಲಿಡುವಂತಹದಿದೆ :

"The 'Wet Parade' is a fine novelization of all that has to be said on American Prohibition. Chapter after chapter moves up in deliberate order, just clothing up all the prohibition points. Too much of set purpose and 'according to programme.' But a good and exhaustive treatment of the subject, to satisfy those already convinced and make them feel armed and strengthened. You may remember Mathuradas gave me once a book of Zola's to read. It is incomparably superior, but that book deals with alcohol, rather than prohibition. Sinclair's book is a powerful indictment of corruption in American politics,—might frighten one in regard to political prospects in India.

"A real high class English writer is so superior to mere propaganda writers like Upton Sinclair. Soon after finishing the 'Wet Parade' I got a book of short stories of Hardy. The contrast was so great. The delicate touch of real art is so different from the propagandist style. Hardy has a short story called 'Son's Veto' that reminded me of the episode in the 'Wet Parade', the incident of Roger Chilcote and Anita. All the difference between raw manure and fruit made out of it. The substance is the same, but the composition and flavour are so different."

"ಅಮೇರಿಕೆಯ ಮದ್ಯಪಾನ ಬಂದಿಯ ಬಗ್ಗೆ ಹೇಳಲಿಕ್ಕೆ ಯೋಗ್ಯವಾದುದನ್ನೆಲ್ಲ 'ವೆಟ್ ಪರೇಡ'ದಲ್ಲಿ ಕಾದಂಬರಿಯ ಶೈಲಿಯಲ್ಲಿ ಹೇಳಲಾಗಿದೆ. ಒಂದರ ಹಿಂದೊಂದು ಪ್ರಕರಣದಲ್ಲಿ ಕಥೆಯು ವ್ಯವಸ್ಥಿತರೀತಿಯಿಂದ ವಿಕಾಸವನ್ನು ಹೊಂದುತ್ತ ಹೋಗುತ್ತದೆ. ಮದ್ಯಪಾನ ಬಂದಿಯ ಎಲ್ಲ ಮುದ್ದೆಗಳೂ ಅದರಲ್ಲಿ ಪೋಣಿಸಲ್ಪಟ್ಟಿವೆ. ನಿಶ್ಚಿತ ಉದ್ದೇಶ ಮತ್ತು ನಿಶ್ಚಿತ ಕಾರ್ಯಕ್ರಮ ಇವುಗಳಿಗೆ ಅನುಸಾರವಾಗಿ ಎಲ್ಲವೂ ನಡೆಯುತ್ತದೆಂಬುದು ಸ್ವಲ್ಪ ಹೆಚ್ಚಾಗಿ ತೋರುತ್ತದೆ. ಈ ಮತದವರಿಗೆ ಸಂತೋಷವಾಗಬೇಕು, ಬಲ ದೊರೆಯಬೇಕು ಹಾಗು ಅವರು ತರ್ಕ ಮತ್ತು ವಿವರಣೆಗಳ ಶಸ್ತ್ರಾಸ್ತ್ರಗಳಿಂದ ಸಜ್ಜಾಗಬೇಕೆಂದು ಪ್ರತಿಯೊಂದು ಮುದ್ದೆಯನ್ನು ಉತ್ತಮ ರೀತಿಯಿಂದ ಸಂಪೂರ್ಣ ವಿವೇಚಿಸಲಾಗಿದೆ. ಮಥುರಾದಾಸರು ಝೋಲಾನ ಒಂದು ಪುಸ್ತಕವನ್ನು ನನಗೆ ಓದಲಿಕ್ಕೆ ಕೊಟ್ಟದ್ದು ನಿನಗೆ ನೆನಪಿರಬಹುದು. ಇದರ ತುಲನೆಯನ್ನು ಅದರ ಸಂಗಡ ಮಾಡಲಿಕ್ಕೆ ಬರದಷ್ಟು ಅದು ಉತ್ತಮವಿದೆ. ಆ ಪುಸ್ತಕದಲ್ಲಿ ಮದ್ಯಪಾನ ಬಂದಿಯ ವಿಷಯಕ್ಕಲ್ಲ ಆದರೆ ಮದ್ಯಪಾನದ ಬಗ್ಗೆ ಚರ್ಚೆಯನ್ನು ಮಾಡಲಾಗಿದೆ. ಸಿಂಕ್ಲೇರನ ಪುಸ್ತಕದಲ್ಲಿ ಅಮೇರಿಕೆಯ ರಾಜಕಾರಣದಲ್ಲಿ ಸೇರಿಕೊಂಡ ಲಂಚಗುಳಿತನದ ಮೇಲೆ ಕಠೋರ ಟೀಕೆಯಿದೆ. ಈ ಪುಸ್ತಕ ಓದಿ ಹಿಂದುಸ್ತಾನದ ರಾಜಕೀಯ ಭವಿಷ್ಯದ ವಿಷಯಕ್ಕೆ ಮನಸ್ಸಿನಲ್ಲಿ ಭಯ ಉಂಟಾಗುವಂತಿದೆ.

"ಆದರೆ ಅಪ್ಟನ್ ಸಿಂಕ್ಲೇರನಂಥ ಕೇವಲ ಪ್ರಚಾರಕ ಲೇಖಕರಿಗಿಂತ ಒಂದನೇ ಪಂಕ್ತಿಯ ಇಂಗ್ಲೀಷ ಲೇಖಕರು ಬಹಳ ಶ್ರೇಷ್ಠರಿದ್ದಾರೆ. 'ವೆಟ್ ಪರೇಡ' ಮುಗಿಸಿದ ಕೂಡಲೇ ನಾನು ಹಾರ್ಡಿಯ ಸಣ್ಣ ಕತೆಗಳ ಒಂದು ಪುಸ್ತಕ ಕೈಯಲ್ಲಿ ತೆಗೆದುಕೊಂಡೆನು . . . ಇಬ್ಬರ ನಡುವೆ ಬಹಳ ಅಂತರ ಕಂಡು ಬಂತು. ಕಲೆಯ ಕೋಮಲ ಸ್ಪರ್ಶವು ಪ್ರಚಾರಶೈಲಿಗಿಂತ ತೀರ ಬೇರೆಯಾಗಿದೆ. ಹಾರ್ಡಿಯ 'Son's Veto' (ಪುತ್ರನ ನಾಮಂಜೂರಿ) ಎಂಬ ಒಂದು ಸಣ್ಣ ಕತೆಯಿದೆ. ಅದು 'ವೆಟ್ ಪರೇಡ'ದ ರೋಜರ [illegible] ಮತ್ತು ಎನಿಟಾರ ಘಟನೆಯ ನೆನಪು ಮಾಡಿಕೊಡುತ್ತದೆ. ಇವೆರಡ[illegible]ಬ್ಬರ ಮತ್ತು ಅದರಲ್ಲಿಯೇ ಉತ್ಪನ್ನವಾಗುವ ಫಲ ಇವುಗಳಲ್ಲಿ ಇರುವಷ್ಟು [illegible]ದೆ. ತತ್ವತಃ ವಸ್ತು ಒಂದೇ ಆಗಿದೆ. ಆದರೆ ಅದರ ರಚನೆ ಮತ್ತು ಸುಗಂಧಗಳು ಬೇರೆ ಬೇರೆಯಾಗಿವೆ."

ದೇವದಾಸರಿಗೆ ಪತ್ರ ಬರೆಯುವಾಗ ಬಾಪೂ ಇದರಲ್ಲಿ ಕಲಾಕಾರ ಮತ್ತು ಪ್ರಚಾರಕ ಇವರೊಳಗಿನ ಅಂತರದ ವಿಷಯಕ್ಕಿದ್ದ ಚರ್ಚೆಯನ್ನು ಎತ್ತಿಕೊಂಡು ಅದರ ಮೇಲೆ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದರು. "ಅಮೇರಿಕೆಯ ಲೇಖಕರ ವಿಷಯಕ್ಕೆ ರಾಜಾಜಿಯವರಿಗೆ ಏನೋ ತಪ್ಪು ತಿಳುವಳಿಕೆಯಾದಂತೆ ತೋರುತ್ತದೆ. ಹಾರ್ಡಿಯ ಸಾಹಿತ್ಯವನ್ನು ನಾನು ಓದಿಲ್ಲ. ಝೋಲಾನದೂ ಓದಿಲ್ಲ. ಇದಕ್ಕಾಗಿ

ನನಗೆ ಯಾವಾಗಲೂ ದುಃಖವೆನಿಸುತ್ತದೆ. ಆದರೆ ಸಿಂಕ್ಲೇರನ ವಿಷಯಕ್ಕೆ ತೀರ ತಿರಸ್ಕಾರ ಮಾಡಲಿಕ್ಕೆ ಬರುವದಿಲ್ಲ. ಪ್ರಚಾರದ ದೃಷ್ಟಿಯಿಂದ ಬರೆದ ಉಪನ್ಯಾಸಗಳಲ್ಲಿ ಪ್ರಚಾರವೇ ದೋಷವೆಂದು ತಿಳಿದು ಅವರನ್ನು ಕೀಳರೆಂದು ಗಣಿಸಲಾಗದು. ಪ್ರಚಾರಕನ ಮಟ್ಟಿಗೆ ಅವನ ಎಲ್ಲ ಕಲೆಯು ಆದರಲ್ಲಿಯೇ ತುಂಬಿರುತ್ತದೆ. ತನ್ನ ವಿಚಾರವನ್ನು ಅವನು ಮುಚ್ಚಿಡುವದಿಲ್ಲ. ಆದರೂ ಸಹ ಕತೆಗಳಲ್ಲಿ ರಸಕ್ಕೆ ಕುಂದು ತರುವದಿಲ್ಲ. Uncle Tom's Cabin ( ಟಾಮ್ ಕಕ್ಕನ ಗುಡಿಸಲು ) ಇದು ಕಂಡೂ ಕಂಡೂ ಪ್ರಚಾರದ ಸಲುವಾಗಿ ಬರೆದ ವಸ್ತುವಾಗಿದೆ. ಆದರೆ ಅದರ ಕತೆಯನ್ನು ಯಾರು ಸರಿಗಟ್ಟಬಲ್ಲರು? ಸಿಂಕ್ಲೇರನು ಒಬ್ಬ ಅಚ್ಚ ಕೆಚ್ಚ ಸುಧಾರಕನಿದ್ದಾನೆ ಮತ್ತು ಸುಧಾರಣೆಯ ಪ್ರಚಾರದ ಸಲುವಾಗಿ ಅವನು ಬೇರೆ ಬೇರೆ ಕಾದಂಬರಿಗಳನ್ನು ಬರೆದಿದ್ದಾನೆ. ಅವೆಲ್ಲವೂ ರಸಭರಿತವಾಗಿವೆಯೆಂದು ಹೇಳಲಾಗುತ್ತಿದೆ. ಸಮಯ ಸಿಕ್ಕರೆ ನಾನು ಅವನ್ನು ಓದುವೆನು. "

Natural Law in Spiritual World (ಆಧ್ಯಾತ್ಮಿಕ ಕ್ಷೇತ್ರದಲ್ಲಿ ನಿಸರ್ಗದ ನಿಯಮ) ಓದಿ ತೆಗೆದೆನು. ಡ್ರಮಂಡನ ಶೈಲಿಯು ಆಕರ್ಷಕವಿದೆ. ಆದರೆ ಅವನ ಎಲ್ಲ ಅನುಮಾನಗಳು ಎಳೆದು ತಂದಂತೆ ಅನಿಸುತ್ತವೆ ಮತ್ತು

**೩೦–೬–'೩೨** ಒಬ್ಬ ಧರ್ಮಾಂಧ ಕ್ರಿಶ್ಚಿಯನ್ನನ ಮನೋವೃತ್ತಿಯು ಪಾನು ಪಾನಿಗೂ ಒಡೆದು ಕಾಣುತ್ತದೆ. ಅವನ ಪುಸ್ತಕದಲ್ಲಿ ಕ್ರೈಸ್ತನ ಜೀವನದ ಬದಲು ಆಧ್ಯಾತ್ಮಿಕ ಅಥವಾ ಆಧ್ಯಾತ್ಮಿಕಜೀವನ ಎಂದು ಬರೆದರೆ ಮತ್ತು ಕ್ರೈಸ್ತನ ಸ್ಥಳದಲ್ಲಿ ದೇವರೆಂದು ಬರೆದರೆ ಅಥವಾ ಆಧ್ಯಾತ್ಮಿಕಸಿದ್ಧಾಂತ ಎಂದು ಬರೆದರೆ ಅವನ ಅನೇಕ ಮಾತುಗಳು ಸ್ಥಿರವಾಗಿ ನಿಲ್ಲಲಿಕ್ಕೆ ಯೋಗ್ಯವಾಗಿವೆ. ಜಡದಿಂದ ಚೇತನ ಉಂಟಾಗುವದಿಲ್ಲವೆಂದು ಸಿದ್ಧವಾದಂತೆಯೇ ನಮ್ಮ ಮೃತ ಶರೀರವು ಚೇತನ ಅಂದರೆ ಜ್ಞಾನದ ಸ್ಪರ್ಶವಿಲ್ಲದೆ ಸಚೇತನವಾಗಲಾರದು. 'ವಿಷಯವಾಸನೆಯಿಂದ ತುಂಬಿರುವ ಚಿತ್ತದ ಹೆಸರೇ ಮರಣ.' 'ಯಾವನು ಭೋಗವಿಲಾಸದಲ್ಲಿರುತ್ತಾನೆಯೋ ಅವನು ಜೀವಂತನಿದ್ದಾಗ್ಯೂ ಸತ್ತ ಹಾಗೆಯೆ.' 'ನಿನಗೆ ಅವನು ಜನ್ಮ ಕೊಟ್ಟಿದ್ದಾನೆ, ಆದರೆ ಅತಿರೇಕ ಅಥವಾ ದುರಾಚರಣೆ ಮಾಡಿದರೆ ಇದೂ ಮರಣವೇ ಸರಿ.' ಇದರ ಮರ್ಮವು ಇದೇ ಇದೆ: 'ಯಾರಿಗೆ ಪುತ್ರ ( ಏಸೂಕ್ರಿಸ್ತ )ನ ಮೇಲೆ ವಿಶ್ವಾಸವಿಲ್ಲವೊ ಅವರು ಸತ್ತಿದ್ದಾರೆ.' ಡ್ರಮಂಡನ ಮತದ ಪ್ರಕಾರ ಇದರ ಅರ್ಥವು ಕ್ರಿಶ್ಚಿಯನ್ನರಿಲ್ಲದವರೆಲ್ಲ ಮೃತರಿದ್ದಾರೆ. ಬೌದ್ಧ ಧರ್ಮದ ವಿಷಯಕ್ಕೆ ಮಾತಾಡುತ್ತ ಇವನು ಹೇಳುತ್ತಾನೆ:

"ಯಾರಾದರೂ ಬುದ್ಧನಲ್ಲಿ ಅಧ್ಯಾತ್ಮವಿದೆಯೆಂದು ಅವನಲ್ಲಿ ವಿಶ್ವಾಸವಿದ್ದವ

ನಿಗೆ ಹೇಳಿದರೆ ಅದಕ್ಕೆ ಏನೂ ಅರ್ಥವಿಲ್ಲ. ಯಾಕಂದರೆ ಬುದ್ಧನಿಗೂ ಅಧ್ಯಾತ್ಮಕ್ಕೂ ಯಾವ ಸಂಬಂಧವೂ ಇಲ್ಲ. ಅವನು ನೀತಿಯ ವಿಷಯಕ್ಕೆ ಕೆಲವೊಂದು ಮಾತು ಗಳನ್ನು ಹೇಳಿದ್ದಾನೆ. ಅವು ಮನುಷ್ಯನಿಗೆ ಉತ್ತೇಜನ ಕೊಡುತ್ತವೆ, ಅವನ ಮೇಲೆ ಪರಿಣಾಮ ಮಾಡುತ್ತವೆ ಮತ್ತು ಅವನಿಗೆ ಮಾರ್ಗ ತೋರಿಸುತ್ತವೆ. ಆದರೆ ಬೌದ್ಧ-ಧರ್ಮ ಪಾಲಿಸುವವರ ಆತ್ಮೋನ್ನತಿ ಯಾವ ರೀತಿಯಲ್ಲಿಯೂ ಆಗುವದಿಲ್ಲ. ಈ ಧರ್ಮವು ಮನುಷ್ಯನ ಭೌತಿಕ, ಬೌದ್ಧಿಕ ಅಥವಾ ನೈತಿಕ ವಿಕಾಸಗಳನ್ನು ಮಾಡ ಬಲ್ಲದು. ಆದರೆ ಕ್ರಿಶ್ಚಿಯನ್ ಧರ್ಮದ ಹೇಳಿಕೆಯು ಇದಕ್ಕಿಂತಲೂ ವಿಶೇಷವಾಗಿದೆ. ಮನುಷ್ಯನ ಬುದ್ಧಿ ಮತ್ತು ನೀತಿ ಇವುಗಳಿಗೆ ಹೊರತಾಗಿ ಅದರಲ್ಲಿ ಇನ್ನೂ ಹೆಚ್ಚಿಗೆ ಇದೆ. ಕ್ರೈಸ್ತಪರಾಯಣ ಮನುಷ್ಯನಲ್ಲಿ ಅದು ಹೊಸಜೀವನವನ್ನು ತುಂಬುತ್ತದೆ."

ಇದರ ಬದಲಾಗಿ ಕೈಸರಲಿಂಗ ಓದಿರಿ :

" ಕ್ರಿಶ್ಚಿಯನ್ ಧರ್ಮ ಪಾಲಿಸುವ ಸಾಮಾನ್ಯ ಜನತೆಯು ಏಸುಕ್ರಿಸ್ತನ ನಿಜ-ವಾದ ಹೃದಯವನ್ನು ತಿಳಿಯಬಲ್ಲದೆಂದು ಹೇಳುವದು ಯೋಗ್ಯವಲ್ಲ. ಅವನ ಪ್ರಭಾವವು ಚಾರಿತ್ರ್ಯದ ಹೊರಪಾತಳಿಯ ಮೇಲೆ ಕೆಲಸ ಮಾಡುತ್ತಿರುವಂತೆ ಅನಿಸು ತ್ತದೆ ಮತ್ತು ಅನೇಕ ವಿಷಯಗಳಲ್ಲಿ ಅದು ಕೊನೆಯ ವರೆಗೆ ಒಂದು ಬಾಹ್ಯ ಆವಿಷ್ಕಾರವಾಗಿಯೇ ಉಳಿದಿರುತ್ತದೆ. ,ಸಾಮಾನ್ಯ ಕ್ರಿಶ್ಚಿಯನ್ನನ ನಡೆ ಮತ್ತು ನುಡಿ ಗಳಲ್ಲಿ ಎಷ್ಟು ದಂಗುಬಡಿಸುವಂಥ ವ್ಯತ್ಯಾಸವಿದೆ? ಬೌದ್ಧರಲ್ಲಿ ನಿಮಗೆ ಈ ವ್ಯತ್ಯಾಸ ಕಂಡುಬರುವದಿಲ್ಲ. ಬುದ್ಧನು ತನ್ನ ಉಪದೇಶವನ್ನು ತನ್ನ ಅನುಯಾಯಿ ಗಳ ಹೃದಯದಲ್ಲಿ ಆಳವಾಗಿ ನಾಟುವಷ್ಟು ಸಮರ್ಥ ರೀತಿಯಿಂದ ಮಾಡಿದ್ದಾನೆ. ಕ್ರಿಶ್ಚಿಯನ್ ಮತದ ಪ್ರಕಾರ ಮಾನವ ಪ್ರೇಮದ ಅರ್ಥವು ಒಳ್ಳೆಯದಾಗಬೇಕೆಂಬ ಇಚ್ಛೆ, ಇಷ್ಟೇ ಆಗುತ್ತದೆ. ಆದರೆ ಬೌದ್ಧಮತದ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಎಷ್ಟು ಉನ್ನತಿ ಹೊಂದಬಲ್ಲನೊ ಅಷ್ಟು ಉನ್ನತಿ ಹೊಂದಲಿಕ್ಕೆ ಅವನಿಗೆ ಸಹಾಯ ಮಾಡುವದು ಎಂದಾಗುತ್ತದೆ. . . ಆದುದರಿಂದ ಧರ್ಮಪರಿವರ್ತನ ಮಾಡಿಸುವವರು ನಿಶ್ಚಿತವಾಗಿ ಅಧೋಗತಿಗೆ ಹೋಗುತ್ತಾರೆ. ಪಗಾರಕ್ಕಾಗಿ ಮತ್ತು ಸತತವಾಗಿ ಈ ಕೆಲಸವನ್ನು ಮಾಡುತ್ತಿರುವವರು ಹಗಲು ರಾತ್ರಿ ಅಧೋಗತಿಗೆ ಇಳಿಯುತ್ತಲೇ 'ಇರುತ್ತಾರೆ ಆದುದರಿಂದ ಕ್ರಿಶ್ಚಿಯನ್ನರಲ್ಲಿ ವಿಶೇಷವಾಗಿ ಪ್ರೊಟೆಸ್ಟಂಟ ಪಾದ್ರಿ ಜನರಲ್ಲಿ ಕ್ಷುದ್ರತೆ, ಅತಿಕ್ರಮಣ, ಜುಲುಮೆ, ವೈರತ್ವ ಮತ್ತು ತಿಳಿವಳಿಕೆಯ ಅಭಾವ ಮುಂತಾದ ಗುಣಗಳು ಕಂಡುಬರುತ್ತವೆ. ಬೌದ್ಧರಂಥ ಧರ್ಮಗಳಲ್ಲಿ ಈ ಜೀವನದ ಉದ್ದೇಶವೇ ನಿರ್ವಾಣ ಪ್ರಾಪ್ತ ಮಾಡಿಕೊಳ್ಳುವದೆಂದು ಕಲಿಸಲಾಗುತ್ತಿರುವದರಿಂದ ಅದರಲ್ಲಿ ಇಂಥ ಗುಣಗಳು ಇರುವದು ಅಸಂಭವವು."

ಮನುಷ್ಯನಲ್ಲಿರುವ ಪಾಪ ಮತ್ತು ಪುಣ್ಯಗಳ ದ್ವಿವಿಧ ಶಕ್ತಿಗಳ ವರ್ಣನೆಯನ್ನು ಡ್ರಮಂಡನು ತನ್ನ ಶೈಲಿಯಲ್ಲಿ ಸುಂದರ ರೀತಿಯಿಂದ ಚಿತ್ರಿಸಿದ್ದಾನೆ.

"ಮನುಷ್ಯನಲ್ಲಿ ಅವನನ್ನು ಅಧೋಗತಿಗೆ ಒಯ್ಯುವಂಥ, ಜಡ ಮಾಡುವಂಥ, ಮೆಲ್ಲಮೆಲ್ಲಗೆ ಅವನನ್ನು ಪಶುಕೋಟಿಗೆ ಒಯ್ದು ಮುಟ್ಟಿಸುವಂಥ, ಅವನ ಬುದ್ಧಿಯನ್ನು ಕುರುಡು ಮಾಡುವಂಥ, ಅವನ ಹೃದಯವನ್ನು ಶುಷ್ಕ ಮಾಡುವಂಥ ಮತ್ತು ಅವನ ಸಂಕಲ್ಪಶಕ್ತಿಯನ್ನು ಕುಂಠಿತ ಮಾಡುವಂಥ ಒಂದು ಪ್ರಕಾರದ ನಿಸರ್ಗ ವೃತ್ತಿಯೂ ಇರುತ್ತದೆ. ಇದನ್ನು ಮಾರಕ ತತ್ವ ಅಥವಾ ಪಾಪವೆಂದು ಹೇಳಿರಿ. ಇದಕ್ಕೆ ಉಪಾಯವೆಂದು ದೇವರು ಮನುಷ್ಯನಿಗೆ ಬೇರೊಂದು ವೃತ್ತಿಯನ್ನೂ ಕೊಟ್ಟಿದ್ದಾನೆ. ಅದು ಆತ್ಮವು ಅತ್ತಿತ್ತ ಪಿರಿಪಿರಿ ತಿರುಗಾಡುವದನ್ನು ತಡೆಯುತ್ತದೆ, ಅದನ್ನು ಅಂಕಿತದಲ್ಲಿಡುತ್ತದೆ ಮತ್ತು ಸರಿಯಾದ ಮಾರ್ಗದ ಮೇಲೆ ಒಯ್ಯುತ್ತದೆ. ಇದಕ್ಕೆ ತಾರಕತತ್ವ ಅಥವಾ ಮುಕ್ತಿ ಎಂದು ಹೇಳಬಹುದು. ಇವುಗಳಲ್ಲಿ ಮೊದಲನೇ ತತ್ವ ಮನುಷ್ಯನಲ್ಲಿ ಭರದಿಂದ ಕೆಲಸಮಾಡುತ್ತಿದ್ದರೆ ಮತ್ತು ಅವನ ಇಡೀ ಜೀವನವನ್ನು ಕೆಳಗೆ ಅಂದರೆ ವಿನಾಶಮಾರ್ಗದ ಕಡೆಗೆ ಎಳೆಯುತ್ತಿದ್ದರೆ ಅದರಿಂದ ಪಾರಾಗುವದಕ್ಕೆ ಒಂದೇ ಉಪಾಯವಿದೆ. ಅದೆಂದರೆ ಉನ್ನತಿಯ ಕಡೆಗೆ ಒಯ್ಯುವಂಥ ವೃತ್ತಿಯ ಆಶ್ರಯವನ್ನು ದೃಢಪೂರ್ವಕವಾಗಿ ಹೊಂದಬೇಕು ಮತ್ತು ಅದರ ಬಲದಿಂದ ಮೇಲೆ ಏರುವ ಪ್ರಯತ್ನಮಾಡಬೇಕು. ಜಗತ್ತಿನಲ್ಲಿ ಅಧೋಗತಿಗೆ ಎಳೆಯುವ ಶಕ್ತಿಯ ಮೇಲೆ ಏನಾದರೂ ಪರಿಣಾಮಮಾಡುವಂಥ ಇನ್ನೊಂದು ಶಕ್ತಿಯಿದ್ದರೆ ಇದೊಂದೇ ಇರುತ್ತದೆ. ಮನುಷ್ಯನು ಈ ಶಕ್ತಿಯ ಉಪೇಕ್ಷೆ ಮಾಡಿದರೆ ಹೇಗೆ ಪಾರಾಗಬಲ್ಲನು ?"

ಇದು ದೈವೀ ಮತ್ತು ಆಸುರೀ ಸಂಪತ್ತಿನ ವರ್ಣನೆಯಲ್ಲದಿದ್ದರೆ ಮತ್ತೇನು ?

"ಅತ್ಯುಚ್ಚ ಅರ್ಥದಲ್ಲಿ ಆತ್ಮವು ಈಶ್ವರಮಯವಾಗುವದೇ ವಿಶಾಲ ಶಕ್ತಿಯ ಹೆಸರು.

"ಎಷ್ಟೋ ಪ್ರಾಣಿಗಳು ಬಿಲದಲ್ಲಿ ವಾಸಿಸುತ್ತವೆ. ಅವು ತಮ್ಮ ಜೀವನವನ್ನು ಭೂಮಿಯ ಒಳಗೇ ಕಳೆಯುತ್ತವೆ. ನಿಸರ್ಗವು ತನ್ನ ಪದ್ಧತಿಯಿಂದ ಇದರ ಪ್ರತಿ-ಫಲವನ್ನು ಅವುಗಳಿಗೆ ಉತ್ತಮ ರೀತಿಯಿಂದ ಕೊಟ್ಟಿದೆ. ಅದು ಇವುಗಳ ಕಣ್ಣು ಮುಚ್ಚಿಬಿಟ್ಟಿದೆ. ಎಷ್ಟೋ ಮೀನಗಳು ಕಣ್ಣಿನ ಅವಶ್ಯಕತೆ ಬೀಳದಂಥ ಕತ್ತಲೆಯ ಅಖಾತಗಳಲ್ಲಿ ತಮ್ಮ ವಾಸಸ್ಥಳ ಮಾಡುತ್ತವೆ. ಅವುಗಳಿಗೆ ಸಹ ಹೀಗೆ ಮಾಡುವದಕ್ಕಾಗಿ ಭಯಂಕರ ಪ್ರತಿಫಲವನ್ನು ನಿಸರ್ಗವು ಕೊಟ್ಟೀ ಇದೆ. ಇದೇ ಪ್ರಕಾರ ಆತ್ಮಕ್ಕೆ ಪ್ರಕಾಶದ ಬದಲು ಕತ್ತಲೆಯಲ್ಲಿರುವದು ರುಚಿಸತೊಡಗಿದರೆ ಸಾಮಾನ್ಯ ನಿಸರ್ಗ ನಿಯಮದಿಂದಲೇ ಆತ್ಮದ ಕಣ್ಣುಗಳು ಮುಚ್ಚಿಬಿಡುತ್ತವೆ ಮತ್ತು ಅದು

ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆ ಪ್ರಸಿದ್ಧ ವಿರೋಧೋಕ್ತಿಯ ಅರ್ಥವು ಇದೇ ಇರುತ್ತದೆ: 'ಹತ್ತಿರ ಏನೂ ಇಲ್ಲದವನಿಂದ ಇದ್ದುದ್ದನ್ನು ಕೂಡ ತೆಗೆದುಕೊಳ್ಳಲಾಗುವದು.' ಆದುದರಿಂದ 'ಇವನಿಂದ ಆ ಹಣವನ್ನು ತೆಗೆದುಕೊ.'"

ತನ್ನ ಸ್ವರೂಪದ ಅರಿವಿಲ್ಲದಿರುವದೇ ಪಾಪದ ಮೂಲವು. ದೇವರು ಹೃದಯದಲ್ಲಿ ವಿರಾಜಮಾನನಿದ್ದಾನೆ ಎಂಬ ಸತ್ಯದ ಬಗ್ಗೆ ಇರುವ ಅಜ್ಞಾನವನ್ನು ಸಹ ಅವನು ಉತ್ತಮ ರೀತಿಯಿಂದ ಮಂಡಿಸಿದ್ದಾನೆ:

"ಯಾವನ ಚಿತ್ತವು ವಿಷಯಾಸಕ್ತವಾಗಿದೆ, ದೇವರಿಂದ ವಿಮುಖವಾಗಿದೆ ಮತ್ತು ದೇವರ ಕಡೆಗೆ ಸಮ್ಮುಖವಾಗಲಾರದು ಅಂಥವನದು ನೈತಿಕವಿಷ್ಟೇ ಅಲ್ಲ ಆಧ್ಯಾತ್ಮಿಕ ಮರಣವೂ ಆಗಿಬಿಟ್ಟಿದೆ. ದೇವರಿಂದ ಬೇರೆಯಾಗುವದು, ಅವನ ಇಚ್ಛೆಗೆ ಅಧೀನವಾಗದಿರುವದು ಮತ್ತು ದೇವರ ಧ್ಯಾನಮಾಡದಿರುವದೇ ಪಾಪವು, ಇದೇ ನರಕವು. ದೇವರೊಂದಿಗೆ ಆತ್ಮವು ಒಂದುಗೂಡದಿರುವದೇ ಪಾಪದ ಮುಖ್ಯ ಕಾರಣವೆಂದು ಧರ್ಮಶಾಸ್ತ್ರವು ತಿಳಿಯುತ್ತದೆ. ಪಾಪವೆಂದರೆ ದೇವರನ್ನು ಮಾನ್ಯ ಮಾಡದಿರುವದು, ದೇವರಲ್ಲಿ ಶ್ರದ್ಧೆ ಇರದಿರುವದು."

*　　　*　　　*

ಎಲ್ಲಿಯವರೆಗೆ ಭಾರತೀಯ ರಾಷ್ಟ್ರಸಂಘದ ಎಲ್ಲ ಅಂಗಗಳು ಸಂಘದಲ್ಲಿ ಸೇರಲು ಸಿದ್ಧವಾಗುವದಿಲ್ಲವೋ ಅಲ್ಲಿಯವರೆಗೆ ಸಂಘ ಸ್ಥಾಪಿಸುವ ಮಾರ್ಗ ನಿರೀಕ್ಷಣೆ ಮಾಡಬೇಕಾಗುವದು ಎಂದು ಹೋರನು ಹೇಳುತ್ತಾನೆ. ಅಂಗಗಳಲ್ಲಿ ಬ್ರಿಟಿಶ್ ಹಿಂದುಸ್ತಾನದ ಪ್ರಾಂತಗಳೂ ಬರುವವು. ಈ ಪ್ರಾಂತಗಳ ಒಪ್ಪಿಗೆಯೂ ಬೇಕೇನು? ಎಂದು ಚಿಂತಾಮಣಿಯು ಕೇಳುತ್ತಾರೆ. ಇಂಥ ಕಲ್ಪನೆಯು ನಮ್ಮ ಸ್ವಪ್ನದಲ್ಲಿಯೂ ಇದ್ದಿಲ್ಲ. ಬಾಪೂ ಹೇಳಿದರು : "ಇದರಲ್ಲಿ ಮುಸಲ್ಮಾನರ ಸಂಗಡ ರಚಿಸುವ ಕಾರಸ್ಥಾನದ ಇನ್ನೂ ಮುಂದಿನ ಹೆಜ್ಜೆಯಿದೆ. ಈ ಕರಾರುಗಳನ್ನು ಮಾನ್ಯ ಮಾಡುವವರೆಗೆ ನಾವು ಒಕ್ಕೂಟದಲ್ಲಿ ಸೇರುವದಿಲ್ಲ ಎಂದು ಮುಸಲ್ಮಾನ ಪ್ರಾಂತಗಳು ಹೇಳಬಲ್ಲವು."

ಜಯಕರ, ಸಪ್ರು ಮತ್ತು ಚಿಂತಾಮಣಿ ಎಲ್ಲರೂ ತೀಕ್ಷ್ಣ ವಿರೋಧವನ್ನು ಮಾಡುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚು ಇವರು ಏನು ಮಾಡಬಲ್ಲರು?

ಮಿಸೆಸ್ ಲಿಂಡಸೆ (ಮಾಸ್ಟರ ಆಫ್ ವೆಲಿಯಲ್ಲನ ಹೆಂಡತಿ)ಳ ಅಮೃತಮಯವಾದ ಕಣ್ಣುಗಳನ್ನು ಇನ್ನೂವರೆಗೆ ಮರೆಯಲಿಕ್ಕಾಗುವದಿಲ್ಲ. ಅವಳು ಅಹಿಂಸೆಯ ಅನೇಕ ಸಮಸ್ಯೆಗಳನ್ನು ಬಿಡಿಸಿದ್ದಳು. ಏನಾದರೂ ತಿಳಿಯಿರಿ, ಆದರೆ ನಮ್ಮ ಹೃದಯದಲ್ಲಿ ಪಾಪವಿದೆಯೆಂದು ಮಾತ್ರ ತಿಳಿಯಬೇಡಿರಿ ಎಂದು ಅವಳು ಬಾಪೂಜಿಗೆ ಪ್ರಾರ್ಥಿಸಿಕೊಂಡಿದ್ದಳು. ಅವಳಿಂದ ಒಂದು ಸುಂದರ ಪತ್ರ ಬಂತು.

ಅವಳು ತನ್ನ ಅಮೇರಿಕೆಯ ಪ್ರವಾಸದ ವರ್ಣನೆ ಮಾಡಿದ್ದಳು ಮತ್ತು ಕುಟುಂಬದ ಎಲ್ಲ ಸಮಾಚಾರವನ್ನೂ ಬರೆದಿದ್ದಳು. ಬಾಪೂ ಅವಳಿಗೆ ಬರೆದರು :

"You have beaten me. For the past four weeks or more I have been thinking of writing to you and I could not. And now your most welcome letter giving me a budget of family news has come. Thank you for it. What I wanted to say to you was that in everything I have done, I have asked myself how you would take it. Such was the hold your appealing eyes had on me when you spoke to me at that meeting under Prof. Thompson's roof. And then came those never to be forgotten talks under your own roof when you had received me as one of the family. Mahadev is with me. We often talk of all the friends we met in Oxford. Our love to all of you."

"ನೀವು ನನ್ನನ್ನು ಸೋಲಿಸಿದಿರಿ. ಕಳೆದ ನಾಲ್ಕು ವಾರಗಳಿಂದ ನಾನು ನಿಮಗೆ ಬರೆಯಬೇಕೆಂಬ ವಿಚಾರದಲ್ಲಿದ್ದೆನು. ಆದರೆ ಬರೆಯುವದಾಗಲಿಲ್ಲ. ಈಗ ಕುಟುಂಬದ ಎಲ್ಲ ಸಮಾಚಾರ ಕೊಡುವಂಥ ನಿಮ್ಮ ಅತ್ಯಂತ ಸ್ವಾಗತಾರ್ಹವಾದ ಪತ್ರ ಬಂದು ಮುಟ್ಟಿತು. ಅದಕ್ಕಾಗಿ ಧನ್ಯವಾದಗಳು. ನಾನು ಮಾಡುತ್ತಿರುವದು ನಿಮ್ಮ ಮನಸ್ಸಿಗೆ ಬರುತ್ತಿದೆಯೊ ಇಲ್ಲವೊ ಎಂಬ ಪ್ರಶ್ನೆಯನ್ನು ನನ್ನಷ್ಟಕ್ಕೆ ನಾನೇ ಕೇಳಿಕೊಳ್ಳುತ್ತಿರುತ್ತೇನೆ ಎಂಬುದನ್ನು ನಾನು ನಿಮಗೆ ಹೇಳಬಯಸುತ್ತೇನೆ. ನೀವು ಪ್ರೊ. ಥಾಮ್ಸನ್‌ರ ಮನೆಯಲ್ಲಿ ಮಾತಾಡಿದಾಗ ನಿಮ್ಮ ಅಮೃತವೃಷ್ಟಿ ಮಾಡುವಂಥ ಕಣ್ಣುಗಳು ನನ್ನ ಮೇಲೆ ಒಳ್ಳೆಯ ಪ್ರಭಾವವನ್ನು ಬೀರಿದ್ದವು. ಆ ಮೇಲೆ ಪುನಃ ನಾನು ನಿಮ್ಮ ಮನೆಗೆ ಬಂದಾಗ ನೀವು ಮನೆಯವನಂತೆಯೇ ನನ್ನ ಸತ್ಕಾರ ಮಾಡಿದಿರಿ. ಆ ಸಮಯದ ಮಾತುಕತೆಗಳನ್ನು ಮರೆಯುವ ಸಂಭವವೇ ಇಲ್ಲ. ಮಹಾದೇವನು ಇಲ್ಲಿ ನನ್ನ ಸಂಗಡ ಇದ್ದಾನೆ. ಆಕ್ಸ್‌ಫೋರ್ಡದಲ್ಲಿ ಭೆಟ್ಟಿಯಾದ ಮಿತ್ರರ ವಿಷಯಕ್ಕೆ ನಾವು ಇಲ್ಲಿ ಮೇಲಿಂದ ಮೇಲೆ ಮಾತಾಡುತ್ತಿರುತ್ತೇವೆ. ನಿಮ್ಮೆಲ್ಲರಿಗೂ ನನ್ನ ಪ್ರೀತಿಗಳು."

ಇವತ್ತು ಅಲ್ಲಾಹಾಬಾದ ಹಾಯಕೋರ್ಟಿನಲ್ಲಿ ರಾಮುಚರಣ ಹೆಸರಿನ ಒಬ್ಬ ಬ್ರಾಹ್ಮಣ ಜಮೀನದಾರನು ಒಬ್ಬ ಅಗಸಗಿತ್ತಿಯನ್ನು ಕೊಂದ ಬಗ್ಗೆ ಐದು ವರ್ಷ ಶಿಕ್ಷೆಯಾಯಿತೆಂಬುದನ್ನು ಓದಿದೆನು. ಇಂದು ಸಾಯಂಕಾಲ ನಾನು ಬಟ್ಟೆ ಒಯ್ಯಲಿಕ್ಕೆ ಬರುವೆನು ಎಂದು ಎದುರುತ್ತರ ಕೊಟ್ಟಿದ್ದಕ್ಕೆ ರಾಮುಚರಣನು ಅವಳನ್ನು ಗುದ್ದಿದನು ಮತ್ತು ಒದೆದನು. ಬೇರೊಬ್ಬ ಸ್ತ್ರೀಯು ಬಿಡಿಸಲಿಕ್ಕೆ ಬಂದದ್ದರಿಂದ

ಅವಳ ಕಪಾಳಕ್ಕೆ ಹೊಡೆದನು, ಅವಳ ಪತಿ ಬಂದರೆ ಅವನ ಕೈಯಲ್ಲಿಯ ಲಾಠಿ ಕಸಿದುಕೊಂಡು ಅವನನ್ನು ಹೊಡೆದನು. ಕೊನೆಗೆ ೫೦ ವರ್ಷದ ಇನ್ನೊಬ್ಬ ಸ್ತ್ರೀಯು ಬಂದಳು. ಅವಳನ್ನು ಒದೆದದ್ದರಿಂದ ಅವಳ ಪ್ಲೀಹವು ಹರಿದು ಅವಳು ತತ್‌ಕ್ಷಣ ಸತ್ತಳು. ಆಗ ಮಹಾಶಯರು ಓಡಿದರು. ಈಗೀಗ ಕೈದಿಗಳ ಬಿಡುಗಡೆ ಮಾಡು ತ್ತಿದ್ದಾರೆ ಮತ್ತು ನಮ್ಮ ಜನರಿಗೆ ಚನ್ನಾಗಿ ಶಿಕ್ಷೆಯನ್ನು ಕೊಡುತ್ತಿದ್ದಾರೆ. ಇದನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಬಾಪೂ ಹೇಳಿದರು : "ಅವನಿಗೆ ಐದು ವರುಷ ಶಿಕ್ಷೆಯಾಗಿದೆ, ಆದರೆ ಅವನು ಐದು ತಿಂಗಳೂ ಇರುವದಿಲ್ಲ. ಆಮನ್ ಸಭೆ ಕೂಡಿಸುವೆನು, ರೈತರಿಂದ ಹಣ ಕೊಡಿಸುವೆನು ಮತ್ತು ಸವಿನಯ ಕಾಯ್ದೆಭಂಗ ಚಳವಳಿಯನ್ನು ಹತ್ತಿಕ್ಕುವದಕ್ಕೆ ಸಹಾಯ ಮಾಡುವೆನು ಎಂದು ಹೇಳುವನು. ಇಷ್ಟರ ಮೇಲಿಂದ ಅವನನ್ನು ಸಹಜವಾಗಿ ಬಿಡುಗಡೆ ಮಾಡುವರು." ಯಾವದೇ ಕೈದಿಯನ್ನು ಬಿಡುಗಡೆ ಮಾಡಬೇಕಾದರೆ ಅವನು ತೀರ ಕಡಿಮೆಯೆಂದರೆ ಮೂರು ತಿಂಗಳನ್ನು ಪೂರ್ತಿಮಾಡಬೇಕೆಂಬ ನಿಯಮವಿದೆ. ಇದರ ಮೇಲಿಂದ ವಲ್ಲಭಭಾಯಿ-ಯವರು ಹೇಳಿದರು : "ಈ ಸ್ತ್ರೀಯು ಸ್ವರಾಜ್ಯ ಆಂದೋಲನದಲ್ಲಿ ಭಾಗವಹಿಸು ತ್ತಿದ್ದಳು, ಖಾದೀ ಬಟ್ಟೆಯ ಹೊರತು ಬೇರೆ ಬಟ್ಟೆ ಒಗೆಯಲಿಕ್ಕೆ ಒಲ್ಲೆನ್ನುತ್ತಿದ್ದಳು ಮತ್ತು ನನ್ನ ವಿರುದ್ಧ ಸುಳ್ಳು ಆರೋಪ ಹೊರಿಸಲಾಗಿದೆ ಎಂದು ತನ್ನ ಸಮರ್ಥನೆಯ ಕಾಲಕ್ಕೆ ಹೇಳಲಿಲ್ಲವೆ ? "

ದುಂಡುಮೇಜಿನ ಪರಿಷತ್ತು ಮುಗಿಯಿತು ಕೆಲವರನ್ನು ಪಾರ್ಲಿಮೆಂಟರಿ ಕಮೀಟಿಯ ಎದುರು ಹೇಳಿಕೆ ಕೊಡಲಿಕ್ಕೆ ಕರೆಯಲಾಗುವದು ಎಂದು ಸಾಮ್ಯು-ಅಲ್ ಹೋರನು ಜಾಹೀರ ಮಾಡಿದನು. ಇದರಿಂದ ಪ್ರಧಾನ

೧-೭-'೩೨

ಮಂತ್ರಿಯ ವಚನಭಂಗವಾಯಿತು ಮತ್ತು ಉದಾರಮತವಾದಿಗಳ ಮುಖದ ಮೇಲೆ ಹೊಡೆದಂತಾಯಿತು. 'ಇದು ಎಲ್ಲ ಕಾಂಗ್ರೆಸ್ಸೇತರ ರಾಷ್ಟ್ರವಾದಿಗಳ ಅಪಮಾನವಿದೆ' ಎಂದು ಶಾಸ್ತ್ರಿಯವರ ಶಬ್ದಗಳಿದ್ದಾಗ್ಯೂ ಜಯಕರ ಮತ್ತು ಸಪ್ರೂ ಇವರ ಹೇಳಿಕೆಯಲ್ಲಿ ಈ ಮಾತಿನ ಬಗ್ಗೆ ಸಿಟ್ಟಾಗುವಂಥ ಮಾತೇ ಇಲ್ಲ. ಇದಕ್ಕೂ ಹೆಚ್ಚು ಸಂತೋಷಜನಕ ಹೇಳಿಕೆ ಹೊರಡುವದೆಂದು ಈ ಜನರಿಗೆ ಇನ್ನೂ ಆಶೆಯಿದೆ. ಸಾಯಂಕಾಲ ತಿರುಗಾಡುವಾಗ ಬಾಪೂ ಮಾತಾಡಿದರು : "ಇವತ್ತು ಹಾರ್ನಿಮನ್‌ನ ಲೇಖ ಓದು—'ಅಪಮಾನ ಜನಕವಂತೂ ಇದೆ, ಆದರೆ ನಾವು ಇನ್ನೂ ನೋಡುತ್ತಿದ್ದೇವೆ, ಮಾರ್ಗನಿರೀಕ್ಷಣೆ ಮಾಡುವೆವು !' ಇದುವರೆಗೆ ಹಾರ್ನಿಮನ್‌ನ ಲೇಖ ಓದದೆ ಅವನ ಕಡೆಗೆ ದುರ್ಲಕ್ಷ ಮಾಡುತ್ತಿದ್ದೇವೆ. ಇವತ್ತು ಓದಿ ಹೇಳು." ಓದಿ ಹೇಳಿದೆ. ಬಾಪೂ ಅಂದರು :

" ಸುಂದರ ಲೇಖವಿದೆ. ಇದರಲ್ಲಿ ಕೇವಲ ಕಠೋರತೆಯಾಗಲಿ ಟೀಕೆಯಾಗಲಿ ಇರುವದಿಲ್ಲ. ಆದರೆ ಅವನ ಹೃದಯದ ವ್ಯಥೆಯು ಇದರಲ್ಲಿ ತುಂಬಿದೆ." ನಾನು ಹೇಳಿದೆ: "ಅವನು ಜಯಕರ ಸಪ್ರೂರ ಹೇಳಿಕೆಗಳು ಸುಳ್ಳು ಎಂದು ತೋರಿಸಿದ್ದಾನೆ, ಆದರೆ ವಿನಯಶೀಲ ಭಾಷೆಯನ್ನು ಉಪಯೋಗಿಸಿದ್ದಾನೆ. ಅವರಿಗೆ 'ನಾಮರ್ದ' ಎಂದು ಹೇಳಬಯಸುತ್ತಾನೆ." ಬಾಪೂ ಹೇಳಿದರು: "ನಿಜವಾಗಿದೆ." ಈ ಜನರು ಸಾಯಮನ್ ಕಮೀಶನದ ಹೊತ್ತಿಗೆ ಒಮ್ಮಿಂದೊಮ್ಮೆ ಹೇಗೆ ಜೋರು ತೋರಿಸಿದರೆಂಬುದು ಗೊತ್ತಾಗುವದಿಲ್ಲ. ವಲ್ಲಭಭಾಯಿ: "ಒಂದು ವೇಳೆ ನಮ್ಮಲ್ಲಿಯ ಕೆಲವರಿಗೆ ಕಮೀಶನ್ನದಲ್ಲಿ ಸ್ಥಳ ದೊರೆಯಬಹುದೆಂದು ಈ ಜನರು ತಿಳಿದಿದ್ದರು."

ಇವತ್ತು, ಬಹಳ ದಿವಸ ಮಾರ್ಗ ನಿರೀಕ್ಷಣೆ ಮಾಡಿದ ಮೇಲೆ, ಸ್ವಾಮಿಯವರ ಪತ್ರ ಬಂತು. ಸುಂದರವಾಗಿ ಚಿತ್ರಿಸಿದ ಪತ್ರವಿದೆ. "ಈ ಸಾರೆ ನಮಗೆ 'ರದ್ದೀ' (ಕೆಲಸಕ್ಕೆ ಬಾರದ) ಜನರ ಸಂಬಂಧ ಬಂದಿದೆ" ಎಂಬ ಶಬ್ದಗಳನ್ನು ಕಾಟು ಹಾಕಿದ್ದಿಲ್ಲ. ನಾನು ವಲ್ಲಭಭಾಯಿಯವರಿಗೆ ಕೇಳಿದೆ: "ಈ ಶಬ್ದಗಳನ್ನು ಏಕೆ ಕಾಟು ಹಾಕಿಲ್ಲ?" ವಲ್ಲಭಭಾಯಿ: "ಯಾರಿಗಾದರೂ ಇವು ತಿಳಿದರಲ್ಲವೆ? 'ರೇಢಿಯಾರ' 'ರದ್ದಿ' ಶಬ್ದ ಯಾರಿಗೆ ತಿಳಿಯುತ್ತದೆ ಆದೇನು ದೆವ್ವೊ ಭೂತೊ 'ಪಾಲಾ' (ಕೆಲಸಕ್ಕೆಉಪಯೋಗವಾಗು) ಯಾರಿಗೆ ಗೊತ್ತಿದೆ" ಕಿಶೋರಲಾಲಭಾಯಿಯ ಪತ್ರವೂಬಂತು. ಅವರು ತಮ್ಮ ವಾಚನ, ಲೇಖನ ಪ್ರವೃತ್ತಿಗಳ ಉಲ್ಲೇಖಮಾಡಿ ಹೆಚ್ಚು ಓದುವದಕ್ಕೆ ಸೂಚನೆಗಳನ್ನು ಬೇಡಿದ್ದರು. ಸ್ವಾಮಿಯವರು ರಾಮಕೃಷ್ಣ ಮತ್ತು ವಿವೇಕಾನಂದರ ವಿಷಯಕ್ಕೆ ಬಾಪೂರ ವಿಚಾರಗಳನ್ನು ಕೇಳಿದ್ದರು.

ಸ್ವಾಮಿ ಬರೆದಿದ್ದರು: "ಹೊರಗೆ ಇರುತ್ತಿದ್ದರೆ ಈ ಪ್ರಕಾರ ನಿಮ್ಮ ಸಮಯ ತೆಗೆದುಕೊಳ್ಳುವ ಪಾಪ ಮಾಡುತ್ತಿದ್ದಿಲ್ಲ. ಜೇಲಿನಲ್ಲಿ ನಿಮ್ಮ ಹತ್ತರ ಬರುವ ಭಾಗ್ಯವೆಲ್ಲಿ? ಆದುದರಿಂದ ನಿಮ್ಮ ಜೊತೆಗಿದ್ದು ಮಾತಾಡುವದು ಮತ್ತು ಚರ್ಚೆಮಾಡುವದು ಈ ಜನ್ಮದಲ್ಲಿ ಆಗುವದಿಲ್ಲ!" ಅವರಿಗೆ ಬಾಪೂ ಬರೆದರು: "ನೀನು ಹತ್ತರವಿದ್ದಾಗ ನಿನಗಾದ ವಿಯೋಗದ ಅನುಭವವು ನನ್ನ ಸಂಪರ್ಕದಲ್ಲಿ ಬರುವಂಥ ಅನೇಕ ಜನರಿಗೆ ಆಗಿದೆ. ಇದರಿಂದ ಸಿಕ್ಕಷ್ಟು ಸಂತೋಷವನ್ನೇ ಅನುಭವಿಸಬೇಕು. ಕ್ಯಾಲನ್‌ಬೇಕರು ಒಂದು ಸುಂದರ ಸಿದ್ಧಾಂತವನ್ನು ನಿಶ್ಚಿತ ಮಾಡಿದ್ದಾರೆ. ಅವರ ಸ್ವಂತದ ಅನುಭವ ಹೀಗಿತ್ತು: ಮೊಟ್ಟಮೊದಲು ಅವರು ನನ್ನ ಸಂಪರ್ಕದಲ್ಲಿ ಬಂದಾಗ ದಿನಾಲು ಭೆಟ್ಟಿಯಾಗುತ್ತಿದ್ದರು, ಮನಸ್ಸಿಗೆ ಬಂದಾಗ ಭೆಟ್ಟಿಯಾಗುತ್ತಿದ್ದರು, ಮತ್ತು ತಮಗೆ ಬೇಕಾದಷ್ಟು ಸಮಯ ತೆಗೆದುಕೊಳ್ಳುತ್ತಿದ್ದರು. ತೀರ ಸಮೀಪಕ್ಕೆ ಬಂದಾಗ, ನಾವು ಇಬ್ಬರೂ ಕೂಡಿಯೇ ಇರಹತ್ತಿದಾಗ, ಕೂಡಿಯೇ ಇರುತ್ತಿದ್ದೆವು, ಮಲಗುತ್ತಿದ್ದೆವು ಮತ್ತು ಊಟ ಮಾಡುತ್ತಿದ್ದೆವು. ಆದರೂ ನನ್ನ ಸಂಗಡ

ಮಾತಾಡಲಿಕ್ಕೆ ಸಮಯ ದೊರೆಯುವದು ದುರ್ಲಭವಾಗುತ್ತಿತ್ತು. ಆಫೀಸಿನಿಂದ ಮನೆಗೆ ಹೋಗುವಾಗ ಸಹ ಒಬ್ಬರಿಲ್ಲೊಬ್ಬರು ಮಾತಾಡುವವರು ಇದ್ದೇ ಇರುತ್ತಿದ್ದರು. ಆದುದರಿಂದ ಇದು ನಮ್ಮ ನಿತ್ಯದ ಜಗಳವಾಯಿತು. ಇದರ ಮೇಲಿಂದ ಅವರು ತ್ರೈರಾಶಿಕ ಹಾಕಿದ್ದರು: 'ಯಾರಾದರೂ ನಿಮ್ಮ ಸಮೀಪಕ್ಕೆ ಬಂದಷ್ಟೂ ದೂರವಾಗುತ್ತಾರೆಂದು ನನ್ನ ಅನುಭವವಾಗತೊಡಗಿದೆ.' ನಾನು ಅವರನ್ನು ಸಮರ್ಥಿಸಿ, ಅದಕ್ಕಷ್ಟು ಜೋಡಿಸಿದೆನು—'ನನ್ನನ್ನು ಅರಿತುಕೊಂಡಿದ್ದರಿಂದಲೇ ಇಷ್ಟು ಸಮೀಪ ಬಂದಿದ್ದೀರಿ. ಆದುದರಿಂದ ನಿಮಗೆ ನನ್ನ ಸಮಯ ತೆಗೆದುಕೊಳ್ಳುವ ಅಧಿಕಾರ ಉಳಿಯಲಿಲ್ಲ. ನನ್ನನ್ನು ಅರಿಯದೆ ಇದ್ದಂಥ ಉಳಿದ ಜನರನ್ನು ಬಿಟ್ಟು ನಿಮಗೆ ಸಮಯಕೊಡುವ ಅಧಿಕಾರ ನನಗಿಲ್ಲ.' ಈ ಪ್ರಕಾರದ ತಿಳಿವಳಿಕೆಯಿಂದ ನಮ್ಮ ಗಾಡಿಯು ಮುಂದುವರಿಯಿತು. ಈ ರೀತಿಯ ಅನುಭವದ ಬುಡದಲ್ಲಿ ಒಂದು ಸತ್ಯವಿದೆಯಲ್ಲವೆ? ಒಬ್ಬರನ್ನೊಬ್ಬರು ಕೂಡಿಕೊಂಡು ಹೋಗುವ ಜೊತೆಗಾರರಿಗೆ ತಮ್ಮ ತಮ್ಮೊಳಗೆ ಕೇಳುವ ಮಾತಾದರೂ ಏನಿರುತ್ತದೆ? ಹೀಗೆ ಮಾಡತೊಡಗಿದರೆ ನಮ್ಮ ಸಾಧಾರಣ ಕರ್ತವ್ಯದಲ್ಲಿ ನಾವು ಅಷ್ಟರಮಟ್ಟಿಗೆ ತಪ್ಪು ಮಾಡುತ್ತೇವೆಂದೇ ಹೇಳಬೇಕಾಗುವದಷ್ಟೆ? ಈ ಮಾತು ಸರಿಯಾಗಿದ್ದರೆ ಹತ್ತರವಿದ್ದರೂ ದೂರವಿದ್ದಂತೆ ಇರುವ ನಿಮ್ಮಂಥ ಜೊತೆಗಾರರಿಗೆ ದುಃಖವೆನಿಸಲಿಕ್ಕೆ ಯಾವ ಕಾರಣವೂ ಇಲ್ಲ."

ರಾಮಕೃಷ್ಣ ಮತ್ತು ವಿವೇಕಾನಂದರ ಬಗ್ಗೆ ಬರೆದರು: "ರಾಮಕೃಷ್ಣ ಮತ್ತು ವಿವೇಕಾನಂದರ ವಿಷಯಕ್ಕೆ ರೋಲಾರ ಪುಸ್ತಕಗಳನ್ನು ಧ್ಯಾನ ಪೂರ್ವಕವಾಗಿಯೂ ಆಸ್ಥೆಪೂರ್ವಕವಾಗಿಯೂ ಓದ್ದಿದ್ದೇನೆ. ರಾಮಕೃಷ್ಣರ ವಿಷಯದಲ್ಲಿ ಯಾವಾಗಲೂ ಪೂಜ್ಯಭಾವವಿದ್ದೇ ಇತ್ತು. ಅವರ ವಿಷಯಕ್ಕೆ ಸ್ವಲ್ಪೇ ಓದಿದ್ದೆನು. ಆದರೆ ಎಷ್ಟೋ ಸಂಗತಿಗಳನ್ನು ಭಕ್ತರಿಂದ ಕೇಳಿದ್ದೆನು. ಆದರಿಂದ ಭಕ್ತಿಯುಂಟಾಗಿತ್ತು. ರೋಲಾರ ಪುಸ್ತಕ ಓದುವದರಿಂದ ಆದರಲ್ಲಿ ವೃದ್ಧಿಯಾಗಿದೆ ಎಂಬ ಸಂಗತಿಯೇನೂ ಇಲ್ಲ. ವಾಸ್ತವಿಕವಾಗಿ ರೋಲಾರ ಎರಡೂ ಪುಸ್ತಕಗಳು ಪಾಶ್ಚಿಮಾತ್ಯರ ಸಲುವಾಗಿ ಬರೆಯಲ್ಪಟ್ಟಿವೆ. ಅವುಗಳಿಂದ ನಮಗೆ ಏನೂ ದೊರೆಯಲಾರದೆಂದು ಹೇಳಲಿಕ್ಕಾಗುವದಿಲ್ಲ. ಆದರೆ ನನಗೆ ತೀರ ಸ್ವಲ್ಪ ದೊರೆತಿದೆ. ನನ್ನ ಮೇಲೆ ಪ್ರಭಾವವನ್ನು ಕೆಡವಿದಂಥ ಮಾತುಗಳೂ ರೋಲಾರ ಪುಸ್ತಕದಲ್ಲಿವೆ. ಅದರ ಹೊರತು ಇದ್ದಂಥ ಹೊಸ ಮಾತುಗಳಿಂದ ಪ್ರಭಾವದಲ್ಲಿ ಯಾವ ವೃದ್ಧಿಯೂ ಆಗಿಲ್ಲ. ರಾಮಕೃಷ್ಣರಿದ್ದಷ್ಟೇ ವಿವೇಕಾನಂದರೂ ಭಕ್ತರಿದ್ದರೆಂದು ನನಗೆನಿಸುವದಿಲ್ಲ. ವಿವೇಕಾನಂದರ ಪ್ರೇಮವು ವಿಸ್ತೃತವಾಗಿತ್ತು. ಅವರು ಭಾವನಾಪೂರ್ಣರಾಗಿದ್ದರು ಮತ್ತು ಭಾವನೆಯಲ್ಲಿ ತೇಲಿ ಹೋಗುತ್ತಿದ್ದರು. ಈ ಭಾವನೆಯು ಅವರ ಜ್ಞಾನದ ಸಲುವಾಗಿ ಹಿರಣ್ಮಯ

ಪಾತ್ರಿಯಾಗಿತ್ತು. ಧರ್ಮ ಮತ್ತು ರಾಜನೀತಿಗಳಲ್ಲಿ ಅವರು ಮಾಡಿದ ಭೇದವು ಯೋಗ್ಯವಾಗಿದ್ದಿಲ್ಲ, ಆದರೆ ಇಂಥ ಮಹಾವ್ಯಕ್ತಿಯ ಟೀಕೆ ಎಂತಹದು? ಟೀಕೆಯನ್ನು ಮಾಡಲಿಕ್ಕೆ ಕುಳಿತರೆ ಹೇಗಾದರೂ ಟೀಕಿಸಬಹುದು. ಇಂಥ ವ್ಯಕ್ತಿಗಳಿಂದ ತೆಗೆದುಕೊಳ್ಳಲಿಕ್ಕೆ ಬರುವಂತಹದನ್ನು ತೆಗೆದುಕೊಳ್ಳುವದೇ ನಮ್ಮ ಧರ್ಮವಾಗಿದೆ. ತುಲಸೀದಾಸರ 'ಜಡ–ಚೇತನ' ಎಂಬ ವಚನವು ನನ್ನ ಜೀವನದಲ್ಲಿ ಚನ್ನಾಗಿ ನಾಟಿದೆ. ಆದುದರಿಂದ ಟೀಕಿಸುವದು ನನಗೆ ರುಚಿಸುವದೇ ಇಲ್ಲ. ನನ್ನ ಮನಸ್ಸಿನಲ್ಲಿ ಟೀಕೆಯೆಂಬುದು ಏನಾದರೂ ಉಳಿದಿದ್ದರೆ ನಿನಗೆ ಅದನ್ನು ತಿಳಿದುಕೊಳ್ಳುವ ಇಚ್ಛೆಯಾಗಬಹುದೆಂದು ಇಷ್ಟನ್ನೆಲ್ಲ ಬರೆದಿದ್ದೇನೆ. ವಿವೇಕಾನಂದರು ಶ್ರೇಷ್ಠ ಸೇವಕರಿದ್ದರೆಂಬುದರ ಬಗ್ಗೆ ನನ್ನ ಮನಸ್ಸಿನಲ್ಲಿ ಸಂಶಯವಿಲ್ಲ. ಯಾವುದನ್ನು ಅವರು ಸತ್ಯವೆಂದು ತಿಳಿದರೊ ಅದಕ್ಕಾಗಿ ಅವರು ತಮ್ಮ ಶರೀರವನ್ನೇ ಹೋಮಮಾಡಿದರು. ೧೯೦೧ ರಲ್ಲಿ ನಾನು ಬೇಲೂರ ಮಠವನ್ನು ನೋಡಲಿಕ್ಕೆ ಹೋದಾಗ ವಿವೇಕಾನಂದರ ದರ್ಶನ ತಗೆದುಕೊಳ್ಳುವ ಉತ್ಕಟೇಚ್ಛೆಯಾಗಿತ್ತು. ಆದರೆ ಮಠದಲ್ಲಿರುವ ಸ್ವಾಮಿಯು ಅವರು ಬೇನೆಯಿಂದ ಬಳಲುತ್ತಿದ್ದಾರೆಂದೂ ಊರಲ್ಲಿಯೇ ಇದ್ದಾರೆಂದೂ ಮತ್ತು ಅವರನ್ನು ಯಾರಿಗೂ ಭೆಟ್ಟಿಯಾಗಗೊಡುವದಿಲ್ಲವೆಂದೂ ಹೇಳಿದನು. ಆದುದರಿಂದ ನಿರಾಶೆಯಾಗಿತ್ತು. ನನ್ನಲ್ಲಿ ಭಾವನೆಯಿಂದ ನಾನು ಅನೇಕ ಸಂಕಟಗಳೊಳಗಿಂದ ಪಾರಾಗಿದ್ದೇನೆ. ನಾನು ಉಳಿದಂಥ ಪೂಜ್ಯಭಾವನೆಯಿಂದ ಪ್ರೇರಿತನಾಗಿ ಭೆಟ್ಟಿಯಾಗಲಿಕ್ಕೆ ಧಾವಿಸಿ ಹೋಗದೆ ಇದ್ದಂಥ ಒಬ್ಬ ಪ್ರಸಿದ್ಧ ವ್ಯಕ್ತಿಯೂ ಆ ಕಾಲಕ್ಕೆ ಉಳಿಯಲಿಲ್ಲ. ಅನೇಕ ಸ್ಥಳಗಳಿಗೆ ನಾನು ಕೂಡ ಕಲಕತ್ತೆಯ ಉದ್ದವಾದ ರಸ್ತೆಗಳಲ್ಲಿ ಕಾಲುನಡಿಗೆಯಿಂದಲೇ ಹೋಗುತ್ತಿದ್ದೆನು. ಇದರಲ್ಲಿ ಭಕ್ತಿಭಾವವಿತ್ತು, ಹಣ ಉಳಿಸುವ ವೃತ್ತಿಯಿದ್ದಿಲ್ಲ. ಹಾಗೆ ನೋಡಿದರೆ ನನ್ನ ಸ್ವಭಾವದಲ್ಲಿ ಅದು ಯಾವಾಗಲೂ ಉಳಿದೇ ಇದೆ."

ಕಿಶೋರಲಾಲಭಾಯಿಗೆ ಓದುವ ವಿಷಯದಲ್ಲಿ ಬರೆದರು: "ನೀವು ಏನಾದರೂ ವಿಶಿಷ್ಟ ಅಧ್ಯಯನ ಮಾಡಬೇಕೆಂದು ನಿಮಗೆ ಸಿಫಾರಸುಮಾಡುವ ಇಚ್ಛೆಯಾಗುವದಿಲ್ಲ. ನೀವು ಸ್ವಲ್ಪ ಓದಿದ್ದೀರೆಂದು ನನಗೆನಿಸುವದಿಲ್ಲ. ನನ್ನ ಸ್ವಂತದ ಓದು ತೀರ ವಿಚಿತ್ರವೆನಿಸಬಹುದು. ಈಗ ನಾನು ಉರ್ದು ಓದುತ್ತಿದ್ದೇನೆ. ನಾಣ್ಯದ ಚಲಾವಣೆಯ ವಿಷಯದಲ್ಲಿ ನನ್ನ ಜ್ಞಾನವು ಅಕ್ಷಮ್ಯವಾಗಿದೆ. ಆದುದರಿಂದ ಅದರಲ್ಲಿ ಸ್ವಲ್ಪ ಪ್ರವೇಶ ಮಾಡತೊಡಗಿದ್ದೇನೆ. ಇವೆರಡರ ಹಿಂದೆಯೂ ಸೇವಾಭಾವವಿದೆ. ಈ ಭಾವನೆಯ ಸಲುವಾಗಿಯೇ ಸಾವಿನ ಮನೆಯಲ್ಲಿ ಕಾಲಿಟ್ಟಿದ್ದರೂ ಅರ್ಧಕ್ಕೇ ಉಳಿದ ತಮಿಳಿನ ಜ್ಞಾನವನ್ನು ಪೂರ್ತಿಮಾಡಿಕೊಳ್ಳುವ ಲೋಭ ಉಳಿದೇ ಉಳಿಯು

ತ್ತದೆ ಮತ್ತು ಇದೇ ಪ್ರಕಾರ ಬಂಗಾಲಿ ಮತ್ತು ಮರಾಠಿಯ ಬಗ್ಗೆಯೂ ಆಗುತ್ತದೆ. ಯಾಕಂದರೆ ಇವುಗಳನ್ನೂ ಪ್ರಾರಂಭಮಾಡಿ ಬಿಟ್ಟದ್ದೆನು. ಇಲ್ಲಿ ಸಾಕಷ್ಟು ಸಮಯ ಉಳಿಯುವದಾದರೆ ಈ ಅಧ್ಯಯನದ ಬೆನ್ನು ಹತ್ತಿದರೆ ಆಶ್ಚರ್ಯವಲ್ಲ. ನಿಮ್ಮ ಮನಸ್ಸು ಇದೇ ದೃಷ್ಟಿಯಿಂದ ಕೆಲಸಮಾಡುತ್ತಿದ್ದರೆ ಅಥವಾ ಹೊಸ ಭಾಷೆಯಲ್ಲಿ ಪ್ರವೇಶ ಮಾಡುವ ಇಚ್ಛೆಯಾಗುತ್ತಿದ್ದರೆ ಅವಶ್ಯ ಮಾಡಿರಿ. ಆಶ್ರಮವನ್ನು ಪ್ರಾರಂಭ ಮಾಡಿದಂದಿನಿಂದ ಭಾಷೆಗಳ ವಿಷಯಕ್ಕೆ ನಮ್ಮ ಜನರಲ್ಲಿ ಈ ಪ್ರಕಾರದ ಅಭಿ-ಲಾಷೆ ಇದ್ದೇ ಇತ್ತು. ನನ್ನ ವಿಷಯಕ್ಕಂತೂ ಅದು ಎಂದೂ ಕಡಿಮೆಯಾಗಿಲ್ಲ. ಆದರೆ ನಾನು ನಿಮ್ಮನ್ನು ಈ ಮೋಹದಲ್ಲಿ ಕೆಡವಲಿಚ್ಛಿಸುವದಿಲ್ಲ. ನಮ್ಮೆಲ್ಲರ ಸಲುವಾಗಿ ಒಂದೇ ಮಾತಿನ ಅವಶ್ಯಕತೆಯಿರುತ್ತದೆ. ಅದೆಂದರೆ ನಾವು ಓದಿದ್ದರ ಮೇಲೆ ವಿಚಾರಮಾಡಬೇಕು, ಅದನ್ನು ಪಚನಮಾಡಿಕೊಳ್ಳಬೇಕು ಮತ್ತು ಅದನ್ನು ನಮ್ಮ ಜೀವನದ ಒಂದು ಅಂಗವನ್ನಾಗಿ ಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ನಾನು . . . ಗೆ ಅವರು ಗೀತೆಯ ಅಧ್ಯಯನ, ರಾಯಚಂದಭಾಯಿಯ ಭಾಷಣ ಮುಂತಾದವುಗಳನ್ನೆಲ್ಲ ಬಿಟ್ಟು ಕೇವಲ ತಮ್ಮ ಕೆಲಸದಲ್ಲಿಯೇ ಮಗ್ನರಾಗಬೇಕೆಂದೂ ಅದರದೇ ವಿಚಾರ ಮಾಡಬೇಕೆಂದೂ ಸಲಹೆ ಕೊಟ್ಟದ್ದೇನೆ. ಯಾಕಂದರೆ ಅವರು 'ಅನಾಸಕ್ತಿಯೋಗವನ್ನೂ' ರಾಯಚಂದಭಾಯಿ ಲೇಖದೊಳಗಿನ ಬಹು ಭಾಗವನ್ನೂ ಪಾಠಮಾಡಿದ್ದು ನನಗೆ ಗೊತ್ತಿದೆ. ಆದರೆ ಅವೆಲ್ಲವುಗಳ ಸರಳ ಉಪಯೋಗವು ಅವರಿಂದ ಆಗುವದು ಸಾಧ್ಯವೇ ಇಲ್ಲ. ಅವರ ಹೃದಯವು ಶುದ್ಧವಿದೆ. ಆದರೆ ಅವರ ಬುದ್ಧಿಯು ಅವರನ್ನು ಕೆಡವುತ್ತಿರುತ್ತದೆಂದು ನನ್ನ ಕಲ್ಪನೆ. ನಾನಾ ಬಗೆಯ ತರ್ಕ ಮಾಡುತ್ತದೆ ಮತ್ತು ಕೊನೆಗೆ ಮಸಕು ಮಸಕಾಗಿಯೇ ಉಳಿಯುತ್ತದೆ. ನಾನು ಬರೆದದ್ದು ಅವರಿಗೆ ಸೇರಿದಂತೆ ಕಾಣುತ್ತದೆ. ಅವರ ಮನಸ್ಸು ಹಗುರಾಗಿದೆ. ಈ ಸಲಹೆಯ ಅಂತಿಮ ಪರಿಣಾಮವೇನೇ ಆಗಲಿ ಆದರೆ ಇದರ ಹಿಂದೆ ಇರುವ ವಿಚಾರಸರಣಿಯು ತೀರ ಸರಿಯಾದದ್ದಿದೆಯೆಂದು ಈ ದೊಡ್ಡ ಅನುಭವದಿಂದ ಗೊತ್ತಾಗುತ್ತದೆ. ಆದುದರಿಂದ ನಿಮ್ಮಂಥವರಿಗೆ ಧಾರ್ಮಿಕ ವಾಚನವನ್ನು ಶಿಫಾರಸುಮಾಡಲು ನನಗೆ ಸಹಜವಾಗಿ ಪ್ರೇರಣೆಯಾಗುವದಿಲ್ಲ."

ಆಕಾಶದರ್ಶನದ ವಿಷಯದಲ್ಲಿ: "ನನ್ನ ಸಲುವಾಗಿ ಇದು ಈಶ್ವರ ದರ್ಶನದ ಒಂದು ಮಾರ್ಗವಾಗಿದೆ. ಇಲ್ಲಿ ಈ ಸಾರೆ ಒಮ್ಮಿಂದೊಮ್ಮೆಲೇ ಆಕಾಶ ದರ್ಶನವು ಒಂದು ದೊಡ್ಡ ಸತ್ಸಂಗವೆಂದೆನಿಸಿತು. ನಕ್ಷತ್ರಗಳು ಸಹ ನಮ್ಮ ಸಂಗಡ ಮೌನದಿಂದ ಮಾತಾಡುತ್ತಿರುತ್ತವೆ."

ಮುಂಬೈಯಲ್ಲಿ ಮೂಳ್ಜಿ ಜೇಠಾ ಮಾರ್ಕೇಟಿನಲ್ಲಿ ಎಲ್ಲ ಪರದೇಶೀ ಬಟ್ಟೆಯ

ವ್ಯಾಪಾರಸ್ಥರು ತಮ್ಮ ಎಲ್ಲ ಬಟ್ಟೆಯನ್ನು ಸ್ವೇಚ್ಛೆಯಿಂದ ತೆಗೆದಿಟ್ಟು ವಿದೇಶಿ ಮತ್ತು

೨-೭-'೩೨ ಸ್ವದೇಶಿಗಳ ನಡುವೆ ಇದ್ದಂಥ ಪಡದೆಯನ್ನು ಕಿತ್ತಿ ಹಾಕುವ ಕಮಿಶನರರ ಆಜ್ಞೆಯನ್ನು ನಿರುಪಯುಕ್ತ ಮಾಡಿದರು. ಈ ವಿಷಯಕ್ಕೆ ಬಾಪೂ ಅಂದರು: "ಇದುವರೆಗೆ ಈ ಮಾತು ನನ್ನ ಮನಸ್ಸಿನಲ್ಲಿ ನಾಟಲೊಲ್ಲದು. 'ಟಾಯಿಮ್ಸ'ದಲ್ಲಿ ಈ ಸಂಗತಿಯು ಇದ್ದಕ್ಕಿದ್ದಂತೆ ಬಂದಿದೆ. ಅದರ ಮೇಲೆ ಯಾವ ಟೀಕೆ-ಟಿಪ್ಪಣಿಗಳೂ ಇಲ್ಲ. ಆದುದರಿಂದ ನಿಜವಿರ ಬಹುದು. ಆದರೆ ಕಲ್ಪನೆಗೆ ತಾಕಲೊಲ್ಲದು. ಸ್ವದೇಶೀ ಹಾಗೂ ಪರದೇಶೀ ವ್ಯಾಪಾರ ಸ್ಥರು ಒಪ್ಪಂದ ಮಾಡಿಕೊಂಡಿರಬಹುದೆ? ಅಥವಾ ಪರದೇಶೀ ವ್ಯಾಪಾರಸ್ಥರು ಸ್ವದೇಶೀ ವ್ಯಾಪಾರಸ್ಥರ ಸಂಕಟವನ್ನು ಅರಿತು ತಮ್ಮಷ್ಟಕ್ಕೆ ತಾವೇ ಈ ಪ್ರಕಾರ ಮಾಡಿರಬಹುದೆ?"

ಹೋರನ ಪ್ರಕಟನೆಯ ಮೇಲೆ ದುಂಡುಮೇಜಿನ ಪರಿಷತ್ತಿನ ಎಷ್ಟೋ ಸದಸ್ಯರ ಅಭಿಪ್ರಾಯಗಳು ಬರತೊಡಗಿವೆ. ಅವುಗಳಲ್ಲಿ ತಾಂಬೆಯವರದು ಎಲ್ಲಕ್ಕೂ ಸರಳ ವಾದದ್ದೂ ಸತ್ಯವಾದದ್ದೂ ಇದೆ. ಆರ್ಡಿನನ್ಸದ ವಿಷಯಕ್ಕೆ ಯಾರಿಗೂ ಏನನ್ನೂ ಹೇಳುವ ಆವಶ್ಯಕತೆಯೇ ಅನಿಸಿಲ್ಲ. ದೇಶದಲ್ಲಿ ಯುದ್ಧವನ್ನು ಮುಂದುವರಿಸುವದು ಭಯಾನಕ ಮಾತಾಗಿದೆ ಎಂದು ಮುಂತಾಗಿ ಫಿರೋಜ ಸೇಠನಾ ಒಬ್ಬರು ಮಾತ್ರ ಹೇಳಿದ್ದರು. ಉದಾರಮತವಾದಿಗಳಿಗೆ ತಮ್ಮ ಕರ್ತವ್ಯ ಏಕೆ ಹೊಳೆಯುವದಿಲ್ಲ? ಈಗ ಕೂಡ ಅವರಿಗೆ ಸರಕಾರದೊಂದಿಗೆ ಸಹಕಾರದ ಆಶೆ ಇರಬಹುದೆ? ಅವರಿಗೆ ಮನಸ್ಸಿದ್ದರೆ ಆರ್ಡಿನನ್ಸಗಳನ್ನು ರದ್ದುಮಾಡಿಸಬಲ್ಲರು. ಆದರೆ ಮನಸ್ಸೇ ಇರಲಿಕ್ಕಿಲ್ಲ. ಇದು ಈ ಯುಗದ ದೊಡ್ಡ ಒಗಟಾಗಿದೆ. ದುಷ್ಟ ಹೇತುಗಳ ಆರೋಪಣೆ ಮಾಡು ವದು ಸುಲಭ ಮಾತಾಗಿದೆ, ಆದರೆ ಬಾಪೂ ಅವರ ನೀತಿಯಲ್ಲಿ ವಿಶ್ವಾಸವಿಡುವಂಥ ನಾನು ಇಂಥ ಉದ್ದೇಶಗಳನ್ನು ಹೇಗೆ ಆರೋಪಿಸಬಲ್ಲೆನು?

ಈ ಸಾರೆ ಸಹ ಬಾಪೂ ಆಶ್ರಮದ ಟಪಾಲನ್ನು ರವಿವಾರ ರಾತ್ರಿಯೇ ಪೂರ್ತಿ ಮಾಡಿದರು. ಪ್ರತಿ ಸಾರೆಯಂತೆ . . . ರ ಉದ್ದ ಪತ್ರ ಬಂದಿತ್ತು. ಆದರಲ್ಲಿ

೩-೭-'೩೨ ಯಾರಾದರೂ ಯಾವನದಾದರೂ ಸಂಪತ್ತನ್ನು ಅನಧಿಕಾರ ದಿಂದ ತೆಗೆದುಕೊಂಡರೆ ಅವನಿಗೆ ಆತ್ಮಹತ್ಯೆ ಮಾಡಿಕೊಂಡು ತನ್ನ ವಿರೋಧಿಯ ಹೃದಯ-ಪರಿವರ್ತನೆ ಮಾಡುವ ಅಧಿಕಾರ ವಿದ್ದಂತೆ ಬಲಾತ್ಕಾರಕ್ಕೆ ಬಲಿಯಾಗುವ ಸ್ತ್ರೀಗೆ ಆತ್ಮಹತ್ಯೆ ಮಾಡಿಕೊಳ್ಳುವ ಅಧಿಕಾರವಿರುತ್ತದೆ ಎಂದು ಮುಂತಾಗಿ ಬರೆದಿದ್ದರು. ಅವರಿಗೆ ಬಾಪೂ ಕಾಲ್ಪನಿಕ ಪ್ರಶ್ನೆಗಳನ್ನು ಕೇಳುತ್ತಿರಬೇಡಿರೆಂದು ಬರೆದಿದ್ದರು. ಇದರ ಬಗ್ಗೆ ಅವರು ತಮ್ಮ

ದೀರ್ಘ ಸಮರ್ಥನೆಯನ್ನು ಮಾಡಿದ್ದಾರೆ: ಅಹಿಂಸೆಯ ಪೂಜಾರಿಯಾದುದರಿಂದ ನನಗೆ ಅಹಿಂಸೆಯ ಎಲ್ಲ ಸಮಸ್ಯೆಗಳೂ ತಿಳಿಯಬೇಕು. ನನ್ನ ಹತ್ತಿರ ಯಾರಾದರೂ ಸಲಹೆ ಕೇಳಲು ಬಂದರೆ ಅವರಿಗೆ ನಾನು ಏನು ಸಲಹೆ ಕೊಡಲಿ? ಜೀವನದಲ್ಲಿ ಇಂಥ ಪ್ರಸಂಗಗಳು ಅನೇಕ ಬರಬಹುದು. ಆದುದರಿಂದ ಮೊದಲಿನಿಂದ ಸಿದ್ಧತೆ ಇಡಲಿಕ್ಕೆ ಬೇಕು, ಮುಂತಾಗಿ, ಮುಂತಾಗಿ. ಅವರಿಗೆ ಬಾಪೂ ಬರೆದರು: "ಬಲಾತ್ಕಾರದ ವಿಷಯದಲ್ಲಿ ನಿಮ್ಮ ತರ್ಕವು ಸರಿಯಾಗಿ ಕಾಣುತ್ತದೆ. ಯಾವ ಪ್ರಸಂಗದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವದು ಸ್ತ್ರೀಯ ಧರ್ಮವೆಂದು ತಿಳಿಯಲಾಗುತ್ತಿದೆಯೊ ಅಂಥದೇ ಪ್ರಸಂಗದಲ್ಲಿ ತನ್ನ ರಕ್ಷಣೆಯಲ್ಲಿ ಇಟ್ಟಂಥ ಸಂಪತ್ತಿಯನ್ನು ಯಾರಾದರೂ ಲೂಟು ಮಾಡಲಿಕ್ಕೆ ಬಂದರೆ ಆಗ ಆತ್ಮಹತ್ಯೆ ಮಾಡಿಕೊಳ್ಳುವದು ಕಾವಲುಗಾರನ ಧರ್ಮವಾಗಬಲ್ಲದು. ಆದರೆ ಈ ಧರ್ಮವು ತನ್ನಿಂದ ತಾನೇ ಹೊಳೆಯಲಿಕ್ಕೆ ಬೇಕು. ಯಾವಳೊಬ್ಬ ಸ್ತ್ರೀಯು ಬಲಾತ್ಕಾರವಾಗಗೊಡದಿರುವದಕ್ಕೆ ಆತ್ಮಹತ್ಯೆ ಮಾಡಿಕೊಳ್ಳಲೊಪ್ಪದಿದ್ದರೆ ಅವಳು ಅಧರ್ಮವನ್ನು ಆಚರಿಸಿದಳೆಂದು ಹೇಳುವ ಅಧಿಕಾರವು ನನಗಾಗಲಿ ನಿಮಗಾಗಲಿ ಇರುವದಿಲ್ಲ. ಇದಕ್ಕೆ ಬದಲಾಗಿ ಯಾವನೊಬ್ಬ ಕಾವಲುಗಾರನು ತನ್ನ ರಕ್ಷಣೆಯಲ್ಲಿದ್ದ ಸಂಪತ್ತನ್ನು ಕಾಪಾಡುವದಕ್ಕಾಗಿ ಪ್ರಾಣವನ್ನು ಕೊಟ್ಟರೆ ಅವನು ಧರ್ಮವನ್ನಾಚರಿಸಿದನೆಂದು ತಿಳಿಯುವ ಅಧಿಕಾರವು ನಿಮಗಾಗಲಿ ನನಗಾಗಲಿ ಇರುವದಿಲ್ಲ. ಆ ಕಾಲಕ್ಕೆ ಆ ವ್ಯಕ್ತಿಯ ಭಾವನೆಯು ಹೇಗಿತ್ತೆಂಬುದನ್ನು ತಿಳಿದುಕೊಂಡೇ ಅಭಿಪ್ರಾಯ ಗೊತ್ತುಮಾಡಬೇಕು. ಈ ಪ್ರಕಾರ ನ್ಯಾಯಕ್ಕನುಸರಿಸಿ ಅಭಿಪ್ರಾಯ ಕೊಟ್ಟ ಮೇಲೆ ಕೂಡ ಸ್ತ್ರೀಯು ತನ್ನ ಮೇಲೆ ಬಲಾತ್ಕಾರವಾಗಬಾರದೆಂದು—ಅವಳಲ್ಲಿ ಧೈರ್ಯವಿದ್ದರೆ—ಪ್ರಾಣತ್ಯಾಗ ಮಾಡಿಕೊಳ್ಳಲಿಕ್ಕೆ ಸಿದ್ಧಳಾಗುವಳು. ಆದುದರಿಂದ ಸ್ತ್ರೀಯರ ಸಂಗಡ ಮಾತಾಡಿದ ಮೇಲೆ ನಾನು ಅವರಿಗೆ ಪ್ರಾಣತ್ಯಾಗ ಮಾಡಿಕೊಳ್ಳಲಿಕ್ಕೆ ಅವಶ್ಯವಾಗಿ ಪ್ರೋತ್ಸಾಹನೆಯನ್ನು ಕೊಡುವೆನು ಮತ್ತು ಇಚ್ಛೆಯಿದ್ದರೆ ಪ್ರಾಣಕೊಡುವದು ಬಹಳ ಸುಲಭವೆಂದು ತಿಳಿಸಿ ಹೇಳುವೆನು. ಯಾಕಂದರೆ ತಮ್ಮ ರಕ್ಷಣೆಯನ್ನು ಮಾಡಲು ಮೂರನೇ ಮನುಷ್ಯನು ಯಾರಾದರೂ ಇರದಿದ್ದರೆ ಅಥವಾ ಅವರು ಸ್ವತಃ ಕಠಾರಿ ಅಥವಾ ಬಂದೂಕಿನ ಉಪಯೋಗ ಮಾಡುವದನ್ನು ಕಲಿತಿರದಿದ್ದರೆ ದುಷ್ಟರ ವಶದಲ್ಲಿ ಹೋಗದೆ ಬೇರೆ ಉಪಾಯವೇ ಇಲ್ಲೆಂದು ಅನೇಕ ಸ್ತ್ರೀಯರು ತಿಳಿಯುತ್ತಾರೆ. ಇಂಥ ಸ್ತ್ರೀಯರಿಗೆ ಎರಡನೆಯವರ ಆಯುಧಗಳ ಮೇಲೆ ಭರವಸೆಯಿಡುವ ಅವಶ್ಯಕತೆಯಿಲ್ಲೆಂದು ನಾನು ಹೇಳುವೆನು. ಅವಳ ಶೀಲವೇ ಅವಳ ರಕ್ಷಣೆ ಮಾಡುವದು. ಆದರೆ ಹಾಗಾಗದಿದ್ದರೆ ಕಠಾರಿ ಮುಂತಾದವುಗಳನ್ನು ಉಪಯೋಗ ಮಾಡುವದರ ಬದಲು ಆತ್ಮಹತ್ಯೆ ಮಾಡಿಕೊಳ್ಳಬಹುದು. ತಾವು ಬಲಹೀನರೆಂದಾಗಲಿ, ಅಬಲೆಯ-

ರೆಂದಾಗಲಿ ತಿಳಿದುಕೊಳ್ಳುವ ಆವಶ್ಯಕತೆಯಿಲ್ಲ.

“ ಇನ್ನು ಕಾಲ್ಪನಿಕ ಪ್ರಶ್ನೆಯ ವಿಷಯಕ್ಕೆ. ನೀವು ನಿಮ್ಮ ಪ್ರಶ್ನೆಯ ವಿಷಯಕ್ಕೆ ಯಾವ ರೀತಿಯಲ್ಲಿ ಬರೆಯುತ್ತೀರೊ ಅದೇ ರೀತಿಯಲ್ಲಿ ನಾನು ತಿಳಿದುಕೊಂಡಿದ್ದೇನು ಮತ್ತು ಇಂಥ ಪ್ರಶ್ನೆಗಳಿಗೆ ನಾನು ಕಾಲ್ಪನಿಕವೆಂದು ಹೇಳುತ್ತೇನೆ. ಇಂಥ ಒಂದೊಂದು ಪ್ರಶ್ನೆಯನ್ನು ಕೇಳಬಹುದು. ಆದರೆ ಕಾಲ್ಪನಿಕ ಪ್ರಶ್ನೆಗಳನ್ನು ಏನೂ ಕೇಳದಿದ್ದರೆ ಹೆಚ್ಚು ಒಳ್ಳೆಯದು. ಇಂಥ ಪ್ರಶ್ನೆಗಳನ್ನು ಕೇಳುವ ರೂಢಿಯನ್ನು ಕೆಡವಬಾರದು. ಭೂಮಿತಿಯನ್ನು ತಿಳಿದವನು ಭೂಮಿತಿಯ ವಿಶಾರದನಿಂದ ಉಪಸಿದ್ಧಾಂತಗಳನ್ನು ಬಿಡಿಸಿಕೊಂಡು ಮಾಡುತ್ತಿರುವ ತಪ್ಪನ್ನೇ ಇಂಥ ರೂಢಿ ಬಿದ್ದವರು ಮಾಡುತ್ತಾರೆ. ಹೀಗೆ ಉಪಸಿದ್ಧಾಂತಗಳನ್ನು ಬಿಡಿಸುವವನಿಗೆ ಭೂಮಿತಿಯು ಎಂದೂ ಉತ್ತಮ ರೀತಿಯಿಂದ ಬರಲಾರದು. ಇದೇ ಸ್ಥಿತಿಯು ಯಾವದೇ ವಿಶಿಷ್ಟ ಸಿದ್ಧಾಂತದ ವಿಷಯದಲ್ಲಿ ಉಂಟಾಗುವ ಅನೇಕ ಪ್ರಶ್ನೆಗಳನ್ನು ಎರಡನೆಯವರಿಂದ ಬಿಡಿಸಿಕೊಳ್ಳುವವನದಾಗುತ್ತದೆ. ಆದರೆ ನೀತಿಯ ಸಿದ್ಧಾಂತಗಳಿಂದ ಉಪಸ್ಥಿತಮಾಡಿದ ಪ್ರಶ್ನೆಗಳ ವಿಷಯದಲ್ಲಿ ಮೂಲದಲ್ಲಿಯೇ ಒಂದು ದೊಡ್ಡ ದೋಷವಿದೆ. ಅಂದರೆ ನಾವು ತೆಗೆದುಕೊಂಡ ಉದಾಹರಣೆಯೇ ತೀರ ಸರಿಯಾಗಿ ಅನ್ವಯಿಸುವದೆಂಬ ಮಾತು ಜೀವನದಲ್ಲಿ ಎಂದೂ ಆಗಲಾರದು. ಕಾಲ್ಪನಿಕ ಉದಾಹರಣೆಗೂ ಮತ್ತು ನಿಜವಾಗಿ ಘಟಿಸಿದ ಘಟನೆಗೂ ಒಂದುಗುರಿನಷ್ಟು ವ್ಯತ್ಯಾಸವಿದ್ದರೂ ಕೂಡ ಅದನ್ನು ಬಿಡಿಸುವ ರೀತಿಯು ತೀರ ಭಿನ್ನವಾಗಿರುತ್ತದೆ. ನಿಮ್ಮ ಅನುಭವಕ್ಕೆ ಬಂದ ಅಥವಾ ಬರಬಹುದಾದ ಘಟನೆಗಳ ವಿಷಯಕ್ಕೆ ಪ್ರಶ್ನೆಗಳು ಎಲ್ಲಿಯವರೆಗೆ ಇರುವದಿಲ್ಲವೊ ಅಲ್ಲಿಯವರೆಗೆ ಹೀಗೆ ಏನಾದರೂ ಆದರೆ ಅದಕ್ಕಾಗಿ ಸಿದ್ಧತೆ ಮಾಡುವದಕ್ಕಾಗಿ ಇವತ್ತಿನಿಂದ ಕಾಲ್ಪನಿಕ ಉದಾಹರಣೆಗಳನ್ನು ಬಿಡಿಸುವ ರೂಢಿಯನ್ನು ಕೆಡವಬಾರದೆಂದು ನಾನು ನಿಮಗೆ ಎಚ್ಚರಿಕೆ ಕೊಟ್ಟಿದ್ದೇನೆ. ಹೀಗೆ ಮಾಡುವದರಿಂದ ಸರಿಯಾದ ವೇಳೆಗೆ ಇಂಥ ಕಾಲ್ಪನಿಕ ಉದಾಹರಣೆಗಳ ಉತ್ತರಗಳು ಸಹಾಯಮಾಡುವ ಬದಲು ಬುದ್ಧಿಯನ್ನು ಕುಂಠಿತಮಾಡುತ್ತವೆ. ಇಂಥ ಬುದ್ಧಿಯು ಮಹತ್ವಪೂರ್ಣವಾದ ಕೆಲಸಮಾಡಲು ಅಯೋಗ್ಯವಾಗುತ್ತದೆ. ಇದಕ್ಕಿಂತಲೂ ಮೂಲ ಸಿದ್ಧಾಂತವನ್ನು ಚನ್ನಾಗಿ ತಿಳಿದುಕೊಳ್ಳುವದು, ಅದನ್ನು ಅರಗಿಸಿಕೊಳ್ಳುವದು ಮತ್ತು ಅದನ್ನು ತನ್ನ ಅಥವಾ ತಮ್ಮವರ ಜೀವನದಲ್ಲಿ ಆಚರಣೆಯಲ್ಲಿ ತರುವಾಗ ತಪ್ಪುಗಳಾದರೆ ಆಗಗೊಡುವದು ಹೆಚ್ಚು ಒಳ್ಳೆಯದು. ಅವುಗಳಿಂದ ಕಲಿಯಲಿಕ್ಕೆ ಸಿಗುವದು. ಆದರೆ ಆ ತತ್ವವನ್ನು ತಮಗಿಂತ ಹೆಚ್ಚು ತಿಳಿಯುವವರಿಗೆ ಕೂಡ ಕಠಿಣವಾದ ಆತಂಕಗಳ ನಿವಾರಣೆಗಾಗಿ ಕಾಲ್ಪನಿಕ ದೃಷ್ಟಾಂತಗಳನ್ನು ಬಿಡಿಸಿಕೊಳ್ಳಬಾರದು. ಹೀಗೆ ಮಾಡುವದರಿಂದ ಆತ್ಮವಿಶ್ವಾಸಕ್ಕೆ ಹಾನಿ ತಟ್ಟುತ್ತದೆ.

ಈ ಅನುಭವವಿದ್ದುದರಿಂದಲೇ ಗೀತಾಕಾರನು ಹತ್ತನೇ ಅಧ್ಯಾಯದ ಹತ್ತನೇ ಶ್ಲೋಕವನ್ನು ರಚಿಸಿದಂತೆ ಕಾಣುತ್ತದೆ. ಯಾರು ಆತನನ್ನು ಪ್ರೇಮಪೂರ್ವಕವಾಗಿ ಯಾವಾಗಲೂ ಭಜಿಸುತ್ತಾರೆಯೊ ಅವರಿಗೆ ಆತನು ಸರಿಯಾದ ಹೊತ್ತಿಗೆ ಯೋಗ್ಯ ಬುದ್ಧಿಯನ್ನು ಕೊಡುತ್ತಾನೆ ಎಂದು ದೇವರು ಅದರಲ್ಲಿ ಹೇಳಿದ್ದಾನೆ. ಇಲ್ಲಿ ದೇವರ ಸ್ಥಳದಲ್ಲಿ 'ಸತ್ಯ' ಶಬ್ದದ ಉಪಯೋಗ ಮಾಡಿ ನೋಡಿದರೆ ಅರ್ಥವು ತೀರ ಸ್ಪಷ್ಟವಾಗುತ್ತದೆ. ನಾನು ಹೇಳುವ ಭಾವವು ಈಗ ನಿಮಗೆ ತಿಳಿದಿರಬಹುದು. ನಿಮ್ಮ ಕಾಲ್ಪನಿಕ ಪ್ರಶ್ನೆಗಳು ನನಗೆ ಸೇರುವದಿಲ್ಲವೆಂದಲ್ಲ, ಆದರೆ ಈ ಪ್ರಶ್ನೆ ಕೇಳುವದಕ್ಕೆ ನಿಮಗೆ ಪ್ರೋತ್ಸಾಹನೆ ಕೊಟ್ಟರೆ ನಿಮ್ಮ ಅಕಲ್ಯಾಣವಾಗುವ ಭಯವಿದೆ. ಲಾಭವಂತೂ ಆಗುವದೇ ಇಲ್ಲವೆಂದು ನನ್ನ ತಿಳಿವಳಿಕೆ. ನಿಮ್ಮ ಬಲಾತ್ಕಾರದ ಪ್ರಶ್ನೆಯನ್ನೇ ತೆಗೆದುಕೊಳ್ಳಿರಿ. ಈ ಕಾಲ್ಪನಿಕ ಪ್ರಶ್ನೆಗೆ ಒಂದು ಉತ್ತರ ಕೊಟ್ಟ ಮೇಲೂ ಅದರಂಥದೇ ಇನ್ನೊಂದು ಘಟನೆಯಾದರೆ ಅದರ ಉತ್ತರವನ್ನು ತೀರ ಬೇರೆಯಾಗಿ ಕೊಡಬಲ್ಲೆನು ಮತ್ತು ಚನ್ನಾಗಿ ಅದರ ಸಮರ್ಥನೆಯನ್ನೂ ಮಾಡಿ ತೋರಿಸಬಲ್ಲೆನು. ಕಾಲ್ಪನಿಕ ಪ್ರಶ್ನೆ ಮತ್ತು ನಡೆದ ಘಟನೆಗಳ ನಡುವಿನ ಅಂತರವನ್ನು ತೋರಿಸಿಕೊಡಬಲ್ಲೆ. ಇದೆಲ್ಲವನ್ನು ನಾನು ಸಂಗಡಿಗರ ವಿಷಯದಲ್ಲಿ ನನಗೆ ಬಂದ ಅನುಭವಗಳ ಮೇಲಿಂದ ನಿಮಗೆ ಹೇಳುತ್ತಿದ್ದೇನೆ. ಇನ್ನು ಈ ವಿಷಯವನ್ನು ಹೆಚ್ಚಿಗೆ ಬೆಳೆಸುವದಿಲ್ಲ."

ಹುಡುಗರ ಪ್ರಶ್ನೆಗಳಲ್ಲಿ ಈ ಸಲವೂ ಒಂದು ಸುಂದರ ಪ್ರಶ್ನೆ ಇತ್ತು. ಮಂಗಲಾ ಕೇಳಿದ್ದಳು: "ಶೂನ್ಯವತ್ ಆಗಿರುವದರ ಅರ್ಥವೇನು?" ಅವಳಿಗೆ ಬಾಪೂ ಬರೆದರು: "ಶೂನ್ಯವತ್ ಆಗಿರುವದೆಂದರೆ ಉತ್ತಮವಾದುದನ್ನು ತೆಗೆದುಕೊಳ್ಳಲಿಕ್ಕೆ ಎಲ್ಲಕ್ಕೂ ಹಿಂದಿರುವದು, ಎಲ್ಲರ ಸೇವೆ ಮಾಡುವದು, ಉಪಕಾರದ ಅಪೇಕ್ಷೆ ಮಾಡದಿರುವದು ಮತ್ತು ಕಷ್ಟಸಹಿಸುವದರಲ್ಲಿ ಎರಡನೆಯವರೊಂದಿಗೆ ಮೇಲಾಟ ಮಾಡುವದು. ಈ ಪ್ರಕಾರ ಶೂನ್ಯವತ್ ಆಗಿರುವವನು ತನ್ನ ಕೆಲಸದಲ್ಲಿ ಮಗ್ನನಾಗಿಯೇ ಇರುವನು."

ಶಾರದೆಯು ಕೇಳಿದ್ದಳು: "ಮೂಲದಾಸನು ವಿಧವಾ ಸ್ತ್ರೀಯು ತನ್ನ ಹೆಂಡತಿಯೆಂದು ಹೇಳಿ ಅವಳನ್ನು ಉಳಿಸಿದ್ದು ಯೋಗ್ಯವಾಗಿತ್ತೆ? ವಿಧವೆಯನ್ನು ಕಾಪಾಡುವದಕ್ಕೆ ಕೂಡ ಸುಳ್ಳು ಮಾತಾಡಬಹುದೆ?" "ಬಾಬಾ ಮೂಲದಾಸನು ಹೇಳಿದನೆಂದು ಅನ್ನುವದು ನಿಜವಿದ್ದರೆ ಕೆಟ್ಟಮಾಡಿದನೆಂದು ಹೇಳಬಹುದು. ಇದರ ವಿಧವೆಯಾದ ಸ್ತ್ರೀಯದೂ ಕೆಡಕಾಯಿತು. ಎರಡನೆಯವರ ದುಃಖವನ್ನು ವಿಯ ಮಾಡಲಿಕ್ಕೆ ಸಹ ಸುಳ್ಳು ಹೇಳಲಾಗದು. ಈ ಪ್ರಕಾರ ದುಃಖವು ರೆದರು. ನಾಶವಾಗಲಾರದು."

ಮಗಳಿಗೂ,

. . . ಗೆ ಧಾರ್ಮಿಕ ವಾಚನವನ್ನೂ ಬಿಡುವ ಸಲಹೆಯನ್ನು ಕೊಡಲಾಗಿತ್ತು. ಅವರು ಅದರಂತೆ ವರ್ತಿಸುತ್ತಿದ್ದಾರೆ. ಅವರಿಗೆ ಮತ್ತೆ ಬರೆದರು : "ನಾನು ಹೇಳಿದ ಉಪಾಯವನ್ನು ಮನಸ್ಸಿನಿಂದ ಆಚರಿಸತೊಡಗಿದಂತೆ ನಿಮಗೆ ಶಾಂತಿ ಹೆಚ್ಚುವದು. ಕಲಿತುದದರ ಅದೃಶ್ಯಪ್ರಭಾವವು ಆಶ್ಚರ್ಯಜನಕವಾಗಿರುವದು. ನೀವು ಮೊದಲು ಎಂದೂ ಕಲಿಯದಿದ್ದವರಂತೆ ಇರತೊಡಗಿರಿ. ಎಷ್ಟು ಪಚನವಾಗಿರುವದೊ ಅಥವಾ ಅರಗಿರುವದೊ ಅಷ್ಟು ತನ್ನಷ್ಟಕ್ಕೆ ತಾನೇ ಕಾರ್ಯರೂಪದಲ್ಲಿ ಒಡೆದು ಪ್ರಕಟ-ವಾಗುವದು."

ಛಗನಲಾಲ ಜೋಶಿಯವರಿಗೆ ಬರೆದ ಪತ್ರದಲ್ಲಿ 'ಪಚನಮಾಡು' ಮತ್ತು 'ಜೀರ್ಣಮಾಡು' ಈ ಎರಡು ಶಬ್ದಗಳ ಭೇದವನ್ನು ತೋರಿಸಿದ್ದರು. "ಪಚನ-ವಾಗುವದೆಲ್ಲ ರಕ್ತ ಮುಂತಾದವುಗಳಲ್ಲಿ ಪರಿವರ್ತನ ಹೊಂದುವದಿಲ್ಲ, ಆದರೆ ಜೀರ್ಣ ವಾಗುವದೆಲ್ಲ ಶರೀರವನ್ನು ಘಟಿಸುವ ಅನೇಕ ತತ್ವಗಳಲ್ಲಿ ರೂಪಾಂತರವಾಗುತ್ತದೆ. ಇದೇ ಪ್ರಕಾರ ಓದಿದ್ದೆಲ್ಲ ಜೀರ್ಣವಾಗಲಿಕ್ಕೆ ಬೇಕು. ಗೊಬ್ಬರವು ವೃಕ್ಷದಲ್ಲಿ ಜೀರ್ಣವಾಗುತ್ತದೆ ಮತ್ತು ಅದರ ಪರಿಣಾಮವಾಗಿ ಫಲ ಬಿಡುತ್ತವೆ."

ದೂಧಿ ಬಹನರಿಗೆ : "ನಿಮ್ಮಿಂದಾದಷ್ಟೆ ಮಾಡಿರಿ. ನನಗೆ ಅಂಜಿ ಅಥವಾ ನಾಚಿಕೆಪಟ್ಟುಕೊಂಡು ಯಾವದನ್ನೂ ಮಾಡಬೇಡಿರಿ. ನನಗೆ ಧರ್ಮವೆಂದು ತಿಳಿದದ್ದನ್ನೇ ನಾನು ತೋರಿಸಿದ್ದೇನೆ. ಆದರೆ ಅದರ ಪಾಲನೆಯು ಶಕ್ತಿಗನುಸಾರ ವಾಗಿಯೇ ಆಗಬಲ್ಲದು ಮತ್ತು ನಾನು ಇಷ್ಟಪಟ್ಟಂತೆ ಆಗದಿದ್ದರೆ ಅದಕ್ಕಾಗಿ ದುಃಖ ಪಡುವ ಕಾರಣವಿಲ್ಲ. ನೀವು ದುಃಖಿತರಾದರೆ ನನಗೆ ಧರ್ಮವನ್ನು ಹೇಳಲಿಕ್ಕೆ ಸಂಕೋಚವಾಗುವದು."

. . . ರದಂತೂ ಪ್ರತಿವಾರ ಪ್ರಶ್ನೆ ಇದ್ದೇ ಇರುತ್ತದೆ. ಪ್ರಶ್ನೆ : ಬದ್ಧನ್ಯಾರು? ಉತ್ತರ : 'ನಾನು' ಇದಕ್ಕೆ ಅಂಟಿಕೊಂಡಿರುವವನು. (೨) ಮುಕ್ತಿಯ ಅರ್ಥವೇನು? ಉ : ರಾಗದ್ವೇಷಾದಿಗಳಿಂದ ಬಿಡುಗಡೆಯಾಗುವದು. (೩) ನರಕವೆಂದರೇನು? ಉ : ಅಸತ್ಯ. (೪) ಮುಕ್ತಿ ಕೊಡಿಸುವ ವಸ್ತು ಯಾವದು? ಉ : ಅಹಿಂಸೆ. (೫) ಮುಕ್ತದಶೆ ಯಾವದು? ಉ : ಯಾವಾಗಲೂ ರಾಗದ್ವೇಷಾದಿಗಳ ಅಭಾವ. ದ (೬) ನರಕದ ಮುಖ್ಯ ದ್ವಾರ? ಉ : ಅಸತ್ಯಾಚರಣೆ. (೭) ಪ್ರಶ್ನೆ ಮರೆತೆನು : ರಗಿಸಿ...ನರ ಉತ್ತರವೂ ಅಹಿಂಸೆ.

...ಲ್ಲಿ ತರ... ಪ್ರೇಮಾಬಹನಳ ಪತ್ರದಲ್ಲಿ ವ್ಯಕ್ತಿ ಅಥವಾ ಸಂಸ್ಥೆಯನ್ನು ಬಿಡುವ ತತ್ವವನ್ನು ...ಲಿಯಲಿಕ್ಕೆ ...ದರು. ಯಾವ—ವ್ಯಕ್ತಿ, ಸಮಾಜ ಅಥವಾ ಸಂಸ್ಥೆ—ದರಲ್ಲಿ ...ಗೆ ಕೂಡ ಕ...ಯು ಕಂಡಬರುತ್ತಿದೆಯೊ ಅದರಲ್ಲಿ ಪೂರ್ಣತೆಯನ್ನು ತರುವ ಪ್ರಯತ್ನ ...ಡಿಸಿಕೊಳ್ಳಬಾರದು ನಮ್ಮ ಕರ್ತವ್ಯವಾಗಿದೆ. ಆದರೆ ಗುಣಗಳಿಗಿಂತ ದೋಷಗಳೇ ಹೆಚ್ಚಾ-

ಗುತ್ತಿದ್ದರೆ ಆದರ ತ್ಯಾಗ—ಅಸಹಯೋಗ—ಧರ್ಮವಾಗಿದೆ. ಇದು ಶಾಶ್ವತ ತತ್ವವು.

ಬಾಪೂ ಸತ್ಯಕ್ಕೇ ದೇವರೆಂದು ಹೇಳುತ್ತಾರೆ. ಇವತ್ತು ಥಾಮಸ್ ಎ ಕೆಂಪಿಸನ ಈ ಉದ್ಗಾರಗಳನ್ನು ಓದಿದೆವು:

೪-೭-'೩೨

"O Truth! My God! Make me one with Thee in everlasting Charity. I am often times wearied with reading and hearing many things. In Thee is all I wish or long for. Let all teachers hold their peace, and all created things keep silence in Thy presence. Do Thou alone speak to me."

"ಏ ಸತ್ಯವೆ! ನನ್ನ ದೇವರೆ! ಶಾಶ್ವತ ದಯೆಯಲ್ಲಿ ನನ್ನನ್ನು ನಿನ್ನಲ್ಲಿ ಒಂದುಗೂಡಿಸಿಕೊ. ನಾನು ಮೇಲಿಂದ ಮೇಲೆ ಅನೇಕ ಸಂಗತಿಗಳನ್ನು ಓದಿ, ಕೇಳಿ ಬೇಸರಗೊಳ್ಳುತ್ತೇನೆ. ನಾನು ಇಷ್ಟ ಪಡುವದು ಮತ್ತು ನಾನು ಅಭಿಲಾಷಿಸುವದೆಲ್ಲವೂ ನಿನ್ನಲ್ಲಿ ತುಂಬಿದೆ. ನಿನ್ನ ಉಪಸ್ಥಿತಿಯಲ್ಲಿ ಎಲ್ಲ ಉಪದೇಶಕರು ಶಾಂತರಾಗಲಿ, ಎಲ್ಲ ಸೃಷ್ಟಿಯು ಮೌನವಾಗಿರಲಿ ಮತ್ತು ನೀನೊಬ್ಬನೇ ನನ್ನ ಸಂಗಡ ಮಾತಾಡು."

ಮುಂದೆ ಇನ್ನೊಂದು ಸ್ಥಳದಲ್ಲಿ ಮತ್ತೆ:

"Thou, oh Lord, My God, the eternal Truth speak to me."

"ಏ ದೇವರೆ, ನನ್ನ ಸ್ವಾಮಿಯೆ, ಸನಾತನ ಸತ್ಯವೆ ನನ್ನ ಸಂಗಡ ಮಾತಾಡು."

ಬಾಪೂ ದೇವರು ಶಬ್ದದ ಸ್ಥಳದಲ್ಲಿ ಸತ್ಯ ಹಾಕಿ ಅನೇಕ ಶ್ಲೋಕ ಮುಂತಾದವುಗಳನ್ನು ಓದಲಿಕ್ಕೆ ಹೇಳುತ್ತಾರೆ. ಈ ಸಾಧುವು ಸತ್ಯವನ್ನೇ ದೇವರೆಂದು ಹೇಳಿ ಸಂಬೋಧಿಸಿದ್ದಾನೆ.

ಥಾಮಸ್ ಎ ಕೆಂಪಿಸನ ಎಷ್ಟೋ ಸುವಚನಗಳನ್ನು ಭಗವದ್ಗೀತೆಯಿಂದ ತೆಗೆದುಕೊಂಡಂತೆ ಆನಿಸುತ್ತದೆ. '**ध्यायतो विषयान् पुंसः संगस्तेषूपजायते**' ಎಂಬ ಆನಿಷ್ಟ ಮಾಲಿಕೆಯ ಸಂಗಡ ತುಲನೆ ಮಾಡಿರಿ: .ಳಲ್ಲಿ

"Whenever a man desireth anything inordinately, stra ಸ್ಟ್ರಾರೆ.
way he is disquieted within himself . . . He is easily mo ನಂದರ
anger if any one thwarts him. And if he have par ಲಾದೇವಿಯ
inclination, forthwith he is burdened with remorse of ಪತ್ರ ಬರೆದರು.
for having gone after his passion which helpeth him n
the peace he looked for. It is resisting the passic ವರ ಮಗಳಿಗೂ,

serving them, that true peace of heart is to be found. Peace therefore is not in the heart of carnal man, not in the man who is devoted to outward things but in the fervent and spiritual man."

" ಯಾವದಾದರೂ ಅನುಚಿತ ಇಚ್ಛೆಯನ್ನು ಮಾಡಿದಾಗ ಮನುಷ್ಯನು ಅಸ್ವಸ್ಥನಾಗುತ್ತಾನೆ. . . . ಯಾರಾದರೂ ಅವನ ಕಾರ್ಯದಲ್ಲಿ ಅಡ್ಡ ಬಂದರೆ ಅವನಿಗೆ ಸಿಟ್ಟು ಬರುತ್ತದೆ. ಅವನು ತನ್ನ ವಿಕಾರಗಳಂತೆ ನಡೆಯಹತ್ತಿದರೆ ವಿಷಯುಗಳ ಬೆನ್ನು ಹತ್ತಬೇಕಾಗುತ್ತದೆ. ಅದರಿಂದ ಅವನಿಗೆ ಇಚ್ಛಿಸಿದ ಶಾಂತಿಯು ದೊರೆಯುವದಿಲ್ಲ. ಆದುದರಿಂದ ಅವನು ಅಂತರಾತ್ಮನ ಪಶ್ಚಾತ್ತಾಪದ ಭಾರದಿಂದ ಹತ್ತಿಕ್ಕಲ್ಪಡುತ್ತಾನೆ. ಅಂತರಾತ್ಮನ ನಿಜವಾದ ಶಾಂತಿಯು ವಿಷಯುಗಳ ಸೇವನೆಯಿಂದಲ್ಲ ಆದರೆ ಅವುಗಳ ಶಮನದಿಂದ ದೊರೆಯಬಲ್ಲದು. ಆದುದರಿಂದ ವಿಷಯಾಸಕ್ತ ಮನುಷ್ಯನ ಹೃದಯದಲ್ಲಿ ಎಂದೂ ಶಾಂತಿಯು ಇರುವದೇ ಇಲ್ಲ. ಇದೇ ಪ್ರಕಾರ ಬಾಹ್ಯವಸ್ತುಗಳಲ್ಲಿಯೇ ಮೋಹಿತನಾದವನ ಹೃದಯದಲ್ಲಿಯೂ ಶಾಂತಿಯಿರುವದಿಲ್ಲ. ಭಕ್ತರು ಮತ್ತು ಆಧ್ಯಾತ್ಮಿಕ ಮನುಷ್ಯರಿಗೇ ಶಾಂತಿ ದೊರೆಯುತ್ತದೆ. "

**'नास्ति बुद्धिरयुक्तस्य, न चायुक्तस्य भावना, न चाभावयतः शांतिः'**

*   *   *

ರೈಹಾನಾಬಹನರು 'ಜಫರ'ದ ಒಂದು ಗಜಲ (ಉರ್ದು ಕವಿತೆ)ನ್ನು ಬಾಪೂಗೆ ಕಳಿಸಿದ್ದರು. ಅದರಲ್ಲಿ ಈ ಸುಂದರವಾದ ಪಂಕ್ತಿಯು ಬರುತ್ತದೆ :

'ज़फर आदमी उस को न जानियेगा
हो वो कैसा ही साहेबे फ़हमोज़का
जिसे ऐशमें यादे **खुदा** न रही
जिसे तैशमें खौफे **खुदा** न रहा'

'ಮನುಷ್ಯನು ಎಷ್ಟೇ ಬುದ್ಧಿವಂತನಿರಲಿ, ಆದರೆ ಅವನಿಗೆ ಐಷ–ಆರಾಮದಲ್ಲಿ ದೇವರ ಸ್ಮರಣೆಯಾಗದಿದ್ದರೆ ಮತ್ತು ಸಿಟ್ಟಿನಲ್ಲಿ ದೇವರ ಅಂಜಿಕೆಯಿರದಿದ್ದರೆ ಅವನ್ನು ಮನುಷ್ಯನೆಂದು ತಿಳಿಯಲಾಗದು.' ಎಂದು ಜಫರನ್ನು ಹೇಳುತ್ತಾನೆ.

ಬಾಪೂಗೆ ನಾನು ಹೇಳಿದೆ : " ಶೌಕತಅಲ್ಲಿಯವರ ಬಾಯಿಂದ ಈ ಪಂಕ್ತಿ ಎಷ್ಟೋ ಸಲ ಕೇಳಿದ್ದೇನೆ. " ಬಾಪೂ ಹೇಳಿದರು : " ಏಕೆ ಕೇಳಿರಲಿಕ್ಕಿಲ್ಲ? ಉರ್ದು ಕವಿಗಳ ಉತ್ತಮ ವಚನಗಳು ಪಾಠ ಬರುತ್ತವೆ. ಈ ವಚನಗಳನ್ನು ... ಮತ್ತು ಆ ಕಾಲದಲ್ಲಿ ಮಾತಾಡುತ್ತಿರುವಾಗ ಅವರು ಪ್ರಾಮಾಣಿಕ ... ಪ್ರಾಮಾಣಿಕರಿದ್ದಾರೆ. ಅವರು ಸುಳ್ಳುಮಾತಾಡುತ್ತಿದ್ದರು

ಅಥವಾ ಮೋಸಗೊಳಿಸುತ್ತಿದ್ದರೆಂದು ನನಗೆ ಎಂದೂ ಅನಿಸಲಿಲ್ಲ. ಹಿಂದುಗಳು ವಿಶ್ವಾಸಪಾತ್ರರಿಲ್ಲ ಮತ್ತು ಅವರ ಸಂಗಡ ಹೋರಾಡಿ ತೆಗೆದುಕೊಳ್ಳುವದರಲ್ಲಿಯೇ ಜಾತಿಯ ಹಿತವಿದೆಯೆಂದು ಇವತ್ತು ಅವರಿಗೆನಿಸುತ್ತದೆ. ಈ ಮನೋದಶೆಯು ಕೆಟ್ಟದು. ಆದರೆ ಜಾತಿಯ ಸೇವೆಯು ಅವರ ಹೃದಯದಲ್ಲಿದೆ, ಅವರಲ್ಲಿ ಯಾವ ಸ್ವಾರ್ಥದ ಉದ್ದೇಶವೂ ಇಲ್ಲ. ಇಂಥ ಪ್ರಾಮಾಣಿಕ ಜನರು ಅನೇಕರಿದ್ದಾರೆ— ಉದಾಹರಣೆಗಾಗಿ ಸ್ಯಾಮ್ಯುಅಲ್ ಹೋರ. ನನಗೆ ನಿಮ್ಮೊಳಗಿನ ಯಾರ ಶಕ್ತಿಯ ಮೇಲೂ ವಿಶ್ವಾಸವಿಲ್ಲೆಂದು ಅವನು ನಮ್ಮೆಲ್ಲರ ಮೋರೆಯ ಮುಂದೆ ಹೇಳಿದ್ದನು. ಎಲ್ಲಕ್ಕೂ ಹೆಚ್ಚು ಸ್ಪಷ್ಟ ಮಾತಾಡುವವನು ಬಾಲ್ಡವಿನ್ನನಿದ್ದಾನೆ. ಇಂಗ್ಲೀಷ ರಾಜ್ಯದಿಂದ ನಮಗೆ ಯಾವ ಲಾಭವೂ ಆಗಿಲ್ಲೆಂದು ನನ್ನ ಅಭಿಪ್ರಾಯವಿದೆಯೆಂದು ನಾನು ಅವನಿಗೆ ಹೇಳಿದೆನು. ಆಗ ಅವನು ಹೇಳಿದನು—I must tell you that I am proud of my people's record in India. ( ನಮ್ಮ ಜನರು ಹಿಂದುಸ್ತಾನದಲ್ಲಿ ಮಾಡಿದ್ದರ ವಿಷಯಕ್ಕೆ ನನಗೆ ಅಭಿಮಾನವಿದೆಯೆಂದು ನಾನು ಹೇಳಬಯಸುತ್ತೇನೆ.) ಮತ್ತು ಇದರಲ್ಲಿ ಆಶ್ಚರ್ಯವಾದರೂ ಏನು ? ಒಬ್ಬ ಸಾಮಾನ್ಯ ಟಾಮಿ ( ಇಂಗ್ಲೀಷ ಸಿಪಾಯಿ ) ಕೂಡ ನಮಗಿಂತ ಹೆಚ್ಚಿನವನಿದ್ದಾನೆಂದು ರಾಮಕೃಷ್ಣ ಭಂಡಾರಕರರು ಅಕ್ಷರಶಃ ತಿಳಿಯುತ್ತಿದ್ದರು. ”

ಇವತ್ತು ಬಾಪೂ ನಾಲ್ಕು ಪತ್ರಗಳನ್ನು ಬರೆದರು. ಅವುಗಳಲ್ಲಿ ಮೂರು ಸಾಂತ್ವನಪರ ಪತ್ರಗಳಿದ್ದವು. ಅಲ್ಲದೆ ಮತ್ತೆ ಎರಡು ಪತ್ರಗಳು ಮತ್ತು ಎರಡು ತಾರುಗಳು ಇದ್ದವು! ಹೀಗೆ ನೋಡಿದರೆ ಸಾವು ಇಲ್ಲದಂಥ

೫-೭-'೩೨

ಒಂದು ಕ್ಷಣವಾದರೂ ಇರಬಹುದೆ? ಈ ಸಾಲುಗಳನ್ನು ಬರೆಯುತ್ತಿರುವಾಗ ಕೂಡ ಎಷ್ಟೋ ಮರಣಗಳು ಆಗುತ್ತಿರಬಹುದು. In the midst of life we are in death— ಜೀವನವೂ ಮರಣವೂ ಕೂಡಿಯೇ ಸಾಗುತ್ತವೆ. ಜೇಮ್ಸ್ ಬೆರಿಯ ಈ ವಾಕ್ಯಗಳು ಈ ಅರ್ಥದಲ್ಲಿ ನಿಜವಾಗಿವೆ. ಆದರೆ ನಾವು ಗುರುತಿಸುವವರ ಅಥವಾ ಸ್ವಜನರೆಂದು ತಿಳಿಯುವವರ ಮರಣದ ಸುದ್ದಿ ಬಂದಾಗಲೇ ಮರಣದ ನಿತ್ಯತೆಯ ಬಗ್ಗೆ ಜಾಗ್ರತರಾಗುತ್ತೇವೆ. ವೇದಗಳಲ್ಲಿ ಆತ್ಮಕ್ಕೆ ಒಂದೇ ಕಾಲಕ್ಕೆ ಮೃತ್ಯು ಮತ್ತು ಅಮೃತವೆಂದು ಎರಡನ್ನೂ ಹೇಳಿದ್ದಾರೆ. ಅದರಲ್ಲಿಯೂ ಇದೇ ಮಾತಿನ ಪ್ರತೀತಿಯಾಗುತ್ತದೆ. ಭಾಯಿ ಪರಮಾನಂದರ ಪತ್ನಿ ತೀರಿಕೊಂಡಮೇಲೆ ಪರಮಾನಂದರಿಗೂ ಮತ್ತು ಸರಲಾದೇವಿಯ ಮಾತಾಜಿಯವರ ಮೃತ್ಯುವಾದ ಮೇಲೆ ಸರಲಾದೇವಿಯವರಿಗೂ ಪತ್ರ ಬರೆದರು. ರಾಜಗೋಪಾಲಾಚಾರ್ಯರ ಅಳಿಯನು ತೀರಿಕೊಂಡ ಮೇಲೆ ಅವರ ಮಗಳಿಗೂ,

ರಾಜಾಜಿಗೂ ತಾರು ಕೊಟ್ಟರು. ರಾತ್ರಿ ಮಲಗುವ ಮೊದಲು ಹೇಳಹತ್ತಿದರು: "ಈ ಹುಡಿಗೆಯ ವಯಸ್ಸು ಎಷ್ಟು?" ನಾನು ಹೇಳಿದೆ: "ಇಪ್ಪತ್ತೈದು ಇರಬಹುದು." ಬಾಪೂ ಅಂದರು: "ಇವಳ ಲಗ್ನವನ್ನು ಮತ್ತೆ ಯಾಕೆ ಮಾಡಿಸಬಾರದು?" ಪುರುಷರ ವಿಷಯದಲ್ಲಿ ಬಾಪೂ ಎರಡನೇ ಸಾರೆ ಲಗ್ನ ಮಾಡಿಕೊಳ್ಳಬಾರದೆಂದು ಹೇಳುತ್ತಿರುವಾಗ ಸ್ತ್ರೀಯರ ವಿಷಯಕ್ಕೆ ಬಾಪೂಗೆ ಇದು ಕೂಡಲೇ ಹೊಳೆಯುತ್ತಿದೆ. ಇದು ಬಾಪೂಗೆ ಸ್ತ್ರೀಯರ ವಿಷಯಕ್ಕಿರುವ ತೀವ್ರ ಭಾವನೆಯ ಪರಿಣಾಮವಾಗಿದೆ. ವಲ್ಲಭಭಾಯಿ ಅಂದರು: "ರಾಜಗೋಪಾಲಾಚಾರಿಯವರು ದೇವದಾಸ ಮತ್ತು ಲಕ್ಷ್ಮಿಯ ವಿವಾಹವನ್ನು ಮಾಡಿಸಿದ್ದೇನು ಕಡಿಮೆಯಾಯಿತೆ? ಈ ಎರಡನೇ ಹೆಜ್ಜೆಯನ್ನಿಡಲಿಕ್ಕೆ ಅವರಿಗೆ ಧೈರ್ಯವಿರಲಿಕ್ಕಿಲ್ಲ." ಬಾಪೂ: "ವಿಧವಾ ವಿವಾಹದಲ್ಲಿ ಅವರ ವಿಶ್ವಾಸವಿಲ್ಲೆಂಬ ಮಾತೇನೂ ಇಲ್ಲ." ವಲ್ಲಭಭಾಯಿ: "ಈ ಹುಡಿಗೆಯ ಇಚ್ಛೆಯೂ ಇರಲಿಕ್ಕಿಲ್ಲ." ಬಾಪೂ: "ಈ ಕಾಲದ ಹುಡಿಗೆಯರ ವಿಷಯದಲ್ಲಿ ಹೀಗೇನೂ ಹೇಳಲಿಕ್ಕೆ ಬರುವದಿಲ್ಲ."

ದೇವದಾಸನಿಗೆ ಈ ಮೃತ್ಯುವಿನ ವಿಷಯಕ್ಕೆ ಬರೆದರು: "ರಾಜಾಜಿಗೆ ಆಘಾತವಾಗಬಹುದು. ಆದರೆ ಅವರ ಸಹನ ಶಕ್ತಿಯು ದೊಡ್ಡದಿದೆ. ಆದುದರಿಂದ ಏನೂ ಚಿಂತೆ ಎನಿಸುವದಿಲ್ಲ. ಕೇವಲ ಸಾವಿನ ಪರಿಣಾಮವು ನನ್ನ ಮೇಲೆ ಅಷ್ಟೊಂದು ಆಗುವದಿಲ್ಲ. ಏನಾದರೂ ಆಗುತ್ತಿದ್ದರೆ ಅದು ಆಪ್ತೇಷ್ಟರ ದುಃಖದ ವಿಷಯಕ್ಕೆ. ಸಾವಿನ ಸಲುವಾಗಿ ದುಃಖ ಮಾಡುವದರ ಸಮಾನ ಅಜ್ಞಾನವು ಬೇರೆ ಯಾವದಿದೆ?"

. . . ಪತ್ರ ಬರೆದರು: "ಜಗತ್ತಿನಲ್ಲಿ ಉತ್ಪಾದನೆಯು ಅಪಾರವಾಗಿದೆ. ಆದರೆ ಹೊಟ್ಟೆಗಿಲ್ಲದೆ ಸಾಯುವದೂ ಅಷ್ಟೇ ಆಗಿದೆ. ಇದನ್ನು ನೋಡಿ ಖಾದಿಯ ಕಡೆಗೆ ಒಲಿಯುತ್ತಿದ್ದೇನೆ. ಈ ವಿಷಯಕ್ಕೆ ಬರೆಯಬೇಕೆಂದೂ ಮನಸ್ಸಾಗುತ್ತದೆ. ಆದರೆ ಗಿರಣಿಗಳನ್ನು ನಡೆಸುತ್ತ ಮತ್ತು ಸಕ್ಕರೆಯ ಕಾರಖಾನೆಗಳನ್ನು ನಡೆಸುತ್ತ ಖಾದಿ ಮತ್ತು ಬೆಲ್ಲದ ವಿಷಯಕ್ಕೆ ಬರೆಯುವದು ಎಷ್ಟೋ ಜನರಿಗೆ ಅಸಂಗತವೆನಿಸುವದು" ಬಾಪೂ ಹಿಂದಿಯಲ್ಲಿ ಬರೆದರು: "ಖಾದಿಯ ಸಂಗಡವೇ ಇವತ್ತು ನಡೆಯುತ್ತಿರುವ ಗಿರಣಿಗಳು ಇನ್ನೂ ಕೆಲವು ಕಾಲ ನಡೆಯುವವು. ಕೊನೆಗೆ ಎರಡರ ನಡುವೆ ವಿರೋಧವಿದ್ದೇ ಇದೆ. ಯಾಕಂದರೆ ಪ್ರತಿಯೊಂದು ಗ್ರಾಮದಲ್ಲಿ ಖಾದಿಯುಂಟಾಗಬೇಕೆಂಬುದೇ ನಮ್ಮ ಆದರ್ಶವಾಗಿದೆ. ಈ ಪ್ರಕಾರ ಅದು ಪ್ರತಿಯೊಂದು ಗ್ರಾಮದಲ್ಲಿ ತಯಾರಾಗಹತ್ತಿದಾಗ ಹಿಂದುಸ್ತಾನದ ಸಲುವಾಗಿ ಗಿರಣಿಯ ಆವಶ್ಯಕತೆ ಉಳಿಯುವದಿಲ್ಲ. ಆದರೆ ಇವತ್ತು ನೀವು ಎರಡನ್ನೂ ಜೊತೆ ಜೊತೆಗೇ ಮಾಡಬಹುದು ಮತ್ತು ಸತ್ಯವನ್ನು ಪ್ರದರ್ಶಿಸುವದಕ್ಕಾಗಿ ಆದರ್ಶವನ್ನೂ ಜನರೆದುರಿ

ಗಿಡಬೇಕು. ಟೀಕೆಮಾಡುವವರು ಟೀಕಿಸುತ್ತಲೇ ಇರುವರು. ಅದಕ್ಕೆ ಏನೂ ಉಪಾಯವಿಲ್ಲ. ಬೆಲ್ಲದ ವಿಷಯಕ್ಕೆ ನನಗೆ ಪೂರ್ಣಜ್ಞಾನವಿಲ್ಲ. ಸಕ್ಕರೆ ಮಾಡುವದಕ್ಕಾಗಿ ಯಾವಾಗಲೂ ಗಿರಣಿಯ ಅವಶ್ಯಕತೆಯಿರುವದೆಂದು ನನ್ನ ಕಲ್ಪನೆ. ಹಳ್ಳಿಗಳಲ್ಲಿ ಸಕ್ಕರೆಯು ಸುಲಭ ರೀತಿಯಿಂದ ಆಗಲಾರದು ಅಥವಾ ಪ್ರತಿಯೊಂದು ಹಳ್ಳಿಯಲ್ಲಿ ಕಬ್ಬು ಬೆಳೆಯುವದಿಲ್ಲ. ಈ ಕಾರಣದಿಂದ ಬೆಲ್ಲ ಮಾಡುವ ಉದ್ಯೋಗವು ಸರ್ವ ವ್ಯಾಪಕವಾಗಲಾರದು. ಇದರಲ್ಲಿ ನನ್ನದೇನಾದರೂ ತಪ್ಪು ಇರುವ ಸಂಭವವಿದೆ. ಏನೇ ಇರಲಿ ಗಿರಣಿ ಮತ್ತು ಖಾದಿಯ ಕೆಲಸಗಳನ್ನು ಒಬ್ಬನೇ ಮನುಷ್ಯ ಮಾಡಬಲ್ಲನಾದರೆ ಬೆಲ್ಲ ಮತ್ತು ಗಿರಣಿ ಸಕ್ಕರೆಯ ಕೆಲಸವನ್ನು ಅವಶ್ಯಮಾಡಬಲ್ಲನು. ನಾಣ್ಯ ಶಾಸ್ತ್ರದ ಅಭ್ಯಾಸವನ್ನು ನಾನು ಮಾಡುತ್ತ ಹೋದಷ್ಟು ಜನರ ಕಂಗಾಲತೆಯನ್ನು ದೂರಮಾಡುವದಕ್ಕೆ ಈ ಪುಸ್ತಕಗಳಲ್ಲಿ ಬರೆದ ಉಪಾಯವು ಅಲ್ಲವೇ ಅಲ್ಲವೆಂಬ ನನ್ನ ವಿಶ್ವಾಸವು ದೃಢವಾಗುತ್ತ ನಡೆದಿದೆ. ಉತ್ಪಾದನೆ ಮತ್ತು ವ್ಯಯ ಸ್ವಾಭಾವಿಕವಾಗಿ ಜೊತೆ ಜೊತೆಗೆ ನಡೆಯುವಂಥ ಯೋಜನೆಯನ್ನು ತಯಾರಿಸುವದೇ ಉಪಾಯವಾಗಿದೆ. ಆ ಯೋಜನೆಯು ಹಳ್ಳಿಗಳ ಉದ್ಯೋಗದ ಪುನರುದ್ಧಾರವೇ ಆಗಿದೆ."

ನಾನು ಬಾಪೂ ಅವರಿಗೆ ಕೈಸರಲಿಂಗನ ಪುಸ್ತಕದಲ್ಲಿಯ ಇಸ್ಲಾಮುದ ವಿಷಯಕ್ಕಿದ್ದ ವಿಚಾರಗಳನ್ನು ಓದಲಿಕ್ಕೆ ಹೇಳಿದೆ. ಬಾಪೂ ಹೇಳಿದರು: "ಇಸ್ಲಾಮದ ಶಕ್ತಿಯು ಅದರ ಏಕೇಶ್ವರವಾದದಲ್ಲಿಯಾಗಲಿ ಅಥವಾ ಅದರ ಬಂಧುತ್ವದಲ್ಲಿಯಾಗಲಿ ಇರುವದಿಲ್ಲ—ಯಾಕಂದರೆ ಅದರ ಬಂಧುತ್ವವು ಸುಳ್ಳು ಇರುತ್ತದೆ—ಆದರೆ ಅದರ ಶಕ್ತಿಯು ಆ ಧರ್ಮದ ಬಗ್ಗೆ ಇರುವ ಶ್ರದ್ಧೆಯಲ್ಲಿದೆ. ಪ್ರತಿಯೊಬ್ಬ ಮುಸಲ್ಮಾನನಿಗೆ ತನ್ನ ಧರ್ಮದ ವಿಷಯದಲ್ಲಿ ಒಂದು ಪ್ರಕಾರದ ಅಚಲವಾದಶ್ರದ್ಧೆಯಿದೆ. ಅದರ ಶಕ್ತಿಯು ಇದರಲ್ಲಿಯೇ ಇದೆ."

೬–೭–'೩೨

ಚಿಂತಾಮಣಿಯವರು ಹೋರನ ಪ್ರಕಟನೆಯ ವಿರುದ್ಧ ಸಾಕಷ್ಟು ವಿರೋಧವನ್ನು ಸಂಘಟಿತ ಮಾಡಿದ್ದಾರೆಂದು ಗೊತ್ತಾಗುತ್ತದೆ. ಇದರಲ್ಲಿ ಮಹಮ್ಮದ ಶಹೀದ ಅಲ್ಲಿಯವರ (ಲಖನೌ) ಪ್ರಕಟನೆಯು ಲಕ್ಷ್ಯವನ್ನೆಳೆಯುವಂತಹದಾಗಿದೆ. ಅವರು ಟೋರಿ ಜನರಿಗೆ ಸಂಪೂರ್ಣ ತಲೆ ಬಾಗಿಸುವ ಮ್ಯಾಕ್ಡೋನಲ್ಡರ ಧೋರಣೆಯ ವಿಷಯದಲ್ಲಿ 'ಸಂಡೆ ಎಕ್ಸಪ್ರೆಸ್' ದೊಳಗಿಂದ ಉದ್ಧೃತ ಮಾಡಿದ್ದಾರೆ:

"In the meantime Mr. Mc. D. has taken at one gulp the whole of the Tory Indian policy. It is not even Mr. Baldwin's

Tory Indian policy, which Mc. D. has taken. Not at all; it is the Indian policy of the very heart of the Conservative Party.'

"ಈ ಮಧ್ಯದಲ್ಲಿ ಮಿ. ಮ್ಯಾಕ್ಡೊನಲ್ಡರು ಹಿಂದುಸ್ತಾನದ ವಿಷಯಕ್ಕಿರುವ ಟೋರಿ ಧೋರಣೆಯನ್ನು ಒಂದೇ ಗುಟುಕಿನಲ್ಲಿ ಇಳಿಸಲು ಪ್ರಾರಂಭಮಾಡಿದ್ದಾರೆ. ಮಾಕ್ಡೋನಲ್ಡರು ಅನುಸರಿಸಿದ ಧೋರಣೆಯು ಬಾಲ್ಡ್ವಿನ್‌ರ ಮುಂದಗಾಮಿ ಧೋರಣೆಯೂ ಇಲ್ಲ. ಎಷ್ಟೆಷ್ಟೂ ಇರುವದಿಲ್ಲ; ಅದು ಕಾಂರ್ಝರ್ವ್ಹೇಟಿವ್ಹ ಪಕ್ಷದ ಹೃದಯದಲ್ಲಿ ಮನೆಮಾಡಿದ ಧೋರಣೆಯಾಗಿದೆ." ಇದನ್ನು ಉದ್ಧೃತಮಾಡಿ ಹೇಳಿದರು: "ಸರಕಾರದ ಸಂಗಡ ಅಸಹಕಾರ ಮಾಡಿದ ಮೇಲೆ ಏನು ಮಾಡಿದಿರಿ ಎಂದು ನೀವು ಕೇಳುತ್ತೀರಿ. ನನ್ನ ಉತ್ತರ: ಆಕಾಶಕಡಿದುಕೊಂಡು ಬಿದ್ದರೂ ಹಿಂದುಸ್ತಾನದ ಮಾನವು ಮಣ್ಣುಪಾಲಾಗಬಾರದು."

'ಹಿಂದೂ' ದಲ್ಲಿ ರಂಗಾಚಾರಿಯವರ ಹೇಳಿಕೆ ಬಂದಿದೆ. ಅದು ಕೂಡ ಒಳ್ಳೇ ಕಠೋರವಿದೆ. ಉದಾರಮತವಾದಿಗಳ ವಿರುದ್ಧ: "ಸಪ್ರು ಮತ್ತು ಜಯಕರರು ಕೂಡಿ ತೆಗೆದ ಹೇಳಿಕೆಯಲ್ಲಿ ಅಥವಾ ಶಾಸ್ತ್ರೀಯವರ ಹೇಳಿಕೆಯಲ್ಲಿ ಎಲ್ಲಿಯೂ ಈ ಆರ್ಡಿನನ್ಸ ರಾಜ್ಯದ ವಿಷಯಕ್ಕೆ ಏನೂ ಹೇಳಿಲ್ಲ. . . . ಈ ಸಮಯವು ಶಬ್ದಗಳನ್ನು ತೂಗಿ ನೋಡುವಂತಹದಾಗಲಿ ರಾಜಕಾರಣದ ಆಟವನ್ನಾಡುವಂತಹದಾಗಲಿ ಆಗಿರುವದಿಲ್ಲ."

ಗಾಂಧೀಯವರ ಸಂಗಡ ಸಹಕಾರ ಮಾಡಿದ ಹೊರತು ಯಾವದೇ ರೀತಿಯಿಂದ ಹೊಸ ಘಟನೆಯಾಗಲಾರದು. ರಂಗಾಚಾರಿ ಮೊದಲಾದವರು ಇವತ್ತು ಒಮ್ಮಿಂದೊಮ್ಮೆಲೇ ಹೇಗೆ ಜಾಗ್ರತರಾದರು ಎಂದು ಬಾಪೂರನ್ನು ಕೇಳಿದೆ. ಬಾಪೂ ಹೇಳಿದರು: "ರಂಗಾಚಾರಿಯವರಂತೂ ಈ ಪ್ರಕಾರದವರಿದ್ದೇ ಇದ್ದಾರೆ. ನಿಜವಾಗಿ ಶೂರನಿದ್ದಾನೆ. ಹಾಗೆ ನೋಡಿದರೆ ರಂಗಾಚಾರಿ ಮತ್ತುಪೈಟ್ರೊ ಇಬ್ಬರಿಗೂ ಏನಾದರೂ ನಿರಾಶೆಯಾಗಿರಬಹುದು. ಆದುದರಿಂದ ಅವರು ಇಷ್ಟು ಮಾತಾಡತೊಡಗಿದ್ದಾರೆ."

ವಲ್ಲಭಭಾಯಿ: "ಏನೇ ಆಗಲಿ ಮ್ಯಾಕ್ಡೋನಲ್ಡನು ಎಲ್ಲವನ್ನೂ ನುಂಗಿಬಿಡುವನು. ಪಂಚರ ನಿರ್ಣಯವೂ ನಮ್ಮ ವಿರುದ್ಧವೇ ಆಗುವದು."

ಬಾಪೂ: "ಮ್ಯಾಕ್ಡೋನಲ್ಡನು ವಿರೋಧ ಮಾಡುವನೆಂಬ ಆಶೆ ನನಗಿನ್ನೂ ಇದೆ."

ವಲ್ಲಭಭಾಯಿ: "ಇಲ್ಲರಿ. ಅವನೇನು ವಿರೋಧಮಾಡುತ್ತಾನೆ! ಇವರೆಲ್ಲರೂ ತೀರ ನಾಚಿಕೆ ಬಿಟ್ಟು ತಲೆತಗೆದು ನಿಂತ ಜನರಿದ್ದಾರೆ."

ಬಾಪೂ: "ಆದರೂ ಈ ಮನುಷ್ಯನಿಗೆ ಸ್ವಂತದ ಸಿದ್ಧಾಂತವಿದೆ."

ವಲ್ಲಭಭಾಯಿ: "ಸಿದ್ಧಾಂತವಿದ್ದರೆ ಈ ಪ್ರಕಾರ ಟೋರಿ ಜನರ ಕೈಯೊಳಗೆ

ಮಾರುಹೋಗುವನೆ? ದೇಶದ ಮೇಲಿನ ಅಧಿಕಾರ ಬಿಡುವ ಇಚ್ಛೆ ಅವನಿಗೆ ಇರುವದಿಲ್ಲ."

ಬಾಪೂ: "ಅಧಿಕಾರ ಬಿಡುವದಿರುವದಿಲ್ಲ. ಆದರೆ ಇದರಲ್ಲಿ ಅವನ ಸ್ವಾರ್ಥ ವಿಲ್ಲ. ಕೇವಲ ಲಾಸ್ಕಿ, ಹೊರೆಬಿನ್ ಮತ್ತು ಬ್ರಾಕ್‌ವೇರಂಥ ಕೆಲವು ಜನರ ಹೊರ ತಾಗಿ ಅಧಿಕಾರ ಬಿಡುವದನ್ನು ಯಾರೂ ಇಚ್ಛಿಸುವದಿಲ್ಲ. ಬೆನ್, ಲೀಜ, ಸ್ಮಿಥ್ ಮುಂತಾದವರೆಲ್ಲ ಮ್ಯಾಕ್ಡೊನಲ್ಡರಂತೆಯೇ ಇದ್ದಾರೆ. ನಾನು ಹೇಳುವದಿಷ್ಟೆ: ಈ ಮನುಷ್ಯನು ದೇಶದ ಹಿತ ನೋಡಿ ಟೋರಿಗಳಲ್ಲಿ ಕೂಡಿದ್ದಾನೆ. ಈಗ ಪಂಚರು ನಿರ್ಣಯ ಕೊಡುವದನ್ನು ತಡೆ ಹಿಡಿದಿದ್ದಾನೆ. ಅವನು ಇಡೀ ಜೀವನತತ್ವವನ್ನು ಮಣ್ಣುಗೂಡಿಸಲಾರ."

ನಾನು: "ಹಾಗಾದರೆ ಮುಸಲ್ಮಾನರಿಗೆ ಪ್ರತ್ಯೇಕ ಮತಾಧಿಕಾರವನ್ನು ಕೊಡ ಗೊಡುವದಿಲ್ಲವೇ?"

ಬಾಪೂ: "ಇದನ್ನು ಕೊಡಗೊಡುವನು, ಆದರೆ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತಾಧಿಕಾರವನ್ನು ಸಹಿಸಲಾರ."

ನಾನು: "ನಿಜವಾಗಿಯೂ ಅವನಿಗೆ ಈ ಮಾತಿನ ಅರ್ಥವಾಗಿದೆಯೆ?"

ಬಾಪೂ: "ನಿಸ್ಸಂದೇಹವಾಗಿ, ಅವನಿಗೆ ಎಲ್ಲವೂ ತಿಳಿಯುತ್ತದೆ. ಯಾವನಿಗೆ ಸಾಯ್‌ಮನ್ ಕಮಿಶನ್ ಅರ್ಥವಾಯಿತೊ ಅವನಿಗೆ ಇದರ ಅರ್ಥವಾಗುವದಿಲ್ಲವೆ? ನಾನು ನಿಮಗೆ ಆರ್ಡಿನನ್ಸ ಹೊರಡಿಸಗೊಟ್ಟೆನು, ಹೇಳಿಕೆಗಳನ್ನು ಕೊಡಗೊಟ್ಟೆನು, ಆದರೆ ಇನ್ನು ನಾನು ನಿಮ್ಮ ಸಂಗಡ ಹೆಚ್ಚು ಮುಂದುವರಿಯಲಾರೆ ಎಂದು ಅವನು ಹೇಳುವನು. ಆದುದರಿಂದಲೇ ಅವನು ಇದುವರೆಗೆ ನಿರ್ಣಯವನ್ನು ತಡೆಹಿಡಿದಿದ್ದಾನೆ. ಹೋರನು ಏನು ಮಾಡಿದರೂ ನನಗೆ ಆಶ್ಚರ್ಯವಾಗಲಿಕ್ಕಿಲ್ಲ. ಅವನಿಗಂತೂ ಯಾವದೇ ರೀತಿಯಿಂದ ದೇಶವನ್ನು ಹತ್ತಿಕ್ಕುವದಿದೆ. ಇದಕ್ಕಾಗಿ ಮುಸಲ್ಮಾನರಿಗೆ ಎಷ್ಟೇ ಕೊಡಬೇಕಾದರೂ ಅದನ್ನು ಕೊಡಲು ಸಿದ್ಧನಾಗುವನು."

ಇವತ್ತು ಡೋಯಿಲನು ಬಂದನು. ಮಿರಾಬಹನರಿಗೆ ಸ್ವಾಸ್ಥ್ಯದ ಬಗ್ಗೆ ಸುದ್ದಿಯನ್ನು ಬರೆಯುವ ವಿಷಯದಲ್ಲಿ ನಡೆದ ಪತ್ರವ್ಯವಹಾರದ ವಿಷಯಕ್ಕೂ ಮತ್ತು ಕೃತ್ರಿಮ ಹಲ್ಲುಗಳ ವಿಷಯಕ್ಕೂ ಮಾತಾಡಲು ಬಂದಿದ್ದನು: "ನೀವು ಆಮಾಂಶದ ಹೆಸರು ತೆಗೆದುಕೊಂಡದ್ದರಿಂದ ಹೊರಗೆ ಜನರು ಗಾಬರಿಯಾಗಬಹು ದೆಂದು ಮೇಜರ ಭಂಡಾರಿಯವರು ನಿಮ್ಮ ಪತ್ರವನ್ನು ತಡೆಹಿಡಿಯುವದಕ್ಕೆ ಕಾರಣ ಕೊಟ್ಟಿದ್ದಾರೆ. ಇದಿಲ್ಲದಿದ್ದರೆ ಇದರಲ್ಲಿ ತಡೆಹಿಡಿಯುವಂತಹದೇನೂ ಇರಲೇ ಇಲ್ಲ ಮತ್ತು ಇಂಥ ಕಾಗದಗಳು ಪ್ರಸಿದ್ಧವಾಗಬಾರದೆಂಬ ಮಾತನ್ನು ನೀವು ಒಪ್ಪುತ್ತೀರಿ. ಅಂದರೆ ನಿಮಗೆ ಬೇಕಾದುದನ್ನು ಬರೆಯುವ ಅಧಿಕಾರವಿದೆಯೆಂಬುದರಲ್ಲಿ ಸಂಶಯವೇ

ಇಲ್ಲ" ಎಂದು ಹೇಳಿ ಹೋದನು. ಆಮಾಂಶದ ಮಾತನ್ನು ಕೂಡ ಮೇಜರ ಭಂಡಾರಿ ಯವರನ್ನು ಸಂತೋಷಗೊಳಿಸುವದಕ್ಕಾಗಿಯೇ ಆಡಿರಬಹುದು.

ಈಗೀಗ 'ಲೀಡರ' ದಲ್ಲಿ ಉಗ್ರವಾದ ಲೇಖಗಳು ಬರಹತ್ತಿವೆ. ಇವತ್ತು ದ್ವಿದಳ ರಾಜ್ಯ ಪದ್ಧತಿಯ ವಿಷಯಕ್ಕೆ ಉಗ್ರ ಲೇಖವಿದೆ. ಈ ಲೇಖದ ಮತಿತಾರ್ಥ ವಿಷ್ಟೆ: ಕಾಂಗ್ರೆಸ್ಸಿನ ಸಂಗಡ ಒಪ್ಪಂದಮಾಡಿಕೊಳ್ಳಲೇಬೇಕು

೭-೭-'೩೨ ಎಂದು. ಕೊನೆಯಲ್ಲಿ ಹೀಗಿದೆ.

"The longer a compromise is delayed with what 'Time and Tide' has described as 'the strongest, best organized and most ubiquitous party in India' the more complicated will become the Indian problem."

"'ಟಾಯಿಮ ಆ್ಯಂಡ ಟಾಯಿಡ' ಹೇಳುವಂತೆ 'ಹಿಂದುಸ್ತಾನದಲ್ಲಿ ಎಲ್ಲಕ್ಕೂ ಹೆಚ್ಚು ಶಕ್ತಿಶಾಲಿಯೂ, ಹೆಚ್ಚು ಸಂಘಟಿತವೂ ಆದ ಮತ್ತು ಇಡೀ ದೇಶದಲ್ಲಿ ಎಲ್ಲಕ್ಕೂ ಹೆಚ್ಚು ವ್ಯಾಪಿಸಿದ ಸಂಸ್ಥೆ'ಯ ಸಂಗಡ ಒಪ್ಪಂದ ಮಾಡಿಕೊಳ್ಳುವದಕ್ಕೆ ತಡವಾದಷ್ಟು ಹಿಂದುಸ್ತಾನದ ಪ್ರಶ್ನೆಯು ಜಟಿಲವಾಗುತ್ತ ಹೋಗುವದು."

ಇವತ್ತು ವಲ್ಲಭಭಾಯಿಯವರು ಸಂಸ್ಕೃತವನ್ನು ಕಲಿಯಲಿಕ್ಕೆ ಪ್ರಾರಂಭ ಮಾಡಿದರು. ಸಾತವಳೇಕರರ ಪಾಠಮಾಲೆಯ ೨೪ ಭಾಗಗಳು ಬಂದವು.

ಥಾಮಸ್ ಎ ಕೆಂಪಿಸನ ಪುಸ್ತಕವು ಕಲ್ಪನೆಮೀರಿ ಶಾಂತಿಯನ್ನೂ ಸಮಾಧಾನ ವನ್ನೂ ಕೊಡುವಂತಹದಾಗಿದೆ. ಗೀತಾ ಮತ್ತು ನಮ್ಮ ಸಂತರ ವಚನಗಳೊಂದಿಗೆ ಹೆಜ್ಜೆ ಹೆಜ್ಜೆಗೂ ಸಾಮ್ಯ ಕಂಡುಬರುತ್ತದೆ :

"He who only shunneth temptations outwardly and doth not pluck out their root, will profit little, nay, temptations will soon return, and he will find himself in a worse condition."

"ಯಾವನು ಕೇವಲ ಹೊರಗಿನಿಂದ ವಿಷಯುಗಳನ್ನು ಬಿಡುತ್ತಾನೆಯೊ ಆದರೆ ಬೇರು ಸಹಿತವಾಗಿ ಕಿತ್ತೊಗೆಯುವದಿಲ್ಲವೊ ಅಂಥವನಿಗೆ ಲಾಭ ದೊರೆಯುವದಿಲ್ಲ. ಅವನಿಗೆ ಮತ್ತೆ ಮೋಹ ಉಂಟಾಗುವದು ಮತ್ತು ಅವನ ಸ್ಥಿತಿಯು ಮೊದಲಿ ಗಿಂತಲೂ ಹೆಚ್ಚು ಕೆಡುವದು."

ಹೋಲಿಸಿ ನೋಡಿರಿ: 'काम क्रोध लोभ मोहनुं ज्यां लगी मूळ न जायजी, संग-प्रसंगे पांगरे' 'ಕಾಮ, ಕ್ರೋಧ, ಲೋಭ ಮೋಹಗಳ ಮೂಲವು ನಾಶವಾಗ ದಿರುವವರೆಗೆ ಅವು ಸಂಧಿಸಾಧಿಸಿ ಮತ್ತೆ ಜಾಗ್ರತವಾಗುವವವು, ಮುಂತಾಗಿ. ಮತ್ತು: '**इंद्रियाणां हि चरतां यन्मनोनुविधीयते, तदस्य हरति प्रज्ञां वायुर्नावमिवांभसि**' ಇದನ್ನು ಹೋಲಿಸಿ ನೋಡಿರಿ:

"For as a ship without a helm is driven to and fro by the waves; so the man who is negligent, and giveth up his resolution, is tempted in many ways."

"ಚುಕ್ಕಾಣಿ ಇಲ್ಲದ ನಾವು ತೆರೆಗಳ ಹೊಡೆತದಿಂದ ಅತ್ತಿತ್ತ ಒಗೆಯಲ್ಪಡುವಂತೆ ಅಜಾಗರೂಕನೂ ತನ್ನ ನಿಶ್ಚಯಗಳಿಗೆ ಅಂಟಿಕೊಂಡಿರದಂಥವನೂ ಆದ ಮನುಷ್ಯನು ಲಾಲಸೆಗಳಿಗಾಗಿ ಅತ್ತಿತ್ತ ಅಲೆದಾಡುತ್ತಾನೆ."

ಮೇಜರ ಭಂಡಾರಿಯವರು ಬಾಪೂರವರ ಎಲ್ಲ ಪತ್ರಗಳನ್ನು—ಇಲ್ಲಿ ಬರುವ ಮತ್ತು ಹೋಗುವ—ಸರಕಾರಕ್ಕೆ ಕಳಿಸಬೇಕೆಂಬ ಆಜ್ಞೆ ಬಂದಿದೆಯೆಂದು ಹೇಳಿದರು.

೮-೭-'೩೨ ವಿಲಾಯತಿಗೆ ಹೋಗುವ ವಿಷಯದಲ್ಲಿ ಅಭಿಪ್ರಾಯವನ್ನು ಕೇಳಿದ ಬಿರ್ಲಾರವರ ಒಂದು ಪತ್ರ ಬಂದಿತ್ತು. ಬಾಪೂ ಅದಕ್ಕೆ ಉತ್ತರ ಕೊಟ್ಟಿದ್ದರು: "ನನ್ನ ಅಭಿಪ್ರಾಯವು ಎಲ್ಲರಿಗೂ ಗೊತ್ತಿದೆ. ಹೋಗಬೇಕೊ, ಹೋಗಬಾರದೊ ಎಂಬ ವಿಷಯದಲ್ಲಿ ನಾನು ಇಲ್ಲಿಂದ ಅಭಿಪ್ರಾಯ ಕೊಡಲಾರೆ." ಈ ಪತ್ರವು ಸರಕಾರದ ಕೈ ಸೇರಿತು. ಅದರ ವಿಷಯಕ್ಕೆ ತಪಾಸಣೆ ನಡೆಯಿತು ಮತ್ತು ಅದರ ಮೇಲಿಂದಲೇ ಈ ಆಜ್ಞೆ ಆಗಿರಬೇಕೆಂದೆನಿಸುತ್ತದೆ. ಗಾಂಧೀಯವರ ಎಲ್ಲ ಪತ್ರಗಳನ್ನು ಸರಕಾರಕ್ಕೆ ನೋಡುವದಕ್ಕಾಗಿ ಕಳಿಸಿಕೊಡಬೇಕೆಂದು ಸರಕಾರದ ಆಜ್ಞೆ ಇತ್ತು. ಇದರಿಂದ ತಮ್ಮ ಮೇಲೆ ಅವಿಶ್ವಾಸ ಮಾಡಲಾಗಿದೆಯೆಂದು ಈ ಮನುಷ್ಯನಿಗೆ ಅನಿಸಿತು. ಅದಕ್ಕೆ ಇವನು 'ಹಾಗಾದರೆ ಇಲ್ಲಿ ಬರುವ ಎಲ್ಲ ಪತ್ರಗಳನ್ನೂ ಸರಕಾರವೇ ನೋಡಲಿ' ಎಂದು ಬರೆದನು. ಆದುದರಿಂದ ಈ ವಾರದಲ್ಲಿ ಯಾವ ಪತ್ರವೂ ಬರಲಿಲ್ಲ. ಈ ಪ್ರಕಾರ ಭೆಟ್ಟಿಗಳೂ ಬಂದಾದವು ಮತ್ತು ಬಹುತರವಾಗಿ ಕಾಗದಪತ್ರಗಳೂ ಬಂದಾಗಬಹುದು. ಕಾರಣ '**भला हुआ टूटा जंजाल, सुखसे भजिये श्रीगोपाल**' 'ಗೊಂದಲ ತಪ್ಪಿದ್ದು ಒಳ್ಳೆಯದಾಯಿತು, ಶ್ರೀಗೋಪಾಲನನ್ನು ಸುಖದಿಂದ ಭಜಿಸಿರಿ' ಈ ವಿಷಯದ ಬಗ್ಗೆ ಡೋಯಿಲನಿಗೆ ಇವತ್ತು ಪತ್ರ ಬರೆದರು: "ಈ ವಿಷಯದಲ್ಲಿ ಸರಕಾರದ ಇಚ್ಛೆಯೇನಿದೆ ಎಂಬುದನ್ನು ಸ್ವಲ್ಪ ತಿಳಿಯಲಿಚ್ಛಿಸುತ್ತೇನೆ ಮತ್ತು ನನ್ನ ಸ್ಥಾನಮಾನವೇನೆಂಬುದನ್ನೂ ಕಾಣಿಸಿರಿ." ಭಾರತ ಸರಕಾರದ ಆಜ್ಞೆಯಿಂದ ಈ ಹೆಜ್ಜೆಯನ್ನಿಡಲಾಗಿದೆಯೆಂದು ಹೇಳಲಾಗುತ್ತದೆ. ಬಾಪೂ ಹೇಳಿದರು: "ನಾನು ಬದ್ಮಾಷನೂ, ಡಾಂಭಿಕನೂ, ರಾಕ್ಷಸನೂ ಇರುವೆನೆಂದು ಈ ಜನರಿಗೆ ಸಿದ್ಧಮಾಡಬೇಕಾಗಿದೆ. ಇದನ್ನು ಈ ಪತ್ರಗಳ ಮೇಲಿಂದ ಸಿದ್ಧಮಾಡುವರೆ!"

ಈಗೀಗ ಸಾಯಂಕಾಲ ತಿರುಗಾಡುವಕಾಲಕ್ಕೆ ಓದಲಿಕ್ಕೆ ವೃತ್ತಪತ್ರಗಳಿಲ್ಲದಾಗ

‘ಮಾಡರ್ನ ರಿವ್ಯೂ’ ಓದಲಾಗುತ್ತದೆ. ಯಾವ ಲೇಖಗಳ ಮೇಲೆ ಬಾಪೂ ಗುರುತು ಮಾಡುತ್ತಾರೆಯೊ ಅವುಗಳನ್ನೇ ಓದಲಾಗುತ್ತದೆ. ಇವತ್ತು

೯-೭-’೩೨ ರಮೇಶಚಂದ್ರ ಬ್ಯಾನರ್ಜಿಯವರ Castes in Educational Reports (ಶಿಕ್ಷಣದ ವರದಿಗಳಲ್ಲಿ ಜಾತಿಗಳು) ಎಂಬುದನ್ನು ಓದಿ ಹೇಳಿದೆನು. ಬಾಪೂ ಹೇಳಿದರು: “ಇದು ಅಮೂಲ್ಯವಾದ ಲೇಖವಿದೆ. ಈ ಜನರು ಎಲ್ಲಿ ಎಲ್ಲಿಂದ ಸುದ್ದಿಗಳನ್ನು ಕಲೆಹಾಕುತ್ತಾರೆ? ಮೆಲ್ಲ ಮೆಲ್ಲಗೆ ದೇಶದಲ್ಲಿ ಇಬ್ಬಣಮಾಡಿ, ಹಿಂದುಗಳನ್ನು ಮುಸಲ್ಮಾನರ ವಿರುದ್ಧ ಹೋರಾಡಲಿಕ್ಕೆ ಹಚ್ಚಿ, ಹಿಂದುಗಳನ್ನು ಹಿಂದುಗಳ ವಿರುದ್ಧ ಹೋರಾಡಿಸಿ ಈ ಧೋರಣೆಯು ಯಾವ ಪ್ರಕಾರ ವಿಕಾಸಗೊಳ್ಳುತ್ತ ಹೋಯಿತೆಂಬುದರ ಪೃಥಕ್ಕರಣೆಯನ್ನು ಈ ಲೇಖದಲ್ಲಿ ಬಹಳ ಒಳ್ಳೆಯ ರೀತಿಯಿಂದ ಮಾಡಲಾಗಿದೆ.”

ವಲ್ಲಭಭಾಯಿ ಹೇಳಿದರು: “ಇಂಗ್ಲಂಡಿನಲ್ಲಿಯ ಎಲ್ಲ ಜನರು ಹಿಂದುಸ್ತಾನದ ವಿರುದ್ಧ ಇವತ್ತು ನಿಂತಂತೆ ಮೊದಲೆಂದೂ ನಿಂತಿದ್ದಿಲ್ಲ.” ಬಾಪೂ ಹೇಳಿದರು: “ಹಿಂದುಸ್ತಾನವನ್ನು ವಿರೋಧಿಸುವದಕ್ಕೆ ಯಾವಾಗಲೂ ಐಕ್ಯತೆಯಿದೆ, ಯಾಕಂದರೆ ಹಿಂದುಸ್ತಾನ ಬಿಟ್ಟ ಕೂಡಲೇ ಭಿಕ್ಷುಕರಾಗುತ್ತಾರೆ. ಹಿಂದುಸ್ತಾನವನ್ನು ಇಟ್ಟು ಕೊಳ್ಳುವದರಲ್ಲಿ ಹೆಚ್ಚಿನ ಹೆಚ್ಚು ಸ್ವಾರ್ಥವಿದೆ.” ಮತ್ತೆ ಬಾಪೂ ಅಂದರು: “ಈ ಕಾಲಕ್ಕೆ ಇಂಗ್ಲಂಡಿನಲ್ಲಿ ನಮ್ಮ ಮಿತ್ರರಿದ್ದಷ್ಟು ಮೊದಲು ಎಂದೂ ಇದ್ದಿಲ್ಲ-ವೆಂದು ನನಗನಿಸುತ್ತದೆ. ಹಿಂದುಸ್ತಾನದ ವಿಷಯದ ಜ್ಞಾನವೂ ಅವರಿಗೆ ಮೊದಲಿಗಿಂತ ಬಹಳ ಹೆಚ್ಚಿಗಿರುತ್ತದೆ. ಚೀನಕ್ಕೆ ಹೋಗಿ ಇರಿಸಿಕೊಂಡು ಸಾಯುವದಕ್ಕೆ ಒಂದು ಗುಂಪು ಸಿದ್ಧವಾದ ರೀತಿಯಲ್ಲಿಯೇ ಈ ದೇಶದ ಸಲುವಾಗಿ ಕೂಡ ಒಂದು ಗುಂಪು ಸಿದ್ಧವಾದರೆ ನನಗೆ ಆಶ್ಚರ್ಯವಾಗಲಿಕ್ಕಿಲ್ಲ. ಇಷ್ಟೊಂದು ಸುಳ್ಳನ್ನೂ ಇಷ್ಟೊಂದು ಅನ್ಯಾಯವನ್ನೂ ನಮ್ಮಿಂದ ಸಹಿಸಲಿಕ್ಕಾಗುವದಿಲ್ಲ, ಇದನ್ನು ಬಂದು ಮಾಡಿರಿ ಇಲ್ಲವಾದರೆ ನಾವು ನಮ್ಮ ಜೀವವನ್ನು ಕೊಡುವೆವು ಎಂದು ಒಂದಾ-ನೊಂದು ದಿವಸ ಈ ಜನರು ಘೋಷಣೆ ಮಾಡಬಹುದು. ನಾನು ನನ್ನ ಸ್ವಿತ್ಸರ್ಲಂಡದ ಭಾಷಣದಲ್ಲಿ ಇದನ್ನು ಹೇಳಿಯೇ ಬಿಟ್ಟಿದ್ದೇನೆ. ಹೀಗಾದರೆ ಅದಕ್ಕಾಗಿ ಅನೇಕ ಜನರು ಸಿದ್ಧರಾಗುವರು. ಲಾಸ್ಕಿಯಂಥವರು ಸಿದ್ಧರಾಗದಿದ್ದರೂ ಮ್ಯುರಿಯಲ್, ಅಲೆಗ್ಝಾಂದರ, ಹಾಯಲ್ಯಾಂಡ್, ಐಸ್ಥರ, ಮಾಡ್; ಮತ್ತು ರಾಯಡನ್‌ರಂಥವರು ಅವಶ್ಯ ಸಿದ್ಧರಾಗುವರು.”

ಮ್ಯಾಥೂರವರು ದೇವರ ವಿಷಯಕ್ಕೆ ಪ್ರಶ್ನೆ ಕೇಳಿದ್ದರು ಮತ್ತು ಅವುಗಳಲ್ಲಿ ಹೀಗೆ ಹೇಳಿದ್ದರು: God is Truth ಮತ್ತು God is Love ಇದರ ಅರ್ಥವು God is Truthful and God is Loving—‘ದೇವರೇ ಸತ್ಯ, ದೇವರೇ ಪ್ರೇಮ

ಇದರ ಅರ್ಥವು ದೇವರು ಸತ್ಯಮಯನೂ ಪ್ರೇಮಮಯನೂ ಎಂಬುದೇ ಅಲ್ಲವೆ?' ಅವರಿಗೆ ಬಾಪೂ ಉತ್ತರಕೊಟ್ಟರು.

" In God is Truth, '*is*' certainly does mean 'equal to', nor does it merely mean 'is truthful'. Truth is not a mere attribute of God, but He is That. He is nothing if He is not That. Truth in Sanskrit means *Sat*. *Sat* means Is. Therefore Truth is implied in *Is*. God is, nothing else is. Therefore the more truthful we are the nearer we are to God. We *are* only to the extent that we are truthful.

" The illustration of hen and her chickens is good. But better still is that of the Lord and his Serf. The latter is far from the former because both are mentally so far apart though physically so near. Hence Milton's 'Mind is its own place', and the Gita's 'man is the author of his own freedom or bondage.' It is to realize this freedom that I would have us to labour as Pariahs and labourers."

" ದೇವರು ಸತ್ಯನಿದ್ದಾನೆ, ಇದರಲ್ಲಿ 'ಇದ್ದಾನೆ' ಇದರ ಅರ್ಥವು 'ಸಮಾನ' ಎಂದಿರುತ್ತದೆ. ಇದರ ಅರ್ಥವು ದೇವರು ಸತ್ಯಮಯನಿದ್ದಾನೆಂದು ಆಗ-ಲಾರದು. ಸತ್ಯವು ದೇವರ ಒಂದು ಗುಣವಾಗಲಿ ಅಥವಾ ಒಂದು ವಿಭೂತಿಯಾಗಲಿ ಇರುವದಿಲ್ಲ, ಆದರೆ ಸತ್ಯವೇ ದೇವರಿದ್ದಾನೆ. ಅವನು ಸತ್ಯನಿಲ್ಲದಿದ್ದರೆ ಇನ್ನೇನೂ ಇರುವದಿಲ್ಲ. ಸತ್ಯ ಶಬ್ದವು ಸತ್‌ದಿಂದ ಉಂಟಾಗಿದೆ. ಸತ್ ಇದರ ಅರ್ಥವು ಇರು ಎಂದಾಗುತ್ತದೆ. ಆದುದರಿಂದ ಸತ್ಯದ ಅರ್ಥವು ಇರು ಎಂದೇ ಆಯಿತು. ದೇವರಿದ್ದಾನೆ, ಬೇರೆ ಏನೂ ಇರುವದಿಲ್ಲ. ಆದುದರಿಂದ ನಾವು ಸತ್ಯಕ್ಕೆ ಎಷ್ಟು ಹತ್ತರವಾಗಿರುವೆವೊ ಅಷ್ಟೇ ಹೆಚ್ಚು ದೇವರಿಗೆ ಹತ್ತರವಾಗಿರುವೆವು. ನಾವು ಸತ್ಯ ಮಯರಾಗಿರುವ ಪ್ರಮಾಣದಲ್ಲಿಯೇ ನಾವು ಇರುವೆವು."

" ಕೋಳಿ ಮತ್ತು ಅವುಗಳ ಮರಿಗಳ ಉದಾಹರಣೆಯು ಚನ್ನಾಗಿದೆ. ಆದರೆ ಒಡೆಯ ಮತ್ತು ಅವನ ಆಳು ಇದು ಹೆಚ್ಚು ಒಳ್ಳೆಯದಾಗಿದೆ. ಆಳು ಒಡೆಯ ನಿಂದ ದೂರನಿರುತ್ತಾನೆ. ಯಾಕಂದರೆ ಶರೀರದಿಂದ ಸಮೀಪವಿದ್ದಾಗ್ಯೂ ಮನಸ್ಸಿ-ನಿಂದ ಒಬ್ಬರಿಗೊಬ್ಬರು ಬಹಳ ದೂರ-ವಿರುತ್ತಾರೆ. ಆದುದರಿಂದ 'ಚಿತ್ತವೇ ತನ್ನ ಸ್ಥಾನ' ವೆಂದು ಮಿಲ್ಟನ್ನನು ಹೇಳಿದ್ದಾನೆ ಮತ್ತು ಗೀತೆಯಲ್ಲಿ 'ಮನುಷ್ಯನೇ ತನ್ನ ಮೋಕ್ಷ ಅಥವಾ ಬಂಧನದ ಕಾರಣ' ವೆಂದು ಹೇಳಿದೆ. ಈ ಮೋಕ್ಷವನ್ನು

ಪ್ರಾಪ್ತಮಾಡಿಕೊಳ್ಳುವದಕ್ಕಾಗಿಯೆ ನಾವು (ಪರಿಹಾ) ಪರಿಚಾರಕರಂತೆಯೂ ಕೂಲಿಕಾರರಂತೆಯೂ ಶ್ರಮ ಮಾಡಲೇಬೇಕೆಂದು ನಾನು ಹೇಳುತ್ತೇನೆ."

೧೦-೭-'೩೨

ಇವತ್ತು Consultative Committee (ಸಲಹೆಗಾರ ಸಮಿತಿ) ಗೆ ಸಪ್ರೂ-ಜಯಕರರ ರಾಜೀನಾಮೆಗಳು ಬಂದವು. ವಲ್ಲಭಭಾಯಿ ಅಂದರು: "ಭಟ್ಟರ ತಟ್ಟೂ ಮುಂದೆ ಸಾಗಿತಷ್ಟೆ!" ಈ ನಾಣ್ಣುಡಿಯನ್ನು ನಾನು ಮೊದಲು ಎಂದೂ ಕೇಳಿದ್ದಿಲ್ಲ. ನಿನ್ನೆ ಕೂಡ ಇಂತಹದೇ ಒಂದು ನಾಣ್ಣುಡಿಯು ಅವರ ಬಾಯಿಂದ ಹೊರಟಿತ್ತು. '**बूढी हो कर तो निम्बोली भी पक जाती है इसमें क्या?**' 'ಹಾದಿ ಮುಪ್ಪಾಗಿ ಹಳ್ಳವಾಯಿತು ಸೂಳೆ ಮುಪ್ಪಾಗಿ ಜೋಗತಿ ಆದಳು.' ನಿನ್ನೆ ಸಾಯಂಕಾಲಕ್ಕೆ ಸರಕಾರದ ಕಡೆಯಿಂದ ಸೆನ್ಸಾರ ಆಗಿ ಟಪಾಲು ಬಂತು. ಅದರಲ್ಲಿ ಕೃಷ್ಣದಾಸನ ಪತ್ರವಿತ್ತು. ಅದರಲ್ಲಿ ಕೆಲವು ಬಂಗಾಲಿ ಮಿತ್ರರ ಸಮಾಚಾರವಿತ್ತು. ಸತೀಶ ಬಾಬೂರವರು ರಾಟಿಯ ವರ್ಗವನ್ನು ನಡೆಸಿದ್ದಾರೆ ಮತ್ತು ೮೫ ವರುಷದ ಹರಿ ದಯಾಲ ನಾಗರು ವಿನೋದ ಮಾಡುತ್ತಿದ್ದಾರೆ ಮುಂತಾಗಿ. ಹರಿದಯಾಲ ಬಾಬೂರ ಮುಂದೆ ನಮ್ಮ ಶಿರವು ಬಾಗುತ್ತಿದೆ. ಈ ಮನುಷ್ಯನು ಸೇವೆಮಾಡುತ್ತ ಮಾಡುತ್ತ ಸಾಯುವನೆಂಬುದರಲ್ಲಿ ನನಗೆ ಸಂದೇಹವಿಲ್ಲ. ಅವನಿಗೆ ವಿಶ್ರಾಂತಿಯೆಂಬುದೇ ಗೊತ್ತಿಲ್ಲ ಅವರಂಥ ಸರಳ ಸ್ವಭಾವದ ಸತ್ಯನಿಷ್ಠ ಜನರು ಕಾಂಗ್ರೆಸ ಗುಂಪಿನಲ್ಲಿ ಸ್ವಲ್ಪೇ ಇರಬಹುದು. ಬಾಪೂ ಹೇಳತೊಡಗಿದರು: "ಅವರು ಅನಾಸಕ್ತಿಯೋಗವನ್ನು ಸಾಧಿಸಿದ್ದಾರೆ." ಮೋತೀಲಾಲ ರಾಯರದೂ ಒಂದು ಸುಂದರವಾದ ಪತ್ರವಿದೆ. ಹಿಂಸೆ ಮತ್ತು ವಿದ್ರೋಹದಲ್ಲಿ ವಿಶ್ವಾಸವಿಡುವಂಥ ಒಬ್ಬ ವ್ಯಕ್ತಿಯು ಸಂಪೂರ್ಣ ಬದಲಾಗಿ ಅವರ ಸಂಗಡ ಕೂಡಿಕೊಂಡಿದ್ದಾನೆ. ಅವನನ್ನು ಬಂಧಿಸಿ ನಜರಬಂದಿಯನ್ನಾಗಿ ಮಾಡಿದ್ದಾರೆ. ಅವರು ಹೋಗಿ ಪೋಲೀಸನ ಹತ್ತರ ಚರ್ಚೆಮಾಡಿದರು. ಆದರೆ ಅವನು ಕೇಳಲಿಲ್ಲ! ಬಾಪೂರವರ ಮೇಲೆ ಅವನ ಶ್ರದ್ಧೆಯು ಹೆಚ್ಚಾಗುತ್ತ ನಡೆದಿದೆ ಯೆಂದು ಬರೆದಿದ್ದಾರೆ.

ಇವತ್ತಿನ ಟಪಾಲಿನಲ್ಲಿ ಬಹಳ ಪತ್ರಗಳಾದವು ಮತ್ತು ಬಹಳ ಉದ್ದವಿದ್ದವು. ವಲ್ಲಭಭಾಯಿ ಅಂದರು: "ಒಳ್ಳೆಯದಾಯಿತು. ಎಷ್ಟು ಹೆಚ್ಚಾಗುವವೋ ಅಷ್ಟು ಒಳ್ಳೆಯದು. ಅನುವಾದ ಮಾಡಿ ಮಾಡಿ ಬೇಸರ ಬಂದ ಮೇಲೆ 'ಹೋಗಲಿ, ಈ ಪತ್ರಗಳಲ್ಲಿ ಏನಿದೆ?' ಎಂದು ಹೇಳುವರು."

ಪ್ರಾರ್ಥನೆಗೆ ತಗಲುವ ಸಮಯದ ವಿಷಯವಾಗಿ ಪಂಡಿತಜಿಯವರಿಗೆ ಪತ್ರ ಬರೆದರು: "ಇದರಲ್ಲಿ ದ್ವೇಷವಾಗಲಿ ಅರುಚಿಯಾಗಲಿ ಇರಬಾರದು. ಇಸ್ಲಾಮದಲ್ಲಿ

ಐದು ವೇಳೆ ನಮಾಜು ಇರುತ್ತದೆ. ಪ್ರತಿಯೊಂದು ನಮಾಜು ಹೆಚ್ಚಾಗಿಲ್ಲದಿದ್ದರೂ ಹದಿನೈದು ಮಿನಿಟು ಹಿಡಿದೇ ಹಿಡಿಯುತ್ತದೆ. ಅನ್ನಲಿಕ್ಕೆ ಒಂದೇ ವಿಷಯ. ಕ್ರೈಸ್ತರ ಪ್ರಾರ್ಥನೆಯಲ್ಲಿ ಯಾವಾಗಲೂ ಒಂದು ಮಾತು ಇರುತ್ತದೆ. ಅದರಲ್ಲಿ ಕೂಡ ಪ್ರತಿ ವೇಳೆಗೆ ಹದಿನೈದು ನಿಮಿಷ ಹಿಡಿದೇ ಹಿಡಿಯುತ್ತದೆ. ರೋಮನ್ ಕ್ಯಾಥೋಲಿಕ್ ಸಾಂಪ್ರದಾಯದಲ್ಲಿ ಮತ್ತು ಇಂಗ್ಲೀಷರು ನಡೆಸಿದ ಚರ್ಚುಗಳಲ್ಲಿ ಅರ್ಧಗಂಟೆ ಗಿಂತಲೂ ಕಡಿಮೆ ಹಿಡಿಯುವದಿಲ್ಲ ಮತ್ತು ಅದು ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲಕ್ಕೆ ಆಗುತ್ತದೆ. ಭಕ್ತನಿಗೆ ಇದು ಕಠಿಣವೆನಿಸುವದಿಲ್ಲ. ಕೊನೆಯಲ್ಲಿ ನಮ್ಮ ಕ್ರಮವನ್ನು ಬದಲಿಸಲಿಕ್ಕೆ ನಮಗೆ ಯಾರಿಗೂ ಅಧಿಕಾರವುಳಿಯುವದಿಲ್ಲ. ಯಾಕಂದರೆ ನಾವೆಲ್ಲರೂ ಅಪೂರ್ಣರಿದ್ದೇವೆ. ಕ್ರಮದ ವಿಷಯಕ್ಕೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾವು ಅದರಲ್ಲಿ ಅಭಿರುಚಿಯನ್ನುಂಟುಮಾಡಿಕೊಳ್ಳಲೇ ಬೇಕು. ಅದರಿಂದ ದೇವರ ಸಾಕ್ಷಾತ್ಕಾರ ಮಾಡಿಕೊಳ್ಳುವದಿದೆ. ಅದರಲ್ಲಿಯೇ ದಿನದ ಬುತ್ತಿಯನ್ನು ಸಂಗ್ರಹಿಸುವದಿದೆ. ಬದಲುಮಾಡುವ ವಿಚಾರವನ್ನು ಬಿಟ್ಟು ಇದ್ದುದನ್ನೇ ಶೋಭಾಯಮಾನವಾಗಿ ಮಾಡಿ ನಾವು ಅದರಲ್ಲಿ ಪ್ರಾಣಕಳೆಯನ್ನು ತುಂಬೋಣ. ಎಷ್ಟು ವಿಚಾರ ಮಾಡಿದರೂ ಎನಗೆ ಹೀಗೇ ಅನಿಸುತ್ತಿರುತ್ತದೆ."

* * *

ಪರಶುರಾಮನಿಗೆ ಬರೆದ ಉದ್ದವಾದ ಪತ್ರದಲ್ಲಿ ಬರೆದರು: "ಹಿಂದೀ ಪ್ರಚಾರ ಮಾಡುವದಕ್ಕಾಗಿ ಜೀವನವನ್ನು ಅರ್ಪಣ ಮಾಡುವ ವಿಚಾರ ಮಾಡಿದರೆ ನನಗೆ ಆನಂದವಾಗುವದು." "ರಾಮಾಯಣದೊಳಗಿನ ಭಿನ್ನ ಭಿನ್ನ ಪ್ರಕೃತಿಯ ಜನರನ್ನು, ಭಿನ್ನ ಭಿನ್ನ ಶ್ರೇಣಿಯ ಬಾಲಕರನ್ನು ಅಥವಾ ಮನುಷ್ಯರನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಹ ಬೇರೆ ಬೇರೆ ಜನರು ಬೇರೆ ಬೇರೆ ಆಯ್ಕೆಯನ್ನು ಮಾಡಿಕೊಳ್ಳಬಹುದು."

* * *

ಮಥುರಾದಾಸರಿಗೆ ಉದ್ದವಾದ ಪತ್ರವನ್ನು ಬರೆದರು. ಅದರಲ್ಲಿ 'ಇಂಗ್ಲಂಡಿನಲ್ಲಿ ಅರಸರ ಮನೆಗೆ ಹೋದಾಗ ಬುದ್ಧಿಪುರಸ್ಸರವಾಗಿ ಸಂಗಡ ತೆಗೆದುಕೊಂಡು ಹೋದ ಉಣ್ಣೆ ಕಂಬಳಿಯ ಕಥೆಯನ್ನು ಹೇಳಿದರು. "ಹಿಂದುಸ್ತಾನದಲ್ಲಿ ಖಾದೀ ಪ್ರೇಮವು ವ್ಯಾಪಕವಾಗಿಲ್ಲ. ಬೇರೆ ಶಬ್ದಗಳಲ್ಲಿ ಹೇಳುವದಾದರೆ ದರಿದ್ರನಾರಾಯಣನ ಭಕ್ತಿಯು ವ್ಯಾಪಕವಾಗಿಲ್ಲ. ಅಥವಾ ಈ ಭಕ್ತಿಯಿದ್ದಲ್ಲಿ ಖಾದಿಯು ಈ ಭಕ್ತಿಯ ನೇರ ಮತ್ತು ಸರಳವಾದ ಮಾರ್ಗವಿದೆಯೆಂಬುದನ್ನು ಅಜ್ಞಾನದಲ್ಲಿ ಮುಳುಗಿದಂಥ ಭಕ್ತರು ಸಿದ್ಧಮಾಡಿಲ್ಲ. ನೂಲನ್ನು ಸುಧಾರಿಸಲಿಕ್ಕೆ ಪುಸ್ತಕವನ್ನು ಅವಶ್ಯ ಬರೆಯಿರಿ. ಆದರೆ ನೀವು ಅನುಭವದಿಂದ ಸಿದ್ಧಮಾಡದ ಒಂದು ವಾಕ್ಯವೂ ಅದರಲ್ಲಿರತಕ್ಕದ್ದಲ್ಲ ಮತ್ತು ನೀವು ನಿಮ್ಮ ಒಬ್ಬರ ಅನುಭವದಿಂದ ಸಿದ್ಧಾಂತವನ್ನು ರಚಿಸಬಾರದು.

ಎರಡನೆಯವರಿಗೂ ಇದೇ ಅನುಭವ ಬಂದಿರಬೇಕು. ಹೀಗೆ ಮಾಡುವದಾಗದಿದ್ದರೆ ಪುಸ್ತಕ ಬರೆಯುವದನ್ನು ತಡೆಹಿಡಿಯಿರಿ. ಅನುಭವದ ಆಧಾರದ ಮೇಲಿಂದ ಬರೆಯದ ಪುಸ್ತಕಗಳು ಸಾಮಾನ್ಯವಾಗಿ ನಿಷ್ಪ್ರಯೋಜಕವೆಂಬುದನ್ನು ನಾನು ಬಹಳ ನೋಡಿದ್ದೇನೆ. ಇವತ್ತು ಯಾರಾದರೂ ಚರಕಸಂಹಿತೆಯನ್ನು ಅನುವಾದ ಮಾಡಿ ಅದನ್ನು ನಮ್ಮ ಮುಂದಿರಿಸಿದರೆ ಹೇಗೆ ಅದಕ್ಕೆ ಯಾವ ಅರ್ಥವೂ ಇಲ್ಲವೊ ಹಾಗೇ ಈ ಮಾತಾಗಿರುತ್ತದೆ. ಯಾಕಂದರೆ ಅದರಲ್ಲಿ ವರ್ಣನೆ ಮಾಡಿದ ವನಸ್ಪತಿಗಳಲ್ಲಿ ನಮಗೆ ಅನೇಕ ವನಸ್ಪತಿಗಳು ದೊರೆಯುವದಿಲ್ಲ ಮತ್ತು ಯಾವು ದೊರೆಯುತ್ತವೆಯೊ ಅವುಗಳಲ್ಲಿ ಹೇಳಿದ ಗುಣಗಳನ್ನು ನಮ್ಮಿಂದ ಸಿದ್ಧಮಾಡಿತೋರಿಸುವದಾಗುವದಿಲ್ಲ. ಆದುದರಿಂದ ನೀವು ಸ್ವತಃ ಕೆಲವು ನಂಬರಿನ ಅತ್ಯುತ್ತಮವಾದ ನೂಲನ್ನು ನೂತು ಮತ್ತು ಅದನ್ನು ನೂಲುವಾಗ ಕದಿರು, ರಾಟಿ, ಹತ್ತಿಯ ಜಾತಿ, ಪಿಂಜಣ ಮತ್ತು ನಿಮ್ಮ ಸ್ವಂತದ ಅಂದರೆ ಕೆಲಸಗಾರರ ಭಾಗವೆಷ್ಟೆಷ್ಟಿತ್ತೆಂಬುದರ ಪೃಥಃಕರಣ ಮಾಡಿರಿ, ಇವುಗಳ ಟಿಪ್ಪಣಿ ಮಾಡಿರಿ. ನಿಮ್ಮ ಅನುಭವವನ್ನು ಎರಡನೆಯವರ ಅನುಭವದೊಂದಿಗೆ ಹೋಲಿಸಿ ನೋಡಿರಿ. ಇದು ಎಲ್ಲಕ್ಕೂ ಹೆಚ್ಚು ಅಗತ್ಯದ ಮಾತಾಗಿದೆ. ಇದರಿಂದ ಸಿದ್ಧವಾದ ಪುಸ್ತಕವು ಧರ್ಮದ ತಕ್ಕಡಿಯ ಮೇಲೆ ತೂಗಿ ನೋಡಿದ ಬಂಗಾರದ ಗಟ್ಟಿಯಂತೆ ಉಪಯೋಗ ಬೀಳುವದು.

ನೀವು ನೂಲಿನ ನಂಬರನ್ನು ಎಲ್ಲಿಯವರೆಗೆ ಹೆಚ್ಚಿಸಲಿಚ್ಛಿಸುತ್ತೀರಿ ಎಂಬ ಪ್ರಶ್ನೆಗೆ ಉತ್ತರ ಬರೆದರು : “ಒಂದು ಕಾಲಕ್ಕೆ ಅದರ ಮೇರೆಯನ್ನು ೨೦ ರ ವರೆಗೆ ಇಡಲಾಗಿತ್ತು. ಆ ಮೇಲೆ ೪೦ ರ ವರೆಗೆ ಮುಟ್ಟಿತು. ಈಗ ಯಾವ ಮೇರೆಯನ್ನೂ ಇಡುವದಿಲ್ಲ. ೪೦೦ ನಂಬರಿನ ನೂಲನ್ನು ತೆಗೆಯಲಿಕ್ಕೆ ಬರುವಂಥ ಹತ್ತಿಯು ನಮಗೆ ದೊರೆತರೆ ಅಥವಾ ನಾವು ಅದನ್ನು ಉತ್ಪನ್ನ ಮಾಡಿದರೆ ಮತ್ತು ಇಷ್ಟು ಜಿನುಗು ನಂಬರನ್ನು ನೂಲುವಂತೆ ನಮಗೆ ಹಿಂಜಲಿಕ್ಕೆ ಬಂದರೆ, ಇಂಥ ನೂಲನ್ನು ನೂಲುವ ಸಾಹಸ ಮಾಡುವ ಅಥವಾ ನೂತು ಕೊಡುವ ಕೈವಾರಿಯು ನಮಗೆ ದೊರೆತರೆ ಮತ್ತು ಇಷ್ಟು ಜಿನುಗು ನೂಲನ್ನು ನೆಯ್ದು ಕೊಡುವ ಕುಶಲ ನೇಕಾರನು ನಮಗೆ ಸಿಕ್ಕರೆ ನಾನು ಈ ನಂಬರಿನವರೆಗೂ ಮುಟ್ಟಬೇಕೆಂದು ಅವಶ್ಯವಾಗಿ ಇಚ್ಛಿಸುತ್ತೇನೆ. ಸಾರಾಂಶವಿಷ್ಟೇ ನಮ್ಮ ಅನುಭವ ಮತ್ತು ನಮ್ಮ ತನ್ಮಯತೆಗಳು ನಮ್ಮನ್ನು ಎಲ್ಲಿಯವರೆಗೆ ಒಯ್ಯಬಲ್ಲವೊ ಅಲ್ಲಿಯ ವರೆಗೆ ಹೋಗುವದರಲ್ಲಿ ವಿಶೇಷಾರ್ಥವಿದೆಯೆಂದು ನನಗೆ ಕಾಣಿಸುತ್ತದೆ. ಯಾಕಂದರೆ ಇದರಿಂದ ನೂಲುವ ಮಹತ್ವವು ಒಮ್ಮೆಲೇ ಹೆಚ್ಚಾಗುವ ಪೂರ್ಣ ಸಂಭವವಿದೆ.”

ನಮ್ಮ ಪಾಕೀಟುಗಳ ಮೇಲಿನ ಅಕ್ಷರಗಳು ಒಡೆದರೆ ಅವುಗಳನ್ನು ಮುಚ್ಚಲಿಕ್ಕೆ ಅವುಗಳ ಮೇಲೆ ಬಣ್ಣದ ಪಟ್ಟಿಯನ್ನು ಅಂಟಿಸಲಾಗುತ್ತಿದೆ. ಇದರ ಅನುಕರಣ

ಮಾಡಿ ಪ್ರೇಮಾಬಹನರು ಸರಿಯಾಗಿದ್ದ ಪಾಕೀಟಿನ ಮೇಲೆ ಅದರ ಸುತ್ತಲೂ ಪಟ್ಟಿಯನ್ನು ಹಚ್ಚಿದರು ಅವರಿಗೆ ಬಾಪೂ ಬರೆದರು: "ನೀನು ಪಾಕೀಟನ್ನು ಶೃಂಗರಿಸುವ ಪ್ರಯತ್ನಮಾಡಿ ಅದನ್ನು ಕೆಡಿಸಿಬಿಟ್ಟೆ. ಉಪಯೋಗವಿಲ್ಲದ ಶೃಂಗಾರದ ವಿಷಯಕ್ಕೆ ಹೀಗೆಯೇ ಎಂದು ತಿಳಿ. . . . ನೀನು ದಂಡೆಗೆ ಅಂಟಿಸಿದ ತುಂಡುಗಳು ಅರ್ಧ ಕಿತ್ತು ಹೋಗಿದ್ದರಿಂದ ಬಹಳ ಕೆಟ್ಟ ಕಾಣಿಸುತ್ತಿತ್ತು. ಉಪಯೋಗವಂತೂ ಏನೂ ಇದ್ದಿಲ್ಲ. ಅದಕ್ಕಾಗಿ ವ್ಯಯ ಮಾಡಿದ ಪರಿಶ್ರಮವೂ, ಸಮಯವೂ ವ್ಯರ್ಥ ಹೋದವು. ಇದೇ ಪ್ರಕಾರ ಅಷ್ಟು ಕಾಗದವೂ ಹಾಳಾಯಿತು ಮತ್ತು ಜನತೆಯ ಹಾನಿಯೂ ಆಯಿತು. ಎರಡು ಸಾರಗಳನ್ನು ತೆಗೆ: ಅರಿತುಕೊಳ್ಳದೆ ಯಾರ ಅನುಕರಣವನ್ನೂ ಮಾಡಬಾರದು. ಶೃಂಗಾರಕ್ಕಾಗಿ ಮಾಡಿದ ಶೃಂಗಾರವು ಶೃಂಗಾರವಲ್ಲ. ಯುರೋಪದ ದೊಡ್ಡ ದೇವಾಲಯಗಳಲ್ಲಿರುವ ಎಲ್ಲ ಶೃಂಗಾರಗಳ ಉಪಯೋಗವಿದ್ದೇ ಇರುತ್ತದೆಂದು ಹೇಳಲಾಗುತ್ತಿದೆ. ಇದು ನಿಜವಿರಲಿ ಇಲ್ಲದಿರಲಿ, ನಾನು ಹೇಳಿದ ನಿಯಮಗಳ ವಿಷಯದಲ್ಲಿ ಸಂಶಯಕ್ಕೆ ಅವಕಾಶವಿಲ್ಲ."

ಇದೇ ಪತ್ರದ ಇನ್ನೊಂದು ಅವತರಣಿಕೆ: "ನಿಜ, ಸುಳ್ಳು ದೇವರಿಗೆ ಗೊತ್ತು, ಆದರೆ ನಾನು ಜನರಿಂದ ಬಹಳ ಹೆಚ್ಚು ಕೆಲಸವನ್ನು ತೆಗೆದುಕೊಳ್ಳಬಲ್ಲೆನೆಂದು ಹೇಳಲಾಗುತ್ತಿದೆ. ಇದು ನಿಜವಿದ್ದರೆ ನನಗೆ ಅವರ ವಿಷಯಕ್ಕೆ ಕಳವಿನ ಸಂಶಯವಿರುವದಿಲ್ಲವೆಂಬುದೇ ಅದರ ಕಾರಣವಾಗಿದೆ. ಕೊಟ್ಟಷ್ಟರಿಂದ ಸಂತೋಷ ಹೊಂದುತ್ತೇನೆ. ಎಷ್ಟೋ ಜನರು ಹೀಗೆ ಹೇಳುವವರೂ ಇದ್ದಾರೆ: ಜನರು ನನ್ನನ್ನು ಮೋಸಗೊಳಿಸುವಷ್ಟು ಬಹುತರ ಬೇರೆ ಇನ್ನಾರನ್ನೂ ಮೋಸಗೊಳಿಸುತ್ತಿರಲಿಕ್ಕಿಲ್ಲ. ಈ ಪರೀಕ್ಷೆಯು ನಿಜವೆನಿಸಿದರೂ ನನಗೆ ಪಶ್ಚಾತ್ತಾಪವಾಗುವದಿಲ್ಲ. ನಾನು ಜಗತ್ತಿನಲ್ಲಿ ಯಾರನ್ನೂ ಮೋಸಗೊಳಿಸುವದಿಲ್ಲವೆಂಬ ಒಂದು ಪ್ರಮಾಣ ಪತ್ರ ಸಿಕ್ಕರೆ ನನಗೆ ಸಾಕು. ಅದನ್ನು ಬೇರೆ ಇನ್ನಾರೂ ಕೊಡದಿದ್ದರೂ ನನ್ನಷ್ಟಕ್ಕೆ ನಾನೇ ಕೊಟ್ಟುಕೊಳ್ಳುತ್ತೇನೆ. ಸುಳ್ಳನ್ನು ನಾನು ಎಲ್ಲಕ್ಕೂ ಕೆಡಕೆಂದು ತಿಳಿಯುತ್ತೇನೆ.

"'ಹೆಚ್ಚಿನ ಹೆಚ್ಚು ಜನರ ಹೆಚ್ಚಿನ ಹೆಚ್ಚು ಕಲ್ಯಾಣ' ಮತ್ತು '**जिसकी लाठी उसकी भैंस**' 'ಯಾರ ಬಡಿಗೆಯೊ ಅವರದೇ ಎಮ್ಮೆ' ಎಂಬ ನಿಯಮಗಳು ನನಗೆ ಮಾನ್ಯವಿಲ್ಲ. ಎಲ್ಲರದೂ ಕಲ್ಯಾಣ—ಸರ್ವೋದಯ—ಮತ್ತು ಬಲಹೀನರದು ಮೊದಲು ಇದು ಮನುಷ್ಯರ ಸಲುವಾಗಿ ಉತ್ತಮ ನಿಯಮವಾಗಿದೆ. ನಾವು ಎರಡು ಕಾಲಿನ ಮನುಷ್ಯರೆಂದು ಹೇಳಿಸಿಕೊಳ್ಳುತ್ತೇವೆ, ಆದರೆ ನಾಲ್ಕು ಕಾಲಿನ ಪಶುಗಳ ಸ್ವಭಾವವನ್ನು ಇದು ವರೆಗೂ ಬಿಡುವದಾಗಿಲ್ಲ. ಇದನ್ನು ಬಿಡುವದೇ ಧರ್ಮವು."

ನಾರಾಯಣದಾಸರ ಪತ್ರದಿಂದ: "ಸತ್ಯವಾದಿಗೆ ಒಂದೇ ಕೆಲಸ ಸಾಕು. ಶಕ್ತಿಯ ಹೊರಗಿನ ಕೆಲಸವನ್ನು ತನ್ನ ಮೇಲೆ ತೆಗೆದುಕೊಳ್ಳಬಾರದು, ಶಕ್ತಿಯನ್ನು ಉಳಿಸಿಕೊಳ್ಳುವ ಆಶೆಯನ್ನು ಎಂದೂ ಮಾಡಲೇಬಾರದು. ಶಕ್ತಿಯನ್ನು ಮೀರಿ ಮಾಡಹೋಗುವವನು ಅಭಿಮಾನಿಯಿದ್ದಾನೆ, ಆಸಕ್ತನಿದ್ದಾನೆ. ಶಕ್ತಿಗಿಂತ ಕಡಿಮೆ ಮಾಡುವವನು ಕಳವು ಮಾಡುತ್ತಾನೆ. ವೇಳಾಪತ್ರಿಕೆಯನ್ನಿಟ್ಟು ನಾವು ಕೂಡ ನಮಗೆ ಗೊತ್ತಾಗದೆ ಈ ದೋಷದಿಂದ ಪಾರಾಗಬಲ್ಲೆವು. ಪಾರಾಗುತ್ತೇವೆಂದು ಹೇಳುವದಿಲ್ಲ, ಯಾಕಂದರೆ ವೇಳಾಪತ್ರಿಕೆಯನ್ನು ಜ್ಞಾನಪೂರ್ವಕವಾಗಿಯೂ, ಉಲ್ಲಾಸಪೂರ್ವಕವಾಗಿಯೂ ಅನುಸರಿಸದಿದ್ದರೆ ಅದರಿಂದ ಪೂರ್ಣಲಾಭವನ್ನು ಹೊಂದಲಾರೆವು."

ಈ ಸಲ ವಿದ್ಯಾಭ್ಯಾಸವನ್ನು ಕುರಿತು ಲೇಖ ಬರೆದರು. ಅದರಲ್ಲಿ ಸಾಹಿತ್ಯದ ಅಧ್ಯಯನ, ಸತ್ಯದರ್ಶನ ಕುರಿತು ಅಧ್ಯಯನ ಮತ್ತು ಆತ್ಮದರ್ಶನದ ಸಲುವಾಗಿ ಅಧ್ಯಯನ—ಎಂಬ ಭೇದಗಳನ್ನು ಮಾಡಿ ನಾವು ಕೊನೆಯವೆರಡು ಅಧ್ಯಯನಗಳ ಕಡೆಗೇ ಲಕ್ಷ್ಯಕೊಡಬೇಕು ಮತ್ತು ಆಶ್ರಮದಲ್ಲಿ ಅವುಗಳ ಮೇಲೆಯೇ ಧ್ಯಾನ-ವಿಡಲಿಕ್ಕೆಬೇಕೆಂದು ತಿಳಿಸಿದರು. ನಾರಾಯಣದಾಸಭಾಯಿಯವರ ಮೇಲೆ ಮತ್ತಿಷ್ಟು ಭಾರ ಹೆಚ್ಚಾಯಿತು. ಉತ್ತಮ ಕೆಲಸ ಮಾಡುವವರ ಕಡೆಯಿಂದ ಹೆಚ್ಚು ಕೆಲಸ ಬೇಡಿದ ಹೊರತು ಬಾಪೂಗೆ ತೃಪ್ತಿಯೇ ಇಲ್ಲ. ಆಶ್ರಮ ಒಂದು ದೊಡ್ಡ ಪಾಠಶಾಲೆ. ಅಲ್ಲಿ ಶಿಕ್ಷಣಕ್ಕೆ ಯಾವ ವಿಶಿಷ್ಟ ಸಮಯವೂ ಇಲ್ಲ. ಆದರೆ ಎಲ್ಲ ಸಮಯವೂ ಶಿಕ್ಷಣಕ್ಕಾಗಿಯೇ ಇರುತ್ತದೆ. ಆತ್ಮದರ್ಶನ—ಸತ್ಯದರ್ಶನದ ಭಾವನೆಯಿಂದ ಆಶ್ರಮದಲ್ಲಿರತಕ್ಕ ಪ್ರತಿಯೊಬ್ಬ ವ್ಯಕ್ತಿಯು ಶಿಕ್ಷಕನೂ ಆಗಿದ್ದಾನೆ ವಿದ್ಯಾರ್ಥಿಯೂ ಆಗಿದ್ದಾನೆ. ಯಾವ ವಿಷಯದಲ್ಲಿ ಅವನು ಜಾಣನಾಗಿರುವನೊ ಅದಕ್ಕೆ ಅವನು ಶಿಕ್ಷಕನಾಗಿದ್ದಾನೆ ಮತ್ತು ಅವನು ಕಲಿಯತಕ್ಕಂಥ ವಿಷಯದಲ್ಲಿ ಅವನು ವಿದ್ಯಾರ್ಥಿಯಾಗಿದ್ದಾನೆ. "ಎಲ್ಲಕ್ಕೂ ಹೆಚ್ಚಿನ ಶಿಕ್ಷಣವೆಂದರೆ ಚಾರಿತ್ರ್ಯದ ಶಿಕ್ಷಣ. ನಾವು ಯಮ ನಿಯಮಗಳನ್ನು ಪಾಲಿಸುತ್ತ ಹೋದಂತೆ ನಮ್ಮ ಶಿಕ್ಷೆಯು —ಸತ್ಯದರ್ಶನ ಶಕ್ತಿಯು—ಹೆಚ್ಚಾಗುತ್ತಲೇ ಹೋಗುವದು"

* * *

ಭಾವೂ ಕೇಳಿದ್ದನು: "**प्रातःस्मरामि** ಮುಂತಾದ ಶ್ಲೋಕಗಳನ್ನು ನಾವು ಅನ್ನುತ್ತೇವೆ. ಇದೇನು ಡಂಭಾಚಾರವಲ್ಲವೆ? ನಮ್ಮ ಇಡೀ ದಿನದ ವ್ಯವಹಾರವು ಶರೀರಕ್ಕೆ 'ನಾವು' ಎಂದು ತಿಳಿದು ನಡೆಯುತ್ತದೆ ಅವರಿಗೆ ಬರೆದರು: "ನಮ್ಮ ಪ್ರಾರ್ಥನೆಯ ಮೊದಲನೆಯ ಶ್ಲೋಕವು ನನಗೂ ಹಿಡಿತಡೆಯಾಗುತ್ತಿತ್ತು. ಆದರೆ ಆಳವಾಗಿ ಹೋದಂತೆ ತಿಳಿವಳಿಕೆಯೊಂದಿಗೆ ಈ ಶ್ಲೋಕವನ್ನು ಪಾಠಮಾಡುವದು

ಸರಿಯೆಂದು ಕಂಡುಬಂತು. 'ನಾವು' ಈ ಮಣ್ಣಿನ ಗೊಂಬೆಯಾದ ಶರೀರವಲ್ಲ, ಆದರೆ ಅದರಲ್ಲಿ ವಾಸವಾಗಿರುವ ಸಾಕ್ಷಿಯಾಗಿದ್ದೇವೆ ಎಂದು ನಮ್ಮ ಬುದ್ಧಿಯು ಅವಶ್ಯವಾಗಿ ಹೇಳುತ್ತದೆ. ಶ್ಲೋಕಗಳಲ್ಲಿ ಇದೇ ಸಾಕ್ಷಿಯ ವರ್ಣನೆಯಿದೆ. ತರುವಾಯ ಉಪಾಸಕನು 'ನಾನು ಆ ಸಾಕ್ಷಿ—ಬ್ರಹ್ಮ' ನಿದ್ದೇನೆ ಎಂದು ಪ್ರತಿಜ್ಞೆ ಮಾಡುತ್ತಾನೆ. ದಿನಾಲು ಪ್ರಯತ್ನಮಾಡುವಂಥ ಮತ್ತು ಮೃಣ್ಮಯ ಪಿಂಡದ ಸಂಬಂಧವನ್ನು ಕಡಿಮೆ ಮಾಡುತ್ತ ಹೋಗುವಂಥ ಮನುಷ್ಯರೇ ಇಂಥ ಪ್ರತಿಜ್ಞೆಯನ್ನು ಮಾಡಬಲ್ಲರು. ಮೂರ್ಛೆ, ಭಯ ಮತ್ತು ರಾಗದ್ವೇಷಾದಿಗಳಿದ್ದರೆ ಅವುಗಳ ಸ್ಥಳದಲ್ಲಿ ಎಲ್ಲ ಸಮಯದಲ್ಲಿ ಬ್ರಹ್ಮನ ಗುಣಗಳನ್ನು ನೆನಪು ಮಾಡಿ ಕೊಂಡು ರಾಗದ್ವೇಷಾದಿಗಳಿಂದ ಮುಕ್ತನಾಗಲಿಕ್ಕೆ ಪ್ರಯತ್ನ ಮಾಡುತ್ತಾನೆ. ಹೀಗೆ ಮಾಡುತ್ತ ಮಾಡುತ್ತ ಮನುಷ್ಯನು ಯಾವುದನ್ನು ಕುರಿತು ಧ್ಯಾನ ಮಾಡುತ್ತಾ-ನೆಯೊ ಕೊನೆಗೆ ಅದರಂತೆಯೇ ಆಗುತ್ತಾನೆ. ಆದುದರಿಂದ ನಮ್ರಪೂರ್ವಕವಾ-ಗಿಯೂ ದೃಢಪೂರ್ವಕವಾಗಿಯೂ ನಾವು ದಿನಾಲು ಈ ಶ್ಲೋಕವನ್ನು ಜ್ಞಾಪಿಸಿ ಕೊಳ್ಳುವಾ ಮತ್ತು ಪ್ರತಿಯೊಂದು ಕಾರ್ಯದಲ್ಲಿ ಆ ಪ್ರತಿಜ್ಞೆಯನ್ನು ಸಾಕ್ಷಿಯೆಂದು ತಿಳಿಯುವಾ."

ಬೇರೊಂದು ಪತ್ರದಲ್ಲಿ: "ಇಂಥದೊಂದು ವರ್ಗವಿದೆ. ಅದರಲ್ಲಿ ನಾವು ಅನೇಕ ಜನರು ಬಂದುಬಿಡುತ್ತೇವೆ. ಅವರು ಓದಿ ಓದಿ ವಿಚಾರಮಾಡುವ ಶಕ್ತಿಯನ್ನು ಕುಂಠಿತಮಾಡಿಕೊಳ್ಳುತ್ತಾರೆ. ಓದುವದನ್ನು ನಿಲ್ಲಿಸಿ ಇದುವರೆಗೆ ಓದಿದ್ದರಲ್ಲಿಯೇ ವಿಚಾರಮಾಡಲಿಕ್ಕೆ ಅವರಿಗೆ ಸೂಚಿಸಬೇಕು."

ಕನ್ಹೈಯಾಲಾಲರಿಗೆ ಬರೆದರು: "ಪರಮಾತ್ಮನ ಅರ್ಥವನ್ನು ಸತ್ಯವೆಂದು ಮಾಡಿದ್ದರೆ ಪ್ರತ್ಯಕ್ಷ ದರ್ಶನವು ಸಂಭವವಿದೆ. ಧ್ರುವ ಮುಂತಾದವರು ದರ್ಶನ ಮಾಡಿಕೊಂಡ ಮಾತನ್ನು ಅಕ್ಷರಶಃ ತಿಳಿಯುವದು ಯೋಗ್ಯವಾಗಲಾರದು. ಕವಿಗಳು ವರ್ಣಿಸಿದ್ದು ಒಂದು ಪ್ರಕಾರದ ರೂಪಕವಿದೆ." "ಮನಸ್ಸು, ವಚನ ಮತ್ತು ಶರೀರ ಇವುಗಳಿಂದ ಆಚರಿಸುವ ಸತ್ಯದ ಆಚರಣೆಯು ಶಾಶ್ವತವಾದ ಉತ್ತಮ ಯಜ್ಞವಾಗಿದೆ. ಪಾರಮಾರ್ಥಿಕ ವೃತ್ತಿಯಿಂದ ಇವತ್ತು ಅದರ ಮೂರ್ತರೂಪವು ರಾಟಿಯನ್ನು ನೂಲುವದು ಆಗಿದೆ." "ಪ್ರತಿಯೊಂದು ರೀತಿಯಿಂದ ಯಮನಿಯಮ ಗಳ ಪಾಲನೆಯೇ ಧರ್ಮದ ನಿಜವಾದ ಉಪಾಯವು."

ಛಗನಲಾಲ ಜೋಶಿಯವರಿಗೆ ಬರೆದರು: "೨೧ ನೇ ತಾರೀಖಿಗೆ ದೇವರ ಇಚ್ಛೆಯಿದ್ದರೆ ಭೆಟ್ಟಿಯಾಗುವದು. ಮನುಷ್ಯನು ವಿಚಾರ ಮಾಡಿಟ್ಟಂತೆ ಯಾವಾ ಗಲೂ ಎಲ್ಲಿ ಆಗುತ್ತದೆ? ನೋಡಿರಿ, ಪಾಪಾ ಸಾವಿನ ಹಾಸಿಗೆಯ ಮೇಲೆ ಮಲಗಿದ್ದಳು, ಆದರೆ ಬದುಕಿದಳು. ಅವಳ ಪತಿ ವರದಾಚಾರಿಯು ಧಷ್ಟಪುಷ್ಟನಾಗಿದ್ದನು.

ಅವನು ಕೆಲವೇ ದಿನ ಬೇನೆಬಿದ್ದು ತೀರಿಕೊಂಡನು ; ಹೋಗಿ ರಾಜಾಜಿಯವರ ಪಾಲಿಗೆ ವಿಧವೆಯಾದ ಹುಡುಗಿಯನ್ನು ಬಿಟ್ಟು ಹೋದನು. ಪಾಪಾ ಇವಳು ರಾಜಾಜಿಯ ಪ್ರೀತಿಯ ಮಗಳು. ಅವಳು ಧೈರ್ಯಸ್ಥಳಾದುದರಿಂದ ಸಹಿಸಿಕೊಳ್ಳಬಲ್ಲಳು. ಜ್ಞಾನವು ಅಂತಃಕರಣದವರೆಗೆ ಹೋಗಿ ಮುಟ್ಟಿದ್ದರೆ ಸಹನಮಾಡಿಕೊಳ್ಳುತ್ತಿದ್ದೇವೆಂಬ ಕಲ್ಪನೆಯೂ ಬರಲಿಕ್ಕಿಲ್ಲ. ಯಾಕಂದರೆ ತಿಳಿದವರಿಗೆ ಜನನ ಮರಣಗಳು ಒಂದೇ ಆಗಿವೆ. ಈ ಅನಿಶ್ಚಿತತೆಯ ಹೊಸ ಉದಾಹರಣೆಯು ಕಣ್ಣು ಮುಂದಿದೆ. ಆದುದರಿಂದ ದೇವರನ್ನು ಮುಂದಿಟ್ಟಿದ್ದೇನೆ. ೨೧ ನೇ ತಾರೀಖಿಗೆ ಭೆಟ್ಟಿಯಾಗುವ ನಮ್ಮ ಇಚ್ಛೆಯು ಆತನ ಇಚ್ಛೆಗನುಸಾರವಾಗಿ ಆದರೆ ಆಗುವದು, ಇಲ್ಲದಿದ್ದರೂ ಸರಿಯೆ!"

ಗಂಗಾ ಬಹನರಿಗೆ: "ಪತ್ರಗಳ ಗೊಂದಲವಿದೆ, ಅದರಲ್ಲಿ ಕೂಡ ಸಮಯ ಹೊರಟು ಹೋಗುತ್ತಿದೆ. ಈ ಪ್ರಕಾರ ಕೈದಿಯಾಗುವ ಅನುಭವವು ಮೇಲಿಂದ ಮೇಲೆ ಆಗುತ್ತಿರುತ್ತದೆ ಮತ್ತು ಆಗುತ್ತಿರಬೇಕು. ಗೀತಾಬೋಧೆಯನ್ನು ಕೃತಿಯಲ್ಲಿ ತರಲಿಕ್ಕೂ ಸಿಗುತ್ತಿದೆ. ಇಚ್ಛಿಸಿದಂತೆ ಆಗದಿದ್ದರೆ ಮನಸ್ಸಿಗೆ ಆಘಾತವಾಗುತ್ತಿದೆಯೊ ಇಲ್ಲವೊ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತಿದೆ ಮತ್ತು ಆಘಾತವು ಸ್ವಲ್ಪ ಕಡಿಮೆಯಿದೆ ಎಂದು ತಿಳಿದು ಅದನ್ನು ಮುಂದುವರಿಯಗೊಡುವದಿಲ್ಲ. ಸಿಗಲು ಯೋಗ್ಯವಾದ ವಸ್ತುಗಳನ್ನು ಬೇಡಬೇಕು. ಬೇಡಿದರೆ ಸಿಕ್ಕರೂ ಒಳ್ಳೆಯದೆ, ಸಿಗದಿದ್ದರೂ ಒಳ್ಳೆಯದೆ. ಸರೋಜಿನಿ ವೈದ್ಯರಾಜರಾಗುವರು. ಅದಕ್ಕಾಗಿ ನನ್ನ ಧನ್ಯವಾದಗಳನ್ನು ಹೇಳಿರಿ. ಅವರ ಮಿಠಾಯಿಗಳ ಉಪಯೋಗವನ್ನು ಇಲ್ಲಿ ಅನೇಕರು ಮಾಡಿಕೊಂಡರೆಂಬುದನ್ನೂ ಅವರಿಗೆ ತಿಳಿಸಿರಿ. ಆದರೆ ಇದರ ಅರ್ಥವನ್ನು ಮತ್ತೆ ಕಳಿಸಬೇಕೆಂದು ಎಂದೂ ಮಾಡಬಾರದು. ರಸವು ಗುಟುಕುಗಳಲ್ಲಿರುವದಿಲ್ಲ, ಹನಿಗಳಲ್ಲಿರುತ್ತದೆ. ನಾನು ಮೊದಲಿನ ಪತ್ರದಲ್ಲಿ ಕೂಡ ವಿನೋದವನ್ನೇ ಮಾಡಿದ್ದೆನು. ಇಂಥ ವಸ್ತುಗಳು ಇಲ್ಲಿ ನಮಗೆ ಶೋಭಿಸುವದಿಲ್ಲ. ಅವರಿಗೆ ಎಲ್ಲವೂ ಶೋಭೆಯನ್ನು ಕೊಡುತ್ತವೆ. ಅವರ ನಡಿಗೆಯಂತೆ ನನ್ನಂಥವನು ನಡೆಯ ಹೋದರೆ ಬಿದ್ದು ಹೋಗುವೆನು. ಇಲ್ಲಿ ನೋಡಿದರೆ ಒಬ್ಬ ದಾಸನಿದ್ದಾನೆ, ಒಬ್ಬ ಒಕ್ಕಲಿಗನಿದ್ದಾನೆ, ಒಬ್ಬ ಕೂಲಿಕಾರನಿದ್ದಾನೆ. ಇಂಥ ಮೂರ್ತಿಗಳು ಬಂಗಾರದ ಒಡವೆಗಳನ್ನು ತೊಡಹತ್ತಿದರೆ ಅವರಿಗೆ ಹಳ್ಳಿಯ ಹುಡುಗರು ಕಲ್ಲು ಒಗೆಯುವರು. ಇದೆಲ್ಲವನ್ನೂ ಸರೋಜಿನಿದೇವಿಯವರಿಗೆ ವಿನೋದದಲ್ಲಿ ಹೇಳುವದಾದರೆ ಹೇಳಿರಿ. ಇಲ್ಲವಾದರೆ ಇದರಿಂದ ಉಳಿದ ಭಗಿನಿಯರು ಯಾವ ಶಿಕ್ಷಣವನ್ನು ಪಡೆಯಬಲ್ಲರೊ ಅದನ್ನು ಪಡೆಯಲಿ. ನಾನೇನೊ ವಿನೋದದಲ್ಲಿ ಇಷ್ಟೊಂದು ಶಿಕ್ಷಣವನ್ನು ಕೊಟ್ಟಿದ್ದೇನೆ."

ಥಾಮಸ್ ಎ ಕೆಂಪಿಸ್‌ನ ಈ ವಾಕ್ಯಗಳು ಸುಂದರವಾಗಿವೆ :

"No man can safely appear in public, but he who loves seclusion.

"No man can safely be a superior but he who loves to live in subjection.

"No man can safely command but he who hath learned how to obey well.

"No man can rejoice securely but he who hath the testimony of a good conscience within."

"ಏಕಾಂತಪ್ರಿಯನಲ್ಲದ ಮನುಷ್ಯನು ನಿಶ್ಚಿಂತನಾಗಿ ಜನರೊಡನೆ ಇರಲಾರನು.

"ಯಾವನಿಗೆ ಆಳಾಗಿ ದುಡಿಯುವದು ರುಚಿಸುವದಿಲ್ಲವೊ ಅವನು ಉತ್ತಮ ಮೇಲಧಿಕಾರಿಯಾಗಲಾರನು.

"ಯಾವನಿಗೆ ಆಜ್ಞೆಯನ್ನು ಪಾಲಿಸುವದು ರುಚಿಸುವದಿಲ್ಲವೊ ಅಂಥವನು ಚನ್ನಾಗಿ ಆಜ್ಞೆಯನ್ನು ಕೊಡಲಾರನು.

"ಯಾವನ ಹೃದಯವು ಅಂತಃಶುದ್ಧಿಯ ಸಾಕ್ಷಿಯನ್ನು ಕೊಡುವದಿಲ್ಲವೊ ಅಂಥ ಮನುಷ್ಯನು ಸುಖವಾಗಿ ಆನಂದವನ್ನು ಭೋಗಿಸಲಾರನು."

**तस्माद्‌ उत्तिष्ठ कौंतेय युद्धाय कृतनिश्चय** ಇದರ ಝೇಂಕಾರವು ಇದರಲ್ಲಿ ಎಷ್ಟು ಚಮತ್ಕಾರಿಕ ರೀತಿಯಿಂದ ಬಂದಿದೆ :

"Arise, and begin this very instant, and say, now is the time to do, now is the time to fight, now is the proper time to amend my life.

"Except thou do violence to thyself, thou wilt not overcome vice."

"ಏಳು, ಮತ್ತು ಇದೇ ಕ್ಷಣವೇ ಪ್ರಾರಂಭ ಮಾಡು. ಮಾಡುವ ಸಮಯವು ಇದೇ, ಯುದ್ಧ ಮಾಡುವ ಸಮಯವೂ ಇದೇ ಮತ್ತು ಜೀವನವನ್ನು ಸುಧಾರಿಸುವ ಸಮಯವೂ ಇದೇ ಎಂದು ಹೇಳು.

"ನಿನ್ನನ್ನು ನೀನೇ ಕೊಂದ ಹೊರತು ನೀನು ವಿಷಯಗಳನ್ನು ಜಯಿಸಲಾರಿ."

ಈ ಶರೀರಧಾರಿಯಾಗಿರುವವರೆಗೆ ಮೋಕ್ಷ ಸಿಗುವದಿಲ್ಲವೆಂದು ಬಾಪೂ ಹೇಳುತ್ತಿರುವಂತೆ :

"As long as we carry about this frail body we cannot be free from sin, nor live without weariness and sorrow. . . . We must wait God's mercy till iniquity pass away and this mortality be swallowed up in life."

"ಈ ನಶ್ವರ ದೇಹವನ್ನು ಧಾರಣ ಮಾಡಿರುವವರೆಗೆ ನಾವು ಪಾಪದಿಂದ ಮುಕ್ತರಾಗಲಾರೆವು. ಅದರಂತೆ ಆಯಾಸ ಮತ್ತು ಕ್ಲೇಶಗಳಿಲ್ಲದೆಯೂ ಇರಲಾರೆವು. . . . ಪಾಪ ನಿರ್ಮೂಲನೆಯಾಗದ ವರೆಗೆ ಮತ್ತು ಮೃತತ್ವವು ಅಮೃತದಲ್ಲಿ ಕೂಡದ ವರೆಗೆ ನಾವು ದೇವರ ಹತ್ತರ ದಯೆಯನ್ನು ಯಾಚಿಸುತ್ತಿರಬೇಕು."

ನಿನ್ನೆ ಪ್ರೇಮಾಬಹನಳಿಗೆ ನಿರುಪಯುಕ್ತ ಶೃಂಗಾರದ ವಿಷಯಕ್ಕೂ ಮಥುರಾದಾಸರಿಗೆ ೪೦೦ ನಂಬರಿನ ನೂಲಿನ ವಿಷಯಕ್ಕೂ ಬರೆದಿದ್ದರು. ಆದುದರಿಂದ ಕಲೆಯ ವಿಷಯಕ್ಕೆ ಬಾಪೂರವರ ವಿಚಾರ ೧೧-೭-'೩೨ ಗಳನ್ನು ಸ್ವಲ್ಪ ಪುನರಾವರ್ತನೆ ಮಾಡಿಕೊಳ್ಳಬೇಕೆಂದು ಮನಸ್ಸಾಯಿತು. ಸಾಕಷ್ಟು ಚರ್ಚೆಯಾಯಿತು. ಅದರ ಸಾರವನ್ನು ಇಲ್ಲಿ ಕೊಡುತ್ತೇನೆ: "ಕಲೆಯನ್ನು ಉಪಯುಕ್ತತೆಯಿಂದ ಬೇರ್ಪಡಿಸಲಾಗದು, ಇದೇನೊ ನಿಜ. ಉಪಯೋಗದ ಅರ್ಥವನ್ನು ಹೆಚ್ಚಿನ ಹೆಚ್ಚು ವಿಶಾಲ ಮಾಡಬೇಕು. ೪೦೦ ನಂಬರಿನ ನೂಲು ಉಡಲಿಕ್ಕೆ ಉಪಯೋಗ ಬೀಳಲಾರದು, ಆದರೆ ನಾಲ್ಕು ನೂರು ನಂಬರಿನ ನೂಲಿನ ವರೆಗೆ ಮುಟ್ಟಬೇಕಾದರೆ ಮಾಡಬೇಕಾದ ಪರಿಶ್ರಮ, ನೂಲುವ ಶಾಸ್ತ್ರದಲ್ಲಿ ಬಿಡಿಸಬೇಕಾದ ತೊಡಕುಗಳು ಮತ್ತು ಹೊಳೆಯುವಂಥ ರಹಸ್ಯಗಳು ಎಲ್ಲವೂ ದರಿದ್ರನಾರಾಯಣನ ಸಲುವಾಗಿ ಲಾಭದಾಯಕವಾಗಿಯೇ ಆಗುತ್ತವೆ. ಉಡಲಿಕ್ಕೂ ಉಪಯೋಗವಾಗಬಲ್ಲದು. ೨೦ ನಂಬರನ್ನು ಲಕ್ಷ್ಯದಲ್ಲಿಟ್ಟಾಗ ಕಷ್ಟದಿಂದ ೧೦ ನಂಬರಿನ ನೂಲನ್ನು ನೂಲಲಾಗುತ್ತಿತ್ತು. ೪೦೦ ನಂಬರನ್ನು ಲಕ್ಷ್ಯದಲ್ಲಿಟ್ಟಾಗ ೫೦-೬೦ ರ ವರೆಗೆ ಸಹಜವಾಗಿ ನೂಲಲಿಕ್ಕೆ ಹತ್ತಬಹುದು. ಆದುದರಿಂದ ನೂಲುವ ಕಲೆಯ ವಿಕಾಸದ ದೃಷ್ಟಿಯಿಂದ ಕೂಡ ೪೦೦ ನಂಬರನ್ನು ಲಕ್ಷ್ಯವನ್ನಾಗಿಡುವದು ಒಳ್ಳೇ ಉಪಯುಕ್ತ ಮಾತಾಗಿದೆ. ನಾವು ೫೦-೬೦ ಅಥವಾ ೧೦೦ ನಂಬರಿನ ನೂಲಿನ ಉಪಯೋಗ ಮಾಡಿಕೊಳ್ಳದಿದ್ದರೂ ಸರಿಯೆ. ಸೇವಕನಂತೂ ತನ್ನ ಶರೀರವನ್ನು ೬ ನಂಬರಿನ ನೂಲಿನಿಂದ ಮುಚ್ಚಿಕೊಳ್ಳುವನು. ಅತಿ ನಾಜೂಕಾದ ಶರೀರದ ಆವಶ್ಯಕತೆಯನ್ನು ಪೂರ್ತಿ ಮಾಡುವದು ಸಾಧ್ಯವಿದೆ ಎಂಬುದನ್ನು ನಾವು ಸಿದ್ಧಮಾಡಿ ತೋರಿಸಿದಾಗ ದರಿದ್ರನಾರಾಯಣನ ಸೇವೆ ಮಾಡಿರುತ್ತೇವೆಂದು ಹೇಳಲಾಗುವದು. ೪೦೦ ನಂಬರಿನ ಹಿಂದೆ ದರಿದ್ರನಾರಾಯಣನ ಸೇವೆಯೇ ಹಿನ್ನೆಲೆ (Back ground) ಯಾಗಿರಬೇಕು. ದರಿದ್ರನಾರಾಯಣನ ಸೇವೆಯಲ್ಲಿ ೪೦೦ ನಂಬರಿನ ನೂಲನ್ನು ಉಪಯೋಗಿಸುವವರನ್ನು ಉಪೇಕ್ಷಿಸಲಾಗದು. ನಾನು ವೆಟಿಕನ್ನದಲ್ಲಿ ನೋಡಿ ದಂಗುಬಡೆದು ನಿಂತ ಸುಂದರ ಛಾಯಾ ಚಿತ್ರಗಳೂ ಮೂರ್ತಿಗಳೂ ಏನನ್ನು ತೋರಿಸುತ್ತವೆ? ಆ ಚಿತ್ರ

ಗಳನ್ನೂ, ಮೂರ್ತಿಗಳನ್ನೂ ನೋಡಲಿಕ್ಕೆ ಎಲ್ಲರಿಗೂ ದೃಷ್ಟಿ ಇರಲಿಕ್ಕಿಲ್ಲ, ಸ್ವಲ್ಪ ಜನರ ಆತ್ಮಗಳು ಮಾತ್ರ ಅವುಗಳನ್ನು ನೋಡಿ ಸ್ಫುರಣಹೊಂದುತ್ತಿರಬಹುದು. ಆದರೆ ಇದರಿಂದೇನು ? ಯಾವನು ಈ ಮೂರ್ತಿಗಳನ್ನು ಕಟೆದಿರುವನೊ ಚಿತ್ರಗಳನ್ನು ಚಿತ್ರಿಸಿರುವನೊ ಅವನಿಗಂತೂ ದರಿದ್ರನಾರಾಯಣನ ಅಂದರೆ ಮಾನವಸಮಾಜದ ಸೇವೆಯ ಕಲ್ಪನೆಯು ಬಂದಿರಲೇಬೇಕು. ಯಾವದಾದರೂ ಚಿತ್ರವನ್ನು ನೋಡಿ ಮನಸ್ಸಿನಲ್ಲಿ ಭೀಭತ್ಸ ವಿಚಾರಗಳು ಬರುತ್ತಿದ್ದರೆ ನಾನು ಅದಕ್ಕೆ ಕಲೆಯೆಂದು ಹೇಳುವದಿಲ್ಲ. ಯಾವದು ಮನುಷ್ಯನನ್ನು ಸದಾಚಾರದಲ್ಲಿ ಒಂದು ಹೆಜ್ಜೆ ಮುಂದೆ ಒಯ್ಯುವದೊ ಮತ್ತು ಅವನ ಆದರ್ಶವನ್ನು ಉನ್ನತವಾಗಿ ಮಾಡುವದೊ ಅದೇ ಕಲೆಯು. ಅವನ ಸದಾಚಾರವನ್ನು ಹಾಳುಮಾಡುವದು ಕಲೆಯಲ್ಲ, ಭೀಭತ್ಸತೆ. ಈಗೀಗ ಆಕಾಶದರ್ಶನದ ಪುಸ್ತಕಗಳನ್ನು ಓದುತ್ತಿರುತ್ತೇನೆ. ಸೂರ್ಯನ ಮೇಲಿನ ಒಂದು ವರ್ಗಗಜದಷ್ಟು ಸ್ಥಳದ ಕಾವು ನಮ್ಮ ಪೃಥ್ವಿಯನ್ನು ಕಾಯಂ ಇಡುವದಕ್ಕಾಗಿ ಸಾಕೆಂದು ಈಗ ಅನೇಕ ಶೋಧಗಳಿಂದ ಗೊತ್ತಾಗಿದೆ. ಈ ಶೋಧದ ಯಾವ ಮಹತ್ವವಾಗಲಿ ಉಪಯೋಗವಾಗಲಿ ಕಾಣಿಸುತ್ತಿರಲಿಕ್ಕಿಲ್ಲ. ಆದರೆ ಇದರಿಂದ ಅತ್ಯಂತ ಉಪಯೋಗವಿದೆ. ಈ ಸೂರ್ಯನು ಪೃಥ್ವಿಯಿಂದ ಸಾವಿರ ಅಥವಾ ಲಕ್ಷ ಗಾವುದ ದೂರನಿದ್ದಾನೆ. ಅವನು ತನ್ನ ಸ್ಥಾನದಲ್ಲಿದ್ದಾನೆ ಮತ್ತು ನಾವು ನಮ್ಮ ಸ್ಥಳದಲ್ಲಿದ್ದೇವೆ. ಇದೇ ಪ್ರಕಾರ ಹತ್ತಿಯ ಒಂದು ಬೀಜಕೋಶದಿಂದ ಮೈಲುದ್ದ ಎಳೆಯನ್ನು ತೆಗೆದು ತೋರಿಸಿದರೆ ಇದು ನೂಲುವ ಶಾಸ್ತ್ರಕ್ಕೆ ಹೆಚ್ಚಿನ ಹೆಚ್ಚು ಉಪಯುಕ್ತವಾದ ವಿಷಯವಾಗುವದು.

“ಆಶ್ರಮದಲ್ಲಿಯ ನನ್ನ ಶಿಕ್ಷಣದ ಕಲ್ಪನೆಯು ಮಕ್ಕಳ ಸ್ವಾತಂತ್ರ್ಯದ ಶಿಕ್ಷಣವಾಗಿದೆ. ತೀರ ಚಿಕ್ಕ ಮಕ್ಕಳಿಗೂ ತಾನು ಕೂಡ ಏನಾದರೂ ಇದ್ದೇನೆಂದು ಅನಿಸಬೇಕು. ಅವನ ವಿಶೇಷ ಶಕ್ತಿಯು ಯಾವ ವಿಷಯದಲ್ಲಿದೆ ಎಂಬುದನ್ನು ನಾವು ನೋಡಬೇಕು ಮತ್ತು ಇಂಥದರಲ್ಲಿ ಸಫಲವಾಗುವನೆಂದು ಒಂದು ಸಲ ನೋಡಿದ ಮೇಲೆ ಅದಕ್ಕಾಗಿ ಎಲ್ಲ ಸಾಧನೆಗಳನ್ನೂ ಒದಗಿಸಬೇಕು. . . . ಆದರೆ ಈ ಎಲ್ಲ ಜ್ಞಾನದ ಉಪಯೋಗವನ್ನು ಅವನು ಸಮಾಜದ ಸಲುವಾಗಿ ಮಾಡಬೇಕು ಎಂಬ ನೀತಿ ಇರಬೇಕು. . . . ನ ಸಲುವಾಗಿ ಎಷ್ಟೇ ಖರ್ಚು ಹತ್ತಲಿ ಅದನ್ನೆಲ್ಲ ಮಾಡಬೇಕು ಎಂದು ಮಾಡಿದ ವಿಚಾರವನ್ನು ಇದೇ ದೃಷ್ಟಿಯಿಂದಲೇ ಮಾಡಲಾಗಿತ್ತು. ಯಾಕಂದರೆ ಅವನಲ್ಲಿ ಯಂತ್ರಶಾಸ್ತ್ರದ ಪ್ರತಿಭೆಯಿದೆಯೆಂಬುದನ್ನು ನಾನು ನೋಡಿದ್ದೇನೆ. ನಮ್ಮ ಧ್ಯೇಯವು ಕೇವಲ ಪುಸ್ತಕಗಳನ್ನು ಓದಿ ಓದಿ ಬುದ್ಧಿಯನ್ನು ತುಂಬುವದು ಆಗಿರುವದಿಲ್ಲ. ನಮ್ಮಲ್ಲಿ ತಾಯಿತಂದೆಗಳು ಮಕ್ಕಳ ಸಲುವಾಗಿ ಜೀವಿಸುವರು, ಮಕ್ಕಳಿಂದ ಕಲಿಯುವರು ಮತ್ತು ಮಕ್ಕಳಿಗೆ ಕಲಿಸುವರು.

ಇಡೀ ಜೀವನವು ಪಾಠಶಾಲೆ ಮತ್ತು ಶಿಕ್ಷಣರೂಪವಾಗಿ ಪರಿವರ್ತಿಸಬೇಕು.

"ಇದುವರೆಗೆ ನಾವು ಹೆಚ್ಚಾಗಿ ಸಾಧಿಸಿಲ್ಲ. ಯಾಕಂದರೆ ನಮ್ಮ ವಯಸ್ಸಾದರೂ ಎಷ್ಟು? ಹದಿನಾರು ವರುಷ. ಅದರಲ್ಲಿಯೂ ಹನ್ನೆರಡು ವರುಷ ಹೋರಾಡುವದರಲ್ಲಿಯೇ ಹೋದವು. ಈ ಪ್ರಕಾರ ಹೋರಾಡುತ್ತ ಹೋರಾಡುತ್ತ ನಾವು ಅನುಭವಿಗಳಾದರೆ ಕೆಟ್ಟದ್ದೇನೂ ಇಲ್ಲ. ಇಂನೇ ಇಸ್ವಿಯಲ್ಲಿ ಆಶ್ರಮವನ್ನು ಹೋಮ ಮಾಡಿ ಪ್ರಾರಂಭಮಾಡಿದೆವು. ಇದು ನಮ್ಮ ವಿಕಾಸದ ಒಂದು ಕ್ರಮವೆಂದು ಹೇಳಬಹುದು."

ಹಿಂದಿನ ಸಾರೆ ಮೇಜರರು ಉತ್ತಮ ತುಪ್ಪವನ್ನು ನಮ್ಮ ಸಲುವಾಗಿ ಕೊಂಡು ಕಳಿಸಿದ್ದಿಲ್ಲ. ಆದರೆ ತಮ್ಮ ಮನೆಯಿಂದ ಕಳಿಸಿದ್ದರೆಂಬುದು ಈ ಸಲ ಅವರನ್ನು ತುಪ್ಪ ಬೇಡಿದ ಮೇಲೆ ಗೊತ್ತಾಯಿತು. ಪತ್ರಗಳ ಬಗ್ಗೆ

೧೨-೭-'೩೨ ಕೇಳಿದರೆ ಹೇಳಿದರು: "ಕ್ಯಾಂಪಜೇಲಿಗೂ ಸ್ತ್ರೀಯರಿಗೂ ಕಳಿಸಬೇಕಾಗುವ ಪತ್ರಗಳನ್ನೂ ಸರಕಾರಕ್ಕೆ ನೋಡಲಿಕ್ಕೆ ಕಳಿಸಬೇಕಾಗುವದು.". ಬಾಪೂ ಹೇಳಿದರು: "ಹಾಗಾದರೆ ನಾನು ಕಳಿಸುವದೇ ಇಲ್ಲ. ಈ ವಿಷಯದ ಸಲುವಾಗಿ ಹೋರಾಡಬೇಕಾಗುವದು." ಪಾಪ, ಮೇಜರರು ಇದರ ನಂತರ ರಾಜಕೀಯ ಪರಿಸ್ಥಿತಿಯ ಬಗ್ಗೆ ಕೇಳತೊಡಗಿದರು. ಬಾಪೂ ಹೇಳಿದರು: "ಉದಾರ ಮತವಾದಿಗಳಲ್ಲಿ ಸ್ವಲ್ಪ ಕೂಡ ಸ್ವಾಭಿಮಾನಭಾವನೆ ಉಳಿದಿಲ್ಲವೆಂದು ಸಾಮ್ಯುಅಲ್ ಹೋರನು ತಿಳಿದಿರುವದರಿಂದಲೇ ಅವನು ಇಂಥ ಠರಾವನ್ನು ಮಾಡುವನು. ವಾಸ್ತವಿಕವಾಗಿ ದುಂಡುಮೇಜು ಪರಿಷತ್ತಿನಲ್ಲಿ ಅಭಿಪ್ರಾಯ ಮುಂತಾದ್ದೇನೂ ಇರಲಿಲ್ಲ. ಸರಕಾರಿ ಸದಸ್ಯರೇ ಮನಸ್ಸಿಗೆ ಬಂದಂತೆ ಮಾಡುತ್ತಿದ್ದರೆಂಬುದನ್ನು ನಾನು ನೋಡಿದೆನು. ಆದರೂ ಸಹ ಈ ಯೋಜನೆಯು ಅವರ ಮನಸ್ಸಿಗೆ ಸ್ವಲ್ಪ ಸಮಾಧಾನ ಕೊಡುವಂತಹದಾಗಿತ್ತು. ಈ ಯೋಜನೆಯಲ್ಲಿ ಈ ಪ್ರಕಾರ ಮನಸ್ಸಿಗೆ ತಿಳಿಹೇಳುವಂಥ ಮಾತೂ ಇಲ್ಲ. ಆದುದರಿಂದ ಈ ಜನರು ಇದನ್ನು ಒಪ್ಪದಿದ್ದರೆ ಏನು ಮಾಡಬೇಕು?"

ವಲ್ಲಭಭಾಯಿ ಕೇಳಿದರು: "ಇನ್ನು ಉದಾರಮತವಾದಿಗಳು ಏನು ಮಾಡುವರು?"

ಬಾಪೂ: "ಅವರ ಸ್ಥಿತಿಯು ಕಠಿಣವಾಗಿದೆ. ಕಾಂಗ್ರೆಸ್ಸಿನ ಜೊತೆಗೆ ಕೂಡಲಾರರು. ಮತ್ತು ಈ ಧೋರಣೆಯನ್ನು ಎಲ್ಲಿಯವರೆಗೆ ಮುಂದುವರಿಸುವರು?"

ವಲ್ಲಭಭಾಯಿ: "ನಿಮಗೆ ಇವರ ಪರಿಚಯವಿದೆ. ಆದುದರಿಂದ ಕೇಳುತ್ತೇನೆ."

ಬಾಪೂ: "ಪರಿಚಯವಿದೆಯೆಂದೇ ಅವರ ತೊಂದರೆಗಳನ್ನು ತೋರಿಸುತ್ತೇನೆ."

‘ ಮಾಡರ್ನ್ ರಿವ್ಯೂ ’ದ ಜೂನ ಅಂಕಿನಲ್ಲಿ ‘ ಬಂಗಾಲದ ಹಿಂದುಗಳ ಘೋಷಣೆ,’ ಎಂಬ ಶಿರೋನಾಮದ ಕೆಳಗೆ ಒಂದು ಲೇಖ ಪ್ರಸಿದ್ಧವಾಗಿತ್ತು. ಅದರ ವಿಷಯಕ್ಕೆ ಬಂದ ‘ ಮುಸಲ್ಮಾನ ’ದ ಟೀಕೆಗಳಿಗೆ ರಮಾನಂದ ಚಟರ್ಜಿಯವರು ಕೊಟ್ಟ ಸುಂದರ ವಾದ ಉತ್ತರವನ್ನು ಓದಿದೆವು. ಬಾಪೂ ಹೇಳಿದರು : “ಪಾಪ, ‘ಮುಸಲ್ಮಾನ’ ಪತ್ರದ ಸಂಪಾದಕರಿಗೆ ಇದನ್ನು ತಿಳಿದುಕೊಳ್ಳುವದೂ ಸಾಧ್ಯವಿಲ್ಲ.”

ಇವತ್ತಿನ ಟಪಾಲಿನಲ್ಲಿ ಸರಕಾರವು ಒಳ್ಳೇ ಪರಿಶ್ರಮಪಟ್ಟು ಆರಿಸಿ ತೆಗೆದು ಕಳಿಸಿದ ಎರಡು ಮೂರು ಪತ್ರಗಳು ಬಂದವು. ತೊಂದರೆ ಕೊಡುವದಕ್ಕಾಗಿಯೇ ಇಂಥ ಪತ್ರಗಳನ್ನು ಕಳಿಸಿರುವರಲ್ಲವೆ? ಒಂದರಲ್ಲಿ ಯಾವನೊ ಒಬ್ಬ

೧೩–೭–’೩೨ ಮುಸಲ್ಮಾನನ ಬೈಗಳಿವೆ. ಎರಡನೆಯದರಲ್ಲಿ ಒಬ್ಬ ಸಾಹೇಬನು ‘ ದೇವರು ಏನನ್ನೂ ಮಾಡಲಾರನು. ಕರ್ಮದ್ದೇ ಫಲ ದೊರೆಯುತ್ತದೆಂದಮೇಲೆ ದೇವರ ಪೂಜೆಮಾಡುವ ಬದಲು ಆವನ ಮೇಲೆ ದಯೆಯನ್ನು ಏಕೆ ತೋರಿಸಬಾರದು ? ’ ಎಂದು ಕೇಳಿದ್ದನು. ಮೇಜರರು ಇಂಥ ಪತ್ರಗಳನ್ನು ತಿಳಿದೂ ತಿಳಿದೂ ಕೊಡುತ್ತಿದ್ದಿಲ್ಲ. ಉಪಯುಕ್ತ ಪತ್ರಗಳನ್ನು ಕೊಡುತ್ತಿದ್ದರು. ಈಗ ಸರಕಾರದಲ್ಲಿ ಉಪಯುಕ್ತ ಪತ್ರಗಳು ಉಳಿದು ಹೋಗುತ್ತವೆ ಮತ್ತು ಕೆಲಸಕ್ಕೆ ಬಾರದವುಗಳನ್ನು ಇಲ್ಲಿ ಕಳಿಸಲಾಗುತ್ತಿದೆ. ನಾನು ಅಂದೆ : “ ರೇಗಿಸಲಿಕ್ಕಾಗಿಯಲ್ಲವೆ ? ” ಬಾಪೂ ಹೇಳಿದರು : “ ವಲ್ಲಭಭಾಯಿಯವರ ಉದಾರ ಅರ್ಥವನ್ನು ಮಾಡುವದು ಒಳ್ಳೆಯದು.” ಯಾವುದಾದರೂ ಕಾರಕೂನನಿಗೆ ಕೆಲಸವನ್ನು ಒಪ್ಪಿಸಿರಬಹುದು ಎಂಬ ಅರ್ಥವನ್ನು ಅವರು ಮಾಡಿದ್ದರು. ಅವನಿಗೆ ಅತ್ಯಂತ ನಿರ್ದೋಷವೆನಿಸುವಪತ್ರಗಳನ್ನು ಅವನು ಮೊದಲು ಕಳಿಸುತ್ತಾನೆ ಮತ್ತು ಉಳಿದವುಗಳನ್ನು ದೊಡ್ಡ ಆಫೀಸರರಿಗೆ ತೋರಿಸುವದಕ್ಕಾಗಿ ಇಡುತ್ತಿರಬಹುದು.

ನಾನು ಹೇಳಿದೆ : “ ವಲ್ಲಭಭಾಯಿಯವರು ಸರಕಾರದ ಕೆಲಸಗಳ ಬಗ್ಗೆ ಅಪರೂಪವಾಗಿ ಇಂಥ ಉದಾರ ಅರ್ಥವನ್ನು ಮಾಡುತ್ತಾರೆ. ”

ಬಾಪೂ : “ ಈಗೀಗ ಸಂಸ್ಕೃತದ ಅಭ್ಯಾಸ ಮಾಡತೊಡಗಿರುವರಲ್ಲವೆ ? ”

* * *

“ There is nothing that so difileth and entangleth the heart of man as an impure attachment to created things. If thou wilt refuse *exterior consolations*, then shalt thou be able to apply thy mind to heavenly things and experience frequent interior joy. ”

“ಜಗತ್ತಿನ ವಸ್ತುಗಳ ಸಲುವಾಗಿ ಅಪವಿತ್ರ ಆಸಕ್ತಿ[1]ಯಂಥ ಮತ್ತು ಕಲುಷಿತ ಮಾಡಿ ಮೋಹಜಾಲದಲ್ಲಿ ಕೆಡವುವಂಥ ವಸ್ತು ಬೇರೆ ಯಾವುದೂ ಇಲ್ಲ. ನೀನು ಬಾಹ್ಯತೃಪ್ತಿಯಿಂದ[2] ವಿಮುಖನಾಗುವದನ್ನು ಕಲಿತಾಗಲೇ ನಿನ್ನ ಚಿತ್ತ-ವನ್ನು ದಿವ್ಯ ವಸ್ತುಗಳ ಕಡೆಗೆ ತಿರುಗಿಸಬಲ್ಲೆ ಮತ್ತು ಒಳಗಿನ ಆನಂದದ ಅನುಭವ ವನ್ನು ಪಡೆಯಬಲ್ಲೆ.”

ಇವತ್ತು ಬಾಪೂ ಹೇಳಹತ್ತಿದರು : “ಹೀಗಾಗುವ ಸಂಭವವಿದೆ : ಈ ಜನರು ಒಂದಿಲ್ಲೊಂದು ನೆವಮಾಡಿ ಮುಸೂದೆ ಮಾಡುವವರೆಗೆ ಮುಟ್ಟುವದೇ ಇಲ್ಲ. ಹೋಗಿರಿ, ನಿಮಗೆ ಏನೂ ಬೇಡವಾದರೆ ನಾವೇನೂ ಕೊಡುವ-ದಿಲ್ಲ ಎಂದು ಹೇಳಬಹುದು.”

೧೪-೭-'೩೨

* * *

ಆ ಕೆಲಸಕ್ಕೆ ಬಾರದ ಟಪಾಲಿನಲ್ಲಿ ಪಂಜಾಬದ ಒಬ್ಬ . . . ಖಾನನ ಪತ್ರ ವಿತ್ತು : ನಿಮಗೆ ರಾಜನೀತಿ ತಿಳಿಯುವದಿಲ್ಲ. ಅದನ್ನು ಆಗಾಖಾನ ಮತ್ತು ಶಾಸ್ತ್ರೀ–ಸಪ್ರೂರಂಥವರಿಗೆ ಒಪ್ಪಿಸಿ ನೀವು ಹಿಮಾಲಯಕ್ಕೆ ಹೊರಟು ಹೋಗಿರಿ ಮತ್ತು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಿರಿ. ಅವನಿಗೆ ಬಾಪೂ ತಮ್ಮ ಕೈಯಿಂದ ಬರೆದರು :

“Dear friend,

“I thank you for your admonition. You do not expect me to argue with you. I fear that as prisoner, I would not be permitted to enter into argument over political affairs. But I may tell you that deep thinking in the solitude of a jail has not induced a change in my outlook.”

“ಪ್ರಿಯ ಮಿತ್ರರೇ,

“ನೀವು ಎಚ್ಚರಿಕೆ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ನಿಮ್ಮ ಸಂಗಡ ವಾದವಿವಾದವನ್ನು ಮಾಡಬೇಕೆಂದು ನೀವು ಬಯಸುತ್ತಿರಲಿಕ್ಕಿಲ್ಲ. ಕೈದಿಯಿದ್ದ ಕಾರಣ ರಾಜಕೀಯ ವಿಷಯದಲ್ಲಿ ಚರ್ಚೆಮಾಡಲಿಕ್ಕೆ ನನಗೆ ಪರವಾನಿಗೆ ದೊರೆಯ-ಲಾರದು. ಜೇಲಿನ ಮೂಲೆಯಲ್ಲಿ ಕುಳಿತುಕೊಂಡು ಆಳವಾಗಿ ವಿಚಾರಮಾಡಿದ ಮೇಲೆಯೂ ನನ್ನ ವಿಚಾರಗಳಲ್ಲಿ ಸ್ವಲ್ಪೂ ಬದಲಾಗಿಲ್ಲವೆಂಬುದನ್ನಷ್ಟು ಹೇಳುವೆನು.”

ವಲ್ಲಭಭಾಯಿ : “ಈ ಬೈಗಳನ್ನು ಬೈಯ್ಯುವವನಿಗೆ ನೀವು ನಿಮ್ಮ ಕೈಯಿಂದ ಪತ್ರವನ್ನೇಕೆ ಬರೆದಿರಿ ?”

---

೧ ये तु संस्पर्शजा दोषा दुःखयोनय अेव ते ।

೨ यस्त्वात्मरतिरेव स्यादात्म तृप्तश्च मानव : ।

ಬಾಪೂ: "ಇವನಿಗೆ ಸ್ವತಃ ಕೈಯಿಂದಲೇ ಬರೆಯಬೇಕು."

ವಲ್ಲಭಭಾಯಿ: "ಬೈಯುತ್ತಾರೆ. ಅದಕ್ಕಾಗಿಯೇ ಏನು? ಇದರಿಂದಲೇ ಬಹಳ ಜನರು ಉದ್ಧಟರಾಗುತ್ತಾರೆ."

ಬಾಪೂ: "ಇದರಿಂದ ನಮಗೇನಾದರೂ ಹಾನಿಯಾಗಿದೆಯೆಂದೆನಿಸುವದಿಲ್ಲ."

ಮತ್ತೊಬ್ಬ ಮನುಷ್ಯನು ಕರ್ಮದ ನಿಯಮವು ದೇವರ ಅಸ್ತಿತ್ವಕ್ಕೆ ವಿರೋಧಿಯಾಗಿದೆಯೆಂದು ಬರೆದಿದ್ದನು. ಅಸತ್ ಮತ್ತು ಅನಿಷ್ಟಗಳನ್ನು ದೂರ ಮಾಡುವ ಶಕ್ತಿಯು ದೇವರಿಗಿಲ್ಲವೆಂದು ಹೇಳಿ ದೇವರ ಪ್ರಾರ್ಥನೆಯನ್ನು ಖಂಡಿಸಿದ್ದನು. ಅವನಿಗೆ ಕೂಡ ಬಾಪೂ ತಮ್ಮ ಕೈಯಿಂದ ಪತ್ರ ಬರೆದರು. ಬಾಪೂ ಅಂದರು: "ಇಂಥ ಮನುಷ್ಯನು ಪ್ರಾಮಾಣಿಕನಿದ್ದರೆ ಅವನ ಮೇಲೆ ಒಂದು ಪತ್ರದ ಪರಿಣಾಮವೂ ಬಹಳವಾಗುತ್ತದೆ."

"There can be no manner of doubt that this universe of sentient beings is governed by a Law. If you can think of Law without its Giver, I would say that the Law is the Law Giver, that is, God. When we pray to the Law we simply yearn after knowing the Law and obeying it. We become what we yearn after. Hence the necessity for prayer. Though our present life is governed by our past, our future must by that very Law of cause and effect, be effected by what we do now. To the extent therefore that we feel the choice between two or more courses we must make that choice.

"Why evil exists and what it is, are questions which appear to be beyond our limited reason. It should be enough to know that both good and evil exist. And as often as we can distinguish between good and evil, we must choose the one and shun the other."

"ಈ ಚರಾಚರ ಜಗತ್ತು ಒಂದು ನಿಯಮದಿಂದ ನಡೆಯುತ್ತದೆಂಬುದರಲ್ಲಿ ಸಂಶಯವಿಲ್ಲ. ನಿಯಮ ಮಾಡುವವನಿಲ್ಲದೆ ನೀವು ನಿಯಮದ ಕಲ್ಪನೆಯನ್ನು ಮಾಡುತ್ತಿದ್ದರೆ ಈ ನಿಯಮವೇ ನಿಯಮ ಮಾಡುವವನು—ಅಂದರೆ ದೇವರೆಂದು ನಾನು ಹೇಳುತ್ತೇನೆ. ಆ ನಿಯಮದ ಪ್ರಾರ್ಥನೆಯನ್ನು ಮಾಡುವಾಗ ನಾವು ಆ ನಿಯಮವನ್ನು ಅರಿತುಕೊಳ್ಳಲಿಕ್ಕೂ ಅದನ್ನು ಪಾಲಿಸಲಿಕ್ಕೂ ಉತ್ಕಂಠತೆಯನ್ನು ತೋರಿಸುತ್ತೇವೆ. ನಾವು ಯಾವದನ್ನು ಅಪೇಕ್ಷಿಸುತ್ತೇವೆಯೊ ಅದರಂತೆಯೇ ಆಗುತ್ತೇವೆ. ಆದುದರಿಂದ ಪ್ರಾರ್ಥನೆಯು ಆವಶ್ಯಕತೆಯಿರುತ್ತದೆ. ನಮ್ಮ

ವರ್ತಮಾನ ಜೀವನವು ಹಿಂದಿನ ಜೀವನದಿಂದ ನಿಯತವಾಗುತ್ತದೆ. ಈ ಕಾರ್ಯ ಕಾರಣ ನಿಯಮದಿಂದ ನಮ್ಮ ಭವಿಷ್ಯ ಜೀವನವು ನಮ್ಮ ಈಗಿನ ಕಾರ್ಯಗಳಿಂದ ಆಗುವದು. ನಮ್ಮೆದುರು ಎರಡು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಳಲ್ಲಿ ಆರಿಸಿ ಕೊಳ್ಳುವ ಪ್ರಶ್ನೆಯಿದ್ದರೆ ನಾವು ಇದನ್ನು ಆರಿಸಿಕೊಳ್ಳಲೇಬೇಕಾಗುವದು.

" ಈ ಜಗತ್ತಿನಲ್ಲಿ ಕೆಟ್ಟದ್ದು ಯಾಕಿದೆ ಮತ್ತು ಕೆಟ್ಟದ್ದು ಅಂದರೆ ಏನು ಎಂಬ ಪ್ರಶ್ನೆಗಳು ನಮ್ಮ ಮರ್ಯಾದಿತ ಬುದ್ಧಿಗೆ ನಿಲುಕದಂತಹವು. ನಾವು ಇಷ್ಟು ತಿಳಿದುಕೊಂಡರೆ ಸಾಕು: ಕೆಡಕು ಮತ್ತು ಒಳಿತು ಎರಡೂ ಇವೆ. ನಮಗೆ ಇವೆರ ಡನ್ನೂ ಬೇರೆಬೇರೆಯಾಗಿ ತಿಳಿಯಲು ಸಾಧ್ಯವಾದಾಗ ಒಳಿತನ್ನು ಮೆಚ್ಚಬೇಕು, ಕೆಡಕನ್ನು ತ್ಯಜಿಸಬೇಕು. "

ಒಬ್ಬ ಬಂಗಾಲಿ ಹುಡುಗನು ಪತ್ರ ಬರೆದಿದ್ದನು: ' ನೀವು ಹಾಲನ್ನು ಬಿಡುವ ವ್ರತ ತೆಗೆದುಕೊಂಡಿದ್ದಿರಿ. ಆನಂತರ ಆಡಿನ ಹಾಲು ತೆಗೆದುಕೊಳ್ಳಹತ್ತಿದಿರಿ. ಇದರಲ್ಲಿ ಏನಾದರೂ ವಿಶಿಷ್ಟ ಲಾಭ ಕಂಡು ಬಂತೇನು? ನಾನಂತೂ ಅಕ್ಕಿ-ಯನ್ನುಣ್ಣುವವನಾಗಿದ್ದೇನೆ. ನನಗೆ ಹಾಲಿನ ಹೊರತು ಬೇರೆ ಯಾವ ವಸ್ತುವಿನಿಂದ ಪೋಷಣೆ ಸಿಗಬಲ್ಲದು?' ಅವನಿಗೆ ಬರೆದರು:

"I took goat's milk because I had vowed not to take buffalo's or cow's milk. Physiologically there is little difference between the three. It would have been better from the ethical standpoint if I could have resisted the temptation to take goat's milk. But the will to live was greater than the will to obey the ethical code. My views on the ethics of milk food remain unchanged. But I see that there is no effective vegetable substitute for milk. You should not give it up."

" ನಾನು ಎಮ್ಮೆ-ಆಕಳುಗಳ ಹಾಲನ್ನು ತೆಗೆದುಕೊಳ್ಳುವದಿಲ್ಲನೆಂಬ ವ್ರತ-ವನ್ನು ತೆಗೆದುಕೊಂಡಿದ್ದೆನು. ಆದುದರಿಂದ ಆಡಿನ ಹಾಲನ್ನು ತೆಗೆದುಕೊಳ್ಳ-ಹತ್ತಿದೆನು. ಶಾರೀರಿಕ ದೃಷ್ಟಿಯಿಂದ ಮೂರರಲ್ಲಿ ತೀರ ಸ್ವಲ್ಪ ವ್ಯತ್ಯಾಸವಿದೆ. ಆಡಿನ ಹಾಲನ್ನು ತೆಗೆದುಕೊಳ್ಳುವ ಮೋಹದಲ್ಲಿ ನಾನು ಬೀಳದಿದ್ದರೆ ನೈತಿಕ ದೃಷ್ಟಿಯಿಂದ ಹೆಚ್ಚು ಒಳ್ಳೆಯದಾಗುತ್ತಿತ್ತು. ಆದರೆ ಒಂದು ನೀತಿ ನಿಯಮವನ್ನು ಪಾಲಿಸುವದ ಕ್ಕಿಂತ ನಾನು ಜೀವಿಸಬೇಕೆಂಬ ಇಚ್ಛೆಯು ಹೆಚ್ಚು ಪ್ರಬಲವಾಗಿತ್ತು. ಹಾಲಿನ ವಿಷಯಕ್ಕೆ ನೈತಿಕ ದೃಷ್ಟಿಯಿಂದ ನನ್ನ ವಿಚಾರದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಆದರೆ ಇದುವರೆಗೆ ಹಾಲಿನ ಬದಲು ಉಪಯೋಗ ಬೀಳುವ ಸಸ್ಯಾಹಾರವು ಯಾವದೂ ಸಿಕ್ಕಿಲ್ಲ. ನೀವು ಹಾಲನ್ನು ಬಿಡಬಾರದು. "

Thomas A. Kempis :

"This is the highest and most profitable lesson, truly to know and despise ourselves.

"To think nothing of ourselves, and always to judge well and highly of others, is great wisdom and perfectlon.

"We are all frail; but none is more frail than thyself."

"Never think that thou hast made any progress until thou feel that thou art inferior to all."

ಥಾಮಸ್ ಎ ಕೆಂಪಿಸ್ :

" ಇದು ಎಲ್ಲಕ್ಕೂ ಶ್ರೇಷ್ಠ ಮತ್ತು ಲಾಭದಾಯಕ ಪಾಠವಾಗಿದೆ : ತನ್ನನ್ನು ತಾನು ಅರಿತುಕೊಳ್ಳುವದು ಮತ್ತು ಅದರ ವಿಷಯಕ್ಕೆ ವಿರಕ್ತನಾಗಿರುವದು.

" ತನ್ನನ್ನು ಶೂನ್ಯನೆಂದು ತಿಳಿದುಕೊಳ್ಳುವದು ಮತ್ತು ಎರಡನೆಯವರನ್ನು ಶ್ರೇಷ್ಠರೆಂದೂ ಒಳ್ಳೆಯವರೆಂದೂ ತಿಳಿಯುವದು ಎಲ್ಲಕ್ಕೂ ಹೆಚ್ಚಿನ ತಿಳಿವಳಿಕೆ ಮತ್ತು ಅದರಲ್ಲಿಯೇ ಪೂರ್ಣತೆಯಿದೆ.

" ನಾವೆಲ್ಲರೂ ಪಾಮರರಿದ್ದೇವೆ ; ಆದರೆ ನಿನ್ನಷ್ಟು ಪಾಮರನು ಬೇರೆ ಯಾರೂ ಇಲ್ಲ.

" ನೀನು ಎಲ್ಲಕ್ಕೂ ಕನಿಷ್ಠನಿರುವಿಯೆಂದು ತಿಳಿಯುವವರೆಗೆ ನೀನು ಏನಾದರೂ ಪ್ರಗತಿಯನ್ನು ಮಾಡಿರುವಿಯೆಂದು ಎಂದೂ ತಿಳಿಯಬೇಡ. "

ಇದು ಕೇವಲ ಉಪದೇಶದ ಅಥವಾ ನೀತಿಯ ವಾಕ್ಯವಿರುವದಿಲ್ಲ. ಇದರಲ್ಲಿ ಮನೋವಿಜ್ಞಾನದ ದೃಷ್ಟಿಯಿಂದ ಒಂದು ದೊಡ್ಡ ಸತ್ಯವು ತುಂಬಿದೆ. ನಿಜವಾಗಿ ನೋಡಿದರೆ ಮನುಷ್ಯನು ತನ್ನನ್ನು ತಾನು ಅರಿಯುವಷ್ಟು ಬೇರೆ ಯಾರನ್ನೂ ಅರಿಯುವದಿಲ್ಲ. ಆದುದರಿಂದ ತನ್ನ ದೋಷಗಳು ಸ್ಪಷ್ಟವಾಗಿ ಕಾಣುತ್ತ ಹೋದಂತೆ ಆ ದೋಷಗಳು ಎರಡನೆಯವರಲ್ಲಿ ಇರಲಿಕ್ಕೂ ಇಲ್ಲ ಎಂದು ಅವನಿಗೆ ಅನಿಸಹತ್ತುತ್ತದೆ. ಅವನು ಪ್ರಾಮಾಣಿಕನಿದ್ದರೆ ತನ್ನನ್ನು ಎರಡನೆಯವರಿಗಿಂತ ಕನಿಷ್ಠನೆಂದು ತಿಳಿಯತೊಡಗುತ್ತಾನೆ. ಈ ಸುವರ್ಣವಾಕ್ಯವನ್ನು ನೋಡಿರಿ :

"If only thy heart were right, then every created thing would be to thee a mirror of life and a book of holy teaching. There is no creature so little and so vile as not to manifest the goodness of God. A pure heart penetrates heaven and hell."

" ನಿನ್ನ ಹೃದಯವು ಶುದ್ಧವಿದ್ದರೆ ಪ್ರಾಣಿ ಮಾತ್ರಗಳೆಲ್ಲ ನಿನ್ನ ಜೀವನದ ಕನ್ನಡಿಯೂ ಧರ್ಮಗ್ರಂಥವೂ ಆಗುವವು. ದೇವರ ಒಳ್ಳೆಯತನದ ದರ್ಶನವಾಗ-

ದಷ್ಟು ಚಿಕ್ಕ ಅಥವಾ ಕೆಟ್ಟ ಪ್ರಾಣಿಯು ಒಂದೂ ಇಲ್ಲ. ಶುದ್ಧ ಹೃದಯವು ಸ್ವರ್ಗ-ನರಕಗಳೆರಡನ್ನೂ ದಾಟಬಲ್ಲದು."

ಇವತ್ತು ವೃತ್ತಪತ್ರದಲ್ಲಿ ಮೊದಲು ಮಾಡಿದ ಭಾಷಣದ ಪೂರ್ತಿಗಾಗಿಯೂ ಮುಂದಗಾಮಿಗಳಿಗೆ ಉತ್ತರವೆಂದೂ ಹೋರನು ಮಾಡಿದ ಭಾಷಣವು ಬಂತು.

೧೫-೭-'೩೨ ವಲ್ಲಭಭಾಯಿ ಕೇಳಿದರು: "ಹೇಗೆನಿಸುತ್ತದೆ? ಉದಾರ ಮತವಾದಿಗಳನ್ನೇನೊ ಹೊಗಳಿದ್ದಾನೆ." ಬಾಪೂ: "ಇಲ್ಲ, ಇದರಲ್ಲಿ ಏನೂ ಇಲ್ಲ. ಈ ಭಾಷಣದಲ್ಲಿ ಮಾತಿನ ಚಳಕದ ಹೊರತು ಮತ್ತೇನೂ ಇಲ್ಲ. ನನಗೆ ಚಹಳ ನಿರಾಶೆಯಾಗಿದೆ. ನಾನು ಅವನನ್ನು ಪ್ರಾಮಾಣಿಕನೆಂದು ತಿಳಿಯುತ್ತಿದ್ದೆ. ಈ ಭಾಷಣದಿಂದ ಅವನು ಪ್ರಾಮಾಣಿಕನುಳಿಯದೆ ಕೈತವಕದ ಮನುಷ್ಯನಾಗಿದ್ದಾನೆ." ವಲ್ಲಭಭಾಯಿ: "ಪತ್ರ ಬರೆಯಿರಲ್ಲ" ಬಾಪೂ: "ಪತ್ರ ಬರೆಯಬೇಕೆಂದು ಎಷ್ಟೋ ಸಾರೆ ಮನಸ್ಸಿನಲ್ಲಿ ಬರುತ್ತದೆ." ಸಾಯಂಕಾಲ ಇದೇ ಭಾಷಣದ ಮೇಲೆ ಹಾರ್ನಿಮನ್ನನ ಲೇಖ ಓದಿದೆವು. ಬಾಪೂಗೆ ಈ ಲೇಖವು ಬಹಳ ಮನಸ್ಸಿಗೆಬಂತು. ಇದರಲ್ಲಿ ಹಾರ್ನಿಮನ್ನನು ಹೋರನಿಗೆ ರಾಜಕೀಯ ನೀತಿಶೂನ್ಯನೂ ಮತ್ತು ನಾಚಿಕೆ ಇಲ್ಲದವನೂ ಎಂದು ಕರೆದಿದ್ದಾನೆ. ಬಾಪೂ ಅಂದರು: "ಇದು ಯೋಗ್ಯವಾಗಿದೆ" ಇಡಿ ಲೇಖವನ್ನು ಓದಿದ ಮೇಲೆ ಹೇಳಿದರು: "ಈ ಮನುಷ್ಯನು ಇತ್ತೀಚೆಗೆ ಉಗ್ರ ಲೇಖಗಳನ್ನು ಬರೆಯುತ್ತಿರುತ್ತಾನೆ." ಹಾರ್ನಿಮನ್ನನ ವಾಕ್ಯಗಳು ಹೀಗಿವೆ:

"He does not know when he is politically dishonest. He is not only unable to appreciate political values, he is quite innocent of any ethics in political conduct . . . This speech is a shameless admission that the reservations in the Prime Minister's speech were deliberately intended to leave the way open for the scrapping of the R. T. Conference."

"ರಾಜಕೀಯ ವಿಷಯಗಳಲ್ಲಿ ಅವನು ಯಾವಾಗ ಅಪ್ರಾಮಾಣಿಕನಾಗುತ್ತಾನೆಂಬುದು ಅವನಿಗೇ ಗೊತ್ತಿಲ್ಲ. ಅವನು ರಾಜನೈತಿಕ ಮೂಲ್ಯಗಳ ಬೆಲೆಯನ್ನು ಕಟ್ಟಲಾರನಿಷ್ಟೇ ಅಲ್ಲ ಆದರೆ ರಾಜಕೀಯ ಆಚರಣೆಯಲ್ಲಿ ನೀತಿಯೆಂಬುದೊಂದು ವಸ್ತುವಿದೆ ಎಂಬುದೂ ಗೊತ್ತಿಲ್ಲ . . . ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಯಾವದನ್ನು ಅಧ್ಯಾಹಾರವಾಗಿಟ್ಟಿದ್ದರೊ ಅದನ್ನು ದುಂಡುಮೇಜು ಪರಿಷತ್ತನ್ನು ಸಮಾಪ್ತಿಗೊಳಿಸುವ ಮಾರ್ಗವನ್ನು ಸುಗಮ ಮಾಡುವದಕ್ಕಾಗಿ ತಿಳಿದೂ ತಿಳಿದೂ ಇಡಲಾಗಿತ್ತೆಂದು ಈ ಭಾಷಣದಲ್ಲಿ ನಾಚಿಕೆಯಿಲ್ಲದೆ ಒಪ್ಪಿಕೊಂಡಂತಾಗಿದೆ."

ಬಾಪೂ ಹೇಳತೊಡಗಿದರು : " ನಮ್ಮ ಜನರೊಳಗೆ ನಮ್ಮ ಕೆಲಸವನ್ನು ಸಾಗಿಸಿ ಕೊಂಡು ಹೋಗುವ ಶಕ್ತಿಯಾಗಲಿ, ಯೋಗ್ಯತೆಯಾಗಲಿ ಇಲ್ಲವೇನೆಂದು ನಾನು ಈ ಮನುಷ್ಯನಿಗೆ ಕೇಳಿದಾಗ ಅವನು ಹೇಳಿದ್ದನು: 'If you want me to be frank, I say yes' 'ನಾನು ಸ್ಪಷ್ಟವಾಗಿ ಹೇಳಬೇಕೆಂದು ನೀವು ಬಯಸಿದರೆ ನಾನು 'ಹೌದೆ'ನ್ನುತ್ತೇನೆ.' ಈ ಮನುಷ್ಯನ ಮಾತಿನಲ್ಲಿ ಇಷ್ಟೊಂದು ವಿಶ್ವಾಸ-ವಿತ್ತು. ಅದರಲ್ಲಿ ನಾಚಿಕೆಯ ಸುಳಿವೇ ಇದ್ದಿಲ್ಲ."

ವಲ್ಲಭಭಾಯಿ ಕೇಳಿದರು : " ಈ ವ್ಯಾಪಾರಸ್ಥರ ಮೇಲೆ ಇಷ್ಟೊಂದು ಅವ-ಲಂಬಿಸುತ್ತಾರಲ್ಲ, ಈ ಜನರ ವಿಚಾರವೇನು ? " ಬಾಪೂ ಹೇಳಿದರು : " ಇವರು . . . ಮತ್ತು . . . ಇವರಂತಹ ಮನುಷ್ಯರು. " ವಲ್ಲಭಭಾಯಿ : " ಆದರೆ ಪುರುಷೋತ್ತಮದಾಸ ಮತ್ತು ಬಿರ್ಲಾರವರ ಸ್ಥಿತಿಯೇನು ? " ಬಾಪೂ : " ಈ ಜನರು ಹೋರನಿಗೆ ಏನಾದರೂ ಮಾತು ಕೊಟ್ಟಿದ್ದಾರೆಂದಲ್ಲ. ಆದರೆ ಮಾನಸಿಕ ದುರ್ಬಲತೆ ಬಂದಿರಬಹುದು. ಬಿರ್ಲಾನು ಹೋರನಿಗೆ ಮಾರು ಹೋದರೆ ಅವನು ಆತ್ಮಹತ್ಯೆ ಮಾಡಿಕೊಳ್ಳಬೇಕು. ಈಗಂತೂ ಮಾಲವಿಯಾಜಿ ಹೊರಗೆ ಕುಳಿತಿದ್ದಾರೆ. ಬಿರ್ಲಾ ಮಾಲವಿಯಾಜಿಯವರನ್ನು ಕೇಳದೆ ಒಂದು ಹೆಜ್ಜೆಯನ್ನೂ ಇಡಲಾರನು. ಇಲ್ಲ, ವ್ಯಾಪಾರಸ್ಥರೊಳಗೆ ಈ ಜನರು ಇಲ್ಲವೆಂದು ನನಗೆ ಭರವಸೆಯಿದೆ."

ಬಾಪೂ ವಿಲಾಯತಿಯಲ್ಲಿ ಹೇಳಿದ ಮತ್ತು ಮಾಡಿದ ಮಾತುಗಳೆಲ್ಲವೂ ನಿಜ-ವಾಗತೊಡಗಿವೆ. ಈ ಪರಿಷತ್ತು ಪ್ರಾತಿನಿಧಿಕವಿಲ್ಲವೆಂದು ಬಾಪೂ ಒತ್ತಿ ಒತ್ತಿ ಹೇಳುತ್ತಿದ್ದರು. ಸಂಯುಕ್ತ ಸಮಿತಿಯ ಮುಂದೆ ಹೋಗುವ ಹಿಂದೀಯರು ಪ್ರತಿನಿಧಿಗಳು ಆಗಿರಲಿಕ್ಕೆಬೇಕು ಎಂದು ನೀವು ಅನ್ನಲಿಕ್ಕೆ ದುಂಡುಮೇಜು ಪರಿಷತ್ತಾದರೂ ಎಲ್ಲಿ ಪ್ರಾತಿನಿಧಿಕವಿತ್ತು ? ಎಂದು ಈಗ ಹೋರನು ಉದಾರ ಮತವಾದಿಗಳಿಗೆ ಹೇಳಹತ್ತಿದ್ದಾನೆ. ಹೋರನಿಗೆ ಏನೂ ಕೊಡುವದು ಬೇಡಾಗಿದೆ. ಪ್ರಾಂತೀಯ ಸ್ವರಾಜ್ಯವನ್ನೂ ಕೊಡುವ ಮನಸ್ಸಿಲ್ಲೆಂದು ಒತ್ತಿ ಒತ್ತಿ ಹೇಳಲಾಗಿತ್ತು. ಆದರೆ ಶಾಸ್ತ್ರೀಯವರಿಗೆ ಆ ದಿನ ಕೂಡ ವಿಶ್ವಾಸವಿತ್ತು ಮತ್ತು ಮಹಾತ್ಮಾ ಗಾಂಧೀಯವರಿಗೆ ದೋಷಕೊಡ ಲಿಕ್ಕೆ ಹೊರಟಿದ್ದರು.

ನಾನು ಬಾಪೂರನ್ನು ಕೇಳಿದೆ : " ಶಾಸ್ತ್ರೀಯವರು ಕೊನೆಯ ದಿನ ಭಾಷಣ ಮಾಡಿದ್ದು ತಪ್ಪಾಯಿತೆಂದು ಅವರಿಗೆ ಈಗ ಅನಿಸುತ್ತಿರಬಹುದು. "

ಬಾಪೂ : " ಇಲ್ಲ. ಗಾಂಧಿಯು ನಮ್ಮ ಸಂಗಡ ಇರುತ್ತಿದ್ದರೆ ಇವತ್ತು ಉಂಟಾದ ಪರಿಸ್ಥಿತಿಯು ಉದ್ಭವಿಸುತ್ತಿರಲಿಲ್ಲವೆಂದು ಈಗ ಅವರು ತಿಳಿಯುತ್ತಿರ ಬಹುದು. ಇದಕ್ಕೆ ಕಾರಣ ಉಂಟು. ಇವನು ಸರಳ ಮನುಷ್ಯನು ಮತ್ತು ಸರಳ ಮನುಷ್ಯನ ಆತ್ಮವಂಚನೆಗೆ ಮಿತಿಯಿರುವದಿಲ್ಲ. ಮೇಲಿಂದಮೇಲೆ ನನ್ನನ್ನು ನಾನು

ತೊಂದರೆಗೀಡುಮಾಡಿಕೊಳ್ಳುತ್ತೇನೆಂದು ನನ್ನ ಬಗ್ಗೆಯೂ ಹೇಳಲಾಗುತ್ತಿದೆ. ಆ ಕರುವನ್ನು ಕೊಂದಾಗ ಕೂಡ ನಾನು ಶುದ್ಧ ಅಹಿಂಸೆಯನ್ನು ಆಚರಿಸುತ್ತಿರುವೆನೆಂದು ತಿಳಿದೆನು. ಈ ಕೆಲಸದ ಪರಿಣಾಮವೇನಾಗುವದೆಂಬುದು ನನಗೇನು ಗೊತ್ತಿತ್ತು? ನನ್ನಿಂದ ತಪ್ಪಾಗಿದ್ದರೆ ನಾನು ಅಹಿಂಸೆಯ ಆಚರಣೆಯಿಂದ ಬೀಳುತ್ತ ಹೋಗುವೆನು. ಆದರೆ ನಾನು ಮಾಡಿದ್ದು ಸರಿಯಾಗಿದ್ದರೆ ನನ್ನ ಆಚರಣೆಯು ಹೆಚ್ಚೆಚ್ಚು ಪ್ರಗತಿ ಹೊಂದುತ್ತ ಹೋಗುವದು. ಆದರೆ ಆ ದಿವಸ ನನ್ನ ಸಂಪೂರ್ಣ ಆತ್ಮ ವಂಚನೆಗೆ ಅವಕಾಶವಿತ್ತಲ್ಲವೆ ? ”

ನಾನು : “ ಈ ಮನುಷ್ಯನಿಗೆ ತನ್ನ ವಿಚಾರವು ತಪ್ಪಿತ್ತೆಂದೂ ಮತ್ತು ಈ ಮನುಷ್ಯನು ( ಗಾಂಧೀ ) ಸತ್ಯವನ್ನೇ ಹೇಳುತ್ತಿದ್ದನೆಂದೂ ಇವತ್ತು ಅನಿಸುತ್ತಿರಲಿಕ್ಕಿಲ್ಲವೆ? ಎಂದು ನನಗೆ ಕೇಳಬೇಕಾಗಿದೆ. ”

ಬಾಪೂ: “ಹೌದು, ಒಂದು ವೇಳೆ ಅವರಿಗೆ ಹೀಗೆ ಅನಿಸುತ್ತಿದ್ದರೆ ಅವರ ಭಾಷೆಯೇ ಬೇರೆಯಾಗುತ್ತಿತ್ತು ಮತ್ತು ಬ್ರಿಟಿಶರ ಧೋರಣೆಯ ಬಗ್ಗೆ ಅವರ ವಿಶ್ವಾಸವು ಹಾರಿ ಹೋಗುತ್ತಿತ್ತು. ಅವರು ಕಾಯ್ದೆಭಂಗ ಮಾಡಬೇಕೆಂದು ನಾನು ಹೇಳುವದಿಲ್ಲ. ಆದರೆ ಅವರು ಮತ್ತು ಉಳಿದ ಎಲ್ಲ ಜನರು ಗಾಂಧೀ ಹೇಳುತ್ತಿದ್ದುದೇ ಸತ್ಯವಾಗಿತ್ತು ಮತ್ತು ನೀವು ಅವರನ್ನು ಬಿಡಬೇಕು ಎಂಬ ಬೇಡಿಕೆಯನ್ನಾದರೂ ಮಾಡಬೇಕು. ಗೋಖಲೆಯವರು ನನ್ನ ಬಗ್ಗೆ ಮೇಲಿಂದಮೇಲೆ ಈ ಮನುಷ್ಯನಲ್ಲಿ ತಿಳಿಹೇಳುವ ಶಕ್ತಿಯೂ ಆಶ್ಚರ್ಯಕರವಾಗಿದೆ ಎಂದು ಹೇಳುತ್ತಿದ್ದರು. ತಮ್ಮ ಸಂಗಡಿಗರಿಗೂ ಇದೇ ಮಾತನ್ನು ಹೇಳುತ್ತಿದ್ದರು. ಇದೇ ಮಾತನ್ನು ಈ ಜನರು ಸರಕಾರಕ್ಕೆ ಹೇಳಬಹುದು. ಆದರೆ ಈ ಜನರಿಗೆ ಹೀಗೇನೂ ಅನಿಸುವದಿಲ್ಲ. ಈ ಜನರಿಗೆ ಈ ಅಸ್ಪೃಶ್ಯತೆಯ ವಿಷಯವಾದರೂ ಎಲ್ಲಿ ಗೊತ್ತಿದೆ? ಈ ಜಾತೀಯ ನಿರ್ಣಯದ ವಿಷಯದಲ್ಲಿ ಮ್ಯಾಕ್ಡೊನಲ್ಡನ ಬೆಲೆ ಚನ್ನಾಗಿ ಕಟ್ಟಲಾಗುವದು. ''

ವಲ್ಲಭಭಾಯಿ : “ ಯಾಕೆ, ಬೆಲೆ ಇನ್ನೂ ಗೊತ್ತಾಗಿಲ್ಲವೇನು? ಇವತ್ತೇ ಹೋರನು ಅವನ ಹೇಳಿಕೆಯನ್ನು ಉದ್ಧೃತಮಾಡಿ ಅದರ ಅರ್ಥ ಮಾಡಿದ್ದು ಅವನನ್ನು ಕೇಳದೆಯೆ ಮಾಡಿರಬಹುದೆ? ಮತ್ತು ಮ್ಯಾಕ್ಡೊನಲ್ಡನು ಆ ಹೊತ್ತು ಮಾಡಿದ ಭಾಷಣವನ್ನು ಹೋರನನ್ನು ಕೇಳದೆಯೆ ಮಾಡಿರಬಹುದೆ? ”

ಬಾಪೂ : “ ಇಲ್ಲ, ಇದರಲ್ಲಿ ಮ್ಯಾಕ್ಡೊನಲ್ಡನ ತಪ್ಪು ಇಲ್ಲ. ಈ ಮನುಷ್ಯನು ಆ ವಿಷಯುವನ್ನು ಅವನ ಕೈಯಿಂದ ತೆಗೆದುಕೊಂಡಿದ್ದಾನೆ ಮತ್ತು ತನ್ನ ಮನಬಂದಂತೆ ಮಾಡುತ್ತಾನೆ. ಇಲ್ಲವಾದರೆ ನೀವು ಹಿಂದುಸ್ಥಾನವನ್ನು ಕಳೆದುಕೊಳ್ಳುವಿರಿ ಎಂದು ಅವನಿಗೆ ಹೇಳುತ್ತಾನೆ. ಆದರೆ ಜಾತೀಯ ನಿರ್ಣಯದ ವಿಷಯವು ಸ್ವಂತ ಮ್ಯಾಕ್ಡೋನಲ್ಡನದೇ ಇರುತ್ತದೆ. ಇವನೇ ತಮ್ಮ ಪಂಚಾಯತಿ ವಿಷಯದ

ಮಾತನ್ನು ಸೂಚಿಸಿದ್ದನು ಮತ್ತು ಈಗ ಸರಕಾರದ ವತಿಯಿಂದ ನಿರ್ಣಯವನ್ನು ಕೊಡತಕ್ಕವನಿದ್ದಾನೆ. ಹೋರನ ಹತ್ತಿರ ತನ್ನ ವಿರೋಧವನ್ನು ವ್ಯಕ್ತಮಾಡಿರ ಬಹುದು. ಆದರೆ ಈ ವಿಷಯದಲ್ಲಿ ಮ್ಯಾಕ್ಡೋನಲ್ಡನೇ ಹೆಚ್ಚಾಗಿ ಮಾಡ- ತಕ್ಕದ್ದಿದೆ. ಆದುದರಿಂದ ಅದರ ನಿರೀಕ್ಷಣೆಯನ್ನು ಮಾಡಲಾಗುತ್ತಿದೆ. ಇದು ವರೆಗಿನ ಎಲ್ಲ ವಿಷಯ ಅವನ ಅಧಿಕಾರದ್ದೇ ಆಗಿತ್ತು. ಆದುದರಿಂದ ಹೋರನ ಸ್ವತಂತ್ರತೆಯು ಚನ್ನಾಗಿ ಲಕ್ಷ್ಯದಲ್ಲಿ ಬರಬಲ್ಲದು. ಆದರೆ ಈಗ ಅವನಿಗೆ ನ್ಯಾಯಾಧೀಶನಾಗಿ ಕೆಲಸ ಮಾಡಬೇಕಾಗಿದೆ. ಅವನು ಏನು ಮಾಡುತ್ತಾನೆಂಬು ದನ್ನು ನೋಡೋಣ ?"

* * *

ಇವತ್ತು ಬಾಪೂ ಎಲ್ಲ ಈಶೋಪನಿಷತ್ತನ್ನು ಬರೆದು ತೆಗೆದರು. "ಇದೇಕೆ ?" ಎಂದು ನಾನು ಕೇಳಿದೆ. ಆಗ ಹೇಳಿದರು : "ನನಗೆ ಇದನ್ನು ಪಾಠಮಾಡುವದಿದೆ ಮತ್ತು ಪುಸ್ತಕವನ್ನು ಹಿಡಿದುಕೊಂಡು ಎಲ್ಲಿ ತಿರುಗಾಡಲಿ? ಈ ಕಾಗದವನ್ನು ಎಲ್ಲಿಯಾದರೂ ಇಡಬಹುದು."

ಇತ್ತೀಚೆಗೆ ವೇದಾಂತ ಮತ್ತು ಉಪನಿಷತ್ತು ಮುಂತಾದವುಗಳ ಅಧ್ಯಯನ ನಡೆದಿದೆ. ಇವತ್ತು ಮಧ್ಯಾಹ್ನಕ್ಕೆ ಶ್ವೇತಾಶ್ವತರದ ಶ್ಲೋಕಗಳನ್ನು ತೆಗೆದು ನನಗೆ ತೋರಿಸಿ ಅಂದರು :

> यदा चर्मवदाकाशं वेष्टयिष्यंति मानवा: ।
> तदा देवमविज्ञाय दु:खस्यांतो भविष्यति ।।

"ಈ ಶ್ಲೋಕವು ಅದನ್ನು ಬರೆದಂಥ ಉಪನಿಷತ್ಕಾಲದ ಗಹನವಾದ ಬುದ್ಧಿ ಮತ್ತೆಯ ಪರಾಕಾಷ್ಠೆಯನ್ನು ತೋರಿಸುತ್ತದೆ. ಆತ್ಮಜ್ಞಾನವಿಲ್ಲದೆ ದುಃಖದ ಅಂತ- ವಿಲ್ಲೆಂಬ ಮಾತೇನೋ ಸರಿ. ಆದರೆ ಆತ್ಮಜ್ಞಾನವಿಲ್ಲದೆ ದುಃಖನಾಶವು ಅಶಕ್ಯವೆಂಬ ಮಾತನ್ನು ಬೇರೆ ಯಾವದಾದರೊಂದು ಅಶಕ್ಯವಾದ ಮಾತಿನ ಸಂಗಡ ಹೋಲಿಸಿ ತೋರಿಸಿದಾಗ ಈ ಮಾತಿನ ಪರಿಣಾಮವು ಚನ್ನಾಗಿ ಆಗುತ್ತದೆ. ನಾವು ಶರೀರದ ಮೇಲೆ ಚರ್ಮವನ್ನು ಹೊದ್ದುಕೊಂಡಂತೆ ಆಕಾಶವನ್ನೂ ಹೊದ್ದುಕೊಳ್ಳಬಲ್ಲೆವಾದರೆ ಅಥವಾ ಶರೀರದಲ್ಲಿರುವ ಎಲವು, ಮಾಂಸ ಮುಂತಾದವುಗಳನ್ನು ಚರ್ಮದಿಂದ ಮುಚ್ಚಿ ದಂತೆ ಆಕಾಶದಿಂದಲೇ ನಾವು ಮುಚ್ಚಿಕೊಳ್ಳಲು ಶಕ್ತರಾದರೆ ಆತ್ಮಜ್ಞಾನವಿಲ್ಲದೆ ದುಃಖವು ನಾಶವಾಗಬಲ್ಲದು ಎಂದು ಹೇಳಿ ತೋರಿಸಲಾಗಿದೆ. ಈ ಶ್ಲೋಕಕ್ಕೆ ಇನ್ನೂ ಅನೇಕ ಅರ್ಥಗಳು ಹೊರಡಬಲ್ಲವು. ಆದರೆ ಈ ಶಬ್ದಾರ್ಥವು ಕೂಡ ಅದ್ಭುತವಾಗಿಲ್ಲವೆ ?"

ಈಶೋಪನಿಷತ್ ಮತ್ತು ಶ್ವೇತಾಶ್ವತರಗಳಲ್ಲಿ ಆತ್ಮತತ್ವದ ವ್ಯಾಖ್ಯೆಯಿದ್ದಂತೆ

ಜಗತ್ತಿನಲ್ಲಿ ಇನ್ನಾವ ಸಾಹಿತ್ಯದಲ್ಲಿಯೂ ಇದ್ದಂತೆ ಕಂಡುಬರುವದಿಲ್ಲ. ಇದು ಸತ್ಯ ಸಂಗತಿಯು.

**೧೬-೭-'೩೨**

ಇವತ್ತು ಯಾವದೊ ವಿಷಯದ ಮೇಲೆ ಮಾತು ಹೊರಟಿತು. ಒಂದು ವರ್ಗವಾದರೂ ಒಂದಾಗಿ ಅಸಹಯೋಗ ಮಾಡಿದರೆ ಆಡಳಿತವೆಲ್ಲ ಬಂದಾಗುವದು ಎಂಬ ಮಾತು ವಕೀಲ ಮತ್ತು ಬೇರೆ ವರ್ಗಕ್ಕೆ ಯಾಕೆ ತಿಳಿಯುತ್ತಿರಲಿಕ್ಕಿಲ್ಲ? ಹೋರನು ತನ್ನ ಪೋಲೀಸರೂ ಸೈನ್ಯವೂ ಕೆಲಸ ಮಾಡುತ್ತಿರುವವರೆಗೆ ನಿಶ್ಚಿಂತನಿದ್ದಾನೆ. ಇವರು ಕೆಲಸಮಾಡದಿದ್ದರೆ ಅವನಿಗೆ ಅವಶ್ಯವಾಗಿ ಪೆಟ್ಟು ತಗಲುವದು. ೧೯೨೧ರಲ್ಲಿ ಸ್ವಲ್ಪ ಇಂತಹದೇ ಪರಿಸ್ಥಿತಿ ಇತ್ತು. ಬಾಪೂ ಹೇಳಿದರು: "ಇಲ್ಲ, ಆ ಕಾಲಕ್ಕೆ ತೋರಿಕೆಯೆ ಬಹಳವಿತ್ತು. ಆದರೆ ನಿಜವಾದ ಸಂಗತಿ ಹೀಗಿದೆ: ಇವತ್ತು ನಮಗೆ ಸ್ವರಾಜ್ಯ ಸಿಕ್ಕರೂ ನಾವು ಏನು ಮಾಡಬಲ್ಲೆವು? ನಾವು ಅದನ್ನು ಜೀರ್ಣಿಸಿಕೊಳ್ಳಲಾರೆವು. ಭಯಂಕರ ಅಂತಃಕಲಹಗಳಾಗುವವು. ಈಗ ನಡೆದದ್ದರೊಳಗಿಂದ ಜನರು ಅಹಿಂಸೆಯನ್ನು ಕಲಿತು ಹೊರಬೀಳುವರೊ ಅಥವಾ ಹಿಂಸೆಯಲ್ಲಿ ವಿಶ್ವಾಸ ವಿಟ್ಟು ಹೊರಬೀಳುವರೊ? ಅಹಿಂಸೆಯ ವಿಷಯವಾಗಿ ಹೆಚ್ಚಿನ ಶ್ರದ್ಧೆಯನ್ನು ತೆಗೆದುಕೊಂಡು ಹೊರಬೀಳುವರೆಂಬ ವಿಶ್ವಾಸವು ನನ್ನ ಹೃದಯದೊಳಗಿದೆ. ಈಗಂತೂ ಸ್ವರಾಜ್ಯದ ಕಟ್ಟಡವು ಸಿದ್ಧವಾಗಹತ್ತಿದೆ. ಇಂದಿನ ಪರಿಸ್ಥಿತಿಯನ್ನು ಎದುರಿಸುವದು ಕೆಲಸ ಹೇಗೆ ತೆಗೆದುಕೊಳ್ಳುವದು ಮುಂತಾದ ಮಾತನ್ನು ನಿರ್ಣಯಿಸುವದು ಮತ್ತು ಅದನ್ನು ಕಾರ್ಯರೂಪದಲ್ಲಿ ತರುವದು ಸ್ವರಾಜ್ಯದ • ಕಾರ್ಯವಲ್ಲದೆ ಮತ್ತೇನಿದೆ? ಆದರೆ ಕಟ್ಟಡದ ಮೇಲೆ ಶಿಖರವನ್ನಿಟ್ಟಿಲ್ಲವಾದುದರಿಂದ ನಮಗೆ ಸ್ವರಾಜ್ಯ ಕಾಣಲೊಲ್ಲದು."

ಆಶ್ರಮದ ಟಪಾಲು ನಾಲ್ಕು ದಿನ ದಾರಿಕಾಯ್ದುಮೇಲೆ ಇವತ್ತು ಈಗ ಬಂತು. ಈ ಪ್ರಕಾರ ನಿಯಮಿತತನದಿಂದ ಬರಹತ್ತಿದರೂ ಒಳ್ಳೆಯದೆ.

**೧೭-೭-'೩೨**

ಇವತ್ತಿನ 'ಅನುಕರಣ'ದ ವಚನಗಳು ಸುವರ್ಣಾಕ್ಷರದಿಂದ ಬರೆದು ಮಲಗುವಾಗ ಮತ್ತು ಎದ್ದಕೂಡಲೇ ಅನ್ನಲು ಮತ್ತು ಮನನ ಮಾಡಲು ಯೋಗ್ಯವಾಗಿವೆ:

"The devil sleepeth not, neither is the flesh yet dead; therefore thou must not cease to prepare thyself for the battle; for on the right hand and on the left are enemies that never rest."

"ಸೈತಾನನು ಮಲಗುವದಿಲ್ಲ. ಇದೇ ಪ್ರಕಾರ ಶರೀರದೊಳಗಿನ ಪಶುತ್ವವು

ಸತ್ತುಹೋಗಿಲ್ಲ. ಆದುದರಿಂದ ಯುದ್ಧದ ಸಿದ್ಧತೆ ಮಾಡುವಾಗ ಸ್ವಲ್ಪವೂ ವಿಶ್ರಮಿಸ ಬೇಡ. ನಿನ್ನ ಎಡಬಲಕ್ಕೆ ಶತ್ರುಗಳು ಹೊಂಚುಹಾಕಿಕೊಂಡು ಅವಿಶ್ರಾಂತವಾಗಿ ಕುಳಿತಿದ್ದಾರೆ."

ಇವತ್ತು ಬಾಪೂ ಆಶ್ರಮದ ಟಪಾಲನ್ನು ಒಂದೇ ಕೈಯಿಂದ ಪೂರ್ತಿಮಾಡಿದರು. ನನ್ನ ಕಡೆಯಿಂದ ಆರು ಪತ್ರಗಳನ್ನು ಬರೆಯಿಸಿದರು ಮತ್ತು ಸ್ವತಃ ಹನ್ನೆರಡು ಪತ್ರಗಳನ್ನು ಬರೆದರು. ದೇವದಾಸನ ಪತ್ರದಲ್ಲಿ ಬರೆದರು : " ಇತ್ತೀಚೆಗೆ ನನ್ನ ಟಪಾಲಿನಲ್ಲಿ ಬಹಳ ಗೊಂದಲವಾಗಿಬಿಟ್ಟಿದೆ. ಬಹಳ ದೊಡ್ಡ ಸುತ್ತು ಹಾಕಿ ಬರುತ್ತಿದೆ. ಆದರೂ ಸಿಗುತ್ತಿರುವದು ಸಂತೋಷದ ಸಂಗತಿ. ಕೈದಿಗೆ ಅಧಿಕಾರವೆಲ್ಲಿಯದು ? ಕೈದಿಯೆಂದರೇ ಅಧಿಕಾರ ಇಲ್ಲದಿರುವದು. ಕೈದಿಯ ವಿಷಯವಾಗಿ ಈ ತಿಳಿವಳಿಕೆಯಿದ್ದರೆ ಮನಸ್ಸನ್ನು ಶಾಂತವಿಡಲು ಸಾಧ್ಯವಿದೆ. ಭೆಟ್ಟಿಯ ವಿಷಯವಾಗಿಯೂ ಇದೇ ಮಾತು. ಬಹಳಮಾಡಿ ಮಹಾದೇವನಿಗೆ ಭೆಟ್ಟಿಯಾಗಬಲ್ಲೆ. ಆದರೆ ನೀನು ಆಲೋಚಿಸುತ್ತಿರುವಂತೆ ಸಮಯವನ್ನು ವಿಭಾಗಿಸುವದು ಸಾಧ್ಯವಾಗಲಾರದು. ಭೆಟ್ಟಿಯಾಗದಿರುವ ಗಂಡಾಂತರವನ್ನಾದರೂ ಮೈಮೇಲೆ ತಕ್ಕೊಳ್ಳಬೇಕು ಅಥವಾ ಭೆಟ್ಟಿಯಾಗುವ ಮೋಹವನ್ನಾದರೂ ಬಿಡಬೇಕು. ನಿನ್ನ ಮತ್ತು ಲಕ್ಷ್ಮಿಯ ಭೆಟ್ಟಿಯಾಗುತ್ತಿದ್ದರೆ ಆನಂದವಾಗುತ್ತಿತ್ತು. ಆದರೆ ನಾನು ಇಟ್ಟ ಹೆಜ್ಜೆಯೇ ಸರಿಯಾಗಿ ಕಾಣುತ್ತದೆ. ಹೆಚ್ಚಿನ ಹೆಚ್ಚು ಆಘಾತವು ಬಾ ಗೆ ಆಗುವದು. ಆದರೆ ಅವಳು ಆಘಾತಗಳನ್ನು ಸಹಿಸುವದಕ್ಕೇ ಜನ್ಮತೆಗೆದುಕೊಂಡಿದ್ದಾಳೆ. ನನ್ನ ಸಂಗಡ ಸಂಬಂಧವನ್ನಿಡುವವರಿಗೆ ಅಥವಾ ಮಾಡುವವರಿಗೆ ಹೆಚ್ಚಿನಹೆಚ್ಚು ಬೆಲೆಯನ್ನು ತೆತ್ತಬೇಕಾಗುತ್ತದೆ. ಬಾ ಎಲ್ಲಕ್ಕೂ ಹೆಚ್ಚುಬೆಲೆ ಕೊಡಬೇಕಾಯಿತೆಂದು ಹೇಳಬಹುದು. ಇದರಿಂದ ಬಾಗೆ ಸ್ವಲ್ಪೂ ಹಾನಿಯಾಗಿಲ್ಲವಾದ ಕಾರಣ ನನಗೆ ಅದೊಂದು ಸಂತೋಷವೆ."

ಆಶ್ರಮಕ್ಕೆ ವ್ಯಕ್ತಿಗತ ಪ್ರಾರ್ಥನೆಯ ವಿಷಯಕ್ಕೆ ಪ್ರವಚನವನ್ನು ಕಳಿಸಿದರು ಮತ್ತು ಎರಡು ಪತ್ರಗಳಲ್ಲಿ ಪ್ರಾರ್ಥನೆಯ ಬಗ್ಗೆ ಉತ್ತರ ಕೊಟ್ಟರು. ನಾರಾಯಣದಾಸ ಭಾಯಿಗೆ ಬರೆದರು : " ಇತ್ತೀಚೆಗೆ ಪ್ರಾರ್ಥನೆಯ ಸಂಬಂಧದಲ್ಲಿ ವಿಚಾರಗಳು ಬರುತ್ತಿರುತ್ತವೆ." ವ್ಯಕ್ತಿಗತ ಪ್ರಾರ್ಥನೆಯ ಅವಶ್ಯಕತೆಯನ್ನು ತೋರಿಸುತ್ತ ಹೇಳಿದರು : " ಪ್ರಾರ್ಥನೆಯ ಸಮಯಕ್ಕೆ ಅವರು ಮಲಿನತೆಯನ್ನು ಬಿಡಲೇಬೇಕು. ಯಾವದಾದರೂ ಮನುಷ್ಯನನ್ನು ಯಾರಾದರೂ ನೋಡುತ್ತಿರುವಾಗ ಅವನು ಕೆಟ್ಟ ಕೆಲಸ ಮಾಡಲು ನಾಚುತ್ತಾನೆ. ಅದರಂತೆಯೇ ಅವನಿಗೆ ದೇವರೆದುರು ಕೆಟ್ಟ ಕೆಲಸ ಮಾಡಲಿಕ್ಕೆ ನಾಚಿಕೆಯಾಗಬೇಕು. ಆದರೆ ದೇವರು ನಮ್ಮ ಪ್ರತಿಯೊಂದು ಕೆಲಸವನ್ನೂ ನೋಡುತ್ತಾನೆ. ವಿಚಾರಗಳನ್ನು ತಿಳಿಯುತ್ತಾನೆ. ಆದುದರಿಂದ ಅವನಿಂದ

ಮರೆಮಾಡಿ ಯಾವದಾದರೂ ಕೆಲಸವನ್ನು ಅಥವಾ ವಿಚಾರವನ್ನು ಮಾಡುವಂಥ ಒಂದು ಕ್ಷಣವು ಕೂಡ ಇಲ್ಲ. ಈ ರೀತಿ ಯಾವನು ಮನಸ್ಸಿನಿಂದ ಪ್ರಾರ್ಥನೆಯನ್ನು ಮಾಡುತ್ತಾನೆಯೊ ಅವನು ಕೊನೆಗೆ ಈಶ್ವರರೂಪಿಯಾಗಿ ಬಿಡುತ್ತಾನೆ. ಅಂದರೆ ನಿಷ್ಪಾಪನಾಗಿಬಿಡುವನು."

ಎರಡನೇ ಪತ್ರದಲ್ಲಿ: "ಯಾವನಾದರೊಬ್ಬ ಮನುಷ್ಯ ಅಥವಾ ವಸ್ತುವನ್ನು ಲಕ್ಷ್ಯದಲ್ಲಿಟ್ಟುಕೊಂಡು ಪ್ರಾರ್ಥನೆಯನ್ನು ಮಾಡಬಹುದು. ಅದರಿಂದ ಫಲವೂ ದೊರೆಯುತ್ತದೆ. ಆದರೆ ಇಂಥ ಉದ್ದೇಶದಿಂದ ರಹಿತವಾದ ಪ್ರಾರ್ಥನೆಯು ಆತ್ಮಕೂ ಜಗತ್ತಿಗೂ ಹೆಚ್ಚು ಕಲ್ಯಾಣಕಾರಿಯಾಗಬಲ್ಲದು. ಪ್ರಾರ್ಥನೆಯ ಪರಿಣಾಮವು ನಮ್ಮ ಮೇಲೆ ಆಗುವದೆಂದರೆ ಅದರಿಂದ ಅಂತರಾತ್ಮವು ಹೆಚ್ಚು ಜಾಗ್ರತವಾಗುತ್ತದೆ ಮತ್ತು ಜಾಗ್ರತಿಯು ಹೆಚ್ಚಾದಂತೆ ಅದರ ಪ್ರಭಾವವು ಹೆಚ್ಚು ಪಸರಿಸುತ್ತದೆ. ಹೃದಯದ ವಿಷಯಕ್ಕೆ ಮೇಲೆ ಬರೆದದ್ದು ಇಲ್ಲಿಯೂ ಅನ್ವಯಿಸುತ್ತದೆ. ಪ್ರಾರ್ಥನೆಯು ಹೃದಯದ ವಿಷಯವಾಗಿದೆ. ಬಾಯಿಂದ ಮಾತಾಡುವ ಮುಂತಾದ ಕ್ರಿಯೆಗಳು ಹೃದಯವನ್ನು ( ಅಂತಃಕರಣವನ್ನು ) ಜಾಗ್ರತಗೊಳಿಸುವದಕ್ಕಾಗಿ ಇರುತ್ತವೆ. ಹೊರಗಿದ್ದ ವ್ಯಾಪಕಶಕ್ತಿಯೇ ಒಳಗೂ ಇದೆ ಮತ್ತು ಅಷ್ಟೇ ವ್ಯಾಪಕವಿದೆ. ಆದಕ್ಕಾಗಿ ಶರೀರವು ಬಾಧಕವಾಗಿಲ್ಲ. ಬಾಧಕವನ್ನು ನಾವು ಉತ್ಪನ್ನಮಾಡುತ್ತೇವೆ. ಪ್ರಾರ್ಥನೆಯಿಂದ ಬಾಧಕವು ನಾಶವಾಗುತ್ತಿದೆ. ಪ್ರಾರ್ಥನೆಯಿಂದ ಇಚ್ಛಿತ ಫಲವು ದೊರೆಯಿತೊ ಇಲ್ಲವೊ ಎಂಬುದು ನಮಗೆ ಗೊತ್ತಾಗುವದಿಲ್ಲ. ನಾನು ನರ್ಮದೆಯ ಮುಕ್ತಿಯ ಸಲುವಾಗಿ ಪ್ರಾರ್ಥನೆಯನ್ನು ಮಾಡುವೆನು. ಆವಳು ದುಃಖದಿಂದ ಮುಕ್ತಳಾದರೆ ಅದು ನನ್ನ ಪ್ರಾರ್ಥನೆಯ ಫಲವೆಂದು ನಾನು ತಿಳಿಯಬಾರದು. ಪ್ರಾರ್ಥನೆಯು ಎಂದೂ ನಿಷ್ಫಲವಾಗಿ ಹೋಗುವದಿಲ್ಲ. ಆದರೆ ಅದು ಯಾವ ಫಲ ಕೊಡುತ್ತದೆಂಬುದು ಗೊತ್ತಾಗುವದಿಲ್ಲ. ನಾವು ಇಚ್ಛಿಸಿದ ಫಲವು ದೊರೆತರೆ ಅದು ಒಳ್ಳೆಯದದೆ ಎಂದೂ ತಿಳಿಯಬಾರದು. ಇಲ್ಲಿಯೂ ಗೀತಾಬೋಧೆಯನ್ನು ರೂಢಿಯಲ್ಲಿ ತರಬೇಕು. ಪ್ರಾರ್ಥನೆಯನ್ನು ಮಾಡಿದರೂ ಅನಾಸಕ್ತನಾಗಿರಬಹುದು. ಯಾರದಾದರೂ ಮುಕ್ತಿಯು ನಮಗೆ ಯೋಗ್ಯವೆನಿಸಿದರೆ ಅವರ ಸಲುವಾಗಿ ನಾವು ಪ್ರಾರ್ಥನೆಯನ್ನು ಮಾಡಬೇಕು. ಆದರೆ ಅದು ಸಿಗಲಿ ಸಿಗದಿರಲಿ ಈ ವಿಷಯದಲ್ಲಿ ನಾವು ನಿಶ್ಚಿಂತರಾಗಿರಬೇಕು. ವಿರುದ್ಧ ಪರಿಣಾಮವಾದರೂ ಪ್ರಾರ್ಥನೆಯು ನಿಷ್ಫಲವಾಯಿತೆಂದು ತಿಳಿಯುವ ಕಾರಣವಿಲ್ಲ. ಇದಕ್ಕೂ ಹೆಚ್ಚು ಸ್ಪಷ್ಟೀಕರಣ ಬೇಕೇನು?"

ಎಷ್ಟರಳ ಉದ್ದವಾದ ಪತ್ರ ಬಂತು. ಅದರಲ್ಲಿಯ ಒಂದು ವಾಕ್ಯವು ಬಹಳ

ಮನಸ್ಸಿಗೆ ಬಂತು. ' ನನ್ನ ಇಬ್ಬರು ಹುಡಿಗೆಯರು ನನ್ನ ಮೇಲೆ ಇಟ್ಟಷ್ಟು ವಿಶ್ವಾಸವನ್ನು ನಾನು ದೇವರ ಮೇಲಿಟ್ಟಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು ?'

೧೮-೭-'೩೨ ನಮ್ಮ ಬೆಕ್ಕಿನ ಸಣ್ಣ ಮರಿಗಳು ದಿನಾಲು ಮುಂಜಾನೆ ನಮ್ಮ ಸುತ್ತುಮುತ್ತು ತಿರುಗಾಡುತ್ತ ಹಾಲಿನ ಸಲುವಾಗಿ ಧಡಪಡಿಸುತ್ತವೆ. ಸಿಗದಿದ್ದರೆ ಮ್ಯಾಂವ್ ಮ್ಯಾಂವ್ ಎಂದು ಬಹಳ ಗೊಂದಲವೆಬ್ಬಿಸುತ್ತವೆ. ಇದನ್ನು ನೋಡಿ ನನಗೂ ಇದೇ ವಿಚಾರ ಬರುತ್ತದೆ.

ಎಸ್ಥರಳಿಗೆ ಪತ್ರ ಬರೆದರು. ಅದರ ಒಂದು ಭಾಗದಲ್ಲಿ ಜೀವನದ ಸಣ್ಣ ಸಣ್ಣ ಮಾತುಗಳಲ್ಲಿ ಬಾಪೂ ಅವರ ಪಾಶ್ಚಾತ್ಯ ದೃಷ್ಟಿಕೋನವು ಕಂಡುಬರುತ್ತದೆ:

"You tell me how desolate Bajaj's house looked for want of woman's touch. I have always considered this as a result of our false notions of division of work between men and women. Division there must be. But this utter helplessness on the man's part when it comes to keeping a household in good order and woman's helplessness when it comes to be a matter of looking after herself ( more here than in the West ) are due to erroneous upbringings. Why should man be lazy as not to keep his house neat, if there is no woman looking after it or why should a woman feel that she always needs a man protector ? This anomaly seems to me to be due to the habit of regarding woman as fit primarily for house keeping and of thinking that she must live so soft as to feel weak and be always in need of protection. We are trying to create a different atmosphere at the Ashram. It is difficult work. But it seems to be worth doing."

"ಮನೆ ನೋಡಿಕೊಳ್ಳಲು ಹೆಂಗಸರು ಇರದ್ದರಿಂದ ಜಮುನಾಲಾಲಜಿಯವರ ಮನೆ ಎಷ್ಟು ರುಕ್ಷವಾಗಿ ಕಾಣುತ್ತಿತ್ತೆಂದು ನೀನು ಬರೆಯುತ್ತಿ. ಇದು ಸ್ತ್ರೀ ಮತ್ತು ಪುರುಷರಲ್ಲಿ ಕೆಲಸದ ಹಂಚಿಕೆಯ ಬಗ್ಗೆ ಇರುವ ತಪ್ಪು ವಿಚಾರದ ಫಲವೆಂದು ನನಗೆ ಯಾವಾಗಲೂ ಅನಿಸುತ್ತದೆ. ಕಾರ್ಯ ವಿಭಜನೆಯು ಅವಶ್ಯ ಆಗಲೇಬೇಕು. ಆದರೆ ಗಂಡಸಿನ ಮೇಲೆ ಮನೆಯನ್ನು ನೋಡಿಕೊಂಡು ಹೋಗುವ ಪ್ರಸಂಗ ಬಂದಾಗ ಅವನು ವಿವಶನಾದರೆ ಮತ್ತು ಹೆಂಗಸು ತನ್ನ ಕಾಲಮೇಲೆ ನಿಲ್ಲುವ ಪ್ರಸಂಗ ಬಂದಾಗ ಅವಳದೂ ಇದೇ ಸ್ಥಿತಿಯಾದರೆ ( ಪಾಶ್ಚಿಮಾತ್ಯ ದೇಶಗಳಿಗಿಂತಲೂ ಇಲ್ಲಿ ಹೆಚ್ಚಾಗಿರುತ್ತದೆ.) ಇದು ತಪ್ಪು ಪಾಲನಪೋಷಣೆಯ ಪರಿಣಾಮವಾಗಿದೆ. ಮನೆಯಲ್ಲಿ ಸ್ತ್ರೀಯು ಇಲ್ಲದಾಗ ಗಂಡಸು ಮನೆಯನ್ನು ಅಚ್ಚು

ಕಟ್ಟಾಗಿಯೂ ಸ್ವಚ್ಛವಾಗಿಯೂ ಇಡದಷ್ಟು ಆಲಸಿಯು ಯಾಕಾಗಬೇಕು? ಹೀಗೆ ಯಾವಾಗಲೂ ಪುರುಷ-ರಕ್ಷಕನು ಬೇಕೆಂದು ಸ್ತ್ರೀಗೆ ಯಾಕೆ ಅನಿಸಬೇಕು? ಈ ವಿಲಕ್ಷಣ ಮಾತಿನ ಕಾರಣವು ನನಗೆ ಹೀಗೆ ಅನಿಸುತ್ತಿದೆ: ಹೆಂಗಸು ಮುಖ್ಯವಾಗಿ ಮನೆಗೆಲಸಕ್ಕೇ ಯೋಗ್ಯಳು ಮತ್ತು ಅವಳು ಯಾವಾಗಲೂ ರಕ್ಷಣಾರ್ಹಳಾಗಿರುವಷ್ಟು ನಾಜೂಕಾಗಿರತಕ್ಕದ್ದೆಂದು ತಿಳಿಯುವ ರೂಢಿಯು ನಮಗೆ ಬಿದ್ದಿದೆ. ನಾವು ಆಶ್ರಮದಲ್ಲಿ ಬೇರೆ ವಾತಾವರಣವನ್ನುಂಟು ಮಾಡುವ ಪ್ರಯತ್ನವನ್ನು ನಡೆಸಿದ್ದೇವೆ. ಕೆಲಸವು ಕಠಿಣವಿದೆ. ಆದರೆ ಮಾಡಲು ಯೋಗ್ಯವೆನಿಸುತ್ತದೆ."

ಒಬ್ಬ ಬಂಗಾಲಿಯು ಉದ್ದವಾದ ಪತ್ರವನ್ನು ಬರೆದು ಭಾಷಣ ಕೊಟ್ಟಿದ್ದನು: ಈ ಜನರು ಅನುಭವಿಸುತ್ತಿರುವ ಅಸಹ್ಯ ದುಃಖಗಳ ಹೊಣೆಗಾರಿಕೆಯು ನಿಮ್ಮಂಥ ಮುಖಂಡರ ತಲೆಯ ಮೇಲೆಯೇ ಇದೆ. ಅವನಿಗೆ ಬಾಪೂ ಬರೆದರು:

"I thank you for your letter. You know it is not open to me to argue about matters political. But I can heartily endorse your remark that all the leaders must bear the consequences of their actions."

"ನಿಮ್ಮ ಪತ್ರಕ್ಕಾಗಿ ಆಭಾರಿ. ನನಗೆ ರಾಜಕೀಯ ವಿಷಯದ ಚರ್ಚೆಯನ್ನು ಮಾಡಲು ಬರುವದಿಲ್ಲವೆಂಬದು ನಿಮಗೆ ಗೊತ್ತಿದೆ. ತಮ್ಮ ಕೆಲಸದ ಪರಿಣಾಮದ ಹೊಣೆಗಾರಿಕೆಯು ಪ್ರತಿಯೊಬ್ಬ ಮುಖಂಡನ ತಲೆಯ ಮೇಲೆ ಇದ್ದೇ ಇದೆ ಎಂಬ ನಿಮ್ಮ ಮಾತು ನನಗೆ ಒಪ್ಪಿಗೆ ಇದೆ."

ಇವತ್ತು ಕ್ಲೇಟನ್ ಬಂದಿದ್ದನು. ಮಾತು ಬಹಳ ಮೃದು. ಮಹಾತ್ಮಾ! ಮತ್ತು ಸರದಾರಸಾಹೇಬ! ಎನ್ನದೆ ಒಂದು ವಾಕ್ಯವನ್ನೂ ಆಡುತ್ತಿದ್ದಿಲ್ಲ. ಶ್ರೀಮತಿ ನಾಯಡೂರಿಗೆ ತನ್ನ ಪತ್ನಿಯ ಮುಖಾಂತರ ಹೂಗಳನ್ನು ತಂದಿ-

೧೯-೭-'೩೨ ದ್ದನು. ಬಾಪೂರಿಗೂ ತನ್ನ ಕೋಟಿನ ಕಾಲರದಲ್ಲಿ ಸಿಗಿಸಿದ ಹೂಗಳಲ್ಲಿ ಒಂದನ್ನು ಕೊಟ್ಟುಹೋದನು. ನಾನು ಸ್ಯಾಮುಅಲ್ ನಾಗಿದ್ದರೆ ಉದಾರಮತವಾದಿಗಳಿಗೆ 'ಒಳ್ಳೇದು, ನಿಮಗೆ ಏನೂ ಬೇಡಾಗಿದ್ದರೆ ನನಗೆ ಕೊಡುವದು ಕೂಡ ಏನೂ ಇಲ್ಲ ಎಂದು ಹೇಳಿಬಿಡುತ್ತಿದ್ದೆ' ಎಂದನು. ಎಷ್ಟೋ ವಿಷಯಗಳ ಮೇಲೆ ಹರಟೆ ಹೊಡೆದನು. ಹವಾನಾದಿಂದ ತಂಬಾಕಿನ ಬೀಜಗಳು ಇಲ್ಲಿ ಬರುತ್ತವೆ ಮತ್ತು ಇಲ್ಲಿ ಸುಂದರವಾದ ತಂಬಾಕಿನ ಸಿಗರೇಟುಗಳು ತಯಾರಾಗುತ್ತವೆ. ಬಾಪೂರನ್ನು ಕೇಳಿದನು: "Is smoking a vice?" (ಬೀಡಿ ಸೇದುವದು ದುರ್ವ್ಯಸನವೇ?) ಬಾಪೂ ನಕ್ಕು ಹೇಳಿದರು: "It is a bad habit." (ಇದೊಂದು ಕೆಟ್ಟ ಚಟ) ಇದಕ್ಕೆ ಅವನು ತಿರುಗಿ ಹೇಳಿದನು: "No, no,

it keeps away from mischief as the Charkha keeps you away. When I come to jail and don't smoke—as I don't—I have a bad day, losing my temper and feeling out of sorts." (ಇಲ್ಲ, ಇಲ್ಲ. ರಾಟೆಯು ನಿಮ್ಮನ್ನು ಕೆಟ್ಟ ಕೆಲಸದಿಂದ ದೂರವಿಡುವಂತೆ ಇದೂ ಇಡುತ್ತದೆ. ನಾನು ಜೇಲಿನಲ್ಲಿ ಬಂದಾಗ ಸೇದುವದಿಲ್ಲ. ಅಂದು ನನ್ನ ಇಡೀ ದಿನವೆಲ್ಲ ವ್ಯರ್ಥ ಹೋಗುತ್ತದೆ. ಬುದ್ಧಿಯು ಸ್ಥಿರವಾಗಿ ಉಳಿಯುವದಿಲ್ಲ ಮತ್ತು ಏನೂ ರುಚಿಸುವದಿಲ್ಲ.)

ಇವತ್ತು ಹೆಚ್ಚು ಟಪಾಲು ನೇರವಾಗಿಯೇ ಬಂತು. ಮೀರಾಬಹನರು ಛಪರಾದಿಂದ ೧೪ನೇ ತಾರೀಖಿಗೆ ಬರೆದ ಪತ್ರ ಬಂತು. ಅಂದರೆ ಸರಕಾರದ ಕಡೆಗೆ ಹೋಗದೆಯೇ ಬಂತು. ಇದರಲ್ಲಿ ಅವರು ಛಪರಾದಲ್ಲಿ ಕೂಡ ಅವರಿಗೆ ೧೨ ತಾಸಿನಲ್ಲಿ ಛಪರಾ ಬಿಡುವ ನೋಟೀಸು ಏಕೆ ಬಂತು, ಮಧ್ಯರಾತ್ರಿಗೆ ನೋಟೀಸಿನ ಅವಧಿ ಮುಗಿದಿದ್ದರೂ ಬೆಳಿಗ್ಗೆ ಕಾಶಿಯ ಗಾಡಿಯನ್ನು ಹಿಡಿದಾಗ್ಯೂ ಕೂಡ ಏಕೆ ಬಂಧಿಸಲಿಲ್ಲ ಮತ್ತು ಕಾಶಿಯಲ್ಲಿ ಅವರಿಗೆ ಮೂರನೇ ನೋಟೀಸು ಮತ್ತೆ ಯಾಕೆ ಜಾರಿ ಆಗುವದು ಇದೆಲ್ಲವನ್ನೂ ಬರೆದಿದ್ದಾರೆ. ಕಾಶಿಯಲ್ಲಿ ಅವರು ಒಂದು ದಿವಸ ಬೆಳಿಗ್ಗೆ ಗಂಗಾನದಿಯ ಮೇಲೆ ತಿರುಗಾಡಲಿಕ್ಕೆ ಹೋದರು. ಅದರ ವರ್ಣನೆಯು ಮಹಾಭಕ್ತನನ್ನು ಕೂಡ ನಾಚಿಸುವಂತಹದಿದೆ:

"Yesterday morning I had a heavenly early morning walk by the bank of the Ganga. People may laugh at the idea of there being anything special about holy places—but they should just take that walk with their eyes open. The Ganga blue and sparkling with the golden tints of the rising sun as he catches her little wavelets breaking themselves with the voice of happy bells against the velvety grey sand bank; the azure sky over head, intensified with the lightly gathering rain clouds; the exquisitely soft air pressing in caressing wafts across the fields; and the mighty trees — finer than one sees anywhere else — stretching their venerable arms to heaven, and joining in the morning hymn of praise with the rustling of their myriad leaves. All thoughts of self was swept away and one rejoiced and felt one's being throb in oneness with the whole of nature."

"ನಿನ್ನೆ ಬೆಳಿಗ್ಗೆ ಗಂಗಾನದಿಯ ದಂಡೆಯ ಮೇಲೆ ತಿರುಗಾಡುವಾಗ ನನಗೆ ದಿವ್ಯ ಆನಂದದ ಅನುಭವವಾಯಿತು. ತೀರ್ಥಗಳ ಪವಿತ್ರತೆ, ದಿವ್ಯತೆಗಳ ವಿರುದ್ಧ ಜನರು ಏನೇ ಮಾತಾಡಲಿ, ಆದರೆ ತೆರೆದ ಕಣ್ಣುಗಳಿಂದ ಅಲ್ಲಿ ತಿರುಗಾಡುವವರಿಗೆ

ಅದರ ನಿಜವಾದ ಕಲ್ಪನೆಯು ಬಂದೇ ಬರುತ್ತದೆ. ಗಂಗಾನದಿಯ ನೀಲವರ್ಣದಿಂದ ಹೊಳೆಯುತ್ತಿರುವ ನೀರು, ಮಖಮಲ್ಲಿನಂತೆ ಶುಭ್ರವಾದ ಮಳಲಿನ ದಂಡೆಗಳನ್ನು ಮುಟ್ಟುವ, ಮಧುರವಾದ ಗಂಟೆಯಂತೆ ಶಬ್ದಗಳನ್ನು ಮಾಡುವ ಮತ್ತು ಉದಯಿಸುತ್ತಿರುವ ಸೂರ್ಯನ ಕಿರಣಗಳ ಹೊಂಬಣ್ಣದ ಛಾಯೆಯಿಂದ ಥಳಥಳಿಸುತ್ತಿರುವ ಅದರ ಸಣ್ಣ ಸಣ್ಣ ತೆರೆಗಳು; ಮೇಲೆ ಓಡುತ್ತಿರುವಂಥ ಸಣ್ಣ ಸಣ್ಣ ಮೋಡಗಳಿಂದ ಶೋಭಿತವಾದ ನೀಲವರ್ಣದ ಆಕಾಶ; ಹೊಲಗಳ ಮೇಲಿಂದ ಹಾಯ್ದು ಬರುವ ಮತ್ತು ಶರೀರಕ್ಕೆ ಸುಖವಾದ ಸ್ಪರ್ಶವನ್ನು ಮಾಡುವ ಹವೆಯ ತರಂಗಗಳು; ಆಕಾಶದ ಕಡೆಗೆ ತಮ್ಮ ಕೈಗಳನ್ನು ಚಾಚಿ ನಿಂತ ಮತ್ತು ತಮ್ಮ ಅಸಂಖ್ಯ ಎಲೆಗಳ ಸರ ಸರ ಎಂಬ ಸಪ್ಪಳದಿಂದ ಬೆಳಗಿನ ಪ್ರಾರ್ಥನೆಯಲ್ಲಿ ಒಂದುಗೂಡುವ ಭವ್ಯವಾದ ವೃಕ್ಷಗಳು—ಇವೆಲ್ಲವನ್ನೂ ನೋಡಿ ಮನುಷ್ಯನು ತನ್ನನ್ನೇ ಮರೆಯುತ್ತಾನೆ ಮತ್ತು ಏಕತೆಯ ತಾನದಲ್ಲಿ ಅವನ ಹೃದಯವು ಸ್ಫುರಣಗೊಳ್ಳತೊಡಗುತ್ತದೆ. ”

ಇವರು ಕವಿಗಳೂ ಇದ್ದಾರೆ ಮೇಲಾಗಿ ಚಿತ್ರಕಾರರೂ ಇದ್ದಾರಲ್ಲವೆ?

* * *

ಕೌಂಟ ಕೈಸರಲಿಂಗನ ಪ್ರವಾಸದ ದಿನಚರಿಯನ್ನು ಪೂರ್ತಿ ಮಾಡಲಾಯಿತು. ಬಹಳ ವಿಚಿತ್ರ ಮನುಷ್ಯನಿದ್ದಾನೆ. ಯಾವ ಮನುಷ್ಯನು ನಿಷ್ಕಾಳಜಿಯಿಂದ ಕುಳಿತು ಕುಳಿತಲ್ಲಿಯೇ ನಿಶ್ಚಿಂತವಾದ ವಿಚಾರಗಳನ್ನು ಮಾಡುತ್ತಿರುತ್ತಾನೆಯೊ ಅವನು ಇಂಥವನೇ ಇರುತ್ತಾನೆಂದು ನನಗೆನಿಸುತ್ತದೆ. ಅವನು ಪ್ರತಿಯೊಂದು ವಸ್ತುವಿನೊಳಗಿಂದ ಉತ್ತಮವಾದ ಗುಣಗಳನ್ನೇ ನೋಡುವ ವ್ರತ ತೆಗೆದುಕೊಂಡಿದ್ದರೆ ಆ ಮಾತು ಬೇರೆ. ಆದರೆ ಪ್ರತಿಯೊಂದು ವಸ್ತುವನ್ನು ಅದರ ಪರಿಸ್ಥಿತಿಗೆ ತಕ್ಕಂತೆ ಮಾಡುವದಕ್ಕಾಗಿ ಅದನ್ನು ಸಮರ್ಥಿಸುವದಕ್ಕೆ ಅವನು ತೆಗೆದುಕೊಂಡ ಹೊಣೆಗಾರಿಕೆಯು ಅಸಭ್ಯವಾಗಿ ತೋರುತ್ತದೆ. ಉದಾಹರಣಾರ್ಥವಾಗಿ ಹಿಂದೂ ಧರ್ಮದ ಅಸ್ಪೃಶ್ಯತೆಯ ಸಮರ್ಥನೆ, ಚೀನೀ ಜನರ ಸರ್ವಭಕ್ಷಣದ ಮತ್ತು ಜೂಜಿನ ಸಮರ್ಥನೆ, ಇಷ್ಟೇ ಅಲ್ಲ, ಇದರಲ್ಲಿ ಸೌಂದರ್ಯದ ಆರೋಪಣೆಯನ್ನು ಮಾಡುವದು, ಅದರಂತೆ ಜಪಾನೀ ಜನರ ವೇಶ್ಯಾ-ಸಹಿಷ್ಣುತೆಯ ವರ್ಣನೆ! ಪಾವಿತ್ರ್ಯದ ಪೂಜೆಯನ್ನು ಏಕೆ ಮಾಡಬೇಕು ಎಂದು ಹೇಳುತ್ತಾನೆ. ತನ್ನ ಸಹೋದರರನನ್ನು ದೇಶದ ಸಲುವಾಗಿ ಯುದ್ಧಕ್ಕೆ ಕಳಿಸುವದಕ್ಕಾಗಿ ಸಹೋದರಿಯು ತನ್ನ ಪಾವಿತ್ರ್ಯವನ್ನು ಮಾರಿಕೊಂಡರೆ ಇದರಲ್ಲಿ ಕೆಟ್ಟದ್ದೇನಿದೆ? ಹೀಗಿದ್ದರೂ ಈ ಮನುಷ್ಯನಲ್ಲಿ ಎಷ್ಟೋ ತಿಳಿವಳಿಕೆಯಿಂದೊಡಗೂಡಿದ ವಿಚಾರಗಳಿವೆ, ಎಷ್ಟೋ ದೀರ್ಘದೃಷ್ಟಿಯಿದೆ ಮತ್ತು ಎಷ್ಟೋ ಸೂಕ್ಷ್ಮ ನಿರೀಕ್ಷಣೆಗಳಿವೆ.

ಇವನು ಯೋಗಿಯ ಬಗ್ಗೆ ಮಾಡಿದ ವ್ಯಾಖ್ಯೆಯು ಸುಂದರವಾಗಿದೆ :

"A mystic is a contemplative man, whose life emanates from within, who lives in the essence of things and for that essence alone, whose consciousness has taken root in Atman, and who accordingly is completely truthful and pours out his inmost being without any inhibition. Such a man cannot deny any expression of life."

"ಯೋಗಿಯು ಧ್ಯಾನಮಗ್ನನಾಗಿರುತ್ತಾನೆ. ಅವನ ಜೀವನಪ್ರವಾಹವು ಒಳಗಿನಿಂದ ಹರಿಯುತ್ತದೆ. ಅವನು ಕೇವಲ ತತ್ವವನ್ನು ಪ್ರಾಪ್ತಮಾಡಿಕೊಳ್ಳುವದಕ್ಕಾಗಿ ಜೀವಿಸುತ್ತಾನೆ. ಇದಕ್ಕಾಗಿ ಅವನು ಯಾವಾಗಲೂ ಆತ್ಮದಲ್ಲಿಯೇ ರಮಿಸುತ್ತಾನೆ. ಆದುದರಿಂದ ಅವನು ಸಂಪೂರ್ಣ ಸತ್ಯಪರಾಯಣನಾಗಿಯೇ ಇರುತ್ತಾನೆ. ಯಾವದೇ ಪ್ರಕಾರದ ಅಡ್ಡಿಆತಂಕಗಳಿಲ್ಲದೆ ಅವನು ಯಾವಾಗಲೂ ತನ್ನ ಅಂತರಾತ್ಮನಿಗೆ ಸತ್ಯವಾಗಿ ತೋರಿದ್ದನ್ನೇ ಹೇಳುತ್ತಾನೆ. ಇಂಥ ಮನುಷ್ಯನು ಜೀವನವಿಕಾಸದ ಯಾವದೇ ಅಂಗವನ್ನೂ ನಿಷೇಧ ಮಾಡಲಾರನು."

"Not a single sage of India, not even Buddha, has opposed popular belief in gods. Most of them, above all Shankara, the founder of radical monism, subscribed to this belief themselves. They were so conscious, on the one hand, of the inexpressibility of divinity, and on the other, of the infinite number of possible manifestations, that generally they preferred the manifold expression to the simple one."

"ಹಿಂದುಸ್ತಾನದ ಯಾವದೇ ಸಂತನು, ಸ್ವತಃ ಬುದ್ಧನು ಕೂಡ, ದೇವತೆಗಳ ಬಗ್ಗೆ ಇದ್ದ ಸಾಮಾನ್ಯ ನಂಬಿಕೆಯನ್ನು ವಿರೋಧಿಸಿಲ್ಲ. ಅನೇಕರು, ಮುಖ್ಯವಾಗಿ ಶುದ್ಧ ಅದ್ವೈತದ ಪ್ರತಿಪಾದಕನಾದ ಶಂಕರನು ಕೂಡ, ಈ ನಂಬಿಕೆಯನ್ನು ಸಮರ್ಥಿಸಿದ್ದಾನೆ. ಒಂದು ಬದಿಯಿಂದ ದೇವರ ವರ್ಣನೆ ಮಾಡುವದಕ್ಕೆ ವಾಣಿಯ ಅಸಮರ್ಥತೆ, ಇನ್ನೊಂದು ಬದಿಗೆ ಅವನ ಪ್ರಕಟ ವಿಭೂತಿಗಳ ಅನಂತತೆ—ಇದರ ಜ್ಞಾನವು ಅವರಿಗೆ ಚನ್ನಾಗಿ ಇತ್ತು. ಆದುದರಿಂದ ಒಂದರ ಬದಲು ಅನೇಕ-ದೇವತೆಗಳನ್ನು ( ಬೇರೆ ಬೇರೆ ವಿಭೂತಿಯ ರೂಪದಲ್ಲಿ) ಸಾಮಾನ್ಯವಾಗಿ ಸ್ವೀಕರಿಸಿದರು.

'ಚಂಡೀ ಮಹಾತ್ಮ್ಯ' ದೊಳಗಿಂದ ಮಹಾದೇವಿಯ ವರ್ಣನೆಯನ್ನು ಕೊಟ್ಟು ಅವನು ಹಿಂದೂ ಜನರಿಗೆ ದೇವರ ಬಗ್ಗೆ ಇದ್ದ ಭಾವನೆಯನ್ನು ತಿಳಿಸಿ ಹೇಳುತ್ತಾನೆ.

"I am reminded of the famous hymn to Mahadevi in which

she, the goddess is revered as Ishwara, the highest being, then as Ganga, then as Saraswati, and again as Lakshmi, where in one verse, after declaring that she dwells in all the beings of the world, in the form of peace, power, reason, memory, professional competence, abundance, mercy, humility, hunger, sleep, faith, beauty, and consciousness, it is added that she also dwells in every creature in the form of *error*. It seems to me that this multiplicity in its connected form is a better expression of what the pious Indian means, than any single formula could be, however profound."

"ಮಹಾದೇವಿಯ ಈ ಪ್ರಸಿದ್ಧ ಸ್ತೋತ್ರವು ನನ್ನ ಜ್ಞಾಪಕಕ್ಕೆ ಬರುತ್ತದೆ. ಇದರಲ್ಲಿ ಮೊಟ್ಟಮೊದಲು ದೇವಿಯನ್ನು ಈಶ್ವರನ—ಪರಮಾತ್ಮನ ರೂಪದಲ್ಲಿ ವರ್ಣಿಸಲಾಗಿದೆ. ತರುವಾಯ ಇವಳನ್ನು ಗಂಗೆಯ ರೂಪದಲ್ಲಿ, ಸರಸ್ವತಿಯ ರೂಪದಲ್ಲಿ, ನಂತರ ಲಕ್ಷ್ಮಿಯ ರೂಪದಲ್ಲಿ ತೋರಿಸಲಾಗಿದೆ. ಒಂದೇ ಶ್ಲೋಕದಲ್ಲಿ ಜಗತ್ತಿನ ಪ್ರಾಣಿಮಾತ್ರಗಳಲ್ಲಿ ಶಾಂತಿ, ಶಕ್ತಿ, ಬುದ್ಧಿ, ಸ್ಮೃತಿ, ಕೌಶಲ್ಯ, ಸಮೃದ್ಧಿ, ನಮ್ರತೆ, ಕ್ಷುಧೆ, ನಿದ್ರೆ, ಶ್ರದ್ಧೆ, ಸೌಂದರ್ಯ ಮತ್ತು ಜಾಗ್ರತಿ ಈ ರೂಪಗಳಲ್ಲಿ ವಾಸ ಮಾಡುತ್ತಿರುವಳೆಂದು ತೋರಿಸಿ, ಜೀವಮಾತ್ರಗಳಲ್ಲಿ ಅವಳು 'ವಿಸ್ಮೃತಿಯ' ರೂಪದಿಂದಲೂ ವಾಸವಾಗಿದ್ದಾಳೆಂದು ಹೇಳಲಾಗಿದೆ. ಈ ವರ್ಣನೆಯು ಹೆಚ್ಚು ಒಳ್ಳೆಯದಾಗಿದೆಯೆಂದು ನನಗೆನಿಸುತ್ತದೆ."

ಶ್ರೀಮತಿ ಬೆರ್ಝುಂಟರ ಸಲುವಾಗಿ ಹೇಳುತ್ತಾನೆ:

"This woman controls her being from a centre which, to my knowledge, only very few men have ever attaind to. Her importance is due to the depth of her being, from which she rules her talents. She controls herself, her powers, her thoughts, her feelings, her volition, so perfectly that she seems to be capable of greater achievments than men of greater gifts. She owes this to Yoga. If Yoga is capable of so much, it may be capable of even more, and thus appears entitled to one of the highest places among the paths to self-perfection . . . The inner truth of this significance (of yogic practice) is so obvious that I am surprised that Yoga practice has not long ago been introduced into the curriculum of every educational institution. There is no doubt that the strengthening of all the forces of life is the function of their heightened concentration, and concentration signifies undoubtedly

the technical basis of all progress. . . . Concentration undoubtedly is the way of perfection. . . . The value of the second aim of yogic training that of silencing the involuntary psychic activity, is equally convincing. Every superfluous activity wastes strength. . . . All strong minds are marked by the fact that they are not fidgety, that they can relax and contract at will, and that they can give their attention to one problem more continuously than weak minds. . . . It is unbelievable how important for our inner growth the shortest periods of meditation are, provided they are practised regularly. A few minutes of conscious abstraction every morning effect more than the severest training of the attention through work. This explains, amongst other things the strengthening effect of prayer."

"ತೀರ ಸ್ವಲ್ಪ ಜನರು ಮುಟ್ಟಿರಬಹುದಾದಂಥ ಉಚ್ಚಸ್ಥಾನದಿಂದ ಈ ಸ್ತ್ರೀಯು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುತ್ತಾಳೆ. ಆವಳು ತನ್ನ ಆತ್ಮದ ಅಂತ-ರಾಳದಿಂದ ತನ್ನ ಶಕ್ತಿಗಳನ್ನು ನಿಯಂತ್ರಿಸುತ್ತಾಳೆ ಮತ್ತು ಇದೇ ಈ ಸ್ತ್ರೀಯ ಮಹತ್ವವು. ಇವಳು ತನಗಿಂತ ಹೆಚ್ಚು ಬುದ್ಧಿಶಕ್ತಿಯುಳ್ಳ ಜನರಗಿಂತಲೂ ಹೆಚ್ಚು ಸಿದ್ಧಿಯನ್ನು ಪ್ರಾಪ್ತಮಾಡಿಕೊಳ್ಳಬಲ್ಲಳು. ಯಾಕಂದರೆ ಅವಳು ತನ್ನ ವ್ಯಕ್ತಿತ್ವದ, ತನ್ನ ಶಕ್ತಿಗಳ, ತನ್ನ ವಿಚಾರಗಳ, ತನ್ನ ಭಾವನೆಗಳ ಮತ್ತು ತನ್ನ ಸಂಕಲ್ಪಗಳ ನಿರೀಕ್ಷಣೆಯನ್ನು ಸಂಪೂರ್ಣವಾಗಿ ಮಾಡಬಲ್ಲಳು. ಇದು ಯೋಗದ ಪ್ರಭಾವವು. ಯೋಗದಿಂದ ಇಷ್ಟಾಗುವದೆಂದರೆ ಇದಕ್ಕೂ ಹೆಚ್ಚು ಆಗಬಹುದು. ಪೂರ್ಣತ್ವವನ್ನು ಮುಟ್ಟಲಿಕ್ಕೆ ಇದು ಉತ್ತಮ ಸಾಧನವಾಗಿದೆ. ಯೋಗಾಭ್ಯಾಸದಿಂದ ಇಷ್ಟೊಂದು ಲಾಭವಾಗುತ್ತದೆಂದಮೇಲೆ ಈ ವಿಷಯವನ್ನು ಇನ್ನೂವರೆಗೆ ಶಿಕ್ಷಣಸಂಸ್ಥೆಗಳ ಅಭ್ಯಾಸಕ್ರಮದಲ್ಲಿ ಏಕೆ ಸೇರಿಸಿಲ್ಲವೆಂದು ನನಗೆ ಆಶ್ಚರ್ಯವಾಗುತ್ತಿದೆ. ಜೀವನದಲ್ಲಿ ಎಲ್ಲ ಶಕ್ತಿಗಳ ಬಲಗಳನ್ನು ಹೆಚ್ಚಿಸುವದಕ್ಕೆ ನಿಸ್ಸಂಶಯವಾಗಿ ಅವುಗಳ ಏಕಾಗ್ರತೆಯನ್ನು ಹೆಚ್ಚಿಸಲಿಕ್ಕೇಬೇಕು. ಏಕಾಗ್ರತೆಯು ಎಲ್ಲ ಪ್ರಗತಿಯ ಶಾಸ್ತ್ರೀಯ ಆಧಾರವಾಗಿದೆ. . . . ಯೋಗಾಭ್ಯಾಸದ ಎರಡನೇ ಮಹತ್ವವೆಂದರೆ ಅದು ಚಿತ್ತವು ಬೇಕಾದಲ್ಲಿ ತಿರುಗಾಡುವದನ್ನೂ ತಡೆಯುತ್ತದೆ. ಯಾವದೇ ಒಂದು ನಿರುಪಯುಕ್ತ ಪ್ರವೃತ್ತಿಯಿಂದ ಶಕ್ತಿಯು ವ್ಯರ್ಥ ವ್ಯಯವಾಗುತ್ತದೆ. . . . ಎಲ್ಲ ಶಕ್ತಿಶಾಲಿ ಜನರ ಮುಖ್ಯಲಕ್ಷಣವೆಂದರೆ ಅವರು ಚಂಚಲರಿರುವದಿಲ್ಲವೆಂಬುದೇ ಕಂಡುಬರುತ್ತದೆ. ಅವರು ತಮ್ಮ ಇಚ್ಛಾಶಕ್ತಿಯಿಂದ ತಮ್ಮ ಮನಸ್ಸನ್ನು ಯಾವದೇ ಕೆಲಸದೊಳಗಿಂದ ಹಿಂತೆಗೆದುಕೊಳ್ಳಬಲ್ಲರು ಮತ್ತು ಯಾವದೇ ಕೆಲಸದೊಳಗೆ ತೊಡಗಿಸಬಲ್ಲರು.

ಅಳ್ಳುಮನಸ್ಸಿನವರಿಗಿಂತ ಗಟ್ಟಿಮನಸ್ಸಿನವರು ಒಂದೇ ವಿಷಯದ ಮೇಲೆ ಯಾವಾಗಲೂ ಹೆಚ್ಚು ಲಕ್ಷ್ಯಕೊಡಬಲ್ಲರು. . . . ನಿಯಮಿತರೂಪದಿಂದ ಸ್ವಲ್ಪ ಸಮಯವಾದರೂ ಧ್ಯಾನದಲ್ಲಿ ತೊಡಗುವದು ನಮ್ಮ ಆಂತರಿಕ ವಿಕಾಸಕ್ಕೆ ಅತ್ಯಂತ ಮಹತ್ವಪೂರ್ಣವಾಗಿದೆ. ಬೆಳಗಿನ ಜಾವದಲ್ಲಿ ಕೆಲವು ನಿಮಿಷ ಏಕಾಗ್ರತೆಯಿಂದ ಧ್ಯಾನಮಾಡುವದು ಯಾವದೊಂದು ಪ್ರವೃತ್ತಿಯಲ್ಲಿ ಚಿತ್ತವನ್ನು ತೊಡಗಿಸುವ ಕಠೋರವಾದ ಶಿಕ್ಷಣಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ಪ್ರಾರ್ಥನೆಯಿಂದ ಮನೋಬಲವು ಹೆಚ್ಚಾಗುತ್ತದೆಂಬುದೂ ಇದರಿಂದ ಗೊತ್ತಾಗುತ್ತದೆ."

ಆದರೆ ಅವನು ಸಿದ್ಧಿಗಳನ್ನು ಕಟುವಾಗಿ ನಿಷೇಧಿಸಿ ಹೀಗೆ ಹೇಳಿದ್ದಾನೆ:

"Every diseased condition is an absolute evil. . . . The teachers of antiquity put down as an essential condition prior to accepting a pupil, that he should have perfect health, an irreproachable nervous system and a robust moral nature. . . . The Yogi is essentially healthy, he is the unquestioned master of his nerves, he is always in equilibrium, and normal in every way. . . . The Indian Yogi is an enemy of castigation, he never mortifies the flesh."

"ಪ್ರತಿಯೊಂದು ರೋಗಾವಸ್ಥೆಯು ಅತ್ಯಂತ ಕೆಟ್ಟದ್ದು . . . . ಪ್ರಾಚೀನ ಕಾಲದ ಗುರುಗಳು ಶಿಷ್ಯರನ್ನು ತೆಗೆದುಕೊಳ್ಳುವದಕ್ಕಿಂತ ಮೊದಲು ಒಂದು ಮುಖ್ಯವಾದ ಕರಾರನ್ನು ಹಾಕುತ್ತಿದ್ದರು: ಶಿಷ್ಯರ ಶರೀರಗಳು ಸಂಪೂರ್ಣ ನಿರೋಗಿಯಾಗಿರಬೇಕು, ಅವರ ಜ್ಞಾನತಂತುಗಳು ನಿರ್ದೋಷವಾಗಿರಬೇಕು ಮತ್ತು ಅವರಲ್ಲಿ ದೃಢವಾದ ನೀತಿಭಾವನೆ ಇರಬೇಕು. . . . ಯೋಗಿಯು ಸಂಪೂರ್ಣ ನಿರೋಗಿಯಾಗಿರಬೇಕು. ತನ್ನ ಇಂದ್ರಿಯಗಳ ಮೇಲೂ, ಜ್ಞಾನತಂತುಗಳ ಮೇಲೂ ಅವನ ಸಂಪೂರ್ಣ ನಿಯಂತ್ರಣವಿರಬೇಕು ಮತ್ತು ಎಲ್ಲ ವಿಷಯಗಳಲ್ಲಿಯೂ ವಿವೇಕಯುಕ್ತನಾಗಿರಬೇಕು. . . . ಹಿಂದುಸ್ಥಾನದ ಯೋಗಿಯು ದೇಹದಂಡನದ ಶತ್ರುವಾಗಿದ್ದಾನೆ. ಅವನು ಎಂದೂ ದೇಹದಮನ ಮಾಡುವದಿಲ್ಲ."

ಗುರುಶಿಷ್ಯರ ಸಂಬಂಧವನ್ನು ಹೇಳುತ್ತ ಅವನು ಮಹಾಪುರುಷರು ಶಿಷ್ಯರಾಗುವದಿಲ್ಲವೆಂಬ ವಿಚಿತ್ರ ಮಾತನ್ನು ಹೇಳುತ್ತಾನೆ. ಆದರೆ ನಮ್ಮಲ್ಲಿಯ ಮಹಾಪುರುಷರು ಗುರುವಿಲ್ಲದೆ ಇದ್ದಿಲ್ಲ.

"Eminent individuals can never be disciples; it is physiologically impossible for them. No matter how capable they may be of submitting to an ideal, an institution or an objective spirit,

their pride, and not only their pride, but above all, their inner truthfulness, would prevent them from following a living man, not as a duly accredited representative, but a man as such. While they behold only a man subject to human failings, and weakness, they cannot believe in divinity. Even in India par-excellence the land of faith, no founder of religion of whom I have heard has mentally important disciples during his life time. The first who swarm around a new centre of belief are, without exception poor in spirit and superstitious for they want above all to be led." . . .

"ಮಹಾಪುರುಷರು ಎಂದೂ ಶಿಷ್ಯರಾಗುವದಿಲ್ಲ. ಈ ಮಾತು ಅವರ ಸ್ವಭಾವಕ್ಕೇ ವಿರುದ್ಧವಾಗಿದೆ. ಯಾವದೇ ಆದರ್ಶದ ಯಾವದೇ ಸಂಸ್ಥೆಯ ಅಥವಾ ಯಾವದೇ ಬಾಹ್ಯತತ್ವದ ಅಧೀನರಾಗಿ ಉಳಿಯುವ ಶಕ್ತಿಯು ಅವರಲ್ಲಿ ಎಷ್ಟೇ ಇದ್ದರೂ ಅವರ ಅಭಿಮಾನವು, ಕೇವಲ ಅಭಿಮಾನವಿಷ್ಟೇ ಅಲ್ಲ ಆದರೆ ಅವರ ಆಂತರಿಕ ಸತ್ಯಪರಾಯಣತೆಯು ಯಾವದೇ ಜೀವಂತ ಮನುಷ್ಯನ ಅನುಕರಣ ಮಾಡಲಿಕ್ಕೆ ಅಡ್ಡಬರುತ್ತದೆ. ಮನುಷ್ಯನು ಜೀವಂತನಿರುವವರೆಗೆ ಅವನಲ್ಲಿ ಲೋಪದೋಷಗಳು ಇದ್ದೇ ಇರುತ್ತವೆ ಎಂದು ಅವರಿಗೆ ಗೊತ್ತಿದೆ. ಆದುದರಿಂದ ಅವರು ಅವನ ದೇವತ್ವವನ್ನು ಸ್ವೀಕರಿಸಲಾರರು. ಹಿಂದುಸ್ತಾನವು ಧರ್ಮಪರಾಯಣ ಜನರ ದೇಶವೆಂದು ತಿಳಿಯಲಾಗುತ್ತಿದೆ. ಅಲ್ಲಿ ಕೂಡ ಒಬ್ಬ ಧರ್ಮಸಂಸ್ಥಾಪಕನಿಗಾದರೂ ಅವನ ಜೀವನಕಾಲದಲ್ಲಿ ವಿಶೇಷ ಬುದ್ಧಿವಂತ ಶಿಷ್ಯನು ದೊರೆತಿದ್ದನ್ನು ನಾನು ಕೇಳಿಲ್ಲ. ಪ್ರಾರಂಭದಲ್ಲಿ ಹೊಸ ಸಂಪ್ರದಾಯಕ್ಕೆ ಬಂದು ಕೂಡುವ ಗುಂಪಿನ ಜನರು ನಿರಪವಾದವಾಗಿ ಮಂದಶಕ್ತಿಶಾಲಿಗಳೂ, ಅಂಧ ಶ್ರದ್ಧಾಳುಗಳೂ ಆಗಿರುತ್ತಾರೆ. ಅವರಿಗೆ ಉಳಿದ ಎಲ್ಲಕ್ಕಿಂತ ಹೆಚ್ಚಿನ ಆವಶ್ಯಕತೆಯು ಯಾವದೊಂದು ಮಾರ್ಗದರ್ಶನ ಮಾಡುವವರದಿರುತ್ತದೆ." . . .

ರಾಮಕೃಷ್ಣ-ವಿವೇಕಾನಂದ, ತೋತಾಪುರಿ-ರಾಮಕೃಷ್ಣ, ಶಂಕರ–ಗೌಡಪಾದಾಚಾರ್ಯರು ಇದ್ದಾಗ್ಯೂ ಕೂಡ ! !

ಈ ತಾರಕನು ಯಾರು ?

"No teacher can give what is not existent in a latent state, he can only waken that which is asleep, he can liberate what is imprisoned and bring to light what has been concealed. They never give anything, they merely set free that which is in us. . . . It is a superstition to believe that the saviours as such, as definite human beings, are saviours. . . . They were only releasers of

certain qualities, they were effective as the pure embodiment of their ideal. . . . Weak men feel happy in seeing in the great soul of another their own nature adequately expressed at last, as it were in a mirror. . . . A great man shows men what every one could be, what all men are at bottom, in spirit and in truth."

"ಸುಷುಪ್ತಾವಸ್ಥೆಯಲ್ಲಿಯೂ ಇಲ್ಲದಂಥ ಯಾವದೇ ವಸ್ತುವನ್ನು ಯಾವ ಗುರುವೂ ಕೊಡಲಾರನು. ಅವನು ಕೇವಲ ಮಲಗಿದ್ದವನ್ನು ಎಬ್ಬಿಸಬಲ್ಲನು, ಬಂಧನ ದಲ್ಲಿದ್ದದ್ದನ್ನು ಮುಕ್ತಮಾಡಬಲ್ಲನು, ಮುಚ್ಚಿದ್ದನ್ನು ಬೆಳಕಿಗೆ ತರಬಲ್ಲನು. ಅವರು ಎಂದೂ ಹೊಸದನ್ನು ಕೊಡುವದಿಲ್ಲ. ನಮ್ಮಲ್ಲಿ ಇದ್ದುದನ್ನೇ ಅವರು ಬಂಧನ ಮುಕ್ತ ಮಾಡುತ್ತಾರೆ. . . . ತಾರಕರೆಂದು ತಿಳಿಯುವ ಮನುಷ್ಯರು ಮನುಷ್ಯ ರೂಪದಿಂದಿದ್ದಾಗ ನಿಜವಾಗಿಯೂ ತಾರಕರಿದ್ದರೆಂದು ತಿಳಿಯುವದು ಭ್ರಮೆಯು. . . . ಅವರು ಕೆಲವು ವಿಶಿಷ್ಟಗುಣಗಳ ಉತ್ಕರ್ಷವನ್ನು ತೋರಿಸುವವರಾಗಿದ್ದರು. ತಮ್ಮ ಆದರ್ಶದ ಶುದ್ಧ ಮೂರ್ತಿರೂಪದಲ್ಲಿ ಅವರು ಪರಿಣಾಮಕಾರಿಗಳಾಗಿದ್ದರು. . . . ಬಲಹೀನ ಮನುಷ್ಯರಿಗೆ ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬ ಕಾಣಿಸುವಂತೆ ಎರಡನೆಯವರ ಮಹಾನ್ ಆತ್ಮಗಳಲ್ಲಿ ತಮ್ಮ ಸ್ವಭಾವದ ಪ್ರತಿಬಿಂಬವನ್ನು ನೋಡಿ ದಾಗ ಬಹಳ ಆನಂದವಾಗುತ್ತದೆ. . . . ಪ್ರತಿಯೊಬ್ಬ ಮನುಷ್ಯನೂ ತಮ್ಮಂತೆ ಆಗಬಲ್ಲನೆಂದು ಮಹಾಪುರುಷರು ಎರಡನೇ ಮನುಷ್ಯರಿಗೆ ತೋರಿಸಿ ಕೊಡುತ್ತಾರೆ. ಮನುಷ್ಯಮಾತ್ರರು ಆತ್ಮ ಸ್ವರೂಪದಲ್ಲಿ ಹೇಗೆ ಸತ್ಯಸ್ವರೂಪಿಗಳಾಗಿದ್ದಾರೆಂಬುದನ್ನು ಅವರು ತೋರಿಸಿಕೊಡುತ್ತಾರೆ."

ಬಾಪೂರ ವಿಷಯದಲ್ಲಿ ಇದು ಎಷ್ಟು ಸತ್ಯವಿದೆ!

ಬೌದ್ಧ ಧರ್ಮದ ವಿಷಯವಾಗಿ ಹೇಳುವಾಗ ಅದು ರಾಷ್ಟ್ರೀಯ ಪ್ರಕೃತಿಗೆ ಅನುಗುಣವಾಗಿದ್ದಿಲ್ಲವಾದುದರಿಂದ ತಾಳಲಿಲ್ಲವೆಂದು ಅವನು ಹೇಳುತ್ತಾನೆ. ಆದರೆ ಕ್ರಿಶ್ಚಿಯನ್ ಮತ್ತು ಇಸ್ಲಾಮು ಧರ್ಮಗಳು ಹಿಂದುಸ್ತಾನದಲ್ಲಿ ಹೇಗೆ ತಾಳಿದವೆಂಬು ದನ್ನು ಅವನು ಹೇಳುವದಿಲ್ಲ!

* * *

ಕ್ರಿಶ್ಚಿಯನ್ನರು ತರ್ಕದ ಪೂಜಕರಿರುವದರಿಂದ ಎಲ್ಲವೂ ತಮ್ಮದೇ ಸತ್ಯ ವೆಂದು ತಿಳಿಯುವವರಾಗಿದ್ದಾರೆ. ತಮ್ಮದು ಸತ್ಯವಾದುದು ಎರಡನೆಯವರದು ಅಸತ್ಯವಾದುದು ಹೀಗೆ ಹೇಳಿ ವಿರೋಧವನ್ನು ಹೆಚ್ಚಿಸುತ್ತಾರೆ. ಆದರೆ ಹಿಂದೂ ಧರ್ಮದಲ್ಲಿ ಪ್ರತಿಯೊಂದು ಪ್ರಕಾರದ ಅಧಿಕಾರಕ್ಕಾಗಿ ಭಾವನೆಗಳ ಭಿನ್ನ ಭಿನ್ನ ಶ್ರೇಣಿಗಳಿವೆ.

"The Bhagavad Gita perhaps the most beautiful work of

the literature of the world, appears to many as a philosophically worthless compilation, because a great many different directions of thought affirm themselves within it simultaneously. To the Indian, the Bhagavad Gita seems to be absolutely unified in spirit. Shankaracharya, the founder of Advaita philosophy, the most radical form of monism, which has ever existed, was in practice a dualist, that is to say, a supporter of Sankhya Yoga during tho whole of his life, and a polytheist in his religious practice. How was this possible ? Shankar's logical competence is beyond all questions. But he was more than a mere logician. Thus it seemed a matter of course to him, that different means should be used for different ends. In practice no one gets beyond dualism ; it is impossible to think, wish, strive for, act at all without implicitly postulating duality. Why then deny it ? It alters nothing. . . . .

" Are the Indians then eclectics ? Indeed they are not. They are only the opposite of rationalists. They do not suffer from the superstition that metaphysical truths are capable of an exaustive embodiment in any logical system ; they know that spiritual reality can never be determined by one, but if at all, by several intellectual co-ordinates. The fact that monism and dualism contradict each other means just as little in this connection as the contradiction between the English and the Metric system. "

"ಭಗವದ್ಗೀತೆಯು ಬಹುತರವಾಗಿ ಜಗತ್ತಿನ ಎಲ್ಲ ಸಾಹಿತ್ಯಗಳಲ್ಲಿ ಸರ್ವೋತ್ತಮ ಗ್ರಂಥವಾಗಿದೆ. ತ್ವತ್ವಜ್ಞಾನದ ದೃಷ್ಟಿಯಿಂದ ಎಷ್ಟೋ ಜನರಿಗೆ ಇದು ನಿರುಪಯುಕ್ತ ಗ್ರಂಥವೆಂದೆನಿಸುತ್ತದೆ. ಯಾಕಂದರೆ ಆದರಲ್ಲಿ ಒಂದೇ ಕಾಲಕ್ಕೆ ಭಿನ್ನ ಭಿನ್ನ ದೃಷ್ಟಿಕೋನದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ. ಹಿಂದುಸ್ತಾನದ ಜನರಿಗೆ ಭಗವದ್ಗೀತೆಯಲ್ಲಿ ಸಂಪೂರ್ಣ ಏಕವಾಕ್ಯತೆಯು ಕಂಡುಬರುತ್ತದೆ. ಬ್ರಹ್ಮನ ಹೊರತು ಬೇರೆ ಯಾವುದೂ ಸತ್ಯವಿಲ್ಲೆಂದು ಒತ್ತಿ ಒತ್ತಿ ಹೇಳುತ್ತಿದ್ದ ಅದ್ವೈತ ಮತದ ಸಂಸ್ಥಾಪಕರಾದ ಶಂಕರಾಚಾರ್ಯರು ವ್ಯವಹಾರದಲ್ಲಿ ದ್ವೈತಿಗಳಾಗಿದ್ದರು. ಅವರು ತಮ್ಮ ಜೀವನದಲ್ಲೆಲ್ಲ ಸಾಂಖ್ಯಯೋಗದ ಸಮರ್ಥನೆಯನ್ನು ಮಾಡಿದ್ದಾರೆ ಮತ್ತು ಧಾರ್ಮಿಕ ಆಚರಣೆಯಲ್ಲಿ ಅವರು ಅನೇಕ ದೇವತೆಗಳನ್ನು ಮಾನ್ಯ ಮಾಡಿದ್ದಾರೆ. ಇದು ಹೇಗೆ ಸರಿ ಹೋಗುತ್ತದೆ ? ನ್ಯಾಯ ಅಥವಾ ತರ್ಕದಲ್ಲಿ ಶಂಕರನ

ಮಹಾಶಕ್ತಿಯ ವಿಷಯಕ್ಕೆ ಯಾರೂ ಪ್ರಶ್ನೆಯನ್ನೇ ಮಾಡಲಾರರು. ಆದರೆ ಅವರು ಕೇವಲ ನೈಯ್ಯಾಯಿಕರೇ ಇದ್ದಿಲ್ಲ. ಅದಕ್ಕಿಂತಲೂ ವಿಶೇಷರಾಗಿದ್ದರು. ಭಿನ್ನ ಭಿನ್ನ ಸಾಧ್ಯಗಳಿಗೆ ಭಿನ್ನ ಭಿನ್ನ ಸಾಧನಗಳನ್ನು ಯೋಜಿಸಬೇಕೆಂದು ಅವರಿಗೆ ಪ್ರವಾಹಪ್ರಾಪ್ತವಾಗಿ ತೋರಿತು. ವ್ಯವಹಾರದಲ್ಲಿ ಯಾವ ಮನುಷ್ಯನೂ ದ್ವೈತವನ್ನು ದಾಟಿ ಹೋಗಲಾರನು. ದ್ವೈತವನ್ನು ಸಂಪೂರ್ಣ ಸ್ವೀಕರಿಸದೆ ವಿಚಾರ ಮಾಡುವದು, ಇಚ್ಛೆಮಾಡುವದು, ಪ್ರಯತ್ನಮಾಡುವದು ಅಥವಾ ಬೇರೆ ಯಾವದನ್ನೇ ಮಾಡುವದು ಮನುಷ್ಯನಿಗೆ ಅಸಾಧ್ಯವಿದೆ. ಅಂದಮೇಲೆ ಅದನ್ನು ಏತಕ್ಕಾಗಿ ನಿರಾಕರಿಸಬೇಕು? ಹಾಗೆ ಮಾಡುವದರಿಂದ ಯಾವ ವ್ಯತ್ಯಾಸವೂ ಆಗುವದಿಲ್ಲ. . . .

"ಹಾಗಾದರೆ ಹಿಂದುಸ್ತಾನದ ಜನರು ಎಲ್ಲ ಮತಗಳ ಸಾರಗ್ರಹಣವನ್ನು ಮಾಡುವವರಾಗಿದ್ದಾರೆಯೆ? ಇಲ್ಲ, ಇಲ್ಲ, ಹಾಗಂತೂ ಅವರು ಎಂದೂ ಇರುವದಿಲ್ಲ. ಅವರು ಬುದ್ಧಿವಾದಿಗಳಿಗಿಂತ ತೀರ ಭಿನ್ನರಾಗಿದ್ದಾರೆ. ಆಧ್ಯಾತ್ಮಿಕ ಸತ್ಯವು ಯಾವದೇ ಒಂದೇ ದರ್ಶನದಲ್ಲಿ ಮೂರ್ತಿಮಂತವಾಗಬಲ್ಲದೆಂದು ತಿಳಿದುಕೊಳ್ಳುವ ಭ್ರಮೆಯಲ್ಲಿರುವದಿಲ್ಲ. ಇದೇ ಅವರ ವೈಶಿಷ್ಟ್ಯವಾಗಿದೆ. ಪರಮ ಸತ್ಯದ ನಿರ್ಣಯವು ಯಾವದೇ ಒಂದು ದೃಷ್ಟಿಯಿಂದ ಆಗುವದಿಲ್ಲವೆಂಬುದು ಅವರಿಗೆ ಗೊತ್ತಿದೆ. ಆಗುವ ಸಂಭವವಿದ್ದರೂ ಕೂಡ ಅನೇಕ ದೃಷ್ಟಿಗಳಿಂದಲೇ ಆಗುವದು. ದ್ವೈತ ಮತ್ತು ಅದ್ವೈತಗಳು ಒಂದಕ್ಕೊಂದು ವಿರೋಧಿಯಾಗಿವೆ ಎಂದು ಹೇಳುವದರ ಅರ್ಥ ವಿಷ್ಟೇ—ಇಂಗ್ರೇಜಿ ಮತ್ತು ದಶಕ ಅಳತೆಯ ಪದ್ಧತಿಗಳು ಒಂದಕ್ಕೊಂದು ವಿರೋಧಿಯಾಗಿವೆ ಎಂದು ಹೇಳಿದಂತೆಯೆ."

ಕ್ರೈಸ್ತ ಮತ್ತು ಬುದ್ಧರ ವಿಷಯದಲ್ಲಿ ಎಷ್ಟೋ ಭಾಗವನ್ನು ಅತ್ಯಂತ ಸುಂದರವಾಗಿ ಬರೆಯಲಾಗಿದೆ.

"The reason for their significance is that the word in them did not remain the word, but became flesh; and that is the utmost which can be attained. To appear wise nothing is needed but the actor's talent; to be wise in the ordinary sense, it only requires a prominent mind. Before a man turns into a Buddha, the highest which he has recognised must have become the central propelling force of his whole life, must have gained the power of direct control over matter."

"ಅವರು ಕೇವಲ ಬಾಯಿಂದ ಉಪದೇಶ ಮಾಡುತ್ತಿದ್ದಿಲ್ಲ. ಆದರೆ ಅವುಗಳನ್ನು ಆಚರಣೆಯಲ್ಲಿ ತರುತ್ತಿದ್ದರು. ಇದೇ ಅವರ ಶ್ರೇಷ್ಠತೆಯ ಒಂದೇ ಒಂದು

ಕಾರಣವು. ಇದಕ್ಕಿಂತಲೂ ಸಿದ್ಧಿಯೆಂದರೆ ಹೆಚ್ಚೇನಿದೆ? ಜ್ಞಾನಿ ಎಂದು ತೋರಿಸ ಲಿಕ್ಕೆ ನಟನಾಚಾತುರ್ಯದ ಹೊರತು ಬೇರೆ ಯಾವ ಮಾತಿನ ಆವಶ್ಯಕತೆಯೂ ಇಲ್ಲ. ಸಾಮಾನ್ಯ ಅರ್ಥದಲ್ಲಿ ಜ್ಞಾನಿಯಾಗಬೇಕಾದರೆ ಮನುಷ್ಯನಲ್ಲಿ ತೀಕ್ಷ್ಣಬುದ್ಧಿ ಬೇಕಾಗುತ್ತದೆ. ಆದರೆ ಬುದ್ಧನಾಗಬೇಕಾದರೆ ಅವನಿಗಾದ ಅತ್ಯಂತ ಶ್ರೇಷ್ಠ ವಸ್ತು-ವಿನ ಸಾಕ್ಷಾತ್ಕಾರವು ಅವನ ಇಡೀ ಜೀವನದ ಮುಖ್ಯ ಮತ್ತು ಪ್ರೇರಕ ಶಕ್ತಿಯಾಗಿರ ಬೇಕು. ಸ್ಥೂಲ ಅಥವಾ ಜಡ ವಸ್ತುಗಳ ಮೇಲೆ ನೇರವಾಗಿ ಅಂಕಿತವನ್ನಿಡುವ ಶಕ್ತಿಯು ಅವನಲ್ಲಿ ಬರಬೇಕು. "

ಈ ದೇಶದಲ್ಲಿ ಬ್ರಹ್ಮವಿದ್ಯೆಯನ್ನು ಕಲಿಯುವ ಪದ್ಧತಿಯ ವಿಷಯದಲ್ಲಿ:

"The disciple is to sink himself, as it were, into the phrase (ಗುರುಮಂತ್ರ) until it has taken possession of his soul. He has to reach a new level of consciousness."

"ಗುರುಮಂತ್ರವು ತನ್ನ ಆತ್ಮದ ಮೇಲೆ ಅಧಿಕಾರವನ್ನು ಪ್ರಸ್ಥಾಪಿಸುವ ವರೆಗೆ ಶಿಷ್ಯನು ಆ ಗುರುಮಂತ್ರದಲ್ಲಿ ಲೀನನಾಗತಕ್ಕದ್ದು. ಅವನು ಜ್ಞಾನದ ಹೊಸ ಭೂಮಿಕೆಯನ್ನು ಮುಟ್ಟಬೇಕಾಗಿದೆ."

ಚೀನವನ್ನೂ ಚೀನೀಯರ ಸ್ವಭಾವವನ್ನೂ ಚನ್ನಾಗಿ ವರ್ಣಿಸಿದ್ದಾನೆ. ಚೀನೀ ಸಂಸ್ಕೃತಿಯ ಮೇಲೆ ಎರಡು ಗ್ರಂಥಗಳ ಪರಿಣಾಮವು ಬಹಳವಾಗಿದೆ:

"The Book of Reverence and the Book of Rites. Reverence ಅಂದರೆ reverence before that which is above us, that which is below us, and that which is like us; indeed, reverence before everything which exists, appears to this outlook as the basis of all virtue and all wisdom. And that is really what it is. One only does justice to that which one takes absolutely seriously. For this reason politeness is not something essentially external, but the most elemental expression of morality. Whereas virtue and kindness may not be fairly demanded of every body, the formal acceptance of another personality can be demanded. This gives its profound acceptance to courtesy."

"ಧರ್ಮ ಅಥವಾ ಸದಾಚಾರದ ಗ್ರಂಥ ಮತ್ತು ವಿನಯ ಅಥವಾ ಶಿಷ್ಟಾ-ಚಾರದ ಗ್ರಂಥ. ಧರ್ಮ ಅಥವಾ ಸದಾಚಾರ: ನಮಗಿಂತಲೂ ಮೇಲೆ ಇದ್ದವರು ನಮಗಿಂತಲೂ ಕೆಳಗೆ ಇದ್ದವರು ಮತ್ತು ನಮ್ಮಂತೆ ಇದ್ದವರೆಲ್ಲರ ಬಗ್ಗೆ ಪೂಜ್ಯಭಾವ. ಇದ್ದವರೆಲ್ಲರ ಬಗ್ಗೆಯೂ ಪೂಜ್ಯಭಾವ. ಈ ವಿಚಾರದ ಪ್ರಕಾರ ಪೂಜ್ಯ ಭಾವವು ಎಲ್ಲ ಸದ್ಗುಣಗಳ, ಎಲ್ಲ ಜ್ಞಾನದ ಮೂಲಾಧಾರವಾಗಿದೆ. ಇದೇ

ಮಾತು ಯೋಗ್ಯವಾಗಿದೆ. ಆದರಭಾವವಿದ್ದ ವಸ್ತುವಿನ ಸಂಗಡ ಮಾತ್ರ ನಾವು ನ್ಯಾಯವಾದ ರೀತಿಯಲ್ಲಿ ಆಚರಿಸಬಲ್ಲೆವು. ಆದುದರಿಂದ ಸಭ್ಯತೆ ಅಥವಾ ವಿನಯವು ಮುಖ್ಯವಾಗಿ ಬಾಹ್ಯವಸ್ತುವಲ್ಲ, ಆದರೆ ನೀತಿಯ ತಳಹದಿಯು. ನಾವು ಪ್ರತಿಯೊಬ್ಬ ಮನುಷ್ಯನಿಂದ ಸದ್ಗುಣವನ್ನೂ ದಯೆಯನ್ನೂ ಅಪೇಕ್ಷಿಸಲಾರೆವು, ಆದರೆ ಎದುರಾಳಿಯ ವಿಷಯಕ್ಕೆ ಆದರಭಾವ ಅಥವಾ ಅವನ ವ್ಯಕ್ತಿತ್ವದ ಸ್ವೀಕಾರ ಇವುಗಳನ್ನು ನಾವು ಎಲ್ಲರಿಂದಲೂ ಅಪೇಕ್ಷಿಸ-ಬಹುದು. ಪ್ರತಿಯೊಬ್ಬ ಮನುಷ್ಯನು ಸಭ್ಯನಿರಲೇಬೇಕೆಂಬುದಕ್ಕೆ ಇದು ಬಲವತ್ತರವಾದ ಕಾರಣವಾಗಿದೆ."

ಇದರ ಹೆಸರೇ ಆದರವು, ಇದೇ ಸಹಿಷ್ಣುತೆಯ ಮೂಲವು—ಇದನ್ನೇ ನಾನು ಬಾಪೂ ಅವರಲ್ಲಿ ಹೆಚ್ಚುಹೆಚ್ಚಿಗೂ ನೋಡುತ್ತೇನೆ ಮತ್ತು ಇದನ್ನು ಎರಡನೆಯವರಲ್ಲಿ ಕಾಣುವದು ಅಪರೂಪ.

"The Book of Rites, asserts that man can only become inwardly perfect if he expresses himself perfectly outwardly. This is the reason why the Chinaman has a fundamental sense of etiquette. The marvellous courtesy to be seen in China is the flower of confucianism."

"ಮನುಷ್ಯನ ಬಾಹ್ಯ ಆಚರಣೆಯು ಶುದ್ಧವಿದ್ದಾಗಲೇ ಅವನು ಅಂತಃ-ಶುದ್ಧಿಯನ್ನು ಹೊಂದಬಲ್ಲನು ಎಂದು ಶಿಷ್ಟಾಚಾರದ ಗ್ರಂಥವು ಹೇಳುತ್ತದೆ. ಆದುದ-ರಿಂದಲೇ ಚೀನೀಯರಲ್ಲಿ ಶಿಷ್ಟಾಚಾರದ ವಿಶೇಷ ಗುಣವು ಕಂಡುಬರುವದು. ಚೀನದಲ್ಲಿ ಕಂಡುಬರುವ ಅತ್ಯಂತ ವಿನಯಶೀಲತೆಯು ಕನ್‌ಫ್ಯೂಸಿಯಸ್ ಸಂಪ್ರದಾಯದ ಪರಿಣಾಮವಾಗಿದೆ."

ಚೀನದ ರೈತರ ಜೀವನದ ಚಿತ್ರವು ಬಹಳ ಸಜೀವವಾಗಿದೆ:

"Every inch of soil is in cultivation, carefully tilled, right up to the highest tops of the hills. Wherever I cast my eyes, I see the peasants at work, methodically, thoughtfully, conetntedly. It is they who everywhere give life to the wide plain. The blue of their jerkins is as much part of the picture as the green of the tilled fields and the bright yellow of the dried up river beds. There is hardly a plot of ground which does not carry numerous grave mounds; again and again the plough must piously mend its way between the tombstones. There is no other peasantry in the world which gives an impression of absolute genuineness and of

belonging so much to the soil. Here the whole of life and the whole of death takes place on the inherited ground. Man belongs to the soil, not the soil to the man ; it will never let its children go. However much they may increase in number, they remain upon it, wringing from Nature her scanty gifts by even more assiduous labour ; and when they are dead they return in child-like confidence to what is to them the real womb of their mother. And there they continue to live for evermore. The Chinese peasant, like the prehistoric Greak, believes in the life of what seems dead to us. The soil exhales the spirit of his ancestors, it is they who repay his labour and who punish him for his omissions. Thus, the inherited fields are at the same time his history, his memory, his reminiscences ; he can deny it as little as he can deny himself, for he is only a part of it. . . . "

" ಪ್ರತಿಯೊಂದು ಅಂಗುಲದಷ್ಟು ಭೂಮಿಯನ್ನು ಸಾವಧಾನದಿಂದ ಊಳುತ್ತಾರೆ. ಗುಡ್ಡದ ನೆತ್ತಿಯ ಮೇಲಿನ ಭೂಮಿಯನ್ನೂ ಸಾಗುಮಾಡುತ್ತಾರೆ. ನಾನು ನೋಡಿದತ್ತೆಲ್ಲ ಒಕ್ಕಲಿಗರು ಪದ್ಧತಿಯಿಂದಲೂ ವಿಚಾರಪೂರ್ವಕವಾಗಿಯೂ ಸಂತೋಷದಿಂದಲೂ ಕೆಲಸಮಾಡುತ್ತಿರುವದು ಕಂಡುಬರುತ್ತದೆ. ಅಲ್ಲಿಯ ವಿಶಾಲವಾದ ಮೈದಾನವನ್ನು ಈ ಜನರು ಸಜೀವವನ್ನಾಗಿ ಮಾಡುತ್ತಾರೆ. ಬಿತ್ತಿದ ಹೊಲಗಳ ಹಸಿರು ಬಣ್ಣ, ನದಿಗಳ ಒಣಗಿದ ಅಂಚೆಗಳ ಮಿರುಗುವ ಹಳದಿಯ ಬಣ್ಣಗಳೊಂದಿಗೆ ಒಕ್ಕಲಿಗರ ನೀಲೀ ಬಣ್ಣದ ಬಟ್ಟೆಗಳೂ ಚಿತ್ರದ ಒಂದು ಭಾಗವೇ ಆಗುತ್ತವೆ. ಗೋರಿಗಳಿಲ್ಲದ ಭೂಮಿಗಳು ತೀರ ವಿರಳ. ಆದರೆ ಒಕ್ಕಲಿಗನು ಈ ಗೋರಿಗಳ ಕಲ್ಲುಗಳನ್ನು ಆದರಪೂರ್ವಕವಾಗಿ ರಕ್ಷಿಸಿ ತನ್ನ ನೇಗಿಲನ್ನು ಹೊಡೆಯುತ್ತಾನೆ. ಭೂಮಿಯ ಅಂಶವೊ ಏನೋ ಎಂಬುವಂತೆ ಇವರು ಭೂಮಿಯೊಂದಿಗೆ ಸಮರಸರಾಗಿರುತ್ತಾರೆ. ಜಗತ್ತಿನಲ್ಲಿ ಇಂಥ ರೈತರನ್ನು ನಾನು ಮತ್ತೆಲ್ಲಿಯೂ ನೋಡಿಲ್ಲ. ಅಜ್ಜಮುತ್ತಂದಿರ ಕಾಲದಿಂದಲೂ ನಡೆದು ಬಂದ ಹೊಲದಲ್ಲಿಯೇ ಅವನ ಇಡೀ ಬಾಳು ಮತ್ತು ಅಲ್ಲಿಯೇ ಅವನ ಸಾವು. ಮನುಷ್ಯನು ಭೂಮಿಯವನು; ಭೂಮಿಯು ಮನುಷ್ಯನದಲ್ಲ. ಭೂಮಿಯು ತನ್ನ ಸಂತಾನವನ್ನು ಬಿಡುವದಿಲ್ಲ. ಜನಸಂಖ್ಯೆಯು ಎಷ್ಟೇ ಬೆಳೆದರೂ ಅವರೆಲ್ಲರೂ ಅದೇ ಭೂಮಿಯ ಮೇಲೆ ಇರುತ್ತಾರೆ. ಹೆಚ್ಚು ಶ್ರಮ ವಹಿಸಿ, ಕಷ್ಟ ತೆಗೆದುಕೊಂಡು ಅವರು ನಿಸರ್ಗದಿಂದ ತಮ್ಮ ಆಹಾರವನ್ನು ಸಂಪಾದಿಸಿಕೊಳ್ಳುತ್ತಾರೆ. ಸತ್ತಮೇಲೆ ಬಾಲಶ್ರದ್ಧೆಯಿಂದ ತಮ್ಮ ತಾಯಿಯೆಂದು ತಿಳಿಯುವ ಭೂಮಿಯ ಹೊಟ್ಟೆಯಲ್ಲಿ ಪ್ರವೇಶಮಾಡಿ ನಿರಂತರವಾಗಿ

ಅಲ್ಲಿಯೇ ಇರುತ್ತಾರೆ. ನಾವು ಸತ್ತವರೆಂದು ತಿಳಿಯುವವರನ್ನು ಚೀನದ ರೈತರು ಪ್ರಾಚೀನಕಾಲದ ಯುನಾನಿಗಳಂತೆ ಜೀವಂತರಿರುವರೆಂದು ತಿಳಿಯುತ್ತಾರೆ. ತಮ್ಮ ಭೂಮಿಗಳಲ್ಲಿಯೇ ತಮ್ಮ ಪೂರ್ವಜರ ಆತ್ಮಗಳು ಇರುತ್ತವೆಯೆಂದು ಅವರು ತಿಳಿಯುತ್ತಾರೆ. ಆ ಆತ್ಮವು ಅವರ ಶ್ರಮದ ಫಲವನ್ನು ಕೊಡುತ್ತದೆ ಮತ್ತು ಅವರು ಏನಾದರೂ ತಪ್ಪುಮಾಡಿದರೆ ಅದಕ್ಕಾಗಿ ಶಿಕ್ಷೆಯನ್ನು ವಿಧಿಸುತ್ತದೆ. ಈ ಪ್ರಕಾರ ಆನುವಂಶಿಕವಾಗಿ ದೊರೆತ ಭೂಮಿಯೇ ಅವರ ಇತಿಹಾಸವು, ಅವರ ಸ್ಮೃತಿಯು ಅವರ ಸಂಸ್ಮರಣವು. ಅವರು ಇದೇ ಭೂಮಿಯ ಒಂದು ಅಂಗವಾಗಿದ್ದಾರೆ. . . ."

ಜಪಾನದ ಕಲೆಯ ವಿಷಯವನ್ನು ಹೇಳುವಾಗ ಸದಭಿರುಚಿಯ ವ್ಯಾಖ್ಯೆಯನ್ನು ಚನ್ನಾಗಿ ಕೊಟ್ಟಿದ್ದಾನೆ:

"An all-embracing religion and philosophy which denies nothing can only originate from the Asiatic attitude to the world; it alone makes a perfect social organization possible in principle; only the man endowed with the Asiatics feeling for the world will possess taste in the highest sense. For what else is taste but clear consciousness of proportion? The man whose eyes have been trained in Japan will only rarely want to open them in Europe. How barbaric is our habit of overloading? How seldom does an object stand in the place which correlation appoints to it. How obtrusive our pictures are? And how rarely is a European aware that a room exists for the man, and not vice versa, that he, and not the curtain of the picture is to be given his best possible setting? . . . A Japanese temple is designed in its setting, it cannot in fact be dissociated from it . . . It is characteristic that the Japanese loses his taste as soon as he assumes European manners and European dress."

"ಏಸಿಯಾ ವಾಸಿಗಳು ಜಗತ್ತನ್ನು ನೋಡುವ ದೃಷ್ಟಿಕೋನದಿಂದಲೇ ಯಾವದೇ ವಸ್ತುವನ್ನು ಅಲ್ಲಗಳೆಯದಿರುವಂಥ ವ್ಯಾಪಕವಾದ ಧರ್ಮವೂ ವ್ಯಾಪಕವಾದ ತತ್ವಜ್ಞಾನವೂ ಉದಯವಾಗಬಲ್ಲದು. ಇದರಿಂದಲೇ ಪರಿಪೂರ್ಣವಾದ ಸಾಮಾಜಿಕ ವ್ಯವಸ್ಥೆಯು ಒಂದು ತತ್ವವೆಂದು ಸಾಧ್ಯವಾಗಬಲ್ಲದು. ಜಗತ್ತಿನ ವಿಷಯಕ್ಕೆ ಏಸಿಯಾದ ಜನರು ತಾಳಿದ ಭಾವನೆಯುಳ್ಳವನಿಗೆ ಮಾತ್ರ ಅತ್ಯುಚ್ಚ ಅರ್ಥದಿಂದ ಅಭಿರುಚಿ ಉಂಟಾಗಬಲ್ಲದು. ಅಭಿರುಚಿಯೆಂದರೆ ಪ್ರಮಾಣದ ಸ್ಪಷ್ಟ ಜ್ಞಾನವಲ್ಲದೆ ಮತ್ತೇನು? ಜಪಾನದಲ್ಲಿ ಶಿಕ್ಷಣ ಹೊಂದಿದವನು ಯುರೋಪದಲ್ಲಿ ತನ್ನ

ಕಣ್ಣುಗಳನ್ನು ತೆರೆದು ನೋಡಲು ಬಯಸುವದಿಲ್ಲ. ಎಲ್ಲವನ್ನೂ ಒತ್ತಿ ಒತ್ತಿ ತುಂಬುವ ನಮ್ಮ ರೂಢಿಯು ಎಷ್ಟು ಕಾಡು ಇದೆ! ನಾವು ವಸ್ತುಗಳನ್ನು ಅವುಗಳ ಯೋಗ್ಯ ಸ್ಥಾನದಲ್ಲಿಟ್ಟು ನೋಡುವದು ಅಪರೂಪ. ಛಾಯಾಚಿತ್ರಗಳು ಎಲ್ಲಿಯಾದರೂ ತೂಗುಹಾಕಲ್ಪಟ್ಟಿರುತ್ತವೆ! ಕೋಣೆಯು ಮನುಷ್ಯನ ಸಲುವಾಗಿ ಇರುತ್ತದೆ, ಮನುಷ್ಯನು ಕೋಣೆಯ ಸಲುವಾಗಿ ಅಲ್ಲ ಎಂಬ ಕಲ್ಪನೆ ಯುರೋಪದ ಮನುಷ್ಯನಿಗೆ ಇರುವದು ತೀರ ವಿರಳ; ಪಡದೆ ಅಥವಾ ಚಿತ್ರಗಳನ್ನು ಯೋಗ್ಯ ರೀತಿಯಲ್ಲಿ ಹಚ್ಚು-ವದು ಎಷ್ಟು ಮಹತ್ವಪೂರ್ಣವಾದದ್ದೋ ಅದಕ್ಕಿಂತಲೂ ತನ್ನನ್ನೇ ಸರಿಯಾದ ರೀತಿಯಲ್ಲಿಟ್ಟುಕೊಳ್ಳುವದು ಹೆಚ್ಚು ಮಹತ್ವದ್ದು. . . . ಜಪಾನೀ ದೇವಸ್ಥಾನದ ವೈಶಿಷ್ಟ್ಯವು ಅದರ ಸುತ್ತುಮುತ್ತಲಿನ ವಾತಾವರಣದಲ್ಲಿರುತ್ತದೆ. ಅದನ್ನು ಅದರಿಂದ ಪ್ರತ್ಯೇಕಿಸಲಿಕ್ಕೆ ಬರಲಾರದು. . . . ಜಪಾನೀ ಮನುಷ್ಯನು ಯುರೋಪಿಯನ್ನರ ಉಡುಗೆ ತೊಡಿಗೆಯನ್ನೂ ನಡೆನುಡಿಯನ್ನೂ ಅನುಸರಿಸಿದ ಕೂಡಲೆ ಅವನು ತನ್ನ ಅಭಿರುಚಿಯನ್ನು ಕಳೆದುಕೊಳ್ಳುತ್ತಾನೆಂಬ ಮಾತು ಲಕ್ಷ್ಯವನ್ನೆಳೆಯುವ ಸಂಗತಿಯಾಗಿದೆ."

* * *

ಈ ಮನುಷ್ಯನು ಪೌರ್ವಾತ್ಯ ಧರ್ಮಗ್ರಂಥಗಳ ಅಭ್ಯಾಸವನ್ನು ಚನ್ನಾಗಿ ಮಾಡಿದಂತೆ ಕಾಣುತ್ತದೆ. ಗೀತೆ ಮತ್ತು ಉಪನಿಷತ್ತುಗಳೊಳಗಿನ ಉದ್ಧರಣೆ-ಗಳೆಲ್ಲವೂ ಅತ್ಯಂತ ಸರಿಯಾಗಿರುತ್ತವೆ. ಅವನ್ನು ನೆನಪಿನಿಂದಲೇ ಬರೆದಂತೆ ಅನಿಸು-ತ್ತದೆ. ಲಾಓತ್ಸೆನ ಒಂದು ವಿಚಾರವು ಬಹಳ ಸುಂದರವಾಗಿದೆ:

"Heaven is eternal and the earth enduring
The cause of the eternal duration of heaven and earth is
That they do not live unto themselves.
Therefore they can give life continuously."

"ಸ್ವರ್ಗವು ಶಾಶ್ವತವು, ಪೃಥ್ವಿಯು ಸನಾತನವು. ಇವೆರಡರ ಶಾಶ್ವತವಾದ ಅಸ್ತಿತ್ವದ ಕಾರಣವೆಂದರೆ ತಮಗಾಗಿ ಅವು ಜೀವಿಸುವದಿಲ್ಲ. ಆದುದರಿಂದ ಅವು ಸತತವಾಗಿ ಜೀವನವನ್ನು ಕೊಡುತ್ತಲೇ ಇರುತ್ತವೆ."

ಯೇಸೂ ಮತ್ತು ಬುದ್ಧರು ಏಕೆ ಅಮರರಾದರೆಂಬುದನ್ನು ಉತ್ತಮವಾದ ರೀತಿಯಲ್ಲಿ ತೋರಿಸಿದ್ದಾನೆ:

"Most people are really dead before their death, that is to say, they cease to be the bearers of consciousness no matter whether they continue to exist objectively; there are only a few who continue beyond a limited period. If, however, a man arises

who knows how to incarnate a fundamental world idea in his person, as Buddha and Christ succeeded in doing, then he goes on living through all eternity."

" ಅನೇಕ ಜನರು ಸಾವು ಬರುವದಕ್ಕಿಂತ ಮೊದಲೇ ನಿಜವಾಗಿ ಸತ್ತಿರುತ್ತಾರೆ; ಅಂದರೆ ಅವರು ಸ್ಥೂಲರೂಪದಿಂದ ಜೀವಿಸಿದ್ದರೂ ಚೇತನೆಯುಳ್ಳವರಾಗಿರುವದಿಲ್ಲ. ಒಂದು ನಿಶ್ಚಿತವಾದ ಕಾಲಕ್ಕಿಂತಲೂ ಹೆಚ್ಚಾಗಿ ಬಾಳುವ ಜನರು ತೀರ ಕಡಿಮೆ. ಯಾವದೊಂದು ಮೂಲಭೂತ ವಿಶ್ವವಿಚಾರವನ್ನು ತನ್ನಲ್ಲಿ ಮೂರ್ತಿಮಂತಾಗಿ ಮಾಡಿಕೊಂಡ ಬುದ್ಧ ಮತ್ತು ಕ್ರೈಸ್ತರಂಥ ಮನುಷ್ಯನು ಹುಟ್ಟುವದು ಅಪರೂಪ. ಹುಟ್ಟಿದರೆ ಆತನು ಅನಂತಕಾಲದ ವರೆಗೂ ಜೀವಿಸಬಲ್ಲನು. "

ಕೆಡಕಿನ ಅಸ್ತಿತ್ವದ ವಿಷಯದಲ್ಲಿ ಎಷ್ಟೋ ವಿಚಾರಗಳು ಬಹಳ ಗಂಭೀರವಾದ ಚಿಂತನೆಯನ್ನು ವ್ಯಕ್ತಪಡಿಸುತ್ತವೆ.

" Now it is certain that evil has its definite and necessary function in the economy of the world. Destruction alone prepares the way for a radical innovation. If there is to be serious progress, then the natural processes of growth and decay must occasionally be accelerated. Only revolution explodes old rigid forms, only the premature end of generations, such as war brings about, rends the thread of fettering tradition. World-embracing cultures would never have come to exist if one species of men had not subjugated others and thus raised certain forms, out of the jungle of wild luxuriance to predominance. Last and not least death and killing are normal processes of nature. . . . The Indian myth according to which creation and destruction are correlative attributes of the deity is apparently very near to the truth; at times evil is divinely ordained. Only man should not usurp the position of Shiva; what is befitting to Him, man may not desire deliberately; the inevitability of death does not justify the murderer. Just as birth and natural death are beyond the sphere of personal volition so does the general scheme according to which the whole life evolves stand above individual judgement. . . . But men only do rarely what they ought to do, all the more rarely the more consciously they act. And where they undertake to determine events, belie-

ving themselves to know the plan of the whole, they work mischief. It leads to insensate wars, to all exterminating revolutions; the self-regulation of nature is destroyed and folly gains the victory. In this way white men have made havoc upon earth in many many in all too many directions.... Violence practised on living beings is always evil, every act of violence as such is a blow in the face of justice, and the most just execution or penalty offends the moral sense in some way or the other. And yet, somehow sometimes it is possible to realize the beneficial quality of what is evil in itself, not only in small matters, but even on a great scale. History teaches that the most violent tribes have often developed into cultured nations with the highest moral outlook. Physical superiority is only durable upon a moral basis. Without courage strength achieves nothing, without readiness for sacrifice, discipline, organization, even courage is of no avail."

"ಈ ಜಗತ್ತಿನ ವ್ಯವಹಾರದಲ್ಲಿ ಕೆಡಕಿಗೂ ಒಂದು ನಿಶ್ಚಿತ ಮತ್ತು ಆವಶ್ಯವಾದ ಸ್ಥಾನವಿರುತ್ತದೆಂಬುದು ಸತ್ಯಸಂಗತಿ. ತಳದಿಂದ ಹೊಸ ರಚನೆಯನ್ನು ಮಾಡುವ ಮಾರ್ಗವು ವಿನಾಶದಿಂದಲೇ ತಯಾರಾಗುತ್ತಿದೆ. ನಾವು ಏನಾದರೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಗಿದ್ದರೆ ಉತ್ಪತ್ತಿ ಲಯಗಳ ನೈಸರ್ಗಿಕ ಕ್ರಮಗಳಿಗೆ ಒಂದೊಂದು ಸಾರೆ ಗತಿಯನ್ನು ಕೊಡಲೇಬೇಕಾಗುವದು. ಹಳೆಯ ಮತ್ತು ಕಠೋರವಾದ ವೃತ್ತಿಗಳನ್ನು ಕ್ರಾಂತಿಯೇ ನಾಶಮಾಡಬಲ್ಲದು. ಯುದ್ಧದಿಂದ ಅಕಾಲದಲ್ಲಿ ಆಗುವ ಪೀಳಿಗೆಗಳ ಅಂತವು ಬಂಧನಕಾರಕ ರೂಢಿಗಳ ಕುಡಿಯನ್ನೇ ಚಿವುಟಿಹಾಕುತ್ತದೆ. ಒಂದು ವರ್ಗದ ಜನರು ಇನ್ನೊಂದು ವರ್ಗದವರನ್ನು ಪರಾಧೀನರನ್ನಾಗಿ ಮಾಡಿ ಎಷ್ಟೊ ವಸ್ತುಗಳನ್ನು ನಿಬಿಡವಾದ ಅರಣ್ಯದಿಂದ ಹೊರಗೆ ತೆಗೆಯದಿದ್ದರೆ ಜಗದ್ವ್ಯಾಪೀ ಸಂಸ್ಕೃತಿಯು ಉಂಟಾಗುತ್ತಲೇ ಇರಲಿಲ್ಲ. ಕೊನೆಯದಾಗಿ ಸಾವು ಮತ್ತು ಕೊಲೆಗಳು ನಿಸರ್ಗದ ಸ್ವಾಭಾವಿಕವಾದ ಕ್ರಮಗಳು. . . . ಹಿಂದುಸ್ತಾನದ ಪುರಾಣಗಳಲ್ಲಿ ಸೃಷ್ಟಿ ಮತ್ತು ಪ್ರಳಯಗಳು ಒಬ್ಬನೇ ದೇವರ ಒಂದಕ್ಕೊಂದು ಪೂರಕವಾದ ಸ್ವರೂಪಗಳೆಂದು ತಿಳಿಯಲಾಗಿದೆ. ಇದರಲ್ಲಿ ಬಹಳ ಸತ್ಯಾಂಶವಿದೆ. ಎಷ್ಟೋ ಸಲ ವಿನಾಶವನ್ನು ವರವೆಂದು ತಿಳಿಯಲಾಗಿದೆ. ಆದರೆ ಮನುಷ್ಯನು ಶಿವನ ಸ್ಥಾನವನ್ನು ಆಕ್ರಮಿಸಲಿಚ್ಛಿಸಬಾರದು, ಆತನು ಮಾಡಬಹುದಾದುದನ್ನು ಮನುಷ್ಯನು ಮಾಡಲಿಚ್ಛಿಸಬಾರದು, ಸಾವು ಅನಿವಾರ್ಯವೆಂದು ಕೊಲೆಯನ್ನು ಸಮರ್ಥಿಸಲಿಕ್ಕಾ

ಗದು. ಹುಟ್ಟು ಸಾವುಗಳು ಮನುಷ್ಯನ ಇಚ್ಛಾಶಕ್ತಿಯ ಕಕ್ಷೆಯ ಹೊರಗಿರುವಂತೆ ಜೀವಮಾತ್ರಗಳ ವಿಕಾಸದ ಎಲ್ಲ ಕ್ರಮಗಳು ಮನುಷ್ಯನ ನಿರ್ಣಯದಾಚೆಗಿರುತ್ತವೆ. . . . ಆದರೆ ಮನುಷ್ಯನು ತಾನು ಮಾಡತಕ್ಕದ್ದನ್ನು ಮಾಡುವದು ಅಪರೂಪ. ಅದರಲ್ಲಿ ಬುದ್ಧಿಪುರಸ್ಸರವಾಗಿ ಏನಾದರೂ ಮಾಡಹೋದರೆ ಅದನ್ನು ಮಾಡುವದಂತೂ ಅತಿ ವಿರಳ. ಇಡೀ ಯೋಜನೆಯು ಗೊತ್ತಿದೆಯೆಂದು ತಿಳಿದು ಅದರಿಂದ ಒಂದು ವಿಶಿಷ್ಟ ಪರಿಣಾಮವನ್ನು ಹೊರಡಿಸಬಯಸಿದಾಗಂತೂ ಅದನ್ನು ಕೆಡಿಸಿಯೇ ಬಿಡುತ್ತಾನೆ. ಇದರಿಂದಲೇ ಮೂರ್ಖತನದಿಂದ ತುಂಬಿದ ಯುದ್ಧಗಳೂ ಪ್ರಳಯವನ್ನುಂಟುಮಾಡುವ ಕ್ರಾಂತಿಗಳೂ ಉದ್ಭವಿಸುತ್ತವೆ. ನಿಸರ್ಗದ ಸ್ವನಿಯಂತ್ರಿತ ಕ್ರಮವು ಬದಲಾಯಿಸಲ್ಪಟ್ಟು ಮೂರ್ಖತನದ ಗೆಲವಾಗುತ್ತಿದೆ. ಇದೇ ರೀತಿಯಿಂದ ಬಿಳಿಯ ಜನರು ಅನೇಕ ದಿಶೆಗಳಲ್ಲಿ ಭಯಾನಕವಾದ ನಾಶವನ್ನು ಮಾಡಿದ್ದಾರೆ. . . . ಯಾವದೇ ಪ್ರಾಣಿಯ ಹಿಂಸೆಯನ್ನು ಮಾಡುವದಂತೂ ಹಿಂಸೆ ಆಗಿಯೇ ಆಗುವದು. ಹಿಂಸೆಯಿಂದ ಮಾಡಲ್ಪಡುವ ಪ್ರತಿಯೊಂದು ಕೆಲಸದಿಂದ ನ್ಯಾಯದೇವತೆಗೆ ಆಘಾತವಾಗುತ್ತದೆ. ಯಾವನೊಬ್ಬನಿಗೆ ಕಾನೂನುಗಳಿಗನುಸಾರವಾಗಿ ಶಿಕ್ಷೆಯನ್ನು ವಿಧಿಸಿದರೂ ಒಂದಿಲ್ಲೊಂದು ರೀತಿಯಿಂದ ನೀತಿಯ ಭಾವನೆಗಳಿಗೆ ನೋವುಂಟಾಗುತ್ತದೆ. ಇಷ್ಟೆಲ್ಲ ಆದರೂ ಕೆಡಕಿನೊಳಗಿಂದ ಒಳಿತು ಹೊರಡಬಲ್ಲದೆಂದು ತಿಳಿಯುವದು ಸಾಧ್ಯವಿದೆ. ಸಣ್ಣ ಸಣ್ಣ ವಿಷಯಗಳಲ್ಲಿ ಇಷ್ಟೇ ಅಲ್ಲ ದೊಡ್ಡ ಪ್ರಮಾಣದಲ್ಲಿಯೂ ಕೂಡ ಇದು ಸಾಧ್ಯವಿದೆ. ಅತ್ಯಂತ ಹಿಂಸಾಚಾರಿ ಜಾತಿಗಳು ಕೂಡ ಅತಿ ಶ್ರೇಷ್ಠ ಸದಾಚಾರ ಸಂಪನ್ನರಾದ ಪ್ರಜೆಗಳಾಗಿ ಪರಿವರ್ತನೆಹೊಂದಿದ್ದನ್ನು ಇತಿಹಾಸದಲ್ಲಿ ನಾವು ನೋಡುತ್ತೇವೆ. ಶಾರೀರಿಕ ಬಲವು ನೈತಿಕ ತಳಹದಿಯ ಮೇಲೆಯೆ ನಿಲ್ಲಬಲ್ಲದು. ಧೈರ್ಯವಿಲ್ಲದೆ ಕೇವಲ ಶಾರೀರಿಕ ಬಲವು ಏನೂ ಪ್ರಯೋಜನದ್ದಲ್ಲ. ತ್ಯಾಗಮಾಡುವ ಸಿದ್ಧತೆಯಿಲ್ಲದೆ ಶಿಸ್ತು, ಸಂಘಟನೆ ಮತ್ತು ಧೈರ್ಯ ಇವು ಒಂದೂ ಉಪಯೋಗ ಬೀಳುವದಿಲ್ಲ."

ಅಮೇರಿಕೆಯ ಪ್ರಜಾತಂತ್ರದ ಚಿತ್ರವನ್ನು ಒಂದು ವಾಕ್ಯದಲ್ಲಿ ಚನ್ನಾಗಿ ಚಿತ್ರಿಸಿದ್ದಾನೆ:

"The universal franchise has recalled to life the right of physical might in a refined form; through playing upon moods and instincts, through suggestions and mechanical result of clever intrigues, it is now being decided who is to govern, and this method of arriving at a decision differs from the method of the days of robber knights, precisely as seduction differs from violation."

" ಸಾರ್ವತ್ರಿಕ ಮತಾಧಿಕಾರದಿಂದ 'ಬಲವಂತನೇ ಬಾಧ್ಯಸ್ಥ' ಎಂಬ ನಿಯಮವು ಸಂಸ್ಕಾರ ಹೊಂದಿ ಸಜೀವವಾದಂತೆ ತೋರುತ್ತದೆ. ಜನರ ಆವೇಗ ಮತ್ತು ಮನಸ್ಸಿನ ಓಟಗಳ ಲಾಭ ಪಡೆದು, ಸೂಚನೆಗಳಿಂದಲೂ ಕೈಚಳಕದಿಂದ ತುಂಬಿದ ಕಾರಸ್ಥಾನಗಳಿಂದಲೂ ಯಾರ ಕೈಯಲ್ಲಿ ಅಧಿಕಾರವಿರಬೇಕೆಂಬುದನ್ನು ನಿರ್ಣಯಿಸಲಾಗುತ್ತಿದೆ. ಬಲಾತ್ಕಾರ ಮತ್ತು ಮರಳುಗೊಳಿಸುವಿಕೆ ಇವುಗಳಲ್ಲಿದ್ದಷ್ಟೇ ವ್ಯತ್ಯಾಸವು ಕೊಳ್ಳೆಗಾರ ಸರದಾರರ ಅಧಿಕಾರದಲ್ಲಿ ಮತ್ತು ಈ ಪ್ರಕಾರ ದೊರಕಿಸಿದ ಅಧಿಕಾರದಲ್ಲಿ ಇರುತ್ತದೆ. "

ಇಡೀ ಪುಸ್ತಕವು ವಿಚಾರಗಳಿಗೆ ಪ್ರಚೋದನೆ ಮಾಡುವಂತಹ ( Thought compelling ) ದಾಗಿದೆ. ಅದನ್ನು ಎಷ್ಟು ಶಾಂತಚಿತ್ತದಿಂದ ಬರೆಯಲಾಗಿದೆಯೋ ಅಷ್ಟೇ ಶಾಂತಚಿತ್ತದಿಂದ ಓದಿ ವಿವೇಚನೆ ಮಾಡಬೇಕು.

*     *     *

ಇವತ್ತು ಹಾರ್ನಿಮನ್ನರು ಆಯರ್ವಿನ್ನರ ಬಗ್ಗೆ ಲೇಖ ಬರೆದಿದ್ದಾರೆ. ಈತನು ಆತನನ್ನು ಧೂರ್ತನೆಂದೂ ಸಂಧಿಸಾಧುಕನೆಂದೂ ವರ್ಣಿಸಿದ್ದಾನೆ.

"Agile opportunist who endeavours to cover his inconsistencies and change of principle and policy with a thick veneer of unctuous reetitude and hypocritical professions of sincerity."

" ಈತನು ಧೂರ್ತ ಸಂಧಿಸಾಧುಕನಿದ್ದಾನೆ. ತನ್ನ ವಿಸಂಗತಿಗಳನ್ನೂ ತತ್ವ ಮತ್ತು ನೀತಿಯ ಮಾರ್ಪಾಟುಗಳನ್ನು ಸತ್ಯದ ಆಗ್ರಹ ಮತ್ತು ಡಾಂಭಿಕ ಸತ್ಯದ ಸೋಗಿನ ದೊಡ್ಡ ಪರದೆಯ ಹಿಂದೆ ಮರೆಮಾಡಲಿಚ್ಛಿಸುತ್ತಾನೆ. "

" ಆತನು ಒಂದು ಸಾರೆ ಸಾಯ್‌ಮನ್ ಕಮಿಶನ್ನಿನ ಕೈವಾರಿಯಾಗಿದ್ದನು. ಹಿಂದಿನಿಂದ ಉದಾರಮತವಾದಿಗಳ ವಿರೋಧವನ್ನು ಕಂಡು ಹಿಂದೆ ಸರಿದನು. ಒಂದು ಸಲ ಆತನು ಸವಿನಯ ಕಾಯದೆಭಂಗದ ಹೋರಾಟವನ್ನು ಲಾಠಿಯಿಂದಲೂ ಆರ್ಡಿನನ್ಸಗಳಿಂದಲೂ ಹತ್ತಿಕ್ಕಲು ಪ್ರಯತ್ನಿಸಿದನು. ಹಿಂದಿನಿಂದ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚಾದದ್ದನ್ನು ಕಂಡು ಮೆತ್ತಗಾದನು. ಅವನ ಖರೇತನದ ಮಾತುಗಳನ್ನು ಕಂಡು ಬೇಸರ ಬರುತ್ತದೆ. ಈಗ ಇದು ನಿಂತರೆ ಒಳ್ಳೆಯದು. ಆದರೆ ಆತನು ದುಂಡುಮೇಜಿನ ಪರಿಷತ್ತನ್ನು ಸಜೀವ ಮಾಡಿದರೆ ಅವನ ಸತ್ಯತೆಯ ಬಗ್ಗೆ ವಿಚಾರಮಾಡಲಾಗುವದು. "

ಬಾಪೂ: " ನನ್ನ ವಿಚಾರಗಳು ಹೀಗಿಲ್ಲ. ಇವನಲ್ಲಿ ಹಿಂದೊಂದು ಮುಂದೊಂದು ಇಲ್ಲ, ಕಾರಸ್ಥಾನವಿಲ್ಲ. ಈ ದೃಷ್ಟಿಯಿಂದ ಇವನಲ್ಲಿ ಖರೇತನವಿದೆ. ಅವನು ಇದ್ದುದನ್ನು ಇದ್ದಂತೆ ಆಡುವವನಾಗಿದ್ದಾನೆ. ಸಾಯ್‌ಮನ್ ಕಮಿಶನ್ನಿನ ಕಾಲಕ್ಕೆ

ಅವನಿಗೆ ಆ ಮಾತು ರುಚಿಸುತ್ತಿದ್ದಿಲ್ಲ. ಕಾಂರ್ಝುರ್ವೇಟಿವ್ಹರು ಅನುಸರಿಸಿದ ಧೋರಣೆಯ ವಿರುದ್ಧ ಹೋಗಬಾರದೆಂದು ಯೋಚಿಸಿದನು. ಅವನ ಖರೇತನಕ್ಕೂ ಒಂದು ಸೀಮೆಯಿದೆ. ಆ ಸೀಮೆಯೆಂದರೆ ಬ್ರಿಟಿಶ ಸಾಮ್ರಾಜ್ಯವು ಅಖಂಡವಾಗಿರಬೇಕೆಂಬುದು. ಅದಕ್ಕೆ ಗಂಡಾಂತರ ಒದಗಿದರೆ ಅವನು ವಚನಭಂಗದ ವಿರೋಧವನ್ನೂ ಮಾಡುವದಿಲ್ಲ. ಬ್ರಿಟಿಶ ಸಾಮ್ರಾಜ್ಯವು ದೇವರ ಒಂದು ಅದ್ಭುತವಾದ ಕೃತಿಯೆಂದು ತಿಳಿಯುವವನಾಗಿದ್ದಾನೆ—ಪ್ರತಿಯೊಬ್ಬ ಕಾಂರ್ಝುರ್ವೇಟಿವ್ಹ ತಿಳಿಯುವಂತೆ—ಮತ್ತು ಅದೇ ದೃಷ್ಟಿಯಿಂದ ಅವನು ಎಲ್ಲ ವಸ್ತುಗಳನ್ನೂ ನೋಡುತ್ತಾನೆ. ಆದರೆ ಅವನು ಸತ್ಯವನ್ನಾಡಲಿ ಆಡದಿರಲಿ ಇದಕ್ಕೇನು ಸಂಬಂಧ? ನಮಗೆ ಬೇಕಾದದ್ದು ಸಿಗುತ್ತದೆಯೊ ಇಲ್ಲವೊ ಎಂಬ ಮಾತಿನ ಸಂಗಡ ನಮ್ಮ ಸಂಬಂಧ."

ಇವತ್ತು ಸಾತವಳೇಕರರ ಉದ್ದವಾದ ಪತ್ರ ಬಂತು. ವಿಶ್ವರೂಪ ದರ್ಶನದ ೧೧ ನೇ ಅಧ್ಯಾಯವನ್ನು ಬಾಪೂ ಒಂದು ಮಹಾಕಾವ್ಯವೆಂದು ಕರೆದಿದ್ದಾರೆ. ಅದರ ವಿಷಯಕ್ಕೆ ಅವರು ಹೀಗೆ ಬರೆದಿದ್ದಾರೆ: "ಇದು ಕೇವಲ ಕಾವ್ಯವಲ್ಲ, ಸತ್ಯ ಸಂಗತಿ ಇದೆ. **वासुदेवः सर्वमिति स महात्मा सुदुर्लभः**— ಗೀತೆಯಲ್ಲಿಯ ಈ ತತ್ವವು ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಮೇಲಿಂದಮೇಲೆ ಬರುತ್ತದೆ. ಈ ಅಧ್ಯಾಯದಲ್ಲಿಯೂ **वासुदेवः सर्वम्** ಎಂದು ತೋರಿಸುವ ತಾತ್ಪರ್ಯವಿಷ್ಟೆ: ವಾಸುದೇವನು ವಿಶ್ವವನ್ನೆಲ್ಲ ವ್ಯಾಪಿಸಿದ್ದಾನೆ. ವಿಶ್ವದ ಪ್ರತಿಯೊಬ್ಬ ವ್ಯಕ್ತಿಯು ವಾಸುದೇವನ ಬೇರೆ ಬೇರೆ ಅಂಗಗಳಾಗುತ್ತಾನೆ." ಅವರಿಗೆ ಬಾಪೂ ಹಿಂದಿಯಲ್ಲಿ ಉದ್ದವಾದ ಪತ್ರವನ್ನು ಬರೆಸಿದರು:

"ವಿಶ್ವರೂಪ ದರ್ಶನದ ವಿಷಯಕ್ಕೆ ನೀವು ಬರೆದದ್ದೆಲ್ಲವೂ ಯಥಾರ್ಥವಿದೆ. ಆದರೂ ನಾನು ಆ ಅಧ್ಯಾಯದ ಪೂರ್ವಪೀಠಿಕೆಯಲ್ಲಿ ಬರೆದದ್ದರಲ್ಲಿ ಯಾವ ವ್ಯತ್ಯಾಸವೂ ಆಗುವದಿಲ್ಲ. ಇಡೀ ಜಗತ್ತನ್ನು ವಾಸುದೇವಸ್ವರೂಪವೆಂದು ತಿಳಿಯುವವನಿಗೆ ವಿಶ್ವರೂಪ ದರ್ಶನವು ಆಗಿಯೇ ಆಗುವದು. ಆದರೆ ರೂಪವು ತನ್ನ ಕಲ್ಪನೆಯ ಮೂರ್ತಿಯೇ ಆಗಿರುವದು. ಈಸಾಯಿಯು ಜಗತ್ತನ್ನು ಈಶ್ವರಸ್ವರೂಪವೆಂದು ತಿಳಿದರೂ ಅವನು ಅದನ್ನು ತನ್ನ ಕಲ್ಪನೆಯಂತೆಯೆ ಕಾಣುತ್ತಾನೆ. ಯಾವನು ಹೇಗೆ ಭಜಿಸುತ್ತಾನೆಯೊ ಆದರಂತೆ ದೇವರನ್ನು ಕಾಣುತ್ತಾನೆ. ಹಿಂದೂ ಸಂಸ್ಕೃತಿಯಲ್ಲಿ ಹುಟ್ಟಿ ಅದೇ ಶಿಕ್ಷಣವನ್ನು ಪಡೆದಂಥವನು ಹನ್ನೆರಡನೆಯ ಅಧ್ಯಾಯವನ್ನು ಓದಲಿಕ್ಕೆ ಬೇಸರಪಡುವದಿಲ್ಲ. ಅವನಲ್ಲಿ ಸ್ವಲ್ಪಾದರೂ ಭಕ್ತಿಯ ಅಂಶವಿದ್ದರೆ ಅವನಿಗೆ ಆ ಅಧ್ಯಾಯಧಲ್ಲಿ ವರ್ಣಿಸಿದಂತೆಯೆ ವಿರಾಟರೂಪದ ದರ್ಶನವಾಗುವದು. ಆದರೆ ಜಗತ್ತಿನಲ್ಲಿ ಇಂಥ ಯಾವ ಮೂರ್ತಿಯೂ ಅವನ ಕಲ್ಪನೆಯ ಹೊರಗಿನದಿರುವದಿಲ್ಲ. ಬ್ರಹ್ಮ, ಆತ್ಮಾ, ವಾಸುದೇವ ಮುಂತಾದ ಯಾವ ವಿಶೇಷಣವನ್ನು ನಾವು ಆ ಶಕ್ತಿಯ

ಹಿಂದೆ ಹಚ್ಚಿದರೂ ಅದು ನಿರಾಕಾರವೇ ಇರುತ್ತದೆ. ಭಕ್ತನಿಗೆ ಅದು ಸಾಕಾರವಾಗಿ ತೋರುತ್ತದೆ. ಇದು ಆ ಶಕ್ತಿಯ ಮಾಯೆ, ಇದೇ ಕಾವ್ಯ. ನೀವು ತೆಗೆದಂತೆ ಅದರಿಂದ ನಾವು ಒಂದೇ ಸಾರವನ್ನು ತೆಗೆಯಬಹುದು. ಕಳ್ಳನಲ್ಲಿಯೂ ನಾವು ವಾಸುದೇವ ಸ್ವರೂಪವನ್ನು ಕಾಣಬೇಕು. ನಮ್ಮಲ್ಲಿ ಆ ಶಕ್ತಿ ಬಂದರೆ ಕಳ್ಳನು ಕಳ್ಳತನ ಬಿಟ್ಟುಬಿಡುವನು. ನಮ್ಮೊಳಗೆ ಈ ಶಕ್ತಿ ಬರುವವರೆಗೆ ನಮ್ಮ ಎಲ್ಲ ಅಭ್ಯಾಸವೂ ಎಲ್ಲ ಜ್ಞಾನವೂ ನಿರರ್ಥಕವು. ನೀವು ವಿಶ್ವರೂಪ ದರ್ಶನದ ಬಗ್ಗೆ ಬರೆದಿರುವಿರಿ. ಆದರೆ ಅದಕ್ಕೆ ಉತ್ತರವನ್ನು ಕೇಳಿಲ್ಲ. ನಾನು ಉತ್ತರವನ್ನು ಕೊಟ್ಟಿದ್ದೇನೆ. ಯಾಕಂದರೆ ನಾನು ಕೂಡ ಅಂಥ ವಿಚಾರಗಳಲ್ಲಿ ಮಗ್ನನಿರುತ್ತೇನೆ. ನಿಮ್ಮ ಸಂಗಡ ಪತ್ರಗಳ ಮುಖಾಂತರ ಇಂಥ ವಿಚಾರಗಳನ್ನು ಮಾಡುವದರಿಂದ ನನಗೆ ಆನಂದವಾಗುತ್ತಿದೆ."

ಇತ್ತೀಚಿನ ಮನೋಭಾವನೆಯನ್ನು ತೋರಿಸುವದಕ್ಕೆ ಕೂಡ ಈ ಪತ್ರವು ಉಪಯುಕ್ತವಿದೆ. "ಇತ್ತೀಚೆಗೆ ನನಗೆ ಪ್ರಾರ್ಥನೆಯ ವಿಷಯದಲ್ಲಿ ಅನೇಕ ವಿಚಾರಗಳು ಬರುತ್ತವೆ." ಎಂದು ನಾರಾಯಣದಾಸ ಗಾಂಧೀಯವರು ಬರೆದಿದ್ದರು. ಇದನ್ನೂ ಆ ಪತ್ರದ ಸಂಗಡವೇ ಓದಬೇಕು. ಈ ಪತ್ರದ ಹಿಂಭಾಗದಲ್ಲಿ ಅವರು ವೈದಿಕ ಮಂತ್ರಗಳನ್ನು ತಿಳಿದುಕೊಳ್ಳುವದಕ್ಕಾಗಿ ಸಾತವಳೇಕರರಿಗೆ ಯಾವದೊಂದು ಸುಲಭೋಪಾಯವನ್ನು ತಿಳಿಸಲು ಬರೆದಿದ್ದಾರೆ: "ಅನೇಕ ಜನರ ಅನೇಕ ಅರ್ಥಗಳು. ಸನಾತನಗಳಲ್ಲಿಯೂ ಮತಭೇದ, ಸಾಮಾಜಿಕರಲ್ಲಿಯೂ ಮತಭೇದ, ಯುರೋಪಿಯನ್ ವಿದ್ವಾಂಸರಲ್ಲಿಯೂ ಮತಭೇದ. ಇದರಿಂದ ಗೊಂದಲವಾಗುತ್ತದೆ. ಉಪನಿಷತ್ತುಗಳ ವಿಷಯಕ್ಕೂ ಕೂಡ ಇದೇ ಸ್ಥಿತಿ." ಮತ್ತೆ ಮುಂದುವರಿಸುತ್ತಾರೆ: "ಈಶೋಪನಿಷತ್ತನ್ನು ಬಾಯಿಪಾಠ ಮಾಡಲು ಪ್ರಾರಂಭಿಸಿದ್ದೇನೆ. ಆದರ ಅನೇಕ ಅರ್ಥಗಳನ್ನು ನೋಡಿ ನಾನು ನನಗಾಗಿ ಒಂದು ವಿಶಿಷ್ಟ ಅರ್ಥವನ್ನು ತಯಾರಿಸಿದ್ದೇನೆ. ಆದರೆ ಸಂಸ್ಕೃತ ಭಾಷೆಯ ಜ್ಞಾನವು ಹೆಚ್ಚಾಗಿ ಇಲ್ಲದಿರುವುದರಿಂದ ಈ ರೀತಿ ಅರ್ಥ ಹಚ್ಚುವದು ಧಾರ್ಷ್ಟ್ಯದ ಕೆಲಸವೇ ಆಗಿದೆ. ನನ್ನಂಥ ಮನುಷ್ಯನು ವೈದಿಕ ಮಂತ್ರಗಳ ಅರ್ಥ ನಿರ್ಣಯ ಮಾಡುವದು ಹೇಗೆ ಸಾಧ್ಯ? ಸೌಭಾಗ್ಯದಿಂದಲೊ ದುರ್ಭಾಗ್ಯದಿಂದಲೊ ಅನೇಕ ಅರ್ಥಗಳಲ್ಲಿ ಒಂದನ್ನು ಆಯ್ದುಕೊಳ್ಳುವಷ್ಟು ಜ್ಞಾನವಿರುವದು ನಿಜ. ಸ್ವಂತದ ಸಮಾಧಾನಕ್ಕಾಗಿ ಗೀತಾಯಿ (ವಿನೋಬಾಜಿಯವರು ಮರಾಠಿಯಲ್ಲಿ ಭಾಷಾಂತರಿಸಿದ ಗೀತೆ) ಸಾಕು. ಆದರೆ ವೇದಗಳಲ್ಲಿ ಚಂಚುಪ್ರವೇಶ ಮಾಡುವದೂ ನನಗೆ ಪ್ರಿಯವಾಗಿದೆ. ಆದುದರಿಂದ ಏನಾದರೂ ಸೂಚನೆಯನ್ನು ಮಾಡುವದಿದ್ದರೆ ಮಾಡಿರಿ."

ನಾರಾಯಣದಾಸ ಭಾಯಿಯವರ ಪತ್ರ ಬಂದಿತು. ಎರಡು ವಾರಗಳಿಂದ

ಆಶ್ರಮಕ್ಕೆ ಟಪಾಲು ಬಂದೇ ಇಲ್ಲ. ಪಾಪ! ಹುಡುಗರು ಬರೆಯುವದನ್ನು ಬಿಟ್ಟು ಬಿಟ್ಟಿದ್ದಾರೆ. ಬಾಪೂ: "ಒಂದು ಚೂರು ಕಾಗದದ ತುಂಡಿ

೨೦-೭-'೩೨ ನಿಂದ ಅವರಿಗೆ ಶಿಕ್ಷಣ ದೊರೆಯುತ್ತಿತ್ತು. ಅದೂ ನಿಂತು-ಬಿಟ್ಟಿತು."

ನಾನು ೧೧ ನೆಯ ತಾರೀಖಿಗೆ ಬರೆದ ಪತ್ರವು ೧೪ ನೆಯ ತಾರೀಖಿಗೆ ಟಪಾಲಿನಲ್ಲಿ ಬಿತ್ತೆಂದು ಹೇಳುತ್ತಾರೆ. ಆದರೆ ೧೮ ನೆಯ ತಾರೀಖಿನ ವರೆಗೂ ಆಶ್ರಮಕ್ಕೆ ಮುಟ್ಟಿದ್ದಿಲ್ಲ. ಇಲ್ಲದಿದ್ದರೆ ಜೇಲು ಅನ್ನುವದಾದರೂ ಏತಕ್ಕೆ? ಅಪ್ಟನ್ ಸಿಂಕ್ಲೇರನು ರಶಿಯದ ಜೇಲಿನ ಅನುಭವಗಳ ವರ್ಣನೆಗಳನ್ನು ಕಳೆಹಾಕಿದ್ದಾನೆ. ಅವುಗಳನ್ನು ಓದಿ ಇದು ಜೇಲು ಅಲ್ಲವೆಂದೆನಿಸುತ್ತದೆ. ನಮ್ಮಲ್ಲಿ ಸ್ವಲ್ಪೂ ಕೂಡ ಕಷ್ಟವಿಲ್ಲ.

ವಲ್ಲಭಭಾಯಿಯವರ ಸಂಸ್ಕೃತವು ಸುಧಾರಿಸುತ್ತ ನಡೆದಿದೆ. ಅವರ ಸರಳ ಸ್ವಭಾವಕ್ಕೆ ಪಾರವೇ ಇಲ್ಲ. ನನ್ನನ್ನು ಕೇಳತೊಡಗಿದರು: "ಮಹಾದೇವ ಈ ವಿಭಕ್ತಿಯೆಂದರೇನು? ನೃಪಃ ಎಂದು ನಡೆಸುತ್ತೇನೆ. ಆದರೆ ರಾಜಃ, ವಿದ್ವಾನಃ ಎಂದು ಏಕೆ ನಡೆಸಬಾರದು?" ಆದರೆ ಇವತ್ತು ಬ್ರಹ್ಮಚರ್ಯದ ವಿಷಯದ ಮೇಲೆ ಮಹಾಭಾರತದ ಶ್ಲೋಕಗಳು ಬಂದಾಗ ಅವರು ಕೂಡ ಕೆಲ ಹೊತ್ತು ಸ್ತಬ್ಧರಾಗಿದ್ದರು. ನಾನು ಬಾಪೂ ಅವರಿಗೆ ಹೇಳಿದೆ: "ಸಂಸ್ಕೃತ ಭಾಷೆಯಷ್ಟು ಮಾಧುರ್ಯವು ಬೇರೆ ಇನ್ನಾವ ಭಾಷೆಯಲ್ಲಿಯೂ ಇರಲಿಕ್ಕಿಲ್ಲ. ಅದರಲ್ಲಿಯೂ ಬ್ರಹ್ಮಚರ್ಯವನ್ನು ಕುರಿತು ಬರೆದದ್ದಂತೂ ಬೇರೆ ಯಾವ ಸಾಹಿತ್ಯದಲ್ಲಿಯೂ ಇರಲಿಕ್ಕಿಲ್ಲ." ಬಾಪೂ ಹೇಳಿದರು: "ಮಾಧುರ್ಯದ ವಿಷಯಕ್ಕೆ ಹೇಳಲಿಕ್ಕೆ ಬರುವದಿಲ್ಲ. ಗ್ರೀಕ, ಲ್ಯಾಟಿನ್‌ಗಳಲ್ಲಿ ಇದ್ದರೂ ಇರಬಹುದು. ಆದರೆ ಬ್ರಹ್ಮಚರ್ಯ ಮತ್ತು ಸತ್ಯದ ವಿಷಯಗಳಲ್ಲಿ ಬೇರೆ ಇನ್ನಾವ ಸಾಹಿತ್ಯವೂ ಸಂಸ್ಕೃತವನ್ನು ಸರಿಗಟ್ಟಲಾರದು." ಆ ಶ್ಲೋಕಗಳನ್ನು ಇಲ್ಲಿ ಕೊಟ್ಟಿದೆ (ಅನುಶಾಸನ ಪರ್ವದಿಂದ).

न तपस्तप अित्याहुर्ब्रह्मचर्यं तपोत्तमम्  
अूर्ध्वरेता भवेद्यस्तु स देवो न तु मानुषः ॥  
आजन्ममरणाद्यस्तु ब्रह्मचारी भवेदिह  
न तस्य किंचिदप्राप्यमिति विद्धि नराधिप ॥  
पंचविंशतिपर्यंतं ब्रह्मचर्यं समाचरेत्  
गुणवान् शक्तिसंपन्नः शतायुस्तु भविष्यति ॥  
कायेन मनसा वाचा सर्वावस्थासु सर्वदा  
सर्वत्र मैथुनत्यागो ब्रह्मचर्यं विधीयते ॥  
यदीच्छसि वशीकर्तुं जगदेकेन कर्मणा  
सुदुर्वृत्तेन्द्रियग्रामं बलाच्छीघ्रं निवारय ॥

ಇವತ್ತು ಬಾಪೂ ಛಗನಲಾಲ ಜೋಶಿ, ಶಂಕರ ಮತ್ತು ಡಾ. ಮುಕುಂದ ಇವರಿಗೆ ಭೆಟ್ಟಿಯಾದರು. ಬಾಪೂ ಹೇಳಿದರು : "ಛಗನಲಾಲರು ಒಂದು ಒಳ್ಳೆಯ ಸುದ್ದಿಯನ್ನು ತಂದಿದ್ದಾರೆ. ಈಗ ಇಬ್ಬರು ಪಠಾಣ ತರುಣರು

೨೧-೭-'೩೨ ಕಾಂಗ್ರೆಸ್ಸಿನವತಿಯಿಂದ ಬಂದಿದ್ದಾರೆ. ಅದು ಕೂಡ ಆ ದಂಗೆಯು ನಡೆಯುತ್ತಿದ್ದ ಕಾಲಕ್ಕೆ. ಅವರು ಬಹಳ ಸಜ್ಜನರಿರುವರಲ್ಲದೆ ಒಳ್ಳೆಯ ಪ್ರಭಾವವನ್ನು ಬೀರಿದ್ದಾರೆ. ಅವರು ಹೇಳಿದ ಎರಡನೇ ಸುದ್ದಿಯೆಂದರೆ ರಾಮದಾಸರು ಖಿನ್ನರಾಗಿದ್ದಾರೆ. ಯಾಕೆಂದರೆ ಅವರ ಕಡೆಗೆ ಬಂದ ದಂತಮಂಜನದಲ್ಲಿ ಯಾಲಕ್ಕಿಗಳೂ ಬಂದಿರುವವು. ಅವನ್ನು ಅವರು ಕೂಡಲೇ ಚಲ್ಲಿಬಿಟ್ಟರು. ಆದರೂ ಅವರು ಖಿನ್ನರಾಗಿಯೆ ಇದ್ದಾರೆ." ಬಾಪೂ ಕೇಳಿದರು : "ಚಲ್ಲಿಬಿಟ್ಟನಲ್ಲವೆ? ಆದರೆ ಅಧಿಕಾರಿಗಳಿಗೆ ಈ ಸುದ್ದಿಯನ್ನು ತಿಳಿಸಿದನೆ?" ಛಗನಲಾಲರು ಹೇಳಿದರು. "ಇಲ್ಲ, ಈ ಸಂಗತಿಯನ್ನು ತಿಳಿಸಲಿಲ್ಲ." ಬಾಪೂ ಸ್ವತಃ ಎಲ್ಲ ಸಂಗತಿಯನ್ನೂ ಸುಪರಿಂಟೆಂಡೆಂಟರಿಗೆ ತಿಳಿಸಿದರು. ಅದೇ ದಿವಸ ಯಾರೊ ಇಂಗಾಷ್ಟಕ ಚೂರ್ಣದಲ್ಲಿ ಖಾರಪುಡಿಯನ್ನು ತರಿಸಿದ್ದರು. ಆದುದರಿಂದ ಬಾಪೂ ಅಂದರು : "ಇದರಲ್ಲಿ ಉಳಿದವರದೇನು ತಪ್ಪು? ಮೊದಲು ನನ್ನ ಮನೆಯೆ ಗಟ್ಟಿಮುಟ್ಟಾಗಿಲ್ಲ. ಇದರಲ್ಲಿ ರಾಮದಾಸನ ದೋಷವಂತೂ ಇಲ್ಲವೇ ಇಲ್ಲ; ಆದರೆ ಅವನಿಗೆ ಅದನ್ನು ಕಳಿಸುವವರದು ಸಂಪೂರ್ಣ ತಪ್ಪಿದೆ." ಸುಪರಿಂಟೆಂಡೆಂಟ : "ಇದರಲ್ಲಿ ವಿಶೇಷವೇನೂ ಇಲ್ಲ. ರಾಮದಾಸರು ಮನಸ್ಸಿಗೆ ಹಚ್ಚಿಕೊಳ್ಳಲು ಏನೂ ಕಾರಣವಿಲ್ಲ."

ಮೀರಾಬೇನರು ಕಾಶಿಯಲ್ಲಿ ಬೇನೆ ಬಿದ್ದಿರುವರೆಂದು ಅವರ ಪತ್ರ ಬಂದಿತು. ಅದರಲ್ಲಿ ಅವರು ಹೇಳಲಾರದಷ್ಟು ಶುಶ್ರೂಷೆ ತಮಗೆ ಸಿಗುತ್ತಿದೆಯೆಂದು ಬರೆದಿದ್ದರು. ಅವರಿಗೆ ಬಾಪೂ ಪತ್ರ ಬರೆದರು :

"We never know when we commit a breach of the laws that govern the body. And in nature as in human law ignorance is no excuse. Your fever therefore does not surprise me. I expect that the energetic remedy adopted by you checked the progress of malaria. Yes, at such times the services of friends become a boon and induce an early recovery. I know what lavish care is bestowed upon guests in Shiva Prasad Babu's home. I am glad you are having these sweet experiences. It makes attacks such as you had not only bearable but even a prize visitation in that they enable one to understand human nature at its best. And when it acts equally towards all and in all circumstances, it approaches the divine."

“ ಶರೀರಕ್ಕೆ ಸಂಬಧಪಟ್ಟ ನಿಯಮಗಳನ್ನು ನಾವು ಯಾವಾಗ ಮುರಿಯುತ್ತೇ-ವೆಂಬುದು ನಮಗೆ ಗೊತ್ತಾಗುವದಿಲ್ಲ. ಮನುಷ್ಯನು ಮಾಡಿದ ಕಾಯ್ದೆಗಳಲ್ಲಿದ್ದಂತೆಯೆ ನಿಸರ್ಗ ನಿಯಮದಲ್ಲಿಯೂ ‘ ಅಜ್ಞಾನಕ್ಕೆ ಕ್ಷಮೆ ಇಲ್ಲ ’ ಎಂಬ ಸಿದ್ಧಾಂತವು ಇದ್ದೇ ಇರುತ್ತದೆ. ಆದುದರಿಂದ ನಿಮಗೆ ಜ್ವರ ಬಂದದ್ದಕ್ಕೆ ನನಗೆ ಆಶ್ಚರ್ಯವಾಗಿಲ್ಲ. ನೀವು ಉಗ್ರ ಉಪಾಯ ಕೈಕೊಂಡದ್ದರಿಂದ ಚಳಿಜ್ವರದ ತೀವ್ರತೆಯು ಕಡಿಮೆಯಾಯಿತು. ಇಂಥ ಸಮಯದಲ್ಲಿ ಮಿತ್ರರು ಮಾಡುವ ಸೇವೆಯು ದೇವರ ದೇಣಿಗೆಯೆಂದೇ ಹೇಳಬಹುದು. ಆದರಿಂದ ನಾವು ಬೇಗನೆ ಗುಣಹೊಂದುತ್ತೇವೆ. ಶಿವಪ್ರಸಾದ ಬಾಬೂ ಅವರ ಮನೆಯಲ್ಲಿ ಎಷ್ಟು ಉತ್ಕೃಷ್ಟ ಆತಿಥ್ಯವಾಗುತ್ತದೆಂಬುದು ನನಗೆ ಗೊತ್ತಿದೆ. ನೀವು ಈ ಮಧುರವಾದ ಅನುಭವಗಳನ್ನು ಅನುಭವಿಸುತ್ತಿರುವದನ್ನು ನೋಡಿ ನನಗೆ ಆನಂದವಾಗುತ್ತದೆ. ಇಂಥವರ ಸಹವಾಸದಿಂದ ಬೇನೆಯನ್ನು ಸಹಿಸಿ ಕೊಳ್ಳುತ್ತೇವೆ ಇಷ್ಟೇ ಅಲ್ಲ ಆದರೆ ಮನುಷ್ಯಸ್ವಭಾವದ ಉತ್ತಮಗುಣಗಳೂ ಅನುಭವಕ್ಕೆ ಬರುವದರಿಂದ ಇದೊಂದು ವರಪ್ರದಾನವಾಗಿಯೂ ಪರಿಣಮಿಸುತ್ತದೆ. ಎಲ್ಲ ಪ್ರಸಂಗಗಳಲ್ಲಿ ಎಲ್ಲರಿಗೂ ಇಂಥ ಅನುಭವವು ಸಮನಾಗಿ ದೊರೆತರೆ ಅದು ದೈವತ್ವವನ್ನು ಸಮಿೂಪಿಸುತ್ತದೆ. ”

ಬಿರ್ಲಾ ಅವರು ಪ್ರಕಟನೆಗೆ ಕೊಟ್ಟ ವಿವರಣೆಯು ಪೂರ್ಣವಿದೆಯೆ ? ಎಂದು ನಿನ್ನೆ ರಾತ್ರಿ ಬಾಪೂರನ್ನು ಕೇಳಿದ್ದೆವು. ಆದಕ್ಕೆ ಅವರು ಹೇಳಿದರು : “ ಇಲ್ಲ, ಆದು ಪೂರ್ಣವಿಲ್ಲ. ಯಾಕಂದರೆ ಅವರಿಗೆ ಕೇಳಿದ ಪ್ರಶ್ನೆಗೆ

೨೨-೭-’೩೨ ಉತ್ತರವಿಲ್ಲ. ನಾವು Consultative Committee (ಸಲಹೆಗಾರ ಸಮಿತಿ) ಯೊಂದಿಗೆ ಅಸಹಕಾರ ಮಾಡಿದ್ದೇವೆಂದು ಅವರು ಹೇಳಿದರು. ಆದರೆ ಇಷ್ಟರಿಂದ ಅವರು ಉದಾರಮತವಾದಿಗಳ ಠರಾವಿಗೆ ಸಹಿಯನ್ನು ಏಕೆ ಮಾಡಲಿಲ್ಲವೆಂಬುದು ಸ್ಪಷವಾಗುವದಿಲ್ಲ. ಹೀಗಾಗುವ ಸಂಭವವೂ ಇದೆ. ಅವರು ಸಹಕಾರ ಮಾಡುವ ಬಗ್ಗೆ ಉದಾರಮತವಾದಿಗಳಿಗಿಂತಲೂ ಹೆಚ್ಚು ಕಠೋರವಾದ ಕರಾರುಗಳನ್ನು ಹಾಕಿಕೊಂಡಿರಬಹುದು. ಅವು ಉದಾರಮತವಾದಿ-ಗಳಿಗೆ ಒಪ್ಪಿಗೆಯಾಗಿರಲಿಕ್ಕಿಲ್ಲ. ಎರಡನೆಯದೆಂದರೆ ಇವರು ಹೋರನ ಸಂಗಡ ಪತ್ರ ವ್ಯವಹಾರ ನಡೆಸಿದ್ದರ ಬಗ್ಗೆಯೂ ಉತ್ತರವಿಲ್ಲ. ” ಸರ್ ಪುರುಷೋತ್ತಮದಾಸರ ವತಿಯಿಂದ ಬಾಪೂ ಮೊದಲೇ ಹೇಳಿದ ಮಾತನ್ನೇ ಇವತ್ತು ಅವರು ತಮ್ಮ ಹೇಳಿಕೆ ಯಲ್ಲಿ ಹೇಳಿದ್ದಾರೆ. ಇವರ ಕರಾರುಗಳು ಉದಾರಮತವಾದಿಗಳಿಗಿಂತಲೂ ಹೆಚ್ಚಿನ ವಿದ್ದವು. ದುಂಡುಮೇಜಿನ ಪರಿಷತ್ತನ್ನು ಮತ್ತೊಮ್ಮೆ ಕರೆಯುವದರಿಂದ ಮಾತ್ರ ಇವರಿಗೆ ಸಂತೋಷವಾಗುವಂತಿರಲಿಲ್ಲ. ವಿಲಾಯತಿಯಿಂದ ತಿರುಗಿ ಬಂದ ಮೇಲೆ ಇವರು ಹೋರನಿಗೆ ಒಂದೂ ಪತ್ರವನ್ನು ಬರೆಯಲಿಲ್ಲ.

ಮೇಜರ ಭಂಡಾರಿಯವರು ಭಗನಲಾಲ ಜೋಶಿ ಮತ್ತು ಗಂಗಾಬಹೆನರನ್ನು ನನಗೆ ಭೆಟ್ಟಿ ಮಾಡಿಸುವೆನೆಂದು ಹೇಳಿದ್ದರು. ಆದರೂ ನಿನ್ನೆ ಸಾಯಂಕಾಲ ಈ ಜನರು ಬಂದಾಗ ಇವರು ಅದನ್ನು ನಿರಾಕರಿಸಿದರು! ಇದಕ್ಕೆ

೨೩-೭-'೩೨ ಕಾರಣವೆಂದರೆ ಅವರಿಬ್ಬರೂ ಕಾರ್ಯಕರ್ತರಿರುವದರಿಂದ ಅವರನ್ನು ನನಗೆ ಭೆಟ್ಟಿಮಾಡಿಸುವದಕ್ಕೆ ಭಂಡಾರಿಯವರಿಗೆ ಭಯ ವಾಯಿತು. ಆಪ್ತೇಷ್ಟರ ಹೊರತು ಬೇರೆ ಯಾರಿಗೂ ಭೆಟ್ಟಿಕೊಡಬಾರದೆಂಬ ಕಾಯ್ದೆಯು ಸಿದ್ಧವೇ ಇತ್ತು! ಭಗನಲಾಲ ಜೋಶಿಯವರು ಮೊದಲನೇ ದಿವಸವೇ ಬಾಪೂರಿಗೆ ಭೆಟ್ಟಿಯಾಗಿದ್ದರು. ಇದರಲ್ಲಿ ಯಾವದೇ ಪ್ರಕಾರದ ಗಂಡಾಂತರವಿರಲಿಲ್ಲ. ಆದರೂ ನನಗೆ ಭೆಟ್ಟಿಮಾಡಿಸಲಿಕ್ಕೆ ಗಂಡಾಂತರವೆನಿಸಿತು. ಬಿಶಪ್ ಫಿಶರ ಇವರ The Thin Little Man Gandhi ( ತೆಳ್ಳಗಿನ ಪುಟ್ಟ ಮನುಷ್ಯನಾದ ಗಾಂಧಿ ) ಎಂಬ ಪುಸ್ತಕವು ಬಂದಿತ್ತು. ಅಂಜಿಕೆಯಿಂದ ಅದನ್ನು ಕೂಡ ಕೊಡದೆ ಸರಕಾರದ ಕಡೆಗೆ ಕಳಿಸಿಕೊಟ್ಟರು. ಹೀಗೆ ಮಾಡಿದ್ದು ಒಳ್ಳೆಯದಾಯಿತೆಂದು ನನಗೆನಿಸಿತು. ಯಾಕಂದರೆ ಇವರು ಅದನ್ನು ಓದಿದ್ದರೂ ಅಂಜಿಕೆಯ ಮೂಲಕ ಅದನ್ನು ಕೊಡುತ್ತಿದ್ದಿಲ್ಲ. ಸರಕಾರದಲ್ಲಿ ಯಾವನಾದರೂ ವಿಚಾರವಂತ ಮನುಷ್ಯನಿದ್ದರೆ ಅವನು ಅದನ್ನು ಓದಿ ಅದು ಆಕ್ಷೇಪಕಾರಕವಿಲ್ಲವೆಂದು ಹೇಳಿ ಅದನ್ನು ಕೊಡುವ ಸಂಭವವಿದೆ.

ರಾತ್ರಿ ಮಲಗುವ ಕಾಲಕ್ಕೆ ಬಾಪೂ ಹೇಳಿದರು: "ವಲ್ಲಭಭಾಯಿ, ಗುಜರಾತಿ ಪತ್ರಗಳ ವಿಷಯಕ್ಕೆ ನಾವು ಕಹಿ ಗುಳಿಗೆಗಳನ್ನು ನುಂಗುತ್ತಿರುವದು ನಿಮಗೆ ಗೊತ್ತಿದೆಯಲ್ಲವೆ?" ವಲ್ಲಭಭಾಯಿ: "ಅದು ಹೇಗೆ?" ಬಾಪೂ: "ಇಂಗ್ರೇಜಿಯಲ್ಲಿ ಬರೆದ ಪತ್ರಗಳನ್ನು ಕೂಡಲೇ ಕಳಿಸಿ ಕೊಡುತ್ತಾರೆ. ಗುಜರಾತೀ ಪತ್ರಗಳನ್ನು ಕಳಿಸುವದಕ್ಕೆ ತೊಂದರೆಯಿರಬಹುದು. ಹೀಗೆ ಈ ಜನರು ನಮ್ಮ ಜನರ ವಿಷಯಕ್ಕೆ ಸಂಶಯ ತೆಗೆದುಕೊಳ್ಳುವದು ನನಗೆ ಬಹಳ ಅಪಮಾನಕಾರಕವೆನಿಸುತ್ತಿದೆ. ಈ ಪತ್ರಗಳ ಅನುವಾದವಾಗಬೇಕು, ಇವರು ಅವನ್ನು ಪಾಸು ಮಾಡಬೇಕು. ಆಗೇನೊ ಇವುಗಳನ್ನು ಕಳಿಸುವರು. ಇವರಿಗೆ ವಿಶ್ವಾಸವಿದ್ದಂಥ ಗುಜರಾತೀ ಬಲ್ಲ ಮನುಷ್ಯನು ಇವರೊಳಗೆ ಒಬ್ಬನೂ ಸಿಗಲೊಲ್ಲನು! ಇದು ಭಯಂಕರವಾಗಿದೆ. ಆದುದರಿಂದ ಈ ವಿಷಯದ ಬಗ್ಗೆ ಹೋರಾಡಬೇಕು. ಹೋರಾಟವೆಂದರೆ ಈ ಕರಾರುಗಳಿದ್ದರೆ ನಾವು ಪತ್ರ ಬರೆಯುವದಿಲ್ಲವೆಂದು ಇವರಿಗೆ ತಿಳಿಸಿಬಿಡುವದು." ವಲ್ಲಭಭಾಯಿ: "ಇವರು ನಿರ್ಲಜ್ಜರಿದ್ದಾರೆ. ಬರೆಯದಿದ್ದರೆ ಬಿಡಿರಿ. ನಮ್ಮದೇನು ಹೋಗುತ್ತದೆ? ಎಂದು ಹೇಳುವರು." ಬಾಪೂ: "ಅದರದೇನೂ ಚಿಂತೆಯಿಲ್ಲ." ನಾನು: "ಇದೇನೋ ನಿಜ. ಈ ಜನರು ಏನು ಹೇಳುತ್ತಾರೆ, ಅವರ ಮೇಲೆ ಪರಿಣಾಮ ಆಗಲಿ ಆಗದಿರಲಿ, ಇದರ ವಿಚಾರ ಮಾಡುವ ಅವಶ್ಯಕತೆಯಿಲ್ಲ. ಆದರೆ

ಈ ವಿಷಯ ಮತ್ತು ಮೀರಾಬೇನರ ವಿಷಯ ಎರಡೂ ಒಂದೇ ಇರುವದಿಲ್ಲ. ಅಲ್ಲಿ ಒಂದು ಜೀವಂತ ತತ್ವವಿತ್ತು. ಇಲ್ಲಿ ಅದೇನೂ ನನಗೆ ಎನಿಸುವದಿಲ್ಲ. ಇಲ್ಲಿ ಇವರು ಹೇಳುತ್ತಾರೆ. 'ಇಂಗ್ಲೀಷಿನಲ್ಲಿ ಬರೆದರೆ ಕೂಡಲೇ ಕಳಿಸಿಕೊಡುವೆವು. ಆದರೆ ನೀವು ಇಂಗ್ಲೀಷಿನಲ್ಲಿ ಬರೆಯದಿದ್ದರೆ ಬಿಡಿರಿ, ನಾವು ಅದನ್ನು ತಪಾಸುಮಾಡಿ ನೋಡಲೇಬೇಕು.' ಇವರು ಈ ಪತ್ರಗಳನ್ನು ಇಂಗ್ಲೀಷಿನಲ್ಲಿ ಬರೆಯಬೇಕೆಂದು ಹಟತೊಟ್ಟರೆ ನಾವು ಹಾಗೆ ಮಾಡುವದು ಸಾಧ್ಯವಿಲ್ಲ." ಬಾಪೂ: "ಸುತ್ತಿರುಗಿ ಇವರು ನಮಗೆ ಇಂಗ್ಲೀಷಿನಲ್ಲಿ ಬರೆಯಿರೆಂದು ಹೇಳುತ್ತಲೇ ಇದ್ದಾರೆ." ನಾನು: "ನೀವು ಮಾಡು-ತ್ತಿರುವ ತಕರಾರು ಈ ಪದ್ಧತಿಯ ವಿಷಯವಾಗಿಯೇ ಇರುತ್ತದೆ." ಬಾಪೂ: "ಹೌದು, ಇದು ಇದ್ದೇ ಇದೆ. ಆದುದರಿಂದ ಅದನ್ನು ಹಾಗೆ ಕೊನೆಯವರೆಗೂ ಏಕೆ ಇಡಬೇಕು? ನಮ್ಮ ಸ್ವಾರ್ಥಕ್ಕಾಗಿ ಏನು?"

೨೪-೭-'೩೨ ನಿನ್ನೆ ರಾತ್ರಿ ಚರ್ಚಿಸಿದ ವಿಷಯವನ್ನು ಬೆಳಿಗ್ಗೆ ತಿರುಗಾಡುವ ಕಾಲಕ್ಕೆ ಮತ್ತೆ ಎತ್ತಿದರು. ವಲ್ಲಭಭಾಯಿಯವರ ಅಭಿಪ್ರಾಯವನ್ನು ಕೇಳಿದರು. ವಲ್ಲಭಭಾಯಿ ಹೇಳಿದರು: "ಹೀಗೆ ಪತ್ರಬರೆಯುವದಾದರೆ ಅದಕ್ಕಿಂತ ನಿಲ್ಲಿಸಿಬಿಡುವದು ಲೇಸು. ಇವರಲ್ಲಿ ಯಾರ ಮೇಲೂ ಇದರ ಪರಿಣಾಮವಾಗುವದಿಲ್ಲ." "ಪರಿಣಾಮವಾಗದಿರುವ ಚಿಂತೆಯಿಲ್ಲ. ಹಾಗೆ ನೋಡಿದರೆ ಕೊನೆಗೆ ಪರಿಣಾಮವಾಗದೇ ಇರುವದಿಲ್ಲ.'' ಆ ಮೇಲೆ ನನ್ನ ಅಭಿಪ್ರಾಯವನ್ನು ಕೇಳಿದರು. ನಾನು ಹೇಳಿದೆ: "ಇಂಗ್ಲೀಷ ಪತ್ರಗಳನ್ನು ತಪಾಸಿಸಿ ನೋಡುವದನ್ನು ನಾವು ಒಪ್ಪುವದಾದರೆ (ಅಂದರೆ ಅವರು ನಮ್ಮ ಮೇಲೆ ವಿಶ್ವಾಸವಿಡದೆ ನಮ್ಮ ಪತ್ರಗಳನ್ನು ನೋಡಲಿಚ್ಛಿಸುವದನ್ನು ನಾವು ಒಪ್ಪಿದರೆ) ನಾವು ಗುಜರಾತೀ ಪತ್ರಗಳ ಅನುವಾದ ಮಾಡುವದನ್ನೂ ಏಕೆ ಒಪ್ಪಬಾರದು? ಓರಿಯಂಟಲ್ ಟ್ರಾನ್ಸ್‌ಲೇಟರ ಆಫೀಸಿನ ಕೆಲಸವು ಪತ್ರಗಳ ಅನು-ವಾದ ಮಾಡುವದಿರುತ್ತದೆ, ಅಭಿಪ್ರಾಯ ಕೊಡುವದಿರುವದಿಲ್ಲ." ಬಾಪೂ: "ಈ ಮಾತು ಸರಿಯಾಗಿದೆ. ಆದರೆ ಆಫೀಸಿನ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನಾನೆಲ್ಲಿ ಹೇಳುತ್ತೇನೆ? ಅವರು ತಮಗೆ ವಿಶ್ವಾಸಕ್ಕೆ ಪಾತ್ರನಾದ ಒಬ್ಬ ಆಫೀಸರನನ್ನು ಕರೆಯಿಸಿ ಅವನಿಗೆ ಈ ಪತ್ರಗಳನ್ನು ತೋರಿಸಬೇಕು. ಇಂಗ್ಲೀಷ ಪತ್ರಗಳನ್ನು ಪಾಸು ಮಾಡಿ ಕಳಿಸುವಂತೆಯೆ ಇವುಗಳನ್ನೂ ಪಾಸು ಮಾಡಿ ಕಳಿಸಬೇಕು. ಅವರಿಗೆ ಈ ಅಧಿಕಾರಿಗಳ ಮೇಲೂ ವಿಶ್ವಾಸವಿಲ್ಲ. ಆದುದರಿಂದ ಎಲ್ಲ ಪತ್ರಗಳನ್ನೂ ಭಾಷಾಂತರ ಮಾಡಿಸಿ ನೋಡುತ್ತಾರೆ. ಇದು ಅತ್ಯಂತ ಅಪಮಾನಕಾರಕವಾದ ಮಾತು. ಜನರಲ್ ಬೋಥಾಗೆ ಇಂಗ್ರೇಜಿ ಬರುತ್ತಿತ್ತು. ಅವನ ಸ್ವಾರ್ಥವೂ ಇತ್ತು. ಹೀಗಿದ್ದರೂ ಅವನು "ಇಲ್ಲ, ನಾನು ಡಚ್ ಭಾಷೆಯಲ್ಲಿಯೇ ಮಾತಾಡುವೆ" ನೆಂದು

ಹೇಳುತ್ತಿದ್ದ. ಡಚ್ ಭಾಷೆಯಲ್ಲಿ ಮಾತಾಡಲಿಕ್ಕೆ ಅವನಿಗೆ ದಕ್ಷಿಣ ಆಫ್ರಿಕೆಯಿಂದ ಯಾರೂ ಸಲಹೆಯನ್ನು ಕೊಟ್ಟಿರಲಿಲ್ಲ. ಆದರೆ ಅವನಿಗೆ ತನ್ನಷ್ಟಕ್ಕೆ ತಾನೆ ಹೊಳೆ-ಯಿತು. ಅದರಂತೆ ನಮಗೂ ಇದು ಹೊಳೆಯಬೇಕು. ಈ ಪತ್ರ ಬರೆಯದಿದ್ದರೆ ನಮ್ಮ ಕೆಲಸ ನಡೆಯಲಾರದು ಹೀಗೇನೂ ಇಲ್ಲ. ಈ ಪತ್ರಗಳನ್ನು ಬರೆಯಲೇಬೇಕೆಂಬ ಧರ್ಮಬಂಧನೆಯೂ ಇಲ್ಲ. ಇದು ಆತ್ಮಸಂತೋಷಕ್ಕಾಗಿಯೂ ಇನ್ನೊಬ್ಬರನ್ನು ಸಂತೈಸುವದಕ್ಕಾಗಿಯೂ ಇದೆ. ಆದರೆ ಹೀಗೆ ಮಾಡುವಾಗ ನಮ್ಮ ಭಾಷೆಯ ಅಪಮಾನವಾಗುತ್ತಿದ್ದರೆ, ನಮ್ಮ ಜನರ ಮೇಲೆ ಅವಿಶ್ವಾಸ ಮಾಡುತ್ತಿದ್ದರೆ ಇದನ್ನು ನಿಲ್ಲಿಸುವದೇ ಯೋಗ್ಯ. ಒಬ್ಬ ಮನುಷ್ಯನು ಸಾಯುವದರಲ್ಲಿದ್ದಾನೆ. ನಾನು ಅವನಿಗೆ ಪತ್ರವನ್ನು ಬರೆದಿದ್ದೇನೆ. ಅವನು ಪತ್ರದ ಸಲುವಾಗಿ ಆತುರನಾಗಿದ್ದಾನೆ. ಪತ್ರವು ಇಲ್ಲಿಂದ ಪಾಸಾಗಿ ಹೋಗುವದಕ್ಕಿಂತ ಮೊದಲೇ ಅವನು ಸತ್ತರೆ ಇದು ಭಯಂಕರವಲ್ಲವೆ? ನಮ್ಮ ಆಫೀಸಿನಲ್ಲಿ ಕಡಿಮೆ ಜನರಿದ್ದಾರೆ, ನಮ್ಮಿಂದ ಕೆಲಸವಾಗುವ ದಿಲ್ಲವೆಂದು ಹೇಳಿದರೆ ಅದು ತಿಳಿಯುವಂಥ ಮಾತಾಗಿದೆ. ಆದರೆ ಇವರು ಯಾವ-ನೊಬ್ಬ ವಿಶ್ವಾಸಪಾತ್ರ ಮನುಷ್ಯನಿಗೆ ಒಪ್ಪಿಸಿದ ಮೇಲೂ ತಾವೇ ಸ್ವತಃ ನೋಡಬಯಸುತ್ತಾರೆ. ಸುಪರಿಂಟೆಂಡೆಂಟ ಮತ್ತು ಜೇಲರರ ಮೇಲೂ ಇವರು ಅವಿಶ್ವಾಸ ಮಾಡುವದನ್ನು ನೋಡಿ ನನಗೆ ಸಿಟ್ಟು ಬರುತ್ತಿದೆ. ಆದರೆ ಇವರಲ್ಲಿಯೆ ಕಿಡಿಯಿಲ್ಲದ ಮೇಲೆ ನಾವೇನು ಮಾಡಬಲ್ಲೆವು?" ವಲ್ಲಭಭಾಯಿಯವರಿಗೆ ಹೇಳಿದರು: "ನೀವು ಸಂಸ್ಕೃತದಲ್ಲಿ ಶ್ರೇಯ ಮತ್ತು ಪ್ರೇಯ ಇವುಗಳ ವಿಷಯಕ್ಕೆ ಓದುವಿರಿ. ಈಗಿನ ವಿಷಯದಲ್ಲಿ ನಾವು ಪತ್ರ ಬರೆಯುತ್ತಿರಬೇಕೆಂದು ಪ್ರೇಯವು ಹೇಳುತ್ತಿದೆ. ಬರೆಯುವದನ್ನು ನಿಲ್ಲಿಸಿರೆಂದು ಶ್ರೇಯವು ಹೇಳುತ್ತಿದೆ."

ಇವತ್ತು ಆಶ್ರಮಕ್ಕೆ ಕಳಿಸುವ ಟಪಾಲಿನಲ್ಲಿ ೧೪ ಪತ್ರಗಳನ್ನು ಕಳಿಸಲಾಯಿತು. ಯಾವದೇ ಕ್ಷಣಕ್ಕೆ ಪತ್ರಗಳು ಬರುವದು ನಿಂತರೆ ಚಿಂತೆಮಾಡಬಾರದೆಂದು ಎಲ್ಲರಿಗೂ ಬರೆದಿದ್ದರು. ಅನಾಸಕ್ತಿಯ ಗುರುತು ಇದೇ ಆಗಿದೆ. ಪ್ರಭುದಾಸರಿಗೆ ಸತ್ಯ ಮತ್ತು ದೇವರ ವಿಷಯವಾಗಿ ಬರೆದರು: "ಸತ್ಯವನ್ನು ಕುರಿತು ನನಗೇನೂ ಹೇಳುವದಿರುವದಿಲ್ಲ. ದೇವರ ಬಗ್ಗೆ ವ್ಯಾಖ್ಯೆ ಮಾಡುವದು ಕಠಿಣ. ಸತ್ಯದ ವ್ಯಾಖ್ಯೆಯು ಎಲ್ಲರ ಹೃದಯದಲ್ಲಿ ಇದ್ದೇ ಇದೆ. ನೀವು ಈ ಕ್ಷಣಕ್ಕೆ ಯಾವದನ್ನು ಸತ್ಯವೆಂದು ತಿಳಿಯುತ್ತಿರುವಿರೊ ಅದೇ ಸತ್ಯ ಮತ್ತು ಅದೇ ನಿಮ್ಮ ದೇವರು. ತನ್ನ ಕಲ್ಪನೆಯ ಸತ್ಯವನ್ನು ಆರಾಧಿಸುತ್ತ ಆರಾಧಿಸುತ್ತ ಕೊನೆಗೆ ಮನುಷ್ಯನು ಶುದ್ಧ ಸತ್ಯಕ್ಕೆ ಹೋಗಿ ಮುಟ್ಟಿಯೇ ಮುಟ್ಟುತ್ತಾನೆ. ಆ ಸತ್ಯವೇ ದೇವರು. ಈಗ ದಿನಾಲು ನಾನು ವೇದಗಳ ಸಾರವನ್ನು ಓದುತ್ತಿದ್ದೇನೆ. ಅದರಲ್ಲಿಯೂ ಇದನ್ನೇ ಹೇಳಿದೆ. ನಮಗೆ ಸತ್ಯಜೀವನವನ್ನು ಆಚರಿಸಲಿಕ್ಕೆ ಬರೆದಿದ್ದರೆ

ನಾವು ಓದಿದ್ದೆಲ್ಲ ನಿರರ್ಥಕ. ಸತ್ಯಜೀವನದಲ್ಲಿ ತೋರಿಕೆಗೆ ಆಸ್ಪದವೇ ಇಲ್ಲ. ಸತ್ಯದ ಪೂಜಾರಿಯು ತಾನು ಹೇಗೆ ಇರುವನೊ .ಹಾಗೆಯೇ ತೋರಿಸಿಕೊಳ್ಳುವನು ಅವನ ವಿಚಾರ, ವಾಣಿ ಮತ್ತು ಕೃತಿ ಇವೆಲ್ಲವುಗಳೂ ಒಂದೇ ಆಗಿರುವವು. ಸತ್ಯವನ್ನೇ ದೇವರೆಂದು ತಿಳಿದರೆ ಈ ಶಿಕ್ಷಣವು ಬೇಗನೇ ದೊರೆಯುವದು. ನಮ್ಮ ಜೀವನವನ್ನು ಸತ್ಯಮಯವಾಗಿ ಮಾಡುವದಕ್ಕೆ ಅನೇಕ ಪುಸ್ತಕಗಳನ್ನು ಮುಗುಚಿ ಹಾಕುವ ಆವಶ್ಯಕತೆಯಿಲ್ಲ, ಆದರೆ ಎಲ್ಲವೂ ನಮ್ಮ ವಶವಾಗುತ್ತದೆ. **हिरण्मयेन पात्रेण सत्यस्यापिहितंमुखं, तत्वं पूषन्नपावृणु, सत्यधर्माय दृष्टये।** ಈ ಮಂತ್ರವನ್ನು ಕುರಿತು ವಿಚಾರಮಾಡು." ಪುರಾತನಿಗೆ ಬರೆದರು: "ನಾನು ನಿನಗೆ ಎಚ್ಚರಿಕೆಯನ್ನು ಕೊಟ್ಟದ್ದು ನೀನು ಪ್ರಶ್ನೆ ಕೇಳುವದನ್ನು ನಿಲ್ಲಿಸಬೇಕೆಂದಲ್ಲ, ಆದರೆ ನೀನು ಅಂತರ್ಮುಖನಾಗುವದಕ್ಕೋಸ್ಕರವಿತ್ತು. ಮುಖ್ಯ ವಿಷಯವು ತಿಳಿದ ಮೇಲೆ ಆದರಿಂದ ಹೊರಡುವ ಉಪಪ್ರಶ್ನೆಗಳನ್ನು ನಮಗೆ ಬಿಡಿಸಲಿಕ್ಕೆ ಬರಬೇಕು. ಹೀಗೆ ಬಿಡಿಸಲಿಕ್ಕೆ ಬರದ ವರೆಗೆ ಮುಖ್ಯ ವಿಷಯವು ತಿಳಿದಿದೆಯೆಂದು ಹೇಳಲಿಕ್ಕಾಗುವದಿಲ್ಲ. ಇದು ಭೂಮಿತಿಯ ಪ್ರಮೇಯದಂತಿದೆ. ಒಂದು ತಿಳಿದರೆ ಅದರಿಂದ ಹೊರಡುವ ಬೇರೆ ಉಪಪ್ರಮೇಯಗಳೂ ಬರಲಿಕ್ಕೆಬೇಕು."

ಕಪಿಲಳಿಗೆ: "ತಕಲಿ ನೂಲುವದು ಒಂದು ಸೇವೆ ಇದೆ. ನಿಮ್ಮ ಸುತ್ತುಮುತ್ತು ಹುಡುಗರಿದ್ದರೆ ಅವರಿಗೆ ಶಿಕ್ಷಣವನ್ನು ಕೊಡುವದು, ದೊಡ್ಡವರಿದ್ದರೆ ಅವರಿಗಾಗಿ ರಾತ್ರಿ ಶಾಲೆಗಳನ್ನು ಹಾಕುವದು ಇವೂ ಸೇವಾ ಕಾರ್ಯಗಳೇ ಆಗಿವೆ. ನಾವು ದಿನ ದಿನಕ್ಕೆ ಶುದ್ಧರಾಗುತ್ತ ಹೋದರೆ, ಒಂದು ಕೂಡ ಕೆಟ್ಟ ವಿಚಾರವನ್ನು ಮನಸ್ಸಿನೊಳಗೆ ತರದಿದ್ದರೆ, ಇವು ಕೂಡ ನನ್ನ ದೃಷ್ಟಿಯಿಂದ ಸೇವೆಯೇ ಆಗಿವೆ. ಇಷ್ಟು ಕೆಲಸವನ್ನು ಹಾಸಿಗೆ ಹಿಡಿದ ಮನುಷ್ಯನು ಕೂಡ ಮಾಡಬಲ್ಲನು."

. . . ರು ಕೇಳಿದರು: "ಪ್ರಾಪಂಚಿಕ ವಸ್ತುಗಳನ್ನು ಪಡೆಯುವದಕ್ಕಾಗಿ ಸುಳ್ಳಿನ ಆಶ್ರಯ ಹೊಂದುವವನಿಗೆ ದೇವರು ಪ್ರತ್ಯಕ್ಷನಾಗುವನೆ? ಅಥವಾ ಸತ್ಯದ ಪಾಲನೆಗಾಗಿ ಪ್ರವೃತ್ತಿಗಳನ್ನೇ ತ್ಯಾಗ ಮಾಡುವವನಿಗೆ ದೇವರು ಪ್ರತ್ಯಕ್ಷನಾಗುವನೆ?" ಅವರಿಗೆ ಹಿಂದಿಯಲ್ಲಿ ಬರೆದರು: "ಪ್ರಾಪಂಚಿಕ ವಸ್ತುಗಳ ಪ್ರಾಪ್ತಿಗಾಗಿಯಾಗಲಿ ಅಥವಾ ಮತ್ತೆ ಬೇರೆ ಯಾವದಾದರೂ ಕಾರಣಕ್ಕಾಗಲಿ ಸುಳ್ಳಿನ ಆಶ್ರಯಪಡೆಯುವವನಿಗೂ ರಾಗದ್ವೇಷಾದಿಗಳಿಂದ ಕೂಡಿದವನಿಗೂ ಭಗವತ್ಪ್ರಾಪ್ತಿಯು ಆಗಲಾರದು. ನೀವು ಕೊಟ್ಟ ಎರಡನೆಯ ದೃಷ್ಟಾಂತವು ಅಸಂಭವವೆಂದು ತಿಳಿಯುತ್ತೇನೆ. ಸತ್ಯದ ಮಾರ್ಗದ ಮೇಲೆ ನಡೆಯುವದು ಮತ್ತು ಪ್ರಪಂಚ ಅಂದರೆ ಪ್ರವೃತ್ತಿಗಳಿಂದ ದೂರ ಇರುವದು ಹೀಗೆ ಹೇಳುವದು ಆಕಾಶ ಮಲ್ಲಿಗೆಯೆಂದು ಹೇಳಿದಂತೆಯೆ ಇದೆ. ಪ್ರವೃತ್ತಿಗಳನ್ನು ಬಿಟ್ಟವನು ಯಾವ ಮಾರ್ಗದ

ಮೇಲೆ ನಡೆಯುತ್ತಾನೆಂಬುದನ್ನು ಹೇಗೆ ಹೇಳಬಹುದು? ಸತ್ಯದ ಮಾರ್ಗದ ಮೇಲೆ ನಡೆಯುವಾಗಲೇ ಪ್ರವೃತ್ತಿಪ್ರವೇಶವು ಬಂದುಬಿಡುತ್ತದೆ. ಪ್ರವೃತ್ತಿಪ್ರವೇಶವಿಲ್ಲದೆ ಸತ್ಯಮಾರ್ಗದ ಮೇಲೆ ನಡೆಯುವ ಅಥವಾ ನಡೆಯದಿರುವ ಪ್ರಸಂಗವೇ ಬರುವದಿಲ್ಲ. ಮನುಷ್ಯನು ಪ್ರವೃತ್ತಿಯಿಲ್ಲದೆ ಒಂದು ಕ್ಷಣ ಕೂಡ ಇರುವದಿಲ್ಲೆಂಬ ಮಾತು ಗೀತೆಯ ಎಷ್ಟೋ ಶ್ಲೋಕಗಳಿಂದ ಸ್ಪಷ್ಟವಾಗಿದೆ. ಭಕ್ತ ಮತ್ತು ಭಕ್ತಿಹೀನರಲ್ಲಿಯ ಭೇದವು ಹೀಗಿದೆ: ಒಬ್ಬನು ಪಾರಮಾರ್ಥಿಕ ದೃಷ್ಟಿಯಿಂದ ಪ್ರವೃತ್ತಿಯಲ್ಲಿ ತೊಡಗುತ್ತಾನೆ ಮತ್ತು ಪ್ರವೃತ್ತಿಯಲ್ಲಿರುವಾಗ ಕೂಡ ಸತ್ಯವನ್ನು ಬಿಡುವದಿಲ್ಲ. ರಾಗದ್ವೇಷಾದಿಗಳನ್ನು ಕಡಿಮೆ ಮಾಡುತ್ತ ಹೋಗುತ್ತಾನೆ. ಇನ್ನೊಬ್ಬನು ಭೋಗಕ್ಕಾಗಿಯೇ ಪ್ರವೃತ್ತಿಗಳಲ್ಲಿ ಮಗ್ನನಾಗಿರುತ್ತಾನೆ. ತನ್ನ ಕಾರ್ಯ ಸಾಧಿಸುವದಕ್ಕಾಗಿ ಅಸತ್ಯಾದಿ ಆಸುರೀ ಉಪಾಯಗಳಿಂದ ದೂರವಿರಲಿಕ್ಕೂ ಸಹ ಪ್ರಯತ್ನಿಸುವದಿಲ್ಲ. ಈ ಪ್ರಪಂಚವೇನೂ ನಿಂದ್ಯವಾದ ವಸ್ತುವಲ್ಲ. ಪ್ರಪಂಚದ ಮುಖಾಂತರವೇ ಭಗವದ್ದರ್ಶನವು ಸಾಧ್ಯವಿದೆ. ಮೋಹಜನಕ ಪ್ರಪಂಚವು ನಿಂದ್ಯವಾದುದೂ ಅತ್ಯಂತ ತ್ಯಾಜ್ಯವಾದುದೂ ಆಗಿದೆಯೆಂದು ನನ್ನ ದೃಢವಾದ ಅಭಿಪ್ರಾಯವೂ ಅನುಭವವೂ ಇದೆ."

ಸೊನೀ ರಾಮಜಿಯವರಿಗೆ: "ಯಜ್ಞೋಪವೀತದ ವಿಷಯಕ್ಕೆ ನಾನು ಅನೇಕ ಗೂಢಾರ್ಥಗಳನ್ನು ಕೇಳಿದ್ದೇನೆ. ಆದರೆ ಅವೆಲ್ಲವೂ ಕಾಲ್ಪನಿಕವಾಗಿವೆ. ಯಜ್ಞೋಪವೀತದ ಉತ್ಪತ್ತಿಯ ಕಾಲಕ್ಕೆ ಅದು ಈ ಎಲ್ಲ ಭಾವಗಳಿಂದ ತುಂಬಿತ್ತೆಂಬ ಮಾತನ್ನು ನಾನು ನಂಬುವದಿಲ್ಲ. ಆರ್ಯ ಮತ್ತು ಅನಾರ್ಯರಲ್ಲಿ ಭೇದವನ್ನು ತೋರಿಸುವದಕ್ಕಾಗಿ ಆರ್ಯರೆಂದು ಹೇಳಿಸಿಕೊಳ್ಳುವವರು ಯಜ್ಞೋಪವೀತದ ಚಿಹ್ನವನ್ನು ಧಾರಣ ಮಾಡಿದರು. ಅದು ಅರಳೆಯಿಂದ ಬಟ್ಟೆಯನ್ನು ಮಾಡುವ ಕ್ರಿಯೆ-ಗಳ ಶೋಧವಾದ ಕಾಲವಾಗಿರಬಹುದು. ಆ ಪ್ರಾಚೀನ ಕಾಲದಲ್ಲಿಯೂ ಅಷ್ಟೆ, ಈಗಿನ ಕಾಲದಲ್ಲಿಯೂ ಅಷ್ಟೆ. ಕೋಟ್ಯಾವಧಿ ಜನರು ಕೇವಲ ಧೋತರವನ್ನು ಉಟ್ಟು ಬರಿ ಮೈಯಿಂದ ಇರುತ್ತಾರೆ. ಅನಾರ್ಯರೆಂದು ಹೇಳಿಸಿಕೊಳ್ಳುವವರು ಹಾಗೆ ಇದ್ದೇ ಇದ್ದರು. ಆದುದರಿಂದ ಆರ್ಯರು ನೂಲುವ ಉದ್ಯೋಗಕ್ಕೆ ಗತಿ ಕೊಡುವದಕ್ಕಾಗಿಯೂ ನೂಲುವ ಕ್ರಿಯೆಯನ್ನು ಸುಂದರವಾಗಿ ಮಾಡುವದಕ್ಕಾಗಿಯೂ ಮತ್ತು ಇದು ಪವಿತ್ರವಾದ ಉದ್ಯೋಗವೆಂದು ತೋರಿಸಿಕೊಡುವದಕ್ಕಾಗಿಯೂ ಯಜ್ಞೋಪವೀತರೂಪಿಯಾದ ಚಿಹ್ನವನ್ನು ತಮ್ಮ ಸಲುವಾಗಿ ಗ್ರಹಣಮಾಡಿದರು. ಈ ಹೇಳಿಕೆಗೆ ನನ್ನ ಹತ್ತಿರ ಯಾವ ಐತಿಹಾಸಿಕ ಪ್ರಮಾಣಗಳೂ ಇರುವದಿಲ್ಲ. ಇದು ಕೇವಲ ನನ್ನ ವಿಚಾರ. ಇಂದು ಆರ್ಯ-ಅನಾರ್ಯರಲ್ಲಿ ಯಾವ ಭೇದವೂ ಇಲ್ಲ ಮತ್ತು ಇರಲೂಬಾರದು. ಸಾವಿರಾರು ವರ್ಷಗಳ ಹಿಂದೆ ಎರಡೂ ಜಾತಿಗಳ ಸಂಕರವಾಗಿತ್ತು

ಮತ್ತು ಇವತ್ತಿನ ಜನರು ಈ ಸಂಕರದಿಂದಲೇ ಹುಟ್ಟಿದವರಾಗಿದ್ದಾರೆ. ಯಾರಾದರೂ ಯಜ್ಞೋಪವೀತವನ್ನು ಧಾರಣಮಾಡಿದರೆ ಅದನ್ನು ಧಾರಣ ಮಾಡುವ ಅಧಿಕಾರವು ಎಲ್ಲರಿಗೂ ಇರಬೇಕು. ಈಗ ಇಂಥ ಪ್ರಯತ್ನವನ್ನು ಮಾಡುವ ಆವಶ್ಯಕತೆಯೂ ಕಾಣುವದಿಲ್ಲ. ಈ ಕಾರಣಕ್ಕಾಗಿ ನಾನು ಜನಿವಾರವನ್ನು ಬಿಟ್ಟ ಮೇಲೆ ಮತ್ತೆ ಅದನ್ನು ಹಾಕಿಕೊಳ್ಳುವ ಪ್ರಯತ್ನವನ್ನು ಮಾಡಲಿಲ್ಲ ಮತ್ತು ಹಾಕಿಕೊಳ್ಳುವ ಇಚ್ಛೆಯನ್ನೂ ಮಾಡಲಿಲ್ಲ. ಜನಿವಾರದಿಂದ ಉಚ್ಚನೀಚ ಭೇದ ಉಂಟಾಗುವ ಸಂಭವವಿರುವ ವರೆಗೆ ಅದು ತ್ಯಜಿಸಲಿಕ್ಕೇ ಯೋಗ್ಯವಾಗಿದೆ. ಗೌರೀಶಂಕರರಿಗೆ ನಾನು ಜನಿವಾರದ ಮೋಹ ಬಿಡಬೇಕೆಂದು ಹೇಳುವೆನು. ಜನಿವಾರವು ಬ್ರಹ್ಮಚರ್ಯದ ಗುರುತಾಗಿದೆ. ಬ್ರಹ್ಮಚರ್ಯದ ಪಾಲನೆಯನ್ನು ಮಾಡಿದರೆ ಅದೇ ಉತ್ತಮವಾದ ಜನಿವಾರವು. ನೂಲಿನ ಎಳೆಯಿಂದ ಪ್ರಯೋಜನವಾದರೂ ಏನು ? ”

ಕಾಕಾರಿಗೆ ಆಕಾಶದರ್ಶನದ ವಿಷಯವಾಗಿ ಬರೆಯುತ್ತ : “ ನನ್ನ ರುಚಿಯು ಬೇರೆ ಪ್ರಕಾರದ್ದಿರುತ್ತದೆ. ಆಕಾಶವನ್ನು ನೋಡಿದ ಮೇಲೆ ಅದರ ಅನಂತತೆ, ನಿರ್ಮಲತೆ, ನಿಯಮನ ಮತ್ತು ಭವ್ಯತೆ ಇವುಗಳ ಕಲ್ಪನೆಯು ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತದೆ. ಗ್ರಹಗಳ ಮತ್ತು ನಕ್ಷತ್ರಗಳವರೆಗೆ ಹೋಗಬಹುದು. ಆದರೆ ಪೃಥ್ವಿಯ ಸಾರಾಸಾರದ ಅನುಭವ ಬಂದಂತೆ ಅಲ್ಲಿಯೂ ಅದೇ ಅನುಭವ ಬರಬಹುದು. ದೂರದಿಂದ ಕಂಡುಬರುವ ಅವುಗಳಲ್ಲಿ ತುಂಬಿದ ಸೌಂದರ್ಯ ಮತ್ತು ಅಲ್ಲಿಂದ ಬೀಳುತ್ತಿರುವ ಶೀತಲತೆಯ ಶಾಂತವಾದ ಪರಿಣಾಮವು ನನಗೆ ಅಲೌಕಿಕವಾಗಿ ತೋರುತ್ತದೆ. ಆಕಾಶದ ಜೊತೆಗೆ ಸಂಬಂಧವನ್ನಿಟ್ಟುಕೊಂಡ ಮೇಲೆ ನಾವು ಎಲ್ಲಿ ಕುಳಿತರೂ ಯಾವ ತೊಂದರೆಯೂ ಇಲ್ಲ. ಇದು ಮನೆಗೆ ಭಾಗೀರಥಿ ಬಂದಂತಿದೆ. ಈ ಎಲ್ಲ ವಿಚಾರಗಳು ನನಗೆ ಆಕಾಶದರ್ಶನದ ಹುಚ್ಚನ್ನು ಹಿಡಿಸಿವೆ. ಆದುದರಿಂದ ನನ್ನ ಸಂತೋಷಕ್ಕೆ ಬೇಕಾಗುವಷ್ಟು ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಹತ್ತಿದ್ದೇನೆ.”

ವಲ್ಲಭಭಾಯಿಯವರ ಚುಚ್ಚು ವಿನೋದಗಳು ಒಂದೊಂದು ಸಲ ಬಾಣದಂತಿರುತ್ತವೆ. ಪಾಪ, ಮೇಜರ ಮೆಹತಾ ಕೇಳಿದರು : “ ಓಟಾವಾದಲ್ಲಿ ಏನಾಗುವದು ? ” ಇದಕ್ಕೆ ವಲ್ಲಭಭಾಯಿಯವರು ಅಂದರು : “ ವ್ಯರ್ಥವಾಗಿ ಓಟಾವಾಕ್ಕೆ ಹೋಗಿದ್ದಾರೆ! ಬೇಕಾದದ್ದನ್ನು ಇಲ್ಲಿಯೆ ಆರ್ಡಿನನ್ಸಗಳಿಂದ ಮಾಡಿಕೊಳ್ಳಲಿ. ಆ ಮೇಲೆ ಅಲ್ಲಿಯ ವರೆಗೆ ಹೋಗುವ ಆವಶ್ಯಕತೆಯಾದರೂ ಏನು ?” ಅವರು ದಿಙ್ಮೂಢರಾದರು. ಇವತ್ತು ಪತ್ರವ್ಯವಹಾರದ ವಿಷಯವಾಗಿ ಡೋಯಿಲ್ಲರಿಗೆ ಪತ್ರ ಬರೆದು ಕಳಿಸಿದರು. ಆದರೆ ಸುಪರಿಂಟೆಂಡೆಂಟ ಸಾಹೇಬರೇ ಅಂಜಿ ಹೇಳತೊಡಗಿದರು : “ ಇಲ್ಲ ಸ್ವಾಮೀ, ಇಂಥ

೨೫–೭–’೩೨

ಪತ್ರಗಳನ್ನು ಬರೆಯಬೇಡಿರಿ. ಇಲ್ಲಿಯ ದೇಶೀ ಅಧಿಕಾರಿಗಳು ನಿಮ್ಮ ಹತ್ತಿರ ತಕರಾರು ಮಾಡಿರುವರೆಂದು ಇದರ ಅರ್ಥವಾಗುವ ಸಂಭವವಿದೆ." ಆದುದರಿಂದ ನಾಳಿನವರೆಗೆ ಪತ್ರವನ್ನು ತಡೆಹಿಡಿಯಲಾಯಿತು. ಅಂಜಿಕೆಯಿಂದ ತುಂಬಿದ ಮನಸ್ಸು ವಿಚಿತ್ರವಾಗಿರುತ್ತದೆ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡಹೋದರೆ ಅವನು ಒಲ್ಲೆನ್ನುತ್ತಾನೆ.

. . . ಸಂತಾನನಿಗ್ರಹದ ವಿಷಯಕ್ಕೆ ಚರ್ಚಿಸಿದರು: "ಇದರಿಂದ ಕೆಟ್ಟ ಪರಿಣಾಮವಾಗುವದಲ್ಲದೆ ಶಕ್ತಿಯ ಹ್ರಾಸವೂ ಆಗುತ್ತಿದೆ. ಆದರೆ ಒಂದು ವಿಶಿಷ್ಟ ಪ್ರಕಾರದ ಪೀಳಿಗೆ—ನಿಃಶಕ್ತ ಮತ್ತು ರೋಗಿ—ಯನ್ನು ತಡೆ ಹಿಡಿಯುವದಾದರೆ ಏನು ಮಾಡಬೇಕು?" ಬಾಪೂ ಇವರಿಗೆ ಬರೆದರು: "ನನ್ನ ಮನಸ್ಸು ಸಂತತಿನಿಯಂತ್ರಣವನ್ನು ವಿರೋಧಿಸುತ್ತಲೇ ಇದೆ. ಹೀಗೂ ಆಗುವ ಸಂಭವವಿದೆ: ನನ್ನ ಮನಸ್ಸಿನ ಮೇಲೆ ಹಳೆಯ ವಿಚಾರಗಳು ನನಗೆ ತಿಳಿಯದೆ ಪ್ರಭಾವವನ್ನು ಬೀರುತ್ತಿರಬಹುದು. ಆದರೆ ಇವತ್ತು ಕೂಡ ಪ್ರತ್ಯಕ್ಷವಾಗಿದ್ದಂಥ ಕಾರಣಗಳಿಗಾಗಿಯೆ ನಾನು ಅದನ್ನು ವಿರೋಧಿಸುತ್ತೇನೆ. ಅಂದರೆ ಸಂತತಿನಿಯಂತ್ರಣದಿಂದಾಗುವ ದೊಡ್ಡ ಹಾನಿಯನ್ನು ನಾವು ಕಣ್ಣಾರೆ ಕಾಣಬಹುದು. ಹೊಸ ಪೀಳಿಗೆಯನ್ನು ನಿಲ್ಲಿಸುವದಕ್ಕೆ ಕೃತ್ರಿಮ ಉಪಾಯಗಳನ್ನು ಕೈಕೊಂಡರೆ ಇವತ್ತು ಸಶಕ್ತರಾಗಿ ಕಂಡು ಬರುವ ಸ್ತ್ರೀಯರು ಕೂಡ ಅಶಕ್ತರಾಗಿ ಕಾಣುವ ಸಂಭವವಿದೆ. ಸಂತಾನನಿಗ್ರಹದ ಹಿಂದಿರುವ ಎಲ್ಲ ವಿಚಾರಸರಣಿಯೇ ಭಯಂಕರವಾದುದೂ ತಪ್ಪಿನಿಂದ ಕೂಡಿದುದೂ ಆಗಿದೆ. ಸಂತತಿನಿಯಂತ್ರಣವನ್ನು ಸಮರ್ಥಿಸುವವರು ಜನನೇಂದ್ರಿಯವನ್ನು ಸಂತುಷ್ಟ ಪಡಿಸುವ ಅಧಿಕಾರವು ಮನುಷ್ಯನಿಗಿದೆ ಎಂದು ಹೇಳುತ್ತಾರೆ. ಇಷ್ಟೇ ಅಲ್ಲ, ಅದು ಧರ್ಮವಿದೆಯೆಂದೂ ಅದರ ಪಾಲನೆಯನ್ನು ಮಾಡದಿದ್ದರೆ ಜೀವನವಿಕಾಸವು ಕಡಿಮೆಯಾಗುವದೆಂದೂ ಪ್ರತಿಪಾದಿಸುತ್ತಾರೆ. ನನಗೆ ಈ ವಿಚಾರಸರಣಿಯಲ್ಲಿ ಬಹಳ ದೋಷವು ಕಂಡುಬರುತ್ತದೆ. ಅನುಭವದಿಂದಲೂ ನಾನು ಈ ದೋಷವನ್ನು ನೋಡುತ್ತಿರುತ್ತೇನೆ. ಕೃತ್ರಿಮ ಉಪಾಯಗಳನ್ನು ಉಪಯೋಗಿಸುವದರಿಂದ ಸಂಯಮವನ್ನಪೇಕ್ಷಿಸುವದು ವ್ಯರ್ಥ. ಈ ವಿಷಯದಲ್ಲಿ ಸಂಯಮವು ಅಶಕ್ಯವೆಂದು ತಿಳಿದೇ ಸಂತತಿನಿಯಂತ್ರಣದ ಉಪಚಾರಗಳ ಪ್ರಚಾರವಾಗುತ್ತಿದೆ. ಜನನೇಂದ್ರಿಯದ ಸಂಯಮವು ಅಶಕ್ಯವೆಂದು ತಿಳಿಯುವದಾಗಲಿ, ಅನಾವಶ್ಯಕ ಅಥವಾ ಹಾನಿಕಾರಕವೆಂದು ತಿಳಿಯುವದಾಗಲಿ ನನ್ನ ದೃಷ್ಟಿಯಿಂದ ಧರ್ಮವನ್ನೇ ಅಲ್ಲಗಳೆದಂತಿದೆ. ಯಾಕಂದರೆ ಧರ್ಮದ ರಚನೆಯೆಲ್ಲ ಸಂಯಮವನ್ನೇ ಅವಲಂಬಿಸಿದೆ. ಅಶಕ್ತ ಪೀಳಿಗೆಯನ್ನು ತಡೆಯುವದಕ್ಕಾಗಿ ಸರಳವೂ ಸುಲಭವೂ ಮತ್ತು ನಿರ್ದೋಷವೂ ಆದ ಅನೇಕ ಉಪಾಯಗಳಿರಲಿಕ್ಕೆ ಸಂತತಿನಿಗ್ರಹ

ದಂಥ ಗಂಡಾಂತರದಿಂದ ಕೂಡಿದ ವಸ್ತುಗಳ ಉಪಯೋಗವನ್ನು ಹೇಗೆ ಮಾಡಲಿಕ್ಕಾದೀತು? ಇದರಲ್ಲಿ ಗಂಡಾಂತರವಿದೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದುದರಿಂದ ನಾನು ವಿಚಾರಮಾಡುತ್ತಿರುವ ದೃಷ್ಟಿಯಿಂದ ನೋಡಿದರೆ ನನಗೆ ಈ ವಸ್ತುವು ತ್ಯಾಜ್ಯವೆಂದೇ ಅನಿಸುತ್ತದೆ. ನಿನಗೆ ವಿಚಾರಮಾಡಲು ಸಮಯ ಸಿಗುತ್ತದೆಂದು ಮತ್ತಿಷ್ಟು ಬರೆಯುವ ಮನಸ್ಸಾಗಿದೆ. ಇದಲ್ಲದೆ ಈ ವಿಷಯವು ಅತ್ಯಂತ ಗಂಭೀರವಾಗಿರುವದರಿಂದ ನೀನು ಈ ವಿಷಯವನ್ನು ಕುರಿತು ಸೂಕ್ಷ್ಮ ರೀತಿಯಿಂದ ವಿಚಾರಮಾಡುವದು ಅವಶ್ಯವಾಗಿದೆ. ಆ ಮೇಲೆ ನೀನು ಯಾವ ನಿರ್ಣಯವನ್ನು ಕೈಕೊಂಡರೂ ನನಗೆ ಅಂಜಿಕೆಯಿಲ್ಲ. ಯಾಕಂದರೆ ಕೊನೆಗೆ ನಿನ್ನ ಖರೇತನವೇ ನಿನ್ನನ್ನು ರಕ್ಷಿಸಬಲ್ಲದು ಅಥವಾ ನಾನು ತಪ್ಪುಮಾಡುತ್ತಿದ್ದರೆ ನೀನು ಆ ತಪ್ಪನ್ನು ಸುಧಾರಿಸಬಲ್ಲಿ. ಒಂದು ವೇಳೆ ನಿನಗೆ ಸಂತತಿನಿಯಂತ್ರಣದ ಧರ್ಮವು ಪ್ರತ್ಯಕ್ಷವಾಗಿ ಕಾಣಿಸಿಕೊಂಡರೆ ಅದನ್ನು ನಾನು ಒಪ್ಪುವಂತೆ ಮಾಡಿದ ಹೊರತು ನಿನಗೆ ಸಮಾಧಾನವಾಗಲಾರದು. ನನ್ನ ಕೆಲಸವು ಸರಳವಿದೆ. ನಾನು ಯಾವದೇ ವಿಚಾರದ ಸಲುವಾಗಿ ಎಷ್ಟೇ ಆಗ್ರಹವನ್ನು ಹಿಡಿದಿದ್ದರೂ ನನಗೆ ಅದರಲ್ಲಿ ದೋಷ ಕಂಡುಬಂದರೆ ಅಥವಾ ಬೇರೆ ಯಾರಾದರೂ ತೋರಿಸಿದರೆ ನಾನು ಅದನ್ನು ಬಿಡಲಿಕ್ಕೆ ಹೊತ್ತು ಹತ್ತುವದಿಲ್ಲ."

ಇವತ್ತು ಪತ್ರವ್ಯವಹಾರದ ವಿಷಯವಾಗಿ ಡೋಯಿಲ್ಲರಿಗೆ ಪತ್ರ ಹೋಯಿತು. ಬಾಪೂ ಆ ಆಫೀಸರನಿಗೆ ಇದಕ್ಕೆ ಬೇರೆ ಅರ್ಥವಾಗುವದಿಲ್ಲವೆಂದು ಹೇಳಿ ಧೈರ್ಯ ಕೊಟ್ಟರು. ಆವರು ಅಂದರು: "ಜೇಲಿನಲ್ಲಿಯ ಆಫೀಸರರ

೨೬-೭-'೩೨

ವಿಷಯವಾಗಿ ನಾನು ಚರ್ಚಿಸುತ್ತಿರುವದಿಲ್ಲವೆಂದು ಆದರಲ್ಲಿ ಬರೆಯಿರಿ." ಬಾಪೂ: "ಹಾಗೆ ಮಾಡಿದರೆ ನಿಮ್ಮ ಹೇಳಿಕೆಯಿಂದಲೇ ಈ ಪತ್ರವನ್ನು ಬರೆಯಲಾಗಿದೆಯೆಂದು ಆವರು ಆವಶ್ಯ ತಿಳಿಯುವರು. ಅದಕ್ಕಿಂತ ನಾನು ಸ್ವಾಭಾವಿಕವಾಗಿ ಬರೆದದ್ದೇ ಹೋಗಲಿ. ನಿಜವಾಗಿ ನೋಡಿದರೆ ನಿಮ್ಮಲ್ಲಿ ಸ್ವಾಭಿಮಾನವಿದ್ದರೆ ಈ ಮಾತಿನ ಸಲುವಾಗಿ ನೀವು ರಾಜೀನಾಮೆಯನ್ನು ಕೊಡಬೇಕು. ಯಾಕಂದರೆ ಈ ವಿಷಯವೇ ಇಂತಹದಾಗಿದೆ. ಆದರೆ ನಮ್ಮಲ್ಲಿ ಆ ತೇಜವೇ ಉಳಿದಿಲ್ಲ. ಆದುದರಿಂದ ನೀವು ಏನೂ ಮಾಡದಿದ್ದರೂ ನನಗೆ ಇಷ್ಟನ್ನಾದರೂ ಮಾಡಗೊಡಿರಿ."

ಎಂಟನೇ ತಾರೀಖಿಗೆ ಸರಕಾರದ ಕಡೆಗೆ ಹೋದ ಒಂದು ಹೊರೆ ಟಪಾಲು ಎಲ್ಲವೂ ಸಾಯಂಕಾಲ ಬಂದಿತು. ಆದರಲ್ಲಿ ಎಲ್ಲ ಪತ್ರಗಳೂ ಕೂಡಲೇ ಉತ್ತರವನ್ನು ಕೊಡಬೇಕಾದಂಥ ಜರೂರಿಯವಿದ್ದವು. ಆ ಕಾಣೆಯಾದ ವೈಮಾನಿಕನ ಸಹೋದರಿ ಶಿರೀನಬಾಯಿಯ ಹೃದಯದ್ರಾವಕ ಪತ್ರವಿತ್ತು. - ಮನೆಯಲ್ಲಿ

೭೨ ವರ್ಷದ ತಾಯಿ, ಇನ್ನೊಬ್ಬ ಅಣ್ಣನು ಲಂಡನ್‌ದಲ್ಲಿ ಎಂಟು ವರ್ಷಗಳಿಂದ ಯಾವದೊ ನರ್ಸಿಂಗ ಹೋಮದಲ್ಲಿ ಶುಶ್ರೂಷೆ ಹೊಂದುತ್ತಿದ್ದಾನೆ. ಈ ಅಣ್ಣನು ಹಾರುತ್ತ ಹಾರುತ್ತ ಹೊರಟು ಹೋದನು! ಪಾಪ, ೩೦ ವರ್ಷಗಳ ಹಿಂದೆ ಎರಡು ಇಯತ್ತೆ ಗುಜರಾತೀ ಕಲಿತಿದ್ದಳು. ಅವಳು ಶ್ರಮವನ್ನು ವಹಿಸಿ ಗುಜರಾತಿಯಲ್ಲಿ ಉತ್ತಮ ಪತ್ರ ಬರೆದಳು. ಕೊನೆಗೆ ನನಗೆ ಇಂಗ್ರೇಜಿಯಲ್ಲಿ ಬರೆಯುಲಿಕ್ಕೆ ಅಪ್ಪಣೆ ಕೊಡಿರಿ ಎಂದು ಬರೆದಳು. ಬಾಪೂ ಬರೆದರು:

"My Dear sister,

I received your disconsolate letter only today. It had to pass through so many hands before coming to me. My whole heart goes out to you and your aged mother. God suffers us to blame Him, to swear at Him and deny Him. We do it all in our ignorance. A very beautiful Sanskrit verse which we recite daily at morning prayer means: 'Miseries are not miseries, nor is happiness truely happiness. True misery consists in forgetting God, true happiness consists in thinking of Him as ever enthroned in our hearts.' And has not an English Poet said: 'Things are not what they seem.' The fact is if we knew all the laws of God we should be able to account for the unaccountable. Why should we think that the withdrawal of your brother from our midst is an affliction? We simply do not know. But we do, or ought to know that God is whole good and wholly just. Even our illnesses such as your other brother's may be no misfortune. Life is a state of discipline. We are required to go through the fire of suffering. I do so wish that you and your mother could really rejoice in your suffering. May you have peace.

"Please forget all about the honey and write to me in English by all means."

" ಪ್ರಿಯ ಸಹೋದರಿ,

ನಿಮ್ಮ ದುಃಖಪೂರಿತ ಪತ್ರವು ಇಂದೇ ಕೈಸೇರಿತು. ನನ್ನ ಕೈಸೇರುವದಕ್ಕಿಂತ ಮೊದಲು ಅದು ಎಷ್ಟೋ ಕೈಗಳೊಳಗಿಂದ ಹಾಯ್ದು ಬರಬೇಕಾಯಿತು. ನಿಮಗಾಗಿ ಮತ್ತು ನಿಮ್ಮ ವೃದ್ಧ ತಾಯಿಯ ಸಲುವಾಗಿ ನನ್ನ ಹೃದಯವು ದುಃಖದಿಂದ ತುಂಬಿದೆ. ನಾವು ದೇವರನ್ನು ಬೈಯುತ್ತೇವೆ, ಆತನಲ್ಲಿ ದೋಷಾರೋಪಣೆ ಮಾಡುತ್ತೇವೆ, ದೇವರೇ ಇಲ್ಲವೆಂದು ಹೇಳುತ್ತೇವೆ, ಆದರೆ ಅವನು ನಮಗೆ ಇದೆಲ್ಲ

ವನ್ನೂ ಮಾಡಗೊಡುತ್ತಾನೆ. ಹೀಗೆ ಮಾಡುವದು ನಮ್ಮ ಅಜ್ಞಾನ. ನಾವು ದಿನಾಲು ಬೆಳಿಗ್ಗೆ ಒಂದು ಸುಂದರ ಸಂಸ್ಕೃತ ಶ್ಲೋಕವನ್ನು ಅನ್ನುತ್ತೇವೆ :

**विपदो नैव विपदः संपदो नैव संपदः ।**
**विपद् विस्मरणं विष्णोस्संपन्नारायणस्मृतिः ॥**

'ವಸ್ತುಗಳು ನಮಗೆ ಗೋಚರವಾಗುತ್ತಿರುವಂತೆ ಇರುವದಿಲ್ಲ' ವೆಂದು ಆ ಇಂಗ್ಲೀಷ ಕವಿಯು ಕೂಡ ಹೇಳಿಲ್ಲವೆ? ಇದು ಹೀಗಿದೆ : ದೇವರ ಎಲ್ಲ ನಿಯಮಗಳ ಜ್ಞಾನವು ನಮಗಿದ್ದರೆ ಸಾಮಾನ್ಯವಾಗಿ ತಿಳಿಯದ ವಿಷಯಗಳ ಅರ್ಥವೂ ನಮಗಾಗ ಬೇಕು. ನಮ್ಮೊಳಗಿಂದ ನಿಮ್ಮ ಸಹೋದರನನ್ನು ಎತ್ತಿಕೊಂಡು ಹೋದದ್ದು ದುಃಖ-ವೆಂದು ಏಕೆ ತಿಳಿಯಬೇಕು? ನಿಜವಾದ ಸಂಗತಿಯು ನಮಗೆ ಗೊತ್ತಾಗುವದಿಲ್ಲ. ದೇವರು ಸರ್ವಪರಿಯಿಂದ ಕಲ್ಯಾಣಕಾರಿಯಾಗಿದ್ದಾನೆ, ನ್ಯಾಯಿಯಾಗಿದ್ದಾನೆ ಎಂಬುದಿಷ್ಟಾದರೂ ನಮಗೆ ತಿಳಿದಿದೆ, ಅಥವಾ ತಿಳಿದುಕೊಳ್ಳಲಿಕ್ಕೆಬೇಕು. ನಿಮ್ಮ ಎರಡನೆಯ ಅಣ್ಣನಿಗಿರುವಂಥ ನಮ್ಮ ಕಾಹಿಲೆಯು ಕೂಡ ವಿಪತ್ತಾಗಿರಲಾರದು. ಜೀವನವೆಂದರೆ ಯಮ-ನಿಯಮಗಳು. ಅದಕ್ಕಾಗಿ ನಾವು ಕಷ್ಟದ ಅಗ್ನಿಯೊಳಗಿಂದ ಹಾಯ್ದು ಹೋಗಲೇ ಬೇಕಾಗುತ್ತದೆ. ನೀವು ಮತ್ತು ನಿಮ್ಮ ತಾಯಿಯು ನಿಮ್ಮ ಈ ದುಃಖದಲ್ಲಿ ನಿಜವಾಗಿಯೂ ಆನಂದ ತೆಗೆದುಕೊಳ್ಳುವಿರೆಂದು ಆಶಿಸುತ್ತೇನೆ. ದೇವರು ನಿಮಗೆ ಶಾಂತಿಯನ್ನು ಕೊಡಲಿ !

"ಜೇನುತುಪ್ಪದ ಮಾತನ್ನು ಸಂಪೂರ್ಣ ಮರೆತು ಬಿಡಿರಿ ಮತ್ತು ನನಗೆ ಇಂಗ್ರೇಜಿಯಲ್ಲಿ ಬರೆಯಲಿಕ್ಕೆ ಎಷ್ಟೂ ಸಂಕೋಚವನ್ನು ಮಾಡಿಕೊಳ್ಳಬೇಡಿರಿ." (ಇವರು ಜೇನುಹುಟ್ಟನ್ನು ಕಳಿಸಿದ್ದರು. ಅದು ಎಲ್ಲಿಯದು ಮುಂತಾದ ಸವಿಸ್ತರ ಮಾಹಿತಿಯನ್ನು ಕಳಿಸಲಿಕ್ಕೆ ಬರೆದಿತ್ತು. ಆ ವಿಷಯುವನ್ನು ಕುರಿತು ಬಾಪೂ ಬರೆದರು : "ಏನೂ ಬರೆಯುವ ಅವಶ್ಯಕತೆಯಿಲ್ಲ.")

ರಾಜಾಜಿಯವರು ಜೇಲಿನಿಂದ ಬಿಡುಗಡೆಯಾದ ಮೇಲೆ ಅವರಿಂದ ಮೊದಲನೇ ಪತ್ರ ಬಂತು. ಅದರಲ್ಲಿ ಬಾಪೂ, ಅವರ ಮಗಳ ಹೆಸರಿಗೆ ಬರೆದ ಪತ್ರಗಳ ಮತ್ತು ತಂತಿಯ ಉಲ್ಲೇಖವಿತ್ತು ಮತ್ತು ಅಳಿಯನ ಸ್ವಲ್ಪ ದಿನದ ಕಾಹಿಲೆಯ ಸುದ್ದಿ ಇತ್ತು. ತಮ್ಮ ಅಳಿಯನ ಸಲುವಾಗಿಯೂ ಅವನ ಮೃತ್ಯುವಿನ ಸಲುವಾಗಿಯೂ ಬರೆದಿದ್ದರು :

"They had gone to Dr. Rajan's place on his repeated invitations that they should stay with him for sometime to enable him to X-Ray Papa and help a proper diagnosis of her case. The man went there with perfect health, and morbidest imagination could not have forecasted the event. He had left Rangoon in the midst of last year to join Papa and take my place

as nurse. He was wonderfully attached to her and served most diligently until a few days before his death. Death is a dear friend, quite true, and not a frightful enemy as men suppose. But then, we all fight so vigourously against him on his approach, and employ all the knowledge of the ancient and the modern science to drive the friend away, that the truth is quite forgotten just when we ought to remember it most. . . . It is not grief, but darkness that is around me. I am still praying for light. I do not complain for my share of humanity's lot. Do pray for me."

"ಇವರು ಡಾ. ರಾಜನ್‌ರಲ್ಲಿಗೆ ಹೋಗಿದ್ದರು. ಪಾಪಾ ಇವಳ ಎಕ್ಸರೇ ತೆಗೆಸುವದಕ್ಕಾಗಿಯೂ ಅವಳ ರೋಗದ ಸರಿಯಾದ ನಿದಾನವನ್ನು ಮಾಡುವದಕ್ಕಾಗಿಯೂ ನನ್ನ ಹತ್ತರ ಕೆಲವೊಂದು ದಿವಸ ಬಂದು ಇರಬೇಕೆಂದು ಡಾ. ರಾಜನ್‌ರು ಹೇಳುತ್ತಲೇ ಇದ್ದರು. ಅವರು ರಾಜನ್‌ರಲ್ಲಿಗೆ ಹೋದಾಗ ಸಂಪೂರ್ಣ ನಿರೋಗಿಯಾಗಿದ್ದರು. ಹೀಗಾಗಬಹುದೆಂದು ಕಲ್ಪನೆಯಲ್ಲಿ ಕೂಡ ಇರಲಿಲ್ಲ. ಪಾಪಾಳಿಗೆ ಭೆಟ್ಟಿಯಾಗುವದಕ್ಕಾಗಿಯೂ ಅವಳ ಆರೈಕೆಯನ್ನು ಮಾಡುತ್ತಿದ್ದ ನನಗೆ ವಿರಾಮಕೊಡುವದಕ್ಕಾಗಿಯೂ ಅವರು ರಂಗೂನದಿಂದ ಕೆಲವೇ ತಿಂಗಳ ಹಿಂದೆ ಇಲ್ಲಿಗೆ ಬಂದಿದ್ದರು. ಅವರು ಪಾಪಾಳನ್ನು ಬಹಳ ಪ್ರೀತಿಸುತ್ತಿದ್ದರು; ತಮ್ಮ ಜೀವದ ಕೊನೆಯ ಗಳಿಗೆಯ ವರೆಗೂ ಅವಳ ಶುಶ್ರೂಷೆಯನ್ನು ದಕ್ಷತೆಯಿಂದ ಮಾಡಿದರು. ಸಾವು ಇದೊಂದು ಪ್ರೀತಿಯ ಗೆಳೆಯ, ಜನರು ತಿಳಿಯುವಂತೆ ಭಯಂಕರ ಶತ್ರುವಲ್ಲ ಎಂಬ ಮಾತು ತೀರ ಸತ್ಯವಿದೆ. ಆದರೆ ಅದು ಬಂದಾಗ ಈ ಗೆಳೆಯನನ್ನು ಹೊಡೆದೋಡಿಸುವದಕ್ಕಾಗಿ ಹಳೆ-ಹೊಸ ವಿಜ್ಞಾನದ ಎಲ್ಲ ಉಪಾಯಗಳನ್ನೂ ನಾವು ಒರೆಗೆ ಹಚ್ಚುತ್ತೇವೆ. ಈ ಸತ್ಯವನ್ನು ನೆನಪಿನಲ್ಲಿಡುವದು ಅವಶ್ಯವಿರುವ ಕಾಲಕ್ಕೇ ನಾವು ಇದನ್ನು ಸಂಪೂರ್ಣ ಮರೆತುಬಿಡುತ್ತೇವೆ. . . . ದುಃಖವು ನನ್ನನ್ನು ಆವರಿಸಿಲ್ಲ, ಕತ್ತಲೆಯು ಆವರಿಸಿದೆ. ಪ್ರಕಾಶಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ. ಎಲ್ಲರ ಪಾಲಿಗೆ ಬಂದ ದುಃಖವೇ ನನ್ನ ಪಾಲಿಗೂ ಬಂದಿದೆ. ಆದಕ್ಕಾಗಿ ತಕರಾರು ಮಾಡುವದೇಕೆ? ನನ್ನ ಸಲುವಾಗಿ ದೇವರನ್ನು ಅವಶ್ಯವಾಗಿ ಪ್ರಾರ್ಥಿಸಿರಿ."

ಅವರಿಗೆ ಬರೆದರು:

"Your touching letter of 23rd inst. came into my hand today. Papa's letter I have not received yet. My correspondence is being overhandled by the authorities. There is therefore much delay and uncertainty about it. The incoming letters are delivered in good time.

"I loathe to argue about death in the face of the tragedy that has overtaken you. You will say with Job,' miserable comforter'. But I do feel that if we would know God, we have got to learn to rejoice in death. When Narsinha Mehta the first poet-devotee of Gujarat lost his son, he is said to have joyed over it and exclaimed: 'It is well that this burden is lifted. Now I shall meet God soon.' This is an unhappy rendering of a beautiful musical verse. May you see greater light out of this darkness. I know that you stand in no need of any comfort from any of us and that it has to come from within. This is merely an evidence of what all of us three are feeling about you."

"ಹೃದಯವನ್ನು ಕರಗಿಸುವಂಥ ನಿಮ್ಮ ೨೩ ನೇ ತಾರೀಖಿನ ಪತ್ರ ನನಗೆ ಇಂದು ಮುಟ್ಟಿತು. ಇದುವರೆಗೆ ಪಾಪಾಳ ಪತ್ರ ಮುಟ್ಟಿಲ್ಲ. ಅಧಿಕಾರಿಗಳು ನನ್ನ ಪತ್ರವ್ಯವಹಾರದ ಬಗ್ಗೆ ಆವಶ್ಯಕತೆಗಿಂತಲೂ ಹೆಚ್ಚಾಗಿ ಚವಕಶಿ ಮಾಡುತ್ತಾರೆ. ಆದುದರಿಂದ ಪತ್ರಗಳು ಮುಟ್ಟಲಿಕ್ಕೆ ಬಹಳ ತಡವಾಗುವದಲ್ಲದೆ ಅನಿಶ್ಚಿತತೆಯೂ ಬಹಳ ಇರುತ್ತದೆ. ಬರುವ ಪತ್ರಗಳು ಸರಿಯಾದ ಹೊತ್ತಿಗೆ ಮುಟ್ಟುತ್ತವೆ.

ನಿಮಗೊದಗಿದ ದುಃಖದ ಕಾಲಕ್ಕೆ ಮೃತ್ಯುವಿನ ವಿಷಯವಾಗಿ ಚರ್ಚಿಸುವದು ನನಗೆ ಯೋಗ್ಯ ಕಾಣುವದಿಲ್ಲ. 'ಇವನು ದರಿದ್ರ ಸಾಂತ್ವನದಾತ' ನೆಂದು ಜಾಬನಂತೆ ನೀವು ಹೇಳಬಹುದು. ದೇವರ ವಿಷಯಕ್ಕೆ ನಮಗೆ ಜ್ಞಾನವಾದರೆ ಸಾವಿನಲ್ಲಿ ಕೂಡ ಆನಂದವನ್ನು ಕಾಣಲಿಕ್ಕೆ ಕಲಿಯಬೇಕು. ಗುಜರಾತದ ಮೊದಲನೆಯ ಭಕ್ತಕವಿಯಾದ ನರಸಿಂಹ ಮೆಹತಾನ ಮಗನು ಸತ್ತಾಗ ಅವನು ಆನಂದವನ್ನು ವ್ಯಕ್ತ ಮಾಡಿದನೆಂದೂ '**भलु थयुं भांगी जंजाल, सुखे भजीशु श्रीगोपाळ**'। 'ಈ ಸಂಸಾರ ಕಾಟ ತಪ್ಪಿದ್ದು ಒಳ್ಳೆಯದೆ ಆಯಿತು, ಆನಂದದಿಂದ ಶ್ರೀ ಗೋಪಾಲನನ್ನು ಭಜಿಸುವಾ.' ದೇವರು ನಿಮಗೆ ಈ ಕತ್ತಲೆಯಿಂದ ಹೆಚ್ಚು ಪ್ರಕಾಶ ದೊರೆಯುವಂತೆ ಮಾಡಲಿ. ನಮ್ಮ ಯಾರ ಸಮಾಧಾನ ವಚನಗಳೂ ನಿಮ್ಮನ್ನು ಸಂತೈಸಲಾರವೆಂಬುದು ನನಗೆ ಗೊತ್ತಿದೆ. ಅದು ನಿಮ್ಮೊಳಗಿಂದಲೇ ದೊರೆಯಬಲ್ಲದು. ನಾವು ಮೂವರಿಗೂ ನಿಮ್ಮ ಸಲುವಾಗಿ ಎಷ್ಟು ಅನಿಸಿದೆಯೆಂಬುದನ್ನು ವ್ಯಕ್ತಮಾಡುವದಕ್ಕಾಗಿ ಮಾತ್ರ ಇದನ್ನು ಬರೆದಿದ್ದೇನೆ."

ಪಾಪ, ಸುಬ್ಬಯ್ಯನ ಮಗಳು ಅವನು ಜೇಲಿನಿಂದ ಬಿಡುಗಡೆಯಾಗಿ ಬಂದ ದಿವಸವೇ ತೀರಿಕೊಂಡಳು. ಅವನಿಗೆ ಬರೆದರು:

"I can understand your grief and her's over the loss of your child of whom Lalita used to write to me in such loving

terms. But you have lived long enough in the Ashram to realize, especially on such occasions, that God has the right to take away from us what He gives us. You know what we believe. Our belief is that everyone of us comes to this world as a debtor and we leave when the debt is for the time being discharged. The child has paid the debt and is free. You and Lalita and all the rest of us have still to discharge our obligations."

"ನಿಮ್ಮ ಮತ್ತು ಲಲಿತಳ ದುಃಖವು ನನಗೆ ಗೊತ್ತಾಗುತ್ತದೆ. ಈ ಮಗುವಿನ ಬಗ್ಗೆ ಲಲಿತಾ ತುಂಬ ಮಮತೆಯ ಶಬ್ದಗಳಲ್ಲಿ ನನಗೆ ಬರೆಯುತ್ತಿದ್ದಳು. ನೀವು ಅನೇಕ ದಿವಸ ಆಶ್ರಮದಲ್ಲಿದ್ದಿರಿ. ಆದುದರಿಂದ ದೇವರು ನಮಗೆ ಕೊಟ್ಟದ್ದನ್ನು ತಿರುಗಿ ತೆಗೆದು-ಕೊಳ್ಳುವ ಅಧಿಕಾರವು ಅವನಿಗಿದೆಯೆಂಬುವ ಮಾತನ್ನು ನೀವು— ವಿಶೇಷವಾಗಿ ಇಂಥ ಪ್ರಸಂಗದಲ್ಲಿ ತಿಳಿದುಕೊಳ್ಳಬಲ್ಲಿರಿ. ಈ ವಿಷಯದಲ್ಲಿ ನಮ್ಮ ವಿಚಾರಗಳು ಏನೆಂಬುದು ನಿಮಗೆ ಗೊತ್ತಿದೆ. ಈ ಜಗತ್ತಿನಲ್ಲಿ ನಾವೆಲ್ಲರೂ ಸಾಲಗಾರರಾಗಿಯೆ ಬರುತ್ತೇವೆ ಮತ್ತು ಆ ಸಾಲವು ತೀರಿದ ಕೂಡಲೇ ಹೊರಟು ಹೋಗುತ್ತೇವೆ. ಹುಡಿಗೆಯು ತನ್ನ ಸಾಲವನ್ನು ತೀರಿಸಿತು ಆದರಿಂದ ಅದು ಮುಕ್ತವಾಯಿತು. ನೀವು, ಲಲಿತಾ ಮತ್ತು ನಾವೆಲ್ಲರೂ ಇನ್ನೂ ಸಾಲವನ್ನು ತೀರಿಸಬೇಕಾಗಿದೆ."

ಈ ಸಾರೆ ನನಗೆ ಭೆಟ್ಟಿಯನ್ನು ಕೊಡಲಿಲ್ಲ. ಆದರ ಬದಲಾಗಿ ನನಗೆ ರಾಮದಾಸ ಅಥವಾ ಮೋಹನಲಾಲರ ಭೆಟ್ಟಿಯನ್ನು ಕೊಡಬೇಕೆಂದು ವಿನಂತಿಮಾಡಿ ಕೊಂಡೆನು. ಆದಕ್ಕೆ, "ಈ ಯಾರ್ಡ (ಜೇಲಿನಲ್ಲಿ ಕೈದಿಗಳಿರುವ

೨೭-೭-'೩೨ ಒಂದೊಂದು ವಿಭಾಗ) ದಿಂದ ನಿಮ್ಮನ್ನು ಎರಡನೇ ಯಾರ್ಡಿಗೆ ಕೂಡ ಹೋಗಗೊಡುವದಿಲ್ಲ. ಅಂದಮೇಲೆ ಬೇರೆ ವರ್ಗದ ಕೈದಿಯನ್ನು ಭೆಟ್ಟಿಯಾಗುವದು ಹೇಗೆ!" ಎಂದು ಹೇಳಿದರು. ಸಾಬರಮತಿಯಲ್ಲಿ ನಾವು ಭೆಟ್ಟಿಯಾಗುತ್ತಿದ್ದೆವೆಂದು ನಾನು ಹೇಳಿದೆ. ಅವರಿಗೆ ಆಶ್ಚರ್ಯವಾಯಿತು. ವಲ್ಲಭಭಾಯಿಯವರು ಕೂಡಲೇ ಒಂದು ಮಾರ್ಮಿಕ ನುಡಿಯನ್ನಾಡಿದರು: "ಅಲ್ಲಿ ಆಗುತ್ತಿರಬಹುದು. ಆದರೆ ಈ ಜೇಲು ಸರಕಾರದ ರಾಜಧಾನಿಯ ಹತ್ತಿರವೇ ಇದೆಯಲ್ಲವೆ?"

ಆಶ್ರಮದ ಟಪಾಲು ನಿನ್ನೆ ಬರಲಿಲ್ಲ. ಮತ್ತೆ ಯಾವುದೊ ತಿರಗಣಿಯಲ್ಲಿ ಸಿಕ್ಕಂತೆ ಕಾಣುತ್ತದೆ.

ಬಾಯರನ್ನರ 'ಪ್ರಿಝುನರ ಆಫ್ ಸಿಲೋನ' ಎಂಬ ಪುಸ್ತಕವನ್ನು ಓದುವ ಇಚ್ಛೆಯಾಗುತ್ತಿದೆ. ಆದರೆ ಹೇಗೆ ದೊರೆಯಬೇಕು? ಇದರ ಪ್ರಾರಂಭದಲ್ಲಿಯ ಗಂಭೀರವಾದ ಸಂಶೋಧನೆಯನ್ನು ಪುನಃ ಪುನಃ ಓದಿ ನೆನಪಿನಲ್ಲಿಟ್ಟುಕೊಂಡೆನು.

ವಲ್ಲಭಭಾಯಿಯವರಿಗೆ ಸಂಸ್ಕೃತ ಓದುವದು ಬಹಳ ಮೋಜಿನದಾಗಿದೆ. 'ವಾಸಾಂಸಿ' ಏಕೆ ಉಪಯೋಗಿಸಿದ್ದಾರೆ 'ವಸ್ತ್ರಾಣಿ' ಏಕೆ ಉಪಯೋಗಿಸಿಲ್ಲ? ಏಕವಚನ, ದ್ವಿವಚನ, ಬಹುವಚನಗಳೆಂದರೇನು? ಸ್ವರವೆಂದು ಯಾವದಕ್ಕೆ ಹೇಳುತ್ತಾರೆ, ಕೃದಂತವೆಂದು ಯಾವದಕ್ಕೆ ಹೇಳುತ್ತಾರೆ ಎಂದು ಮುಂತಾಗಿ ಬಾಲೋಚಿತವಾದ ನಿರ್ದೋಷ ಮನಸ್ಸಿನಿಂದ ಕೇಳುತ್ತಾರೆ ಮತ್ತು ಹೊಸ ಶಬ್ದಗಳನ್ನು ಕಲಿಯುತ್ತಾರೆ. ಕಲಿತದ್ದರ ಪ್ರಯೋಗವನ್ನು ಮಾಡುತ್ತಾರೆ. ಇದು ನಿಮಗೆ ಶೋಭಿಸುವದಿಲ್ಲ ಎಂಬುದಕ್ಕೆ '**इदं न शोभनं अस्ति**' ಎಂದು ಹೇಳುವರು. ಅಚ್ಚ ಟೋರಿಗಳನ್ನು "ಇವರೆಲ್ಲರೂ '**आततायि**' ಜನರು" ಎಂದು ಸಂಬೋಧಿಸುತ್ತಾರೆ. ಇವತ್ತು ಕೇಳಿದರು: "ಶನೈಃ! ಶನೈಃ! ಎಂದರೆ ಶನಿವಾರವೇನು?" "'ವಾಸಾಂಸಿ' ಎಂಬುದನ್ನು ಏಕೆ ಉಪಯೋಗಿಸಿದ್ದಾರೆ 'ವಸ್ತ್ರಾಣಿ' ಏಕೆ ಇಲ್ಲ?" ಈ ಪ್ರಶ್ನೆಯ ಉತ್ತರವನ್ನು ರಸ್ಕಿನ್ನನಂಥವನು ಕೊಡಬಲ್ಲನೆಂದು ಬಾಪೂ ಹೇಳಿದರು.

. . . ಗೆ ಬೇರೊಂದು ಲಗ್ನ ಮಾಡಿಕೊಳ್ಳಲಿಕ್ಕೆ ಶಿಫಾರಸು ಮಾಡಿದರು: "ಹೀಗೆ ಮಾಡುವದರಿಂದ ನಿಮ್ಮ ಮನಸ್ಸು ಒಂದಿಲ್ಲೊಂದು ದಿವಸ ನಿರ್ವಿಕಾರವಾಗುವದು. ಇವತ್ತು ಇದು ನಿಮ್ಮಿಂದ ಅಸಾಧ್ಯವಾಗಿ ತೋರುತ್ತದೆ. ನಿಮಗೆ ಸಿಟ್ಟು ಬರುವ ಕಾರಣವಾದರೂ ಅದೇ ಇರುತ್ತದೆ. ನಿಮ್ಮ ಸ್ವಾದೇಂದ್ರಿಯವು ಬಲವುಳ್ಳದ್ದಾಗಿ ಕಾಣುತ್ತದೆ. ಇದರಲ್ಲಿ ಆಶ್ಚರ್ಯಪಡುವಂತಹದೇನೂ ಇಲ್ಲ. ಯಾಕಂದರೆ ಕಾಮ, ಕ್ರೋಧ, ರಸ ಮುಂತಾದವುಗಳೆಲ್ಲವೂ ಜೊತೆಯಲ್ಲಿಯೆ ಸಾಗುತ್ತವೆ. ನೀವು ನಿಮ್ಮ ಕೆಲಸದಲ್ಲಿ ಮಗ್ನರಾಗಿರುತ್ತೀರೆಂದು ನಿಮಗನಿಸುತ್ತದೆ. ಇದರಲ್ಲಿ ನನಗೆ ಸಂಶಯವಿದೆ. ಇದರ ಅರ್ಥವು ನೀವು ನಿಷ್ಕಾಳಜಿಯಿಂದಿರುತ್ತೀರೆಂದಲ್ಲ. ತನ್ನ ಕರ್ತವ್ಯದಲ್ಲಿ ನಿರತನಾದವನು ವಿಕಾರವಶನಾಗುವದು ಸಾಧ್ಯವೇ ಇಲ್ಲ. ಅವನಿಗೆ ಇಷ್ಟು ಸಮಯವಾದರೂ ಎಲ್ಲಿ ದೊರೆಯುತ್ತದೆ? ನಿಮ್ಮ ಸ್ಥಿತಿಯು ಹೀಗಿರುವದೇ ಇಲ್ಲ. ನೀವು ಕರ್ತವ್ಯಪರಾಯಣರಾಗಲಿಕ್ಕೆ ಬಹಳ ಪ್ರಯತ್ನ ಮಾಡುತ್ತಿದ್ದೀರೆಂಬ ಮಾತು ಸ್ಪಷ್ಟವಿದೆ. ಅದರಂತೆಯೆ ನೀವು ವಿಕಾರರಹಿತರಾಗಲಿಕ್ಕೂ ಪ್ರಯತ್ನಿಸುತ್ತಿದ್ದೀರಿ. ಆದರೆ ಹೇಗೆ ನೀವು ವಿಕಾರರಹಿತರಾಗಲಿಲ್ಲವೋ ಹಾಗೆಯೆ ಕರ್ತವ್ಯದಲ್ಲಿ ತನ್ಮಯರಾಗಲಿಲ್ಲ. ಕೆಲಸ ಮಾಡುತ್ತಿರುವಾಗಲೂ ನಿಮ್ಮ ಮನಸ್ಸು ವಿಕಾರವಾಗುತ್ತಿರುವದೆಂದು ತೋರುತ್ತದೆ. ನನ್ನ ಸ್ಥಿತಿಯು ಕೂಡ ಹೀಗೆಯೆ ಇದ್ದಿಲ್ಲವೇನು? ನನ್ನ ಕೆಲಸದಲ್ಲಿ ದೋಷಗಳಿರುವದಿಲ್ಲವೆಂದು ಎರಡನೆಯವರಿಗೆ ಅನಿಸುತ್ತಿತ್ತು. ಆದರೆ ನನಗೆ ನನ್ನ ದೋಷಗಳು ಗೊತ್ತಾಗುತ್ತಿದ್ದವು. ಆದುದರಿಂದಲೇ ಬ್ರಹ್ಮಚರ್ಯವನ್ನು ಮೊರೆಹೊಕ್ಕೆನು."

. . . ಗೆ: "ನಿಜವಾಗಿಯೂ ನೀನು ವಿಕಾರರಹಿತಳಾಗಿದ್ದರೆ . . . ರ

ಅನುಕೂಲವರ್ತಿನಿಯಾಗಿದ್ದರೂ ನೀನು ಅವರಿಗೆ ಸಂತೋಷವನ್ನುಂಟುಮಾಡಲಾರಿ. ಇದು ಎಲ್ಲ ವಿಷಯಾಸಕ್ತ ಜನರ ಅನುಭವವಿದೆ. ಇದರ ಪರಿಣಾಮವೆಂದರೆ ನಿನ್ನ ಸಂಗಡ ಭೋಗವಿಲಾಸ ಮಾಡಿದಮೇಲೂ . . . ರು ತೃಪ್ತಿಹೊಂದುವದಿಲ್ಲ. ಅದರಿಂದ ಅವರ ವಿಷಯವಾಸನೆಯು ಹೆಚ್ಚಾಗುತ್ತದೆ. ಆದುದರಿಂದ ನೀವಿಬ್ಬರೂ ಕೂಡಿಯೇ ಇರುವದಾದರೆ ನಿನಗೆ ಭೋಗದಲ್ಲಿ ರಸ ಉಂಟಾಗಬೇಕು. ನಿನಗೆ ರಸ ಉಂಟಾಗದಿದ್ದರೆ ನೀನು ಬೇರೆ ಇರಬೇಕು. ಈಗಂತೂ ನಾನು ನೀವಿಬ್ಬರೂ ಕೂಡಿ ಇರುವದರಲ್ಲಿ ಕೆಟ್ಟ ಪರಿಣಾಮವನ್ನೇ ನೋಡುತ್ತಿದ್ದೇನೆ. ನೀವು ಒಬ್ಬರನ್ನೊಬ್ಬರು ವಂಚಿಸುತ್ತಿದ್ದೀರಿ, ಆತ್ಮವಂಚನೆಯನ್ನೂ ಮಾಡಿಕೊಳ್ಳುತ್ತಿದ್ದೀರಿ, ಜಗತ್ತನ್ನೂ ವಂಚಿಸುತ್ತಿದ್ದೀರಿ. ನಿಮ್ಮಿಬ್ಬರ ಜೀವನದ ವಿಷಯಕ್ಕೆ ನನ್ನ ಹೊರತು ಉಳಿದವರು, ನೀವು ಆಶ್ರಮದಲ್ಲಿ ಇರುತ್ತಿರುವವರಾದುದರಿಂದ, ಸಾಧು–ಸಾಧ್ವಿಯಂತಿರುತ್ತೀರೆಂದು ತಿಳಿಯುತ್ತಾರೆ. ನೀವಿಬ್ಬರೂ ಈ ಅಸತ್ಯದಿಂದ ಮುಕ್ತರಾಗಿ ನಿಮ್ಮ ನಿಮ್ಮ ಇಚ್ಛೆ-ಗನುಸಾರವಾಗಿ ಲಗ್ನಮಾಡಿಕೊಂಡರೆ ಎಲ್ಲಕ್ಕೂ ಒಳ್ಳೆಯದು. ನನ್ನ ದೃಷ್ಟಿಯಿಂದ ಈಗೀಗ ನಿಮ್ಮಿಬ್ಬರ ಜೀವನವು ದೂಷಿತವಾಗಿದೆ. . . . ಬೇರೊಬ್ಬ ಸ್ತ್ರೀಯ ಸಂಗಡ ಮದುವೆಯಾದರೆ ಆ ಬಾಳನ್ನು ನಾನು ನಿರ್ದೋಷವೆಂದು ತಿಳಿಯುವೆನು. ಯಾಕಂದರೆ ಅದು ಸ್ವಾಭಾವಿಕವಾಗುವದು ಮತ್ತು ಕೊನೆಗೆ . .. . ರು ಶಾಂತರಾಗುವರು. ಈ ಬದಲಾವಣೆಗಾಗಿ ಇಬ್ಬರೂ ಮನಸ್ಸುಬಿಚ್ಚಿ ಮಾತನಾಡಬೇಕು. ಇಷ್ಟಾದ ನಂತರ ಯೋಗ್ಯ ಕಾಣಿಸಿದ ಮಾರ್ಗವನ್ನು ಅನುಸರಿಸಬೇಕು. ಹೀಗಾದ ಮೇಲೆ . . . ರು ಒಂದಿಲ್ಲೊಂದು ದಿವಸ ವಿಕಾರರಹಿತರಾಗುವರು. ಈಗಿರುವ ರೀತಿಯಿಂದ ಅವರು ತಳಮಳಿಸುತ್ತಲೇ ಇರುವರು ಮತ್ತು ಅವರ ವಿಕಾರಗಳು ಹೆಚ್ಚಾಗುತ್ತಲೇ ಇರುವವು. ನಿನ್ನಲ್ಲಿರುವ ಶಕ್ತಿಯನ್ನು ನೀನು ಕಳೆದುಕೊಳ್ಳಬೇಡ. ನಿರಾಶಳಾಗಬೇಡ. ದೇವರು ನಿನಗೆ ಸಹಾಯ ಮಾಡಲಿ. "

ವಿಷಯವಾಸನೆಯನ್ನು ಬಿಡುವದಕ್ಕಾಗಿ ಥಾಮಸ ಎ ಕೆಂಪಿಸ್‌ರ ಶ್ಲೋಕಗಳು ಹೀಗಿವೆ :

"Longstanding custom will make resistance, but by a better habit shall it be subdued.

"The flesh will complain, but by fervour of spirit shall it be kept under.

"The old serpent will instigate thee, and trouble thee anew but by prayer he shall be put to flight; moreover, by useful employment his greater access to thee shall be prevented."

" ಬಹುಕಾಲದಿಂದ ನಡೆದು ಬಂದ ರೂಢಿಯು ಅಡ್ಡಬರುವದು, ಆದರೆ ಉತ್ತಮ ಸಂಸ್ಕಾರಗಳಿಂದ ಅದನ್ನು ಹತ್ತಿಕ್ಕಬಹುದು.

" ಶರೀರದಲ್ಲಿ ವಾಸವಾಗಿರುವ ಪಶುತ್ವವು ತಲೆಯತ್ತಬಹುದು, ಆದರೆ ಆತ್ಮದ ಪ್ರಭಾವದಿಂದ ಅದನ್ನು ಹೊಡೆದು ಕೆಡವಬಹುದು.

" ಹಳೆಯ ಸರ್ಪವು ಅದನ್ನು ಚೇತರಿಸುವದು ಮತ್ತು ಮೇಲಿಂದ ಮೇಲೆ ನಿನ್ನನ್ನು ಪೀಡಿಸುವದು, ಆದರೆ ಪ್ರಾರ್ಥನೆಯ ಬಲದಿಂದ ಅದನ್ನು ಹೊಡೆದೋಡಿಸಬಹುದು. ಅನಂತರ ಉಪಯುಕ್ತವಾದ ಕೆಲಸಗಳಲ್ಲಿ ತೊಡಗಿ ಅದನ್ನು ಹತ್ತಿರ ಬರದಂತೆ ತಡೆಯಬಹುದು. "

ನಿನ್ನೆ ಬಾಪೂ ಮೇಜರರಿಗೆ ಕೇಳಿದರು: ಇಲ್ಲಿ " ಯಾರಾದರೂ ಉರ್ದು ಕಲಿಸುವವರು ಸಿಗುವರೊ ಇಲ್ಲವೊ ? " ಅವರು ಹೇಳಿದರು: " ಇರಬಹುದು, ಕಾಂಟೋನಮೆಂಟದಲ್ಲಿ ಇಂಗ್ಲೀಷರಿಗೆ ಹಿಂದುಸ್ತಾನಿಯನ್ನು

೨೮-೭-'೩೨ ಕಲಿಸುವವರು ಅವಶ್ಯವಾಗಿ ಇರಬಹುದು. " ಬಾಪೂ: " ನಾನು ಜೇಲಿನ ಒಳಗಿರುವವರ ಬಗ್ಗೆ ಮಾತಾಡುತ್ತೇನೆ. " ಮೇಜರ: " ನನಗಿಂತಲೂ ಚನ್ನಾಗಿ ಉರ್ದು ಭಾಷೆಯನ್ನು ಬಲ್ಲವರು ಇಲ್ಲಿ ಯಾರೂ ಇಲ್ಲವೆಂದು ತಿಳಿಯಿರಿ. " ಕೈದಿಗಳೊಳಗೆ ಉರ್ದು ಬಲ್ಲಂಥವರನ್ನು ಯಾರಾದರನ್ನು ಬೇಡುವರೆಂಬುದು ಅವರಿಗೆ ಗೊತ್ತಾಯಿತು. ಆದುದರಿಂದ ಮೊದಲೇ ಈ ಉತ್ತರವನ್ನು ಕೊಟ್ಟುಬಿಟ್ಟರು. ಬಾಪೂ ಹೇಳಿದರು: " ಆದರೆ ನಿಮ್ಮನ್ನು ನಿಲ್ಲಿಸಿಕೊಳ್ಳಲಿಕ್ಕಾದೀತೆ ? " ಅವರು ಅಂದರು: " ಅವಶ್ಯವಾಗಿ ನಿಲ್ಲಿಸಿಕೊಳ್ಳಬಹುದು. ಎಲ್ಲ ಕಠಿಣ ಪ್ರಶ್ನೆಗಳನ್ನು ಬರೆದಿಟ್ಟು ನನ್ನನ್ನು ಕೇಳಬಹುದು. " ಇವತ್ತು ತಪಾಸಣೆಯ ದಿನವಿದ್ದುದರಿಂದ ಅವರು ಹೋಗುವ ಸಿದ್ಧತೆಯಲ್ಲಿದ್ದರು. ಬಾಪೂ ಅಂದರು: " ಇವತ್ತು ನಿಮ್ಮನ್ನು ನಿಲ್ಲಿಸಿಕೊಳ್ಳಲು ಸಾಧ್ಯವಾದೀತೆ ? " ಅವರು: " ಹೌದು, ಒಂಬತ್ತು ಗಂಟೆಯಾದ ಮೇಲೆ ನನಗೆ ಯಾವ ಕೆಲಸವೂ ಇಲ್ಲ. ಒಂಬತ್ತು ಗಂಟೆಯ ವರೆಗೆ ಈ ಬದಿಯ ಕೋಣೆಗಳ ನಿರೀಕ್ಷಣೆಯ ಕೆಲಸವನ್ನು ಪೂರ್ತಿಮಾಡಿ ಬರುವೆನು. " ಅದರಂತೆ ಬಂದರು. ಬಾಪೂ ಅಲ್ಮಾರುಕದೊಳಗಿಂದ ಶಬ್ದಗಳನ್ನು ತೆಗೆದು ಕೇಳಲಿಕ್ಕೆ ಪ್ರಾರಂಭಿಸಿದರು. ಅವರು ಗಾಬರಿಯಾಗತೊಡಗಿದರು. ಅಂತೂ ಇಂತೂ ಕೆಲವು ಶಬ್ದಗಳ ಅರ್ಥವನ್ನು ಹೇಳಿದರು, ಕೆಲವನ್ನು ಹೇಳುವದಾಗಲಿಲ್ಲ. ಕೊನೆಗೆ ಹೇಳಿದರು: " ಇದು ನನ್ನ ಶಕ್ತಿಯನ್ನು ಮೀರಿದೆ. ನೀವು ಒಪ್ಪಿದರೆ ನಾನು ದಿನಾಲು ಈ ಶಬ್ದಗಳನ್ನು ಬ್ರೆಲ್ವಿಯವರನ್ನು ಕೇಳಿ ತರುವೆನು. " ಬಾಪೂ: " ಆದರೆ ನಾನು ಈ ಪುಸ್ತಕವನ್ನು ಕೊಡಲಾರೆ, ಯಾಕಂದರೆ ನನಗೆ ಸಮಯ ದೊರೆತಾಗ ನಾನು ಅದನ್ನು ಓದುತ್ತೇನೆ. " ಕೊನೆಗೆ ತಮ್ಮ ಮನೆಯಿಂದ ಒಂದು ಉರ್ದು ಶಬ್ದಕೋಶ-

ವನ್ನು ಕಳಿಸುತ್ತೇವೆಂದು ಹೇಳಿದರು.

ಇವತ್ತು ಆಶ್ರಮದ ಟಪಾಲು ಹೊರಿಗೆಗಟ್ಟಲೆ ಬಂತು. ಓದಲಿಕ್ಕೆ ಎರಡು ತಾಸು ಹಿಡಿದವು. 'ಮಾಡರ್ನ ರಿವ್ಯೂ'ದ ಹಿಂದಿನ ಅಂಕುಗಳನ್ನು ದಿನಾಲು ತಿರುಗಾಡುವ ಕಾಲಕ್ಕೆ ಓದುತ್ತೇವೆ. ಮೇ ತಿಂಗಳ ಅಂಕಿನಲ್ಲಿ

೨೯-೭-'೩೨ Our mis-understanding (ನಮ್ಮ ತಪ್ಪು ತಿಳಿವಳಿಕೆ) ಎಂಬ ಹೆಸರಿನಿಂದ ಬರೆದ ಬಹಳ ಮಾಹಿತಿಯಿಂದ ಕೂಡಿದ ಒಂದು ಲೇಖವನ್ನು ಓದಿದೆವು. ಅದರಲ್ಲಿ ಪಾಶ್ಚಿಮಾತ್ಯ ನಾಗರಿಕತೆಯು ಪೂರ್ವದ ಅಂದರೆ ಹಿಂದುಸ್ತಾನ, ಚೀನ ಮತ್ತು ಇಸ್ಲಾಮ ದೇಶಗಳಿಗೆ ಬಹಳ ಋಣಿಯಾಗಿದೆ ಎಂಬ ವಿಷಯವಿತ್ತು. India in England (ಇಂಗ್ಲಂಡದಲ್ಲಿ ಹಿಂದುಸ್ತಾನ) ಎಂಬ ಹೆಸರಿನ ಜಾನ ಅರ್ನಶಾನ ಲೇಖವು ಅತ್ಯಂತ ಸತ್ಯಪೂರ್ಣವಾದುದು, ಸುಂದರವಾದ ಪೃಥಕ್ಕರಣ ಮಾಡಿದ್ದು ಮತ್ತು ಸತ್ಯಸಂಗತಿಗಳನ್ನು ಪ್ರತ್ಯಕ್ಷ ಹಾಗು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿರುವಂತಹದು ಆಗಿದೆಯೆಂದು ತೋರುತ್ತದೆ. ಈ ಮನುಷ್ಯನನ್ನು ವಿಲಾಯತಿಯಲ್ಲಿ ಭೆಟ್ಟಿಯಾಗಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು!

ಹೊರಗೆ ತಾಶೆ ಬಾರಿಸುವ ಸಪ್ಪಳ ಕೇಳಿ ಬಂತು. ಬಾಪೂ ಕೇಳಿದರು: "ಈ ತಾಶೆ ಏತರ ಸಲುವಾಗಿ ಬಾರಿಸುತ್ತಿರಬಹುದು?" ವಲ್ಲಭಭಾಯಿ: "ಜೇಲಿನಲ್ಲಿಯೇ ಬಾರಿಸುತ್ತಾರೆ!" ಬಾಪೂ: "ಯಾರದಾದರೂ ಮದುವೆಯಾಗುತ್ತಿದೆಯೆ?" ಪೆಟ್ರಿಕ್ ಪಿಯರ್ಸರು ಗಲ್ಲಿಗೇರುವ ಪೂರ್ವದಲ್ಲಿ ಮದುವೆಯಾಗಿದ್ದರೆಂಬ ಸಂಗತಿಯನ್ನು ನಾನು ಹೇಳಿದೆ. ಬಾಪೂ ನುಡಿದರು: "ಆ ಸ್ತ್ರೀಯು ಧನ್ಯಳು. ಆದರೆ ಆವಳು ಈಗ ಏನು ಮಾಡುತ್ತಿರುವಳೆಂಬುದನ್ನು ನನಗೆ ಅವಶ್ಯವಾಗಿ ತಿಳಕೊಳ್ಳಬೇಕೆಂಬ ಇಚ್ಛೆಯಾಗಿದೆ. ಅವಳು ಏನು ಮಾಡುತ್ತಿರುವಳೆಂಬುದನ್ನು ನೀವು ಇಂಗ್ಲಂಡದಲ್ಲಿ ಯಾರಾವರನ್ನೂ ಕೇಳಬಹುದಿತ್ತಲ್ಲ?"

ಇವತ್ತು ನಾಡಕರ್ಣಿಯವರು ಉದ್ಧೃತ ಮಾಡಿದ ಶ್ಲೋಕಗಳನ್ನೇ ಬಾಪೂ ಉದ್ಧೃತ ಮಾಡಿದರು:

वृक्षान्छित्वा पशून् हत्वा कृत्वा रुधिरकर्दमम् ।
३०-७-'३२ यद्येवं गम्यते स्वर्गं नरकं केन गम्यते ॥

ಇದನ್ನು ಕೇಳಿ ವಲ್ಲಭಭಾಯಿ ಹೇಳಿದರು: "ಮುಸಲ್ಮಾನರು ಇದನ್ನು ಒಪ್ಪಿಯೆ ಒಪ್ಪುತ್ತಾರೆ." ಇದರ ಮೇಲಿಂದ ಶ್ರದ್ಧಾನಂದ, ರಾಜಪಾಲರ ಮಾತುಗಳು ಹೊರಟವು. ಕೊನೆಗೆ ಭೋಲಾನಾಥ ಮತ್ತು ಅವನ ಕಾರಕೂನರ ಮಾತುಗಳು ಹೊರಟವು. ಪಾಪ, ಇವರು ಅತ್ಯಂತ ನಿರ್ದೋಷಿಗಳಾಗಿದ್ದರೂ

ಯಾವ ಕಾರಣವಿಲ್ಲದೆ ಕೊಲ್ಲಲ್ಪಟ್ಟರು. ಯಾಕಂದರೆ ತಮ್ಮ ಪುಸ್ತಕದಲ್ಲಿ ಮಹಮ್ಮದ ಪೈಗಂಬರರ ಜೀವನಚರಿತ್ರೆಯನ್ನು ಕೊಟ್ಟು ಸೇವೆ ಸಲ್ಲಿಸಬೇಕೆಂದು ಇವರ ವಿಚಾರ-ವಿತ್ತು. ಅವರು ಗೆಬ್ರಿಯಲ್ಲನ ಛಾಯಾಚಿತ್ರವನ್ನು ಯಾವದೊ ಹಳೆಯ ಚಿತ್ರದಿಂದ ತೆಗೆದುಕೊಂಡಿದ್ದರು. ಇದರ ಮೇಲಿಂದ ಬಾಪೂ ದಕ್ಷಿಣ ಆಫ್ರಿಕೆಯಲ್ಲಿ ತಮ್ಮ ಮೇಲೆ ಒದಗಿದ ಒಂದು ಸಂಗತಿಯನ್ನು ಹೇಳಿದರು. ಬಾಪೂ ವಾಶಿಂಗ್ಟನ್ ಅರ್ವಿಂಗನು ಬರೆದ ಮಹಮ್ಮದ ಪೈಗಂಬರರ ಜೀವನಚರಿತ್ರೆಯನ್ನು ಓದಿದರು. ಅವರು ಮುಸ-ಲ್ಮಾನರ ಸೇವೆ ಸಲ್ಲಿಸುವದಕ್ಕಾಗಿ ಅವರಿಗೆ ತಿಳಿಯುವಂಥ ಸರಳ ಭಾಷೆಯಲ್ಲಿ ಅದರ ಅನುವಾದವನ್ನು 'ಇಂಡಿಯನ್ ಓಪಿನಿಯನ್'ದಲ್ಲಿ ಕೊಡಲು ಪ್ರಾರಂಭಿಸಿದರು. ಒಂದೆರಡು ಪ್ರಕರಣಗಳು ಆಗಿರಬಹುದು. ಅಷ್ಟರಲ್ಲಿ ಮುಸಲ್ಮಾನರ ಉಗ್ರವಾದ ವಿರೋಧವು ಪ್ರಾರಂಭವಾಯಿತು. ಪೈಗಂಬರರ ವಿಷಯದಲ್ಲಿ ಇನ್ನೂ ಏನೂ ಬಂದಿರಲೇ ಇಲ್ಲ. ಪೈಗಂಬರರ ಜನ್ಮದ ಕಾಲಕ್ಕೆ ಅರಬಸ್ತಾನದಲ್ಲಿ ಪ್ರಚುರವಾಗಿದ್ದ ಮೂರ್ತಿಪೂಜೆ, ಮೂಢಭಾವನೆ ಮತ್ತು ದುರಾಚಾರಗಳ ವಿಷಯವಾಗಿ ವರ್ಣನೆಯಿತ್ತು. ಈ ಜನರಿಗೆ ಇದನ್ನು ಕೂಡ ಸಹನಮಾಡುವದಾಗಲಿಲ್ಲ. ಬಾಪೂ ಹೇಳಿ-ದರು: "ಗ್ರಂಥಕಾರನು ಇದನ್ನು ಪ್ರಸ್ತಾವನೆಯೆಂದು ಹೇಳಿದ್ದಾನೆ. ಇವರನ್ನೆಲ್ಲ ಸುಧಾರಿಸುವದಕ್ಕಾಗಿ ಪೈಗಂಬರರ ಅವತಾರವಾಯಿತು." ಆದರೆ ಯಾರಾದರೂ ಕೇಳಿದರಷ್ಟೆ? ನಮಗೆ ಇಂಥ ಜೀವನಚರಿತ್ರೆಯು ಬೇಕಾಗಿಲ್ಲ, ಬೇಕಾಗಿಲ್ಲ! ಮುಂದಿನ ಪ್ರಕರಣವನ್ನು ಬರೆದು ಕಂಪೋಜ ಕೂಡ ಮಾಡಲಾಗಿತ್ತು. ಆದರೆ ಎಲ್ಲವನ್ನೂ ರದ್ದುಮಾಡಲಾಯಿತು. ಹಿಂದಿನಿಂದ ಬಾಪೂ ಮತ್ತೆ ಇದನ್ನೂ ಹೇಳಿದರು: "ಪಾಪ, ಭೋಲಾನಾಥನು ಚಿತ್ರವನ್ನು ತೆಗೆದು ಹಾಕಿದನು ಅವರಿಗೆ ಬೇಕಾದ ಹಾಗೆ ಸುಧಾರಣೆಯನ್ನು ಮಾಡಿದನು. ಅಂದರೂ ಕೂಡ ಅವನ ಜೀವ ಉಳಿಯಲಿಲ್ಲ! ಇದಾದನಂತರ ಅಮೀರ ಅಲ್ಲಿಯ Spirit of Islam (ಇಸ್ಲಾಮದ ರಹಸ್ಯ) ಇದನ್ನು ಗುಜರಾತಿಯಲ್ಲಿ ಕೊಡಬೇಕೆಂಬ ವಿಚಾರವಿತ್ತು ಮತ್ತು ಮುಸಲ್ಮಾನ ಗೆಳೆಯನು ಅದನ್ನು ಅಚ್ಚುಹಾಕಿಸಲಿಕ್ಕೆ ರೂಪಾಯಿಗಳನ್ನು ಕೊಟ್ಟಿದ್ದನು. ಆದರೂ ಈ ವಿಚಾರವನ್ನೇ ಬಿಡಲಾಯಿತು!"

ನಾಡಕರ್ಣಿಯವರು ರಾಮರಾಜ್ಯದ ವಿಷಯವಾಗಿ ಒಂದು ಟೀಕಾತ್ಮಕ ನಿಬಂಧವನ್ನು ಬರೆದು ಅದಕ್ಕೆ ಬಾಪೂರಿಗೆ ಬರೆದ ಪತ್ರದ ರೂಪ ಬರುವಂತೆ ಮಾಡಿದ್ದಾರೆ. ಇದರಲ್ಲಿ ರಾಮಚಂದ್ರನು ಮಾಡಿದ ಅಧರ್ಮಗಳು—ವಾಲಿಯ

೩೧-೭-'೩೨ ವಧೆ, ಶಂಬೂಕನ ಸಂಹಾರ, ಸೀತಾದೇವಿಯ ಪರಿತ್ಯಾಗ, ಮುಂತಾದವುಗಳನ್ನು ಕುರಿತು ಬರೆದಿದ್ದರು. ಇಂಥ ಕಥೆಗಳನ್ನು ಅಕ್ಷರಶಃ ನಂಬಿ ಸನಾತನೀ ಹಿಂದುಗಳು ಶೂದ್ರರನ್ನೂ ಸ್ತ್ರೀಯರನ್ನೂ ಪೀಡಿಸು

ತ್ತಾರೆ, ಅಸ್ಪೃಶ್ಯರ ಮೇಲೆ ಜುಲುಮೆ ಮಾಡುತ್ತಾರೆ ಮತ್ತು ಅಂತ್ಯಜರನ್ನೂ ಶೂದ್ರೇತರರನ್ನೂ ಅವರ ಅಧಿಕಾರದಿಂದ ವಂಚಿಸುತ್ತಾರೆ. ಇವೆಲ್ಲವುಗಳ ಮೇಲೆ ಕಹಿಯಾದ ಟೀಕೆಯನ್ನು ಮಾಡಿದ್ದಾರೆ. ಎಷ್ಟೋ ಕಡೆಗೆ ಅವರ ತೀಕ್ಷ್ಣತೆಯು ಮರ್ಯಾದೆಯನ್ನು ಮೀರಿ ಹೋಗುತ್ತದೆ. ಯಾವದಾದರೊಬ್ಬ ಮಿಶನರಿಯ ಕೈಯ ಲ್ಲಾಗಲಿ ಮಿಸ್ ಮೇಯೋಳ ಕೈಯಲ್ಲಾಗಲಿ ಈ ಪುಸ್ತಕವು ಬಿದ್ದರೆ ಹಿಂದೂ ಧರ್ಮದ ಮೇಲೆ ಪ್ರಹಾರಮಾಡಲಿಕ್ಕೆ ಅವರಿಗೊಂದು ಗಟ್ಟಿಮುಟ್ಟಾದ ಆಯುಧ ಸಿಕ್ಕಂತಾಗು ವದು.

ನಾನು ಬಾಪೂರನ್ನು ಕೇಳಿದೆ: "ಇದಕ್ಕೆ ಉತ್ತರ ಕೊಡುವಿರೇನು?" ಬಾಪೂ: "ಸ್ವಲ್ಪ ಬರೆಯುವ ವಿಚಾರವೇನೊ ಇದೆ." ನಾನು: "ಬರೆಯಿಸಿ ಇಡಿರಿ. ಹೊರಗೆ ಹೋದ ಮೇಲೆ ಅಚ್ಚು ಹಾಕಿಸೋಣ." ಬಾಪೂ: "ಹಾಗಾಗದು. ಈ ಪ್ರಕಾರ ಬರೆಯಿಸುವದು ನನ್ನ ಶಕ್ತಿಯನ್ನು ಮೀರಿದ ಮಾತು. ನಾನು ಬರೆಯುವ ದನ್ನು ನಾನು ಬರೆಯದೆ ದೇವರು ಬರೆಯಿಸುತ್ತಾನೆಂದು ಹೇಳುವದು ಅಕ್ಷರಶಃ ಸತ್ಯ ವಿದೆ. ನಮ್ಮ 'ಯಂಗ ಇಂಡಿಯಾ'ದ ಲೇಖಗಳನ್ನು ಓದಿದರೆ ಮತ್ತೆ ಅವನ್ನು ಬರೆಯಲಿಕ್ಕೆ ಕುಳಿತರೆ ಅದರಂತೆ ಬರೆಯುವದು ಸಾಧ್ಯವಿಲ್ಲೆಂದು ಅನಿಸುತ್ತದೆ. ಬಾರ್ಡೋಲಿ ಸತ್ಯಾಗ್ರಹದ ಕಾಲದ ಗುಜರಾತೀ ಲೇಖಗಳನ್ನು ಇವತ್ತು ನನ್ನಿಂದ ಬರೆಯುವದು ಸಾಧ್ಯವಿಲ್ಲ. ಪ್ರತಿಯೊಂದು ಮಾತಿಗೂ ವಾತಾವರಣ ಬೇಕು. ಆದುದರಿಂದ ಅವನಿಗೆ ಒಂದು ಸಣ್ಣ ಉತ್ತರವನ್ನು ಬರೆದು ಕಳಿಸುವೆನು." ನಾನು: "ಬಹು ಜನರ ವಿಷಯದಲ್ಲಿ ಇದು ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಸತ್ಯ-ವಾಗಿಯೆ ಇರುತ್ತದೆ. ತನ್ಮಯನಾಗಿ ಬರೆಯುವ ರೂಢಿಯಿದ್ದವನು ಒಂದು ಪ್ರಸಂಗ-ದಲ್ಲಿ ಮತ್ತು ಒಂದು ವಿಶಿಷ್ಟ ಪರಿಸ್ಥಿತಿಯ ಕಾಲಕ್ಕೆ ಬರೆದದ್ದನ್ನು ಬೇರೊಂದು ಪ್ರಸಂಗದಲ್ಲಿ ಮತ್ತು ಪರಿಸ್ಥಿತಿಯ ಕಾಲಕ್ಕೆ ಬರೆಯುವದು ಅವನಿಂದಾಗದು. 'ಸತ್ಯವೇ ದೇವರು' ಇದನ್ನು ಕುರಿತು ತಾಜಾನದಲ್ಲಿ ನೀವು ಅರ್ಧ ತಾಸಿನವರೆಗೆ ಮಾಡಿದ ಭಾಷಣವನ್ನು ಇವತ್ತು ನಿಮಗೆ ಮಾಡಲಿಕ್ಕೆ ಹೇಳಿದರೆ ಅದು ನಿಮ್ಮಿಂದ ಸಾಧ್ಯವಾಗಲಾರದು. ಆದರೂ ನೀವು ಈ ವಿಷಯದ ಮೇಲೆ ಹೊಸ ಪ್ರಕಾಶವನ್ನು ಕೆಡವಬಹುದು."

ನನ್ನ ಪ್ರಶ್ನೆಗೆ ಉತ್ತರರೂಪವಾಗಿಯೊ ಅನ್ನುವಂತೆ ಅವರು ಇವತ್ತು ಒಬ್ಬ ಚಿಕ್ಕ ಬಾಲಕಿಗೆ ಬರೆದ ಪತ್ರದಲ್ಲಿ ನಾಡಕರ್ಣಿಯವರಿಗೆ ಉತ್ತರವನ್ನು ಕೊಟ್ಟು ಬಿಟ್ಟರು. ಬಾಲಿಕೆಯು ಕೇಳಿದ್ದಳು: "ಮೀರಾಬಾಯಿಯ ವಿಷಯಕ್ಕೆ ಪುಸ್ತಕಗಳಲ್ಲಿ ಬರೆದ ಚಮತ್ಕಾರಗಳನ್ನು ನಂಬದಿದ್ದರೆ ಅವಳ ವಿಷಯವಾಗಿ ಬೇರೆ ಯಾರಾದರೂ ಹೇಳಿದರೆ ಅದನ್ನು ನಂಬಬಹುದೆ? ಪುಸ್ತಕಗಳಲ್ಲಿ ಬರೆದದ್ದನ್ನು ನಂಬದಿದ್ದರೆ ನಮ್ಮ

ವೀರರ ಹಾಗು ವೀರಾಂಗನೆಯರ ಬಗ್ಗೆ ತಿಳಿದುಕೊಳ್ಳುವ ಸಾಧನವೇನು?" ಅವಳಿಗೆ ಉತ್ತರಕೊಡುವಾಗ ಬರೆದರು : "ಪುಸ್ತಕಗಳಲ್ಲಿ ಬರೆದದ್ದೆಲ್ಲವೂ ವೇದವಾಕ್ಯವೆಂದು ತಿಳಿಯಲಾಗದು. ಸದಾಚಾರಕ್ಕೆ ವಿರುದ್ಧವಾದುದನ್ನೂ ಅಮಾನುಷವಾದುದನ್ನೂ—ಅದನ್ನು ಎಲ್ಲಿಯೆ ಬರೆದಿರಲಿ—ನಂಬಬಾರದು. ಸತ್ಯ ಯಾವದು ಅಸತ್ಯ ಯಾವದು ಎಂಬುದನ್ನು ತೂಗಿ ನೋಡುವ ಶಕ್ತಿ ನಮ್ಮಲ್ಲಿ ಬರುವವರೆಗೆ ನಾವು ಓದಿದ ಸಂಗತಿಗಳ ವಿಷಯಕ್ಕೆ, ನಮಗೆ ವಿಶ್ವಾಸವಿದ್ದಂಥ ಹಿರಿಯರ ಮಾತನ್ನು ನಂಬಬೇಕು."

ಭಗವಾನಜಿಯುವರಿಗೆ ಬರೆದರು : "ಈಶೋಪನಿಷತ್ತಿನಲ್ಲಿ ಒಂದು ಮಂತ್ರವಿದೆ. ನೀನು ನಿನ್ನ ಕೈಯಲ್ಲಿ ತೆಗೆದುಕೊಂಡ ಕೆಲಸದಲ್ಲಿ ಲಕ್ಷ್ಯಹಾಕು. ಹೀಗೆ ಮಾಡು-ತ್ತಿರುವದರಿಂದ ಅವಶ್ಯವಾಗಿ ದೇವರ ದರ್ಶನವಾಗುವದು. ದೇವರು ಎಲ್ಲ ಕಡೆಯಲ್ಲಿಯೂ ಇದ್ದಾನೆ. 'ನನ್ನ' ಕೆಲಸದಲ್ಲಿಯೂ ಇದ್ದಾನೆ. ನಾನು 'ನನ್ನ'ದೆಂದು ತಿಳಿಯುವ ಕೆಲಸವು ಅವನದೇ ಇರುತ್ತದೆ. ಆ ಕೆಲಸದ ಧ್ಯಾನ ಮಾಡುವದೆಂದರೆ ಅವನಲ್ಲಿ ನಂಬುಗೆ ಇಟ್ಟಂತೆಯೆ. ಮನಃಪೂರ್ವಕವಾಗಿ ಒಡೆಯನ ಕೆಲಸಮಾಡುವವ-ನಿಗೆ ಒಡೆಯನು ಪ್ರಸನ್ನನಾಗುತ್ತಾನೆ."

ಹುಡಿಗೆಯರು ಶೀಲದ ರಕ್ಷಣೆಯನ್ನು ಕುರಿತು ವಿಚಾರಮಾಡತೊಡಗಿದ್ದಾರೆ. ಶೀಲದ ರಕ್ಷಣೆಯು ಶಸ್ತ್ರಗಳಿಂದ ಆಗಲಾರದೆ? ಅವರಿಗೆ ಎರಡು ಉತ್ತರಗಳನ್ನು ಬರೆದರು : "ಮನಸ್ಸು ಪವಿತ್ರವಿದ್ದಂಥವರ ಪಾವಿತ್ರ್ಯದ ರಕ್ಷಣೆಯನ್ನು ದೇವರು ಮಾಡಿಯೇ ತೀರುವನೆಂದು ವಿಶ್ವಾಸವಿಡಬೇಕು. ಶಸ್ತ್ರಗಳನ್ನು ನಂಬುವದು ವ್ಯರ್ಥವಾದುದು. ಶಸ್ತ್ರಗಳು ಕಸಿದುಕೊಳಲ್ಪಟ್ಟರೆ? ಅಹಿಂಸಾ ಧರ್ಮವನ್ನಾ-ಚರಿಸುವವನು ಶಸ್ತ್ರಗಳಲ್ಲಿ ನಂಬುಗೆಯನ್ನಿಡಬಾರದು. ಅವನ ಅಹಿಂಸೆ, ಪ್ರೇಮಗಳೇ ಅವನ ಶಸ್ತ್ರ." ಒಬ್ಬ ಹುಡಿಗೆಯು ಇದನ್ನು ಕೇಳಿದ್ದಳು : "ಸತ್ಯವಿದ್ದರೂ ಅಪ್ರಿಯವನ್ನಾಡಿದರೆ ಹಿಂಸೆಯಾಗುವದಿಲ್ಲವೆ?" ಅವಳಿಗೆ ಉತ್ತರ ಕೊಟ್ಟರು : "ಸತ್ಯವನ್ನಾಡುವದರಿಂದ ಯಾರ ಮನಸ್ಸಾದರೂ ನೊಂದರೆ ಅದು ಹಿಂಸೆಯಲ್ಲ. ನಾನು ನಿನ್ನ ಹತ್ತಿರ ಆಕಳ ಹಾಲನ್ನು ಬೇಡುತ್ತೇನೆ. ನಾನು ಅದನ್ನು ಸೇವಿಸುವದಿಲ್ಲವೆಂಬ ವ್ರತವನ್ನು ತೆಗೆದುಕೊಂಡಿರುವದರಿಂದ ನೀನು ಅದನ್ನು ನನಗೆ ಕೊಡುವದಿಲ್ಲ. ಇದರಿಂದ ನನ್ನ ಮನಸ್ಸು ನೊಂದರೆ ನೀನು ಹಿಂಸೆಯನ್ನು ಮಾಡುವದಿಲ್ಲ. ಧರ್ಮದ ರಕ್ಷಣೆಯನ್ನು ಮಾಡುತ್ತಿ." ಎರಡನೆಯ ಪತ್ರದಲ್ಲಿ : "ಸ್ತ್ರೀಯರಿಗಾಗಲಿ ಅಥವಾ ಬೇರೆಯವರಿಗಾಗಲಿ ರಕ್ಷಣೆಗಾಗಿ ಹೊರಗಿನ ಶಸ್ತ್ರಗಳ ಆವಶ್ಯಕತೆಯಿಲ್ಲ. ಒಂದೊಂದು ಸಾರೆ ಈ ಶಸ್ತ್ರಗಳು ರಕ್ಷಣೆ ಮಾಡಿಕೊಳ್ಳುವವನ ಮೇಲೆಯೆ ಪ್ರಹಾರ ಮಾಡಲಿಕ್ಕೆ ಉಪಯೋಗಬೀಳುತ್ತವೆ. ಅಹಿಂಸಾ ಧರ್ಮವನ್ನಾಚರಿಸುವವನು ತಾನು ಸತ್ತು ತನ್ನ ರಕ್ಷಣೆಯನ್ನು ಮಾಡಿಕೊಳ್ಳಬಲ್ಲನೆ ಹೊರತು ಕೊಲ್ಲುವದರಿಂದಲ್ಲ.

ಹೆಣ್ಣುಮಕ್ಕಳು ತಮ್ಮ ಪಾವಿತ್ರ್ಯವೇ (ಅಂದರೆ ದೇವರೇ) ಅವರ ರಕ್ಷಣೆಯನ್ನು ಮಾಡಬಲ್ಲದೆಂದು ದ್ರೌಪದಿಯಂತೆ ವಿಶ್ವಾಸವನ್ನಿಡಬೇಕು. ದೇವರು ನಮ್ಮೊಳಗೆ ತನ್ನ ಗುಣಗಳ ರೂಪದಲ್ಲಿ ವಾಸಿಸಿ ನಮ್ಮ ರಕ್ಷಣೆಯನ್ನು ಮಾಡುತ್ತಾನೆ."

. . . ಗೆ ಬರೆದರು: (ತಮಗೆ ಒಂಟಿಗತನವು ಬೇಸರವಾಗಹತ್ತಿದೆ. ತಮ್ಮಿಂದೇನೂ ಪ್ರಯೋಜನವಿಲ್ಲ, ಮುಂತಾಗಿ ಅವರು ಬರೆದಿದ್ದರು. ಇದಕ್ಕೆ ಉತ್ತರವೆಂದು):

"You are suffering from a subtle pride and diffidence at the same time. How can you feel lonely in the midst of so many human beings everyone of whom demands your service and in whose midst you have thrown in your lot? You are in the midst of books and you will not touch them. You are in the midst of Hindi speaking men and women and you will not speak to them. You are in the midst of workers and you will not throw yourself into the work and make two blades of grass grow where only one was growing yesterday, make two yards of cloth where only one was woven yesterday. All our philosophy is dry as dust if it is not immediately translated into some act of loving service. Forget the little self in the midst of the greater you have put yourself in. You must shake yourself free from this lethargy."

"ಸೂಕ್ಷ್ಮವಾದ ಅಭಿಮಾನವು ನಿಮಗೆ ತೊಂದರೆ ಕೊಡುತ್ತಿದೆ. ಇದರ ಸಂಗಡವೆ ನಿಮ್ಮೊಳಗೆ ಆತ್ಮವಿಶ್ವಾಸವೂ ಇಲ್ಲ. ಇಲ್ಲದಿದ್ದರೆ ನಿಮ್ಮ ಸೇವಾಕಾಂಕ್ಷಿಗಳಾದ ಇಷ್ಟೊಂದು ಸಂಗಡಿಗರ ಮಧ್ಯದಲ್ಲಿರುತ್ತಿದ್ದರೂ ನೀವು ಏಕಾಕಿಯೆಂದು ಅನಿಸಬೇಕೆ? ನೀವು ಪುಸ್ತಕಗಳ ಮಧ್ಯದಲ್ಲಿರುತ್ತೀರಿ ಆದರೆ ಅವುಗಳನ್ನು ಮುಟ್ಟುವದಿಲ್ಲ. ನೀವು ಇಷ್ಟು ಜನ ಹಿಂದಿ ಮಾತಾಡುವ ಸ್ತ್ರೀ-ಪುರುಷರ ಮಧ್ಯದಲ್ಲಿರುತ್ತೀರಿ, ಆದರೆ ಅವರ ಸಂಗಡ ಮಾತಾಡಲಿಕ್ಕೆ ನಿಮಗೆ ರುಚಿಸುವದಿಲ್ಲ. ನೀವು ಇಷ್ಟು ಜನ ಕಾರ್ಯಕರ್ತರ ಮಧ್ಯದಲ್ಲಿರುತ್ತೀರಿ ಆದರೆ ನಿಮಗೆ ಕೆಲಸ ಮಾಡಲಿಕ್ಕೆ ಬೇಡ. ನಿನ್ನೆ ಒಂದೇ ಹುಲ್ಲುಕಡ್ಡಿಯು ಬೆಳೆಯುವ ಸ್ಥಳದಲ್ಲಿ ಇಂದು ಎರಡು ಬೆಳೆಯುವಂತೆ ಮಾಡುವ ಇಚ್ಛೆಯು ನಿಮಗಾಗುವದಿಲ್ಲ. ಒಂದು ಗಜ ಬಟ್ಟೆ ನೇಯಲ್ಪಡುತ್ತಿದ್ದರೆ ಎರಡು ಗಜ ನೇಯಲಿಕ್ಕೆ ನಿಮ್ಮ ಮನಸ್ಸಾಗುವದಿಲ್ಲ. ನಮ್ಮ ತತ್ವಜ್ಞಾನವು ಪ್ರೇಮಮಯ ಸೇವೆಯಲ್ಲಿ ಕೂಡಲೆ ಪರಿವರ್ತನೆಯಾಗದಿದ್ದರೆ ಅದಕ್ಕೆ ಕವಡಿಯ ಬೆಲೆಯಿಲ್ಲ. ನೀವು ಇರುವಂಥ ವಿಶಾಲವಾದ ಸಮೂಹದ ಮಧ್ಯದಲ್ಲಿ ಅಲ್ಪವಾದ ನಿಮ್ಮ ಅಸ್ತಿತ್ವ-

ವನ್ನೇ ಮರೆತುಬಿಡಿರಿ. ನಿಮ್ಮ ಮನಸ್ಸಿಗೆ ಅಂಟಿಕೊಂಡ ಈ ಶೈಥಿಲ್ಯವನ್ನು ಕಿತ್ತೊಗೆಯಿರಿ.".

. . . ಳು ಬರೆದಿದ್ದಳು : "ನಾನು ಆಶ್ರಮಕ್ಕೆ ಹೋಗಲೇನು? ನನ್ನನ್ನು ಆಕರ್ಷಿಸುವಂಥ ಲೋಹಚುಂಬಕವಂತೂ ಅಲ್ಲಿರುವದಿಲ್ಲ." ಅವಳಿಗೆ ಬರೆದರು : "ಆಶ್ರಮಕ್ಕೆ ಹೋಗದಿರುವದಕ್ಕೆ ನೀನು ಒಳ್ಳೆಯ ಕಾರಣವನ್ನು ತೋರಿಸಿರುವಿ. ಎಲ್ಲರೂ ಹೀಗೆಯೆ ಮಾಡಿದರೆ? ಕಾಜಿ ಮತ್ತು ಅವನ ನಾಯಿಯ ಕತೆಯನ್ನು ಕೇಳಿರುವೆಯಾ? ಕಾಜಿಯು ಬಹಳ ಪ್ರಸಿದ್ಧನಾಗಿದ್ದನು. ಅವನ ನಾಯಿಯು ಸತ್ತ ಕೂಡಲೆ ಅದರ ಶವದ ಮೆರವಣಿಗೆಯನ್ನು ತೆಗೆಯಲಾಯಿತು. ಅದರಲ್ಲಿ ಊರವ-ರೆಲ್ಲರೂ ಭಾಗತೆಗೆದುಕೊಂಡಿದ್ದರು. ಕಾಜಿಯು ಸತ್ತಾಗ ಹೊರುವವರು ಸಿಗುವದು ದುರ್ಲಭವಾಯಿತು! ನೀನು ಕೂಡ ಹೀಗೆಯೆ ಮಾಡಿದೆಯೆಂದು ಹೇಳಬಹುದಷ್ಟೆ? ಅಥವಾ '**देहीनां स्नेही सकळ स्वारथिया अंते अळगा रहेशे रे**'* ಹಾಡಿನ ಅನುಕರಣವನ್ನು ನಾವೆಲ್ಲರೂ ಮಾಡುತ್ತಿರುವೆವಲ್ಲವೆ? ಶರೀರದೊಳಗಿಂದ ಜೀವ ಹೋದ ಕೂಡಲೆ ಅದನ್ನು ಸುಡುತ್ತೇವೆ. ಆದರೆ ನೀನು— ? ಈ ವಾಕ್ಯವನ್ನು ನೀನು ಪೂರ್ತಿಮಾಡು. ತಾತ್ಪರ್ಯವಿಷ್ಟೆ ನಾವು ವ್ಯಕ್ತಿಯ ಮೋಹವನ್ನು ಹಿಡಿಯ ಬಾರದು. ವ್ಯಕ್ತಿಯ ಗುಣಗಳ ಬಗ್ಗೆ ಮೋಹವಿರಬಹುದು. ಆದರೆ ಆ ಮೋಹವು ಶುದ್ಧ ಪ್ರೇಮವಾಗಿರಬೇಕು. ಎಲ್ಲರ ಗುಣಗಳೂ ಸ್ವಲ್ಪಿಲ್ಲ ಸ್ವಲ್ಪ ಕಾರ್ಯರೂಪದಲ್ಲಿ ಪರಿಣತವಾಗುತ್ತವೆ. ನಮಗೆ ಆ ಗುಣಗಳು ಒಳ್ಳೆಯವೆಂದು ಅನಿಸಿದರೆ ಅವರಿಂದ ಮೂರ್ತಿಮಂತವಾಗುವ ಕಾರ್ಯಕ್ಕೆ ಉತ್ತೇಜನ ಕೊಡತಕ್ಕದ್ದು. ಆದುದರಿಂದ ನೀನು ಆಶ್ರಮಕ್ಕೆ ಹೋಗು, ಇಷ್ಟೊಂದು ಹುಡಿಗೆಯರಲ್ಲಿ ಕೆಲವರ ಪರಿಚಯವನ್ನಂತೂ ಮಾಡಿಕೊಂಡಿರಬೇಕು. ಒಂದೊಂದು ಸಾರೆ ಪ್ರಾರ್ಥನೆಯಲ್ಲಿಯೂ ಭಾಗ ತೆಗೆದುಕೊ."

ಇದೇ ವಿಷಯಕ್ಕೆ . . . ರ ಪತ್ರದಲ್ಲಿ :

೧. ವ್ಯಕ್ತಿ ಪೂಜೆಯ ಬದಲಾಗಿ ಗುಣ ಪೂಜೆಯನ್ನು ಮಾಡಬೇಕು. ವ್ಯಕ್ತಿಯು ದೋಷಯುಕ್ತನೆಂದು ಕಂಡುಬರಬಹುದು ಮತ್ತು ಅವನು ನಾಶವಾಗು-ವದು ಖಂಡಿತ, ಆದರೆ ಗುಣಗಳು ನಾಶವಾಗುವದಿಲ್ಲ.

೨. ಆಶ್ರಮದ ಸಂಚಾಲಕ ಮಂಡಲದೊಳಗಿನ ಅನೇಕ ಜನರು ಮಾನ್ಯರಿಲ್ಲ ದಿದ್ದರೆ ಅವರ ಬಗ್ಗೆ ಸಹಿಷ್ಣುತೆ ತಾಳುವದನ್ನು ಕಲಿಯಲಿಕ್ಕೆ ಇದು ಸುವರ್ಣ ಸಂಧಿ. ದೋಷದಿಂದ ಮುಕ್ತರಾದವರು ಯಾರೂ ಇಲ್ಲ. ನಮ್ಮಂತೆಯೆ ಎರಡನೆಯವರನ್ನು ತಿಳಿಯುವದಾದರೆ ಮಾನ್ಯ—ಅಮಾನ್ಯದ ಭೇದವೇ ಅಳಿದು ಹೋಗುತ್ತದೆ.

---

* ಈ 'ದೇಹ'ದ ಬಂಧು—ಬಾಂಧವರೆಲ್ಲರೂ ಸ್ವಾರ್ಥಿಗಳೆ. ಅಂತಕಾಲದಲ್ಲಿ ಎಲ್ಲರೂ ದೂರಮಾಡುವರು.

೩. ಆಶ್ರಮದ ತತ್ವಗಳು ಮಾನ್ಯವಿದ್ದರೆ ಅವುಗಳ ಬಾಹ್ಯ ಸ್ವರೂಪದ ಮತಭೇದದ ಬಗ್ಗೆ ಚಿಂತೆಯಿರಬಾರದು. ನಮ್ಮ ಸಂಬಂಧವು 'ಮಮ ಮಮ' ಅಂದರೆ ತತ್ವದ ಸಂಗಡ ಇರತಕ್ಕದ್ದೇ ಹೊರತು 'ಟಪ ಟಪ' ಅಂದರೆ ಬಾಹ್ಯ ಸ್ವರೂಪದ ಸಂಗಡವಲ್ಲ.

೪. ನಿನ್ನ ಸ್ವಭಾವದೊಳಗಿನ ದೋಷಗಳು ಹೋಗಬೇಕಾದರೆ ನೀನು ಆಶ್ರಮದಲ್ಲಿರುವದೇ ನಿನ್ನ ಕರ್ತವ್ಯವಾಗಿದೆ.

೫. ಆಶ್ರಮದಲ್ಲಿ ನೀನು ನಿನ್ನ ಧ್ಯೇಯಗಳನ್ನು ಸಾಧ್ಯಮಾಡಿಕೊಳ್ಳದಿದ್ದರೆ ಆ ದೋಷವು ನಿನ್ನದು. ಆಶ್ರಮದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ.

೬. ನಿನಗೆ ಪ್ರಿಯವಾದ ವ್ಯಕ್ತಿಗಳ ಆಕರ್ಷಣವು ನಿನ್ನನ್ನು ಆಶ್ರಮದಿಂದ ಹೊರಗೆ ಏಕೆ ಕರೆದೊಯ್ಯಬೇಕು? ಅವರ ಪ್ರೇಮವು ಅವರಿಗೆ ಅವಶ್ಯಕತಾನುಸಾರವಾಗಿ ಮಾರ್ಗದರ್ಶನ ಮಾಡುವದು. ಪ್ರೇಮದ ಸಲುವಾಗಿ ಶರೀರದ ಹತ್ತಿರಿರುವ ಆವಶ್ಯಕತೆಯೆ ಇರುವದಿಲ್ಲ. ಆವಶ್ಯಕತೆಯಿದೆ ಎನಿಸಿದರೆ ಆ ಪ್ರೇಮವು ಕ್ಷಣಿಕವಾದುದೆಂದೇ ತಿಳಿಯಬೇಕು. ಒಂದು ವ್ಯಕ್ತಿಯ ಶುದ್ಧ ಪ್ರೇಮದ ಪರೀಕ್ಷೆಯು ಎರಡನೆಯವನ ವಿಯೋಗವಾದ ಮೇಲೆ, ಅವನ ಮರಣದನಂತರ ಆಗುತ್ತದೆ. ಆದರೆ ಇದೆಲ್ಲವೂ ಬುದ್ಧಿವಾದವು. ನಿನ್ನ ಮನಸ್ಸು ಎಲ್ಲಿರುವದೊ ಅಲ್ಲಿಯೆ ನೀನಿರುವಿ. ನಿನ್ನ ಮನಸ್ಸು ಆಶ್ರಮದೊಳಗುಳಿಯದಿದ್ದರೆ ನಾನೇನು ಮಾಡಬಲ್ಲೆ? ನೀನಾದರೂ ಏನು ಮಾಡಬಲ್ಲಿ?"

ಈ ಸಹೋದರಿಗೆ ಬಾಪೂ ಬರೆದಿದ್ದರು: "'ನೀನು ಎರಡನೆಯವರ ದೋಷಗಳನ್ನು ಹುಡುಕಬೇಡ, ಎರಡನೆಯವರು ನಿನ್ನ ದೋಷಗಳನ್ನು ಹುಡುಕಲೊಲ್ಲರೇಕೆ?' ಎಂಬ ಸೂತ್ರಕ್ಕನುಸಾರವಾಗಿಯೇ ಮಂತ್ರಿಗಳನ್ನು ಟೀಕಿಸುವದು ಯೋಗ್ಯವಾಗಲಾರದು." ಇದರ ಉತ್ತರವನ್ನು ಸಹೋದರಿಯು ಸಿಟ್ಟಿಗೆದ್ದು ಕೊಟ್ಟಳು: "ನಮ್ಮನ್ನು ಟೀಕಿಸಲಿ. ಆದರೆ ಎರಡನೆಯವರ ಟೀಕೆಯನ್ನು ಏಕೆ ಮಾಡಬಾರದು? ಸಾರ್ವಜನಿಕ ವ್ಯಕ್ತಿಗಳನ್ನು ಟೀಕಿಸುವ ಅಧಿಕಾರವು ಪ್ರತಿಯೊಬ್ಬರಿಗೂ ಇರುತ್ತದೆ." ಇವರಿಗೆ ಬರೆದರು: "'ಎರಡನೆಯವರ ದೋಷಗಳನ್ನು ಹುಡುಕಬೇಡ, ಎರಡನೆಯವರು ನಿನ್ನ ದೋಷಗಳನ್ನು ಹುಡುಕಲಿ' ಎಂಬುದರ ವಿಷಯಕ್ಕೆ ನೀನು ಮಾಡಿದ ಟೀಕೆಯು ನಿನಗೆ ಶೋಭಿಸುವದಿಲ್ಲ. ಅದರ ಅರ್ಥವೇ ನಿನಗೆ ತಿಳಿದಿಲ್ಲ. ನಿನ್ನ ಟೀಕೆಯು ಅಹಂಕಾರದಿಂದ ತುಂಬಿದೆ. 'ಎರಡನೆಯವರು ನಿನ್ನ ದೋಷಗಳನ್ನು ಹುಡುಕಲಿ' ಎಂಬುದರ ಅರ್ಥವು ಇಷ್ಟೆ, ನಾವು ಅಂಥ ದೋಷಗಳನ್ನು ಮಾಡಬಾರದು. ನಾವು ಜಗತ್ತಿನ ವಿರೋಧಿಗಳಾಗಬಾರದು. 'ಜನರು ಬೇಕಾದದ್ದು ಅನ್ನಲಿ ಅಥವಾ ಮಾಡಲಿ' ಎಂಬ ವಿಚಾರವನ್ನು ನಾವು ಹೇಗೆ ಮಾಡಬಲ್ಲೆವು? ಅಥವಾ ಅಂಥ

ಮಾತನ್ನು ಹೇಗೆ ಆಡಬಲ್ಲೆವು? ಜಗತ್ತಿನ ಮುಂದೆ ನಾವು ತುಚ್ಛರು. ಅಂದರೆ ನಾವು ಸತ್ಯಮಾರ್ಗದಿಂದ ನಡೆಯುತ್ತಿದ್ದರೂ ಜಗತ್ತನ್ನು ದಂಡಿಸುವದಿಲ್ಲ. ಅದರ ದೋಷ ಗಳನ್ನು ಹುಡುಕುವದಿಲ್ಲ. ಆದರೆ ನಾವು ಜಗತ್ತು ಮಾಡುವ ಶಿಕ್ಷೆಯನ್ನೂ, ಅದು ಕೊಡುವ ನ್ಯಾಯವಿಚಾರವನ್ನೂ ಸಹಿಸುತ್ತೇವೆ. ಇದರ ಹೆಸರು ನಮ್ರತೆ ಅಥವಾ ಅಹಿಂಸೆ. ನೀನು ವ್ಯಂಗವಾಗಿ ಅಥವಾ ಸಿಟ್ಟಿನಿಂದ ಬರೆದಿದ್ದರೆ ಹಾಗೆ ಬರೆಯಬಾರ-ದೆಂದು ನಾನು ಇಚ್ಛಿಸುತ್ತೇನೆ. ನನ್ನ ಮೇಲೆ ಸಿಟ್ಟಾಗಿದ್ದಕ್ಕಾಗಿ ನನಗೆ ಚಿಂತೆಯಿಲ್ಲ. ನಾನು ಇದನ್ನು ಹಾಸ್ಯದಲ್ಲಿಯೇ ಮುಗಿಸಿಬಿಡುವೆನು. ಆದರೆ ಈ ವಾಕ್ಯಗಳು ನನಗೆ ನೋವನ್ನುಂಟುಮಾಡುತ್ತವೆ. ನಿನ್ನ ಲೇಖನಿಯಿಂದ ಇಂಥ ಶಬ್ದಗಳು ಹೊರಡಲೇ ಬಾರದು. ಅಂದರೆ ಇಂಥ ವಿಚಾರಗಳು ಕೂಡ ಬರಬಾರದು. ವಿಚಾರಗಳು ಬಂದ ಕೂಡಲೇ ಬೇಕಾದಹಾಗೆ ನನ್ನೆದುರಿಗಿಡು. ನನ್ನೆದುರಿಗಿಟ್ಟರೆ ನಾನು ಅವುಗಳನ್ನು ಸುಧಾರಿಸಬಲ್ಲೆ. ನೀನು ನಿನ್ನ ವಿಚಾರಗಳನ್ನು ಮುಚ್ಚಿಡಬೇಕೆಂದು ನಾನು ಈ ವಾಕ್ಯ ವನ್ನು ಬರೆದಿಲ್ಲ. ನಾನು ನಿನ್ನನ್ನು ಹುಚ್ಚಿ, ಉದ್ಧಟಳು, ನಮ್ರಳು ಹೇಗೆ ಇದ್ದಂತೆ ನೋಡಲಿಚ್ಛಿಸುತ್ತೇನೆ. ಆದರೆ ಮೇಲೆ ಹೇಳಿದ ವಿಚಾರಗಳು ನಿನ್ನ ಮನಸ್ಸಿನಲ್ಲಿ ಕೂಡ ಸುಳಿಯಬಾರದೆಂದು ನನ್ನ ಬೇಡಿಕೆ ಇದೆ.''

ಮಾಲ್ಥಸನ '**जीवो जीवस्य जीवनम्**' ಎಂಬ ನಿಯಮವನ್ನು ಕುರಿತು ಇದೇ ಪತ್ರದಲ್ಲಿ ಬರೆದರು: "ಎಷ್ಟೋ ಜನರಿಗೆ ಅವನ ಬರಹದ ಅರ್ಥವೇ ಆಗಿಲ್ಲ ಮತ್ತು ಎಷ್ಟೋ ಜನರು ತಪ್ಪು ಅರ್ಥವನ್ನು ಮಾಡಿಕೊಂಡಿದ್ದಾರೆ. ಮನುಷ್ಯೇತರ ಪ್ರಾಣಿಗಳಿಗೆ ಅನ್ವಯಿಸುವ ಕಾಯಿದೆ ಮನುಷ್ಯರಿಗೆ ಅನ್ವಯಿಸುವದಿಲ್ಲ. ಮನುಷ್ಯೇತರ ಪ್ರಾಣಿಗಳು ಎರಡನೆ ಪ್ರಾಣಿಗಳನ್ನು ಕೊಂದು, ತಿಂದು ಜೀವಿಸುತ್ತವೆ. ಮನುಷ್ಯನು ಇದರಿಂದ ಪಾರಾಗುವ ಪ್ರಯತ್ನಮಾಡುತ್ತಾನೆ. ಇದರಲ್ಲಿಯೆ ಅವನ ಅಹಿಂಸೆಯಿದೆ. ಶರೀರವಿರುವವರೆಗೆ ಅವನು ಪೂರ್ಣ ಅಹಿಂಸೆಯನ್ನು ಸಾಧಿಸ-ಲಾರನು. ಆದರೆ ವಿಚಾರ ರೂಪದಲ್ಲಿ ಅದನ್ನು ಸಾಧಿಸಿದರೂ ತೀರ ಕಡಿಮೆ ಹಿಂಸೆ-ಯಿಂದ ಕಾರ್ಯ ಸಾಗಿಸಿಕೊಳ್ಳಬಲ್ಲನು. ತಾನು ಸತ್ತು ಎರಡನೆಯವರನ್ನು ಬದುಕಿಸುವದರಲ್ಲಿಯೆ ಮನುಷ್ಯನ ವೈಶಿಷ್ಟ್ಯವಿದೆ. ಜನಸಂಖ್ಯೆ ಬೆಳೆದಂತೆ ಆಹಾರವೂ ಹೆಚ್ಚುತ್ತದೆ. ಅದರಲ್ಲಿ ಇನ್ನೂ ಬೆಳೆಯುವ ಶಕ್ತಿಯಿದೆ. ಡಾರ್ವಿನ್ನನ ಶೋಧದ ತರುವಾಯ ಅನೇಕ ಹೊಸ ಶೋಧಗಳಾಗಿವೆ. 'ಹೆಚ್ಚಿನ ಹೆಚ್ಚು ಜನರ ಕಲ್ಯಾಣ' 'ಅಥವಾ ಬಲವಂತನೇ ಬಾಧ್ಯಸ್ಥ' ಎಂಬ ನುಡಿಗಳು ತಪ್ಪಾಗಿವೆ. ಅಹಿಂಸೆಯು ಎಲ್ಲರ ಕಲ್ಯಾಣವನ್ನೂ ಬಯಸುತ್ತದೆ, ದೇವರ ನ್ಯಾಯಾಲಯದಲ್ಲಿ ಎಲ್ಲರ ಕಲ್ಯಾಣದ ವಿಚಾರವಾಗುತ್ತದೆ. ಈ ನ್ಯಾಯ ವಿಚಾರಣೆಯನ್ನು ಹೇಗೆ ಮಾಡಬೇಕು ಮತ್ತು ಆ ನ್ಯಾಯವಿಚಾರಣೆಯಲ್ಲಿ ಮನುಷ್ಯನ ಕರ್ತವ್ಯವೇನು

ಎಂಬುದನ್ನು ಶೋಧಿಸುವದು ನಮ್ಮ ಕೆಲಸವಾಗಿದೆ. ಈ ನೀತಿಯ ವಿರುದ್ಧ ಬೇರೊಂದು ನೀತಿಯನ್ನು ಮುಂದೆಮಾಡುವದು ಮನುಷ್ಯನ ಕೆಲಸವೇ ಅಲ್ಲ. "

ನನ್ನ ಹೊಲದ ಹಪ್ತೆಯನ್ನು ಕೊಟ್ಟ ಸುದ್ದಿಯನ್ನು ಇವತ್ತು 'ಟಾಯಿಮ್ಸ ಆಫ್ ಇಂಡಿಯಾ'ದಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದದ್ದನ್ನು ಓದಿದೆ: 'ಮಹಾದೇವನ ಕಕ್ಕನ ಮಗನಾದ ಮಗನ ಬಾಪೂ ಅಸಿಸ್ಟಂಟ

೧–೮–'೩೨ ಕಲೆಕ್ಟರನಿಗೆ ಉದ್ಧಟತನದಿಂದ ಉತ್ತರಕೊಟ್ಟನು ಮತ್ತು ಹಪ್ತೆಯನ್ನು ತುಂಬಲಿಕ್ಕೆ ನಿರಾಕರಿಸಿದನು. ಆನಂತರ ಫೌಜದಾರನು ಹೋದನು. ಅವನು ಅವರ ಮನೆಯೊಳಗಿಂದ ಕಾಂಗ್ರೆಸ ಪತ್ರಿಕೆಗಳನ್ನು ಜಪ್ತ ಮಾಡಿ ಹೋರಾಟದಲ್ಲಿ ಭಾಗತೆಗೆದುಕೊಂಡ ಕಾರಣ ಹಚ್ಚಿ ಖಟ್ಲೆ ಹಾಕಿದನು. ಅಲ್ಲಿ ಮಗನನು ಮಾಫಿ ಬೇಡಿ ರೂಪಾಯಿಗಳನ್ನು ತುಂಬಿದನು.' 'ಟಾಯಿಮ್ಸ'ದ ಸುದ್ದಿಯಾದ್ದರಿಂದ ಎಷ್ಟರಮಟ್ಟಿಗೆ ಸತ್ಯವಿದೆಯೆಂಬುದು ದೇವರಿಗೆ ಗೊತ್ತು. ಆದರೆ ಹಪ್ತೆಯನ್ನು ತುಂಬಿದನೆಂಬ ಸಂಗತಿ ಸತ್ಯವಾದುದು. ನನಗೆ ಬಹಳ ದುಃಖವಾಯಿತು. ಆದರೆ ಮಾಡುವದೇನು? ನನಗೆ ಸಾಧ್ಯವಿದ್ದುದನ್ನು ಇದುವರೆಗೆ ಮಾಡಿದೆ. ಜೇಲಿನಲ್ಲಿ ಕುಳಿತುಕೊಂಡು ಶತ್ರುಗಳ ಯುಕ್ತಿಗಳನ್ನು ಎದುರಿಸಲಿಕ್ಕಾದೀತೆ?

ಇವತ್ತು ಬೆಳಿಗ್ಗೆ ಸೂರ್ಯನು ಸ್ವಲ್ಪ ಕಂಡ ಕೂಡಲೇ ಎಲ್ಲ ಚಾದರ ಮುಂತಾದವುಗಳನ್ನು ಬಿಸಿಲಿನಲ್ಲಿ ಹಾಕಲಿಕ್ಕೆ ಹೇಳಿದರು. ಇದರ ಮೇಲಿಂದ ಒಂದು ಕತೆಯನ್ನು ಹೇಳಿದರು. ಇದನ್ನು ಹೇಳುವಾಗ

೨–೮–'೩೨ ಅವರಿಗೆ ದರ್ಬಾನದ ಡಾ. ನಾನಜಿಯವರ ಸ್ಕಾಟಲಂಡದ ಹೆಂಡತಿಯ ನೆನಪಾಯಿತು. ಅವಳು ಪ್ರಸಿದ್ಧ ಅಗಸಗಿತ್ತಿಯಾಗಿದ್ದಳು. ಅವಳು ದಿನಾಲು ಬಟ್ಟೆಗಳನ್ನು ಒಗೆಯುತ್ತಿದ್ದಿಲ್ಲ ಅಥವಾ ಸಬಕಾರವನ್ನು ಹಚ್ಚುತ್ತಿದ್ದಿಲ್ಲ, ಆದರೂ ಅವುಗಳನ್ನು ಚನ್ನಾಗಿ ಬಿಸಿಲಲ್ಲಿ ಒಣಗಿಸುತ್ತಿದ್ದಳು. ಬಿಸಿಲಲ್ಲಿ ಹಾಕುವದರ ಮಹತ್ವವು ಅವಳಿಗೆ ತಿಳಿದಿತ್ತೆಂದು ಬಾಪೂ ಹೇಳಿದರು. ಇಷ್ಟು ಹೇಳಿ ಡಾ. ನಾನಜಿಯವರಿಂದ ಬಾ ಅವರಿಗೆ ಆಪರೇಶನ್ ಮಾಡಿಸಿದ್ದರ ಸುದ್ದಿಯನ್ನು ಹೇಳಿದರು: "ಇದಕ್ಕೆ ಬಾ ಇವಳ ಅದ್ಭುತ ಸಹನಶಕ್ತಿಯ ಉದಾಹರಣೆಯೆಂದು ಹೇಳಬಹುದು. ಗರ್ಭಾಶಯದ ಸ್ಕ್ರೇಪಿಂಗ—ಕೆರೆದು ತೆಗೆಯಿಸಬೇಕಾಗಿತ್ತು. ಬಾ ಇವಳ ಹೃದಯವು ಅಷ್ಟೊಂದು ಸಶಕ್ತವಿರದ್ದರಿಂದ ಎಚ್ಚರ ತಪ್ಪುವ ಔಷಧವು ಸಹನವಾಗಲಿಕ್ಕಿಲ್ಲೆಂದು ಆದನ್ನು ಕೊಡದೆ ಆಪರೇಶನ್ ಮಾಡಿದರು." ಬಾಪೂ ದೂರದಲ್ಲಿ ನಿಂತಿದ್ದರು. ಸ್ವತಃ ನಡುಗುತ್ತಿದ್ದರು.

ಆ ಭಾಗದಲ್ಲಿ ಶಸ್ತ್ರಗಳನ್ನು ಹಾಕಿ ಕೊಯ್ದು ಅಗಲ ಮಾಡುವ ಸಪ್ಪಳವು ಕೇಳಬರುತ್ತಿತ್ತು. ಬಾ ಅವರ ಮುಖದ ಮೇಲೆ ದುಃಖದ ಚಿಹ್ನವು ಕಂಡು-ಬರುತ್ತಿತ್ತು. ಆದರೆ ಬಾಯಿಂದ 'ಉಫ್' ಎಂದು ಉಸುರುರ್ಗರೆಯಲಿಲ್ಲ. ಬಾಪೂ ಹೇಳಿದರು: "'ನೋಡು, ಧೈರ್ಯ ಬಿಡಬೇಡ' ಎಂದು ನಾನು ಹೇಳುತ್ತಿದ್ದೆ. ಆದರೆ ನಾನು ಸ್ವತಃ ನಡುಗುತ್ತಿದ್ದೆ. ನನ್ನಿಂದ ಅದನ್ನು ನೋಡುವದಾಗುತ್ತಿದ್ದಿಲ್ಲ." ನಾನು ಬಾಪೂಗೆ ಹೇಳಿದೆ: "ಇದಕ್ಕೆ ಸಹನಶಕ್ತಿಯ ಚಮತ್ಕಾರವೆಂದು ಹೇಳಬೇಕು." ಬಾಪೂ ಹೇಳಿದರು: "ಹೌದು, ಇದಕ್ಕೆ ಸಮಯವೂ ಬಹಳ ಹಿಡಿದಿತ್ತು ಮತ್ತು ಓ ಎಂದು ಒದರುವ ಪರಿಸ್ಥಿತಿಯಿತ್ತು. ಆದರೆ ಬಾ ಅದ್ಭುತವಾದ ಸಹನ ಶಕ್ತಿಯನ್ನು ತೋರಿಸಿದಳು! ಇದೇ ಪ್ರಕಾರದ ಧೈರ್ಯವನ್ನು ಅವಳು ಬೀಫ್ ಟೀ ತೆಗೆದುಕೊಳ್ಳದೆ ತೋರಿಸಿದಳು. 'ಸಾಯುವದಾದರೆ ಸಾಯಲೊಲ್ಲೆನೇಕೆ. ಆದರೆ ಇಂಥ ವಸ್ತುಗಳನ್ನು ಸೇವಿಸಿ ಜೀವಿಸುವದು ಬೇಡ' ಎಂದು ಅವಳು ಹೇಳುತ್ತಿದ್ದಳು."

ಸಾಯಂಕಾಲ ಬಾಪೂ ಕೇಳಿದರು: "· · · ನ ೬೧ ನೇ ಹುಟ್ಟಿದ ದಿವಸ ಎಂದಾಗುತ್ತದೆ?"

ವಲ್ಲಭಭಾಯಿ: "ಯಾಕೆ, ಏನು ಕೆಲಸವಿದೆ? ನಿಮಗೆ ಏನಾದರೂ ಬರೆಯುವದಿದೆಯೆ?"

ಬಾಪೂ: "ಹೌದು, ಬರೆಯುವದಂತೂ ಇದ್ದೇ ಇದೆ. ಎರಡನೆಯವರಿಗೆ ಬರೆಯುತ್ತೇವೆಂದಮೇಲೆ ಅವನೇನು ತಪ್ಪು ಮಾಡಿದ್ದಾನೆ?"

ವಲ್ಲಭಭಾಯಿ: "ಯಾರಾದರೂ ನಿಮ್ಮನ್ನು ಕೇಳಿರಬೇಕು, ಏನನ್ನಾದರೂ ಬೇಡಿರಬೇಕು, ಆಗ ನೀವು ಬರೆದು ಕಳಿಸಬೇಕು, ಆ ಮಾತು ಬೇರೆ. ಇಲ್ಲದಿದ್ದರೆ ನೀವು ಇಲ್ಲಿ ಜೇಲಿನಲ್ಲಿ ಕುಳಿತಿದ್ದೀರಿ. ನೀವು ಬರೆಯುವ ಅವಶ್ಯಕತೆಯೇನು?"

ಬಾಪೂ: "ಇದು ಹೇಗೆ? · · · ರ ಕೃತಿಗಳಿಗೆ · · · ಲ್ಲಿ ಒಳ್ಳೇ ಶ್ರೇಷ್ಠ ಸ್ಥಾನವಿದೆ. ಲೇಖಕರಲ್ಲಿ ಇವರಿಗೆ ಮೊದಲನೆ ಎರಡನೆ ಸ್ಥಾನ ಕೊಡುತ್ತಾರೆ."

ವಲ್ಲಭಭಾಯಿ ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಹೇಳತೊಡಗಿದರು: "ಕೊಡುತ್ತಿರಬಹುದು."

ಬಾಪೂ: "ಬಹುದು ಏಕೆ? ಇದ್ದಾರೆ."

ವಲ್ಲಭಭಾಯಿ: "ಈಗ ಗೊತ್ತಾಯಿತು, ಗೊತ್ತಾಯಿತು. ಇಂಥ ಹೇಡಿ ಮನುಷ್ಯನಿಗೆ ಬರೆದು ಅವನಿಗೆ ಏಕೆ ಪ್ರೋತ್ಸಾಹವನ್ನು ಕೊಡಬೇಕು? ದಾವಾನಲವು ದೇಶವನ್ನು ಸುಡುತ್ತಿರುವಾಗ ಅಲ್ಲಿ ಕುಳಿತಲ್ಲಿಯೆ ಕುಳಿತು ಲೇಖವನ್ನು ಬರೆಯುತ್ತಿರಬಹುದೆ?"

ಬಾಪೂ : "ಇವರ ಲೇಖಗಳಿಂದ ಸೇವೆಯಾಗುವದಿಲ್ಲವೆಂದು ನೀವು ಹೇಳುತ್ತೀರಾ ?"

ವಲ್ಲಭಭಾಯಿ : "ವಿದ್ವಾನರ ಲೇಖಗಳಿಂದ ಸ್ವಲ್ಪಕೂಡ ಸೇವೆಯಾಗುವದಿಲ್ಲ. ವಿದ್ವಾನರು ಓದು ಬರೆಯುವ ಚಟ ಹೆಚ್ಚುತ್ತಾರೆ. ಹೀಗೆ ಮಾಡಿ ಮತ್ತಿಷ್ಟು ಹಾನಿ ಮಾಡುತ್ತಾರೆ. ಜನರನ್ನು ಓದು ಬರೆಯುವ ಮೋಹದಲ್ಲಿ ಕೆಡವಿ ಕೆಲಸಕ್ಕೆ ಬಾರದವರನ್ನಾಗಿ ಮಾಡುತ್ತಾರೆ. ಕೆಲಸಕ್ಕೆ ಬಾರದವರನ್ನಾಗಿ ಮಾಡುವ ವಿದ್ಯೆ ಮತ್ತು ಲೇಖಗಳ ಪ್ರಯೋಜನವೇನು ?"

ಬಾಪೂ : "ಏನು? ನಿಜವಾಗಿ · · · ರ ಲೇಖಗಳ ಬಗ್ಗೆ ಹೀಗೆ ಹೇಳಬಹುದೆ? ನಾನು ಅವರು ಬರೆದ · · · ರ ಜೀವನ ಚರಿತ್ರೆಯನ್ನು ಓದಿಲ್ಲ. ಆದರೆ ಈ ಜೀವನ ಚರಿತ್ರೆಯು ಮನುಷ್ಯನನ್ನು ಕೆಲಸಕ್ಕೆ ಬಾರದವನನ್ನಾಗಿ ಮಾಡುವದೆ?"

ವಲ್ಲಭಭಾಯಿ : "ಜನರು ಇವರು ಬರೆದ ಎರಡನೆಯವರ ಚರಿತ್ರೆಗಳನ್ನು ಓದುವರೊ ಅಥವಾ ಇವರ ಸ್ವಂತ ಚರಿತ್ರೆಯನ್ನು ನೋಡುವರೊ ?"

ಬಾಪೂ : "ಇವರ ಚರಿತ್ರೆಯಾದರೂ ಏನು ಕೆಟ್ಟದಿದೆ ? ಇದು ನಿಮಗೆ ಗೊತ್ತಿರಬಹುದು : ೧೯೧೬-೧೭ ನೆಯ ಇಸ್ವಿಯಲ್ಲಿ ವಿಲಿಂಗ್ಡನ್ನನು ಯುದ್ಧದ ಸಲುವಾಗಿ ಟಾವುನ್ ಹಾಲದಲ್ಲಿ ಸಭೆಯನ್ನು ಕರೆದಿದ್ದನು. ಅದರಲ್ಲಿ ಎಲ್ಲರನ್ನೂ ಯುದ್ಧಕ್ಕೆ ಸಹಾಯಮಾಡಲು ವಿನಂತಿಸಿಕೊಳ್ಳಲಾಗಿತ್ತು. ಟಿಳಕ ಪಕ್ಷದವರು ಕೆಲವೊಂದು ಕರಾರಿನ ಮೇಲೆ ಸಹಾಯ ಮಾಡಬಹುದೆಂಬ ಠರಾವನ್ನು ತರುವ ನಿಶ್ಚಯ ಮಾಡಿದ್ದರು. ಇಲ್ಲದಿದ್ದರೆ ಸಭೆಯನ್ನು ಬಿಟ್ಟುಹೋಗಬೇಕೆಂಬ ನಿರ್ಣಯ ಮಾಡಿದ್ದರು. · · · ರು ಈ ಪಕ್ಷದ ಕಡೆಗೆ ನಿಂತರು. ಎಲ್ಲರೂ ಬಹಳ ಛೀ ಹಾಕುವ ಪ್ರಯತ್ನ ಮಾಡಿದರು. ಆದರೆ ಅವರು ಸ್ಥಿರವಾಗಿ ನಿಂತರು ಮತ್ತು ಹೇಳುವದನ್ನೆಲ್ಲ ಹೇಳುವದಾದ ಮೇಲೆ ಎಲ್ಲರೂ ಸಭೆಯಿಂದ ಹೊರಟು ಹೋದರು."

ವಲ್ಲಭಭಾಯಿ : "ಓಹೊ ! ಈ ನಾಟಕವನ್ನು ಮಾಡಲಿಕ್ಕೆ ಅವರಿಗೆ ಬರುತ್ತದೆ !"

ಬಾಪೂ : "ಹಾಗಾದರೆ ನೀವು ಅವರಿಂದ ಏನನ್ನು ಅಪೇಕ್ಷಿಸುತ್ತೀರಿ ?"

ವಲ್ಲಭಭಾಯಿ : "ಸ್ವಲ್ಪಾದರೂ ತ್ಯಾಗ ಮಾಡಬೇಕೊ ಬಾರದೊ ?"

ಬಾಪೂ : "ಜೇಲಿಗೆ ಬಂದರೇ ತ್ಯಾಗವೆಂದು ತಿಳಿಯಬೇಕೇನು ?"

ವಲ್ಲಭಭಾಯಿ : "ನಾನು ಹೀಗೆ ಹೇಳುವದಿಲ್ಲ. ಆದರೆ ನನಗೆ ಅವರ ಪರಿಚಯ ಇದೆ, ನಿಮಗೆ ಇಲ್ಲ. ಆದುದರಿಂದ ಏನು ಹೇಳಲಿ ? ಆದಷ್ಟು ಕಡಿಮೆ ತ್ಯಾಗ ಮತ್ತು ಹೆಚ್ಚಿನ ಹೆಚ್ಚು ಲಾಭ ಎಂಬುದರಲ್ಲಿ ಅವರಿಗೆ ನಂಬಿಗೆ ಇದೆ."

ಬಾಪೂ : "ಹೌದು, ಇದಂತೂ ಅವರ ತತ್ವಜ್ಞಾನವಿದೆ."

ವಲ್ಲಭಭಾಯಿ: "ಇದೇ ಇರುತ್ತದೆ. ಈ ತತ್ವಜ್ಞಾನವನ್ನು ಸುಡಬೇಕು! ಜನರಿಗೆ ಎಷ್ಟೇ ಕೇಡಾಗಲಿ ತಮ್ಮಿಂದ ತೀರ ಕಡಿಮೆ ತ್ಯಾಗ ಮತ್ತು ತಮ್ಮ ಸಲುವಾಗಿ ಹೆಚ್ಚಿನ ಹೆಚ್ಚು ಲಾಭ."

ಬಾಪೂ: "ನೋಡಿರಿ, ನಾನು ಇದೆಲ್ಲವನ್ನೂ ಅವರಿಗೆ ಹೇಳುವೆನು. ಅಹುದೇ!"

ವಲ್ಲಭಭಾಯಿ: "ಅವರ ಮೋರೆಯ ಮುಂದೆ ಎಲ್ಲ ಮಾತುಗಳನ್ನು ಹೇಳಬಲ್ಲೆ ಮತ್ತು ಹೇಳಿದ್ದೇನೆ. . . . ರಲ್ಲಿ ಎಲ್ಲರೂ ಸೇರಿದ್ದರು. ಅಲ್ಲಿ ಎಲ್ಲರೂ . . . ರು ಹಿಂದೆ ಸರಿದುಕೊಳ್ಳುವವರಿದ್ದಾರೆಂದು ಹೇಳತೊಡಗಿದರು. ನಾನು ಹೇಳಿದೆ: 'ಏಕೆ ಹಿಂದೆ ಸರಿಯುವವರಿದ್ದಾರೆ? ಹಿಂದಕ್ಕೆ ಸರಿಯುವ ಅಧಿಕಾರವಾದರೂ ಏನಿದೆ? ಸಾರ್ವಜನಿಕ ಜೀವನದಲ್ಲಿ ಏಕೆ ಬಿದ್ದಿದ್ದರು? ಸಾರ್ವಜನಿಕ ಜೀವನದಲ್ಲಿ ಬೀಳುವವನು ಹಿಂದಕ್ಕೆ ಹೇಗೆ ಸರಿಯಬಲ್ಲನು?' "

ಬಾಪೂ: "ಇದರಲ್ಲಿ ಅವರ ದೋಷವೇನು? ಪಾಪ, ಅವರು ಕೆಲಸಮಾಡುತ್ತಿದ್ದರು. ಆದರೆ ಅವರ ದುರ್ದೈವದಿಂದ ನಾನು ಬಂದು ಬಿಟ್ಟೆ ಮತ್ತು ಅವರ ಆಟವು ಕೈಯಿಂದ ಹೋಗಹತ್ತಿತು. ಅವರಿಗೆ ನನ್ನ ಕೆಲಸದಲ್ಲಿ ವಿಶ್ವಾಸವಿಲ್ಲದಿದ್ದರೆ ಮತ್ತು ಅವರು ಹಿಂದಕ್ಕೆ ಸರಿದರೆ ಇದರಲ್ಲಿ ಆಶ್ಚರ್ಯವೇನು?"

ವಲ್ಲಭಭಾಯಿ: "ಒಳ್ಳೇದು ಬರೆಯಿರಿ. ನೀವಂತೂ '**सत्यमपि प्रियं वदेत्**' ಎಂಬುವವರಾಗಿದ್ದೀರಲ್ಲವೇ?"

ಬಾಪೂ: "ಮಹಾದೇವ, ಈ ವಾಕ್ಯವು ಇವರಿಗೆ ಬಂದಿದೆಯೇನು?"

ನಾನು: "ಹೌದು ಬಾಪೂ. ಇನ್ನು ನಾಳೆಯಿಂದ ಗೀತಾ ಪ್ರವೇಶಮಾಡುವರು. ಇವರು ಗೀತೆಯನ್ನು ಓದಿದ ಮೇಲೆ ನಿಮ್ಮೆದುರಿಗೆ ಒಳ್ಳೇ ಆಶ್ಚರ್ಯಕರವಾದ ಅರ್ಥಗಳನ್ನಿಡತೊಡಗುವರು. ಆಗ ನಿಮಗೆ ಇದೊಂದು ಸಂಕಟವೇ ಆಯಿತಲ್ಲ! ಎಂದು ಅನಿಸಹತ್ತುವದು." ಮಲಗುವ ಕಾಲಕ್ಕೆ ನಾನು ಕೇಳಿದೆ: "ಹಾಗಾದರೆ ನಾಳೆ ಗೀತೆಯನ್ನು ಪ್ರಾರಂಭಿಸುವಿರಲ್ಲವೆ?" ಇದರ ಬಗ್ಗೆ ಬಹಳ ಹೇಳಿದರು: '**आदौ वा यदि वा पश्चात् वा वेदं कर्म मारिष।**' ಆ ದಿವಸ ನಾನು ಸುಪರಿಂಟೆಂಡೆಂಟರನ್ನು ಟೀಕಿಸುತ್ತಿದ್ದೆ. ಇದಕ್ಕಾಗಿ ನನಗೆ ಹೇಳತೊಡಗಿದರು: **नैतत्वय्युपपद्यते!** ಮತ್ತು ಥ್ಯಾಂಕ್ಸ ಅನ್ನಲಿಕ್ಕೆ ಮೇಲಿಂದ ಮೇಲೆ **कृतार्थोऽहं** ಎಂದು ಹೇಳುತ್ತಾರೆ!

ಪತ್ರಗಳ ಬಗ್ಗೆ ಸರಕಾರದ ಉತ್ತರ ಬಂದ ಸುದ್ದಿ ಅನಾಯಾಸವಾಗಿ ಹತ್ತಿತು. ಬಾಪೂ ಇಲ್ಲಿಂದ ಟಪಾಲಿಗೆ ಹೋದ ಪತ್ರಗಳ ಸಲುವಾಗಿ ಕೇಳಿದರು. ಸುಪರಿಂಟೆಂಡೆಂಟರು ಹೇಳಿದರು: "ಪತ್ರಗಳ ಬಗ್ಗೆ ಚಿಂತೆ

೩-೮-'೩೨ ಮಾಡಬೇಡಿರಿ." ಬಾಪೂ ಕೇಳಿದರು: "ಏನು, ಕಳಿಸಿದ್ದೀರಾ?"

ಅವರು ಹೇಳಿದರು : "ಹೌದು." ಬಾಪೂ : "ಎಂದು ?" "ಶನಿವಾರ ಹುಕುಂ ಬಂದಿತ್ತು, ಆದುದರಿಂದ ಆಶ್ರಮದ ಟಪಾಲು ಕೂಡ ಹೋಯಿತು." ಇಷ್ಟು ಹೇಳಿದ ಮೇಲೆ ಸ್ವತಃ ಅಂದರು : "ಇದರ ಬಗ್ಗೆ ನಾನು ಬರೆದಿದ್ದೆನು. ಅದರ ಪರಿಣಾಮವೆಂದು ಅನಿಸುತ್ತದೆ !" ಬಾಪೂ ಹೇಳಿದರು : "ಎಲೊ ಭಾಯಿ, ಹತ್ತು ದಿವಸಗಳ ಮುಂಚೆ ನಾನು ಬರೆದ ಪತ್ರ ಮರೆತು ಬಿಟ್ಟಿರಾ ?" ಇದಕ್ಕೆ ಅವರು ಅಂದರು : "ಈ ಪತ್ರವನ್ನು ನೀವು ಎರಡು ಮೂರು ದಿವಸ ಮೊದಲು ಬರೆದಿದ್ದಿರಲ್ಲವೆ ?" ಬಾಪೂ ಹೇಳಹತ್ತಿದರು : "ಇದನ್ನು ಕುರಿತು ನಾವು ಚರ್ಚೆಯನ್ನು ಮಾಡಿದ್ದೆವು ; ಅದರಲ್ಲಿ ನೀವು ತಿದ್ದುಪಡೆಯನ್ನು ಮಾಡಿಸಿದ್ದಿರಿ. ಸರಕಾರವು ಅದಕ್ಕೆ ಉತ್ತರ ಕೊಡುವದರ ಬದಲು ಹುಕುಮನ್ನೇ ಹೊರಡಿಸಿದಂತೆ ಕಾಣುತ್ತದೆ." ಅವರು ಏನೂ ಮಾತಾಡಲಿಲ್ಲ, ಯಾವ ಮನುಷ್ಯನಲ್ಲಿ ಈ ಪತ್ರ ಬರೆಯಗೊಡುವ ಸ್ವಾಭಿಮಾನ ಕೂಡ ಇದ್ದಿಲ್ಲವೊ ಅವನು ಇವತ್ತು ಸರಕಾರದ ಸೋಲಿನ ಶ್ರೇಯಸ್ಸನ್ನು ಸ್ವತಃ ತೆಗೆದುಕೊಳ್ಳಬಯಸುತ್ತಾನೆ. ಬಾಪೂರ ಉಪಕಾರವನ್ನು ಸ್ಮರಿಸಬಹುದಾಗಿತ್ತು. ಅದನ್ನೇಕೆ ಮನ್ನಿಸುತ್ತಾನೆ ?

* * *

ಡಾ. ಮೆಹತಾರ ಕಾಲಿನ ಗಾಯವು ವಿಷಕಾರಿಯಾಗಿದೆ ಮತ್ತು ಅವರ ಕಾಲನ್ನು ಕಡಿಯಬೇಕಾಯಿತು. ಇದರಿಂದ ಅವರ ಸ್ಥಿತಿಯು ಗಂಭೀರವಾಗಿದೆಯೆಂದು ತಂತಿ ಬಂದಿದೆ. ಆಪರೇಶನ್ ಚನ್ನಾಗಿ ಆಗಿದೆ, ಸ್ಥಿತಿಯು ಸಂತೋಷಜನಕವಿದೆ ಎಂದು ಬೆಳಿಗ್ಗೆ ತಂತಿ ಬಂದಿತ್ತು. ಇದಕ್ಕೆ ಬಾಪೂ ಮರಳಿ ತಂತಿ ಕಳಿಸಿದ್ದರು : "ಬಹಳ ಆನಂದವಾಯಿತು. ದಿನಾಲು ತಂತಿ ಕಳಿಸುತ್ತ ಇರ್ರಿ." ಡಾಕ್ಟರರಲ್ಲಿ ಸಹನ ಮಾಡಿಕೊಳ್ಳುವ ಶಕ್ತಿ ಇದೆ ಎಂಬ ಮಾತು ನಡೆದಿರುವಷ್ಟರಲ್ಲಿಯೆ ಎರಡನೆಯ ತಂತಿ ಬಂತು— ಡಾಕ್ಟರರಿಗೆ ಬಹಳ ಜ್ವರ ಬಂದಿವೆ. ಮತ್ತೆ ತಾರು ಬಂತು— ಡಾಕ್ಟರರಿಗೆ ನೆಮೂನಿಯಾ ಆಗಿದೆ. ಪರಿಸ್ಥಿತಿಯು ಸೂಕ್ಷ್ಮವಿದೆ. ಇಷ್ಟಾದ ಮೇಲೂ ಬಾಪೂ ಹೇಳಿದರು : "ರತಿಲಾಲ ಮತ್ತು ಮಗನರ ಸುದೈವದಿಂದ ಇನ್ನೂ ಬದುಕಿದರೆ ಹೇಳಲಿಕ್ಕೆ ಬರುವದಿಲ್ಲ." ಈ ಪ್ರಕಾರ ಬಾಪೂ ಅವರ ಬಾಯಿಂದಲೂ ಮಾನವೋಚಿತ ಉದ್ಗಾರಗಳು ಹೊರಡುತ್ತಿದ್ದವು.

ಇವತ್ತು ಡಬಲ್ ರೋಟಿಯು ಕೆಟ್ಟಿತ್ತು. ಆದುದರಿಂದ ಇವತ್ತಿನ ಸಲುವಾಗಿ ಮತ್ತು ನಾಳಿನ ಸಲುವಾಗಿ ರೊಟ್ಟಿಗಳನ್ನು ಮಾಡಲಾಯಿತು. ಊಟವಾದ ಮೇಲೆ ಉಳಿದ ರೊಟ್ಟಿಗಳನ್ನು ಅಲ್ಲಿಂದ ತರದೆ ಅಲ್ಲಿಯೆ ಉಳಿದವು. ಅಡಿಗೆ ಮಾಡುವವರು ಎಲ್ಲವನ್ನೂ ತಿಂದುಬಿಟ್ಟರು. ನಾನು ಅಲ್ಲಿ ಇಟ್ಟೆನು, ಅಲ್ಲಿಂದ ತರಲಿಲ್ಲ. ಇದನ್ನು ಬಾಪೂ ನನ್ನ ಅಲಕ್ಷ್ಯವೆಂದು ತಿಳಿದರು. "ನೀನಂತೂ ಕವಿ ! ಆದುದರಿಂದ ಧ್ಯಾನವು

ಮತ್ತೆಲ್ಲಿಯಾದರೂ ಇರಬಹುದು" ಎಂದು ಅಂದರು. ನಾನು ಹೇಳಿದೆ: "ಅವರ ಭಾಗ್ಯದ್ದಿರಬಹುದೆಂದು ಅವರು ತಿಂದರು. ಆದರೆ ನಾನು ಅಜಾಗರೂಕನೆಂದು ಕಲಂಕ ಹತ್ತಿದ್ದು ನನಗೆ ಚುಚ್ಚುತ್ತದೆ. ಎರಡು ದಿವಸಗಳ ರೊಟ್ಟಿಗಳು ಉಳಿದಿದ್ದವು. ಅಂದ ಮೇಲೆ ಈ ರೊಟ್ಟಿಗಳನ್ನು ಏನು ಮಾಡಬೇಕೆಂದು ನನ್ನನ್ನು ಕೇಳುವದು ಅವರ ಕರ್ತವ್ಯವಾಗಿತ್ತು."

ಇವತ್ತು ಡಾಕ್ಟರ ಮೆಹತಾರ ಮೃತ್ಯುವಿನ ತಂತಿ ಬಂತು. ನಿನ್ನೆ ರಾತ್ರಿ ೯-೪೫ ಕ್ಕೆ ಶರೀರವನ್ನು ಬಿಟ್ಟರು. ಬಾಪೂರಿಗೆ ಎಷ್ಟು ಆಘಾತವಾಯಿತೆಂಬುದರ ಕಲ್ಪನೆ ಈ ತಾರಿನಿಂದ ಆಗಬಲ್ಲದು:

೪-೮-'೩೨ "God's will be done. Consolation to you and mother. Hope you will fully carry on all noblest traditions left by father for commercial integrity, lavish hospitality and great generosity. Sardar, Mahadev join me in condolences. For me ? I feel forlorn without lifelong faithful friend. Continue keep me informed of everything. May God bless you all."

"ದೈವೇಚ್ಛೆ! ನಿನಗೂ ತಾಯಿಗೂ ಸಾಂತ್ವನ. ತಂದೆಯ ಉದಾತ್ತ ಪರಂಪರೆಗಳ ಅಂದರೆ ವ್ಯಾಪಾರದಲ್ಲಿ ಪ್ರಾಮಾಣಿಕತೆ, ಅತಿಥಿಗಳ ಸತ್ಕಾರದಲ್ಲಿ ಉದಾರತೆ ಮತ್ತು ದಾನಶೀಲ ಸ್ವಭಾವ, ಇವೆಲ್ಲವುಗಳ ರಕ್ಷಣೆ ಮಾಡುವದು. ಸರದಾರರು ಮತ್ತು ಮಹಾದೇವನು ದುಃಖದಲ್ಲಿ ನನ್ನ ಸಂಗಡ ಭಾಗವಹಿಸಿದ್ದಾರೆ. ನನ್ನದನ್ನಂತೂ ಏನು ಹೇಳಲಿ? ಇಡೀ ಆಯುಷ್ಯದ ವಿಶ್ವಾಸಿಕ ಗೆಳೆಯನ ವಿಯೋಗವು ಹೃದಯದಲ್ಲಿ ಅಳುಕುತ್ತಿದೆ. ನನಗೆ ಎಲ್ಲ ಸ್ಥಿತಿಯನ್ನೂ ತಿಳಿಸುತ್ತಿರು. ದೇವರು ನಿಮ್ಮೆಲ್ಲರ ಕಲ್ಯಾಣ ಮಾಡಲಿ."

ಪಾಪ, ಎರಡು ತಿಂಗಳು ಪೂರ್ವದಲ್ಲಿ ಅವರು ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಳ್ಳಲಿಕ್ಕೆ ಅಪ್ಪಣೆ ಕೇಳಿದ್ದರು. ನವ್ಹಂಬರದಲ್ಲಿ ಅವರಿಗೆ ಬಾಪೂರಿಂದ ಅಪ್ಪಣೆ ದೊರೆಯುವ ಆಶೆಯಿತ್ತು. ಮಣಿಲಾಲ ರೇವಾಶಂಕರ ಜಗಜೀವನರಿಗೆ ಪತ್ರ ಬರೆದರು: "ಸುಂದರ ಭವನವು ಇನ್ನು ಹಾಳಾಗುವ ಭಯ ಉಂಟಾಗಿದೆ. ನಿಮ್ಮೆಲ್ಲ-ರಿಗೂ ಡಾಕ್ಟರರ ವಿಯೋಗವು ಅಳುಕೇ ಅಳುಕುವದು. ಆದರೆ ನನ್ನ ಸ್ಥಿತಿಯು ವಿಚಿತ್ರವಿದೆ. ಡಾಕ್ಟರರಿಗಿಂತಲೂ ಹೆಚ್ಚಿನ ಮಿತ್ರರು ಈ ಜಗತ್ತಿನಲ್ಲಿ ಬೇರೆ ಯಾರೂ ಇದ್ದಿಲ್ಲ. ನನ್ನ ಮಟ್ಟಿಗಂತೂ ಅವರು ಜೀವಂತರಿದ್ದಾರೆ. ಆದರೆ ನಾನು ಇಲ್ಲಿ ಕುಳಿತು ಅವರ ಭವನವನ್ನು ಅವಿಚ್ಛಿನ್ನವಾಗಿ ಇಡುವದರಲ್ಲಿ ಬಹುತರ ಯಾವ ಭಾಗವನ್ನೂ ತೆಗೆದುಕೊಳ್ಳಲಾರನೆಂಬ ಮಾತು ನನ್ನನ್ನು ಕಟಿಯುತ್ತಿದೆ. ನಿಮ್ಮಿಂದ ಮಾಡಬಹು-

ದಾದುದನ್ನು ಮಾಡಿರಿ. ಡಾಕ್ಟರರ ಹೆಸರನ್ನು ಅಮರವಾಗಿಡುವ ಕೆಲಸದಲ್ಲಿ ನೀವು ಎಷ್ಟರವರೆಗೆ ಭಾಗತೆಗೆದುಕೊಳ್ಳಬಲ್ಲಿರೆಂಬುದನ್ನು ಬರೆಯಿರಿ."

ನಾನಾಲಾಲ ಮೆಹತಾರಿಗೆ: "ಡಾಕ್ಟರರು ಹೊರಟು ಹೋದದ್ದರಿಂದ ನನ್ನ ಸ್ಥಿತಿಯು ನಿಮ್ಮೆಲ್ಲರಿಗಿಂತಲೂ ಕೆಟ್ಟದೆ. ನಾನು ಯಾರನ್ನು ಎಲ್ಲಕ್ಕೂ ಹಳೆಯ ಸಂಗಡಿಗ ಅಥವಾ ಮಿತ್ರನೆಂದು ಹೇಳುತ್ತೇನೆ ಅವನು ಹೊರಟು ಹೋಗಬೇಕು ಮತ್ತು ನಾನು ಪಂಜರದಲ್ಲಿ ಬಂಧಿತನಾಗಿದ್ದರಿಂದ ಆವನ ಹಿಂದೆ ಏನನ್ನೂ ಮಾಡಲಿಕ್ಕೆ ಶಕ್ತನಾಗಬಾರದು ಎಂಬುದು ನನ್ನನ್ನು ಚುಚ್ಚುತ್ತದೆ. ಇದರಲ್ಲಿಯೂ ದೇವರ ರಹಸ್ಯವಿದೆ, ಕೃಪೆಯೂ ಇದೆ. ಡಾಕ್ಟರರ ಭವನವನ್ನು ವ್ಯವಸ್ಥಿತವಾಗಿ (ಇದ್ದಕ್ಕಿದ್ದಂತೆ) ಇಡಲಿಕ್ಕೆ ನಿಮ್ಮ ಶಕ್ತಿ ಎಷ್ಟರಮಟ್ಟಿಗಿದೆಯೆಂಬುದು ನನಗೆ ಗೊತ್ತಿಲ್ಲ. ಇದ್ದಷ್ಟನ್ನು ಉಪಯೋಗಮಾಡಿರಿ. ಡಾಕ್ಟರರ ಹೆಸರು ನಿಷ್ಕಲಂಕವಾಗಿ ಉಳಿಯಬೇಕು ಮತ್ತು ಅವರ ಗುಣಗಳು ಅವರ ಮಕ್ಕಳಲ್ಲಿ ನಿರಂತರವಾಗಿ ಹೇಗೆ ಉಳಿಯುವವು ಎಂಬುದನ್ನು ನೋಡಬೇಕಾಗಿದೆ."

ಹಿರಿಯ ಮಗ ಛಗನಲಾಲನಿಗೆ: "ಡಾಕ್ಟರರ ಸ್ವರ್ಗವಾಸದ ನಿಜವಾದ ಕಲ್ಪನೆಯು ನಿನ್ನ ನಡತೆಯಲ್ಲಿ ಪ್ರಕಟವಾಗಬೇಕು. ಡಾಕ್ಟರರ ಎಷ್ಟೋ ಸದ್ಗುಣಗಳೇ ಅವರ ಮೃತ್ಯುಪತ್ರವು. ಅದಕ್ಕೆ ನೀನು ವಾರಸದಾರನು. ನಿನ್ನ ತಮ್ಮಂದಿರಿಗೆ ಸ್ವಲ್ಪ ಕೂಡ ಕಷ್ಟವಾಗಬಾರದು. . . . ಜೀವನದ ಜೊತೆಗಾರನು ಹೋದದ್ದರಿಂದ ನಾನು ಊನನ ಸ್ಥಿತಿಯಲ್ಲಿ (ಜೇಲಿನಲ್ಲಿ) ಇದ್ದೇನೆಂಬ ಮಾತು ನನಗೆ ಚುಚ್ಚುತ್ತದೆ. ಇಲ್ಲದಿದ್ದರೆ ನಾನು ಈ ಕಾಲಕ್ಕೆ ನಿನ್ನ ಹತ್ತಿರವೇ ಇರುತ್ತಿದ್ದೆನು. ಬಹುತರ ಡಾಕ್ಟರರ ಕೊನೆಯ ಉಸಿರು ನನ್ನ ತೊಡೆಯ ಮೇಲೆ ಹೋಗುತ್ತಿತ್ತು. ಆದರೆ ದೇವರು ನಾವು ವಿಚಾರಮಾಡಿದ್ದೆಲ್ಲವನ್ನೂ ಆಗಗೊಡುವದಿಲ್ಲ. ಆದುದರಿಂದ ನಾನು ಟಪಾಲಿನ ಮುಖಾಂತರ ಮಾಡಬಹುದಾದಷ್ಟನ್ನು ಮಾತ್ರ ಮಾಡುವೆನು."

ಪೋಲಾಕರಿಗೆ:

"Dr. Mehta is no more. I have lost a lifelong faithful friend. But for me he lives more intensely by his death than before, for I treasure his many virtues now more than ever. That treasure becomes a sacred trust. Here is a letter for Maganlal. I expect you to do all you can to make him a worthy son of his father. I have advised him not to worry but continue his studies. Broken down though Dr. M. had become of late, I expect he had preserved his original circumspection to make suitable financial arrangements for Maganlal's studies. Maganlal will know. I

feel I am not by his people's side at the present moment. But not my will, let His be done, now and for ever."

"ಡಾ. ಮೆಹತಾ ಹೊರಟು ಹೋದರು. ನಾನು ನನ್ನ ಇಡೀ ಜೀವನದ ವಿಶ್ವಾಸಿಕ ಮಿತ್ರನನ್ನು ಕಳೆದುಕೊಂಡೆನು. ಹಾಗೆ ನೋಡಿದರೆ ನನ್ನ ಸಲುವಾಗಿ ಅವರು ಜೀವಂತರಿರುವಾಗಿನಕಿಂತಲೂ ಸತ್ತಮೇಲೆ ಹೆಚ್ಚು ಜೀವಂತರಿದ್ದಾರೆ. ಯಾಕಂದರೆ ನಾನು ಅವರ ಎಲ್ಲ ಉತ್ತಮ ಗುಣಗಳನ್ನು ಹೆಚ್ಚು ನೆನೆಸಿಕೊಳ್ಳುತ್ತೇನೆ. ಈ ಸ್ಮರಣವು ಒಂದು ಪವಿತ್ರವಾದ ಇಡಿಗಂಟಾಗಿದೆ. ಮಗನಲಾಲನಿಗೆ ಬರೆದ ಪತ್ರವನ್ನು ಇದರ ಜೊತೆಗೆ ಕಳಿಸುತ್ತೇನೆ. ತಂದೆಯಂತಾಗಲಿಕ್ಕೆ ನೀವು ಅವನಿಗೆ ಎಲ್ಲ ಸಹಾಯವನ್ನು ಮಾಡಿರಿ. ಚಿಂತೆ ಮಾಡದಿರುವದಕ್ಕೂ ಅಭ್ಯಾಸವನ್ನು ಮುಂದುವರಿಸುವದಕ್ಕೂ ನಾನು ಅವನಿಗೆ ಸಲಹೆಯನ್ನು ಕೊಟ್ಟೇ ಇದ್ದೇನೆ. ಎಷ್ಟೋ ಸಮಯದಿಂದ ಡಾ. ಮೆಹತಾ ಶರೀರದಿಂದ ಜರ್ಜರಿತರಾಗಿದ್ದರು. ಆದರೂ ಪ್ರಾರಂಭದಲ್ಲಿ ಅವರಲ್ಲಿದ್ದ ವ್ಯವಹಾರದಕ್ಷತೆಯು ಇದ್ದಕ್ಕಿದ್ದಂತೆಯೇ ಉಳಿದಿತ್ತು. ಆದುದರಿಂದ ಅವರು ಮಗನಲಾಲನ ಶಿಕ್ಷಣದ ಸಲುವಾಗಿ ಹಣದ ವ್ಯವಸ್ಥೆಯನ್ನು ಮಾಡಿಯೇ ಇರಬಹುದು. ಮಗನಲಾಲನಿಗೆ ಗೊತ್ತಿರಬಹುದು. ಈ ಸಮಯದಲ್ಲಿ ನಾನು ಆ ಜನರ ಮಧ್ಯದಲ್ಲಿ ಇರದುದಕ್ಕೆ ದುಃಖವಾಗುತ್ತದೆ. ಆದರೆ ಇಂದು ಮತ್ತು ಎಂದೆಂದಿಗೂ ನನ್ನ ಇಚ್ಛೆಯಲ್ಲ ಆತನ ಇಚ್ಛೆಯೇ ಈಡೇರಲಿ."

ಇವತ್ತು ಮನೆಯಿಂದ ಪತ್ರ ಬಂತು. ಅದರಲ್ಲಿ ಹಪ್ತೆಕೊಟ್ಟ ವರ್ಣನೆಯನ್ನು ಮಾಡಲಾಗಿದೆ. ತಿಳಿದು ನಿಶ್ಚಿಂತನಾದೆನು. ನಿಜವಾಗಿಯೂ ಸಿಟ್ಟು ಬಂತು, ದುಃಖವೂ ಆಯಿತು. ಮಗನಭಾಯಿಯಲ್ಲಿಂದ ಆಕಳು, ಎಮ್ಮೆ, ಗುದ್ದಲಿ, ಸಲಿಕೆ ಮುಂತಾದ ಎಲ್ಲ ಸಾಮಾನುಗಳನ್ನೂ ಜಪ್ತಮಾಡಿದರು. ಮನೆಯಿಂದ ಪುಸ್ತಕ, ಕಪಾಟು ಮುಂತಾದವುಗಳನ್ನು ತೆಗೆದುಕೊಂಡು ಹೋದರು. ಇಚ್ಛಾ ಮತ್ತು ಮಗನಭಾಯಿ ಇಬ್ಬರನ್ನೂ ಇಡೀ ದಿವಸ ತಂಬೂದಲ್ಲಿ ಕೂಡಿಸಿದರು ಮತ್ತು ಬೈದರು! ಇದನ್ನು ನೋಡುವದಾಗಲಿಲ್ಲ, ಆದುದರಿಂದ ಊರೊಳಗಿನ ಯಾರೊ ಒಬ್ಬರು ರೂಪಾಯಿಗಳನ್ನು ಜಮೆ ಮಾಡಿಸಿದರು. ಇಚ್ಛಾ ಬಹಳ ಗಾಬರಿಯಾಗಿದ್ದಾಳೆಂದು ಹೇಳುತ್ತಾರೆ. ಅವಶ್ಯವಾಗಿ ಗಾಬರಿಯಾಗಿರಬಹುದು, ಯಾಕಂದರೆ ಇಂಥ ಮಾತಿನ ಅನುಭವವು ಅವಳಿಗಿಲ್ಲ. ಜನರಿಗಾಗುವ ದುಃಖದಲ್ಲಿ ಈ ಪ್ರಕಾರ ಸಕ್ರಿಯ ಭಾಗ ತೆಗೆದುಕೊಂಡರೆಂಬುದನ್ನು ಕೇಳಿ ನನಗೆ ಒಳ್ಳೆಯದೆನಿಸಿತು.

ಬಾಪೂ ಹೇಳತೊಡಗಿದರು : "ಕೋತಾವಾಲನು ಜಹಾಂಗೀರನಿಗಿಂತ ಏನು ಕಡಿಮೆಯಿದ್ದಾನೆ. ?" ನಾನು : "ಹೆಚ್ಚಿದ್ದಾನೆ. ಅವನು ಅಶಿಕ್ಷಿತನೂ ಮೂರ್ಖನೂ ಇದ್ದನು. ಆದರೆ ಇವನು ಕಲಿತವನೆಂದು ಹೇಳಿಸಿಕೊಳ್ಳುತ್ತಾನೆ."

ರಾತ್ರಿ ಮಲಗುವ ಕಾಲಕ್ಕೆ ಬಾಪೂ ಹೇಳಹತ್ತಿದರು: "ಮನಸ್ಸಿನ ಮೇಲೆ ಬುದ್ಧಿಯ ಪರಿಣಾಮವಾಗದಷ್ಟು ಜ್ಞಾನವು ಕೂಡ ಪರಿಪೂರ್ಣವಿರುವದು ಅವಶ್ಯವಿದೆ. ಡಾಕ್ಟರರಿಗೆ ಜೀವಿಸುವದಿದ್ದಿಲ್ಲ. ಆ ಶರೀರವು ನಾಶವಾಗಲಿಕ್ಕೆ ಯೋಗ್ಯವಾಗಿತ್ತು ಮತ್ತು ಅದರ ನಾಶವಾಯಿತು. ಆದರೂ ಇಷ್ಟೊಂದು ಅಸ್ವಸ್ಥತೆಯು ಏತಕ್ಕಾಗಿ?" ನಾನು ಹೇಳಿದೆ: "ನಮ್ಮ ಪ್ರಿಯಜನರ ಅಥವಾ ವರುಷಾನುವರುಷ ನಿಕಟ ಸಂಬಂಧದಲ್ಲಿ ಕಳೆದಂಥವರ ಸಾವಿನ ಸುದ್ದಿಯನ್ನು ಕೇಳಿ ಅವರ ಸ್ಮರಣವು ಮೇಲಿಂದ ಮೇಲೆ ಆಗ ಹತ್ತಿದರೆ ಇದರಲ್ಲಿ ಅಸ್ವಾಭಾವಿಕವೇನಿದೆ?" ಬಾಪೂ ಹೇಳಿದರು: "ಸ್ಮರಣವಾಗಲಿ ಆದರೆ ದುಃಖವೇಕಾಗಬೇಕು? ಸಾವು ಮತ್ತು ಮದುವೆ ಇವುಗಳಲ್ಲಿ ವ್ಯತ್ಯಾಸವೇಕಾಗಬೇಕು? ಮದುವೆಯ ಪ್ರಸಂಗವನ್ನು ನೆನಪುಮಾಡಿಕೊಂಡು ಆನಂದವೇ ಆನಂದವಾಗುತ್ತಿದೆ. ಅದೇ ಪ್ರಕಾರ ಮೃತ್ಯುವಿನಿಂದಾಗುವ ಸ್ಮರಣಗಳಿಂದ ಆನಂದವೇಕಾಗಬಾರದು? ಮಗನಲಾಲ ಸತ್ತಾಗಿನಕಿಂತಲೂ ನಾನು ಸ್ವಲ್ಪ ಹೆಚ್ಚೇ ಅಸ್ವಸ್ಥನಾಗಿದ್ದೇನೆ. ಕಾರಣವಿಷ್ಟೆ, ನಾನು ಹೊರಗಿರುತ್ತಿದ್ದರೆ ಈ ಪರಿವಾರದ ಕಾಳಜಿಯನ್ನು ಚನ್ನಾಗಿ ತೆಗೆದುಕೊಳ್ಳುತ್ತಿದ್ದೆ. ಆದರೆ ಇದು ಕೂಡ ತಪ್ಪೇ ಸರಿ. ಈ ಅಪಂಗಸ್ಥಿತಿಯು ಒಳ್ಳೆಯದೇಕಾಗಬಾರದು?" ಡಾಕ್ಟರರ ಉದಾತ್ತಗುಣಗಳನ್ನು ಜ್ಞಾಪಿಸಿಕೊಂಡು ಅವರಿಗೆ ತರ್ಪಣಕೊಟ್ಟರು.

ಐಸ್ಥರ ಮೆನನ್ನಳು ಹಿಂದುಸ್ತಾನದ ಬಗ್ಗೆ ಅನೇಕ ಭಾಷಣಗಳನ್ನು ಮಾಡುತ್ತಿದ್ದಾಳೆ ಮತ್ತು ಒಳ್ಳೆಯ ಪರಿಣಾಮವನ್ನು ಉಂಟುಮಾಡುತ್ತಿದ್ದಾಳೆ. ಒಂದು ಉದ್ದವಾದ ಪತ್ರದಲ್ಲಿ ಬಾಪೂ, ಕಾಗಾವಾ ಮತ್ತು ಎಲ್ಬರ್ಟ ಶ್ವಾಈತ್ಸರರ ವಿಷಯವಾಗಿ ಬರೆದು ಬಾಪೂರನ್ನು ಕೇಳಿದ್ದಳು: "ಜಗತ್ತಿನಲ್ಲಿ ಬಂಧುಭಾವದ ಭಾವನೆಯ ಪ್ರಚಾರಕ್ಕಾಗಿ ಇಂಥ ಸಮರ್ಥ ಪುರುಷರಿದ್ದಾಗ್ಯೂ ಪ್ರಚಾರವೇಕಾಗುವದಿಲ್ಲ?" ಅವಳಿಗೆ ಬಾಪೂ ಬರೆದರು:

"Brotherhood is just now only a distant aspiration. To me it is a taste of true spirituality. All our prayers, fasting and observances are empty things so long as we do not feel a live kinship with all life. But we have not even arrived at that intellectual belief, let alone a heart realization. We are still selective. A selective brotherhood is selfish partnership. Brotherhood requires no consideration or response. If it did, we could not love those whom we consider as vile men and women. In the midst of strife and jealousy, it is a most difficult performance. And yet true religion demands nothing less from

us. Therefore each one of us has to endeavour to realize this truth for ourselves irrespective of what others do."

" ಬಂಧುಭಾವವು ಇನ್ನೂ ದೂರದ ಕನಸು. ಇದು ನಿಜವಾದ ಆಧ್ಯಾತ್ಮಿಕತೆಯ ಒರೆಗಲ್ಲೆಂದು ತಿಳಿಯುತ್ತೇನೆ. ಜೀವ-ಮಾತ್ರರ ಸಂಗಡ ಐಕ್ಯತೆಯ ಭಾವನೆಯು ಬಾರದವರೆಗೆ ಪ್ರಾರ್ಥನೆ, ಉಪವಾಸ, ಜಪತಪ ಎಲ್ಲವೂ ಹುರುಳಿಲ್ಲದ ಮಾತುಗಳು. ಆದರೆ ಇದುವರೆಗೆ ಈ ವಸ್ತುವನ್ನು ನಾವು ಬುದ್ಧಿಯಿಂದಲೂ ಮಾನ್ಯಮಾಡಿಲ್ಲ, ಅಂದ ಮೇಲೆ ಹೃದಯದ ಸಾಕ್ಷಾತ್ಕಾರದ ಮಾತಂತೂ ದೂರೇ ಉಳಿಯಿತು. ಇನ್ನೂ ನಾವು ಒಳಿತು, ಕೆಡಕುಗಳನ್ನು ಆರಿಸುತ್ತೇವೆ. ಒಳ್ಳೆಯ ಜನರು ತಮ್ಮೊಳಗೇ ಬಂಧುಭಾವವನ್ನು ಬೆಳೆಸಿದರೆ ಇದು ಸ್ವಾರ್ಥಿಗಳ ಮಂಡಳವಾಯಿತು. ಬಂಧುಭಾವವು ಯಾವದೇ ಪ್ರಕಾರದ ಲೆಕ್ಕವನ್ನು ಹಾಕುವದಿಲ್ಲ. ತಿರುಗಿ ದೊರೆಯಬೇಕೆಂಬ ಇಚ್ಛೆ-ಯನ್ನೂ ಮಾಡುವದಿಲ್ಲ. ನಾವು ಹೀಗೆ ಭೇದಭಾವ ಮಾಡತೊಡಗಿದರೆ ನಾವು ದುಷ್ಟ ಜನರೆಂದು ತಿಳಿಯುವ ಸ್ತ್ರೀ ಪುರುಷರ ಸಂಗಡ ಪ್ರೇಮಭಾವವನ್ನು ಇಡಲಾರೆವು. ಈಗಿನ ಕಲಹ ಮತ್ತು ರಾಗದ್ವೇಷಗಳ ಮಧ್ಯದಲ್ಲಿ ಹೀಗೆ ಮಾಡುವದು ಬಹಳ ಕಠಿಣ ವಿದೆ. ನಿಜವಾದ ಧರ್ಮವು ನಮ್ಮಿಂದ ಇದನ್ನೇ ಬೇಡುತ್ತದೆ. ಆದುದರಿಂದ ನಮ್ಮೊಳಗಿನ ಪ್ರತಿಯೊಬ್ಬರೂ ಎರಡನೆಯವನು ಏನು ಮಾಡುತ್ತಾನೆಂಬುದನ್ನು ನೋಡದೆ, ಈ ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು. "

ಬಾಪೂರವರು ಇವತ್ತು ಜಮನಾದಾಸ ಮತ್ತು ಬ್ರೆಲ್ವಿ ಅವರಿಗೂ (ಸರಕಾರದಿಂದ ಪಡೆದ ಒಪ್ಪಿಗೆಯಿಂದ) ಮತ್ತು ರಾಮದಾಸ ಹಾಗೂ ಹರ-ಗೋವಿಂದರಿಗೂ ಭೆಟ್ಟಿಯಾದರು. ಮೂರು ಜನರು ಮಾತ್ರ

೫-೮-'೩೨ ಭೆಟ್ಟಿಯಾಗಬಹುದಿತ್ತು. ಆದುದರಿಂದ ರಾಮದಾಸರು ತಮ್ಮ ಸ್ವಭಾವಕ್ಕನುಸರಿಸಿ ಹೇಳಿದರು : " ಹರಗೋವಿಂದ, ನೀವು ಹೋಗಿರಿ. ನಾನು ಮುಂದಿನ ಸಾರೆ ಹೋಗುವೆ. " ಮತ್ತು ಬಾಪೂರ ಹೆಸರಿನಿಂದ ಪಾಟಿಯ ಮೇಲೆ ಪತ್ರ ಬರೆದರು. ಬಾಪೂ ಸುಪರಿಂಟೆಂಡೆಂಟರಿಗೆ ಹೇಳಿದರು : " ರಾಮದಾಸನು ನಿರಾಶನಾಗಿ ತಿರುಗಿ ಹೋಗುವನು. ನೀವು ಅವನಿಗೆ ನನ್ನನ್ನು ಭೆಟ್ಟಿ ಯಾಗಗೊಡಬೇಡಿರಿ, ಆದರೆ ಅವನಿಗೆ ನನ್ನನ್ನು ನೋಡಲು ಕೂಡ ಕೊಡುವದಿಲ್ಲ-ವೇನು? ಅವನು ಕೆಳಗೆ ನಿಲ್ಲಲಿ, ನಾನು ಹೋಗುವಾಗ ನನ್ನನ್ನು ಅವನು ನೋಡಲಿ. ಹೀಗೆ ಮಾಡುವದರಿಂದ ಕಾಯ್ದೆಯ ಉಲ್ಲಂಘನೆಯಾಗುವದಿಲ್ಲ. " ರಾಮದಾಸರನ್ನು ಕರೆದರು. ಅವರು ನಮಸ್ಕಾರಮಾಡಿ ಹೋಗಹತ್ತಿದರು. ಸುಪರಿಂಟೆಂಡೆಂಟರ ಮೇಲೆ ಪರಿಣಾಮವಾಯಿತು ಮತ್ತು ಹೇಳಿದರು : " ಇಲ್ಲ, ಇಲ್ಲ. ರಾಮದಾಸರು ಹೋಗುವ ಆವಶ್ಯಕತೆಯಿಲ್ಲ. ಕೂಡಿರಿ. " ಇದು ರಾಮದಾಸರ ತ್ಯಾಗದ ಪರಿಣಾಮ-

ವೆಂದೇ ನಾನು ಹೇಳುವೆ. ಇದು ಸುಪರಿಂಟೆಂಡೆಂಟರ ಒಳ್ಳೆಯತನದ ಅಥವಾ ರಾಮದಾಸರ ಕರುಣ ಸಂದೇಶಕ್ಕಾಗಿ ಬಾಪೂ ಆಗ್ರಹಪೂರ್ವಕವಾಗಿ ಮಾಡಿಕೊಂಡ ಬಿನ್ನಹದ ಪ್ರಭಾವವೆಂದು ಹೇಳಲಿಕ್ಕಾಗುವದಿಲ್ಲ. ಆದರೆ ರಾಮದಾಸರ ಶುದ್ಧ ತ್ಯಾಗದ ಫಲವೆಂದು ಅವಶ್ಯ ಹೇಳಬಹುದು.

ಹರಗೋವಿಂದ ಪಂಡ್ಯಾರು ಕೇಳಿದರು : " ನಾನು ಹೊರಗೆ ಹೋಗಿ ಏನು ಮಾಡಬೇಕು ? ಜಾಮಸಾಹೇಬರ ವಿರುದ್ಧ ಹೋರಾಡಬೇಕೊ ಅಥವಾ ಸಂಸ್ಥಾನದಲ್ಲಿಯೇ ಇರಬೇಕೆಂಬ ಸರಕಾರದ ಆಜ್ಞೆಯನ್ನು ಮುರಿದು ತಿರುಗಿ ಜೇಲಿಗೆ ಬರಬೇಕೊ ? " ಬಾಪೂ ಹೇಳಿದರು : " ಈ ಬಗ್ಗೆ ನಾನು ಅಭಿಪ್ರಾಯ ಕೊಡಲಾರೆ. ನನಗೆ ಹೊರಗಿನ ಪರಿಸ್ಥಿತಿಯ ಕಲ್ಪನೆ ಇರಲಾರದು. ಒಂದು ವೇಳೆ ಇದ್ದರೂ ನಾನು ಅಭಿಪ್ರಾಯವನ್ನು ಕೊಡಲಾರೆ. " ಇದಾದ ನಂತರ ಹರಗೋವಿಂದ ಪಂಡ್ಯಾರು ಸಿದ್ಧಾಂತದ ಪ್ರಶ್ನೆಯನ್ನು ಎತ್ತಿದರು : " ದೇಶೀ ರಾಜ್ಯಗಳ ವಿರುದ್ಧ ಸತ್ಯಾಗ್ರಹವು ಆಗುವದೇ ಇಲ್ಲವೆಂದು ನೀವಂತೂ ಹೇಳಿದ್ದೀರಲ್ಲವೆ ? " ಬಾಪೂ ಹೇಳಹತ್ತಿದರು : " ಇದೇನು ತ್ರಿಕಾಲಾಬಾಧಿತ ಸಿದ್ಧಾಂತವೇನು ? ಸತ್ಯ ಮತ್ತು ಅಹಿಂಸೆಗಳನ್ನು ಬಿಟ್ಟು ತ್ರಿಕಾಲಾಬಾಧಿತವೆಂದು ನಾನು ಒಂದು ವಸ್ತುವನ್ನೂ ಹೇಳಿಲ್ಲ. ಇಷ್ಟೇ ಅಲ್ಲ, ನಾನು ಇದಕ್ಕೂ ಮುಂದೆ ಹೋಗಿ ಸತ್ಯವೊಂದೇ ತ್ರಿಕಾಲಾಬಾಧಿತ ವಸ್ತುವೆಂದು ಹೇಳುತ್ತೇನೆ. ಯಾಕಂದರೆ ಯಾವದೇ ಸ್ಥಿತಿಯಲ್ಲಿ ಸತ್ಯ ಮತ್ತು ಅಹಿಂಸೆಗಳು ಒಂದೇ ಆಗಿದ್ದರೂ ಇವೆರಡರಲ್ಲಿ ಒಂದನ್ನು ಆರಿಸುವ ಪ್ರಸಂಗ ಬಂದರೆ ನಾನು ಅಹಿಂಸೆಗೆ ತಿಲಾಂಜಲಿಯನ್ನು ಕೊಟ್ಟು ಸತ್ಯವನ್ನು ಕಾಯ್ದುಕೊಳ್ಳಲಿಕ್ಕೆ ಹಿಂದೆ ಮುಂದೆ ನೋಡುವದಿಲ್ಲ. ನನ್ನ ದೃಷ್ಟಿಯಿಂದ ಸತ್ಯವೇ ಎಲ್ಲಕ್ಕೂ ದೊಡ್ಡ ವಸ್ತುವಾಗಿದೆ. "

ಜಮನಾದಾಸ ಮತ್ತು ಬ್ರೆಲ್ವಿಯವರ ಸಂಗಡ ಸಾಕಷ್ಟು ವಿನೋದ ಪೂರ್ಣ ಮಾತುಗಳಾದವು. ಈ ಜನರಿಗೆ ಆಫೀಸರರು ಚನ್ನಾಗಿ ಕಲಿಸಿಟ್ಟಿದ್ದರು. ಏನನ್ನು ಕೇಳಲೂ ಇವರಿಗೆ ಧೈರ್ಯವಾಗುತ್ತಿದ್ದಿಲ್ಲ. ಬಾಪೂ ಅವರನ್ನು ಒತ್ತಾಯ ಮಾಡಿ ಕೇಳಿದರು : " ನಿಮಗೆ ಯಾವ ತಕರಾರನ್ನೂ ಮಾಡುವದಿರುವದಿಲ್ಲವೆ ? ನಾಸಿಕದಲ್ಲಿಯ ಸ್ಥಿತಿಯು ಇಲ್ಲಿಯಗಿಂತ ಒಳ್ಳೆಯದಿತ್ತೊ ಕೆಟ್ಟದಿತ್ತೊ ? " ಮುಂತಾಗಿ. ಕೊನೆಗೆ ಸುಪರಿಂಟೆಂಡೆಂಟರೇ ಹೇಳಿದರು : " ಇವರದೊಂದು ತಕರಾರು ಇದೆ. ಅದೆಂದರೆ ರವಿವಾರ ದಿವಸ ಇವರನ್ನು ಎರಡು ಗಂಟೆಗೆ ಬಂದು ಮಾಡಲಾಗುತ್ತಿದೆ. ಅದು ಅನುಕೂಲವಾಗುವದಿಲ್ಲ. ನನ್ನ ತೊಂದರೆಯೆಂದರೆ ಆಫೀಸರರಿಗೆ ಆ ದಿವಸ ಬಹಳ ಹೊತ್ತಿನವರೆಗೆ ನಿಲ್ಲಬೇಕಾಗುತ್ತದೆ. " ಇದಕ್ಕೆ ಬಾಪೂ ಹೇಳಿದರು : " ಇದೇನೂ ಸಮರ್ಥನೆಯಲ್ಲ. ಆಫೀಸರರು ಕೈದಿಗಳ ಸಲುವಾಗಿ ಇರುವರೊ ? ಕೈದಿಗಳು ಆಫೀಸರರ ಸಲುವಾಗಿಯೊ ? " ಸುಪರಿಂಟೆಂಡಂಟರಿಗೆ ಆಘಾತವಾಯಿತು. ಅವರು

ಅಂದರು: “ ಇದು ಹೇಗೆ ? ಆಫೀಸರರು ಕೈದಿಗಳ ಸಲುವಾಗಿ ಹೇಗೆ ? ಆಫೀಸರರು ಕೈದಿಗಳನ್ನು ಜೇಲಿನಲ್ಲಿಡುತ್ತಾರಲ್ಲವೆ ? ” ಬಾಪೂ ಹೇಳಿದರು : “ ಹಾಗಾದರೆ ಆಫೀಸರರನ್ನು ಕೈದಿಗಳಿಗೆ ಶಿಕ್ಷೆ ಕೊಡುವದಕ್ಕಾಗಿಯೆ ಇಟ್ಟಿರುವರೇನು ? ನಿಜವಾಗಿ ಕೇಳಿದರೆ ಆಫೀಸರರು ಕೈದಿಗಳ ಸೇವೆಗಾಗಿಯೇ ಇರುತ್ತಾರೆ. ಕೈದಿಗಳ ಆರೋಗ್ಯವನ್ನು ಕಾಯುವದಕ್ಕೂ ಕಾಯ್ದೆಯ ಕಕ್ಷೆಯಲ್ಲಿ ಬರುವಷ್ಟು ಅನುಕೂಲತೆಗಳನ್ನು ಅವರಿಗೆ ಒದಗಿಸುವದಕ್ಕೂ ಆಫೀಸರರು ಇರುತ್ತಾರೆ ” ಸುಪರಿಂಟೆಂಡೆಂಟರು ಕೇಳುತ್ತಿದ್ದರು.

ಇವತ್ತು ಟಪಾಲಿನಲ್ಲಿ ಎಷ್ಟೋ ಒಳ್ಳೆಯ ಪತ್ರಗಳಿದ್ದವು. ಅದರಲ್ಲಿ ಎರಡು ವಿಶೇಷವಾಗಿದ್ದವು. ಇಟಲಿಯ ಸೀನಾನಾ ಆಶ್ರಮದ ಮಿಸ್ ಟರ್ಟನ್ನಳು ತನ್ನ ಪತ್ರದ ಸಂಗಡ ಬೆರಿಯರನ ಲೇಖವನ್ನೂ ಅಲ್ಲಿಯ ಆಶ್ರಮದ ಮೂರು ಹೂವುಗಳನ್ನೂ ಕಳಿಸಿದ್ದಳು. ‘ ಇಂದು ೭॥ ಗಂಟೆಗೆ ನಾವು ನಿಮ್ಮ ಸಂಗಡ ಇರುವೆವೆ’ಂಬುದನ್ನು ಹೇಳುವದಕ್ಕಾಗಿ ಶುಕ್ರವಾರ ದಿವಸ ಬರೆದಿದ್ದರು. ಪತ್ರವು ಕೂಡ ನಮಗೆ ಶುಕ್ರವಾರವೇ ಸಿಕ್ಕಿತು. ಎರಡನೇ ಪತ್ರವು ೮೫ ವರುಷ ಮುಪ್ಪಿನ ಬಾಬೂ ಹರದಯಾಳ ನಾಗರದಿತ್ತು :

“ I am very glad to learn from your letter to Krishnadas that you, Sardarji and Desaiji are all in good health. I was quite well in jail and am all right now. In the jail I spent the days in spinning and reading. I learnt Takli spinning there. God's favours were profusely showered on me. I gained there both spiritually and physically. My spiritual gain could not be measured but my physical gain was found to be 16 lbs, in weight. Please convey my compliments and my best regards to Sardarji and Desaiji.”

“ಕೃಷ್ಣದಾಸರಿಗೆ ಬರೆದ ಪತ್ರದಿಂದ ನೀವು, ಸರದಾರರು ಮತ್ತು ದೇಸಾಯರು ಆರೋಗ್ಯದಿಂದ ಇದ್ದೀರೆಂದು ಕೇಳಿ ಸಂತೋಷವಾಯಿತು. ಜೇಲಿನಲ್ಲಿ ನಾನು ಬಹಳ ಚನ್ನಾಗಿದ್ದೆನು ಮತ್ತು ಇಲ್ಲಿ ಕೂಡ ಇದ್ದೇನೆ. ಜೇಲಿನಲ್ಲಿ ನಾನು ನನ್ನ ಸಮಯವನ್ನು ನೂಲುವದರಲ್ಲಿಯೂ ಓದುವದರಲ್ಲಿಯೂ ಕಳೆಯುತ್ತಿದ್ದೆನು. ನಾನು ಅಲ್ಲಿಯೇ ತಕಲಿಯನ್ನು ನೂಲಲಿಕ್ಕೆ ಕಲಿತೆನು. ನನ್ನ ಮೇಲೆ ದೇವರ ಕೃಪೆ ಸಾಕಷ್ಟು ಇತ್ತು. ಯಾಕಂದರೆ ನನಗೆ ಅಲ್ಲಿ ಆಧ್ಯಾತ್ಮಿಕ ಮತ್ತು ಶಾರೀರಿಕ ಎರಡೂ ಲಾಭಗಳಾದವು. ಆಧ್ಯಾತ್ಮಿಕ ಲಾಭವನ್ನು ಅಳೆಯುವದು ಸಾಧ್ಯವಿಲ್ಲ. ಆದರೆ ಶಾರೀರಿಕ ಲಾಭವೆಂದರೆ ನನ್ನ ತೂಕವು ೧೬ ಪೌಂಡು ಹೆಚ್ಚಾಯಿತು. ಸರದಾರರಿಗೆ ಮತ್ತು ದೇಸಾಯಿಯವರಿಗೆ ನನ್ನ ವಂದನೆಗಳನ್ನು ಹೇಳಿರಿ.”

ಅವರಿಗೆ ಬಾಪೂ ಬರೆದರು :

" Dear H. D. Babu,

It was a perfect delight to all of us to hear from you. You make me jealous when you say that at your ripe age you learnt Takli spinning. It was a great joy to learn that you had gained 16 lbs. in weight. May you have many more years of service. We often talk about you and your wonderful vitality. With regards from us all."

" ಪ್ರಿಯ ಹರದಯಾಲ ಬಾಬು,

ನಿಮ್ಮ ಪತ್ರ ನೋಡಿ ನಮ್ಮೆಲ್ಲರಿಗೂ ಬಹಳ ಆನಂದವಾಯಿತು. ಇಷ್ಟು ಹಣ್ಣಾದ ವಯಸ್ಸಿನಲ್ಲಿ ನೀವು ತಕಲೀ ನೂಲಲು ಕಲಿತದ್ದನ್ನು ಕೇಳಿ ನಿಮ್ಮ ಬಗ್ಗೆ ಈರ್ಷೆಯುಂಟಾಗುತ್ತದೆ. ನಿಮ್ಮ ತೂಕವು ೧೬ ಪೌಂಡು ಹೆಚ್ಚಾದದ್ದು ಸಹ ಸಂತೋಷದ ಸಂಗತಿಯೇ. ಸೇವೆಯನ್ನು ಮಾಡುವದಕ್ಕಾಗಿ ನೀವು ಅನೇಕ ವರ್ಷ ಬಾಳಿರಿ ! ನಿಮ್ಮ ವಿಷಯಕ್ಕೂ ನಿಮ್ಮ ಅಸಾಧಾರಣ ಆರೋಗ್ಯದ ವಿಷಯಕ್ಕೂ ನಾವು ಅನೇಕ ಸಲ ಮಾತಾಡುತ್ತಿರುತ್ತೇವೆ. ನಮ್ಮೆಲ್ಲರ ನಮಸ್ಕಾರ. "

ಇಬ್ಬರು ಕರ್ನಾಟಕದ ತರುಣರು ೨೦-೨೫ ದಿವಸಗಳಿಂದ ಉಪವಾಸ ಮಾಡುತ್ತ ಬಂದಿದ್ದರು. ೧೫ ದಿವಸ ಉಪವಾಸವಾದ ಮೇಲೆ ಅವರಿಗೆ ಒತ್ತಾಯದಿಂದ ಹಾಲನ್ನು ಕುಡಿಸುತ್ತಿದ್ದರು. ಈ ಜನರು ಚಾತುರ್ಮಾಸ

೬-೮-'೩೨ ದಲ್ಲಿ ಬ್ರಾಹ್ಮಣರ ಕೈಯಿಂದ ಮಾಡಿದ್ದನ್ನೇ ಊಟಮಾಡುವ-

ದಕ್ಕಾಗಿ ಉಪವಾಸ ಮಾಡುತ್ತಾರೆಂದು ಸುದ್ದಿ ಬಂತು. ಇವರ ಬೇಡಿಕೆಯು ಮೂರ್ಖತನದ್ದಾಗಿತ್ತೆಂದು ಹೇಳಿ ನಾವು ಮಾತಾಡಿದ್ದಿಲ್ಲ. ಇಂದು ಬಾಪೂ ಸುಪರಿಂಟೆಂಡೆಂಟರ ಸಂಗಡ ಈ ಮಾತನ್ನು ಚರ್ಚೆಗೆ ತೆಗೆದರು. ಸುಪರಿಂ-ಟೆಂಡೆಂಟರನ್ನು ಕೇಳಿದರು : "ನೀವು ಯಾರಿಗಾದರೂ ಈ ಜನರನ್ನು ಭೆಟ್ಟಿಯಾಗಲಿಕ್ಕೆ ಕೊಡುವಿರೊ ಇಲ್ಲವೊ ? ಈ ಜನರಿಗೆ ಅವರ ತಪ್ಪನ್ನು ತಿಳಿಸಿ ಹೇಳಿ ಅವರ ಉಪವಾಸವನ್ನು ಬಿಡಿಸಲಾಗುವದು." ಅವರು ಹೇಳತೊಡಗಿದರು : " ಈ ರೀತಿ ಕಾರ್ಯ್ಯದ ಭಂಗವಾಗುವದು. ಹೀಗೆ ಉಪವಾಸ ಮಾಡಿದ ಕೂಡಲೇ ಅವರಿಗೆ ತಿಳಿಸಿ ಹೇಳಲಿಕ್ಕೆ ಮನುಷ್ಯನನ್ನು ಕಳಿಸಿದರೆ ಹೇಗೆ ನಡೆದೀತು ! ಇದಕ್ಕೆ ಕೊನೆ ಎಲ್ಲಿ ? " ಬಾಪೂ ಹೇಳಿದರು : " ನೀವು ಅವರಿಗೆ ಬ್ರಾಹ್ಮಣರ ಕೈಯಿಂದ ಮಾಡಿದ ಅಡಿಗೆಯನ್ನು ಕೊಡಿರೆಂದು ನಾನು ಹೇಳುವದಿಲ್ಲ. ಅವರಿಗೆ ತಿಳಿಸಿಹೇಳಲಿಕ್ಕೆ ಯಾರಿ-ಗಾದರೂ ಹೋಗಗೊಡಿರೆಂದು ನಾನು ಹೇಳುತ್ತೇನೆ. " ಆಗ ಬಾಪೂ ಸ್ವಲ್ಪ ಕಠೋರ

ರಾಗಿ ಮಾತಾಡಿದರು : "ಆಫೀಸರರನೆಂದಲ್ಲ, ಒಬ್ಬ ಮನುಷ್ಯನೆಂದು ತಿಳಿದು ನೀವು ಇದನ್ನು ವಿಚಾರಮಾಡಬೇಕು. ಆಫೀಸರರ ದೃಷ್ಟಿಯಿಂದ ಈ ಜನರು ನಿಮ್ಮ ವಶದಲ್ಲಿರಲಿಕ್ಕೇಬೇಕೆಂದು ನಿಮಗೆ ಅನಿಸುತ್ತಿರಬಹುದು. ಆದರೆ ಮಾನವತೆಯ ದೃಷ್ಟಿಯಿಂದ ಈ ಮನುಷ್ಯರಲ್ಲಿಯ ಮನುಷ್ಯತ್ವವನ್ನು ಹೋಗಗೊಡಬಾರದೆಂಬ ಕಲ್ಪನೆಯಿರಬೇಕು." ಆವರು ಹೇಳಿದರು : "ಇಲ್ಲ, ಹೀಗೆ ನಾನು ಅವರಿಗೆ ಎರಡನೆಯವರಿಗೆ ಭೆಟ್ಟಿಯಾಗಲಿಕ್ಕೆ ಕೊಟ್ಟರೆ, ಉಳಿದವರು ತಮ್ಮ ಮಿತ್ರರನ್ನು ಭೆಟ್ಟಿಯಾಗಲಿಕ್ಕೆ ಉಪವಾಸ ಮಾಡತೊಡಗುವರು. ಈ ಜನರ ಉಪವಾಸವಾದರೂ ಏನು ? ಇವರಂತೂ ಕದ್ದು ಮುಚ್ಚಿ ತಿನ್ನುತ್ತಿರಬಹುದೆಂದು ನನಗೆನಿಸುತ್ತಿದೆ. ಇವರು ಉಪವಾಸ ಮಾಡುತ್ತಿರುವರೆಂದು ಅನಿಸುವದೇ ಇಲ್ಲ." ಬಾಪೂ ಹೇಳಿದರು : "ಹಾಗಾದರೆ ನೀವು ಅವರನ್ನು ಮತ್ತಿಷ್ಟು ಮನುಷ್ಯತ್ವಹೀನರನ್ನಾಗಿ ಮಾಡಿದ್ದೀರಿ. ಈ ಜನರು ಹೀಗೇ ಮಾಡುತ್ತಿರಬೇಕೆಂದು ನೀವು ಬಯಸುತ್ತೀರಾ ?" ಸುಪರಿಂಟೆಂಡೆಂಟರು ಪಾಪ, ಬೇಸತ್ತು ಹೇಳಿದರು : "ನಾನು ಸೋತೆನು. ವಾದ-ವಿವಾದದಲ್ಲಿ ನಿಮ್ಮನ್ನು ಗೆದೆಯುವವರಾರು ? ಒಳ್ಳೆಯದು, ನಿಮಗೆ ಭೆಟ್ಟಿಯಾಗುವ ದಿದ್ದರೆ ಭೆಟ್ಟಿಯಾಗಿರಿ." ಮಧ್ಯಾಹ್ನಕ್ಕೆ ಭೆಟ್ಟಿಯಾದರು. ಈ ಜನರು ಜೇಲಿನ ನಿಯಮದಂತೆ ದೊರೆತ ಕೈದಿಗಳ ಅಧಿಕಾರಕ್ಕನುಸಾರವಾಗಿ ಬ್ರಾಹ್ಮಣರ ಆಹಾರ ಬೇಡುತ್ತಾರೆಂದು ಗೊತ್ತಾಯಿತು. ಯಾರೂ ತಮ್ಮ ಜಾತಿಯನ್ನು ಬಿಡುವ ಆವಶ್ಯಕತೆಯಿಲ್ಲ, ಬ್ರಾಹ್ಮಣರಿಗೆ ಬ್ರಾಹ್ಮಣರ ಕೈಯಿಂದಲೇ ಮಾಡಿದ ಅಡಿಗೆ ಸಿಗುವದು ಅಥವಾ ಅವರಿಗೆ ಮಾಡಿಕೊಳ್ಳಲಿಕ್ಕೆ ಕೊಡಲಾಗುವದು ಎಂದು ಕಾಯ್ದೆ ಪುಸ್ತಕ-ದಲ್ಲಿ ಬರೆದಿದೆ. ಈ ನಿಯಮದ ಪ್ರಕಾರ ಕೈದಿಗಳಿಗೆ ಈ ಹಕ್ಕು ಇದೆಯೆಂದು ವಿಜಾಪುರದಲ್ಲಿ ಮುನಶಿಯವರು ಅವರಿಗೆ ಹೇಳಿದ್ದರು. ಇಬ್ಬರು ಸತ್ಯಾಗ್ರಹಿಗಳಲ್ಲಿ ಒಬ್ಬನು ನಾಲ್ಕನೆಯ ಸಲ ಜೇಲಿಗೆ ಬಂದಿದ್ದಾನೆ. ಮೊದಲಿಗೆ ಅವನು ಬ್ರಾಹ್ಮಣೇತರರು ಮಾಡಿದ್ದನ್ನು ಊಟಮಾಡಿದ್ದಾನೆ. ಆದರೆ ತನ್ನ ಅಣ್ಣನು ಸತ್ತನು. ತಾನು ಎಲ್ಲ ಆಚಾರಗಳನ್ನು ಪಾಲಿಸುವೆನೆಂದೂ ಬ್ರಾಹ್ಮಣರ ಕೈಯಿಂದಲೇ ಊಟ ಮಾಡು-ತ್ತೇನೆಂದೂ ವಚನ ಕೊಟ್ಟಿದ್ದೇನೆಂದು ಹೇಳುತ್ತಾನೆ. ಎರಡನೆಯ ಸತ್ಯಾಗ್ರಹಿಯಾದ ಹುಡುಗನಂತೂ ಇಲ್ಲಿ ಜೇಲಿನಲ್ಲಿ ಬಂದ ಮೇಲೆ ಕೂಡ ಬ್ರಾಹ್ಮಣೇತರರು ಮಾಡಿದ್ದನ್ನು ಊಟ ಮಾಡಿದ್ದಾನೆ. ಆದರೆ ಈಗ ಇವನೂ ಅವನ ಜೊತೆಗೇ ಸೇರಿದ್ದಾನೆ. ಈ ಸತ್ಯಾಗ್ರಹಿಯ ಹೇಳಿಕೆಯೆಂದರೆ ಸತ್ಯಾಗ್ರಹದಲ್ಲಿ ಸೇರಿದರೆ ಕೈದಿಯ ಹಕ್ಕನ್ನೂ ಕಳೆದುಕೊಳ್ಳಬೇಕೆ ? ಇಂತಹ ಹಟ ಹಿಡಿಯಬಾರದೆಂದು ಬಾಪೂ ಈ ಜನರಿಗೆ ತಿಳಿಸಿಹೇಳಿದರು. ಜೇಲಿನಲ್ಲಿ ಬಂದು ಇಂಥ ಜಗಳಗಳೇಕೆ ? ಮುಂತಾಗಿ. ಆದರೆ ಅವರು ಸರಕಾರದ ನಿಯಮಕ್ಕನುಸಾರವಾಗಿ ತಮ್ಮ ಅಧಿಕಾರದ ಮಾತನ್ನು

ಹೇಳಿದ ಮೇಲೆ ಬಾಪೂ ಹೇಳಿದರು : " ಒಳ್ಳೆಯದು, ಈ ಪ್ರಕಾರದ ನಿಯಮವಿದೆ ಎಂದು ನನಗೆ ವಿಶ್ವಾಸವಾದರೆ ನಾನು ನಿಮಗೆ ಒತ್ತಾಯ ಮಾಡುವದಿಲ್ಲ. ಆದರೆ ಈ ಪ್ರಕಾರದ ನಿಯಮವಿರದಿದ್ದರೆ ನಾನು ಹೇಳಿದಂತೆ ನೀವು ಕೇಳ ಲಿಕ್ಕೆಬೇಕಾಗುವದು. ನೀವು ಜೇಲಿನ ನಿಯಮವನ್ನಾದರೂ ಮಾನ್ಯಮಾಡಬೇಕು ಅಥವಾ ಸತ್ಯಾಗ್ರಹದ ನಿಯಮಗಳನ್ನಾದರೂ ಮಾನ್ಯಮಾಡಬೇಕು." " ಹೀಗೆ ನಿಯಮವಿಲ್ಲೆಂದೂ ಸುಪರಿಂಟೆಂಡೆಂಟರಿಗೆ ಬ್ರಾಹ್ಮಣರ ಅಡಿಗೆಯನ್ನು ಕೊಡಲಿಕ್ಕೆ ಸಂಪೂರ್ಣ ಅಧಿಕಾರವಿಲ್ಲೆಂದೂ ನಿಮಗೆ ವಿಶ್ವಾಸವಾದರೆ ನಾವು ಉಪವಾಸವನ್ನು ಬಿಡುವೆವು." ಎಂದು ಅವರು ಕೊನೆಗೆ ವಚನ ಕೊಟ್ಟರು. ಇಷ್ಟಾದ ಮೇಲೆ ಬಾಪೂ ಜೇಲಿನ ನಿಯಮಾವಲಿಯನ್ನು ನೋಡಲಿಕ್ಕೆ ಬೇಡಿದರು. ಡಾ. ಮೆಹತಾ ಹೇಳತೊಡಗಿದರು : " ಯಾವ ಕೈದಿಗೂ ನಿಯಮಾವಲಿಯನ್ನು ಕೊಡಕೂಡದೆಂಬ ಪರಿಪತ್ರವಿದೆ. " ಆಗ ಬಾಪೂ ಹೇಳಿದರು : " ಇದಕ್ಕಾಗಿ ನಾನು ಹೋರಾಡ-ಬೇಕಾಗುವದು. " ಸಾಯಂಕಾಲ ಭಂಡಾರಿಯವರು ಬಾಪೂರನ್ನು ಭೆಟ್ಟಿಯಾಗಲಿಕ್ಕೆ ಬಂದರು. ಈ ಭೆಟ್ಟಿಯು ಒಳ್ಳೇ ಉಲ್ಲೇಖನೀಯವಿತ್ತು. ಭಂಡಾರಿಯವರ ಮುಖವು ಖಿನ್ನವಾಗಿತ್ತು. ' ಇದೆಲ್ಲ ಏನು ನಡೆದಿದೆ, ನಾನು ಎಲ್ಲಿಯ ವರೆಗೆ ಬಾಗಬೇಕಾಗುವದು ? ' ಎಂಬ ವಿಚಾರದಿಂದ ಒಳಗಿಂದೊಳಗೆ ಸಿಟ್ಟಿಗೆದ್ದಿದ್ದರು. " ಈ ಜನರು ಮೊದಲು ಅಬ್ರಾಹ್ಮಣರ ಕೈಯಿಂದ ಊಟ ಮಾಡಿದ್ದಾರೆ, ಅಂದಮೇಲೆ ಈಗೇಕೆ ಮಾಡುವದಿಲ್ಲ? ಎಂಬುದೇ ನನ್ನ ಪ್ರಶ್ನೆ. ಆದುದರಿಂದ ಇದರಲ್ಲಿ ಶುದ್ಧ ಭಾವನೆಯಿಂದ ಹೋರಾಡುವ ಪ್ರಶ್ನೆಯೇ ಉಳಿಯುವದಿಲ್ಲ. " ಬಾಪೂ ಹೇಳಿದರು : " ಅದು ಏನೇ ಇರಲಿ ಇವತ್ತು ಅವರಿಗೆ ಬ್ರಾಹ್ಮಣರಂತೆ ಇರುವ ಇಚ್ಛೆಯಾಗಿದ್ದರೆ ಮತ್ತು ನಿಯಮಕ್ಕನುಸಾರವಾಗಿ ಅವರಿಗೆ ಕೊಡಲಿಕ್ಕೆ ನಿಮಗೆ ಬರುತ್ತಿದ್ದರೆ ಕೊಡುವದು ನಿಮ್ಮ ಕರ್ತವ್ಯವಾಗಿದೆ. " ಅವರು ಹೇಳಿದರು : " ಇಲ್ಲ, ನನಗೆ ಕೊಡುವ ಅಧಿಕಾರವಿಲ್ಲ. ನಾನು ಆಯ್. ಜಿ. ಪಿ. ಯವರನ್ನು ಕೇಳಬೇಕಾಗುವದು. ಅವರ ಮಂಜೂರಿ ಇಲ್ಲದೆ ಎಂದೂ ಕೊಡಲಿಕ್ಕೆ ಬರುವದಿಲ್ಲ." ಬಾಪೂ ಹೇಳಿದರು : "ಆದರೆ ನಿಯಮದ ಪ್ರಕಾರ ನಿಮಗೇ ಅಧಿಕಾರವಿದೆಯೆಂದು ಈ ತರುಣರು ಹೇಳುತ್ತಾರೆ." ವಲ್ಲಭಭಾಯಿಯವರೂ ಹೇಳಿದರು : "ಅಧಿಕಾರವಿದೆ. ಯಾಕಂದರೆ ಈ ಪ್ರಕಾರ ಬ್ರಾಹ್ಮಣರ ಅಡಿಗೆ ಕೊಡುವದನ್ನು ನಾನು ನೋಡಿದ್ದೇನೆ." ಅಮೇಲೆ ನಿಯಮಾವಲಿ ನೋಡುವ ವಿಷಯಕ್ಕೂ ಕೈದಿಗಳ ಅಧಿಕಾರದ ವಿಷ ಯಕ್ಕೂ ಚರ್ಚೆ ನಡೆಯಿತು. ಅವರು ಹೇಳಿದರು : " ಈ ಅಧಿಕಾರ ಇಲ್ಲವೇ ಇಲ್ಲ. " ಬಾಪೂ ಹೇಳಿದರು : " ಹಾಗಾದರೆ ನಮಗೆ ತೋರಿಸಬೇಕೊ ಬಾರದೊ ಎಂಬುದನ್ನು ಡೋಯಿಲ್ಲರಿಗೆ ಕೇಳಿರಿ. " ಅವರು ಹೇಳಿದರು : " ನಾನು ನಿಮಗೆ ತೋರಿಸಬೇಕು.

ಆಗ ನೀವು ನಿಮ್ಮ ತಿಳಿವಳಿಕೆಯ ಪ್ರಕಾರ ನನಗೆ ಅಧಿಕಾರವಿದೆ ಅನ್ನಬೇಕು, ನಾನು ನನಗೆ ಅಧಿಕಾರವಿಲ್ಲವೆಂದು ಅನ್ನಬೇಕು. ಆಗ ಏನಾಗುವದು?" "ಆಗ ಡೋಯಿಲ್ಲರನ್ನು ಕೇಳಬೇಕು." "ಅಂದರೆ ನಾನು ನಿಮಗೆ ಜೇಲ ಮ್ಯಾನ್ಯುಅಲ್ ತೋರಿಸಿದೆನೆಂದು ಅಲ್ಲಿ ಗೊತ್ತಾಗುವದಲ್ಲವೆ?" ಬಾಪೂ ಹೇಳಿದರು: "ಇದನ್ನು ತೋರಿಸದೆ ಹಾಗೇ ಕೇಳಿರಿ. ನಾನು ಈ ಸಂಧಿಯ ಉಪಯೋಗ ಮಾಡಿಕೊಂಡು ಮ್ಯಾನ್ಯುಅಲ್ ದೊರಕಿಸಲಿಕ್ಕೆ ಹೋರಾಡುವದಿಲ್ಲ." ಸುಪರಿಂಟೆಂಡೆಂಟರು ಹೇಳಿದರು: "ಒಳ್ಳೆಯದು, ನಾನು ನಾಳೆ ನಿಯಮಾವಲಿಯನ್ನು ನೋಡಿ ಆಮೇಲೆ ನಿಮಗೆ ತೋರಿಸುವೆ." ನಾನು ಹೇಳಿದೆ. "ಆದರೆ ಹೀಗೇಕೆ? ಈಗಲೇ ತರಿಸಿರಿ. ಅಂದರೆ ಕೂಡಲೇ ನಿರ್ಣಯವಾಗಿಬಿಡಲಿ." ಬಾಪೂ ಹೇಳಿದರು: "ಹೋಗಿರಿ, ನೀವು ಮಾಡುವ ಅರ್ಥವೂ ಆಗುತ್ತದೆಂದು ನನಗೆ ಸ್ವಲ್ಪ ಕೂಡ ಅನಿಸಿದರೆ ನಾನು ಅದನ್ನು ಒಪ್ಪಿಕೊಳ್ಳುವೆನೆಂದು ನಿಮಗೆ ಮಾತು ಕೊಡುತ್ತೇನೆ. ಆದರೆ ಎರಡು ಅರ್ಥಗಳಿಗೆ ಸ್ಥಾನವೇ ಇಲ್ಲ, ನನ್ನ ಅರ್ಥವೇ ಸರಿಯಾಗಿದೆ ಎಂದು ಅನಿಸಿದರೆ ನೀವು ಆಯ್. ಜಿ. ಪಿ. ಗೆ ಬರೆಯಿರಿ." ಅವರು ಒಪ್ಪಿಕೊಂಡರು. ಪುಸ್ತಕವನ್ನೂ ತರಿಸಿದರು. ಕರಿಯ ಪುಸ್ತಕದೊಳಗಿಂದ ಕಲಮುಗಳನ್ನು ಓದಲಾಯಿತು. ಕಲಮಿನಲ್ಲಿ ಹೀಗಿತ್ತು: "ಯಾರದೇ ಧಾರ್ಮಿಕ ಭಾವನೆಗೆ ನೋವನ್ನುಂಟುಮಾಡಲಿಕ್ಕೆ ಪ್ರತಿಬಂಧವಿದೆ. ಬ್ರಾಹ್ಮಣನು ಬ್ರಾಹ್ಮಣನ ಕೈಯಿಂದಲೇ ಮಾಡಿದ ಅಡಿಗೆಯ ಆಗ್ರಹ ಹಿಡಿದರೆ ಅದನ್ನು ಅವನಿಗೆ ಕೊಡಬಹುದು. ಆದರೆ ಅವನು ಕೇವಲ ತೊಂದರೆ ಕೊಡುವದಕ್ಕಾಗಿ ಈ ಬೇಡಿಕೆಯನ್ನು ಮಾಡುತ್ತಿರಬಾರದು. ಬ್ರಾಹ್ಮಣ ಕೈದಿಗಳಲ್ಲಿ ಅಡಿಗೆಯವನಿರದಿದ್ದರೆ, ಅವನಿಗೆ ಸ್ವತಃ ಅಡಿಗೆ ಮಾಡಿಕೊಳ್ಳಲಿಕ್ಕೆ ಪರವಾನಿಗೆ ಇರಬೇಕು. ಆದರೆ ಜಾತಿಪಾತಿಗಳ ನೆವದಿಂದ ಮುಂದೆ ಮಾಡಿರುವ ಹಕ್ಕಿನ ವಿಷಯದಲ್ಲಿ ಸುಪರಿಂಟೆಂಡೆಂಟರಿಗೆ ಯಾವದೇ ಸಂಶಯವಿದ್ದರೆ ಅದನ್ನು ಆಯ್. ಜಿ. ಪಿ. ಯವರಿಗೆ ಕೇಳಬೇಕು ಮತ್ತು ಅವರ ಆಜ್ಞೆಯೇ ಕೊನೆಯದೆಂದು ತಿಳಿಯಲಾಗುವದು." ಬಾಪೂ ಓದಿ, ಕೂಡಲೇ ಹೇಳಿದರು: "ನಿಮ್ಮ ಅರ್ಥ ಸರಿಯಾಗಿದೆ." ಸುಪರಿಂಟೆಂಡೆಂಟರ ಆನಂದಕ್ಕೆ ಎಲ್ಲೆಯಿರಲಿಲ್ಲ. ಗಾಂಧೀಜಿಯವರಿಂದ ನೂರಕ್ಕೆ ನೂರರಷ್ಟು ಶುದ್ಧ ನ್ಯಾಯ ಸಿಗುತ್ತದೆಂಬುದೂ ಅವನಿಗೆ ಗೊತ್ತಾಯಿತು. ಹುಡುಗರನ್ನು ಕರೆಯಿಸಿದರು. ಅವರಿಗೆ ಬಾಪೂ ಹೇಳಿದರು ಮತ್ತು ಅವರು ಕೂಡಲೇ ಒಪ್ಪಿಕೊಂಡರು. ಈ ಪ್ರಕರಣವು ಸುಪರಿಂಟೆಂಡೆಂಟ ಮತ್ತು ಬಾಪೂ ಇವರ ಸಂಬಂಧವನ್ನು ಹೆಚ್ಚು ಮಧುರವಾಗಿಯೂ ತಿಳಿವಳಿಕೆಯುಳ್ಳದ್ದಾಗಿಯೂ ಮಾಡಲಿಕ್ಕೆ ಬಹಳ ಉಪಯೋಗವಾಯಿತು.

ಇವತ್ತು ಆಶ್ರಮದ ಟಪಾಲನ್ನು ಪೂರ್ತಿಗೊಳಿಸಿದರು. ಪ್ರಭುದಾಸರ

ಪತ್ರದೊಳಗಿಂದ: "ದೆವ್ವನ ಹಾಗೆ ನೀನು ಹೆಸರನ್ನು ಜಪಮಾಡಲಿಕ್ಕೆ ಹತ್ತು. ಎಲ್ಲಿಂದಲೂ ಸಹಾಯ ಸಿಗದಿದ್ದರೂ ಇದರಿಂದ ಅವಶ್ಯ ದೊರೆಯುವದು."

೭-೮-'೩೨ ಪ್ರೇಮಾಬಹೆನಳಿಗೆ: "ಅಂತರ್ನಾದವು ವರ್ಣನಾತೀತ ವಸ್ತುವಾಗಿದೆ. ಆದರೆ ಎಷ್ಟೋ ಸಾರೆ ನಮಗೆ ಒಳಗಿನಿಂದ ಒಂದು ವಿಶಿಷ್ಟ ಪ್ರೇರಣೆಯಾದಂತೆ ಅನಿಸುತ್ತದೆ. ನಾನು ಅದನ್ನು ಗುರುತಿಸಲಿಕ್ಕೆ ಕಲಿತಾಗ ಆ ಸಮಯವು ನನ್ನ ಪ್ರಾರ್ಥನಾಕಾಲವೆಂದು ಹೇಳಬಹುದು, ಅಂದರೆ ೧೯೦೬ರ ಸುಮಾರಿಗೆ. ನೀನು ಕೇಳುತ್ತೀಯಾದ್ದರಿಂದ ನೆನಪುಮಾಡಿಕೊಂಡು ಇದನ್ನು ಬರೆಯುತ್ತಿದ್ದೇನೆ. ನನಗೆ 'ಇವತ್ತು ಯಾವದೋ ಒಂದು ಹೊಸ ಅನುಭವವಾಯಿತು' ಎಂದು ಭಾಸವಾದ ಸಂಗತಿಯು ನನ್ನ ಜೀವನದಲ್ಲಿಯೇ ಇಲ್ಲ. ನಮ್ಮ ಕೂದಲುಗಳು ನಮಗೆ ಗೊತ್ತಾಗದೆ ಬೆಳೆಯುತ್ತಿರುವಂತೆ ನನ್ನ ಆಧ್ಯಾತ್ಮಿಕ ಜೀವನವೂ ಬೆಳೆದಿದೆ."

"ಹೆಸರನ್ನು ಜಪಿಸುವದರಿಂದ ಪಾಪದ ನಾಶವು ಚನ್ನಾಗಿ ಆಗುತ್ತದೆ. ಶುದ್ಧ ಭಾವನೆಯಿಂದ ಹೆಸರನ್ನು ಜಪಮಾಡುವವರಿಗೆ ಶ್ರದ್ಧೆಯು ಇದ್ದೇ ಇರುತ್ತದೆ. ಹೆಸರನ್ನು ಜಪಿಸುವದರಿಂದ ಪಾಪವು ನಿಶ್ಚಿತವಾಗಿ ತೊಲಗುವದೆಂಬ ವಿಶ್ವಾಸದಿಂದ ಅವನು ಪ್ರಾರಂಭಿಸುತ್ತಾನೆ. ಪಾಪ ತೊಲಗುವದೆಂದರೆ ಆತ್ಮಶುದ್ಧಿಯಾಗುವದು. ಶ್ರದ್ಧಾಪೂರ್ವಕವಾಗಿ ಹೆಸರನ್ನು ತೆಗೆದುಕೊಳ್ಳುವವನು ಎಂದೂ ಬೇಸರಿಯುವದಿಲ್ಲ. ಆದುದರಿಂದ ನಾಲಿಗೆಯಿಂದಾಡಿದ ಮಾತು ಕೊನೆಗೆ ಹೃದಯದಲ್ಲಿಳಿಯುತ್ತದೆ ಮತ್ತು ಅದರಿಂದ ಶುದ್ಧಿಯಾಗುತ್ತದೆ. ಈ ಅನುಭವವು ನಿರಪವಾದವಿದೆ. ಮನುಷ್ಯನು ಹೇಗೆ ವಿಚಾರಮಾಡುತ್ತಾನೆಯೊ ಹಾಗೆ ಆಗುತ್ತಾನೆಂಬ ಮಾತನ್ನು ಮಾನಸ ಶಾಸ್ತ್ರಜ್ಞರೂ ಒಪ್ಪುತ್ತಾರೆ. ರಾಮನಾಮದ ಮಾತಾದರೂ ಇದರಂತೆಯೆ. ಹೆಸರನ್ನು ಜಪಿಸುವದರ ಮೇಲೆ ನನ್ನ ಶ್ರದ್ಧೆಯು ಅಖಂಡವಾಗಿದೆ. ನಾಮ-ಜಪವನ್ನು ಶೋಧಿಸಿದವನು ಅನುಭವಜ್ಞನಾಗಿದ್ದನು. ಆ ಶೋಧವು ಬಹಳ ಮಹತ್ವಪೂರ್ಣವಾದುದೆಂದು ನನ್ನ ನಿಶ್ಚಿತವಾದ ಅಭಿಪ್ರಾಯ. ಅಶಿಕ್ಷಿತರ ಸಲುವಾಗಿಯೂ ಶುದ್ಧಿಯ ದ್ವಾರವು ತೆರೆದಿರಲಿಕ್ಕೆಬೇಕು. ಈ ಕೆಲಸವು ನಾಮಜಪದಿಂದ ಆಗುತ್ತದೆ, (ಗೀತಾ, ೯/೨೨; ೧೦/೧೦). ಜಪಮಾಲೆ ಮುಂತಾದವುಗಳು ಏಕಾಗ್ರವಾಗುವ ಮತ್ತು ಲೆಕ್ಕಮಾಡುವ ಸಾಧನಗಳಿವೆ."

"ವಿದ್ಯಾಭ್ಯಾಸವು ಸೇವೆಗಾಗಿಯೇ ಇರುತ್ತದೆ. ಅಂದರೆ ಸೇವೆಯಲ್ಲಿ ಅಖಂಡ ಆನಂದವಿರುವದರಿಂದ ವಿದ್ಯೆಯು ಆನಂದಕ್ಕಾಗಿದೆ ಎಂದು ಹೇಳಬಹುದು. ಯಾರಾದರೂ ಸೇವೆಯ ಹೊರತು ಕೇವಲ ಸಾಹಿತ್ಯವಿಲಾಸದಿಂದ ಅಖಂಡ ಆನಂದವನ್ನು ಭೋಗಿಸಿದ್ದು ಇದುವರೆಗೆ ಗೊತ್ತಿಲ್ಲ."

"ಜಗತ್ತು ಅನಾದಿ ಕಾಲದಿಂದ ಇದ್ದಕ್ಕಿದ್ದಂತೆಯೇ ನಡೆದು ಬಂದರೆ ಸುಧಾರಿಸು

ವದು ಎಂದು ?" ಈ ಪ್ರಶ್ನೆಯನ್ನು ಕೇಳುವವನಿಗೆ ಬರೆದರು : "ನಿಮ್ಮ ತಪ್ಪ ಮುಟ್ಟಿತು. ನನ್ನ ಅನುಭವವು ಹೀಗೆ ಹೇಳುತ್ತಿದೆ. : ಇಡೀ ಜಗತ್ತು ಒಂದೇ ರೀತಿಯಿಂದ ಹೇಗೆ ನಡೆದೀತು ಎಂಬುದನ್ನು ವಿಚಾರಮಾಡುವದರ ಬದಲು ನಾವು ಒಂದಾಗಿ ಹೇಗೆ ನಡೆಯಬಲ್ಲೆವು ಎಂಬುದನ್ನೇ ವಿಚಾರಮಾಡಬೇಕು. ಜಗತ್ತು ವಿರುದ್ಧ ದಿಶೆಯಿಂದ ನಡೆಯುತ್ತಿದೆಯೋ ಅಥವಾ ಸರಿಯಾದ ದಿಶೆಯಿಂದ ನಡೆಯುತ್ತಿದೆಯೋ ಎಂಬುದು ಸಹ ನಮಗೆ ಗೊತ್ತಿಲ್ಲ. ಆದರೆ ಸರಳ ರೀತಿಯಿಂದ ನಾವು ನಡೆಯಹತ್ತಿದರೆ ನಮಗೆ ಎರಡನೆಯವರೂ ಸರಳರಾಗಿಯೇ ಕಾಣಿಸುವರು ಅಥವಾ ಸರಳರನ್ನಾಗಿ ಮಾಡುವ ರೀತಿಯು ಗೊತ್ತಾಗುವದು. ಆತ್ಮವನ್ನು ಅರಿಯುವದರ ಅರ್ಥವೆಂದರೆ ಶರೀರವನ್ನು ಮರೆಯುವದು ಅಂದರೆ ಶೂನ್ಯನಾಗಿ ಬಿಡುವದು. ಶೂನ್ಯನಾದವನು ಆತ್ಮವನ್ನು ಅರಿತಿದ್ದಾನೆ."

. . . ಗೆ ಬರೆದರು : ". . . ರ ಶವವನ್ನು ನೋಡಲಿಕ್ಕೆ ಹೋದದ್ದು ಒಳ್ಳೆಯದಾಯಿತು. ಒಂದಾನೊಂದು ದಿವಸ ನಾವೆಲ್ಲರೂ ಈ ಸ್ಥಿತಿಯನ್ನು ಮುಟ್ಟುವದಿದೆ. ಅಲ್ಲಿ ಹೋಗುವ ಸಮಯ ಬಂದಾಗ ನಮಗೆ ಸಂತೋಷದಿಂದ ಈ ಮನೆಯನ್ನು ಬಿಡುವ ಇಚ್ಛೆಯಾಗಬೇಕು. ಸಾಧ್ಯವಿದ್ದಮುಟ್ಟಿಗೆ ಅದನ್ನು ಸ್ವಚ್ಛವಾಗಿಯೂ ಪವಿತ್ರವಾಗಿಯೂ ಮತ್ತು ಆರೋಗ್ಯದಿಂದಲೂ ಇಡಬೇಕು. ಆದರೆ ಹೋದಾಗ ಹೋಗಲಿ. ಇದು ನಮಗೆ ಉಪಯೋಗಿಸಲಿಕ್ಕೆ ಸಿಕ್ಕಿದೆ. ಕೊಟ್ಟವನು ತೆಗೆದುಕೊಂಡು ಹೋಗಬೇಕಾದಾಗ ಆನಂದದಿಂದ ತೆಗೆದುಕೊಂಡು ಹೋಗಲಿ. ನಾವು ಅದರ ಉಪಯೋಗವನ್ನು ಸೇವೆಗಾಗಿಯೇ ಮಾಡತಕ್ಕದ್ದಿದೆ, ನಮ್ಮ ವಿಲಾಸಕ್ಕಾಗಿ ಅಲ್ಲ."

. . . ಗೆ ಬರೆದರು : "ನಿಮ್ಮ ದುಃಖದಲ್ಲಿ ನಾನು ಸಹಭಾಗಿಯಾಗುವದಿಲ್ಲ. ನಿಮ್ಮ ಪತ್ನಿಯು ದುಃಖದಿಂದ ಮುಕ್ತಳಾಗಿದ್ದಾಳೆ. ಈರ್ಷೆಪಡಲು ಯೋಗ್ಯವಾದ ಸಮಯ ಮತ್ತು ರೀತಿಯಲ್ಲಿ ಅವಳ ಮೃತ್ಯುವಾಗಿದೆ. ನೀವು ನಿಮ್ಮನ್ನು ಅನಾಥರಾದಿರೆಂದು ಏಕೆ ತಿಳಿದುಕೊಳ್ಳುತ್ತೀರಿ. ಯಾವನ ರಕ್ಷಕನು ದೇವರಿಲ್ಲವೊ ಆವನೇ ತನಗೆ ಅನಾಥನೆಂದು ತಿಳಿದುಕೊಳ್ಳಬಲ್ಲನು. ಆದರೆ ದೇವರು ಎಲ್ಲರ ರಕ್ಷಕನಿದ್ದಾನೆ. ಅಂದರೆ ನಾವು ಘೋರ ಅಜ್ಞಾನದಲ್ಲಿರುವದರಿಂದ ನಮ್ಮನ್ನು ಅನಾಥರೆಂದು ತಿಳಿದುಕೊಳ್ಳುತ್ತೇವೆ. ನಿಮ್ಮ ಕವಚವು ಮಣಿಯೂ ಇದ್ದಿಲ್ಲ, ನಿಮ್ಮ ಪತ್ನಿಯೂ ಇದ್ದಿಲ್ಲ. ಇವೆಲ್ಲವೂ ಸುಳ್ಳು ಕವಚಗಳು. ನಿಜವಾದ ಕವಚವು ನಿಮ್ಮ ಶ್ರದ್ಧೆಯು. ಮನುಷ್ಯನ ಶರೀರದ ಅಸ್ತಿತ್ವವು ಕಾಜಿನ ಬಳೆಗಿಂತಲೂ ಬಹಳ ಕಡಿಮೆಯಿದೆ. ಕಾಜಿನ ಬಳೆಯನ್ನು ಜತನದಿಂದ ಇಟ್ಟರೆ ನೂರಾರು ವರುಷ ತಾಳಬಲ್ಲದು. ಮನುಷ್ಯನ ಶರೀರವು ಎಷ್ಟೇ ಪ್ರಯತ್ನ ಮಾಡಿದರೂ ಒಂದು ವಿಶಿಷ್ಟ ಮರ್ಯಾದೆಯನ್ನು

ಮಿೂರಲಾರದು ಮತ್ತು ಆ ಮರ್ಯಾದೆಯ ಒಳಗೇ ಬೇಕಾದಾಗ ನಷ್ಟವಾಗಬಲ್ಲದು. ಇಂಥ ವಸ್ತುವನ್ನೇನು ನಂಬುವದು ? ನೀವು ಆಶ್ರಮದ ಕೆಲಸದಲ್ಲಿ ತಲ್ಲೀನರಾಗಿರಿ. ಅತ್ತಿತ್ತಿನ ವಿಚಾರಗಳನ್ನೇ ಮಾಡಬೇಡಿರಿ. ಆರು ವರುಷದ ಮಂಗಲಾಳ ಚಿಂತೆಯ ಮಾತೇ ಬೇಡ. ನೀವು ಸ್ವತಃ ಅವಳನ್ನು ಚನ್ನಾಗಿ ಜೋಪಾನಮಾಡಿರಿ. ಶಾಂತಿ ಮತ್ತು ಜಯಕುಮಾರ ಇವರಿಗೆ ಜೋಪಾನ ಮಾಡುವದನ್ನು ಕಲಿಸಿರಿ. ನಿಮಗೆ ಬಹುತರವಾಗಿ ಗೊತ್ತಿರಲಿಕ್ಕಿಲ್ಲ. ರೂಖೀಬಹೆನ ತೀರ ಸಣ್ಣವಳಿದ್ದಳು. ಆಗಿನಿಂದ ಸಂತೋಕಳು ಜೀವಿಸಿದ್ದರೂ ಮಗನಲಾಲನ ಕೈಯಲ್ಲಿಯೆ ಜೋಪಾನವಾಗಿದ್ದಾಳೆ. ಅವಳು ಜೀವಿಸುವ ಆಶೆ ತೀರ ಕಡಿಮೆ ಇತ್ತು. ಕಷ್ಟದಿಂದ ಉಸಿರಾಡಿಸುತ್ತಿದ್ದಳು. ಮಗನಲಾಲ ಈ ಹುಡಿಗೆಯ ಮೈತೊಳೆಸುತ್ತಿದ್ದರು, ತಲೆ ಬಾಚುತ್ತಿದ್ದರು ಮತ್ತು ಹತ್ತಿರ ಕೂಡಿಸಿಕೊಂಡು ಉಣಿಸುತ್ತಿದ್ದರಲ್ಲದೆ ತನ್ನ ಉಳಿದ ಹುಡುಗರ ಕಾಳಜಿಯನ್ನೂ ತೆಗೆದುಕೊಳ್ಳುತ್ತಿದ್ದರು. ಇಷ್ಟಾದರೂ ನೌಕರಿಯಲ್ಲಿ ಎಲ್ಲರಿಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದರು. ಅತ್ಯಂತ ಸುಂದರವಾದ ಹೂದೋಟವನ್ನು ಅವರೇ ಮಾಡಿದ್ದರು. ಫಿನಿಕ್ಸದಲ್ಲಿ ಮೊದಲನೆಯ ಗುಲಾಬೀ ಹೂವು ಬಿಡುವಂತೆ ಮಾಡಿದವರೂ ಅವರೇ. ಫಿನಿಕ್ಸದ ಅತ್ಯಂತ ಬಿರುಸಾದ ಭೂಮಿಯಲ್ಲಿ ಕೂಡ ಅವರ ಗುದ್ದಲಿಯ ಪೆಟ್ಟು ಬಿದ್ದ ಕೂಡಲೇ ಭೂಮಿಯು ಆದುರಿದಂತೆ ಅನಿಸುತ್ತಿತ್ತು. ಮಗನಲಾಲರು ಮಾಡಿದ್ದನ್ನು ನೀವೆಲ್ಲರೂ ಮಾಡಬಲ್ಲಿರಿ. ಇದರಲ್ಲಿ ಎಲ್ಲಿಯೂ ಮಗನಲಾಲರ ಕಲಾಶಕ್ತಿಯ ವಿಷಯಕ್ಕಾಗಲಿ ಓದುಬರಹದ ವಿಷಯಕ್ಕಾಗಲಿ ಹೇಳಿಲ್ಲ. ಮಗನಲಾಲರಲ್ಲಿ ಆತ್ಮವಿಶ್ವಾಸವಿತ್ತು. ತಮ್ಮ ಕೆಲಸದಲ್ಲಿ ಶ್ರದ್ಧೆಯಿತ್ತು ಮತ್ತು ದೇವರು ಅವರಿಗೆ ಬಲಿಷ್ಠವಾದ ಶರೀರವನ್ನು ಕೊಟ್ಟಿದ್ದನು. ಈ ಶರೀರವು ಕೊನೆಗೆ ಆಶ್ರಮದ ಭಾರದಿಂದಲೂ ಅವರ ತಪಶ್ಚರ್ಯದಿಂದಲೂ ಬಲಹೀನವಾಗಿತ್ತು. ಮಗನಲಾಲರು ತಮ್ಮ ಚಿಕ್ಕ ಜೀವನದಲ್ಲಿ ನೂರು ವರ್ಷಗಳಷ್ಟು ಅಥವಾ ನೂರಾರು ವರ್ಷಗಳಷ್ಟು ಕೆಲಸವನ್ನು ಮಾಡಿದರೆಂದು ನಾನು ತಿಳಿಯುತ್ತೇನೆ. ಮಗನಲಾಲರ ಉದಾಹರಣೆಯನ್ನು ನಿಮ್ಮ ಮುಂದೆ ಇಟ್ಟಿರುವ ಕಾರಣವಿಷ್ಟೆ : ನಿಮಗೆ ಮಗನಲಾಲರ ಪರಿಚಯವಿದೆ ಮತ್ತು ಅವರ ಪ್ರೇಮದ ಕಾರಣದಿಂದ ನಿಮಗೂ ಆಶ್ರಮಕ್ಕೂ ಸಂಬಂಧ ಬಂತು. ಮಗನಲಾಲರನ್ನು ನೆನಸಿಕೊಂಡಾದರೂ ನೀವು ಅಸಹಾಯರಿದ್ದೀರಿ, ದಾರಿಕಾಣದವರಾಗಿದ್ದೀರಿ ಎಂಬುದನ್ನು ಮರೆಯಿರಿ. ನಿಮಗೆ ಸ್ವಾಭಾವಿಕವಾಗಿ ದೊರೆತ ಅನುಕೂಲತೆಗಳು ಈ ದೇಶದಲ್ಲಿ ಲಕ್ಷದಲ್ಲಿ ಒಬ್ಬರಿಗಾದರೂ ದೊರೆತಿಲ್ಲವೆಂದು ನನಗನಿಸುತ್ತದೆ ”

. . . ಗೆ ಬರೆದರು : “ ನಮ್ಮ ದೃಷ್ಟಿಯಿಂದ ಎಲ್ಲ ಉಪಯುಕ್ತ ಉದ್ಯೋಗಗಳೂ ಒಳ್ಳೆಯವಾಗಿರುತ್ತವೆ ಮತ್ತು ಮಾಡಲು ಯೋಗ್ಯವಾಗಿರುತ್ತವೆ. ಈ ಪ್ರಕಾರ

ಮೊಚ್ಚಿಗಾರನ ಕೆಲಸ, ಬಡಿಗನ ಕೆಲಸ, ಶೌಚಕೂಪದ ಕೆಲಸ, ಹೊಲದ ಕೆಲಸ, ನೇಕಾರಿಕೆಯ ಕೆಲಸ, ದನಕಾಯುವ ಕೆಲಸ ಅಥವಾ ಇಂಥವೇ ಬೇರೆ ಎಲ್ಲ ಕೆಲಸಗಳೂ ಒಂದೇ ಆಗಿವೆ. ಸಮಾಜಕ್ಕೆ ನಾನು ತಿಳಿಸಿಹೇಳುವದು ಸಾಧ್ಯವಾದರೆ ಎಲ್ಲ ಉದ್ಯೋಗಗಳ ಬೆಲೆಯನ್ನು—ಅವು ಕಲಿತವರವೇ ಆಗಿರಲಿ ಕಲಿಯದವರವೇ ಆಗಿರಲಿ, ಲೇಖಕನದೇ ಇರಲಿ ಭಂಗಿಯದೇ ಇರಲಿ—ಒಂದೇ ಕಟ್ಟಬೇಕು ಎಂದು ಹೇಳುತ್ತೇನೆ. ಈ ದೃಷ್ಟಿಯಿಂದ ಸಂಶೋಧನೆ ಮಾಡುವದಕ್ಕಾಗಿಯೆ ಆಶ್ರಮದಲ್ಲಿ ಇತ್ತೀಚಿಗೆ ತಾಸಿನ ಲೆಕ್ಕವನ್ನೇ ಬರೆಯಲಾಗುತ್ತಿದೆ. ಆದುದರಿಂದ ಸದ್ಯಕ್ಕೆ ನೇಯಲಿಕ್ಕೆ ಸಾಕಷ್ಟು ನೂಲು ಸಿಗದಿದ್ದರೆ ಒಕ್ಕಲತನ ಮುಂತಾದ ಬೇರೆ ಕೆಲಸಗಳನ್ನು ಮಾಡಿದರೆ ಯಾವದೇ ಪ್ರಕಾರದಿಂದ ನಿಮ್ಮ ಅವನತಿಯಾಗುತ್ತದೆಂದು ತಿಳಿಯಬೇಡಿರಿ. ”

. . . ಗೆ ಬರೆದರು : “ . . . ರ ವಿಷಯಕ್ಕೆ ಮೊದಲು ನೀವು ನಿಮ್ಮ ಮನಸ್ಸನ್ನು ಪರೀಕ್ಷಿಸಿಕೊಳ್ಳಬೇಕು. ನೀವು ಇನ್ನೂ ವಿಷಯ ಸುಖ ಭೋಗಿಸುವದಿದೆಯೆ? ಅಥವಾ ವಿಷಯ ಸುಖವನ್ನು ಭೋಗಿಸುವದಿಲ್ಲೆಂಬುದು ನಿಶ್ಚಿತವಾಗಿದ್ದರೆ, ಅದನ್ನು · · · ಗೆ ಮತ್ತು ಮಿತ್ರರಿಗೆ ಹೇಳಲಿಕ್ಕೆ ಬೇಕು. ಹೀಗಾಗುವದರಿಂದ · · · ಗೆ ಆಘಾತವಾಗಿಯೇ ತೀರುವದು, ಆದರೆ ನಿಮ್ಮ ಗಟ್ಟಿಗತನದ ಪರಿಣಾಮವು ಅವರ ಮೇಲೆ ವಿದ್ಯುತ್ತಿನಂತೆ ಬೀಳುವದು. ಗಟ್ಟಿಗತನದ ಅರ್ಥವಿಷ್ಟೆ : · · · ಳು ಹುಚ್ಚಳಾಗಲಿ ಅಥವಾ ಸಾಯಲಿ ನೀವು ಸಹಿಸಿಕೊಳ್ಳಬೇಕು. ಇದರಲ್ಲಿಯೇ ನಿಮ್ಮಿಬ್ಬರ ಕಲ್ಯಾಣವಿದೆಯೆಂಬುದನ್ನು ನೀವು ಸ್ಪಷ್ಟವಾಗಿ ತೋರಿಸಿಕೊಡಲಿಕ್ಕೆ ಬೇಕು. ಆದರೆ ನೀವು ಆ ಮಟ್ಟದವರೆಗೆ ಹೋಗದಿದ್ದರೆ · · · ಳ ಸಂಗಡ ಮಾತಾಡುವದನ್ನು ನಿಲ್ಲಿಸಿರಿ ಮತ್ತು ಜನರು ತಮ್ಮ ಹೆಂಡಂದಿರ ಸಂಗಡ ಇರುವಂತೆ ನೀವು ಮೂಕರಾಗಿ ಇರ್ರಿ. ಈ ಪ್ರಕಾರ ಇರುತ್ತಿರುವಾಗ ಸಾಧ್ಯವಾದಷ್ಟು ಸಂಯಮವನ್ನು ಪಾಲಿಸಿರಿ. ನೀವು ಹೀಗೆ ಮಾಡಿದರೆ ಯಾರಿಗೂ ನಿಮ್ಮನ್ನು ನಿಂದಿಸುವ ಅಧಿಕಾರವಿಲ್ಲ. ಎಲ್ಲರೂ ತಮ್ಮ ತಮ್ಮ ಶಕ್ತಿಗನುಸಾರವಾಗಿಯೇ ಮುಂದುವರಿಯಬಲ್ಲರು. ನಡುವಿನ ಸ್ಥಿತಿಯಲ್ಲಿಯೇ ಜೋತಾಡುತ್ತಿರುವದು ಮತ್ತು ನಮ್ಮನ್ನು, ನಮ್ಮವರನ್ನು ಮತ್ತು ಜಗತ್ತನ್ನು ವಂಚಿಸುವದು ನಿಂದಾರ್ಹವಾಗಿದೆ. ಈ ಸ್ಥಿತಿಯಿಂದ ಪಾರಾಗಿರಿ. ಆ ನಂತರ ಕ್ಷೇಮವೇ ಇದೆ. ಹೆಚ್ಚಿನ ವಿಚಾರ ಚಕ್ರದಲ್ಲಿ ಮುಳುಗಬೇಡಿರಿ. ನೀವು ವಿಚಾರದಲ್ಲಿ ಬಹಳ ವರ್ಷಗಳನ್ನು ಕಳೆದಿದ್ದೀರಿ. ಕೂಡಲೇ ಒಂದು ನಿಶ್ಚಯವನ್ನು ಮಾಡಿರಿ ಅಂದರೆ ನಿಮಗೆ ಬಹಳ ಶಾಂತಿ ದೊರೆಯುವದು. **व्यवसायात्मिका बुद्धिरेकेह कुरुनंदन** ದ ಅರ್ಥವು ಇದೇ ಇರುತ್ತದೆ. ಈ ಶ್ಲೋಕ ಮತ್ತು ಇದರ ನಂತರದ ಶ್ಲೋಕಗಳ ಬಗ್ಗೆ ವಿಚಾರಮಾಡಿದರೆ ಈ ಪತ್ರದ ಮೇಲೆ ಹೆಚ್ಚು ಬೆಳಕು ಬೀಳುವದು. ”

ಗಾಂಧೀ ಪರಿವಾರದಿಂದ ನೀವು ಏನು ಅಪೇಕ್ಷಿಸುತ್ತೀರಿ? ಈ ಪ್ರಶ್ನೆಯ ಉತ್ತರರೂಪವಾಗಿ : "ಗಾಂಧೀ ಕುಟುಂಬದಿಂದ ನನ್ನ ಅಪೇಕ್ಷೆ ಇಷ್ಟೆ: ಎಲ್ಲರೂ ಸೇವಾಕಾರ್ಯದಲ್ಲಿಯೆ ತೊಡಗಬೇಕು, ಸಾಧ್ಯವಿದ್ದಷ್ಟು ಸಂಯಮವನ್ನು ಪಾಲಿಸಬೇಕು, ಹಣದ ಆಶೆಯನ್ನು ಬಿಡಬೇಕು, ವಿವಾಹದ ವಿಚಾರ ಬಿಡಬೇಕು, ವಿವಾಹಿತರಿದ್ದರೂ ಬ್ರಹ್ಮಚರ್ಯ ಪಾಲಿಸಬೇಕು ಮತ್ತು ಸೇವೆಯಿಂದಲೇ ತಮ್ಮ ಚರಿತಾರ್ಥ ಸಾಗಿಸಬೇಕು. ಸೇವೆಯ ಕ್ಷೇತ್ರವು ಅಸಂಖ್ಯ ಸ್ತ್ರೀ-ಪುರುಷರು ಸಮಾವೇಶರಾಗುವಷ್ಟು ವಿಶಾಲವಾಗಿದೆ. ಇದರಲ್ಲಿ ಎಲ್ಲವೂ ಬಂತಲ್ಲವೇ ? "

ಹಾರ್ನಿಮನ್ನರು ಈಗ 'ಗುಳಿಗೆ' ಉರುಳಿಸುತ್ತಿದ್ದಾರೆ. ಬಾಪೂ ಹೇಳಿದರು : "ಇದು ಹಾರ್ನಿಮನ್ನನ ಎರಡನೆಯ ಮಗ್ಗಲು." ಗಾಂಧೀ ಮತ್ತು ವ್ಹಾಯಿಸರಾಯರ ನಡುವೆ ಪತ್ರವ್ಯವಹಾರ ನಡೆದಿದೆಯೆಂದು 'ಫ್ರೀ ಪ್ರೆಸ್'

೮–೮–'೩೨ ಹೇಳುತ್ತದೆ. ಎ. ಪಿ. ಆಯ್. ಇದು ಸುಳ್ಳೆಂದು ಹೇಳುತ್ತದೆ. ತಾನು ಸ್ವತಃ ಈ ಪಾಪದಿಂದ ಮುಕ್ತನಿರುವಂತೆ 'ಕ್ರಾನಿಕಲ್' ಅದನ್ನು ದೊಡ್ಡ ಅಕ್ಷರದಲ್ಲಿ ಮುದ್ರಿಸುತ್ತದೆ! 'ಕ್ರಾನಿಕಲ್' ದಲ್ಲಿ ಮೂರು ಕಾಲಮು ತುಂಬ ಒಂದು ಲೇಖ ಬರೆಯಲಾಗಿದೆ. ಅದರಲ್ಲಿ ಗಂಭೀರವಾದ ಭಾಷಾಡಂಬರದೊಂದಿಗೆ 'ಮಹಾತ್ಮಾ ಗಾಂಧೀಯವರ ಬಿಡುಗಡೆಯಾದರೆ ಆಶ್ಚರ್ಯವಿಲ್ಲ ಎಂಬ ನಿಶ್ಚಿತವಾದ ಸಮಾಚಾರವು ನಾವು ವಿಶ್ವಾಸಪಾತ್ರವೆಂದು ತಿಳಿಯುವ ಸ್ಥಳದಿಂದ ದೊರೆತಿದೆ' ಎಂಬ ಸುದ್ದಿಯನ್ನು ಕೊಟ್ಟಿದೆ! ಆಮೇಲೆ ಸ್ಯಾಮ್ಯುಅಲ್ ಹೋರರ ಸಂಗಡ ಪತ್ರವ್ಯವಹಾರದ ವಿಷಯದಲ್ಲಿ ಅವರಿಗೆ ದೊರೆತಪತ್ರಗಳ ಚರ್ಚೆಯಿದೆ— ಇಷ್ಟೆ ಅಲ್ಲ, ಆ ಪತ್ರಗಳ ಉದ್ಧರಣವೂ ಕೂಡ — ಮತ್ತು ಅವುಗಳ ಮೇಲೆ ಟೀಕೆಯಿದೆ.

ನಾನು ಫ್ರೆಂಚ ಭಾಷೆ ಕಲಿಯುವದನ್ನು ಉಲ್ಲೇಖ ಮಾಡಿ ಬರೆಯುತ್ತಾರೆ : "ಇವನ ಲೋಭಕ್ಕೆ ಮಿತಿಯೆ ಇಲ್ಲ." ಆದರೆ ಸ್ವತಃ ಉರ್ದೂ ಕಲಿಯುತ್ತಿದ್ದಾರೆ, ಕರನ್ಸಿಯ ಅಧ್ಯಯನವನ್ನು ಮಾಡುತ್ತಿದ್ದಾರೆ, ಮತ್ತು

೯–೮–೩೨ ಖಗೋಲ ಶಾಸ್ತ್ರದ ಅಧ್ಯಯನಕ್ಕಾಗಿ ಪುಸ್ತಕಾಲಯವನ್ನೂ ರಚಿಸುತ್ತಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ಉತ್ತಮ ಪ್ರಕಾಶನಗಳನ್ನು ನನಗೆ ಕಳಿಸಿರಿ ಎಂದು ಅಕಬರ ಹೈದರಿಯವರಿಗೆ ಪತ್ರ ಬರೆದರು. ಬಿರ್ಲಾರಿಂದ ಕರನ್ಸಿ ಕಮಿಶನ್‌ದ ಎಷ್ಟೋ ರಿಪೋರ್ಟುಗಳನ್ನು ತರಿಸಿದರು ಮತ್ತು ಉಪನಿಷತ್‌ಗಳೊಳಗಿಂದ ಈಶೋಪನಿಷತ್ತನ್ನು ಆಳವಾಗಿ ಅಭ್ಯಾಸ ಮಾಡತೊಡಗಿದ್ದಾರೆ. ಅಂದರೆ ಎಷ್ಟೋ ಜನರ ಭಾಷ್ಯ ಓದಲಿಕ್ಕೆ ಪ್ರಾರಂಭಿಸಿದ್ದಾರೆ.

ಮಾನಸಶಾಸ್ತ್ರದ ಆಳವಾದ ಅಧ್ಯಯನದ ಮೇಲಿಂದ ರಚಿಸಿದ ನೀತಿಶಾಸ್ತ್ರವು ಮಹಾಭಾರತದಲ್ಲಿ ದೊರೆತಂತೆ ಇನ್ನೆಲ್ಲಿಯೂ ದೊರೆಯುವದಿಲ್ಲ. ಸತ್ಯವನ್ನು ಕುರಿತು ಅನೇಕ ವ್ಯಾಖ್ಯೆಗಳೂ ವರ್ಣನೆಗಳೂ ಇವೆ; ಆದರೆ

೧೦-೮-'೩೨ ಈ ಒಂದು ಶ್ಲೋಕದಲ್ಲಿ ಸತ್ಯದ ವ್ಯಾಖ್ಯೆಯನ್ನೂ ಅಸತ್ಯದ ಕೆಡಕನ್ನೂ ತೋರಿಸಿದಂತೆ ಇನ್ನೆಲ್ಲಿಯಾದರೂ ತೋರಿಸಿರುವದು ತೀರ ಅಪರೂಪ. ಅದು ಕೂಡ ಆದಿಪರ್ವದಲ್ಲಿಯೆ:

**योऽन्यथासन्तमात्मानमन्यथाप्रतिपद्यते ।**
**किं तेन न कृतं पापं चौरेणात्मापहारिणा ॥**

ಅಸತ್ಯಾಚಾರಿಯೂ, ಡಾಂಭಿಕನೂ ಮತ್ತು ಮಿಥ್ಯಾಚಾರಿಯೂ ಇದ್ದಷ್ಟು ಭಯಂಕರ ಕಳ್ಳನು ಬೇರೆ ಯಾರೂ ಇಲ್ಲ. ಯಾಕಂದರೆ ಅವನ ಪಾಪಕ್ಕೆ ಸರಿಯಾದ ಪಾಪವು ಬೇರೊಂದಿಲ್ಲ.

ಇವತ್ತು ಎಲ್ಲ ಪತ್ರಗಳೂ ಜೇಲವಾಸಿಗಳವೇ ಬಂದವು. ರಾಮದಾಸ, ಮೋಹನಲಾಲ ಭಟ್ಟ, ಸೈಯ್ಯದ ಅಬ್ದುಲ್ಲಾ ಬ್ರೆಲ್ವಿ, ಖುರಶೇದ ಮತ್ತು ಮುಹಮ್ಮದ ಆಲಮ ಇವರವು. ಎಲ್ಲ ಪತ್ರಗಳೂ ಮಹತ್ವದವಿದ್ದವು.

೧೧-೮-'೩೨ ರಾಮದಾಸರು ನೀತಿಯ ಪ್ರಶ್ನೆಯನ್ನೆತ್ತಿದ್ದರು. ಬಾಪೂರನ್ನು ಕೇಳಿದ್ದರು: "ನೀವು ಒಂದಾನೊಂದು ಕಾಲಕ್ಕೆ ಬಹಳ ಕಠೋರರಿದ್ದಿರಿ. ಕಠಿಣತರವಾದ ಪ್ರಾಯಶ್ಚಿತ್ತ ತೆಗೆದುಕೊಳ್ಳುತ್ತಿದ್ದಿರಿ ಮತ್ತು ತೆಗೆದುಕೊಳ್ಳಲಿಕ್ಕೆ ಹಚ್ಚುತ್ತಿದ್ದಿರಿ. ಈಗ ಆವಶ್ಯಕತೆಗಿಂತ ಹೆಚ್ಚು ಉದಾರರು ಹೇಗಾದಿರಿ? ಜನರು ಈ ಉದಾರತೆಯ ದುರುಪಯೋಗ ಮಾಡಿಕೊಳ್ಳುತ್ತಾರೆ." ದಾಲಚಿನ್ನಿ, ಲವಂಗ ಮತ್ತು ಯಾಲಕ್ಕಿಯ ಪ್ರಕರಣದ ನಂತರ ಅವರು ಸ್ವತಃ ದಾಲಚಿನ್ನಿ ಮತ್ತು ಲವಂಗವನ್ನು ತಿನ್ನದಿರುವ ವ್ರತವನ್ನು ತೆಗೆದುಕೊಂಡಂತೆ ಕಾಣುತ್ತದೆ. ಆದುದರಿಂದ ನೀಮೂಬಹೆನ ಹಾಲು ತುಪ್ಪ ತಿನ್ನುವದನ್ನು ಬಿಟ್ಟಿದ್ದಾಳೆ.

ಬಾಪೂ ರಾಮದಾಸರಿಗೆ ಇವತ್ತೇ ಉದ್ದವಾದ ಪತ್ರವನ್ನು ಬರೆದರು:

"ನೀನಿನ್ನೂ ದಾಲಚಿನ್ನಿ ಮತ್ತು ಲವಂಗಗಳನ್ನು ಬಿಡುವ ವ್ರತ ತೆಗೆದುಕೊಂಡಿಲ್ಲವೆಂದು ನನ್ನ ತಿಳಿವಳಿಕೆ. ನಾನು ನಿಮೂಗೆ ಬರೆಯಬೇಕೆಂದು ವಿಚಾರ ಮಾಡುತ್ತಿದ್ದೇನೆ. ಆದರೆ ಅವಳು ವ್ರತವನ್ನು ತೆಗೆದುಕೊಂಡೇ ಬಿಟ್ಟಿದ್ದರೆ ಅವಳಿಗೆ ವ್ರತವನ್ನು ಬಿಡಲಿಕ್ಕೆ ಆಗ್ರಹಮಾಡುವದಿಲ್ಲ. ಕೇವಲ ಧರ್ಮವನ್ನು ತಿಳಿಸುವೆನು. ಈ ಪ್ರಕಾರದ ವ್ರತಗಳನ್ನು ಬಿಡಿಸುವ ಆಗ್ರಹಮಾಡಬಾರದೆಂದು ನನಗೆನಿಸುತ್ತದೆ. ಹೀಗೆ ಆಗ್ರಹಮಾಡಿದರೆ ಮನುಷ್ಯನು ತನ್ನ ಮನೋನಿರ್ಧಾರವನ್ನು ಕಳೆದುಕೊಳ್ಳುತ್ತಾನೆ ಮತ್ತು ಮನೋದೌರ್ಬಲ್ಯ ಉಂಟಾಗುತ್ತದೆ. ಮೊದಲು ನಾನು ಕಠೋರ

ನಿದ್ದೆನೆಂದು ಬರೆಯುತ್ತಿ. ನಾನು ಕಠೋರನಿದ್ದುದಕ್ಕೆ ನನಗೆ ಪಶ್ಚಾತ್ತಾಪವಿಲ್ಲ. ಆ ಕಾಲಕ್ಕೆ ಅದು ಯೋಗ್ಯವೇ ಇತ್ತು. ಇವತ್ತು ನನ್ನ ತೀರ ಸ್ವಲ್ಪ ಕಠೋರತನವು ಕೂಡ ಹಿಮಾಲಯದಷ್ಟು ಭಾರವೆನಿಸುತ್ತದೆ. ಇಂದು ನಾನು ಕೇವಲ ಸಿಟ್ಟುಮಾಡಿ ಯಾವ ಕೆಲಸವನ್ನು ಮಾಡಿಸಿಕೊಳ್ಳಬಹುದೊ ಅದಕ್ಕಾಗಿ ಮೊದಲು ನಾನು ಸ್ವತಃ ಉಪವಾಸಮಾಡಬೇಕಾಗುತ್ತಿತ್ತು. ಎರಡನೆಯವರಿಗೂ ಸಹ ಯೋಗ್ಯತಾನು ಸಾರವಾಗಿ ಹಾಗೇ ಮಾಡಬೇಕಾಗುತ್ತಿತ್ತು. ಮೊದಲು ಮಾಡುತ್ತಿದ್ದಂತೆ ಈಗಲೂ ಮಾಡಿದರೆ ನಾನು ನಿರ್ದಯಿಯೆಂದು ತಿಳಿಯಲ್ಪಡುವೆ. ನಾನು ಮುಂದುವರಿದಂತೆ ಉಳಿದವರೂ ಮುಂದುವರಿದಿದ್ದಾರೆಯೆ? ಹೀಗಾಗಲಿಕ್ಕೆ ಏನೂ ಕಾರಣವಿಲ್ಲ. ಆದರೆ ನನಗೆ ಸಂಬಂಧವಿದ್ದವರ ಮೇಲೆ ನನ್ನ ಪ್ರಭಾವವಿದ್ದೇ ಇರುತ್ತದೆ. ಆದುದರಿಂದ ಹೆಚ್ಚಿನದನ್ನೇನೂ ಮಾಡುವ ಆವಶ್ಯಕತೆ ಬೀಳುವದಿಲ್ಲ. ಅಂದರೆ ನೀನು ನಿಮೂ ಇವಳ ಕಡೆಯಿಂದ ಬೇರೆ ಕಷ್ಟ ಸಹನಮಾಡಿಸುವ ಅಥವಾ ಸ್ವತಃ ಮಾಡುವ ಆವಶ್ಯಕತೆ ಬೀಳುವದಿಲ್ಲ. ಯಾಕಂದರೆ ನಾನು ದೊಡ್ಡ ಕಾವಲುಗಾರನು ಕುಳಿತಿದ್ದೇನೆ. ನನ್ನ ಶರೀರವಿಲ್ಲದಾಗ ನೀವೆಲ್ಲರೂ ಹೆಚ್ಚು ಸಾವಧಾನದಿಂದಿರಬೇಕಾಗುವದು. ನಿಜವಾದ ಸ್ಥಿತಿಯು ಹೀಗಿದೆ. ಆದುದರಿಂದ ನನ್ನ ಅನುಪಸ್ಥಿತಿಯಲ್ಲಿ ಶಿಥಿಲತೆಯು ಬರುತ್ತದೆ. ಜಗತ್ತಿನ ನಿಯಮವೇ ಹೀಗಿದೆ. ಆದುದರಿಂದ ನಾವು ಪೂರ್ಣ ಜಾಗ್ರತರಾಗಲಿಕ್ಕೆ ಕಲಿಯತಕ್ಕದ್ದು. ಇವತ್ತು ನಾವೇನೊ ಬಳ್ಳಿಯಂತೆ ಗಿಡದ ಆಧಾರದಿಂದ ಮೇಲಕ್ಕೇರಿರಬಹುದು, ಆದರೆ ಅದು ಪರತಂತ್ರತೆಯು. ಅದನ್ನು ಬಿಟ್ಟು ನಮ್ಮಷ್ಟಕ್ಕೆ ನಾವೇ ನೆಟ್ಟಗೆ ನಿಲ್ಲಲಿಕ್ಕೆ ಕಲಿಯಬೇಕು. ನಿಮೂ ಇವಳ ಮೇಲೆ ವಿದ್ಯುದ್ವೇಗದಿಂದ ಆದ ಪರಿಣಾಮದ ಕಾರಣವು ನಾನು ಮೇಲೆ ಹೇಳಿದ್ದೇ ಆಗಿದೆ. ನಿನಗೆ ನೆನಪಿದ್ದ ನನ್ನ ಆಗಿನ ಕಾಲವು ಹೀಗಿರಲಿಲ್ಲ. ಯಾಕಂದರೆ ಸುತ್ತಲಿನ ವಾತಾವರಣವು ಹೀಗೆ ಹೊಣೆಗಾರವಿದ್ದಿಲ್ಲ, ಇಷ್ಟೊಂದು ಉಚ್ಚವೂ ಇದ್ದಿಲ್ಲ. ನಾನು ನಿಮೂಗೆ ಏನಾದರೂ ಕಠೋರವಾಗಿ ಬರೆದರೆ ಅವಳು ಬಾಡಿ ಹೋಗುವಳು. ಈಗ ನನ್ನ ಉದಾರತೆಯು ಲಕ್ಷ್ಯದಲ್ಲಿ ಬಂತೆ? ಮೊದಲಿನ ಕಠೋರತೆ, ಇವತ್ತಿನ ಉದಾರತೆ ಇವುಗಳ ಹಿಂದೆ ಇದೇ ಶುದ್ಧ ಪ್ರೇಮವು ಕೆಲಸಮಾಡುತ್ತ ಬಂದಿದೆ. ಇನ್ನು ನೀನು ಬರೆದದ್ದು ಒಳ್ಳೆಯದೆ ಆಗಿದೆ. ಯಾಕಂದರೆ ನನ್ನ ಉದಾರತೆಯ ಅನರ್ಥಮಾಡಿ ಯಾರಾದರೂ ಅಜಾಗರೂಕರಾದರೆ ಕೆಟ್ಟದಿರುತ್ತದೆ. ಹೀಗೆ ಭಯವಿರುವ ಕಾರಣವು ಬೇರೆಯಿದೆ. ನಾನೇ ಸ್ವತಃ ನನ್ನ ವಿಷಯವಾಗಿ ಮೃದುವಾಗಿದ್ದೇನೆ. ನನ್ನಲ್ಲಿಯ ಆ ಮೊದಲಿನ ಕೆಚ್ಚು ಹೋಗತೊಡಗಿದೆ. ಶರೀರವು ಬೇಡಿದಂತೆ ಕೆಲಸವನ್ನು ಕೊಡುತ್ತಿರುವದಿಲ್ಲ. ನಾನು ಮಾಡದ್ದನ್ನು ಎರಡನೆಯವರಿಂದ ಮಾಡಿಸುವದಕ್ಕೆ ಸಂಕೋಚವು ಆಗಿಯೇ ಆಗುತ್ತದೆ. ನಾನು ಇನ್ನು ಆಶ್ರಮವನ್ನು ನಡೆಸಲಿಕ್ಕೆ

ಯೋಗ್ಯನಾಗಿ ಉಳಿದಿಲ್ಲವೆಂದು ಆಶ್ರಮದಲ್ಲಿ ಮೇಲಿಂದಮೇಲೆ ಹೇಳಿದ್ದೇನೆ. ಆಶ್ರಮದ ರಕ್ಷಕನು ಜಾಗರೂಕನೂ ಬಲವಂತನೂ ಆಗಿರಬೇಕು. ಮೊದಲು ನಾನು ಕೆಲಸಕ್ಕೆ ಎಲ್ಲರ ಸಂಗಡ ನಿಲ್ಲುತ್ತಿದ್ದೆ. ಆದುದರಿಂದ ಎರಡನೆಯವರೂ ನನ್ನ ಸಂಗಡ ನಿಲ್ಲಲೇ ಬೇಕಾಗುತ್ತಿತ್ತು. ಈಗ ನನ್ನ ಕೆಲಸವು ನೋಡುವದಾಗಿರುವದಿಲ್ಲ. ನಾನು ಹೇಳಿದಂತೆ ನಡೆಯುವದಾಗಿರುತ್ತದೆ. ಆದುದರಿಂದ ಸುತ್ತುಮುತ್ತಲಿನ ವಾತಾವರಣದಲ್ಲಿ ನಿನಗೆ ಅವಶ್ಯವಾಗಿ ಶಿಥಿಲತೆಯು ಕಂಡುಬರುತ್ತಿರಬಹುದು. ಇದೆಲ್ಲವನ್ನೂ ನೀನು ಚನ್ನಾಗಿ ತಿಳಿದುಕೊಂಡಿಯಲ್ಲವೆ ?

“ ನಿನ್ನ ಸಾವಧಾನತೆಯನ್ನು ನಾನು ಮೆಚ್ಚುತ್ತೇನೆ. ಈ ವಿಷಯದಲ್ಲಿ ನಿಮೂಳ ಬಗ್ಗೆ ಕಠೋರನಾಗಬೇಡ. ಪತಿಪತ್ನಿಗಳ ಬಗ್ಗೆ ನನ್ನ ವಿಚಾರಗಳಲ್ಲಿ ಅವಶ್ಯ-ವಾಗಿ ವ್ಯತ್ಯಾಸವಾಗಿದೆ. ನಾನು ಬಾಳ ಸಂಗಡ ನಡೆದ ರೀತಿಯಂತೆ ನೀವು ಯಾರೂ ನಡೆಯಬಾರದೆಂದು ನಾನು ನಿಸ್ಸಂದೇಹವಾಗಿ ಇಚ್ಛಿಸುತ್ತೇನೆ. ನನ್ನ ಕಠೋರತೆಯಿಂದ ಬಾಳಿಗೆ ಏನೂ ಹಾನಿಯಾಗಿಲ್ಲ, ಯಾಕಂದರೆ ಬಾಳನ್ನು ನಾನು ನನ್ನ ಸಂಪತ್ತಿ ಯೆಂದು ಎಂದೂ ತಿಳಿಯಲಿಲ್ಲ. ಅವಳ ವಿಷಯಕ್ಕೆ ಪ್ರೇಮವೂ ಸನ್ಮಾನವೂ ಇದ್ದೇ ಇದ್ದವು. ಅವಳು ಘನತೆಗೇರಿದುದನ್ನು ನಾನು ನೋಡಬಯಸುತ್ತಿದ್ದೆ. ಆದರೂ ಸಹ ಬಾ ನನ್ನನ್ನು ಬೈಯುತ್ತಿದ್ದಿಲ್ಲ. ನಾನು ಬೈಯುತ್ತಿದ್ದೆ. ಬಾ ಗೆ ನಾನು ವ್ಯವಹಾರ ದಲ್ಲಿ ನನ್ನ ಸರಿಸಮಾನ ಅಧಿಕಾರವನ್ನು ಕೊಟ್ಟದ್ದಿಲ್ಲ. ಪಾಪ ಬಾ ಳಲ್ಲಿ ನನ್ನಿಂದ ಆ ಅಧಿಕಾರವನ್ನು ತೆಗೆದುಕೊಳ್ಳುವ ಶಕ್ತಿಯೂ ಇದ್ದಿಲ್ಲ. ಹಿಂದೂ ಸ್ತ್ರೀಯರಲ್ಲಿ ಆ ಶಕ್ತಿ ಇರುವದೇ ಇಲ್ಲ. ಇದು ಹಿಂದೂ ಸಮಾಜದ ವೈಶಿಷ್ಟ್ಯವಾಗಿದೆ. ಆದುದರಿಂದ ನಿಮೂಳನ್ನು ನಿನ್ನ ಸರಿಸಮಾನ ಸ್ವತಂತ್ರಳೆಂದು ತಿಳಿಯಬೇಕೆಂದು ನಾನು ಇಚ್ಛಿಸು ತ್ತೇನೆ. ನಾನು ಅವಳಿಗೆ ಒಂದು ಪತ್ರದಲ್ಲಿ ವಿನೋದದಿಂದ, ತನ್ನನ್ನು ಪರಾಧೀನಳೆಂದು ತಿಳಿದುಕೊಂಡು ಪ್ರತಿಯೊಂದು ಮಾತಿನಲ್ಲಿಯೂ ನಿನ್ನನ್ನು ಪೀಡಿಸಬಾರದೆಂದು ಬರೆದಿದ್ದೆ. ಅದಕ್ಕೆ ಅವಳು ಬರೆದಳು : “ ನಾನು ಪರಾಧೀನಳಿದ್ದೇ ಇರುವೆನೆಂಬುದು ರಾಮದಾಸರಿಗೆ ಗೊತ್ತಿದೆ. ” ಭಾಷೆಯು ನನ್ನದು, ಭಾವಾರ್ಥವು ಸರಿಯಾಗಿದೆ. ಈ ಪರಾಧೀನತೆಯು ಹೋಗಲಿಕ್ಕೇಬೇಕು. ನಿಮೂಗೆ ನೌಕರನು ಬೇಕಾಗಿದ್ದರೆ ನಿನ್ನನ್ನೇನು ಕೇಳುವದು ? ನಾರಾಯಣದಾಸನಿಗೆ ಕೇಳಲಿ, ಜಗಳವಾಡುವದಾದರೆ ಅದನ್ನೂ ಮಾಡಲಿ. ನಾನು ಇದನ್ನು ಕ್ಷುಲ್ಲಕ ಉದಾಹರಣೆಯೆಂದು ಕೊಟ್ಟದ್ದೇನೆ. ಆದರೆ ಈ ವಿಷಯಗಳಲ್ಲಿ ಅವಳಿಗೆ ಸ್ವಾತಂತ್ರ್ಯವಿರಬೇಕು. ನೀನು ವ್ಯಭಿಚಾರ ಮಾಡುವದಾದರೆ ನಿನಗೆ ನಿಮೂಳ ಭಯವಿರಬಾರದು. ಅವಳ ಪ್ರೇಮವು ನಿನ್ನನ್ನು ತಡೆದರೆ, ಆ ಮಾತು ಬೇರೆ. ಇದೇ ಪ್ರಕಾರ ನಿಮೂ ವ್ಯಭಿಚಾರ ಮಾಡುವದಾದರೆ ನಿರ್ಭೀತಳಾಗಿ ಮಾಡಬಲ್ಲಳು. ಒಬ್ಬರಿಗೊಬ್ಬರ ಪ್ರೇಮವು ದಂಪತಿಗಳನ್ನು ಪಾಪ

ದಿಂದ ರಕ್ಷಣೆ ಮಾಡಲಿ ಆದರೆ, ಭೀತಿಯು ಎಂದೂ ಮಾಡಲಾರದು. ಈ ಶಿಕ್ಷಣವನ್ನು ಕೊಡಲಿಕ್ಕೆ ನಾನು ಆಶ್ರಮದಲ್ಲಿಯೇ ಕಲಿತೆನು. ಬಾ ಳ ವಿಷಯಕ್ಕೆ ಸಾಬರಮತಿ ಯಲ್ಲಿಯ ನನ್ನ ನಡತೆಯು ದಿನ ದಿನಕ್ಕೆ ಈ ಪ್ರಕಾರದ್ದಾಗುತ್ತ ನಡೆದಿದೆ. ಇದರಿಂದ ಬಾ ಳ ಉನ್ನತಿಯಾಗಿದೆ. ಮೊದಲಿನ ಅಂಜಿಕೆಯು ಇದುವರೆಗೆ ಸಂಪೂರ್ಣ ನಾಶವಾಗಿರಲಿಕ್ಕಿಲ್ಲ. ಆದರೆ ಬಹಳಷ್ಟು ನಾಶವಾಗಿದೆ. ಮನಸ್ಸಿನಲ್ಲಿ ಕೂಡ ಬಾ ಳ ಮೇಲೆ ಸಿಟ್ಟು ಬಂದರೆ ಆ ಸಿಟ್ಟನ್ನು ನನ್ನ ಮೇಲೆಯೇ ತೆಗೆಯುತ್ತೇನೆ. ಸಿಟ್ಟಿನ ಮೂಲವು ಮೋಹವಿದೆ. ನನ್ನಲ್ಲಿ ಆದ ಈ ಬದಲಾವಣೆಯು ಮಹತ್ವದ್ದಾಗಿದೆ ಯಲ್ಲದೆ ಅದರ ಪರಿಣಾಮವಾದರೂ ಬಹಳ ಉತ್ತಮವಾಗಿದೆ. ನನ್ನ ಪ್ರೇಮವು ಇನ್ನೂ ನಿರ್ಮಲವಾಗುತ್ತ ಹೋದರೆ ಪರಿಣಾಮವು ಇನ್ನೂ ಸುಂದರವಾಗುವದು. ಅಸಂಖ್ಯ ಸ್ತ್ರೀಯರು ಸಹಜವಾಗಿಯೆ ನನ್ನ ಮೇಲೆ ವಿಶ್ವಾಸವಿಡುವ ಕಾರಣವು ನನ್ನ ಪ್ರೇಮ ಮತ್ತು ಆದರಗಳೆಂದು ನನ್ನ ವಿಶ್ವಾಸವಿದೆ. ಈ ಗುಣಗಳು ಅದೃಶ್ಯರೂಪದಲ್ಲಿ ಕೆಲಸಮಾಡುತ್ತಿರುತ್ತವೆ. ”

ಬ್ರೈಲ್ವಿಯವರ ಪತ್ರವು ಅವರ ಸ್ವಚ್ಛ ಹೃದಯದ ಮತ್ತು ಉಜ್ವಲ ದೇಶಭಕ್ತಿಯ ದ್ಯೋತಕವಾಗಿದೆ ಮತ್ತು ಲಲ್ಲುಭಾಯಿಯವರ ಪರಿವಾರದ ಬಗ್ಗೆ ಅವರ ನಿಷ್ಠೆಯ ಪ್ರತೀಕವಾಗಿದೆ. ವೈಕುಂಠರ ಸಂಗಡ ಆದ ತಮ್ಮ ಮಿತ್ರತ್ವವನ್ನು ಅವರು ತಮ್ಮ ಜೀವನದಲ್ಲಿ ಆದ ಒಂದು ಅನುಪಮ ಸೌಭಾಗ್ಯವೆಂದು ತಿಳಿಯುತ್ತಾರೆ. ಒಂದು ಹಿಂದೂ ಕುಟುಂಬವು ನಿಜವಾದ ಉದಾರತೆಯಿಂದಿದ್ದು ಏನೇನು ಮಾಡಬಲ್ಲ-ದೆಂಬುದನ್ನು ಬ್ರೈಲ್ವಿಯವರ ಪತ್ರದಿಂದ ನೋಡಲಿಕ್ಕೆ ಸಿಗುತ್ತದೆ. ಎಲ್ಲ ಪತ್ರಗಳೂ ಸಂಗ್ರಹಿಸಿಡಲಿಕ್ಕೆ ಯೋಗ್ಯವಾಗಿವೆ.

ಸುಪರಿಂಟೆಂಡೆಂಟರಿಗೆ ಬರುತ್ತಲೇ What is the news? ( ಏನು ಸುದ್ದಿ ) ಎಂದು ಕೇಳುವ ರೂಢಿಯಿದೆ. ಇವತ್ತು ಬಾಪೂ ಅವರು ಸ್ತಬ್ಧರಾಗುವಂತೆ ಉತ್ತರಕೊಟ್ಟರು : “ ಸುದ್ದಿಯು ನಿಮ್ಮ ಹತ್ತರವೊ ನಮ್ಮ

೧೨-೮-'೩೨ ಹತ್ತರವೊ? ನೀವು ನನಗಾಗಿ ಬಲೆಯನ್ನೊಡ್ಡಿದ್ದಿರಿ ಮತ್ತು ನಾನು ತಪ್ಪುಗಿಪ್ಪು ಮಾಡಿದ್ದರೆ ಸತ್ತೇಹೋಗುತ್ತಿದ್ದೆನಲ್ಲವೆ? ಅನ್ಸಾರಿಯವರು ೨೦ ನೇ ತಾರೀಖಿಗೆ ನಿಮಗೆ ಪತ್ರ ಬರೆದಿದ್ದರು. ಅದರ ಉಲ್ಲೇಖ ಮಾಡದೆ, ಅವರು ಬಂದರೆ ನೀವು ಅವರನ್ನು ಭೆಟ್ಟಿಯಾಗುವಿರಾ? ಎಂದು ನೀವು ಕೇಳಿದ್ದಿರಿ. ಇದರ ಉತ್ತರವನ್ನು ನಾನು ‘ನಾನು ಭೆಟ್ಟಿಯಾಗುವದಿಲ್ಲವೆಂ’ದು ಕೊಟ್ಟಿದ್ದರೆ ನೀವು ಸರಕಾರಕ್ಕೆ ಇವರು ಭೆಟ್ಟಿಯಾಗುವದಿಲ್ಲವೆಂದು ಬರೆಯುತ್ತಿದ್ದಿರಿ. ಇದರ ಮೇಲಿಂದ ಸರಕಾರವು ಅನ್ಸಾರಿಯವರಿಗೆ ಗಾಂಧೀ ಯಾರಿಗೂ ಭೆಟ್ಟಿಯಾಗು-ವದಿಲ್ಲವೆಂದು ಬರೆಯುತ್ತಿತ್ತು. ನಾನು ಅಲಕ್ಷ್ಯದಿಂದ ಉತ್ತರವನ್ನು ಕೊಡಲಿಲ್ಲ.

ಇದು ಒಳ್ಳೆಯದೆ ಆಯಿತು. ಇಲ್ಲದಿದ್ದರೆ ನೀವು ನನ್ನನ್ನು ಬಲೆಯಲ್ಲಿ ಸಿಗಿಸುತ್ತಿದ್ದಿರಲ್ಲವೆ?" ಅವನು ಹೇಳಿದ: "ಇಲ್ಲ, ನಾನು ಹೀಗೆ ಇಚ್ಛಿಸಿದ್ದಿಲ್ಲ. ಅನ್ಸಾರಿಯವರು ನನ್ನ ಮಿತ್ರರಿದ್ದಾರೆ. ಗಾಂಧೀಜಿ ಭೆಟ್ಟಿಯಾಗದಿದ್ದರೆ ನೀವು ಸರಕಾರಕ್ಕೆ ಬರೆಯುವ ಆವಶ್ಯಕತೆಯೇನೂ ಇಲ್ಲವೆಂದು ನಾನು ಅವರಿಗೆ ಬರೆಯುತ್ತಿದ್ದೆ. ವ್ಯರ್ಥವಾಗಿ ಇಲ್ಲವೆಂದು ಏಕೆ ಹೇಳಿಸಿಕೊಳ್ಳುವದು?" ಬಾಪೂ: "ಇಲ್ಲವೆಂದು ಹೇಳಿಸಿಕೊಳ್ಳುವದರಲ್ಲಿಯೂ ಒಂದು ಅರ್ಥವಿದೆ. ಪತ್ರ ಬಂದಾಗ ನೀವು ನನ್ನ ಸಂಗಡ ಚರ್ಚೆಮಾಡಿ ನಿರ್ಣಯ ತೆಗೆದುಕೊಳ್ಳಬಹುದಿತ್ತು. ಆದರೆ ನೀವು ಪತ್ರ ಬಂದ ಕೂಡಲೆ ಸರಕಾರಕ್ಕೆ ಕಳುಹಿಸಿ ಆಮೇಲೆ ನನ್ನ ಸಂಗಡ ಮಾತಾಡಲಿಕ್ಕೆ ಬಂದಿರಿ. ಆ ಕಾಲಕ್ಕೆ ಸಹ ನೀವು ಪತ್ರ ಬಂದಿದೆ, ಅದಕ್ಕಾಗಿ ಕೇಳುತ್ತೇನೆಂದು ಹೇಳಲಿಲ್ಲ." "ಇಲ್ಲ, ಇಲ್ಲ. ನಾನು ಸರಕಾರಕ್ಕೆ ಬರೆಯುತ್ತಿದ್ದಿಲ್ಲ, ಆದರೆ ಅನ್ಸಾರಿಯವರಿಗೆ ಬರೆಯುತ್ತಿದ್ದೆ." "ಅನ್ಸಾರಿಯವರಿಗೆ ನೀವು ಮೊದಲೇ ಬರೆಯಬೇಕಿತ್ತು. ನೀವು ಚಳಿಯನ್ನೂ ಉಷ್ಣತೆಯನ್ನೂ ಒಂದೇ ಕಾಲಕ್ಕೆ ಹೊಡೆದೋಡಿಸಲಾರಿರಿ. ಅವರು ನಿಮ್ಮ ಮಿತ್ರರಿದ್ದರೆ ಅವರಿಗೆ ನೀವು ಮೊದಲೇ ಬರೆಯಬೇಕಿತ್ತು. ಅಥವಾ ನನ್ನನ್ನು ಕೇಳಿ ಬರೆಯಬಹುದಿತ್ತು. ಮಿತ್ರರಿಲ್ಲದಿದ್ದರೆ ನೀವು ನೇರವಾಗಿ ಸರಕಾರಕ್ಕೆ ಬರೆಯುತ್ತಿದ್ದಿರಿ ಮತ್ತು ಆ ಮಾತನ್ನು ಬಿಟ್ಟುಬಿಡುತ್ತಿದ್ದಿರಿ. ಆದರೆ ನೀವಂತೂ ಬಲೆಯನ್ನು ಬೀಸಿದಿರಿ. ತಿಳಿದೂ ತಿಳಿದೂ ಅಲ್ಲ. ಆದರೆ ಇದರ ಪರಿಣಾಮವು ಅದೇ ಆಗುತ್ತಿತ್ತು. ಈ ರೀತಿಯು ಗಂಡಾಂತರದ್ದೆಂದು ನಾನು ನಿಮಗೆ ಹೇಳಿಬಿಡುತ್ತೇನೆ." "ನನಗೆ ವಿಷಾದವಾಗುತ್ತದೆ, ಇಂಥ ಯಾವ ಉದ್ದೇಶವೂ ನನ್ನದಿದ್ದಿಲ್ಲ." ಎಂದು ಹೇಳಿ ಹೊರಟುಹೋದರು. ಆದರೆ ಬಹಳ ಲಜ್ಜಿತರಾದವರಂತೆ ಕಾಣಿಸಿತು.

ಆಶ್ರಮದ ಟಪಾಲಿನಲ್ಲಿ ಹುಡಿಗೆಯರ ಮಾಸಿಕರೋಗ, ಅದರ ಬಗ್ಗೆ ಅಜ್ಞಾನ ಮತ್ತು ಅದನ್ನು ಮುಚ್ಚಿಡುವದರಿಂದ ಉಂಟಾಗುವ ರೋಗ ಇವುಗಳನ್ನು ಓದಿ ಬಾಪೂರಿಗೆ ಬಹಳ ವಿಚಾರ ಬಂದವು ಮತ್ತು ಉದ್ದ ಪತ್ರ ಬರೆದರು. ಆನಂದಿಗೆ ಉದ್ದ ಪತ್ರ ಬರೆದು ಅದನ್ನು ಎಲ್ಲ ಹುಡಿಗೆಯರ ಕಡೆಯಿಂದ ಓದಿಸಲಿಕ್ಕೂ ಪ್ರೇಮಾಬಹನರ ಸಂಗಡ ಅದನ್ನು ಕುರಿತು ಚರ್ಚಿಸಲಿಕ್ಕೂ ಬರೆದರು. ಅಮುತಲ್ಲಳಿಗೂ ಇಂಥದೇ ಪತ್ರ ಬರೆದರು.

ಪ್ರೇಮಾಬಹನರಿಗೆ ಉದ್ದ ಪತ್ರ ಬರೆದರು:

ವ್ಯಕ್ತಿಪೂಜೆ ಮತ್ತು ಗುಣಪೂಜೆಗಳನ್ನು ಕುರಿತು: "ನೀನು ನಾರದ ಮುನಿಯ ಉದಾಹರಣೆಯನ್ನು ಕೊಡುತ್ತಿ, ಆದರೆ ನಿನಗೆ ಅವರ ವಚನಗಳ ರಹಸ್ಯವೆಲ್ಲಿ ಗೊತ್ತಿದೆ? ಅವರಂಥ ವ್ಯಕ್ತಿ ಪೂಜೆಯನ್ನು ಅವಶ್ಯ ಮಾಡು. ಅದು ಮಾಡಲಿಕ್ಕೆ

ಯೋಗ್ಯವಾಗಿದೆ. ಐತಿಹಾಸಿಕ ವೈಕುಂಠದ ದೇವರಂತೆಯೇ ಅವರ ಕೃಷ್ಣನು! ನಾರದಮುನಿಯ ಭಗವಾನನು ಅವರ ಕಲ್ಪನಾಮಂದಿರದಲ್ಲಿ ವಿರಾಜಮಾನನಾಗಿದ್ದನು. ಆ ನಾರದಮುನಿಯು ಇಂದಿಗೂ ಇದ್ದಾರೆ ಮತ್ತು ಅವರ ಕೃಷ್ಣನೂ ಇದ್ದಾನೆ. ಯಾಕಂದರೆ ಅವರಿಬ್ಬರೂ ನಮ್ಮ ಕಲ್ಪನೆಯಲ್ಲಿಯೆ ಇರುತ್ತಾರೆ. ನನ್ನ ವಿಚಾರದಂತೆ ಇತಿಹಾಸಕ್ಕಿಂತಲೂ ಕಲ್ಪನೆಯು ಶ್ರೇಷ್ಠವಾಗಿದೆ. ರಾಮನಿಗಿಂತಲೂ ಹೆಸರಿನ ಸ್ಥಾನವು ಶ್ರೇಷ್ಠವೆಂದು ತುಳಸೀದಾಸನು ಹೇಳಿದ್ದುದರ ಅರ್ಥವು ಇದೇ ಆಗಬಲ್ಲದು. ನೀನು ವ್ಯಕ್ತಿಪೂಜೆಯ ಗೊಂದಲದಲ್ಲಿ ಬಿದ್ದಿರುವಿಯಾದ್ದರಿಂದ ನನ್ನನ್ನು ಚಿಂತೆಯೊಳಗೆ ಕೆಡುವುತ್ತೀಯಲ್ಲವೆ? ಆಶ್ರಮದ ವಿಷಯದಲ್ಲಿ ನೀನು ನನ್ನನ್ನು ನಿಶ್ಚಿಂತನನ್ನಾಗಿ ಮಾಡಲಾರಿ. ನಾರಾಯಣದಾಸನಿಗೆ ಮಾಡುವದು ಸಾಧ್ಯ ವಾಗಿದೆ. ಇಂಥ ಇನ್ನೂ ಎಷ್ಟೋ ಉದಾಹರಣೆಗಳನ್ನು ತೋರಿಸಬಲ್ಲೆ. ಅವರೂ ವ್ಯಕ್ತಿ ಪೂಜಕರಿದ್ದೇ ಇದ್ದಾರೆ. ಯಾರು ಇಲ್ಲ? ಆದರೆ ಕೊನೆಗೆ ಅವರು ವ್ಯಕ್ತಿ-ಯನ್ನು ದಾಟಿ ಅವನ ಗುಣಗಳ ಅಥವಾ ಕಾರ್ಯದ ಪೂಜಾರಿಯಾಗುತ್ತಾರೆ. ಈ ಅಮೂಲ್ಯವಾದ ಸಂಗತಿಯನ್ನು ಮರೆತು ನಾವು ನಮ್ಮ ಮೂಢತನದಿಂದ ಸ್ತ್ರೀಯರಿಗೆ ಸತಿ ಹೋಗಲಿಕ್ಕೆ ಕಲಿಸಿದೆವು. ಇದು ವ್ಯಕ್ತಿಪೂಜೆಯ ಅಂತಿಮ ಮಿತಿಯಾದೆ! ಹಾಗೆ ನೋಡಿದರೆ ಪತ್ನಿಯ ಧರ್ಮವು ಪತಿಯ ಕೆಲಸವನ್ನು ತನ್ನಲ್ಲಿ ಅಮರವಾಗಿ ಮಾಡು ವದೇ ಆಗಿರುತ್ತದೆ. ಪತಿ ಪತ್ನಿಯರಲ್ಲಿಯ ವಿಕಾರವು ಮತ್ತು ಗಂಡು-ಹೆಣ್ಣೆಂಬ ವಿಚಾರವು ಅಳಿದರೆ ಈ ಆದರ್ಶವು ಇಡೀ ಪ್ರಪಂಚಕ್ಕೆ ಎಲ್ಲ ಪರಿಸ್ಥಿತಿಯಲ್ಲಿಯೂ ಉಪಯೋಗ ಬೀಳುತ್ತದೆ. ಅಂದರೆ ಈ ಪ್ರೇಮವು ಹೋಗಿ ದೇವರಲ್ಲಿ ಲೀನವಾಗುತ್ತದೆ. ಆದರೆ ಈಗ ಈ ವಿಷಯವನ್ನು ಬಿಟ್ಟುಬಿಡುತ್ತೇನೆ.

"ನನ್ನ ವಿರೋಧಿಗಳು ಮೊದಲೂ ಇದ್ದರು ಈಗಲೂ ಇದ್ದಾರೆ. ಆದರೂ ಅವರ ಮೇಲೆ ನನಗೆ ಸಿಟ್ಟು ಬರಲಿಲ್ಲ. ಕನಸಿನಲ್ಲಿ ಕೂಡ ನಾನು ಅವರಿಗೆ ಕೇಡು ಬಗೆಯಲಿಲ್ಲ. ಇದರ ಫಲವೆಂದರೆ ಅನೇಕ ವಿರೋಧಿಗಳು ಮಿತ್ರರಾದರು. ನನ್ನ ವಿರುದ್ಧ ಯಾರ ವಿರೋಧವೂ ಇದುವರೆಗೆ ಕೆಲಸಕ್ಕೆ ಬರಲಿಲ್ಲ. ಮೂರುಸಲ-ವಂತೂ ನನ್ನ ಮೇಲೆ ಪ್ರತ್ಯಕ್ಷ ಹಲ್ಲೆಗಳಾದವು, ಆದರೆ ಇದುವರೆಗೆ ಜೀವಂತನಿದ್ದೇನೆ. ವಿರೋಧಿಗಳಿಗೆ ಅವರು ವಿಚಾರಮಾಡಿದಂತೆ ಸಫಲತೆಯು ಎಂದೂ ಸಿಗುವದಿಲ್ಲವೆಂದು ಇದರ ಅರ್ಥವಲ್ಲ. ಸಿಗಲಿ ಅಥವಾ ಸಿಗದಿರಲಿ, ಅದರೊಂದಿಗೆ ನನ್ನ ಯಾವ ಸಂಬಂಧವೂ ಇಲ್ಲ. ನನ್ನ ಧರ್ಮವು ಅವರಿಗೆ ಒಳ್ಳೆಯದನ್ನು ಇಚ್ಛಿಸುವದು ಮತ್ತು ಸಂಧಿ ದೊರೆತಾಗ ಅವರ ಸೇವೆ ಮಾಡುವದು. ನಾನು ಈ ಸಿದ್ಧಾಂತ ದಂತೆ ಕೈಯಿಂದಾದಷ್ಟು ಆಚರಿಸಿದ್ದೇನೆ. ಈ ಗುಣವು ನನ್ನ ಸ್ವಭಾವದಲ್ಲಿದೆ ಯೆಂದು ನನ್ನ ತಿಳಿವಳಿಕೆ. ಲಕ್ಷಾವಧಿ ಜನರು ನನ್ನ ಪೂಜೆಯನ್ನು ಮಾಡಿದಾಗ

ನನಗೆ ಆಯಾಸವೆನಿಸುತ್ತದೆ. ಈ ಪೂಜೆಯು ನನಗೆ ಸೇರುತ್ತದೆಯೆಂದಾಗಲಿ ಅಥವಾ ನಾನು ಇದಕ್ಕೆ ಯೋಗ್ಯನಿದ್ದೇನೆಂದಾಗಲಿ ನನಗೆ ಎಂದೂ ಅನಿಸಿಲ್ಲ. ಆದರೆ ನನ್ನ ಅಯೋಗ್ಯತೆಯ ಕಲ್ಪನೆಯು ನನಗಿರುತ್ತದೆ. ನನಗೆ ಎಂದಾದರೂ ಮರ್ಯಾದೆಯ ಹಪಾಪಿತನ ಇತ್ತೆಂದು ನನಗೆ ನೆನಪಿಲ್ಲ. ಆದರೆ ಕಾರ್ಯದ ಹಸಿವು ಇದೆ. ಮರ್ಯಾದೆ ಮಾಡುವವರಿಂದ ಕೆಲಸ ತೆಗೆದುಕೊಳ್ಳಲಿಕ್ಕೆ ಬಹಳ ಪ್ರಯತ್ನ ಮಾಡಿದ್ದೇನೆ. ಕೆಲಸ ಸಿಗದಿದ್ದರೆ ಮಾನ-ಮರ್ಯಾದೆಯಿಂದ ದೂರ ಓಡಿಹೋಗಿದ್ದೇನೆ. ನಾನು ಹೋಗಬೇಕಾದಲ್ಲಿಗೆ ಹೋಗಿ ಮುಟ್ಟಿದಾಗಲೇ ನಾನು ಕೃತಾರ್ಥನಾಗಬಲ್ಲೆ. ಆದರೆ ಇಂಥ ದಿನಗಳು ಎಲ್ಲಿ ಭಾಗ್ಯದಲ್ಲಿವೆ, ಮುಂತಾಗಿ ಮುಂತಾಗಿ.

“ಜಗತ್ತಿನ ವಿರುದ್ಧ ನಿಲ್ಲಲಿಕ್ಕೆ ಅಹಂಕಾರವನ್ನಾಗಲಿ ಅಶಿಷ್ಟತೆಯನ್ನಾಗಲಿ ಉಂಟುಮಾಡಿಕೊಳ್ಳುವ ಕಾರಣವಿಲ್ಲ. ಕ್ರಿಸ್ತನು ಜಗತ್ತನ್ನು ವಿರೋಧಿಸಿದನು; ಬುದ್ಧನು ಕೂಡ ತನ್ನ ಯುಗದ ವಿರೋಧಿಯಾದನು. ಪ್ರಹ್ಲಾದನು ಕೂಡ ಹೀಗೇ ಮಾಡಿದನು. ಇವರೆಲ್ಲರೂ ನಮ್ರತೆಯ ಮೂರ್ತಿಗಳಾಗಿದ್ದರು. ಇದರ ಸಲುವಾಗಿ ಆತ್ಮವಿಶ್ವಾಸವೂ ದೇವರ ಮೇಲೆ ಶ್ರದ್ಧೆಯೂ ಬೇಕು. ಅಹಂಕಾರಯುಕ್ತನಾಗಿ ವಿರೋಧಮಾಡುವವನು ಕೊನೆಗೆ ಬಿದ್ದೇ ಬೀಳುತ್ತಾನೆ. ನಿನ್ನ ಅಹಂಕಾರವೂ ನಿನ್ನ ಸಿಟ್ಟೂ ಎಷ್ಟೋ ಸಾರೆ ತೋರಿಕೆಯವಾಗುತ್ತವೆ. ಆದರೆ ಈ ತೋರಿಕೆಯು ಕೂಡ ಕುರೂಪಿಯಾಗಿದೆ. ಇದರಿಂದ ಮೇಲಿಂದಮೇಲೆ ಕಾರಣವಿಲ್ಲದೆ ತಪ್ಪುತಿಳಿವಳಿಕೆಗಳುಂಟಾಗುತ್ತವೆ. ಹೀಗಾಗದಿರುವದಕ್ಕೆ ಮನುಷ್ಯನು ಬಹಳ ಸಾವಧಾನದಿಂದ ನಡೆಯುವ ಆವಶ್ಯಕತೆಯಿರುತ್ತದೆ.

“ಕೊನೆಯ ಕಾಲದವರೆಗೆ ಏಕಾಕಿಯಾಗಿ ನಿಲ್ಲುವ ಶಕ್ತಿಯು ನಮ್ರತೆಯಿಲ್ಲದೆ ಅಸಂಭವವೆಂದು ನಾನು ತಿಳಿಯುತ್ತೇನೆ. ಶಕ್ತಿಯು ಬಂದಾಗಲೆ ಅದು ನಿಜವಾದುದೆಂದು ತಿಳಿಯಲಾಗುವದು. ಇದರ ಪರೀಕ್ಷೆಯು ಇದರಲ್ಲಿಯೆ ಇದೆ. ಶೂರರೆಂದು ತಿಳಿಯಲ್ಪಡುವ ಅನೇಕ ಜನರು ನಿಜವಾಗಿಯೂ ಶೂರರಿದ್ದರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಸಮಾಜಕ್ಕೆ ಸಂಧಿಯೇ ದೊರೆತಿಲ್ಲ.”

ಇಂದು ಬೆಳಿಗ್ಗೆ ತಿರುಗಾಡುವಾಗ ಬಾಪೂ ಹೇಳಿದರು: “ನಿರ್ಣಯ ಬರುವದಿರಲಿ ಅಥವಾ ಏನೇ ಆಗುವದಿರಲಿ ನನಗೆ ನಿದ್ದೆ ಬರಲಿಲ್ಲವೆಂದು ಎಂದಾದರೂ ಆಗಿದೆಯೆ? ಆದರೆ ಈ ದಿನ ರಾತ್ರಿ ಹೀಗೇ ಆಯಿತು. ಈ
೧೩-೮-'೩೨ ನಿರ್ಣಯವು ನನ್ನ ಕನಸಿನಲ್ಲಿ ಬಂತು ಅಥವಾ ಅದರದೇ ವಿಚಾರ
ಬರತೊಡಗಿದವು. ಎಚ್ಚತ್ತೆನು ಮತ್ತು ವಿಚಾರಗಳು ಬರುತ್ತಲೇ ಇದ್ದವು. ಕೊನೆಗೆ ನಕ್ಷತ್ರಗಳನ್ನು ನೋಡುವದರಲ್ಲಿ ಮನಸ್ಸು ಹಾಕಿ ಮಲಗಿ

ದೆನು. ವಿಚಾರಗಳು ಯಾವಾಗ ನಿಂತವೆಂಬುದು ಗೊತ್ತೇ ಇಲ್ಲ. ಇದರ ಕಾರಣವೆಂದರೆ ಮುಂದಿನ ನನ್ನ ಹೆಜ್ಜೆಯು ಈ ನಿರ್ಣಯವನ್ನೇ ಅವಲಂಬಿಸಿದೆ ಯಲ್ಲವೆ ? ”

ಈ ಹೊತ್ತು ಬೆಳಿಗ್ಗೆ ಬಾಪೂ ಕೇಳುತ್ತಿದ್ದರು : “ ವಲ್ಲಭಭಾಯಿಯವರ ಉಚ್ಚಾರಗಳು ಸುಧಾರಿಸಹತ್ತಿವೆಯೇನು ?'' ನಾನು ಹೇಳಿದೆ : “ ಈ ಉಚ್ಚಾರವು ತಪ್ಪು ಎಂಬುದು ಈಗ ಅವರಿಗೆ ಗೊತ್ತಾಗುತ್ತದೆ. ನಿಜವಾಗಿ ನೋಡಿದರೆ

೧೪-೮-'೩೨

ಅವರಿಗೆ ಈ ಓದಿನಲ್ಲಿ ಬಹಳ ರುಚಿ ಉಂಟಾಗುತ್ತಿದೆ. ಇಂದಿನ ವರೆಗೆ ಇದು ಗೊತ್ತೇ ಇದ್ದಿಲ್ಲ. ಈಗ ತೀರ ಹೊಸದಾಗಿ ಕೈಗೆ ಸಿಕ್ಕಿದೆ. **स्वर्गद्वारमपावृतम्**—ಎಂಬಂತೆ ಭಾವನೆಯಾಗಿದೆ. ಆದುದರಿಂದ ವಿದ್ಯುದ್ವೇಗದಿಂದ ಮುಂದುವರಿಯುತ್ತಿದ್ದಾರೆ.'' ಬಾಪೂ ಹೇಳಿದರು : “ ಇದೇ ಓದಿನ ಕೀಲಿಕೈ. ನಮಗೆ ಸಂಸ್ಕೃತದ ಹಳೆಯ ಸಂಸ್ಕಾರಗಳಿವೆ. ಇಡೀ ವಾತಾವರಣವು ಇದರಿಂದ ತುಂಬಿರುವದರಿಂದ ಅದರ ಅಭ್ಯಾಸದ ಬಗ್ಗೆಯಂತೂ ಹೀಗನಿಸುತ್ತದೆ. ಆದರೆ ಯಾವದೇ ಭಾಷೆಯ ಸೂಕ್ಷ್ಮ ಅಧ್ಯಯನವನ್ನು ಮಾಡಹೋದರೆ ಇದೇ ಭಾವನೆಯಾಗುತ್ತದೆ.” ಇದರಲ್ಲಿ ಬಾಪೂ ಅವರ ವ್ಯುತ್ಪತ್ತಿ ಶಾಸ್ತ್ರದ ಅಭಿಲಾಷೆಯು ಒಡೆದು ಕಾಣುತ್ತಿತ್ತು. ಆದರೆ ಬಾಪೂ ಅವರ ಅಭಿಲಾಷೆಗೆ ಮೇರೆ ಎಲ್ಲಿದೆ? ಹುಡಿಗೆಯರ ಬೇನೆಗಳನ್ನು ದೂರಮಾಡುವದಕ್ಕಾಗಿ ಶರೀರ ವಿಜ್ಞಾನದ ಅಧ್ಯಯನ ಮಾಡುವ ಇಚ್ಛೆಯಾಯಿತು. ಅನಿಷ್ಣಾತ ಅಂದರೆ ಸಾಮಾನ್ಯ ಮನುಷ್ಯನಿಗೂ ಉಪಯೋಗ ಬೀಳುವ ಮತ್ತು ಅದರಲ್ಲಿ ರೋಗಗಳ ಉಪಾಯಗಳ ನಿರೂಪಣೆಯುಳ್ಳ ಪುಸ್ತಕವನ್ನು ಆ ದಿವಸ ಮೇಜರ ಮೆಹತಾರನ್ನು ಕೇಳುತ್ತಿದ್ದರು.

ಆಶ್ರಮದ ಟಪಾಲಿನಲ್ಲಿ ರಾಶಿ ಪತ್ರಗಳನ್ನು ಬರೆದರು :

ಛಗನಲಾಲ ಜೋಶಿಯವರಿಗೆ : “ ಆಶ್ರಮದಲ್ಲಿಯ ಕೂಲಿಯ ಹಿಂದೆ ಸ್ವಾತಂತ್ರ್ಯದ ಒಪ್ಪಿಗೆ ಇದೆ, ಬೇರೆ ಕೂಲಿಯ ಹಿಂದೆ ಪರಾಧೀನತೆಯ ಭಾವನೆ ಯಿದೆ. ನಿಜವಾಗಿ ನಮಗಂತೂ ಎರಡರಲ್ಲಿಯೂ ಸ್ವಾತಂತ್ರ್ಯವಿದೆ. ತಾನಾಗಿಯೇ ದುಃಖವನ್ನು ತನ್ನ ತಲೆಯ ಮೇಲೆ ತೆಗೆದುಕೊಳ್ಳುವವನ ಮನಸ್ಸಿನಲ್ಲಿ ಕೂಡ ದುಃಖದ ಬಗ್ಗೆ ತಕರಾರು ಇರುವದಿಲ್ಲ. ಇದಕ್ಕೆ ವಿಪರೀತವಾಗಿ ಆ ದುಃಖವು ಸುಖದಂತೆ ಅನಿಸಬೇಕು. ಕುದಿಯುವ ಎಣ್ಣೆಯ ಕೊಪ್ಪರಿಗೆಯಲ್ಲಿ ಸುಧನ್ವನು ಹೇಗೆ ಸ್ನಾನ ಮಾಡಿರಬಹುದು ? ಪ್ರಹ್ಲಾದನು ಕಾದು ಕೆಂಪಾದ ಕಬ್ಬಿಣದ ಕಂಬವನ್ನು ಹೇಗೆ ಆಲಂಗಿಸಿರಬಹುದು ? ಇವುಗಳನ್ನು ಕಾಲ್ಪನಿಕ ಕತೆಗಳೆಂದು ತಿಳಿಯ ಬೇಡಿರಿ. ಯಾಕಂದರೆ ಹೀಗೆ ಇಂದು ಸಹ ಆಗಬಹುದು. ರಿಡಲಿ, ಲಿಟಿಮರ ಮತ್ತು

ಮನ್ಸೂರರ ಉದಾಹರಣೆಗಳಂತೂ ಐತಿಹಾಸಿಕವಿರುತ್ತವೆ. ಬೇರೆ ನೀವು ಸ್ವತಃ ನೆನವು ಮಾಡಿಕೊಳ್ಳಬಹುದು. ಎಲ್ಲ ಮಾತುಗಳೂ ಮನಸ್ಸನ್ನೇ ಅವಲಂಬಿಸಿರುತ್ತವೆ."

. . . ಗೆ :

"It won't do for any one to say I am only what I am. That is a cry of despair. A seeker of truth will say, 'I will be what I ought to be.' My appeal is for you to come out of your shell and see yourself in every face about you. How can you be lonely in the midst of so much life? All our philosophy is vain, if it does not enable us to rejoice in the company of fellow beings and their service."

"ಯಾರಾದರೂ ನಾನು ಹೇಗೆ ಇದ್ದೇನೆಯೊ ಹಾಗೇ ಇದ್ದೇನೆ ಎಂದು ಅಂದರೆ ತೀರದು. ಇದು ನಿರಾಶೆಯ ಮಾತಾಯಿತು. ನಾನು ಹೇಗಾಗಬೇಕಾಗಿದೆಯೊ ಹಾಗೇ ಆಗುವೆನೆಂದು ಸತ್ಯದ ಪೂಜಾರಿಯು ಹೇಳುವನು. ನೀವು ಈ ಚಿಪ್ಪಿನೊಳಗಿಂದ ಹೊರಗೆ ಬಂದು ನಿಮ್ಮ ಸುತ್ತುಮುತ್ತಲಿನ ಪ್ರತಿಯೊಂದು ಮುಖದಲ್ಲಿಯೂ ನಿಮ್ಮನ್ನು ನೋಡಿಕೊಳ್ಳಿರಿ. ಇಷ್ಟು ಜನರ ಮಧ್ಯದಲ್ಲಿ ನಿಮಗೆ ಒಂಟಿಗತನವು ಏಕೆ ಅನಿಸಬೇಕು? ನಾವು ನಮ್ಮ ನೆರೆಹೊರೆಯವರ ಜೊತೆಯಲ್ಲಿಯೂ ಸೇವೆಯಲ್ಲಿಯೂ ಆನಂದವನ್ನು ಹೊಂದದಿದ್ದರೆ ನಮ್ಮ ಎಲ್ಲ ತತ್ವಜ್ಞಾನವು ವ್ಯರ್ಥ."

. . . ಗೆ : "ಇನ್ನು . . . ಳ ಆತ್ಮದ ಹನನ ಮಾಡಬೇಡಿರಿ. ಅವಳ ಹಟದ ಬಗ್ಗೆ ನನ್ನ ಮನಸ್ಸಿನಲ್ಲಿ ಆದರವಿದೆ. ಅವಳು ಧರ್ಮವೆಂದು ತಿಳಿದಿದ್ದಕ್ಕೆ ನಾವು ಅಡ್ಡಿಯನ್ನು ಹೇಗೆ ಮಾಡಲಿಕ್ಕಾದೀತು? ಅವಳಿಗೆ ಪ್ರೋತ್ಸಾಹನವನ್ನೂ ಕೊಡಬೇಕು. ಅವಳ ಪಾಲನ ಪೋಷಣೆ ಮಾಡುವದು ನಿಮ್ಮ ಧರ್ಮವಾಗಿದೆ. ಅವಳ ಮೇಲೆ ಸಿಟ್ಟಾಗಬಾರದು. ಯಾವಳಾದರೂ ಪರಕೀಯ ಹೆಂಗಸಿದ್ದರೆ ಅವಳ ಆಚರಣೆಯ ಬಗ್ಗೆ ನಾವು ಸಿಟ್ಟಾಗುವದಿಲ್ಲ. ಅದರಂತೆಯೆ ಇಲ್ಲಿಯೂ ಆಗಬೇಕು. ಈ ಪ್ರಕಾರದ ಅಭೇದದಲ್ಲಿ ಅಂತಃಸುಖದ ಬೀಗದಕ್ಕೈ ಇರುತ್ತದೆ."

ಒಬ್ಬ ಹುಡಿಗೆಗೆ : "ಸಿಟ್ಟು ಬಂದಾಗ ಏನು ಮಾಡಬೇಕು? ಎಂಬ ಪ್ರಶ್ನೆಯನ್ನು ಕೇಳುವದರ ಬದಲು ಸಿಟ್ಟುಬಾರದಂತೆ ಮಾಡಲು ಏನು ಮಾಡಬೇಕು ಎಂದು ಕೇಳಬೇಕು. ಸಿಟ್ಟುಬಾರದಂತೆ ಮಾಡಲು ಎಲ್ಲರ ವಿಷಯಕ್ಕೂ ಉದಾರ ಭಾವವನ್ನು ಕಲಿಯಬೇಕು ಮತ್ತು ಎಲ್ಲರಲ್ಲಿಯೂ ನಾವಿದ್ದೇವೆ, ನಮ್ಮಲ್ಲಿ ಎಲ್ಲರೂ ಇದ್ದಾರೆ ಎಂಬ ಭಾವನೆಯನ್ನು ರೂಢಿಮಾಡಿಕೊಳ್ಳಬೇಕು. ಸಮುದ್ರದ ಎಲ್ಲ ಹನಿಗಳು ಬೇರೆ ಬೇರೆ ಇದ್ದಾಗ್ಯೂ ಹೇಗೆ ಒಂದೇ ಇರುವವೊ ಹಾಗೇ ನಾವು ಈ ಸಂಸಾರಸಾಗರದಲ್ಲಿದ್ದೇವೆ. ಇದರಲ್ಲಿ ಯಾರು ಯಾರಮೇಲೆ ಸಿಟ್ಟುಮಾಡಬೇಕು?"

ಇನ್ನೊಬ್ಬ ಹುಡಿಗೆಗೆ : “ ನಿನ್ನ ಅಂತಃಕರಣಕ್ಕೆ ದೋಷವೆಂದು ಅನಿಸದವರೆಗೆ ದೋಷವೆಂದು ತಿಳಿಯಬೇಡ. ಕೊನೆಗೆ ನಮ್ಮಲ್ಲಿ ಬೇರೆ ಯಾವ ಅಳತೆಗೋಲೂ ಇಲ್ಲ. ಆದುದರಿಂದ ನಾವು ಅಂತಃಕರಣವನ್ನು ಶುದ್ಧವಿಡುವ ಪ್ರಯತ್ನ ಮಾಡುತ್ತೇವೆ. ಪಾಪಿಯಾದ ಮನುಷ್ಯನು ಪಾಪವನ್ನೇ ಪುಣ್ಯವೆಂದು ತಿಳಿಯುತ್ತಾನೆ, ಯಾಕಂದರೆ ಅವನ ಹೃದಯವು ಮಲಿನವಿರುತ್ತದೆ. ಏನೇ ಇರಲಿ, ಅವನಿಗೆ ಜ್ಞಾನವಾಗುವವರೆಗೆ ಪಾಪವನ್ನೇ ಪುಣ್ಯವೆಂದು ತಿಳಿದು ನಡೆಯುತ್ತಾ ಇರುವನು. ಆದುದರಿಂದ ನಿನ್ನ ಸಲುವಾಗಿ ಒಳ್ಳೆಯದಾವದೆಂಬುದನ್ನು ಬೇರೆ ಯಾರೂ ತೋರಿಸಲಾರರು. ನಾವು ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದಲೇ ನಡೆಯಬೇಕೆಂಬುದನ್ನು ಮಾತ್ರ ಹೇಳಬಲ್ಲೆ ಮತ್ತು ಹೀಗೆ ನಡೆಯುವದಕ್ಕೆ ಯಮನಿಯಮಾದಿಗಳ ಪಾಲನೆಯು ಅವಶ್ಯವಿದೆ.”

“ ಆಶ್ರಮದಲ್ಲಿ ಜಾತಿಯನ್ನು ಪಾಲಿಸುವದಿಲ್ಲ. ಯಾಕಂದರೆ ಜಾತಿಯಲ್ಲಿ ಧರ್ಮವಿಲ್ಲ. ಹಿಂದೂ ಧರ್ಮಕ್ಕೂ ಇದಕ್ಕೂ ಯಾವ ಸಂಬಂಧವಿಲ್ಲ. ಯಾರನ್ನಾದರೂ ನಮಗಿಂತ ಉಚ್ಚ ಅಥವಾ ನೀಚರೆಂದು ತಿಳಿಯುವದು ಪಾಪವು. ನಾವೆಲ್ಲರೂ ಸಮಾನರು. ಸ್ಪೃಶ್ಯಾಸ್ಪೃಶ್ಯತೆಯು ಪಾಪದ ವಿಷಯಕ್ಕೆ ಇರುತ್ತದೆ. ಮನುಷ್ಯರ ಬಗ್ಗೆ ಇರುವದಿಲ್ಲ. ಸೇವೆಯನ್ನು ಮಾಡಲಿಚ್ಛಿಸುವವರಿಗೆ ಉಚ್ಚನೀಚವೆಂಬ ಭೇದವೇ ಇರುವದಿಲ್ಲ. ಉಚ್ಚನೀಚತೆಗಳ ನಂಬುಗೆಯು ಹಿಂದೂಧರ್ಮಕ್ಕೆ ಕಲಂಕವಿದೆ. ಅದನ್ನು ನಾವು ತೆಗೆದುಹಾಕಲಿಕ್ಕೆ ಬೇಕು. ”

“ ಆತ್ಮ, ಕುಟುಂಬ ದೇಶ ಮತ್ತು ಜಗತ್ತು ಇವುಗಳ ಸಲುವಾಗಿ ನಾಲ್ಕು ಬೇರೆ ಬೇರೆ ಧರ್ಮಗಳಿಲ್ಲ. ನಮ್ಮ ಅಥವಾ ಕುಟುಂಬದ ಅಕಲ್ಯಾಣಮಾಡಿಕೊಂಡು ದೇಶದ ಕಲ್ಯಾಣವಾಗಲಾರದು. ಇದರ ತಾತ್ಪರ್ಯವೆಂದರೆ ನಾವು ಸತ್ತು ಕುಟುಂಬವನ್ನು ಬದುಕಿಸಬೇಕು, ಕುಟುಂಬವು ಸತ್ತು ದೇಶವನ್ನು ಬದುಕಿಸಬೇಕು, ಮತ್ತು ದೇಶವು ಜಗತ್ತನ್ನು ಬದುಕಿಸಬೇಕು. ಆದರೆ ಶುದ್ಧವಾದುದೇ ಬಲಿದಾನವಾಗಬಲ್ಲದು. ಆದುದರಿಂದ ಎಲ್ಲವೂ ಆತ್ಮಶುದ್ಧಿಯಿಂದಲೇ ಪ್ರಾರಂಭವಾಗುತ್ತದೆ. ಆತ್ಮಶುದ್ಧಿಯಾಗುವದರಿಂದ ಪ್ರತಿಕ್ಷಣಕ್ಕೂ ಕರ್ತವ್ಯದ ಅರಿವು ತನ್ನಷ್ಟಕ್ಕೆ ತಾನೇ ಆಗುವದು.

ರಕ್ಷಾ ಬಂಧನ ( ನೂಲು ಹುಣ್ಣಿವೆ )—ಜೇಲಿನಲ್ಲಿ ಪವಿತ್ರ ಹೆಣ್ಣುಮಕ್ಕಳಿಂದ ರಕ್ಷೆ ದೊರಿತರೆ ಸೌಭಾಗ್ಯವೆಂದೇ ಹೇಳಬೇಕಲ್ಲವೆ? ಮಣಿಬಹನ ಪಟೇಲರಿಗೆ ಒಂದೂ-ಕಾಲು ವರುಷ ಶಿಕ್ಷೆಯಾಯಿತು. ಅದೇನೊ ಯೋಗ್ಯವೆ ಇದೆ.

೧೫-೮-'೩೨ ಆದರೆ ಅವರಿಗೆ ಕೊಟ್ಟ ಆಜ್ಞೆಯಲ್ಲಿ ಅಹಮದಾಬಾದ ಬಿಟ್ಟು ಹೋಗಲಿಕ್ಕೂ ಮತ್ತು ಅವರ ಊರಾದ ಕರಮಸದಲ್ಲಿ ಇರಲಿಕ್ಕೂ ಬರೆದಿತ್ತು !

" ಇವರಲ್ಲಿ ನೀವು ಯಾವ ದೇವರನ್ನು ಮಾನ್ಯಮಾಡುತ್ತೀರಿ ? ನಾನಂತೂ ಎರಡನೆಯ ಪ್ರಕಾರದ ದೇವರನ್ನು ಅಂಗೀಕರಿಸುತ್ತೇನೆ. ಅವನು ಪ್ರಾಪ್ತನಾದರೆ ಪ್ರಾರ್ಥನೆ ಮೊದಲಾದ ಬಾಹ್ಯ ಆಚರಣೆಗಳೆಲ್ಲ ವ್ಯರ್ಥವಾಗಿ ಬಿಡುತ್ತವೆ. "

ಬಾಪೂ ಈ ಪ್ರಶ್ನೆಯ ಉತ್ತರವನ್ನು ಬರೆಯಿಸಿದರು : " ನಾವು ಸೇವೆಮಾಡಿಸಿ ಕೊಳ್ಳುವ ಮತ್ತು ಸೇವೆಮಾಡುವ ಎರಡೂ ಬಗೆಯ ದೇವರನ್ನು ನಾನು ಮಾನ್ಯ ಮಾಡುತ್ತೇನೆ. ನಾವು ಸೇವೆ ಮಾಡಬೇಕು ಮತ್ತು ಯಾವದೇ ತರಹದ ಸೇವೆಯನ್ನು ತೆಗೆದುಕೊಳ್ಳಬಾರದು ಹೀಗೇನೂ ಆಗುವದಿಲ್ಲ. ಆದರೆ ಎರಡೂ ಬಗೆಯ ದೇವರು ಕಾಲ್ಪನಿಕರಿದ್ದಾರೆ. ಅವನ ಸಮೀಪದಲ್ಲಿ ಅದೇ ಮಾತು ನಿಜವಾದದ್ದಿದೆ. ನಿಜ ವಾಗಿಯೂ ಇರುವಂಥ ದೇವರು ಕಲ್ಪನಾತೀತನಿರುತ್ತಾನೆ. ಅವನು ಸೇವೆಯನ್ನು ಮಾಡುವದೂ ಇಲ್ಲ, ತೆಗೆದುಕೊಳ್ಳುವದೂ ಇಲ್ಲ. ಅವನ ಸಲುವಾಗಿ ಯಾವ ವಿಶೇಷಣವೂ ಇರುವದಿಲ್ಲ, ಯಾಕಂದರೆ ದೇವರು ಯಾವದೇ ಬಾಹ್ಯ ಶಕ್ತಿಯಾಗಿರುವ ದಿಲ್ಲ, ಆದರೆ ಅವನು ನಮ್ಮ ಒಳಗೇ ಇದ್ದಾನೆ. ದೇವರು ಯಾವ ರೀತಿಯಿಂದ ಕೆಲಸಮಾಡುತ್ತಾನೆಂಬುದು ನಮಗೆ ಗೊತ್ತಿಲ್ಲವಾದುದರಿಂದ ಕಲ್ಪನಾತೀತ ಶಕ್ತಿಯ ಸ್ಮರಣೆ ಮಾಡಲೇಬೇಕು. ನಾವು ಸ್ಮರಣೆ ಮಾಡಿದಂತೆ ನಮ್ಮ ಕಲ್ಪನಾಮಯ ದೇವರು ಉಂಟಾದನು. ಕೊನೆಯ ಮಾತೆಂದರೆ ಆಸ್ತಿಕತೆಯು ಬುದ್ಧಿಯ ಪ್ರಯೋಗ ನಲ್ಲ, ಶ್ರದ್ಧೆಯ ವಿಷಯವಾಗಿದೆ. ಈ ವಿಷಯದಲ್ಲಿ ಬುದ್ಧಿಯ ನೆರವು ಬಹಳ ಕಡಿಮೆ ಸಿಗಬಲ್ಲದು. ದೇವರನ್ನು ಮಾನ್ಯಮಾಡಿದ ಕೂಡಲೆ ವಿಶ್ವದ ವ್ಯವಹಾರದ ಮಾತಿನ ಜಗಳಗಳು ಬಿಟ್ಟುಹೋಗುತ್ತವೆ. ಯಾಕಂದರೆ ಆನಂತರ ನಾವು ದೇವರ ಯಾವದೇ ಕೃತಿಯು ಉದ್ದೇಶರಹಿತವಾಗಿರುವದಿಲ್ಲವೆಂದು ತಿಳಿಯಬೇಕಾಗುವದು. ಇದಕ್ಕಿಂತ ಮುಂದೆ ಹೋಗಲಾರೆ."

**आचारः प्रथमो धर्मः**—ಎಂಬ ಸೂತ್ರವನ್ನು ಉಧೃತಮಾಡಿ ಒಬ್ಬ ಸಹೋದರನು ಇದರ ರಹಸ್ಯವನ್ನು ಕೇಳಿದ್ದನು. ಅದಕ್ಕೆ ಉತ್ತರ ಬರೆದರು : " ಆಚಾರ ಇದರ ಅರ್ಥವು ಕೇವಲ ಬಾಹ್ಯಾಚಾರ ಎಂದಿರುತ್ತದೆ ಮತ್ತು ಹೊರಗಿನ ಆಚಾರವನ್ನು ಹೊತ್ತುಹೊತ್ತಿಗೆ ಬದಲಿಸಬಹುದು. ಒಳಗಿನ ಆಚರಣೆಯು ಯಾವಾಗಲೂ ಒಂದೇ ಇರಬಲ್ಲದು ಅಂದರೆ ಸತ್ಯ, ಅಹಿಂಸೆ ಮುಂತಾದವುಗಳಿಗೆ ಅಂಟಿಕೊಂಡಿರುವದು ; ಮತ್ತು ಇವುಗಳಿಗೆ ಅಂಟಿಕೊಂಡಿದ್ದೇ ಬಾಹ್ಯಾಚಾರವನ್ನು ಬದಲಿಸಬೇಕಾದಲ್ಲಿ ಬದಲಿಸಬಹುದು. ಶಾಸ್ತ್ರದಲ್ಲಿ ಆಚಾರವು ಪ್ರಥಮ ಧರ್ಮ-ವೆಂದು ಹೇಳಿದೆ. ಇದನ್ನು ಹೇಳಿ ಅಥವಾ ಮಾನ್ಯಮಾಡಿ ಯಾವದೇ ವಸ್ತುವಿಗೆ ಅಂಟಿಕೊಂಡಿರುವ ಅವಶ್ಯಕತೆ ಇರುವದಿಲ್ಲ. ಸಂಸ್ಕೃತದಲ್ಲಿ ಬರೆದ ಎಲ್ಲ ವಿಚಾರಗಳೂ ಶಾಸ್ತ್ರಗಳಲ್ಲ. ಮಾನವ ಧರ್ಮಶಾಸ್ತ್ರದ ಹೆಸರಿನಿಂದ ಪ್ರಸಿದ್ಧವಾದ ಗ್ರಂಥವು

ಕೂಡ ನಿಜವಾಗಿಯೂ ಶಾಸ್ತ್ರವಲ್ಲ. ಶಾಸ್ತ್ರವು ಪುಸ್ತಕಗಳಲ್ಲಿ ಬರೆದ ವಸ್ತುವಲ್ಲ, ಅದು ಜೀವಂತ ವಸ್ತುವಾಗಿರಬೇಕು. ಆದುದರಿಂದ ಚಾರಿತ್ರ್ಯವಂತ ಜ್ಞಾನಿಯ ಅಥವಾ ನಡೆನುಡಿಗಳು ಒಂದೇ ಇದ್ದವನ ಹೇಳಿಕೆಯು ನಮ್ಮ ಶಾಸ್ತ್ರವು. ಇಂಥ ದೀವಟಿಗೆ ನಮ್ಮ ಕೈಯ್ಯಲ್ಲಿಲ್ಲದಿದ್ದಾಗ ನಮಗೆ ಸಂಸ್ಕಾರವಾಗಿದ್ದರೆ ನಮಗೆ ಸತ್ಯ ವೆಂದು ಕಂಡದ್ದೇ ನಮ್ಮ ಶಾಸ್ತ್ರವು."

ಪ್ರಾರ್ಥನೆ ಮತ್ತು ಬ್ರಹ್ಮಚರ್ಯೆಯ ಸಂಬಂಧಗಳು : ಒಬ್ಬ ಸಹೋದರನು ಪ್ರಾರ್ಥನೆಯ ಸಂಗಡ ಬ್ರಹ್ಮಚರ್ಯಕ್ಕೂ ಏಕೆ ಜೋರು ಕೊಡುತ್ತಿರುವದಿಲ್ಲವೆಂದು ಕೇಳಿದನು. ಅವರಿಗೆ ಉತ್ತರ ಬರೆದರು : " ಪ್ರಾರ್ಥನೆ ಮತ್ತು ಬ್ರಹ್ಮಚರ್ಯೆಎರಡೂ ಒಂದೇ ಅಲ್ಲ. ಬಹ್ಮಚರ್ಯವು ಐದು ಮಹಾನ್ ವ್ರತಗಳಲ್ಲಿ ಒಂದಾಗಿದೆ ಪ್ರಾರ್ಥನೆಯು ಅದನ್ನು ಪಡೆಯುವ ಒಂದು ಸಾಧನವಾಗಿದೆ. ಬ್ರಹ್ಮಚರ್ಯೆಯ ಆವಶ್ಯಕತೆಯನ್ನು ಕುರಿತು ನಾನು ಬಹಳ ಹೇಳಿದ್ದೇನೆ, ಬಹಳ ತಿಳಿಸಿದ್ದೇನೆ. ಆದರೆ ಅದನ್ನು ಯಾವ ರೀತಿಯಿಂದ ಸಾಧಿಸಬೇಕು ಎಂಬ ವಿಚಾರ ಮಾಡುತ್ತಿರು- ವಾಗ ಅದಕ್ಕೆ ಉತ್ತರವೆಂದು ಪ್ರಾರ್ಥನೆಯೊಂದೇ ದೊಡ್ಡ ಸಾಧನವು ದೊರೆತಿದೆ. ಪ್ರಾರ್ಥನೆಯ ಮೂಲ್ಯವನ್ನು ಅರಿಯುವಂಥವನಿಗೆ ಮತ್ತು ಮೂಲ್ಯವನ್ನು ಅರಿತ ಮೇಲೆ ಪ್ರಾರ್ಥನೆಯಲ್ಲಿ ತಲ್ಲೀನನಾಗುವಂಥವನಿಗೆ ಬ್ರಹ್ಮಚರ್ಯೆ' ಯು ಸುಲಭ ವಾಗಿರುತ್ತದೆ. "

ಆದರ್ಶ ಡಾಕ್ಟರರ ಬಗ್ಗೆ : " ತನ್ನ ಉದ್ಯೋಗದ ವಿಷಯದಲ್ಲಿ ಉತ್ತಮ ಜ್ಞಾನವನ್ನು ಪ್ರಾಪ್ತಮಾಡಿಕೊಂಡು ಆ ಜ್ಞಾನದ ಉಪಯೋಗವನ್ನು ಜನರಿಗೆ ಪುಕ್ಕಟೆಯಾಗಿ ಕೊಡವವನೇ ನನ್ನ ಆದರ್ಶ ಡಾಕ್ಟರನು. ತನ್ನ ಚರಿತಾರ್ಥವಾಗಿ ಅವನು ಯಾವದಾದರೊಂದು ಸಾಮಾನ್ಯ ಉದ್ಯೋಗವನ್ನು ಮಾಡಲಿ ಅಥವಾ ಜನರು ಏನಾದರೂ ಸ್ವಲ್ಪ ಕೊಟ್ಟದ್ದರ ಮೇಲೆ ತನ್ನ ನಿರ್ವಾಹವನ್ನು ಸಾಗಿಸಲಿ. ಆದರೆ ಅದನ್ನು ತನ್ನ ಕೆಲಸದ ಫೀ ಎಂದು ಎಂದೂ ತಿಳಿಯಬಾರದು. ಆದರ್ಶ ಸ್ಥಿತಿಯಲ್ಲಿ ನಾನು ಇಂಥ ಸೇವಕರ ವಾರ್ಷಿಕ ವೇತನವನ್ನು ಗೊತ್ತುಮಾಡುವೆನು. ಇದನ್ನು ಬಿಟ್ಟು ಅವರು ಶ್ರೀಮಂತರು ಬಡವರು ಯಾರಕಡೆಯಿಂದಲೂ ಏನನ್ನೂ ತೆಗೆದು ಕೊಳ್ಳಲಾರರು. "

ಅವರವೇ ಬೇರೆ ಪ್ರಶ್ನೆಗಳ ಉತ್ತರಕ್ಕೆ: " ನನಗೆ ಗೊತ್ತಿದ್ದಮಟ್ಟಿಗೆ ಜಪಯಜ್ಞದ ಅರ್ಥ ನಾಮಸ್ಮರಣೆ.

" ಮಿತಾಹಾರದ ಪ್ರಮಾಣವನ್ನು ಗೊತ್ತುಮಾಡುವದು ಕಠಿಣವಿದೆ. ಅಲ್ಪಾ ಹಾರದ ಪ್ರಮಾಣವನ್ನು ಸಹಜವಾಗಿ ಗೊತ್ತುಮಾಡಬಹುದು. ಯಾಕಂದರೆ ಅಲ್ಪಾ

" ಇವರಲ್ಲಿ ನೀವು ಯಾವ ದೇವರನ್ನು ಮಾನ್ಯಮಾಡುತ್ತೀರಿ ? ನಾನಂತೂ ಎರಡನೆಯ ಪ್ರಕಾರದ ದೇವರನ್ನು ಅಂಗೀಕರಿಸುತ್ತೇನೆ. ಅವನು ಪ್ರಾಪ್ತನಾದರೆ ಪ್ರಾರ್ಥನೆ ಮೊದಲಾದ ಬಾಹ್ಯ ಆಚರಣೆಗಳೆಲ್ಲ ವ್ಯರ್ಥವಾಗಿ ಬಿಡುತ್ತವೆ. "

ಬಾಪೂ ಈ ಪ್ರಶ್ನೆಯ ಉತ್ತರವನ್ನು ಬರೆಯಿಸಿದರು : " ನಾವು ಸೇವೆಮಾಡಿಸಿಕೊಳ್ಳುವ ಮತ್ತು ಸೇವೆಮಾಡುವ ಎರಡೂ ಬಗೆಯ ದೇವರನ್ನು ನಾನು ಮಾನ್ಯ ಮಾಡುತ್ತೇನೆ. ನಾವು ಸೇವೆ ಮಾಡಬೇಕು ಮತ್ತು ಯಾವದೇ ತರಹದ ಸೇವೆಯನ್ನು ತೆಗೆದುಕೊಳ್ಳಬಾರದು ಹೀಗೇನೂ ಆಗುವದಿಲ್ಲ. ಆದರೆ ಎರಡೂ ಬಗೆಯ ದೇವರು ಕಾಲ್ಪನಿಕರಿದ್ದಾರೆ. ಅವನ ಸಮೀಪದಲ್ಲಿ ಅದೇ ಮಾತು ನಿಜವಾದದ್ದಿದೆ. ನಿಜವಾಗಿಯೂ ಇರುವಂಥ ದೇವರು ಕಲ್ಪನಾತೀತನಿರುತ್ತಾನೆ. ಅವನು ಸೇವೆಯನ್ನು ಮಾಡುವದೂ ಇಲ್ಲ, ತೆಗೆದುಕೊಳ್ಳುವದೂ ಇಲ್ಲ. ಅವನ ಸಲುವಾಗಿ ಯಾವ ವಿಶೇಷಣವೂ ಇರುವದಿಲ್ಲ, ಯಾಕೆಂದರೆ ದೇವರು ಯಾವದೇ ಬಾಹ್ಯ ಶಕ್ತಿಯಾಗಿರುವದಿಲ್ಲ, ಆದರೆ ಅವನು ನಮ್ಮ ಒಳಗೇ ಇದ್ದಾನೆ. ದೇವರು ಯಾವ ರೀತಿಯಿಂದ ಕೆಲಸಮಾಡುತ್ತಾನೆಂಬುದು ನಮಗೆ ಗೊತ್ತಿಲ್ಲವಾದುದರಿಂದ ಕಲ್ಪನಾತೀತ ಶಕ್ತಿಯ ಸ್ಮರಣೆ ಮಾಡಲೇಬೇಕು. ನಾವು ಸ್ಮರಣೆ ಮಾಡಿದಂತೆ ನಮ್ಮ ಕಲ್ಪನಾಮಯ ದೇವರು ಉಂಟಾದನು. ಕೊನೆಯ ಮಾತೆಂದರೆ ಆಸ್ತಿಕತೆಯು ಬುದ್ಧಿಯ ಪ್ರಯೋಗವಲ್ಲ, ಶ್ರದ್ಧೆಯ ವಿಷಯವಾಗಿದೆ. ಈ ವಿಷಯದಲ್ಲಿ ಬುದ್ಧಿಯ ನೆರವು ಬಹಳ ಕಡಿಮೆ ಸಿಗಬಲ್ಲದು. ದೇವರನ್ನು ಮಾನ್ಯಮಾಡಿದ ಕೂಡಲೆ ವಿಶ್ವದ ವ್ಯವಹಾರದ ಮಾತಿನ ಜಗಳಗಳು ಬಿಟ್ಟುಹೋಗುತ್ತವೆ. ಯಾಕೆಂದರೆ ಅನಂತರ ನಾವು ದೇವರ ಯಾವದೇ ಕೃತಿಯು ಉದ್ದೇಶರಹಿತವಾಗಿರುವದಿಲ್ಲವೆಂದು ತಿಳಿಯಬೇಕಾಗುವದು. ಇದಕ್ಕಿಂತ ಮುಂದೆ ಹೋಗಲಾರೆ."

**आचारः प्रथमो धर्मः**—ಎಂಬ ಸೂತ್ರವನ್ನು ಉಧೃತಮಾಡಿ ಒಬ್ಬ ಸಹೋದರನು ಇದರ ರಹಸ್ಯವನ್ನು ಕೇಳಿದ್ದನು. ಅದಕ್ಕೆ ಉತ್ತರ ಬರೆದರು : " ಆಚಾರ ಇದರ ಅರ್ಥವು ಕೇವಲ ಬಾಹ್ಯಾಚಾರ ಎಂದಿರುತ್ತದೆ ಮತ್ತು ಹೊರಗಿನ ಆಚಾರವನ್ನು ಹೊತ್ತುಹೊತ್ತಿಗೆ ಬದಲಿಸಬಹುದು. ಒಳಗಿನ ಆಚರಣೆಯು ಯಾವಾಗಲೂ ಒಂದೇ ಇರಬಲ್ಲದು ಅಂದರೆ ಸತ್ಯ, ಅಹಿಂಸೆ ಮುಂತಾದವುಗಳಿಗೆ ಅಂಟಿಕೊಂಡಿರುವದು ; ಮತ್ತು ಇವುಗಳಿಗೆ ಅಂಟಿಕೊಂಡಿದ್ದೇ ಬಾಹ್ಯಾಚಾರವನ್ನು ಬದಲಿಸಬೇಕಾದಲ್ಲಿ ಬದಲಿಸಬಹುದು. ಶಾಸ್ತ್ರದಲ್ಲಿ ಆಚಾರವು ಪ್ರಥಮ ಧರ್ಮವೆಂದು ಹೇಳಿದೆ. ಇದನ್ನು ಹೇಳಿ ಅಥವಾ ಮಾನ್ಯಮಾಡಿ ಯಾವದೇ ವಸ್ತುವಿಗೆ ಅಂಟಿಕೊಂಡಿರುವ ಅವಶ್ಯಕತೆ ಇರುವದಿಲ್ಲ. ಸಂಸ್ಕೃತದಲ್ಲಿ ಬರೆದ ಎಲ್ಲ ವಿಚಾರಗಳೂ ಶಾಸ್ತ್ರಗಳಲ್ಲ. ಮಾನವ ಧರ್ಮಶಾಸ್ತ್ರದ ಹೆಸರಿನಿಂದ ಪ್ರಸಿದ್ಧವಾದ ಗ್ರಂಥವು

ಕೂಡ ನಿಜವಾಗಿಯೂ ಶಾಸ್ತ್ರವಲ್ಲ. ಶಾಸ್ತ್ರವು ಪುಸ್ತಕಗಳಲ್ಲಿ ಬರೆದ ವಸ್ತುವಲ್ಲ, ಅದು ಜೀವಂತ ವಸ್ತುವಾಗಿರಬೇಕು. ಆದುದರಿಂದ ಚಾರಿತ್ರ್ಯವಂತ ಜ್ಞಾನಿಯ ಅಥವಾ ನಡೆನುಡಿಗಳು ಒಂದೇ ಇದ್ದವನ ಹೇಳಿಕೆಯು ನಮ್ಮ ಶಾಸ್ತ್ರವು. ಇಂಥ ದೀವಟಿಗೆ ನಮ್ಮ ಕೈಯ್ಯಲ್ಲಿಲ್ಲದಿದ್ದಾಗ ನಮಗೆ ಸಂಸ್ಕಾರವಾಗಿದ್ದರೆ ನಮಗೆ ಸತ್ಯ ವೆಂದು ಕಂಡದ್ದೇ ನಮ್ಮ ಶಾಸ್ತ್ರವು."

ಪ್ರಾರ್ಥನೆ ಮತ್ತು ಬ್ರಹ್ಮಚರ್ಯೆಯ ಸಂಬಂಧಗಳು : ಒಬ್ಬ ಸಹೋದರನು ಪ್ರಾರ್ಥನೆಯ ಸಂಗಡ ಬ್ರಹ್ಮಚರ್ಯಕ್ಕೂ ಏಕೆ ಜೋರು ಕೊಡುತ್ತಿರುವದಿಲ್ಲವೆಂದು ಕೇಳಿದನು. ಅವರಿಗೆ ಉತ್ತರ ಬರೆದರು : " ಪ್ರಾರ್ಥನೆ ಮತ್ತು ಬ್ರಹ್ಮಚರ್ಯೆಎರಡೂ ಒಂದೇ ಅಲ್ಲ. ಬಹ್ಮಚರ್ಯವು ಐದು ಮಹಾನ್ ವ್ರತಗಳಲ್ಲಿ ಒಂದಾಗಿದೆ ಪ್ರಾರ್ಥನೆಯು ಅದನ್ನು ಪಡೆಯುವ ಒಂದು ಸಾಧನವಾಗಿದೆ. ಬ್ರಹ್ಮಚರ್ಯೆಯ ಆವಶ್ಯಕತೆಯನ್ನು ಕುರಿತು ನಾನು ಬಹಳ ಹೇಳಿದ್ದೇನೆ, ಬಹಳ ತಿಳಿಸಿದ್ದೇನೆ. ಆದರೆ ಅದನ್ನು ಯಾವ ರೀತಿಯಿಂದ ಸಾಧಿಸಬೇಕು ಎಂಬ ವಿಚಾರ ಮಾಡುತ್ತಿರು-ವಾಗ ಅದಕ್ಕೆ ಉತ್ತರವೆಂದು ಪ್ರಾರ್ಥನೆಯೊಂದೇ ದೊಡ್ಡ ಸಾಧನವು ದೊರೆತಿದೆ. ಪ್ರಾರ್ಥನೆಯ ಮೂಲ್ಯವನ್ನು ಅರಿಯುವಂಥವನಿಗೆ ಮತ್ತು ಮೂಲ್ಯವನ್ನು ಅರಿತ ಮೇಲೆ ಪ್ರಾರ್ಥನೆಯಲ್ಲಿ ತಲ್ಲೀನನಾಗುವಂಥವನಿಗೆ ಬ್ರಹ್ಮಚರ್ಯೆ' ಯು ಸುಲಭ ವಾಗಿರುತ್ತದೆ. "

ಆದರ್ಶ ಡಾಕ್ಟರರ ಬಗ್ಗೆ : " ತನ್ನ ಉದ್ಯೋಗದ ವಿಷಯದಲ್ಲಿ ಉತ್ತಮ ಜ್ಞಾನವನ್ನು ಪ್ರಾಪ್ತಮಾಡಿಕೊಂಡು ಆ ಜ್ಞಾನದ ಉಪಯೋಗವನ್ನು ಜನರಿಗೆ ಪುಕ್ಕಟೆಯಾಗಿ ಕೊಡವವನೇ ನನ್ನ ಆದರ್ಶ ಡಾಕ್ಟರನು. ತನ್ನ ಚರಿತಾರ್ಥವಾಗಿ ಅವನು ಯಾವದಾದರೊಂದು ಸಾಮಾನ್ಯ ಉದ್ಯೋಗವನ್ನು ಮಾಡಲಿ ಅಥವಾ ಜನರು ಏನಾದರೂ ಸ್ವಲ್ಪ ಕೊಟ್ಟದ್ದರ ಮೇಲೆ ತನ್ನ ನಿರ್ವಾಹವನ್ನು ಸಾಗಿಸಲಿ. ಆದರೆ ಅದನ್ನು ತನ್ನ ಕೆಲಸದ ಫೀ ಎಂದು ಎಂದೂ ತಿಳಿಯಬಾರದು. ಆದರ್ಶ ಸ್ಥಿತಿಯಲ್ಲಿ ನಾನು ಇಂಥ ಸೇವಕರ ವಾರ್ಷಿಕ ವೇತನವನ್ನು ಗೊತ್ತುಮಾಡುವೆನು. ಇದನ್ನು ಬಿಟ್ಟು ಅವರು ಶ್ರೀಮಂತರು ಬಡವರು ಯಾರಕಡೆಯಿಂದಲೂ ಏನನ್ನೂ ತೆಗೆದು ಕೊಳ್ಳಲಾರರು. "

ಅವರವೇ ಬೇರೆ ಪ್ರಶ್ನೆಗಳ ಉತ್ತರಕ್ಕೆ: " ನನಗೆ ಗೊತ್ತಿದ್ದಮಟ್ಟಿಗೆ ಜಪಯಜ್ಞದ ಅರ್ಥ ನಾಮಸ್ಮರಣೆ.

" ಮಿತಾಹಾರದ ಪ್ರಮಾಣವನ್ನು ಗೊತ್ತುಮಾಡುವದು ಕಠಿಣವಿದೆ. ಅಲ್ಪಾ ಹಾರದ ಪ್ರಮಾಣವನ್ನು ಸಹಜವಾಗಿ ಗೊತ್ತುಮಾಡಬಹುದು. ಯಾಕಂದರೆ ಅಲ್ಪಾ

ಹಾರದ ಅರ್ಥವು ನಿಶ್ಚಯಪೂರ್ವಕವಾಗಿ ಕಡಿಮೆ ತಿನ್ನುವದೆಂದಿರುತ್ತದೆ. ಮತ್ತು ಇದೇ ಮಾನ್ಯ ಮಾಡಲು ಯೋಗ್ಯವಾಗಿದೆ.

" ಸತ್ಯವನ್ನಾಚರಿಸಬಯಸುವವನ ಹತ್ತರ ಗೌಪ್ಯವಾಗಿಡತಕ್ಕಂಥ ಒಂದೂ ವಿಚಾರವಿರತಕ್ಕದ್ದಲ್ಲ. ಕೆಟ್ಟ ವಿಚಾರಗಳು ಕೂಡ ಜಗತ್ತಿಗೆ ಗೊತ್ತಾದರೂ ಚಿಂತಿಸ ಬಾರದು. ಕೆಟ್ಟವಿಚಾರಗಳ ಸಲುವಾಗಿ, ಪಾಪದ ಸಲುವಾಗಿ ಚಿಂತೆಯಿರಬೇಕು. ನನ್ನ ದಿನಚರಿಯನ್ನು ಯಾರಾದರೂ ನೋಡಿಯಾರು ಎಂಬ ಅಂಜಿಕೆಯ ಮೂಲದಲ್ಲಿ ನಾವು ಇದ್ದುದಕ್ಕಿಂತಲೂ ಹೆಚ್ಚು ಒಳ್ಳೆಯವರಾಗಿ ಕಾಣಸಿಕೊಳ್ಳುವ ವಿಚಾರ ವಿರುತ್ತದೆ. ತನ್ನ ದಿನಚರಿಯನ್ನು ಇಡೀ ಜಗತ್ತೇ ನೋಡಿದರೂ ಅತ್ತ ಲಕ್ಷ್ಯಕೊಡದ ಮನುಷ್ಯನು ತನ್ನ ಹೆಂಡತಿಯಿಂದ ಹೇಗೆ ಬಚ್ಚಿಡುವನು ?

" ವ್ರತದ ಮರ್ಯಾದೆಯು ನಮ್ಮ ಅಶಕ್ತತೆಯು ಆಗಬಲ್ಲದು.

" ಮಿತ್ರ ಮಿತ್ರರಲ್ಲಿಯೂ ಕೂಡ ನಾನು, ನೀನು ಎಂಬ ಭೇದವಿರುವವರೆಗೆ, ಈ ಭೇದವು ಪತಿಪತ್ನಿಯರ ವಿಷಯದಲ್ಲಿಯೂ ಇದ್ದೇ ಇರುವವರೆಗೆ ಮತ್ತು ಶರೀರಧಾರಿ ಗಳಿಗೆ ಅನಿವಾರ್ಯವಾಗಿರುವವರೆಗೆ ಪರವಾನಿಗೆಯ ಹೊರತು ಒಬ್ಬರು ಇನ್ನೊಬ್ಬರ ವಸ್ತುವನ್ನು ಎಂದೂ ತೆಗೆದುಕೊಳ್ಳಬಾರದು. ಅದೇ ಸ್ಥಳದಲ್ಲಿ ಇಡುವ ನಿಶ್ಚಯವು ಇದಕ್ಕೆ ಸಹಕಾರಿಯಾಗಲಾರದು. ಇದರ ಒಂದು ದೊಡ್ಡ ಕಾರಣವೆಂದರೆ ಮರು ಕ್ಷಣಕ್ಕೆ ತಾನು ಜೀವಂತನಿರುವೆನೊ ಅಥವಾ ಸಾಯುವೆನೊ ಎಂಬುದಾಗಲಿ ಅಥವಾ ತನ್ನ ವಶದಲ್ಲಿ ಬಂದ ಮೇಲೆ ಆ ವಸ್ತುವನ್ನು ಯಾರಾದರೂ ಎತ್ತಿಕೊಂಡು ಹೋಗು ವರೊ ಇಲ್ಲವೊ ಎಂಬುದಾಗಲಿ ಸ್ವತಃ ನಿಶ್ಚಯಮಾಡುವವನಿಗೆ ಎಲ್ಲಿ ಗೊತ್ತಿದೆ ? ಈ ನಿಯಮವನ್ನು ಪಾಲಿಸುವಾಗ ಯಾರಾದರೂ ಕುರಿಯಂತೆ ನಡೆಯುವ ಅಥವಾ ಇದಕ್ಕಿಂತಲೂ ಕೆಟ್ಟ ಆರೋಪವನ್ನು ಮಾಡಿದರೆ ಅದು ಸಹನೆಮಾಡಲು ಯೋಗ್ಯ ವಾಗಿದೆ. "

ಇಂದು ಬಾಪೂ ಮಿತ್ರ ತರ್ಪಣದಲ್ಲಿಯೇ ಹೆಚ್ಚು ಕಾಲ ಕಳೆದರೆಂದು ಹೇಳ ಬಹುದು. ಡಾ. ಮೆಹತಾರ ಮೃತ್ಯುವಿನ ನಂತರ ಉಂಟಾಗುವ ಪರಿಸ್ಥಿತಿಯ ಸಮಸ್ಯೆಯನ್ನು ಬಿಡಿಸುವದಕ್ಕಾಗಿ ' ಎಷ್ಟೊ ಪತ್ರಗಳನ್ನು
೧೬-೮-'೩೨ ಬರೆದರು. ಈ ಪತ್ರಗಳ ವಿವೇಚನೆಯು ನಿರರ್ಥಕವಿದೆ. ಆದರೆ ಈ ಎಲ್ಲ ಪತ್ರಗಳಲ್ಲಿ ಪ್ರತಿಪಾದಿತವಾದ ಒಂದು ಸಿದ್ಧಾಂತವನ್ನು ಇಲ್ಲಿ ತೋರಿಸಲಿಕ್ಕೆಬೇಕು : " ವಿಶ್ವಾಸಪಾತ್ರರಿಲ್ಲದವರನ್ನು ನಂಬಲಾಗದೆಂದು ನೀನು ಬರೆದದ್ದು ಯೋಗ್ಯವಾಗಿದೆ. ನಾವು ಯಾರನ್ನೂ ಸಂಶಯದೃಷ್ಟಿಯಿಂದ ನೋಡಬಾರದೆಂಬುದೇ ನನ್ನ ಬರಹದ ಉದ್ದೇಶವಾಗಿತ್ತು. ಜಗತ್ತು ನಮ್ಮ ಮಾತಿನಮೇಲೆ ನಂಬುಗೆಯನ್ನಿಡಬೇಕೆಂದು ನಾವು ಬಯಸುವಂತೆ ನಾವು ಕೂಡ

ಎರಡನೆಯವರ ಮಾತಿನಮೇಲೆ ನಂಬುಗೆಯನ್ನಿಡಬೇಕು. ಅವನು ನಂಬಿಗಸ್ಥನಲ್ಲವೆಂದು ಸಿದ್ಧವಾದರೆ ಪಶ್ಚಾತ್ತಾಪ ಪಡಬಾರದು. ಇದುವರೆಗೆ ಜಗತ್ತಿನಲ್ಲಿ ನಂಬುಗೆಯನ್ನಿಡುವವನಿಗೆ ಏನೂ ಹಾನಿಯಾಗಿಲ್ಲ. ಅಪನಂಬಿಗೆಯನ್ನು ಮಾಡುವವನಿಗೆ ಕೋಟ್ಯಾವಧಿ ರೂಪಾಯಿಗಳನ್ನು ಗಳಿಸುವ ಪ್ರಯತ್ನಮಾಡುತ್ತಿದ್ದರೂ ಹಾನಿಯೇ ಆಗಿದೆ. ನಮ್ಮ ಆತ್ಮವು ಮಲಿನವಾದರೆ ನಮಗೆ ಹಾನಿಯಾಯಿತು. ಧನ ದೌಲತ್ತು ಬರುತ್ತ ಹೋಗುತ್ತಿರುತ್ತದೆ. ಹೊರಟುಹೋದರೆ ಎಂದೂ ದುಃಖಪಡಬಾರದು.”

ನನ್ನ ಹೊಲದ ಸರಕಾರೀ ಹಪ್ತೆಯನ್ನು ಕೊಟ್ಟ ಸ್ಥಿತಿಯ ಚಿತ್ರವು ಮಗನ-ಭಾಯಿಯ ಪತ್ರದಲ್ಲಿ ಬಂತು. ಎಲ್ಲಿ ನಮ್ಮ ಹೇಡಿ ಊರು, ಎಲ್ಲಿ ಬೋರಸಾದದ ಉತ್ಸಾಹ! ಸರಕಾರವು ಪೆನಶನ್‌ದಾರರನ್ನು ಎಷ್ಟು ಗುಲಾಮರನ್ನಾಗಿ ಮಾಡಿದೆ-ಯೆಂಬುದು ಈ ಸಂಧಿಯಲ್ಲಿ ನೋಡಲಿಕ್ಕೆ ಸಿಕ್ಕಿತು. ಇಡೀ ತಂತ್ರದ ಒಂದೊಂದು ಮಾತನ್ನು ಸೂಕ್ಷ್ಮರೀತಿಯಿಂದ ನೋಡಿದರೆ ಅದನ್ನು ಹಗಲು ರಾತ್ರಿ ಸ್ಥಿರವಾಗಿ ಇಡುವದಕ್ಕಾಗಿಯೂ ಜನರ ಮೇಲೆ ಗುಲಾಮಗಿರಿಯನ್ನು ಸುಂದರ ರೀತಿಯಲ್ಲಿ ನಿರಂತರವಾಗಿ ಹೇರುವದಕ್ಕಾಗಿಯೂ ರಚಿಸಲಾಗಿದೆ ಎಂದು ಗೊತ್ತಾಗುತ್ತದೆ. ಬಾಪೂರನ್ನು, ವಲ್ಲಭಭಾಯಿಯವರನ್ನು, ನನ್ನನ್ನು ಬೈಯ್ಯುವ ಕಲೆಕ್ಟರನು ನಮ್ಮ ಜಾತಿಯವನೇ . . . ಇದ್ದಾನೆ.

ಈಹೊತ್ತು ಜಾತೀಯ ನಿರ್ಣಯವು ಬಂದಿತು. ಬಾಪೂ, ಸಾಯಂಕಾಲದವರೆಗೆ ಏನೂ ಸಂಭವಿಸಿಯೇ ಇಲ್ಲವೇನೊ ಎಂಬುವವರಂತೆ ಇದ್ದರು. ನನ್ನ ಕಡೆಯಿಂದ ಸೆಜ್ಜಿಯ ರೊಟ್ಟಿಗಳನ್ನು ಮಾಡಿಸಿಕೊಂಡು ಒಳ್ಳೇ ಸ್ವಾದದಿಂದ

೧೭-೮-'೩೨ ತಿಂದರು. ಮಧ್ಯಾಹ್ನದಲ್ಲಿ ಯಂತ್ರದಿಂದ ಬದಾಮಿಯ ಬೆಣ್ಣೆ-ಯನ್ನು ತಯಾರುಮಾಡಿಸಿಕೊಂಡರು. ಸಾಯಂಕಾಲ ತಿರುಗಾಡುವಾಗ ಹಾರ್ನಿಮನ್ನನ ಲೇಖವನ್ನು ಓದಿದರು. ಅದು ಮನಸ್ಸಿಗೆ ಬಂತು. ಬೆಳಿಗ್ಗೆ ಮಾತಾಡುವಾಗ ಅಲ್ಲೊಂದು ಇಲ್ಲೊಂದು ಈ ಮಾತುಗಳು ಹೊರಡುತ್ತಿದ್ದವು: “ಅಲ್ಪಮತದವರ ಕರಾರಿನಲ್ಲಿದ್ದುದನ್ನೇ ಮಾಡಲಾಗಿದೆ. ಬೆಂಥಾಲಾನ ಪತ್ರದಲ್ಲಿ-ದ್ದುದರಂತೆಯೆ ನಡೆಯತೊಡಗಿದೆ.” ನಾನು ಹೇಳಿದೆ: “ಈ ಹೊಸ ಘಟನೆಯು ವೆಲ್ಲಿಂಟಫೋರ್ಡನ ಸುಧಾರಣೆಗಿಂತಲೂ ಹೆಚ್ಚು ಕೆಟ್ಟದಿದೆ.” ಬಾಪೂ: “ಇದರಲ್ಲಿ ಯಾವ ಸಂದೇಹವೂ ಇಲ್ಲ. ಹಿಂದಿನ ಸುಧಾರಣೆಗಳಲ್ಲೂ ನಮ್ಮ ಲಖನೌದ ಒಪ್ಪಂದವನ್ನು ಆಧಾರವನ್ನಾಗಿಟ್ಟುಕೊಳ್ಳಲಾಗಿತ್ತು. ಆದರೆ ಈ ಸಾರೆ ದೇಶವು ಮತ್ತೊಮ್ಮೆ ಮೇಲಕ್ಕೇಳದಂಥ ಒಡಕನ್ನೂ ಮಾಡಲಾಗಿದೆ ಮತ್ತು ಛಿನ್ನಭಿನ್ನ ಮಾಡುವ ಜಾಲವನ್ನು ರಚಿಸಲಾಗಿದೆ.” ಸಾಯಂಕಾಲ ಪ್ರಾರ್ಥನೆಗಿಂತ

ಮೊದಲು ಹೇಳಿದರು: "ಒಳ್ಳೆಯದು, ಇನ್ನು ನೀನು ಮತ್ತು ವಲ್ಲಭಭಾಯಿ ವಿಚಾರಮಾಡಿರಿ. ನನಗೆ ಹೇಳುವದನ್ನು ಹೇಳಿರಿ. ಸ್ಯಾಮುಅಲ್ ಹೋರನಿಗೆ ಬರೆದ ಪತ್ರವು ಇದಕ್ಕೆ ಅನ್ವಯಿಸುತ್ತದೆ. ಆದುದರಿಂದ ಇನ್ನು ನಾವು ನೋಟೀ-ಸನ್ನು ಕೊಡಬೇಕಾಗುವನು!" ನಾನು ಬೆಚ್ಚಿದೆನು. ಸುಮ್ಮನಿದ್ದೆನು. ನಮಗೂ ಕೂಡ ಹೀಗೆ ಅನಿಸುತ್ತಿತ್ತು. '**अबकी टेक हमारी**' ಪದ್ಯವನ್ನು ಹಾಡಿದೆವು ಮತ್ತು ಆಶ್ರಮದಿಂದ ಬಂದ ಟಪಾಲನ್ನು ಓದಲಿಕ್ಕೆ ಪ್ರಾರಂಭಮಾಡಿದೆವು.

ಬರೆಯುವ ಪತ್ರಗಳನ್ನೆಲ್ಲ ಗಡಿಬಿಡಿಯಿಂದ ಬರೆದರು. ರಾತ್ರಿ ಮ್ಯಾಕ್ಡೊ-ನಲ್ಡರಿಗೆ ಪತ್ರ ಬರೆಯಲು ಪ್ರಾರಂಭಿಸಿದರು.

ಬೆಳಿಗ್ಗೆ ಪತ್ರವನ್ನು ಪೂರ್ಣಮಾಡಿ ನಮಗೆ ಹೇಳಿದರು: "ನೂಲುವದನ್ನು ಬಿಟ್ಟು ಈ ಪತ್ರವನ್ನು ಓದಿದರೆ ಇದನ್ನು ಕೂಡಲೇ ಕಳಿಸಲಿಕ್ಕೆ ಬರುತ್ತದೆ." ನಾವು ಓದಿದೆವು. ವಲ್ಲಭಭಾಯಿ ಹೇಳಿದರು: "ಇದರಲ್ಲಿ ನಿರ್ಣಯದ

**೧೮-೮-'೩೨**

ಎರಡನೇ ಭಾಗಗಳನ್ನು ಕುರಿತು ಏನೂ ಹೇಳಿಲ್ಲ. ಆದುದರಿಂದ ಇದೆಲ್ಲವೂ ನಿಮಗೆ ಒಪ್ಪಿಗೆಯಿದೆಯೆಂದು ಇದರ ಅರ್ಥವಾಗುವದಿಲ್ಲವೆ? ಬಾಪೂ ಹೇಳಿದರು: "ಇಲ್ಲ, ನನ್ನ ವಿಚಾರಗಳು ಎಲ್ಲಿ ಅಪರಿಚಿತವಿರುತ್ತವೆ? ಆದರೂ ಕೂಡ ನೀವು ಇಚ್ಛಿಸುತ್ತಿದ್ದರೆ ಇನ್ನೊಂದು ಪ್ಯಾರಾ ಜೋಡಿಸುವೆ. ಆದರೆ ಇದರಲ್ಲಿ ಕಾರಣಗಳನ್ನು ತೋರಿಸಬೇಕಾಗುವದು. ನನಗೆ ಈ ಪತ್ರದಲ್ಲಿ ಅವುಗಳನ್ನು ತೋರಿಸುವದು ಬೇಕಾಗಿಲ್ಲ. ತೋರಿಸಬೇಕಾದ ಕಾರಣಗಳನ್ನೆಲ್ಲ ಸ್ಯಾಮುಅಲ್ ಹೋರನ ಪತ್ರದಲ್ಲಿ ತೋರಿಸಿದೆ." ನಾನು: "ಇಡೀ ನಿರ್ಣಯದ ವಿರುದ್ಧ ನನ್ನ ಆತ್ಮವು ವಿದ್ರೋಹ ಮಾಡಬಯಸುತ್ತದೆ. ಆದರೆ ಇದರ ಕೆಲವೊಂದು ಭಾಗವನ್ನು ನಾನು ನನ್ನ ಪ್ರಾಣವನ್ನು ಪಣಕ್ಕೆ ಹಚ್ಚಿ ರದ್ದು ಮಾಡಿಸುವದು ನನ್ನ ಕರ್ತವ್ಯವೆಂದು ತಿಳಿಯುವಂತಹದಾಗಿದೆ ಎಂದಿಷ್ಟೇ ಬರೆಯಿರಿ" ಬಾಪೂ ಹೇಳಿದರು: "ಇಲ್ಲ, ನನ್ನಿಂದ ಈ ಪ್ರಕಾರದ ತುಲನೆಯಾಗಲಾರದು. ಹಾಗೆ ಮಾಡಿದರೆ ಇವನಿಗೆ ಇಡೀ ನಿರ್ಣಯವನ್ನೇ ರದ್ದುಮಾಡಬೇಕಾಗಿದೆ, ಆದಕ್ಕಾಗಿ ಇದರ ನೆವವನ್ನು ಹುಡುಕಿದ್ದಾನೆ. ಇಡೀ ನಿರ್ಣಯವನ್ನೇ ರದ್ದುಮಾಡಿಸುವದು ನಿಜವಿದೆ ಆದರೆ ಎಲ್ಲ ಮಾತುಗಳನ್ನು ಸೇರಿಸಲಿಕ್ಕೆ ಬರುತ್ತಿದೆಯೊ ಇಲ್ಲವೊ ಎಂಬ ಬಗ್ಗೆ ರಾತ್ರಿ ಸ್ವಲ್ಪ ಹೊತ್ತು ವಿಚಾರಮಾಡಿ ಇದನ್ನು ಬಿಟ್ಟುಬಿಟ್ಟೆ." ಸಾಯಂಕಾಲ ಇದೇ ಮಾತು ಹೊರಟಿತು: "ನಾನು ಬೇರೆ ವಿಷಯವನ್ನು ಸೇರಿಸಲಾರೆ. ಅದು ಧರ್ಮದ ಜೊತೆಗೆ ರಾಜನೀತಿಯನ್ನು ಸೇರಿಸಿದಂತಾಗುವದು. ಇಲ್ಲಿ ಎರಡೂ ಕಾರಣಗಳು ಭಿನ್ನಭಿನ್ನವಾಗಿವೆ." ಮತ್ತೆ ಹೇಳಹತ್ತಿದರು: "ಎಲ್ಲ ಮಾತುಗಳನ್ನು ನಾನು ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ವಿಚಾರಮಾಡಿದ್ದೇನೆ. ಈಗ ಹೊಳೆಯುವ ಮಾತುಗಳಲ್ಲಿ ಒಂದಾದರೂ

ನನ್ನ ತಲೆಯಲ್ಲಿ ಬಾರದೆ ಹೋಗಿಲ್ಲ. ಇದೆಲ್ಲವನ್ನೂ ವಿಚಾರಮಾಡಿಯೆ ನಾನು ಈ ನಿರ್ಣಯಕ್ಕೆ ಬಂದಿದ್ದೇನೆ. ಮುಸಲ್ಮಾನರು ಮತ್ತು ಬೇರೆ ಜನರಿಗೆ ಪ್ರತ್ಯೇಕ ಮತಾಧಿಕಾರವನ್ನು ಕೊಡಲಾಗಿದೆ. ಆದರಿಂದ ಭಯಂಕರ ಪರಿಣಾಮವಾಗಲಿದೆ. ಇಂಗ್ಲೀಷರೊಂದಿಗೆ ಕೂಡಿಕೊಂಡು ಈ ಜನರು ಎಲ್ಲಕಡೆಗೂ ಹಿಂದುಗಳನ್ನು ಹತ್ತಿಕ್ಕುವರೆಂಬುದು ನಿಜವಿದೆ. ಆದರೆ ಇವರೆಲ್ಲರ ಸಂಗಡ ಸರಿಪಡಿಸಿಕೊಳ್ಳುವೆನೆಂಬ ಆಶೆ ನನಗಿದೆ. ಯುದ್ಧಮಾಡುವ ಗುಂಪು ಒಮ್ಮೆ ಇಲ್ಲಿಂದ ಹೊರಟು ಹೋದ ಮೇಲೆ ಇವರೆಲ್ಲರ ಸಂಗಡ ಸರಿಪಡಿಸಿಕೊಳ್ಳಬಲ್ಲೆ. ಆದರೆ ಅಸ್ಪೃಶ್ಯರ ಸಂಗಡ ಬೇರೆ ಯಾವ ರೀತಿಯಿಂದಲೂ ಸರಿಪಡಿಸಿಕೊಳ್ಳಲಾರೆ. ಬಡ ಅಸ್ಪೃಶ್ಯರಿಗೆ ನಾನು ಯಾವ ರೀತಿಯಿಂದ ತಿಳಿಸಿಹೇಳಲಿ ? ಬಹಳ ದೊಡ್ಡ ವಿಪತ್ತು ಬಂದಾಗ ಎಲ್ಲ ಸಂಕಟವನ್ನೂ ತನ್ನ ತಲೆಯ ಮೇಲೆ ತೆಗೆದುಕೊಳ್ಳುವದೇನು ಇಂದಿನ ಹೊಸ ಮಾತೆ? ಸುಧನ್ವನು ಎಣ್ಣೆಯ ಕಡಾವಿಗೆಯಲ್ಲಿ ಬಿದ್ದಿದ್ದನು. ಪ್ರಹ್ಲಾದನು ಉರಿಯುತ್ತಿರುವ ಕಂಬಕ್ಕೆ ಅಂಟಿಕೊಂಡಿದ್ದನು. ಅದು ಯಾವ ಪ್ರಕಾರ? ಸ್ವರಾಜ್ಯ ದೊರೆತಮೇಲೂ ಕೂಡ ಎಷ್ಟೋ ಸತ್ಯಾಗ್ರಹಗಳನ್ನಂತೂ ಮಾಡಲೇಬೇಕಾಗುವದು. ಸ್ವರಾಜ್ಯ ದೊರೆತ ನಂತರ ಕಾಲೀಘಾಟದಮೇಲೆ ಹೋಗಿ ಸತ್ಯಾಗ್ರಹ ಪ್ರಾರಂಭ ಮಾಡಬೇಕು ಮತ್ತು ಧರ್ಮದ ಹೆಸರಿನಿಂದ ನಡೆಯುವ ಹಿಂಸೆಯನ್ನು ನಿಲ್ಲಿಸಬೇಕೆಂದು ಎಷ್ಟೋ ಸಾರೆ ಮನಸ್ಸಿನಲ್ಲಿ ಬರುತ್ತದೆ. ಈ ಆಡುಗಳ ಸ್ಥಿತಿಯಂತೂ ಅಸ್ಪೃಶ್ಯರಿಗಿಂತಲೂ ದಯಾಜನಕವಿರುತ್ತದೆ. ಅವು ಕೋಡಿನಿಂದ ಕೂಡ ಇರಿಯಲಾರವು. ಅವುಗಳಲ್ಲಿ ಯಾವನಾದರೊಬ್ಬ ಅಂಬೇಡಕರನಂಥವನೂ ಹುಟ್ಟಲಾರನು. ಈ ಹಿಂಸೆಯ ವಿರುದ್ಧ ಜೀವವೇನೂ ಸ್ವಲ್ಪ ತಳಮಳಿಸುವದಿಲ್ಲ. ದೇವರಿಗೆ ಆಡುಗಳನ್ನು ಕಡಿಯುವ ಬದಲು ಸಿಂಹಗಳನ್ನೇಕೆ ಕಡಿಯುವದಿಲ್ಲ ? ”

ಈ ಹೆಜ್ಜೆಯನ್ನಿಡುವದರಿಂದ ಏನು ಪರಿಣಾಮವಾಗುವದೆಂಬ ಬಗ್ಗೆ ಬೆಳಿಗ್ಗೆ ಮಾತುಗಳಾದವು. ನಾನು ಹೇಳಿದೆ: “ ಇದರ ಅನರ್ಥಗಳು ಭಯಂಕರವಾಗುವವು. ನಮ್ಮಲ್ಲಿ ಇದರ ಕುರುಡ ಮತ್ತು ತಿಳಿವಳಿಕೆಯಿಲ್ಲದ ಅನುಕರಣಗಳಾಗುವವು. ಅಮೇರಿಕೆಯ ಜನರು ಇವನು ಉಪವಾಸ ಮಾಡಿ ಬಿಡುಗಡೆ ಹೊಂದಿದನು ಎಂದು ಹೇಳುವರು.” ಬಾಪೂ ಹೇಳಹತ್ತಿದರು : “ ಇದು ನನಗೆ ಗೊತ್ತಿದೆ. ಅಮೇರಿಕೆಯಲ್ಲಿಯಂತೂ ಎಲ್ಲವನ್ನೂ ನಂಬಿಯೇ ನಂಬುವರು ಮತ್ತು ಏನು ಬೇಕಾದದ್ದರಲ್ಲಿ ನಂಬಿಗೆ ಹುಟ್ಟಿಸುವಂತಹ ಇಂಗ್ಲೀಷರು ಅಲ್ಲಿ ಇದ್ದೇ ಇದ್ದಾರೆ! ಜೇಲಿನಿಂದ ಬಿಡುಗಡೆಯಾಗಲಿಕ್ಕೆ ಉಪವಾಸ ಮಾಡಿದನು, ಇಷ್ಟೇ ಅಲ್ಲ, ಬಹಳ ಜನರು ಈ ಮನುಷ್ಯನು ದಿವಾಳಿ ತಗೆದಿದ್ದಾನೆಂದು ಹೇಳುವರು. ಇವನ ಅಧ್ಯಾತ್ಮವು ನಡೆಯುವದಿಲ್ಲವಾದ್ದರಿಂದ ಇವನು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾನೆ. ಧೂರ್ತರಾದ

ದಿವಾಳಿ ಖೋರರು ಇದೇ ಪ್ರಕಾರ ವಿಷವನ್ನು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಅಂಧಾನುಕರಣವಾಗುವದು ಮತ್ತು ಭಯಂಕರ ಅನರ್ಥವಾಗುವದು. ಸರಕಾರವು ನನ್ನ ಬಿಡುಗಡೆ ಮಾಡಿ ಹೊರಗೆ ಸಾಯಗೊಡಬಹುದು ಅಥವಾ ಒಳಗೆ ಕೂಡ ಸಾಯಗೊಡಬಲ್ಲದು. ಮೆಕ್ಸವಿನಿಯನ್ನು ಸಾಯಗೊಟ್ಟಿದ್ದರಲ್ಲವೆ? ನಮ್ಮ ಸ್ವಂತ ಜನರು ಕೂಡ ಟೀಕೆಯನ್ನು ಮಾಡುವರು. ಜವಾಹರಲಾಲರಿಗೆ ಈ ಹೆಜ್ಜೆಯು ಎಷ್ಟೂ ಸರಿಬರುವದಿಲ್ಲ. ಅವರು ನಮಗೆ ಇಂಥ ಧರ್ಮ ಬೇಕಾಗಿಲ್ಲವೆಂದು ಹೇಳುವರು. ಆದರೆ ಇದರಿಂದೇನು? ಮಹಾಶಸ್ತ್ರವನ್ನು ಉಪಯೋಗಮಾಡುವವನು ಅನರ್ಥಗಳಿಗಾಗಲಿ ಬೇರೆ ವಿಚಾರಗಳಿಗಾಗಲಿ ಅಂಜುವದಿಲ್ಲ."

ಇವತ್ತು ಸಪ್ರೂರ ಅಭಿಪ್ರಾಯ ಬಂತು. ಅವರಿಗೆ ಘಟನಾತ್ಮಕ ಪ್ರಶ್ನೆಯ ಮುಂದೆ ಈ ಪ್ರಶ್ನೆಯ ಮಹತ್ವವು ತುಚ್ಛವೆನಿಸುತ್ತದೆ. ಈ ನಿರ್ಣಯವನ್ನು ಕೊಡುವದರಲ್ಲಿ ಅವರಿಗೆ ಶುದ್ಧವಾದ ಉದ್ದೇಶವೂ ಪ್ರಾಮಾಣಿಕತನದ

೧೯-೮-'೩೨ ಪ್ರಯತ್ನವೂ ಕಂಡು ಬರುತ್ತದೆ. ಬಾಪೂ ಸ್ವಲ್ಪ ಟೀಕೆಯನ್ನು ಮಾಡಿದರು: "ಸಪ್ರೂ ಅವರ ಕೆಲಸವು ಮುಂಜೆಯವರ ಕೆಲಸದ ವಿರುದ್ಧವಿದೆ. ಜಾತೀಯ ಬೇಡಿಕೆಗಳು ಪೂರ್ಣವಾದರೆ ಮುಂಜೆಯವರಿಗೆ ಘಟನೆಯ ಚಿಂತೆಯಿಲ್ಲ. ಸಪ್ರೂರಿಗೆ ಪೂರ್ಣ ಘಟನೆಯು ದೊರೆತರೆ ಬೇರೆ ಏನೇ ಆದರೂ ಅದರ ಚಿಂತೆಯಿಲ್ಲ." ಆದರೆ ವಲ್ಲಭಭಾಯಿಯವರ ದು:ಖಕ್ಕೆ ಮಿತಿಯಿಲ್ಲ. ಅವರು ಹೇಳತೊಡಗಿದರು: "ಉದಾರಮತವಾದಿಗಳ ಬಗ್ಗೆ ನನಗೆ ಯಾವಾಗಲೂ ಹೀಗೇ ಅನಿಸುತ್ತದೆ. ಈ ಜನರು ಯಾವ ಹೊತ್ತಿಗೆ ಏನು ಮಾಡುವರೆಂಬುದನ್ನು ಹೇಳಲಿಕ್ಕೆಬರುವದಿಲ್ಲ. ತಿಳಿವಳಿಕೆಯ ಗುತ್ತಿಗೆ ಇವರಿಗೇ ಇದೆ. ಇವತ್ತು ದೇಶದಲ್ಲಿ ಬೇರೆ ಯಾರಿಗೂ ಇಂಗ್ಲೀಷರ ಒಳ್ಳೇ ನಡತೆಯು ಕಂಡುಬರದಿದ್ದರೂ ಇವರಿಗೆ ಒಳ್ಳೆ ನಡತೆಯು ಕಾಣಿಸುತ್ತದೆ. ಇದಕ್ಕೆ ಕಾರಣವಿದೆ. ಇವರಿಗೆ ಇನ್ನೂ ತಾವು ಕಳೆದುಕೊಂಡ ಸ್ವಾಭಿಮಾನವನ್ನು ತಿರುಗಿ ಗಳಿಸುವದಿದೆ. ಇಲ್ಲದಿದ್ದರೆ ಅವರಿಗೆ ನಿಲ್ಲಲಿಕ್ಕೆ ಸ್ಥಳವೆಲ್ಲಿದೆ?" ನಾನು ಹೇಳಿದೆ: "ಈ ಜನರು ಬಾಪೂರ ಕೃತಿಯನ್ನು ನಿಂದಿಸಲಿಕ್ಕೆ ಸರಕಾರದ ಸಂಗಡ ಜೊತೆಗೂಡುವರು." ವಲ್ಲಭಭಾಯಿ: "ಆದರೆ ಮಾಡಬೇಕೇನು? ಬಾಪೂ ಅವರ ರೀತಿಯು ಕೆಟ್ಟದಿರುತ್ತದೆ. ಬಾಪೂ ಅವರು ಈ ಕೃತಿಯ ಬಗ್ಗೆ ಶಾಸ್ತ್ರೀಯಂಥವರ ಸಂಗಡವಾದರೂ ಮಾತಾಡಿದ್ದರೆ ಒಳ್ಳೆಯದಾಗುತ್ತಿತ್ತು. ಬಾಪೂ ಅವರು ಇಂತಹ ಹೆಜ್ಜೆಯನ್ನಿಡುವರೆಂದು ಯಾರಿಗೆ ಗೊತ್ತು? ಯಾವನಾದರೂ ಮನುಷ್ಯನು ಈ ಕೃತಿಯ ವಿಚಾರ ಮಾಡುತ್ತಿರಬಹುದೆಂದು ನನಗೆ ಅನಿಸುವದಿಲ್ಲ."

ಇಂದಿನ ಅಭಿಪ್ರಾಯಗಳನ್ನು ಓದಿ ಬಾಪೂ ಹೇಳಹತ್ತಿದರು: "ದೇಶವು ಶಾಂತವಾಗುವದು. ಸ್ವಲ್ಪ ದಿವಸ ಮಾತಾಡುವರು ಆಮೇಲೆ ಗಪಚಿಪ್. ಆದರೆ

ನನ್ನ ಉಪವಾಸದಿಂದ ಗೊಂದಲವೆದ್ದರೆ ಯಾರಿಗೆ ಗೊತ್ತು? ಮತ್ತು ಶಾಂತಿಯಾದರೂ ಏನು ಆಶ್ಚರ್ಯ? ಪಾಪ, ಜನರು ದಣಿದಿದ್ದಾರೆ. ನಮಗೆ ನಿಸ್ಸಂದೇಹವಾಗಿಯೂ ದಣಿವಾಗಿಲ್ಲ. ಆದುದರಿಂದ ಇಲ್ಲಿ ಕುಳಿತಲ್ಲಿಯೆ ಕುಳಿತು ಜಿನುಗು ನೂಲುತ್ತಿರುತ್ತೇವೆ."

ಸೆಜ್ಜಿಯ ರೊಟ್ಟಿಯನ್ನು ಪ್ರಾರಂಭ ಮಾಡಿದುದರ ಪರಿಣಾಮ ಕುರಿತು ಮಾತಾಡುತ್ತ ಹೇಳತೊಡಗಿದರು: "ಇದರ ಸಂಗಡ ನಾನು ಎಂದೂ ಹಾಲನ್ನು ತೆಗೆದುಕೊಳ್ಳಲಿಲ್ಲ. ಆದುದರಿಂದ ಹೇಳಲಾರೆ. ಆದರೆ ನೋಡುವೆನು. ಇದರ ಪ್ರಯೋಗ ಮಾಡುವೆನು." ನಾನು: "ಇನ್ನೂ ಪ್ರಯೋಗವನ್ನು ಎಲ್ಲಿಯ ವರೆಗೆ ಮಾಡುತ್ತಿರುವಿರಿ? ೨೦ನೇ ಸಪ್ಟಂಬರದ ವರೆಗೆ ಮರ್ಯಾದೆ ಏನು?" ಬಾಪೂ ಹೇಳಹತ್ತಿದರು: "ನನಗಂತೂ ಇದರ ವಿಚಾರವೇ ಬರುವದಿಲ್ಲ. ಆ ದಿನವು ಬಂದಾಗಲೇ ಇದರ ವಿಚಾರ ಮಾಡುವೆನು. ಅಲ್ಲಿಯ ವರೆಗೆ ಪ್ರಯೋಗವನ್ನು ಮಾಡುತ್ತಲೇ ಇರುವೆನು." ನಾನು: "ನಾವು ಶಾಂತರಾಗಿರಲಾರೆವು." ಬಾಪೂ: "ಇದು ನನಗೆ ಗೊತ್ತಿದೆ. ಆದರೆ ನಾನು ಶಾಂತನಾಗಿರದಿದ್ದರೆ ಸತ್ತೇ ಹೋಗುವೆನು?"

* * *

ಸುಪರಿಂಟೆಂಡೆಂಟರು ಬಂದು ಹೇಳಹತ್ತಿದರು: "ಇಷ್ಟೊಂದು ಅವಸರದ ಹೆಜ್ಜೆಯೆ?" ಬಾಪೂ ಅಂದರು: "ಬೇರೆ ಉಪಾಯವೇ ಇದ್ದಿಲ್ಲ." ಹೋರನು ಬ್ರಿಟಿಶ ಮಂತ್ರಿಮಂಡಲಕ್ಕೆ ಸುದ್ದಿಯನ್ನೇ ತಿಳಿಸಿರಲಿಕ್ಕಿಲ್ಲವೆಂದು ಅವರಿಗೆ ಸಂಶಯ ಬಂದಿತು. ಬಾಪೂ ಹೇಳಿದರು: "ಕೊಟ್ಟಿರಬಹುದೆಂದು ನನಗೆನಿಸುತ್ತದೆ. ಆದರೆ ನಿಮ್ಮ ಸಂಶಯವೂ ಯೋಗ್ಯವಾಗಿದೆ. ಯಾಕಂದರೆ ಇವನು ಕೊಡದಂಥ ಮನುಷ್ಯನೇ ಇದ್ದಾನೆ ಮತ್ತು ಸುದ್ದಿ ಹತ್ತಿದರೆ ಇಂಥ ಸಣ್ಣ ಮಾತಿನ ಬಗ್ಗೆ ಸಾಯಲಿಕ್ಕೆ ಸಿದ್ಧನಾದ ಮನುಷ್ಯನ ಸಲುವಾಗಿ ಮಂತ್ರಿಮಂಡಲಕ್ಕೆ ತೊಂದರೆಕೊಡಬೇಕೆ? ಎಂದು ಹೇಳಬಹುದು. ಆದರೆ ಅವನು ಸುದ್ದಿಯನ್ನು ಕೊಡದಿದ್ದರೆ ಅವನು ತನ್ನ ಎಲ್ಲ ಕಾರ್ಯಕುಶಲತೆಯನ್ನೂ ಮಾನವನ್ನೂ ಕಳೆದುಕೊಳ್ಳಬೇಕಾಗುವದೆಂದು ನನಗೆನಿಸುತ್ತದೆ." ಸುಪರಿಂಟೆಂಡೆಂಟ: "ಇದರ ಪರಿಣಾಮವು ಈ ಜನರ ಮೇಲೆ ಏನಾಗಬಹುದು? ಇಲ್ಲಿ ಏನಾಗುವದು?" ಬಾಪೂ: "ಏನೂ ಆಗದಿರಲಿ! ಎಲ್ಲ ಅಸ್ಪೃಶ್ಯರೂ ಸಂಯುಕ್ತ ಮತಾಧಿಕಾರವನ್ನು ಬೇಡಿದರೂ, 'ಈ ಜನರು ನೂರಾರು ವರ್ಷಗಳಿಂದ ಹತ್ತಿಕ್ಕಲ್ಪಟ್ಟ ಅಲ್ಪಸಂಖ್ಯಾಕರಿದ್ದಾರೆ, ಅವರ ಬಗ್ಗೆ ನ್ಯಾಯುವು ಯಾವುದೆಂಬುದರ ನಿರ್ಣಯವನ್ನು ನಾವೇ ಮಾಡಬಲ್ಲೆವು', ಎಂದು ಇವರು ಹೇಳಬಹುದು. ಇದರಲ್ಲಿ ಹತ್ತಿಕ್ಕುವವರಿಗೆ ಏನು ಗೊತ್ತಾಗುತ್ತದೆ? ಮತ್ತೆ ಬಾಪೂ ಹೇಳಿದರು: "ನನ್ನ ಆಯುಷ್ಯವೇ ಈ ರೀತಿ ಕಳೆದಿದೆ. ೨೫ ವರ್ಷಗಳಿಂದ ನಡೆದು

ಬಂದ ಈ ಜೀವನದ ಕಳಸವೇ ಈ ಕೊನೆಯ ಹೆಜ್ಜೆ. ಈ ಕಾರ್ಯಕ್ಕಾಗಿ ಪ್ರಾಣ ತ್ಯಾಗ ಮಾಡಬೇಕಾಗುವದೆಂದು ನನಗೆ ಅನಿಸಿದ್ದಿಲ್ಲ. ಆದರೆ ಇದೊಂದು ದೊಡ್ಡ ಧ್ಯೇಯವಿದೆ." ಪುನಃ ಮಾತಾಡಿದರು: "ನಿಜವಾಗಿ ನೋಡಿದರೆ ಆರಂಭವು ೫೦ ವರ್ಷಗಳ ಮೊದಲು ನಾನು ಬೀಡಿಯನ್ನು ಸೇದ ಹತ್ತಿದಾಗ ಮತ್ತು ಇದು ಕೆಡಕಾಗುತ್ತ ನಡೆದಿದೆ ಇದನ್ನು ಒಪ್ಪಿಕೊಳ್ಳಲೇಬೇಕು ಎಂದು ಅನಿಸಿದಾಗ—ಆಗಿತ್ತು. ಆದರ ನಂತರ ದಿನೇ ದಿನೇ ಸತ್ಯದ ಬಗ್ಗೆ ತಿಳಿವಳಿಕೆಯಲ್ಲಿಯೂ ಕೃತಿಯಲ್ಲಿಯೂ ವಿಕಾಸವಾಗುತ್ತಲೇ ನಡೆದಿದೆ."

ಮಧ್ಯಾಹ್ನಕ್ಕೆ ಕಲೆಕ್ಟರ ಬಂದನು. ಅವನು ಹೇಳಹತ್ತಿದನು: "ಇಂಥ ನಿರ್ಣಯವನ್ನು ಕೊಡದಿದ್ದರೆ ಏನಾದೀತು? ಏನಾದರೂ ಪರಿಹಾರವಾಗಲೇಬೇಕು. ಇಂಥ ವಿಷಯಗಳಲ್ಲಿ ತುಂಬ ನ್ಯಾಯ ಮತ್ತು ಹಕ್ಕುಗಳ ಬಗ್ಗೆ ಹಟ ಹಿಡಿಯಬಹುದೆ?" ಬಾಪೂ ಹೇಳಿದರು: "ಈ ನಿರ್ಣಯವು ತಪ್ಪಾದದ್ದು ಇರಲಿ. ಆದರೆ ಸರ್ವಸಮ್ಮತವಿರಬೇಕು. ಇದಕ್ಕಂತೂ ಯಾರ ಸಮ್ಮತಿಯೂ ಇಲ್ಲ. ಇಂಗ್ಲಂಡದಲ್ಲಿ ಬೇಡಲಾಯಿತು. ಅಲ್ಲಿಯಂತೂ ಯಾವ ಸಮ್ಮೇಲನವು ತನ್ನ ಅಭಿಪ್ರಾಯವನ್ನು ಗೊತ್ತುಪಡಿಸಿಕೊಂಡಿತ್ತೊ, ಆದರಿಂದಲೇ ನಿವಾರಣೆಯನ್ನು ಇಚ್ಛಿಸಲಾಗಿತ್ತೆಂಬುದು ಈ ಜನರಿಗೆ ಗೊತ್ತಾಗಲಿಲ್ಲ. ಅದು ದೊರೆಯುತ್ತಿದ್ದಿಲ್ಲ." ಆ ಮೇಲೆ ದಲಿತವರ್ಗದ ಮಾತು ಹೊರಟಿತು. ಅವನು ಪುಣೆಯ ಅಸ್ಪೃಶ್ಯರ ಮೇಲಿಂದಲೇ ಅನುಮಾನ ಕಟ್ಟುತ್ತಿದ್ದನು. ಕೊನೆಗೆ ಹೇಳಹತ್ತಿದನು: "ಇದು ಅತ್ಯಂತ ಮೂರ್ಖತನದಿಂದ ಕೂಡಿದ್ದೂ ಪ್ರಜಾತಂತ್ರ ವಿರೋಧಿಯೂ ಆದ ವ್ಯವಸ್ಥೆಯಾಗಿದೆ. ಆದರೆ ಬೇರೆ ಏನಾಗುವದು ಸಾಧ್ಯ."

ಬೆಳಿಗ್ಗೆ ಬಾಪೂ ಹೇಳತೊಡಗಿದರು: "ಮನುಷ್ಯನ ಹತ್ತರ ಬೇರ ಯಾವ ಸಾಧನವೂ ಉಳಿಯದಿದ್ದಾಗ, ಬುದ್ಧಿಯು ದಣಿದು ಬಿಟ್ಟಾಗ, ತನ್ನ ಶರೀರವನ್ನು ತ್ಯಾಗಮಾಡುವ ಕೊನೆಯ ಹೆಜ್ಜೆಯನ್ನಿಡಬೇಕು. ರಜಪೂತ ಹೆಣ್ಣುಮಕ್ಕಳು ಎನು ಮಾಡುತ್ತಿದ್ದರು? ಆ ದಿವಸ ನಾವು ಓದುತ್ತಿದ್ದ ಕಮಲಾವತಿಯು ಏನು ಮಾಡಿದಳು? ಶತ್ರುಗಳ ಕೈಯಲ್ಲಿ ಜೀವಂತ ಸಿಗಬಾರದೆಂದು ಅವಳ ನಿಶ್ಚಯವಿತ್ತು. ಆದುದರಿಂದ ಅವಳು ಸಾವಿನ ಬಾಯಲ್ಲಿ ಹೊರಟು ಹೋದಳು."

ಈ ದಿನ ನನಗೂ ವಲ್ಲಭಭಾಯಿಯವರಿಗೂ ಯಾವದೇ ರೀತಿಯಿಂದ ಈ ಸುದ್ದಿಯು ಹೊರಗೆ ಮುಟ್ಟಬೇಕೆಂದು ಮೇಲಿಂದ ಮೇಲೆ ವಿಚಾರ ಬಂದವು. ಆದರೆ ಬಾಪೂರ ವಚನವನ್ನು ಮುರಿಯುವದೆಂತು? ಬಾಪೂ ನಮ್ಮ

೨೦-೮-'೩೨ ಕಡೆಯಿಂದ ಈ ಮಾತು ಎಲ್ಲಿಯೂ ಹೊರಗೆ ಹೋಗುವದಿಲ್ಲವೆಂದು ವಚನಕೊಟ್ಟಿದ್ದಾರೆ. ಆದುದರಿಂದ ಬಾಪೂಗೆ ಅಪ್ರಾಮಾ

ಣಿಕರು ಹೇಗಾಗಬೇಕು? ವಲ್ಲಭಭಾಯಿಯವರಿಗೆ ದೊಡ್ಡ ಸಂಕಟವೊದಗಿತ್ತು. ಇಂದು ಬಾಪೂ ಅನೇಕ ಪತ್ರಗಳನ್ನು ಬರೆದರು. ಆಶ್ರಮದ ಟಪಾಲು ಬಹಳ ಅನುಕರಣೀಯವಿತ್ತು. ಇದರಲ್ಲಿ ಛಗನಲಾಲ ಜೋಶಿಯವರಿಗೆ ಬರೆದ ಪತ್ರವು ಸತ್ಯಾಗ್ರಹದ ಶಾಶ್ವತ ಸೂತ್ರಗಳನ್ನು ವ್ಯಕ್ತಮಾಡುತ್ತಿದ್ದರೂ ಅವರ ಈಗಿನ ಮನಸ್ಥಿತಿಯನ್ನೂ ಸೂಚಿಸುತ್ತಿತ್ತು. (ಜೋಶಿಯವರ ಪತ್ರದಲ್ಲಿ ಸುತ್ತುಮುತ್ತಲಿನ ವಾತಾವರಣದಿಂದುಂಟಾಗುವ ನಿರಾಶೆಯೂ ಮತ್ತು ಅನೇಕ ಕೆಲಸಗಳನ್ನು ಪೂರ್ಣಮಾಡುವದರ ಬಗ್ಗೆ ಅಧೈರ್ಯವೂ ಇದ್ದವು.) ಆ ಪತ್ರವು ಇಲ್ಲಿದೆ:

"ಶರೀರವನ್ನು ಕೆಡಿಸುವ ಅನೇಕ ಕಾರಣಗಳಲ್ಲಿ ಅಧೀರತೆಯೂ ಒಂದು ಕಾರಣವಾಗಿದೆ. ಮೊದಲು ಮನಸ್ಸು ಅಧೀರವಾಗುತ್ತದೆ, ಆ ಮೇಲೆ ಶರೀರ. ಆದರೆ **'अधीर सो बावरा धीरा सो गंभीर'** (ಪುಕ್ಕನಿದ್ದವ ಪೆದ್ದ, ಧೀರನಿದ್ದವ ಗಂಭೀರ) ಇದು ಅನುಭವಸಿದ್ಧ ವಾಕ್ಯ. ಜಗತ್ತು ಉರಿದೆದ್ದರೆ ನಾವು ಅದನ್ನು ಅಧೀರತೆಯಿಂದ ತಣ್ಣಗೆ ಮಾಡಬಲ್ಲೆವೊ? ತಣ್ಣಗೆ ಮಾಡುವದಾದರೂ ನಮಗೆಲ್ಲಿ ಬೇಕಾಗಿದೆ? ದೊಡ್ಡ ಬೆಂಕಿ ಹತ್ತಿದಾಗ ಆರಿಸುವವರು ಬೆಂಕಿಯ ಮೇಲೆ ನೀರನ್ನು ಹಾಕುವದಿಲ್ಲವೆಂಬುದು ಗೊತ್ತಿದೆಯೆ? ಅವರು ಸುತ್ತುಮುತ್ತಲಿನ ಭಾಗಗಳನ್ನೇ ರಕ್ಷಿಸುತ್ತಾರೆ. ಇಷ್ಟು ಮಾಡಿದರೆ ಅವರು ಕರ್ಮಕುಶಲರು ಅಂದರೆ ಯೋಗಿಗಳೆಂದು ತಿಳಿಯಲ್ಪಡುತ್ತಾರೆ. ನಾವು ನಮ್ಮ ಕರ್ತವ್ಯಪಾಲನೆಯನ್ನು ಮಾಡಿದರೆ ಇಡೀ ಬೆಂಕಿಯನ್ನು ಆರಿಸಿದಂತೆಯೆ. ನೋಡಲಿಕ್ಕೆ ಆರಿಸಿದಂತೆ ಅನಿಸುತ್ತಿರಲಿಕ್ಕಿಲ್ಲ, ಆದರೆ ಅದನ್ನು ಆರಿಸಿದೆಯೆಂದೇ ತಿಳಿಯಬೇಕು. ಸತ್ಯದ ಶೋಧ ಮಾಡುತ್ತ ಮಾಡುತ್ತ ನನಗೆ ಬೇರೆ ಏನೂ ದೊರೆಯಲಿಲ್ಲ ಮತ್ತು ಮುಂದೆ ಕೂಡ ಸಿಗುವಂತೆ ಕಾಣಿಸುವದಿಲ್ಲ. ಆದರೆ ಇದು ಸರಿಯಾಗಿರದಿದ್ದರೆ ಸತ್ಯದ ಆಚರಣೆಯು ಮತ್ತು ಸತ್ಯದ ಆಗ್ರಹವು ಅಸಂಭವವಾಗಿಬಿಡುವದು. ಯಾವದು ಸಾಧ್ಯವಿದೆಯೊ ಅದರದೇ ಆಗ್ರಹವನ್ನು ಹಿಡಿಯಲಿಕ್ಕೆ ಬರುತ್ತದೆ. ಚಂದ್ರನ ಮೇಲಿನ ಗುಡ್ಡಗಳಮೇಲೆ ಹವೆಯ ಆಗ್ರಹವನ್ನು ಹಿಡಿದರೆ ಶೇಖಮಹಮ್ಮದನೆಂದೇ ಹೇಳಬಹುದು, ಯಾಕಂದರೆ ಅದು ಅಸಂಭವವಿದೆ. ಇದೇ ಮಾತು ನಮ್ಮ ಕರ್ತವ್ಯದ ಬಗ್ಗೆಯೂ ಇದೆ. ನಿಜವಾಗಿ ಕೇಳಿದರೆ ಎಲ್ಲರಿಗೂ ತಮ್ಮ ತಮ್ಮ ಕರ್ತವ್ಯವು ಗೊತ್ತಾಗುತ್ತದೆ. ಯಾಕಂದರೆ ಅದಕ್ಕಾಗಿ ದೂರದೃಷ್ಟಿಯನ್ನಿಡುವ ಆವಶ್ಯಕತೆ ಬೀಳುವದಿಲ್ಲ. ಮೂಗಿನ ತುದಿಯ ವರೆಗಷ್ಟೇ ದೃಷ್ಟಿಯನ್ನಿಡಬೇಕಾಗುತ್ತದೆ. ಕಾಲೆದುರಿಗೆ ಬಿದ್ದ ಕಸವನ್ನು ತಗೆಯ ಬೇಕಾಗಿದೆ. ಇದು ದೂರವಾಗುತ್ತ ಹೋದಂತೆ ಮುಂದೆ ಕಾಣಿಸಹತ್ತುವದು ಮತ್ತು ಹೊಸ ದೃಷ್ಟಿಯು ಬರುತ್ತಿರುವದು. ಜೀವನದ ಅಂತ್ಯದಲ್ಲಿ ಅದು ಪೂರ್ತಿಯಾಗಿದೆ ಯೆಂದು ಅನಿಸಲಿಕ್ಕಿಲ್ಲ. ಜೀವನಕ್ಕೆ ಅಂತ್ಯವೆಲ್ಲಿದೆ? ಶರೀರಕ್ಕೆ ಅಂತ್ಯವಿದೆ. ಆದರ

ದೇನು ಚಿಂತೆ? ಜೀವನಕ್ಕೆ ಅಂತ್ಯವಿಲ್ಲವೆಂದ ಮೇಲೆ ಕಸದ ನಾಶವು ಪೂರ್ತಿಯಾದದ್ದು ಕಾಣಿಸದಿದ್ದರೂ ಆಯಾಸವೆನಿಸಬಾರದು. ಸಿಂಪಿಗನ ಮಗನು ಜೀವಿಸಿರುವ ವರೆಗೆ ಹೊಲಿಯುತ್ತಲೇ ಇರುತ್ತಾನೆ. ಕೈಯಲ್ಲಿ ಸೂಜಿಯಿದ್ದಾಗ ಕೊನೆಯ ಬಿಕ್ಕು ಬಂದರೆ ಅವನನ್ನು ಕರ್ತವ್ಯಪರಾಯಣನೆಂದು ತಿಳಿಯಬೇಕು."

ಇದೇ ತರಹದ ವಿಷಯವನ್ನು ಚರ್ಚಿಸುವ ಎರಡನೆಯ ಪತ್ರವು ಬಾಲಕೃಷ್ಣನಿಗಿತ್ತು: "ಶಂಕರಾಚಾರ್ಯರು ಮಾಯೆಯನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬುದನ್ನು ನಾನು ನಿಶ್ಚಿತವಾಗಿ ಹೇಳಲಾರೆ. ನಾವು ತಿಳಿದಿರುವ ಮತ್ತು ನೋಡುತ್ತಿರುವ ಜಗತ್ತಿನ ರೂಪವು ಆಭಾಸವಿದೆ, ನಮ್ಮ ಕಲ್ಪನೆಯಿದೆ. ಆದರೆ ಜಗತ್ತು ತನ್ನ ರೂಪದಲ್ಲಿ ಇದ್ದೇ ಇದೆ. ಅದು ಹೇಗೆ ಇದೆ ಎಂಬುದು ನಮಗೆ ಗೊತ್ತಿಲ್ಲ. ಬ್ರಹ್ಮನಿದ್ದಾನೆ ಎಂದು ಹೇಳುವದರ ಜೋತೆಗೇ ಅವನನ್ನು ನೇತಿ ರೂಪದಲ್ಲಿ ವರ್ಣನೆ ಮಾಡುತ್ತಾರೆ. ಜಗತ್ತು ಕೂಡ ಬ್ರಹ್ಮವಿದೆ. ಆದು ಬ್ರಹ್ಮನಿಂದ ಭಿನ್ನವಿಲ್ಲ. ನಾವು ನೋಡುವ ಭಿನ್ನತೆಯು ಆಭಾಸಮಾತ್ರವಿದೆ.

"ನಮ್ಮ ವಯಸ್ಸಿನ ಮಾನದಂಡವು ಸಣ್ಣದು ದೊಡ್ಡದು ಆಗಬಲ್ಲದೆಂದು ನನ್ನ ಅಭಿಪ್ರಾಯವಿದೆ. ವಾಸ್ತವಿಕವಾಗಿ ಪ್ರತಿಯೊಂದು ದೇಹವೂ ತನ್ನ ಎಲ್ಲ ಧರ್ಮಗಳೊಂದಿಗೆ ಉತ್ಪನ್ನವಾಗಿರುತ್ತದೆ. ಅವು ಯಾವವಿರುತ್ತವೆಂಬುದು ನಮಗೆ ಗೊತ್ತಿಲ್ಲ. ಅವುಗಳನ್ನು ತಿಳಿದುಕೊಳ್ಳುವ ಅವಶ್ಯಕತೆಯೂ ಇಲ್ಲ.

"ಕಾಲದ ವಿಭಾಗಗಳನ್ನು ಮನುಷ್ಯನು ಮಾಡಿರುತ್ತಾನೆ. ಅವು ಕಾಲಚಕ್ರದಲ್ಲಿ ರಜಕಣಕ್ಕಿಂತಲೂ ಸಣ್ಣವಿರುತ್ತವೆ, ನಮ್ಮ ಲೆಕ್ಕದ ಕೋಟ್ಯಾವಧಿ ಹಿಮಾಲಯಗಳನ್ನು ಕೂಡಿಸಿದರೂ ಅವು ಕಾಲಚಕ್ರಕ್ಕಿಂತ ಸಣ್ಣವಿರುತ್ತವೆ. ಆದುದರಿಂದ ಮನುಷ್ಯನ ಕೈಯಲ್ಲಿದ್ದದ್ದು ಇಲ್ಲದುದಕ್ಕೆ ಸಮವಾಗಿದೆ. ಅವನು ಇದರಲ್ಲಿಯೆ ಮತ್ತನಾಗಿರಲೊಲ್ಲನೇಕೆ.

"ಸ್ವಪ್ನದ ಭೌತಿಕ ಕಾರಣಗಳು ಅನೇಕ. ಸ್ವಪ್ನದಲ್ಲಿ ಅದರ ಸುಳ್ಳುತನವನ್ನು ನೋಡಬಹುದೆಂದು ನನಗೆನಿಸುತ್ತದೆ. ಬಹುತರ ಅದು ಎಚ್ಚತ್ತ ಮತ್ತು ಕನಸಿನ ನಡುವಿನ ಸ್ಥಿತಿಯಾಗಿರಬಹುದು. ಸ್ವಪ್ನ ದೋಷವು ಎಷ್ಟೋ ಸಾರೆ ವಿಕಾರವಿಲ್ಲದೆ ಕೇವಲ ಯಾಂತ್ರಿಕ ಕಾರಣದಿಂದ ಆಗುತ್ತದೆ. ಅದನ್ನು ಆಹಾರದಲ್ಲಿ ಬದಲಾವಣೆಯನ್ನು ಮಾಡಿ ತಡೆಯಬಹುದು. ಬಹಳ ಮಾಡಿ ಅದರ ಕಾರಣವು ಮಲಾವರೋಧವಿರುತ್ತದೆ. ಹಾಲಿನಿಂದ ಸ್ವಪ್ನದೋಷವಾಗುತ್ತದೆ. ಇದರ ಕಾರಣವು ಬಹುತರ ವಿಕಾರವಿರುತ್ತದೆ, ಯಾಕಂದರೆ ಹಾಲು ವಿಕಾರೋತ್ತೇಜಕವಿರುತ್ತದೆ. ಆದರೆ ಈ ಮಾತು ನಿನಗೆ ಅನ್ವಯಿಸುವದಿಲ್ಲ. ತೀರ ಬಲಹೀನವಾದ ಶರೀರವಿದ್ದವರಲ್ಲಿ ವಿಕಾರಯುಕ್ತ ಪುರುಷನೇ—ತೆಗೆದುಕೊಂಡರೂ—ಹಾಲು ವಿಕಾರವನ್ನುಂಟುಮಾಡು

ವದಿಲ್ಲ. ತೀರ ಬಲಹೀನವಾದ ಶರೀರವಿದ್ದವರಿಗೆ ಹಾಲಿನ ಎಲ್ಲ ಶಕ್ತಿಯು ಅವರ ಪೋಷಣೆಗೇ ಬೇಕಾಗುತ್ತದೆ. ಇದು ಒಂದು ಮಿತಿಯ ವರೆಗೆ ಸರಿಯಾಗಿದೆಯೆಂದು ಡಾ. ರಜಬಅಲ್ಲಿಯವರು ಹೇಳುತ್ತಾರೆ. ಶರೀರದಿಂದಲೂ ಮನಸ್ಸಿನಿಂದಲೂ ನಿರೋಗಿಯಾದವನಿಗೆ ರಜಬಅಲ್ಲಿಯವರ ಹೇಳಿಕೆಯು ಅನ್ವಯಿಸುವದಿಲ್ಲ.

"ಜ್ಞಾನಿಯ ಸ್ವಭಾವದಲ್ಲಿ ಲೋಕಸಂಗ್ರಹವು ಅವಶ್ಯವಾಗಿ ಬೇಕು. ಇದರಲ್ಲಿ ಅಪವಾದವಿರುವದು ಸಾಧ್ಯವೇ ಇಲ್ಲ.

"ಮನಸ್ಸನ್ನು ಎಷ್ಟು ಹೊತ್ತಿನ ವರೆಗೆ ನಿರ್ವಿಚಾರದಿಂದ ಇಡಬಲ್ಲೆನೆಂಬುದನ್ನು ಹೇಳಲಾರೆ. ಯಾಕಂದರೆ ಆ ಲೆಕ್ಕವನ್ನು ಎಂದೂ ಹಾಕಿ ನೋಡಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ನಿಷ್ಪ್ರಯೋಜಕ ವಿಚಾರಗಳಿಗೆ ಸ್ಥಾನ ದೊರೆಯಲಾರದೆಂಬುದು ನನಗೆ ಗೊತ್ತಿದೆ. ಬಂದರೂ ಅವಕ್ಕೆ ಕಳ್ಳರಂತೆ ಓಡಿ ಹೋಗಬೇಕಾಗುವದು.

"ಥಂಭಾಚಾರವು ಕೇವಲ ಸುಳ್ಳಿನ ಆವರಣವಿದೆ."

ಆನೇಕನಿಗೆ ಬರೆದರು: "ಯಾವಾಗಲೂ ಸಂಬಂಧಿಕರ ಪತ್ರಗಳನ್ನು ಅಪೇಕ್ಷಿಸುತ್ತೇನೆ. ನೀನು ನನ್ನನ್ನು ಒಂದು ಪತ್ರದಿಂದ ಕೂಡ ವಂಚಿಸಬೇಡ. ಚಾತಕ ಪಕ್ಷಿಯು ಮಳೆಯ ದಾರಿ ನೋಡುವಂತೆ ನಾನು ನಿನ್ನ ಪತ್ರದ ದಾರಿ ನೋಡುತ್ತಿದ್ದೆ."

ಮಥುರಾದಾಸರಿಗೆ ಹೊಲಿಗೆ ಯಜ್ಞದ ವಿಷಯವಾಗಿ ಉದ್ದ ಪತ್ರ ಬರೆದರು: "ಹೊಲಿಗೆ ಯಜ್ಞದ ಕಲ್ಪನೆಯು ಬಡವರಿಗೆ ಹೊಲಿಗೆ ಉದ್ಯೋಗವನ್ನು ಕೊಡುವದಕ್ಕಾಗಿ ಇರುವದಿಲ್ಲ. ಆದರೆ ಬಡವರು ನೇಯ್ದ ಖಾದಿಯನ್ನು ಹಾನಿಯಿಲ್ಲದೆ ಬೇಗನೆ ಖರ್ಚುಮಾಡುವದಕ್ಕಾಗಿ ಇರುತ್ತದೆ. ತುಟ್ಟಿಯೆಂದು ಅನಿಸುವ ಖಾದಿಯನ್ನು ಅಗ್ಗವಾಗಿ ಮಾಡಲಿಕ್ಕೆ ಇರುತ್ತದೆ."

ಊಟದ ವಿಷಯುದಲ್ಲಿಯೂ ವಿಸ್ತಾರಪೂರ್ವಕವಾಗಿ ಬರೆದರು. ಕೊನೆಗೆ ವ್ರತಗಳ ಬಗ್ಗೆ ಬರೆದರು: "ವಿಕಾರಗಳ ಚಿಂತೆಯನ್ನೂ ಮಾಡಬೇಡ. ಒಂದು ಮಾತಿನ ನಿಶ್ಚಯಮಾಡಿದಮೇಲೆ ಅದು ಮುಗಿಯಿತೆಂದೇ ತಿಳಿಯಬೇಕು. ವ್ರತವನ್ನು ತೆಗೆದುಕೊಂಡ ವಸ್ತುವಿನ ಬಗ್ಗೆ ನಾವು ಮನಸ್ಸನ್ನು ತಡೆಯುವ ಪ್ರಯತ್ನ ಮಾಡಬೇಕಾಗಿಲ್ಲ. ವ್ರತದ ಅರ್ಥವೇ ಇದು. ವ್ಯಾಪಾರಸ್ಥನು ಯಾವದೊಂದು ವಸ್ತುವನ್ನು ಕೊಂಡುಕೊಂಡ ಮೇಲೆ ಅದರ ವಿಷಯಕ್ಕೆ ವಿಚಾರಮಾಡದೆ ಬೇರೊಂದು ವಸ್ತುವಿನ ಮೇಲೆ ಲಕ್ಷ್ಯವಿಡುವಂತೆ ವ್ರತಗಳದೂ ಇರುತ್ತದೆ."

. . . ಗೆ ಬರೆದರು: "ಲೋಕಮತದ ಅರ್ಥವೆಂದರೆ ನಮಗೆ ಯಾವ ಸಮಾಜದ ಅಭಿಪ್ರಾಯ ಬೇಕಾಗಿದೆಯೊ ಅದರ ಮತವು. ಈ ಮತವು ನೀತಿ ವಿರುದ್ಧವಿರದ ವರೆಗೆ ಅದನ್ನು ಮನ್ನಿಸುವದು ನಮ್ಮ ಧರ್ಮ. ಅಗಸನ ಕತೆಯ ಮೇಲಿಂದ ಶುದ್ಧ ನಿರ್ಣಯಮಾಡುವದು ಕಠಿಣವಿದೆ. ಈಗಂತೂ ಅದು ನಮಗೆ ಎಷ್ಟೂ ಒಪ್ಪಿಗೆ

ಯಾಗುವದಿಲ್ಲ. ಇಂಥ ಟೀಕೆಯನ್ನು ಕೇಳಿ ತನ್ನ ಪತ್ನಿಯನ್ನು ಬಿಡುವವನು ನಿರ್ದಯನೂ ಅನ್ಯಾಯಿಯೂ ಎಂದು ತಿಳಿಯಲ್ಪಡುವನು. ಆದರೆ ರಾಮಾಯಣ ದಲ್ಲಿ ಕವಿಯು ಈ ಕತೆಯನ್ನು ಯಾವ ವಿಚಾರದಿಂದ ಕೊಟ್ಟಿರುವನೆಂಬುದನ್ನು ನಾನು ಹೇಳಲಾರೆ. ನಾವು ಆ ಜಗಳದಲ್ಲಿ ಬೀಳುವದರಿಂದ ಉಪಯೋಗವೇನು? ನಾನಂತೂ ಬೀಳುವದಿಲ್ಲ. ರಾಮಾಯಣದಂಥ ಪುಸ್ತಕಗಳನ್ನು ಕೂಡ ನಾನು ಈ ದೃಷ್ಟಿಯಿಂದ ಓದುವದಿಲ್ಲ. ಹುಡಿಗೆಯರ ಸಂಗಡ ನಾನು ತೆಗೆದುಕೊಳ್ಳುವ ಸ್ವಾತಂತ್ರ್ಯದಿಂದ ಆಶ್ರಮವಾಸಿಗಳಿಗೆ ಆಘಾತವಾಗುತ್ತಿದ್ದರೆ ನಾನು ಅದನ್ನು ನಿಲ್ಲಿಸ ಬೇಕೆಂಬುದೇ ನನ್ನ ವಿಚಾರ. ಈ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುವದೇ ಸ್ವತಂತ್ರವಾದ ಧರ್ಮವಲ್ಲ. ತೆಗೆದುಕೊಳ್ಳದಿರುವದರಿಂದ ನೀತಿಯ ಭಂಗವಾಗುವ ದಿಲ್ಲ. ಆದರೆ ಈ ಪ್ರಕಾರ ಸ್ವಾತಂತ್ರ್ಯವನ್ನು ತೆಗೆದುಕೊಳ್ಳದಿರುವದರಿಂದ ಹುಡಿಗೆ ಯರ ಮೇಲೆ ಪರಿಣಾಮವಾಗುತ್ತಿದ್ದರೆ ನಾನು ಆಶ್ರಮವಾಸಿಗಳಿಗೆ ತಿಳಿಸಿ ಹೇಳಿ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುವೆನು. ಹುಡಿಗೆಯರೇ ನನ್ನನ್ನು ಬಿಡದಿದ್ದರೆ ಆಗ ನೋಡಿಕೊಳ್ಳುವೆನು. ನಾನು ತೆಗೆದುಕೊಳ್ಳುತ್ತಿರುವ ಸ್ವಾತಂತ್ರ್ಯದ ಅನುಕರಣ ವನ್ನು ಯಾರೂ ಮಾಡಬಾರದು. ಈ ಮಾತು ಸ್ವಾಭಾವಿಕವಾಗಿ ಆಗಬೇಕು. ಇವತ್ತಿ ನಿಂದ ನಾನು ಸ್ವತಂತ್ರನಾಗಿ ನಡೆಯಬೇಕಾಗಿದೆ ಎಂಬ ವಿಚಾರಮಾಡಿ ಕೃತ್ರಿಮ ರೀತಿಯಿಂದ ಯಾರೂ ಸ್ವಾತಂತ್ರ್ಯವನ್ನು ತೆಗೆದುಕೊಳ್ಳಲಾರರು. ತೆಗೆದುಕೊಂಡರೂ ಅದು ಕೆಟ್ಟದ್ದೆಂದೇ ತಿಳಿಯಲಾಗುವದು. ನಿಜವಾದ ಮಾತೆಂದರೆ ವಿಕಾರವಶನಾಗಿ ಅತಿ ನಿರ್ದೋಷವೆಂದು ತಿಳಿಯುವ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುವವನು ಸ್ವತಃ ಕಂದಕದಲ್ಲಿ ಬೀಳುತ್ತಾನೆ ಮತ್ತು ಎರಡನೆಯವರನ್ನೂ ಕೆಡವುತ್ತಾನೆ. ನಮ್ಮ ಸಮಾಜದಲ್ಲಿ ಸ್ತ್ರೀ-ಪುರುಷರ ಸಂಬಂಧವು ಸ್ವಾಭಾವಿಕವಾಗಿ ಆಗದ ವರೆಗೆ ಸಾವಧಾನ ದಿಂದ ನಡೆಯುವದು ಅವಶ್ಯವಿದೆ. ಈ ವಿಷಯದಲ್ಲಿ ಎಲ್ಲರಿಗೂ ಉಪಯೋಗ ಬೀಳು ವಂಥ ಯಾವದೇ ರಾಜಮಾರ್ಗವಿಲ್ಲ. ನಿಮ್ಮ ಸ್ವಂತದ ನಡತೆಯಲ್ಲಿ ಬಹಳ ವಿಸಂಗ ತೆಯು ತುಂಬಿದೆ. ನಿಮ್ಮ ಸ್ವಾಭಾವಿಕವಾದ ನಿರ್ದೋಷತೆಯು ನಿಮ್ಮನ್ನು ರಕ್ಷಿಸು ತ್ತದೆ. ಆದರೆ ಅದರ ಬಗ್ಗೆ ನೀವು ಅಹಂಕಾರಪಡುತ್ತೀರಿ ಮತ್ತು ಹಟದಿಂದ ಅದಕ್ಕೆ ಅಂಟಿಕೊಳ್ಳುತ್ತೀರಿ. ಇದು ಒಳ್ಳೆಯದಲ್ಲ. ಇದರಲ್ಲಿ ಅವಿಚಾರವಿದೆ. ಇವತ್ತು ನಿಮಗೆ ಇದರ ಹಾನಿಯು ಗೊತ್ತಾಗುವದಿಲ್ಲ. ಆದರೆ ಒಂದಾನೊಂದು ದಿವಸ ಅವಶ್ಯವಾಗಿ ಪಶ್ಚಾತ್ತಾಪಪಡಬೇಕಾಗುವದು. ಯಾರ ಅಹಂಕಾರವೂ ಉಳಿಯಲಿಲ್ಲ. ಎಲ್ಲ ಲೋಕ ಮರ್ಯಾದೆಗಳು ಕೆಟ್ಟವಿವೆ ಎಂದು ತಿಳಿದು ಸಮಾಜಕ್ಕೆ ಆಘಾತವನ್ನುಂಟು ಮಾಡಬಾರದು."

ಬಾ ಗೆ ಬರೆದರು: "ಇನ್ನು ನಿನ್ನ ಬಿಡುಗಡೆಯಾಗುವದು. ಆದರೆ ನನ್ನ

ಭೆಟ್ಟಿಯಾಗಲಾರೆ. ಅದರಿಂದ ನಿನಗೆ ದುಃಖವಾಗಬಹುದು. ನನಗಂತೂ ಇದ್ದೇ ಇದೆ. ನಿನ್ನ ಸಲುವಾಗಿಯಾದರೂ ಅಪವಾದ ಮಾಡುಬೇಕೆಂದು ಮನಸ್ಸಿನಲ್ಲಿ ಬರುತ್ತದೆ. ಆದರೂ ಇದು ಶೋಭಿಸುವದಿಲ್ಲವೆಂಬುದನ್ನು ನೀನೂ ಒಪ್ಪುವಿ. ನಮ್ಮ ಜೀವನವು ತ್ಯಾಗಕ್ಕಾಗಿಯೆ ಇರುತ್ತದೆ, ಆದುದರಿಂದ ಶಾಂತಳಾಗಿರು. ನನಗೆ ಮೇಲಿಂದಮೇಲೆ ಬರೆಯುತ್ತಿರು."

ಇವತ್ತು ಬೆಳಿಗ್ಗೆ ಮತ್ತೆ ನಿರ್ಣಯವನ್ನು ಕುರಿತು ಮಾತುಗಳಾದವು. ಜಯಕರ ಸಪ್ರು ಮತ್ತು ಚಿಂತಾಮಣಿ ಇವರ ಅಭಿಪ್ರಾಯುಗಳಬಗ್ಗೆ ಚರ್ಚೆ ನಡೆಯಿತು. ಬಾಪೂ ಹೇಳತೊಡಗಿದರು: "ಜಯಕರರು ಸಪ್ರು

೨೧-೮-'೩೨

ರಿಂದ ಇಲ್ಲಿ ಬೇರೆಯಾಗುವರೆಂಬ ಆಶೆಯನ್ನು ಹಿಡಿಯುಬಹುದು." ವಲ್ಲಭಭಾಯಿ: "ಬಹಳ ಆಶೆಯನ್ನು ಹಿಡಿಯುವಂತಹದೇನೂ ಇಲ್ಲ." ಬಾಪೂ: "ಇಂಗ್ಲಂಡದಲ್ಲಿ ಕೂಡ ಈ ವಿಷಯದಲ್ಲಿ ಇವರ ವಿಚಾರಗಳು ಭಿನ್ನವಾಗುತ್ತ ನಡೆದಿದ್ದವು. ಆದುದರಿಂದ ಆಶೆಯನ್ನು ಹಿಡಿಯಬಹುದಾಗಿದೆ. ಹಾಗೆ ನೋಡಿದರೆ ಏನು ಹೇಳಲಿಕ್ಕಾಗುವದು?" ವಲ್ಲಭಭಾಯಿ: "ಚಿಂತಾಮಣಿಯವರು ಈ ಸಾರೆ ಒಳ್ಳೇ ಶೋಭೆಯನ್ನು ಹೆಚ್ಚಿಸಿದ್ದಾರೆ." ಬಾಪೂ: "ಯಾಕಂದರೆ ಚಿಂತಾಮಣಿ ಹಿಂದೀಯರಾಗಿದ್ದಾರೆ, ಆದರೆ ಸಪ್ರುರ ಮನಸ್ಸು ಯುರೋಪಿಯನ್ನರದಾಗಿದೆ. ಈ ನಿರ್ಣಯದಲ್ಲಿಯೆ ಬಹಳಷ್ಟು ಘಟನೆಯು ಬಂದು ಬಿಡುತ್ತದೆಂದು ಚಿಂತಾಮಣಿ ತಿಳಿಯುತ್ತಾರೆ. ಘಟನೆಯು ದೊರೆತ ಮೇಲೆ ಈ ವಿಷಯಗಳ ಬಗ್ಗೆ ಚಿಂತೆಯೆ ಇಲ್ಲವೆಂದು ಸಪ್ರೂ ತಿಳಿಯುತ್ತಾರೆ. ಗುಂಡಾ ಜನರ ಕೈಯಲ್ಲಿ ಎಷ್ಟೆ ಒಳ್ಳೆಯ ಘಟನೆಯನ್ನು ಕೊಟ್ಟರೂ ಅದು ದುರ್ಗತಿಗೆ ಈಡಾಗುತ್ತದೆಂಬುದನ್ನು ಹಿಂದುಸ್ತಾನದ ಯಾವದೇ ಮನುಷ್ಯನಿಗೆ ತಿಳಿಸಿಹೇಳುವ ಆವಶ್ಯಕತೆಯಿಲ್ಲ. ಈ ನಿರ್ಣಯದಿಂದ ಘಟನೆಯನ್ನು ಗುಂಡಾ ಜನರ ಕೈಯಲ್ಲಿಯೇ ಕೊಡಲಾಗುತ್ತಿದೆ. ಇನ್ನೂ ಕೇಂದ್ರ ಸರಕಾರವೊಂದು ಉಳಿದಿದೆ. ಈ ಕೇಂದ್ರ ಸರಕಾರವನ್ನು ಒಂದು ಧಗಧಗಿಸುತ್ತಿರುವ ಕುಂಡವನ್ನಾಗಿ ಮಾಡಿ 'ಇನ್ನು ಇದರಲ್ಲಿ ಬಿದ್ದು ಸುಟ್ಟುಕೊಂಡು ಸಾಯಿರಿ' ಎಂದು ಹೇಳುವರು."

ನಾನು ಹೇಳಿದೆ: "ಮಾಲವಿಯಾಜಿಯವರು ಹೇಗೆ ಸುಮ್ಮನಿದ್ದಾರೆ?"

ಬಾಪೂ: "ಮಾಲವಿಯಾಜಿಯವರಿಗೆ ಏನೂ ಹೇಳುವದಿರಲಿಕ್ಕಿಲ್ಲ. ಇನ್ನು ಇದರಿಂದ ಏನಾಗಬಹುದು ಎಂದು ಅವರು ವಿಚಾರಮಾಡುತ್ತಿರಬಹುದು. ಅವರಿಗೆ ನನ್ನ ವಿಚಾರಗಳು ಗೊತ್ತಿರಲಿಕ್ಕಿಲ್ಲ, ಆದುದರಿಂದ ತೊಂದರೆಗೊಳಗಾಗಿರಬಹುದು."

ವಲ್ಲಭಭಾಯಿ: "ನಿಮ್ಮ ಸಂಗಡ ಇದೇ ಕಠಿಣವಿದೆ. ಕೊನೆಯ ವರೆಗೆ ಏನೂ ಗೊತ್ತಾಗಗೊಡುವದಿಲ್ಲ ಮತ್ತು ನಿಮ್ಮ ಸಂಗಡಿಗರ ಸ್ಥಿತಿಯನ್ನೂ ತೀರ

ವಿಷಮವಾಗಿ ಮಾಡುತ್ತೀರಿ! ನಿಮ್ಮ ವಿರುದ್ಧ ನಿಮ್ಮ ಸಂಗಡಿಗರ ದೂರು ಇದೇ ಇರುತ್ತದೆ. ನೀವು ನಮ್ಮೆಲ್ಲರನ್ನು ತೀರ ಕಲ್ಪನೆಯಿಲ್ಲದಂಥ ಸ್ಥಿತಿಯಲ್ಲಿ ಕೆಡವುತ್ತೀ-ರೆಂಬುದೇ ಎಲ್ಲರ ಅನುಭವವಾಗಿದೆ."

ಬಾಪೂ : " ಆದರೆ ಇದರಲ್ಲಿ ಏನು ಆಗಬಲ್ಲದು ? "

ವಲ್ಲಭಭಾಯಿ : " ನೀವು ಸಂಗಡ ಇದ್ದಿರಿ. ನೀವು ಯಾವದೇ ರೀತಿಯಿಂದ ಈ ಸುದ್ದಿಯನ್ನು ಹೊರಗೆ ಕಳಿಸಬಹುದಾಗಿತ್ತು, ಡಾಹ್ಯಾಭಾಯಿ ಪ್ರತಿವಾರ ಬರುತ್ತಾರೆ, ಅವರ ಸಂಗಡ ಸುದ್ದಿಯನ್ನು ಕಳಿಸಬಹುದಿತ್ತು" ಎಂದು ನಮಗೆ ಯಾರಾದರೂ ಅನ್ನಬಹುದು.

ಬಾಪೂ : " ಇದು ಹೇಗೆ ಸಾಧ್ಯ ? ನಾವು ಇವರಿಗೆ ( ಜೇಲ ಅಧಿಕಾರಿಗಳಿಗೆ ) 'ಹೋಗಿರಿ ನಾವಂತೂ ಈಗ ಈ ಸುದ್ದಿಯನ್ನು ಯಾವದೇ ರೀತಿಯಿಂದ ಹೊರಗೆಡವುತ್ತಿದ್ದೇವೆ' ಎಂದು ಹೇಳೋಣವೆ ? ನಮ್ಮಿಂದ ಈ ಸುದ್ದಿಯು ಹೊರಗೆ ಹೋಗುವದಿಲ್ಲವೆಂದು ನಾವು ಅವರಿಗೆ ವಚನಕೊಟ್ಟಿದ್ದೇವೆ. ಅಂದರೆ ಕೆಲಸವು ಮುಗಿಯಿತು. ನಾನು ಪತ್ರದಲ್ಲಿ ತೀರ ಆಲಕ್ಷ್ಯದಿಂದ, ಇದನ್ನು ಪ್ರಸಿದ್ಧಮಾಡಿ ಜನಮತವು ಜಾಗ್ರತವಾಗುವದಾದರೆ ಆಗಲಿ ಅಥವಾ ಪ್ರಕಟಿಸದಿದ್ದರೂ ಸರಿಯೆ ಎಂದು ಬರೆದದ್ದನ್ನು ನೀವು ನೋಡಲಿಲ್ಲವೆ ? ಮಾಲವಿಯಾಜಿ ಮತ್ತು ರಾಜಗೋಪಾಲಾಚಾರ್ಯರಿಗೆ ಈ ಸುದ್ದಿಯು ಗೊತ್ತಾದರೆ ಅವರು ಏನು ಮಾಡಬಲ್ಲರು ? ಸ್ವಲ್ಪೆ ದಿವಸಗಳ ಮಾತಲ್ಲವೆ ? ಮಾಲವಿಯಾಜಿ ಮತ್ತು ರಾಜಾಜಿಯವರಿಗೂ ಈ ಮಾತಿನಿಂದ ಸ್ವಲ್ಪ ಪೆಟ್ಟು ತಗಲುವದು ಅವಶ್ಯವಿದೆಯೆಂದು ನನ್ನ ವಿಚಾರ. ರಾಜಾಜಿಯವರು ಅತಿ ತೀಕ್ಷ್ಣಬುದ್ಧಿಯವರಿರುವದರಿಂದ ಈ ಮನುಷ್ಯನು ಈ ಹೆಜ್ಜೆಯನ್ನು ಹೇಗೆ ಇಟ್ಟನೆಂಬುದು ಅವರಿಗೆ ಕೂಡಲೇ ಗೊತ್ತಾಗುವದು. ಈ ಮಾತು ಇಂತಹ ಪೆಟ್ಟಿನಿಂದಲೇ ಗೊತ್ತಾಗುವದು. ನೋಡಿರಿ, ನಾನು ಈ ಪತ್ರದಲ್ಲಿ ಯಾವ ಚರ್ಚೆಯನ್ನೂ ಮಾಡಿಲ್ಲ. ಇಲ್ಲದಿದ್ದರೆ ನಾನೊಂದು ದೊಡ್ಡ ತಕರಾರಿ ಅರ್ಜಿಯನ್ನು ತಯಾರಿಸಬಹುದಿತ್ತಲ್ಲವೆ ? ಆದರೆ ನಾನು ಇದೊಂದು ವಿಷಯವನ್ನು ತೆಗೆದುಕೊಂಡಿದ್ದೇನೆ. ಮತ್ತು ಅದಕ್ಕಾಗಿ ನಾನು ನನ್ನ ಪ್ರಾಣವನ್ನು ಪಣಕ್ಕೆ ಹಚ್ಚಬೇಕಾಗಿದೆ. ಈ ಜೀವವನ್ನು ಹೆಚ್ಚು ಉದಾತ್ತ ಉದ್ದೇಶಕ್ಕಾಗಿ ಸುರಕ್ಷಿತವಾಗಿ ಇಟ್ಟಿದ್ದೆನು. ಆದರೆ ಈಗ ಪ್ರಸಂಗ ಬಂದಿತು. ಇನ್ನೇನಾಗುವದು ? ಈ ಸತ್ಯಾಗ್ರಹವು ಕಾಂಗ್ರೆಸ್ಸಿಗರ ವಿರುದ್ಧ ಇಲ್ಲವೇ ಇಲ್ಲ. ಪಾಪ ಅವರು ಜೇಲಿನಲ್ಲಿ ಬಿದ್ದಿದ್ದಾರೆ. ಕಾಂಗ್ರೆಸ್ಸೇತರರು ಏನು ಮಾಡುತ್ತಿರುವರೆಂಬುದು ಅವರಿಗೆ ತಿಳಿಯಬೇಕೆಂದು ಈ ಸತ್ಯಾಗ್ರಹವು ಅವರ ವಿರುದ್ಧವಿದೆ. ನೋಡಿರಿ, ಅಸ್ಪೃಶ್ಯರ ಸಂಗಡ ಇವತ್ತು ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡುವವರು ಎಲ್ಲಿಯಾದರೂ ಯಾರಾದರೂ ಇದ್ದಾರೆಯೆ ? ಈ ಜಡತ್ವವು ಸಹ

ನನ್ನನ್ನು ಪೀಡಿಸುತ್ತಿದೆ. ಈ ಜಡತ್ವವು ಇಂಥ ಉಪಾಯಗಳ ಹೊರತು ಹೇಗೆ ನಾಶವಾಗುವದು ಸಾಧ್ಯ. ಅಸ್ಪೃಶ್ಯರಿಗೆ ಪ್ರತ್ಯೇಕ ಮತಾಧಿಕಾರ ಕೊಡುವದರಿಂದ ಏನಾಗುವದೆಂಬ ವಿಚಾರವೇ ನನ್ನಲ್ಲಿ ನಡುಗು ಹುಟ್ಟಿಸುತ್ತಿದೆ. ಬೇರೆ ಎಷ್ಟೋ ಜಾತಿಗಳಿಗೆ ಪ್ರತ್ಯೇಕ ಮತಾಧಿಕಾರ ಕೊಟ್ಟರೆ ನಾನು ಅವರ ಸಂಗಡ ಸರಿಪಡಿಸಿಕೊಳ್ಳುವೆ. ಆದರೆ ಇವರ ಸಂಗಡ ಸರಿಪಡಿಸಿಕೊಳ್ಳುವದಕ್ಕೆ ಇದರ ಹೊರತು ಬೇರೆ ಉಪಾಯವೇ ಇಲ್ಲ. ಪಾಪ, ಅಸ್ಪೃಶ್ಯರು ಸಹ ಅನ್ನಬಹುದು: ಈ ಮನುಷ್ಯನಂತೂ ನಮ್ಮ ಹಿತ ಬಯಸುವವನಿದ್ದಾನೆ. ಅಂದ ಮೇಲೆ ನಮಗೆ ಕೆಲವೊಂದು ಹೆಚ್ಚು ಅಧಿಕಾರ ಸಿಗುತ್ತಿದ್ದರೆ ಏತಕ್ಕಾಗಿ ಸತ್ಯಾಗ್ರಹ ಮಾಡುತ್ತಾನೆ? ನಾವು ಪ್ರತ್ಯೇಕ ಮತವನ್ನು ಕೊಟ್ಟರೂ ಇವನ ಸಂಗಡ ಇದ್ದೇ ಕೊಡುತ್ತೇವಲ್ಲವೆ? ಇದರಿಂದ ಹಿಂದುಗಳಲ್ಲಿ ಇಬ್ಭಾಗಗಳಾಗುವವು, ಚೂರಿಗಳು ಇರಿದಾಡುವವು, ಕೊಲೆಗಳಾಗುವವು, ಅಸ್ಪೃಶ್ಯ ಗುಂಡರ ಸಂಗಡ ಮುಸಲ್ಮಾನ ಗುಂಡರೂ ಕೂಡಿಕೊಳ್ಳುವರು ಮತ್ತು ಹಿಂದುಗಳನ್ನು ತುಂಡುತುಂಡಾಗಿ ಮಾಡುವರು ಎಂಬುದು ಅವರಿಗೇನು ಗೊತ್ತು? ಇದೆಲ್ಲವನ್ನೂ ಸರಕಾರವು ವಿಚಾರಮಾಡಿರಲಿಕ್ಕಿಲ್ಲವೆ? ಈ ಮಾತು ಅವರ ಕಲ್ಪನೆಗೆ ಮೀರಿದ್ದಿತ್ತೆಂದು ನಾನು ತಿಳಿಯುವದೇ ಇಲ್ಲ. ಇನ್ನೂ ಸ್ವಲ್ಪ ಬಾಕಿ ಉಳಿದಿತ್ತೇನೊ ಎನ್ನುವಂತೆ ಇದರಲ್ಲಿ ಆಯರ್ವಿನ್ನರನ್ನೂ ಕೂಡಿಸಿಕೊಂಡರು. ಆಯರ್ವಿನ್ನರಿರದಲ್ಲಿ ನಮಗೆ ಸಂತೋಷವಿಲ್ಲ ಎಂದು ಕ್ಯಾಂಟರ್ಬರಿ ಹೇಳುತ್ತಾನೆ. ಈ ಈಸಾಯಿ ಆಯರ್ವಿನ್ನನು ಬಂದು ಇವನು ಮಾಡುವದರಲ್ಲಿ ಭಾಗ ತೆಗೆದುಕೊಂಡನು!

"ಇಲ್ಲ, ವಲ್ಲಭಭಾಯಿ ಈ ಸುದ್ದಿಯು ಮೊದಲೇ ಗೊತ್ತಾಗುವದರಿಂದ ಯಾವ ಲಾಭವೂ ಇಲ್ಲ. ಒಮ್ಮಿಂದೊಮ್ಮಿಲೆ ಭುಗಿಲ್ಲೆಂದು ಏಳುವದೇ ಒಳ್ಳೆಯದು. ಆದರೆ ಇದು ಬಹಳ ದೊಡ್ಡ ತಪ್ಪಾಯಿತೆಂದು ನಿಮಗೆ ಅನಿಸುತ್ತಿದ್ದರೆ ಆ ಮಾತು ಬೇರೆ. ಹಾಗೆ ನೋಡಿದರೆ ನೀವಿಬ್ಬರೂ ಇದರಲ್ಲಿ ಪಾಲುಗಾರರಾಗಿದ್ದೀರಿ, ಆದುದರಿಂದ ನಿಮ್ಮ ಹೊಣೆಗಾರಿಕೆಯು ಇದ್ದೇ ಇದೆ. ಆದರೆ ಕಟ್ಟಕಡೆಯ ಹೊಣೆಗಾರಿಯಂತೂ ನನ್ನದೇ ಇದೆ. ಯಾಕಂದರೆ ನನಗೆ ಹೊಳೆದದ್ದನ್ನು ನಾನು ಮಾಡಿಬಿಟ್ಟೆನು. ಇದು ಯಾರ ಒಪ್ಪಿಗೆಯ ಅವಶ್ಯಕತೆ ಇಲ್ಲದಂತಹ ಮಾತಾಗಿದೆ. ಮುಂಬೈ ದಂಗೆಯ ಕಾಲಕ್ಕೆ ನಾನು ಉಪವಾಸ ಮಾಡಿದಾಗ ದಾಸ ಮತ್ತು ನೆಹರು ಅವರು 'ನಮ್ಮನ್ನು ಕೇಳದೆ ನೀವು ಇದನ್ನು ಹೇಗೆ ಮಾಡಬಲ್ಲಿರಿ?' ಎಂದು ಕೇಳಿದ್ದರು. ನಾನು ಅವರಿಗೆ ಸಹೋದರರೇ, ನಾನು ಇದನ್ನು ಕಾಂಗ್ರೆಸ್ಸಿಗನೆಂದು ಮಾಡದೆ ಮನುಷ್ಯತ್ವದ ದೃಷ್ಟಿಯಿಂದ ಮಾಡುತ್ತಿದ್ದೇನೆ. ನಾನೊಂದು ವಿಶಿಷ್ಟ ಧರ್ಮವನ್ನಾಚರಿಸುತ್ತಿದ್ದೇನೆ ಮತ್ತು ಅದಕ್ಕೆ ಅನುಸಾರವಾಗಿ ಇದೆಲ್ಲವನ್ನೂ ಮಾಡಬೇಕಾಗುತ್ತಿದೆ' ಎಂದು ಹೇಳಿದ್ದೆ. ಹಿಂದೂ-ಮುಸಲ್ಮಾನ ಉಪವಾಸದ ಕಾಲಕ್ಕೆ ಹಕೀಮಜಿಯವರಿಗೂ ನಾನು ಇದೇ

ಮಾತ್ರನ್ನು ಹೇಳಿದ್ದೆ. ಈಗ ಕೂಡ ನನ್ನೆದುರಿಗೆ ಈ ಪ್ರಶ್ನೆಯು ಧಾರ್ಮಿಕವಾಗಿದೆ, ಇದರಲ್ಲಿ ರಾಜಕಾರಣದ ಗಂಧವು ಸ್ವಲ್ಪಕೂಡ ಇಲ್ಲ.

“ ತೊಂದರೆಯೇನೊ ಆಗುವದು. ಪಾಪ, ಕ್ಯಾಂಪಿನವರದು ಏನಾಗುವದು ? ಆದರೆ ಇವರೆಲ್ಲರದನ್ನೂ ನಾವು ಮುಗಿಸಿಕೊಳ್ಳುವೆವು. ಈ ಜನರಿಗೆ ಹೇಳುವೆವು— ‘ ಉಪವಾಸಮಾಡಿದರೆ ಎಚ್ಚರಿಕೆ. ಸರಕಾರಕ್ಕೆ ಕೂಡ ನಮ್ಮ ವಿರುದ್ಧ ಹೇಳಲಿಕ್ಕೆ ಸಿಗುವದು ಮತ್ತು ಉಪವಾಸವು ತೀರ ಕೃತ್ರಿಮವಾಗುವದು. ನಿಮ್ಮ ವೇಳೆ ಬಂದಾಗ ಉಪವಾಸಮಾಡಬೇಕಲ್ಲವೆ ? ಸಾಮೂಹಿಕ ಉಪವಾಸವಾಗಬಾರದೆಂಬ ಮಾತೇನೂ ಇಲ್ಲ. ಹಿಂದೂ-ಮುಸಲ್ಮಾನರಲ್ಲಿ ಬೆಂಕಿಹತ್ತಿದ್ದರೆ ಆ ಕಾಲಕ್ಕೆ ಹಿಂದುಗಳನ್ನು ತಡೆಯಿರಿ ಮತ್ತು ನಿಮ್ಮಿಂದ ಏನೂ ಆಗದ ಕಾಲಕ್ಕೆ ನೀವು ಸಾಮೂಹಿಕ ಉಪವಾಸವನ್ನು ಮಾಡಬಲ್ಲಿರಿ. ’ ನಾನು ಕೂಡ ಹಿಂದು-ಮುಸಲ್ಮಾನ ಪ್ರಶ್ನೆಯನ್ನು ಬಿಟ್ಟು ಬಿಟ್ಟಿಲ್ಲ. ಆದರೆ ಹಿಂದೂ ಜಾತಿಯು ಇನ್ನೂ ನನ್ನ ಸಂಗಡವಿಲ್ಲ. ಅವರಿಗೆ ಕೊಲ್ಲುವ ಹುರುಪು ಇರುವವರೆಗೆ ನನ್ನಿಂದ ಏನೂ ಆಗದು. ಈ ಜನರು ನನ್ನ ಸಂಗಡ ಅಹಿಂಸಕರಾದರೆ ಇದೇ ಪ್ರಕಾರದ ಉಪಾಯಗಳಿಂದ ಈ ಜಗಳವನ್ನು ಮುಗಿಸಿ ಬಿಡುವೆನು. ಇಲ್ಲ, ನೀವು ಗಾಬರಿಯಾಗಬೇಡಿರಿ ಮತ್ತು ಈ ವಿಷಯವು ತನ್ನ ಸಮಯಕ್ಕನುಸರಿಸಿ ಗೊತ್ತಾಗುವದೆಂದು ತಿಳಿವಳಿಕೆಯೊಂದಿಗೆ ವಿಶ್ವಾಸವಿಡಿರಿ. ಇದೇ ಯೋಗ್ಯವಾಗಿದೆ. ”

ಬಾಪೂರನ್ನು ಅವರ ಉತ್ತಮವಾದ ಗಾರ್ಹಸ್ಥ್ಯ ಸ್ಥಿತಿಯಲ್ಲಿ ನೋಡುವದಾದರೆ ತಮ್ಮ ಸೊಸೆ ಸುಶೀಲಾಗೆ ಬರೆದ ಈ ಪತ್ರವನ್ನು ನೋಡಿರಿ :

೨೨-೮-’೩೨ “ ಆಲಸಿಯಾದ ನಿನಗೆ ನಿನ್ನ ಎರಡು ಪಾನಿನ ಪತ್ರವು ಉದ್ದವೆನಿಸಿತು, ನನಗಂತೂ ತೀರ ಸಣ್ಣದೆಂದೆನಿಸುತ್ತದೆ. ನಾನು ನನ್ನ ಅಣ್ಣನಿಗೆ ಇಂಗ್ಲಂಡದಿಂದ ಪತ್ರಬರೆಯುತ್ತಿದ್ದಾಗ ಇಪ್ಪತ್ತು ಇಪ್ಪತ್ತೈದು ಪಾನುಗಳನ್ನು ತುಂಬುತ್ತಿದ್ದೆ. ಇಷ್ಟಾದರೂ ಆ ಪತ್ರವು ಸಣ್ಣದೆಂದು ನನಗೆ ಅನಿಸುತ್ತಿತ್ತೆಂಬುದು ನಿನಗೆ ಗೊತ್ತಿದೆಯಲ್ಲವೆ ? ಅಣ್ಣನಿಗೆ ದೊಡ್ಡದೆನಿಸುತ್ತದೆಂದಾಗಲಿ, ಓದುವದಕ್ಕೆ ತೊಂದರೆಯಾಗುತ್ತದೆಂದಾಗಲಿ ನನಗೆ ಅನಿಸುತ್ತಿದ್ದಿಲ್ಲ, ಆದರೆ ಅವರಿಗೆ ಆನಂದವೆನಿಸುತ್ತಿತ್ತೆಂಬ ವಿಶ್ವಾಸವಿತ್ತು. ಇಡೀ ವಾರದಲ್ಲಿ ಮಾಡಿದ್ದನ್ನು, ಯಾರು ಯಾರಿಗೆ ಭೆಟ್ಟಿಯಾಗಿದ್ದನ್ನು , ಓದಿದ್ದನ್ನು, ಮಾಡಿದ ತಪ್ಪುಗಳನ್ನು ಎಲ್ಲವನ್ನೂ ಬರೆಯುವಾಗ ಪಾನುಗಳು ತುಂಬಿದರೆ ಆಶ್ಚರ್ಯವೇನು ? ಅಲ್ಲದೆ ಅದನ್ನು ಅಣ್ಣನಿಗೇ ಬರೆಯುತ್ತಿದ್ದೆನಾದ್ದರಿಂದ ಆದದ್ದೆಲ್ಲವನ್ನೂ ಅದರಲ್ಲಿ ತುಂಬಿ ಬಿಡುತ್ತಿದ್ದೆ.

“ ಆದರೆ ನೀನು ಒಂದೇ ಸಾಲಿನಲ್ಲಿ ಮುಗಿಸಿಬಿಡುತ್ತಿ. ದೊಡ್ಡ ದೊಡ್ಡ ಅಕ್ಷರ

ಗಳಲ್ಲಿ ೫೦ ಸಾಲು ಬರೆದು ಬಿಟ್ಟರೆ ಬಹಳವಾಯಿತೆಂದು ಅನಿಸುವದು. ಇಂತಹ ರಾಜಕುಮಾರಿ ನೀನು. ಕೊನೆಗೆ ನೀನು ಮಣಿಲಾಲನ ಮೇಲೆ ಅಂಕುಶವನ್ನಿಟ್ಟರೆ ಸಾಕು. ಮಣಿಲಾಲನು ಭೋಳೆ ಇದ್ದಾನೆ, ನೀನು ಆಳವಾಗಿರುತ್ತಿ. ಇದನ್ನು ನೋಡಿಯೆ ನಿನ್ನ ಲಗ್ನ ಮಾಡಿರುತ್ತದೆ. ನಿನಗೆ ಜನರ ಪರೀಕ್ಷೆಯು ನಿಜವಾಗಿಯೆ ಆಗುವದೆಂದು ತಿಳಿಯುತ್ತೇನೆ. ಈಗ ಇನ್ನೂ ಸ್ವಲ್ಪ ಹೆಚ್ಚಾಗಿ ಅಂಕಿತದಲ್ಲಿಡು. ಅವನು ಪತಿಯಾದುದರಿಂದ ಅವನು ಹೇಳಿದ್ದೇ ಅಂತಿಮ ವಾಕ್ಯವೆಂದು ತಿಳಿಯಬೇಡ. ನಿಜವಾದ ಪತ್ನಿಯು ಆವನ ಕಿವಿ ಹಿಡಿದು ಅವನು ಕಂದಕದಲ್ಲಿ ಬೀಳುವದನ್ನು ತಡೆಯುವಳು. ಇದೆಲ್ಲವೂ ನಿನ್ನ ಕೈಯಲ್ಲಿದೆಯೆಂದು ನಾನು ತಿಳಿಯುತ್ತೇನೆ. ಮಣಿಲಾಲನು ನಿನ್ನನ್ನು ದಾಸಿಯೆಂದು ತಿಳಿಯದೆ ಜೊತೆಗಾರ್ತಿ, ಸಹಧರ್ಮಿಣಿ ಮತ್ತು ಅರ್ಧಾಂಗಿನಿ ಎಂದು ತಿಳಿಯಬೇಕೆಂದು ಮಣಿಲಾಲನ ಸಂಗಡ ನನ್ನ ಕರಾರು ಇದೆ. ಈ ರೀತಿ ನಿಮ್ಮಿಬ್ಬರದೂ ಒಬ್ಬರಿಗೊಬ್ಬರ ಮೇಲೆ ಸಮಾನ ಹಕ್ಕು ಇದೆ. ನಿನಗೆ ಮನೆಯೊಳಗಿನ ಜ್ಞಾನವು ಯಾವ ಪ್ರಮಾಣದಲ್ಲಿ ಹೆಚ್ಚಾಗಿರುವದೊ ಆ ಮಟ್ಟಿಗೆ ಈ ಕ್ಷೇತ್ರದಲ್ಲಿ ನಿನ್ನ ಅಧಿಕಾರವು ಹೆಚ್ಚಾಗಿರುತ್ತದೆ. ಮಣಿಲಾಲನಿಗೆ ಯಂತ್ರ ನಡೆಸಲಿಕ್ಕೆ ಹೆಚ್ಚಿಗೆ ಬರುತ್ತಿರಬಹುದು. ಆದುದರಿಂದ ಅದರಲ್ಲಿ ಅವನ ಅಧಿಕಾರವು ಹೆಚ್ಚಿಗಿರುತ್ತದೆ. ನೀರಿನ ಉಪಾಯವು ಅವನಿಗೆ ಹೆಚ್ಚಿಗೆ ಗೊತ್ತಿದೆ. ಆದುದರಿಂದ ಅವನಿಗೆ ಅದರ ಅಧಿಕಾರವು ಹೆಚ್ಚಿಗಿರಲೊಲ್ಲದೇಕೆ. ”

ಇವತ್ತು ೨೦ ನೇ ಸಪ್ಟಂಬರದ ಕಾರ್ಯಕ್ರಮಕ್ಕಾಗಿ ಸಿದ್ಧಮಾಡಿದ ಎಷ್ಟೋ ಪ್ರಶ್ನೆಗಳನ್ನು ಬಾಪೂಗೆ ತೋರಿಸಿ ಅವರಿಗೂ ಕೆಲವೊಂದು ಬರೆದುಕೊಡಿರೆಂದು ಕೇಳಿದೆ. ಬಾಪೂ ಹೇಳಿದರು : “ ನಾನು ಉತ್ತರಗಳನ್ನು ಬಾಯಿಂದ ಹೇಳುತ್ತೇನೆ. ನೀನು ಗ್ರಹಿಸಿದಷ್ಟು ಬರೆದು ತೆಗೆ. ಇದರಲ್ಲಿ ಎಷ್ಟೊ ಪ್ರಶ್ನೆಗಳ ಉತ್ತರಗಳನ್ನು ಎಷ್ಟು ವಿಸ್ತಾರಪೂರ್ವಕವಾಗಿ ಕೊಟ್ಟರೂ ಅವು ಪೂರ್ಣವಾಗಲಾರವು. ” ಅವರು ಹೇಳಿದ್ದ ರಲ್ಲಿ ಎಷ್ಟೊ ಇವತ್ತು ಬರೆದುಕೊಳ್ಳುತ್ತೇನೆ :

ಹೋರರ ಪತ್ರದಲ್ಲಿ ಬರೆದ ಎರಡು ವಿಷಯಗಳು—ದಬ್ಬಾಳಿಕೆ ಮತ್ತು ಪ್ರತ್ಯೇಕ ಮತಾಧಿಕಾರಗಳು—ಭಿನ್ನ ಭಿನ್ನ ಪ್ರಕಾರದವಿರುತ್ತವೆ. ಆದುದರಿಂದ ಇವುಗಳ ತುಲನೆಮಾಡುವದು ಸಾಧ್ಯವೇ ಇಲ್ಲ. ಬಾಪೂ ತಮ್ಮ ಮತದ ಪ್ರಕಾರ ದಬ್ಬಾಳಿಕೆಯ ಸಲುವಾಗಿ ಸತ್ಯಾಗ್ರಹ ಮಾಡುವ ಪ್ರಸಂಗ ಬಂದರೆ ವಿಚಾರಮಾಡುವರು. ಆದರೆ ಈ ವಿಷಯಕ್ಕಾಗಿ ವಿಚಾರವನ್ನೇ ಮಾಡಬೇಕಾಗುವದಿಲ್ಲ. ಇದು ತೀರ ಸ್ವಾಭಾವಿಕವಿದೆ. ಇದಿಲ್ಲದಿದ್ದರೆ ಕೆಲಸವೇ ನಡೆಯಲಾರದು. “ ಹೊರಗಿದ್ದರೆ ಉಪವಾಸ ಮಾಡುವ ಪ್ರಸಂಗವು ಎಂದೂ ಬರುತ್ತಿದ್ದಿಲ್ಲವೆಂತಲ್ಲ. ಆದರೆ ಹೊರಗಿದ್ದು ಇದು ಅಸಂಭವವಾಗುವಷ್ಟು ಜೋರಿನಿಂದ ಆಂದೋಲನವನ್ನು ಮಾಡುತ್ತಿದ್ದೆ. ಈ

ಉಪವಾಸವು ಸರಕಾರದ ವಿರುದ್ಧವಿಲ್ಲ, ಮುಸಲ್ಮಾನರ ವಿರುದ್ಧವಿದೆ, ಹಿಂದುಗಳ ವಿರುದ್ಧವಿದೆ ಮತ್ತು ಇಂಗ್ಲೀಷ ಜನರನ್ನೂ ಉಳಿದ ಅನೇಕರನ್ನೂ ಜಾಗ್ರತಮಾಡುವ ದಕ್ಕಾಗಿ ಇರುತ್ತದೆ. ಯಾವನ ವಿರುದ್ಧ ಉಪವಾಸ ಮಾಡುವದಿದೆಯೊ ಅವನು ಈ ಹೆಜ್ಜೆಯನ್ನು ತಿಳಿಯುವಂಥವನಾಗಿರಬೇಕೆಂಬ ಅವಶ್ಯಕತೆ ಇಲ್ಲ. ಮುಸಲ್ಮಾನರು ಬಂದು ಆಶ್ರಮದಿಂದ ಒಬ್ಬ ಹುಡಿಗೆಯನ್ನು ಎತ್ತಿಕೊಂಡು ಹೋದರೆಂದು ಸುದ್ದಿ ಬಂತೆಂದು ತಿಳಿ. ಇಲ್ಲಿ ಕುಳಿತಲ್ಲಿಯೇ ಅವಶ್ಯವಾಗಿ ಅನಶನವನ್ನು ಪ್ರಾರಂಭಿಸು ವೆನು ಮತ್ತು ನನ್ನ ಈ ಉಪವಾಸದ ಸುದ್ದಿಯನ್ನು ಮುಸಲ್ಮಾನರಿಗೆ ತಿಳಿಸಿರೆಂದು ಸರಕಾರಕ್ಕೆ ಹೇಳುವೆನು. ಹೀಗೂ ತಿಳಿಸುವೆನು : ಯಾವ ಜಾತಿಯು ಬಗ್ಗೆ ನಾನು ಎಂದೂ ಕೆಟ್ಟದ್ದನ್ನು ಬಯಸಿಲ್ಲ ಮತ್ತು ಯಾರ ಸಲುವಾಗಿ ಪ್ರಾಣಕೊಡುವ ಪ್ರಸಂಗ ಬಂದರೆ ಪ್ರಾಣ ಕೊಡಲಿಕ್ಕೂ ಸಿದ್ಧನಾಗುವೆನು ಆ ಜಾತಿಯು ಇಂಥ ಮಾತನ್ನು ಸಹಿಸಿದರೆ ನನಗೆ ಬೇರೊಂದು ದಾರಿಯೇ ಉಳಿಯುವದಿಲ್ಲ. ಇಂದು ಅಸ್ಪೃಶ್ಯರು ಸಂಕಟದಲ್ಲಿ ಬಿದ್ದಿದ್ದಾರೆ. ಇದು ಯಾರಿಗೂ ತಿಳಿಯಲೊಲ್ಲದು. ಇದ ರಿಂದ ಪರಿಸ್ಥಿತಿಯು ಹೆಚ್ಚು ದುಃಖದಾಯಕವಾಗುತ್ತಿದೆ. ನನ್ನ ಬಿಡುಗಡೆಯಾಗುವ ಸಮಯಕ್ಕೆ ಪರಿಸ್ಥಿತಿ ಹೀಗಾಗಿರಬಹುದು: ತೀರ ಸುಧಾರಿಸಲಿಕ್ಕೆ ಬಾರದಂತಾಗಿರ ಬಹುದು ಅಥವಾ ಅಸ್ಪೃಶ್ಯರ ದೊಡ್ಡ ಸಮೂಹವು ಮುಸಲ್ಮಾನರಾಗಿಬಿಟ್ಟಿರಬಹುದು, ಅಥವಾ ಸನಾತನಿ ಹಿಂದುಗಳು ತಿರಸ್ಕಾರದಿಂದ ಅವರಿಗೆ ತೊಂದರೆಕೊಡುತ್ತಿರ ಬಹುದು ಮತ್ತು ಅವರನ್ನು ಹೆಚ್ಚು ಹತ್ತಿಕ್ಕಿರಬಹುದು. ನಾವು ಬಿಡುಗಡೆಯಾಗುವ ಹೊತ್ತಿಗೆ ಆಗುವದೆಲ್ಲವೂ ಸಂಪೂರ್ಣ ಆಗಿಬಿಟ್ಟಿರಬಹುದು, ನನಗಂತೂ ನಿರ್ಣಯ ದಲ್ಲಿ ಈ ಮಾತುಗಳೆಲ್ಲವೂ ಅತ್ಯಂತ ಭಯಾನಕವಾಗಿ ತೋರುತ್ತವೆ. ನಿರ್ಣಯದ ಉಳಿದೆಲ್ಲ ಭಾಗವು ಉತ್ತಮವಾದುದೂ ಒಪ್ಪಿಕೊಳ್ಳಲು ಯೋಗ್ಯವಾದುದೂ ಇದ್ದರೂ ಸಹ ನಾನು ಇದರ ವಿರುದ್ಧ ಇಂಥದೇ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಿದ್ಧ ನಾಗುತ್ತಿದ್ದೆ. ”

ಬಾಪೂರವರ ನಿನ್ನಿನ ಉದ್ಗಾರಗಳು ಯಾವಾಗಲೂ ನೆನಪಿನಲ್ಲಿ ಉಳಿಯು ವವು: “ ನನ್ನ ಜೀವನವು ವ್ಯರ್ಥ ಹೋಗುತ್ತಿದೆಯೆಂದು ನನಗೆ ಕಲ್ಪನೆ ಕೂಡ ಬರುವದಿಲ್ಲ. ನಾನು ಇಲ್ಲಿ ಕುಳಿತಲ್ಲಿಯೇ ಅನೇಕ ಕೆಲಸಗಳನ್ನು

**೨೩-೮-'೩೨**

ಮಾಡಬಲ್ಲೆ. ಒಂದು ಕ್ಷಣವೂ ಕೂಡ ವ್ಯರ್ಥ ಹೋಗುವದಿಲ್ಲ. ‘ ಸಾಂಸಾರಿಕ ಮೃತ್ಯು ’ ಶಬ್ದವು ಸರಕಾರವು ನಮ್ಮನ್ನು ಯಾವ ಕಾರಣಕ್ಕಾಗಿ ಜೇಲಿನಲ್ಲಿ ಹಾಕಿರುವದೊ ಅಷ್ಟರಮಟ್ಟಿಗೆ ಸರಿಯಾಗಿದೆ. ಆದರ ಹೊರತು ಉಳಿದ ವಿಷಯಗಳಲ್ಲಿ ನಾವು ಮಾಡಬೇಕೆಂದು ಅನಿಸಿದಷ್ಟು ಕೆಲಸ ಗಳನ್ನು ಮಾಡಬಲ್ಲೆವು. ನಾನು ಎಲ್ಲರನ್ನೂ ಭೆಟ್ಟಿಯಾಗುವದು ಸಾಧ್ಯವಾದರೆ

ಡಾ. ಮೆಹತಾರ ಪ್ರಕರಣವನ್ನು ಪೂರ್ಣವಾಗಿ ಮುಗಿಸಬಲ್ಲೆ. ಆಶ್ರಮದ ಮಾರ್ಗ-ದರ್ಶನ ಮಾಡುವದನ್ನು ನೀನು ನೋಡುತ್ತಲೇ ಇದ್ದಿ."

ಇದೇ ಪ್ರಕಾರ ಅನೇಕ ಪತ್ರಗಳನ್ನು ಬರೆಯುತ್ತಾರೆ. ಕ್ಯಾಂಪ ಜೇಲಿನ ಬಹಳ ಪತ್ರಗಳಲ್ಲಿ ಧಾರ್ಮಿಕ ಶಂಕೆಗಳನ್ನೂ ಪ್ರಶ್ನೆಗಳನ್ನೂ ಕೇಳಿರುತ್ತಾರೆ. ದರಬಾರಿ-ಯವರು ಕೇಳಿದ್ದರು: "ನಿರರ್ಥಕ ವಿಚಾರಗಳು ಭಾರವಾಗುತ್ತವೆ. ಒಂದು ವಿಶಿಷ್ಟ ಸಮಯದವರೆಗೆ ಎಲ್ಲ ಮನುಷ್ಯರು ವಿಚಾರಗಳಲ್ಲಿ, ಕಲ್ಪನೆಗಳಲ್ಲಿ ತಲ್ಲೀನ-ರಾಗುತ್ತಾರೆ. ಆದರೆ ಸತ್ಯಶೋಧಕನು ಅನುಭವವಾದಮೇಲೆ ಆದರಿಂದಲೂ ಬಿಡುಗಡೆ ಹೊಂದುತ್ತಾನೆ. ನಿಷ್ಕಾಮ ಕರ್ಮದಿಂದ ಚಿತ್ತಶುದ್ಧಿಯಾಗುತ್ತದೆಂಬುದು ನಿಜ. ಆದರೆ ಒಂದು ವಿಶಿಷ್ಟ ಮರ್ಯಾದೆಯವರೆಗೆ ಮನಃಶುದ್ಧಿಯಾದ ಮೇಲೆ ಸಾಧಕನಿಗೆ ಒಳಗಿನ ಕ್ರಿಯೆಗಳ ಅವಲೋಕನವನ್ನು ಮಾಡಲೇಬೇಕಾಗುವದಲ್ಲವೆ? ಸಾಧಕನಿಗೆ ಕೆಲವೊಂದು ಸಮಯ ಶಾಂತನಾಗಿ ಕುಳಿತುಕೊಳ್ಳುವ ಆವಶ್ಯಕತೆ ಇದೆಯೊ ಇಲ್ಲವೊ? ಅಥವಾ ಕರ್ಮದಿಂದಲೇ ಕಾರ್ಯವು ಮುಗಿತ್ತಿದೆಯೊ? ಇದೇ ಕಾರಣಕ್ಕಾಗಿ ಭಗವಾನ ಬುದ್ಧನು ಪ್ರವೃತ್ತಿ–ನಿವೃತ್ತಿಗಳ ಮಿಲನವನ್ನು ಹುಡುಕಿದನು. ನೀವು ಕರ್ಮಯೋಗವನ್ನೇ ರಾಜಮಾರ್ಗವೆಂದು ಹೇಳಿದ್ದೀರಿ. ಆದರೆ ಕೇವಲ ಇಷ್ಟರಿಂದಲೇ ಮನುಷ್ಯನು ಆತ್ಮದ ಕ್ರಿಯೆಗಳನ್ನು ತಿಳಿದುಕೊಳ್ಳುತ್ತಾನೆಯೆ?"

ಬಾಪೂ ಬರೆದರು: "ಮನುಷ್ಯನು ಕೆಲವೊಂದು ಸಮಯವನ್ನು ಕೆಲಸಕ್ಕೆ ಬಾರದ ವಿಚಾರಮಾಡುವದರಲ್ಲಿ ಕಳೆಯುವದಕ್ಕಾಗಿ ಒಂದು ಕ್ರಮವಿದೆಯೆಂದು ಹೇಳುವದು ನನಗೆ ಸರಿಯೆನಿಸುವದಿಲ್ಲ. ಇದರಲ್ಲಿ ಒಂದಾದರೂ ಅಪವಾದವಿದ್ದರೆ ಇದು ನಿಯಮವೆಂದು ಹೇಳಲಿಕ್ಕೆ ಬರುವದಿಲ್ಲ. ಬಹಳ ಅಪವಾದಗಳು ನಮ್ಮ ದೃಷ್ಟಿಗೆ ಬೀಳುತ್ತವೆ. ಲೆಕ್ಕವಿಲ್ಲದಷ್ಟು ಜನರು ನಾನಾ ಪ್ರಕಾರದ ಯುಕ್ತಿಗಳನ್ನು ಯೋಚಿಸುತ್ತಾರೆ. ಅಂದರೆ ನಿರರ್ಥಕ ವಿಚಾರಗಳನ್ನು ಮಾಡುತ್ತಾರೆ. ಹೀಗಿಲ್ಲದಿದ್ದರೆ ಏಕಾಗ್ರತೆ ಮುಂತಾದವುಗಳ ಮೇಲೆ ಕೊಡುತ್ತಿರುವ ಜೋರಿನ ಅವಶ್ಯಕತೆಯೆ ಇಲ್ಲ. ನಮಗೆ ಉಪಯುಕ್ತ ವಸ್ತುವೆಂದರೆ ಇದು: ನಾವು ಸ್ವತಃ ನಾನಾ ಪ್ರಕಾರದ ಬಿಸುಲುಗುದುರೆಗಳ ಬೆನ್ನು ಹತ್ತುತ್ತೇವೆ, ಅನೇಕ ಪ್ರಕಾರದ ವಿಚಾರಮಾಡುತ್ತೇವೆ, ಅವುಗಳಲ್ಲಿ ಬಹಳ ವಿಚಾರಗಳು ನೆನಪಿನಲ್ಲಿ ಕೂಡ ಉಳಿಯುವದಿಲ್ಲ. ಇದ್ದೆಲ್ಲವನ್ನೂ ವಿಚಾರಗಳ ವ್ಯಭಿಚಾರವೆಂದು ಹೇಳಲಾಗುತ್ತದೆ. ಮನುಷ್ಯನು ವ್ಯಭಿಚಾರದಿಂದ ತನ್ನ ಶಾರೀರಿಕ ಶಕ್ತಿಯನ್ನು ನಾಶಮಾಡಿಕೊಳ್ಳುವಂತೆ ವಿಚಾರಗಳ ವ್ಯಭಿಚಾರದಿಂದ ಮಾನಸಿಕ ಶಕ್ತಿಯ ನಾಶ ಮಾಡಿಕೊಳ್ಳುತ್ತಾನೆ. ಶಾರೀರಿಕ ಬಲಹೀನತೆಯ ಪರಿಣಾಮವು ಮನಸ್ಸಿನ ಮೇಲೆ ಆಗುವಂತೆ ಮಾನಸಿಕ ಅಶಕ್ತತೆಯ ಪರಿಣಾಮವು ಶರೀರದ ಮೇಲೆ ಆಗುತ್ತದೆ. ಆದುದರಿಂದ ನಾನು ಬ್ರಹ್ಮಚರ್ಯದ ಬಗ್ಗೆ ವ್ಯಾಪಕ-

ವಾಗಿ ಅರ್ಥವನ್ನು ಮಾಡಿ ನಿರರ್ಥಕ ವಿಚಾರಗಳೂ ಕೂಡ ಬ್ರಹ್ಮಚರ್ಯದ ಭಂಗವೆಂದು ತಿಳಿದಿದ್ದೇನೆ. ಬ್ರಹ್ಮಚರ್ಯದ ಸಂಕುಚಿತ ವ್ಯಾಖ್ಯೆಯನ್ನು ಮಾಡಿ ನಾವು ಅದನ್ನು ಬಹಳ ಕಠಿಣ ವಸ್ತುವನ್ನಾಗಿ ಮಾಡಿದ್ದೇವೆ. ವ್ಯಾಪಕ ವ್ಯಾಖ್ಯೆಯನ್ನು ಒಪ್ಪಿಕೊಂಡು ನಾವು ಎಲ್ಲ ಇಂದ್ರಿಯಗಳ, ಹನ್ನೊಂದೂ ಇಂದ್ರಿಯಗಳ ಸಂಯಮನ ಮಾಡಿದರೆ ಒಂದು ಇಂದ್ರಿಯವನ್ನು ವಶದಲ್ಲಿಟ್ಟುಕೊಳ್ಳುವದು ತುಲನಾತ್ಮಕ ದೃಷ್ಟಿಯಿಂದ ಬಹಳ ಸುಲಭವಾಗುವದು. ಬಾಹ್ಯಕರ್ಮಗಳನ್ನು ಮಾಡುವಾಗ ಅಂತಃಶುದ್ಧಿಯ ಅವಲೋಕನವು ಉಳಿದು ಹೋಗುತ್ತದೆ ಅಥವಾ ಕಡಿಮೆಯಾಗುತ್ತದೆ ಎಂದು ನೀನು ಒಳಗಿಂದೊಳಗೇ ತಿಳಿಯುತ್ತಿರುವಂತೆ ಕಾಣುತ್ತಿದೆ. ನನ್ನ ಅನುಭವವು ಇದಕ್ಕೆ ತೀರ ವಿರುದ್ಧವಾಗಿದೆ. ಅಂತಃಶುದ್ಧಿಯಿಲ್ಲದೆ ಬಾಹ್ಯ ಕರ್ಮವು ನಿಷ್ಕಾಮ ಭಾವನೆಯಿಂದ ಆಗುವದು ಸಾಧ್ಯವೇ ಇಲ್ಲ. ಬಾಹ್ಯ ಕರ್ಮದ ಶುದ್ಧಿಯ ಮೇಲಿಂದಲೇ ಅಂತಃಶುದ್ಧಿಯ ಲೆಕ್ಕವನ್ನು ಹಾಕಲಾಗುತ್ತಿದೆ. ಬಾಹ್ಯ ಕರ್ಮವಿಲ್ಲದೆ ಅಂತಃಶುದ್ಧಿಯನ್ನು ಮಾಡಹೋಗುವವನು ಸಂಕಟದಲ್ಲಿ ಬೀಳುವ ಸಂಪೂರ್ಣ ಭಯವಿರುತ್ತದೆ. ನಾನು ಈ ಪ್ರಕಾರದ ಬಹಳ ಉದಾಹರಣೆಗಳನ್ನು ನೋಡಿದ್ದೇನೆ. ಒಂದು ಸಾಮಾನ್ಯ ಉದಾಹರಣೆಯನ್ನೇ ಕೊಡುತ್ತೇನೆ. ಜೇಲಿನಲ್ಲಿ ಅನೇಕ ಸಂಗಡಿಗರು ನಾನಾ ಪ್ರಕಾರದ ಉತ್ತಮವಾದ ನಿಶ್ಚಯಗಳನ್ನು ಮಾಡಿದ್ದನ್ನು ನಾನು ನೋಡಿದ್ದೇನೆ. ಹೊರಗೆ ಹೋದಮೇಲೆ ಮೊದಲನೆಯ ಬಾರಿಗೇ ಆ ನಿಶ್ಚಯಗಳು ಸಮಾಪ್ತಿಯಾದವೆಂಬುದನ್ನೂ ನಾನು ನೋಡಿದ್ದೇನೆ. ಜೇಲಿನಲ್ಲಿ ಅವರು ತಮ್ಮ ನಿಶ್ಚಯಗಳು ಎಂದೂ ಬದಲಾಗುವದಿಲ್ಲ, ಅಂತಃಶುದ್ಧಿಯು ಪೂರ್ಣವಾಗಿದೆ, ಅವಲೋಕನವು ಶಾಂತಿಪೂರ್ವಕವಾಗಿ ಆಗಿದೆ ಮತ್ತು ಪ್ರಾರ್ಥನೆಯಲ್ಲಿ ಏಕಾಗ್ರತೆಯುಂಟಾಗಿದೆ ಎಂದು ತಿಳಿದುಕೊಂಡಿದ್ದರು. ಆದರೆ ನಾಲ್ಕು ಗೋಡೆಗಳ ಹೊರಗೆ ಬಿದ್ದಕೂಡಲೇ ಇವೆಲ್ಲವೂ ಹಾರಿಹೋದದ್ದನ್ನು ನಾನು ನೋಡಿದ್ದೇನೆ. ಗೀತೆಯ ಮೂರನೆಯ ಅಧ್ಯಾಯದ ಐದನೆಯ ಶ್ಲೋಕವು ಬಹಳ ಆಶ್ಚರ್ಯಕರವಾಗಿದೆ. ಇದರಲ್ಲಿ ಹೇಳಿದ ಸಿದ್ಧಾಂತವು ಸರ್ವವ್ಯಾಪಕವಾಗಿದೆಯೆಂದು ಭೌತಿಕ ಶಾಸ್ತ್ರಗಳು ತೋರಿಸಿದ್ದಾರೆ! ಯಾವದೇ ಮನುಷ್ಯನು ಒಂದು ಕ್ಷಣಕೂಡ ಕರ್ಮಮಾಡದೆ ಇರಲಾರನೆಂದೇ ಇದರ ಅರ್ಥ. ಕರ್ಮದ ಅರ್ಥ ಗತಿ. ಈ ನಿಯಮವು ಜಡಚೇತನ ಎಲ್ಲಕ್ಕೂ ಅನ್ವಯಿಸುತ್ತದೆ. ಮನುಷ್ಯನು ಈ ನಿಯಮದಂತೆ ನಿಷ್ಕಾಮ ಭಾವನೆಯಿಂದ ನಡೆದರೆ ಇದೇ ಅವನ ಜ್ಞಾನ ಮತ್ತು ಇದೇ ಅವನ ವೈಶಿಷ್ಟ್ಯ. ಇದರ ಪೂರ್ತಿಗಾಗಿ ಈಶೋಪನಿಷತ್ತಿನಲ್ಲಿ ಎರಡು ಮಂತ್ರಗಳಿವೆ. ಅವು ಕೂಡ ಇಷ್ಟೇ ಚಮತ್ಕಾರಿಕವಿರುತ್ತವೆ. ಭಗವಾನ ಬುದ್ಧನ ಟೀಕೆಯನ್ನು ನನ್ನಂಥವನು ಏನು ಮಾಡಬಲ್ಲನು? ನಾನಂತೂ ಅವನ ಪೂಜಕನಿದ್ದೇನೆ. ಆದರೆ ರಚನೆಯನ್ನು

ಭಗವಾನ ಬುದ್ಧನು ಮಾಡಿದನೊ ಅಥವಾ ಅವನ ಹಿಂದಿನವರೊ? ಏನೇ ಆಗಿರಲಿ, ಸ್ಥಾಪಿತವಾದ ಸಂಘಗಳು ಈ ಸರ್ವವ್ಯಾಪಕ ನಿಯಮದಂತೆ ಜಡವಾದವು ಮತ್ತು ಕೊನೆಗೆ ಆಲಸ್ಯದ ಹೆಸರಿನಿಂದ ಪ್ರಸಿದ್ಧವಾದವು. ಇಂದು ಕೂಡ ಸಿಲೋನದಲ್ಲಿ, ಬ್ರಹ್ಮದೇಶದಲ್ಲಿ ಮತ್ತು ತಿಬೇಟದಲ್ಲಿ ಬೌದ್ಧ ಸಾಧುಗಳು ಅಜ್ಞಾನದ ಮತ್ತು ಆಲಸ್ಯದ ಮೂರ್ತಿಗಳಾಗಿದ್ದು ಕಂಡುಬರುತ್ತದೆ. ಹಿಂದುಸ್ತಾನದಲ್ಲಿ ಕೂಡ ಸನ್ಯಾಸಿಯ ಹೆಸರಿನಿಂದ ಕರೆಯಲ್ಪಡುವ ಸಾಧುಗಳು ತೇಜಸ್ವಿಗಳಾದದ್ದು ಕಂಡು-ಬರುವದಿಲ್ಲ. ಇದರಿಂದ ನಿಜವಾದ ಮತ್ತು ಶಾಶ್ವತವಾದ ಚಿತ್ತಶುದ್ಧಿಯನ್ನು ಮನುಷ್ಯನು ಕರ್ಮವನ್ನು ಮಾಡುತ್ತಲೇ ಹೊಂದಬಲ್ಲನೆಂದು ನನಗನಿಸುತ್ತದೆ. ಇಷ್ಟಾದ ಮೇಲೆ ಗೀತೆಯ ವಚನವನ್ನು ಉದ್ಧರಿಸುವ ಮನಸ್ಸಾಗುತ್ತಿದೆ. ನಾಲ್ಕನೆಯ ಅಧ್ಯಾಯದ ಹದಿನೆಂಟನೆಯ ಶ್ಲೋಕದ ಅರ್ಥವು ಹೀಗಿದೆ: ಯಾವನು ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ನೋಡುವನೋ ಅವನೇ ಬುದ್ಧಿವಂತನು, ಅವನೇ ಯೋಗಿಯು, ಅವನೇ ಪೂರ್ಣ ಕರ್ಮಮಾಡುವವನು. ಇದರಲ್ಲಿ ತುಂಬಿದ ಶಿಕ್ಷಣವೇ ನನ್ನ ಅನುಭವಕ್ಕೂ ಬಂದಿದೆ. ಆದುದರಿಂದಲೇ ಗೀತೆಯ ಶ್ಲೋಕಗಳನ್ನು ಉದ್ಧರಿಸಿದ್ದೇನೆ. ನನ್ನ ಅನುಭವದ ಒರೆಗಲ್ಲಿಗೆ ಹಚ್ಚದ ಶಾಸ್ತ್ರ-ವಚನಗಳನ್ನು ನಾನು ಉದ್ಧರಿಸುವದಿಲ್ಲ. ನನ್ನ ಅನುಭವದ ವಿರುದ್ಧ ಎರಡನೆಯವರ ಅನುಭವವೂ ಇರಬಲ್ಲದು ಮತ್ತು ಅವರು ಗೀತೆಯೊಳಗಿಂದ ವಿರುದ್ಧ ವಚನಗಳನ್ನೂ ಉದ್ಧರಿಸಬಲ್ಲರು. ನಾನು ಉದ್ಧರಿಸಿದ ಶ್ಲೋಕಗಳಿಗೆ ಬೇರೆ ಅರ್ಥ ಹಚ್ಚಿ ತಮ್ಮ ಅನುಭವದ ಸಮರ್ಥನೆಗಾಗಿ ಅವುಗಳನ್ನು ಉದ್ಧರಿಸುವ ಸಂಭವವೂ ಇರುತ್ತದೆ. ಆದುದರಿಂದ ಅನುಭವವನ್ನು ಒಪ್ಪುವ ವಿಷಯದಲ್ಲಿ ಯಾವದೇ ತರಹದ ನನ್ನ ಹಟವಿಲ್ಲ."

*　　*　　*

ಉಪವಾಸದ ವಿಷಯಕ್ಕೆ ಏನಾದರೂ ಸಂಶಯವಿದ್ದರೆ ಕೇಳಿರೆಂದು ಬಾಪೂ ಹೇಳಿದರು. ವಲ್ಲಭಭಾಯಿ ಅಂದರು: "ಇಂದು ತಿಳಿಯದಿದ್ದರೂ ಈ ಘಟನೆಯು ಘಟಿಸಿದ ಮೇಲೆ ಎಲ್ಲವೂ ತಿಳಿಯುವದು. ಈಗ ನಿಮ್ಮ ಸಂಗಡ ಚರ್ಚೆ ಮಾಡಿ ಲಾಭವೇನು? ಆಗಬೇಕಾದದ್ದು ಆಗಿ ಹೋಯಿತು. ನಾನು ಹೇಳಿದ್ದನ್ನು ಒಪ್ಪಿದ್ದರೆ ಈ ನಿರ್ಣಯಕ್ಕೆ ಬರುತ್ತಿದ್ದಿಲ್ಲ. ನೀವು ಆ ಪತ್ರ ಬರೆದದ್ದರಿಂದೆ ಇಂಥ ನಿರ್ಣಯ ಕೊಟ್ಟಿರಿ! ಇಲ್ಲಿ ಎಲ್ಲರೂ ನೀವು ಹೇಗಾದರೂ ಸತ್ತು ಹೋದರೆ ಕಾಟ ತಪ್ಪುವದು ಎನ್ನುವವರೇ ಆಗಿದ್ದಾರೆ."

*　　*　　*

ಒಂದೊಂದು ಸಲ ರಾತ್ರಿಯಲ್ಲಿ ಮಳೆ ಬಂದಾಗ, ಮಂಚವನ್ನೆತ್ತಿ ವ್ಹರಾಂಡಾ

ದಲ್ಲಿ ತರಲಿಕ್ಕೆ ಭಾರವೆನಿಸುತ್ತದೆ. ಆದುದರಿಂದ ಬಾಪೂ ಮೇಜರರಿಗೆ ಹಗುರವಾದ ಮಂಚವನ್ನು ಕೊಡಲು ಕೇಳಿದರು. ಅವರು ಹೇಳಿದರು: "ಕಾತಿಯಿಂದ ಬಿಗಿದ ಹೊರಸು ಇದೆ. ಅದು ನಡೆಯಬಹುದೆ?" ಬಾಪೂ: "ಆಗಬಹುದು." ಮೇಜರ: "ನೀವು ಹೇಳಿದರೆ ಕಾತಿಯನ್ನು ತೆಗೆಯಿಸಿ ಅದಕ್ಕೆ ನವಾರ ಪಟ್ಟಿಯನ್ನು ಬಿಗಿಸಿ ಕೊಡುವೆ." ಸಾಯಂಕಾಲ ಹೊರಸು ಬಂತು. ಬಾಪೂ ಹೇಳಿದರು: "ಇದು ನನಗೆ ಸೇರಿತು. ಇದಕ್ಕೆ ನವಾರ ಪಟ್ಟಿಯನ್ನು ಬಿಗಿಯುವ ಆವಶ್ಯಕತೆಯಿಲ್ಲ. ನನ್ನ ಹಾಸಿಗೆಯನ್ನು ಇಂದು ಇದರ ಮೇಲೆಯೇ ಹಾಸಿರಿ." ವಲ್ಲಭಭಾಯಿ ಅಂದರು: "ಏನಂದಿರಿ? ಇದರ ಮೇಲೆಯೂ ಮಲಗುತ್ತಾರೆಯೆ! ಕಾತಿಯ ಹಗ್ಗದ ಮೇಲೆ ಮಲಗಲಿಕ್ಕೆ ಗಾದಿಯಲ್ಲಿ ಕಾತಿಯೇನು ಕಡಿಮೆ ಇದೆಯೆ?"

ಬಾಪೂ: "ನೋಡಿರಿ ಈ ಹೊರಸು ಎಷ್ಟು ಸ್ವಚ್ಛವಾಗಿರಬಲ್ಲದು?"

ವಲ್ಲಭಭಾಯಿ: "ನೀವೂ ಒಳ್ಳೆ ಚನ್ನಾಗಿದ್ದೀರಲ್ಲ! ಇದಕ್ಕಂತೂ ನಾಲ್ಕು ಮೂಲೆಗೆ ಕಾತಿಯನ್ನು ಬಿಗಿಯುವದು ಉಳಿದಿದೆ. ಇಂಥ ಅಸಡ್ಡಾಳ ಮಂಚವು ಉಪಯೋಗವಿಲ್ಲ. ಇದಕ್ಕೆ ನಾಳೆ ನವಾರ ಪಟ್ಟಿಯನ್ನು ಬಿಗಿಸಿ ಕೊಡುವೆನು."

ಬಾಪೂ: "ಇಲ್ಲ ವಲ್ಲಭಭಾಯಿ, ನವಾರಿನಲ್ಲಿ ಧೂಳ ಕೂಡುತ್ತದೆ. ನವಾರನ್ನು ಒಗೆಯಲಿಕ್ಕೆ ಬರುವದಿಲ್ಲ. ಇದರ ಮೇಲೆ ನೀರು ಸುರುವಿದ ಕೂಡಲೇ ಸ್ವಚ್ಛವಾಗುತ್ತದೆ."

ವಲ್ಲಭಭಾಯಿ: "ನವಾರನ್ನು ಅಗಸನಿಗೆ ಕೊಟ್ಟರೆ ಮರುದಿವಸ ಒಗೆದು ಬರುತ್ತದೆ."

ಬಾಪೂ: "ಆದರೆ ಕಾತಿಯನ್ನು ಉಚ್ಚಬೇಕಾಗುವದಿಲ್ಲ. ಇಲ್ಲಿಯೇ ಸ್ವಚ್ಛ ಮಾಡಬಹುದು."

ನಾನು: "ಹೌದು ಬಾಪೂ, ಇದನ್ನು ಬಿಸಿ ನೀರಿನಿಂದ ಸ್ವಚ್ಛಮಾಡಬಹುದು. ಮತ್ತು ಇದರಲ್ಲಿ ತಗಣಿಗಳಾಗುವದಿಲ್ಲ."

ವಲ್ಲಭಭಾಯಿ: "ಆಯಿತು. ಈಗ ನೀನೂ ಅಭಿಪ್ರಾಯ ಕೊಟ್ಟುಬಿಟ್ಟೆ. ಈ ಹೊರಸಿನಲ್ಲಿ ಹೇಳಲಿಕ್ಕೆ ಬಾರದಷ್ಟು ತಗಣಿ ಚಿಕ್ಕಾಡುಗಳಾಗುತ್ತವೆ."

ಬಾಪೂ: "ನಾನಂತೂ ಇದರ ಮೇಲೆಯೆ ಮಲಗುವೆನು. ನೀವು ಬೇಕಾದರೆ ಇಂಥದನ್ನು ತರಿಸಬೇಡಿರಿ. ನಾನು ಸಣ್ಣವನಿದ್ದಾಗ ನಮ್ಮಲ್ಲಿ ಇಂಥ ಹೊರಸುಗಳನ್ನೇ ಉಪಯೋಗಿಸುತ್ತಿದ್ದರೆಂಬುದು ನನಗೆ ನೆನಪಿದೆ. ನನ್ನ ತಾಯಿ ಇದರ ಮೇಲೆ ಮಾಗಣಿಬೇರು ಸ್ವಚ್ಛ ಮಾಡುತ್ತಿದ್ದಳು."

ನಾನು: "ಇದೇನು? ಇದು ನನಗೆ ಅರ್ಥವಾಗಲಿಲ್ಲ."

ಬಾಪೂ: "ಮಾಗಣಿಬೇರಿನ ಉಪ್ಪಿನಕಾಯಿ ಹಾಕುವದಾದರೆ ಅದನ್ನು ಚಾಕುವಿನಿಂದ ಸ್ವಚ್ಛ ಮಾಡದೆ ಹೊರಸಿನ ಮೇಲೆ ತಿಕ್ಕಿದರೆ ಅದರ ತೊಗಟೆಯು ಉಚ್ಚಿ ಸ್ವಚ್ಛವಾಗುತ್ತದೆ."

ವಲ್ಲಭಭಾಯಿ: "ಇದೇ ಪ್ರಕಾರ ಈ ಇದ್ದ ನಾಲ್ಕು ಎಲವುಗಳ ಮೇಲಿನ ಚರ್ಮ ಸುಲಿದು ಹೋಗುವದು. ಆದುದರಿಂದಲೇ ನವಾರಪಟ್ಟಿಯನ್ನು ಬಿಗಿಸಿ ಕೊಳ್ಳಿರೆಂದು ಹೇಳುತ್ತೇನೆ."

ಬಾಪೂ: "ನವಾರ ಪಟ್ಟಿಯಂತೂ ಸಾಯುವ ಅಜ್ಜಿ ಶೃಂಗಾರ ಮಾಡಿ ಕೊಂಡಂತೆ ಆಗುವದು. ಈ ಹೊರಸಿಗೆ ನವಾರು ಶೋಭಿಸುವದಿಲ್ಲ. ಇದಕ್ಕೆ ಕಾತಿಯ ಹುರಿಯೇ ಚಂದ ಕಾಣಿಸುವದು ಮತ್ತು ನೀರು ಸುರವಿದ ಕೂಡಲೇ ಬಟ್ಟೆಯು ಸ್ವಚ್ಛವಾಗುವಂತೆ ಸ್ವಚ್ಛವಾಗುವದು. ಇದು ಎಷ್ಟು ಸುಲಭವಾಗಿದೆ? ಈ ಹಗ್ಗವು ಎಂದೂ ಕೊಳೆಯುವದಿಲ್ಲ!"

ವಲ್ಲಭಭಾಯಿ: "ನಾನು ಹೇಳುವದನ್ನು ಒಪ್ಪದಿದ್ದರೆ ನಿಮ್ಮ ಇಚ್ಛೆ." ಹೊರಸನ್ನು ವ್ಹರಾಂಡಾದಿಂದ ಕೆಳಗೆ ತರಲಾಯಿತು. ಕೆಳಗೆ ತಂದ ಮೇಲೆ ವಲ್ಲಭಭಾಯಿ ಹೇಳಿದರು: "ಆದರೆ ಮಳೆ ಬಂದರೆ?"

ಬಾಪೂ: "ಬಂದರೆ ಮೇಲೆ ತರುವೆವು." ವಲ್ಲಭಭಾಯಿ: "**ततो दुःखतरं नु किम्?**" ಬಾಪೂ: "ಈ ಶ್ಲೋಕದ ಉಪಯೋಗ ಮಾಡುವದಕ್ಕಾಗಿಯೇ ನೀವು ಈ ಪ್ರಶ್ನೆಯನ್ನು ಕೇಳುತ್ತಿದ್ದೀರೆಂದು ನನಗೆ ಗೊತ್ತಿತ್ತು."

ಇವತ್ತು ಜನ್ಮಾಷ್ಟಮಿ, ಆದುದರಿಂದ ಮೆರವಣಿಗೆ ಬರಲಿಲ್ಲ. ಜೇಲಿಗೆ ರಜೆ ಯಿದೆ. ಬಾಪೂ ಹೇಳಿದರು: "ಇನ್ನು ಸಿದ್ಧರಾಗಿರಿ, ತಿಳಿಯಿತೆ? ಹೊರಬೀಳುವ ದಾದರೆ ಸಮಯ ಸಮೀಪಿಸಿದೆಯೆಂದೇ ತಿಳಿಯಿರಿ." ನಾನು:

೨೪-೮-'೩೨ "ಇದು ಹಾವು ಮುಂಗಲಿಯ ಮಾತಾಯಿತು. ನಿಮ್ಮನ್ನು ಒಳಗೆ ಇಟ್ಟು ಉಪವಾಸ ಮಾಡಗೊಡುವದು ಕಠಿಣವಿದ್ದೇ ಇದೆ. ಹೊರಗೆ ಬಿಟ್ಟು ಉಪವಾಸ ಮಾಡಗೊಡುವದೂ ಕಠಿಣವಿದೆ." ವಲ್ಲಭ-ಭಾಯಿ: "ಆದರೆ ಈ ಜನರಿಗೆ ಉಪವಾಸ ಕೈಕೊಳ್ಳುವದೂ ಕಠಿಣ ಮಾತಾಗಿದೆ! ಅವರಿಗೆ ಕೊನೆಯ ವರೆಗೂ ಹೋರಾಡಬೇಕಾಗಿದೆ. ಆದುದರಿಂದ ಈ ಸಾರೆ ಏನು ಮಾಡಿದರೂ ಹೊರಳಿ ನೋಡುವದಿಲ್ಲ. 'ಸಾಯುವದಾದರೆ ಸಾಯಿರಿ, ನೋಡಿಕೊಳ್ಳುವೆವು.' ಎಂದು ಹೇಳುವರು."

ಬಾಪೂರ ಕೆಲಸವು ಏನೂ ಸಂಭವಿಸಿರದಂತೆ ಒಳ್ಳೇ ಭರದಿಂದ ಸಾಗಿದೆ. ಇಂದು ಸಣ್ಣ ದೊಡ್ಡ ಪುಟಗಳ ೨೨ ಪತ್ರಗಳನ್ನು ಕೈಯಿಂದಲೇ ಬರೆದರು. ಟಪಾಲು

ಹೆಚ್ಚಾದರೆ ಹೇಗೆ ಸಹನವಾಗಬೇಕು? ಇದರಲ್ಲಿ ಬಹಳ ಪತ್ರಗಳು ಡಾ. ಮೊಹತ್ಶಾರ ಸಾವಿನಿಂದ ಉಂಟಾಗುವ ಪರಿಸ್ಥಿತಿಯನ್ನು ನಿವಾರಿಸುವದಕ್ಕೆ ಸಂಬಂಧಪಟ್ಟಿದ್ದವು. ಆದರೆ ಕೆಲವೊಂದು ಮಕ್ಕಳ ಹೆಸರಿನಿಂದಲೂ ಇದ್ದವು. ವಿಲಾಯತಿಯಲ್ಲಿ ಎಸ್ಥರ ಮೆನನ್‌ಳು ಇರುತ್ತಾಳೆ. ಅವಳ ಏಳು–ಎಂಟು ವರ್ಷದ ಹುಡಿಗೆಯು ಪತ್ರ ಬರೆದಿದ್ದಳು, ಅವಳ ಜೊತೆಗೆ ಅವಳ ಇಂಗ್ಲೀಷ ಗೆಳತಿಯರೂ ಪತ್ರ ಬರೆದರು. ಒಬ್ಬ ನಾಲ್ಕುವರ್ಷದ ಗೆಳೆತಿಯು ಬರೆದಳು: "ನೀವು ಒಳ್ಳೆಯ ಮನುಷ್ಯರೆಂದು ನನ್ನ ತಾಯಿ ಹೇಳುತ್ತಾಳೆ. ಆದುದರಿಂದ ನಾವು ನಿಮಗೆ ಪತ್ರ ಬರೆಯುತ್ತೇವೆ. ನೀವು ನಮಗೆ ಬರೆಯಿರಿ." ಇನ್ನೊಬ್ಬಳು ಬರೆದಳು: "ನಾವು ಯುದ್ಧವನ್ನು ತಡೆಯುವದಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಮತ್ತು ಭಿತ್ತಿ ಚಿತ್ರಗಳನ್ನು ತಯಾರಿಸುತ್ತೇವೆ. ದೇವರು ನಿಮ್ಮ ಕಲ್ಯಾಣ ಮಾಡಲಿ." ಇವರಿಗೆ ಬಾಪೂ ಬರೆದರು (ಇದರಲ್ಲಿ ಕೂಡ ಹಗಲು ರಾತ್ರಿ ನಡೆಯುವ ಬಾಪೂರ ಅಹಿಂಸೆಯ ಪ್ರಚಾರವಿದ್ದೇ ಇತ್ತು.):

"My dear little friends,

I was delighted to have your sweet notes with funny drawings made by you. You *do not mind* my sending one note for all of you. After all you are all one in mind, though not in body. Yes, it is little children like you who will stop all War. This means that you never quarrel with other boys and girls or among yourselves. You cannot stop big wars, if you carry on little wars yourselves. How I wish I was there to celebrate Nani's and Amma's birthday. May God bless you all. My kisses to you all, if you will let me kiss you and Nani will pass on my love to Esther. Won't she?"

"ಪ್ರಿಯ ಬಾಲ ಮಿತ್ರರೆ,

ನಿಮ್ಮ ಸುಂದರವಾದ ಪತ್ರಗಳನ್ನೂ ನೀವು ತೆಗೆದ ಮೋಜಿನ ಚಿತ್ರಗಳನ್ನೂ ನೋಡಿ ನನಗೆ ಬಹಳ ಆನಂದವಾಯಿತು. ನಿಮ್ಮೆಲ್ಲರಿಗೂ ಕೂಡಿ ನಾನು ಒಂದೇ ಪತ್ರವನ್ನು ಬರೆದರೆ ನಿಮಗೆ ಅಡ್ಡಿ ಇಲ್ಲವಷ್ಟೆ? ನಿಮ್ಮ ಶರೀರಗಳು ಬೇರೆ ಬೇರೆ ಇದ್ದರೂ ಮನಸ್ಸಿನಿಂದ ನೀವೆಲ್ಲರೂ ಒಂದೇ ಆಗಿದ್ದೀರಿ. ನಿಮ್ಮಂಥ ಚಿಕ್ಕ ಬಾಲಕರೇ ಯುದ್ಧವನ್ನು ಸಂಪೂರ್ಣ ನಿಲ್ಲಿಸಬಲ್ಲರೆಂಬ ಮಾತು ನಿಜ. ಇದರ ಅರ್ಥವೆಂದರೆ ನೀವು ನಿಮ್ಮೊಳಗೆ ಅಥವಾ ಎರಡನೆಯ ಹುಡುಗರ ಸಂಗಡ ಎಷ್ಟೂ ಜಗಳವಾಡುವದಿಲ್ಲ. ನೀವು ನಿಮ್ಮೊಳಗಿನ ಸಣ್ಣ ಸಣ್ಣ ಯುದ್ಧಗಳನ್ನು ನಿಲ್ಲಿಸದಿದ್ದರೆ ದೊಡ್ಡ ದೊಡ್ಡ ಯುದ್ಧಗಳನ್ನು ನಿಲ್ಲಿಸಲಾರಿರಿ. ನನಿ ಮತ್ತು ಅಮ್ಮಾ ಇವರ ಹುಟ್ಟು

ಹಬ್ಬದ ಉತ್ಸವದ ಕಾಲಕ್ಕೆ ನಾನು ಅಲ್ಲಿ ಇರುತ್ತಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತೆಂದು ನನ್ನ ಮನಸ್ಸಿನಲ್ಲಿ ಬರುತ್ತದೆ. ದೇವರು ನಿಮ್ಮೆಲ್ಲರ ಕಲ್ಯಾಣಮಾಡಲಿ. ನಿಮ್ಮ ಒಪ್ಪಿಗೆ ಇದ್ದರೆ ನಿಮ್ಮೆಲ್ಲರಿಗೂ ನನ್ನ ಮುದ್ದುಗಳು. ಎಸ್ಥರಳಿಗೆ ನನಿ ನನ್ನ ಪ್ರೀತಿಗಳನ್ನು ಮುಟ್ಟಿಸುವಳು. ಏಕೆ, ಮುಟ್ಟಿಸುವಳಲ್ಲವೆ ? "

ಇಂದು ಬಾಪೂ ಹೇಳತೊಡಗಿದರು : " ಸರಕಾರವು ನನ್ನನ್ನು ಅವಶ್ಯವಾಗಿ ವಿಷಮ ಪರಿಸ್ಥಿತಿಯಲ್ಲಿ ಕೆಡವಬಹುದು. ಈ ಜನರು ನನಗೆ ಯಾವ ಕಾರಣವನ್ನೂ ಹೇಳದೆ ೨೦ ನೆಯ ತಾರೀಖಿನಗಿಂತ ಮೊದಲೇ ಬಿಡುಗಡೆ ಮಾಡಿ

೨೫–೮–'೩೨ ಆಮೇಲೆ ನನಗೆ ಮಾಡಬೇಕಾದದ್ದನ್ನು ಮಾಡಿಕೊಳ್ಳಲಿ ಎಂದರೆ ? ಇವರು ೨೦ ನೆಯ ತಾರೀಖಿನಗಿಂತ ಕೆಲವು ದಿವಸ ಮೊದಲೇ ಬಿಟ್ಟರೆ ೨೦ ನೆಯ ತಾರೀಖಿಗೆ ಉಪವಾಸ ಮಾಡುವದರ ಬದಲು ಆಂದೋಲನವನ್ನು ಪ್ರಾರಂಭಿಸುವೆನು ಮತ್ತು ಬಂಗಾಲಕ್ಕೂ ಹೋಗುವೆನು. ೨೦ ನೆಯ ತಾರೀಖಿಗಿಂತ ಮೊದಲು ಬಿಟ್ಟರೂ ಉಪವಾಸ ಮಾಡುವ ವಿಚಾರವು ಹಾಗೇ ಉಳಿದರೂ ಉಳಿಯಬಹುದು. ಏನೇ ಆಗಲಿ, ಇದೇ ವಾರದಲ್ಲಿ ನಮಗೆ ಏನಾದರೂ ಸುದ್ದಿ ತಿಳಿಯಲೇಬೇಕು. "

ಸ್ವಲ್ಪ ತಡೆದು ಹೇಳತೊಡಗಿದರು : " ಏನೇ ಆಗಲಿ. ನನ್ನನ್ನು ವಿಷಮಸ್ಥಿತಿಯಲ್ಲಿ ಕೆಡವಲು ಇವರು ಬೇಕಾದ ಹಾಗೆ ಪ್ರಯತ್ನಿಸಲಿ, ಆದರೆ ಅವರ ಫಾಸಿಗಳು ಅವರಿಗೆ ವಿರುದ್ಧವಾಗಿಯೇ ಬೀಳುವವು ಮತ್ತು ನಮಗೆ ಅನುಕೂಲವಾಗಿ ಬೀಳುವವು. "

ನಿನ್ನೆಯೇ ಬಾಪೂ ಹೇಳಿದಂತೆ ಇಂದು ಬೆಳಿಗ್ಗೆ ಡೋಯಿಲ್ಲನು ಬಾಪೂರನ್ನು ಕರೆಯಿಸಿದನು. ಹಲ್ಲಿನ ಬಗ್ಗೆ ಮಾತಾಡಿದನು ಮತ್ತು ಉತ್ತಮ ಹಲ್ಲುಗಳನ್ನು ಹಾಕಿಸಿಕೊಳ್ಳಲಿಕ್ಕೆ ಹೇಳಿದನು. ಈ ಮನುಷ್ಯನು ಧೈರ್ಯ-

೨೬–೮–'೩೨ ಸ್ಥನೂ ಒಳ್ಳೆಯವನೂ ಇದ್ದಾನೆ. ಹೇಳತೊಡಗಿದನು : " ನೀವು ಈ ಹಲ್ಲುಗಳನ್ನು ಅನೇಕ ವರ್ಷಗಳ ವರೆಗೆ ಉಪಯೋಗಿಸಬೇಕೆಂದು ನನ್ನ ಇಚ್ಛೆ. " ಕಾಕಾ ಅವರ ಸುದ್ದಿಯನ್ನು ಹೇಳಿದನು: " ಅವರಿಗೆ ಬಟ್ಟೆ ಮುಂತಾದವುಗಳೆಲ್ಲ ಸಿಗುತ್ತವೆ. ಊಟಕ್ಕೂ ಸಿಗುತ್ತದೆ. ಅವರು ನಿನ್ನೆ ಇಲ್ಲಿಂದ ಹೋದರು. ಇವತ್ತು ಅಹಮದಾಬಾದಿನಲ್ಲಿ ಇರಬಹುದು. " ಅವರ ಬೆನ್ನಿನ ನೋವಿನ ಸಲುವಾಗಿ ಅವರಿಂದ ನೂಲುವದನ್ನು ಬಿಡಿಸಿರೆಂದು ಬಾಪೂಗೆ ಆಗ್ರಹ ಮಾಡಿದನು. ಹಿಂದಿನಿಂದ ಉಪವಾಸದ ಮಾತು ಹೊರಟಿತು ಅಥವಾ ತಗೆದನು. 'ನಾನು ಡೋಯಿಲ್ಲನೆಂದು ಹೇಳುತ್ತಿದ್ದೇನೆ. ಸರಕಾರದ ವತಿಯಿಂದಲ್ಲ' ಎಂದೂ

ಹೇಳಿದನು. " ಈ ವಿಷಯಕ್ಕೆ ಪುನಃ ವಿಚಾರ ಮಾಡಲಿಕ್ಕಾಗಲಿಕ್ಕಿಲ್ಲವೆ? ಸರಕಾರದ ಸಂಗಡ ಪತ್ರವ್ಯವಹಾರ ಮಾಡಿ ಸಂಶಯಾಸ್ಪದ ಮುದ್ದೆಗಳನ್ನು ತಿಳಿದುಕೊಳ್ಳಿರಿ." ಬಾಪೂ ಹೇಳಿದರು: "ಸರಕಾರವು ಮಾರ್ಗವನ್ನೇ ಉಳಿಸಿಲ್ಲ. ನಾನು ಅವರಿಗೆ ಆರು ತಿಂಗಳು ಮೊದಲು ಸೂಚನೆಯನ್ನು ಕೊಟ್ಟಿದ್ದೆ." ಆವನು ಹೇಳಿದನು: "ಕಾಯ್ದೆಯಿಂದ ಇದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬಹುದು. ಆದರೆ ಇಂಥ ಉಗ್ರಕ್ರಮವನ್ನು ಕೈಕೊಂಡು ನಮ್ಮನ್ನೂ ಏಕೆ ಗೊಂದಲದಲ್ಲಿ ಹಾಕುತ್ತೀರಿ? ನಿಮ್ಮ ತಾರನ್ನು ಅದೇ ದಿವಸ ಸಾಯಂಕಾಲ ಮುಟ್ಟಿಸಿದ್ದೆನು. ಅಲ್ಲದೆ ಎಲ್ಲ ಪತ್ರಗಳನ್ನೂ ಮರುದಿವಸ ತಾರಿನಿಂದ ವಿಲಾಯತಿಗೆ ಕಳಿಸಲಾಗಿತ್ತು ಎಂಬ ಸುದ್ದಿಯನ್ನೂ ತಿಳಿಸುತ್ತೇನೆ." ಬಾಪೂ ಹೇಳಿದರು: "ಇಂದು ಎಂದಿಗಿಂತಲೂ ಹೆಚ್ಚು ಮೃದುವಾಗಿ ಮಾತಾಡುತ್ತಿದ್ದನು: 'ನೀವು ಯಾವದೇ ವಿಷಯಕ್ಕೆ ಬರೆಯುವದಾದರೂ ನನಗೆ ಬರೆಯಿರಿ.' ಮುಂತಾಗಿ. ಇನ್ನೆಷ್ಟು ದಿನಗಳು ಉಳಿದಿವೆ ಎಂದು ಆವನ ವಿಚಾರವಿರಬಹುದು. ಆದುದರಿಂದ ಇಷ್ಟು ಸವಿತನವನ್ನು ತೋರಿಸಿರಬಹುದು!" ಇದನ್ನು ಹೇಳಿ ಬಾಪೂ ನಕ್ಕರು.

ಸಿವ್ಹಿಲ್ ಸರ್ಜನ್ನನ ಬಗ್ಗೆ ಹೇಳಹತ್ತಿದರು: "ಈ ಮನುಷ್ಯನು ಗುಮ್ಮನ-ಗುಸಗನೆಂದು ತಿಳಿದಿದ್ದೆವು. ಆದರೆ ಹೀಗೆ ಇಲ್ಲ. ಮನುಷ್ಯನು ಒಳ್ಳೆಯವನೆಂದು ಅನಿಸಿತು. ಅವನ ಕಣ್ಣುಗಳನ್ನು ನಾನು ಬಹಳ ಹೊತ್ತಿನವರೆಗೆ ನೋಡುತ್ತಿದ್ದೆನು. ಅವುಗಳಲ್ಲಿ ನನಗೆ ಒಳ್ಳೆಯತನವು ಕಂಡುಬಂದಿತು. ಡೋಯಿಲ್ಲನು ಕೂಡ ಇಷ್ಟೇ ಒಳ್ಳೆಯವನಾಗಿದ್ದಾನೆ, ಆದರೆ ಹರಟೆಗಾರನು. ಇವನು ಹರಟೆಗಾರನೆನಿಸಲಿಲ್ಲ. ಅವನ ಮಾತುಗಳು—ರೋಗಿಗಳ ವಿಷಯಕ್ಕೆ, ಇಲ್ಲಿ ನೂರಕ್ಕೆ ៤೦ ಜನರಷ್ಟು ರೋಗಿಗಳ ಹಲ್ಲುಗಳಲ್ಲಿ ಫಾಯೋರಿಯಾ ಆಗುವ ಮತ್ತು ಉತ್ತರದಲ್ಲಿ ಆಗದಿರುವ ಕಾರಣ ಆಹಾರವಿರುತ್ತದೆ, ಮುಂತಾಗಿ; ಇಲ್ಲಿಯ ಹುಡುಗರಿಗೆ ಪುಸ್ತಕ ಜ್ಞಾನ ಬಹಳವಿರುತ್ತದೆ, ಪ್ರತ್ಯಕ್ಷ ಕಾರ್ಯದಲ್ಲಿ ಶೂನ್ಯರಿರುತ್ತಾರೆ; ಪ್ರಸೂತಿಯ ಕೇಸು ಆಗಿದ್ದರೆ ಕೂಸು ಹುಟ್ಟಿದ ಮೇಲೆ ಕೂಸನ್ನು ನೋಡಲಿಕ್ಕೇ ಹೋಗುವದಿಲ್ಲ. ಮತ್ತೆ ಹೇಳಿದನು: "ಈ ಹುಡುಗರಿಗೆ ಎಷ್ಟು ತೊಂದರೆಯಿದೆ? ನನಗೆ ಚಿಕ್ಕಂದಿನಿಂದಲೇ ಗ್ರೀಕ ಲ್ಯಾಟಿನ್ ಬರುತ್ತವೆ, ಎಲ್ಲಾ ಶಬ್ದಗಳೂ ಪರಿಚಿತವಿರುತ್ತವೆ. ಈ ಹುಡುಗರಿಗೆ ಹೆಜ್ಜೆಹೆಜ್ಜೆಗೆ ಶಬ್ದಕೋಶ ನೋಡಬೇಕಾಗುತ್ತದೆ. ನೆನಪಿನಲ್ಲಿಡುವದು ಎಷ್ಟು ಕಠಿಣ."

ಇಂದು ಬಾಪೂ ಬಾ ಮತ್ತು ಕಾಕಾರಿಗೆ ಬರೆದ ಪತ್ರಗಳನ್ನು ಅಡ್ವಾನಿಗೆ ಮುಟ್ಟಿಸಲಿಕ್ಕೆ ಮೇಜರರಿಗೆ ಕೊಟ್ಟರು. ಬಾ ರ ಹೆಸರು ಹೊರಡುತ್ತಲೇ ಬಾಪೂ ಹೇಳಿದರು: "ಅವಳ ತೂಕವು ೧೭ ಪೌಂಡು ಇಳಿದಿದೆಯೆಂದು

೨೭-೮-'೩೨ ಕೇಳುತ್ತೇನೆ. ಆದರೆ ಇದರಲ್ಲಿ ಅತಿಶಯೋಕ್ತಿಯಿದೆ. ಯಾಕಂದರೆ ಹಾಗಿದ್ದರೆ ಅವಳು ಎಲುವಿನ ಹಂದರವಾಗುತ್ತಿದ್ದಳು." ಮೇಜರ ಹೇಳಿದರು : " ಈ ಮಾತು ನಿಜವಿರಬಹುದು. ಯಾಕಂದರೆ ಬಾರ ತೂಕವು ಕಡಿಮೆಯಾಗುತ್ತ ನಡೆದಿದೆಯೆಂದೂ ಅವರಿಗೆ ಹೆಚ್ಚು ಬೆಣ್ಣೆಯನ್ನು ಕೊಡುವ ಆಗ್ರಹ ಮಾಡಿದರೂ ಅವರು ಒಲ್ಲೆನ್ನುತ್ತಾರೆಂದೂ ಅಡ್ವಾನಿಯವರು ಮೇಜರ ಡೋಯಿಲ್ಲರಿಗೆ ಬರೆದಿದ್ದರು. ಇದಕ್ಕೆ 'ಅವರು ತೆಗೆದುಕೊಳ್ಳದಿದ್ದರೆ ಒತ್ತಾಯಮಾಡಲಿಕ್ಕಾದಿತೇ? ಡಾಕ್ಟರರ ದೃಷ್ಟಿಯಿಂದ ನಿಮಗೆ ಯೋಗ್ಯವಾದುದನ್ನು ಮಾಡಿರಿ' ಎಂದು ಡೋಯಿಲ್ಲರು ಬರೆದಿದ್ದರು."

ಸುಪರಿಂಟೆಂಡೆಂಟರು ಹೇಳಿದರು : " ನಮಗೆ ಎರಡನೆಯ ನಂಬರಿನ ಧಾನ್ಯ ತೆಗೆದುಕೊಳ್ಳಲಿಕ್ಕೆ ಆಜ್ಞೆ ಇದೆ. ಆದರೆ ನಾನು ಮೊದಲನೆಯ ನಂಬರಿನದನ್ನೇ ತೆಗೆದುಕೊಳ್ಳುತ್ತೇನೆ. ಯಾಕಂದರೆ ಕೊನೆಗೆ ಎರಡನೆಯ ನಂಬರಿನ ಧಾನ್ಯವೇ ತುಟ್ಟಿ ಬೀಳುತ್ತದೆ. ಕೈದಿಗಳ ಸ್ವಾಸ್ಥ್ಯ ಕೆಡುವದರಿಂದ ಔಷಧಕ್ಕೆ ಖರ್ಚುಮಾಡಬೇಕಾಗುತ್ತದೆ."

ಕುದುರೆ ಜೂಜಿನ ಬಗ್ಗೆ ಕೆಲವು ದಿವಸ ಮೊದಲು ಬಾಪೂ ಒಮ್ಮೆ ಸುಪರಿಂಟೆಂಡೆಂಟರಿಗೆ ವ್ಯಾಖ್ಯಾನ ಕೊಟ್ಟಿದ್ದರು. ಅವನು ಸಮರ್ಥನೆಗಾಗಿ ಮಿತಾಚಾರದ ವಾದವನ್ನು ಮಾಡಿದ್ದನು. ನಾವು ಪಾಶ್ಚಿಮಾತ್ಯರ ದುರ್ಗುಣಗಳ ಅನುಕರಣ ಮಾಡುವದನ್ನೇ ಕಲಿತಿದ್ದೇವೆ. ಇದು ಎಷ್ಟೊ ಕುಟುಂಬಗಳನ್ನು ಹಾಳುಮಾಡಿರುವದು. ನಾವು ಇದರ ವಿಚಾರವನ್ನೇ ಮಾಡುವದಿಲ್ಲ. ಇಷ್ಟಾದಮೇಲೂ ನಿನ್ನೆ ಸುಪರಿಂಟೆಂಡೆಂಟನು ಆನಂದದಿಂದ ಇದೇ ಮಾತನ್ನು ಮಾತಾಡುತ್ತಿದ್ದನು: ಇಂಥವನು ಇಷ್ಟು ಕಳೆದುಕೊಂಡನು, ಇಂಥವನು ತನ್ನ ಮಾನ ಕಳೆದುಕೊಂಡನು, ಇಂಥವನು ತನ್ನ ಆಸ್ತಿಯನ್ನೇ ಕಳೆದುಕೊಂಡನು, ಮುಂತಾಗಿ. ಇಷ್ಟಾದರೂ ಸ್ವತಃ 'ಮಿತಿಯಿಂದಲೇ ಆಡುತ್ತಾನೆ! ಮತ್ತು ಇದರಲ್ಲಿ ಬಹಳ ಆನಂದ ದೊರೆಯುತ್ತದೆ.'

ನಿನ್ನೆ . . . . ಸಹೋದರಿಯು . . . . ರ ಸಂಗಡ ಲಗ್ನಮಾಡಿಕೊಳ್ಳುವ ಪತ್ರವನ್ನು ಬರೆದಿದ್ದಳು. ನಮ್ಮ ಮೂವರ ಆಶೀರ್ವಾದ ಕೇಳಿದ್ದಳು. ಬಾಪೂ ಮೂರೂ ಜನರ ವತಿಯಿಂದ ಆಶೀರ್ವಾದ ಕಳಿಸುತ್ತ : "ನಿನಗೂ
೨೮-೮-'೩೨ ಮತ್ತು . . . ಗೂ ನಮ್ಮ ಮೂವರ ಆಶೀರ್ವಾದ. ನಿಮ್ಮ ಯುಕ್ತ ಜೀವನವು ಸುಖಿಯಾಗಲಿ; ನಿಮ್ಮಿಬ್ಬರಿಗೂ ಪೂರ್ಣಾಯು ಪ್ರಾಪ್ತವಾಗಲಿ ಮತ್ತು ಯಾವಾಗಲೂ ಸೇವಾಪರಾಯಣರಾಗುವಿರೆಂದು ಆಶಿಸುತ್ತೇವೆ. ಆಗ ಮಾತ್ರ ನಿಮ್ಮ ಸಂಬಂಧವು ಉಚಿತವೂ ಯೋಗ್ಯವೂ ಎಂದು ತಿಳಿಯಬಹುದು." ಪತಿಯು ಜೀವಿಸಿರುವಾಗ ಹಿಂದೂ ಸ್ತ್ರೀಗೆ ವಿವಾಹಮಾಡಿ-

ಕೊಳ್ಳಲಿಕ್ಕೆ ಬಾಪೂ ಒಪ್ಪಿಗೆ ಕೊಡುವದೂ ಮತ್ತು ಹಿಂದೂ ಸಮಾಜದಲ್ಲಿ ಇಂಥ ಘಟನೆಯಾಗುವದೂ ಇದೇ ಮೊದಲನೆಯದು.

ಮಿಸ್ ಎಲಿಜಾಬೆಥ ಹಾವರ್ಡಳು ಫೆಲೊಶಿಪ್ (ಬಂಧು ಭಾವ) ಸಭೆಯ ವರ್ಣನೆಯನ್ನು ಕಳಿಸಿದ್ದಳು. ಅವಳಿಗೆ ಬರೆದರು:

"The fellowship is a difficult thing. It can come only through constant practice in all walks of life and among all the different races and nationalities."

"ಬಂಧುಭಾವವು ಕಠಿಣ ವಸ್ತು. ಜೀವನದ ಎಲ್ಲ ಕ್ಷೇತ್ರಗಳಲ್ಲಿ, ಭಿನ್ನ ಭಿನ್ನ ಜಾತಿಗಳಲ್ಲಿ ಮತ್ತು ರಾಷ್ಟ್ರಗಳಲ್ಲಿ ಯಾವಾಗಲೂ ಬಾಂಧವ್ಯವನ್ನಿಡುವ ಪ್ರಯತ್ನ ವಾದಾಗಲೇ ಇದು ಸ್ಥಿರವಾಗುವದು."

ಇಂದು ಬಾಪೂ ಆಶ್ರಮದ ಎಲ್ಲ ಟಪಾಲನ್ನು ಮಧ್ಯಾಹ್ನವಾಗುವದರೊಳಗೆ ಮುಗಿಸಿದ್ದರು. (ಆದರೂ ೫೪ ಪತ್ರಗಳಿದ್ದವು.)

ಹುಡುಗ ಹುಡಿಗೆಯರ ಪತ್ರಗಳಿಂದ: "ಆಶ್ರಮದಲ್ಲಿ ಕಲಿಯಲಿಕ್ಕೆ ಸಿಗುವ ದನ್ನು ಚನ್ನಾಗಿ ಕಲಿತುಕೊಳ್ಳಿರಿ. ಸತ್ಯದ ಶಿಕ್ಷಣವೇ ಎಲ್ಲಕ್ಕೂ ಹೆಚ್ಚಿನದು. ಇದನ್ನು ಲಕ್ಷ್ಯದಲ್ಲಿಡಿರಿ."

ದ್ವೇಷದ ಬೀಜವನ್ನು ನೋಡಿದಲ್ಲಿ ಬಿತ್ತಲಾಗುತ್ತಿದೆ: ಈ ಪತ್ರವನ್ನು ನೋಡಿರಿ:

"ಯಾರ ಸಂಗಡ ನಿಶ್ಚಯವಾಗಿದೆಯೊ ಅವನ ಇತಿಹಾಸ ತಿಳಿದುಕೊಳ್ಳಬೇಕು. ಒಪ್ಪಿಗೆ ಇಲ್ಲದಿದ್ದರೆ ನಿಶ್ಚಯ ಮುರಿಯಲಿಕ್ಕೆ ಹೇಳು. ಮದುವೆಯಾಗಲು ಒಲ್ಲೆನ್ನ-ಲಿಕ್ಕೆ ಸಂಕೋಚಪಡಬಾರದು. ಆದರೆ ನೀನು ಇದೆಲ್ಲವನ್ನೂ ಮಾಡಬೇಕಾದರೆ ಸುಳ್ಳು ನಾಚಿಕೆಯನ್ನು ಬಿಡಬೇಕು. ವಿನಯ ಬಿಡಬಾರದು, ದುಃಖವಾದರೆ ಅದನ್ನು ಸಹಿಸಲಿಕ್ಕೆ ಸಿದ್ಧರಾಗಬೇಕು. ಹೀಗೆ ಮಾಡುವವನ ಪಾವಿತ್ರ್ಯವು ಅತ್ಯಂತ ಉಚ್ಚ-ವಾಗಿರಬೇಕು. ಅಂದರೆ ಅದರ ಪರಿಣಾಮವಾಗದೆ ಇರಲಾರದು."

"ಸಿಟ್ಟು ಬಂದಾಗ ಸುಮ್ಮನಿರಬೇಕು ಮತ್ತು ರಾಮನಾಮ ಜಪಿಸಿ ಅದನ್ನು ಹೊಡೆದು ಹಾಕಬೇಕು."

ವಲ್ಲಭಭಾಯಿಯವರ ಪಾಕೀಟುಗಳ ಮತ್ತು ಸಂಸ್ಕೃತ-ಅಭ್ಯಾಸದ ವರ್ಣನೆ-ಯನ್ನು ಪ್ರತಿಯೊಂದು ಪತ್ರದಲ್ಲಿ ಮಾಡುತ್ತಾರೆ. ನಿನ್ನೆ ಕಾಕಾರ ಪತ್ರದಲ್ಲಿ ಬರೆದಿದ್ದರು: "ಉಚ್ಚೈಃಶ್ರವದ (ಕುದುರೆ) ಗತಿಯಿಂದ ವಲ್ಲಭಭಾಯಿಯವರ ಓದು ನಡೆದಿದೆ." ಇವತ್ತು ಪ್ಯಾರೇಲಾಲರಿಗೆ ಬರೆದರು: "ವಲ್ಲಭಭಾಯಿಯವರು ಅರಬೀ ಕುದುರೆಯ ಗತಿಯಿಂದ ಓಡತೊಡಗಿದ್ದಾರೆ. ಸಂಸ್ಕೃತ ಪುಸ್ತಕವನ್ನು ಕೆಳಗಿಡುವದೇ ಇಲ್ಲ. ನನಗೆ ಇದರ ಆಶೆ ಇದ್ದಿಲ್ಲ. ಪಾಕೀಟು ಮಾಡುವದರಲ್ಲಿಯಂತೂ ಅವರನ್ನು

ಯಾರೂ ಸರಿಗಟ್ಟಲಾರರು. ಪಾಕೀಟುಗಳನ್ನು ಅವರು ಅಳತೆಮಾಡದೆ ತಯಾರಿಸುತ್ತಾರೆ ಮತ್ತು ಅಂದಾಜಿನಿಂದ ಕತ್ತರಿಸುತ್ತಾರೆ. ಆದರೂ ಸರಿಯಾಗಿ ಆಗುತ್ತವೆ. ಇದಕ್ಕೆ ಸಮಯ ಬಹಳ ಹತ್ತುತ್ತದೆಂದೂ ಅನಿಸುವದಿಲ್ಲ. ಅವರ ವ್ಯವಸ್ಥೆಯು ಆಶ್ಚರ್ಯಕಾರಕವಾಗಿದೆ. ಮಾಡಬೇಕಾದುದನ್ನು ನೆನಪಿಡಲಿಕ್ಕೆ ಅವಕಾಶವನ್ನೇ ಕೊಡುವದಿಲ್ಲ. ಬಂದಹಾಗೆ ಮಾಡಿಬಿಡುವರು. ನೂಲುವದನ್ನು ಪ್ರಾರಂಭಿಸಿ-ದಂದಿನಿಂದ ಸರಿಯಾದ ಹೊತ್ತಿಗೆ ನೂಲುತ್ತಾರೆ. ಈ ರೀತಿ ನೂಲಿನಲ್ಲಿಯೂ ಗತಿಯಲ್ಲಿಯೂ ದಿನಾಲು ಸುಧಾರಣೆಯಾಗುತ್ತ ನಡೆದಿದೆ. ಕೈಯಲ್ಲಿ ತಗೆದುಕೊಂಡ ಕೆಲಸವನ್ನು ಮರೆಯುವದು ಅಪರೂಪ. ಇಷ್ಟು ವ್ಯವಸ್ಥೆಯಿದ್ದಲ್ಲಿ ಅವ್ಯವಸ್ಥೆ ಯಾಗುವದು ಎಂತು."

ಹುಡಿಗೆಯರ ಶಿಕ್ಷಣವನ್ನು ಇತ್ತೀಚಿಗೆ ಬಾಪೂ ತಮ್ಮ ಕೈಯಲ್ಲಿಯೇ ತೆಗೆದು-ಕೊಂಡಿದ್ದಾರೆ. · · · ಳು ಬರೆದಳು : " ನಿಮ್ಮ ಪತ್ರ ಓದಿದಮೇಲೆ ನಾನು ಅಖಂಡ ಬ್ರಹ್ಮಚರ್ಯದ ವ್ರತ ತೆಗೆದುಕೊಳ್ಳುವ ನಿಶ್ಚಯಮಾಡಿದ್ದೇನೆ." ಅವಳಿಗೆ ಬರೆದರು : " ನೀನು ಅಖಂಡ ಕುಮಾರಿಯಾಗಿ ಉಳಿದರೆ ನನಗೆ ಅವಶ್ಯವಾಗಿ ಒಳ್ಳೆಯದೆನಿಸು-ವದು. ಆದರೆ ನಾನು ಬಹಳ ಹುಡುಗ ಹುಡಿಗೆಯರು ತಮ್ಮನ್ನು ತಾವೇ ವಂಚಿಸಿ ಕೊಳ್ಳುವದನ್ನು ನೋಡಿದ್ದೇನೆ. ಯಾವನಿಗೆ ಪೂರ್ಣ ಬ್ರಹ್ಮಚರ್ಯ ಪಾಲಿಸುವ ದಿದೆಯೊ ಅವನಲ್ಲಿ ಪೂರ್ಣ ಸತ್ಯ ಬೇಕು ಮತ್ತು ಅವನು ಏನನ್ನೂ ಮುಚ್ಚಿಡಬಾರದು. ಬ್ರಹ್ಮಚರ್ಯವೆಂದರೇನು ಎಂಬುದರ ಪೂರ್ಣ ಜ್ಞಾನ ಬೇಕು. ವಿಕಾರಗಳನ್ನು ವಶದಲ್ಲಿಟ್ಟುಕೊಳ್ಳುವದು ದೊಡ್ಡ ವಿಷಯ. ಹೀಗೆ ಮಾಡುವವನು ಎಲ್ಲ ಭೋಗ-ಗಳನ್ನು ತ್ಯಜಿಸಬೇಕು. ಅಂದರೆ ಅವನು ಮಾಡುವದೆಲ್ಲವೂ ಭೋಗಕ್ಕಾಗಿ ಅಲ್ಲ, ಆದರೆ ಅವಶ್ಯವೆಂದು ತಿಳಿದು ಮಾಡುತ್ತಾನೆ. ಆದುದರಿಂದ ಅವಶ್ಯವಿಲ್ಲದ್ದನ್ನು ಅವನು ಮಾಡುವದಿಲ್ಲ. ಅವನ ತಿನಿಸು–ಉಣಿಸು, ಆಟ–ನೋಟ ಮತ್ತು ಉಡಿಗೆ–ತೊಡಿಗೆಯ ಎಲ್ಲ ಕ್ರಿಯೆಗಳು ಇದೇ ಪ್ರಕಾರ ಇರುತ್ತವೆ. ಇದೆಲ್ಲವನ್ನೂ ಮಾಡಲಿಕ್ಕೆ ನಿನ್ನಲ್ಲಿ ಶಕ್ತಿಯಿದ್ದರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ನಮ್ರತಾ ಪೂರ್ವಕವಾಗಿ ಒಪ್ಪಿಕೊಳ್ಳಬೇಕು ಮತ್ತು ಅಸಂಖ್ಯ ಹುಡಿಗೆಯರು ಮಾಡುವಂತೆ ನೀನೂ ಮಾಡ-ಬೇಕು. ಅದರಲ್ಲಿ ಏನಾದರೂ ದೋಷವಿದೆಯೆಂದು ತಿಳಿಯುವದಿಲ್ಲ. ಶಕ್ತಿಮೀರಿ ಯಾವದೂ ಆಗುವದಿಲ್ಲ. "

· · · ಗೆ ಪ್ರಾರ್ಥನೆಯ ಕಾಲದ ಮೌನದ ಬಗ್ಗೆ ಬರೆದರು : " ಪ್ರಾರ್ಥನೆ-ಯಲ್ಲಿ ಸಾಯಂಕಾಲಕ್ಕೆ ಐದು ನಿಮಿಷದ ಸೂಚನೆ ನನ್ನದಿತ್ತು. ಎರಡೂ ಹೊತ್ತು ಇಷ್ಟು ಸಮಯ ಇಡುವದಾದರೆ ಅವಶ್ಯವಾಗಿ ಇಡಬಹುದು. ಎಲ್ಲರೂ ಇದರಲ್ಲಿ ಮನಸ್ಸು ಹಾಕಿ ಭಾಗ ತೆಗೆದುಕೊಂಡರೆ ಗದ್ದಲವು ನಿಶ್ಚಿತ ಕಡಿಮೆಯಾಗುವದು.

ಮಕ್ಕಳಲ್ಲಿಯೂ ಇಷ್ಟು ಸಮಯ ಕಾಯ್ದಿಡುವ ಅಭ್ಯಾಸ ಬೀಳಲಿ. ಅರ್ಧ ಗಂಟೆಯ ವರೆಗೆ ಮೌನವನ್ನಾಚರಿಸುವ ಸಭೆಗಳಿಗೂ ನಾನು ಹೋಗಿದ್ದೇನೆ. ಇದು ವಿಲಾಯತಿಯ ಮಾತು. ನಮ್ಮಲ್ಲಿ ಮೌನದ ಮಹಿಮೆಯು ಬಹಳವಾಗಿದೆ. ಸಮಾಧಿಯು ಮೌನವೇ ಆಗಿದೆ. ಮುನಿ ಶಬ್ದವು ಇದರಿಂದಲೇ ಹೊರಡುತ್ತದೆ. ಮೌನದ ಕಾಲಕ್ಕೆ ಮೊದಲು ಮೊದಲು ನಿದ್ರೆ ಬರುತ್ತದೆ, ತರತರಹದ ವಿಚಾರಗಳು ಬರುತ್ತವೆ. ಇದೆಲ್ಲವೂ ನಿಜ. ಇದನ್ನು ದೂರ ಮಾಡುವದಕ್ಕಾಗಿಯೇ ಮೌನದ ಅವಶ್ಯಕತೆಯಿದೆ. ನಮಗೆ ಬಹಳ ಮಾತಾಡುವ ಮತ್ತು ಸಪ್ಪಳ ಕೇಳುವ ರೂಢಿ ಬಿದ್ದಿದೆ. ಆದುದರಿಂದ ಮೌನವು ಕಠಿಣವೆನಿಸುತ್ತದೆ. ಸ್ವಲ್ಪ ಅಭ್ಯಾಸದಿಂದ ಅದು ಒಳ್ಳೆಯದೆನಿಸತೊಡಗುವದು ಮತ್ತು ಒಳ್ಳೆಯದೆನಿಸತೊಡಗಿದ ಮೇಲೆ ಅದರಿಂದ ದೊರೆಯುವ ಶಾಂತಿಯು ಅಲೌಕಿಕವಾಗಿರುವದು. ನಾವು ಸತ್ಯದ ಪೂಜಾರಿಗಳಾಗಿರುವದರಿಂದ ಮೌನದ ಅರ್ಥ ಅರಿತುಕೊಂಡು ಅದಕ್ಕನುಸಾರವಾಗಿಯೇ ಮೌನವನ್ನಾಚರಿಸಬೇಕು. ಮೌನದಲ್ಲಿಯೂ ರಾಮನಾಮ ಜಪಿಸುತ್ತಿರಬೇಕು. ಸತ್ಯ ಸಂಗತಿಯೆಂದರೆ ನಮ್ಮ ಮನಸ್ಸು ಮೌನದ ಸಲುವಾಗಿ ಸಿದ್ಧವಿರಬೇಕು. ಸ್ವಲ್ಪ ವಿಚಾರ ಮಾಡಿದರೆ ಅದರ ಮಹತ್ವ ಗೊತ್ತಾಗುವದು. ಸಮೂಹದಲ್ಲಿ ನಮ್ಮಿಂದ ಐದು ನಿಮಿಷಗಳವರೆಗೆ ಸ್ಥಿರವಾಗಿ ಕೂಡಲಿಕ್ಕಾಗುವದಿಲ್ಲವೆ? ನೀವು ನಾಟಕ ನೋಡಲಿಕ್ಕೆ ಎಂದಾದರೂ ಹೋಗಿರುವಿರಾ? ಅನೇಕ ನಾಟಕ ಗೃಹಗಳಲ್ಲಿ ಮಾತನಾಡಲಿಕ್ಕೆ ಪ್ರತಿಬಂಧವಿರುತ್ತದೆ. ನನ್ನಂಥ ರಸಿಕರು ತಾಸುಗಟ್ಟಲೆ ಮುಂಚಿತವಾಗಿ ಹೋಗಿ ಕೂಡ್ರುತ್ತಾರೆ. ನಾಟಕದ ಅಭಿರುಚಿಯು ಒಂದು ಗಂಟೆಯವರೆಗೆ ಮೌನದಿಂದಿರಲಿಕ್ಕೆ ಹಚ್ಚುತ್ತದೆ. ಆದರೆ ಇಷ್ಟರಿಂದಲೇ ತೀರಲಿಲ್ಲ. ನಾಟಕವು ನಾಲ್ಕೈದು ಗಂಟೆಗಳವರೆಗೆ ನಡೆಯುತ್ತದೆ. ಇಷ್ಟೆಲ್ಲ ಹೊತ್ತು ನೋಡುವವರು ಮೌನದಿಂದಲೇ ಇರಬೇಕಾಗುತ್ತದೆ. ಆದರೆ ಅದು ಒಳ್ಳೆಯದೆನಿಸುತ್ತದೆ. ಅದು ಮನಸ್ಸಿಗೆ ಅನುಕೂಲವಾಗಿರುವದರಿಂದ ಮೌನವು ಕಠಿಣವಾಗಿರುವದಿಲ್ಲ. ಅಂದಮೇಲೆ ದೇವರ ಸಲುವಾಗಿ ಐದು ನಿಮಿಷದ ಮೌನವು ಕಠಿಣವೆನಿಸಬೇಕೆ? ಈ ವಿಚಾರಶ್ರೇಣಿಯಲ್ಲಿ ತಪ್ಪಿದ್ದರೆ ತಿಳಿಸು. ತಪ್ಪಿಲ್ಲದಿದ್ದರೆ ಆನಂದದಿಂದ ಮೌನವನ್ನಾಚರಿಸು ಮತ್ತು ಅದನ್ನು ವಿರೋಧಿಸುವವರೆದುರಿಗೆ ನನ್ನ ವತಿಯಿಂದ ವಕೀಲಿಯನ್ನು ಮಾಡು.

"ನಮ್ಮಲ್ಲಿದ್ದ ದೋಷಗಳಷ್ಟೆ ಸಹನೆಮಾಡಲಿಕ್ಕೆ ಯೋಗ್ಯವಾದವುಗಳೆಂದು ತಿಳಿಯಬೇಡ. ಸುಧಾರಿಸಲಿಕ್ಕೆ ಪ್ರಯತ್ನಿಸುವವರೆಲ್ಲರ ದೋಷಗಳನ್ನೂ ಸಂಗ್ರಹಿಸಬೇಕು. ಯಾವನು ದೋಷಗಳ ಪೂಜಾರಿಯಿರುವನೊ ಅಂದರೆ ದೋಷಗಳೇ ಗುಣಗಳೆಂದು ತಿಳಿಯುತ್ತಾನೆಯೊ ಅವನಿಂದ ದೇವರು ಸಹ ದೂರ ಓಡುತ್ತಾನೆ. ತುಳಸೀದಾಸರು ನಮಗೆ ಇದನ್ನೇ ಕಲಿಸುತ್ತಾರೆ."

ಪರಶುರಾಮರ ಪತ್ರವನ್ನು ಓದುವಾಗ ಅದನ್ನು ಮುಂದೆ ಓದಲಿಕ್ಕೆ ಬರದಷ್ಟು ನಕ್ಕರು. ಉಳಿದದ್ದನ್ನು ನಾನು ಓದಿ ತೋರಿಸಬೇಕಾಯಿತು. ಅವರಿಗೆ ಬರೆದರು: "ನಿಮ್ಮ ೯ ಪುಟದ ಸಣ್ಣ ಪುಸ್ತಕವನ್ನು ಓದಿ ನಕ್ಕು ನಕ್ಕು ನನ್ನ ಹೊಟ್ಟೆ ಮುಳ್ಳು ಹಿಡಿಯಿತು. ತಾರುಣ್ಯದಲ್ಲಿ ಒಂದು ದಿವಸ ಭಾಂಗ ಕುಡಿದಾಗ ಇಷ್ಟು ನಕ್ಕದ್ದು ನನಗೆ ನೆನಪಿದೆ."

ಇದೇ ಪತ್ರದಲ್ಲಿ ಬರೆದರು: "ಮಹಾಭಾರತದಲ್ಲಿ ಅರ್ಜುನನು ಸೋಲುತ್ತಾನೆ ಮತ್ತು ಕೊನೆಗೆ ಯಾರೂ ಬದಕುವದಿಲ್ಲ ಎಂಬ ವರ್ಣನೆಯನ್ನು ಕೊಟ್ಟು ಮಹಾಭಾರತಕಾರನು ಶಸ್ತ್ರಯುದ್ಧದ ಮೂರ್ಖತೆಯನ್ನು ಸಿದ್ಧಮಾಡಿದ್ದಾನೆ. ಗೀತೆಯಲ್ಲಿ ದೇವರು ತನ್ನ ವರ್ಣನೆಯನ್ನು ಮಾಡಿದ್ದಾನೆ, ಅಂದರೆ ಗೀತಾಕಾರನು ದೇವರ ಬಾಯಿಂದ ಈ ವರ್ಣನೆಯನ್ನು ಮಾಡಿಸಿದ್ದಾನೆ. ಹಾಗೆ ನೋಡಿದರೆ ದೇವರು ನಿರಾಕಾರನಿದ್ದಾನೆ, ಮಾತಾಡುವದಿಲ್ಲ, ನಡೆದಾಡುವದಿಲ್ಲ. ದೇವರ ಬಾಯಿಂದ ಇಂಥ ಶಬ್ದವನ್ನು ಹೊರಡಿಸಬಹುದೇ ಹೇಗೆ ಎಂಬ ಪ್ರಶ್ನೆ ಉಳಿಯುತ್ತದೆ. ಅವಶ್ಯವಾಗಿ ಹೊರಡಿಸಬಹುದೆಂದು ನನ್ನ ಮತ. ದೇವರು ಸರ್ವಶಕ್ತಿವಂತನೂ ಸರ್ವಜ್ಞನೂ ಆಗಿರುವನು. ಸರ್ವಜ್ಞನ ಬಾಯಿಂದ ಹೊರಡುವ ಮಾತು ಕೇವಲ ಸತ್ಯವೇ ಆಗಿರುತ್ತದೆ ಆದುದರಿಂದ ಅದು ದೊಡ್ಡಿಸ್ತಿಕೆಯೆಂದು ಗಣಿಸಲ್ಪಡುವದಿಲ್ಲ. ಮನುಷ್ಯನು ತನ್ನ ಶಕ್ತಿಯ ಲೆಕ್ಕವನ್ನು ಹಾಕಲಾರನು. ಕಾರಣ ಅವನ ಬಾಯಿಂದ ಆ ಮಾತು ಶೋಭಿಸುವದಿಲ್ಲ. ಆದರೆ ಪ್ರಶ್ನೆ ಉದ್ಭವಿಸಿದಾಗ ಯಾವನೊಬ್ಬ ಮನುಷ್ಯನು ತನ್ನ ಶ್ರೇಷ್ಠತೆಯನ್ನು ಇದ್ದಕ್ಕಿದ್ದ ಹಾಗೆ ತೋರಿಸಿದರೆ ಅದರಲ್ಲಿ ದೊಡ್ಡಿಸ್ತನವಿರದೆ ಖರೇತನವಿರುತ್ತದೆ. ಐದು ಗಜ ಎತ್ತರಿದ್ದವನು ತಾನು ನಾಲ್ಕು ಗಜ ಎತ್ತರ ಇರುವೆನೆಂದು ಹೇಳಿದರೆ ಇದು ನಮ್ರತೆಯಲ್ಲ ಆದರೆ ಅಜ್ಞಾನವಿದೆ ಅಥವಾ ಡಾಂಭಿಕತನವಿದೆ."

· · · ರ ಪತ್ರದಲ್ಲಿ ಬರೆದರು: "ನಮ್ಮ ಸ್ತ್ರೀಯರು ನಿರ್ವಿಕಾರರಾಗುವ ಗುಣವನ್ನು ಕಲಿಯುವದಿಲ್ಲ. ಅವರಿಗೆ ಪತ್ನಿಯರಾಗಲಿಕ್ಕೆ ಬರುತ್ತದೆ. ಸಹೋದರಿಯರಾಗಲಿಕ್ಕೆ ಬರುವದಿಲ್ಲ. ಸಹೋದರಿಯರಾಗಬೇಕಾದರೆ ತುಂಬಾ ತ್ಯಾಗವೃತ್ತಿಯ ಅವಶ್ಯಕತೆಯಿದೆ. ಪತ್ನಿಯಾದವಳಿಗೆ ಸಂಪೂರ್ಣ ರೀತಿಯಿಂದ ಸಹೋದರಿಯಾಗಲಿಕ್ಕೆ ಬರುವದೇ ಇಲ್ಲವೆಂಬುದು ನನ್ನ ದೃಷ್ಟಿಯಿಂದ ಸ್ವಯಂಸಿದ್ಧವಿದೆ. ನಿಜವಾದ ಸಹೋದರಿಯು ಇಡೀ ಜಗತ್ತಿನ ಸಹೋದರಿಯಾಗಬಲ್ಲಳು. ಪತ್ನಿಯು ತನ್ನನ್ನು ಒಬ್ಬ ಪುರುಷನ ವಶಕ್ಕೆ ಒಪ್ಪಿಸಿಬಿಡುತ್ತಾಳೆ. ಪತ್ನಿಯ ಗುಣಗಳ ಅವಶ್ಯಕತೆಯಿದೆ, ಆದರೆ ಅವುಗಳನ್ನು ಕಲಿಯಬೇಕಾಗುವದಿಲ್ಲ; ಯಾಕಂದರೆ ಅವುಗಳಲ್ಲಿ ವಿಕಾರಗಳಿಗೆ ಶಾಂತಿ ಕೊಡುವ ಅವಕಾಶವಿದೆ. ಜಗತ್ತಿನ ಸಹೋದರಿಯಾಗುವ ಗುಣವು ಕಷ್ಟ-

ದಿಂದ ಬರುತ್ತದೆ. ಯಾರಲ್ಲಿ ಬ್ರಹ್ಮಚರ್ಯವು ಸ್ವಾಭಾವಿಕವಾಗಿರುವದೊ ಮತ್ತು ಸೇವಾಭಾವವು ಉಚ್ಚಮಟ್ಟಕ್ಕೆ ಮುಟ್ಟಿರುವದೊ ಅವಳೇ ಜಗತ್ತಿನ ಸಹೋದರಿಯಾಗ ಬಲ್ಲಳು."

ಎಷ್ಟೋಸಾರೆ ಉತ್ತಮರಾದ ತಾಯಿತಂದೆಗಳ ಹುಡುಗರು ಕೆಟ್ಟವರೂ ಮತ್ತು ಕೆಟ್ಟ ತಾಯಿತಂದೆಗಳ ಹುಡುಗರು ಉತ್ತಮರೂ ಇರುತ್ತಾರೆ. ಇದರ ಕಾರಣವೇನು? ಈ ಪ್ರಶ್ನೆಯ ಉತ್ತರವನ್ನು . . . ರ ಪತ್ರದಲ್ಲಿ ಕೊಟ್ಟರು: "ಉತ್ತಮ ಸಂಸ್ಕಾರಯುಕ್ತ ತಾಯಿತಂದೆಗಳ ಪರೀಕ್ಷೆಯನ್ನು ಯಾರು ಮಾಡಬಲ್ಲರು? ಗರ್ಭನಿಂತಾಗ ತಾಯಿತಂದೆಗಳ ಸ್ಥಿತಿಯೇನಿತ್ತೆಂಬುದನ್ನು ಯಾರಿಗೆ ಹೇಳುವದು ಸಾಧ್ಯ? 'ಒಳ್ಳೆಯದರ ಫಲವು ಒಳ್ಳೆಯದೆ ಆಗುತ್ತದೆ.' ಎಂಬ ನಿಯಮವನ್ನು ನಿರಪವಾದ ರೀತಿಯಿಂದ ಪಾಲಿಸುತ್ತಿರುವದರಲ್ಲಿಯೇ ಕ್ಷೇಮವಿದೆಯೆಂದು ನನ್ನ ವಿಚಾರ. ಪ್ರತಿಯೊಂದು ಸಾರೆ ಈ ನಿಯಮವನ್ನು ಯಾವದೊ ವಿಶಿಷ್ಟ ವ್ಯಕ್ತಿಯ ವಿಷಯದಲ್ಲಿ ಸಿದ್ಧಮಾಡುವದಾಗದಿದ್ದರೆ ಇದರಲ್ಲಿ ನಮ್ಮ ಅಜ್ಞಾನವಿದೆ, ನಿಯಮದ ಅಪೂರ್ಣತೆಯಿರಲಾರದು."

ಮತ್ತೆರಡು ಪ್ರಶ್ನೆಗಳ ಉತ್ತರ: "ದೈವವನ್ನು ನಾನು ಮಾನ್ಯ ಮಾಡಿದರೂ ಅದು ತಪ್ಪೆಂದು ಸಿದ್ಧವಾಗಲಾರದು. ದೈವದ ಅರ್ಥವು ಪೂರ್ವ ಕರ್ಮದ ಪರಿಣಾಮ."

"ವೇಶ್ಯೆಯರನ್ನು ಉದ್ಧರಿಸುವದಕ್ಕಾಗಿ ಪುರುಷರು ಪಶುಗಳಾಗುವದಿಲ್ಲವೆಂಬ ವ್ರತವನ್ನು ತೆಗೆದುಕೊಳ್ಳಬೇಕಾಗುವದು. ಎಲ್ಲಿಯವರೆಗೆ ಪುರುಷರೂಪದ ರಾಕ್ಷಸನು ಜಗತ್ತಿನಲ್ಲಿ ಸಂಚರಿಸುವನೊ ಅಲ್ಲಿಯವರೆಗೆ ವೇಶ್ಯೆಯರು ಇದ್ದೇ ಇರುವರು. ವೇಶ್ಯೆಯರು ತಮ್ಮ ವೃತ್ತಿಯನ್ನು ಬಿಟ್ಟು ಸುಧಾರಿಸಿದರೆ ಕುಲೀನರೆಂದು ಹೇಳಿಸಿ-ಕೊಳ್ಳುವ ಜನರು ಅವರನ್ನು ಅವಶ್ಯವಾಗಿ ಲಗ್ನಮಾಡಿಕೊಳ್ಳುವರು. ಒಂದು ಸಾರೆ ವೇಶ್ಯೆಯಾದರೆ ಯಾವಾಗಲೂ ವೇಶ್ಯೆಯೇ ಇರಬೇಕೆಂಬ ನಿಯಮವಿಲ್ಲ."

ಈ ಸಲದ ಲೇಖವು 'ವಿಚಾರಪೂರ್ಣ ಕಾರ್ಯ ಮತ್ತು ವಿಚಾರರಹಿತ ಕಾರ್ಯ' ಎಂದಿತ್ತು. ಇದರಲ್ಲಿ ಶೌಚಕೂಪದ ಸ್ವಚ್ಛತೆಯ ರಹಸ್ಯವನ್ನು ವಿಲಕ್ಷಣ ರೀತಿಯಿಂದ ತಿಳಿಸಿರುವರು ಮತ್ತು ಇದು ಎಲ್ಲಕ್ಕೂ ಹೆಚ್ಚು ಉತ್ತಮ ಸೇವೆ ಹೇಗಾಗಬಲ್ಲದೆಂಬುದನ್ನು ತಿಳಿಸಿದರು.

ಒಂದು ಪತ್ರದಲ್ಲಿ ಬಾಪೂ ಹೀರಾಲಾಲನಿಗೆ ಖಗೋಲದ ವಿಷಯಕ್ಕೆ ಬರೆದರು. ಅದರ ಭಾವವು ಹೀಗಿತ್ತು: "ನಾನು ನನ್ನನ್ನು ಮಂದ ಬುದ್ಧಿಯವನೆಂದು ತಿಳಿಯುತ್ತೇನೆ. ಅನೇಕ ಮಾತುಗಳನ್ನು ತಿಳಿದುಕೊಳ್ಳಲಿಕ್ಕೆ ನನಗೆ

೨೯–೮–'೩೨ ಎರಡನೆಯವರಿಗಿಂತಲೂ ಹೆಚ್ಚು ವೇಳೆ ಹಿಡಿಯುತ್ತದೆ. ಆದರೆ ನನಗೆ ಇದಕ್ಕಾಗಿ ಚಿಂತೆಯಿಲ್ಲ. ಬುದ್ಧಿಯ ವಿಕಾಸಕ್ಕೆ

ಮರ್ಯಾದೆ ಇದೆ. ಹೃದಯದ ವಿಕಾಸಕ್ಕೆ ಅಂತವೇ ಇಲ್ಲ." ಈ ಪತ್ರದ ನಕಲು ಮಾಡುವದು ಉಳಿದು ಹೋಯಿತು.

ಬಾಪೂರ ಸಲುವಾಗಿ ಕಾಂತಿ ಒಂದು ಪತ್ರವನ್ನು ಮೇಜರರ ಕೈಯಲ್ಲಿ ಕೊಟ್ಟು ಹೋಗಿದ್ದನು. ಅವರು ಅದನ್ನು ಬಾಪೂರಿಗೆ ಕೊಡದೆ ಆಯ್. ಜಿ. ಪಿ. ಯವರ ಕಡೆಗೆ ಕಳಿಸಿದರು. ನಮ್ಮೆಲ್ಲರಿಗೂ ಕೆಡಕೆನಿಸಿತು. ಕೊಡುವದಿರದಿದ್ದರೆ
೩೦-೮-'೩೨ ಇಲ್ಲ, ಆದರೆ ಅಲ್ಲಿ ಏತಕ್ಕಾಗಿ ಕಳಿಸಿದರು? ಇದರಲ್ಲಿ ಯಾವನದಾದರೂ ಸರಕಾರಕ್ಕೆ ಒಳ್ಳೆಯವನಾಗುವ ಪ್ರಯತ್ನವಿರಬಹುದು ಅಥವಾ ವಿಸಾಪುರದಲ್ಲಿ ದೊರೆಯುವ ಸೌಕರ್ಯಗಳ ಬಗ್ಗೆ ಸುದ್ದಿ ಕೊಟ್ಟು ಯಾವದೊ ಅಧಿಕಾರಿಯೊಡನೆ ವೈರತ್ವ ಸಾಧಿಸಿಕೊಳ್ಳುವ ಬುದ್ಧಿ ಇರಬಹುದು. ಬೆಳಿಗ್ಗೆ ಮೇಜರರು ಸ್ವತಃ ಬಂದು ಹೇಳಿದರು: "ಈ ಪತ್ರದಲ್ಲಿ ಅಂಥ ಆಕ್ಷೇಪಾರ್ಹವಾದುದೇನೂ ಇದ್ದಿಲ್ಲ, ಆದರೆ ಆಯ್. ಜಿ. ಪಿ. ಯು ತಾನು ಎಲ್ಲಿಯೂ ನೂಲುವ ಪರವಾನಿಗೆಯನ್ನು ಕೊಟ್ಟಿಲ್ಲವೆಂದು ನನಗೆ ಹೇಳುತ್ತಾನೆ ಮತ್ತು ಕಾಂತಿಯು ವಿಸಾಪುರದಲ್ಲಿ ೧೧೦೦ ಜನರು ನೂಲುತ್ತಾರೆಂದು ಬರೆಯುತ್ತಾನೆ. ಆದುದರಿಂದ ವಿಸಾಪುರದಲ್ಲಿ ಪರವಾನಿಗೆ ಇದ್ದರೆ ಇಲ್ಲಿ ಏಕೆ ಇಲ್ಲವೆಂದು ನಾನು ಅವನನ್ನು ಕೇಳಿದ್ದೇನೆ." ಮೇಜರರು ಹೋಗುತ್ತಲೇ ಬಾಪೂ ಅಂದರು: "ಮೇಜರರಿಗೆ ಅನ್ಯಾಯಮಾಡಿದ್ದೆವಲ್ಲವೆ?" ವಲ್ಲಭಭಾಯಿ ಹೇಳಿದರು: "ನಾನು ವಿಚಾರ ಮಾಡುತ್ತಿದ್ದುದು ನಿಜವಾಯಿತು. ಇವನು ಇದನ್ನು ಹೇಳಿದ್ದರಿಂದ ನೂಲುವದನ್ನೂ ನಿಲ್ಲಿಸುವರು." ಬಾಪೂ ಹೇಳಿದರು: "ಇವನು ಇದಕ್ಕಾಗಿ ಬರೆಯಲಿಲ್ಲ. ಇವನು ಅಲ್ಲಿಯ ಯಾವದೊ ಆಫೀಸರನ ವಿರುದ್ಧ ಏನೊ ತಕರಾರುಮಾಡಿರಬಹುದು ಎಂದು ತಿಳಿದು ನಾನು ಅನ್ಯಾಯ ಮಾಡಿದೆನು. ಇದಕ್ಕಾಗಿ ನನ್ನ ಮನಸ್ಸು ಇವನ ಕ್ಷಮೆ ಬೇಡುತ್ತಿದೆ." ವಲ್ಲಭಭಾಯಿ: "ಏನೇ ಇರಲಿ. ನನಗಂತೂ ನನ್ನ ವಿಚಾರವು ಸರಿಯೆನಿಸುತ್ತದೆ. ಒಂದು ಜೇಲಿನಲ್ಲಿ ಯಾವದೊಂದು ಸೌಕರ್ಯವು ದೊರೆತಿದೆಯೆಂದು ಎರಡನೆಯ ಜೇಲಿನಲ್ಲಿ ತಿಳಿದು ಅದರ ತಪಾಸಣೆಯಾದ ಕೂಡಲೇ ಆ ಸೌಕರ್ಯವನ್ನು ಕಸಿದುಕೊಳ್ಳಲಾಗಿದೆಯೆಂದು ಗೊತ್ತಾಗಿದೆ." ಬಾಪೂ: "ಸರಕಾರದ ವತಿಯಿಂದ ಈ ಸೌಕರ್ಯವು ಒಂದು ಸ್ಥಳದಲ್ಲಿ ದೊರೆಯುತ್ತಿದ್ದರೆ ಇನ್ನೊಂದು ಸ್ಥಳದಲ್ಲಿಯೂ ಕೊಡಬೇಕೆಂದು ಬೇಡಿಕೆಯನ್ನು ಏಕೆ ಮಾಡಬಾರದು?" ಬಹಳ ಹೊತ್ತಿನ ವರೆಗೂ ಈ ಚರ್ಚೆ ನಡೆಯಿತು. ಆದರೆ ಸಾರಾಂಶವಿಷ್ಟೆ ಬಾಪೂ ತಿಳಿದೆ ಆಗಲಿ ತಿಳಿಯದಲೆ ಆಗಲಿ ಯಾರಾದರ ಸಂಗಡ ಅನ್ಯಾಯ ಮಾಡಿದರೆ ಬಹಿರಂಗವಾಗಿ ಅಥವಾ ಮನಸ್ಸಿನೊಳಗೆ ಅವರ ಕ್ಷಮೆಯನ್ನು ಬೇಡುತ್ತಾರೆ.

ಉಪವಾಸದ ವಿಷಯಕ್ಕೆ ಇನ್ನೂ-ಯಾವ ಸುದ್ದಿಯೂ ಬರಲಿಲ್ಲ. ಬಾಪೂ ಹೇಳಹತ್ತಿದರು: "ಈ ಜನರ ಅಹಂಕಾರಕ್ಕೆ ಮಿತಿಯೆ ಇಲ್ಲ. ಆದುದರಿಂದ ಇದರ ಕಡೆಗೆ ಅವರು ಎಷ್ಟೂ ಲಕ್ಷ್ಯಕೊಡದಿದ್ದರೆ ಆಶ್ಚರ್ಯವಾಗುವ-

೩೧-೮-'೩೨ ದಿಲ್ಲ." 'ಕಾಂಗ್ರೆಸ್ಸು ಕಾಯ್ದೆಭಂಗವನ್ನು ನಿಲ್ಲಿಸದವರೆಗೆ ಅದರ ಸಂಗಡ ಒಪ್ಪಂದ ಹೇಗಾಗಬಲ್ಲದು?' ಎಂದು ಸಿ. ಪಿ. ಹೇಳು-ತ್ತಾರೆ. ಉದಾರಮತವಾದಿಗಳಿಗೂ ಇದಕ್ಕೂ ಸಂಬಂಧವೇನು? ಉದಾರಮತ ವಾದಿಗಳಂತೂ ಕಾಯ್ದೆಭಂಗದ ವಿರೋಧಿಗಳಿದ್ದಾರೆ.

ಜೇಲನ್ನು ಮುಟ್ಟುವದಕ್ಕಿಂತ ಮೊದಲು ಎಸ್‌ಪ್ಲೆನೇಡ ಕೋರ್ಟಿನಿಂದ ಜಯರಾಜಾನಿಯವರ ಅಣ್ಣನ ಮಗಳು ಬರೆದ ಪತ್ರ ಬಂತು: "ಬಾಪೂ, ಕೊನೆಗೆ ನಾನು ಕೂಡ ಮಂದಿರದಲ್ಲಿ ಬಂದೆನಲ್ಲವೆ? ಇಂದೇ ನಿಮ್ಮ ಪತ್ರ ಮುಟ್ಟಿತ್ತು." ಕೋರ್ಟಿನಲ್ಲಿ ಯಾರಿಂದಲೊ ಕಾಗದದ ತುಂಡನ್ನು ತೆಗೆದುಕೊಂಡು ಅದರ ಮೇಲೆ ಬರೆದಿದ್ದಳು. ಬಾಪೂ ಹೇಳಿದರು: "ನೋಡಿರಿ, ಈಗ ಈ ಪತ್ರವನ್ನು ನೋಡಿ ಕಾಂಗ್ರೆಸ್ಸು ಸತ್ತಿದೆಯೆಂದು ಯಾರು ಹೇಳುವರು?"

ಮಿಸ್ ವಿಲ್ಕಿನ್‌ಸನ್, ಮಿಸ್ ವ್ಹಾಟಲಿ, ಮೆನನ್ ಮತ್ತು ಮೆಟರ್ಸರಿಂದ ಅಭಿನಂದನದ ಮತ್ತು ಪ್ರೇಮದ ಒಂದು ಸಣ್ಣ ಸಂದೇಶವು ಬಂತು. ಅದರಲ್ಲಿ ಹೀಗೆ ಬರೆದಿತ್ತು: "ವಿಲಾಯತಿಯಲ್ಲಿ ನೀವು ಭೆಟ್ಟಿಯಾದ ಇಂಡಿಯಾಲೀಗದ ಸಣ್ಣ ಶಿಷ್ಟ ಮಂಡಲವು ಇನ್ನೂ ತನ್ನ ಕೆಲಸಮಾಡುತ್ತಿದೆ. ನಿಮ್ಮನ್ನು ಭೆಟ್ಟಿಯಾಗಲು ನಮಗೆ ಪರವಾನಿಗೆ ದೊರೆಯಲಿಲ್ಲವಾದುದರಿಂದ ಈ ಪತ್ರ ಬರೆಯುತ್ತಿದ್ದೇವೆ."

ಮೀರಾಬಹನರ ಮೌನವಾರದ ಪತ್ರಗಳು ಆರ್ಥರ ರೋಡದಿಂದ ಮತ್ತೆ ನಿಯಮಿತವಾಗಿ ಬರತೊಡಗಿವೆ. ಇದರಲ್ಲಿ ಅವರು ತಮ್ಮ ತಿನಿಸು-ಉಣಿಸಿನ, ಉಡಿಗೆ-ತೊಡಿಗೆಯ, ಮಲಗುವ-ಏಳುವದರ ಸುದ್ದಿಯನ್ನು ವಿರಳ ವಿರಳವಾಗಿ ಕೊಟ್ಟಿದ್ದಾರೆ. ಇಷ್ಟೊಂದು ವಿಶ್ವಾಸ, ಇಷ್ಟೊಂದು ನಿಷ್ಠೆ ಮತ್ತು ಇಷ್ಟೊಂದು ಪ್ರಾಮಾಣಿಕತೆಯು ಎಲ್ಲರಲ್ಲಿಯೂ ಇದ್ದರೆ!

ಶಿಕ್ಷಣದ ಬಗ್ಗೆ ತಮ್ಮ ವಿಚಾರಗಳ ಪ್ರಚಾರವನ್ನು ತಮ್ಮ ಪರಿವಾರದಲ್ಲಿ ಮಾಡಲಿಕ್ಕೆ ಬಾಪೂ ಎಷ್ಟು ಉತ್ಸುಕರಿದ್ದಾರೆಂಬುದರ ಒಂದು ಉದಾಹರಣೆಯನ್ನು ತೆಗೆದುಕೊಳ್ಳಿರಿ. ಮಥುರಾದಾಸರ ಚಿ. ದೀಲೀಪನ ಶಿಕ್ಷಕನಿಗೆ

೧-೯-'೩೨ ಈ ಪ್ರಕಾರ ಪತ್ರ ಬರೆದರು: "ದಿಲೀಪನಿಗೆ ನಿಮ್ಮ ಹೆಸರನ್ನು ಕಳಿಸಲಿಕ್ಕೆ ಹೇಳಿದ್ದೆನು. ನಾವು ಎಂದಾದರೂ ಭೆಟ್ಟಿಯಾಗಿದ್ದೆವೆಂದು ನನಗೆ ನೆನಪಿಲ್ಲ. ಆದರೂ ಈ ಪತ್ರ ಬರೆಯುವ ಸಾಹಸವನ್ನು ಮಾಡುತ್ತಿ

ದ್ದೇನೆ. ಮಕ್ಕಳ ಶಿಕ್ಷಣದ ವಿಷಯದಲ್ಲಿ ಮಕ್ಕಳಿಗೆ ಪ್ರಾರಂಭದಿಂದ ವರ್ಣಮಾಲೆಯನ್ನು ಕಲಿಸಿ ನಾವು ಅವರ ಬುದ್ಧಿಯನ್ನು ಮಟ್ಟಮಾಡುತ್ತೇವೆಂದೂ ಅವರ ಅಕ್ಷರಗಳನ್ನು ಕೆಡಿಸುತ್ತೇವೆಂದೂ ನನ್ನ ಮತವು ಯಾವಾಗಲೂ ಇದೆ. ನನ್ನ ವಿಚಾರವು ಹೀಗಿದೆ: ಮಕ್ಕಳಿಗೆ ವರ್ಣಮಾಲೆಯನ್ನು ಕಲಿಸುವದಕ್ಕಿಂತ ಮೊದಲು ಸಾಕಷ್ಟು ಮೌಖಿಕ ಜ್ಞಾನವನ್ನು ಕೊಡಬೇಕು—ಅವರ ಪಟ್ಟಣ ಅಥವಾ ಹಳ್ಳಿಯ ಇತಿಹಾಸ, ಭೂಗೋಲದಿಂದ ಪ್ರಾರಂಭಮಾಡಿ ಪ್ರಾಂತ, ದೇಶ ಮತ್ತು ಜಗತ್ತಿನ ಸ್ವಲ್ಪ ಜ್ಞಾನ, ಸೃಷ್ಟಿ-ಸೌಂದರ್ಯ, ಆಕಾಶ, ಗಿಡ-ಬಳ್ಳಿ, ಬಾಯಿಃಲೆಕ್ಕ, ಭೂಮಿತಿ, ಸಾಹಿತ್ಯ ಅಂದರೆ ಶುದ್ಧ ಉಚ್ಚಾರ, ವ್ಯಾಕರಣ, ಕಾವ್ಯ ಮತ್ತು ಶ್ಲೋಕ ಮುಂತಾದವುಗಳ ಜ್ಞಾನವನ್ನು ಮಾಡಿಕೊಡಬೇಕು. ಇವುಗಳಲ್ಲಿ ಒಂದಕ್ಕಾದರೂ ಮೊದಲು ಓದು ಬರಹ ಕಲಿಯುವ ಅವಶ್ಯಕತೆ ಎಷ್ಟೂ ಇಲ್ಲ. ಮಗುವಿಗೆ ಬರೆಯುವದಕ್ಕಿಂತ ಮೊದಲು ಓದಲು ಕಲಿಸಬೇಕು. ಬರೆಯುವದನ್ನು ಎಲ್ಲಕ್ಕೂ ಹಿಂದುಗಡೆ ಕಲಿಸಬೇಕು. ವರ್ಣಮಾಲೆ ಬರೆಯುವದಕ್ಕಿಂತ ಮೊದಲು ಅವನಿಗೆ ಚಿತ್ರ ತೆಗೆಯುವದನ್ನು ಕಲಿಸಬೇಕು. ಸರಳ ಗೆರೆ, ಡೊಂಕ ಗೆರೆ, ತ್ರಿಕೋನ ಮುಂತಾದವುಗಳನ್ನು ಚನ್ನಾಗಿ ತೆಗೆಯಲಿಕ್ಕೆ ಬರಬೇಕು. ಅದಾದ ಮೇಲೆ ಅಕ್ಷರಗಳಿಗೂ ಚಿತ್ರರೂಪವನ್ನೇ ಕೊಡಬೇಕು. ಈ ಪ್ರಕಾರ ಕೆಲಸ ಮಾಡಿಸಿದರೆ ಮಕ್ಕಳಿಗೆ ಕಷ್ಟವಾಗುವದಿಲ್ಲ ಮತ್ತು ಬಹಳ ಜ್ಞಾನವು ಮೌಖಿಕವೇ ಸಿಗುವದು. ಇಷ್ಟಾದ ಮೇಲೆ ಅವರು ಅಕ್ಷರಗಳನ್ನು ತೆಗೆದರೆ ಮುತ್ತಿನಂತಾಗುವವು. 'ದಾಸಬೋಧ' ದಲ್ಲಿ ಅಕ್ಷರಗಳ ಮೇಲೆ ಒಂದು ಪ್ರಕರಣವಿದೆ. ಅದು ಓದಲಿಕ್ಕೂ ವಿಚಾರಮಾಡಲಿಕ್ಕೂ ಯೋಗ್ಯವಾಗಿದೆ. ದಿಲೀಪನ ಅಕ್ಷರಗಳನ್ನು ನೋಡಿ ಇದನ್ನು ಬರೆಯುವ ಮನಸ್ಸಾಗಿದೆ. ಇದರಲ್ಲಿ ಯೋಗ್ಯವೆನಿಸಿದ್ದನ್ನು ತೆಗೆದುಕೊಂಡು ಉಳಿದದ್ದನ್ನು ಮರೆತು ಬಿಡಿರಿ. ನನ್ನ ಅತ್ಯಂತ ಕೆಟ್ಟ ಅಕ್ಷರಗಳು ನನ್ನ ವಿಚಾರವನ್ನು ಸಮರ್ಥಿಸುತ್ತಿವೆ. ನನ್ನ ಅಕ್ಷರಗಳು ತಪ್ಪು ಶಿಕ್ಷಣದ ಪರಿಣಾಮವಾಗಿವೆ."

ಡಾ. ಮೆಹತಾರು ಹುಡಿಗೆಯರಿಗೆ ಈಗಿನ ಪದ್ಧತಿಯ ಉಚ್ಚಶಿಕ್ಷಣ ಕೊಡುವ ಪ್ರಯತ್ನ ಮಾಡಿದ್ದರು, ಪಿಯಾನೊ ಬಾರಿಸುವದನ್ನು ಕಲಿಸಲಿಕ್ಕೆ ಶಿಕ್ಷಕನನ್ನು ಇಟ್ಟಿದ್ದರು ಮುಂತಾದ ಮಾತುಗಳನ್ನು ಹೇಳಿದರು. ನಾನು ಹೇಳಿದೆ: "ಪಿಯಾನೊ ಕಲಿಯುವವರು ಪಿಯಾನನ್ನೂ ಇಟ್ಟಿರಬೇಕೆಂಬ ಅಪೇಕ್ಷೆಯಿರುತ್ತದಲ್ಲವೆ?" ಬಾಪೂ ಹೇಳಿದರು: "ಅವಶ್ಯವಾಗಿ. ಅವುಗಳ ಬೆಲೆ ನಾಲ್ಕೈದು ಸಾವಿರ ರೂಪಾಯಿಯಂತೂ ಆಗಿಯೇ ಆಗುತ್ತದೆ." ದಕ್ಷಿಣ ಆಫ್ರಿಕೆಯಲ್ಲಿ ಮಣಿಲಾಲನ ಸಲುವಾಗಿ ಬಂದ ಪಿಯಾನಿನ ತಮ್ಮ ಸುದ್ದಿಯನ್ನು ಹೇಳಿದರು: "ಮಣಿಲಾಲನು ಮಾರಿರದಿದ್ದರೆ ಆ ಪಿಯಾನೊ ಇನ್ನೂ ಫಿನಿಕ್ಸದಲ್ಲಿ ಇರಬೇಕು. ನಾನಂತೂ ಮಾರಿದ್ದಿಲ್ಲ. ಅದು

ಚನ್ನಾಗಿ ಕೆಲಸ ಕೊಟ್ಟಿತ್ತು. ಪ್ರಾರ್ಥನೆಯ ಎಷ್ಟೋ ಹಾಡುಗಳನ್ನು ಅದರಲ್ಲಿ ಕೂಡಿಸಲಾಗುತ್ತಿತ್ತು. ಕೈರಾನನು ಅದನ್ನು ಬಾರಿಸುತ್ತಿದ್ದನು. ವೆಸ್ಟ ಮತ್ತು ರಾಯುಪನ್ ಮುಂತಾದವರೆಲ್ಲರೂ ಅದನ್ನು ಉಪಯೋಗಿಸಿದ್ದರು. ಹುಸೇನನು **'है बहार बाग दुनिया चंद रोज'** ಇದನ್ನು ಅದರ ಮೇಲೆ ಬಾರಿಸುತ್ತಿದ್ದನು ಮತ್ತು ಹಾಡುತ್ತಿದ್ದನು. ಪಿಯಾನು ಬಾರಿಸುತ್ತಿದೆಯೊ ಅಥವಾ ಹುಸೇನನು ಹಾಡುತ್ತಾನೆಯೊ ಇದನ್ನು ಹೇಳುವದು ಕಠಿಣವಾಗುವಷ್ಟು ಅವನ ಸ್ವರವು ಮಧುರವಾಗಿತ್ತು. "

ಇಂದು ಡಾಹ್ಯಾಭಾಯಿ ವಲ್ಲಭಭಾಯಿಯವರನ್ನು ಭೆಟ್ಟಿಯಾಗಿ ಹೋದರು. ಈಗ ನಾರಾಯಣದಾಸಭಾಯಿಯ ಪತ್ರದ ಹೊರತಾಗಿ ಹೆಚ್ಚಿನ ಪತ್ರಗಳನ್ನು ಬಾಪೂ ಸ್ವತಃ ಬರೆಯುತ್ತಾರೆ. ಎರಡು ಮೂರು ದಿವಸಗಳ ಹಿಂದೆ ಹೀರಾಲಾಲನಿಗೆ "ನನ್ನನ್ನು ನಾನು ಮಂದಬುದ್ಧಿಯವನೆಂದು ತಿಳಿದುಕೊಂಡಿದ್ದೇನೆ" ಎಂದು ಬರೆದಿದ್ದರು.

೨-೯-'೩೨

. . . ರ ಪತ್ರದಲ್ಲಿ ಈ ಮಾತನ್ನು ಕುರಿತು ಹೆಚ್ಚು ಸ್ಪಷ್ಟ ಮಾಡಿದರು :

"ನನ್ನ ಜೀವನದಲ್ಲಿ ಬುದ್ಧಿಯು ತೀರ ಸ್ವಲ್ಪ ಕೆಲಸ ಮಾಡುತ್ತಿದೆಯೆಂದು ಹೇಳಬಹುದು. ನಾನು ಸ್ವತಃ ನನ್ನನ್ನು ಮಂದಬುದ್ಧಿಯವನೆಂದು ತಿಳಿಯುತ್ತೇನೆ. ಶ್ರದ್ಧಾವಂತರಿಗೆ ದೇವರು ಬುದ್ಧಿಯನ್ನು ಕೊಡುತ್ತಾನೆಂಬ ಮಾತು ನನ್ನ ವಿಷಯದಲ್ಲಿ ಅಕ್ಷರಶಃ ಸತ್ಯವಾಗಿದೆ. ನನ್ನಲ್ಲಿ ದೊಡ್ಡವರ ಸಲುವಾಗಿಯೂ ಜ್ಞಾನಿಗಳ ಸಲುವಾಗಿಯೂ ಯಾವಾಗಲೂ ಶ್ರದ್ಧೆ ಮತ್ತು ಆದರದ ಭಾವವು ಇದೆ. ನನ್ನ ಎಲ್ಲಕ್ಕೂ ಹೆಚ್ಚಿನ ಶ್ರದ್ಧೆಯು ಸತ್ಯದ ಸಲುವಾಗಿ ಇರುತ್ತದೆ. ಆದುದರಿಂದ ನನ್ನ ಮಾರ್ಗವು ಯಾವಾಗಲೂ ಕಠಿಣವಿದ್ದಾಗ್ಯೂ ಸುಲಭವೆನಿಸಿದೆ. "

. . . ಗೆ ಬರೆದರು: "ಎಂಥ ರಾಕ್ಷಸಿ ಮನುಷ್ಯನು ಮೈಮೇಲೆ ಏರಿ ಬಂದರೂ ಅವನನ್ನು ಎದುರಿಸುವ ಶಕ್ತಿಯನ್ನು ದೇವರು ನಿನಗೆ ಕೊಟ್ಟೇಕೊಡುವನೆಂಬ ವಿಶ್ವಾಸವಿಡು. ಸ್ವಲ್ಪೂ ಅಂಜಬೇಡ. ಇಂಥ ಸಂಕಟ ಬಂದಾಗ ಇದ್ದ ಶಕ್ತಿಯನ್ನೆಲ್ಲ ಹೊರಗೆ ತೆಗೆ. ಇದು ಹಿಂಸೆಯಲ್ಲ. ಇಲಿಯು ಬೆಕ್ಕನ್ನು ಹಿಂಸಿಸುವದು ಸಾಧ್ಯವೇ ಇಲ್ಲ. ಆದರೆ ಇಲಿಯು ವಿಚಾರಮಾಡಿದರೆ ಬೆಕ್ಕು ಅದನ್ನು ಜೀವಂತ ತಿನ್ನಲಾರದು. ಈ ರೀತಿ ಬೆಕ್ಕಿನ ಬಾಯಿಂದ ಹೊರಬೀಳುವ ಇಲಿಯು ಬೆಕ್ಕಿಗೆ ಹಿಂಸೆಯನ್ನು ಮಾಡುವದಿಲ್ಲ. ಇದು ತಿಳಿಯುತ್ತದೆಯಲ್ಲವೆ? ವ್ಯಭಿಚಾರಿಯು ಯಾವಾಗಲೂ ಪುಕ್ಕನಿರುತ್ತಾನೆಂಬುದನ್ನು ಲಕ್ಷ್ಯದಲ್ಲಿಡು. ಅವನು ಪವಿತ್ರ ಸ್ತ್ರೀಯ ತೇಜವನ್ನು ಸಹಿಸಲಾರನು. ಅವಳ ಚೀರಾಟದಿಂದ ಅವನು ನಡುಗಹತ್ತುತ್ತಾನೆ. "

· · · -ಗೆ ಬರೆದರು : "ತಮ್ಮ ಬಂಧುವರ್ಗದವರ ಒಂದೊಂದು ಶಬ್ದದಲ್ಲಿ ಅವರು ಅಸಂತುಷ್ಟರಿದ್ದದ್ದು ಕಂಡುಬರುವ ಹಾಗೆ ಅವರ ಮೇಲೆ ಪ್ರೇಮವನ್ನಿಡಬಾರದು. ಬಂಧುವರ್ಗದವರು ನಮ್ಮ ಸಂಗಡ ಅಸಂತುಷ್ಟರಾಗುವದೇ ಇಲ್ಲವೆಂಬ ಆತ್ಮವಿಶ್ವಾಸವು ನಮ್ಮೊಳಗಿರಬೇಕು. ಹೀಗಿಲ್ಲದಿದ್ದರೆ ನಾವು ಬಂಧುವರ್ಗದವರ ಸಂಗಡ ಅನ್ಯಾಯಮಾಡತೊಡಗುವೆವು."

ರೈಹಾನಾಳು ಸುಂದರ ಗಜಲ (ಪದ್ಯ)ನ್ನು ಕಳಿಸಿದ್ದಾಳೆ. ಅದರ ಕೊನೆಯಲ್ಲಿ ಹೀಗಿದೆ :

**"जफर उससे छूटके जो जस्त की।**
**तो ये देखा हमने कि वाकई एक कैद खुदीकी थी**
**न क़फस था, न कोई जाल था।"**

ಜಫರನು ಹೇಳುತ್ತಾನೆ : "'ಇದರಿಂದ ಪಾರಾಗಿ ಜಿಗಿದು ಹೊರಬಿದ್ದ ಕೂಡಲೆ ಇದು ಅಹಂಕಾರದ ಬಂಧನವಿತ್ತೆಂಬುದನ್ನು ನೋಡಿದೆನು. ಇದು ಯಾವದೊಂದು ಪಂಜರವಾಗಲಿ ಬಲೆಯಾಗಲಿ ಇದ್ದಿಲ್ಲ."

ಇದು ಎಷ್ಟೊಂದು ಯಥಾರ್ಥವಾಗಿದೆ !

ಇವತ್ತು ಸೇಠ · · · ರ ಪತ್ರ ಬಂತು. ಅದರಲ್ಲಿ ತಮ್ಮ ಸಂಪತ್ತನ್ನು ಬಿಡಲಿಕ್ಕೆ ತಂದೆಗೆ ಬರೆದ ಪತ್ರದ ನಕಲೂ ಮತ್ತು ಸಂಪತ್ತನ್ನು ಹಂಚಿಕೊಡಲಿಕ್ಕೆ ತಂದೆಗೆ ಸೂಚನೆಯನ್ನು ಕೊಟ್ಟ ಪತ್ರದ ನಕಲೂ ಜೊತೆಗೆ

೩-೯-'೩೨

ಇದ್ದವು. ಏನೂ ಆಗದವರಂತೆ ಕೇವಲ ಒಂದು ಸಾಲು ಬರೆದಿತ್ತು : "ಇದು ನಿಮಗೆ ಒಪ್ಪಿಯಾಗುವದೆಂದು ನಂಬಿದ್ದೇನೆ. ೧೯೨೧ ರಲ್ಲಿ ನೀವು ನಮ್ಮಲ್ಲಿ ಬಂದಾಗ ಈ ವಿಷಯ ಕುರಿತು ನಾನು ನಿಮ್ಮ ಸಂಗಡ ಮಾತಾಡಿದ್ದೆನು ಮತ್ತು ನಿಮ್ಮ ಸಲಹೆಯಾದರೂ ಹೀಗೆಯೇ ಇತ್ತು." ತಂದೆ ಮಕ್ಕಳ ಪತ್ರಗಳು ಹೃದಯದ್ರಾವಕವಾಗಿವೆಯಲ್ಲದೆ ಎಲ್ಲ ವಿಷಯವೂ ಒಂದು ವೀರಕಾವ್ಯವಾಗಿದೆ. ಹಿಂದುಸ್ತಾನದ ಸ್ವಾತಂತ್ರ್ಯದ ಇತಿಹಾಸದಲ್ಲಿ ಇದು ಅಮರವಾಗುವದು. ಇದು ಒಂದು ಪ್ರತಿಜ್ಞಾಪಾಲನೆಯ ಅನುಪಮ ದೃಷ್ಟಾಂತವಾಗಿದೆ. · · · ಹೇಳುತ್ತಾರೆ : "ನಾನೊಬ್ಬ ಕ್ಷುಲ್ಲಕ ವ್ಯಕ್ತಿ. ಆದರೆ ಆಯುಷ್ಯದಲ್ಲಿ ಪ್ರತಿಜ್ಞಾಭಂಗವನ್ನು ಎಂದೂ ಮಾಡಿಲ್ಲ. ಇದುವರೆಗೆ ಪ್ರಹ್ಲಾದನಂಥ ಸಂಬಂಧವಿದೆ. ಇಂದು ರಾಮಚಂದ್ರನ ಹಾಗೆ ತಂದೆಯ ಆಜ್ಞೆಯಂತೆ ಸರ್ವಸ್ವವನ್ನು ತ್ಯಾಗಮಾಡುತ್ತೇನೆ." ಜೇಲಿನಿಂದ ಬಿಡುಗಡೆಯಾದ ಮೇಲೆ ರೈತರನ್ನು ಕರೆಯಿಸುವದು, ಅವರೆಲ್ಲರ ಯೋಗಕ್ಷೇಮ ಕೇಳುವದು ಮತ್ತು ತಂದೆಯು ಲಾವಣಿಯನ್ನು ತೆಗೆದುಕೊಂಡ ಕಾರಣಕ್ಕಾಗಿ

ಮನೆಯಲ್ಲಿ ಕಾಲಿಡದಿರುವದು ಇವು ಒಳ್ಳೇ ವೀರೋಚಿತವಾದ ಧರ್ಮಭಾವನೆಯನ್ನು ಸೂಚಿಸುತ್ತವೆ. ಅವರಿಗೆ ಬಾಪೂ ಹಿಂದಿಯಲ್ಲಿ ಪತ್ರ ಬರೆದರು : “ ನಿಮ್ಮ ತ್ಯಾಗಪತ್ರವು ಹೃದಯದ್ರಾವಕವಿದೆ. ತಂದೆಯವರದೂ ಹೀಗೇ ಇದೆ. ಅವರಿಗೆ ಬೇರೆ ಏನನ್ನೂ ಮಾಡುವದು ಸಾಧ್ಯವಿದ್ದಿಲ್ಲವೆಂದು ನನ್ನ ಅಭಿಪ್ರಾಯ. ಮೋಹ ಬಿಡುವದು ಸಾಮಾನ್ಯ ಮಾತಲ್ಲ. ಈ ಯುಗದಲ್ಲಿ ನವಯುವಕರಲ್ಲಿ ಉಂಟಾದ ತ್ಯಾಗಶಕ್ತಿಯನ್ನು ವೃದ್ಧರಿಂದ ಅಪೇಕ್ಷಿಸಲಾರೆವು. ನೀವು ಸರ್ವಸ್ವವನ್ನು ತ್ಯಾಗ ಮಾಡಿದ್ದು ಉಚಿತವೇ ಆಗಿದೆಯೆಂಬುದರಲ್ಲಿ ನನಗೆ ಸಂಶಯವಿಲ್ಲ. ’೨೧ ನೇ ಇಸ್ವಿಯ ಮಾತನ್ನು ನಾನು ಮರೆತಿದ್ದೆನು, ಈಗ ನೆನಪಾಯಿತು. ಇನ್ನು ನೀವು ಜನರೊಳಗೆ ಪ್ರೇಮವನ್ನು ಹೆಚ್ಚಿಸುವಿರೆಂದು ನನ್ನ ವಿಶ್ವಾಸವಿದೆ. ಇನ್ನು ತಂದೆಯವರು ಏನಾದರೂ ತ್ಯಾಗ ಮಾಡಿಯೇ ಮಾಡುವ ಸಂಭವವಿದೆ. ನಿಮ್ಮ ಹೃದಯದಲ್ಲಿ ಅವರ ಬಗ್ಗೆ ಅದೇ ಭಕ್ತಿಯು ಸ್ಥಿರವಾಗಿದ್ದುದು ಒಳ್ಳೆಯದಾಗಿದೆ. ಈ ತ್ಯಾಗದಲ್ಲಿ · · · ದೇವಿಯ ಸಹಾಯವಿತ್ತೆ ? ಅವಳು ಕಲಿತವಳಿದ್ದಾಳೆಯೆ ? ಅವರ ಶರೀರವು ದಿನದಿನವೂ ನೆಟ್ಟಗಾಗುತ್ತ ಹೋಗುವದೆಂದು ಆಶಿಸುತ್ತೇನೆ. ದೇವರು ನಿಮ್ಮ ಪಾವಿತ್ರ್ಯದಲ್ಲಿ ವೃದ್ಧಿಯನ್ನು ಮಾಡಲಿ. ಸರದಾರರೂ ಮಹಾದೇವರೂ ನಿಮಗೆ ಧನ್ಯವಾದಗಳನ್ನು ಕಳಿಸುತ್ತಿದ್ದಾರೆ. ತ್ಯಾಗಪತ್ರದ ವಿಷಯಕ್ಕೆ ನಾನು ಕೇಳಿದ್ದೆ ಆದರೆ ಇದರ ಬಗ್ಗೆ ನಾನು ಇಲ್ಲಿಂದ ಏನಾದರೂ ಬರೆಯುವದು ಯೋಗ್ಯವೆಂದು ತಿಳಿಯಲಿಲ್ಲ. ನಿಮ್ಮ ಪತ್ರವನ್ನು ನನ್ನವರೆಗೆ ಬರಗೊಟ್ಟದ್ದರಿಂದ ಇಷ್ಟು ಬರೆದಿದ್ದೇನೆ. ಈ ಪತ್ರವನ್ನು ವೃತ್ತಪತ್ರಕ್ಕೆ ಕಳಿಸಬಾರದೆಂದು ನನ್ನ ಸೂಚನೆ.”

ಇಂದು ಬೆಳಿಗ್ಗೆ ಕಾನಜಿಭಾಯಿಯವರ ಮಕ್ಕಳನ್ನು ಹಿಡಿದ ಸುದ್ದಿಯನ್ನು ಓದಿ ಬಾಪೂ ಅಂದಿದ್ದರು : “ ದೇಶದಲ್ಲಿ ಬಂದ ಜಾಡ್ಯವನ್ನು ನೋಡಿ ನನಗೆ ಹೇಗೆ ಆಶ್ಚರ್ಯವಾಗುವದಿಲ್ಲವೊ ಹಾಗೇ ಇಡೀ ಕುಟುಂಬದ ಬಲಿದಾನವಾಗುವದನ್ನು ನೋಡಿ ಸಹ ಆಶ್ಚರ್ಯವಾಗುವದಿಲ್ಲ. ಈ ಎರಡೂ ಮಾತುಗಳು ಇಂದು ಕಣ್ಣಿಗೆ ಬೀಳುತ್ತವೆ.”

ಇವತ್ತಿಗೆ ಬಾಪೂ ಮತ್ತು ವಲ್ಲಭಭಾಯಿಯವರಿಗೆ ಜೇಲಿನಲ್ಲಿ ಎಂಟು ತಿಂಗಳು ಪೂರ್ಣವಾದವು. ಬಾಪೂ ಹೇಳಿದರು : “ ಮಹಾದೇವನವು ಏಳು ಪೂರ್ಣವಾದವು.” ಇದರ ಮೇಲೆ ವಲ್ಲಭಭಾಯಿ ಹೇಳಹತ್ತಿದರು :
೪–೯–’೩೨ “ ಹೌದು, ಆದರೆ ‘ **पर्याप्तमिदं अेतेषाम्** ’। ನಮ್ಮದಂತೂ ‘ **अपर्याप्त** ’ ಕಾಲವಿದೆಯಲ್ಲವೆ ? ”

ರಂಗೂನದಿಂದ · · · ರು ಪತ್ರ ಬರೆಯುತ್ತಿದ್ದರು. ಅವೆಲ್ಲವುಗಳು · · ·

ರಿಂದ ಬರೆಸಲ್ಪಟ್ಟವುಗಳೆಂಬ ತಕರಾರು ಮೇಲಿಂದ ಮೇಲೆ ಅವರ ಬಗ್ಗೆ ಬರುತ್ತಿತ್ತು. ಪತ್ರಗಳು ತೀರ ಸ್ವಾಭಾವಿಕವಿದ್ದುದರಿಂದ ಬಾಪೂ ಈ ತಕರಾರನ್ನು ಒಪ್ಪುತ್ತಲೇ ಇದ್ದಿಲ್ಲ. ಕೊನೆಗೆ · · · ರದೇ ತಾರು ಬಂತು. ಅದರಲ್ಲಿ ಅವರು ಪತ್ರದ ಕರಡುಗಳೆಲ್ಲವೂ ತಮ್ಮವೇ ಇದ್ದವೆಂದು ತೋರಿಸಿದ್ದರು. ಬಾಪೂ ಈ ತಾರಿನ ನಕಲನ್ನು · · · ರಿಗೆ ಕಳಿಸಿ ಬರೆದರು : "ನಮ್ಮೆಲ್ಲರ ಮೇಲೆ ಬಹಳ ಪರಿಣಾಮ ವನ್ನು ಮಾಡಿದ ನಿಮ್ಮ ಪತ್ರಗಳೆಲ್ಲವೂ ಖೊಟ್ಟೆಯಿದ್ದವು. ನಿಜವಾಗಿ ನಿಮ್ಮವಿದ್ದಿಲ್ಲ. ಆದುದರಿಂದ ಅವುಗಳ ಬೆಲೆಯನ್ನು ಅಷ್ಟೆ ಕಟ್ಟಬಹುದಲ್ಲವೆ ? ಅಲ್ಲದೆ ಈ ಮಾತನ್ನು ನನ್ನಿಂದ ಬಚ್ಚಿಟ್ಟಿರಿ. ಈಗಾದರೂ ಈ ಪತ್ರಗಳಲ್ಲಿ ಮಾಡಿದ ಪ್ರತಿಜ್ಞೆಯನ್ನು ಪೂರ್ತಿ ಮಾಡಿರಿ !" ವಲ್ಲಭಭಾಯಿ ಹೇಳಿದರು : "ಈ ತಾರಿನ ನಕಲನ್ನು ಅವನಿಗೆ ಏತಕ್ಕಾಗಿ ಕಳಿಸುತ್ತಿದ್ದೀರಿ ? ಅವನಿಗೆ 'ನನ್ನ ಕಡೆಗೆ ಇಂಥ ತಕರಾರು ಬಂದಿದೆ, ಅದು ನಿಜವೆ ? ಈ ವಿಷಯದಲ್ಲಿ ನಿನಗೆ ಏನು ಹೇಳುವದಿದೆ?' ಎಂದು ಬರೆಯಿರಿ. ಇಷ್ಟರಿಂದ ಅವನು ಚನ್ನಾಗಿ ಸಿಕ್ಕುಬೀಳುವನು." ಬಾಪೂರಿಗೆ ಈ ಸೂಚನೆಯು ಒಪ್ಪಿಗೆಯಾಗಲಿಲ್ಲ. ಈ ಸೂಚನೆಯನ್ನು ಸ್ವೀಕರಿಸುವದರಲ್ಲಿ ಹಿಂಸೆಯು ತುಂಬಿತ್ತು. "ಮನುಷ್ಯನಿಗೆ ಸುಳ್ಳು ಮಾತಾಡಲಿಕ್ಕೆ ಸಂಧಿ ಕೊಡುವದು ಮತ್ತು ಸುಳ್ಳು ಮಾತಾಡಿಸುವದು ಹಿಂಸೆಯಾಗಿದೆ. ನಮಗೆ ಗೊತ್ತಿದ್ದಷ್ಟನ್ನು ಅವನ ಮುಂದೆ ಇಡಬೇಕು ಮತ್ತು ಅವನಿಗೆ ಸುಳ್ಳು ಮಾತಾಡಲಿಕ್ಕೆ ಸಂಧಿ ಕೊಡಬಾರದು. ಅಂದರೆ ಇದರಲ್ಲಿ ಸಂಪೂರ್ಣ ದಯೆಯಿದೆ. ಇದರಿಂದ ಅವನ ಮನಸ್ಸಿನ ಮೇಲೂ ಪರಿಣಾಮವಾಗದೆ ಇರಲಾರದು." ಬಾಪೂ ಮತ್ತು ವಲ್ಲಭಭಾಯಿಯವರ ಮನೋ-ವೃತ್ತಿಯೊಳಗಿನ ಭೇದವನ್ನು ತೋರಿಸಲಿಕ್ಕೆ ಇಷ್ಟೊಂದು ಸಣ್ಣ ಸಂಗತಿಯು ಸಾಕು.

ಈಹೊತ್ತು 'ಸಂಕಟ ಬಂದಾಗ ಹುಡಿಗೆಯರು ಏನು ಮಾಡಬೇಕು' ಎಂಬ ಲೇಖವನ್ನು ಬರೆದು ನನಗೂ ವಲ್ಲಭಭಾಯಿಯವರಿಗೂ ಅದನ್ನು ಲಕ್ಷ್ಯಪೂರ್ವಕ ವಾಗಿ ಓದಿ 'ಅದರಲ್ಲಿ ಯಾವದಾದರೂ ಮಾತು ಚರ್ಚಿಸಲಿಕ್ಕೆ ಯೋಗ್ಯವಾದದ್ದಿದ್ದರೆ ಚರ್ಚಿಸಲಿಕ್ಕೆ ಹೇಳಿದರು. ಇದರಲ್ಲಿ ಈ ಸೂಚನೆಗಳಿದ್ದವು: "ಪಾವಿತ್ರ್ಯವನ್ನು ರಕ್ಷಣೆಮಾಡಿಕೊಳ್ಳುವ ಮತ್ತು ಅಹಿಂಸೆಯನ್ನು ಇಚ್ಛಿಸುವ ಹುಡಿಗೆಯು ಪುಣ್ಯ-ಪ್ರಕೋಪವನ್ನು ಪ್ರಕಟಿಸಿ ದುಷ್ಟರ ಕಪಾಳಕ್ಕೆ ಹೊಡೆಯಬೇಕು. ಈ ಪ್ರಕಾರ ಸ್ವತಃ ಜಾಗ್ರತವಿದ್ದು ಅವನನ್ನು ಶುದ್ಧಿಯ ಮೇಲೆ ತರಬೇಕು, ಅವನನ್ನು ನಾಚಿಸಬೇಕು ಮತ್ತು ಅವನು ನಾಚದಿದ್ದರೆ ಸಾವನ್ನು ಆಲಂಗಿಸಲಿಕ್ಕೆ ಸಿದ್ಧರಿರಬೇಕು. ಕಪಾಳಕ್ಕೆ ಹೊಡೆಯುವದು ಹಿಂಸೆಯಲ್ಲ. ಆದರೆ ಅವನನ್ನು ಸಾವಧಾನ ಮಾಡುವ ದಕ್ಕಾಗಿ ಇರುವದರಿಂದ ಅಹಿಂಸಾಮಯವಾಗಿದೆ. ನನ್ನ ತೊಡಕು ಕಪಾಳಕ್ಕೆ ಹೊಡೆಯುವದರಲ್ಲಿ ಹಿಂಸೆಯಿದೆ ಎಂಬುದಾಗಿದ್ದಿಲ್ಲ—ನಾನಂತೂ ಇಂಥ ಸ್ಥಿತಿಯಲ್ಲಿ

ಕಪಾಳಕ್ಕೆ ಹೊಡೆಯುವದಕ್ಕಿಂತಲೂ ಕಠೋರ ಉಪಾಯಗಳನ್ನು ಹಿಂಸೆಯೆಂದು ತಿಳಿಯುವದಿಲ್ಲ.—ಆದರೆ ನನ್ನ ತೊಡಕು ಹೀಗಿತ್ತು : ‘ ಕಪಾಳಕ್ಕೆ ಹೊಡೆಯುವದರಿಂದ ಪರಿಚಿತ ಮನುಷ್ಯನ ಮೇಲೆ ಪರಿಣಾಮವಾಗಿಯೇ ತೀರುವದು. ಅವನು ನಾಚಿ ಕಾಲು ಬೀಳುವನು. ಆದರೆ ದುಷ್ಟನು ಶುದ್ಧಿಯ ಮೇಲೆ ಬರುವನೆ? ದುಷ್ಟನು ಕೈಕಾಲು ಕಟ್ಟಿ, ಬಾಯಲ್ಲಿ ಅರಿವೆ ತುರುಕಿ, ಅತ್ಯಾಚಾರ ಮಾಡಿದರೆ?’ ಬಾಪೂ ಬರೆದರು : “ ಹಾಗಾದರೆ ನಿನಗೆ ನನ್ನ ಲೇಖ ತಿಳಿಯಲಿಲ್ಲ. ಕಪಾಳಕ್ಕೆ ಹೊಡೆಯುವದ-ರಿಂದ ಎಚ್ಚರಿಕೆ ಬರುತ್ತದೆ, ನಿರ್ಭಯತೆ ಉಂಟಾಗುತ್ತದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಾಯುವ ಶಕ್ತಿ, ಬರುತ್ತದೆ. ದುಷ್ಟನು ತನ್ನ ವಿಚಾರದಂತೆ ಇಂತಹ ವಿರೋಧಗಳಿಗೆ ಸಿದ್ಧನಾಗಿರುವದೇ ಇಲ್ಲ. ಆದುದರಿಂದ ಅವನು ಹಿಂದೆ ಸರಿಯುವ ಸಂಭವವಿರುತ್ತದೆ. ಆದರೆ ನನ್ನ ದೃಷ್ಟಿಯಿಂದ ಇದು ಗೌಣವಾದುದು. ಆ ಸ್ತ್ರೀಯಲ್ಲಿ ಉತ್ಪನ್ನವಾಗುವ ಮನೋವೇಗವು ಸಾಯಲಿಕ್ಕೆ ಸಾಕು. ಆ ದುಷ್ಟನು ಅವಳೊಡನೆ ಹೋರಾಡುವ ಮೊದಲೇ ಅವಳು ಸಾವಿಗೆ ಶರಣು ಹೋಗಿರುತ್ತಾಳೆ. ಆದುದರಿಂದ ಅವಳಂತೂ ಮೃತಪ್ರಾಯಳಾಗಿ ಹೋರಾಡುತ್ತಾಳೆ ಹೊಡೆಯುವ ವಿಚಾರವೇ ಅವಳಲ್ಲಿ ಇರುವದಿಲ್ಲ. ಅವಳಿಗಂತೂ ಬರಿ ಬಾಯಿಮಾಡುವದಿರುತ್ತದೆ. ಪವಿತ್ರವಾಗಿರುವ ಮಾರ್ಗದಿಂದ ತಮ್ಮ ರಕ್ಷಣೆ ಮಾಡಿಕೊಳ್ಳಬೇಕೆನ್ನುವ ಭಗಿನಿಯರಿಗೆ ಎಲ್ಲ ಪ್ರಸಂಗಗಳಿಗಾಗಿ ಈ ಉಪಾಯವನ್ನು ಸೂಚಿಸುತ್ತೇನೆ. ಈ ಲೇಖವನ್ನು ಸ್ವಾನುಭವದಿಂದ ಬರೆದಿದ್ದೇನೆ. ನಾನು ಆ ಸಲಾಕಿಯನ್ನು ಹಿಡಿದಾಗ ಸಾಯಲು ಸಿದ್ಧನಾಗಿದ್ದೆ. ಹೊಡೆಯುವವನನ್ನು ಹೊಡೆಯುವದು ನನ್ನಿಂದಾಗುತ್ತಿದ್ದಿಲ್ಲ. ಆದರೆ ಅಲ್ಲಿಂದ ಕೈ ಜಾರಿದ್ದರೆ ನಾನು ಒದ್ದಾಡುತ್ತಿದ್ದೆ, ಬಹುತರ ಕಪಾಳಕ್ಕೆ ಹೊಡೆಯುತ್ತಿದ್ದೆ, ಹಲ್ಲಿನಿಂದ ಕಡಿಯುತ್ತಿದ್ದೆ, ಆದರೆ ಸಾಯುವ ವರೆಗೆ ಹೊಡೆದಾಡುತ್ತಿದ್ದೆ. ಇಷ್ಟು ಹೊಡೆದಾಡುತ್ತಿದ್ದರೂ ಅದರಿಂದ ಹಿಂಸೆಯಾಗುತ್ತಿದ್ದಿಲ್ಲ. ಯಾಕಂದರೆ ನಾನು ಅವನನ್ನು ಹೊಡೆಯಲು ಅಸಮರ್ಥನಾಗಿದ್ದೆ ಮತ್ತು ಹೊಡೆಯುವ ಉದ್ದೇಶವೂ ಇರಲಿಲ್ಲ. ನನ್ನ ಧ್ಯೇಯವು ಸಾಯುವದಾಗಿತ್ತು. ಅದಕ್ಕೂ ಆಳವಾಗಿ ಇಳಿದು ನೋಡಿದರೆ ಮುಕ್ತಿಯನ್ನು ಪಡೆಯುವದಿತ್ತು. ಇದೇ ಅಹಿಂಸೆಯ ಪರೀಕ್ಷೆ. ದುಃಖಕೊಡುವದು ಅದರ ಧ್ಯೇಯವಲ್ಲ ಮತ್ತು ಪರಿಣಾಮವೂ ದುಃಖದಾಯಕವಾಗುವದಿಲ್ಲ. ”

ನಾನು ಹೇಳಿದೆ : “ ಇದು ನನಗೆ ತಿಳಿಯಿತು. ಆದರೆ ಅತಿ ಪವಿತ್ರವಾಗಿರುವ ಹುಡಿಗೆಯು ಕೂಡ ಒಮ್ಮೆ ಕಪಾಳಕ್ಕೆ ಹೊಡೆದು ದುಷ್ಟನನ್ನು ಶುದ್ಧಿಯ ಮೇಲೆ ತರಲಾರಳು ಮತ್ತು ಬಹಳ ಜನರಿದ್ದರಂತೂ ಅಸಹಾಯಳಾಗಿ ಬಿಡುತ್ತಾಳೆ.”

ಬಾಪೂ : “ ನನಗೆ ಇದು ಅಸಂಭವವೆನಿಸುತ್ತದೆ. ಮೆಡಿಕಲ್ ಜ್ಯುರಿಸ್ ಪ್ರುಡೆನ್ಸ (ವೈದ್ಯಕಿ-ಕಾಯದೆ) ಕೂಡ ಇದು ಅಸಂಭವವೆಂದು ಹೇಳುತ್ತದೆ.

ಎಲ್ಲಿಯವರೆಗೆ ಸ್ತ್ರೀ 'ರಿಲ್ಯಾಕ್ಸ್' ಆಗುವದಿಲ್ಲವೊ (ಸಡಿಲು ಬಿಡುವದಿಲ್ಲವೊ), ಅಲ್ಲಿಯ ವರೆಗೆ ಕಾಮುಕನು ತನ್ನ ಕಾರ್ಯ ಸಾಧಿಸಲಾರನು. ಸಾಯಲಿಕ್ಕೆ ಸಿದ್ಧಳಾಗಿರುವದಿಲ್ಲ, ಆದುದರಿಂದ ಇಚ್ಛೆಯಿಲ್ಲದಿದ್ದರೂ 'ರಿಲ್ಯಾಕ್ಸ್' ಆಗುತ್ತಾಳೆ, ಉದಾಸೀನಳಾಗುತ್ತಾಳೆ ಮತ್ತು ಈ ರೀತಿ ಕಾಮುಕನ ವಶವಾಗುತ್ತಾಳೆ. ಪ್ರಾಣವನ್ನು ಕೈಯಲ್ಲಿ ಹಿಡಿದಿರುವವಳು ಬಂಧನಗಳನ್ನು ಹರಿದೊಗೆಯುತ್ತಾಳೆ ಇಲ್ಲವೆ ಸತ್ತು ಹೋಗುತ್ತಾಳೆ. ಇಷ್ಟು ಶಕ್ತಿಯು ಪ್ರತಿಯೊಂದು ಪ್ರಾಣಿಯಲ್ಲಿದೆ. ನಿಜ ಸಂಗತಿಯೆಂದರೆ ಬದುಕುವ ಆಶೆ ಬಹಳವಾಗಿರುತ್ತದೆ. ಅದರಿಂದ ಸಾಯುವ ಸ್ಥಿತಿ ಬರುವಷ್ಟು ಶಕ್ತಿಯನ್ನು ಮನುಷ್ಯನು ಉಪಯೋಗಿಸುವದೇ ಇಲ್ಲ. ಇಷ್ಟು ಶಕ್ತಿಯನ್ನು ಉಪಯೋಗಿಸುವ ಸ್ತ್ರೀ ಒಬ್ಬನೊಡನೆ ಹೋರಾಡುವಾಗ ಅವಳಲ್ಲಿ ಪಾವಿತ್ರ್ಯದ ಭಾವನೆಗಳು ಉಕ್ಕೇರಿ ಬರುವವು ಮತ್ತು ಅವಳು ತನ್ನ ಸರ್ವಶಕ್ತಿಯನ್ನು ಉಪಯೋಗಿಸುವಳು."

ನಾನು : "ಇಷ್ಟು ಆತ್ಮಶಕ್ತಿಯುಳ್ಳವಳಿಗೆ ಕಪಾಳಕ್ಕೆ ಹೊಡೆಯುವದನ್ನು ಸೂಚಿಸುವದು ಅವಶ್ಯವಿಲ್ಲ. ಅವಳಿಗೆ ಒಂದಿಲ್ಲೊಂದು ಉಪಾಯ ಹೊಳೆಯುವದು."

ಬಾಪೂ : "ಇವೆಲ್ಲವನ್ನು ನಾನು ಮಾತಾಡಿದಾಗಲೇ ತಿಳಿಸಬಲ್ಲೆ."

ಶ್ರೀಮತಿ ಸತ್ಯವತಿ ಚಿದಂಬರ ಎಂಬ ಒಬ್ಬ ಭಗಿನಿಯು ತಾನು ಹಿಂದೀ ಕ್ರಿಶ್ಚಿಯನ್ನಳೆಂದು ಹೇಳಿ ಬರೆದಿದ್ದಾಳೆ :

"You will be far greater if you accepted Him and tried to be a true Christian. It is for the sake of India you love that I plead with you to give Jesus a chance in your heart and in your life. Christ is waiting with outstretched arms to accept India. You cannot be an orthodox Hindu and follow the principles of Jesus as given in the sermon on the Mount. Jesus is the only Savior of the world."

"ನೀವು ಕ್ರಿಸ್ತನನ್ನು ಒಪ್ಪಿದರೆ ಮತ್ತು ಅಚ್ಚ ಕ್ರಿಶ್ಚಿಯನ್ನರಾಗಲಿಕ್ಕೆ ಯತ್ನಿಸಿದರೆ ಈಗಿದ್ದುದಕ್ಕಿಂತಲೂ ಹೆಚ್ಚು ಶ್ರೇಷ್ಠರಾಗುತ್ತೀರಿ. ನೀವು ಪ್ರೀತಿಸುವ ಹಿಂದುಸ್ಥಾನದ ಸಲುವಾಗಿಯೇ ನೀವು ನಿಮ್ಮ ಹೃದಯದಲ್ಲಿ, ಜೀವನದಲ್ಲಿ ಕ್ರಿಸ್ತನಿಗೆ ಸ್ಥಾನ ಕೊಡಿರೆಂದು ನಾನು ಪ್ರತಿಪಾದಿಸುತ್ತೇನೆ. ಹಿಂದುಸ್ಥಾನವನ್ನು ಬರಮಾಡಿಕೊಳ್ಳಲು ಕ್ರಿಸ್ತನು ಕೈಚಾಚಿ ಕಾಯುತ್ತಿದ್ದಾನೆ. ಸನಾತನಿ ಹಿಂದುವಾಗಿದ್ದು ನೀವು ಕ್ರಿಸ್ತನ ಗಿರಿಪ್ರವಚನದಲ್ಲಿರುವ ತತ್ವಗಳನ್ನು ಆಚರಣೆಯಲ್ಲಿ ತರಲಾರಿರಿ. ಕ್ರಿಸ್ತನೊಬ್ಬನೇ ಜಗತ್ತಿನ ಕಲ್ಯಾಣಕರ್ತನು."

ಇವರಿಗೆ ಬಾಪೂ ಕಠೋರ ಉತ್ತರ ಬರೆದರು:

"Dear Sister,

I have your letter. Why do you think that the truth lies only in believing in Jesus as you do? Again why do you think that an orthodox Hindu cannot follow out the precepts of the Sermon on the Mount? Are you sure of your knowledge of an orthodox Hindu? And then are you sure again that you know Jesus and His teachings? I admire your zeal but I cannot congratulate you upon your wisdom. My fortyfive years of prayer and meditation have not only left me without the assurance of the type you credit yourself with, but have left me humbler than ever. The answer to my prayer is clear and emphatic that God is not encased in a safe to be approached only through a little hole bored in it, but that He is open to be approached through billions of openings by those who are humble and pure of heart. I invite you to step down from your pinnacle where you have left room for none but yourself. With love and prayer.

Yours,
M. K. G."

" ಪ್ರಿಯ ಭಗಿನಿ,

ನಿಮ್ಮ ಪತ್ರ ಮುಟ್ಟಿತು. ಕ್ರಿಸ್ತನಲ್ಲಿ ನಿಮ್ಮಂತೆ ವಿಶ್ವಾಸವಿಡುವದರಲ್ಲಿಯೇ ಸತ್ಯವಿದೆಯೆಂದು ಏಕೆ ತಿಳಿಯುತ್ತೀರಿ? ಮತ್ತು ಗಿರಿಪ್ರವಚನದ ಸಿದ್ಧಾಂತಗಳನ್ನು ಸನಾತನಿ ಹಿಂದುವು ಪಾಲಿಸಲಾರನೆಂದು ಏಕೆ ಭಾವಿಸುತ್ತೀರಿ? ಸನಾತನಿ ಹಿಂದುವಿನ ಅರ್ಥವು ಸರಿಯಾಗಿ ತಿಳಿದಿದೆಯೆಂದು ನಿಮಗೆ ವಿಶ್ವಾಸವಿದೆಯೆ? ಮತ್ತೆ ಕ್ರಿಸ್ತನನ್ನೂ ಅವನ ಉಪದೇಶವನ್ನೂ ಸರಿಯಾಗಿ ತಿಳಿದುಕೊಂಡಿರುವಿರೆಂದು ವಿಶ್ವಾಸವಿದೆಯೆ? ನಿಮ್ಮ ಉತ್ಸಾಹವನ್ನು ಸ್ತುತಿಸುತ್ತೇನೆ ಆದರೆ ನಿಮ್ಮ ಜ್ಞಾನಕ್ಕಾಗಿ ನಿಮ್ಮನ್ನು ಅಭಿನಂದಿಸಲಾರೆ. ನಾಲ್ವತ್ತೈದು ವರ್ಷ ಪ್ರಾರ್ಥನೆ ಮತ್ತು ಧ್ಯಾನ ಮಾಡಿದ ನಂತರವೂ ನಿಮ್ಮಂತಹ ವಿಶ್ವಾಸವು ನನ್ನಲ್ಲಿ ಬಂದಿಲ್ಲ, ಆದರೆ ಎಂದಿಗಿಂತಲೂ ಹೆಚ್ಚು ನಮ್ರನಾಗಿದ್ದೇನೆ. ನನ್ನ ಪ್ರಾರ್ಥನೆಗೆ ಸ್ಪಷ್ಟ ಮತ್ತು ಸಬಲ ಉತ್ತರವು ದೊರೆತಿದೆ: ದೇವರು ಸಂದುಕದಲ್ಲಿ ಮುಚ್ಚಿಟ್ಟು ಅದರಲ್ಲಿ ಮಾಡಿದ ಒಂದು ಕಿಂಡಿಯಿಂದ ದರ್ಶನ ತಗೆದುಕೊಳ್ಳುವಂತಹ ವಸ್ತುವಲ್ಲ. ಆದರೆ ನಮ್ರ ಮತ್ತು ಶುದ್ಧರಿದ್ದವರಿಗೆ ಕೋಟ್ಯಾಂತರ ಕಿಂಡಿಗಳಿಂದ ದರ್ಶನ ಕೊಡುತ್ತಾನೆ. ಇನ್ನಾರಿಗೂ ಸ್ಥಳವಿಲ್ಲದಂತೆ

ನೀವೊಬ್ಬರೇ ಕುಳಿತಿರುವ ಶಿಖರದ ತುದಿಯಿಂದ ಕೆಳಗೆ ಇಳಿದು ಬರಲಿಕ್ಕೆ ನಿಮಗೆ ಹೇಳುತ್ತೇನೆ. ನಿಮ್ಮನ್ನು ಪ್ರೀತಿಸುವ ಮತ್ತು ನಿಮಗಾಗಿ ಪ್ರಾರ್ಥಿಸುವ,

ನಿಮ್ಮ,

ಮೋ. ಕ. ಗಾಂಧೀ, ”

· · · ರಿಗೆ ಬರೆಯಿಸಿದರು : “ ನಾನು ನಿಮ್ಮಂತೆ ಸೋತು ಕೂಡುವದಿಲ್ಲ. ಆದರೆ ಕಲ್ಲಿಗಿಂತ ಕಲ್ಲಾದ ಹೃದಯವನ್ನು ಕೂಡ ಈಶ್ವರನು ಕರಗಿಸುತ್ತಾನೆಂದು ಆಶಿಸುತ್ತೇನೆ ಮತ್ತು ಇದಕ್ಕಾಗಿ ಪ್ರಯತ್ನಿಸುತ್ತೇನೆ. ”

ॐ शाम्

# ಸೂಚಿ ಪತ್ರಿಕೆ

[ಗಾಂಧೀಜಿ, ಸರದಾರ ವಲ್ಲಭಭಾಯಿ ಪಟೇಲ ಮತ್ತು ಮಹಾದೇವಭಾಯಿ ದೇಸಾಯಿ ಈ ಮೂವರ ಉಲ್ಲೇಖವು ಪುಸ್ತಕದಲ್ಲಿ ವೇಲಿಂದ ಮೇಲೆ ಬಹುತರ ಪ್ರತಿಯೊಂದು ಪುಟದ ಮೇಲೆ ಬರುತ್ತದೆ. ಆದುದರಿಂದ ಅವರ ಹೆಸರುಗಳನ್ನು ಇಲ್ಲಿ ಕೊಟ್ಟಿಲ್ಲ.]


ಅಕಬರ ಅಲ್ಲಿ ೧
ಅಜಮೀರ ೧೪೨
ಅಂಜುಮನೆ ಹಿಯಾಮತೆ ಇಸ್ಲಾಮ ೨೫೯, ೩೧೧
ಅರ್ಜುನ ೧೨೯, ೧೫೮, ೪೮೭
'ಅಂಟು ಧಿಸ್ ಲಾಸ್ಟ' ೬೧
'ಅಡ್ವಾನ್ಸ' ೨೩
'ಅಡ್ಯಾಮ್ಸ ಪೀಕ ಟು ಎಲಿಫಂಟಾ' ೭, ೨೦, ೩೩
ಅಡ್ವಾನಿ, ಮೇಜರ ೪೮೨
'ಅದರ ಸಾಯಿಡ ಆಫ್ ಶೀಲ್ಡ', (ಥಾಲಿನ ಎರಡನೆಯ ಮಗ್ಗಲು) ೧೩೭
ಅಧ್ಯಾಪಕ ೨೬೦
'ಅನಘ' ೩೪, ೩೬, ೪೦
ಅನಂತಪುರ ೨೯೦
ಅನಸಾರಿ ೪೪೭
'ಅನಾಸಕ್ತಿಯೋಗ' ೩೩೩
'ಅನುಕರಣ' ೩೭೦
ಅನೇಕ ೪೬೭
ಅಬ್ಬಾಸದಾದಾ ೨೯೬
ಅಬೂ ೨೦೭
ಅಂಬೇಡಕರ ೮೨, ೪೬೧
ಅಮೀನಾ ೯೩
ಅಮೀರಅಲ್ಲಿ ೪೧೬
ಅಮೃತ ಉಲ್ ೭೮, ೪೪೮
ಅಮೇರಿಕಾ ೪೪, ೧೧೧, ೨೫೧, ೩೨೨, ೩೨೮, ೪೬೧
ಆಯರ್ಲಂಡ ೬೪
ಆಯರ್ವಿನ್, ಲಾರ್ಡ ೬, ೫೬, ೧೫೯, ೧೬೩, ೨೫೩, ೩೯೩, ೪೭೧
ಅರಬಸ್ತಾನ ೧೯೬, ೪೧೬
ಅರವಿಂದ, ಯೋಗಿ ೧೫, ೮
ಅರುಣ ೨೦, ೮
ಅಲಹಾಬಾದ ೩೨, ೮
ಅಲ್ಫಾಂರ್ಸೊ ೩೦೭
ಅಲ್ಫಾರುಕ್ ೪೧೪
ಅಲೆಕ್ಝಾಂಡರ ಹೊರೆಸ ೩೪೮
ಅಲೆಪ್ಪೊ ೯೪
ಅಶೋಕ ೨೫೩
ಅಸ್ಪೃಶ್ಯ ೪, ೬, ೮, ೭೮, ೧೬೦, ೨೪೫, ೨೫೧, ೨೮೪, ೩೦೧, ೩೪೫, ೪೧೭, ೪೬೧
ಅಹಮದಾಬಾದ ೫೧, ೪೫೩, ೪೮೧

ಆಕ್ಸಫರ್ಡ ೬೬, ೧೩೭, ೧೫೩, ೩೨೮
ಆಕ್ಸಫರ್ಡ ಯುನಿವ್ಹರ್ಸಿಟಿ ೪೧, ೧೫೩, ೧೬೧
ಆಗಾಖಾನ ೧೬೨, ೩೬೨

ಆ್ಯಂಡರ್ಸನ್, ಜಾನ್ ೭೯
ಆ್ಯಂಡ್ರೂಜ ೩೬, ೪೯
ಆತ್ಮಕಥೆ ೪೧, ೮೧, ೧೦೭, ೧೪೦, ೧೬೧, ೩೦೫, ೩೧೧
ಆರ್ಥರ ರೋಡ ೪೯೦
ಆನಂದಶಂಕರ ೨೯೭, ೨೯೮
ಆನಂದಿ ೨೫೯, ೪೪೮
ಆಪ್ಟೆ, ಹರಿನಾರಾಯಣ ೮೨
ಆಫ್ರಿಕಾ, ದಕ್ಷಿಣ ೮, ೧೫, ೧೭, ೨೦, ೨೬, ೩೦, ೮೦, ೯೨, ೯೮, ೧೩೮, ೧೪೦, ೨೮೬, ೩೦೨, ೪೦೧, ೪೧೬, ೪೯೧
ಆರೋಕಿಯಾ ೩೭
ಆಲ್ಫ್ರೆಡ್ ಕ್ರಿಪ್ಸ, ಸರ್ ೫೬
ಆಶ್ರಮ ೧೩, ೩೯, ೪೨-೩, ೫೯, ೬೧, ೮೫, ೮೮, ೧೧೦, ೧೨೮, ೧೩೪, ೧೩೮, ೧೪೬, ೧೬೬, ೧೭೦, ೧೭೫, ೧೭೭-೮, ೧೮೯, ೧೯೯, ೨೧೦, ೨೨೦, ೨೨೪, ೨೩೦, ೨೪೪, ೨೬೧, ೨೭೪, ೨೮೫, ೩೦೫, ೩೧೫, ೩೨೦-೧, ೩೫೨, ೪೦೧, ೪೪೨, ೪೬೭
ಆಶ್ರಮದ ಇತಿಹಾಸ ೧೧೨, ೧೯೦
ಆಶ್ರಮ, ವೇಡಚಿ ೨೨೭
ಆಸಾಮ ೧೨೯
ಆಸ್ಟ್ರಿಯಾ ೨೧೨
ಆಸ್ಟ್ರೇಲಿಯಾ ೩೦, ೧೧೧
'ಆ್ಯಸ್ಟ್ರನಾಮಿ ವೃಯಿದಾವುಟ ಟೆಲಿ-
ಸ್ಕೋಪ್' ೨೨೧

ಇಕಬಾಲ ೫೧-೨, ೧೯೫, ೧೯೭
ಇಕ್ಸ್ಪೋರಿನ್‌ಬರ್ಗ ೭೭
ಇಂಗ್ಲಂಡ ೪೪, ೬೩, ೬೪, ೧೩೬-೭, ೧೭೮, ೨೨೨, ೨೪೬, ೨೮೭, ೩೪೮, ೪೬೪
ಇಚ್ಚಾ ೪೩೦
ಇಟಲಿ ೨೨೦, ೪೩೪
'ಇಂಡಿಯನ್ ಓಪೀನಿಯನ್' ೨೬, ೪೧೬
'ಇಂಡಿಯನ್ ಸೋಶಿಯಾಲಿಸ್ಟ ರಿಫಾ-
ರ್ಮರ' ೨೧೬
ಇಂಡಿಯಾ ಆಫೀಸ ೨೨, ೩೧೫
ಇಂಡಿಯಾ ಲೀಗ ೪೯೦
ಇಂದುಲಾಲ ೨೪೧
ಇನ್‌ಸೀನ ಜೇಲ ೨೩
ಇಮರ್ಸನ್ ೬, ೧೨, ೫೫
ಇಮಾಮಸಾಹೇಬ ೧೯, ೨೯, ೮೪, ೩೦೫
ಇರ್ಕ್ಯುಟಸ್ಕ ೬೬
'ಇಲ್‌ಸ್ಟ್ರೇಟೆಡ್ ವೀಕ್ಲಿ' ೧೦
ಇಸಾಪುರ—ವಿಸಾಪುರ ನೋಡಿರಿ
ಇಸ್ಲಾಮ ೧೧೬, ೩೪೩, ೩೫೦, ೩೮೨

ಈಶೋಪನಿಷತ್ ೪೫, ೩೯೫, ೪೧೮, ೪೪೩, ೪೭೬
ಈಸ್ಟ ಇಂಡಿಯಾ ಕಂಪನಿ ೧೧೧

ಉಚ್ಚೈಃಶ್ರವ ೪೮೪
ಉಪನಿಷತ್ ೮೮, ೯೯, ೨೧೪, ೨೯೬
ಉಮಾ ಕುಂದಾಪುರ ೨೪೬
ಉರ್ಮಿಲಾ ೨೮, ೧೪೨
'ಉಷಾ' ೯೬
ಉಸ್ಮಾನಿಯಾ ವಿಶ್ವವಿದ್ಯಾಲಯು ೪೪೩

ಎಡ್ಗರ ವ್ಯಾಲೇಸ ೯
ಎಡಿ, ಶ್ರೀಮತಿ ೮೭
ಎಡಿ, ಶೇರವುಡ್ ೮
ಎಡಿಥ್, ರಾಬರ್ಟ ವೊಟೊ ೯೪
ಎನಿಟಾ ೩೨೩
ಎಬರಡೀನ, ಲೇಡಿ ೨೬೪
ಎಮಹರ್ಸ್ಟ ೪೪
ಎರಿಸ್ಟಾರ್ಶಿ, ರಾಜಕುಮಾರಿ ೧೭೯, ೨೯೪
ಎಲ್. ರಿವ್ಹ್ಯೂ ೨೪೧
ಎಲಿಜಾಬೆಥ, ಗ್ರ್ಯಾಂಡ ಡಚೆಸ್ ೬೭, ೭೩, ೭೪, ೮೫
ಎಲಿಸ, ರಾಜಕುಮಾರಿ ೬೭

ಎಲ್ವಿನ್, ಫಾದರ ೧೪೨, ೧೭೯, ೨೨೪, ೨೬೪
ಎವಲೀನ, ರೆಂಚ ೩೭
ಎಸ್ಥರ ೨೩೦, ೩೪೮, ೩೭೨
ಎಸ್ಪ್ಲನೆಡ ಕೋರ್ಟ ೪೯೦

ಏಸು ೭೬, ೧೩೭. ೩೮೯

ಒಟಾವಾ ೨೭೪, ೪೦೪
ಓರಿಸಾ ೨೯೦

ಕರ್ಕೋಟಕ ೨೯೬
ಕರ್ನಾಟಕ ೯೩, ೧೯೧, ೪೩೫
ಕನ್ಯಾಕುಮಾರಿ ೨೫೨
ಕನ್ಫ್ಯೂಶಿಯಸ್ ೩೮೬
ಕನ್ಹೈಯಾಲಾಲ ೩೫೫
ಕಪಿಲ ೪೦೨
ಕಮಲಾವತಿ ೪೬೪
ಕರಸ್ಸಿ ಕಮಿಶನ್ ೪೪೩
ಕರಮಚಂದ ೧೮೩
ಕರಮಸದ ೪೫೩
ಕರಾಚಿ ೮೦, ೧೪೨
ಕರಾಡ ೨೨೭
ಕಲಕತ್ತಾ ೩೭, ೧೫೯, ೩೩೨
ಕಲ್ಯಾಣ ೨೧೦, ೨೯೯
ಕಂಸ ೨೫೩
ಕಸ್ತೂರಬಾ-ಗಾಂಧೀ ಕಸ್ತೂರಬಾ ನೋಡಿರಿ
ಕಾಗಾವಾ ೪೩೧
ಕಾಂಗೋ ೬೪
ಕಾಂತ ೪೮೯
ಕಾನಜಿಭಾಯಿ ೪೯೪
ಕಾನಡಾ ೨೩೩,೨೫೪
ಕಾನಪುರ ೧೯೮, ೨೦೬, ೨೭೪
ಕಾರ್ಪೆಂಟರ, ಎಡ್ವರ್ಡ ೭
ಕಾಲನ್‌ಬಾಕ್ ೧೪೦, ೧೫೪, ೩೩೦
ಕಾಳಿಘಾಟ ೪೬೧
ಕಾಲಿನಾಥ ರೇ ೫೫
ಕಾಲೀವ ೬೯, ೭೧
ಕಾಲೇಲಕರ, ಕಾಕಾಸಾಹೇಬ ೫, ೮, ೧೬-೭, ೪೧, ೫೩, ೯೧, ೧೨೩, ೧೪೧-೨, ೧೪೮, ೧೭೩, ೩೦೦, ೪೦೪, ೪೮೧
ಕ್ಲಾಯಿವ್ಹ ೧೧೧
ಕ್ಯಾನಿಂಗ ೧೯೨
'ಕ್ರಾನಿಕಲ್' ೨೩, ೩೧, ೫೬, ೪೪೩
ಕ್ರಾಸವೆಲ್ ೩೧೭
ಕಿಚನ ೮, ೧೫
ಕೀರ್ತಿಕರ ೨೪೮, ೨೫೧
ಕಿಶೋರಲಾಲಜಿ ಮಶ್ರೂವಾಲಾ ೨೮೩,೩೩೦
ಕಿಸನ ೮೯
ಕಿಸಾ ಗೋತಮಿ ೧೯೫
ಕಿಂಗಸ್ಲೇ ೭
ಕಿಂಗ್ಸ ಕಾಲೇಜ ೫೬
ಕ್ರಿಶ್ಚಿಯನ್ ಸಾಯಿನ್ಸ ೮೬
ಕ್ರಿಸ್ತ—ಕ್ರೈಸ್ತ ೪೬, ೫೦, ೫೪, ೭೦, ೮೬, ೯೭, ೧೯೨, ೨೩೩, ೨೯೩, ೩೨೪, ೩೮೪, ೪೫೦, ೪೯೭
ಕ್ರಿಸ್ತನ ಗಿರಿಪ್ರವಚನ ೪೯೭
ಕ್ವೇನ ೧೩೬, ೧೯೮
ಕುಮುದ ೪೨
ಕುರಾನ ೧೧೬
ಕುರೇಶಿ ೧೧೬
ಕುಸುಮ ೧೧೭, ೧೬೮
ಕೂಪರ ೨೪೬
ಕ್ರೂಗರ ೩೦
ಕೃಷ್ಣ, ಭಗವಾನ್ ೫೪, ೬೨, ೧೨೯, ೧೫೭, ೧೮೦, ೨೫೩, ೪೪೯
ಕೃಷ್ಣದಾಸಜಿ ೧೦೫, ೨೭೧, ೩೫೦, ೪೩೪
ಕೆಂಟ ೨೬೭
ಕೆಂಟರ್‌ಬರಿ ೪೭೧
ಕೆಡಲ್ ಕಮೀಶನರ ೪೫, ೫೪
ಕೆಂಡೆಲ್, ಪೆಟ್ರೋಶಿಯಾ ೨೩೬

ಕ್ರೆಮ್ಲಿನ್ ೬೮, ೭೬
ಕ್ಲೆಟನ್ ೩೭೪
ಕೇರಳ ೧೯೨
ಕೇಶವಚಂದ್ರ ಸೇನ ೨೩೯
ಕೇಷೂ ೩೧೯
ಕೇಂಬ್ರಿಜ್ ೬೬
'ಕ್ರೇಡಲ್ ಟೇಲ್ಸ' ೮
ಕೈರಾನ ೪೯೩
ಕೈಸರಲಿಂಗ ೩೨೫, ೩೪೩, ೩೭೬
ಕೋಠಾವಾಲಾ ೪೩೦
ಕೋನೀ, ಕ್ಯಾಪ್ಟನ್ ೬೬
ಕೋಲಬೆಕ್, ಅ್ಯಡ್ಮಿರಲ್ ೬೬, ೬೭
ಕೋಸಂಬಿ, ಧರ್ಮಾನಂದ ೩೬
ಕೋಹಾಟ ೨೦೭
ಕ್ರೋಜಿಯರ ೨೮, ೮೪

ಖಾದಿ ಪ್ರತಿಷ್ಠಾನ ೧೫೩
ಖುರಶೇದ ೪೪೪
ಖೇಡಾ ೯೨, ೧೪೨

ಗಂಗಾಜಿ ೩೭೫
ಗಂಗಾದೇವಿ ೧೯೯, ೨೩೦
ಗಂಗಾಬಹನ ೨೪ ೯೩, ೧೭೦
ಗಂಗಾಬಹನ (ಹಿರಿಯ) ೧೭೦
ಗಾಂಧೀ, ಕಸ್ತೂರಬಾ ೧೧, ೨೧, ೨೩, ೮೦, ೯೦, ೧೦೯, ೧೫೪, ೨೫೬, ೩೦೫, ೩೭೧, ೪೨೩, ೪೪೬, ೪೬೮, ೪೮೩
ಗಾಂಧೀ, ಛಗನಲಾಲ ೨೫೮, ೨೯೨, ೪೨೯
ಗಾಂಧೀ, ದೇವದಾಸ ೪೪, ೫೩, ೧೩೬, ೧೯೦, ೨೨೪, ೨೭೨, ೨೮೫, ೩೦೩, ೩೨೨, ೩೪೨, ೩೭೧
ಗಾಂಧೀ, ಪ್ರಭುದಾಸ-ಪ್ರಭುದಾಸ ನೋಡಿರಿ
ಗಾಂಧೀ, ಮಣಿಲಾಲ ೯೮, ೧೬೦, ೨೫೮
ಗಾಂಧೀ, ಮಗನಲಾಲ ೯೮, ೧೬೦, ೨೫೮, ೪೩೧, ೪೪೧
ಗಾಂಧೀ, ರಾಮದಾಸ ೩೯೭, ೪೧೧, ೪೩೨, ೪೪೪
ಗಾಂಧೀ, ಹರಿದಾಸ ೧೬, ೨೨, ೨೪, ೨೭, ೫೩
ಗಾಂಧೀ, ಹರಿಲಾಲ—ಹರಿಲಾಲ ನೋಡಿರಿ.
ಗ್ರ್ಯಾಂಡ ಡಚೆಸ್ ೨೫, ೬೭, ೭೦, ೮೫
ಗ್ರ್ಯಾಂಡ ಡ್ಯೂಕ ೬೭, ೬೯-೭೧, ೭೩
ಗಿಜುಭಾಯಿ ೯೫
ಗಿಬನ ೨೩೫, ೨೭೩
ಗಿರಿಧಾರಿ ೧೪೧, ೧೬೮
ಗ್ರಿಫಿಥ ೧೯, ೨೧೫
'ಗೀತಗೋವಿಂದ' ೨೪೧
'ಗೀತಾ' ೧೩, ೨೧, ೩೪, ೫೭, ೮೫, ೧೨೯, ೧೫೭, ೧೭೬, ೧೯೩, ೨೦೩, ೨೨೫, ೨೩೬, ೨೬೫, ೨೮೧, ೨೮೭, ೩೩೭, ೩೪೯, ೩೮೨, ೩೯೪, ೪೨೭, ೪೭೭
'ಗೀತಾಬೋಧೆ' ೩೫೬, ೩೭೨
'ಗೀತಾರಹಸ್ಯ' ೪೫೫
ಗುಜರಾತ ೭೮, ೧೧೧, ೧೫೫, ೪೧೦
ಗುಣವಂತರಾವ ದೇಸಾಯಿ, ರಾ. ಸಾ. ೧
ಗುಪ್ತ, ಮೈಥಿಲೀಶರಣ ೨೮, ೩೪, ೩೬, ೧೪೨
ಗುರು ನಾನಕದೇವ ೧೫೮, ೧೬೦
ಗುಲಚೇನ ಲುಮ್ಸಡೆನ್, ಮಿಸ್ ೨೩೩
ಗೇಟೆ ೫೭, ೫೮, ೨೭೭, ೩೦೫
ಗೇಬ್ರಿಯಲ್ ೪೧೬
ಗ್ರೆ, ಲಾರ್ಡ ೩೧೮
ಗ್ರೆಗ್ ೩೬
ಗೋಕುಲದಾಸ ತೇಜಪಾಲ ಹಾಸ್ಪಿಟಲ ೧೫೧
ಗೋಖಲೆ, ಗೋಪಾಲಕೃಷ್ಣ ೨೬, ೮೨, ೩೬೮
ಗೋಧ್ರಾ ೪೬
ಗೋರಖಪುರ ೨೭೨, ೨೮೬
ಗೋವರ್ಧನರಾಮ ೪೨
ಗೋಸೀಬಹನ ೨೨೮
ಗೌಡಪಾದಾಚಾರ್ಯ ೩೮೧
ಗೌರೀಶಂಕರ ೪೦೪

ಘುಮಲಿ ೨೨೨

ಚರ್ಚಿಲ್ ೨೨೨
ಚಟರ್ಜಿ, ಅತುಲ ೨೭೪
ಚಟರ್ಜಿ, ರಾಮಾನಂದ ೪೪, ೩೬೧
ಚರಸಾಡಾ ೨೨೩
ಚಲಾಳಾ ೧೦೯
‘ಚಂಡೀಮಹಾತ್ಮ್ಯ’ ೩೭೭
ಚಂಡೋಲಾ ಕೆರೆ ೭
ಚಂಚಲಬಹನ ೯೩
ಚಂದೂಲಾಲ, ಡಾ ೧
ಚಂಪಾರಣ್ಯ ೨೪೨
ಚಾರ್ಲಸ ಇನ್ಸ, ಸರ್ ೧
ಚಿಟಗಾಂವ ೨೪೬
ಚಿಂತಾಮಣಿ ೨೪೫, ೩೨೭, ೩೪೩, ೪೬೯
ಚೀನ ೮೪, ೧೪೯, ೧೫೪, ೧೯೬, ೩೪೮, ೩೮೫
ಚೆಟ್ಟಿ, ಷಣ್ಮುಖಮ್ ೨೭೪
ಚೇಮ್ಸಫರ್ಡ ೨೦೭

ಛಕ್ಕಡದಾಸ ೨೨೦
ಛಗನಲಾಲ ಜೋಶಿ—ಜೋಶಿ ಛಗನಲಾಲ ನೋಡಿರಿ
ಛಪರಾ ೩೭೫

ಜಗಜೀವನ ೪೨೮
ಜನ್ಮಾಷ್ಟಮಿ ೪೭೯
ಜಪಾನ ೬೬, ೭೪, ೮೪, ೯೬, ೧೨೮, ೧೪೯, ೧೮೭, ೩೮೮
ಜಫರ ೩೪೦, ೪೯೩
ಜಮುನಾದಾಸ ೪೩೨
ಜಮುನಾಲಾಲಜಿ ೧೭, ೨೭, ೪೧, ೫೩, ೨೫೯, ೨೬೮, ೩೭೩
ಜರ್ಮನಿ ೨೩, ೭೫
ಜಯಕರ ೧೩೮, ೨೫೧, ೩೧೪, ೩೧೭, ೩೨೭, ೩೨೯, ೩೪೪, ೩೫೦, ೪೬೯
ಜಯಕುಮಾರ ೪೪೧
ಜಯದ್ರಥ ೩೯
ಜಯರಾಜಾನಿ ೪೯೦
ಜವಾಹರಲಾಲ — ನೆಹರೂ ಜವಾಹರಲಾಲ ನೋಡಿರಿ
ಜಹಾಂಗೀರ ೪೩೦
ಜಾಬ ೪೧೦
ಜಾಮಸಾಹೇಬ ೪೩
ಜಾಲಭಾಯಿ ೨೨೯
ಜಾಲಿಯನ್‌ವಾಲಾ ಬಾಗ ೧೩೭
ಜೀವಣಜಿ ೨೦
ಜೀವರಾಮ ೨೯೦
ಜುಗತರಾಮ ೨೯, ೩೯
ಜುನಾಗಡ ೨೬
ಜುಲ್ಸವರ್ನ ೭
ಜೆಮಿಸನ್ ರೇಡ ೩೦
ಜೇಠಾಲಾಲ ೨೯೦
ಜೇಮ್ಸ ಬೆರಿ ೩೧೮
ಜೇಮ್ಸ, ಸರ್ ೨೭೬
ಜೇಲಮ್ಯಾನ್ಯುಅಲ್ (ನಿಯಮಾವಲಿ) ೪೩೭
ಜೊಸೆಫ ೧೯೨
ಜೋಶಿ, ಛಗನಲಾಲ ೨೪, ೨೬, ೧೯೦, ೨೧೨, ೨೧೪, ೨೨೧, ೨೬೧, ೨೭೭, ೩೩೮, ೩೫೫. ೩೯೭, ೩೯೯, ೪೫೧
ಜ್ಯೋತ್ಸ್ನಾ ಶುಕ್ಲ ೯೩

ಝವೇರಿ ೩೫
ಝೂರ, ಅಲೆಕ್ಝಾಂಡರ ೬೮
ಝೂರ, ನಿಕೊಲಸ ೨೫, ೬೪, ೭೫
ಝೊರೊ ಅಸ್ತ್ರ ೨೧೩
ಝೋಲಾ ೩೨೩

ಟರ್ಟನ, ಮಿಸ್ ೪೩೪
ಟಾಗೋರ, ರವೀಂದ್ರನಾಥ ೪೦, ೪೨, ೪೪, ೧೫೮, ೧೬೦, ೩೧೫

ಟಾಟಾ, ಜಮಶೇಟಜಿ ೨೬೪
ಟಾಟಾ, ದೋರಾಬ ೨೬೪
ಟಾಟಾ, ಶ್ರೀಮತಿ ೨೬೪
'ಟಾಮ ಕಕ್ಕನ ಗುಡಿಸಲು' ೩೨೩
ಟಾಮಸ್ ೨೨, ೧೩೭, ೩೧೦
ಟಾಮ್ಸನ್ ೨೨
ಟಾಮ್ಸನ್, ಎಡ್ವರ್ಡ ೧೩೭
ಟಾಯಟಸ್ ೨೨೦
'ಟಾಯಿಮ ಆ್ಯಂಡ ಟಾಯಿಡ' ೩೪೬
'ಟಾಯಿಮ್ಸ' ೮, ೧೦, ೨೩, ೨೨೧, ೨೩೬, ೨೫೪, ೨೬೪, ೩೧೭-೮, ೩೩೪, ೪೨೩
ಟಾರೆಂಟೊ ೧೬೧, ೨೫೩
ಟಾಲ್‌ಸ್ಟಾಯ ೯, ೬೦, ೯೭, ೧೯೯, ೩೧೧, ೪೫೫
ಟಾಲ್‌ಸ್ಟಾಯ, ಕೌಂಟೆಸ್ ೧೮೩
ಟಾಲ್‌ಸ್ಟಾಯ ಫಾರ್ಮ ೧೫೩
ಟಿಬೇಟ ೪೭೭
'ಟ್ರಿಬ್ಯೂನ' ೫೧-೨, ೫೫
'ಟು ದಿ ಪ್ಯುಅರ ಪ್ಯೂರಿಟನ್' ೮
ಟ್ರೆಪಿಸ್ಟ ಮೊನೆಸ್ಟರಿ ೧೫೪
'ಟೇಲ ಆಫ್ ವಾಟ್ ವಾಜ ನಾಟ್' ೭೩

ಠಕ್ಕರ ೮೨
ಠಾಕರಡ, ಶ್ರೀಮಂತ ೧೨೪
ಠಾಕರಸಿ, ಲೇಡಿ ೩೦೯

ಡಗಲಸ್, ಕಲೆಕ್ಟರ ೧೬೩
ಡ್ರಮಂಡ ೩೨೩, ೩೨೬
ಡ್ರಮಂಡ, ಸರ್ ಎರಿಕ್ ೧೪೯, ೧೫೧
'ಡಾ ಜೆಕಿಲ್ ಆ್ಯಂಡ ಮಿ. ಹಾಯಿಡ' ೮
ಡಾನ್ ಕ್ವಿಗ್ಸೋಟ ೬೪
ಡಾಯರ ೧೩೭
ಡಾರ್ವಿನ್ ೪೨೨
ಡಾಹ್ಯಲಾ, ಡಾಕೂ ೧೮೪
ಡಾಹ್ಯಾಭಾಯಿ ೨, ೨೭, ೩೧, ೪೬, ೧೧೪, ೧೬೩, ೧೭೩, ೧೯೧, ೨೦೫, ೨೧೩, ೨೫೦, ೪೭೦, ೪೯೨
ಡಿಕಿನ್ಸನ್, ಲಾರ್ಡ ೨೨
ಡ್ಯೂರಂಟ ೨೮
ಡೆಹರಾಡೂನ ೨೮೬
'ಡೇಲಿ ಟೆಲಿಗ್ರಾಫ' ೫೧
ಡ್ರೇಕ, ಸರ್ ಫ್ರಾನ್ಸಿಸ್ ೧೧೧
ಡೊಮಿನಿಕ್, ಸಾಧು ೫೭
ಡೋಯಿಲ್, ಮೇಜರ ೧೨೪, ೧೪೧, ೧೪೮, ೧೭೩, ೧೯೮, ೨೬೮, ೩೧೦, ೩೧೩, ೪೩೭

ಢೋಲಕಾ ೧೧೦

ತಾಂಬೆ ೨೪೫, ೩೩೪
ತಾಜಮಹಾಲ ೧೭೨
ತಾರಾದೇವಿ ೯೩
ತಾರಾಬಹನ ೯೩
ತಾರಾಬಾಯಿ ವಾಜಪೇಯ ೧೯೪
ತ್ರಿವೇದಿ, ಪ್ರೊಫೆಸರ ೧೦೬, ೨೫೯
ತಿಲಕನ್ ೧೩, ೬೧
ತಿಲಕಮ್ ೩೦೩
ತುಕಾರಾಮ ೨೪೮, ೨೭೮
ತುಲಸೀದಾಸ ೧೮೬, ೧೮೯, ೨೦೪, ೩೩೨, ೪೪೯, ೪೮೬
ತ್ರೈಯಬಜಿ, ಬಾಬಾ ೩೧೪
ತ್ರೈಯಬಜಿ, ಮಿಸೆಸ್ ೩೧೪
ತೋತಾರಾಮಜಿ ೧೭೦, ೧೯೯, ೨೩೯
ತೋತಾಪುರಿ ೨೩೯, ೩೮೧

ಥಾಮಸನ್ ಪ್ರೊ ೩೨೮
ಥಾಮಸ್ ಎ ಕೆಂಪಿಸ್ ೩೩೯, ೩೪೬, ೩೫೭, ೩೬೫, ೪೧೩
ಥೊರೊ ೪೦

ದಜಲಾ ೧೯೬

ದರ್ಬಾನ ೪೨೩
ದಯಾನಂದ ೩೦೧
ದರಬಾರಿ ಸಾಧು ೨೧೩, ೪೭೫
ದರಿದ್ರ, ನಾರಾಯಣ ’ ೧೩೮, ೨೫೧, ೨೯೦,
೩೦೨, ೩೫೮
ದಸ್ತೂರ ಮ್ಯಾಜಿಸ್ಟ್ರೇಟ ೨೬೪
ದಕ್ಷಿಣಾಮೂರ್ತಿ ೯೫, ೧೩೮
ದಾಮೋದರದಾಸ ೧೮೩
ದಾವೂದಭಾಯಿ ೨೩೦, ೨೪೨
ದಾಸಬಾಬು ೧೭೪, ೨೧೯, ೩೦೨, ೪೭೧
‘ದಾಸಬೋಧೆ’ ೪೯೧
ದಾಸ್ತಾನೆ ೧೨೩
ದಿಲ್ಲಿ ೬, ೭, ೯೨, ೧೩೭
ದಿಲೀಪ ೪೯೦
ದೀಪಕ ೧೬೭
‘ದೀಕ್ಷಿತ’ ೨೫೪
ದುರ್ಗಾ ೨೦, ೨೫೯
‘ದುರ್ಗಾವತಿ’ ೩೧೭
ದುಂಡುಮೋಜಿನ ಪರಿಷತ್ತು ೩೧೮, ೩೨೯, ೩೩೪
ದೂಧಾಭಾಯಿ ೪೩
ದೂಧೀಬಹನ ೩೩೮
ದೇವ ೧೨೩
ದೇವಧರ ೮೨
ದೇವಲಾಲಿ ೭೮
ದೇಸಾಯಿ, ಮಣಿಭಾಯಿ ೧೧೭
ದೇಸಾಯಿ, ಝೀಣಾಭಾಯಿ ೧೯
ದ್ರೌಪದಿ ೪೧೮

ಧ್ರಾಗಂಧ್ರಾ ೫೦
ಧೀರಜಲಾಲ ೫೨
ಧೀರು ೧೬೮
ಧುರಂದರ ೧೧೭
ಧ್ರುವ ೩೫೫

ನಜರೆಥ ೯೭
ನಟರಾಜನ್ ೧೫೧, ೧೭೭, ೧೮೨, ೨೧೬,
೨೫೧, ೨೫೫, ೨೬೪, ೨೯೮, ೩೧೮
ನಡಿಯಾದ ೯೭
ನನಿ ೪೮೧
ನರ್ಮದಾ ೩೭೨
ನರಗಿಸಬಹನ ೧೮೩, ೨೨೯
ನರಸಿಂಹಭಾಯಿ ೨೪, ೨೭, ೯೭, ೧೫೭, ೨೨೮
ನರಹರಿ ಪರೀಖ ೧೬, ೧೪೧, ೧೬೭, ೧೭೩
ನಲದಮಯಂತಿ ೨೯೬
ನವಜೀವನ ೨೯೯
ನವರೋಜಿ ಜಾಲ ಅ. ದಾ. ೨೪೬
ನಾಡಕರ್ಣಿ ೪೧೫, ೪೧೭
ನಾಥೂರಾಮ ಶರ್ಮಾ ೨೨೭
ನಾನಜಿ ಡಾ. ೪೨೩
ನಾನಾಭಾಯಿ ಮಶ್ರೂವಾಲಾ ೯೫, ೧೩೮,
೨೮೭
ನಾನೀಬಹನ ೩೫
ನಾಯಡೂ, ಥಂಬಿ ೧೮
ನಾಯಡೂ. ಶ್ರೀಮತಿ ೧೫, ೨೩, ೨೭,
೫೮, ೧೪೨, ೧೫೫, ೧೬೭, ೧೭೦,
೧೭೨-೩, ೩೧೧, ೩೭೪
ನಾರಾಯಣದಾಸಭಾಯಿ ೧೩, ೨೫, ೩೪,
೩೯, ೧೨೮, ೧೬೩, ೧೮೯, ೨೧೨, ೨೨೩,
೨೬೧, ೨೮೯, ೩೦೪, ೩೦೮, ೩೫೪, ೩೭೧,
೩೯೫, ೪೪೬, ೪೪೯, ೪೯೨
ನಾರಾಯಣಪ್ಪಾ ೨೭೬
ನಾರದಮುನಿ ೪೪೮
ನಾಸಿಕ ೧೦೯, ೧೧೭, ೨೮೩, ೪೩೩
‘ನ್ಯಾಚರಲ್ ಲಾ ಇನ್ ಸ್ಪಿರಿಚ್ಯುಅಲ್
ವರ್ಲ್ಡ’ ೩೨೪
ನಿಮು ೧೬೬, ೪೪೪
ನಿವೃತ್ತಿನಾಥ ೨೮೨
ನಿವೇದಿತಾ ೮, ೨೪೦
‘ನೀತಿನಾಶದ ಮಾರ್ಗದ ಮೇಲೆ’ ೧೨,
೧೪೮, ೨೮೫

ನೀಲಗಿರಿ ೧೫
ನೂರಬಾನು ೨೩೦
ನೆಹರು, ಜವಾಹರಲಾಲ ೧೪, ೧೧೬, ೪೬೨, ೪೭೧
ನೆಹರು, ಮೋತಿಲಾಲ ೧೭೪, ೨೧೯
ನೆಹರು, ಸ್ವರೂಪರಾಣಿ ೧೧೬, ೧೯೧
ನೆಸಲ್ಸ ಮಿಲ್ಕ ೧೪೧
ನೇಪಲ್ಸ ೨೨೦

ಪಟವಾರಿ, ಗೋಕುಲದಾಸ ೧೪೨
ಪಟ್ವಾರಿ, ದ್ವಾರಕಾದಾಸ ೫೧
ಪಟೇಲ, ಮಣಿಬಹನ ೪೫೩
ಪತಂಜಲಿ ೧೦೧
ಪನಾಮಾ ೯೬
ಪರಚುರೆ, ದತ್ತಾತ್ರಯ ವಾಸುದೇವ ೨೪೨, ೨೫೯
ಪರಮಾನಂದ, ಭಾಯಿ ೩೪೧
ಪರಶುರಾಮ ೧೩, ೧೬೩, ೨೭೪, ೨೭೯, ೩೫೧, ೪೮೭
ಪರೀಖ, ಮಣಿಬಹನ ೧೬೭, ೧೬೮
ಪರೇಖ, ಇಂದೂ ೩೯
ಪಂಜಾಬ ೭೮, ೧೪೧, ೧೫೪, ೩೧೪, ೩೬೨
ಪಂಚಗಣಿ ೨೪೬
ಪಂಡಿತಜಿ ೧೭೭, ೨೨೪, ೨೩೭, ೩೫೦
ಪ್ರಹ್ಲಾದ ೪೫೦–೧, ೪೬೧, ೪೯೩
ಪ್ರಭುದಾಸ ೧೬, ೪೧, ೫೩, ೧೭೩, ೨೦೨, ೨೫೭, ೪೦೧, ೪೩೮
ಪಾಪಾ ೩೫
'ಪಾಯೊನಿಯರ' ೨೬೩
ಪ್ಯಾರೇಲಾಲ ೨, ೯೩, ೧೨೫, ೧೫೪, ೧೯೪, ೪೦೪
ಪ್ಲಾಟನಸ್ ೨೨೪
ಪಿಟರ್ಸನ್, ಮಿಸ್ ೨೪೮
ಪ್ರಿಝನರ ಆಫ ಸಿಲೋನ' ೪೧೧
ಪ್ರಿಟೋರಿಯಾ ೧೮, ೧೯

ಪೀಟರ ಬೇಲ ೨೬೭
ಪ್ರೀವಾ, ಮೊ ೧೯೦, ೨೨೧
ಪ್ರೀವಾ, ಮಿಸೆಸ್ ೩೧೮
ಪುಟುಮಾಯೊ ೬೪
ಪುಣೆ ೮೨, ೧೦೬, ೨೩೪, ೨೩೮, ೪೬೪
ಪುಂಜಾಭಾಯಿ ೨೮೯
ಪುರಾತನ ೪೦೨
ಪುರುಷೋತ್ತಮ ೧೨೯, ೧೮೫
ಪುರುಷೋತ್ತಮದಾಸ, ಸರ್ ೨,೧೯೯,೨೭೪, ೩೬೭, ೩೯೮
ಪೆಟ್ರಿಕ್ ಪಿಯರ್ಸ ೪೧೫
ಪೆಟ್ರೊ ೩೪೪
ಪೆರಿ ೨೩೭
'ಪೇಲ ಹಾರ್ಸ್' ೭೩
ಪೇಶಾವರ ೫೧
ಪ್ರೇಮಾಬಹನ ೮೮, ೯೯, ೧೬೪, ೧೬೬, ೧೭೫, ೨೭೮, ೨೯೯, ೩೦೫, ೩೩೮, ೩೫೩. ೪೩೯, ೪೪೮
ಪೋದ್ದಾರ, ಹನುಮಾನ್ ಪ್ರಸಾದ್ ೯೯, ೨೧೦, ೨೭೨, ೨೯೯
ಪೋಲಕ ೮೦, ೧೯೦, ೨೫೬, ೪೨೯

ಫಜಲಿ ೧೫
ಫಾಟಕ, ಡಾ. ( ಸಾತಾರೆ ) ೩೧೪
ಫಾಸ್ಟ ೭
ಫ್ಯಾಸಿಸ್ಟವಾದ ೨೨೨
ಫ್ರಾನ್ಸ ೨೩
ಫ್ರಾನ್ಸಿಸ್, ಸಂತ ೫೭
ಫಿನಿಕ್ಸ ೨೬, ೧೩೯, ೪೪೧, ೪೯೧
ಫಿನಿಕ್ಸ ಆಶ್ರಮ ೮೩
ಫಿರೋಜ, ಸೇಠನಾ ೩೩೪
ಫಿಶರ, ಬಿಶಪ ೩೯೯
'ಫ್ರೀ ಪ್ರೆಸ್ ಜರ್ನಲ್' ೪೪೩
ಫೂಲಚಂದ ೫೩, ೧೯೩, ೧೯೭
ಫೆರಾರ, ಡೀನ ೯೭

ಫೆಲೊಡನ್ ೩೧೮
ಫೇರಿಂಗ, ಮಿಸ್ ೨೦೮
‘ಫೋರ್ಥಸೀಲ’ ೨೫, ೬೩, ೮೫
ಫೋರ್ಸ ೬೧
‘ಫೋರ್ಸ ಕ್ಲೆವೆಜಿರಾ’ ೩೭, ೪೨, ೫೯, ೬೧

ಬಂಗಾಲ ೭೨, ೭೯, ೧೦೯, ೧೪೪, ೧೫೩, ೧೬೩, ೨೨೭
ಬನಾರಸ ೫೮, ೨೩೭
ಬರ್ನಾರ್ಡ ಶಾ ೨೩೪
ಬನಿಯನ್ ೪೫೫
ಬಲಭೀಮ ೫
ಬಲಿ ೩೦೪
ಬಲೀಬಹನ ೧೧೭, ೧೫೪
ಬಹಾದುರಸಿಂಹ ೩೩
ಬ್ರಹ್ಮದೇಶ ೨೩, ೨೬, ೪೫೪
ಬಾರ್ಡೋಲಿ ೯, ೨೧, ೮೪; ೯೨, ೧೨೭, ೩೧೪, ೪೧೭
‘ಬಾರ್ಟಲೆಟ್‌ಪರ್ಸಿ’ ೧೬೦, ೧೬೫, ೩೧೫
ಬಾಬಾ ೨೫೯
ಬಾಯರನ್ ೪೧೧
ಬಾಯಬಲ್ ೩೭, ೫೫, ೬೫, ೭೦, ೨೮೭
ಬಾಲಕೃಷ್ಣ ೪೬೬
ಬಾಲ್ಡವಿನ್ ೫೬, ೨೨೨, ೩೪೪
ಬ್ರಾಕವೆ ೩೪೫
ಬಿಂದುಮಾಧವ ೨೬೦
ಬಿರ್ಲಾ ೨೨೪, ೨೬೯, ೨೭೪, ೩೧೫, ೩೨೦, ೩೪೭, ೩೬೭, ೩೯೮, ೪೪೩
ಬಿಹಾರ ೯೬
ಬುದ್ಧ ೨೨೩, ೨೯೩, ೩೨೪, ೩೭೭, ೩೮೪, ೩೮೯, ೪೫೦, ೪೭೫
‘ಬುದ್ಧಲೀಲಾ ಸಾರಸಂಗ್ರಹ’ ೩೬
ಬೆರ್ಝುಂಟ, ಶ್ರೀಮತಿ ೩೭೮
ಬೆಂಥರ, ಮಿ ೩೭
ಬೆಂಥಾಮ ೨೩
ಬೆಂಘಾಲ ೩೮, ೫೧, ೧೫೯, ೪೫೯
ಬೆನ್ ೬, ೩೪೫
ಬೆರಿಯರ ೪೩೪
ಬೆಲಿಶಾ ಹೇರ ೨೭೪
ಬೆಳಗಾವಿ ೧೬, ೧೪೨, ೨೦೨, ೨೬೮
ಬ್ರೆಲ್ಸಫೋರ್ಡ ೨೮, ೫೧, ೨೨೪
ಬ್ರೆಳವಿ, ಸೈಯದ ಅಬ್ದುಲ್ಲಾ ೪೩೨, ೪೪೪
ಬೇಕರ ೨೮೬
ಬೇಲೂರಮಠ ೩೩೨
ಬೊರಸಾದ ೯೨, ೪೫೯
ಬೊಲ್ಶೆವಿಕ್ ೬೬, ೭೩, ೭೬
ಬೋಥಾ, ಜನರಲ್ ೪೦೦
ಬೋರಿಸ ಸಾಬಿಯಾಕೊವ ೭೨
ಬೋಸ, ನಂದಲಾಲ ೪೩
ಬೌದ್ಧಧರ್ಮ ೩೨೪, ೩೮೨

ಭಕ್ತಿಬಹನ ೮೦
ಭಗವಾನಜಿ ೪೧೮
ಭಂಡಾರಿ, ಮೋಜರ ೨೨, ೫೩, ೧೨೧, ೨೬೮, ೩೪೫, ೩೪೭, ೩೯೯, ೪೩೭
ಭಂಡಾರಕರ, ರಾಮಕೃಷ್ಣ ೩೪೧
ಭಟ್ಟ, ಮೋಹನಲಾಲ ೧೧೭, ೪೪೪
ಭಾವನಗರ ೧೦೬
ಭಾವ್ರೂ ೨೩೫, ೨೪೦, ೨೮೦, ೩೫೪
ಭಾರತಿ ೨೬೪, ೨೬೬
ಭೀಷ್ಮ ೩೯
ಭುಸ್ಕುಟಿ ೨೧೪, ೪೫೫
ಭೋಜಾಭಗತ ೨೧೧
ಭೋಲಾನಾಥ ೪೧೫

ಮಗನಭಾಯಿ ೪೩೦, ೪೫೯
ಮಂಗಲಾ ೩೩೭, ೪೪೧
ಮಘ ೩೪, ೩೬
ಮಂಚೂರಿಯಾ ೬೮, ೯೬
‘ಮರ್ಡರರ್ಸ ರಿಮೋರ್ಸ’ ೯೭

ಮಣಿ ೫೩, ೧೪೨
ಮಣಿಬಹನ ೧೯೮, ೨೦೫
ಮಥುರಾದಾಸ ೨೮೩, ೩೨೩, ೩೫೧, ೪೬೭, ೪೯೦
ಮದನಜೀತ ೨೩, ೨೬
ಮದ್ರಾಸ ೩೭, ೧೪೧
ಮಧ್ಯಪ್ರಾಂತ ೨೯೦
ಮರ್ನ ೧೧೨
ಮನು ೮೯, ೧೧೨, ೧೧೭, ೧೫೪, ೩೦೪
ಮನೋರಮಾಬಾಯಿ ೯೩
ಮನ್ಸೂರ ೪೫೨
ಮಮತಾಜ ೨೬೪
ಮರೆ ೨೨, ೩೧೫
ಮಲಕಾನಿ ೨೦
ಮಹಮ್ಮದ ೫೪, ೨೩೩, ೨೫೬, ೩೧೬
ಮಹಮ್ಮದ ಅಲಿ ೩, ೪೭, ೫೨, ೨೧೯
ಮಹಮ್ಮದ ಅಲಮ ೪೪೪
ಮಹಾಭಾರತ ೨೯, ೩೯, ೫೪, ೨೪೨, ೪೮೭
ಮಹಾರಾಷ್ಟ್ರ ೮೧, ೯೩, ೧೧೦, ೧೨೩, ೧೪೧, ೧೬೦, ೧೬೫
ಮಹೆರಬಾಬಾ ೪೪
ಮಹೊಬಾ ೩೧೭
ಮಾರ್ಕ್ಸ ೮
ಮಾರ್ಟಿನ, ಮೇಜರ ೧೬, ೨೨, ೨೪, ೫೩, ೧೧೬-೭
‘ಮಾಡರ್ನ ರಿವ್ಯೂ’ ೧೩೭, ೩೪೮, ೩೬೧, ೪೧೫
‘ಮಾಡರ್ನ ಪೇಂಟರ್ಸ’ ೬೧
ಮಾಣಿಕ, ಮೂಳೂ ೨೨೨
ಮಾಣಿಕ, ಜೋಧಾ ೨೨೨
‘ಮಾಯಿಂಡ ಆ್ಯಂಡ ಫೇಸ ಆಫ್ ಬೊಲ್ಶೆ-ವಿಜಮ್’ ೮
ಮಾಯಿಲ್ಸ, ಅಯರ್ವಿಂಗ ೧೩೭
ಮಾರುತಿರಾಯ, ವಾರ್ಡರ ೫, ೧೧೦, ೧೨೪
ಮಾಲವಿಯಾಜಿ ೫೮, ೯೨, ೧೪೨, ೧೬೬-೭, ೧೯೧, ೩೬೭, ೪೬೯
ಮಾಲ್ಥಸ ೪೨೨
ಮಾಸ್ಟರ ಆಫ್ ವೆಲಿಯಲ್ ೩೨೭
ಮಾರ್ಸೆಲಿಸ, ಫ್ರಾನ್ಸ ೪೦
ಮಾಸ್ಕೊ ೬೭, ೭೪
ಮ್ಯಾಕ್ಸವೆಲ್ ೨೨
ಮ್ಯಾಕ್ಡೊನಲ್ಡ ೨೨, ೧೫೯, ೨೨೧-೨, ೩೪೩, ೩೪೪, ೩೬೯
ಮ್ಯಾಥ್ಯೂ ೩೪೮
‘ಮ್ಯಾಂಚೆಸ್ಟರ ಗಾರ್ಡಿಯನ್’ ೫೬, ೧೩೭
ಮಿಲ್ಟನ್ ೩೪೯
ಮಿಲ್ಸ ೪೦, ೧೫೪
ಮೀರಾಬಹನ ೫, ೪೬, ೫೩, ೯೯, ೧೦೧, ೧೦೫, ೧೦೮, ೧೬೧, ೧೯೮-೯, ೨೧೫, ೨೫೦, ೨೭೬-೭, ೩೦೨, ೩೦೯, ೩೧೧, ೩೪೫, ೩೭೫, ೩೯೭, ೪೦೦
ಮೀರಾಬಾಯಿ, ಭಕ್ತ ೪೧೭
‘ಮುಕ್ತಧಾರಾ’ ೪೦
ಮುಕುಂದ, ಡಾ. ೩೯೭
ಮುಂಜೆ ೨೦೬, ೪೬೨
ಮುಥು, ಡಾ. ೩೩, ೧೦೭
ಮುದಲಿಯಾರ, ಆರೋಗ್ಯಸ್ವಾಮಿ-ಆರೋಕಿಯಾ ನೋಡಿರಿ
ಮುನಶಿ ೧೦, ೧೦೧, ೪೩೬
ಮುಂಬಯಿ ೨೨, ೪೬, ೫೫, ೧೦೭, ೧೬೭, ೧೯೧-೨, ೧೯೪, ೧೯೮, ೨೦೫, ೨೨೩, ೨೨೦, ೨೩೭-೮, ೨೪೬, ೨೫೩-೪, ೨೯೯, ೩೩೩
‘ಮುಸಲ್ಮಾನ’ ೩೬೧
ಮುಸೊಲಿನಿ ೨೨೦, ೨೨೨
ಮುಹಮ್ಮದ ಗಜನಿ ೨೬೯
ಮುಹಮ್ಮದ ಬೆಗಡಾ ೨೧೦
ಮುಹಮ್ಮದ ಶಹೀದ ಅಲಿ ೩೪೩
ಮ್ಯುರಿಯಲ್ ಲಿಸ್ಟರ ೮೪, ೩೦೦, ೩೧೮, ೩೪೮

ಮೂಡಿ, ರೆವರೆಂಡ್ ೪೬
ಮೂಲದಾಸ ೨೨೭
ಮೂಲ್ಜಿ ಜೇಠಾ ೨೨೨
ಮೆಕ್ಸ್ವಿನಿ ೪೬೩
ಮೆಕಾಲೆ ೭
ಮೆಟರ್ಸ್ ೪೯೦
ಮೆಡಿಕಲ್ ಜ್ಯುರಿಸ್ ಪ್ರುಡೆನ್ಸ ೪೯೬
ಮೆನನ್ ೪೯೦
ಮೆಯೊ ೩೨೬
ಮೆಹತಾ, ಡಾ. ೧೧೫, ೩೩೯, ೪೩೭, ೪೨೭,
೪೫೮, ೪೭೫, ೪೯೧
ಮೆಹತಾ, ನರಸಿಂಹ ೪೧೦
ಮೆಹತಾ, ನಾನಾಲಾಲ ೪೩೯
ಮೆಹತಾ, ಫಿರೋಜಶಹಾ ೮೦
ಮೆಹತಾ, ಮೇಜರ ೧೩೭, ೧೨೬, ೧೮೪,
೩೧೯, ೪೦೪, ೪೨೭
ಮೇಘಜಿಭಾಯಿ ೯೮
ಮೋಜಿಜ ೨೧೬
ಮೂಂಡರ ೩೩೧
ಮೂರಾರ ಪಟೇಲ, ಸ್ಯಾರಲಾವಾಲೆ ೨೧೪
ಮೋದಿ, ಅಂಬಾಲಾಲ ೯೭, ೯೯
ಮೋರ ಸಂಘವಾಣಿ ೧೮೪
ಮೋಹನ ೧೬೭, ೪೧೧
ಮೌಂಟ ಫೋರ್ಡ ೪೫೯

'ಯಂಗ ಇಂಡಿಯಾ' ೩೯೯, ೪೧೭
ಯಂಗ ಹಜ್ಬಂಡ ೨೧೫
ಯರವಡಾ ೧, ೧೯೦
ಯರವಡಾ ಚಕ್ರ ೧೩೭
ಯಶೋದಾ ೧೬೨, ೧೬೭
ಯಾರ್ಕ ೨೧೫
ಯುಕ್ತಪ್ರಾಂತ ೭೮, ೨೦೨
ಯುಕ್ಲಿಡ್ ೧೪೬
ಯುರೋಪ ೭೦, ೭೪, ೧೧೩, ೩೭೮
ಯೂಚಿಕ ೧

ರಂಗಾಚಾರಿ ೨೪೪
ರಂಗೂನ ೩೨, ೩೭, ೪೦೯
ರತಿಲಾಲ ೪೩೭
ರಂಭಾ ೮೫
ರಮಣ ೩೫೯
ರಮೇಶಚಂದ್ರ ಬ್ಯಾನರ್ಜಿ ೨೪೮
ರವಿವರ್ಮ ೩೪೧
ರವೀಂದ್ರನಾಥ—ಟಾಗೋರ ನೋಡಿರಿ
ರಶಿಯಾ ೩೫, ೬೨, ೭೨, ೭೫, ೯೬, ೨೯೬
ರಸ್ಕಿನ ೫೯, ೮೧, ೧೩೬, ೧೮೯, ೪೧೩
ರಕ್ಷಾಬಂಧನ ೪೫೨
ರಾಜಕೋಟ ೯೮, ೧೧೭, ೧೩೯
ರಾಜಗೋಪಾಲಾಚಾರ್ಯ—ರಾಜಾಜಿ ೨೩೩,
೨೪೧, ೨೫೬, ೪೦೮, ೪೭೦
ರಾಜನ, ಡಾ. ೪೦೯
ರಾಜಪಾಲ ೪೧೫
ರಾಜಾ ೪೫೫
ರಾಣಿ, ವ್ಹಿಕ್ಟೋರಿಯಾ ೬೭, ೬೮
ರಾಮಕೃಷ್ಣ ಪರಮಹಂಸ ೧೭೯, ೧೮೩,
೩೩೭, ೩೨೮–೯, ೩೬೦, ೨೨೦, ೨೮೧
ರಾಮಚಂದ್ರ ೫೪, ೧೪೬, ೩೦೪, ೪೧೬,
೪೪೯
ರಾಮಚರಣ ೨೩೮
ರಾಮದಾಸ ೧೬೦, ೧೬೬, ೧೭೦
ರಾಮರಾಜ್ಯ ೪೧೬
ರಾಮಾನುಜ ೩೭೮
ರಾಮಾಯಣ ೨೮, ೫೪, ೯೨, ೯೯, ೧೪೬,
೧೯೫, ೩೧೫, ೩೧೬, ೨೫೧, ೪೬೮
ರಾಮಿ ೯೦
ರಾಮೇಶ್ವರದಾಸ ೨೧೮
ರಾಯ, ಡಾ. ೩೦೯
ರಾಯ, ಮೋತಿಲಾಲ ೨೫೦
ರಾಯ, ರಾಮಮೋಹನ ೩೨೯
ರಾಯಡನ್, ಮಿಸ್ ಮೂಡ ೮೪, ೧೪೯, ೧೫೦
ರಾಯಚಂದಭಾಯಿ ೩೮೯, ೨೨೨

ರಾಯಪಪನ ೪೯೨
ರಾಯಲಿಸ್ಟ ೩೭
ರಾಸಪುಟನ ೭೫
ರಾವ, ಪ್ರೊ. ೧೫೧
ರಿಡಲಿ ೪೫೧
ರೀಡಿಂಗ, ಲಾರ್ಡ ೧
ರೂಬಿಬಹನ ೪೪೧
ರೆನಾಲ್ಡ್ಸ ೨೨೨
ರೆಹನಾಬಹನ ೧೩೬, ೨೦೭ ೨೨೪, ೨೯೬, ೩೪೦, ೪೯೩
ರೇವಾಶಂಕರ ೪೨೮
ರೊಡಸ್ ಕಂಪನಿ ೧೧೧
ರೊಡೇಶಿಯಾ ೧೧೧
ರೊಮಾ ರೊಲಾ ೩, ೫೭, ೨೨೭, ೨೩೮. ೨೫೧, ೨೯೨, ೩೦೦, ೩೩೧
ರೋಚ ೧
ರೋಜರ ಕೇಸಮೆಂಟ ೬೪
ರೋಜರ ಶಿಲ್ಕೋಟ ೩೨೩
ರೋಜರ್ಸ ೨೨
ರೋಮ ೧೩೭
'ರೋಮನ್ ಸಾಮ್ರಾಜ್ಯದ ಅಸ್ತ ಮತ್ತು ವಿನಾಶ' ೨೩೫

ಲಖನೌ ೪೫೯
ಲಂಡನ ೬೩, ೭೨. ೮೦, ೧೩೫. ೨೧೨, ೨೩೬, ೨೫೬
'ಲಂಡನ್ನದ ಪತ್ರ' ೮೦
'ಲಂಡನ ಟಾಯಿಮ್ಸ' ೧೦
ಲಲಿತಾ ೪೧೧
ಲಕ್ಷ್ಮೀ ೨೩೦, ೩೪೨, ೩೭೧
ಲಕ್ಷ್ಮೀದಾಸಭಾಯಿ ೧೩೨
ಲಾಯಿಡ ಜಾರ್ಜ ೧೦೭
ಲಾರಿ ಸೋಯರ ೨೮೭
ಲಾಲಜಿ ನಾರಾಯಣಜಿ ೨೪೮
ಲಾಲಾಜಿ ೧೧೬
ಲಾಸ್ಕಿ ೭೯, ೨೪೧, ೩೪೫, ೩೪೮
ಲಾಹೋರ ೨೫೯
ಲಿಡಸೆ, ಮಿಸೆಸ್ ೩೧೫, ೩೨೭
'ಲಿವ್ವಿಂಗ ಚರ್ಚ' ೪೬
ಲೀಗ, ಸ್ಮಿಥ ೩೪೫
'ಲೀಡರ' ೧೫, ೪೪, ೮೦, ೧೧೬, ೧೩೭, ೧೬೮, ೨೦೫, ೨೨೭, ೨೫೩, ೨೬೩, ೩೪೬
ಲೀಲಾಮಣಿ ೧೭೨
ಲುಟಾವನಸಿಂಹ ೩೩
ಲೆಟಿಮರ ೪೫೧
ಲೆನಿನ ೬೭
ಲೋಕಮಾನ್ಯ ೪೫೫
ಲೋದಿಯನ್ ಕಮೀಟಿ ೨೪೫
ಲೋಜಾನ ೨೯, ೨೭೪, ೪೧೭

ವಸು ೧೬೭
ವರದಾಚಾರಿ ೩೫೫
'ವಸಂತ' ೨೨೮, ೨೯೭
ವಸುಮತಿ ೯೩
'ವ್ಹರ್ಜಿನಿಟ್ರಿಸ್ ಮ್ಯರಿಸ್ಕ' ೮
ವ್ಹಾಯಿಸರಾಯ ೪೪೩
ವಾಲಿ ೪೧೭
ವಾಶಿಂಗ್ಟನ್ ಅರ್ವಿಂಗ ೪೧೬
ವಿಜಯರಾಘವ, ಸಿ ೧೮೩
ವಿಜಾಪುರ ೪೩೬
ವಿಠ್ಠಲಭಾಯಿ ೧
ವಿನ್ಸ ಸಾರ್ಜಂಟ ೨೨
ವಿನೋಬಾ ೧೨೩, ೨೩೫, ೨೬೦, ೨೮೦, ೩೯೫
ವಿಲಾಯತಿ ೨೨, ೪೪, ೫೮-೯, ೬೧, ೮೨, ೮೪, ೧೧೧, ೧೩೩, ೨೦೭, ೨೨೪, ೨೩೬, ೨೫೦. ೩೧೧, ೩೧೬, ೩೪೭, ೩೯೮, ೪೮೬
ವಿಲಿಂಗ್ಡನ್, ಲಾರ್ಡ ೧೫೯, ೨೩೬, ೪೨೫
ವಿಲಿಂಗ್ಡನ್, ಲೇಡಿ ೨೨೨, ೨೩೬
ವಿಲಿಯರ್ನ ೨೪೬

ವಿವೇಕಾನಂದ ೨೨೭, ೨೩೯, ೨೫೧, ೨೬೦, ೩೦೧, ೩೩೦, ೩೮೧
ವಿಸಾಪುರ ೧೭, ೧೯೩, ೧೯೭, ೪೮೯
ವುಡ್ರಫ್ ೨೪೧
'ವೆಟ್ ಪರೇಡ' ೮, ೧೧, ೨೦, ೩೨೨
ವೆಟಕನ್ ೧೩೭, ೩೫೮
ವ್ಹಿಟಲಿ, ಮಿಸ್ ೪೯೦
ವ್ಹಿನಿಸ್ ೨೩೦
ವೆಲಿಂಗ್ಟನ್ ಕಾನ್ವೆನ್ಶನ್ ೨೮೬
'ವೆಲ್ಫೆರ ಟು ಇಂಡಿಯಾ' ೧೩೭
ವೆಸ್ಟ ೨೬, ೪೯
'ವೆಸ್ಟವರ್ಡ ಹೊ' ೭
ವೇದ ೨೧೪, ೩೪೧, ೩೯೪, ೪೦೧
ವೇದಾಂತ ೩೬೯
ವೇದಿದಾದ ೨೧೪
ವೈಕುಂಠ ೪೪೬

ಶಕುಂತಲಾ ೨೦
ಶಫಿ ೧೬೨
ಶಂಕರ ೧೨೫ ೩೯೬
ಶಂಕರಲಾಲ ೫೨, ೯೧, ೧೦೫, ೧೬೭
ಶಂಕರಾಚಾರ್ಯ ೨೭೮, ೩೮೧, ೩೮೩, ೪೬೬
ಶಂಬೂಕ ೪೧೬
ಶಪರ್ಡ, ಎಚ್. ಆರ್. ಎಲ್. ೧೪೯
ಶರ್ಮಾ, ನಾಥೂರಾಮ ೪೫
ಶಹಾಜಹಾನ ೨೬೪
ಶ್ರದ್ಧಾನಂದ ೪೧೫
ಶಾಂತಿ ೪೪೧
ಶಾಂತಿನಿಕೇತನ ೪೪
ಶಾರದಾ ೩೧೬, ೩೩೭
ಶಾರದಾಬಹನ ೧೯೦
ಶಾಸ್ತ್ರಿ ೮೨, ೧೯೧, ೩೦೩-೪, ೩೨೯, ೩೪೪, ೩೬೭
ಶಾಸ್ತ್ರಿ, ಭಿಡೆ ೨೧
ಶಾಸ್ತ್ರಿ, ವಿಧುಶೇಖರಜಿ ೪೩
ಶ್ವಾಯಿಸ್ತ್ರರ, ಎಲ್ಬರ್ಟ ೪೩೧
ಶಿಖಂಡಿ ೩೯
ಶಿವಾಜಿ ೨೧೧
ಶಿರೀನಬಾಯಿ ೪೦೬
ಶ್ರೀಕೃಷ್ಣ ೩೯, ೫೪
ಶ್ರೀನಿಕೇತನ ೪೪
ಶ್ರೀವಾಸ್ತವ ೨೬೩
ಶೆಕ್ಸಪಿಯರ ೫೪, ೩೦೨
ಶ್ವೇತಾಶ್ವತರ ೩೬೯
ಶೌಕತ ಅಲಿ ೫೨, ೨೧೯, ೩೪೦

'ಸಂಡೆ ಎಕ್ಸಪ್ರೆಸ್' ೩೪೩
ಸಂತರಾಮ ೯೯
ಸತ್ಯಮೂರ್ತಿ ೧೯೧, ೨೫೫
ಸತ್ಯವತಿ ಚಿದಂಬರ, ಶ್ರೀಮತಿ ೪೯೭
ಸತ್ಯ ಸಂಹಿತೆ
ಸತ್ಯಾನಂದ ಬೋಸ ೧೫೩
'ಸತ್ಯಾಗ್ರಹ ಆಶ್ರಮದ ಇತಿಹಾಸ' ೧೦೦, ೩೧೧
ಸತೀಶಬಾಬು ೨೦೭, ೩೫೦
'ಸನ್ಸ ವ್ಹಿಟೊ' ೩೨೩
ಸಪ್ರು ೩೧೩-೪, ೩೨೭, ೩೨೯, ೪೪೪, ೩೫೦, ೩೬೨, ೪೬೨, ೪೬೯
'ಸಮ್ ಕ್ರಸ್ಟೆಡ್ ಕ್ಯಾರೆಕ್ಟರ್ಸ' ೧೦೯
ಸರಲಾದೇವಿ ೩೪೧
ಸರೋಜಿನಿ-ನಾಯಡೂ ಶ್ರೀಮತಿ ನೋಡಿರಿ
ಸರ್ವ್ಹಂಟ್ಸ ಆಫ್ ಇಂಡಿಯಾ ೮೨
ಸವಿನಯ ಕಾಯ್ದೆಭಂಗ ೩೬, ೩೬೮, ೩೯೩
'ಸರ್ವೋದಯ' ೬೧
ಸ್ಕರ್ಬಿ ೧೪೧
'ಸ್ಟಡೀಜ ಇನ್ ವೇದಾಂತ' ೨೪೯, ೨೫೧
'ಸಾಕೇತ' ೨೮
ಸಾಂಖ್ಯಯೋಗ ೩೮೩
ಸಾತವಳೇಕರ ೩೪೬, ೩೯೪
ಸಾಬರಮತಿ ೧, ೧೪೮, ೨೪೭, ೪೧೧, ೪೪೭

ಸ್ವಾಮಿ ೩೩೦
ಸಾಯಬೇರಿಯಾ ೭೨
ಸಾಯಮನ್, ಕಮೀಶನ್ ೨೫೧, ೩೩೦, ೩೪೫, ೩೯೩
ಸಾಯಮನ್, ಸರ್ ಜಾನ್ ೧೪೯, ೧೫೦
ಸಾಯಿಮ್ಸ ೬
ಸಾಲ್ವೆಮಿನಿ, ಪ್ರೊ. ೨೨೦
ಸಾವಿನಕೋರ ೭೨
ಸ್ಕಾಟ್ ೭
ಸ್ಕಾಟಲಂಡ ೪೨೩
ಸಿಂಕ್ಲೇರ ೮, ೧೭೪, ೩೨೩, ೩೯೬
ಸಿಂಕ್ಲೆಯರ, ಲುಯಿ ೧೭೪
ಸಿಡ್ನಿ, ಸರ್ ಫಿಲಿಪ್ ೧೯೨
ಸಿಂಧ ೭೮, ೧೯೧
ಸಿ. ಪಿ. ೪೯೦
ಸಿಮ್ಲಾ ೧, ೨೭, ೧೯೧, ೨೬೪
ಸಿರಿಯಾ ೯೩, ೯೭
ಸಿಲೋನ ೪೭೭
ಸ್ಮಿಥ ೩೪೫
ಸ್ವಿತ್ಸರ್ಲಂಡ ೫೭, ೧೭೯, ೨೩೮, ೩೪೮
ಸೀತಾ ೧೪೭, ೨೮೭, ೪೧೬
ಸೀತಾರಾಮ ೯
ಸೀನಾನಾ ಆಶ್ರಮ ೪೩೪
ಸ್ಟೀವನ್ಸನ್ ೮
ಸುಧನ್ವ ೪೫೧, ೪೬೧
ಸುಬ್ಬೈಯ್ಯಾ ೪೧೦
ಸುಭಾಷ ೭೯, ೨೨೭
ಸುರೇಂದ್ರ ೮೪, ೧೩೨
ಸುಶೀಲಾ ೨೮೭, ೪೭೨
ಸೆಂಕಿ ೧೫೯, ೧೬೧, ೧೬೫, ೨೨೪, ೨೪೧
ಸೆಂಟ ಪೀಟರ್ಸಬರ್ಗ ೩೩
'ಸೆಲ್ಫ ರಿಸ್ಪೇಂಟ ವ್ಹರ್ಸಿಸ್ ಸೆಲ್ಫ ಇಂಡಲ್ಜನ್ಸ' ೧೨
ಸೆಸಿಲ್ ರೋಡ್ಸ ೧೧೧
ಸ್ಪೆಕ್ಟೇಟರ ೫೯, ೧೩೭
ಸೇನಗುಪ್ತ ೭೯
ಸೇಲಂ ೧೮೩
ಸ್ಕೇಟ ೮೦
ಸ್ಪೇನ ೨೨೦
ಸೊವಿಯೆಟ್ ೭೩
ಸೋದೆಪುರ ೧೫೩
ಸೋನಿರಾಮಜಿ ೪೦೩
ಸೋಮಾ ೧೦೯, ೧೧೯, ೧೨೪
ಸೋರಾಬ್ಜಿ, ಅಡಾಜನಿಯಾ ೧೫೩
ಸ್ಟೋಕ್ಸ ೨೧, ೩೪, ೩೬, ೪೫
'ಸ್ಟೋನ್ಸ ಆಫ್ ವೇನಿಸ್' ೬೧

ಹಕೀಮಜಿ ೪೭೧
ಹಜರತ ಉಮರ ೧೧೬
ಹಂಟರ ೧೩೭
ಹರಗೋವಿಂದ ೪೩೨
ಹರಿದಯಾಲ ನಾಗ ೩೫೦, ೪೩೪
ಹರಿಜನ ಸಮಿತಿ ೨೧೧
ಹರಿಲಾಲ ೧೯, ೮೯, ೧೧೨, ೧೧೯, ೧೫೪, ೧೬೬, ೨೧೨, ೨೮೬, ೩೦೩
ಹರೋಳಿಕರ ೨೪೩
ಹಲಧರ, ಅಸಿತ ೪೩
ಹವಾನಾ ೩೭೪
ಹರ್ಬರ್ಟ, ಗ್ರೆ ೧೪೯
ಹಸ್ತಿನಾಪುರ ೨೮೩
ಹಾಜೀ ಹಾರೂನ ಹಾರೂನ ೨೭೪
ಹಾಟ್ಸನ ೨೫೪
ಹಾರ್ಡಿ, ಥಾಮಸ್ ೧೦೯, ೩೨೩
ಹಾರ್ನಿಮನ್ ೩೨೯, ೩೬೬, ೩೯೨, ೪೪೩, ೪೫೯
ಹಾಯಲ್ಯಾಂಡ ೩೪೮
ಹಾವರ್ಡ, ಎಲಿಜಾಬೆಥ ೪೮೪
ಹಿಕ್ಸ ೨೮೬

ಹಿಂದುಸ್ಥಾನ ೩೪, ೫೧-೨, ೭೯, ೮೦, ೮೮, ೯೭, ೧೩೭, ೧೪೯, ೧೯೬, ೨೨೧-೨, ೨೨೪, ೨೩೫, ೨೪೭, ೨೫೨, ೩೪೬, ೩೭೬, ೪೧೫
'ಹಿಂದೂ' ೧೦, ೫೨, ೧೧೬, ೧೫೫, ೧೯೦-೧, ೨೩೬, ೩೪೪
ಹಿಂದೂ ಧರ್ಮ ೩೭೬, ೩೮೨, ೪೧೭
ಹಿಂದೂ ಸಂಸ್ಕೃತಿ ೩೯೪
ಹಿಮಾಲಯ ೩೬೨
ಹೀರಾಲಾಲ ಶಹಾ ೧೦೬, ೧೧೪, ೧೭೪, ೧೮೩, ೪೮೮, ೪೯೨
ಹುಕ್ಕೇರಿಕರ ೨೪೪
ಹುಸೇನ ೪೯೨
ಹ್ಯೂಗೊ ೭
ಹೆನ್ರಿ ಜಾರ್ಜ ೧೨೮
ಹೆನ್ರಿ ಲಾರೆನ್ಸ, ಸರ್ ೨೩೩, ೨೫೪
ಹೆರಾಲ್ಡ ಆಫ್ ಹೆಲ್ಥ ೯೬
ಹೇಗಲ್ ೨೫೧
ಹೇಮಪ್ರಭಾದೇವಿ ೩೪, ೨೦೮
ಹೇಸ ಡಾರ್ಮರ್ಸ್ಟಾಟ ೬೭
ಹೇಸ್ಟಿಂಗ್ಸ ೧೧೧
ಹೈದರಿ, ಸರ್ ಅಕಬರ ೪೪೩
ಹೊರೆಬಿನ ೩೪೫
ಹೊರೆಸ ೨೮೭
ಹೋಮ್ಸ ೪೯
ಹೋರ, ಸ್ಯಾಮ್ಯುಅಲ್ ೨, ೬, ೨೨-೩, ೨೫, ೬೩, ೬೭-೮, ೭೩, ೮೦, ೮೫, ೧೪೨, ೧೫೪, ೧೫೯, ೧೬೩, ೧೬೫, ೧೭೯, ೧೯೦, ೧೯೨, ೨೨೧, ೩೧೨, ೩೨೦-೧, ೩೨೭, ೩೨೯, ೩೪೧, ೩೬೦, ೩೬೬, ೪೪೩, ೪೭೩

'ಜ್ಞಾನಕಿರಣ' ೨೦
ಜ್ಞಾನೇಶ್ವರ ೨೮೨

ಸಂಯುಕ್ತ ಕರ್ನಾಟಕ ಪ್ರೆಸ್, ಹುಬ್ಬಳ್ಳಿ ೧೭೩೮-೫೨-೧೦೦೦